ಕನ್ನಡ ಪುಸ್ತಕ
ಪ್ರಾಧಿಕಾರದ
ಧನ ಸಹಾಯ
ಪಡೆದ ಕೃತಿ

88

DR. N. SHANTHA NAIK

MALAAN



ವಲಸೆ
ಲಂಬಾಣಿಗರ
ಇತಿಹಾಸ
ವರ್ತಮಾನದ
ಕಾದಂಬರಿ

ಮಲಾಣ್

ಡಾ. ಶಾಂತನಾಯ್ಕ
ಶಿರಗಾನಹಳ್ಳಿ

ಕನ್ನಡ ಪುಸ್ತಕ ಪ್ರಾಧಿಕಾರದ ಧನ ಸಹಾಯ ಪಡೆದ ಕೃತಿ

DR. N. SHANTHA NAIK

MALAAN

ಮಲಾಣ್

ವಲಸೆ ಲಂಬಾಣಿಗರ ಇತಿಹಾಸ ವರ್ತಮಾನದ ಕಾದಂಬರಿ

ಡಾ॥ ಶಾಂತನಾಯ್ಕ
ಶಿರಗಾನಹಳ್ಳಿ

ಪುಸ್ತಕ
ವಿಜಯನಗರ, ಬೆಂಗಳೂರು 560 040

ಮಲಾಣ್ ಕಾದಂಬರಿ

MALAAN

A NOVEL BY : DR. SHANTHANAIK SHIRGANA HALLI
Professor Of English
V S K University Ballari - 583 105
Mobile : 94490 21006

Published by:
Asha Nagesh
DESI PUSTAKA
121, 13th Main Road, M.C. Layout,
Vijayanagara,
Bengaluru - 560 040.
Ph : 080 - 23153558;
Mob: 94484 39998
E-mail: desipustaka@gmail.com

First Impression: 2018

Page : xii+ 292 = 304
Book Size : 1/4 Crown (23 x 15.5)
(International Standarad Book Size)

₹ : 310 /-

Paper used: 70 Gsm NS Book Print

ISBN : 978-93-81577-77-6

DTP : **srushti**

Cover Page : **Arunkumar G.**

Printed at :
POORNIMA PRINTERS
Vijayanagara, Bengalore-560 040
Ph: 080-23351210



ಅರ್ಪಣೆ

ಮಾತೃ ಹೃದಯದ
ಮಮತೆ ಇರುವ ಎಲ್ಲರಿಗೂ



ಹೀಗೆ ನಾಕು ಮಾತು

ಮೌಖಿಕ ಸಾಹಿತ್ಯ ಎಷ್ಟು ಸಮೃದ್ಧವಾಗಿದೆ ಎಂದರೆ ಕೆಲವು ನಿರ್ಲಕ್ಷಿತ ಸಮುದಾಯಗಳು ವಿದ್ಯೆ ಇಲ್ಲದ ಕಾರಣ ಹಾಡಿನ ರೂಪದಲ್ಲಿ ಪರಂಪರೆಯನ್ನು ಉಳಿಸಿಕೊಂಡು ಬಂದಿವೆ. ಇಂತಹ ಸಾವಿರಾರು ನಿರ್ಲಕ್ಷಿತ ಸಮುದಾಯಗಳ ಅನೇಕ ಸಂಕಥನಗಳು ಸಾಹಿತ್ಯದ ರೂಪದಲ್ಲಿ, ಇತಿಹಾಸದ ರೂಪದಲ್ಲಿ ದಾಖಲಾಗದಿರುವುದು ಈ ದೇಶದ ಬುಡಕಟ್ಟು, ಮೂಲನಿವಾಸಿಗಳ ದುರಾದೃಷ್ಟವೇ ಸರಿ. ಇಡಿಯಾದ ಭಾರತದಲ್ಲಿ ಎಷ್ಟೋ ವೈವಿದ್ಯಗಳಿವೆ, ವೈಚಾರಿಕ ಭಿನ್ನಾಭಿಪ್ರಾಯವಿದೆ. ಮೂಲ ನಿವಾಸಿಗಳೆಂದರೆ ಕೇವಲ ಕಾಡು ಮನುಷ್ಯರೆಂತಲೋ, ಇತ್ತೀಚಿನ ದಿನಗಳಲ್ಲಿ ನಕ್ಸಲರೆಂದು ಬೇಟೆಯಾಡುತ್ತಿರುವ ನಗರ ಸಮಾಜ ಮತ್ತು ಸರ್ಕಾರಗಳು ಒಂದು ಕಡೆಯಾದರೆ, ವಿಚಿತ್ರ ಪ್ರಾಣಿಗಳನ್ನು ತಂದು ಪಳಗಿಸುತ್ತಿರುವಂತೆ ಪ್ರತಿಬಿಂಬಿಸುವ ಮಾಧ್ಯಮಗಳು ಮತ್ತೊಂದು ಕಡೆಗೆ. ಅಕ್ಷರವಂತ ಸಮಾಜವು ಅನಕ್ಷರಸ್ಥ ಸಮಾಜವನ್ನು ಶೋಷಣೆ ಮಾಡುತ್ತ ಬಂದಿರುವುದು ಐತಿಹಾಸಿಕ ಸತ್ಯ, ಏಕೆಂದರೆ, ಐತಿಹಾಸಿಕ ಸಂಕಥನಗಳು, ಕೇಳರಿಯದ ಹೀರೊಗಳ ಕತೆಗಳನ್ನು ಇಂದಿಗೂ ಮುಖ್ಯವಾಹಿನಿಗೆ ತರದಿರುವುದು ದೊಡ್ಡ ದುರಂತವೆ. ಗಾಂಧಿ-ನೆಹರೂಗಳಿಗಿಂತ ಮೊದಲು ಬ್ರಿಟಿಷರ ವಿರುದ್ಧ ಹೋರಾಡಿದ ಗುರು ಗೋವಿಂದ ಬಂಜಾರ ಯಾಕೆ ಇತಿಹಾಸದಲ್ಲಿ ದಾಖಲಾಗಲಿಲ್ಲ? ಔರಾಂಗ್‌ಜೇಬನ ವಿರುದ್ಧ ಗುರು ಗೋವಿಂದ ಸಿಂಗ್ ಕಳೆಬರಹವನ್ನು ಧಪನ್ ಮಾಡಿದ ಲಕ್ಕಿಸಾ ಬಂಜಾರ ನನ್ನ ಸಿಕ್ಕರು 'ಕೈ ಬಿಟ್ಟದ್ದು ಏಕೆ? ಷೇರ್‌ಷ ಸೂರಿಯ ಮಂತ್ರಿ ಹೇಮು ಭುಕ್ಕಾ ಮುಂದೆ ದೆಹಲಿ ಆಳುವಾಗ ಹೇಮ ವಿಕ್ರಮಾದಿಪತ್ಯನಾಗಿ ಇಪ್ಪತ್ತೆರಡು ಯುದ್ಧಗಳನ್ನು ಗೆದ್ದು ಎರಡನೆ ಪಾಣಿಪಟ್ ಯುದ್ಧದಲ್ಲಿ ಅಕ್ಬರ್ ಮತ್ತು ಅವನ ಸಾಕಿದ ಚಿಕ್ಕಪ್ಪ


ಬೈರಂಖಾನ್ ಕೋಪದಿಂದ ಸೆರೆ ಹಿಡಿದು ತಲೆ ತೆಗೆದಾಗ ಬಂಜಾರ ಸಮುದಾಯಕ್ಕಾದ ನಷ್ಟ ಅಪರಿಮಿತ. ಇಂತಹ ಒಬ್ಬ ಧೈರ್ಯಶಾಲಿ ಬಂಜಾರನನ್ನ ಬನಿಯಾಗಳು ಹೈಜಾಕ್ ಮಾಡಿ ವ್ಯಾಪಾರಿ ಎಂದರೆ ನಿಮ್ಮ ಸಮುದಾಯದವನು ಎನ್ನುತ್ತಿರುವುದು. ನಾಚಿಗೇಡು ಅಲ್ಲವೆ. ಇಂತಹ ಅನೇಕ ಐತಿಹಾಸಿಕ ಬೇರುಗಳು ಭಾರತ ಭೂಮಿಯ ಆಳಕ್ಕೆ ಇಳಿದು ಜನರ ಬಾಯಿಯೊಳಗೆ ಹಾಡಾಗಿರುವುದು ಒಂದು ಅಚ್ಚರಿಯ ಸಂಗತಿಯಾದರೆ ಮತ್ತೊಂದು ಕಡೆ ಮೌಖಿಕ ಪರಂಪರೆಯಿಂದಾಗಿ ಜನರಾಳದಲ್ಲಿ ನೆಲೆಸಿರುವ ಈ ನಾಯಕರು, ಪ್ರೇತಗಳಂತೆ ಅಂರ್ತಪಿಶಾಚಿಗಳಾಗಿರುವುದು ದುರಂತದ ವಿಷಯವೇ ಸರಿ, ಈ ದಿಸೆಯಲ್ಲಿ ಬೇರುಗಳು ಹುಡುಕುತ್ತಾ ಶಿರಗಾನಹಳ್ಳಿಯಿಂದ ರಾಜಸ್ತಾನಕ್ಕೆ ಹೊರಟ ನನಗೆ -ಜಂಗಿ-ಭಂಗಿನಾಯ್ಕ, ಆಸೀಪ್‌ಖಾನ್, ಲಕ್ಕಿಸಾ ಬಂಜಾರದಂತ ಅನೇಕ ರೊಮಾಂಚನಕಾರಿ ಹೋರಾಟಗಾರರು ಸಿಕ್ಕರು, ಈ ಹೀರೊಗಳ ಜೊತೆಗೆ ಮುಖಾ-ಮುಖಿಯಾಗುತ್ತ ಇತಿಹಾಸದ ಗರ್ಭದಲ್ಲಿ ಅಡಗಿರುವ ಸತ್ಯವನ್ನು, ಮತ್ತು ಸತ್ಯದ ಬೇರುಗಳ ಆಳವನ್ನು ಹಿಡಿದು ಹೊರಟಾಗ ನನ್ನ ಆಲೋಚನೆಯ ಹರಿವು ತನ್ನ ವ್ಯಾಪಕತೆಯನ್ನು ವಿಕೃತಗೊಳಿಸುತ್ತಾ ಹೋಯಿತು. ಅದು ಕಾದಂಬರಿಯಾಗಿ ಜನಾಂಗೀಯ ಮಹತ್ವವನ್ನು ಪಡೆಯುತ್ತಾ ಕಾಲದಿಂದ ಕಾಲಕ್ಕೆ ಬದಲಾಗುತ್ತಿರುವ ಸಂದರ್ಭ ಸನ್ನಿವೇಶಗಳ ಏಳು ಬೀಳುಗಳಿಗೆ ಸಾಕ್ಷಿಯಾಗುತ್ತಾ ರಾಜರು-ವಸಹಾತುಷಾಯಿಗಳು, ಸ್ವತಂತ್ರ್ಯ ಕಂಡಾಗ ಬಂದೊದಗಿದ ಭಿನ್ನತೆಗಳಿಗೆ ಮೂಕ ಸಾಕ್ಷಿಯಾಗಿದೆ ಕಾಡು ಕಳೆದುಕೊಂಡು, ನಾಡಿನ ಸಂಬಂಧವನ್ನು ಮರೆತು ಕವಳಿ, ಕಂಚು ಅಂಟು, ಅಂಟ್ವಾಳ ಕಾಯಿಯ ಬೆಸುಗೆಯನ್ನ ಮರೆತು ಬಯಲು ಆಲಯದೊಳಗೆ ಬದುಕು ಆರಂಬಿಸಿದ ಅಲೆಮಾರಿ ಸಮುದಾಯವಾಗಿದ್ದ ಲಂಬಾಣಿಗಳು ಇಡಿ ಇತಿಹಾಸದುದ್ದಕ್ಕೂ ಸಂಕಷ್ಟವನ್ನು ಅನುಭವಿಸುತ್ತಲೆ ಬಂದಿದ್ದಾರೆ. ಈಗ ಸ್ವಾತಂತ್ರ್ಯ ಪೂರ್ವದಲ್ಲಿ ಎತ್ತುಗಳ ಮೇಲೆ ಆದೋಣಿಯ ಹೇರಿಕೊಂಡು ದುರ್ಗಮದಾರಿಯೊಳಗೆ ಅಲೆಯುತ್ತ ಬದುಕು ಕಟ್ಟಲು ಹವಣಿಸತೊಡಗಿದ್ದರು. ಅನೇಕ ವಿಪರ್ಯಾಸ, ಒತ್ತಡ, ಶೋಷಣೆ, ಆತ್ಮಿಯತೆಯ ಪ್ರಶ್ನೆ, ಬಡತನ, ದಾರಿದ್ರ್ಯ ಅಜ್ಞಾನದಲ್ಲಿ ತೊಳಾಡುತ್ತಿರುವ ಬಂಜಾರ ಸಮುದಾಯಕ್ಕೆ ತನ್ನ ಪೂರ್ವಾಪರದ ಪರಿಚಯದಲ್ಲಿ ತಮ್ಮ ಭವಿಷ್ಯದ ಚಿಂತೆನೆ ಇಲ್ಲಾ. ದುಡಿದಷ್ಟು-ಕುಡಿದಷ್ಟು ಮುಗಿಯಿತು. ಬದುಕೇ ಕೊನೆಗೊಂಡಂತೆ, ಕಾಫಿ ಬೀಜ, ಕಬ್ಬು, ಗಾರೆಕೆಲಸ, ರಸ್ತೆ ನಿರ್ಮಾಣ, ವ್ಯವಸಾಯದಲ್ಲಿ ಕೂಲಿಯಾಗಿ ಕೆಲಸಮಾಡುತ್ತಿರುವ ಬಂಜಾರ. ಲಮ್ಮಾಣಿ, ಸುಗಾಲಿಗಳ ಮೂಲ ರಾಜಸ್ತಾನ್ ಮುಸ್ಲಿಮ್ ರಾಜರ ಕಿರುಕುಳ, ಪ್ರಕೃತಿಯ ವೈಪರೀತ್ಯ, ಸಣ್ಣವ್ಯಾಪಾರ, ನಾಶವಾದ ಕಾಡು ಈ ಎಲ್ಲಾ ಪ್ರತಿಕೂಲ ಸ್ಥಿತಿಯ ನಿರ್ಮಾಣವಾದೊಡನೆ ಉತ್ತರದಿಂದ ಕಾಲ್ಕಿತ್ತು, ತಂಡೋಪ ತಂಡಗಳಾಗಿ-ದಕ್ಷಿಣ, ಪೂರ್ವ ಪಶ್ಚಿಮ, ದಕ್ಷಿಣಗಳ ಕಡೆಗೆ ಗುಳೆ, ವಲಸೆ, ಲಂಬಾಣಿಯರು ಹೊರಟವರು ತಮಗೆ ಬೇಕಾದ ಪ್ರದೇಶಗಳಲ್ಲಿ

ನೆಲೆ ನಿಂತು ಸ್ವಾತಂತ್ರ್ಯ ಸಿಕ್ಕ 70 ವರ್ಷಗಳಿಂದಲೂ ಮೂಲ ನೆನಪುಗಳನ್ನು ಕಡಿದುಕೊಳ್ಳಲಾಗದೆ ಒದ್ದಾಡುತ್ತಿದ್ದಾರೆ. ಒಂದು ನೆಲೆಗಾಗಿ ಅವಿರತ ಹೋರಾಟ ಮಾಡುತ್ತಿರುವ ಇವರು ಪರಾಂಪೋಕ್ – 'ಬೇನಾಮಿ' ಜಮೀನಲ್ಲಿ ಮನೆ ಕಟ್ಟಿಕೊಂಡು ಒಂದಿಷ್ಟು ಸರ್ಕಾರಿ ಜಮೀನು ಒತ್ತುವರಿ ಮಾಡಿಕೊಂಡು ಬದುಕಿದ್ದಾರೆ. ಇತ್ತೀಚಿನವರೆಗೂ ಸರ್ಕಾರಿಕಡತಗಳಲ್ಲಿ ಸೇರದ ತಾಂಡಗಳು, ಸರ್ಕಾರಿ ಸವಲತ್ತು' ವಂಚಿತ ಜನರು ಹೀಗೆ ಬದುಕಿರುವ ಬಡಬಂಜಾರರು ಹತ್ತೊಕ್ತಾಯ ಮಾಡದೆ ಬದುಕನ್ನು ಕಟ್ಟಿಕೊಳ್ಳುವ ಅಸಹನೀಯ ಸನ್ನಿವೇಶದಲ್ಲೂ ಸಹನೆಯಿಂದ ಬದುಕಿ ಕರ್ನಾಟಕ–ಭಾರತದ ಒಟ್ಟಾರೆ ಜನ ಸಮುದಾಯದಲ್ಲಿ ಬಂದು ಗುರುತಿಸಲ್ಪಡುವ ಪ್ರಮಾಣದಲ್ಲಿರುವ ಇವರನ್ನು ಆಯಾ ರಾಜ್ಯದಲ್ಲಿ ಕೇಂದ್ರೀಕೃತವಾಗಿರುವ ಬಹುಸಂಖ್ಯಾತ ಮೇಲ್ವರ್ಗ ಸ್ವಾಭಿಮಾನಕ್ಕೆ ತಲೆದೂಗಿ ಬಂಜಾರರನ್ನು ಪ್ರೀತಿಸುವುದರಿಂದ, ಅಭಿಮಾನದಿಂದ ನೋಡುವುದು, ಬಹಳಷ್ಟು ಜಾತಿಗಳಿಗೆ ಸಹಿಸಲಾರದ ವಿಷಯವಾಗಿದೆ. ಈ ಹಿನ್ನಲೆಯಲ್ಲಿ ಮಕ್ಕಳನ್ನು ಮಾರುವ ಸ್ಥಿತಿ ತಲುಪಿರುವ ಬಂಜಾರರು. ಕೂಲಿಮಾಡಿ ಬದುಕಲೇ ಬೇಕಾದ ಸನ್ನಿವೇಷವನ್ನು ಹೊಂದಿರುವ ಕಷ್ಟಜೀವಿಗಳು ಕೆಳಗಿನಿಂದಲೂ ಶೋಷಣೆ ಗೊಳಾಗಾಗುತ್ತಿದ್ದಾರೆ. ಮೇಲಿನಿಂದಲೂ ಶೋಷಣೆಗೊಳಗಾಗುತ್ತಿದ್ದಾರೆ. ಈ ಎಲ್ಲಾ ತುಮುಲಗಳನ್ನು ಸಂಘರ್ಷಗಳನ್ನ ಐತಿಹಾಸಿಕ ದೃಷ್ಟಿಕೋನದಿಂದ ಈ ಕಾದಂಬರಿ ಇತಿಹಾಸ ಮತ್ತು ವರ್ತಮಾನದ ಮುಖಾಮುಖಿಯಾಗಿದೆ. ಭೂತಕಾಲದ ಹೆಜ್ಜೆ ಗುರುತುಗಳನ್ನು ಸ್ಪಷ್ಟಪಡಿಸುವ ಪ್ರಯತ್ನವಾಗಿದೆ. "ಮಲಾಣ್" ಎಂದರೆ ವಲಸೆ ಎನ್ನುವ ಅರ್ಥವಾಗಿದ್ದು. ವಸಹಾತು ಪೂರ್ವಕಾಲದಲ್ಲಿ ಇಡಿ ಭಾರತದ ಮೂಲೆ ಮೂಲೆಗೆ ಹೋಗಿ ಸಣ್ಣಪುಟ್ಟ ವ್ಯಾಪಾರ ಮಾಡುತ್ತ ಕಾಡನ್ನ ಆಂಶ್ರಯಿಸಿದ್ದ ಲಂಭಾಣಿಗರ ಸ್ಥಿತ್ಯಂತರವನ್ನು ಧಾಖಲಿಸುವ ಪ್ರಯತ್ನವಾಗಿದೆ. ಕಾಡಿಂದ ನಾಡಿಗೆ, ನಾಡಿನಿಂದ ನಾಗರೀಕತೆಗೆ, ನಾಗರೀಕತೆಯಿಂದ ಶಿಕ್ಷಣ ಪಡೆಯುವ ವರೆಗಿನ ಇಡಿಪ್ರಕ್ರೀಯೆಯನ್ನ ಹಾಘೂ ಪಟ್ಟಣಗಳ ವಿಸ್ತೃತ ಕಾಲೋನಿಗಳಲ್ಲಿ ಬದುಕಿರುವ ಮೊದಲ ಮತ್ತು ಎರಡನೇ ತಲೆಮಾರಿನ ಜನರ ಮಾನಸಿಕ ಸಂಘರ್ಷವನ್ನು ಚಿತ್ರಿಸುವ ಪ್ರಯತ್ನ ಇದಾಗಿದೆ. ಅನೇಕ ಮೇಲ್ವರ್ಗದ ಜನರ ನಡುವೆ ಅಸ್ತಿತ್ವದ ಉಳವು ಸವಾಲಾಗಿರುವುದು ಸತ್ಯ, ಕನ್ನಡ ಸಾಹಿತ್ಯ ಜಗತ್ತಿಗೆ ಬಂಜಾರರು, ಆದಿವಾಸಿಗಳು, ಹಕ್ಕಿ ಪಿಕ್ಕಿಗಳು ತೆರೆದುಕೊಂಡು ಕೆಲವೆ ವರ್ಷಗಳಾಗಿವೆ. ಈ ಜನರ ಸಮೃದ್ಧವಾದ ಬದುಕು ಸಾಹಿತ್ಯಕ್ಕೆ ಹೊಸ ಆಯಾಮ ನೀಡುವುದರಲ್ಲಿ ಸಂಶಯವೆ ಇಲ್ಲ. ಇನ್ನು ಮುಂದೆ ಲಂಭಾಣಿ, ಹಕ್ಕಿ ಪಿಕ್ಕಿ ಸಿಂಧೊಳ್, ಹಂದಿಜೋಗಿ, ರೊಸಗಾರ, ಬುಡಬುಡಕೆಯವ, ಗೊಂಧಳಿಗಳದ್ದೆ ಕಾಲ. ಏಕೆಂದರೆ ಅವರ ಬದುಕಿನ ಭವಣೆ ಸಾಹಿತ್ಯದ ವಿಷಯವಾಗಿಲ್ಲ. ಅವರ ಸಂಘರ್ಷಕ್ಕೆ ಒಂದು ವೇದಿಕೆ ಸಿಕ್ಕಿಲ್ಲ. ಅವರ ಅಭಿವ್ಯಕ್ತಿಗೆ ಆಯಾಮ ಒದಗಿಬಂದಿಲ್ಲ. ಇದು ಆದಾಗ ಹೊಸದೊಂದು ಲೋಪ ನಮ್ಮೆದುರಿಗೆ

ತೆರೆದುಕೊಳ್ಳುವುದರಲ್ಲಿ ಎರಡು ಮಾತಿಲ್ಲ. ಈ ಕನ್ನಡದ ನಿರ್ಲಕ್ಷಿತ ಮಕ್ಕಳನ್ನು ತನ್ನ ತೊಳ್ತೆಕ್ಕೆಯಲ್ಲಿ ಹಾಕಿಕೊಂಡು ಪೋಷಿಸುತ್ತಿರುವ ಕನ್ನಡದ ಸಾಹಿತ್ಯಪ್ರಿಯ ತಂದೆ-ತಾಯಿಗಳಿಗೆ ಈ ಎಲ್ಲಾ ಬುಡಕಟ್ಟುಗಳ ಪರವಾಗಿ ಕೃತಜ್ಞತೆ ಸಲ್ಲಿಸುತ್ತೇನೆ. ಡಾ. ದಾಕ್ಷಾಯಣಿ, ಅನಿಕೇತನ್, ಅಕಂಪನ್ ಹಾಗೂ ಸೃಷ್ಟಿನಾಗೇಶ್ ಅವರಿಗೆ ಚಿರಋಣಿ

ಶಾಂತನಾಯ್ಕ ಶಿರಗಾನಹಳ್ಳಿ
17–11–2018

ವಲಸೆ ಲಂಬಾಣಿಗರ
ಇತಿಹಾಸ
ವರ್ತಮಾನದ
ಕಾದಂಬರಿ



ಹೊರಟಿದ್ದು.

ಸುತ್ತ ಅಡವಿಯೊಳಗೆ ಅಲ್ಲೋಕಲ್ಲೋಲವೇ ಎದ್ದಿತ್ತು. ಕಾಡು ಪ್ರಾಣಿಗಳು ಸದ್ದಿಗೆ ಬೆದರಿ ಪಲಾಯನಮಾಡಿದ್ದವು. ಐದಾರು ಸಾವಿರ ಹೋರಿಗಳು ಬೆನ್ನಮೇಲ ಹೊತ್ತ ಮೂಟೆಗಳನ್ನೆಲ್ಲಾ ಹಾಗೆ ಹೊತ್ತು ನಾಲ್ಕು ಕಾಲುಗಳನ್ನು ಮೇಲೆತ್ತಿ ಜಿಗಿಯುತ್ತ ನಾಗಾಲೋಟದಿಂದ ಓಡುತ್ತಿದ್ದವು. ಜಂಗಿನಾಯ್ಕ, ಭಗನ್ಯನಾಯ್ಕರಿಗೆ ಗಾಬರಿಯಾಯ್ತು. ಯಾರಾದರು ಶತ್ರುಗಳು ದಾಳಿಮಾಡಿದ್ರೆ? ಒಂದು ಕ್ಷಣ ಅನುಮಾನ, ದೆಹಲಿ ಸುಲ್ತಾನ ಔರಂಗಜೇಬನ ವಿರುದ್ದ ಯುದ್ಧಮಾಡುವ ತಾಕತ್ತು ಭಾರತಖಂಡದಲ್ಲೇ ಇಲ್ಲದಿರುವಾಗ, ಅದು ಅಲ್ಲದೆ ಯಮನಿಗೆ ಸವಾಲು ಹಾಕುವ ಸಾವಿನಸರದಾರ ಆಸಿಫ್ ಅಲಿಖಾನ್ ನಂತಹ ವೀರ ದಕ್ಷಿಣ ಭಾರತದ ನಾಡನ್ನು ಮಣಿಸಲು ಹೊರಟ ಸಂದರ್ಭದಲ್ಲಿ ಅವನಿಗೆ ಎದುರು ನಿಲ್ಲುವಂತ ಛಾತಿಯಾವ ಭೂಪನಿಗೆ ಇರಲು ಸಾಧ್ಯ? ಆದರೆ ದವಸಗಳ ಮೂಟೆಯನ್ನು ಹೊತ್ತಿದ್ದ ಹತ್ತು ಸಾವಿರ ರಾಸುಗಳು ದಿಕ್ಕೆಟ್ಟು ಓಡಿದ್ದಂತು ದಿಟ. ಹಿಂದೆ ಕುದುರೆ ಮೇಲೆ ಸವಾರಿ ಮಾಡುತ್ತಿದ್ದ ಜಂಗಿಗೆ ಕೇಳುಭಗತ್ ಸುದ್ಧಿ ಮುಟ್ಟಿಸಿದ. ಎತ್ತುಗಳು ಯಾಕೋ ಬೆದರಿವೆ ಅಂತ. ಈ ಬೀಜದ ಹೋರಿಗಳು ಬೆದರಲು ಸಾಧ್ಯವಿಲ್ಲವಲ್ಲ. ಈ ದಟ್ಟಕಾಡಡವಿಯೊಳಗೆ, ಒಂದು ಹುಲಿಯ ಘರ್ಜನೆಗೆ ಬೆದರಿರಬೇಕು ಇಲ್ಲಾಂದ್ರೆ ಯಾರಾದರು ಶತ್ರುಗಳು ದಾಳಿಮಾಡಿರಬೇಕು. ಜಂಗಿಗೆ ಏನು ಮಾಡಲು ತೋಚದೆ ಅವನ ಅಣ್ಣ ಭಗನ್ಯನಾಯ್ಕ ಹಿಂದೆ ಆಸಿಫ್ ಖಾನ್‌ನ ಜೊತೆಗೆ ಕುಷಲೋಪರಿಯಿಂದ ಮಾತಾಡುತ್ತಾ ಬರುತ್ತಿದ್ದ, ಅವನಿಗೆ ಅನಿವಾರ್ಯವಾಗಿ ಸುದ್ದಿತಲುಪಿಸಬೇಕಾಗಿ ಬಂತು. ಭಂಗಿಖಾನ್ ಸಾಹೇಬರಿಂದ ವಿದಾಯ ಪಡೆದು ಹೋರಿಗಳು ನಾಗಲೋಟದಿಂದ ಓಡುತ್ತಿರುವ ಕಡೆಗೆ ಧಾವಿಸಿದ. "ಹೋ. ಹೋ." ಕುದುರೆ ಇಳಿದು ಅವುಗಳನ್ನ ನಿಲ್ಲಿಸುವ ಸಲುವಾಗಿ ಓಡಿದ. ಪ್ರಯೋಜನವಾಗಲಿಲ್ಲ. ಯಾವುದು ಕೊಬ್ಬಿದ ಎಡೆಒಡೆಯದ ಹೋರಿ ಭಂಗಿ ಕಡೆಗೆ ದಾವಿಸಿ ಇನ್ನೇನು ಕೊಂಬೊಳಗೆ ಹೊಟ್ಟೆಯನ್ನು

ಸಿಗಿಸಿ ಮೇಲೆತ್ತಬೇಕು. ಮೀಟುಕರಮತೋಟ್ ಭಂಗಿಯನ್ನು ಅಜಾಮತ್ತಾಗಿ ಮೇಲೆತ್ತಿ ಪಕ್ಕಕ್ಕೆ ನಿಲ್ಲಿಸಿ ಬಂದ ಹೋರಿಯ ಕೊಂಬನ್ನು ಹಿಡಿದು ತಿರುವಿ ನೆಲಕ್ಕುರಿಳಿಸಿದ. ಅಷ್ಟೇ ಅಲ್ಲ, ಎತ್ತುಗಳಿಗಿಂತ ಜೋರಾಗಿ ಮುಂದೆ ಓಡಿ ಅವುಗಳನ್ನು ನಿಲ್ಲಿಸುವಲ್ಲಿ ಯಶಸ್ವಿಯಾದ.

ಭಂಗಿಗೆ ರಾತ್ರಿ ನಿದ್ದೆ ಬರದಾಗಿತ್ತು. ಯಾಕಂದ್ರೆ, ಅವನು ದೆಹಲಿ ಸುಲ್ತಾನನ ಹುಕ್ಕುಂ ಪಡೆದು ದಕ್ಷಿಣದ ಕಡೆಗೆ ಹೊರಟಾಗ ರಾಜಸ್ಥಾನದ ಜೈಪುರದಿಂದ ಇನ್ನೂರು ಮೈಲಿ ದೂರದ ಬಂಜಾರಗಡದಲ್ಲಿ ಪಳಗಿದ ಹುಡುಗರ ದಂಡಿನ ಆಯ್ಕೆಗೆ ಕುಳಿತಾಗ, ಅವನೆದುರಿಗಿದ್ದಿದ್ದು ಒಂದೇ ಆಯ್ಕೆ. ಅವನ ಕೋಮಿನ ಹುಡುಗರನ್ನು ಸೇರಿಸಿಕೊಳ್ಳುವಲ್ಲಿ ಪಕ್ಷಪಾತಿಯಾಗಿದ್ದ. ಒಬ್ಬ ರಾಠೋಡನನ್ನು ಕೂಡ ಆಯ್ಕೆ ಮಾಡಿಕೊಳ್ಳದೆ ಕೇವಲ ಚವ್ಹಾಣ್‌ಗಳನ್ನು ಮಾತ್ರ ಆಯ್ಕೆ ಮಾಡಿಕೊಂಡು ಅವರನ್ನೇ ನಂಬಿಕೊಂಡು ಬಂದಿದ್ದ. ಆದರೆ ಜೂನಾಗಡದಿಂದ ವಲಸೆ ಬಂದು ಬಂಜಾರಗಡದಲ್ಲಿ ವಾಸಿಸಲು ಹೆಣಗುತ್ತಿದ್ದ ಪಂತಲು ಬುಕ್ಯಾ ಕರಮ್‌ತೋಟ್, ಅವನ ಹರೆಯದ ಮಗ ಮೀಟು ಬುಕ್ಯಾ ಕರಮ್‌ತೋಟ್ ಎಲ್ಲಿಯಾದರು ಸೈನ್ಯದೊಳಗೊ, ಇಲ್ಲಾ ಬಂಜಾರಗಡ್‌ನ ಶ್ರೀಮಂತ ವ್ಯಾಪಾರಿಗಳಾಗಿದ್ದ ಜಂಗಿನಾಯ್ಕ, ಭಗನ್ಯನಾಯ್ಕ ಸಹೋದರರ ಆಶ್ರಯದಲ್ಲಿ ವ್ಯಾಪಾರ ಕಲ್ತಾನು ಎನ್ನುವ ಕನಸು ಕಾಣುತ್ತಿದ್ದ. ಆದರೆ ಬರಿ ತನ್ನ ಕೋಮನ್ನೇ ನಂಬುವ ಇಬ್ಬರು ಸಹೋದರರು ಯಾವ ರಾಠೋಡ್‌ನನ್ನು ಕೆಲಸಕ್ಕೆ ತೆಗೆದುಕೊಳ್ಳುವ ಗೋಜಿಗೆ ಹೋಗಲಿಲ್ಲ. ರಾಠೋಡ ಬೆಡಗದವರಲ್ಲಿ ಕಟ್ಟುಮಸ್ತಾದ ಪೈಲ್ವಾನರಂತಹ ಯುವಕರಿದ್ದರು, ಚವ್ಹಾಣ್ ಬೆಡಗದ ಮೇಲಿನ ದುರಭಿಮಾನದಿಂದ ಜಂಗಿ, ಭಂಗಿ ಅಂಧರಾಗಿದ್ದರು. ಬಡತನದ ಬೇಗೆಯನ್ನು ತಾಳದ ಪಂತಲು ಬುಕ್ಯಾ ಕರಮ್‌ತೋಟ್ ಅವನ ಹರೆಯದ ಮಗ ಕಡಿಮೆ ಅಂದ್ರೆ ನೂರು ಜನರನ್ನ ನೆಲಕ್ಕುರುಳಿಸುವ ತಾಕತ್ತಿನ ಮೀಟು ಬುಕ್ಯಾ ಕರಮ್‌ತೋಟ್‌ಗೆ ಸುಳ್ಳು ಹೇಳಿ ಜಂಗಿ, ಬಂಗಿ ಸಹೋದರರ ಹತ್ತಿರ ಕೆಲಸಗಿಟ್ಟಿಸಿಕೊಳ್ಳಲು ಹೇಳಿದ್ದ. "ಮಗ, ನಾವು ಹೀಗೆ ಸತ್ಯ ಹೇಳಿ ಬದುಕೋದಕ್ಕೆ ಆಗೋದಿಲ್ಲ, ನೀನು ಜಂಗಿ-ಭಂಗಿಗೆ ನಾನು ಚವ್ಹಾಣ್ ಅಂತ ಸುಳ್ಳು ಹೇಳು ಆಮೇಲೆ ದೇವರ ಅದಾನ" ಪಂತಲು ಅಸಹಾಯಕನಾಗಿದ್ದ, ಬಂಜಾರಗಡದಿಂದ ನೂರು ಕಿಲೋಮೀಟರ್ ದೂರದ ಸಂಕೆಬಾಕ್ರಿ ತಾಂಡದಲ್ಲಿ ವಾಸವಾಗಿದ್ದ ಕುಟುಂಬ ಸಣ್ಣಪುಟ್ಟ ವ್ಯಾಪಾರ ಮಾಡಿ ಬದುಕೋದಕ್ಕಾಗದೆ ಮೂವರು ಗಂಡುಮಕ್ಕಳು ಹಾಗೂ ಇಬ್ಬರು ಹೆಣ್ಣು ಮಕ್ಕಳ ಕೂಡು ಕುಟುಂಬದೊಂದಿಗೆ ಪಂತಲು ಗುಳೆ ಬಂದಿದ್ದ. ಎಲ್ಲರಲ್ಲಿ ದೊಡ್ಡವನೆ ಮೀಟು. ಅವನ ಹಿಂದಿನ ಕುಬಾ ಹುಟ್ಟುತ್ತಲೆ ಹೇಳವನಾಗಿದ್ದ. ಮೂರನೆಯವ ಮೀಟುನನ್ನು ಮೀರಿಸುವ ತಾಕತ್ತಿನವ ಥಾವು. ಅಪ್ಪನಿಗೆ ಅದು ಇದು ಅಂತೇಳಿ ಸಹಾಯಮಾಡ್ತಿದ್ದ. ಇಬ್ಬರು ಸುಂದರವಾದ ಹುಡುಗಿಯರು ಪ್ರಾಯಕ್ಕೆ ಬಂದಿರುವುದೇ ಅವನ ಚಿಂತೆಗೆ ದೊಡ್ಡಕಾರಣವಾಗಿತ್ತು. ಯಾರಾದರೂ ಚವ್ಹಾಣ್ ಬೆಡಗದ ಹುಡುಗರು ಒಪ್ಪಿಕೊಂಡರೆ ಮದುವೆ ಮಾಡಿಬಿಡುವ ಯೋಚನೆಯಲ್ಲಿ ಪಂತಲು ಏನೋ ಇದ್ದ. ಆದರೆ, ಯೋಗ್ಯವಾದ ಸಂಬಂಧ ದೊರೆಯದ ಕಾರಣ ಅವರು ಹಾಗೆಯೇ ಉಳ್ಕೊಂಡಿದ್ದರು. ಹಗಲು ಹೊರಗಡೆ ಬಿಡದೆ ರಾತ್ರಿ ಮಾತ್ರ ಒಂದಿಷ್ಟು ಗಾಳಿಗೆ ಮುಖತೋರಿಸಿ ತಮ್ಮ ಕೆಟ್ಟ ಹಣೆಬರಹಕ್ಕೆ ಹಳಹಳಿಸುತ್ತಿದ್ದರು. ರೂಪ್ಲಿ ಮತ್ತು ಅವಳ ತಂಗಿ ಪಾರು. ಹಗಲು ಹೊರಗೆ ಬಂದಾಗ ಅವರನ್ನೆನಾದರೂ ಮುಸ್ಲಿಂ ಯುವಕರು ಕಂಡರೆ ಆಗ್ವಾಮಾಡಿಕೊಂಡು ಹೋಗಿ ನಿಖಾಮಾಡಿಕೊಂಡು ಬಿಡುತ್ತಿದ್ದರು. ದಿಲ್ಲಿಯ ಸುಲ್ತಾನ ಔರಂಗಜೇಬನ ಹುಕುಮತ್ತೆ

ಹೀಗಿರುವಾಗ ಯಾವ ಬಂಜಾರತಾನೆ ಏನು ಮಾಡಲಾದೀತು.? ಪಂತಲು ಇಬ್ಬರು ಗಂಡುಮಕ್ಕಳನ್ನು ತನ್ನ ಇಬ್ಬರ ಹುಡುಗಿಯರ ರಕ್ಷಣೆಗಾಗಿಯೇ ಬಲದಲ್ಲಿ ಆನೆಯಂತೆ, ಪರಾಕ್ರಮದಲ್ಲಿ ಹುಲಿಯಂತೆ ಸಾಕಿದ್ದ. ಇಬ್ಬರು ಸಹೋದರರೂ ಕೂಡ ತಮ್ಮ ತಂಗಿಯರನ್ನು ಮುಸ್ಲಿಂಮರೇನಾದರು ಮುಟ್ಟಿದರೆ ಒಂದು ಅವರು ಹೆಣವಾಗಬೇಕು. ಇಲ್ಲ ಇವರಿಬ್ಬರು ಹೆಣವಾಗಬೇಕು ಎಂದು ಕಸಮ್ ಮಾಡಿದ್ದರು. ಹಾಗಾಗಿಯೇ ದೀಪಾವಳಿ ದಿನ ತಂಗಿಯರು ದೀಪತೆಗೆದುಕೊಂಡು ತಾಂಡದನಾಯಕನ ಮನೆಗೆ ಹೋಗುವಾಗ ದೂರದಿಂದಲೇ ಸೂಕ್ಷ್ಮತೆಯನ್ನು ತಿಳಿಯುವ ಪ್ರಯತ್ನಮಾಡುತ್ತಿದ್ದರು.

ಆದಾಗ್ಯೂ ಒಂದು ದೀಪಾವಳಿಯಂದು ತಾಂಡದ ಆದಿದೇವತೆ ಮರಿಯಮ್ಮನ ಮಟ್ಟೋದ ಮುಂದೆ ಕುಣಿಯುತ್ತಿದ್ದ ಅವನ ತಂಗಿ ರೂಪ್ಲಿಯನ್ನು ಅಗ್ವಾ ಮಾಡಲೇಬೇಕೆಂದು ಪಕ್ಕದ ಪೀರಂಪುರದಿಂದ ಹತ್ತು ಮುಸಲ್ಮಾನ್ ಹುಡುಗರು ಪೂರ ತಯಾರಿಯಿಂದಲೇ ಕುದುರೆಗಳನ್ನೇರಿ ಲಂಬಾಣಿಯುವಕರಂತೆ ವೇಷಮರೆಸಿಕೊಂಡು ಬಂದಿದ್ದರು. ಮೀಟುಗೆ ಅನುಮಾನಬಂತು, ಇಂತಹ ಹುಡುಗರನ್ನು ಸುತ್ತ ಲಂಬಾಣಿ ತಾಂಡಗಳಲ್ಲೆಲ್ಲೂ ನೋಡಿರಲಿಲ್ಲ. ಅವನ ತಮ್ಮ ಥಾವುಗೆ ಸುದ್ದಿ ತಲುಪಿಸಿದ. "ಭಾಯಿ, ಈ ಹುಡಗರನ್ನ ಯಾವುದಾದರೂ ತಾಂಡಗಳಲ್ಲಿ ನೋಡಿದ್ದೀಯಾ" ಕೇಳಿದ. "ಭೀಯಾ, ನನ್ನ ನೆನಪಿಸ ಪ್ರಕಾರ ಇಂಥಹ ಮೂತಿಗಳನ್ನು ತಾಂಡದಲ್ಲೆಲ್ಲಿ ಕಂಡಿಲ್ಲ. ಅಷ್ಟೇ ಅಲ್ಲ, ಈ ಮೂತಿಗಳು ಬಂಜಾರ ಹುಡುಗರನ್ನು ಹೋಲ್ತಾ ಇಲ್ಲ. ಏನೋ ಎಡವಟ್ಟು ಆಗೋ ಹಾಗಿದೆ ನೋಡೋಣ ನಾನು ಪತ್ತೆ ಹಚ್ತೀನಿ" ಹತ್ತು ಜನರ ಗುಂಪಿನ ಕಡೆಗೆ ಹೊರಟ. ಅವರಿಗೂ ಅನುಮಾನಬಂತು, ಆದರೆ ಅವರು ಧೈರ್ಯದಿಂದ ತಯಾರಿಮಾಡಿಕೊಂಡೆ ಬಂದಿದ್ದರು. ಬಂಜಾರ ಹುಡುಗಿಯರು ಮನೆ ಹೊರಗೆ ಬರುವುದೇ ದೀಪಾವಳಿಯಂದು. ಹಾಗಾಗಿಯೇ ಕಳೆದ ದೀಪಾವಳಿಯಲ್ಲಿ ಬಾಪು ಬುಕ್ಯಾ ಮತ್ತು ರಾಂಗೂ ಬುಕ್ಯಾರ ಇಬ್ಬರು ಹುಡುಗಿಯರನ್ನ ಅಗ್ವಾವಮಾಡಲಾಗಿತ್ತು. ಈಗ ಅವರ ಪರಿಸ್ಥಿತಿ ಅತ್ತ ಮುಸಲ್ಮಾನ್ ಅಲ್ಲಾ, ಈ ಕಡೆಗೆ ಬಂಜಾರ ಅಲ್ಲದಂಗಾಗಿದೆ. ಅಗ್ವಾ ಆದ ಎಲ್ಲಾ ಹುಡುಗಿಯರು ತಮ್ಮ ಜೀವನದ ಬಗ್ಗೆ ಜಿಗುಪ್ಸೆಗೊಂಡಿದ್ದಾರೆ. ಯಾಕಂದ್ರೆ ಅಗ್ವಾ ಮಾಡಿಕೊಂಡು ಹೋದವರೆಲ್ಲಾ ಮದುವೆ ಮಾಡಿಕೊಂಡು ಮಕ್ಕಳಿರುವವರೇ. ಅವರ ಹಿಂಸೆಯನ್ನು ತಡೆಯಲು ಆಗದೆ ಕೆಲವರು ಸತ್ತು ಹೋದರು. ಮತ್ತೆ ಕೆಲವರು ದಕ್ಷಿಣಕ್ಕೆ ಹೊರಟ ವ್ಯಾಪಾರಸ್ಥ ಬಂಜಾರರ ಹಿಂದೆ ಗುಲಾಮರಾಗಿ ಹೊರಟುಹೋದರು. ಇಡೀ ರಾಜಸ್ಥಾನದಲ್ಲಿದ್ದ ಬಂಜಾರರೆಲ್ಲಾ ಗುಜರಾತ್ ಕಡೆಗೆ, ಉತ್ತರಪ್ರದೇಶ, ಮಧ್ಯಪ್ರದೇಶದ ಕಾಡಿನೊಳಗೆ ಸೇರಿಕೊಂಡು ತಮ್ಮ ದನಕರುಗಳನ್ನು ಚಿಕ್ಕಮಟ್ಟ ವ್ಯಾಪಾರವನ್ನು ಮಾಡಿಕೊಂಡು ಬದುಕತೊಡಗಿದರು. ಉಳಿದ ಕೆಲವರು ಮುಸ್ಲಿಮರಿಗೆ ವಿದೇಯರಾಗಿ ಬದುಕತೊಡಗಿದರು. ದೆಹಲಿಯ ದೊಡ್ಡ ವ್ಯಾಪಾರಸ್ಥ ಲಕ್ಕಿಸಾ ಬಂಜಾರನ ಎತ್ತುಗಳು ಇಡೀ ಅರ್ಧ ದೆಹಲಿಯವರೆಗೆ ನಿಲ್ಲುತ್ತಿದ್ದವು. ಲಕ್ಕಿಸಾ ದೆಹಲಿಯ ಬಾದ್‍ಷನ ಖಾಸಮನುಷ್ಯನಾಗಿದ್ದ. ಆದರೆ ಬಹುಪಾಲು ಬಂಜಾರರಿಗೆ ಮುಸ್ಲಾಮಾನರ ಉಪಟಳ ತಡೆಯಲಾಗದೆ ಚೆಲ್ಲಾಪಿಲ್ಲಿಯಾಗಿ ಹೋಗಿದ್ದರು. ದೆಹಲಿಯ ಸುಲ್ತಾನರಿಗೆ ಬಂಜಾರರು ದಕ್ಷಿಣದ ದಾರಿ ತೋರಿಸಲು ಮತ್ತು ಅವರ ಸೈನ್ಯಕ್ಕೆ ಆಹಾರ ಪೂರೈಸಲು ಬೇಕಾಗಿದ್ದರಿಂದ ದೊಡ್ಡ ವ್ಯಾಪಾರಸ್ಥರಾದ ಲಕ್ಕಿಸಾ ಬಂಜಾರ, ಭೀಮಜಿ ಬಹದ್ದೂರು, ಲಕ್ಕ ವಡತ್ಯಾ, ಬಂಗಿ, ಜಂಗಿ

ಸಹೋದರರು ಬಹಳ ಮುಖ್ಯವಾಗಿ ಬೇಕಾಗಿದ್ದರು. ಮೀಟು ಬುಕ್ಯಾನ ತಂಗಿ ರೂಪ್ಲಿಯ ಸೌಂದರ್ಯದ ಬಗ್ಗೆ ಸುತ್ತಲು ಚರ್ಚೆ ಯಾಗಿದ್ದರಿಂದಲೇ ಹತ್ತುಜನರ ಗುಂಪು ಅವಳನ್ನು ಒಯ್ಯಲು ಮುಸ್ಲಿಮ್ ಸಮುದಾಯದಲ್ಲಿ ಜಿದ್ದುಕಟ್ಕೊಂಡೆ ಬಂದಿದ್ದರು. ಹುಡುಗಿಯರು ತಮ್ಮ ಪಾಡಿಗೆ ತಾವು ನೃತ್ಯ ಮಾಡ್ತಾಯಿದ್ರೆ ಜಲೀಲ್, ಖುರೇಶಿ ತಮ್ಮ ಎಂದಿನ ಆಟವನ್ನು ಆರಂಭಿಸಿದ್ರು, ಅವರು ಎಸೆದಗಾಳದಲ್ಲಿ ರೂಪ್ಲಿ ಬೀಳದೆ ಅವಳ ಅಣ್ಣ ಮೀಟು ಬಿದ್ದಿದ್ದನ ಕಂಡು ಕಾಲು ಕೈ ಆಡದೆ ದಿಕ್ಕು ತಿಳಿಯದೆ ಅವನ ಮೇಲೆ ಆಕ್ರಮಣವೆಸಗಿದರು. ಆನೆಯಂತೆ ಸಿಕ್ಕಿದ್ದನ್ನೇ ಧ್ವಂಸಗೊಳಿಸಿದ ಮೀಟು ಎಲ್ಲರನ್ನು ಕೊಚ್ಚಿಹಾಕೋದೇನೊ ಹಾಕಿಬಿಟ್ಟ ಆದ್ರೆ, ಬಾದಷಾನ ಸೇನಾಧಿಪತಿ ಜುಲ್ಮಾನ್ ಖಾನ್ ಎಂಬ ರಾಕ್ಷಸನಿಗೆ ಈ ಕೃತ್ಯದ ಬಗ್ಗೆ ಸುದ್ದಿ ಮುಟ್ಟಿದರೆ ಭಾವೆ ಇಡೀ ತಾಂಡವನ್ನ ಬೆಂಕಿ ಹಚ್ಚಿ ಸುಟ್ಟು ಬಿಡ್ತಾನ ಅಂತೇಳಿ ಸಂಕೆಬಾಕ್ರಿ ತಾಂಡವನ್ನ ರಾತ್ರೋರಾತ್ರಿ ಬಿಟ್ಟು ಜೈಪುರದಹತ್ತಿರ ಜಂಗಿ, ಬಂಗಿ ವ್ಯಾಪಾರಕ್ಕಂತೇಳಿ ತಮ್ಮ ಸೈನ್ಯವನ್ನು ಆಯ್ಕೆ ಮಾಡ್ತಿರೋ ಜಾಗಕ್ಕೆ ಬಂದಿದ್ರು. ಸದ್ಯದ ಪರಿಸ್ಥಿತಿಯಲ್ಲಿ ಅವರ ಬೆಡಗನ್ನು ಬಚ್ಚಿಡದೆ ಬೇರೆ ದಾರಿನೇ ಇರಲಿಲ್ಲ. ಹಾಗಾಗಿಯೇ, ಪಂತು ಬುಕ್ಯಾ ಕರಮ್‌ತೋಟ್, ಇಬ್ಬರು ಮಕ್ಕಳಿಗೆ ಸುಳ್ಳು ಹೇಳಿ ಜಂಗಿ-ಬಂಗಿಯ ಜೊತೆ ಸೇರಿಕೊಳ್ಳಲು ಒತ್ತಾಯಿಸಿದ್ದರಿಂದ ಅವರು ಚವ್ಹಾಣ್ ಗೋತ್ರವೆಂದು ಸುಳ್ಳು ಹೇಳಿ ಸೇರಿಕೊಂಡಿದ್ದರು.

ಭಂಗಿಗೆ ತಾನು ಬದುಕಿದ್ದೇನೆ ಅಂತ ನಂಬಿಕೆನೆ ಬರಲಿಲ್ಲ. ಹತ್ತು ಸಾವಿರ ಹರೆಯದ ಎತ್ತುಗಳು ಅವನ ಮೇಲೆ ನುಗ್ಗಿ ಎಲುಬುಗಳನ್ನು ಪುಡಿ ಪುಡಿಮಾಡಿರಬೇಕೆಂದು ಕೊಂಡಿದ್ದ. ಆದರೆ ದೇವರ ಹಾಗೆ ಮೀಟು ಬುಕ್ಯಾ ಕರಮ್‌ತೋಟ್ ಬಂದವನೆ ಅವನನ್ನ ಅಜಾಮತ್ತಾಗಿ ಎತ್ತಿಕೊಂಡು, ನಾಗಾಲೋಟದಿಂದ ಓಡುತ್ತಿದ್ದ ಹತ್ತು ಸಾವಿರ ಎತ್ತುಗಳನ್ನು ಘಳಿಗೆಯಲ್ಲಿ ನಿಯಂತ್ರಿಸಿದ. "ಚೋರಮೆ ತಾಕತ್ ಛ" ಜಂಗಿ ಗೊಣಗಿದ. "ಅವನೇನಾದರು ಭುಕ್ಯಾ ಆಗಿದ್ದರೆ ಅವನಿಗೆ ತನ್ನ ಒಬ್ಬಳೇ ಮಗಳು ಸೋಮ್ಲಿಯನ್ನು ಕೊಟ್ಟು ಮದುವೆ ಮಾಡಿಬಿಡ್ತಿದ್ದೆ, ಆದರೆ ಅವನು ನಮ್ಮ ಬೆಡಗದವನೆ, ಸಾಧ್ಯವಿಲ್ಲ." ಅವನಿಗೆ ಕಸಿವಿಸಿಯಾಗಿತ್ತು. ಆಸಿಫ್‌ಖಾನ್ ಸಂಜೆಯಾಗಿದ್ದರಿಂದ ಭಯಾನಕ ಕಾಡನ್ನ ಪ್ರವೇಶಿಸುವುದು ಬೇಡವೆಂದು ಅಲ್ಲೇ ವಸತಿ ಹೂಡಲು ಅಪ್ಪಣೆ ಮಾಡಿದ. ಅವನ ಆಪ್ತ ಸ್ನೇಹಿತ ಭಂಗಿಯನ್ನ ಕರೆತರಲು ಸೈನಿಕರನ್ನು ಕಳುಹಿಸಿದ್ದ. "ಜನಾಬ್ ಭಂಗಿನಾಯಕ ಹೂಜೂರ ಆಸೀಫ್‌ಖಾನ್ ನಿಮ್ದುಕೆ ಕರಿತಾರೆ" ಸೈನಿಕ ತನ್ನ ಪಾಲಿನ ಕರ್ತವ್ಯ ಮಾಡಿದ್ದ. ಭಗನ್ಯನಾಯ್ಕ ನಿಜವಾಗಿಯೂ ಬಹಳಷ್ಟು ವಿಚಲಿತನಾಗಿದ್ದ. ಒಂದು ಕಡೆ ಅಧಿಕಾರದ ತುಟ್ಟತುದಿಯಲ್ಲಿರುವ ಆಸೀಫ್‌ಖಾನ್‌ನಂತಹ ಗೆಳೆಯ, ದೊಡ್ಡ ವ್ಯಾಪಾರ ವಹಿವಾಟು, ಆದರೆ ಅವನ ನಿದ್ದೆಗೆಡಿಸಿದ್ದ ಆ ಘಟನೆಯಲ್ಲಿ ಮುಳುಗಿದ್ದ ಅವನನ್ನ ಸೈನಿಕ ಎಚ್ಚರಿಸಿದ್ದ. ದಂಡನಾಯಕನ ಅಪ್ಪಣೆಯನ್ನು ಮೀರಲಾಗದೆ, ಮೀಟುನ ನನೆಪಿನಿಂದ ಹೊರಗೆ ಬರಲು ಆಗಲಿಲ್ಲ. ಆ ಘಟನೆ ನಡೆದಾಗ ಆಗಲೇ ಮಕ್ಕರಗೌಳ ಆಗಿತ್ತು. ಹಾಗಾಗಿಯೇ ಯಾವ ಆಕೃತಿಗಳು ಸ್ಪಷ್ಟವಾಗಿ ಗೋಚರವಾಗುತ್ತಿರಲಿಲ್ಲ. ಮೀಟು ಅವನನ್ನು ಅನಾಮತ್ತಾಗಿ ಎತ್ತಿದ್ದರಿಂದ ಚಿಗರು ಮೀಸೆಯ ಹೊಳಪು ಕಣ್ಣಿನ ಸುರದ್ರೂಪಿ ಗಂಡಸಿನ ಗಡಸು ದೇಹವನ್ನು ಗಮನಿಸಿದ್ದ. ಅವನಿಗೆ ಕೃತಜ್ಞತೆಯನ್ನು ಕೂಡ ಹೇಳದ ಸ್ಥಿತಿ ಅವನದಾಗಿತ್ತು.

ಅವನು ಉದಾಸೀನನಾಗಿದ್ದ ಪ್ರತಿಸಂಜೆ ಗೆಳೆಯರಿಬ್ಬರು ಸುರಪಾನದ ಮತ್ತಿನಲ್ಲಿ ನಾಡಸುದ್ದಿಗಳನ್ನು ಮಾತಾಡುತ್ತ ದಾರಿಯದಣಿವನ್ನು ಕಳೆಯುತ್ತಿದ್ದರು. ಆಸೀಫ್ ಖಾನ್, ಒಮ್ಮೊಮ್ಮೆ ಕುಡಿದ ಮತ್ತಿನಲ್ಲಿ, ಬಾದಷ್ ಔರಂಗಜೇಬನ ದೌರ್ಬಲ್ಯಗಳನ್ನೆಲ್ಲಾ ಭಗನ್ಯನಾಯ್ಕನ ಎದುರಿಗೆ ಹೇಳಿದ್ದ. ಒಮ್ಮೊಮ್ಮೆ ರಾಜ ಮತ್ತು ಸೇನಾದಿಪತಿ ಒಂದೇ ಹೆಣ್ಣಿನ ಸಹವಾಸಕ್ಕೆ ಹೋದ ಘಟನೆಗಳನ್ನು ರಸವತ್ತಾಗಿ ವರ್ಣಿಸುತ್ತಾ ದಟ್ಟ ಅಡವಿಯಲ್ಲಿ ಸಾವಿರಾರು ಮೈಲುಗಳ ದೂರ ಕಾಡುಪ್ರಾಣಿಗಳು, ಆನೆಗಳು, ವಿಷಜಂತುಗಳನ್ನು ಲೆಕ್ಕಿಸದೆ ಬಾದಷನ ಮಹದಾಸೆಯನ್ನು ಈಡೇರಿಸಲು ಆಸೀಫ್ ಖಾನ್ ಕೈಗೊಂಡ ದಂಡಯಾತ್ರೆಯಲ್ಲಿ ಸಮಪಾಲನ್ನ ಭಗನ್ಯನಾಯ್ಕ ಮತ್ತು ಜಂಗಿನಾಯ್ಕ ಸಹೋದರರು ಕೂಡ ಪಡೆದಿದ್ದರು. "ಯಾಕೋ ಉದಾಸೀನ ಆಗಿರೋ ಹಾಗೆ ದಿಕ್ರಾ ಹೈ ಭಗನ್ಯನಾಯ್ಕ, ಕ್ಯಾ ಬಾತ್ ಹೈ?" ದಂಡನಾಯಕ ಕೇಳಿದ. ಭಂಗಿಗೆ ಘಟನೆ ವಿವರಿಸುವ ಆಸಕ್ತಿ ಇಲ್ಲದಕಾರಣ, "ಮನುಷ್ಯ, ಅಂದಮೇಲೆ ಇವೆಲ್ಲವು ಸಹಜತಾನೆ ಹುಜೂರ್" ಜಾರಿಕೊಳ್ಳಲು ನೋಡಿದ. "ಅರೇ ದೆಹಲಿ ಸುಲ್ತಾನನ ಸೇನಾದಿಪತಿ ಆಸೀಫ್ ಖಾನ್ ನಂತ ಸ್ನೇಹಿತ ನಿನ್ನ ಜೊತೆಗೆ ಇರುವಾಗ ಅದೆಂತ ಬೇಸರ ಗೆಳೆಯ ನಿನಗೆ. ಹೇಳು ಯಾರಾದರು ಏನಾದರು ಹೇಳಿದರೆ? ಅವರ ಕತೆಯನ್ನು ಈಗಿಂದೀಗಲೇ ಮುಗಿಸಿ ಬಿಡುತ್ತೇನೆ." ಖಾನ್ ಕುಪಿತನಾಗಿದ್ದ, ಭಂಗಿಗೆ ಅವನ ವರ್ತನೆಗೊತ್ತಿದ್ದರಿಂದ "ಛೇ! ನೀನು ಜೊತೆಯಲ್ಲಿ ಇರಬೇಕಾದರೆ ಈ ಹಿಂದೂಸ್ಥಾನದಲ್ಲಿ ಯಾರಿಗೆ ಅಷ್ಟು ತಾಕತ್ತು ಇದ್ದಿತು. ನನಗೆ ಏನಾದರು ಹೇಳಲು, ಹಾಗೆ ಯಾಕೋ ಮನಸ್ಸಿಗೆ ಬೇಸರವಾಯ್ತು" ಮುಖತಿರುಗಿಸಿ ಸತ್ಯವನ್ನು ಮರೆಮಾಚಿದ. "ಅಷ್ಟೆತಾನೆ, ನಿನ್ನ ಉದಾಸೀನವನ್ನು ಈಗ ಹೋಗಲಾಡಿಸಿಬಿಡುತ್ತೇನೆ" ಅಂದವನೆ ಚಪ್ಪಾಳೆ ಹೊಡೆದ, "ಯಾರಲ್ಲಿ? ಹುಜೂರು ಅಪ್ಪಣೆ ಯಾಗಬಹುದು" ಸೈನಿಕ ತಲೆ ಬಗ್ಗಿಸಿ ನಿಲ್ಲುವನು. "ನಮ್ಮ ನರ್ತಕಿ ಮುನ್ನಿಬಾಯಿಯನ್ನ ಹಾಜರುಪಡಿಸು" ಅಪ್ಪಣೆ ಹುಜೂರ್ ಸೈನಿಕ ಹೊರಗಡೆ ಹೋಗುತ್ತಿದ್ದಂತೆ, ಪರ್ಷಿಯಾದಿಂದ ತರಿಸಲಾಗಿದ್ದ ಮಧ್ಯವನ್ನು ಬೆಳ್ಳಿಯ ಲೋಟಗಳಿಗೆ ಸುರಿದು ಭಂಗಿಯ ಎದುರಿಗೊಂದು ಮತ್ತು ಅವನ ಕೈಯೊಳಗೊಂದು ಹಿಡಿದುಕೊಂಡು ಆತನಿಗ ಎತ್ತಿಕೊಳ್ಳುವಂತೆ ಹೇಳಿ ಬೆಳ್ಳಿ ಲೋಟವನ್ನು ತುಟಿಗೆ ತಾಕಿಸಿ ಒಂದು ಗುಟುಕನ್ನು ಕುಡಿದ. "ಹುಜೂರ್ ಒಳಗೆ ಬರಬಹುದೆ" ಮುನ್ನಿಬಾಯಿ ಹೊರಗಿನಿಂದಲೇ ಕೇಳಿದಳು. "ಓ, ಮುನ್ನಿಬಾಯಿ, ನಿನಗೆ ಯಾರ ಅಪ್ಪಣೆಯೂ ಬೇಕಾಗಿಲ್ಲ, ಸದಾ ಬಾಗಿಲುಗಳು ನಿನ್ನ ಸೌಂದರ್ಯ ಮತ್ತು ನೃತ್ಯವನ್ನು ಸವಿಯಲು ತೆರೆದೇ ಇರುತ್ತವೆ" ಅವಳ ಸೌಂದರ್ಯವನ್ನು ಮಹಾಪ್ರಭು ಸವಿಯುತ್ತಿರುವುದು ಗೊತ್ತಾಗಿ ಗುಲಾಬಿಯಂತೆ ತುಟಿಗಳನ್ನು ಅರಳಿಸಿ ಒಮ್ಮೆ ಮುಗಳ್ನಕ್ಕ ಮುನ್ನಿಬಾಯಿ ಕಣ್ಣಿನಿಂದಲೇ ಆಸೀಫ್‌ಖಾನನ್ನ ಇರಿಯುತ್ತಿದ್ದಳು. ಅದೆಷ್ಟೊತ್ತು ರಾತ್ರಿ ಆಸೀಫ್‌ಖಾನ್‌ನ ಬಿಡಾರದೊಳಗೆ ಭಂಗಿ ಮತ್ತೆ ಆಸೀಫ್‌ಖಾನ್ ಮುನ್ನಿಬಾಯಿಯೊಂದಿಗೆ ನೃತ್ಯ ಸರಸವಾಡುತ್ತಿದ್ದರು. ಎಚ್ಚರಗೊಂಡಾಗ ಸೂರ್ಯ ಎಂದಿನಂತೆ ಪೂರ್ವಕ್ಕೆ ಉದಯಿಸಿದ್ದ.

ಭಂಗಿಗೆ ಆ ಘಟನೆ ಸ್ವಲ್ಪ ಮರೆತಂತೆ ಆಗಿತ್ತು. ಆದರೆ ಆ ಸುರದ್ರೂಪಿ ಯುವಕನ ಚಹರೆ ಮಾತ್ರ ಆಗಿಂದಾಗೆ ಅವನ ಕಣ್ಣೆದುರಿಗೆ ಬಂದು ನಿಲ್ಲುತ್ತಿತ್ತು. ಆಸೀಫ್‌ಖಾನ್ ಜೊತೆಗೆ ತಿಂಡಿತಿಂದಾದ ಮೇಲೆ ದಟ್ಟ ಅಡವಿಯನ್ನು ದಾಟಲು ಸೈನ್ಯಕ್ಕೆ ಅಪ್ಪಣೆ ಕೊಟ್ಟು ತನ್ನ ಎತ್ತುಗಳ ಹಿಂಡನ್ನು ನೋಡಿಬರುವುದಾಗಿ ಅವನಿಂದ ಅಪ್ಪಣೆ ಪಡೆದು ಭಂಗಿ ಹೊರಟಿದ್ದ. ಅವನ

ತಲೆಯೊಳಗೆ ಆ ಹುಡುಗನ ಚಹರೆ ತುಂಬಿಕೊಂಡಿತ್ತು. ಮಾಮೂಲಾಗೆ ಎತ್ತುಗಳ ಮೇಲೆ ಹೇರುಗಳನ್ನು ಹೇರಲಾಗುತ್ತಿತ್ತು. ನೂರುಜನ ಯುವಕರು ಬಿಟ್ಟುಬಿಡದೆ ಮುಂಜಾನೆಯಿಂದ ಎತ್ತುಗಳ ಶಕ್ತಿಯನ್ನು ನೋಡಿ ಅವುಗಳ ಬೆನ್ನಮೇಲೆ ಮೂಟೆಗಳನ್ನು ಇಡುತ್ತಿದ್ದರೆ. ಆಗಲೆ ಇಳಿ ಹೊತ್ತು ಆಗಿದ್ದರಿಂದ ಒಂದು ಕಡೆಯಿಂದ ಮುಖವನ್ನು ಪರೀಕ್ಷಿಸುತ್ತ ಹೊರಟಿದ್ದ ಭಂಗಿ. ಥಾವುನ ಹತ್ತಿರ ಬಂದವನೆ ಅನುಮಾನದಿಂದ ನೋಡತೊಡಗಿದ. ಥಾವು ಗಡಿಬಿಡಿಯಿಂದ ಅವನ ಕಣ್ಣಿಂದ ತಪ್ಪಿಸಿಕೊಳ್ಳಲು ಎತ್ತುಗಳ ಹಿಂದೆ ಅವಿತುಕೊಳ್ಳಲು ನೋಡಿದ. "ಏಯ್ ನೀನು ಹೊರಗಡೆ ಬಾ" ಭಗನ್ಯನಾಯ್ಕ ಅವನನ್ನ ಕರೆದ. ಥಾವುಗೆ ತನ್ನ ಕತೆ ಮುಗೀತು ಈ ಖೂಳ ಭಂಗಿಗೆ ತಾನು ರಾಥೋಡ್ ಬೆಡಗದವನು ಅನ್ನೋದು ಗೊತ್ತಾಗಿರಬೇಕು. ಅದೇನು ಶಿಕ್ಷ ಕೊಡ್ತಾನೋ, ಯಾಕಂದ್ರ ಮುಸ್ಲಿಮ್ ದೊರೆಗಳೆ ಈತನ ಕೈಯಲ್ಲಿದ್ದಾರೆ ನಮ್ಮಂತ ಬಡವರಿಗೆ ಬೆಲೆಯಿದೆಯೇ? ನಮ್ಮ ಕೂಗನ್ನು ಯಾರುತಾನೆ ಕೇಳಿಯಾರು. ಅನುಮಾನಿಸುತ್ತಲೇ, "ಜೀ ಕಾಕ" ಹತ್ತಿರ ಹೋದ "ನಿನ್ನೆ ಸಂಜೆ ಎತ್ತುಗಳು ಬೆದರಿದಾಗ" ಅವನ ಮಾತು ಬಾಯೊಳಗೆ ಇರುವಾಗಲೇ "ಅದು ನಾನಲ್ಲ ನಮ್ಮಣ್ಣ ಮೀಟು ಬುಕ್ಯಾ ಕರತೋಟ್" ನಾಲಿಗೆ ಕಚ್ಚಿದ. ಭಗನ್ಯನಾಯ್ಕನಿಗೆ ಪಿತ್ತನೆತ್ತಿಗೇರಿತು" ಮಾಮೂಲಿ –ಗೋಪಿ "ಅಲ್ಲ, ಸುಳ್ಳು ಹೇಳಿ ನನ್ನ ಹತ್ರ ಕೆಲ್ಸಕ್ಕೆ ಸೇರಿದಿರೇನ್ರೋ" ಅವನನ್ನ ಬೆನ್ನತ್ತಿ ಹಿಡಿದು ಎಳೆಕಂಡು ಬಂದ. "ಕಾಕ ಅದು" ಥಾವುಗೆ ತಾನು ಮಾಡಿದ ತಪ್ಪು ಅರಿವಾಗಿದ್ದೆ ಅದನ್ನು ಸರಿಪಡಿಸೋದು ಹೇಗಪ್ಪ ದೇವರೆ ಪೇಚಿಗಿಟ್ಕೊಂಡಿತ್ತು. "ಭಗನ್ಯನಾಯ್ಕ ಜಾತಿಬಿಟಾನೆ ಹೊರತು, ಜಾತಿ ಹೈಕಳನ್ನು ಬಿಟ್ಟು ಬುಕ್ಯಾನ ತಗೋಳಾಕಿಲ್ಲ. ಈ ನನ್ನ ಮಕ್ಕಳು ಹ್ಯಾಂಗ ನನ್ನ ಯಾಮರಿಸಿದ್ರು" ಯೋಚನೆ ಮಾಡುತ್ತಲೇ, "ಯಾರಲ್ಲಿ" ಕೂಗಿದ. ಅದೇ ಗಟ್ಟಿಮುಟ್ಟಾದ ಬಲಶಾಲಿ ತನ್ನ ಹತ್ತು ಸಾವಿರ ಎತ್ತುಗಳಿಂದ ಪಾರುಮಾಡಿದ್ದಲ್ಲದೆ ಆಗುತ್ತಿದ್ದ ನಷ್ಟವನ್ನು ತಪ್ಪಿಸಿದವನು. "ಓ, ನೀನೇನಾ ಮೀಟು ಬುಕ್ಯಾ ಕರವ್‌ತೋಟ್" ಅವನ ಅನುಮಾನ ಸರಿಯಾಗಿದ್ದಕ್ಕೆ ಖುಷಿಯಾಗಿತ್ತು. ಆದರೆ ತಾನು ನಂಬಿಕೊಂಡು ಬಂದಿದ್ದ ನಿಯಮವನ್ನು ಮುರಿದಿದ್ದು ಯಾಕೋ ಸರಿ ಅನಿಸಲಿಲ್ಲ. "ನೋಡು ನನ್ನ ತಮ್ಮ ಜಂಗಿ ಬಹಳ ಕೆಟ್ಟವನು. ಅವನಿಗೆ ಸತ್ಯ ಗೊತ್ತಾದರೆ ತಲೆ ತೆಗೆದುಬಿಡ್ತಾನ." ಒಂದು ಕ್ಷಣ ಮೌನ. "ಮಾಮಸಾ ಮೊದಲು ನಾನೊಂದು ಸತ್ಯ ಹೇಳ್ತೀನಿ, ಅದನ್ನು ಕೇಳಿದ ಮೇಲೆ ನೀವೆ ಈ ಖಡ್ಗದಿಂದ ನಮ್ಮ ಚೆಂಡನ್ನ ಕತ್ತರಿಸಿ" ಮೀಟು ಬಲಶಾಲಿಯಾದರೂ ಪರಿಸ್ಥಿತಿಯ ಒತ್ತಡಕ್ಕೆ ಸಿಲುಕಿ ಅಸಾಯಕನಾಗಿರುವುದು ಭಂಗಿಗೆ ಮನದಟ್ಟಾಯಿತು. ಆದರೂ ಮೂರ್ಖ ತನ್ನ ತಮ್ಮ ಜಂಗಿ ಹಿಂದೆ ಮುಂದೆ ವಿಚಾರಮಾಡುವುದೆ ಇಲ್ಲ, ಪುಣ್ಯಕ್ಕೆ ಈ ಇಬ್ಬರು ಶೂರ ರಾಠೋಡ ತನ್ನ ಕೈಗೆ ಸಿಕ್ಕಾಕಿ ಕೊಂಡರಲ್ಲ ಎಂದು ಖುಷಿಯಿಂದ, "ಹೇಳು ಹಾಗಾದರೆ ಏನು ನಿನ್ನ ಮಜಬೂರಿ". ಅವನ ಕಡೆಗೆ ನೋಡಿದ. ಮೀಟು ಮೌನ ಮುರಿದು ಮಾತು ಆರಂಭಿಸಿದ. "ಹೋದ ದೀಪಾವಳಿ ನಮ್ಮ ಪಾಲಿಗೆ ಭಯಾನಕವಾಗಿತ್ತು. ಬಂಜಾರಗಡದಿಂದ ಮುಸ್ಲಮಾನ್ ಯುವಕರು ನಮ್ಮ ಹುಡುಗಿಯರನ್ನ ಅಗ್ವಾ ಮಾಡುವುದು, ತಮಗೆ ತಿಳಿದೆಯಿದೆ. ನನ್ನ ತಂಗಿ ರೂಪ್ಲಿಯನ್ನ ಅಗ್ವಾಮಾಡೋದಕ್ಕೆ ಮಾವಲಿಗುಡಿಮುಂದೆ ಹೊಂಚು ಹಾಕೊಂಡಿದ್ದ ಹತ್ತು ಮುಸ್ಲಮಾನ್ ಹುಡುಗರಿಂದ ಅವಳನ್ನು ರಕ್ಷಿಸುವುದು ಅಣ್ಣನಾದ ನನ್ನ ದಿಟ್ಟ ಕರ್ತವ್ಯವಾಗಿತ್ತು." ಮೀಟು ಮಾತಾಡದಾದ, ಭಂಗಿ ಸ್ತಬ್ಧನಾಗಿದ್ದ, "ಹೂಂ, ಆಮೇಲೆ" ಕುತೂಹಲ ತಡೆಯಲಾಗದೆ ಕೇಳಿದ, "ಆಮೇಲೇನು, ಆ ಹತ್ತು

ತಲೆಗಳನ್ನು ಕತ್ತರಿಸಿ ಬಂಜಾರಗಡದ ರಹದಾರಿಯಲ್ಲಿ ಹೂತು ಹಾಕಿದೆ. ಆದರೆ ಬಾದ್‌ಷಾನ ಸೇನಾಧಿಪತಿ ಜುಲ್ಮನ್‌ಖಾನ್ ಹಾಗೆ ಬಿಡಲ್ಲ ಅಂತ ಗೊತ್ತಾಗಿ, ಬಂಜಾರಗಡದ ಸಂಕ್ರೆಬಾಕಿ ತಾಂಡ ಬಿಟ್ಟು ಹೊರಟಾಗ ದಕ್ಷಿಣದ ಕಡೆಗೆ ಹೋಗಲು ನೀವು ಹುಡುಗರನ್ನು ಆಯ್ಕೆಮಾಡ್ತಿರೋದು ತಿಳಿತು. ಅಲ್ಲಿಗೆ ಬಂದರೆ, ನೀವು ಬರೀ ಚವ್ಹಾಣ್ ಪಂಗಡದ ಯುವಕರನ್ನೇ ಆಯ್ಕೆ ಮಾಡುತ್ತಿರುವುದು ಕಂಡು ಬಂತು. ನಮ್ಮ ರಾಥೋಡ ಕುಲವನ್ನ ಬಚ್ಚಿಟ್ಟು ಸುಳ್ಳು ಹೇಳಿ ನಿಮ್ಮ ದಂಡನ್ನ ಸೇರಿಕೊಂಡೆವು. ನಾವು ಮಾಡಿದ್ದು ತಪ್ಪು ಅನ್ನೋದಾದರೆ ತಗಳ್ಳಿ ಮೊದಲು ನಮ್ಮಿಬ್ಬರ ಚೆಂಡನ್ನ ಕತ್ತರಿಸಿ, ಆಮೇಲೆ ನಮ್ಮವ್ವ, ಅಪ್ಪ, ತಂಗಿ ನಿಮ್ಮ ಡೇರೆಯಲ್ಲೇ ಇದ್ದಾರೆ ಅವರನ್ನು ಕೊಲ್ಲಿ." ಮೀಟು ಭಾವುಕನಾಗಿದ್ದ. "ಓಹೋ, ಆ ಯೋಧರು ನೀವೋ, ಸುದ್ದಿ ನನಗೂ ಬಂದಿತ್ತು. ನಿನ್ನ ಶೌರ್ಯಕ್ಕೆ ನನ್ನ ತಾವ ಮಾತಿಲ್ಲ. ನೋಡು ನೀನು ನಮ್ಮ ಹೆಣ್ಣನ್ನ ಕಾಪಾಡಿದ ವೀರ. ಆದರೂ ಈ ಮಾತನ್ನ ನನಗೆ ಹೇಳಿದಂಗ ಮಂದಿಮುಂದ ಹೇಳಿಯಾ ಮತ್ತ? ಯಾಕಂದ್ರ ಈಗ ನಾವು ಬದುಕಿರೋದೆ ಮುಸ್ಲಿಂ ದೊರೆಗಳ ಆಳ್ವಿಕೆಯೊಳಗೆ ಅಂದಮೇಲೆ?" ಅವನು ಒಂದಿಷ್ಟು ಆಲೋಚನೆಮಾಡಿದ. "ಭಂಗಿಮಾಮ ಯಾಕೆ ಸುಮ್ಮನಾದ್ರಿ ನಿಮ್ಗತ್ರಾಸ ಆಗೋದ್ರಾದ್ರ, ನಾವು ಬಂಜಾರ್‌ಗಡ್‌ನ ನಮ್ಮೂರು ಸಂಕೆ ಬಾಕ್ರಿ ತಾಂಡಕ್ಕೆ ವಾಪಾಸಹೋಗಿಬಿಡ್ತಿವಿ". ಮೀಟುಭುಕ್ಯಾ ಮಾತನ್ನ ಸ್ಪಷ್ಟಪಡಿಸಿದ. "ಈ ಭಂಗಿ ಒಂದ ಸರ್ತಿ ಜುಬಾನ ಕೊಟ್ರೆ ಮುಗಿತು, ಪ್ರಾಣಬೇಕಾದ್ರೂ ಕೊಟ್ಯಾನು ಮಾತು ತಪ್ಪಾಕಿಲ್ಲ. ಅದರಲ್ಲು ನೀನು ನಮ್ಮ ಜನಾಂಗದ ಸಲುವಾಗಿ ಹೊಡದಾಡಿದ್ದೀಯಾ". ತನ್ನ ಅಂತರಾಳದ ಕಳಕಳಿಯನ್ನು ಅಭಿವ್ಯಕ್ತಿ ಪಡಿಸಿದ್ದ. "ಮಾಮಸಾ, ಈ ಮಾತು ಯಾರಿಗೂ.." ಥಾವು ಅನುಮೋದಿಸಿದ. "ಮತ್ತೆ ತಿರುಗಿ ಅದೇ ಪ್ರಶ್ನೆ, ನೀವಿಬ್ಬರು ಎರಡು ರತ್ನಗಳಿದ್ದ ಹಾಗೆ. ಇಡಿ ಪ್ರಕರಣವನ್ನು ನನ್ನ ತಮ್ಮ ಜಂಗಿ ನಾಯ್ಕನಿಗೆ ಹೇಳಿ, ನಿಮ್ಮ ಕೃತ್ಯಕ್ಕೆ ಕ್ಷಮೆ ಮಾಡುವವರೆಗೆ ನೀವು ಯಾರು ಅಂತ ಅವನಿಗೆ ಗೊತ್ತಾಗುವುದೇ ಬೇಡ". ಅವನು ತನ್ನ ಕುದುರೆಯನ್ನೇರಿ ತಮ್ಮ ಡೇರೆಕಡೆಗೆ ಸವಾರಿಮಾಡಿದ್ದ. ಇಬ್ಬರು ಸಹೋದರು ತಮಗೆ ಬಂದೊದಗಿದ ಆಪತ್ತನ್ನ ಮನೆಯಲ್ಲಿ ತಿಳಿಸಲು ನಿರ್ಧರಿಸಿ ಅವರ ಡೇರೆ ಕಡೆಗೆ ಧಾವಿಸಿದರು. ಪಂತಲು ಬುಕ್ಯಾ ಕರಮ್‌ತೋಟ್ ತಾನು ಬೇಟೆಯಾಡಿ ತಂದಿದ್ದ ಮೊಲದ ಮಾಂಸವನ್ನು ಸಾರಿಗಾಗಿ ಸಿದ್ದ ಪಡಿಸುತ್ತಿದ್ದ. ರಾಜನ ಸೈನಿಕರ ಹತ್ತಿರ ಶೇಂದಿತರಲು ತನ್ನ ಹಿರಿಮಗ ಮೀಟುನನ್ನ ಕಳುಹಿಸಬೇಕೆಂದು ಮನಸ್ಸಿನಲ್ಲಿ ಅಂದುಕೊಳ್ಳುವಷ್ಟರಲ್ಲಿ ಇಬ್ಬರು ಸಹೋದರರು ಒಮ್ಮೆಗೆ ಒಳಗೆ ಬಂದಿದ್ದು ಕಂಡು. "ಅರೆ ಬೇಟೆ ನಾನು ನಿನ್ನ ಕುರಿತೆ ಆಲೋಚಿಸುತ್ತಿದ್ದೆ" ಸಂತೋಷದಿಂದಲೇ ಹೇಳಿದ. "ಏನು ವಿಷಯ ಬಾ, ಹೇಳಿ ಏನಾಗಬೇಕು" ಗಂಭೀರನಾದ. "ಅಂತಹದ್ದೇನು ಇಲ್ಲ ಮಗ, ಮೊಲದ ಏಡೊ ಮಾಡಿಕೊಂಡು ಬಂದೀನಿ ಇದರೊಟ್ಟಿಗೆ ಒಂದು ಮಡಿಕೆ ಶೇಂದಿ..." ರಾಗ ಎಳದ. ಮೀಟುನ ತಾಯಿ ಸಾಮ್ಕಿ, "ಇಡಿದಿನ ಎತ್ತುಗಳ ಜೊತೆಗೆ ಹೊಡದಾಡಿ ದಣಿದು ಬಂದಾನ, ಮತ್ತ ಈಗ ಆ ಹರಾಮಿ ಸೈನಿಕರ ತಾವ ಹಣಿಮಟಿ ಹಲ್ಲು ಗಿಂಜಿ ಅವರು ಆಡೋ ಅವಮಾನದ ಮಾತ ಸಹಿಸಿಕೊಂಡು. ಎಲ್ಲಿ ಹಚ್ಚಿ ಶೇಂದಿ ಸುಮ್ಮೆ ತಿನ್ನುವಂತೆ ಬಿಡು" ಸತ್ಯವನ್ನು ಅರುಹಿದಳು. ಆಸೀಫ್‌ಖಾನ್‌ನ ಸೈನಿಕರು ಬಹಳ ಕ್ರೂರಿಗಳಾಗಿದ್ದರು. ಅವರು ಹೆದರುತ್ತಿದ್ದದ್ದು ಜಂಗಿ-ಭಂಗಿಗೆ ಮಾತ್ರ. ಆದರೆ, ಅವನ ಗುಲಾಮರುಗಳಿಗೆ ಕಾಸಿನ ಕಿಮ್ಮತ್ತು ಕೊಡ್ತಿರಲಿಲ್ಲಾ. ಯಾಕಂದ್ರ ಅವರು ಕೇವಲ ಗುಲಾಮರು ಮಾತ್ರ ಅನ್ನೋ ಸತ್ಯ ಅವರಿಗೂ ತಿಳಿದಿತ್ತು. ಮೀಟು,

ತಂದೆ ಹೇಳಿದ್ದೆ ತಡ ತಾಯಿಯ ಮಾತನ್ನ ನಿರ್ಲಕ್ಷಿಸಿ ಅಣತಿ ದೂರದಲ್ಲಿ ಸೈನಿಕರ ಬಿಡಾರದ ಕಡೆಗೆ ಹೊರಟುನಿಂತ. ಥಾವು, "ಭಾಯಿ, ತಾಳ್ಮೆಕಳಕೋಬೇಡ". ಎಚ್ಚರಿಸಿದ ಮೀಟು ಧಾಪುಗಾಲು ಹಾಕುತ್ತ ಹೊರಟಿದ್ದ. ಅವನನ್ನ ಯಾರೋ ಹಿಂಬಾಲಿಸಿದಂತಾಗಿ ಹಿಂದಕ್ಕೆ ತಿರುಗಿದ ಯಾರೂ ಕಾಣಲಿಲ್ಲ ಮತ್ತೆ ಮುಂದೆ ನಡೆದ ಯಾರೊ ಹುಡುಗಿ ಗೆಜ್ಜೆ ಸದ್ದು ಮಾಡ್ತಿರೋ ಹಾಗೆ ಅನಿಸಿತು. ಯಾರೋ ಸೈನಿಕರ ಹತ್ತಿರ ಹೋಗ್ತಿರಬಹುದು ಅಂದವನೆ ತನ್ನ ಪಾಡಿಗೆ ನಡೆದ. ಅವನ ವೇಗಕ್ಕೆ ಗೆಜ್ಜೆಯ ಸದ್ದು ದೂರವಾಯಿತು. ಅವನಾಗಲೇ ಸೈನಿಕರ ಡೇರೆ ಬಳಿ ಬಂದಿದ್ದ. ಮೀಟುನ ದೇಹದಾರ್ಢ್ಯವನ್ನ ನೋಡಿ ಸೈನ್ಯದಲ್ಲಿದ್ದ ಕೆಲ ಮುಸ್ಲಿಂ ಯುವಕರು ಗೆಳೆಯರಾಗಿದ್ದರು. ಅವರಲ್ಲಿ ಜಲಾಲುದ್ದೀನ್ ಒಬ್ಬ. ಅವನಿದ್ದ ಡೆರೆಗೆ ಹೋಗಿ "ಜಲಾಲ್‌ಬಾಯಿ, ಒಂದು ಮಡಕೆ ಹೆಂಡ ಸಿಗಬಹುದಾ?" ಕೇಳಿದ. ಮೀಟುನನ್ನು ಬಹಳವಾಗಿ ಇಷ್ಟಪಡುತ್ತಿದ್ದ. ಜಲಾಲ್ "ಅರೆ, ನಿಮದುಕೆ ನಕ್ಕೊ ಬೋಲನೆಕೋ ಹೋತಾಕ್ಯಾ, ತಗೋ ಒಂದ ಮಡಕೆ ಸಾಕ ಇಲ್ಲ.....". "ಇಲ್ಲ ಇಷ್ಟೆ ಸಾಕು" ನಿರಾಕರಿಸಿದವನೆ ಅವನಿಗೆ ಧನ್ಯವಾದಗಳನ್ನು ಹೇಳಿ ವಾಪಾಸು ತಮ್ಮ ಡೇರೆ ಕಡೆಗೆ ಬಂದ. ಮತ್ತೆ ಅದೆ ಗೆಜ್ಜೆಸದ್ದು, ಯಾರೋ ಹುಡುಗಾಟಿಕೆ ಮಾಡ್ತಿರಬೇಕಂದವನೆ ಲಗುಬಗೆಯಿಂದ ನಡೆದ.

ಪಂತಲು ಬುಕ್ಯಾ ಮೊಲದ ಮಾಂಸದ ತುಂಡನ್ನ ನೆಂಚಿಕೊಳ್ಳೋದಕ್ಕೆ ಹುರಿದುಕೊಂಡು ಹೆಂಡದ ರುಚಿಯನ್ನು ನೆನಪು ಮಾಡಿಕೊಳ್ಳುತ್ತಾ ಸುರಿಯುತ್ತಿದ್ದ ಜೊಲ್ಲನ್ನು ತಡೆಯಲು ಆಗದೆ ಉಗುಳುತ್ತಾ ಮೀಟುನ ದಾರಿ ಕಾಯ್ತಿದ್ದ. "ನನಗೆ ಗೊತ್ತಿತ್ತು ನೀ ಹೋದಿ ಅಂದ್ರ ಖಾಲಿ ಕೈಲೆ ಬರಾಕಿಲ್ಲ ಅಂತ." ಅಟ್ಟ ಹತ್ತಿಸಿದೋಕೆ ನೋಡಿದ. ಗೋದಿರೊಟ್ಟಿಯನ್ನು ಹಂಚಿನ ಮೇಲೆ ಹಾಕಿ ಸುಡುತ್ತಿದ್ದ ಸಾಮ್ಕಿ ಹೆಂಡ ಅಂದೆಟಿಗೆ ಗಂಡನ ಕಡೀಗ ನೋಡಿದ್ಲು. "ಆಗಲೆ ಏನೋ ಹೇಳದಂಗಿತ್ತು. ಮಗ ದಣಿದು ಬಂದಾನ ಈಗ ಎಲ್ಲಿ ಹಚ್ಚಿ ಅಂತೇಳಿ" ಅಣಕಿಸಿದ. "ನಾ ಏನು ಶೇಂದಿ ಕೇಳ್ತಿಲ್ಲಾ" ಸಾಮ್ಕಿ ಹುಸಿಮುನಿಸಿನಿಂದಲೇ ಉತ್ತರಿಸಿದಳು. "ಭಾಯಿಜಾನ್, ಅಮ್ಮನ ಮುಖನೋಡು, ಅಪ್ಪ ಅವಳನ್ನ ಬಿಟ್ಟು ಹೆಂಡಕುಡುದ ಬಿಟ್ಟಾನಂತ ಒಳಗೊಳಗೆ ಹೆಂಗಾಡ್ತವಳೆ" ರೂಪ್ಲಿ ಮೀಟುಗ ಹೇಳಿದ್ಲು. "ರೂಪ್ಲಿ ನೀ ಹೋಗಿ ರೊಟ್ಟಿ ಸುಡು, ಅವ್ವನ ಅಪ್ಪನ ಕೂಡ ಹೆಂಡ ಕುಡಿಯಾಕ ಕಳಸಹೋಗು." ತಾಯಿಯ ಮನದಾಸೆಯನ್ನು ಅರಿತು ಹೇಳಿದ. "ಆಯ್ತು ದಾದ" ಅಂದವಳೆ, ಒಲೆ ಮುಂದೆ ಹೋದಳು. ಸಾಮ್ಕಿ ಪಂತಲು ಒಂದೊಂದು ಮಣ್ಣಿನ ಕುಂಡಿಯಾದೊಳಗೆ ಹೆಂಡ ಸುರ್ಕೊಂಡು, ನೆಲಕ ಒಂದಹನಿ ಚಿಮುಕಿಸಿ ನಾಕುದಿಕ್ಕಿಗ ಒಂದೊಂದ ಹನಿ ಉದುರಿಸಿ ಕುಡಿದು ಮ್ಯಾಲ ತುಂಡ ಮಾಂಸನ ಖಾರಪುಡಿ, ಉಪ್ಪಿನೊಳಗೆ ಅದ್ದಿ ನೆಂಚಿಕೊಂಡ್ರು. ದೂರದಲ್ಲಿ ಕೂತ್ಕೊಂಡು ತಂದೆ ತಾಯಿ ಇಬ್ಬರು ತಮ್ಮ ವ್ಯಸನದೊಳಗೆ ಲೀನರಾಗಿರೋದನ್ನ ನೋಡಿದ ಮೀಟು ನಗತೊಡಗಿದ. "ನಾಳೆ ನೀನು ಮದ್ವಿಯಾದ ನಂತರ ಭೋಜಾಯಿ ಕೂಡಹಿಂಗ ಆಡ್ತಿತಗೊ ನಂಗೇನ ಗೊತ್ತಿಲ್ವಾ" ಥಾವು ಅಣುಕಿಸಿದ. "ಏಯ್, ಬಾಯಿ ಮುಚ್ಕೋ ದೊಡ್ಡರನ್ನೋ ಖಬರಿಲ್ಲ ನಿನಗಾ" ಹುಸಿಕೋಪದಿಂದ ಅವನ ಕಡಿಗೆ ಕೈಯಾಗಿನ ಕಟ್ಟಿಗೆ ತುಂಡು ಎಸೆದ ಮೀಟು. ಇಬ್ಬರು ಅಣ್ಣತಮ್ಮಂದಿರು ವಾಗ್ವಾದ ಮಾಡ್ತಿರೋದ್ರಲ್ಲಿ ಭಗನ್ಯನಾಯ್ಕನ ಆಳು ಮೋಳಚವ್ಹಾಣ್‌ನ ಕುದುರೆ ಡೇರೆ ಮುಂದೆ ಬಂದಿದ್ದೆ ಗೊತ್ತಾಗಲಿಲ್ಲ. ಕುದುರೆ ಇಳಿದ ಮೋಳ, ನಾಳೆ ಅವನ ಒಡೆಯನ ಅಳಿಯನಾಗಲಿರುವ ಗಂಡುಗಲಿ ಮೀಟುಗೆ ಗೌರವ ಸೂಚಕವಾಗಿ ಅವರ ಪದ್ಧತಿಯಂತೆ, "ಹ ರಾಂ, ರಾಮ್" ಅಂತ ಹೇಳಿದ. ಮೀಟು

ಕ್ಷಣದಲ್ಲಿ ಗಲಿಬಿಲಿಗೊಂಡವನೆ "ಹ ರಾಂ ರಾಮ್ ಮೋಳು ಮಾಮ ಏನು ವಿಷಯ? ಇಷ್ಟೊತ್ತಿನಲ್ಲಿ" ಒಂದೇ ಉಸುರಿಗೆ ಕೇಳಿದ. ಮೀಟು ಸುಳ್ಳು ಹೇಳಿ ಕೆಲಸ ಗಿಟ್ಟಿಸುವುದರಲ್ಲಿ ಮೋಳು ಚವ್ಹಾಣನ ಕೈವಾಡವು ಇದ್ದಿದ್ದರಿಂದ ಅವನಿಗೆ ಪ್ರೀತಿಯಿಂದ ಮಾಮ ಅಂತಲೆ ಕರೆಯುತ್ತಿದ್ದ ಮೀಟು. "ಹಾಂ, ಬರಬೇಕಲ್ಲ ನಮ್ಮಯಜಮಾನರ ಪ್ರಾಣರಕ್ಷಿಸಿದ ಸಿಪಾಯಿ. ಬಂಜಾರ ಕುಲದ ಸಲುವಾಗಿ ಏಕಾಂಗಿಯಾಗಿ ಹೋರಾಡಿ ನಮ್ಮ ಸಹೋದರಿಯರ ಮಾನ ಕಾಪಾಡಿದ ವೀರನಿಗೆ ಈಗ ಮತ್ತೊಂದು ಗಂಡಾಂತರ ಕಾದಿದೆ" ಗಂಭೀರವಾಗೇ ಹೇಳಿದ. ಪಂತಲು ಅರ್ಧ ಹೆಂಡ ಇಳಿದಂತಾಯಿತು. "ಅರೆ ಭಗವಂತ, ಏನಾಯ್ತು ಅಂತಹದ್ದು ಸುದ್ದಿ ಏನಾರ ಬಾದಷಾಗೆ ತಲುಪತೇನಪ್ಪಾ, ಅಯ್ಯೋ, ನನಮಗನ ಶಿರಚ್ಛೇದನ ಆಗಿ ಹೋಗುತ್ತೆ. ಯಾರಾರು." ಗೋಳಾಡತೊಡಗಿದ, ಅವನಿಗೆ ಪರಿಸ್ಥಿತಿ ಗಂಭೀರ ಆಗ್ತಿರೋಹಂಗ ಅನಿಸಿತು. "ಅರೇ ಪಂತಲು ಬುಕ್ಯಾ ಹಿಂಗ್ಯಾಕ ಗೋಳಾಡ್ತಿಯಾ, ನಾನು ಕೂಡ ಅಸಲಿ ಬಂಜಾರನೆ, ಬಾದಷ್‌ಗೂ ಇಲ್ಲ ಯಾರಿಗೂ ಇಲ್ಲ ನಿನ್ನ ಮಗ ದೊಡ್ಡ ಮನುಷ್ಯ ಆಗ್ತಾನ." ಮುಖ ಸಡಿಲಿಸಿ ನಕ್ಕ. "ಮೋಳ, ಒಂದಕ್ಷಣ ಜೀವಾನೇ ತಗದ ಬಿಟ್ಟಿದ್ದೆ" ಮೀಟು ಉಸಿರುಬಿಟ್ಟ. "ಅರೇ ಎಲ್ಲಾ ನೋಡ್ತಾನಿಂತಿರಲ್ಲ. "ಅರೇ ಬೇಟಿ ರೂಪ್ಲಿ ಸಿಹಿ ತಗೊಂಡು ಬಾ, ಮೊದಲು ಮೋಳನ ಬಾಯಿ ಸಿಹಿ ಮಾಡ್ರಿ, ಸಿಹಿಸುದ್ದಿ ತಂದಾನ" ಅಂತ ಮಗಳನ್ನ ಕರೆದ ಪಂತಲು. "ಬಾ, ತಗೊಳಿ ಸಿಹಿ" ಮುಖಮುಚ್ಚಿಕೊಂಡೆ ಕೈಮುಂದೆ ಮಾಡಿದ್ಲು. ಆ ಅಪರಿಚತನನ್ನ ನೋಡುವ ಆಸೆಯಿದ್ದರೂ ಸಂಪ್ರದಾಯಕ್ಕೆ ಕಟ್ಟುಬಿದ್ದು ಮಾರಿ ಮುಚ್ಚಿಕೊಂಡಿದ್ಲು. ಮೋಳನಿಗೆ, ರೂಪ್ಲಿನ ನೋಡಬೇಕಂತ ಅನಿಸಿತ್ತು. "ಓ ಇವಳೆ ರೂಪ್ಲಿನ! ಇವಳ ಸಲುವಾಗಿ ಬಹಾದೂರ್ ನನ್ನ ಅಳಿಯ ಹತ್ತ ಮಂದಿ ಮುಸ್ಲಿಮರನ್ನು ಬಲಿತಗೋಂಡಿದ್ದು", ಓರೆಗಣ್ಣೀಂದ ನೋಡಿದ, ಅವಳು ಘುಂಗಟೋ ಸರಿಸಿ ಒಮ್ಮೆ ತನ್ನ ತೀಕ್ಷ್ಣವಾದ ಕಣ್ಣುಗಳಿಂದ ಅವನ ಕಡೆಗೆ ನೋಡಿದಳು. "ಈಗ ಹೆಚ್ಚು ಮಾತಾಡದಕ್ಕೆ ವ್ಯಾಳೆ ಇಲ್ಲಾ. ನಿಮ್ಮಪ್ಪನ ಕರ್‍ಕೊಂಡು ಗಡಾನ ಹೊರಡು ಧಣಿಕಾಯ್ತವ್ರೇ. ಜೊತೆಗೆ ಅವರ ತಮ್ಮ ಜಂಗಿನಾಯ್ಕ ನಿನ್ನ ನೋಡಾಕ ತುದಿಗಾಲ ಮೇಲೆ ನಿಂತಾನ." ಅಲ್ಲಿಯ ಪರಿಸ್ಥಿತಿ ವಿವರಿಸಿದ. "ಅಲ್ಲಾ ಈಗಿಂದ ಈಗ, ಮಾಮ ಮೊದಲಸಲ ಬಂದೀಯಾ ನಮ್ಮಂದಿ ರಿವಾಜಿನಂಗೆ ಒಂದು ರೊಟ್ಟಿ ಉಣ್ಣಾಕಬೇಕು" ಥಾವರ್‍ಯಾ ಒತ್ತಾಯಿಸಿದ. "ನಾನು ಉಣ್ಕೊಂತ ಕುಂತ್ರೆ ಧಣಿ ನನ್ನ ಚರ್ಮ ಸುಲೀತಾರ, ಈಗೇನು ಬರೋದು ಹೋಗೋದು ಆರಂಭ ಆಯ್ತಿಲ್ಲಾ ಬರ್‍ತೀನಿ ಬಿಡು" ಕುದುರೆ ಹತ್ತಿ ಓಡಿಸಲು ಮುಂದಾದ, ಅವನು ಜೊತೆಗೆ ತಂದಿದ್ದ ಮತ್ತೊಂದು ಕುದುರೆ ಹತ್ತಿ ತಂದೆ ಮಗನಿಗೆ ಬರಲು ಹೇಳಿ ಹೊರಟ.

ಜಂಗಿ-ಭಂಗಿ ಮನೊಯೊಳಗೆ ಸಂಭ್ರಮವೋ ಸಂಭ್ರಮ ಅವನು ಕಥೆಯನ್ನ ಹಾಗೆ ರಸವತ್ತಾಗಿ ವಿವರಿಸಿ ಮೀಟು ಬುಕ್ಯಾ ಕರಮ್‌ತೋಟ್ ನನ್ನ ಪ್ರತಿಯೊಬ್ಬರು ನೋಡಲೇ ಬೇಕು ಎನ್ನುವಂತೆ ಮಾಡಿದ್ದ. ಭಂಗಿ ತಾಯಿ ಸಾಕಿಡೋಕ್ರಿಯಂತು ಮೊಮ್ಮಗಳಿಗೆ ಮದುವೆಯಾಗುವವನು ಎಂದತಕ್ಷಣ ತಾನು ಕಣ್ಣು ಮುಚ್ಚೋದ್ರಲ್ಲಿ ಮರಿಮೊಮ್ಮಕ್ಕಳನ್ನು ನೋಡಲೇ ಬೇಕು ಎನ್ನುವ ಜಿದ್ದಿಗೆ ಬಿದ್ದಂಗಿತ್ತು. ಭಾವಿ ಅಳಿಯನ ಸ್ವಾಗತಕ್ಕೆ ಇಡಿಮನಿ ಮಂದಿ ತುದಿಗಾಲಮೇಲೆ ನಿಂತಿದ್ದರು. ಭಗನ್ಯಾನಾಯ್ಕನ ಹಿರಿಮಗಳು ಲಚ್ಮಿ ಯಂತು ಮೀಟುನ ನೋಡೋದಕ್ಕೆ ಕನಸು ಕಾಣತೊಡಗಿದಳು. ಅವಳ ಇಷ್ಟವಾದ ಗಾಗರೋ, ದಾವಣಿಯನ್ನು ಉಟ್ಕೊಂಡು ಕಾಂಚಳಿ

ತೊಟ್ಟು ಒಳ್ಳೆ ಮದುಮಗಳ ಹಾಗೆ ಕಾಣುತ್ತಿದ್ದಳು. ಜಂಗಿ ಮಗಳು ರಾಮಿಯಂತು ಅವನಿಗೊಬ್ಬ ತಮ್ಮ ಅದಾನ ಅಂತ ತಿಳಿದಾಗಿನಿಂದ ಬರಿ ಅವನ ಕನಸನ್ನೇ ಕಾಣತೊಡಗಿದ್ದಳು. ಜಂಗಿ-ಭಂಗಿ ಸಹೋದರರು ಪಂತಲು ಬುಕ್ಯಾ ಬಡವನಾಗಿದ್ದರೂ ನಿಯತ್ತಿನ ಮನುಷ್ಯ. ಆದರೆ ಅವನ ಹತ್ತಿರವಿರುವ ಎರಡು ಬೆಲೆರಹಿತ ವಜ್ರಗಳು ಯಾರಿಗೂ ಸಾಟಿಯಲ್ಲದಂತಹವುಗಳು ಹಾಗಾಗಿ ಅವನಿಗೆ ಯಾವರೀತಿಯ ತೊಂದರೆಯಾಗದಂತೆ ವರ್ತನೆ ಮಾಡಲು ಅವನ ಆಳುಗಳಿಗೆಲ್ಲಾ ತಾಕೀತು ಮಾಡಿದ್ದ.

ಮೀಟುಬುಕ್ಯಾ ಕರಮ್‌ತೋಟ್ ಇದ್ದಕ್ಕಿದ್ದಂತೆ ಬಂದ ಕರೆಗೆ ಕಕ್ಕಾಬಿಕ್ಕಾಯಾಗಿದ್ದ. ಪಂತಲುಗೂ ಏನು ಮಾಡಬೇಕಂತ ತಿಳಿಯದೆ ಕ್ಷಣಕಾಲ ಮೌನವಹಿಸಿದ್ದ. ಸಾಮ್ಕಿ ಕೈಕಾಲು ಆಡದಂಗಾಗಿದ್ದವು. ರೂಪ್ಲಿ, "ಅಣ್ಣ ಹೂಂ" ಅಂದವಳೆ ಅವನ ಬಟ್ಟೆಗಳನ್ನು ಪೆಟಾರಿಯೊಳಗ ಮಡಿಚಿ ಇಟ್ಟಿದ್ದು ನೆನಪಾಗಿ ತಂದು ಕೊಟ್ಟಳು. ಅವನು ತಯಾರಾಗಲು ಸಹಕರಿಸಿ, ದೃಷ್ಟಿ ತೆಗೆದು ಕಳುಹಿಸಿದಳು. ಪಂತಲು ಬುಕ್ಯಾನ ನಶೆ ಸಂಪೂರ್ಣವಾಗಿ ಇಳಿದಿತ್ತು. ಮೋಳ ಆಗಲೆ ಸುದ್ದಿ ಮುಟ್ಟಿಸಿದ್ದರಿಂದ ಅವರೆಲ್ಲಾ ಭರಪೂರ್ ತಯಾರಿ ಮಾಡಿಕೊಂಡಿದ್ದರು. ಇವರು ಹೋದದ್ದೆ ಮನಮಂದಿ ಹೊರಗಿ ಬಂದರು, "ಆಜ್ಞೋ, ಮೀಟು ಒಳಗೆ ಬಾ" ಭಂಗಿ ಕರೆದ. ಆದ್ರ ಮೀಟು, ಆತನ ತಾಯಿ ಸಾಕಿಡೋಕ್ರಿಗೆ "ನಾನಿಪ್ರಣಾಮ" ಅಂತೇಳಿ ಕಾಲಿಗೆರಗಿದ ನಂತರ ಆತನ ಹೆಂಡತಿ, ಅವನ ತಮ್ಮ ಹಾಗೂ ಭಂಗಿ ಕಾಲಿಗೂ ಬಗ್ಗಿ ನಮಸ್ಕರಿಸಿದ ಮೇಲೇನೆ ಒಳಗೆ ಕಾಲಿಟ್ಟಿದ್ದ. "ಬರಬೇಕು, ಸಂಮದಿ ಪಂತಲು ಬುಕ್ಯಾ ಕರಮ್‌ತೋಟ್" ಜಂಗಿ ಆತನನ್ನು ಅಪ್ಪಿಕೊಂಡು ಸ್ವಾಗತಿಸಿದ. ಎಲ್ಲರೂ ಡೇರೆ ಒಳಗೆ ಹೋದ ಮೇಲೆ ಮಾತುಕತೆ ಆರಂಭವಾಗುತ್ತಿದ್ದಂತೆ ನಾಲ್ಕು ಚಿಕ್ಕ ಪುಟಾಣಿಗಳು "ಮೀಟುಮಾಮ ಒಳಗೆ ಬನ್ನಿ" ಕರೆದರು, ಡೇರೆ ತುಂಬಾ ದೊಡ್ಡದಾಗಿತ್ತು. ಅವನಿಗೆ ತನ್ನ ಜಾತಿಯ ಸಂಪ್ರದಾಯಗಳು ಚೆನ್ನಾಗಿ ಗೊತ್ತಿದ್ದರಿಂದ "ಅರೇ ಬಾ ಇಲ್ಲಿ, ನಿನ್ನ ಹೆಸರೇನು?" ಅವನ ಪಕ್ಕದಲ್ಲೇ ಕೂಡಿಸಿಕೊಂಡು ಕೇಳಿದ. "ಸೋಮ್ಲ ಚವ್ಹಾಣ್ ಕೊರ್ರಾ" "ವ್ಹಾ ಚೆನ್ನಾಗಿದೆ ನಿನ್ನ ಹೆಸರು." ಅಂತೇಳಿ ಅವನ ಗಮನ ಬೇರೆ ಕಡೆಗೆ ಸೆಳೆದ. ತುಂಟ ಹುಡುಗರ ಆ ಗುಂಪು ಮೀಟು ಯಾರ ಸಲುವಾಗಿ ಬಂದಿದ್ದಾನೆ ಎಂದು ಅವರಿಗೆ ಗೊತ್ತು. ಹಾಗಾಗಿ ಅವನನ್ನು ಚುಡಾಯಿಸತೊಡಗಿದರು. ರಿವಾಜಿನಂತೆ ಒಳ್ಳೆ ಶೇಂದಿ ತುಂಬಿದ ಮಡಿಕೆಗಳು, ಕುಡಿಕೆಗಳು ಬಂದವು. ಪಂತಲು ಸೂಕ್ಷ್ಮತೆಯನ್ನು ಅರ್ಥಮಾಡಿಕೊಂಡವನೆ "ಭಂಗಿಸಾ ಇದೆಲ್ಲಾ. . ." ಅನುಮಾನಿಸಿದ. "ನೋಡಿ ಪಂತಲು ಬುಕ್ಯಾ ಇಲ್ಲಿ ಬಡವ ಶ್ರೀಮಂತ ಬಿಲ್ ಖುಲ್ ಇಲ್ವೇ ಇಲ್ಲಾ ಮನೆಗ ಬಂದ ಅತಿಥಿಗಳಿಗೆ ಹೆಂಡ ಕೊಟ್ಟು ಸ್ವಾಗತಿಸದಿರೋನೂ ಒಬ್ಬ ಬಂಜಾರನಾ. ಅರೆ ಯಾರಾದರೂ, ಹುಕ್ಕಾ ತಗೊಂಡು ಬರುಬಾರದೇ" ಮೋಳ ಮೀಟುನ್ನ ಕರ್‍ಕೊಂಡು ಪಕ್ಕದ ಕೋಣೆಯಲ್ಲಿ ಕೂಡಿಸು ಹಾಗೆ ಸಳೋಹಿ ಖಾನಾಬಾಜ್, ಕಳ್ಳೊ ತಗೊಂಡು ಬಾ." ಅಪ್ಪಣೆ ಮಾಡಿದ. ಪಟುತಲು ಹಿಂದೇಟು ಹಾಕತೊಡಗಿದ. ಅರೇ ಯಾರಾದರು ಹುಕ್ಕತಾಗೊಂಡ ಬರಬಾರದೆ ಜಂಗಿ ಮರೆತಿದದನ್ನ ನೆನಪಿಸಿದ. ಭಂಗಿ-ಜಂಗಿ ಸಹೋದರರು ಹುಕ್ಕಾದ ಮೇಲೆ ಬೆಂಕಿಯಿಟ್ಟು ಪಂತಲುಗೆ ಕೊಟ್ಟರು. ಒಂದಸಲ ಜೋರಾಗಿ ಎಳೆದು ಅದನ್ನ ಭಂಗಿ ಕಡೆಗೆ ನೀಡಿದ "ಏನು ಮಾಡೋದು ಪಂತ್ಲು ಸಾ, ಇಂಥದೊಡ್ಡ ಕಾರಬಾರು, ಗಂಡುಮಕ್ಕಳಿನ್ನು ಚಿಕ್ಕವು ದೊಡ್ಡಮಗಳೇ ಲಚ್ಮಿ" ಮೌನ, "ತಗೋ ಹೆಂಡ" ಕುಡಿಕೆಯನ್ನು ಮುಂದೆ ಮಾಡಿದ. ಅವರು

ಅವಾಗತಾನೆ ಆರಂಭಮಾಡಿದ್ದರಿಂದ ತಮ್ಮ ಹಿರಿಯರ ಪಾಲನ್ನ ನೆಲಕ್ಕೆ ಹನಿಸಿ, ಎರಡು ಹನಿಗಳನ್ನು ನಾಲ್ಕು ದಿಕ್ಕಿಗೆ ಚಿಮುಕಿಸಿ ಹೊಟ್ಟೆಗೆ ಇಳಿಸಿದರು. ಮಾತು ಗಟ್ಟಿಯಾಗಲು ಆರಂಭಿಸಿದವು. "ಯಾರಲ್ಲಿ?" ಜಂಗಿ ಕೂಗಿದ ಆಳೊಬ್ಬ ಧಣಿ ಎದುರಿಗೆ ಬಾಗಿ ನಿಂತ. "ಅಲ್ಲ ಹೇಳಿ ಎಷ್ಟೊತ್ತಾಯ್ತು, ಮನಿಗ್ ಬಂದ ಬೀಗರು ನೀವು ಮಾಡೋವರಿಗೆ ಕಾಯಬೇಕಾ. ಬಂದೋರು ಯಾರು ಅನ್ನೋ ಖಬರು ಇಲ್ವಾ ನಿಮಗೆ" ಜೋರು ಮಾಡಿದ. ದೊಡ್ಡ ತಟ್ಟೆಯಲ್ಲಿ ಕುರಿಯ ಈಲಿ, ಸಳೋಯಿ, ಕಾನಾಬಾಜ್ ಹುರಿದು ತುಂಬಿ ಕಳುಹಿಸಲಾಗಿತ್ತು. ಪಂತಲು ಅಂಜಿಕೆಯಿಂದ ಒಂದೊಂದೆ ತೆಗೊಂಡು ಬಾಯೊಳಗೆ ಹಾಕ್ತಿದ್ದ. ಭಂಗಿ ಮತ್ತೊಂದು ಮಡಿಕೆ ಹೆಂಡ ಬಗ್ಗಿಸಲು ಮುಂದಾದ "ನನಗೆ ಬೇಡ, ಮನೆ ಹತ್ರ ಒಂದ ಮಡಿಕೆ ತಗೊಂಡಿದ್ದಿನಿ." ನಿರಾಕರಿಸುವ ಧನಿಯಲ್ಲಿ ಹೇಳಿದ. "ಇಲ್ಲ ಅದು ಆಗಲೆ ಇಳಿದಿರುತ್ತೆ, ಒಂದು ಮಡಿಕೆ ತಗೋಬೇಕು, ಇದು ನಿಮ್ಮ ಮನೆ ಅಂತೇಳಿಭಾವಿಸಿ" ಜಂಗಿ ಒತ್ತಾಯಮಾಡಿದ. ಭಂಗಿ ಅಮಲು ಹೆಚ್ಚಾದಂತೆ ಹಂಗೆ ಮಾತಗೆತೆದ "ನನಗೆ ಗೊತ್ತು ಈಗ ನಿಮ್ಮ ಪರಿಸ್ಥಿತಿ ಚೆನ್ನಾಗಿಲ್ಲ ಅಂತ, ನಿಮ್ಮ ಹತ್ರ ಏನೂ ಇಲ್ಲ ಅಂತ, ಆದ್ರ ಇಬ್ಬರೂ ಶೂರ ಮಕ್ಕಳನ್ನು ಪಡೆದಿರಲ್ಲಾ ಅಷ್ಟೆ ನಿಮ್ಮ ದೊಡ್ಡ ಸಂಪತ್ತು. ಬೀಗರೆ, ನಾನು ಕುಡಿದು ಹೇಳ್ತಿಲ್ಲಾ ನನ್ನ ಮಗಳು ಲಚ್ಮಿನ ನಿಮ್ಮ ಮನಿ ಸೊಸಿಯಾಗಿ ಮಾಡ್ಕೊಬೇಕು" ಉತ್ತರಕ್ಕಾಗಿ ಕಾದ. ಪಂತಲುಗೆ ಏನು ಉತ್ತರಿಸಬೇಕಂತ ತಿಳಿಯಲೇ ಇಲ್ಲ. "ಅಲ್ಲಾ, ನೀವು ಬಾದಷಾನ ಸೈನ್ಯಕ್ಕೆ ಆಹಾರ ಒದಗಿಸೋ ಆಗರ್ಭ ಶ್ರೀಮಂತರು, ನಿಮ್ಮ ಕೈಕೆಳಗೆ ಕೆಲ್ಸ ಮಾಡೋ ಆಳುಗಳು ನಮಗೂ ನಿಮಗೂ..." ಸತ್ಯವಾದ ಮಾತನ್ನ ಹೇಳಿದ ಪಂತ್ಲು. ಅವನು ಕುಡಿದಿದ್ದರು ದಾರಿತಪ್ಪಿರಲಿಲ್ಲ, ವಾಸ್ತವವವನ್ನು ತಿಳಿಸಿದ್ದ. "ಹೌದು ಹತ್ತ ಸಾವಿರ ಎತ್ತಿನ ಕಾರುಬಾರು ಈಗಿಂದಿಗಲೇ ಮೀಟು ಬುಕ್ಯಾ ಕರಮ್‌ತೋಟ್‌ಗೆ ಸೇರಿದ್ದು. ಇದು ನನ್ನ ಅಣ್ಣನ ಮಗಳಿಗೆ ಸಣ್ಣ ಉಡುಗೊರೆ" ಹಿಂದು ಮುಂದು ನೋಡದೆ ಲಗಾಯಿಸಿದ ಜಂಗಿ. ಮುಂದೆ ಅದರಿಂದ ಅವನಿಗೂ ಫಾಯಿದೆ ಇತ್ತು. ಅದಕ್ಕೆ ಸತ್ಯವನ್ನ ಮರೆಮಾಚದೆ ಹೇಳಿದ ಜಂಗಿ. ತಮ್ಮನ ನಿರ್ಧಾರ ಕೇಳಿ ಭಂಗಿ. ಆಶ್ಚರ್ಯಗೊಂಡು ಸುಧಾರಿಸಿಕೊಂಡ. "ಕುಡಿದು ಹೇಳ್ತಿಲ್ಲಾ ಬೀಗರೆ ನನ್ನ ತಮ್ಮ ತಮ್ಮ ಹೇಳಿದ ಮೇಲೆ ಮುಗಿತು. ಹತ್ತು ಸಾವಿರ ಎತ್ತುಗಳು ನಿಮ್ಮವೆ ಹೂಂ. . . ಹೂಂ. . . ಅದರ, ನಮ್ಮ ಮಗಳು ಹಿರಿಯಳಾದ ಲಚ್ಮಿಯನ್ನು ನಿನಮಗ ಮೀಟುಗೂ ನನ್ನ ತಮ್ಮನ ಮಗಳು ಸಾವಿಯನ್ನ ನಿನ್ನ ಕಿರಿ ಮಗ ಥಾವುಗ ತಂದ್ಕೋಬೇಕು" ಒಳಗಿನ ಮಾತು. ಹೊರಗ ಬಂದೇ ಬಿಡ್ತು. ಪಂತಲು ಮದುವೆ ವಯಸ್ಸಿಗೆ ಬಂದಿರೋ ಮಗಳು ರೂಪ್ಲಿ ಕುರಿತು ಸದಾ ಯೋಚನೆ ಮಾಡ್ತಿದ್ದ. ಬಡತನ ನಿವಾರಣೆ ಮತ್ತು ಬಾದಷಾನ ಸೇನಾಧಿಪತಿ ಜುಲ್ಮಾನ್‌ಖಾನ್‌ನಿಂದ ಬದುಕಲು ಇದೊಂದೆ ದಾರಿ ಅಂತ ಅನಿಸಿದ್ದೆ, ಹಿಂದು ಮುಂದೆ ಆಲೋಚನೆ ಮಾಡದೆ ಹೂಂ ಅಂದಿದ್ದ. "ಶುಭಾಷಯಗಳು ಯಾರಲ್ಲಿ? ಬಾಯಿ ಸಿಹಿ ಮಾಡಿಸಿ". ಭಂಗಿ ನಾಯ್ಕ ಸಂತೋಷದಿಂದ ಮತ್ತೊಂದು ಮಡಿಕೆಯನ್ನು ಏರಿಸಿದ. ಸಿಹಿ ಹಂಚುತ್ತಿರುವಾಗಲೇ ಮೀಟು ಮಾತುಕತೆ ಮುಗಿತಂತ ಅಂದುಕೊಂಡ. ಆದರೆ ಅಪ್ಪನ ನಿರ್ಧಾರ ಅವನಿಗೆ ಸರಿಕಾಣಲಿಲ್ಲಾ. ಮದುವೆ ವಯಸ್ಸಿನ ತಂಗಿ ಮನೆಯಲ್ಲಿರುವಾಗ ಅವನ ಮದುವೆ ಎಷ್ಟು ಸರಿ. ಏನನ್ನೋ ಆಲೋಚಿಸುತ್ತಿದ್ದ. ಭಾವಿ ಮೊಮ್ಮಗಳ ಗಂಡನಿಗೆ ಸಾಕಿಡೋಕ್ರಿ ಉಡುಗೊರೆಯಾಗಿ ಬಂಗಾರದ ಸರವನ್ನು ನೀಡಿದಳು. "ನಾನಿ ಇದೆಲ್ಲಾ ಏನೋ? ಹೇಳಾಕ

ಬಾಯಿ ತಗದ. "ಅರೇ ಶೂರ ಮಗನೆ, ಇದೇನೂ ಅಲ್ಲ. ನನ್ನ ಮೊಮ್ಮಗಳಿಗೆ ಒಂದು ಮಗುನ ಬೇಗ ಕೊಟ್ಟುಬಿಡು ಆಗ ನೋಡು ನಾನೇನು ಕೊಡ್ತೀನಿ ನಿನಗಂತ". ಆವಾಗಲೇ ಮರಿಮೊಮ್ಮಗನ ತಯಾರಿ ನಡೆಸಿರುವುದನ್ನ ಕೇಳಿ ಆಶ್ಚರ್ಯ ಪಟ್ಟ.

ಜಂಗಿಮಗಳು ಮುಸುಕು ಹಾಕ್ಕೊಂಡೆ "ಊಟ ತಯಾರಿದೆ ಬರಬೇಕಂತೆ" ಕರೆದಳು. ಹೋಗಲಿ ಅವಳ ತಂಗಿನಾರು ಹೇಗಿದ್ದಾಳೆ ಮೂಗು ಸೊಟ್ಟದೆಯೋ, ಮೆಳ್ಳೆಗಣ್ಣಿದೆಯೋ ಯಾವನು ಬಲ್ಲ? ಇದೊಳ್ಳೆ ಫಜಿತಿಯ ಶಾಸ್ತ್ರ ಮದುವೆ ಮುಗಿದು ದಿಬ್ಬಣ ಹೋಗಿ ಸೋಬನದ ದಿನಮಾತ್ರ ಘುಂಗುಟೋ ಸರಿಸಿ ಆಕಿ ಮಾರಿ ನೋಡಬೇಕು. ಇದೆಂತ ಶಿಕ್ಷೆ ಅಂತೀನಿ. ಒಳಗೆ ಹಿಂಸೆ ಪಡುತ್ತಿರೋದನ್ನ ಕಂಡ ಸಾವಿ ಮೆಲ್ಲನೆ "ಭೆನೆವಿಸಾ, ನೀವೇನು ಕಾಳಜಿ ಮಾಡಬೇಡಿ. ಅಕ್ಕ ಬಹಳಾಂದ್ರ ಬಹಳ ಸುಂದರವಾಗಿದ್ದಾಳೆ." ಅಂದವಳೆ ಅವನ ಉತ್ತರಕ್ಕಾಗಿ ಕಾದಳು. ಅವನ ತಮ್ಮನ ಬಗ್ಗೆ ಏನಾದರೂ ಅಂದಾನಂತ, ಅದನ್ನು ಅರ್ಥಮಾಡಿಕೊಂಡ ಮೀಟು. ಮಾತನಾಡದಂತೆ ಗಪ್ಪಾದ. ಅವಳು ಕಾದಳು, ಕುಡಿತಿರೋ ಅವಳಪ್ಪ, ದೊಡ್ಡಪ್ಪ ಮೇಲೆದ್ದು ಊಟದ ಮನೆ ಕಡೆಗೆ ಹೊರಡುವವರೆಗೂ ಕಾದು ನಿರಾಶೆಯಿಂದ ಹೆಜ್ಜೆ ಕೀಳಲು ಮುಂದಾದಳು. "ಬೋಡಿ ನೀ ಏನು ವಿಚಾರ ಮಾಡಬ್ಯಾಡ ನನ್ನ ತಮ್ಮ ನಂಗಿಂತ ಚೆನ್ನಾಗವ್ನೆ" ಅವಳು ಒಮ್ಮೆ ನಕ್ಕು ಒಳಗೆ ಓಡಿದಳು.

ಒಂದೇ ಪಂತಿಯೊಳಗೆ ಎಲ್ಲರೂ ಊಟಕ್ಕೆ ಕುಳಿತುಕೊಂಡರು. ಪಂತಲು ಅಂಜಿಕೆಯಿಂದಲೇ ಊಟ ಮಾಡ್ತಿದ್ದ, ಮೀಟುಗೆ ಅತ್ತೆಯಂದಿರು ಚೆನ್ನಾಗಿ ಊಟ ಮಾಡಿಸುತ್ತಿದ್ದರು. ಒಳ್ಳೆ ಕಟ್ಟು ಮಸ್ತಾದ ಅಸಾಮಿ, ಜಿಗುರು ಮೀಸೆ ನೋಡಲು ಸ್ಪುರದ್ರೂಪಿ. ಸುಂದರನಾಗಿದ್ದ ಅಷ್ಟೆ ಧೈರ್ಯಶಾಲಿ, ಬಲಶಾಲಿ ಮತ್ತು ಬುದ್ಧಿವಂತನಾಗಿದ್ದ. ಇವನಿಗೆ ಸರಿಯಾಗಿ ಊಟ ಮಾಡಿಸಲು ಅತ್ತೆಯಂದಿರು ಮೇಲಿಂದ ಮೇಲೆ ಅದು ಇದು ಅಂತ ಭೆನಿವಿ–ಮಾವ ಬೋಡಿ–ನಾದಿನಿ ಬಡಿಸುತ್ತಲೇಯಿದ್ದರು. ಉಳಿದವರೆಲ್ಲಾ ಊಟ ಮಾಡಿ ಎದ್ದು ಹೋಗಿದ್ದರು. ಮೀಟುಗೆ ಊಟ ಹೆಚ್ಚಾಗಿತ್ತು. ಒಮ್ಮೆ ಅವನ ಹೆಂಡತಿಯಾಗುವಳ ಮಾರಿ ನೋಡುವ ಹಂಬಲ ಮಾತ್ರ ಹೋಗಿರಲಿಲ್ಲ. ಅದನ್ನು ಬಾಯಿಬಿಟ್ಟು ಹೇಳುವ ಹಾಗೂ ಇಲ್ಲ. ಸೊಸೆ ಸಾವಿಯಾದರು ತನ್ನ ಕಷ್ಟ ಅರ್ಥಮಾಡ್ಕೊಬಾರದೆ ಅಂತೇಳಿ ಮನಸೊಳಗೆ ಅಂದ್ಕೊಂತ ಮೇಲೆದ್ದು ಕೈ ತೊಳೆಯಲು ಹೊರಟ, ಬೆನೆವಿ, ಅಂತ ಸಾವಿ ಕೂಗಿದಳು. ಲಚ್ಮಿ ಸೆರಗು ಜಾರಿತ್ತು. ಮೀಟು ಮೂಕ ವಿಸ್ಮಿತನಾಗಿ ಅವಳ ಸೌಂದರ್ಯವನ್ನು ನೋಡುತ್ತಲೇ ನಿಂತು ಬಿಟ್ಟ. ಹೊರಗಡೆಯಾರೋ ಕೂಗಿದಕ್ಕೆ ಮೀಟು ಮನಸ್ಸಿಲ್ಲದ ಮನಸ್ಸಿನಿಂದ ಕೈತೊಳೆದುಕೊಂಡವನೆ ಅವಳು ಕೊಟ್ಟ ಕರವಸ್ತ್ರದಿಂದ ಕೈ ಒರೆಸಿಕೊಂಡು ಅದನ್ನ ಬಚ್ಚಿಟ್ಟುಕೊಂಡು ಹೊರಗೆ ಓಡಿದ. "ಹೊತ್ತು ಬಹಳ ಆಗ್ಯೆತೆ ಬೀಗರೆ ಹೊರಡಿ ನಮ್ಮ ಐದಾರು ಕುದುರೆ ಸವಾರರು ನಿಮ್ಮನ್ನ ಬಿಡಲಿಕ್ಕೆ ಬರ್ತಾರ" ಜಂಗಿ ಹೇಳಿದ. "ಮಾವ, ಸೈನಿಕರು ಯಾಕೆ ಈಗ" ಮೀಟು ರಾಗ ಎಳೆದ "ನಿನ್ನ ಶೌರ್ಯದ ಮೇಲೆ ಅನುಮಾನ ಇಲ್ಲಪ್ಪ. ಅಷ್ಟು ದೂರ ನಿಮ್ಮನ್ನ ಬಿಟ್ಟು ಈಗ ಬರ್ತಾರ". ಅವನ ಮಾತನ್ನು ಕೇಳಲು ಆತ ತಯಾರಿರಲಿಲ್ಲ. ಅಕಸ್ಮಾತ್ ಆಸೀಫ್‌ಖಾನ್‌ನ ಸೈನಿಕರು ನೋಡಿ ಶತ್ರು ಅಂತೇಳಿ ತೊಂದರೆ ಮಾಡಿದ್ರೆ ಒಳ್ಳೆಯದಲ್ಲ ಅಂತ ಜಂಗಿನಾಯ್ಕನವಾದ.

ಇತ್ತ ಮನೆಯೊಳಗೆ ಮೀಟು ಬುಕ್ಯಾನ ತಾಯಿ ಸಾಮ್ಕಿ, ರೂಪ್ಲಿ, ಥಾವು, ಯಾಕೆ ಇಷ್ಟೊತ್ತಾದರೂ ಬರಲಿಲ್ಲವಲ್ಲ ಅಂತೇಳಿ ಚಿಂತೆ ಮಾಡ್ತಾ ಕುಳಿತಿದ್ದರು. ಸಾಮ್ಕಿಗೆ ಅಲ್ಲಿ ಏನು ನಡಿತು ಅಂತ ಕೇಳುವ ಕುತೂಹಲ, ಥಾವುಗಂತು ನಿಂತಲ್ಲಿ ನಿಲ್ಲಾಕೆ ಆಗ್ತಾಯಿಲ್ಲ. ಮೀಟುನ ಮದುವೆ ಆದರೆ ತನಗೆ ಸರಳ ದಾರಿಸಿಗುತ್ತೆ, ತಂಗಿ ರೂಪ್ಲಿ ಮದುವೆ ಮಾಡಿ ಇಬ್ಬರೂ. . . ಆಲೋಚನೆಗಳು ತುಂಡಾಗಿದ್ದವು. ರೂಪ್ಲಿ ತನ್ನಣ್ಣ ಬಲಶಾಲಿಯಾಗಿದ್ದು ಅವನನ್ನು ಮದುವೆಯಾಗುವಳು ಪುಣ್ಯವಂತೆ ಅವಳು ನೋಡಲಿಕ್ಕೆ ಹೆಂಗಿರಬಹುದು? ಏನೇನೋ ಆಲೋಚನೆಗಳಲ್ಲಿ ತಾಯಿಯನ್ನು ಪೀಡಿಸುತ್ತಿದ್ದಳು. "ಹೂಂ, ಏನು ಸೊಸೆ ಬರ್ತಾಳಂತ ಕನಸ,? ಬರ್ತಾಳ, ನಿನಗ ಮೊಮ್ಮಕ್ಕಳನ್ನು ಹೆತ್ತು ಕೊಡ್ತಾಳ ಅಷ್ಟೊಂದು ಯೋಚನೆ ಮಾಡಬೇಡ ಬಿಡವ್ವ" ಅಣಿಕಿಸದಳು. "ಯಾಕೆ, ನಿನ್ನ ಮದುವೆ ಮಾಡದೆ ನಿನ್ನ ಅಣ್ಣ ಮದುವೆ ಆಗ್ತಿದ್ದಾನೆ ಅಂತ ಹೊಟ್ಟೆ ಉರಿನ ಯೋಚನೆ ಮಾಡಬ್ಯಾಡ ಇಲ್ಲಿ ಭಾಳ ಮಂದಿ ಚವ್ಹಾಣ್ ಹುಡುಗರದಾರ ಅದ್ರಾಗ ಒಬ್ಬನ್ನ ನೋಡಿ ಗಂಟುಹಾಕ್ತಾನ ಬಿಡು ನಿನ್ನಣ್ಣ" ಅವಳನ್ನು ಅಣುಕಿಸಿದಳು. "ಹೋಗವ್ವ ನೀನು, ನನಗೇನು ನಿಮ್ಮನ್ನು ಬಿಟ್ಟು ಇಷ್ಟು ಬೇಗ ಮದುವೆ ಆಗಬೇಕೆಂತೇನು ಇಷ್ಟ ಇಲ್ಲ ಅಣ್ಣನ ಮದುವೆ, ಅವನ ಮಕ್ಕಳು ಆಮೇಲೆ ನೋಡಿದ್ರಾತು" ತನ್ನ ಆಸೆಯನ್ನು ವ್ಯಕ್ತಪಡಿಸಿದಳು. "ಆಹಾ, ಏನು ಹುಚ್ಚು ಆಸೆ ಕಣೆ ರೂಪ್ಲಿ ನಿಂದು. ಅಲ್ಲ ಮನಿಯೊಳಗ ಹರೆಯದ ತಂಗಿಯನ್ನು ಇಟ್ಕೊಂಡು ಅಣ್ಣ ಮದುವಿ ಆಗಾಕ ಸಾಧ್ಯ ಅಂತ ತಿಳಿದ ಏನು? ಹುಚ್ಚು ಹುಡುಗಿ, ನೀ ಅಂದ್ರ ಪಂಚಪ್ರಾಣ ಅವನಿಗೆ, ನೋಡಬೇಕಾದ್ರೆ ಮೊದಲು ನಿನ್ನ ಮದುವೆ ಮಾಡಿಯೇ ಅವನು ಮದುವೆ ಆಗ್ತಾನ" ಥಾವು ಖಡಾಖಂಡಿತವಾಗಿ ಹೇಳಿದ. ಯಾಕೆಂದರೆ ಅವನು ಮೀಟುನ ಮನಸ್ಥಿತಿಯನ್ನು ಪರಿಪೂರ್ಣವಾಗಿ ಅರ್ಥಮಾಡಿಕೊಂಡಿದ್ದ. ತಂಗಿ ತಮ್ಮ ಅಂದರೆ ಪ್ರಾಣವನ್ನೇ ಕೊಡಲಿಕ್ಕೆ ಸಿದ್ದನಾಗಿದ್ದ. "ಇಂಥ ಅಣ್ಣ ಸಿಗಬೇಕಾದರೆ ನಾನಂತು ಏಳೇಳು ಜನ್ಮದೊಳಗೆ ಪುಣ್ಯಾ ಮಾಡೀನಿ ಅಂತ ತಿಳ್ಕೊಂಡಿನಿ. ಯಾವ ಜನ್ಮದ ಋಣಾನು ಬಂಧವೋ ನಮ್ಮದು. ಮುಂದಿನ ಜನ್ಮಾಂತ ಇದ್ದರೆ ಅವನೇ ಅಣ್ಣನಾಗಿ ಹುಟ್ಟಲಿ ಅಂತ ದೇವರತಾವ ಬೇಡ್ಕೋಂತೀನಿ ನೋಡೊಥಾವು." ಭಾವುಕಳಾಗಿದ್ದಳು, ಏನೋ ಸದ್ದಾಗಿದ್ದಕ್ಕೆ ಎಲ್ಲರು ನಿಶಬ್ಧರಾದರು ಅಣ್ಣ-ಅಪ್ಪ ಬಂದ್ರೂಂತ ಕಾಣುತ್ತೆ ಥಾವು ದೀವಟಿಗೆ ಹೊರಗ ಹಿಡಿದ.

ಮೋಳ ತುಕಡಿಯ ನೇತೃತ್ವವಹಿಸಿದ್ದ. ನಾಳೆ ಬಹಳ ಮುಖ್ಯವಾದ ಸ್ಥಾನಕ್ಕೆ ಬರಲಿರುವ ಶೂರ ಮೀಟು ಬುಕ್ಯಾನ ತಂಗಿಯನ್ನು ಹೇಗಾದರೂ ಮಾಡಿ ಮದುವೆಯಾಗಬೇಕೆಂಬುದು ಅವನ ಮನಸ್ಸಿನಾಳದ ಆಸೆಯಾಗಿತ್ತು. "ಬನ್ನಿ ಒಳಗೆ" ಮೀಟು ಕರೆದ, "ಸೌರಾತ್ರಿ ಆಗಿದೆ, ಮತ್ತೆ ಯಾವಗಲಾದರೂ ಬರ್ತೀನಿ" ಅಂದವನೆ ವಾಪಾಸು ತಿರುಗಿದ. "ನಾಳೆ ನಿಮ್ಮನ ಬೆಟ್ಟಿಯಾಗ್ತಿನಿ" ಅವನ ಮುಲಾಜು ಕಾಯದೆ ಹೇಳಿದ. ಮೀಟು 'ಆಯ್ತು" ಅಂತೇಳಿ ಮೋಳ ಚವ್ಹಾಣ್ ಕುದುರೆಯನ್ನು ಗದರಿಸಿ ವಾಪಾಸು ಹೊರಟ. ಥಾವು, ಸಾಮ್ಕಿ, ರೂಪ್ಲಿ ತುದಿಗಾಲಲ್ಲಿ ವಿಷಯವನ್ನು ಭೇದಿಸಲು ನಿಂತಿದ್ದರು. "ಏನಣ್ಣ, ಅತ್ತಿಗೆಯನ್ನು ನೋಡಿದೆಯಾ? ಹೆಂಗಿದಾಳೇ" ರೂಪ್ಲಿ ಕುತೂಹಲ ತಡೆಯಲಾರದೆ ಕೇಳಿದಳು. "ಹೂಂ ಯಾಕ ನಿನಗಿಷ್ಟು ಕುತೂಹಲ?" ಅವಳಿಗೆ ಉತ್ತರ ಹೇಳ್ತಿದದಂಗೆ, "ಅವರು ಶ್ರೀಮಂತರು ನಮಗೂ ಅವರಿಗೂ" ಅವನ ತಾಯಿ ಸಾಮ್ಕಿ ರಾಗತಗದ್ಲು. "ಛೇ ಛೆ ಶ್ರೀಮಂತರಾಗಿದ್ದು ಒಂದು ಸೊಕ್ಕಿಲ್ಲಾ, ಅಹಂಕಾರ ಊಹೂಂ, ಹೇಳಾಕ

ಮುಂಚೆ ಅವರ ಹತ್ತು ಸಾವಿರ ಎತ್ತುಗಳ ಮಾಲೀಕತ್ವವನ್ನು ನಿನ್ನ ಇಬ್ಬರೂ ಮಕ್ಕಳಿಗೆ ಕೊಟ್ಟು ಅಣ್ಣತಮ್ಮ ಇಬ್ಬರಿಗೂ ಅಣ್ಣತಮ್ಮ ಇಬ್ಬರ ಹುಡುಗಿಯರನ್ನ ಕೊಟ್ಟು ಮದುವೆ ಮಾಡೋದಕ್ಕೆ ತಯಾರಾದ್ರು ಅಂತಿನಿ" ಪಂತು ಬುಕ್ಯಾ ಹೆಂಡತಿಯ ಸಂಶಯವನ್ನು ದೂರಮಾಡಿದ. "ಅಯ್ಯೋ ದೇವರೆ ಹತ್ತು ಸಾವಿರ ಎತ್ತುಗಳ ಕಾರಬಾರು ಸತ್ಯವಿನ್ರಿ" ಗಂಡನ ಮಾತನ್ನ ದೃಢಪಡಿಸಿಕೊಳ್ಳಲು ಪ್ರಯತ್ನಮಾಡಿದಳು. "ಹೌದಮ್ಮ ಜಂಗಿನಾಯ್ಕ ಮಾಮ ಅಲ್ಲೇ ಹೇಳಿ ಬಿಟ್ರು". ಮೀಟು ದೃಢಪಡಿಸಿದ. ರಾತ್ರಿ ಬಹಳ ಹೊತ್ತಾಗಿದ್ದರಿಂದ ಮಲಗಲು ತೆರಳಿದರು. ತಂಗಿಯ ಮನಸ್ಸು ಚಿಕ್ಕದಾಗಿದ್ದನ ಗಮನಿಸಿದ ಮೀಟು ಅವಳ ಒಂದು ಮಾತನ್ನು ಇಲ್ಲ ಅಂದಿರಲಿಲ್ಲ. "ನನ್ನ ತಂಗಿ ರೂಪ್ಲಿ ಮದುವೆ ಯಾದಮೇಲೇನೆ ನಾವಿಬ್ಬರು ಮದುವೆಯಾಗುವುದು" ಅವಳಿಗೆ ಕೇಳುವಂತೆ ಜೋರಾಗಿ ಹೇಳಿದ. "ನನ್ನ ಮದುವೆಗೇನು ಅವಸರ ಇಲ್ಲಾ, ಮದ್ಲು ನೀವಿಬ್ಬರು ದೊಡ್ಡೋರು ಮದುವೆಯಾಗಿ ಅತ್ತಿಗೆಯರನ್ನು ಮನೆಗೆ ತಂದ ಮೇಲೇನೆ ನಾನು ಮದುವೆಯಾಗೋದು." ದೃಢವಾಡಿ ಹೇಳಿದಳು ರೂಪ್ಲಿ.

ಮುಂಜಾನೆ ಬೆಳಕು ಹರಿಯುತ್ತಿದ್ದಂತೆ ಮೋಳ ಚವ್ಹಾಣ್ ಹಾಜರಾಗಿದ್ದ. ಈಗ ಅವನು ಬಂದಿದ್ದು ತನ್ನ ಸ್ವಂತ ಸಂಬಂಧಕ್ಕೆ. ಮೀಟುನಂತ ಶೂರ, ಬುದ್ಧಿವಂತನ ಸಂಬಂಧ ಬೆಳೆಸುವುದರಿಂದ ಮುಂದಿನ ಪೀಳಿಗೆನಾದರೂ ತನ್ನ ಹಾಗೆ ಗುಲಾಮಗಿರಿಯನ್ನು ಬಿಟ್ಟು ಬದುಕೀತು ಎನ್ನುವ ಭರವಸೆಯಿಂದ ಬಂದಿದ್ದ. ಮೀಟು ಅವನ ನೋಡಿದವನೆ ಮೇಲೆದ್ದು ಹೊರಗೆ ಬಂದು ಗೌರವದಿಂದಲೇ ಕರೆದೊಯ್ದ. "ಏನ್ಸಮಾಚಾರ ಮೋಳ ಹೊತ್ತಾರೆ ಬಂದಿದ್ದೀಯಾ?" ಪ್ರಶ್ನಿಸಿದ ಮೀಟು. ಅವನಿಗೆ ಏನು ಉತ್ತರಿಸಬೇಕೆಂದು ತಿಳಿಯದೆ, ತೊದಲುತ್ತ "ಏನೂ ಇಲ್ಲಾ ಹಾಗೆ ಈ ಕಡೆಗೆ ಬರ್ತಾಯಿದೆ ಬಂದೆ". ಏನೋ ಸಬೂಬು ಹೇಳಿದ. ಮೀಟುಗೆ ಅರ್ಥವಾಗಿತ್ತು. ಮೋಳ ಚವ್ಹಾಣ್ ನೋಡೋದಕ್ಕೆ ಸುಂದರನಾಗಿದ್ದ ಆದರೆ ಅವನು ಜಂಗಿ ಭಂಗಿಯ ದಂಡಿನೊಳಗೆ ಕೆಲಸ ಮಾಡುತ್ತಿದ್ದ. ಮೀಟು ಬುಕ್ಯಾಕೂಡ ನೆನ್ನೆಯವರೆಗೆ ಕೆಲಸಗಾರನೆ ಆಗಿದ್ದ. ಅದೃಷ್ಟ ಖುಲಾಯಿಸಿತು ಬೆಳಕು ಹರಿಯೋದರೊಳಗೆ ಹತ್ತು ಸಾವಿರ ಎತ್ತುಗಳ ಮಾಲೀಕ. ಆದರೆ ಈ ಅದೃಷ್ಟ ಎಲ್ಲರ ಜೀವನದಲ್ಲೂ ಬರಲು ಸಾಧ್ಯವಿಲ್ಲ. ಹಾಗಾಗಿ ಅವನೇನು ಅವನ ಬಗ್ಗೆ ಯಾವ ಆಲೋಚನೆಯನ್ನು ಮಾಡಿರಲಿಲ್ಲ. ಮನೆಯೊಳಗೆ ಏನಂದಾರು ಅಂತ ಆಲೋಚಿಸುತ್ತಿರುವಾಗಲೆ ಪಂತು ಬುಕ್ಯಾ "ಅರೆಮೋಳ ಕೂಡು ಕೂಡು, ನಿನ್ನ ಬಗ್ಗೆ ಕೇಳಿದ್ದೆ. ಅಂದ ಹಾಗೆ ನಿನ್ನ ಬೆಡಗ ಯಾವುದು" ಹಿಂದೂ ಮುಂದೆ ನೋಡದೆ ಕೇಳಿಯೇ ಬಿಟ್ಟ. ನಮ್ಮದು ಜಾತ್‌ನಲ್ಲಿ ಕೊರ್‍ರಾ ಬರುತ್ತೆ ಮಾಮ" ಅಂದ, "ನನ್ನ ತಾಯಿನೂ ಕೂಡ ಅದೇ ಬೆಡಗಡವಳು" ಪಂತಲು ಹೇಳಿದ. ಅವನು ಮತ್ತೊಂದಿಷ್ಟು ಹತ್ತಿರವಾದ. ಸಂಬಂಧದ ಸುರಳಿಯನ್ನ ಬಿಚ್ಚುತ್ತಾ ಹೋದರೆ ಎಲ್ಲೋ ಒಂದು ಕಡೆ ಇಬ್ಬರು ಸಂಬಂಧಿಕರಾಗುವುದರಲ್ಲಿ ಸಂಶಯವೇ ಇಲ್ಲ. ರೂಪ್ಲಿ ರೊಟ್ಟಿ ತಯಾರಿನಡೆಸಿದ್ದರೆ ಸಾಮ್ಕಿ ಪಲ್ಯೆಗೆ ಯಾವುದೊ ತರಕಾರಿ ಬೆಳೆಯನ್ನ ಹಾಕುತ್ತಿದ್ದಳು. ಹೊತ್ತಾರೆ ರೊಟ್ಟಿ ತಿಂದು ಮೀಟು, ಧಾವು, ಜಂಗಿ-ಬಂಗಿಯ ಎತ್ತುಗಳ ಹೇರು, ಚೀಲಗಳನ್ನು ಸೈನಿಕರ ಆಹಾರ ಸಾಮಾಗ್ರಿಗಳ ಲೆಕ್ಕ ಅಂತ ರಾತ್ರಿ ಕತ್ತಲಾಗುವವರೆಗೆ ಅಲ್ಲೇ ಉಳಿದು ಬಿಡುತ್ತಿದ್ದರು. ಮಧ್ಯಾಹ್ನದ ರೊಟ್ಟಿ ಅಲ್ಲೆ ತಿಂದು ವಾಪಾಸಾಗುತ್ತಿದ್ದರು. ಇವತ್ತು ಮೋಳಕೂಡ ರೊಟ್ಟಿ ತಿನ್ನಲು ಅವರೊಟ್ಟಿಗೆ ಕುಳಿತಿದ್ದ. ಬಿಸಿಬಿಸಿ ರೊಟ್ಟಿ, ಪಲ್ಯ, ಮೆಣಸಿನ ಕಾಯಿ, ಒಣಮೀನು ರುಚಿಯಾಗಿದ್ದಕ್ಕೆ ಮೋಳ ರೂಪ್ಲಿ ತಾಯಿಯನ್ನ ಹೊಗಳಿದ್ದೆ ಹೊಗಳಿದ್ದು.

ಹೊತ್ತಾರೆ, ಕೆಲಸಕ್ಕೆ ಹಾಜರಾದಾಗ ಕೆಲಸದ ವಾತಾವರಣದಲ್ಲಿ ಬದಲಾವಣೆಯಾಗಿತ್ತು. ಜಂಗಿ ಬಹುದಿನಗಳಿಂದ ಮೀಟುನ ಚಲನವಲನ ಗಮನಿಸುತ್ತಿದ್ದ. ಅವನ ಬುದ್ಧಿವಂತಿಕೆಗೆ ಶಬಾಸ್‌ಗಿರಿ ಕೂಡ ಕೊಟ್ಟಿದ್ದ. ಈಗ ಅದೇ ಚಾಣಕ್ಯ ಅಳಿಯನಾಗ್ತಿರೋ ಬಗ್ಗೆ ಹೆಮ್ಮೆ ಅನಿಸಿತು. ನೂರಾ ಎಂಬತ್ತು ಯುವಕರನ್ನು ಒಟ್ಟಿಗೆ ಸೇರಿಸಿದ್ದ. "ಎಲ್ಲಾ ನನ್ನ ಮಾತನ್ನ ಗಮನವಿಟ್ಟು ಕೇಳಿ, ವಿಷಯ ಏನಪ್ಪ ಅಂದ್ರೆ ನಿಮಗೆಲ್ಲಾ ಒಬ್ಬ ಹೊಸ ಮುಖಿಯಾ ಬರ್‍ತಿದ್ದಾನೆ. ಆತನನ್ನು ನೀವು ನೋಡಿದ್ದಿರಾ, ಅವನ ಶಕ್ತಿಯನ್ನು ನಿವೆಲ್ಲಾ ಕಣ್ಣಾರೆ ಕಂಡಿದ್ದೀರಾ. ಬಹಳ ಬೇಗನೆ ಆತ ನಮ್ಮ ಸಂಬಂಧಿಕನೂ ಕೂಡ ಆಗ್ತಾನೆ. ಈಗ ಅವನು ನಮ್ಮ ಒಂದು ಲಕ್ಷ ಎತ್ತುಗಳ ಪೈಕಿ ಹತ್ತು ಸಾವಿರ ಎತ್ತುಗಳ ಮಾಲೀಕನೂ ಕೂಡ. ಆತನೆ ಮೀಟು ಉರ್ಫ್ ಮೀಟು ಬುಕ್ಯಾ ಕರಮ್‌ತೋಟ್". ಚವ್ಹಾಣ ಹುಡುಗರಿಗೆ ದಂಗಾಗಿತ್ತು. ಏನು ಮೀಟು ಬುಕ್ಯಾಬೆಡಗದವನ. ಅವನ ಮೇಲೆ ಎಲ್ಲರೂ ಹೊಟ್ಟೆಕಿಚ್ಚು ಪಡತೊಡಗಿದರು. ಆದರೆ ಅವನೆಂತಹ ಧೈರ್ಯಶಾಲಿ ಹೋರಾಟಗಾರ ಅಂತ ತಿಳಿದಿತ್ತು. ಹತ್ತು ಮಂದಿ ಮುಸ್ಲಿಮರನ್ನ ಕ್ಷಣಾರ್ಧದಲ್ಲಿ ಸೋಲಿಸಿ ರುಂಡ ಚಂಡಾಡಿದವನು. ನೂರು ಜನರನ್ನು ಹೊಡೆದುರುಳಿಸುವುದರಲ್ಲಿ ಸಂಶಯವೇ ಇಲ್ಲಾ. ಆದರೂ ಈಗ ಮಾಲಿಕ ಜಂಗಿ ಭಂಗಿಯ ಮಗಳನ್ನ ಮದುವೆಯಾಗಿ ತಮ್ಮ ಮೇಲೆ ಅಧಿಕಾರ ಚಲಾಯಿಸುತ್ತಾನೆ ಎನ್ನುವ ಆತಂಕ ಬಹಳ ಮಂದಿಗೆ ಕಾಡತೊಡಗಿತು. ಎಲ್ಲರೂ ಗುಸು ಗುಸು ಮಾತಾಡಕೊಳ್ಳತೊಡಗಿದರು. ಏನೇ ಆದರೂ ಇಂಥ ಬಹುದ್ದೂರ್ ಸೈನಿಕ ನಮ್ಮ ಜೊತೆ ಇದ್ದಾನಲ್ಲ ಅವನು ಒಂದಲ್ಲ ಒಂದು ದಿನ ಒಳ್ಳೆ ನಾಯಕ ಕೂಡ ಆಗಬಲ್ಲ ಎಂದು ಸ್ವತಃ ಚವ್ಹಾಣ್ ಹುಡುಗರೆ ಮಾತಾಡಿಕೊಳ್ಳತೊಡಗಿದರು. ಮೀಟು ಮಾತ್ರ ಯಾವುದೇ ಹೆಚ್ಚುಗಾರಿಕೆಯಿಲ್ಲದೆ, "ಸ್ನೇಹಿತರೆ ಜಂಗಿ ಮಾಮ ಹೇಳಿದ್ದು ಸತ್ಯ. ಆದರೆ ನಾನು ಯಾವುದೇ ಅಧಿಕಾರದ ದರ್ಪವಾಗಲಿ ನೀವು ಕೀಳು ನಾನು ಮೇಲು ಎಂಬುದನ್ನು ಯಾವತ್ತು ಬಗೆಯುಗುವುದಿಲ್ಲ. ಹಿಂದೆ ನಾನು ಅವರ ಆಳಾಗಿದ್ದೆ ಈಗ ಅಳಿಯನಾದರೂ ಕೂಡ ಅವರ ಗೌರವಕ್ಕೆ ಕುಂದು ಬರುವಂತಹ ಕೆಲಸವನ್ನು ಮಾಡಲ್ಲ. ನಿಮ್ಮ ಪಾಲಿಗೆ ನಾನು ಹಳೆಯ ಮೀಟು. ಇದು ಜಂಗಿಮಾಮ ಮತ್ತು ಭಂಗಿ ಮಾಮರ ದೊಡ್ಡ ಗುಣ ನನ್ನ ಅವರ ಅಳಿಯನನ್ನಾಗಿ ಸ್ವೀಕರಿಸಿದ್ದಾರೆ. ನನ್ನ ಪ್ರಾಣದ ಕಡೆಯ ಉಸಿರಿರುವ ವರೆಗೆ ಅವರ ಈ ಲದೇಣಿಯಾವನ್ನು ಬಿಡುವುದಿಲ್ಲ. ಎಂಥಹ ಆಪತ್ತು ಬಂದರು ನಿಮ್ಮ ಜೊತೆಗೆ ನಿಲ್ಲುತ್ತೇನೆಂದು ಮಾ ಭವಾನಿಯ ಮೇಲೆ ಪ್ರಮಾಣಮಾಡಿ ಹೇಳುತ್ತೇನೆ." ಅವನ ಶತ್ರುಗಳೂ ಅವರಿಗೆ ಗೊತ್ತಿಲ್ಲದೆ ಎರಡು ಕೈಗಳನ್ನು ಒಟ್ಟುಗೂಡಿಸಿ ಚಪ್ಪಾಳೆ ಬಾರಿಸಿದರು. ಜಂಗಿ ಕೆಳಗಿಳಿದು ಬಂದು ಅವನನ್ನ ಅಪ್ಪಿಕೊಂಡು. "ನಿನ್ನ ಹಡೆದ ತಂದೆ ತಾಯಿಗಳು ನಿಜವಾಗಲು ಧನ್ಯರು ವಯಸ್ಸಿಗೆ ಮೀರಿದ ಮಾತು, ಶಕ್ತಿಗೆ ಮೀರಿದ ಧೈರ್ಯ. ನೀನು ನನ್ನ ಅಳಿಯ ಅನ್ನೋದನ್ನ ಎದೆ ಉಬ್ಬಿಸಿ ಗರ್ವದಿಂದ ಹೇಳುತ್ತೇನೆ. ನೀನೊಬ್ಬ ಅಸಾಧಾರಣ ಮನುಷ್ಯ" ಜಂಗಿನಾಯ್ಕ ನಿಜವಾಗಲು ಗಗ್ಗಧಿತನಾಗಿದ್ದ.

ಆಸೀಫ್‌ಖಾನ್‌ನ ಸೈನಿಕರು ಜಂಗಿನಾಯ್ಕ ಹುಡುಕುತ್ತಾ ಬಂದಿದ್ದರು. ಏನು ವಿಷಯ ಸೈನಿಕರೆ ಕೇಳಿದ. "ಹೂಜೂರ್ ಪ್ರಭುಗಳು ಈಗಿಂದಿಗಲೇ ತಮ್ಮನ್ನ ಕರೆತರಲು ಹೇಳಿದ್ದಾರೆ" ವಿಷಯ ತಿಳಿಸಿದರು. "ಆಯ್ತು ಹೊರಡಿ ಏನೋ ತುರ್ತು ಕೆಲಸವಿರಬೇಕು" ಜಂಗಿ ಅವರ ಹಿಂದೆ ಹೊರಟ ಆಸಿಫ್‌ಖಾನ್ ಜಂಗಿಯ ಬರುವಿಕೆಯನ್ನೇ ಕಾಯುತ್ತಿದ್ದ. "ಬರಬೇಕು ಜಂಗೀಬಾಯಿ,

ನಿಮ್ಮುಕೆ ಸ್ವಾಗತ ಬನ್ನಿ ಕುಳಿತುಕೊಳ್ಳಿ. ಆಸನವನ್ನು ತೋರಿಸಿದ. "ಹೇಳಿ ಹೂಜೂರ್, ಏನು ವಿಷಯ, ಯಾಕೋ ಪ್ರಭುಗಳು ಚಿಂತೆಯಲ್ಲಿರುವಂತಿದೆ" ಜಂಗಿ ಅನುಮಾನವನ್ನು ವ್ಯಕ್ತಪಡಿಸಿದ. ಇಲ್ಲ ಜಂಗಿನಾಯ್ಕ ಅಂಥದ್ದೇನು ವಿಷಯ ಇಲ್ಲಾ ಕಾಡ್ನಾಗೆ ಶೇರ್ ಬಂದು ನಮ್ಮ ಕುರಿಗಳನ್ನು, ಸೈನಿಕರನ್ನು ಪರಿಷಾನ್ ಮಾಡ್ತಿದೆ. ನಿಮ್ಮ ಬಳಿ ಯಾರಾರು ಷೇರ್ ಬೇಟೆ ಮಾಡೋರಿದ್ರೆ;" ವಿಷಯವನ್ನು ಅಪೂರ್ಣ ಗೊಳಿಸಿದ. "ಹುಲಿನ ಬೇಟೆಯಾಡೋರು" ಜಂಗಿ ಅನುಮಾನಿಸಿದ. "ಇಲ್ಲ ಯಾರು ಇಲ್ಲಾಂದ್ರೆ ನಾವೆ ಖುದ್ದಾಗಿ ಜಾಯೆಂಗೆ" ಅವನ ಪ್ರತಿಕ್ರಿಯೆಗಾಗಿ ಕಾದರು. ನಿಜವಾಗಿಯೂ ಹುಲಿ ಸೈನಿಕರ ಆಹರಕ್ಕೆಂದು ತಂದಿರುವ ಹಿಂಡು ಕುರಿ, ಮೇಕೆಗಳಲ್ಲಿ ಮೆಲ್ಲಗೆ ಒಂದೊಂದಾಗಿ ಮುಗಿಸಿದ್ದು ಅಲ್ಲದೆ ಕುರಿ ಕಾಯುವವರನ್ನು ಗಾಯಗೊಳಿಸಿತ್ತು. ಮನುಷ್ಯರ ರಕ್ತದ ರುಚಿ ನೋಡಿರುವ ಹುಲಿ ಸೈನಿಕರನ್ನ ಮುಗಿಸುತ್ತಾ ಬಂದರೆ ಎಂಬ ಚಿಂತೆ ಆಸೀಫ್ ಖಾನ್‌ಗೆ ಕಾಡತೊಡಗಿತು. ಅವರ ಮಾತುಕತೆಯ ನಡುವೆ ಚಹ ಪಾನೀಯಗಳನ್ನು ಖುದ್ದಾಗಿ ಆಸೀಫ್ ಖಾನ್‌ನ ಹಿರಿಮಗಳು ಸೈನಾಜ್‌ಬಿ ಮಾಡತೊಡಗಿದ್ದಳು. "ಅರೇ ಸೈನಾಜ್‌ಬೇಟಿ ಬಹುತ್ ಬಡಿ ಹೊಗಯಹೈ" ಜಂಗಿ ಪ್ರಶಂಸೆ ಮಾಡಿದ. "ಹಾಂ ಬೆಳೆದುನಿಂತವಳೆ ನಿಖಾ ಮಾಡಬೇಕು. ಆದರೆ ನಾವು ದಿಲ್ಲಿಗೆ ವಾಪಾಸು ಹೋಗ್ತಿವೊ ಇಲ್ಲ ಈ ದುರ್ಗಮ ಕಾಡಿನೊಳಗೆ ಯಾವುದಾದರೂ ಕಾಡು ಪ್ರಾಣಿಗಳಿಗೆ ಬಲಿಯಾಗಿ ಬಿಡುತ್ತೇವೆ ಎಂಬ ಆತಂಕ ನಮ್ಮುಕೆ" ಚಿಂತೆಯನ್ನು ವ್ಯಕ್ತಪಡಿಸಿದ. "ಅರೇ ಖಾನ್‌ಸಾಹೇಬ್, ಈ ಜಂಗಿ-ಭಂಗಿ ಇರೋವರಿಗೆ ನಿಮ್ಮನ್ನ ಯಾವ ಪ್ರಾಣಿನೂ ಏನೂ ಮಾಡಾಕಿಲ್ಲ ತಾವು ನಿಶ್ಚಿಂತೆಯಿಂದಿರಿ ಇನ್ನೆರಡು ದಿನದಲ್ಲಿ ಹುಲಿಯಬೇಟೆಯಾಡಿ ನಿಮ್ಮ ಡೆರೆ ಎದುರಿಗೆ ನೇತುಹಾಕಲಾಗುತ್ತದೆ." ಭರವಸೆಕೊಟ್ಟವನೆ ಹೊರಗಡೆ ಬಂದ. ಆದರೆ ಈ ಕೆಲಸಕ್ಕೆ ಮೀಟು ಬುಕ್ಕಾ ಒಬ್ಬನೆ ಯೋಗ್ಯವಾದವನು. ಇಂಥಹ ಎಷ್ಟೋ ಹುಲಿಗಳನ್ನು ನೆಲಕ್ಕುರುಳಿಸಿರುವ ಗಂಡುಗಲಿ ಅವನು. ಆದರೆ ಆ ಸಂದರ್ಭದಲ್ಲಿ ಅವನನ್ನ ಕಳುಹಿಸುವುದು ಎಷ್ಟು ಸೂಕ್ತ? ಚಿಂತೆ ಮಾಡುತ್ತಲೇ ವಾಪಾಸಾದ. ದಂಡಿನಲ್ಲಿ ಅವನ ಅಣ್ಣ ಭಗನ್ಯನಾಯ್ಕ ಎತ್ತುಗಳ ಮೈಸವರಿ ಅವುಗಳನ್ನು ಮೇಯಲು ಕಾಡಿಗೆ ಕೊಂಡೊಯ್ಯುವಂತೆ ಆದೇಶಿಸಿದ್ದ. ತಮ್ಮನ ಮುಖದಲ್ಲಿರುವ ಚಿಂತೆಯ ಗೆರೆಗಳನ್ನು ನೋಡಿ, "ಏನು ವಿಷಯ, ಆಸಿಫ್‌ಖಾನ್ ಕರೆದಿದ್ದರಂತೆ" ಕೇಳಿದ, "ಅದ್ಯಾವದೋ ಹುಲಿಯೊಂದು ಸೈನಿಕರಿಗೆ ತೊಂದರೆ ಕೊಡ್ತಾಯಿದೆಯಂತೆ ಅದಕ್ಕೆ ಅದನ್ನ ಮುಗಿಸಲಿಕ್ಕೆ ಅಪ್ಪಣೆಮಾಡಿದದರು. ಆದರ" ಅನುಮಾನ ವ್ಯಕ್ತಪಡಿಸಿದ. "ಏನು ಆದರೆ, ನಮ್ಮ ಹುಡುಗರು ಬೇಟೆಮಾಡುವುದರಲ್ಲಿ ಸಂಶಯವೇ?" ಭಂಗಿ ಕೇಳಿದ "ಅದಲ್ಲ ಅಣ್ಣ, ಎಲ್ಲರೂ ಎಲ್ಲಿ ಬೇಟಿಯಾಡ್ತಾರೆ, ಹುಲಿಯ ಬೇಟೆಗೆ ಹುಲಿಯನ್ನು ಕಳುಹಿಸಬೇಕು. ಆ ಹುಲಿ ನಮ್ಮ ಜಮಾಯಿ ಸಾ ಮೀಟು, ಯಾಕೋ ನನಗೆ ಸಂದಿಗ್ಧ ಆಗ್ತಿದೆ." ಜಂಗಿ ತನ್ನೊಳಗೆ ನಡೆಯುತ್ತಿರುವ ಗೊಂದಲ ತೋಡಿಕೊಂಡಿದ್ದ. "ಅರೇ ಚೋಟು ಇಷ್ಟು ಸಣ್ಣ ವಿಷಯಕ್ಕೆ ಇಷ್ಟೊಂದು ಕಳವಳ ಪಟ್ಟರೆ ಹೇಗೆ, ನಿನಗೆ ಮೀಟುನ ಮೇಲೆ ನಂಬಿಕೆಯಿದೆತಾನೇ? ಅವನು ಇಂಥ ಹತ್ತು ಹುಲಿಗಳು ಬಂದರೂ ಎದುರಾಗಬಲ್ಲ ಅನ್ನೋ ಧೈರ್ಯ ನನಗಿದೆ ಚಿಂತೆ ಮಾಡಬೇಡ. ಜಮಾಯಿಸಾನ ಕರೆಯಲು ಕಳುಹಿಸು" ಅಪ್ಪಣೆ ಮಾಡಿದ. ಮೀಟು ಬಂದವನೆ ಅವರ ಕಾಲುಗಳಿಗೆ ನಮಸ್ಕರಿಸಿದ. ಭಂಗಿ ನಾಯ್ಕನೆ ಹುಲಿಯಿಂದ ಆಸೀಫ್ ಖಾನ್‌ಗೆ ಆಗುತ್ತಿರುವ ತೊಂದರೆ ಮತ್ತು ಮುಂದೆ ಆಗಬಹುದಾದ ಅಪಾಯದ ಬಗ್ಗೆ ವಿವರವಾಗಿ ಹೇಳಿದ.

“ಅಷ್ಟೇನಾ, ತಾವು ಕಾಳಜಿಮಾಡುವುದು ಬೇಡ, ನನ್ನ ಜೊತೆಗೆ ಮೋಳ ಚವ್ಹಾಣ್, ಗೋಪು ಕೊರ್ರ, ರಾಮ ಸಬಾವಟ್, ಸೂರ್ಯವಡ್ತ್ಯ ಮತ್ತೊಂದು ನಾಲ್ಕು ಜನರನ್ನ ಕಳುಹಿಸಿ ಎರಡು ದಿನಗಳಲ್ಲಿ ಹುಲಿಯನ್ನು ಹೆಡಮುರಿಗೆ ಕಟ್ಟಿ ನಿಮ್ಮ ಬಳ ತರ್ತೀವಿ. ಭರವಸೆಕೊಟ್ಟ, ಜಂಗಿ ಭಂಗಿ ಸಹೋದರರು ನೆಮ್ಮದಿಯಿಂದ ತಮ್ಮ ಡೇರೆ ಕಡೆಗೆ ಹೊರಟು, ಬೇಟೆಗೆ ಸಿದ್ಧತೆ ಮಾಡಿಕೊಳ್ಳಲು ಮೀಟುಗೆ ಹೇಳಿದರು.

ಇಂಥ ಅನೇಕ ಪ್ರಾಣಿಗಳನ್ನು ಬೇಟೆಯಾಡುವುದರಲ್ಲಿ ನಿಪುಣನಾದ ಪಂತು ಬುಕ್ಯಾ ಮಗನೊಬ್ಬನನ್ನೇ ಕಳುಹಿಸಲು ಹಿಂಜರಿಯುತ್ತಿದ್ದ. ಆದರೆ, ಹುಲಿಯ ಹೆಜ್ಜೆ, ಅದರ ಚಲನವಲನ, ಅದು ಮನುಷ್ಯನ ಮೇಲೆ ಮಾಡುವ ಅಕ್ರಮಣ ಮತ್ತು ಅದನ್ನು ಕೊಲ್ಲುವ ವಿಷಯವನ್ನು ಸಂಪೂರ್ಣವಾಗಿ ಮಗನ ತಲೆಯೊಳಗೆ ತುಂಬಿದ ನಂತರ ಅವನ ಬಲದ ಮೇಲೆ ಭರವಸೆ ಹೊಂದಿದ್ದಕ್ಕೆ ಅವನು ಕಾಡಿಗೆ ಹೋಗಲು ಅನುಮತಿಸಿದ್ದ. ಪೂರಾ ತಯಾರಿಯೊಂದಿಗೆ ಕತ್ತಲಾಗುವುದನ್ನೇ ಕಾಯುತ್ತಿದ್ದ ತಂಡ ಹುಲಿಯ ಮಾಹಿತಿ ದೊರೆತ ಕಡೆಗೆ ಹೊರಟಿತು. ಮೀಟುಗೆ ಅವನ ತಂಗಿ ರೂಪ್ಲಿಯನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದ ಮೋಳ ಚಾವ್ಹಾಣ್‌ನನ ಗುಣ ಸ್ವಭಾವದ ಪರಿಚಯವಾಗತೊಡಗಿತು. ತಂದೆ ತಾಯಿಗಳನ್ನು ದೂರದ ರಾಜಸ್ಥಾನದ ತಾಂಡಗಳಲ್ಲಿ ಬಿಟ್ಟು ಬಂದಿದ್ದ ಚವ್ಹಾಣ್ ಹುಡುಗರಿಗೆ ಮೀಟು ಬುಕ್ಯ ಹತ್ತಿರದ ಸಂಬಂಧಿಯಂತೆ ನೋಡಿಕೊಳ್ಳತೊಡಗಿದ್ದ. ಅದೇ ವಿಶ್ವಾಸದಲ್ಲಿ ಅವರೆಲ್ಲಾ ಮೀಟುನಿಗಾಗಿ ಪ್ರಾಣಕೊಡಲು ತಯಾರಾಗಿದ್ದರು. ತಂಡದಲ್ಲಿ ಯಾರೊಬ್ಬರು ಒಂಚೂರು ಮೈಮರೆತರು ಹುಲಿಗೊ ಇಲ್ಲಾ ಬೇರೆಯಾವುದಾದರು ವಿಷಜಂತುವಿಗೆ ಬಲಿಯಾಗುವ ಹೆದರಿಕೆ. ಯಾರ ಕೂದಲು ಕೊಂಕದಂತೆ ಹುಲಿಯನ್ನ ಜೀವಂತವಾಗಿ ಇಲ್ಲವೆ ಕೊಂದಾದರೂ ಒಯ್ಯಬೇಕೆಂಬುದು ಮೀಟುನ ಹೆಬ್ಬಯಕೆ. ಆದ್ರೆ ರಾತ್ರಿ ಹುಲಿ ಕತ್ತಲೊಳಗೆ ಯಾವ ಕಡೆಯಿಂದ ಆಕ್ರಮಣ ಮಾಡುತ್ತೆ, ಸಾವಾಗಿ ಎಲ್ಲಿ ಅಡಗಿಕುಂತಿದೆ ಎಂಬುದು ಯಾರಿಗೂ ತಿಳಿಯದಾಗಿತ್ತು. ತಂದ ಮೇಕೆಯನ್ನು ಗಿಡದ ಬುಡಕ್ಕೆ ಕಟ್ಟಿ ದೂರದಲ್ಲಿ ಸಣ್ಣದೊಂದಿಯನ್ನ ಹಚ್ಚಿಕೊಂಡು ಪಾಳೆಯಮೇಲೆ ಕಾದು ಕುಳಿತಿದ್ದರು. ಜಿಂಕೆಗಳು, ಕಡವೆ, ಮೊಲ, ಕತ್ತಲೊಳಗೆ ಬೆದರುತ್ತ ಒಂದು ಕಡೆಯಿಂದ ಮತ್ತೊಂದು ಕಡೆಗೆ ಓಡುತ್ತಿದ್ದವು. ಪಾಪ ಸಾವು ಅವುಗಳ ಮೇಲೆ ಹುಲಿ, ಚಿರತೆ, ಹೆಬ್ಬಾವು ತೋಳದ ರೂಪದಲ್ಲಿ ಯಾವಾಗ ಎರುಗುತ್ತದೆಯೋ ಎಂಬ ಆತಂಕದಿಂದ ಜೀವಮುಷ್ಟಿಯಲ್ಲಿ ಹಿಡಿದು ನಿರ್ಭಯದಿಂದ ಇರುವಂತೆ ಅವು ನಾಟಕವಾಡುವಂತಿತ್ತು. ರಾತ್ರಿಯ ಭಯಾನಕತೆ ಕಾಡಲ್ಲಿ ಹೆಚ್ಚಾಗಿತ್ತು. ಒಬ್ಬರಾದ ಮೇಲೆ ಒಬ್ಬರು ಎಚ್ಚರಗೊಂಡು ಮೇಕೆಯ ಸದ್ದನ್ನ ಆಲಿಸುತ್ತಿದ್ದರು. ಆದರೆ ದುರಂತ ವೆಂದರೆ ಕಟ್ಟಿದ್ದ ಮೇಕೆಯನ್ನು ಚಿರತೆಯೊಂದು ಕಚ್ಚಿಕೊಂಡು ಹೋಗಿತ್ತು. ಮೀಟುನ ಸರದಿ ಬಂದಾಗ ಎದ್ದು ನೋಡಿದರೆ ಅಲ್ಲಿ ಮೇಕೆ ಕಾಣದಾಗಿತ್ತು.

ಮೀಟುಗೆ ಅನುಮಾನ ಕಾಡತೊಡಗಿತು. ಇದು ಹುಲಿಯು ಕೆಲಸವೋ ಇಲ್ಲ ಬೇರೆಯಾವುದಾದರೂ ಪ್ರಾಣಿಗಳ ಕೆಲಸವೆಂಬುದು ತಿಳಿಯದಾಗಿತ್ತು. ಮೋಳ ನನ್ನ ಎಚ್ಚರಿಸಿ ಮೇಕೆ ಕಾಣೆಯಾಗಿರುವ ಬಗ್ಗೆ ಹೇಳಿದ. “ಇದೇನು ಹುಲಿಕೆಲಸವೋ, ಇಲ್ಲಾ” ಮೋಳ ಅನುಮಾನಿಸಿದ, “ಯಾರು ಎಚ್ಚರವಾಗಿ ಪಹರೆ ಕಾಯ್ತಿದ್ರು, ಎಬ್ಬಿಸು ಅವರನ್ನು” ಮೀಟು ಹೇಳಿದ.

ಅವನಿಗಿಂತ ಮುಂಚೆ ಪಹರೆ ಕಯುತ್ತಿದ್ದವನನ್ನ ಎಬ್ಬಿಸಿ ಆಡಿನ ಬಗ್ಗೆ ಕೇಳಿದರೆ ಅದು ಯಾವಾಗ ಹೋಯ್ತು ಅಂತ ಅವನಿಗೂ ತಿಳಿಯದು ಎಂದು ಹೇಳಿದ. ಎಲ್ಲರೂ ತಮ್ಮದೊಂದಿಗಳನ್ನ ಹಚ್ಚಿಕೊಂಡು ಸುತ್ತಲೂ ಹುಡುಕಲು ಹೊರಟರು. ಕೇವಲ ಒಂದು ಗಳಿಗೆಯಲ್ಲಿ ಆಗಿದ್ದರಿಂದ ಕೊಂದಪ್ರಾಣಿ ದೂರ ಹೋಗಿರಲಿಕ್ಕಿಲ್ಲಾ ಎಂಬುದು ಮೀಟುನ ವಾದ. ಹುಡುಕಾಟ ನಡೆದೆಯಿತ್ತು ರಹಸ್ಯ ಸೂಚನೆಯ ಸದ್ದು ಬಂದಿದ್ದೇ ಎಲ್ಲರೂ ಆ ದಿಕ್ಕಿಗೆ ಓಡಿದರು. ಮೇಕೆ ಸತ್ತು ಬಿದ್ದಿದೆ ಆದರೆ ಅದನ್ನ ಕೊಂದ ಪ್ರಾಣಿ ಮಾತ್ರ ಕಾಣುತ್ತಿಲ್ಲ. ದೊಂದಿಬೆಳಕನ್ನ ಮುಂದೆ ಮಾಡಿ ಸೂಕ್ಷ್ಮವಾಗಿ ನೋಡಲು ತಿರುಗಿದರು ಪಕ್ಕದಲ್ಲೇ ಒಂದು ಪೊದೆಯೊಳಗೆ ಹುಲಿಕುಳಿತಿತ್ತು. ಬಹುಶಃ ಇದೇ ಇರಬೇಕೆಂದು ಅವರಿಗೆ ಅನುಮಾನ ಬಂತು. ನಿಧಾನಕ್ಕೆ ಎಲ್ಲರೂ ಕೈಯೊಳಗೆ ತಲ್ವಾರ್ ಹಿಡಿದು, ಮತ್ತೊಂದು ಕೈಯೊಳಗೆ ದೊಂಧಿ ಹಿಡಿದು ಪೊದೆಯನ್ನು ಸುತ್ತುವರಿದರು ಎಲ್ಲಾ ಬರಿ ಸಂಜ್ಞೆಯಮೇಲೆ ನಡೆದಿತ್ತು. ಯಾರೊಬ್ಬರೂ ಮಾತಾಡುವ ಗೋಜಿಗೆ ಹೋಗಲಿಲ್ಲ. ಜೀವಂತವಾಗಿ ಹಿಡಿಯುವ ಎಂದು ಮೀಟು ಮೋಳಿ ಚವ್ಹಾಣ್‌ಗೆ ಸನ್ನೆಮಾಡಿದ. ಆದರೆ ಹುಲಿ ಬಹಳ ದೊಡ್ಡದು ಬಗ್ಗಿಸುವುದು ಕಷ್ಟವಾದೀತು ಎಂದು ಮೋಳ ಸನ್ನೆ ಮಾಡಿದ. ಬೆಳಕು ಸುತ್ತಲು ಕಾಣುತ್ತಿರುವುದು ಅದರ ಕಣ್ಣೊಳಗೆ ಪ್ರತಿಫಲನಗೊಂಡಿದ್ದೆ ತಡ ಘರ್ಜಿಸಿ ಮೇಲೆದ್ದಿತ್ತು. ಅದೇ ಸಮಯ ಕಾಯುತ್ತಿದ್ದ ಮೀಟು ಬುಕ್ಯಾ ಒಂದೇ ಸಲಕ್ಕೆ ಅದು ತನ ಬೇಟೆಗಳ ಮೇಲೆ ಎಗರುವಂತೆ ಎಗರಿದ. ಮುಂದೆ ಕ್ಷಣಾರ್ಧದಲ್ಲಿ ಹುಲಿಯನ್ನು ಗಾಯಗೊಳಿಸಿ ನೆಲಕ್ಕೆ ಕೆಡವಿದ. ಅದರ ಆರ್ಭಟ ಹೋರಾಟಕ್ಕೆ ಹೆದರಿ ಕೆಲವರು ನಿಂತಲ್ಲೇ ನಡಗತೊಡಗಿದರು. ಮೋಳ ಚವ್ಹಾಣ ಮೀಟುನ ಸಹಾಯಕ್ಕೆ ನಿಂತು ಹುಲಿಯ ಹೆಡಮುರಿಗಿ ಕಟ್ಟಿ ನಾಲ್ಕು ಮಂದಿ ಬಲಿಷ್ಠ ಆಳುಗಳು ಅದನ್ನು ಹೊತ್ತು ಸಾಗುವಂತೆ ಅಪ್ಪಣೆಯಾದ ಮೇಲೆ ಮೀಟು ಹುಲಿ ಉಗುರಿನಿಂದ ಅವನ ಮುಖದ ಮತ್ತು ಎದೆಯ ಮೇಲಾದ ಗಾಯಕ್ಕೆ ಅಲ್ಲೆ ಸಿಕ್ಕ ಔಷಧಿ ಎಲೆಯನ್ನು ಹರಿದು ರಸಹಿಂಡಿಕೊಂಡು ನೋವಿನಿಂದಲೇ ಕುದುರೆ ಹತ್ತಿದ.

ಸುದ್ದಿ ಮೊದಲು ಜಂಗಿ–ಭಂಗಿ ಸಹೋದರರಿಗೆ ಹೋಯಿತು. ಮೀಟುಬುಕ್ಯಾ ಹುಲಿಯನ್ನ ಜೀವಂತವಾಗಿ ಹಿಡಿದು ತರುತ್ತಿದ್ದಾನೆಂದು ಇಬ್ಬರು ಖುಷಿಯಿಂದ ತಮ್ಮ ಅಳಿಯನ ಸ್ವಾಗತಕ್ಕೆ ಮುಂದಾದರು. ಲಚ್ಮಿಗಂತು ಹುಲಿಯನ್ನು ಹಿಡಿದ ವೀರ ನಾಳೆ ಗಂಡನಾಗಲಿದ್ದಾನೆಂದು ತಿಳಿದೆ ಪುಳಕಿತಳಾಗಿದ್ದಳು. ಅವಳು ಅವರ ಹಿಂದೆ ಹುಲಿನೋಡಲು ದೂರದವರೆಗೆ ಬಂದಿದ್ದಳು. ಹುಲಿ ಹಿಡಿದ ಸುದ್ಧಿ ಆಸೀಫ್‌ಖಾನ್‌ಗೆ ತಲುಪಿದ್ದೆ ತಡ, ಹುಲಿಕೊಂದ ವೀರನ್ನ ನೋಡಬೇಕೆಂದು ತನ್ನ ಬಯಕೆಯನ್ನು ಜಂಗಿಭಂಗಿ ಸೋದರರಿಗೆ ಕಳುಹಿಸಿದ. ದಟ್ಟಕಾಡಿಂದ ಹೋದ ದಾರಿಯಲ್ಲೇ ವಾಪಾಸು ಬರುವಾಗ ಹಿಡಿದ ಹುಲಿಯ ಘರ್ಜನೆಗೆ ಜಂಗಿ–ಭಂಗಿ ಎತ್ತುಗಳೆಲ್ಲಾ ಹೆದರಿ ಚೆಲ್ಲಾಪಿಲ್ಲಿ ಯಾದವು. ಬೇಟೆಗೆ ಹೋದವರನ್ನೆಲ್ಲಾ ಅದ್ದೂರಿಯಾಗಿ ಸ್ವಾಗತಿಸಿ ಅವರ ಮನೆಯೊಳಗೆ ಭರ್ಜರಿ ಬೋಜನದ ವ್ಯವಸ್ಥೆ ಮಾಡಲಾಯಿತು. ಅಲ್ಲಿಂದ ಸ್ವಲ್ಪವೇ ಸಮಯದಲ್ಲಿ ಹುಲಿಯನ್ನ ಹೊತ್ತು ಖಾನ್ ಸಾಹೇಬರ ಕಡೆಗೆ ಸವಾರಿ ಬೆಳೆಯಿತು. "ನಮಗೆ ಸಂಪೂರ್ಣ ಭರವಸೆಯಿತ್ತು, ಈ ಹುಡುಗ ಹುಲಿಯನ್ನು ಹಿಡಿದೇ ಹಿಡಿಯುತ್ತಾನೆ ಅಂತ" ಭಗನ್ಯನಾಯ್ಕ ಎದೆ ಉಬ್ಬಿಸಿ ಹೇಳಿದ. "ಯಾಕಿಲ್ಲ, ಅವನು ಸಾಮಾನ್ಯದವನಲ್ಲ ಅಸಾಮಾನ್ಯ" ಜಂಗಿ ಮಾತು ಸೇರಿಸಿದ ಖಾನ್‌ಸಾಹೇಬರ ಮುಸಿಬತ್ ಕಡಿಮೆ ಮಾಡಿದೆ ಕಣಪ್ಪ, ಯಾಕಂದ್ರೆ ಅವರು ನಮ್ಮನ್ನ

ಸಂಪೂರ್ಣ ನಂಬಿದ್ದಾರೆ. ಅದಕ್ಕೆ ಅವರ ಸೈನಿಕರ ಬದಲಿಗೆ ಈ ಕೆಲಸವನ್ನು ನಮಗೆ ವಹಿಸಿದ್ದು ಆ ನಂಬಿಕೆಯನ್ನ ಉಳಿಸಿದೆ. ನೀನು ನಮ್ಮ ಬಂಜಾರ ಎಂದು ಹೇಳಿಕೊಳ್ಳೋದಕ್ಕೆ ನಾನು ಹೆಮ್ಮೆ ಪಡುತ್ತೇನೆ. ಭಗನ್ಯನಾಯ್ಕ ಭಾವುಕನಾಗಿದ್ದ. ಮೀಟು ಹೇಗೆ ಪ್ರತಿಕ್ರಿಯಿಸಬೇಕೆಂದು ತಿಳಿಯದೆ ಸುಮ್ಮನೆ ಕೇಳುತ್ತಿದ್ದ.

ಆಸೀಫ್‌ಖಾನ್ ಬಹಳ ಪ್ರಸನ್ನನಾಗಿದ್ದ. ಬಂಜಾರ ಹುಡುಗನೊಬ್ಬ ಪ್ರಾಣದ ಹಂಗನ್ನು ತೊರೆದು ಹುಲಿಯಂತ ಬಲಿಷ್ಠ ಪ್ರಾಣಿಯನ್ನು ಜೀವಂತವಾಗಿ ಹಿಡಿಯುವುದೆಂದರೆ ಸಾಮಾನ್ಯದ ಕೆಲಸವಲ್ಲ. ವಾದ್ಯ ಸಮೇತ ಅವನ ಸ್ವಾಗತಕ್ಕೆ ಖಾನ್ ಸಾಹೇಬರೇ ಮುಂದಾದರು. ಮೆರವಣಿಗೆ ಡೇರೆಯಿಂದ ಸುಮಾರು ದೂರವಿರುವಾಗಲೇ ಖಾನ್‌ಸಾಹೇಬರು ಗೌರವ ಸೂಚಕವೆಂಬಂತೆ ಹುಲಿಯನ್ನು ಸೋಲಿಸಿರುವ ಹುಲಿಯನ್ನ ನೋಡಲು ಮುಂದಾದರು. “ಅರೇ ಮೇರ ಶೇರ್ ಜಂಗಿಭಂಗಿ ಖಾಸ ಆದ್ಮಿ ಹುಲಿದು ಕೊಂದ ಅಂತ ತಿಳದು ಆದ್ಮಿ ನಮದುಕೆ ಬಹುತ್ ಖುಷಿ ಆಗಿದೆ. ಅವನು ಸಾಮಾನ್ಯನಲ್ಲ” ಖಾನ್‌ಸಾಹೇಬ್ ಬಹಳ ಖುಷಿಯಲ್ಲಿದ್ದರು. “ಹೂಜೂರ್, ಇವನೆ ನನ್ನ ಅಳಿಯ ಮೀಟು ಬುಕ್ಯಾ ಕರಮ್‌ತೋಟ್. ಆ ಹುಲಿಗಿಂತ ಬಲಶಾಲಿ” ಭಂಗಿ ಹೆಮ್ಮೆಯಿಂದಲೆ ಹೇಳಿದವನೆ ನಾಲಿಗೆ ಕಚ್ಚಿಕೊಂಡ. ಖಾನ್‌ಸಾಹೇಬ್ ಎಲ್ಲಿ ಇವನನ್ನು ಸೈನ್ಯದೊಳಗೆ ಸೇರಿಸಿಕೊಳ್ತಾರೋ ಅಂತ. ಖಡ್ಗವನ್ನ ಬಹುಮಾನವಾಗಿ ಕೊಟ್ಟು ಖಾನ್ ಸಾಹೇಬ್ ಗೌರವಿಸಿದರು. ಅಷ್ಟೆ ಅಲ್ಲ ಮೀಟುನನ್ನು ಅವನ ಖಾಸಗಿ ಚರ್ಚೆಯ ಗುಂಪಿನೊಳಗೆ ಪ್ರತೀಷ್ಠತ ಜಾಗವನ್ನು ನೀಡಿದರು. ಅದು ಜಂಗಿ–ಭಂಗಿ ಸಹೋದರರಿಗೆ ಬಹಳ ವರ್ಷಗಳ ಮೇಲೆ ಸಿಕ್ಕಿತ್ತು. ಅವರ ಕತ್ತಿನಲ್ಲಿದ್ದ ಮುತ್ತಿನ ಸರವನ್ನು ಕೈಯಾರೆ ಖಾನ್ ಸಾಹೇಬರು ಅವನಕೊರಳಿಗೆ ತೊಡಿಸಿದರು. ಅವರ ಮನೆಯಲ್ಲಿ ಸಂಜೆಯ ಊಟ ಏರ್ಪಾಡಾಯಿತು. ಪಂತು ಬುಕ್ಯಾನ ಮನೆಯವರಿಗೂ, ಜಂಗಿ–ಭಂಗಿ ಸಹೋದರರ ಮನೆಯವರೆಲ್ಲರನ್ನ ಆಹ್ವಾನಿಸಲಾಯಿತು. ಮಗನ ಸಹಾಸದ ಸುದ್ದಿ ತಿಳಿದ ಪಂತಲು ಮತ್ತು ಅವನ ತಾಯಿ ಸಾಮ್ಕಿ ಮಗನನ್ನ ನೋಡಲು ಕಾತರರಾಗಿದ್ದರು. ಥಾವು, ರೂಪ್ಲಿ ಅಣ್ಣನ ಯಶಸ್ಸನ್ನ ಕಾಣಲು ಉತ್ಸಾಕರಾಗಿ ಹೊರಟಿದ್ದರು. ಎಲ್ಲೋ ಬಡತನದಲ್ಲಿ ಬಿದ್ದಿದ್ದ ದಾರಿದ್ರ್ಯದಿಂದ ಪೀಡಿತರಾಗಿದ್ದ ಪಂತು ಬುಕ್ಯಾನ ಪರಿವಾರ ಈಗ ರಾಜಮನ್ನಣೆಯನ್ನ ಪಡೆದಿತ್ತು. ಸೈನ್ಯದ ಪ್ರಮುಖರು ರಾತ್ರಿ ಭೋಜನದಲ್ಲಿ ಹಾಜರಾಗಿದ್ದರು. ಬೂರ್ಕಾದಲ್ಲಿದ್ದ ಅಸೀಫ್‌ಖಾನ್‌ನ ಮಗಳು ಶೈನಾಜ್‌ಬಿ ಮೀಟು ಬುಕ್ಯಾನ ನೋಡಿ ನಿಜವಾಗಿಯೂ ಮನಸೋತಿದ್ದು. ಆದರೆ ಅವನ ಮದುವೆ ಅವಳ ತಂದೆಯ ಖಾಸಾಮನುಷ್ಯ ಭಗನ್ಯನಾಯ್ಕನ ಮಗಳ ಜೊತೆ ಆಗುತ್ತಿರುವುದನ್ನು ಕೇಳಿ ತನ್ನ ಆಶೆಯನ್ನು ಬಿಡಲೇಬೇಕಾಯ್ತು. ಆದರು ಅವನನ್ನ ಹತ್ತಿದಿಂದ ನೋಡಲೇಬೇಕೆಂಬ ಬಯಕೆ, ಒಬ್ಬ ಸೈನಿಕ ನನ್ನ ಕರೆದು ಮೀಟು ಬುಕ್ಯಾ ಕರಮತೋಟನನ್ನ ಬೆಟ್ಟಿಯಾಗಲು ಹೇಳಿದಳು. ಮೀಟು ಭೋಜನ ಕೂಟದಲ್ಲಿ ಚರ್ಚೆಗೆ ಭಾಗವಹಿಸಿದ್ದು “ಹೂಜೂರ್ ಮುಂದಿನ ಶುಕ್ರವಾರ ಮೀಟು ಮತ್ತು ನನ್ನ ಮಗಳು ಲಚ್ಮಿಯ ನಿಖಾದ ಮಾತುಕತೆ ಇಟ್ಕೋಂಡಿದ್ದೀನಿ. ಸೈನ್ಯ ಇಲ್ಲೆ ಇರುತ್ತೋ ಇಲ್ಲ ಮುಂದೆ?” ಅನುಮಾನದಿಂದಲೇ ವಿಚಾರಿಸಿದ. “ಇಲ್ಲಾ ಮುಂದೆ ಮೋಸಮ್ ಸರಿಯಾಗಿಲ್ಲ ಇನ್ನೂ ತಿಂಗಳಕಾಲ ಇಲ್ಲೇ ಇರಬೇಕಾಗಬಹುದು”. ಆಸೀಫ್‌ಖಾನ್ ಸ್ಪಷ್ಟವಾಗೆ ಹೇಳಿದ. ದಕ್ಷಿಣದ ಬೇಸಿಗೆ, ಛಳಿ, ಮಳೆಗೆ ಒಗ್ಗಿಕೊಳ್ಳಲು ಕೆಲ ದಿನಗಳು ಬೇಕಾಗಿದ್ದವು. ಹಾಗಾಗಿಯೇ ದಕ್ಷಿಣದ

ಪರಿಸರ ಮತ್ತು ವಾತಾವರಣದಲ್ಲಿನ ಹೇರುಪೇರಿನ ಅಧ್ಯಯನ ನಡೆದಿತ್ತು. ಹಾಗಾಗಿಯೇ ಉತ್ತರ ಭಾರತದಲ್ಲಿನ ವೈಪರೀತ್ಯ ದಕ್ಷಿಣದಲ್ಲೆಲ್ಲಾ ಸೈನ್ಯ ಮಧ್ಯ ಪ್ರದೇಶದ ಗಡಿಯನ್ನು ದಾಟಿ ದಕ್ಷಿಣದ ತುದಿಗೆ ಕಾಲಿಟ್ಟಿತ್ತು. ದುರ್ಗಮದಾರಿ, ದಟ್ಟಕಾಡು ಆಸೀಫ್‌ಖಾನ್‌ಗೆ ದೊಡ್ಡಸವಾಲಾಗಿತ್ತು. ಏಕೆಂದರೆ ಅವನೆಂದು ಈ ರೀತಿಯ ಧೀರ್ಘ ಪ್ರಯಾಣಮಾಡಿರಲಿಲ್ಲ. ಬಾದಷ ಔರಂಗಜೇಬನ ಹುಕುಂ ಯಾರಿಗೂ ನಿರಾಕರಿಸಲಾಗದೆ ಹೆಂಡತಿ ಮಕ್ಕಳ ಸಮೇತನಾಗಿ ಜಂಗಿ-ಭಂಗಿ ಸಹೋದರರ ನೆರವಿನಿಂದ ದಕ್ಷಿಣದ ಕಡೆಗೆ ಹೊರಟಿದ್ದ. ದಕ್ಷಿಣ ದಿಕ್ಕಿನ ದಾರಿ ಬಂಜಾರ ಜನರು ಅಡ್ಡಾಡಿ ಒಂದು ನೀಲಿ ನಕಾಶೆಯನ್ನು ತಯಾರುಮಾಡಿದ್ದರಿಂದಾಗಿ ಜಂಗಿ-ಭಂಗಿ ನಾಯ್ಕರಿಗೆ ಕಷ್ಟವಾಗಿರಲಿಲ್ಲ. ಆಸೀಫ್‌ಖಾನ್‌ಗೆ ಮಾತ್ರ ಇಬ್ಬರೂ ಸಹೋದರರನ್ನ ಬಲವಾಗಿ ನಂಬಲೇ ಬೇಕಾದ ಸನ್ನಿವೇಶ ನಿರ್ಮಾಣವಾಗಿತ್ತು. ಬೆಟ್ಟ ಗುಡ್ಡಗಳನ್ನ ನಿರಾಳವಾಗಿ ದಾಟುವ ಬಂಜಾರರು ಹೆಚ್ಚೇನು ಕಷ್ಟ ಪಡುತ್ತಿರಲಿಲ್ಲ. ಆದರೆ, ಆಸೀಫ್‌ಖಾನ್‌ನ ಸೈನ್ಯ ತುಸು ಪ್ರಯಾಸ ಪಡಲೇ ಬೇಕಾದ ಅನಿವಾರ್ಯತೆ ನಿರ್ಮಾಣವಾಗಿತ್ತು.

ದಿನ ಬೆಳಕ ಹರಿದು ಕತ್ತಲಾಗುವುದರೊಳಗೆ ಶುಕ್ರವಾರ ಬಂದೇ ಬಿಟ್ಟಿತು. ಭಂಗಿ ನಾಯ್ಕ ಅವನ ಕಿರಿಯ ತಮ್ಮ ಜಂಗಿ ನಾಯ್ಕ ಇಬ್ಬರೂ ಪಂತು ಭಕ್ಯಾನಿಗೆ ಜೋಡಿ ಕಳುಹಿಸಿ ಶುಕ್ರವಾರ ವಾತ-ಬೋಲಿ ಗಟ್ಟಿಮಾಡಿ, ಸಗಾಯಿ ಶಾಸ್ತ್ರ ಮುಗಿಸಿ ಹೋಗಲು ಹೇಳಿದ್ದರಿಂದ ಇವರು ಗುರುವಾರವೇ ಅವರ ಒಬ್ಬಳೆ ಮಗಳು ರೂಪ್ಲಿಯ ನಿಶ್ಚಿತಾರ್ಥವನ್ನು ನೆರವೇರಿಸಿಯೇ ಬಿಟ್ಟರು. ಮೋಳಚವ್ಹಾಣಗೆ ತಂದೆ ತಾಯಿಯಾಗಿ ಭಂಗಿ ನಾಯ್ಕನೇ ಮುಂದೆ ನಿಂತು ನೆರವೇರಿಸಿದ. ಯಾಕಂದ್ರ, ಶುಕ್ರವಾರ ನಡೆಯಲಿರುವ ಭರ್ಜರಿ ಸಮರಂಭದಲ್ಲಿ ಮೋಳ ಖುಷಿಯಾಗಿಯೇ ಎಲ್ಲ ಮೆಲುಸ್ತುವಾರಿ ನೋಡಬೇಕು. ಮೀಟು ಅನೇಕ ಸೈನಿಕ ಸ್ನೇಹಿತರು, ಖುದ್ದಾಗಿ ಸೇನಾಧಿಪತಿ ಆಸೀಫ್‌ಖಾನ್ ಕುಟುಂಬ ಸಮೇತನಾಗಿಯೇ ಬಂದಿದ್ದು ಮತ್ತೊಂದು ವಿಶೇಷ. ಸಂಜೆ ಆರರ ಸುಮಾರು ಬೀಗರೆಲ್ಲ ಜಂಗಿ-ಭಂಗಿ ಡೆರೆ ಹತ್ತಿರ ಜಮಾಯಿಸಿದ್ದರು. ಕಾಡಲ್ಲಿನ ಈಚಲು ಮರಗಳಿಂದ ತಾಳೆಮರಗಳಿಂದ ಇಳಿಸಿದ್ದ ಶೇಂದಿ ಜೊತೆಗೆ ಅವರೆ ಖುದ್ದಾಗಿ ಭಟ್ಟಿ ಇಳಿಸಿದ ಸಾರಾಯಿ ಹೇರಳವಾಗಿ ದೊರೆಯುತ್ತಿದ್ದರಿಂದ ಎಷ್ಟು ಬೇಕಾದರೂ ಕುಡಿಯಲು ಅವಕಾಶವಿತ್ತು. ಮಂದಿ ಎರಡು ಮೂರು ಮಡಿಕೆಗಳನ್ನು ಏರಿಸಿಕೊಂಡು ಕಾರ್ಯಕ್ಕೆ ಅಣಿಯಾಗಿ ಬಂದಿದ್ದರು. ನೆರೆದ ಸಬಿಕರ ಮುಂದೆ ವೀಳ್ಯದೆಲೆ ಶಾಸ್ತ್ರ ಮಾಡಿಮುಗಿಸಿ ಒಂದುವರೆ ತಿಂಗಳಿಗೆ ಒಳ್ಳೆಯ ಮೂಹೂರ್ತವನ್ನು ನೋಡಿ ಮದುವೆ ಮಾಡಲು ನಿಶ್ಚಯಿಸಿದರು.[1]

ಆ ಒಂದುವರೆ ತಿಂಗಳ ಕಾಲಾವಧಿಯೊಳಗೆ ಮೋಳ ಚವ್ಹಾಣ್ ಮತ್ತು ರೂಪ್ಲಿಯ ಮದುವೆ ನಡೆದೆ ಹೋಯಿತು. ಸಾಮಾನ್ಯವಾಗಿ ತಿಂಗಳಕಾಲ ನಡೆಯುಬೇಕಿದ್ದ ಮದುವೆ ಅನಿವಾರ್ಯಕಾರಣಗಳಿಂದ ಹದಿನೈದು ದಿನಕ್ಕೆ ಕೊನೆಗೊಂಡಿತು. ಮೀಟುನ ಮದುವೆ ಸಮಯಕ್ಕೆ ಸರಿಯಾಗಿ ರೂಪ್ಲಿ ಮಳಾಪುಗೆ ಬಂದಿದ್ದಳು. ಅಣ್ಣನ ಮದುವೆ ಒಂದು ತಿಂಗಳು ಮಳಾಪು ಎರಡೂ ಆಯ್ತು ಎನ್ನುವ ಲೆಕ್ಕಾಚಾರದಲ್ಲಿ ಮನೆಗೆ ಬಂದಿದ್ದಳು. ಸೈನ್ಯ ಬೀಡು ಬಿಟ್ಟ ಜಾಗದಿಂದ ಹತ್ತು ಮೈಲಿ ದೂರದಲ್ಲಿದ್ದ ದೊಡ್ಡ ಪಟ್ಟಣದಲ್ಲಿ ಹುಡುಗನಿಗೆ ಸೇಲಾ, ಖಾಸಡ, ಬಿಳಿ ಪಂಚೆಗಳು, ನವಲೇರಿಗೆ, ಕಾಂಚಳಿ, ಖಾಸಡಿಗಳನ್ನು ಖರೀಧಿಸಲಾಯಿತು. ಮದುವೆಯ ಕರಾರಿನಂತೆ

ಹುಡುಗಿಯ ಮನೆಯವರು ಎಷ್ಟೇ ಶ್ರೀಮಂತರಾದರು ಹುಡುಗನ ಮನೆಯವರು ಹುಡುಗಿಯ ಮನೆಯವರಿಗೆ ವೀಯಾರ ಹಾಟ್ ಮಾಡಿಸಲೇಬೇಕಿತ್ತು. ಮೀಟು ಬುಕ್ಯಾನ ತಂದೆ ಪಂತು ಅದನ್ನು ಜಂಗಿ ಭಂಗಿಯವರ ಸಂಬಂಧಕರಿಗೆ ತನ್ನ ಶಕ್ತಿಯ ಅನುಸಾರ ಮಾಡಿಸಿದ. ಅವತ್ತ ಸಂಜೆ ಮೀಟು ಬುಕ್ಯಾ ಕರಮ್‌ತೋಟ್ ವೇತಡು ಆದ. ಮನೆಯೊಳಗೆ ಕೆಲವು ಕಾರ್ಯಗಳನ್ನು ಮುಗಿಸಿದ ನಂತರ, ಹೊರಗಡೆ ಹಂದರಹಾಕಿ ಅದರ ನಡುವೆ ಕಂಬಳಿ, ನಡುವೆ ಒಂದು ದೊಡ್ಡ ಗಳೆವನ್ನು ನಿಲ್ಲಿಸಿ ಮಂಡೇವಡೋ ನಿಲ್ಲಿಸಲಾಯಿತು. ವರ ಹೊರಗಡೆ ಬಂದಾಗ ಘೋಟ – ಬೆಲ್ಲದ ಪಾನಕ ಬೆರಸಲಾಯಿತು. ಐದು ಕಂಚಿನ ತಂಬಿಗೆಗಳಲ್ಲಿ ಹಾಕಿ ದೇವರಿಗೆ ನೈವೇದ್ಯ ಮಾಡಿದ ನಂತರ ಮೊದಲು ತಾಂಡದ ಮುಖಂಡರಾದ ನಾಯಕ, ಕಾರಭಾರಿ, ಡಾವೊ ಇಲ್ಲದ ಕಾರಣ ಚವ್ಹಾಣ್‌ನವರನ್ನೇ ಒಬ್ಬರನ್ನ ನಾಯಕನೆಂದು ನೇಮಕಮಾಡಿ ಆತನಿಗೆ ಮೊದಲು ಘೋಟಕೊಡಲಾಯಿತು. ನಂತರ ಕಾರಭಾರಿ, ಡಾವೋ ಎಲ್ಲಾ ಚವ್ಹಾಣ್ ಪಂಗಡದವರನ್ನೇ ನೇಮಿಸಿ ವೇತಡೂನ ಕಡೆಯಿಂದ ಕೊಡಿಸಲಾಯಿತು. ಸಂಬಂಧಿಕರು, ಬೀಗರು ಅವನ ಚಿಕ್ಕ ತಂಗಿ ಪಾರು ಹೆಳವತಮ್ಮನ ಜವಾಬ್ದಾರಿಯನ್ನು ಪಂತುನ ಸಂಬಂಧಿಕರ ಮೇಲೆ ಬಿಟ್ಟು ಬಂದಿದ್ದರು ಈಗ ಅವರ್‍ಯಾರು ಮದುವೆಯಲ್ಲಿಲ್ಲಾ ಎನ್ನುವುದು ಒಂದು ಕೊರಗು ಕೂಡ ಕಾಡಿತ್ತು. ಆದರೆ ಮದುವೆ ನಡೆಯಲೇಬೇಕಾದ್ದರಿಂದ ಆ ಬಗ್ಗೆ ಹೆಚ್ಚಿನ ಯೋಚನೆ ಮಾಡಲು ಯಾರು ತಯಾರಿರಲಿಲ್ಲ. ಬಂಜಾರಗಡದಿಂದ ಸಾವಿರಾರು ಮೈಲುಗಳ ದೂರ ಬಹುಶಃ ವಾಪಾಸು ಹೋಗದಷ್ಟು ದೂರದ ದಾರಿಯನ್ನು ಕ್ರಯಿಸಿಯಾಗಿತ್ತು. ಯಾವ ನರಪಿಳ್ಳೆಯೂ ಕೂಡ ಈ ಕಡೆಯಿಂದ ಆ ಕಡೆಗೆ ಅಷ್ಟು ಸುಲಭವಾಗಿ ಹೋಗಲು ಅಸಾಧ್ಯವಾಗದ ದಾರಿ ಅದಾಗಿತ್ತು. ಚವ್ಹಾಣ್ ಹುಡುಗರು ಘೋಟವನ್ನ ಅಷ್ಟು ಸುಲಭವಾಗಿ ಪಡೆಯಲು ತಯಾರಿಲ್ಲ. ಅವರಲ್ಲೊಬ್ಬ ಹಿರಿಕನಾದವನು ಮೀಟುನನ್ನ ಹಾಗೆ ಬಗ್ಗಿರುವ ಭಂಗಿಯೊಳಗೆ ನಿಲ್ಲಿಸಿದ್ದ. "ಅರೇ ಸಾಕು ಭಾಳ ಹೊತ್ತಾಯ್ತು ಹುಡುಗ ಬಗ್ಗಿರುವುದು ತಗೋಬಾರದ" ಪಂತುಬುಕ್ಯಾ ಹೇಳಿದ. "ಅರೇಮಾಮ ನೀ ಸುಮ್ಕಿರು ನಮ್ಮ ಹುಡುಗಿಯನ್ನ ಆಳಲಿಕ್ಕೆ ಅವನ ಸೊಂಟದೊಳಗೆ ಏಟಾರು ಕಸು ಐತೆನೋಡುವ". ಚವ್ಹಾಣ್ ಹುಡುಗರು ಸಮರ್ಥಿಸಿಕೊಂಡರು. ಮೀಟುಬುಕ್ಯಾ ನೋಡೋವರಿಗೆ ನೋಡಿ ಅವನ ಕೈಗೆ ಚರಗಿಯನ್ನು ಹಿಡಿಸಿದವನೆ ವಾಪಾಸಾದ. "ಎ.ಎ.ಎ. ಇದು ಮೋಸ, ಹುಡುಗ ಸೋತ" ಹೀಯಾಳಿಸಿದರು. ಅವನ ಭಾವ ಮೋಳ ಲೇರಿಯಾ ಆಗಿದ್ದರಿಂದ, ಅವರ ರಕ್ಷಣೆಗೆ ಹೋದ "ಆಯ್ತು ಬಿಡ್ರಪ್ಪ ನೀವೇ ಗೆದ್ದರಿ. ಕತ್ಲಾಗುತ್ತೆ ಇವತ್ತಿನ ಕಾರ್ಯಮುಗಿಸಬೇಕಲ್ಲ ನಡಿರಿ ವೆತಡೂನ ಹೊರಗ ತಗಿಯೋಣ, ಇನ್ನೂ ಸಾಡಿತಾಣ ಬೇಕಂತ" ಒತ್ತಾಯಿಸಿದ. " ನೀನ ಬಿಡಪ್ಪ ಅಳಿಯನ ಪರವಾಗಿ ಮಾತಾಡ್ತೀಯ, ಏಯ್ ಎಲೆ ಅಡಿಕೆ ಲೇರಿಯಾನೆ ಕೊಡಬೇಕಪ್ಪ." ಬೇಡಿಕೆಯನ್ನ ಮುಂದಿಟ್ಟರು. "ಆಯ್ತು ಕಣ್ಣಪ್ಪ ನಾನೆ ಕೊಡ್ತೀನಿ ಬರ್‍ರಯ್ಯ" ಅಂತೇಳಿ ಮುಂದಿನ ಕಾರ್ಯಕ್ಕೆ ಎಲ್ಲರನ್ನೂ ಎಬ್ಬಿಸಿದ.

ಹುಡುಗಿಯ ಪೇಟೆಯಾ, ಕಾಂಚಳಿ, ಚೂಡೋ, ಭುರಿಯಾ ಗುಗರಿ ಟೊಪಲಿ ಎಲ್ಲವುಗಳನ್ನು ಒಂದು ದುಪಟಿಯಲ್ಲಿ ಹಾಕಿ ಗಂಟುಕಟ್ಟಿ ಮೋಳ ಎತ್ಕೊಂಡಿದ್ದ. ಮೀಟು ಬುಕ್ಯಾ ಕೊರಳೊಳಗೆ ಮೂಂಗೇರ ಸರ, ಬೆರಳಿಗೆ ವಂಕಿ ಉಂಗುರ ಹಾಕ್ಕೊಂಡು ಕೈಯೊಳಗೆ ಕಟಾರಿಯನ್ನು ಹಿಡಿದಿದ್ದ. ಮೋಳ ಮಾತ್ರ ಮೀಟುನ ಹಿಂದೆ ಕೋಲ್ತ್ರಿ ಹಿಡಿದು ಕೊಂಡೆ ಸುತ್ತಾತ್ತಿದ್ದ.

ಮೀಟು ಕೈಯೊಳಗೆ ಕಟಾರಿಯನ್ನು ಹಿಡಿದುಕೊಂಡೆ ಹೊರಗಡೆ ಬಂದವನು ಅವನ ಗೆಳೆಯ ಚವ್ಹಾಣ್ ಕೈಗೆ ಕೊಟ್ಟು ಆಟು ದೂರ ನಡೆದ. ಯಾರೋ ಹಿರಿಯೊರಬ್ಬರು ಧಾವಿಸಿ. "ಲೇತಮ್ಮ, ಈ ಕಟಾರಿಯ ಮಹತ್ವ ಗೊತ್ತೇನಲಾ ನಿನಗೆ" ಕೇಳಿದ. ಅದಕ್ಕೆ ಆಗಲೇ ನೂರು ವರ್ಷಗಳ ಹಳೆಯ ಇತಿಹಾಸ ಇತ್ತು. "ಇಲ್ಲಾಮಾಮ ಗೊತ್ತಿಲ್ಲಾ" ಮೀಟು ಪ್ರಾಮಾಣಿಕವಾಗಿಯೇ ಒಪ್ಪಿಕೊಂಡ. "ಅಯ್ಯೋ ಶಿವನ ಇದರ ಮಹಿಮೆ ತಿಳಿದಿಲ್ಲಾ ನಿನಗ. ಹೇಳ್ತೀನಿ ಕೇಳ ಹಂಗಾರ. ಹಿಂದಕ್ಕ ಪೃಥ್ವಿರಾಜ ಚವ್ಹಾಣ್, ಸಂಯುಕ್ತಳ ಪ್ರೀತಿಸುತ್ತಿದ್ದ. ಅವಳೂ ಕೂಡ ಅವನನ್ನು ಅಷ್ಟೇ ಗಾಢವಾಗಿ ಪ್ರೀತಿಸುತ್ತಿದ್ದಳು ಏನಪ್ಪ. ಆತ ಒಂದು ಗಳಿಗೆ ನಿಂತ, "ಹೂಂ, ಮುಂದ" ಕೇಳಿದ ಮಿಟು. "ಮುಂದೇನು, ಅವಳ ಮನೆಯವರಿಗೂ, ಇವರಿಗೂ ಆಗ್ತಾನೇ ಇರ್ಲಿಲ್ಲಾ ಇಬ್ಬರು ರಜಪೂತರೆ, ಆದರೆ ಒಬ್ಬರ ಕಂಡರೆ ಒಬ್ಬರಿಗೆ ಹಾವು ಮುಂಗುಸಿ ಹಾಗೆ. ಅದಕ್ಕೆ ಅವರ ರಾಜ್ಯಕ್ಕೆ ವಿವಾಹದ ಆಹ್ವಾನಪತ್ರ ಹೋಗಿರಲಿಲ್ಲ. ಪೃಥ್ವಿರಾಜ್ ಸುಮ್ಮನೆ ಬಿಟ್ಟಾನೆಯೇ. ಮಾರುವೇಷದಲ್ಲಿ ಮದುವೆಗೆ ಹೋಗಿ ಸಂಯುಕ್ತಳನ್ನ ಮದುವೆಯಲ್ಲಿ ಭಾಗವಹಿಸಿ ಆರು ಸುತ್ತು ಅಗ್ನಿಯನ್ನ ಸುತ್ತಿ ಇನ್ನೇನು ಏಳನೇ ಸುತ್ತು ಆರಂಭಿಸಬೇಕು ಅವಳನ್ನು ಎತ್ಕೊಂಡು ಪರಾರಿಯಾಗ್ತಾನೆ. ಮದುವೆ ಗಂಡು ಅಸಹಾಯಕನಾಗಿ ಬಾಯಿ ಬಾಯಿ ಬಿಡ್ತವ್ನೆ. ಆವತ್ತೆ ಕೊನೆ ಬಂಜಾರರು ಮದುವೆ ಆಗಬೇಕಾದ್ರೆ ಅವರ ಸ್ವಯಂ ರಕ್ಷಣೆಗೆ ಈ ಕಟಾರಿಯನ್ನು ಹಿಡಿದುಕೊಂಡಿರುವುದು ಕಡ್ಡಾಯವಾಗಿಹೋತು". ಅಂದ ಆ ಹಿರಿಯ, "ಓ ಹೀಗೋ ಹಂಗಾರ ಕೊಡಪ್ಪ ಇಲ್ಲಿ ಮದ್ಲು ಅಂತೇಳಿ ಕಠಾರಿಯನ್ನು ಕೈಯಲ್ಲಿ ಹಿಡ್ಕೊಂಡ. "ಏನಬೇಕಾರು ಕೈಬಿಡು ಇದನ್ನ ಮಾತ್ರ ಬಿಡಬೇಡಮಗ" ಸಣ್ಣದೊಂದು ಉಪದೇಶವೆ ನಡೆದುಹೋಯಿತು.

ಮದುಮಗ ಬಂದಾಗ ಆಗಲೇ ಕತ್ತಲಾಗಿತ್ತು. ಡೇರೆ ಹತ್ತಿರ ಹೆಚ್ಚು ಹುಡುಗಿಯರು ಇಲ್ಲದಕ್ಕೆ ಅವನು ಹುಡುಗಿಯರ ಬೊಯ್ಯಗಳದಿಂದ ತಪ್ಪಿಸಿಕೊಂಡಿದ್ದ. ಇಲ್ಲದಿದ್ದರೆ ಹುಡುಗಿಯರು ಚೆನ್ನಾಗಿಯೇ ಅವನನ್ನ ಬೋಯ್ಯುತ್ತಿದ್ದರು. ಅವರ ಡೇರೆಗೆ ನೇರವಾಗಿ ಹೋಗಿ ಊಟದ ಶಾಸ್ತ್ರ ಅದ ಮೇಲೆ ಮೀಟುನನ್ನ ಒಳಗೆ ತೆಗೆದುಕೊಂಡು ಒಂದು ತಿಂಗಳ ಮದುವೆ ಶಾಸ್ತ್ರಕ್ಕೆ ಉಳಿಸಿಕೊಂಡರು. ಉಳಿದವರು ಕೆಲಮಂದಿ ಉಳಿದು ಮಾರನೇಯ ದಿನ ಮುಂಜಾನೆ ಬಹಳಷ್ಟು ಮಂದಿ ವಾಪಾಸಾಗಿದ್ದರು. ಭಂಗಿ ಅತ್ಯಂತ ಶ್ರೀಮಂತನಾಗಿದ್ದರಿಂದ ಮದುವೆಯನ್ನು ತಿಂಗಳಕಾಲ ಮಾಡಿದ.

ಸೈನ್ಯ ದಕ್ಷಿಣದ ಗಡಿ ಭಾಗಕ್ಕೆ ಬಂದಾಗ ಅನೇಕ ಸಮಸ್ಯೆಗಳು ಪ್ರತಿರೋಧಗಳು ಎದುರಾದವು ಅವೆಲ್ಲವನ್ನು ಆಸೀಫ್‌ಖಾನ್ ಬುದ್ದಿವಂತಿಕೆಯಿಂದ ನಿಭಾಯಿಸಿದ. ಅವನ ಜೊತೆಗೆ ಜಂಗಿ-ಭಂಗಿರೊಂದಿಗೆ ಅವರ ಅಳಿಯ ಮೀಟುಬುಕ್ಯಾ ಕೂಡ ಇದ್ದ. ಲದೇಣಿಯಾದ ಬಹುತೇಕ ಜವಾಬ್ದಾರಿಯನ್ನು ಮೀಟು ಮತ್ತೆ ಥಾವುನ ಮೇಲೆ ಬಿಟ್ಟು ಅವರು ಸಾಕಷ್ಟು ಸಮಯ ಆಸೀಫ್‌ಖಾನ್ ಜೊತೆಗೆ ಕಳೆಯತೊಡಗಿದರು. ಸೈನ್ಯದ ಕೆಲವು ಮುಖ್ಯ ವಿಷಯಗಳಲ್ಲಿ ಭಾಗವಹಿಸುತ್ತಿದ್ದರು. ದಕ್ಷಿಣದಲ್ಲಿ ಮರಾಠರು ಪ್ರಬಲರಾಗಿದ್ದರು. ವಿಜಯನಗರದ ಅರಸರು ಅಷ್ಟೇ ಪ್ರತಿರೋಧ ಒಡ್ಡುತ್ತಿದ್ದರು. ಆಸೀಫ್‌ಖಾನ್‌ಗೆ ದಕ್ಷಿಣದ ಮೇಲೆ ವಿಜಯ ಅಷ್ಟು ಸುಲಭವಾಗಿರಲಿಲ್ಲ. ಮಹಾರಾಷ್ಟ್ರದ ಗಡಿಗೆ ಬರುತ್ತಿರುವಾಗಲೇ ಹೋರಾಟ ತೀವ್ರವಾಗಿತ್ತು. ಸಣ್ಣ ಸಣ್ಣ ಸೈನ್ಯದ ತುಕಡಿಗಳಾಗಿ ಮರಾಠರು ಆಸೀಫ್‌ಖಾನ್‌ನ ಮೇಲೆ ಮುಗಿಬಿದ್ದಿದ್ದರು.

ಮೀಟು ಬುಕ್ಕಾ ಕರವಸ್‌ತೋಟ್ ವ್ಯವಹಾರವನ್ನು ಬಹಳ ಅಚ್ಚು ಕಟ್ಟಾಗಿ ನಿರ್ವಹಿಸತೊಡಗಿದ್ದ. ಅವನಿಗೆ ಸರಿಯಾದ ಸಲಹೆ ಸಹಾಕಾರವನ್ನ ಅವನ ಸಹೋದರ ಥಾವು ಮತ್ತೆ ಮಾವ ಮೋಳ ಆಗಾಗ ನೀಡುತ್ತಿದ್ದರು. ಸೈನ್ಯಕ್ಕೆ ಬೇಕಾದಷ್ಟು ಆಹಾರದ ಸರಕನ್ನು ಆಗಿಂದಾಗ್ಗೆ ಅವನು ಆಸೀಫ್‌ಖಾನ್‌ನ ಹುಕುಂ ಮೇರೆಗೆ ಆಸುಪಾಸಿನ ದೊಡ್ಡ ನಗರಗಳಿಂದ ಹೇರಿಕೊಂಡು ಬರತೊಡಗಿದ. ಒಮ್ಮೊಮ್ಮೆ ಆಸೀಫ್‌ಖಾನ್‌ನ ಜೊತೆಗೆ ನೇರವಾಗಿಯೇ ವ್ಯವಹರಿಸಬೇಕಾಗಿ ಬಂದಾಗ ಆತನ ಡೇರೆಗೆ ಹೋಗುತ್ತಿದ್ದ. ಬೂರ್ಕಾದ ನಡುವೆಯೂ ಸೈನಾಜ್‌ಖಾನ್ ಅವನನ್ನ ನೋಡದೆ ಇರುತ್ತಿರಲಿಲ್ಲ. ಅದೇ ಸಮಯಕ್ಕೆ ಸರಿಯಾಗಿ ಅವಳ ತಲೆಯೊಳಗೊಂದು ಕೆಟ್ಟ ವಿಚಾರ ಹೊಳೆಯಿತು. ಅವನನ್ನ ಹತ್ತಿರದಿಂದ ನೋಡಬೇಕು, ಮಾತಾಡಬೇಕೆಂದು. ಹೇಗಾದರೂ ಮಾಡಿ ಪ್ರತಿದಿನ ಮನೆಗೆ ಬೇಕಾದ ದಾಸ್ತಾನು ಹಾಕಲು ವಿಶೇಷವಾಗಿ ಮೀಟುನಿಗೆ ಹುಕುಂ ನೀಡುವಂತೆ ಅವಳ ಅಬ್ಬಾಜಾನ್‌ಗೆ ಹೇಳಿದಳು. ಮಾರನೇ ದಿನ ಮೀಟು ಆತನ ಬೆಟ್ಟಿಗೆ ಹೋದಾಗ ಆಸೀಫ್‌ಖಾನ್ ಮೀಟುಗೆ ವಿಷಯ ಹೇಳುವುದನ್ನು ಮರೆಯಲಿಲ್ಲ. "ನೋಡು ಮೀಟು ಇನ್ನೊಂದು ಜವಾಬ್ದಾರಿ ನಿಂದುಕೆ ಹೇಳ್ತಿದ್ದೀನಿ. ನಾಳೆಯಿಂದ ಮನೆಗೆ ಬೇಕಾಗುವ ದಾಸ್ತಾನು ಖುದ್ದಾಗಿ ನೀನೆ ಹಾಕಬೇಕು." ಅಪ್ಪಣೆ ಮಾಡಿದ. ಮೀಟುಗೆ ದೊಡ್ಡ ಗಂಡಾಂತರ ಕಾದಿರುವುದು ಖಾತ್ರಿಯಾಯಿತು. ಥಳಿಗೆ ಯೋಚನೆ ಮಾಡಿದ, "ಆಯ್ತು ಹುಕುಂ" ಅಂದವನೆ ಅವಳ ಮನಸ್ಸಿನೊಳಗೆ ಎದ್ದಿರುವ ಭೀಕರವಾದ ಅಲೆಗಳನ್ನ ಗಮನಿಸಿ ಅದರಿಂದ ತಪ್ಪಿಸಿಕೊಳ್ಳಲು ನೋಡಿದ.

ಆವತ್ತು ಸೈನಾಜ್‌ಖಾನ್ ಒಂದು ನಿರ್ಧಾರ ತೆಗೆದುಕೊಂಡಿದ್ದಳು. ಅವನು ಹೇಗಾದರು ತಮ್ಮ ಡೇರೆಗೆ ಸಮಾನು ತಲುಪಿಸಲು ಬಂದೇ ಬರ್ತಾನೆ ಹಾಗೆ ಅವನನ್ನ ಸುತ್ತಾಡಿಸಿಕೊಂಡು ಬರಲು ಕಾಡಿನ ಕಡೆಗೆ ಕರೆದುಕೊಂಡು ಹೋಗಬೇಕು, ಅಬ್ಬಹುಜೂರ್ ಅವನು ಅಂದ್ರೆ ಅನುಮಾನಪಡುವುದಿಲ್ಲ. ಮನಸ್ಸಿನೊಳಗೆ ಅವನ ಕುರಿತು ಏಳುತ್ತಿದ್ದ ತೀವ್ರ ಸೆಳೆತವನ್ನ ತಳ್ಳಿ ಹಾಕಲಾಗದೆ ಮುಂಜಾನೆ ಐದು ಗಂಟೆಗಾಗಲೆ ನಿದ್ದೆಗೆ ಹಾರಿಹೋಗಿ ಕನಸು ಮುತ್ತಿಕೊಂಡು ಹಾಸಿಗೆಯ ತುಂಬ ಹೊರಳಾಡುತ್ತಿದ್ದಳು. ಮೀಟು ಅವಳು ನಿದ್ದೆ ಮಾಡುತ್ತಿರುವಾಗಲೇ ಸಾಮಾನುಗಳನ್ನು ಕೊಟ್ಟು ಬರಬೇಕೆಂದು ನಿರ್ಧರಿಸಿ ಹೊತ್ತಾರೆ ಒಂದಿಬ್ಬರು ಅವನ ಕೈಕೆಳಗಿನ ಹುಡುಗರನ್ನ ಕರೆದುಕೊಂಡು ಸೀದಾ ಆಸೀಫ್‌ಖಾನ್‌ನ ಡೇರೆಗೆ ಸದ್ದುಮಾಡದಂತೆ ನಡೆದಿದ್ದ. ಸೈನಿಕನೊಬ್ಬ ಮೆಲುಧನಿಯಲ್ಲೇ ಅವನ ಜೊತೆಗೆ ವ್ಯವಹರಿಸುತ್ತಿರುವುದನ್ನು ಕೇಳಿದ ಸೈನಾಜ್, ಎದ್ದವಳೆ ತಾನೊಬ್ಬ ಸೇನಾಧಿಪತಿಯ ಮಗಳೆಂದು ಮರೆತು ಹೊರಗಡೆ ಓಡಿದಳು. "ಅರೇ ಆಪ್, ನಮಗೆ ಬೇಕೂಪ್ ಅಂದ್ಕೊಂಡ್ರ ಮಾಲೂಮಥ ಕೀ ನೀವು ಹೀಗೆ ಮಾಡ್ತಿರಂತ, ಬಾಯಿ ಮುಚ್ಕೊಂಡು ನನ್ನ ಕಾಡಿಗೆ ಕರ್ಕೊಂಡ ಹೋಗಿ, ಇಲ್ಲಾಂದ್ರೆ" ಪ್ರೀತಿಯಿಂದಲೇ ಅಧಿಕಾರ ಚಲಾಯಿಸಿದ್ಲು. ಅವನಿಗೆ ಎನೂ ಮಾಡಬೇಕಂತ ಹೊಳೆಯಲೇ ಇಲ್ಲ. ಮೌನವಾಗೆ ಅವಳ ಹಿಂದೆ ಹೆಜ್ಜೆ ಹಾಕಿದ್ದ. ಅವಳ ಪ್ರೀತಿಯ ಕುದುರೆ ಚಮೇಲಿಯನ್ನ ಕರೆದಳು. ಕುದುರೆ ಲಾಯದಿಂದ ಓಡಿಬಂದಿತು. "ಹೂಂ" ಅವನ ಕುದುರೆ ತರುವಂತೆ ಸನ್ನೆ ಮಾಡಿದಳು. ಅವರಿಬ್ಬರ ಕುದುರೆ ಬೆನ್ನಹತ್ತಿ ಸೈನಿಕರು ತಮ್ಮ ಕುದುರೆಗಳನ್ನ ಓಡಿಸಲು ಪ್ರಯತ್ನಿಸಿದರು. ದಟ್ಟ ಅಡವಿಯಲ್ಲಿ ಸೈನಾಜ್ ಮತ್ತು ಮೀಟು ಕುದುರೆಗಳು ಹೋದದ್ದು ತಿಳಿಯದ ಸೈನಿಕರು. ತಮಗೆ ಚಳ್ಳೆ ಹಣ್ಣು ತಿನಿಸಿ

ಅವನ ಜೊತೆಗೆ ಗೂಡಿಕಾಡಿನೊಳಗೆ ಎಲ್ಲೋ ಮರೆಯಾದರು? "ಕಂದಕ ಒಂದರ ನಡುವೆ ಬಂದಿದ್ದಳು. ಹೂಜೂರ್ ನನ್ನ ಇಲ್ಲಗೆ ಅವನ ಮಾತು ಮುಗಿದಿರಲಿಲ್ಲಾ ಅವನ ಮೇಲೆ ಆಕ್ರಮಣ ಮಾಡಿದ್ದಳು." ಮೇ ಶೇರನಿ ಹೂಂ, ಒಂದ ಸಲ ಮನಸ್ಸಿನ್ಯಾಗೆ ಅಂದ್ಕೊಂಡಿದ್ದನ್ನ ಮಾಡೇತೀರ್ತಿನಿ. ಸೈನ್ಯದಲೇ ಸುಂದರವಾಗಿರೋ ಮುಸ್ಲಿಂ ಯುವಕನ ಜೊತೆಗೆ ಜುಮ್ಮಕ ದಿನಾ ನನ್ನ ನಿಖಾ ಆಗೋಗಿದೆ. ಆದರೆ ಇಡೀ ಸೈನ್ಯದಲ್ಲೇ ಅತಿ ಸುಂದರವಾಗಿರೋ ನಿನ್ನ ಅನುಭವಿಸದಿದ್ದರೆ, ನಾಳೆ ನಾನು ಪ್ರೇತ ಆಗಬೇಕಾಗುತ್ತೆ" ಅವನಿಗೆ ಮಾತಾಡಲಿಕ್ಕೆ ಅವಕಾಶವನ್ನೇ ನೀಡಲಿಲ್ಲ. "ಹೂಜೂರ್" "ನೋಡು ಮೀಟು ಈಗ ಯಾರಿಗೆ ಗೊತ್ತಿಲ್ಲದೆ ನನ್ನ ಜೊತೆ ಬಂದಿದ್ದೀಯಾ, ಈಗ ನಾನು ನಿನ್ನ ಕಾಪಾಡಬಹುದು, ಇಲ್ಲ ತಲೆತಗಿಸಬಹುದು ಯೋಚನೆಮಾಡು," ಅವನಿಗೆ ಬದುಕು ಅನಿವಾರ್ಯವಾಗಿತ್ತು ಮನಸ್ಸಿಲ್ಲದೆ ಅವಳ ಹಠಮಾರಿತನಕ್ಕೆ ಸೋಲಲೇಬೇಕಾಯ್ತು.

ವಾಪಾಸು ಡೇರೆಗೆ ಬಂದಾಗ ಸೈನಾಜ್‌ಖಾನ್ ಬಹಳ ಖುಷಿಯಲ್ಲಿದ್ದಳು. ಆಸೀಫ್‌ಖಾನ್ ಇನ್ನೂ ಎದ್ದಿರಲಿಲ್ಲ ರಾತ್ರಿ ಬಹಳ ಹೊತ್ತಿನವರೆಗೆ ಸೈನ್ಯದ ದಾರಿಯ ಕುರಿತು ಮೀಟುನ ಮಾವ ಭಂಗಿ ನಾಯ್ಕ ಹತ್ತಿರ ಚರ್ಚೆಮಾಡುತ್ತಿದ್ದ. ಅವನು ಎದ್ದಾಗ ಎಲ್ಲವೂ ಯತಾವತ್ತಾಗಿತ್ತು. ಮಗಳ ನಿಖಾದ ಜವಾಬ್ದಾರಿಯನ್ನು ಕೂಡ ಮೀಟು ಬುಕ್ಯಾನಿಗೆ ನೀಡಿದ. ಮೀಟು ಆಸೀಫ್‌ಖಾನ್ ಎದುರಿಗೆ ಅಡ್ಡಾಡಲು ಹಿಂಜರಿಯತೊಡಗಿದ. ಎಲ್ಲೋ ಒಂದು ಕಡೆ ತನ್ನ ಹೆಂಡತಿಗೆ ತನ್ನ ನಂಬಿದ ಆಸೀಫ್‌ಖಾನ್‌ಗೆ ಮೋಸಮಾಡ್ತಿರುವ ಹಾಗೆ ಅನಿಸಿತು. ಆದರೆ ಇದನ್ನ ಅವನು ಬಯಸಿ ಮಾಡಿದ್ದಲ್ಲ. ಯಾರದೋ ಸಂಚಿಗೆ ಅವನು ಬಲಿಯಾಗಿದ್ದ. ಅದು ಅಲ್ಲದೆ ಎಷ್ಟೋ ಬಂಜಾರ ಹುಡುಗಿಯರು ಇವರ ಕಾಟಕ್ಕೆ ಜೀವಕಳೆದುಕೊಂಡಿದ್ದರು. ಇವನೂ ಅವರ ಹಾದಿ ಹಿಡಿಯದೆ ಅವಳ ತಾಳಕ್ಕೆ ಕುಣಿದು ಹುಟ್ಟಲಿರುವ ತನ್ನ ಮಗನ ಭವಿಷ್ಯಕ್ಕಾಗಿ ಬದುಕಲೇಬೇಕಾಗಿತ್ತು. ಅವನೇನು ಬಯಸಿ ಮಾಡಿದ ಅಪರಾಧವಲ್ಲ ಇದರಲ್ಲಿ ಅವಳೇ ಮುಖ್ಯ ಸೂತ್ರಧಾರಿಯಾಗಿದ್ದಳು. ನಿಖಾದ ತಯಾರಿಯೊಳಗೆ ಅನೇಕ ಸಂದರ್ಭದಲ್ಲಿ ಅವಳನ್ನ ಸಂದಿಸುವ ಪ್ರಮೇಯಗಳು ಬಂದಾಗಲೆಲ್ಲಾ ಅವನನ್ನ ಬಳಸಿ ಕೊಳ್ಳುವುದನ್ನು ಬಿಡಲಿಲ್ಲಾ. ಅವಳ ಸಖಿ ರಹಮತುನ್ನೀಸಾಳಿಗೆ ಮಾತ್ರ ಸೈನಾಜಳ ಸೈತಾನಿ ಹರ್ಕತ್ತಿನ ಬಗ್ಗೆ ತಿಳಿದಿತ್ತು. ಸೇನಾಧಿಪತಿಯ ಮಗಳು ಮಾತಾಡಿದರೆ ಬಾಯಿಯಲ್ಲಿ ನಾಲಿಗೆ ಇರುವುದಿಲ್ಲ. ಶಿರದ ಮೇಲೆ ತಲೇನೂ ಇರುವುದಿಲ್ಲವೆಂದು ಅವಳಿಗೆ ಗೊತ್ತಿತ್ತು ಹಾಗಾಗಿಯೇ ಅವಳು ಬಡವ ನೀ ಮಡಗದಂಗಿರು ಅನ್ನೋದನ್ನ ಚಾಚುತಪ್ಪದೆ ಆಚರಿಸುತ್ತಿದ್ದಳು. ಮೀಟುನ ಸಂಕಷ್ಟವನ್ನ ಅರ್ಥಮಾಡಿಕೊಂಡಿದ್ದ ಕಿರಹಮತ್ತುನ್ನಿಸಾ "ಭಾಯಿಜಾನ್, ಇಸ್‌ಮೇ ಆಪ್ ಕಿ ಕೋಯಿ ಗಲತಿ ನಹಿ ಹೈ, ಕೌಂಯ್ ಖಾಮ್ ಖಾಮ್‌ಗೆ ಪರಿಶಾನ್ ಹೋರಹೆಹೋ ದೋ ದಿನ್ ಮೆ ಶಾದಿ ಹೋ ಜಾಯೇಗಿ ಬಾದ ಮೆ ಅಲ್ಲಾ ಜಾನೆ" ಅವನ ಮನಸ್ಸನ್ನ ಹಗುರ ಗೊಳಿಸಲು ಪ್ರಯತ್ನಿಸಿದಳು. "ನಹಿ ಬೆಹನ್, ಬಡೆಲೊಗ್ ಆಗಜೈಸೆ ಹೊತೆ ಹೈ ಪಾಸ್ ಜಾಯೆಂಗೆ ತೋ ಹಮಿ ಜಲ್ ಜಾಯೆಂಗೆ, ಕ್ಯಾಕರೂ ಸಮಜಮೇ ನಹಿ ಆರಹಾಹೈ" ಅವನ ಮಾತು ಬಾಯಲ್ಲೇ ಇತ್ತು ಶೃಂಗಾರಗೊಂಡು ಅಪ್ಸರೆಯಾಗಿ ಬಂದ ಸೈನಾಜ್ ಅವಳನ್ನ ಹೊರ ಹೋಗುವಂತೆ ಹೇಳಿದಳು.

ನಿಖ ಮುಗಿದು ಹೋಯ್ತು. ಆದರೆ ಸೈನಾಜಳ ಎದೆಯೊಳಗೆ ಅವನೆ ತುಂಬಿಕೊಂಡಿದ್ದ. ಅವನು ಆವತ್ತು ರಾತ್ರಿ ಏನಾಗುವುದೆಂದು ಆತಂಕದಲ್ಲಿದ್ದ. ರಾತ್ರಿ ಭೋಜನ ಕೂಟದ ಜವಾಬ್ದಾರಿ ಮೀಟುವಹಿಸಿದ್ದ. ಅವಳ ಮೊದಲರಾತ್ರಿಗೂ ಶಯನಗಾರವನ್ನು ಹೂವಿನಿಂದ ಅವನೆ ಶೃಂಗಾರಮಾಡಿದ್ದ. ಅವಳಿಗಿಂತ ಕೊಂಚ ಹೆಚ್ಚು ವಯಸ್ಸಿನ ಲತೀಫ್‌ಖಾನ್ ತೆರೆಯಮರೆಯಲ್ಲಿ ನಡೆಯುತ್ತಿರುವ ಹೆಂಡತಿಯ ವ್ಯವಹಾರವನ್ನು ಅರಿಯದಾಗಿದ್ದ. ಅವನು ಇಪ್ಪತ್ನಾಲ್ಕು ಗಂಟೆ ಸೈನ್ಯದ ತುಕುಡಿಯ ಮುಂಚೂಣಿಯಲ್ಲಿರುತ್ತಿದ್ದರಿಂದ ಇದೆಲ್ಲಾ ಅವನಿಗೆ ತಿಳಿಯಲೇ ಇಲ್ಲ. ಆ ರಾತ್ರಿ ಮಾತ್ರ ಮೀಟುನ ಜೀವನ ಇರುವವರೆಗೂ ಅವನ ನೆನಪಿನಾಳದಿಂದ ಮರೆಯಾಗದಂತಹದಿತ್ತು. ಅವಳ ವೈಯುಕ್ತಿಕ ಜವಾಬ್ದಾರಿಯನ್ನು ಅವಳಪ್ಪನ ಜವಾಬ್ದಾರಿಯನ್ನು ಅವನೇ ನಿಭಾಯಿಸುತ್ತಿದ್ದರಿಂದ ಅವನು ಅದರಲ್ಲೇ ಕಳೆದುಹೋಗಿದ್ದ.

ಮೀಟು ಎರಡೆರಡು ಖುಷಿಯನ್ನ ಒಟ್ಟಿಗೆ ಕಂಡಿದ್ದ. ಮೊದಲನೇಯದು ಅವನೀಗ ತಂದೆಯಾಗಿದ್ದ. ಲಚ್ಮಿ ದಷ್ಟಪುಷ್ಟವಾದ ಗಂಡುಮಗುವಿಗೆ ಜನ್ಮನೀಡಿದ್ದಳು. ಅವರ ಡೇರಿಯಿಂದ ಕಂಚಿನ ಗಂಗಾಳವನ್ನ ಬಾರಿಸಿ ಗಂಡುಹುಟ್ಟಿದ ಖುಷಿಯನ್ನ ಜಗಜಾಹಿರಾತು ಮಾಡಲಾಯ್ತು. ಪಂತುಬುಕ್ಯಾ ದಾದ ಆದ್ರು, ಸಾಮ್ಕಿ ಡೋಕ್ರಿ ದಾದಿ ಯಾದ್ಲು. ಭಂಗಿ ನಾನ ಆದ, ಮೀಟು ಬುಕ್ಯಾ ಕರಮತೋಟ ತಂದೆಯಾದ. ಎಲ್ಲಾ ಡೇರೆಗಳಲ್ಲಿ ಸುದ್ದಿ ಅದಾಗಲೇ ತಲುಪಿತ್ತು. ಕೈಗೆ ಸಿಕ್ಕಿದ್ದು ಬೆಲ್ಲದ ಚೀಲವನ್ನ ಪಂತುನಾಯ್ಕ ಒಂದು ಕಡೆಯಿಂದ ಹಂಚಲು ಕಳಿಸಿದ್ದರೆ ಜಂಗಿ–ಭಂಗಿ ಚೀಲಗಟ್ಟಲೆ ಬೆಲ್ಲ ಮೀಟಾಯಿ ಕೈಗೆ ಸಿಕ್ಕ ಹಣವನ್ನೆಲ್ಲಾ ಹಂಚತೊಡಗಿದರು. ಇಡೀ ಸೈನ್ಯಕ್ಕೆ ಮೀಟಾಯಿ ಕೊಡಲಾಯ್ತು. ಆಸೀಫ್‌ಖಾನ್ ಪರಿವಾರಕ್ಕೆ ಮೀಟಾಯಿಯ ಬುಟ್ಟಿಯನ್ನ ತಗೊಂಡು ಮೀಟು, ಜಂಗಿ ಭಂಗಿ ಸಮೇತರಾಗಿಯೇ ಹೊರಟ್ಟಿದ್ದರು. “ಅರೆ ನಾನ ಬನಗಯೇ ಜಂಗಿ ಭಂಗಿ ದೋನೋ ಭಾಯಿ, ಬದಾಯ” ಆಸೀಫ್‌ಖಾನ್ ಅವರಿಗೆ ಹರಸಿದ. “ಬರಬೇಕು, ಮೀಟು, ಕ್ಯಾ ಭೂಮಿ ಮೇಲೆ ನಹಿ ಹೈ, ಯಾಕೆಂದ್ರೆ ಬಾಪ್ ಆಗಿಬಿಟ್ರಿ ಈಗ” ಅವನಿಗೂ ಹರಸಿದ. ಅವರು ಮಾತಾಡುತ್ತಿರುವಾಗಲೇ ಸೈನಾಜ್ ಖಾನ್‌ಳಿಂದ ಮಿಟುಗೆ ಕರೆಬಂತು. “ಜಾಯಿಯೆ, ನಮಗಿಂತ ಬಹಳ ನಮ್ದು ಮಗಳಿಗೆ ಖಿಷಿ ಆಗ್ಯೆತೆ”. ಆತನೆ ಕಳುಹಿಸಿದ. ಮೀಟು ಏನೋ ಹೊಸದೊಂದು ಭಾವನೆಯಿಂದ ಒಳಗೆ ಹೊರಟ. ಅವಳು ಹುಸಿ ಕೋಪದಿಂದಲೇ ಅವನನ್ನ ಆಹ್ವಾನಿಸಿದ್ದಳು. “ನಂಗೆ ಖುಷಿಯಿಲ್ಲಾ, ನನಗಿಂತ ಮುದ್ಲು ಲಚ್ಮಿನೆ ತಾಯಿ ಆದ್ಲು” ಅವನ ಕಡೆಗೆ ನೋಡಿದ್ಲು, ಅವಳ ದ್ವಂದ್ವವನ್ನ ಅರಿಯದೆ ಮುಗಿಲ ಕಡೆಗೆ ನೋಡತೊಡಗಿದ. “ಅರೇ ಬುದ್ದು ಮೆ ಯಾಕೆ ಖಿಷಿಯಾಗಿಲ್ಲ, ಬಹಳ ಖುಷಿ ಆಗಿದ್ದೀನಿ, ನೀನು ಬಾಪ್ ಆದ್ರೆ ನಾನು ಖುಷಿಯಾಗಕಿಲ್ವಾ” ತುಟಿಬಿಚ್ಚಿ ನಕ್ಕಳು. ಮೀಟುಗೆ ಮುಂದಾಗಬಹುದಾದ ಅನಾಹುತದ ಅಂದಾಜು ಇಲ್ಲದಾಗಿತ್ತು. ಸೈನ್ಯ ಸಮೇತ ಆಸೀಫ್‌ಖಾನ್ ದಂಪತಿಗಳು, ಸೂಫೀ ದರ್ಗಾಕೆ ಹೊರಟಿದ್ದರಿಂದ ಯಾರೊಬ್ಬರು ಇದ್ದ ಸೂಚನೆ ಇತ್ತು. ಒಂದಿಷ್ಟು ಸೈನಿಕರು ಡೇರೆ ಕಾಯುತ್ತಿದ್ದರು. ದಾಸಿಯನ್ನ ಕರೆದು ಹಮ್ ಕೋ ಆರಾಮ ಕೀ ಜರರೂತ ಹೈ ಅಂದರ್ ಮತ್ ಛೋಡನಾ” ಹುಕುಂ ಮಾಡಿದಳು. “ಜಿ ಹೂಜೂರ್” ದಾಸಿ ಬಾಗಿಲ ಪರದೆಯನ್ನ ಭದ್ರವಾಗಿಯೇ ಮುಚ್ಚಿ ಹೊರನಡೆದಳು. ಅವನ ಜೊತೆಗೆ ಕಳಿಯುವ ಪ್ರತಿಕ್ಷಣಗಳು ಅವಳಿಗೆ ಅವಿಸ್ಮರಣೀಯವಾಗಿದ್ದವು. ಮೀಟು ಹೆದರಿದ್ದ ಯಾರ ವಿರುದ್ದ ಜೀವನ ಪೂರ್ತಿ

ಹೋರಾಡುತ್ತಲೇ ಬಂದಿದ್ದನೋ ಅವರ ಜೊತೆಗೆ ಈ ರೀತಿಯ ಸಲಿಗೆ, ಆದರೆ ಅವನು ಅಸಾಹಯಕನಾಗಿದ್ದ. ಅವನ ಆಲೋಚನೆಯನ್ನು ಅರಿತ ಅವಳು, "ಏನು ಭಾಳ ಆಲೋಚನೆ ಮಾಡ್ದಂಗ ಐತೆ?" ಕೇಳಿದಳು. ಸತ್ಯವನ್ನು ಹೇಳಬೇಕೆಂದು ಬಾಯಿ ತೆರೆದ ಆದರೆ ಅದು ಮುಂದೆ ಯಾವ ರೂಪವನ್ನು ತಳೆಯುವುದೋ ಎಂದು ಹೆದರಿದವನೆ ಅವಳನ್ನು ಎಳೆದುಕೊಂಡು ಬಿಗಿಯಾಗಿ ಅಪ್ಪಿಕೊಂಡ "ಹಾಂ ಹಲ್ಲು, ನಾನು ತಾಯಿ ಆಗುವವಳಿದ್ದೇನೆ, ಅವನಿಗೆ ತಲೆತಿರುಗಿ ದಂಗಾಯ್ತು. "ಕ್ಯಾ!, ನಿಜ ಹೇಳ್ತಿದ್ದಿಯಾತಾನೆ" ಹುಬ್ಬೇರಿಸಿದ "ನಾ ಯಾಕೆ ಸುಳ್ಳು ಹೇಳಲಿ, ಇದು ನಿನ್ನ ಮಗು" ಅವನ ಮುಖ ನೋಡತೊಡಗಿದಳು. ಮುಖದಲ್ಲಿ ಮೂಡುತ್ತಿದ್ದ ಸಂತೋಷದ ಬಣ್ಣದ ಗೆರೆಗಳು ಅವಳ ಎದೆಯನ್ನ ತಟ್ಟಿ ಎಚ್ಚರಗೊಳಿಸಿದ್ದವು. ರಾತ್ರಿ ಬಹಳ ಹೊತ್ತಿನವರೆಗೂ ಅವಳ ಜೊತೆಗಿದ್ದು ಮುಂಜಾನೆ ಯಾಗುತ್ತಿದ್ದಂತೆ, ಡೇರೆಯಿಂದ ಹೊರಬಿದ್ದ, ಈಗ ಅವರಿಬ್ಬರು ಒಬ್ಬರನೊಬ್ಬರು ಬಿಡದ ಆವಸ್ಥೆಯನ್ನು ತಲುಪಿದ್ದರು. ಸೈನಾಜಳಿಗೆ ತನ್ನ ಉದರದಲ್ಲಿ ಬೆಳೆಯುತ್ತಿರುವ ಮಗು ಗಂಡಾಗಬೇಕು, ಅದು ಮೀಟುಬುಕ್ಯಾ ಕರಮ್‌ತೋಟ್‌ನಂತೆಯೇ ಶೌರ್ಯವಂತ, ಧೈರ್ಯವಂತನಾಗಿರಬೇಕೆಂಬ ಬಯಕೆ. ಮೀಟು ಲಚ್ಮಿ ಮತ್ತು ಸೈನಾಜಳ ಸೌಂದರ್ಯದ ಸೆಳೆತಗಳಲ್ಲಿ ಕಳದು ಹೋಗಿದ್ದ. ಈ ಎರಡೂ ಸೌಂದರ್ಯಗಳಲ್ಲಿ ಒಂದನ್ನು ಆಯ್ಕೆಮಾಡಿಕೊಳ್ಳಲು ಆಗದ ಸ್ಥಿತಿಯನ್ನು ತಲುಪಿದ್ದ, ಈ ಪರಿಸ್ಥಿತಿ ಖಾನ್ ಸಾಹೇಬರಿಗಾಗಲಿ, ತನ್ನ ಮಾವಂದರಿಗೆ ತಲುಪಿದರು ದೊಡ್ಡ ಗಂಡಾಂತರ ಜರುಗುವುದರಲ್ಲಿ ಸಂಶಯವೇ ಇಲ್ಲ. ಒಮ್ಮೊಮ್ಮೆ ವಿವಶನಾಗಿ ಬಿಡುತ್ತಿದ್ದ. ಖಾನ್ ಸಾಹೇಬರ ದಂಡಿನಿಂದ ಸ್ವಲ್ಪ ಬೇಗನೆ ತಮ್ಮ ಡೇರೆ ಕಡೆಗೆ ಮರಳಿದ. ಮೀಟುನ ಮಾವ ಭಗನ್ಯನಾಯ್ಕು ತನ್ನ ಖಾಸ ಸೈನ್ಯದೊಂದಿಗೆ ಪೂರ್ವಾಭಿಮುಖವಾಗಿ ಹೊರಟಿದ್ದ. ಆದರೆ ಖಾನ್‌ಸಾಬ್ ಮುಂದುವರೆಯುತ್ತಲೆ ಹೋದಂತೆ ಅವರಿಗೆ ಕಾಡಿನ ನಡುವೆ ಕೆಲವು ಪ್ರದೇಶಗಳು ಕಂಡವು ಅಲ್ಲಿಯೇ ಬೀಡುಬಿಟ್ಟು ಅಲ್ಲಿಯ ಜನರನ್ನ ವಿಚಾರಣೆಗೆ ಒಳಪಡಿಸಲಾಯಿತು. ಅವರಿಂದ ಅನೇಕ ವಿಷಯುಗಳನ್ನು ಸಂಗ್ರಹಿಸಿದ ಖಾನ್‌ಸಾಹೇಬ ದಕ್ಷಿಣ ಇನ್ನೇನು ತನ್ನ ಕೈಗೆಟುಕಿದಂತೆ, ವಿಜಯನಗರ, ಹೊಯ್ಸಳ, ಹೈದ್ರಾಬಾದ್, ಕೇರಳ, ತಂಜಾವೂರು ಎಲ್ಲಾ ಪ್ರದೇಶಗಳ ಆಕ್ರಮಣದ ಸಾಧ್ಯತೆಗಳನ್ನು ತಾಳೆ ಹಾಕತೊಡಗಿದ.

ವಾಪಾಸು ಹೊರಟಿದ್ದ ಭಗನ್ಯನಾಯ್ಕ ದಟ್ಟ ಅಡವಿಯಲ್ಲಿ ದಾರಿಯನ್ನ ಮರೆತು ಯಾವೊದೋ ದಟ್ಟ ಅರಣ್ಯದೊಳಗೆ ಪ್ರವೇಶಮಾಡಿಬಿಟ್ಟಿದ್ದರಿಂದ ಇಡೀ ರಾತ್ರಿ ಅಲ್ಲೇ ಸುತ್ತಾಡತೊಡಗಿದ್ದರು. ಅಡವಿಯೊಳಗೆ ಸಿಕ್ಕಿದ ಕೆಲವು ಹಣ್ಣುಗಳನ್ನು ತಿಂದು ರಾತ್ರಿ ಕಳೆಯಲು ಆಲೋಚನೆಮಾಡಿದ ಭಂಗಿ ಯಾವುದೋ ಬಂಡೆಯ ಕೆಳಗೆ ತಂಗುವುದಕ್ಕೆ ಸೈನಿಕರನ್ನ ತಯಾರಿ ಮಾಡುವಂತೆ ಅಪ್ಪಣೆಮಾಡಿದ್ದ. ನಾಲ್ಕು ಹೆಜ್ಜೆ ಬಂಡೆಯ ಕಡೆಗೆ ಕಾಲಿಟ್ಟಿದ್ದ. ಬಂಡೆಯ ಮೇಲೆ ಆಹಾರಕ್ಕೆಂದು ಹೊಂಚು ಹಾಕಿದ್ದ ಹುಲಿಯೊಂದು ನೇರವಾಗಿ ಅವನ ಮೇಲೆ ಎರಗಿತ್ತು. ಆತ ಜೋರಾಗಿ, "ಬರ್ರೋಯಪ್ಪ ಸತ್ತೆನಾನು" ಕೂಗಿದ ತಂಗಲು ತಯಾರಿ ನಡೆಸಿದ್ದ ಸೈನಿಕರು ಓಡಿಬಂದು ನೋಡಿದರೆ ಹುಲಿ ಅವನನ್ನ ಗಾಯಗೊಳಿಸಿತ್ತು. ಸೈನಿಕರು ತಮ್ಮ ಕೈಯಲ್ಲಿದ್ದ ಪಂಜಿನಿಂದ ಹುಲಿಯನ್ನ ಹೆದರಿಸಿ ಓಡಿಸಿದವರೆ, "ಹುಲಿ ಮನುಷ್ಯರ ರಕ್ತದ ರುಚಿ ನೋಡಿದೆ ನಮ್ಮನ್ನ ಉಳಿಸೋದಿಲ್ಲ ನಡಿರಿ" ಅಂದವರೆ ಪ್ರಯಾಸ ಪಟ್ಟು ಭಗನ್ಯನಾಯ್ಕನ ಗಾಯಕ್ಕೆ ಅರವಿಯನ್ನ ಕಟ್ಟಿ ಕುದುರೆಯ ಮೇಲೆ ಕೂಡಿಸಿಕೊಂಡು ಹೊರಟರು. ಕಾಡಲ್ಲಿ ಅಲೆದಾಡಿ

ಬೆಳಗಾ ಮುಂಜಾನೆ ಅವರ ಡೇರೆಗಳಿರುವ ದಾರಿ ಸಿಕ್ಕಿದ್ದೆ ಕುದುರೆಗಳ ವೇಗವನ್ನು ಹೆಚ್ಚಿಸಿದರು. ಪ್ರಯಾಣ ದೂರವಿದ್ದುದರಿಂದ ಡೇರೆಗೆ ಸೇರಿದಾಗ ಮಕ್ಕರಗೌಳಾಗಿತ್ತು. ಸುದ್ದಿ ತಿಳಿದ ಮೀಟು, ಥಾವು ಭಗನ್ಯನಾಯ್ಕನ ಸಹಾಯಕ್ಕೆ ಓಡಿದರು. ಹುಲಿ ಕಚ್ಚಿದ ಗಾಯ ಬಹಳ ಆಳವಾಗಿತ್ತು. ಕತ್ತಿನ ಹಿಂದೆ, ಬುಜದ ಮೇಲೆ ಬಲವಾಗಿಯೇ ಪ್ರಹಾರಮಾಡಿತ್ತು. ಭಂಗಿ ರಕ್ತ ಹೋಗಿದ್ದರಿಂದ ಬಳಲಿದ್ದ. ಅವರಿಗೆ ಗೊತ್ತಿರುವ ಎಲ್ಲಾ ಚಿಕಿತ್ಸೆಯನ್ನು ಮಾಡಿದರು ಯಾಕೆಂದರೆ ರಾಜ ವೈದ್ಯ ಖಾನ್ ಸಾಹೇಬರ ಕೂಡ ಪ್ರಯಾಣಮಾಡಿದ್ದ. ಹುಲಿ ನಡೆಸಿದ ಆಕ್ರಮಣದ ಸುದ್ದಿಯನ್ನು ಖಾನ್‌ಸಾಹೇಬರಿಗೆ ತಿಳಿಸಿ ಹುಲಿಯಬಗ್ಗೆ ಎಚ್ಚರವಿರುವಂತೆ ಹೇಳುವುದು ಜರೂರಾಗಿತ್ತು. ಬಹುತೇಕ ಅವರಾಗಲೆ ವಾಪಾಸು ಹೊರಟಿದ್ದರು. ಒಮ್ಮೆ ಮನುಷ್ಯನ ರಕ್ತದ ರುಚಿಯನ್ನು ಕಂಡು ಹುಲಿ ಮತ್ತೆ ಅವನ ಮೇಲೆ ಆಕ್ರಮಣ ಮಾಡುವು ದಿಟವೆಂದು ಬಗೆದ ಮೀಟು ಭಗನ್ಯನಾಯ್ಕನಿಗೆ ಎಚ್ಚರವಾದಮೇಲೆ ತಾನೆ ಹೋಗಲು ನಿರ್ಧರಿಸಿದ್ದ. ಸಾಧ್ಯವಾದರೆ ತನ್ನ ಮಾವನನ್ನು ಗಾಯಗೊಳಿಸಿದ ಹುಲಿಯನ್ನು ಕೊಂದಾದರು ಹೆಡಮುರಿಗಿ ಕಟ್ಕೊಂಡು ಬಂದು ಅವನಿಗೆ ಕೊಡುವ ಯೋಜನೆ ಅವನದಾಗಿತ್ತು. ಈ ವಿಷಯ ಪ್ರಸ್ತಾಪಿಸಿದರೆ ಗಾಬರಿಯಾದಾನೆಂದು ಖಾನ್ ಸಾಹೇಬರ ಪ್ರಾಣದ ವಿಷಯ ಹೇಳಿ, ಅವನ ಮಾವ ಹಾಗೂ ದಟ್ಟಪುಷ್ಟರಾದ ಯುವಕರೊಂದಿಗೆ ಕಾಡಿಗೆ ಹೊರಟ.

ಹುಲಿಯಿದ್ದ ಬಂಡೆಗೆ ಬಂದಾಗ ಅದೇ ಕತ್ತಲು. "ಯಾರು ಗಾಬಿರಿಯಾಗೋದುಬೇಡ. ಆ ಹುಲಿ ಒಂದು ಬೇಟೆಗೆ ಹೋಗಿರುತ್ತದೆ. ಇಲ್ಲಾ ಇಲ್ಲೆ ಎಲ್ಲಾದರೂ ಅವಿತು ಕೊಂಡಿರುತ್ತದೆ" ಮೀಟು ಎಚ್ಚರಿಸಿದ. ಎಲ್ಲರೂ ಮೈಯೆಲ್ಲಾ ಕಣ್ಣಾಗಿ ಅವನು ಹೇಳಿದ ಹಾಗೆಯೇ ಮಾಡಿದರು. ದಟ್ಟಕಾಡಿನೊಳಗೆ ರಾತ್ರಿ ಚಳಿಗೊಂದು ಬಣ್ಣ ಬದಲಾಗುತ್ತಿತ್ತು, ಘಳಿಗೆಗೊಂದು ಗಂಡಾಂತರ ಬಂದೊದಗಿತ್ತು. ಮೀಟು ಅವೆಲ್ಲವನ್ನು ಮೆಟ್ಟಿನಿಂತಿದ್ದ, ಅವನಿಗೆ ಅನುಮಾನಬಂತು, ಇಲ್ಲಿಂದ ಹೋಗಿದ್ದರೆ, ಖಾನ್ ಸಾಹೇಬರು ಬರುವದಾರಿಯಲ್ಲೆನಾದರು, ಅವರಿಗೆ ತೊಂದರೆ, ಇಲ್ಲ ಹಾಗೇನು ಆಗುವುದಿಲ್ಲ ದೊಡ್ಡ ಸೈನ್ಯದ ತುಕಡಿಯೇ ಅವರ ಸುತ್ತಲು ಇರುವುದರಿಂದ ಅವರಿಗೇನು ತೊಂದರೆಯಾಗಲಾರದು ಅಂದುಕೊಂಡ. ಖಾನ್ ಸಾಹೇಬರು ಈ ದಾರಿಗೆ ಬರುವದರೊಳಗೆ ಅವರಿಗೆ ಆಶ್ಚರ್ಯದ ಸುದ್ದಿಯನ್ನು ಕೊಡುವ ತವಕ ಅವನಿಗೆ. ಆದರೆ, ಹಾಳು ಮೃಗವನ್ನ ಹುಡುಕುವುದಾದರು ಎಲ್ಲಿ, ಅವನು ಆಲೋಚನೆಗಳೆಲ್ಲಾ, ಕತ್ತಲೊಳಗೆ ಪ್ರಕಾಶಮಾನವಾಗಿ ಹೊಳೆದ ಹುಲಿಯ ಕಣ್ಣುಗಳನ್ನು ನೋಡಿದೊಡನೆ ಹಾರಿಹೋಗಿ, ಒಂದು ಕ್ಷಣ ಇಡಿ ಮೆದುಳು ಆಲೋಚನಾ ಶೂನ್ಯವಾಯ್ತು. ಹೇಗೆ ಅದರ ಮೇಲೆ ಆಕ್ರಮಣಮಾಡುವುದೆಂದು ಅವನು, ಅವನ ಮೇಲೆ ಹೇಗೆ ಹಾರಿ ಬಿದ್ದು ಅವನ ಗ್ವಾಮಳಕ್ಕೆ ಬಾಯಿಹಾಕಿ ರಕ್ತ ಹೀರಬೇಕೆಂದು ಅದು ತಾಳಹಾಕತೊಡಗಿತ್ತು. ಯಾರು ಯಾರಿಗೆ ಬಲಿಯಾಗುತ್ತಾರೆ, ಯಾರು ಬಲಶಾಲಿಗಳೆಂದು ಗೊತ್ತಾಗುವುದೆ ಬದಕಿದವರು ಹೇಳಿದ ಮೇಲೆ. ಒಮ್ಮೆ ಘರ್ಜಿಸಿ ಅವರ ಮೇಲೆ ಎಗರಿತು. ಅವರೆಲ್ಲಾ ಕಟ್ಟುಮಸ್ತಾದ ಆಳುಗಳಾಗಿದ್ದರಿಂದ ಮತ್ತು ಆಲೋಚಿಸುವ ಶಕ್ತಿಯಿದ್ದರಿಂದ ಒಮ್ಮೊಂದೊಮ್ಮಿಗೆ ಅಕ್ರಮವೆಸಗಿದ ಆ ಮೃಗದಿಂದ ತಪ್ಪಿಸಿಕೊಳ್ಳುವ ಮಾರ್ಗೋಪಾಯ ಮತ್ತು ತಮ್ಮ ಕೈಯೊಳಗಿನ ಖಡ್ಗ, ಈಟಿ, ಬರ್ಜಿಗಳಿಂದ ಅದರ ಬಾಯಿ, ಹೊಟ್ಟೆಯಮೇಲೆ ಏಕಕಾಲಕ್ಕೆ ಪ್ರಹಾರಮಾಡುವುದರೊಂದಿಗೆ ಅದರ ಕತೆಯನ್ನು ಮುಗಿಸಿದ್ದರು. ಅದು ಸಾಯುವ ಮುಂಚೆ

ಫೋರ್, ಫೋರ್ ಅಂತೇಳಿ ಸದ್ದು ಮಾಡುತ್ತಲೇ ಇತ್ತು. ಇವರು ಒಣಕಟ್ಟಿಗೆಯನ್ನು ಒಟ್ಟು ಮಾಡಿ ಬೆಂಕಿ ಹಾಕಿ ತಂದ ಕೂಳನ್ನು ತಿನ್ನಲು ಸಜ್ಜಾದರು. ಮೀಟು ಈಗ ನಿರಾಳನಾಗಿದ್ದ, ಖಾನ್‌ಸಾಹೇಬರು ಈಗ ಯಾವ ಹೆದರಿಕೆಯು ಇಲ್ಲದೆ ಈ ದಾರಿಯಲ್ಲಿ ಬರಬಹುದೆಂಬ ದೃಢವಿಶ್ವಾಸ ಅವನಿಗಿತ್ತು. ರಾತ್ರಿ ಅಲ್ಲೇ ವಿಶ್ರಾಂತಿ ಮಾಡುವ ಯೋಚನೆ ಮಾಡಿದರು. ಖಾನ್ ಸಾಹೇಬರಿಗೆ ಯಾವುದೇ ಆಪತ್ತು ಬಂದೊದಗಬಾರದೆಂಬ ಇರಾದೆ ಅವನದಾಗಿತ್ತು. ಇದು ಅವನು ಸೈನಾಜ್ ಖಾನ್‌ಳಿಗಾಗಿ ಮಾಡಿತ್ತಿರುವುದೆಂದು ಅಂತರಾಳದ ಸತ್ಯ ಅವನೊಬ್ಬನಿಗೆ ತಿಳಿದಿತ್ತು.

ದಕ್ಷಿಣಕ್ಕೆ ಪಂತು ಹೊರಟಾಗ ಅವನ ಇಬ್ಬರು ಮಕ್ಕಳನ್ನು ಅಲ್ಲೇ ಬಿಟ್ಟು ಬಂದಿದ್ದ. ಮುಸ್ಲಿಮ್ ಆಡಳಿತದ ಬಿಸಿ ಕಡಿಮೆ ಯಾಗಲಿ, ಹಿರೆಮಗಳು ರೂಪ್ಲಿಯ ಮದ್ವೆಯಾಗಲಿ ಆಮೇಲೆ ವಾಪಾಸು ರಾಜಸ್ಥಾನದ ಸಂಕ್ರೆಬಾಕ್ರಿ ತಂಡಕ್ಕೆ ವಾಪಾಸು ಹೋದರಾದೀತು, ಮಕ್ಕಳು ಹೇಗೂ ಒಂದಿಷ್ಟು ಕಾಸು ಸಂಪಾದಿಸುತ್ತಿದ್ದಾರೆ. ಅದನ್ನೇ ಕೂಡಿಟ್ಟು ಮುಂದೆ ತನ್ನದೆ ಸಣ್ಣದೊಂದು ವ್ಯಾಪಾರವನ್ನು ಮಾಡುವ ಇರಾದೆಯಿಂದಲೇ ಬಂದಿದ್ದ. ಆದರೆ ಅಲ್ಲಿ ಹೇಳುವನಾದ ಕೂಬ, ಅವನತಂಗಿ ಪಾರು ಹೇಗಿದ್ದಾರೆಂಬ ಮಾಹಿತಿಕೂಡ ಅವರಿಗೆ ಇರಲಿಲ್ಲ. ಪಂತುಬುಕ್ಯ ಕರಮತೋಟ್ ಮತ್ತು ಅವನ ಹೆಂಡತಿ ಸಾಮ್ಕಿಬಾಯಿ ಅನೇಕ ರಾತ್ರಿಗಳ ಕಾಲ ಮಕ್ಕಳ ಚಿಂತೆಯಲ್ಲೇ ಕಳೆದರು. ಇಲ್ಲೇನೋ ಅದೃಷ್ಟ ಖುಲಾಯಿಸಿತು ಇಬ್ಬರು ಮಕ್ಕಳು, ಮಗಳು ರೂಪ್ಲಿ ಮದುವೆಯಾಗಿ ಆರಾಮದಿಂದ ಇದ್ದಾರೆ ಆದರೆ?. . . ಅಲ್ಲಿ, ಪರಿಸ್ತಿತಿಯನ್ನು ಯೋಚಿಸದಾದರು. ಅವರಿಬ್ಬರಾದರೂ ವಾಪಾಸುಹೋಗುವ ತಮ್ಮ ಇಂಗಿತವನ್ನು ಹಿರಿಮಗ ಮೀಟುಬುಕ್ಯಾ ಕರಮ ತೋಟನ ಹತ್ತಿರ ವ್ಯಕ್ತಪಡಿಸಿದರು. "ಬೇಟ ಮೀಟು ನಾವು ಈ ಕಡೆಗೆ ಬಂದು ಎಷ್ಟೋ ವರ್ಷಗಳಾದವು. ಸಂಕ್ರೆಬಾಕ್ರಿತಾಂಡದ ಸುದ್ದಿಯನ್ನ ತಿಳಿಯಲಿಲ್ಲ. ಅಲ್ಲಿ ನಿಮ್ಮ ತಮ್ಮ ತಂಗಿಯ ಸ್ಥಿತಿ ಅದೇನಾಗಿದಯೋ ಆ ಭವಾನಿಯೊಬ್ಬಳಿಗೆ ಗೊತ್ತು" ಪಂತು ಮಾತಾಡದಾದ. ಅನಾದಿ ದೂರ ಕ್ರಯಿಸಿಯಾಗಿತ್ತು. ಕೆಂಪು ಸಮುದ್ರದಿಂದ ವಲಸೆಬರುವ ಹಾವು ಮೀನು ಲಕ್ಷಾಂತರ ಮೈಲುಗಳ ದೂರ ಕ್ರಯಿಸಿ ಎಲ್ಲೋ ಒಂದು ಕಡೆ ಸಂತಾನೋತ್ಪತ್ತಿ ಮಾಡಿ ಸಂತತಿಯನ್ನ ಬೆಳೆಸಿ ತನ್ನ ಸ್ವಸ್ಥಾನಕ್ಕೆ ವಾಪಾಸು ಬರುತ್ತದೆಂದು ತಾಂಡದಲ್ಲಿ ಹಿರಿಕರು ಮಾತಾಡಿದ್ದನ್ನ ಕೇಳಿದ್ದ. ಆದರೆ ಈ ದುರ್ಗಮ ಅಡವಿಯಲ್ಲಿ ಮುಂದೆ ಹೋಗುವುದೊಂದೆ ಹಿಂದೆ ಹೋಗುವುದು ಅಸಾಧ್ಯದ ಮಾತು. ಸಾಮ್ಕಿ ಸೆರಗಿನೊಳಗೆ ಮಾರಿಮುಚ್ಕೊಂಡು ಮುಸಿ ಮುಸಿ ಅಳುತ್ತಿದ್ದಳು. ಇದ್ದಕ್ಕಿದ್ದಂಗೆ ತಾಂಡದ ನೆನಪು ಮಾಡಿದ ತಂದೆ ತಾಯಿಯರನ್ನು ಸಮಾಧಾನ ಪಡಿಸುವುದಕ್ಕಿಂತ, ತಾನು ಹುಟ್ಟಿ ಬೆಳೆದ, ಆಡಿ, ಹಾಡಿ ಸಂತೋಷ ಪಟ್ಟ ಕ್ಷಣವೊಂದು ಕಣ್ಣೆದುರಿಗೆ ಬಂದಂತಾಗಿ ಮೀಟು ಭಾವುಕನಾದ.

ತಾಂಡದ ಹುಡುಗರಿಗೆ ಮೀಟು ಅಂದರೆ ಏನೋ ಆಕರ್ಷಣೆ, ಅವನ ನಡೆ, ನುಡಿ, ರೀತಿ ರಿವಾಜು, ಧೈರ್ಯ ಸನ್ನಿವೇಶವನ್ನ ನಿಭಾಯಿಸುವ ಚಾಕಚಕ್ಯತೆಯಿಂದಾಗಿ ಇಡಿ ತಾಂಡದ ಹುಡುಗರಲ್ಲೇ ಅವನು ನಾಯಕನಾಗಿದ್ದ. ಎಲ್ಲರ ಬಾಯಲ್ಲೂ ಮೀಟುನ ವಿಷಯವೇ. ಆದರೆ ದುರಾದೃಷ್ಟವೆಂದರೆ, ಅವರ ಜೀವನಕ್ಕೆ ಬೇಕಾದಷ್ಟು ಸಂಪತ್ತು ಅವರಲ್ಲಿ ಇರದೆ ಜೀವನ

ನಿಭಾಯಿಸುವುದು ಕಷ್ಟಕರವಾಗಿತ್ತು. ಮತ್ತೊಂದು ಕಡೆ ಮೊಗಲರ ದರ್ಪ, ಮುಸ್ಲೀಮರ ಪ್ರಾಬಲ್ಯ, ಜೀವನ ದುಸ್ಥರಗೊಂಡಿತ್ತು. ಅದೊಂದು ಭಯಾನಕ ಕನಸಾಗಿತ್ತು ಅವರಿಗೆ. ಆದರೂ ಅಲ್ಲೊಂದು ಇಲ್ಲೊಂದು ಸಾಹಸಗಳನ್ನು ಮಾಡುತ್ತ, ಅವರಿವರ ಬಳಿ ಕೆಲಸಮಾಡುತ್ತ ಹೆಂಗೋ ಜೀವನ ನಡೆಸುವಷ್ಟು ಸಂಪಾದನೆಯನ್ನು ತಂದೆ ಮಕ್ಕಳು ಮಾಡುತ್ತಿದ್ದರು. ಎಲ್ಲಿಯವರೆಗೆ ನಡೆದೀತು ಎಂಬ ಆತಂಕ ಅವರ ಎದೆಯೊಳಗೆ ಇದ್ದೇ ಇತ್ತು. ಅದೇ ತಾಂಡದಲ್ಲಿ ಕೆಲಮಂದಿ ಮಧ್ಯಮ ವರ್ಗದವರ ಐವತ್ತು, ನೂರು ಎತ್ತುಗಳ ಹಿಂಡಿನ ವ್ಯಾಪಾರ ನಡೆಯುತ್ತಿತ್ತು, ದೆಹಲಿ, ರಾಜಸ್ಥಾನದ ಬೇರೆ ಭಾಗಗಳು, ಉತ್ತರಪ್ರದೇಶ, ಪಂಜಾಬಿನ ವರೆಗೂ ಅವರು ಪ್ರಯಾಣ ಬೆಳಸಿ ದಿನಸಿ ಸಾಮಾನುಗಳನ್ನು ಮಾರಾಟಮಾಡಿ ವರ್ಷಕ್ಕೆ ಒಂದು ಸಾರಿ ವಾಪಾಸು ಸಂಕ್ರೆಬಾಕ್ರೆಗೆ ಬರುತ್ತಿದ್ದರು. ಮತ್ತೆ ದೀಪಾವಳಿಮುಗಿಸಿ ಹೊರಟರೆ ಹೋಳಿ ಹಬ್ಬಕ್ಕೆ ವಾಪಾಸಾಗುತ್ತಿದ್ದರು. ಅಂತಹದೊಂದು ಸಣ್ಣ ಕಾರಬಾರು ಮಾಡಲು ಮೀಟುನಿಗಾಗಲಿ, ಅವನಪ್ಪನ ಹತ್ತಿರ ಕಾಸಿರಲಿಲ್ಲ. ಹಾಗಾಗಿ ಅವರು ಅಲ್ಲೇ ಸಣ್ಣಪುಟ್ಟ ಕೆಲಸ ಮಾಡಿಕೊಂಡೇ ದೊಡ್ಡ ಕನಸು ಕಾಣದೆ ಬದುಕಿದಂತಹವರು. "ಮೀಟು ಬೆಟ ನಿಮ್ಮ ಮಾವ ಬಂದವ್ರೆ" ಅಂತೇಳಿ ಅವನ ತಾಯಿ ಕೂಗಿದಾಗಲೇ ಸಂಕ್ರೆಬಾಕ್ರಿಯ ಕನಸಿಂದ ವಾಸ್ತವಕ್ಕೆ ಬಂದಿದ್ದ. "ನೀವ್ಯಾಕೆ ತೊಂದ್ರೆ ತಗೊಂಡ್ರಿ, ಹೇಳಿ ಕಳುಹಿಸಿದರೆ ನಾನೆ ಬರ್ತಿದ್ದೆ." ಅವರ ಪರಿಸ್ಥಿತಿ ಅರಿತು ಹೇಳಿದ ಮೀಟು. "ಅರೇ ಜಮಾಯಿಸಾ, ಮಗಳ ಮನೆಗೆ ಬರಾಕ ಇದೊಂದ ಅವಕಾಶ, ಹೇಳಿದ್ರೆ ನೀವು ಬರ್ತಿದ್ರಿ. ಆದ್ರ ನಮಗ ಬರಾಕ ಆಗ್ತಿತ್ತೇನು?" ಕೆಲಸದ ಒತ್ತಡದಲ್ಲಿ ಸಂಸಾರವನ್ನೇ ನಿರ್ಲಕ್ಷಿಸುವ ಅವರ ಅಸಾಹಯಕತೆಯನ್ನು ಹೇಳಿಕೊಂಡಿದ್ದ. "ಬನ್ನಿ ಬನ್ನಿ ಹೀಗೆ ಬನ್ನಿ" ಒಳಗೆ ಕರೆದೊಯ್ದ. ಅವರ ಸಂಬಂಧ ಬೆಳೆದ ಮೇಲೆ ಅವರ ಆರ್ಥಿಕಸ್ಥಿತಿ, ಅವರ ಬದುಕಿನ ಓಗವು ಕೂಡ ಬದಲಾಗಿತ್ತು. ಜಲಪಾನ್ ಆದಮೇಲೆ ಊಟದ ವ್ಯವಸ್ಥೆ ಮಾಡಲು ಹೇಳಿದ. "ನಾವು ಸ್ವಲ್ಪ ಹೊತ್ತು ತಮ್ಮೊಂದಿಗೆ ಕಳೆಯಲಿಕ್ಕೆ ಬಂದಿದ್ದೇವೆ ಬನ್ನಿ ಕುಳಿತುಕೊಳ್ಳಿ ಹಾಂ ಆರಾಮದಿಂದ, ಯಾವ ಸಂಕೋಚವು ಬೇಡ". ಭಗನ್ಯನಾಯ್ಕನಿಗೆ ನಿಜವಾಗಿಯೂ ಈ ಪಡಿಪಾಟಲು ಸಾಕಾಗಿತ್ತು. ಆತ ವಾಪಾಸು ಬಂಜಾರಗಡಕ್ಕೆ ತೆರಳುವ ಆಲೋಚನೆಯಲ್ಲಿದ್ದ, ಆದರೆ ವಾಪಾಸು ಹೋಗುವುದು ಅಷ್ಟು ಸುಲಭವಲ್ಲವೆಂಬುದು ಆತನಿಗೆ ಗೊತ್ತಿತ್ತು. ಆದರೂ ಹೋಗುವ ಅನಿವಾರ್ಯತೆ ಇದ್ದಿದ್ದರಿಂದ ತನ್ನ ತಮ್ಮ ಜಂಗಿನಾಯ್ಕನ ಜೊತೆಗೆ ಮೀಟುನನ್ನ ಒಟ್ಟು ಗೂಡಿಸಿ ಕಾರೋಬಾರಿನ ಜವಾಬ್ದಾರಿಯನ್ನು ಕೊಟ್ಟು ಹೋಗಲು ನಿರ್ಧರಿಸಿ ಅದನ್ನ ಪ್ರಸ್ತಾಪಿಸುವ ಸಲುವಾಗಿಯೇ ಬಂದಿದ್ದ. "ಜಮಾಯಿಸ, ತಮ್ಮೊಂದಿಗೆ ಜರೂರು ವಿಷಯ ಮಾತಾಡಬೇಕಿದೆ", ಮೇಲೆದ್ದು ಹೊರ ನಡೆದ. ಮೀಟು ಮಾವನ ಹಿಂದೆ ಹೊರಗೆದ್ದು ಬಂದಿದ್ದ. "ನಮಗೂ ವಯಸ್ಸಾಯಿತು, ಆ ಹುಲಿ ಅಕ್ರಮಣವೆಸಗಿದ ದಿನದಿಂದ ಯಾಕೋ ಒಂದು ರೀತಿಯ ಅಧೀರತೆ ಕಾಡಿಸ್ತಾಯಿದೆ". ಗಳಿಗೆ ಮೌನ, ಮೀಟು ಆತನ ಮಾತುಗಳನ್ನು ಕೇಳಿಸುತ್ತ ಸುಮ್ಮನೆ ಹೆಜ್ಜೆಹಾಕುತ್ತಿದ್ದ "ಅಲ್ಲ ಅಂತ ಗಾಬರಿಯಾಕೆ, ನಾವಿದ್ದೇವೆ" ಆತನ ಸಮಾಧಾನಕ್ಕೆ ಹೇಳಿದ. ಆದರೆ ಜಮಾಯಿಸಾ ಬಂಜಾರಗಡ್ ಬಿಟ್ಟು ಬಹಳ ವರ್ಷಗಳೇ ಆದವೂ, ಮನೆಯ ನೆನಪು ಬಹಳ ಕಾಡ್ತಾಯಿದೆ. ಅಲ್ಲಿ ನಮ್ಮ ತಂದೆ-ತಾಯಿ ಸ್ಥಿತಿ ಹೇಗಿದೆಯೋ, ಈ ವ್ಯಾಪಾರ ವಹಿವಾಟು ಸಾಕಾಗಿದೆ." ಆತನ ದೃಢ ನಿರ್ಧಾರತೆಗೆದುಕೊಂಡಿದ್ದ, ತಾವು ಹೋದರೆ ನಮ್ಮಗಳ ಸ್ಥಿತಿ "ಒಳಗಿನ ಆತಂಕ ವ್ಯಕ್ತಪಡಿಸಿದ. "ನೀವು ಧೈರ್ಯಶಾಲಿಗಳು, ನಿಮ್ಮ ಕಿರಿಮಾವ ಜಂಗಿನಾಯ್ಕನ ಜೊತೆಗೂಡಿ

ಇಡಿ ಕಾರೊಭಾರದ ಜವಾಬ್ದಾರಿಯನ್ನು ವಹಿಸಬೇಕೆಂಬುದ ನಮ್ಮ ಬಯಕೆ. ನಾವು ನಾಳೆನೆ ವಾಪಾಸು ಬಂಜಾರಗಡಕ್ಕೆ ಸಣ್ಣ ತುಕಡಿಯೊಂದಿಗೆ ಹೊರಡುತ್ತೇವೆ." ಸಂಪೂರ್ಣ ತಯಾರಿಆದಂತಿತ್ತು. ಆತನ ತಂದೆ ತಾಯಿಗಳು ವಾಪಾಸು ಸಂಕ್ರಿಬಾಕ್ರಿಗೆ ಹೋಗುವ ಅಭಿಪ್ರಾಯ ವ್ಯಕ್ತಪಡಿಸಿದ್ದರು. ಅದು ಮೀಟುಗೆ ನೆನಪಾಯಿತು. ಏನನ್ನು ಹೇಳಬೇಕೆಂದು ಶಬ್ದಗಳಿಗೆ ತಡಕಾಡುತ್ತಿದ್ದ "ತಾವು ಹೀಗೆ ಏಕಾಏಕಿ ಹೊರಟರೆ, ನಾವು ತಮ್ಮ ಅಗಲಿಕೆಯನ್ನು ಸಹಿಸಿಕೊಳ್ಳುವುದಾದರೂ ಹೇಗೆ" ತಡೆಯಲು ನೋಡಿದ. "ನಮ್ಮ ದೇಹಸ್ಥಿತಿ ನಮಗೆ ಸಾಥ್ ನೀಡುತ್ತಿಲ್ಲ, ಯಾವಾಗ ಏನಾಗುವುದೆಂಬ ಆತಂಕ ಕಾಡುತ್ತಿದೆ. ಸಯುವುದರೊಳಗೆ ನಮ್ಮ ತಾಯಿನಾಡಿಗೆ ವಾಪಾಸಾಗಬೇಕೆಂಬ ಹಂಬಲ ನಮಗೆ ಯುದ್ದ ಮುಗಿದು ಖಾನ್‌ಸಾಹೇಬರು ದಕ್ಷಿಣದಲ್ಲಿ ಆಳ್ವಿಕೆಯನ್ನು ಆರಂಭಿಸಿದ ನಂತರ ತಾವು ವಾಪಾಸು ಬಂದುಬಿಡಬಹುದು". ಧೈರ್ಯ ಹೇಳಿದ. "ಆಯ್ತು, ತಾವು ನಿರ್ಧಾರ ತೆಗೆದುಕೊಂಡಮೇಲೆ ಆಯಿತು, ಹಾಗೆ ಆಗಲಿ, ಆದರೆ ನನ್ನದೊಂದು ಕೋರಿಕೆ, ತಮ್ಮ ಜೊತೆಗೆ ನಮ್ಮ ತಂದೆತಾಯಿಗಳು ಬರಬಹುದಾ" ಉತ್ತರಕ್ಕಾಗಿ ಕಾದ. "ಅದು ಇನ್ನೂ ಒಳ್ಳೆಯದಾಯಿತು" ಸಮ್ಮತಿ ನೀಡಿದ. ವಾಪಾಸುಬಂದಾಗ ಹೆಂಡ ಸಳೋಯಿ ಸಿದ್ಧವಾಗಿತ್ತು. ಅಪರೂಪಕ್ಕೆ ಬಂದ ಬೀಗರನ್ನ ಬಹಳ ಕಾಳಜಿಯಿಂದಲೇ ನೋಡಿದರು ಪಂತಲು ಮತ್ತು ಪರಿವಾರದವರು ಕೊನೆಯ ಭೋಜನ ಅವರ ಮನಸ್ಸಿನೊಳಗೆ ಏನೋ ಆತಂಕಕಾಡುತ್ತಿತ್ತು. ಆದರೆ ಅದನ್ನು ವ್ಯಕ್ತಪಡಿಸಿದಾಗಿದ್ದ ಭಂಗಿ. ಮಗಳು, ಮೊಮ್ಮಗು ದೇಶ್ಯಾ ಕರಮತೋಟ ನೊಂದಿಗೆ ಬಹಳ ಹೊತ್ತು ಕಳೆದಿದ್ದ. ಮಗಳಿಗೆ ಹೇಳಿದರೆ ಗಾಬರಿಯಾಗುತ್ತಾಳೆಂದು, ಹೇಳದೆ ಹೋಗಲು ಆಗುವುದಿಲ್ಲ ಎನ್ನುವುದು ಗೊತ್ತು. ಅವಳ ಪ್ರತಿಕ್ರಿಯೆ ಹೇಗಿದ್ದಿತು ಅಂದಾಜುಮಾಡಲಾಗಲಿಲ್ಲ ಅವನಿಗೆ. "ಲಚ್ಮಿಬೇಟಿ, ನಾಳೆ ನಾನು ನಿಮ್ಮ ತಾಯಿ, ನಿಮ್ಮ ಅತ್ತೆ ಮಾವ ವಾಪಾಸು ರಾಜಸ್ಥಾನಕ್ಕೆ ಹೊರಟಿದ್ದೇವೆ ಮಗ". ಅವಳ ಮುಖವನ್ನು ನೋಡಿದ. "ಬಾಬಾಸಾ, ತಾವೇನು ಹೇಳ್ತಿದ್ದೀರಾ. ನಾವು". ಕಣ್ಣಿಂದ ನೀರು ದಳದಳನೆ ಇಳಿಯತೊಡಗಿದವು. ಪರಿಸ್ಥಿತಿ ಹಾಗಿದೆ ಮಗಳೆ, ಯಾಕೋ ಬಂಜಾರಗಡ್ ನಿನ್ನ ಅಜ್ಜಿ ಅಜ್ಜರ ನೆನಪುಕಾಡಿಸ್ತಾಯಿದೆ. ಚಿಕ್ಕಪ್ಪ ಇರ್‍ತಾರಲ್ಲ." ಸಮಾಧಾನಪಡಿಸಿದ. ಹೆತ್ತವರು ದೂರವಾಗುತ್ತಿರುವು ಅವಳು ಹುಟ್ಟಿ ಬಳೆದಾಗಿನಿಂದ ಇದೇ ಮೊದಲು. ಆದರೆ ಬಹುಶಃ ಇನ್ನೆಂದು ಭೆಟ್ಟಿ ಆಗಲು ಸಾಧ್ಯವಿಲ್ಲವೇನೂ ಅಂತ ಅವಳಿಗೆ ಅನಿಸಿತು. ಬರುವ ದಿನಗಳು ಹೇಗಿರುತ್ತವೆಯೋ ಬಲ್ಲವರಾರು? "ಆದ್ರೂ ಬಾಬಸಾ, ನೀವು ಈ ನಿರ್ಧಾರ ತಗೋಬಾರದಿತ್ತು" ಗದ್ಗದಿತಳಾಗಿದ್ದಳು. "ನಾವು ಹೋಗುವುದು ಅನಿವಾರ್ಯವಾಗಿದೆ ಬೇಟಿ. ಆಯ್ತಲ್ಲಾ ಹುಲಿಯಂತ ಗಂಡ, ಹುಲಮರಿಯಂತ ಮಗ ದೇಶ್ಯಾಕರಮತೋಟ ಇನ್ನೇನು ಬೇಕು ಮಗಳೆ, ಖಾನ್‌ಸಾಹೇಬರು ದಕ್ಷಿಣದಲ್ಲಿ ಯುದ್ದ ಮುಗಿಸಿ ಸಾಮ್ರಾಟರಾದೊಡನೆ ವಾಪಾಸುಬಂದುಬಿಡಿ" ಅವಳ ಮನಸ್ಸಿನ ದುಗುಡ ಅಳಿಸುವ ಪ್ರಯತ್ನಮಾಡಿದ. ಆ ಸತ್ಯ ಅವಳಿಗೂ ತಿಳಿಯಿತು. ತಂದೆಯ ನಿರ್ಧಾರದ ವಿರುದ್ದ ಮಾತಾಡುವ ಛಾತಿ ಅವಳಿಗೆ ಇರಲಿಲ್ಲ. ಅವರು ಹೋದರೆ ಹೋಗಲಿ, ತಂದೆ ತಾಯಿಗಿಂತ ಹೆಚ್ಚು ಪ್ರೀತಿಕೊಡುವ ಅತ್ತೆ ಮಾವ. ಊಹಿಸಿದಾದಳು. "ಅಯ್ಯೋ ದೇವರೆ ಮುಂದೆ ನಮಗೆ ಗತಿ ಯಾರು ತಂದೆ" ತನ್ನೊಳಗೆ ದೇವರ ಮೊರೆ ಹೋದಳು. ಮುಂಜಾನೆ ತಯಾರಿಯ ಸಲುವಾಗಿ ಊಟಮುಗಿಸಿ ಬೀಗರಿಗೂ ತಯಾರಾಗುವಂತೆ ಹೇಳಿ ತಮ್ಮ ಡೇರೆಗೆ ವಪಾಸಾದರು.

ಮಗಳ ಮನಸ್ಸಿನ ತಳಮಳ ಅರಿತ ಭಂಗಿ ಮತ್ತು ಆತನ ಹೆಂಡತಿ ಒಳಗೊಳಗೆ ಅಳುತ್ತಿದ್ದರು. ಹೊರಗಡೆ ಏನೂ ಆಗಿಲ್ಲವೆಂಬ ನಾಟಕ ಆಡುತ್ತಿದ್ದರು. ಲಚ್ಮಿಗೆ ಮಾತ್ರ ಯಾರೋ ಹೃದಯವನ್ನು ಕಿತ್ತು ನುಚ್ಚು ನೂರು ಮಾಡಿದಂತೆ ಅನುಭವವಾಗತೊಡಗಿತು. ಬೇಸರ, ಒಂಟಿತನ, ಆತಂಕ ಒಮ್ಮಿಂದೊಮ್ಮಿಗೆ ನುಗ್ಗಿ ಬಂದಿದ್ದವು. ತಂದೆ ನಿರ್ಧಾರ ಬರಸಿಡಿಲು ಬಡಿದಂತೆ ಅನಿಸಿತ್ತು ಅವಳಿಗೆ. ಇಡೀ ರಾತ್ರಿ ನಿದ್ದೆ ಬಾರದೆ ಹೊರಳಾಡ ತೊಡಗಿದಳು, ಗಂಡನಿಗೆ ಹೇಳದ ಸ್ಥಿತಿ. ಇಷ್ಟು ಬೇಗ ಅನಾಥಳಾಗುತ್ತೇನೆ ಎಂದುಕೊಂಡಿರಲಿಲ್ಲ. ಅಲ್ಲಾ ನಾನು ಅವರೊಟ್ಟಿಗೆ ವಾಪಾಸು ಸಂಕ್ರಿಬಾಕ್ರಿಗೆ ಹೋದರೆ? ಆಲೋಚನೆ ಬಂದಿದ್ದೆ ಗಂಡನಿಗೆ ಹೇಳಲು ಬಾಯಿ ತೆರೆದಳು ಆತ ಆಗತಾನೆ ಕಣ್ಣು ಮುಚ್ಚಿ ನಿದ್ದೆಗೆ ಜಾರಿದ್ದ.

ಹೊತ್ತಾರೆ ಭಂಗಿ ಮತ್ತು ಅವನ ಪರಿವಾರ, ಪಂತುಬುಕ್ಯಾ ಕರಮ ತೋಟ ಮತ್ತವರ ಪರಿವಾರ ಹೊರಡಲು ಸಜ್ಜಾಗಿತ್ತು. ಆಸೀಫ್‌ಖಾನ್ ಖುದ್ದಾಗೆ ಅವರಿಗೆ ವಿದಾಯ ಹೇಳಲು ಬರುವವನಿದ್ದ. ಲಚ್ಮಿಗೆ ದುಃಖ ತಡೆಯಲಾಗಲಿಲ್ಲ. ಅವಳ ಅತ್ತೆ ಸಾಮ್ಕಿ ಕೊರಳನ ಹಿಡಿದು ಯಾಡಿಯೇ ತಾರಬಿನ ಕಿಂವ್‌ರೂಯೆಯಾ ಆ ಹಿಂಯಾ (ಅವ್ವ ನಿನ್ನ ಬಿಟ್ಟು ನಾ ಹೇಗಿರಲಿ) ಮೀಟು, ಥಾವು, ರೂಪ್ಲಿ ಮತ್ತವಳ ಗಂಡ ದುಃಖ ತಡಿಯಲಾಗದೆ ಬಿಕ್ಕಳಿಸಿತೊಡಗಿದರು. ಸಾಮ್ಕಿ ಮಗಳ ಮತ್ತು ಮಕ್ಕಳೆಲ್ಲರ ಕೊರಳನ್ನು ಹಿಡಿದು ಥಾವಲೊ ಮಾಡಿದಳು. ಖಾನ್‌ಸಾಹೇಬರು ಬಂದಿದ್ದೆ ತಡ ಸಣ್ಣ ತುಕಡಿಯೊಂದಿಗೆ ಅವರು ವಾಪಾಸು ಹೊರಟೆಬಿಟ್ಟರು. ಮತ್ತೆಂದು ಕಾಣದ ತಂದೆ ತಾಯಿಗಳ ಚಿತ್ರವನ್ನು ಲಚ್ಮಿ ಮತ್ತು ಮೀಟು ಕೊನೆಯ ಭಾರಿ ತಮ್ಮ ಮನಸ್ಸಿನೊಳಗೆ ಸೆರೆಹಿಡಿದುಕೊಂಡರು. ಪರಿಸ್ಥಿತಿಯಾವ ಆವಸ್ಥೆಗೆ ಒಯ್ಯುತ್ತದೆಂದು ಯಾರೊಬ್ಬರಿಗೂ ತಿಳಿದಿರಲಿಲ್ಲ. ಹೊರಟವರು ಕೂಡ ಸುರಕ್ಷಿತವಾಗಿ ತಲುಪಿಯಾರೆಂಬ ಅನುಮಾನ ಹೋದವರು ಆಚೇಯೆ ಉಳಿಯುತ್ತಾರೆ ಮತ್ತೆ ಇಲ್ಲಿಯವರು ವಾಪಾಸು ಹೋಗುತ್ತಾರೋ ಇಲ್ಲವೆಂಬ ಆತಂಕ ಅವರೊಳಗೆ ಕಾಡದೆ ಇರಲಿಲ್ಲ.

ಖಾನ್‌ಸಾಹೇಬ್‌ರು ಅವಸರದಿಂದಲೇ ವಾಪಾಸು ತಮ್ಮ ಡೇರೆಗೆ ಹೊರಟರು. ಅವರ ಒಬ್ಬಳೇ ಮಗಳು ಸೈನಾಜಬಳಿಗೆ ಹೆರಿಗೆ ಬೇನೆ ಕಾಣಿಸಿಕೊಂಡಿದ್ದಾಗಿ ಸುದ್ದಿ ತಿಳಿಯಿತು. ಅವರು ಹೊರಟಾಗ ಮೀಟುನನ್ನು ಕೂಡ ತಮ್ಮೊಂದಿಗೆ ಕರೆದೊಯ್ದರು. ದಾಸಿಯರು, ಆಯಾಗಳು ಆಗಲೆ ಸಾವಕಾಶದಿಂದ ಪರಿಸ್ಥಿತಿಯನ್ನು ನಿಭಾಯಿಸಿದ್ದರಿಂದ ಅವಳು ಗುಂಡಕಲ್ಲಿನಂತ ಗಂಡುಮಗುವಿಗೆ ಜನ್ಮನೀಡಿದ್ದಳು. ಆಗಲೆ "ಮಹಾರಾಜ್ ಬದಾಯಿ ಹೋ" ಸಂದೇಶ ಬಂದೇ ಬಿಟ್ಟಿತು. ಜಂಗಿನಾಯ್ಕ ಅವರಿಗೆ ಶುಭಾಷಯ ಹೇಳಿದ. "ತಾವು ನಾನ ಆದ್ರಿ ಮಹಪ್ರಭು" ಅವರ ಕಡೆ ನೋಡಿದ "ಅರೆ ನೀವು ನಮ್ದುಕೆ ಪಹಲೆ ನಾನ ಆಗಿದ್ದೀರಾ" ಕೀಟಲೆ ಮಾಡಿದರು, "ಆವೋಲತೀಪ್ ಬೇಟೆ ಬದಾಯಿ ನಿಮಗೆ" ಖಾನ್ ಸಾಹೇಬರು ಅಳಿಯನಿಗೆ ಶುಭ ಕೋರಿದರು. ಮೀಟು ಮುಂದೆ ಬಂದು 'ಲತೀಫ್ ನಾಚಿಕೆಯಿಂದ ಎಲ್ಲರಿಗೂ ಧನ್ಯವಾದ ಸಲ್ಲಿಸಿದ. ಮೀಟುಗೆ ಚಡಪಡಿಕೆ ಆರಂಭವಾಗಿತ್ತು. ಆ ಕಡೆ ಸೈನಾಜ್‌ಕೂಡ ಮರುಜೀವಬಂದ ನಂತರ ಮೊದಲು ನೋಡಬೇಕು ಅನಿಸಿದ್ದು ಮೀಟು ಬುಕ್ಯಾ ಕರಮತೋಟನನ್ನ. ಆದರೆ ಈ ಸಂದರ್ಭದೊಳಗೆ ಗಂಡನ ಬಿಟ್ಟು ಅವನನ್ನ ಕರೆದರೆ ಜನ ಏನೆಂದುಕೊಂಡಾರೆಂದು ತನ್ನ ಬಯಕೆಯನ್ನು

ಅದುಮಿಟ್ಟುಕೊಂಡು ಅಲ್ಲಾನನ್ನು ಪ್ರಾರ್ಥಿಸಿದಳು. ಅವನನ್ನ ಹೇಗಾದರೂ ಮಾಡಿ ಒಳಗೆ ಕಳುಹಿಸಿ ದೇವರೇ. ಖಾನ್ ಸಾಹೇಬರು, ಅವರ ಶ್ರೀಮತಿ ಲತೀಫ್‌ಖಾನ್ ಜೊತೆಗೆ ಜಂಗೀನಾಯ್ಕ ಮಾತ್ರ ಒಳಗೆ ಪ್ರವೇಶಮಾಡುವ ಅವಕಾಶವಿತ್ತು. ಖಾನ್ ಸಾಹೇಬರು ಸುಮ್ಮನೆ ನಿಂತಿದ್ದ ಮೀಟುನ ನೋಡಿ, "ಅರೇ ನೀವು ಬನ್ನಿ" ಒಳಗೆ ಕರೆದ. ಮಗು ಸದೃಢವಾಗಿ ಆರೋಗ್ಯವಾಗಿತ್ತು. ಮೀಟು ಅವಳು ಮಲಗಿದ್ದ ಜಾಗದ ಎದುರಿಗೆ ಅವಳಿಗೆ ಕಾಣಿಸುವ ಹಾಗೇನೆ ನಿಂತ. "ಬದಾಯಿ ಹೋ ಸೈನಾಜ ಮಗಳೆ" ಖಾನ್ ಸಾಹೇಬರು ಶುಭಕೋರಿದರು. ಅವನ ಕಡೆಗೆ ದಿಟ್ಟಿಸುತ್ತಿದ್ದ ಅವಳು "ಆಂ, ಅಬ್ಬಾಜಾನ್, ತಮಗು ಶುಭಾಶಯ ತಾವು ನಾನ ಆದ್ರಿ". ತಾನು ಅವನನ್ನ ದಿಟ್ಟಿಸಿನೋಡುತ್ತಿದ್ದನ್ನ ಗಮನಿಸಿರಬಹುದೆಂಬುದನ್ನ ಮರೆಮಾಚಲು ನೋಡಿದಳು. ಈ ತಪ್ಪನ್ನ ಮತ್ತೊಮ್ಮೆ ಮಾಡಬಾರದೆಂದು ಕೂಡ ಮನಸ್ಸಿನೊಳಗೆ ಅಂದುಕೊಂಡಳು ಖಾನ್ ಸಾಹೇಬರು ತಮ್ಮ ಕೊರಳಿಂದ ಮುತ್ತಿನ ಹಾರವನ್ನು ತೆಗೆದು ತಮ್ಮ ಮೊಮ್ಮಗನ ಕೊರಳಿಗೆ ಹಾಕಿದರು. ಇಡೀ ವಾತಾವರಣವೇ ಖುಷಿಪಟ್ಟಿತು. ಸಿಹಿ ಹಂಚಲಾಯಿತು. ಕೆಲವು ಖಾಸಾ ಸ್ನೇಹಿತರಿಗೆ ದಾವತ್ ಕೊಟ್ಟರು ಖಾನ್ ಸಾಹೇಬರು ಅದರಲ್ಲಿ ಮೀಟುಕೂಡ ಸೇರಿಕೊಂಡಿದ್ದ. ಅವಳು ಏಕಾಂತ ಬಯಸಿದ್ದಳು ಜೊತೆಗೆ ಮೀಟುನ ಕೂಡ ಮಾತಾಡಬೇಕು ಅನಿಸಿ ಚಡಪಡಿಸತೊಡಗಿದಳು. ಗಂಡ, ತಂದೆ, ತಾಯಿ ಇಡೀ ಜನಸಮುದಾಯವೇ ಇರುವಾಗ ಏಕಾಂತ ಅಸಾಧ್ಯವಾಗಿತ್ತು. ಅಸಾಧ್ಯವನ್ನ ಸಾಧ್ಯಮಾಡಿಕೊಳ್ಳುವುದೇ ಸೈನಾಬ್‌ಖಾನ್‌ಳ ಖೂಬಿಯಾಗಿತ್ತು. ಖಾನ್ ಸಾಹೇಬರು ಸುನಾಜ್ ಡೇರೆಬಿಟ್ಟು ಹೊರಟರು ಅವರೊಂದಿಗೆ ನೆರೆದಿದ್ದ ಎಲ್ಲಾ ಮುಖಂಡರಿದ್ದರು. ಇದೇ ಸರಿಯಾದ ಸಮಯವೆಂದು ದಾಸಿಯೊಬ್ಬಳನ್ನು ಯಾವುದೋ ವಸ್ತುವಿನ ಅವಶ್ಯಕತೆ ಇದೆಯಂತೆ ಅಂತ ಹೇಳಿ ಮೀಟುನನ್ನ ಕರೆಯಿಸಿಕೊಂಡಳು. ಚಪ್ಪಾಳೆ ತಟ್ಟಿ ದಾಸಿಯನ್ನು ಹೊರಹೋಗುವಂತೆ ಹೇಳಿದಳು. ಮೀಟು ಬಹಳ ಖುಷಿಯಲ್ಲಿದ್ದ, ಅವಳು ಅದನ್ನ ಗಮನಿಸಿದಳು. "ಅಂತು ತೋರಿಸಿಯೇ ಬಿಟ್ರ ನಿಮ್ಮ ಪೌರುಷ" ನೇರವಾಗಿ ಅವನ ಎದೆಗೆ ಬಾಣಬಿಟ್ಟಳು. ಅವನು ನಿರುತ್ತರನಾಗಿದ್ದ. ಅವಳ ನೋಟದಲ್ಲಿ ಇನ್ನೂ ಹಸಿವಿತ್ತು. ಖುಷಿಯಿತ್ತು ಪರಿಪೂರ್ಣತೆಯಿತ್ತು. "ನಾನೇನು ಎಲ್ಲಾ ನಿಮ್ಮದೆ ಬೇಗಮಸಾಹಿಬಾ, ನಾವೇನು ಕೇವಲ ಸೈನಿಕರು". ಚುಡಾಯಿಸಿದ. "ಯಾರ ಸೈನಿಕರೋ, ತಾವು" ಅವಳು ಬಿಡಲಿಲ್ಲಾ. "ಇನ್ಯಾರದು ತಮ್ಮ ಗುಲಾಮರಲ್ಲವೆ?" ಉಲ್ಟಾ ಹೊಡೆದ. "ನಾನೆ ನಿಮ್ಮ ಗುಲಾಮಳಾಗಿರುವಾಗ ನೀವು ಅದ್ಹೇಗೆ ನೀವು ಗುಲಾಮರಾದಿರಿ ಹೇಳಿ ಎಲ್ಲಾ ನಾಟಕ ನನ್ನತ್ರ ನಡಿಯಾಕಿಲ್ಲ. ನೀವು ಸಿಂಹ, ಅದು ಯಾರ ಗುಲಾಮಗಿರಿಯನ್ನು ಮಾಡುವುದಿಲ್ಲ" ಜನ ಅವಳ ಸಂದರ್ಶನಕ್ಕೆ ಬರುತ್ತಲೇ ಇದ್ದಿದ್ದರಿಂದ ಬಹಳ ಹೊತ್ತು ಇರಲು ಆಗಲಿಲ್ಲ. ಮಗು ಸದೃಢವಾಗಿತ್ತು. ಅವನಲ್ಲಿದ್ದ ಬಂಗಾರದ ನಾಣ್ಯವನ್ನ ಜೋಪಾನವಾಗಿ ಮಗುವಿನ ಕೈಗೆ ಹಿಡಿಸಿ ಎತ್ತಿ ಒಮ್ಮೆ ಮುತ್ತಿಟ್ಟು ಹೊರಡಲು ಮುಂದಾದ, ಅವನ ನಡುವಳಿಕೆಯನ್ನ ಓರೆಗಣ್ಣಿಂದಲೇ ಗಮನಿಸುತ್ತಿದ್ದ ಸೈನಾಜ್‌ಬೇಗಮ, ಚಪ್ಪಾಳೆ ತಟ್ಟಿದಳು. "ಜೀ ಬೇಗಂ ಸಾಹೇಬ" ದಾಸಿ ಒಳ ಓಡಿಬಂದಳು. "ಏಕಾಂತ", ಆಜ್ಞೆ ಮಾಡಿದಳು "ಜೀ ಸಾಹೇಬ" ದಾಸಿ ಹಿಂಬದಿಯಿಂದಲೇ ವಾಪಾಸಾದಳು. ಹೊರಟವನು ಕ್ಷಣ ನಿಂತ, ಅವಳು ಅವನನ್ನ ಬಿಗಿಯಾಗಿ ಅಪ್ಪಿ ಕೃತಜ್ಞತೆಯನ್ನು ಸಲ್ಲಿಸಿದಳು. ಅವನಿಗೆ ಮಾತೆ ಹೊರಡಲಿಲ್ಲಾ. ಅವಳು ಅವನ ತುಟಿಗಳಿಗೆ ತುಟಿಯನ್ನಿಟ್ಟು ಧೀರ್ಘಚುಂಬನ

ಕೊಟ್ಟಿದ್ದಳು. ಅದೆಷ್ಟು ಧೀರ್ಘವೆಂದರೆ ಯಾರೋ ಹೊರಗಡೆ ಬಂದು ಬೆಟ್ಟಿಯಾಗಲು ಅಪ್ಪಣೆ ಕೇಳುತ್ತಿದ್ದುದ್ದು ಒಳಗೆ ಕೇಳಿಸುವ ತನಕ ಹಾಗೆಯೇ ಹಿಡಿದುಕೊಂಡಿದ್ದಳು. ಅವಳು ಒಟ್ಟಾಗಿ ಅವನಿಗೆ ತಲೆಸುತ್ತು ಬಂದಹಾಗಿತ್ತು. ಆ ಸಂತಸದ ಕ್ಷಣವನ್ನು ಅವ್ಯಕ್ತಗೊಳಿಸದೆ ಹಾಗೆಯೇ ಹೊರಟಿದ್ದ ಹೋಗುವಾಗ ಯಾರೋ ಅವ್ಯಕ್ತಗೊಳಿಸದ ನೋವು ಆವರಿಸಿತ್ತು. ಬೇಗಂ ಸೈನಾಜ್ ಮತ್ತು ಮಗುವನ್ನ ಶಾಶ್ವತವಾಗಿಯೇ ಕಾಣದಿರುವ ಭಯ ಆವರಿಸಿತ್ತು. ಯಾಕೆ ಹೀಗಾಯಿತು ಎಂಬುದು ಅವನಿಗೆ ತಿಳಿಯಲಿಲ್ಲಾ. ಅದೇ ಗುಂಗಿನೊಳಗೆ ಹೊರಬಂದ ಮೀಟುಗೆ ಆಸೀಫ್‌ಖಾನ್ ನಿಂದ ಬುಲಾವ್ ಬಂದಿತ್ತು.

ಅವನು ಹೋದಾಗ ಜಂಗಿನಾಯ್ಕ ನೊಂದಿಗೆ ಸುದೀರ್ಘವಾದ ಚರ್ಚೆಯಲ್ಲಿ ತೊಡಗಿದ್ದ ಆಸೀಫ್‌ಖಾನ್ "ದಕ್ಷಿಣದ ಪ್ರದೇಶವನ್ನು ಆಕ್ರಮಿಸಲು ಇಷ್ಟು ದಿನ ಆದ್ರೂವೆ ಇಡೇರದಕ್ಕೆ ಬಾದ್‌ಷ ಸಂದೇಶ ಕಳುಹಿಸಿದ್ದಾರೆ. ಆದಷ್ಟು ಬೇಗ ದಕ್ಷಿಣದ ಪ್ರದೇಶವನ್ನು ನಾವು ಆಕ್ರಮಿಸಲೇ ಬೇಕು" ಆಸಿಫ್‌ಖಾನ್ ಧೀರ್ಘವಾಗಿ ಆಲೋಚನೆಯ ನಂತರ ತನ್ನ ನಿರ್ಣಯವನ್ನು ಇಟ್ಟಿದ್ದ. ದಕ್ಷಿಣದ ನಕಾಶೆಯೊಂದಿಗೆ ಯಾರು ಪ್ರಬಲರಾಗಿದ್ದಾರೆಂಬುದು ಕಂಡುಹಿಡಿದು ಅವರ ಮೇಲೆ ಯುದ್ದ ಅಥವಾ ಅವರಿಂದ ಕಪ್ಪತೆಗೆದುಕೊಳ್ಳಲು ಹವಣಿಸಿದರು. . . ಮೀಟು ಸೈನ್ಯಕ್ಕೆ ಅಹಾರದ ಜೊತೆಗೆ ಶಸ್ತ್ರಗಳ ಜೋಡಣೆ ಹಾಗೂ ಯುದ್ಧದ ಮುಂಚೂಣಿಯಲ್ಲಿ ನಡೆಯಬೇಕಾದ ಚಟುವಟಿಕೆಯ ಬಗ್ಗೆ ಹೆಚ್ಚಿನ ಆಸ್ಥೆ ವಹಿಸುವ ಹೊಣೆಗಾರಿಕೆಯನ್ನು ನೀಡಲಾಯಿತು.

ಆತನ ಚಾಣಾಕ್ಷತೆ ಮತ್ತು ಚಾಕಚಕ್ಯತೆಯಿಂದಾಗಿ ಆಂಧ್ರದ ಗಡಿಯನ್ನು ಪ್ರವೇಶಿಸಿ ಚಿಕ್ಕಪುಟ್ಟ ಪಾಳೆಗಾರರು, ಅಡವಿಯಲ್ಲಿ ವಾಸಿಸುತ್ತಿದ್ದ ಕಾಡು ಜನರ ಮೇಲೆ ತಮ್ಮ ಜಯಸಾಧಿಸುತ್ತ, ಹೈದ್ರಾಬಾದ್ ಪಟ್ಟಣವನ್ನು ಪ್ರವೇಶಿಸಿ ಅಲ್ಲಿಂದಲೇ ಬೇರೆ ಪ್ರದೇಶಗಳನ್ನು ಆಳುವ ಪ್ರಯತ್ನ ಆಸೀಫ್‌ಖಾನ್‌ನದಾಗಿತ್ತು. ಯುದ್ಧದ ಭರಾಟೆಯಲ್ಲಿ ಆತನ ಶಕ್ತಿ ಕುಂದಿದ್ದೆ ಗೊತ್ತಾಗಲಿಲ್ಲ. ಹೈದ್ರಾಬಾದ್‌ನಲ್ಲಿ ಕೋಟೆಯನ್ನು ನಿರ್ಮಿಸುವ ಯೋಜನೆ ಹಾಕಿಕೊಳ್ಳಲಾಯಿತು. ಆತನ ಹಿಂದೆ ಆಹಾರ ಸಾಮಾಗ್ರಿ, ಶತ್ರುಗಳ ಚಲನವಲನ ಗಮನಿಸುತ್ತಲೇ ಮಾಹಿತಿ ನೀಡುತ್ತಾ ಮುನ್ನುಗ್ಗಿದ ಮೀಟುನ ಸಾಹಸದಿಂದಾಗಿಯೇ ಆಸೀಫ್‌ಖಾನ್‌ಗೆ ವಿಜಯಸಿಕ್ಕಂತಾಯಿತು. ಯುದ್ಧದ ಭರಾಟೆಯಲ್ಲಿ ಬಹುದೂರ ಉಳಿದಿದ್ದ ಹೆಂಡತಿ ಮಕ್ಕಳ ವಿಷಯವೆ ತಿಳಿಯದಾಗಿತ್ತು. ಕೆಲಮಂದಿ ಸೈನಿಕರು ಸುದ್ಧಿಯನ್ನು ತರಲು ಇದ್ದಾಗ್ಯೂ ಮೀಟುಬುಕ್ಯಾ ಕರಮತೋಟ ಗೌಪ್ಯಕಾರ್ಯಾಚರಣೆಯಲ್ಲಿ ಇದ್ದುದರಿಂದಾಗಿ ಆತನಿಗೆ ಯಾವ ಸುದ್ಧಿಯು ಸರಿಯಾಗಿ ತಲುಪುತ್ತಿರಲಿಲ್ಲ. ಸಿಕ್ಕ ಸ್ವಲ್ಪ ಸಮಯವನ್ನು ಮನೆಯ ಸುದ್ಧಿ ತಿಳಿಯುವ ಕುತೂಹಲದಿಂದಾಗಿ ಅವನ ತಮ್ಮ ಥಾವುನನ್ನ ಹುಡುಕಿಕೊಂಡು ಹೊರಟ. ಅವನ ಬರುವಿಕೆಯನ್ನೇ ಕಾಯುತ್ತಿದ್ದ ಥಾವು "ಭೀಯಾ" ಕರೆದ, "ಏನಾಯ್ತು, ಯಾಕಿಂಗೆ ಸಪ್ಪಗೆ ಮುಖ ಮಾಡಿಕೊಂಡಿದ್ದೀಯಾ?" ಒಂದೇ ಉಸಿರಲ್ಲಿ ಕೇಳಿದ ಮೀಟು. "ಏನಿಲ್ಲ, ಅದು" ಮಾತೆಹೊರಡದಾಗಿದ್ದವು. "ಯಾಕೆ, ಮಾತೆಹೊರಡ್ತಾಯಿಲ್ಲ ಆ ಕಡೆ ಲಚ್ಮಿ, ಮಗು ನಿನ್ನ ಹೆಂಡತಿ, ತಂಗಿ ರೂಪ್ಲಿ ಚೆನ್ನಾಗಿದ್ದಾರೆ ತಾನೆ? "ಉದ್ವೇಗಗೊಂಡಿದ್ದ ಎಲ್ಲರೂ ಆರೋಗ್ಯವಾಗಿದ್ದಾರೆ. ಆದರೆ, ಅವನು ಮುಂದುವರೆಸಲಿಲ್ಲ. "ಏನಾಯ್ತು, ಹೇಳು" ಒತ್ತಾಯಿಸಿದ ಯಾರಿಗೆ ಏನಾಯ್ತು," ಚೀರಿದ. ರೂಪ್ಲಿ ಗಂಡ ಮೋಳ ಯುದ್ದದೊಳಗೆ ಹೇಗೋ ಸಿಕ್ಕಿಕೊಂಡು ಸತ್ತುಹೋದ ಒಂದು ಕ್ಷಣ ನಡೆಯುತ್ತಿದ್ದ ಕಾಲ ಗಕ್ಕನೆ ನಿಂತಂಗಾಯಿತು. ತಂಗಿಯ ಗಂಡ

ಅನ್ಯೋನ್ಯದಕ್ಕಿಂತ ಹೆಚ್ಚಾಗಿ ಸ್ನೇಹಿತನಾಗಿದ್ದ. ಇಂತ ಚಿಕ್ಕ ವಯಸ್ಸಿನಲ್ಲಿ ತನ್ನ ತಂಗಿ ವಿಧವೆಯಾಗಿದ್ದನ್ನ ಅವನಿಂದ ಸಹಿಸಿಕೊಳ್ಳಲು ಆಗಲಿಲ್ಲ. ಯಾವುದು ಬೇಡವೆನಿಸಿತು. ಅವನ ಯಶಸ್ಸು ಕಂಡು ಖುಷಿ ಪಡೆಯಲು ಇದ್ದವರಲ್ಲಿ ಕೆಲವರು ಅದರಲ್ಲಿ ಮೋಳ. "ಹೇಗಾಯ್ತೋ ಇದೆಲ್ಲಾ" ಸಂಕಟ ತಡೆಯಲು ಆಗಲಿಲ್ಲಾ. "ಅವತ್ತೊಂದು ದಿನ ಎತ್ತುಗಳ ಹಿಂದೆ ಹೊರಟ ನಮ್ಮವರನ್ನ ಬೆನ್ನುಹತ್ತಿದ ಶತೃಗಳು ಮೀಟು, ದಾಮು, ಹೇಮ್ಲು, ಪೀಕಾ ಎಲ್ಲರನ್ನು ಕೊಂದು ಆಹಾರ ಧಾನ್ಯಗಳೊಂದಿಗೆ ಎತ್ತುಗಳನ್ನು ಹೊಡೆದುಕೊಂಡು ಹೋದರಂತೆ ಅವರಿಗೆ ಬಹುಶಃ ನಾವು ದಿಲ್ಲಿ ಸುಲ್ತಾನರ ಸೈನಿಕರೆ ಇರಬೇಕೆಂದು ಅನುಮಾನಬಂದಿರಬೇಕು". ಥಾವು ದುಃಖ ತಡೆಯಲಾಗದೆ ಬಿಕ್ಕಳಿಸತೊಡಗಿದ. ಮೀಟುಗೆ ಬಹಳ ಬೇಸರವಾಗಿತ್ತು. ಯಾಕೆ ಈ ಬದುಕು ಇಷ್ಟು ಬೇಗ ಕೊನೆಗೊಂಡು ಬಿಡುತ್ತದೆ? ಎಲ್ಲವೂ ಸರಿಯಾಗಿತ್ತು, ಬಾಲ್ಯದ ನಷ್ಟ ಕಳೆದನಂತರ ಯೌವ್ವನದಲ್ಲಿ ನಮ್ಮ ಸ್ವಯಂ ತಾಕತ್ತಿನ ಮೇಲೆ ಜಂಗಿ, ಭಂಗಿ ಯಂತ ಅಗರ್ಭ ಶ್ರೀಮಂತರ ಸಹಾವಾಸ ಸಂಬಂಧ, ಇನ್ನೇನು ಒಳ್ಳೆಯ ದಿನಗಳೇ ಅನ್ನುವಾಗ, ಗೆಳೆಯ, ಮಾರ್ಗದರ್ಶಕನನ್ನೆಲ್ಲಾ ಏಳಿಗೆಯಲ್ಲಿ ಪಾಲುಗಾರನಾಗಿದ್ದ ನನ್ನ ಭಾವ ಮೊಳನಾಯ್ಕನಿಗೆ ಹೀಗಾಗುವುದೆಂದರೆ, ನಿರ್ಲಿಪ್ತನಾಗತೊಡಗಿದ. ಅವನೊಳಗಿನ ತಾಕಲಾಟ, ದ್ವಂದ್ವ ಅವನನ್ನ ಎಡಬಿಡದೆ ಕಾಡತೊಡಗಿತ್ತು. ಅವನ ತಳಮಳ ಅರ್ಥಮಾಡಿಕೊಂಡಿದ್ದ ಥಾವು ಸಂಕ್ರೆಬಾಕಿಯಲ್ಲಿ ಅವನ ಸಹೋದರನ ಸಾವಿನ ವಿಷಯವನ್ನು ಗೌಪ್ಯವಾಗಿಟ್ಟ ಇಲ್ಲದಿದ್ದರೆ ಮೀಟು ಸಂಪೂರ್ಣವಾಗಿ ಕುಸಿದು ಬಿಡುತ್ತಾನೆಂಬ ಭಯ.

ಸಹೋದರರ ವೇದನೆ ತಾರತಕ್ಕೆ ಏರುತ್ತಿರುವಾಗಲೇ ಸೈನಿಕ ನೊಬ್ಬ ಆಸೀಫ್‌ಖಾನ್ ಎಲ್ಲಿದ್ದರೂ ಮೀಟುನ ಕರೆ ತರಲು ಹೇಳಿದಕ್ಕೆ ಸಹೋದರರಿಬ್ಬರು ಕುದುರೆ ಏರಿ ಹೊರಟರು. ಖಾನ್‌ಸಾಹೇಬರು ಇಷ್ಟೊಂದು ತುರ್ತಾಗಿ (ಅರ್ಜೆಂಟಾಗಿ) ಕರೆಯುವ ಜರೂರಾದಾರೂ ಏನಿರಬಹುದೆಂಬ ಅನುಮಾನದ ಹುತ್ತ ಅವನನ್ನ ಆವರಿಸತೊಡಗಿತು. ಮತ್ತೇನಾದರೂ ಆಂಧ್ರ ಅಥವಾ ಕರ್ನಾಟಕದ ಗಡಿಯಿಂದ ಆಕ್ರಮಣವಾಯಿತೆ? ಹೋಗಬೆಕಿರುವ ದೂರ ಮತ್ತಷ್ಟು ದೂರವೆನಿಸತೊಡಗಿತು. ಅರ್ಧಗಳಿಗೆಯ ಹಾದಿ ಇಡಿ ದಿನದಷ್ಟು ದೂರವೆನಿಸಿತ್ತು. ಕುದುರೆಯ ವೇಗವನ್ನ ಮತ್ತಷ್ಟು ಹೆಚ್ಚು ಮಾಡಿದ ಮೀಟು. ಖಾನ್‌ಸಾಹೇಬರು, ಉದ್ವೇಗಗೊಂಡಿದ್ದರು. ಬಾಣಂತಿಯಾಗಿದ್ದ ಅವರ ಮಗಳು ಯಾವುದೋ ಕಾಯಿಲೆಗೆ ತುತ್ತಾಗಿ ಮಗುವನ್ನು ಬಿಟ್ಟು ವಿಧಿವಶಳಾಗಿದ್ದಳು. ಮೀಟುಗೆ ಯಾರೋ ತಳ್ಳಿದಂಗಾಗಿ ತಲೆಸುತ್ತಿ ಬಂತು, ಪ್ರಯತ್ನ ಪಟ್ಟು ಸುಧಾರಿಸಿಕೊಂಡು ಡೇರೆಯ ಕಂಬಕ್ಕೆ ಒರಗಿಕೊಂಡ. ಅವಳ ಕಳೆಬರವನ್ನ ತುರ್ತಾಗಿ ಹೈದ್ರಾಬಾದ್‌ಗೆ ತರುವಂತೆ ಖಾನ್ ಸಾಹೇಬರು ಅಪ್ಪಣೆ ಮಾಡಿದ್ದೆ ತಡ ಮೀಟು ತಾವು ಬೀಡು ಬಿಟ್ಟಿದ್ದ ಸಾವಿರಾರು ಗಾವುದ ದೂರದ ನಡು ಭಾರತದ ಪ್ರದೇಶದ ಕಡೆಗೆ ಯುವಕರ ಪಡೆಯೊಂದಿಗೆ ದೌಡಾಯಿಸಿದ. ಹಗಲು, ರಾತ್ರಿಯೆನ್ನದೆ, ತಾವೆ ನಿರ್ಮಿಸಿದ ಕಾಡಿನ ಜಾಡಿನಗುಂಟೆ ತಂಡಸಾಗಿತ್ತು. ಅಲ್ಲಲ್ಲಿ ಅವನಿಗೆ ಗುಳೆ ಬಂದಿದ್ದ ಬಂಜಾರರು ಕಾಣತೊಡಗಿದರು. ಅದರಲ್ಲಿ ಕೆಲವರು ವ್ಯಾಪಾರಕ್ಕೆ ಮತ್ತೆ ಕೆಲವರು ಸುಲ್ತಾನ್‌ಗೆ ಹೆದರಿ ಓಡಿಬಂದಿದ್ದರು. ಮೀಟು ಮತ್ತು ಇತರೆ ಬಂಜಾರರು ತಮ್ಮ ಎತ್ತುಗಳಿಗೆ ಮತ್ತು ಖಾನ್ ಸಾಹೇಬರ ಕಾಲಾಳು, ಗಜಪಡೆ, ಕುದುರೆ ಪಡೆಗೆಂದು ನಿರ್ಮಿಸುತ್ತ ಹೊರಟಿದ್ದ ಜಾಡು ಅವರಿಗೆ ಸಹಾಯಕವಾಗಿತ್ತು. ದಾರಿನಡುವೆ ಕೆಲವರಿಗೆ ತಮ್ಮ ಪದ್ಧತಿಯಂತೆ 'ರಾಮರಾಮ' ಹೇಳಿ ಮುಂದೆ ಸಾಗಿದ.

ಅವನ ಮನಸ್ಸಿನ ತುಂಬ ಸೈನಾಜ್‌ಖಾನ್ ತುಂಬಿಕೊಂಡಿದ್ದಳು. ಆದರೆ ಅವಳನ್ನು ಈ ಸ್ಥಿತಿಯಲ್ಲಿ ನೋಡುತ್ತೇನೆಂದು ಮೀಟು ಕನಸಿನಲ್ಲೂ ಅಂದುಕೊಂಡಿರಲಿಲ್ಲ. ಆ ಮಗುವಿನ ಗತಿ ಏನು? ಪ್ರಶ್ನೆ ಕಾಡತೊಡಗಿತು. ಅವಳ-ಅವನ ನಡುವೆ ನಡೆದ ಸಂಬಂಧದ ಸೂಕ್ಷ್ಮತೆಯನ್ನು ಯಾರಿಗೂ ಹೇಳಲಾರದ ಸ್ಥಿತಿ, ಮಗುವನ್ನು ಎತ್ಕೊಂಡು ಮುದ್ದಾಡುವ ಪರಿಸ್ಥಿತಿ ಎಲ್ಲದರ ನಡುವೆ ಮೀಟು ನಲಗಿ ಹೋಗಿದ್ದ.

ಅವರು ಹಿಂದೆ ತಂಗಿದ್ದ ಜಾಗಕ್ಕೆ ಬಂದಾಗ ಪರಿಸ್ಥಿತಿ ಸಂಪೂರ್ಣವಾಗಿ ಹದಗೆಟ್ಟಿರುವುದು ಕಂಡುಬಂದಿತ್ತು. ಅಲ್ಲಿಂದ ಎಲ್ಲಾ ಜನರನ್ನು, ತಮ್ಮ ಕುಟುಂಬದ ಸದಸ್ಯರನ್ನು ಸಾಗುಹಾಕುವುದು ಅನಿವಾರ್ಯವಿತ್ತು. ಮೀಟು ಸೈನ್ಯದ ತುಕಡಿಯೊಂದಿಗೆ ಖಾನ್ ಸಾಹೇಬರು ತಂಗಿದ್ದ ಡೇರೆಗೆ ಬಂದಾಗ ನಡುರಾತ್ರಿಯಾಗಿತ್ತು. ಪಹರೆ ಕಾಯುವ ಸೈನಿಕರಿಗೆ ತಮ್ಮ ರಹಸ್ಯ ಭಾಷೆಯ ಪರಿಚಯ ಮಾಡಿಸಿದನಂತರ ಮೀಟು ನನ್ನ ಒಳಗೆ ಬಿಡಲಾಯಿತು. ಅಘಾತದ ಮೇಲೆ ಅಘಾತಗಳಾಗಿ ಅವನು ಸಂಪೂರ್ಣವಾಗಿ ಕುಗ್ಗಿಹೋಗಿದ್ದ. ಮಗು ಯಾರದೋ ದಾಸಿಯೊಬ್ಬಳ ಕೈಯೊಳಗೆ ಆಟ ಆಡುತ್ತಿತ್ತು. ಎತ್ತಿ ಮುದ್ದಾಡಲು ಕೂಡ ಅವನಿಗೆ ಧೈರ್ಯಸಾಲದೆ ಅವನನ್ನೇ ಪ್ರೀತಿಸಿ, ಪೂಜಿಸುತ್ತಿದ್ದ ಸೈನಾಜ್ ಇಲ್ಲ ಎಂಬುದನ್ನು ಊಹಿಸಿಕೊಳ್ಳಲ ಸಾಧ್ಯವಾಗದೆ ಮನಸ್ಸಿಗಾಗುತ್ತಿದ್ದ ಹಿಂಸೆಯಿಂದ ಹೊರಬರಲು ಸೈನಿಕರಿಗೆ ತಯಾರಾಗುವಂತೆ ಹೇಳಿ ತನ್ನ ಡೇರೆಯ ಕಡೆ ಹೊರಟ. ಲಚ್ಮಿ ಮತ್ತು ಅವನ ಮಗು ದೇಸು ಆರೋಗ್ಯವಾಗಿದ್ದರು. ಅವನ ಕಂಡು ಲಚ್ಮಿಗೆ ನಂಬಲಿಕ್ಕೆ ಆಗಲಿಲ್ಲ. ಅಲ್ಲಿ ಎಲ್ಲವೂ ಗೌಪ್ಯವಾಗೇ ನಡೆಯುತ್ತಿದ್ದವು. ಮೊಳನ ಸಾವಿನ ಸುದ್ಧಿ ಮಾತಾಡುತ್ತ ಸಂಕ್ರೆ ಬಾಕ್ರ ತಾಂಡದಲ್ಲಿ ಆತನ ಸಹೋದರನ ಸುದ್ಧಿಕೂಡ ಬಂತು. ಮೀಟುನ ಹೃದಯದ ಮೇಲೆ ಬಲವಾದ ಪ್ರಹಾರವಾಗಿತ್ತು. ಆದರು ಬದುಕಿನ ಅನಿವಾರ್ಯತೆಯನ್ನು ಅರ್ಥಮಾಡಿಕೊಳ್ಳಲೇಬೇಕಾಗಿದ್ದರಿಂದ ಮನಸ್ಸನ್ನು ಗಟ್ಟಿಗೊಳಿಸಿ ಸೊರಗಿಹೋಗಿದ್ದ ತಂಗಿಯನ್ನು ತಮ್ಮ ಕುಲದ ರಿವಾಜನಂತೆ ಮಡಿಕೆ ಹೆಂಡವನ್ನು ತೆಗೆದುಕೊಂಡು ಹೋಗುವುದರ ಮೂಲಕ ಮಾತಾಡಿಸಿದ, ಒಂದು ಪಾಲು ಕುರಿ ಮಾಂಸ ಒಯ್ಯಬೇಕಿತ್ತು. ಆದರೆ ಅದು ಸಮಯವಾಗಿರದ ಕಾರಣ ರೂಪ್ಲಿ ಮತ್ತು ಅವಳ ಮಗಳು ಸೋಮ್ಲಿಯನ್ನ ನೋಡಿಕೊಂಡು ಅಗಲವಿಕೆಯ ಅನಿವಾರ್ಯತೆ ಮತ್ತು ಆದಷ್ಟು ಬೇಗ ಈ ಎಲ್ಲಾ ಡೇರೆಗಳು ಹೈದ್ರಾಬಾದಿಗೆ ವರ್ಗಾಯಿಸುವ ಯೋಜನೆ ಹೇಳಿ ಸೈನಾಜ್‌ಳ ಸಾವಿನ ಸುದ್ಧಿ ಅವರಿಗೆ ಗೊತ್ತಿದ್ದರು ಅದರ ಹಿನ್ನೆಲೆಯನ್ನು ಕೇಳದೆ ಹೊರಟಿದ್ದು.

ಸೈನಾಜ್ ಶಾಂತಚಿತ್ತದಿಂದ ಮಲಗಿದಂತಿತ್ತು. ಕಳೇಬರ ಆಗಲೆ ಉಬ್ಬಿ ಹೋಗಿದ್ದರಿಂದ ಸೂಕ್ಷ್ಮವಾಗಿ ಚೀಲಗಳಲ್ಲಿ ಕಟ್ಟಿ ಒಯ್ಯುವ ಯೋಜನೆ ತಯಾರಿಸಿ ಮುಂಜಾನೆ ನಸುಕಿನಲ್ಲೇ ಹೊರಟುಬಿಟ್ಟರು. ಹಗಲು, ರಾತ್ರಿಗಳಿಗೆ ಎರಡುಗಳಿಗೆ ಕಾಲ ನಿದ್ದೆಮಾಡಿ ಪ್ರಯಾಣ ಬೆಳೆಸಿದ್ದರಿಂದ ಒಂದು ವಾರಕ್ಕೆ ಹೈದ್ರಾಬಾದ್ ತಲುಪಿದರು. ಖಾನ್ ಸಾಹೇಬರಿಗೆ ದುಃಖ ತಡೆಯಲಾಗದೆ ಅವರ ಸ್ನೇಹಿತ ಜಂಗಿಯ ಹೇಗಲ ಮೇಲೆ ಮುಖವಿಟ್ಟು ರೊಧಿಸತೊಡಗಿದರು. "ಖಾನ್ ಸಾಹೇಬ ತಾವೇ ಹೀಗೆ ದೃತಿಗೆಟ್ಟರೆ ನಾವು, ನನ್ನ ಮಗಳ ಒರಿಗೆಯವಳು ಬಾಲ್ಯದಿಂದಲೂ ನನಗೆ ಗೊತ್ತು ಅವಳು. ನಾನು ತಮ್ಮ ಬೆಟ್ಟಿಗೆ ಬಂದಾಗೊಮ್ಮೆ ಜಂಗಿ ಚಾಚ ಅಂತ ಬಾಯಿತುಂಬ

ಕರೆಯುತ್ತಿದ್ದಳು. ಈಗ. . ." ಮಾತೆ ಹೊರಡದೆ ಗದ್ಗಿದಿತನಾದ. ಮುಸ್ಲಿಮ್ ಸಂಪ್ರದಾಯದಂತೆ ಶವವನ್ನು ಸ್ನಾನಮಾಡಿಸಿ, ಶೃಂಗಾರಮಾಡಿ ಕೋಟೆಯ ಎಡಬದಿಗೆ ಧಫನ್ ಮಾಡಲಾಯಿತು.

ಮಗಳ ಸಾವಿನಿಂದ ಸಾಹೇಬ ತುಂಬ ಮನೋವ್ಯಾಕುಲತೆಗೆ ಒಳಗಾಗಿದ್ದರು. ಖಾನ್ ಸಾಹೇಬರಂತು ಕುಡಿಯುವುದನ್ನು ಹೆಚ್ಚುಮಾಡಿಕೊಂಡಿದ್ದರು. ಅವರ ಮಗ ಮುರಾದ್ ಪ್ರಾಯಕ್ಕೆ ಬರುತ್ತಿದ್ದಂತೆ ಪಟ್ಟಕ್ಕೆ ತಂದು ತಾವು ನಿವೃತ್ತರಾಗುವ ಇರಾದೆಯನ್ನು ಜಂಗಿಯ ಮುಂದೆ ಹೇಳಿದ್ದರು. ಹೈದ್ರಾಬಾದ್ ಹಿಡಿದ ಮೇಲೆ ದಕ್ಷಿಣ ಪೂರ್ತಿ ಸಿಕ್ಕಂತೆ ಆಗಿದ್ದರೂ, ಮೈಸೂರು, ಕೋಯಿಮತ್ತೂರು, ಶ್ರೀರಂಗಪಟ್ಟಣ ಮುಂತಾದ ಸಾಮಂತರಿನ್ನೂ ಶರಣಾಗತರಾಗಿರಲಿಲ್ಲ. ಪುನಾದಲ್ಲಿ ಮರಾಠರ ಪ್ರಬಲತೆ ಹೆಚ್ಚಾಗಿತ್ತು. ಈ ನಡುವೆ ಖಾನ್ ಸಾಹೇಬರ ಆರೋಗ್ಯವು ಕೂಡ ಹದಗೆಟ್ಟಿತ್ತು. ಮಗಳ ಅಗಲಿಕೆ, ಮೊಮ್ಮಗನ ಚಿಂತೆ ಅಳಿಯನ ದುರಾಡಳಿತಕ್ಕೆ ಬೇಸರಗೊಂಡಿದ್ದು ಖಾನ್ ಸಾಹೇಬರು ದಿಲ್ಲಿಯಿಂದ ವಾಪಾಸು ಬುಲಾವ್ ಬಂದರೆ ಹೋಗುವ ಆಲೋಚನೆಯಲ್ಲಿದ್ದಾಗ ಅವರಿಗೆ ಮತ್ತೊಂದು ಆಘಾತವಾಗಿತ್ತು. ದಕ್ಷಿಣದಲ್ಲಿ ಸಂಗ್ರಹಿಸಿರುವ ಸಂಪತ್ತನ್ನು ರವಾನಿಸುವ ಸಲುವಾಗಿ ವಿಶೇಷ ತಂಡವನ್ನು ಸುಲ್ತಾನರು ಕಳುಹಿಸಿದ್ದರು. ಖಾನ್ ಸಾಹೇಬರು ಸಂಪೂರ್ಣವಾಗಿ ಖುಸಿದುಹೋದರು. ಆದರೂ ಅನಿವಾರ್ಯವಾಗಿ ಇದ್ದಿದ್ದನ ಕಳುಹಿಸಲೇ ಬೇಕಾಯ್ತು. ಅವರೊಂದಿಗೆ ಖಜಾನೆ ಒಯ್ಯಲು ನಂಬಿಕೆಯ ಜನ ಬೇಕಾಯ್ತು. ಅವರ ದೃಷ್ಟಿಯಲ್ಲಿ ಮೊದಲು ಜಂಗಿನಾಯ್ಕ ನಂತರ ಮೀಟು ಬಂದರು. ಆದರೆ ಅವರಿಬ್ಬರು ಅತ್ಯಂತ ನಂಬಿಗಸ್ಥರು ಮತ್ತು ಸ್ನೇಹಿತರು. ಅವರನ್ನು ಕಳಿಹಿಸಿದರೆ ತನ್ನ ಜೊತೆಗೆ ಯಾರು? ಎನ್ನುವ ಸಂದಿಗ್ಧತೆ ತಾಕಲಾಟದಲ್ಲಿರುವಾಗಲೆ ಜಂಗಿಯನ್ನು ಕಳುಹಿಸುವ ನಿರ್ಣಯ ತೆಗೆದುಕೊಂಡರು. ಮೀಟು, ಬಲಶಾಲಿ, ಧೈರ್ಯವಂತ, ತನಗೂ ತನ್ನ ಮೊಮ್ಮಗನಿಗೂ ಅಂಗರಕ್ಷಕನಾಗಬಲ್ಲ ಎಂಬ ಧೈರ್ಯವಿದಿದ್ದರಿಂದ ಜಂಗಿಯನ್ನು ದೆಹಲಿಗೆ ಕಳುಹಿಸುವ ತಯಾರಿ ಮಾಡಲಾಯಿತು. ಜಂಗಿಗೂ ವಾಪಾಸು ಸ್ವಸ್ಥಾನಕ್ಕೆ ಮರಳುವ ಬಯಕೆ, ಆದರೆ ತನ್ನ ಮಗಳ ಜೊತೆಗಿನ ಸಂಬಂಧ ಸಂಪೂರ್ಣ ಕಡಿದುಕೊಳ್ಳುವ ಅನಿವಾರ್ಯತೆ ಬಂದೊದಗಿತ್ತು. ಆದರೆ ಏನು ಮಾಡದ ಪರಿಸ್ಥಿತಿಯಲ್ಲಿ ಗಳಿಸಿದ ಸಂಪತ್ತನ್ನು ತೆಗೆದುಕೊಂಡು, ಉಳಿದ ಒಂದು ಎಪ್ಪತ್ತು ಸಾವಿರ ಎತ್ತುಗಳಲ್ಲಿ ಅರ್ಧ ಮೀಟು ಮತ್ತು ಅವನ ಅಳಿಯ ಥಾವುಗೆ ವಹಿಸಿ ವಾಪಾಸು ದೆಹಲಿಗೆ ಹೊರಟಿದ್ದ. ಸುಲ್ತಾನರಿಗೆ ಸಂಪತ್ತು ತಲುಪಿದನಂತರ ತನ್ನ ಸ್ವಸ್ಥಾನ ಬಂಜಾರಾ ಗಡ್‌ಗೆ ಹೋಗುವ ಬಯಕೆ ಅವನದಾಗಿತ್ತು. ಹೊರಡುವ ಕ್ಷಣ ಬಂದಾಗ ಖಾನ್ ಸಾಹೇಬರ ಕಣ್ಣುಗಳಿಂದ ನೀರು ಹರಿಯತೊಡಗಿತ್ತು. ಬಹುತೇಕ ಹದಿನೈದು ವರ್ಷಗಳ ಕಾಲ ಒಂದೇ ಕುಟುಂಬದ ಅಣ್ಣತಮ್ಮಂದಿರಂತೆ ಬದುಕಿದ್ದು ಈಗ ಅಗಲುತ್ತಿರುವುದು. "ಜಾ ಮೇರೆ ಭಾಯಿ, ಸುಕವಾಗಿ ಹೋಗು" ಮಾತನಾಡದಾದ. "ಹೂಜೂರ್ ನಿಮ್ಮನ್ನ ಬಿಟ್ಟು", ಗಂಟಲು ಕಟ್ಟಿಕೊಂಡಿತ್ತು. ಮುಂದಿನ ಮಾತುಗಳಿಗೆ ಅರ್ಥವೇ ಇಲ್ಲವೆಂದು ಬಿಕ್ಕಳಿಸಿದವನೆ ಸೈನ್ಯದ ತುಕಡಿಯೊಂದಿಗೆ ಹೊರಟ. ದಾರಿಯ ಮೇಲೆ ಸಿಗುವ ತನ್ನ ಕುಟುಂಬದ ಸದಸ್ಯರನ್ನೆಲ್ಲಾ ಕರೆದುಕೊಂಡು ಮಗಳು ಮತ್ತು ತನ್ನ ಅಣ್ಣನ ಮಗಳಿಗೆ ವಿದಾಯ ಹೇಳಿ ಹೊರಡುವ ಯೋಜನೆಯಿಂದ ಮೀಟುನ ಹತ್ತಿರ ಹೋಗಿ "ಜಮಾಯಿಸಾ, ಥಾವು ಮತ್ತು ಅವನ ಹೆಂಡತಿ ಮಕ್ಕಳ ಜವಾಬ್ದಾರಿ ನಿನ್ನ ಹೆಗಲ ಮೇಲೆ ಹೇರಿಸಿ ಹೊರಿಟಿದ್ದೇನೆ. ನೀವು ಒಳ್ಳೆಯ ಸುಸಂಸ್ಕೃತರು

ಬೇಕಾಬಿಟ್ಟೆ ಕುಡದು ಹಾಳಾಗೋದಿಲ್ಲ ಅನ್ನೋ ನಂಬಿಕೆ ನನಗಿದೆ" ಅವನ ಕೈಹಿಡಿದು ಅಂಗಲಾಚಿದ. ಥಾವುಗೆ ನಿಜವಾಗಲೂ ಏನೋ ಕಳೆದುಕೊಂಡಂತೆ ಅನಿಸತೊಡಗಿತು. ಅವನ ತಂದೆ ತಾಯಿ ವಾಪಾಸು ಹೋದಾಗಲು ಈ ರೀತಿಯಾಗಿರಲಿಲ್ಲಾ. "ಅಲ್ಲಾ, ನಾವು ಆ ಕಡೆಗೆ ಬಂದು ಬಿಡೋಣ ಅಂತ" ಥಾವು ಅನುಮಾನದಿಂದಲೇ ಹೇಳಿದ. "ಜಮಾಯಿಸಾ, ಈಗ ಬಂಜಾರಗಡ, ಬಂಜಾರಗಡಾಗಿ ಉಳಿದಿಲ್ಲ ಎಷ್ಟು ವರ್ಷಗಳಿಂದ ಆ ಭಾಗದಲ್ಲಿ ಮಳೆಯಾಗದೆ ಅನೇಕ ಮಂದಿ ನಮ್ಮವರು ಈ ಕಡೆಗೆ ಹೊರಟಿರುವಾಗ ನೀವು, ಅದು ಅಲ್ಲದೆ ಖಾನ್ ಸಾಹೇಬರು ನಿಮ್ಮ ಅಣ್ಣನ ಭರವಸೆಯ ಮೇಲೆ ನನ್ನ ಕಳುಹಿಸುತ್ತಿದ್ದಾರೆ. ಇಂತ ದೊಡ್ಡ ವ್ಯಾಪಾರ ವಹಿವಾಟು ನಿಮ್ಮನ್ನ ನಂಬಿ ನಾವು ಬಿಟ್ಟು ಹೋಗುತ್ತಿದ್ದೇವೆ." ಪರಿಸ್ಥಿತಿಯನ್ನು ಅರ್ಥಮಾಡಿಸಲು ಪ್ರಯತ್ನಿಸಿದ. "ಅಲ್ಲಾ ಎಲ್ಲಾ ಸಂಬಂಧಿಕರು ಅಲ್ಲಿ ಸಾವಿರಾರು ಗಾವುದ ದೂರದಲ್ಲಿರುವಾಗ ನಾವಿಬ್ಬರೇ" ರಾಗ ಎಳೆದ ಮೀಟು. "ಅಲ್ಲಾ ಜಮಾಯಿಸಾ, ನೀವಿನ್ನು ಚಿಕ್ಕವರು, ಚೆನ್ನಾಗಿ ವ್ಯಾಪಾರ ಮಾಡಿ. ಒಂದಿಷ್ಟು ಸಂಪತ್ತನ್ನು ಕ್ರೂಢೀಕರಿಸಿ ಮಕ್ಕಳನ್ನು ಚೆನ್ನಾಗಿ ಬೆಳೆಸಿ ಆ ಮೇಲೆ ನಮ್ಮ ಊರುಗಳು ಇದ್ದೆ ಇವೆ." ಬದುಕನ್ನ ಕಟ್ಟುವ ಬಗೆಯನ್ನು ಹೇಳಿದ, ಅನಿವಾರ್ಯವಾಗಿ ಅವರು ಸುಮ್ಮನಾಗಲೇ ಬೇಕಾಯ್ತು. ಮುಂದೆ ಪರಿಸ್ಥಿತಿಗಳು ಯಾವ ರೀತಿ ಬರುತ್ತವೆಯೊ ಕಂಡವರ್‍ಯಾರು. ಈಗೇನೊ ಖಾನ್ ಸಾಹೇಬರು ಬದುಕಿದ್ದಾರೆ ಎಲ್ಲಾನೂ ಸುಸೂತ್ರವಾಗಿ ನಡೆಯುತ್ತಿದೆ. ನಾಳೆ ಅವರೇನಾದರು ಆದ್ರೆ ಅಧಿಕಾರ ಬೇರೆಯವರ ಕೈಗೆ ಹೋಗುತ್ತದೆ. ಆವಾಗ ಏನಾಗುತ್ತದೆ ಎಂಬ ಆತಂಕ ಅವರಿಗೆ ಇದ್ದೆ ಇತ್ತು.

ಜಂಗಿ ವಾಪಾಸು ಹೊರಟಿದ್ದು ಮತ್ತೆಂದು ಅವನ ನೋಡಲಾರೆವು ಎಂಬ ಆತಂಕ ಅವರ್‍ನ ಕಾಡಿತ್ತು. ಆದರೆ ಬೀಳ್ಕೊಡಿಗೆ ಅನಿವಾರ್ಯವಾಗಿತ್ತು. ಖುದ್ದು ಖಾನ್‌ಸಾಹೇಬರೆ ಅವನ ಅಗಲಿಕೆಯನ್ನು ಸಹಿಸದಾಗಿದ್ದರು. ಆದರೆ ಕಳುಹಿಸುವುದು ಅನಿವಾರ್ಯವಾಗಿತ್ತು. ಭಾರವಾದ ಹೆಜ್ಜೆಯಿಂದ "ಅಲ್ವಿದಾ ಖಾನ್ ಸಾಹೇಬ, ಮುಂದಿನ ಜನ್ಮದಲ್ಲೂ ನಾವು ನಿಮ್ಮ ಸ್ನೇಹಿತರಾಗಿ ಹುಟ್ಟುವುದಕ್ಕೆ ಇಷ್ಟಪಡುತ್ತೇವೆ. ಈ ನಮ್ಮ ಸ್ನೇಹವನ್ನು ಇತಿಹಾಸ ನೆನಪಿಡುತ್ತದೆ" ಎನ್ನುತ್ತಿದ್ದಂತೆ ಖಾನ್ ಸಾಹೇಬರು ಅವನನ್ನು ಬಿಗಿಯಾಗಿ ಅಪ್ಪಿಕೊಂಡರು. "ಅಲ್ವಿದಾ ಮೇರೆ ದೊಸ್ತ್, ನಮ್ದುಕಿ ದೋಸ್ತಿಯನ್ನು ಇತಿಹಾಸ ಮರಿಯದಂಗೆ ನಾವು ಶಾಸನ ಬರೆಸುತ್ತೇವೆ. ನಿಮ್ಮ ಪ್ರಯಾಣ ಸುಖಕರವಾಗಿರಲಿ". ಅವರ ಮುಖದಲ್ಲಿ ದುಃಖವಿತ್ತು. ಜಂಗಿನಾಯ್ಕ ಮತ್ತು ಸೈನಿಕರು ಕುದುರೆಗಳನ್ನು ಏರಿ ವಾಪಾಸು ಹೊರಟರು. ಅಲ್ಲಿಂದ ಜಂಗಿಯ ಕುಟುಂಬ ತನ್ನ ಹಾಗೂ ತನ್ನ ಸಹೋದರ ಭಂಗಿಯ ಮಗಳಿಗೆ ವಿದಾಯಹೇಳಿ ಹೊರಡುವ ಯೋಜನೆ ಹಾಕಿಕೊಂಡು ಇಡೀ ಕುಟುಂಬ ಸಮೇತ ತಾವು ಗಳಿಸಿದ ಸಂಪತ್ತನ್ನು ತೆಗೆದುಕೊಂಡು ತನ್ನ ಊರಕಡೆಗೆ ಮುಖಮಾಡಿದ್ದ. ಸುಮಾರು ಇಪ್ಪತ್ತು ವರ್ಷಗಳ ಕಾಲ ವ್ಯಾಪಾರದಲ್ಲಿ ತೊಡಗಿದ್ದ ಜಂಗಿ ಭಂಗಿ ಸಹೋದರರು ಸಾಕಷ್ಟು ಸಂಪತ್ತನ್ನು ಗಳಿಸಿದ್ದರು. ಅದನ್ನು ಮುಂದಿನ ಜೀವಿತದವರೆಗೆ ಖರ್ಚುಮಾಡಿದರೂ ಸವಿದಷ್ಟು ಶೇಖರಗೊಂಡಿತ್ತು. ಆದರೆ ಥಾವು ಮತ್ತು ಮೀಟುಗೆ ಯಾವ ಹಿನ್ನೆಲೆಯೇ ಇಲ್ಲದೆ ಬಂದಂತಹವರು ಅವರ ಗಳಿಕೆಯನ್ನು ಅವರು ಮಾಡಲೇಬೇಕಾಗಿತ್ತು. ಮೀಟು ಅವನ ಮಾವ ಜಂಗಿ ಹೋಗುವಾಗ ಅವನಲ್ಲಿದ್ದ ಬಂಗಾರ ಮತ್ತು ಬೆಳ್ಳಿಯ ವರಹಗಳನ್ನು ಅವನ ತಂದೆ ತಾಯಿಗಳಿಗೆ ತಲುಪಿಸುವಂತೆ ಹೇಳಿ ಆತನ ಕೈಗೆ ಕೊಟ್ಟು. ಈಗ ಮತ್ತೆ ಅವರು ಹೊಸದಾಗಿ ವ್ಯಾಪಾರವನ್ನು ಆಂಭಿಸಿ ತಮ್ಮ ಸಾಮ್ರಾಜ್ಯವನ್ನು ಕಟ್ಟಬೇಕಾಗಿತ್ತು.

ಜಂಗಿ ಹೋದ ಮೇಲೆ ಖಾನ್ ಸಾಹೇಬರು ಮತ್ತಷ್ಟು ಮಂಕಾಗಿದ್ದರು ಕಾಲ ಉರುಳುತ್ತಿದ್ದಂತೆ ಅವರಿಗೂ ವಯಸ್ಸಾಗುತ್ತಾ ಹೋಯಿತು. ಅವರ ಮಗನನ್ನು ಮೀಟುನ ಗರಡಿಯಲ್ಲಿ ಬಿಟ್ಟಿದ್ದರು. ಅವನು ಆಗಲೇ ವಯಸ್ಸಿಗೆ ಬಂದಿದ್ದ. ಆದರೆ ಸಿಂಹಾಸನದ ಮೇಲೆ ಅವನ ಅಳಿಯ ಲತೀಪ್‌ಖಾನ್ ಕಣ್ಣಿಟ್ಟಿದ್ದ, ಹಾಗಾಗಿ ಖಾನ್ ಸಾಹೇಬರ ಮಗ ಸಾಲರ್‌ಜಂಗ್‌ಗೆ ಸಿಂಹಾಸನವೇನು ಸುಲಭವಾಗಿರಲಿಲ್ಲ. ಲತೀಫ್‌ಖಾನ್‌ಗೆ ಯುದ್ಧದ ಅನುಭವ, ಸೈನ್ಯದೊಳಗೆ ಹೇಗಿರಬೇಕು ಎನ್ನುವ ಅನುಭವವಿದ್ದರಿಂದ ಅವನ ಮುಂದಿನ ನಡೆಗಳು ಮೀಟುಗೆ ಅರ್ಥವಾಗಲಿಲ್ಲ. ಮೀಟು ಬುಕ್ಯಾನ ಹರ್ಕತ್, ಅವನಿಗೆ ಯಾವಾಗಲೋ ತಿಳಿದಿದ್ದರಿಂದ ಅವನ ಮೇಲೆ ಸೇಡು ತೀರಿಸಿಕೊಳ್ಳಲು ಸಮಯ ಕಾಯುತ್ತಿದ್ದ. ಅದೆ ವೇಳೆಗೆ ಹೈದ್ರಾಬಾದ್ ಕೋಟೆಯನ್ನು ಕಟ್ಟುವ ಯೋಜನೆ ಆರಂಭವಾಗಿತ್ತು. ಮೀಟು ತಮ್ಮ ಕುಟುಂಬವನ್ನು ಹೈದ್ರಾಬಾದಿಗೆ ಕರೆತರುವ ಇಂಗಿತವನ್ನು ವ್ಯಕ್ತಪಡಿಸಿದ್ದ. ಖಾನ್ ಸಾಹೇಬ ಸೈನ್ಯದ ಒಂದು ತುಕಡಿಯನ್ನು ಕೊಟ್ಟು ಥಾವುನನ್ನು ಕಳುಹಿಸಿಕೊಡಲು ಅಪ್ಪಣೆ ಮಾಡಿದರು. ಏಕೆಂದರೆ ದಿನೆ ದಿನೆ ಬದಲಾಗುತ್ತಿರುವ ಸನ್ನಿವೇಶಗಳು ಅವರನ್ನ ಕಿತ್ತು ತಿನ್ನ ತೊಡಗಿದವು. ಯಾವ ಕ್ಷಣದಲ್ಲಿ ಏನಾಗುತ್ತದೆಂಬ ಆತಂಕ ಅವರೊಳಗೆ ಮನೆ ಮಾಡಿತ್ತು. ಬಾದ್‌ಷ ಅಪ್ಪಣೆ ಕೊಟ್ಟಿದ್ದರೆ ತಾನು ದೆಹಲಿಗೆ ವಾಪಾಸು ಹೋಗಿ ಬಿಡುತ್ತಿದ್ದೆ ಎನ್ನುವ ಮನೋವ್ಯಾಕುಲತೆ ಬೇರೆ ಇತ್ತು. ಹೀಗಾಗಿ ಮೀಟುನ ಬಿಡಲು ಸಿದ್ದರಾಗಿರಲಿಲ್ಲ. ಅವತ್ತೆ ಥಾವು ರಹಸ್ಯವಾಗಿ ತನ್ನ ಮತ್ತು ತನ್ನ ಸಹೋದರನ ಕುಟುಂಬವನ್ನು ಹೈದ್ರಾಬಾದ್‌ಗೆ ಕರೆತರಲು ಹೊರಟುಬಿಟ್ಟ.

ಇತ್ತ ಲತೀಫ್‌ಖಾನ್, ಅರಮನೆಯಲ್ಲಿ ಸಿಕ್ಕ ಮಾಹಿತಿಯನ್ನು ಸರಿಯಾಗಿ ಬಳಸಿಕೊಂಡು, ಖಾನ್‌ಸಾಹೇಬರ ಮಗ್ಗಲು ಮುರಿಯಲು ಸಜ್ಜಾಗಿದ್ದ. ಈಗ ಖಾನ್‌ಸಾಹೇಬರಿಗೆ ಉಳಿದಿರುವ ಒಂದೇ ತಾಕತ್ತು ಮೀಟು ಬುಕ್ಯಾ ಕರಮ್‌ತೋಟ್ ಅವನು ಬುದ್ಧಿವಂತ, ಯುದ್ದಕಲೆಯನ್ನು ಬಲ್ಲವನಾಗಿದ್ದ, ಅವನನ್ನು ಸೋಲಿಸುವುದು ಅಸಾಧ್ಯ ಆದ್ದರಿಂದ ಹಿಂದಿನಿಂದ ಯುದ್ದ ಮಾಡಿಕೊಲ್ಲುವ ಯೋಜನೆಯನ್ನು ಸಿದ್ದಪಡಿಸಿದ. ಅವನ ಖಾಸ ಮನುಷ್ಯರ ಗುಂಪನ್ನು ರಹಸ್ಯವಾಗಿ ಬೇಟಿಯಾದ ಲತೀಫ್, "ದೇಕೋ, ಮೀಟು ಬಹಳ ಖತರ್‌ನಾಕ್ ಅದಾನ, ನಾಳೆ ನಾವು ಸಿಂಹಾಸನ ಏರಬೇಕಾದ್ರೆ ಮೀಟು ಸಾಯಬೇಕು". ಲತೀಫ್ ತನ್ನ ಹೆದರಿಕೆಯನ್ನು ವ್ಯಕ್ತಪಡಿಸಿದ್ದ.

ಈ ರಹಸ್ಯ ಕಾರ್ಯಾಚರಣೆಯನ್ನು ಲತೀಫ್ ಖಾನ್ ಹೊರಗಿನ ಕೆಲ ಮಂದಿಗೆ ಕೊಟ್ಟಿದ್ದರಿಂದ ಅವರು ಇದನ್ನು ಕರಾರುವಕ್ಕಾಗಿಯೇ ಮಾಡಿ ಮುಗಿಸುತ್ತಾರೆಂಬ ಭರವಸೆಯಿಂದ ಕೈಮೇಲೆ ಕೈಕಾಕ್ಕೊಂಡು ಕುಳಿತಿದ್ದ. ಆಸೀಫ್ ಖಾನ್ ಸಾಹೇಬರು ಮೀಟುಗೆ ಮತ್ಯಾವುದೋ ರಹಸ್ಯ ಕಾರ್ಯಾಚರಣೆ ನಿಮಿತ್ತ ಉಳಿಸಿಕೊಂಡಿದ್ದಕ್ಕೆ ತನ್ನ ಸಹೋದರ ಥಾವು ಸಣ್ಣ ಸೈನ್ಯದ ತುಕಡಿಯೊಂದಿಗೆ ಕಳುಹಿಸಿದ್ದ. ಲತೀಫ್‌ಖಾನ್ ಮೀಟುನೆ ಹೋಗುತ್ತಾನೆಂಬ ನಂಬಿಕೆಯಿಂದ ಅವರ ಹೆಡಮುರಿಗಿಕಟ್ಟಲು ಹವಣಿಸಿದ್ದ. ಪಾಪ ಲತೀಫ್ ಖಾನ್‌ನ ಗುಂಪಿಗೆ ಮೀಟು ಯಾರು, ಥಾವು ಯಾರನ್ನೋದು ಗೊತ್ತೇ ಇಲ್ಲ. ಥಾವುನ ಸೈನ್ಯದ ತುಕಡಿ ಹೈದ್ರಾಬಾದ್ ಗಡಿದಾಟಿ ಮುಂದೆ ಹೋಗುತ್ತಿದ್ದಂತೆ ಆಕ್ರಮಕಾರರು ಮುತ್ತಿಗೆ ಹಾಕುವುದನ್ನು ನಿರೀಕ್ಷಿಸಿದಂತೆ ಅವರ ಮೇಲೆ ಇವರೇ ಬಿದ್ದು ಕಾದಾಡಿದರು. ಥಾವು ಅವನ ಅಣ್ಣ ಮೀಟುನಷ್ಟು ಸಮರ್ಥನಲ್ಲದಿದ್ದರು

ಧೈರ್ಯಶಾಲಿಯಾಗಿದ್ದ. ಇವರ ಚಿಕ್ಕ ತುಕಡಿಯೇ ಸಾಕು ಲತೀಫ್‌ಖಾನ್‌ನ ಅಷ್ಟೊಂದು ದೊಡ್ಡ ವಿರೋಧಿಗಳ ಗುಂಪನ್ನು ಹೆದರಿಸಲು. ಕ್ಷಣಾರ್ಧದಲ್ಲಿ ಅವರನ್ನು ಹಿಮ್ಮೆಟ್ಟಿಸಿದರು. ಒಬ್ಬ ಮುಸುಕುಧಾರಿಯನ್ನು ಅವರ ಕುದುರೆಯ ಮೇಲೆ ಅಜಾಮತ್ತಾಗಿ ಎತ್ತಿ ಹಾಕ್ಕೊಂಡು ಹೋಗಿ ದೂರದಲ್ಲಿ ಅವನ ಬಾಯಿಯಿಂದ ಸತ್ಯ ಬಿಡಿಸಲು ಹವಣಿಸಿದರು. ಥಾವುನ ಹಿಂದಿದ್ದ ತುಕಡಿಯಲ್ಲಿ ಹೆಚ್ಚು ಬಂಜಾರಯುವಕರೆ ಇದ್ದಿದ್ದರಿಂದ ಅವರಲ್ಲಿ ಸರಿಯಾದ ಜ್ಞಾನ, ಯುದ್ಧ ಕೌಶಲ್ಯ ಜೊತೆಗೆ ಸಂಘಟನೆಯಿತ್ತು. ಹಾಗಾಗಿಯೇ ಮೀಟು ಅನೇಕ ಸಂಧರ್ಭದಲ್ಲಿ ಖಾನ್‌ಸಾಹೇಬರಿಗೆ ಹತ್ತಿರವಾಗಿದ್ದ.

ಅವನು ಎಷ್ಟು ಹಿಂಸೆ ಕೊಟ್ಟರು ಬಾಯಿ ಬಿಡಲು ತಯಾರಿರಲಿಲ್ಲ. "ಹೇಳು ಯಾರ ಕಡೆ ಸೈನಿಕ ನೀನು". ಕತ್ತಿಯ ಅಲಗಿಂದ ಅವನ ಎದೆಯಭಾಗದಲ್ಲಿ ಇರಿದ ಥಾವು. "ಮಾಲೂಮನಹಿ" ಅವನು ಹಿಂಸೆಯಿಂದ ಮಾತಾಡಿದ "ನೀನು ಹೇಳಿದ್ರೆ ನಿನ್ನ ಪ್ರಾಣ ಉಳಿಯುತ್ತೆ ಎಲ್ಲಾದರೂ ದೂರ ಹೋಗಿ ಬದಕ್ಕೋಬಹುದು, ಇಲ್ಲದಿದ್ರೆ ಇಲ್ಲೆ ನಿನ್ನ ಕೊಂದು ಹಾಕಿಬಿಡ್ತೀವಿ". ಹೆದರಿಸಿದ ಆದರೂ ಅವನು ಬಾಯಿಬಿಡುವಂತೆ ಅನಿಸಲಿಲ್ಲ. ಅವರಿಗೆ ಮುಂದೆ ಹೋಗಿ ಬರುವ ಅವಸರವಿದ್ದಿದ್ದರಿಂದ ಅವನಿಂದ ತುರಂತ ಬಾಯಿ ಬಿಡಿಸುವುದು ಬೇಕಾಗಿತ್ತು. ಬೇರೆ ಯಾರೋ ಪ್ರಯತ್ನಪಟ್ಟರು ಆಗಲಿಲ್ಲ, ಮತ್ತೊಬ್ಬ ಉಹೂಂ ಕಡೆಗೆ ತಲೆ ತೆಗೆದು ಬಿಸಾಕ್ರಿ ಅಂದ ಥಾವು, "ಬೇಡ, ಹೇಳ್ತೀನಿ, ನಮ್ಮನ್ನು ಮೀಟುನ ಕೊಲ್ಲೋಸಕ್ಕೆ. . . ." ಅನ್ನುತಿದ್ದಂಗೆ ಕತ್ತಿಯೊಂದು ಎದೆಸೀಳಿತು. ಅವನು ಮಾತನಾಡದಾದ. . "ಯಾರು, ಯಾರು, ಇವನ್ನ ಹೊಡೆದವನು" ಹುಡುಕಿದರು, ಆ ಮರಗಳ ನಡುವೆ ಪತ್ತೆಯಾಗಲಿಲ್ಲ. "ಅಂದ್ರೆ ನಮ್ಮಣ್ಣನ ಜೀವಕ್ಕೆ ಅಪಾಯವಿದೆ" ಥಾವು ಮನಸ್ಸಿನೊಳಗೆ ಅಂದುಕೊಂಡ, ಯಾರಿರಬಹುದು ಅವನು ಯಾರ ವಿರೋಧವನ್ನು ಕಟ್ಟಿಕೊಂಡಿಲ್ಲ. ಯಾರವನು? ತಲೆ ತುಂಬ ಅನುಮಾನದ ಹುಳುಗಳು ತುಂಬಿಕೊಂಡು ಕುದುರೆಯ ವೇಗ ನಿಯಂತ್ರಿಸದಾಗಿದ್ದ. ಹುಜೂರು, ಏನೋ ಯೋಚನೆ ಮಾಡ್ತಿರೋ ಹಾಗಿದೆ, ನಾವು ಹೋಗ ಬೇಕಾದ ಹಾದಿ ದೂರವಿದೆ" ಅವನ ಸೈನಿಕ ಜಾಂಪ ನೆನಪುಮಾಡಿದ. ಅವರಿವರ ಎದುರಿಗೆ ಹೇಳುವ ವಿಷಯವಲ್ಲವೆಂದು ಕೊಂಡವನೆ "ಅದು ಜಾಂಪ ನಾನು" ತಡವರಿಸಿದ. "ನನಗೆ ಗೊತ್ತು ನೀವು ಯಾಕೆ ಹೀಗಿದ್ದೀರಾ ಅಂತ" ಅವನ ಮಾರಿನೋಡಿದ. "ಯಾಕೆ"? ಥಾವು ಕೇಳಿದ. ಅವನೇನಾದರು ಸುಳಿವುಕೊಟ್ಟಾನಂತ, ಪಾಪದವು ಮೀಟು ಅಂದ್ರೆ ಪ್ರಾಣ ಕೊಡುವುದಕ್ಕೂ ಸಿದ್ದವಾಗಿರುವಾಗ ಅವನ ವಿರುದ್ಧ ಪಿತೂರಿಮಾಡುವ ಮಂದಿ ಅಲ್ಲ ಅಂತ ಖಚಿತಪಡಿಸಿಕೊಂಡು, ಪ್ರಯಾಣ ಮುಂದುವರೆಸಿದ. ಎರಡುವರೆ ದಿನಗಳ ಸತತ ಪ್ರಯಾಣದ ನಂತರ ಅವರು ತಮ್ಮ ಡೇರೆಗಳಿಗೆ ಬಂದಿದ್ದರು. ಒಂದು ದಿನ ತಂಗುವ ನಿರ್ಧಾರ ಮಾಡಿಕೊಂಡು ಆನಂತರ ಹೊರಡುವ ಯೋಜನೆ ತಯಾರು ಮಾಡಿದರು. ವಾಪಾಸು ಹೊರಡುವಾಗ ಮತ್ತೆ ಅವನ ಮೇಲೆ ಆಕ್ರಮಣ ಮಾಡುತ್ತಾರೆಂಬುದು ಖಚಿತವಾಯ್ತು ಥಾವುಗೆ, ಈಗ ಅವನ ಮೇಲೆ ದೊಡ್ಡ ಜವಾಬ್ದಾರಿ ಇತ್ತು. ಅವನ ಹೆಂಡತಿ ಮಗನ ಜೊತೆಗೆ ಲಚ್ಚಿ ಮತ್ತು ಅವಳ ಮಗ ದೇಸು ನಾಯ್ಕ ಕರಮತೋಟನನ್ನ ಸುರಕ್ಷಿತವಾಗಿ ಅವನ ಅಣ್ಣನ ಸುಪರ್ದಿಗೆ ಒಪ್ಪಿಸಬೇಕಿತ್ತು. ಅದು ಅಲ್ಲದೆ, ಇಪ್ಪತ್ತು ಸಾವಿರ ಎತ್ತುಗಳು ಇಲ್ಲೇ ಇದ್ದವು. ಅವು ಹೈದ್ರಾಬಾದ್‌ಕಡೆಗೆ ವರ್ಗಾವಣೆಯಾಗಬೇಕಿತ್ತು.

ಮತ್ತೆ ಮುಂದೆ....

ಮಾರನೆಯ ದಿನ ಸಂಜೆ ಗುಳೆ ಹೊರಟಿತ್ತು. ಎತ್ತುಗಳ ಸಮೇತ ಹೊರಟಿದ್ದರಿಂದ ಮತ್ತು ಮಕ್ಕಳು ಮರಿ ಇದ್ದಿದ್ದುರಿಂದ ಪ್ರಯಾಣ ತುಸು ನಿಧಾನವಾಗಿತ್ತು. ದೇಸುಕರಮತೋಟ್ ಮತ್ತು ಥಾವುನ ಮಗ ಲಚ್ಮ ಕರಮತೋಟ್ ಸಾಕಷ್ಟು ದೊಡ್ಡವರಾಗಿದ್ದರು. "ಕಾಕ ಸಾ, ನಾನು ಕುದುರೆ ಸವಾರಿ ಮಾಡ್ಲಿ" ದೇಸು ಕೇಳಿದ. "ಅರೇ ಬೇಟ, ಮುಂದೆ ಕುದುರೆ ಸವಾರಿದ ಒಂದೆ ಯಾಕೆ ಇದೆಲ್ಲಾ ಜವಾಬ್ದಾರಿ ನಿಮ್ಮಿಬ್ಬರ ಮೇಲೆ ಬೀಳುವುದು, ಹೂಂ, ಆಗಲಿ" ಅಂದ. ಪಳಗಿದ ಕುದುರೆಯನ್ನು ಅವನಪ್ಪನಂತೆ ನೈಪುಣ್ಯತೆಯಿಂದ ಓಡಿಸತೊಡಗಿದ. ಥಾವುಗೆ ತಡೆಯಲಾರದ ಅಚ್ಚರಿಯಾಗಿತ್ತು. ತನ್ನಣ್ಣನ್ನ ಮೀರಿಸುತ್ತಾನೆಂಬ ನಂಬಿಕೆ ಅವನಿಗೆ ಬಂದಿತ್ತು. ತನ್ನ ಮಗನು ಹಾಗೆ ಆದರೆ ನಮ್ಮ ಬದುಕ ಸಾರ್ಥಕವಾಗುತ್ತೆ ಅಂದುಕೊಂಡ. ಹೊತ್ತು ಮುಳುಗಿ ಕತ್ತಲಾಗುತ್ತಿದ್ದಂತೆ ನೀರು ಇದ್ದ ಜಾಗದಲ್ಲೇ ತಾತ್ಕಾಲಿಕ ಡೇರೆಗಳನ್ನು ಹಾಕಿಕೊಳ್ಳಲಾಯಿತು. "ಬೋಡಿ, ತಾವೇನು ಕಾಳಜಿಮಾಡಬೇಡಿ, ದೇಸು ಈಗ ದೊಡ್ಡವನಾಗಿದ್ದಾನೆ, ಅಣ್ಣನಂತೆ ಅವನು ಮುಂದೆ ದೊಡ್ಡ ವ್ಯಾಪಾರಿ ಆಗೇ ಆಗುತ್ತಾನೆ" ಲಚ್ಮಿಗೆ ಹೇಳಿದ. "ದೇವರಸಾ, ಏನೋ ಮಾ ಸಾತುಭವಾನಿಯಾಡಿಯ ದಯೆಯಿಂದ ಏನೆ ಆದರೂ ಅದೆಲ್ಲಾ ನಿಮಗೆ ಸೇರಬೇಕು, ನೀವು ಅಷ್ಟೊಂದು ಕಾಳಜಿಯಿಂದ ಅವನನ್ನು ಬೆಳೆಸುತ್ತಾ ಇದ್ದೀರಾ, ಇನ್ನು ಮೇಲೆ ಅವನಿಗೆ ನೀವೆ ಗತಿ" ಬಾಯಿತಪ್ಪಿ ಹೇಳಿದಳೋ ಇಲಾ ಹೀಗೆ ಆಗುವುದು ಎಂಬ ದೂರದೃಷ್ಟಿಯೋ ಅರಿಯುವಾಗಿದ್ದ. ಲಚ್ಮಿಯ ಮಾತುಗಳಿಂದ ಥಾವು ವಿಚಲಿತನಾದ. "ಇಲ್ಲ, ಅಣ್ಣನಿಗೆ" ಕನಲಿದ "ದೇವರಸಾ, ಏನಾಯ್ತು ಯಾಕಿಂಗೆ ಒಬ್ಬರೆ" ಲಚ್ಮಿ ಎಚ್ಚರಿಸಿದಳು. "ಆಂ, ಅದು, ಏನೋ ಒಂದು ಕೆಟ್ಟ ಕನಸು" ಥಾವು ಜಾರಿಕೊಂಡು, ಜಾಂಪನ ಬಳಿಹೋದ, ಪಕ್ಕದಲ್ಲಿ ಯಾವುದಾದರೂ ಡೇರೆಗಳಿದ್ದರೆ, ಹೆಂಡತರಲು ಹೋಗುವ ನಿರ್ಧಾರಕ್ಕೆ ಬಂದ. ಅವನ ಒಳಗಡೆ ಅನುಮಾನ ಗಾಢವಾಗಿ ಕಾಡುತ್ತಿತ್ತು. ಯಾರಿರಬಹುದು ನಮ್ಮ ಅಣ್ಣನ ಶತ್ರು, ಖಾನ್‌ಸಾಹೇಬರಿಗೆ ಆಗದವರು ಯಾರು? ಹೊಟ್ಟೆಯಲ್ಲಿ ಸಂಕಟ, ತಳಮಳ, ಏನು ಮಾಡಲು ಆಗದ ಅಸಹಾಯಕತೆ ಗಾವುದ ದೂರ. ಈಗ ಏನು ಮಾಡದ ಸ್ಥಿತಿ. ಕಡಿಮೆ ಅಂದರೂ ವಾರದ ಮೇಲೇನೆ ಪ್ರಯಾಣ ಆಗುತ್ತದೆ. ಅಷ್ಟು

ಸಮಯದ ವರೆಗೆ ನನಗೆ ಹುಚ್ಚು ಹಿಡಿಯುತ್ತೆ. ಥಾವು ತಳಮಳಗೊಂಡಿದ್ದ, "ಅಣ್ಣಾ, ಅಣ್ಣಾ ಯಾಕೆ ಹೀಗಾಯ್ತು. ಅಣ್ಣಾ" ಅವನು ರೋಧಿಸಿದ. ಆದರೆ ಕೇಳುವವರು ಯಾರು ಇರಲಿಲ್ಲ. ಜಂಪಾ ಸುಮ್ಮನೆ ನೋಡುತ್ತಿದ್ದ, "ಹೂಜೂರ್ ಯಾಕಿಂಗೆ ಮಂಕಾಗಿದ್ದೀರಾ" ಎಚ್ಚರಿಸಿದ. "ಇಲ್ಲಾ, ಯಾಕೊ ಬೇಸರ ಆಯ್ತು ಅಲ್ಲಿ ನಮ್ಮಣ್ಣಗೆ ಏನಾಗಿದೆಯೊ", ಮಾತು ಹೊರಡಲಿಲ್ಲಾ. ತಾನೊಬ್ಬನೆ ಹೋಗೋಣವೆಂದರೆ ಮಕ್ಕಳು, ಹೆಂಗಸರು, ಇಡಿ ದೊಡ್ಡದಂಡು ಅವನ ಹಿಂದಿದೆ, ಆದದ್ದಾಗುತ್ತೆ ಎಲ್ಲಾ ಕಾಪಾಡುವವಳು ಆ ದೇವಿ ಅದಾಳ ಅಂದುಕೊಂಡವನೆ ಆದಷ್ಟು ವೇಗವಾಗೆ ಹೊರಟಿದ್ದ. ನಾಲ್ಕು ದಿನಗಳ ಪ್ರಯಾಣ ಉಳಿದಿರಬಹುದು ಹೈದ್ರಾಬಾದಿಗೆ ಅಂದುಕೊಳ್ಳುತ್ತಿರುವಾಗಲೇ ಅವನ ಅಣ್ಣನ ಖಾಸಮನುಷ್ಯ ಮಾರುವೇಷದಲ್ಲಿದ್ದ ಸಾಮ್ಯನಾಯ್ಕ ಥಾವುನ ಬೆಟ್ಟಿಯಾದ. "ಹೂಜೂರ್, ನೀವು ಹೈದ್ರಾಬಾದ್ ಹಾದಿಯನ್ನು ಬಿಟ್ಟು ಮುಂದೆ ಬರುವ ಕರ್ನಾಟಕದ ಕಡೆಗೆ ಹೋಗಿ ಅವಿತುಕೋಬೇಕಂತೆ ಇದು ಮೀಟು ಬಯ್ಯ ರವರ ಅಪ್ಪಣೆ" ಅಂದ "ಅಣ್ಣಾ ಎಲ್ಲಿ" ಕೇಳಿದ ಥಾವು. "ಅವರ ಬಗ್ಗೆ ಯೋಚನೆ ಬೇಡಿ, ಅವರು ಬದುಕಿದ್ದರೆ, ಯಾವತ್ತಾದರೂ ಬಂದು ನಿಮ್ಮನ್ನ ಕಾಣುತ್ತಾರೆ. ನಿಮ್ಮನ್ನು ಹುಡುಕಿಕೊಂಡು ಸೈನ್ಯದ ತುಕಡಿ ಹೈದ್ರಾಬಾದ್ ಬಿಟ್ಟಿದೆ. ಸುದ್ದಿರವಾನಿಸಿದವನು ಕ್ಷಣಾರ್ಧದಲ್ಲಿ ನಾಪತ್ತೆಯಾಗಿದ್ದ. ಥಾವು ತಲೆನೆ ಓಡಲಿಲ್ಲಾ, ಅವನು ಸಂಪೂರ್ಣವಾಗಿ ಗೊಂದಲದಲ್ಲಿದ್ದ. "ಬೋಡಿಸಾ ತಮ್ಮ ಹತ್ತಿರ ಒಂದು ಮಾತಿದೆ" ಅಂದ ಲಚ್ಮಿ ಗಾಬರಿಯಾದಳು. "ಹೇಳಿ ದೇವರನಾ" ಅಂದಳು. ಅವನು ಅಣ್ಣಾ ಕಳುಹಿಸಿದ ಸುದ್ದಿಯಿಂದ ಅವನಿಗಾಗಿರುವ ಅಘಾತ, ಅದನ್ನ ನಂಬುವುದೋ ಬಿಡುವುದೋ ಗೊತ್ತಾಗದೆ ಒದ್ದಾಡುತ್ತಿರುವುದು ಒಂದಾದರೆ, ಯಾರಾದರು ಶತ್ರುಗಳು ಬೇಕಂತಲೇ ಅನುಮಾನ ವ್ಯಕ್ತಪಡಿಸಿದ. ಲಚ್ಮಿ ಸ್ವಲ್ಪಹೊತ್ತು ಆಲೋಚಿಸಿದವಳೆ ಇಡಿ ಸೈನ್ಯ ಮತ್ತು ಎತ್ತುಗಳನ್ನು ಕರ್ನಾಟಕದ ಕಡೆಗೆ ತಿರುಗುವಂತೆ ಅಪ್ಪಣೆ ಮಾಡಿದಳು.

ಥಾವುನ ಬೆನ್ನಟ್ಟಿದ್ದ ಲತೀಫ್‌ಖಾನ್‌ನ ಸೈನಿಕರಿಗೆ ಸೋಲಾದ ವಿಷಯ ತಿಳಿಸಿದರು. "ನಂಗೆ ಗೊತ್ತಿತ್ತು ಅವನು ತುಂಬಾ ಬಲಶಾಲಿ ಅಂತ" ಅಂದ್ಕೊಂತ ಖಾನ್‌ಸಾಹೇಬರ ಕೋಟೆಯಿಂದ ಹೊರಗಡೆ ಬರುತ್ತಿದಂತೆ ಮೀಟು ಬುಕ್ಕಾ ಕುದುರೆ ಏರಿ ವೇಗವಾಗಿ ಹೊರಟಿರುವುದನ್ನು ನೋಡಿ ದಂಗಾದ, "ಅರೆ ಇಸ್ಕಿ ಮಾತೆ ಎಯ್, ಇವತ್ತೊ ಇಲ್ಲವ್ನೆ ಹಾಗಾದ್ರೆ ಅವನು ಇವನ್ದುಕೆ ತಮ್ಮ ಖಲಾಸ್ ಮೀಟುನ್ ಕತೆ ಮುಗಿತು" ಲತೀಫ್‌ಖಾನ್ ಖುದ್ದಾಗಿ ಮುಸುಕುಧಾರಿಯಾಗಿ ಮೀಟುನ ಹಿಡಿಯಲು ಇಪ್ಪತ್ತು ಕಟ್ಟುಮಸ್ತಾದ ಸೈನಿಕರೊಂದಿಗೆ ಅವನ್ನನು ಬೆನ್ನಹತ್ತಿದ. ಮೀಟು ಈಗ ಬಹಳ ಸೂಕ್ಷ್ಮವಾಗಿ ಕೆಲಸಮಾಡುತ್ತಿದ್ದ. ಲತೀಫ್‌ಗೆ ಅವನ ಮತ್ತು ಸೈನಾಜ್‌ಳ ಸಂಬಂಧ ಗೊತ್ತಾಗಿ ಒಳಗೊಳಗೆ ಕತ್ತಿಮಸಿಯುತ್ತಿದ್ದಾನೆಂದು ತಿಳಿದಿತ್ತು. ಆದರೆ ಅವನು ಇಷ್ಟು ಬೇಗ ಅವನ ಬೇಟೆಯಾಡುತ್ತಾನೆಂದು ಅಂದುಕೊಂಡಿರಲಿಲ್ಲ. ಅವನು ಹೊರಟಿದ್ದ ದಿಕ್ಕನ್ನು ಬದಲಿಸಿದ. ಲತೀಫ್‌ನ ಹದ್ದಿನ ಕಣ್ಣುಗಳು ಅವನನ್ನು ಹುಡುಕಿ ತೆಗೆಯುವುದರಲ್ಲಿ ಯಶಸ್ವಿಯಾದವು. "ಅರೇ ಮೀಟು ಎಲ್ಲಿ ಹೋಗ್ತೀಯಾ ಈ ಲತೀಫ್‌ಖಾನ್ ಕಣ್ಣುತಪ್ಪಿಸಿ? ಉಹೂಂ, ಅಷ್ಟು ಸುಲಭವಲ್ಲ," ಅಂದವನೆ ಅವನ ಮೇಲೆ ಮುಗಿಬಿದ್ದ. ಏಕಾಏಕಿ ಬಂದ ಮುಸ್ಲಿಂ ತುಕಡಿಯ ಕಂಡು ಒಂದು ಕ್ಷಣ ಅಂಜಿದ ಮೀಟು ಧೈರ್ಯಗೆಡದೆ ಹೋರಾಡಿದ. ಅವನು ಮಾನಸಿಕವಾಗಿ ಸಿದ್ದವಾಗಿರಲಿಲ್ಲ. ಆದರೆ ಲತೀಫ್‌ಖಾನ್ ಅವನ್ನನು ಕೊಲ್ಲಲು ಎಲ್ಲಾ ರೀತಿಯೋಜನೆಗಳನ್ನು ಸಿದ್ದಪಡಿಸಿದ್ದರಿಂದ ಅವನನ್ನು

ಮುಗಿಸಿಯೇ ಬೇರೆ ಕೆಲಸವೆಂದುಕೊಂಡಿದ್ದ. ಮೀಟು ಹದಿನೆಂಟು ಜನರನ್ನು ಬಲಿ ತೆಗೆದುಕೊಂಡ. ಆದರೆ ಸ್ವಲ್ಪ ದುರ್ಬಲನಂತೆ ಕಂಡೊಡನೆ ಲತೀಫ್ ಅವನ ಮೇಲೆ ಪ್ರಹಾರ ಮಾಡಿ ಕೊಂದುಬಿಟ್ಟ. ಅವನ ಹೆಣವನ್ನು ಒಯ್ದು ಕೋಟೆಯ ಸಮೀಪ ಬಿಸಾಡಿ ಆಸೀಫ್ ಖಾನ್‌ಗೆ ವಿಷಯ ತಿಳಿದು ಭಾವನಾತ್ಮಕವಾಗಿ ಅವನನ್ನೂ ಕೂಡ ಹೆದರಿಸುವ ಯೋಜನೆ ಹಾಕಿದ್ದ. ಹೆಣವನ್ನು ಬಿಸಾಡಿ ಪಲಾಯನಗೈದ ಲತೀಫ್ ಅವನು ಅಂದುಕೊಂಡ ಹಾಗೆಯೇ ಎಲ್ಲಾ ನಡೆಯಿತು. ಈಗ ಅವನ ಕಣ್ಣು ಮೀಟುನ ಹೆಂಡತಿ ಮಕ್ಕಳ ಮೇಲೆ ಇರುವುದು ಮೀಟುಗೆ ತಿಳಿದಿತ್ತು. ಗಾಯದಿಂದ ದೇಹ ನುಜ್ಜುಗೆಣಜ್ಜಾಗಿತ್ತು. ಪ್ರಾಣ ಹಾರಿಹೋಗುವ ಸ್ಥಿತಿಯಲ್ಲಿದ್ದರೂ ಒಂದೇ ಒಂದು ಸಂದೇಶವನ್ನು ತನ್ನ ಸಹೋದರನಿಗೆ ರವಾನಿಸುವ ಸಲುವಾಗಿ ಬಿಗಿಯಾಗಿ ಜೀವ ಹಿಡಿದಿದ್ದ. ಬಾಯಾರಿಕೆ, ರಕ್ತವೆಲ್ಲಾ ಹೊರಗೆ ಹೋಗಿ ಸಾವು ಬದುಕಿನ ನಡುವೆ ಸೆಣಸಾಡುತ್ತಿದ್ದ. ಅವನ ಆವಸ್ಥೆಯನ್ನು ನೋಡಿ ಮಂದಿ ಸೇರಿಸಿದ್ದರು. ಅವನ ಗೂಢಾಚಾರರು ಅವನ ಅಪ್ಪಣೆಯಂತೆ ಮಂದಿಯೊಳಗೆ ಸೇರಿಕೊಂಡು ಪರಿಸ್ಥಿತಿಯನ್ನು ತಿಳಿಯುತ್ತಿದ್ದರು. ಅವರಲ್ಲಿ ಒಬ್ಬನಾದ ಅವನ ಖಾಸಾ ಮನುಷ್ಯ ಸ್ವಾಮ್ಯನಾಯ್ಕನಿಗೆ ಬಹಳ ಪ್ರಾಯಾಸಪಟ್ಟು ಕೊನೆಯ ಸಂದೇಶವನ್ನು ಹೇಳಿದ. “ನಮ್ಮವರ ಜೀವಕ್ಕೆ ಗಂಡಾಂತರವಿದೆ. ಅವರನ್ನು ಲತೀಫನ ಸೈನಿಕರು ಹುಡುಕಾಡುತ್ತಿದ್ದಾರೆ. ಹೈದ್ರಾಬಾದ್ ಒಳಗೆ ಬರದೆ ಮುಂದೆ ಹಾಗೆ ಕರ್ನಾಟಕದ ಗಡಿ ಕಡೆಗೆ ಹೋಗಿ ತಪ್ಪಿಸಿಕೊಳ್ಳಲು ಹೇಳು, ನಾನು ಸಾಯುತ್ತಿದ್ದೇನೆ. ಈ ವಿಷಯ ಅವರಿಗೆ ಯಾವ ಕಾರಣಕ್ಕೂ ಹೇಳಬೇಡ. ನನ್ನ ಮಗ ದೇಸುಗೆ ಒಳ್ಳೆ ಸಂಬಂಧ ನೋಡಿ ಮದುವೆ” ಮಾಡು ಹೊರಡದೆ ಮೀಟು ಶವವಾಗಿದ್ದ.

ಖಾನ್‌ಸಾಹೇಬರು ವಿಚಲಿತರಾಗಿದ್ದರು. ಇದು ಯಾರ ಕೈವಾಡವೆಂದು ತಿಳಿಯದೆ ಬಹಳ ಸಂಕಟಪಟ್ಟರು. ಮೀಟು ಬುಕ್ಯಾಕರಮತೋಟ್ ಎಂಬ ಶೂರನ ಹೆಣವನ್ನು ಖುದ್ದಾಗಿ ಖಾನ್ ಸಾಹೇಬರೆ ಅವರ ಪದ್ಧತಿಯಂತೆ ಚಿತೆ ಮಾಡಿ ಅದಕ್ಕೆ ಅಗ್ನಿ ಸ್ಪರ್ಶನೀಡಿದರು. ಮೀಟುನ ಸಹೋದರ ಥಾವು ಅವನ ಹೆಂಡತಿ ಏನಾದರು ಎಂಬುದು ಮಾತ್ರ ಅವರಿಗೆ ತಿಳಿಯಲೇ ಇಲ್ಲ. ಲತೀಫ್‌ಖಾನ್ ತಾನು ಮೊದಲ ಜಯುಪಡೆದು ಸಿಂಹಾಸನಕ್ಕೆ ಹತ್ತಿರವಾದ್ದದ್ದನ್ನು ಸಂಭ್ರಮಿಸುತ್ತಿರುವಾಗ ಬಾಯಿತಪ್ಪಿ ಬಂಜಾರರನ್ನು ಖಾನ್‌ಸಾಹೇಬರಿಂದ ದೂರ ಮಾಡಿದ ಬಗೆಯನ್ನು ನಿಷೆಯಲ್ಲಿ ಆಡಿದ್ದ. ಅದು ಅವನ ಜೀವಕ್ಕೆ ಸಂಚಕಾರತರುವುದೆಂದು ತಿಳಿದಿರಲಿಲ್ಲ. ಖಾನ್ ಸಾಹೇಬರು ಸುದ್ಧಿ ತಿಳಿದ ತಕ್ಷಣವೇ ಕುಡಿದು ಮತ್ತಿನಲ್ಲಿ ತೂರಾಡುತ್ತಿದ್ದ ಅವನನ್ನು ಅಳಿಯನೆಂದು ಕರುಣೆ ತೋರಿಸದ ಮೀಟುನಂತ ಯೋಧನನ್ನು ಮೋಸದಿಂದ ಮುಗಿಸಿದಕ್ಕೆ ಸೇಡುತೀರಿಸಿಕೊಂಡಿದ್ದರು.

ಹಗಲು ರಾತ್ರಿ ವಿಶ್ರಾಂತಿಯೇ ಇಲ್ಲದೆ ಲಚ್ಮಿಯ ನೇತೃತ್ವದಲ್ಲಿ ಥಾವು ಮತ್ತು ಉಳಿದ ಸೈನಿಕರು, ಎತ್ತುಗಳನ್ನು ಬಹಳ ದೂರ ಮುಂದೆ ಬಂದಿದ್ದರು. ಲಚ್ಮಿ ಈಗ ಗಂಡನ ಕುರಿತು ಚಿಂತಿತಳಾಗಿದ್ದಳು. ಅವಳಪ್ಪ ಭಂಗಿಯಿಂದ ಬಳುವಳಿಪಡೆದಿದ್ದ ಬುದ್ಧಿವಂತಿಕೆಯನ್ನ ಇಲ್ಲಿ ಪ್ರಯೋಗಮಾಡಿದ್ದಳು. ಅಪಾಯವಿದೆ ಎಂದು ಕಂಡಾಗ ಭಾವನಾತ್ಮಕವಾಗಿ ಕೈಕಟ್ಟಿ ಕುಳಿತರೆ ಶರೀರದ ಮೇಲೆ ರುಂಡ ಇರುವುದಿಲ್ಲ. ಬುದ್ಧಿವಂತನಾದವನು ಮೊದಲು ಸುರಕ್ಷಿತವಾಗಿ ಜಾಗವನ್ನು ನೋಡಿಕೊಂಡು ಆಮೇಲೆ ಅಳುವುದು ಹಳಹಳಿಸುವುದು ಇದ್ದೇ ಇದೆ. ಲಚ್ಮಿ

ಸಂಪೂರ್ಣವಾಗಿ ಕಮರಿಹೋಗಿದ್ದಳು. ಬೆಂಕಿಯಂತ ತನ್ನ ಗಂಡ, ಅವಳು ಹೆಚ್ಚು ಮಾತಾಡದೆ ಮೌನವಹಿಸಿದ್ದಳು. "ಅತ್ತಿಗೆ, ತಾವೆ ಹೀಗೆ ಸುಮ್ಮನಾದರೆ ನಾವು ಏನು ಮಾಡಬೇಕು?" ಥಾವು ಅವರ ಆರೋಗ್ಯದ ದೃಷ್ಟಿಯಿಂದ ಹೇಳಿದ". ಥಾವು ಆತನೆ ಇಲ್ಲ ಅಂದಮೇಲೆ ನಾನು", ಮಾತಾಡಲಿಲ್ಲಾ. "ಅತ್ತಿಗೆ ಅಣ್ಣನಿಗೆ ಏನು ಆಗಿಲ್ಲ ಅವನು ಎಂಥಾ ಬೆಂಕಿಯ ಕೆಂಡ ಅನ್ನೋದು ನನಗೆ ಗೊತ್ತು ನೀವು ವ್ಯರ್ಥ ಸಂಕಟ ಪಡುತ್ತಿದ್ದೀರಾ" ಸಮಾಧಾನಪಡಿಸಲು ನೋಡಿದ. ಅವಳಿಗೀಗ ಮಾತು ಬೇಕಾಗಿರಲಿಲ್ಲ. ಕಣ್ಣಂಚಿನಲ್ಲಿ ಹನಿಯೊಂದು ಹೊರಧುಮ್ಮಿಕಲು ಹವಣಿಸುತ್ತಿತ್ತು. ಅದನ್ನು ಗಟ್ಟಿಯಾಗಿ ಒಳಗೆ ಅದುಮಿಡುವ ಪ್ರಯತ್ನ ಮಾಡುತ್ತಿರುವುದು ಥಾವುಗೆ ಕಂಡಿತು. "ದೇಸು ಈಗ ದೊಡ್ಡವನಾಗಿದ್ದಾನೆ" ಅವಳ ಮನಸ್ಸಿಗೆ ಹಿತವಾಗುವ ಮಾತುಗಳನ್ನು ಆಡಿ ಅವಳಿಗೆ ಪ್ರಾಪಂಚಿಕ ಜಗತ್ತಿಗೆ ತರಲು ಹವಣಿಸಿದ. "ಹಾಂ, ದೊಡ್ಡವನಾಗಿದದಾನೆ. ಮೀಟುಬುಕ್ಯಾಕರಮತೋಟನ ವಂಶವನ್ನು ಬೆಳಗ್ತಾನೆ ನನ್ನ ಮಗ" ಧ್ವನಿಯಲ್ಲಿ ಖಚಿತತೆಇತ್ತು. ಥಾವು ಆ ಮಾತುಗಳಲ್ಲಿ ಆಶೀರ್ವಾದವನ್ನು ಗುರುತಿಸಿದ. "ಬದುಕಿನ ಸಾರ್ಥಕತೆಗೆ ನಿಮ್ಮ ಈ ಹುರುಪಿನ ಮಾತುಗಳೇ ಸಾಕು. ಈಗ ನಮಗೆ ಯಾವ ನೆಲೆ ಇಲ್ಲ. ಅಣ್ಣ ಯಾಕೆ ಹೈದ್ರಬಾದಿನಿಂದ ದೂರ ಉಳಿಯುವಂತೆ ಹೇಳಿದ ಎನ್ನುವುದನ್ನು ಆ ಮನುಷ್ಯ ಹೇಳಲಿಲ್ಲಾ. ವಾಪಾಸ್ಸು ರಾಜಸ್ಥಾನಕ್ಕೆ ಹೋಗುವುದು ಕನಸಿನ ಮಾತು. ನಾವುಗಳು ಇನ್ನು ಇಲ್ಲೆ ಹಾದಿಹೆಣಗಳಾಗುತ್ತೇವೆ ಏನೋ ಎನ್ನುವ ಭಯ ಕಾಡ್ತಿದೆ." "ಅವನ ಧ್ವನಿಯೊಳಗಿನ ಹೆದರಿಕೆಯನ್ನು ಗುರುತಿಸಿ" "ಅರೇ ಥಾವು, ಎಲ್ಲರೂ ಸಾಯುವುದೇ, ಆದರೆ ಸಾರ್ಥಕ ಬದುಕನ್ನ ಬದುಕಿ ಯಾರು ಯಾರ ಮೇಲೂ ಹೊರೆಯಾಗದಂತೆ ಸಾಯುವುದೇ ನಿಜವಾದ ಬದುಕು. ನಮ್ಮ ನಸೀಬದಲ್ಲಿ ಈ ನಾಡಿನ ಅನ್ನದ ಋಣವಿದೆ. ಹೂಂ, ಸಾಗಲಿ ಬಂದದನ್ನ ಅನುಭವಿಸುವ" ದೃಢನಿರ್ಧಾರವನ್ನು ವ್ಯಕ್ತಪಡಿಸಿದ್ದಳು, ಥಾವು ಅವನ ಅಣ್ಣನ ಮಗ ದೇಸು ಬುಕ್ಯಾಕರಮತೋಟನನ್ನ ಮುಂದೆ ಬಿಟ್ಟು ಹಿಂದಿನಿಂದ ತಾನು ಸಣ್ಣಪುಟ್ಟ ವ್ಯಾಪಾರವನ್ನು ಆರಂಭಿಸಿದ. ಹೇಗೆ ಕಾಲಕಳೆದಂತೆ ಥಾವುನ ಮಗ ಲಚ್ಮಬುಕ್ಯಕರಮತೋಟ್‌ನನ್ನು ಮುಂದೆ ತರುವ ಇಂಗಿತವನ್ನು ಅತ್ತಿಗೆಯ ಹತ್ತಿರ ಪ್ರಸ್ತಾಪಿಸಿದಾಗ ಬಹಳ ಸಂತೋಷದಿಂದಲೇ ಒಪ್ಪಿಗೆ ಎಂದು ಸಹೋದರರಿಬ್ಬರು ಒಟ್ಟಿಗೆ ವ್ಯಾಪಾರ ಮಾಡಲು ಅನುಮತಿಕೊಟ್ಟಳು. ದೇಸುಕರಮತೋಟ ಮತ್ತು ರೂಪ್ಲಿಯ ಮಗಳು ಸೋಮ್ಲಿ ಒಳ್ಳೆಯ ಜೋಡಿ ಎಂದು ಲಚ್ಮಿ ರೂಪ್ಲಿ ಎದುರಿಗೆ ಪ್ರಸ್ತಾಪಮಾಗಿಪಳು. ರೂಪ್ಲಿಯ ಸಲುವಾಗಿ ತಾನು ಹುಟ್ಟಿ ಬೆಳೆದ ಪರಿಸರವನ್ನೇ ತ್ಯಾಗಮಾಡಿದ ತನ್ನ ಅಣ್ಣ ಮೀಟುವಿಗೆ ಜೀವಕೊಡಲು ಸಿದ್ದಳಾಗಿದ್ದವಳಿಗೆ, ಹೆಣ್ಣುಕೊಡುವುದೇನು ದೊಡ್ಡದು, ಅನಿಸಲಿಲ್ಲ. "ಬೋಜಾಯಿ, ನಿನ್ನ ಮಗನಿಗೆ ಸಾವಿರಾರು ಜನ ಹೆಣ್ಣುಕೊಡ್ತಾರೆ, ಆದರೆ ಸಂಬಂಧಕ್ಕಾಗಿ ತ್ಯಾಗಮಾಡುವ ನಿನ್ನ ಮಾತಿಗೆ ಇಲ್ಲಾ ಅಂತ ಹೇಳ್ತಿನಾ. ಈ ಜೀವನನ್ನಣ್ಣ ಕೊಟ್ಟ ಬಿಕ್ಷೆ, ಈ ಬದುಕು ನೀವು ಕೊಟ್ಟ ಬಿಕ್ಷೆ. ಅವಳು ನನ್ನ ಮಗಳಲ್ಲಿ ನಿಮ್ಮ ಮಗಳು" ರೂಪ್ಲಿ ಭಾವನಾತ್ಮಕಳಾಗಿದ್ದಳು. ಬಂಜಾರ ರೀತಿ ರಿವಾಜಿನಂತೆ ವಾತ್‌ಬೋಲಿಮಾಡಲಾಯಿತು. ಹಾಗೆನೆ ಆಟ್ಮರಸಾಂಜೇರ ಮದುವೆ ಮೂಹರ್ತಕ್ಕೂ ಸಮಯ ನೋಡಲಾಯಿತು. ಪಾನ್‌ಪೇರುವ ಕಾರ್ಯ ಮುಗಿದ ಮೇಲೆ ಮಾತುಗಟ್ಟಿಯಾಯಿತು. ಒಂದೇ ಮನೆಯಲ್ಲಿ ಬೆಳೆದರು ಸೊಮ್ಲಿ ಈಗ ಗುಂಗಟೋದಿಂದ ಮಾರಿಮುಚ್ಚಿಕೊಳ್ಳತೊಡಗಿದಳು. ಈಗ ಅವಳಿಗೆ ಕುಂವಾರಿರ

ಕಾಂಚಳಿತೊಡಿಸಲಾಯಿತು. ಒಂದೆರಡು ತಿಂಗಳಲ್ಲಿ ಲಚ್ಮೆ ಇದ್ದು ಗೋಳಪೇರೆರಶಾಸ್ತ್ರ ಮುಗಿಸಿದಳು. ಅಲ್ಲಿಗೆ ಮದುವೆಯ ತೊಂಭತ್ತು ಪ್ರತಿಶತ ಮಾತುಗಟ್ಟಿಯಾದಂತೆ. ಹುಡುಗಿಮನೆಯವಳೆ ಆಗಿದ್ದರು ಪದ್ಧತಿಯನ್ನು ಬಿಡಲಾದೀತೆ? ಥಾವುನೆ ಮುಂದೆ ನಿಂತು ಅವರೊಟ್ಟಿಗೆ ಬಂದವರೆಲ್ಲಾ ಸೇರಿ ಆಂದ್ರದ ಕರ್ನಾಟಕದ ಗಡಿಯಲ್ಲೇ ಡೇರೆಹಾಕಿಕೊಂಡಿದ್ದರು. ಮದುವೆಗೆ ಎಲ್ಲಾರು ಪಕ್ಕದ ಪೇಟೆಗೆ ಹೋಗಿ ಮದುವೆ ಸಾಮಾನು ತಂದರು. ಹುಡುಗನಿಗೆ ಕೆಂಪುಶಾಲು ಅವನ ಖಾಸದ ಹುಡುಗಿಗೆ ಖಾಸಡಿ, ಅವನಿಗೆ ಅಂಗಿ, ಪಂಚೆ, ಬಾಂಡೊಜಿಗಲ ಆದಮೇಲೆ 'ಗೋಟಾರ' ಹಾಟಮಾಡಲಾಯಿತು. ಅದಾದ ಮೇಲೆ ಹುಡುಗ ಕಡೆಯವರು ಹುಡುಗಿಯವರಿಗೆ 'ಗೋಟೇರ' ಹಾಟಂತವಮಾಡಿಸಿದರು. ಲಚ್ಮೆ ಮಗನಿಗೆ ಒಣಕೊಬರಿ, ಉತ್ತತ್ತಿ, ಕಾಡಕ್ಕೆ ಬೇಕಾದ ಸಾಮಾನುಗಳಾದ ಹಿಪ್ಲಿ, ಮೋಡಿ, ಜಾಕಾಯಿ, ಬೆಲ್ಲಾ ಖರೀಧಿಸಿದಳು. ಮದುವೆಯ ಮುಂಚೆ ಮುಂದಿನ ಸನ್ನಿವೇಶಗಳನ್ನು ಎದುರಿಸುವಂತೆ ಸಜ್ಜುಗೊಳಿಸಲು ಅವನಿಗೆ ಶಕ್ತಿ ಬೇಡವೇ, ಹದಿನೈದು ದಿನ ಮುಂಚಿತವಾಗಿಯೇ ಪ್ರತಿದಿನ ಮುಂಜಾನೆ ಕೊಬ್ಬರಿ ಉತ್ತತ್ತಿ ಕುಟ್ಟಿ ತುಪ್ಪಬೆಲ್ಲ ಹಾಕಿ ಕಟ್ಟಿದ ಉಂಡೆಗಳನ್ನು ತಿಂದು ಎರಡು ನಾಟಕೋಳಿ ಮೊಟ್ಟೆ ಕುಡಿದು ಒಂದು ತಟ್ಟೆ ಕಾಡಮಸಾಲೆ ಕುಡಿಯುತ್ತಿದ್ದ ದೇಸುಬುಕ್ಯಾ 'ಕರಮತೋಟ್'. ಅಣ್ಣನಂತೆ ತಮ್ಮ ಲಚ್ಮ ಬುಕ್ಯಾ ಕರಮ್‌ತೋಟ್ ಕೂಡ ದೊಡಮ್ಮ ಕೊಟ್ಟಿದ್ದನ್ನ ಅವನೊಟ್ಟಿಗೆ ತಿಂದು ತಯಾರಿಯಾಗುತ್ತಿದ್ದ. ಅವನ ದೊಡ್ಡಮ್ಮ ಲಚ್ಮೆಗೆ ದೇಸು-ಲಚ್ಮನಲ್ಲಿ ಭಿನ್ನವೇ ಇರಲಿಲ್ಲ, ಇಬ್ಬರೂ ಒಡಹುಟ್ಟಿದವರಂತೆ. ಥಾವು ಮತ್ತು ಮೀಟು ಇದ್ದಂತೆ ಅಂತಾನೆ ತಿಳಿದುಕೊಂಡಿದ್ದಳು. ಲಚ್ಮ ಒಂದು ವರ್ಷದ ಕಾಲ ಚಿಕ್ಕವನಿದ್ದುದರಿಂದ ಯಾರಾದರು ಸೂಕ್ತ ಹುಡುಗಿ ಸಿಕ್ಕರೆ ಅದೇ ಮದುವೆಯಲ್ಲಿ ಅವನ ಮದುವೆಯನ್ನು ಮುಗಿಸುವ ಆಲೋಚನೆ ಥಾವುನದಾಗಿತ್ತು. ಅವರ ವ್ಯಾಪಾರದಲ್ಲೇ ಇದ್ದ ಡಾವೋಬದ್ಯಾನ ಹುಡುಗಿಯನ್ನು ಲಚ್ಮನಿಗೆ ತಂದುಕೊಳ್ಳುವ ಇರಾದೆಯಿಂದ ಅವನು ಒಪ್ಪಿದ ಮೇಲೆ ಮಾತುಕತೆ ಮುಗಿಸಿ ವೀಳ್ಯೆ ದೆಲೆ ಶಾಸ್ತ್ರ ಕೂಡ ಮಾಡಿಯೇ ಬಿಟ್ಟರು. ಆದರೆ ಮತ್ತೊಮ್ಮೆ ಮಂದಿನೆಲ್ಲಾ ಮದುವೆ ಸಂತಿಗೆ ಕರೆದೊಯ್ಯಲೇ ಬೇಕಾಯ್ತು. ಅವರೆಲ್ಲರಿಗೂ ಹೆಂಡ ಕುಡಿಸಿ, ಮಾಂಸದ ಊಟವನ್ನು ಹಾಕಿಸಿದಾಗ ಅವರ ಸಂಪ್ರದಾಯದಂತೆ ಊಟ ಮಾಡಿದರೆಲ್ಲರೂ ನಶೆ ಇಳಿಯುವವರೆಗೂ ಥಾವುನ ಹೊಗಳಿದ್ದರು.

ಮಗನ ಮದುವೆಯ ದಿನ ಹತ್ತಿರವಾಗುತ್ತಿದ್ದಂತೆ ಲಚ್ಮೆಗೆ ಮೀಟುನ ನೆನಪು ಹೆಚ್ಚಾಗತೊಡಗಿತು. ಆತನೇನು ಬದುಕಿದ್ದಾನೋ, ಇಲ್ಲಾ ಸತ್ತಿದದಾನೋ ಅಂತ ಹೇಳುವವರೆ ಇಲ್ಲವಾಗಿದ್ದರು. ಅವಳ ತಂದೆ ತಾಯಿ, ಚಿಕ್ಕಪ್ಪ ಚಿಕ್ಕಮ್ಮ, ಎಲ್ಲಾ ಸಂಬಂದಿಕರು ಬಹಳ ದೂರವಿದ್ದಾರೆ, ಈಗ ಏನೇ ಆದರೂ ತನ್ನ ಸ್ವಯಂಬಲದ ಮೇಲೆ ಮಾಡಬೇಕು ಒಂದೊಮ್ಮೆ ದೆಹಲಿಯ ಸುಲ್ತಾನನ ಕೂಡ ಇದ್ದ ಅವರ ಪರಿಸ್ಥಿತಿ ಇದ್ದಕ್ಕಿದದಂತೆ ಅನಾಥರಾಗಿ ಕಾಡು ಕಾಡು ಅಲೆಯುವಂತಾಗಿತ್ತು. ಹೌದು ಖಾನ್ ಸಾಹೇಬರು ಮೀಟು ಅಂದ್ರೆ ಬಹಳ ಗೌರವಕೊಡುತ್ತಿದ್ದರು. ಅವರ ಮೀಟುನ ಬಗ್ಗೆ ಯೋಚನೆ ಮಾಡಲಿಲ್ಲವೆ ಎಲ್ಲವೂ ಒಗಟಿನಂತಿತ್ತು. ಥಾವು ಸುದ್ದಿಕೊಟ್ಟಿದ ಮುಸುಕುಧಾರಿಯನ್ನು ಬಹಳ ಹುಡುಕಿದ ಅವನು ಮತ್ತೆಂದು ಆ ಗಡಿಯೊಳಗೆ ಕಾಣಲೇ ಇಲ್ಲ. ಯಾರೋ ಸುದ್ದಿ ತಂದಿದ್ದರು ದೆಹಲಿ ಸುಲ್ತಾನ ಔರಂಗಜೇಬ್ ನಿಧನನಾದನೆಂದು, ಆತನ ನಂತರ ಬಂದವರು ಅಷ್ಟೊಂದು ಪ್ರಬಲರಿಲ್ಲದ ಕಾರಣ ಸಣ್ಣಪುಟ್ಟ ರಾಜರೆಲ್ಲ ತಾವೇ ಸ್ವಯಂ ಸ್ವತಂತ್ರ

ರಾಜನೆಂದು ಘೋಷಣೆಮಾಡಿಕೊಂಡಿದ್ದರು. ನಂತರ ಆಸೀಫ್‌ಖಾನ್ ಮಗನ ಚಿಂತೆಯಲ್ಲಿ ಮಂಕಾಗಿದ್ದು ಮಾಗ ಸಬ್ದರ್ ಜಂಗ್ ಪಟ್ಟ ನಡೆಯಿತು. ಆದರೆ ಅವನ ಮಾವನ ಕೆಲಬಂಟರು ಲತೀಫ್‌ಖಾನ್ ಮಗನನ್ನ ಪಟ್ಟಕ್ಕೆ ತರುವ ಯೋಜನೆಮಾಡಿದ್ದರು. ಒಳಗೊಳಗೆ ಪಿತೂರಿ ನಡೆಯುತ್ತಿತ್ತೆಂದು ಸುದ್ದಿ ತಲುಪಿತು. ಮೀಟು ಬದುಕಿರುವ ಸಾಧ್ಯತೆಗಳು ಕಡಿಮೆ ಎಂಬ ಸತ್ಯ ಥಾವು ಒನೊಬ್ಬನಿಗೆ ತಿಳಿದಿತ್ತು. ಆತನೇನಾದರು ಬದುಕಿದ್ದರೆ ಹೆಂಡತಿ ಮಕ್ಕಳ ಮೇಲೆ ಪ್ರಾಣವನ್ನೆ ಇಟ್ಟುಕೊಂಡವನು ಒಮ್ಮೆಯಾದರೂ ಬರುತ್ತಿದ್ದ. ಅವನಿಗೆ ಒಮ್ಮೊಮ್ಮೆ ಅಣ್ಣನಿಲ್ಲದ ಜೀವನ ಜಿಗುಪ್ಸೆ ಅನಿಸಿಬಿಡುತ್ತಿತ್ತು. ಇಂತಹ ಬಲಶಾಲಿ, ಚಾಣಾಕ್ಷನಾದ ಮೀಟುನ ಅಂತ್ಯ ಇಷ್ಟು ಬೇಗ ಮತ್ತು ಇಷ್ಟೊಂದು ನಿಕೃಷ್ಟವಾಗಿ ಆಗಿದೆ ಎಂದರೆ ಅವನಿಗೆ ನಂಬಲಿಕ್ಕೆ ಆಗಲಿಲ್ಲ. ಆದರೆ ಮೋಸಕ್ಕೆ ಯಾರು ಈಡಾದರು. ತನ್ನಷ್ಟಕ್ಕೆ ಸಮಾಧಾನಪಟ್ಟುಕೊಂಡು ಸುಮ್ಮನಾಗಿದ್ದ.

ಆಟ್ಮು ಹಬ್ಬದ ನಂತರ ದೇಸು ಮತ್ತು ಲಚ್ಮರ ಸಾಡಿತಾಣಲಾಯಿತು. ಯಾರೋ ಒಬ್ಬರು ದೇಸು ಮತ್ತು ಲಚ್ಮರಿಗೆ ಮಾವನಾಗಬೇಕಾದವನು ಲೇರಿಯಾ ಆದ. ಇಬ್ಬರೂ ಸಹೋದರರಿಗೆ ಗರೂರದಾಗ್ ಕೊಡಲಾಯಿತು. ಸಾಂಕೇರರಪ್ಯ ಗರೂರ ರಪ್ಯತಗದಿಟ್ಟು ಬಿಡಾರದ ಮುಂದೆ ಮಂಡೇವಡೊ ನಿಲ್ಲಿಸಿ, ಹಂದ್ರ ಬಿಗಿಸಿ ಅಲ್ಲೇ ಫೋಟ ಕಲಿಸಲಾಯಿತು. ಡೇರೆಯಲ್ಲಿದ್ದ ಎಲ್ಲಾ ಹೆಂಗಸರು ಜಮಾಯಿಸಿದ್ದರು. ಅವರೆ ಹಾಡುಹೇಳುತ್ತಿದ್ದರು. ಇಬ್ಬರು ಮದುಮಕ್ಕಳನ್ನು ಹೊರಗೆ ತರಲಾಯಿತು. ಚಿಕ್ಕವಯಸ್ಸಿನಲ್ಲೇ ಗಂಡನ ಅಗಲಿಕೆಯ ದುಃಖವನ್ನು ಸಹಿಸಿಕೊಂಡಿದ್ದ ಲಚ್ಮಿಗೆ ಈಗ ತನ್ನ ಮಗ ದೇಸು ದೊಡ್ಡವನಾಗಿ ಹೆಂಡತಿಯಿಂದ ತನ್ನನ್ನ ದೂರಮಾಡಬಹುದೇನೋ ಅನ್ನುವ ಸಂಶಯ ಹೆಚ್ಚಾಗುತ್ತಿದ್ದಂತೆ ದುಃಖ ತಡೆಯಲಾಗದೆ ಛಾಂಟಿಯಾದೊಳಗೆ ಮುಖಮುಚ್ಕೊಂಡಿದ್ದೆ ಮಗನ ಕೊರಳನ್ನು ಹಿಡಿದುಕೊಂಡು ಲಡೆಲಾ ಪುಲೇಡಾರ್, ತಾರಯಾಡಿ ಎದುನಿಂಯಾರೆವಾಯಿ ಎಕಲಿ ವೇಗಿಚ ವೊತನ ತನವುತ ಬೋರರೆ ಆ ಹಿಂಚೊತಾರೆಗೆನಿಬಾಪೋರೆ ರಾಜೆಮ ಸೆಜ ಭೂಲರೀತಿ ಬಾಪು ಆ ಹಿಂಯಾ ಎಷ್ಟೋ ವರ್ಷಗಳಿಂದ ಮಡುಗಟ್ಟಿದ್ದ ದುಃಖದ ಕಟ್ಟೆ ಹೊಡೆದು ಕಣ್ಣೀರ ಸಾಗರವೇ ಹರೆದಿತ್ತು. ಅವಳ ತಂಗಿ ಜಂಗಿಯ ಮಗಳು "ಬಾಯಿ, ಸುಮ್ಮನಿರಿ ನಾವಿಲ್ವಾನಿಮ್ಮ ಜೊತೆ ಯಾವತ್ತೂ ನಿನ್ನ ಬಿಟ್ಟು ಬೇರೆ ಇದೀವಾ, ಮಾವ ಇಲ್ಲದಿದ್ದರೇನಾಯ್ತು ಈಗ ಹುಲಿಯಂತ ಮಗನಿದ್ದಾನೆ. ನೀ ಯಾಕೆ ಕಾಳಜಿಮಾಡ್ತೀಯಾ. ಸುಮ್ಮನಾಗು?" ಜುಕ್ಕಬುಲ್ಮಿಯಿಂದ ಮಗನ ಕತ್ತು ಹಿಡಿದಿದ್ದನ್ನ ಸಡಿಲಮಾಡಿ ಬೇರ್ಪಡಿಸಿದ ಮೇಲೂ ಸುಮಾರು ಹೊತ್ತು ಅತ್ತಳು. ದೇಸು ಯಾವತ್ತು ಕೇಳರಿಯದ ತನ್ನ ತಾಯಿಯ ದುಃಖವನ್ನು ಕೇಳಿ ದುಃಖಿತನೇನೂ ಆದ. ಆದರೆ ಅವನಿಗೆ ಸರಿಯಾಗಿ ತಿಳುವಳಿಕೆ ಬಂದಾಗಿನಿಂದ ತನ್ನ ತಂದೆಯನ್ನು ನೋಡೇ ಇರಲಿಲ್ಲ ಕೇಳಿದಾಗೊಮ್ಮೆ ಹಾರ್ಕಿ ಉತ್ತರ ಹೇಳಿ ಸುಮ್ಮನಾಗಿಸುತ್ತಾ ಇದ್ಲು. ಬಹುಶಃ ಅವಳ ದುಃಖಕ್ಕೆ ಇದೇ ಪ್ರಬಲಕಾರಣವೆನ್ನುವುದು ಅವನಿಗೆ ಅರಿವಾಯಿತು.

ಮನೆ ಮುಂದಿನ ಶಾಸ್ತ್ರಗಳು ಮುಗಿದ ಮೇಲೆ ಹುಡುಗಿಯ ಮನೆಗೆ ಹೋಗಲು ಸಜ್ಜಾದರು. ಒಂದೇ ಡೇರೆಯಲ್ಲಿ ಮದುವೆ ನಡೆಯುತ್ತಿದ್ದರಿಂದ ಲಚ್ಮ ನಾಯ್ಕ ಅಲ್ಲೆ ಇದ್ದ ಅವರ ಮಾವನ ಡೇರೆಗೆ ಹೋದರೆ ದೇಸು ಅಲ್ಲೇ ಉಳಿದ. ಅವನ ಅತ್ತೆ ಅಲ್ಲೆ ಇದಿದ್ದರಿಂದ ಅವನು ಮುಂದಿನ

ಶಾಸ್ತ್ರಗಳನ್ನು ತಮ್ಮ ಡೇರೆಯಲ್ಲಿಯೇ ಮುಗಿಸಬೇಕಾಯಿತು. ಹುಡುಗಿಯರೊಳಗೆ ಎರಡು ಗುಂಪುಗಳಾಗಿ ವೆತಡೂನನ್ನ ಸಜ್ಜಾಗಿ ಬೊಯ್ಯದರು, ನಂತರ ಒಂದು ಗುಂಪು ಇದಾಗಿ ಸ್ವಲ್ಪ ಹೊತ್ತಲ್ಲಿ ಲಚ್ಮನಾಯ್ಕ ಮತ್ತೆ ಗುಜರಿ ಜೋಡಿಯ ಹತ್ತಿರ ಹೋಗಿ ಅದೇ ರೀತಿಯಾಗಿ ಹಾಡಲ್ಲೇ ಬೋಯ್ಯುದು ಮಧ್ಯರಾತ್ರಿ ಸಮಯಕ್ಕೆ ತಮ್ಮ ತಮ್ಮ ಡೇರೆಗಳಿಗೆ ವಾಪಾಸಾಗಿದ್ದರು. ತಿಂಗಳ ಮದುವೆಯಾದ್ದರಿಂದ ಇಬ್ಬರು ಅಳಿಯಂದಿರುಗಳನ್ನು ಮನೆಯೊಳಗೆ ತೆಗೆದುಕೊಳ್ಳುವ ಶಾಸ್ತ್ರಮಾಡಿದ ಮೇಲೆ ಮುಂದೆ ನಿಧಾನಕ್ಕೆ ಎಲ್ಲವೂ ನಡೆಯತೊಡಗಿತು. ಪ್ರತಿಶಾಸ್ತ್ರಕ್ಕೂ ಕಾಸು, ಹೆಂಡ ಮಾಮಾಲು.

ತಿಂಗಳ ಕೊನೆಯ ದಿನ ಥಾವು ಪಕ್ಕದಲ್ಲೇ ಕುರಿಮಂದೆ ಹಾಕಿದ್ದ ಕುರುಬರ ಪರಮೇಶಿಯ ಮುಂದೆಯಿಂದ ಎರಡು ಐನಾತಿ ಟಗರುಗಳನ್ನು ಖರೀದಿಸಿ ಒಂದು ದೇಸುನ ಗೋಟ್ ಸಲುವಾಗಿ ಮತ್ತೊಂದು ತನ್ನ ಮಗ ಲಚ್ಮನ ಗೋಟಿಗೆ, ಎರಡೂ ಕಡೆ ಒಂದು ಕೇಸ್ ಹೆಂಡವನ್ನು ಕೊಟ್ಟು ಇವರೇ ಕೊಡಿಸಿದ ಮಸಾಲೆ ಹಾಕಿ ಒಂದೇ ದಿನಕ್ಕೆ ಎರಡು ಕುರಿಗಳ ಮಾಂಸದೂಟ ತಯಾರಿಸಿ ಹೆಂಡ ಹಂಚಿದ ಮೇಲೆ 'ತಾಂಗಡಿ' ಕಳುಹಿಸಲಿಕೆ ಒಪ್ಪಿಗೆಕೊಡಲಾಯಿತು. ದೇಸುತಾಂಗಡಿ ಅಲ್ಲಿಂದಲ್ಲೆ ತಲುಪಿದರೆ ಲಚ್ಮನದು ಬಂದಾಗಿತ್ತು. ರಾತ್ರಿ ಮತ್ತವೆ ಬೊಯ್ಯಗಳು ಪುನರಾವರ್ತನೆಯಾಗಿದ್ದವು. ಹುಡುಗಿ ಕಡೆಯವರು ದೇಸುಬುಕ್ಯಾ ಕರಮತೋಟನನ್ನು ಹಿಗ್ಗಾಮುಗ್ಗಾ ಬೋಯ್ಯ ತೊಡಗಿದರು. "ತಾಂಡೇಮ ಭೋರಿಯೆ ಚೆನಿರೆಲಾಲ್ ಸಂಯಾಜಿ. ಫೆಟಿಂಯಾ ಓಡ ಓಡ ಸುತಿಯು ವೇಲಾಳಿ, ಊಂಚೆರೆ ಓಣೀರ ಧಗಡಿ ಆಯಿ ಊಟೋಯಮೇಲಾಳಿ, ವೇತಡುರ ಯಾಡಿಭೆ ಡಿಲಿಢಚಕಾಳಿ." ದೇಸುವ ಓಣಿಯ ಹುಡುಗಿಯರು ತಿರುಗಿ" ನವಲೇರಿರಯಾಡಿ ಭೆ ಢಿಲಡ ಚಕಾಳಿ ಅಂತೇಳಿ ಹಿಯಾಳಿಸಿದರು.

ಹಾಡುಗಳು ಬೋಯ್ಯುವುದರ ರೂಪ ತಳೆದು ತಾರಕ್ಕೇರಿತ್ತು. ಮಧ್ಯರಾತ್ರಿ ಹನ್ನೆರಡುಗಂಟೆಯಾಗಿತ್ತು. ಮಂಕಾಳಿಯ ಗುಡಿಯ ಮುಂದಿನಿಂದ ಪಕ್ಕದ ಓಣಿಯಲ್ಲಿನ ಅವನ ಡೇರೆಗೆ ಹೊರಟಿತು ದಿಬ್ಬಣದ ತಂಡ. ಅವನ ಚಿಕ್ಕಪ್ಪ ಥಾವು ಎಡೂ ದಿಬ್ಬಣದ ತಂಡಗಳಿಗೆ ಭರ್ಜರಿ ಬೋಜನವನ್ನೇ ಏರ್ಪಡಿಸಿದ್ದ. ಒಂದು ವಾರದ ವರೆಗೆ ಬಂದ ಅತಿಥಿಗಳೆಲ್ಲರೂ ದಿನಕ್ಕೊಂದರಂತೆ ಬೋಜನವನ್ನು ಸವಿದು ಮನೆಗೆ ಹೋಗಲು ಮನಸ್ಸೆ ಬರದಹಾಗಾಗಿತ್ತು. ಆದರೂ ಹೋಗುವುದು ಅನಿವಾರ್ಯವಾಗಿತ್ತು. ದೇಸು ಕೂಡ ಅವರ ವ್ಯಾಪಾರದಲ್ಲಿ ತೊಡಗುವುದು ಅನಿವಾರ್ಯವಾಗಿತ್ತು. ಆಂಧ್ರದ ಗಡಿಗುಂಟ ವ್ಯಾಪಾರದಲ್ಲಿ ತೊಡಗಿದ ಅನೇಕ ಬಂಜಾರರು ಒಬ್ಬಬ್ಬರಾಗಿ ಪರಿಚಯವಾಗತೊಡಗಿದ್ದರು. ದೇಸು ಅಪ್ಪನಂತಹ ಚಾಣಾಕ್ಷಮತಿ, ಧೈರ್ಯಶಾಲಿ ಮತ್ತು ಶಕ್ತಿವಂತನಾಗಿದ್ದ. ವ್ಯಾಪಾರ ಮಾಡುತ್ತಲೇ ಅವನಪ್ಪ ಮೀಟು ಬುಕ್ಯಾಕರಮತೋಟ್ ಬಗ್ಗೆ ಏನಾದರೂ ಸುಳಿವು ಸಿಕ್ಕಿತೇನು ಎಂಬುದನ್ನು ಕುತೂಹಲದಿಂದಲೇ ಸೂಕ್ಷ್ಮವಾಗಿ ಗಮನಿಸುತ್ತಿದ್ದ ಆದರೆ ಆತನ ಬಗ್ಗೆ ಯಾವ ಸುಳಿವು ಸಿಗದೆ ನಿರಾಶನಾಗಿ ವಾಪಾಸು ಬಂದಾಗ ಅವನ ತಾಯಿ ಲಚ್ಮಿ ಕೇಳುತ್ತಿದ್ದ ಪ್ರಶ್ನೆಗಳಿಗೆ ಆಶಾದಾಯಕ ಉತ್ತರಗಳನ್ನು ನೀಡಿ ತಂದೆ ಎಲ್ಲೋ ಇದ್ದಾರೆಂಬ ಭ್ರಮೆಯನ್ನು ಸೃಷ್ಟಿಸಿ, ಲಚ್ಮಿಗೆ ಕ್ಷಣದ ಸುಖವನ್ನು ನೀಡುತ್ತಿದ್ದ. "ಏನೋ

ಮಗ, ಮನಸ್ಸಿಗೆ ಉಲ್ಲಾಸ ಆಗುವ ಸುಳ್ಳನೇನೋ ಹೇಳಿ, ಅಂಗೈಯೊಳಗೆ ದೂರದ ಚಂದ್ರನನ್ನ ತೋರಿಸ್ತೀಯಾ, ಆದರೆ ಖಾನ್‌ಸಾಹೇಬರಿಗೆ ಅತಿ ಹತ್ತಿರವಾಗಿದ್ದ ನಿಮ್ಮ ತಂದೆ ಹೀಗೆ ನಮ್ಮಿಂದ ದೂರ ಯಾಕಿದ್ದಾರೆಂಬ ಸತ್ಯವನ್ನು ಯಾರು ಹೇಳವಲ್ರು". ಎದೆಯೊಳಗೆ ಹೆಪ್ಪುಗಟ್ಟಿರುವ ದುಮ್ಮಾನವನ್ನ ಹೊರಹಾಕಿದ್ಲು ಲಚ್ಮಿ. "ಯಾಡಿ, ನೀ ಏನು ಕಾಳಜಿ ಮಾಡಬ್ಯಾಡ, ವ್ಯಾಪಾರದೊಳಗ ನಾಕು ದಿಕ್ಕಿನಿಂದ ನಮ್ಮ ಗೋರಮಾಟಿಗಳು ಕಲಿತಾರ, ಅವರಿಗೆಲ್ಲಾ ಈಗಾಗಲೇ ಸುದ್ದಿಮುಟ್ಸಿದಿನಿ. ಇನ್ನೇನು ಅಪ್ಪ ಸಿಕ್ಕೇ ಸಿಗ್ತಾರ" ಒಂದು ಮಾತು ಅವಳ ಮನಸ್ಸನ್ನು ಹಗುರಗೊಳಿಸಲು ಆಡಿದ್ದ.

ದೇಸು ಮತ್ತು ಅವನ ತಮ್ಮ ಲಚ್ಮ ಒಂದು ಪ್ರದೇಶವನ್ನು ಬಿಡದೆ ವ್ಯಾಪಾರ ಮಾಡುತ್ತಾ ಹೊರಟಾಗ ಬಂಜಾರರು ತಮ್ಮ ಜನಾಂಗದೊಳಗೆ ಅವತರಿಸಿರುವ ಬಾಲಕ ಸೇವಾಲಾಲ್ ಕುರಿತು ಮಾತಾಡುವುದನ್ನು ಕೇಳಿದ್ದರು. ದೇಸುಗೆ ಆತನನ್ನು ಬೆಟ್ಟಿಯಾಗುವ ತವಕ ಹೆಚ್ಚಾಯಿತು. ಸೇವಾದಾಸ್, ಸೇವಾಲಾಲ್ ಆಗಿ ಸೇವಾಭಾಯಿ ಆಗಿದ್ದ. ಸುತ್ತಮುತ್ತಲ ಎಲ್ಲಾ ಬಂಜಾರರೊಳಗೆ ಆತನ ಬಗ್ಗೆ ಅಪಾರಗೌರವ ಭಕ್ತಿ ಅಷ್ಟೇ ಶ್ರದ್ದೆಯಿಂದ ಆತನನ್ನು ಅನುಸರಿಸತೊಡಗಿದ್ದರು. ಹೀಗೆ ಬಂಜಾರರು ವ್ಯಾಪಾರ ಮಾಡುತ್ತಾ ಬಂದಾಗ ಆಂಧ್ರದ ಗಡಿಯೊಳಗೆ ಇಲ್ಲಾ ಕರ್ನಾಟಕದ ಗಡಿಯೊಳಗೆ ಜನಿಸಿದ್ದ ಸೇವಾದಾಸ್. ದೈವಿಶಕ್ತಿ, ಸರಳಸಜ್ಜನಿಕೆ, ನ್ಯಾಯ ನಿಷ್ಠುರತೆಯಿಂದಾಗ ಪ್ರತಿಯೊಬ್ಬರು ಆತನನ್ನು ಗೌರವಿಸುವುದು ವಾಡಿಕೆಯಾಗಿತ್ತು. ಆತನ ಹಿಂದೆ ಹೆಣ್ಣು ದೇವತೆ ಬೆನ್ನು ಬಿದ್ದಿರುವುದಾಗಿ ಅನೇಕ ಬಂಜಾರರು ಮಾತಾಡಿಕೊಳ್ಳುತ್ತಿದ್ದರು. ಮರಿಯಮ್ಮ ಅವನನ್ನ ಒಂದು ಜಾಗದಲ್ಲಿರಲು ಬಿಡುತ್ತಿಲ್ಲವೆಂದು ಮಂದಿ ನಂಬಿಕೆಯಾಗಿತ್ತು. ಹೈದ್ರಾಬಾದ್‌ಗೆ ವ್ಯಾಪಾರಕ್ಕೆಂದು ಹೋದ ಅವರ ಗುಂಪು ಹೈದ್ರಾಬಾದ್ ಪಕ್ಕದ ಕಾಡಡವಿಯ ನಡುವಿನ ಸಣ್ಣ ಬೆಟ್ಟದ ಪಕ್ಕ ತಂಗಿರುವ ಸಂದರ್ಭದಲ್ಲಿ ಸಪ್ಪರ್‌ಜಂಗ್‌ನ ಗುಪ್ತಚರರು ಸುದ್ದಿಯನ್ನು ತಲುಪಿಸಿದರು. ಶತ್ರುಗಳ ಗುಪ್ತಚರರ ಇರಬೇಕೆಂದು ಅನುಮಾನದಿಂದ, ನಿಜಾಮರು "ಕೌನ್ ಹೇ ಒ ಲೋಗ್" ಕೇಳಿದ. "ಹುಜೂರು, ಬಣ್ಣಬಣ್ಣದ ಅರಿವೆ ಹಾಕಿದ್ದಾರೆ. ಹಾಡ್ತಾರೆ, ಭಜನೆಮಾಡ್ತಾರೆ, ಕುರಿಕೊಯ್ದು ಊಟಮಾಡ್ತಾರೆ" ಸೈನಿಕರು ಸುದ್ಧಿತಲುಪಿಸಿದರು." ಹಾಗಾದ್ರೆ, ಅವರ್ಗೆ, ನಮ್ಮ ಪ್ರಸಾದ ಕೊಡಿ" ಎಂದು ವಿಷಪೂರಿತ ಲಡ್ಡುಗಳನ್ನು ಕಳುಹಿಸಿದ. ಕುದುರೆಗಳನ್ನೇರಿ ಮತ್ತೆ ನಿಜಾಮನ ಸೈನಿಕರು ಪ್ರತ್ಯಕ್ಷರಾದದ್ದನ್ನು ಕಂಡ ಸೇವಾಲಾಲ್ ಎಲ್ಲರಿಗೂ ಜಾಗರೂಕರಾಗಿರಲು ಹೇಳಿದ. ಸೈನಿಕರು ಕುದುರೆಯಿಂದಿಳಿದು ದೊಡ್ಡ ದೊಡ್ಡ ತಟ್ಟೆಗಳಲ್ಲಿ ಲಡ್ಡುಗಳನ್ನು ಹಾಕಿಕೊಂಡು ಅವರ ಬಳಿ ಹೋದರು. "ಕ್ಯಾ ಹೈ ಅದು" ಸೇವಾ ಕೇಳಿದ. "ನಮ್ದುಕೇ ಮರಾಜ್ರು ಕಳಸವ್ರೇ ನಿಮಗಂತ ಖಾವ್ರೋ" ಅಂದ್ರು. ಸೇವಾ ಘಳಿಗೆ ಸುಮ್ಮನಿದ್ದು, ತಮ್ಮ ಕಡೆಯವರಿಗೆ "ಹೂಂ" ಅಂತ ಅಪ್ಪಣೆ ಕೊಟ್ಟ. ಅವರೆಲ್ಲಾ ದೊಡ್ಡ ದೊಡ್ಡ ತಟ್ಟೆಗಳನ್ನು ಸೈನಿಕರಿಂದ ಪಡೆದು ಲಡ್ಡುಗಳನ್ನು ಹಂಚಲು ಮುಂದಾದರು. ಸೇವಾ, "ಶಾಂತಿ, ಯಾರು ತಿನ್ನಬೇಡಿ" ಎಲ್ಲಾ ತಟ್ಟೆಗಳನ್ನು ಮುಟ್ಟಿ, "ಹೂಂ, ತಿನ್ನಿ" ಅಂದ, ಎಲ್ಲರೂ ಲಡ್ಡುಗಳನ್ನು ತಿಂದ ತಮ್ಮ ಪಾಡಿಗೆ ತಾವು "ವಾಜ" ಹಾಕಿ ಕುಣಿಯತೊಡಗಿದರು. ಸೈನಿಕರು ಸ್ವಲ್ಪ ಹೊತ್ತು ಇದ್ದು ನಡೆದ ಸುದ್ಧಿಯನ್ನು ಮಹಾರಾಜರಿಗೆ ತಿಳಿಸಲು ಹೊರಟರು. "ಕ್ಯಾ ಹೂವಾ, ಸತ್ರ ಎಲ್ರೂ ಪೀಡೆ ಬಗೆಹರಿತ ಬಿಡು." ಅಂದ, "ನಹಿ

ಹೂಜೂರು, ಎಲ್ಲರೂ ತಟ್ಟೆಗಳನ್ನು ತಗೊಂಡ್ರು, ಒಬ್ಬ ನಿಲ್ಲಿ ಅಂದ" ನಿಜಾಮಗೆ ಆಶ್ಚರ್ಯವಾಯ್ತು "ಹೂಂ ಆಮೇಲೆ" ಕುತೂಹಲ ತಡೆಯಲಾಗದೆ ಕೇಳಿದ. "ಅವನು ಒಂದು ಕ್ಷಣ ನಿಂತು, ಎಲ್ಲಾ ತಟ್ಟೆಗಳನ್ನು ಮುಟ್ಟಿದ ನಂತರ ಹೂಂ ಅಂದು ತಿನ್ನಲು ಹೇಳಿದ." ನಡೆದ ಘಟನೆಯ ಪ್ರತ್ಯಕ್ಷದರ್ಶಿ ಮಾಹಿತಿ ಹೇಳಿದರು. "ಹೂಂ ಬಾದ್ ಮೆ ಏನಾಯ್ತು" ನಿಜಾಮನ ಕುತೂಹಲ ನೂರ್ಮಡಿಸಿತ್ತು. "ಬಾದ್ ಮೆ, ಹುಜೂರ್ ಎಲ್ಲರು ಸಂತೋಷದಿಂದ ಹಾಡಿದರು. ಭಜನೆ ಮಾಡ್ತಿದ್ದರು ಕುಣಿತ್ತಾ ಇದ್ದರು" ಇವರೇ ಕುಣಿಯುತ್ತಿರುವಂತೆ ಹೇಳಿದರು. ನಿಜಾಮನ ಧಂಗಾಬಲವೇ ಉಡುಗಿಹೋದಂತಾಯ್ತು. "ಅಡಿಗೆಯವನನ್ನ ಬುಲಾವ್" ಅಪ್ಪಣೆ ಮಾಡಿದ, ಏನು ಚಮತ್ಕಾರ ಅಂತೀನಿ ವಿಷಯ ಹಾಕಿದ ಲಡ್ಡು ತಿಂದ್ರು ಆ ಮಂದಿ ಸಾಯಲಿಲ್ಲಾಂದ್ರೆ, ಅವನು ಸಾಮಾನ್ಯ ಆದಮನೇಅಲ್ಲಾ". ಅವನು ಗಾಢವಾಗಿ ಆಲೋಚಿಸತೊಡಗಿದ. ಅದಕ್ಕೆ ಪೂರಕವೆಂಬಂತೆ ಮಂತ್ರಿ "ಮೂಸಾಖಾನ್, ಜನಾಬ್ ಕೋಯಿ ಜಾದುಗರ್ ಇರ್ಬೇಕು" ಅಂತ ಅನುಮಾನಿಸಿದ. "ಮೂಸಾಖಾನ್ ನಿಮ್ದುಕೆ ದೀಮಾಕ್ ಖರಾಬ್ ಆಗ್ಯೆತೆ, ಕ್ಯಾ ಜಾದುಗರ್ ಲಡ್ಡು ನಾಗೆ ಇರೋ ಇಷ ಕಂಡ ಹಿಡಿಯಾಕ ಆಯ್ತದಾ" ನವಾಬ್ ಸಿಡಿಮಿಡಿಗೊಂಡ. "ಗುಸ್ತಾಕಿ ಕೇಲಿಯ ಮಾಪ ಮಾಡ್ರಿ ಹುಜೂರ್" ಬೇಡಿದ. "ಅಯ್ತು ಆ ಸಾಧುಗೆ ಹೇಳಿ ನವಾಬ್ ಬರ್ತದೆ ಅಂತ" ಅಪ್ಪಣೆ ನೀಡಿದ. "ಜಿ ಹೂಜೂರ್" ಮೂಸಾಖಾನ್ ಡೊಗ್ಗಿ ಸಲಾಂ ಹೊಡೆದು ಬಂಜಾರ ಹಿಲ್ ಕಡೆಗೆ ನಡೆದ. ಸೇವಾ ದೇವಿಯ ಆರಾಧನೆಯಲ್ಲಿ ತೊಡಗಿದ್ದ. ಸೈನ್ಯದ ತುಕಡಿ ಬಂದದ್ದು ಕಂಡು ಸೇವಾಲಾಲ್‌ನ ತಾಯಿ ಧರ್ಮಿಣಿಯಾಡಿ ಮತ್ತು ತಂದೆ ಭೀಮನಾಯ್ಕ ಗಾಬರಿಯಾದರು. "ಹೂಜೂರ್, ನಮ್ಮಿಂದ ಏನಾರುವೆ" ಸೇವಾನ ಸಹೋದರರಾದ ಹೇಮ ಮತ್ತು ಬೀಮ ಮುಂದಾದರು. ಖಾನ್ ಇಳಿದವನೆ, ಬಿಳಿ ಧೂತ್ರ ಬಳಿ ಅಂಗಿ ಉಟ್ಟು ಧ್ಯಾನಸ್ಥನಾಗಿ ಕುಳಿತಿದ್ದ ಯುವಕ ಸೇವಾನ ಪಾದಕ್ಕೆ ಧೀರ್ಘದಂಡ ನಮಸ್ಕಾರ ಮಾಡಿದ. ಸೇವಾ ಹಸನ್ಮುಖಿಯಾಗಿ ಕಣ್ಣುತೆರೆದ, "ಮಂತ್ರಿ ಮೂಸಾಖಾನ್, ಎ ಕ್ಯಾ ಮಾಡ್ತಿದ್ದಿರಾ" ಮೇಲೇಳಿ. ತಮ್ಮಿಂದೇನು ಅಪಚಾರವಾಗಿಲ್ಲ. ಎಲ್ಲಾ ಮನುಷ್ಯನ ಅನುಮಾನತಾನೆ ನವಾಬರು ಶತ್ರುಗಳ ಗೂಡಾಚಾರರಿಬಹುದು ಎಂದು ಅನುಮಾನಪಟ್ಟು ಲಾಡುನಲ್ಲಿ ವಿಷ ಬೆರಿಸಿದ್ದರಲ್ಲಿ ತಪ್ಪೇನು ಇಲ್ಲಾ. ಮಾನವಸಹಜವಾದದ್ದೆ." ಮೂಸಾಖಾನ್‌ಗೆ ದಿಕ್ಕೆ ತಪ್ಪಿ ಹೋದಂತಾಯ್ತು. "ಮಹಾರಾಜ್, ನವಾಬ್ ಆಪ್ಸೆ ಮಿಲ್ನಾ ಚಾತೆಹೈ, ನಮ್ದುಕೆ ಮುಂಚೆ ಹೋಗಿ ಸುದ್ದಿ ಬೋಲನೆಕೊ ಭೇಜಾ ಹೈ" ತನ್ನ ಪಾಲಿನ ಕರ್ತವ್ಯವನ್ನು ಮಾಡಿದ. "ಅರೇ ಅವರು ಯಾಕೆ ಬರ್ತಿದ್ದಾರೆ ಅಪ್ಪಣೆ ಮಾಡಿದ್ದರೆ ಖುದ್ದಾಗಿ ನಾವೇ ಅವರನ್ನು ಭೆಟ್ಟಿಯಾಗುತ್ತಿದ್ದೆವು." ಸೇವಾ ಅಂತರಾಳದ ಮಾತನ ಆಡಿದ. "ನಹಿ ಮಹಾರಾಜ್, ನವಾಬರು ತಮ್ಮ ಚಮತ್ಕಾರಕ್ಕೆ ಪ್ರಸನ್ನರಾಗಿ ತಾವೇ ಖುದ್ದಾಗಿ ತಮ್ಮನ್ನ ಬೆಟ್ಟಿಮಾಡುವ ಇಂಗಿತ ವ್ಯಕ್ತಪಡಿಸಿದರು. ಇನ್ನೇನು ನವಾಬ ಸಾಹೇಬರು ಬರಬಹುದು." ನವಾಬರ ಮಾತುಗಳನ್ನು ತಿಳಿಸಿದ.

ನವಾಬ ಹೈರಾಣಾಗಿದ್ದ ತಾನೆಂತ ದೊಡ್ಡ ತಪ್ಪು ಮಾಡಿದೆ. ಇಂತಹ ಒಬ್ಬ ಕಾಲಜ್ಞಾನಿಯನ್ನು ಕೊಲ್ಲುವ ಹುನ್ನಾರ ಮಾಡಿದೆನಲ್ಲಾ ಅಲ್ಲಾ ನಮ್ಮನ ಕ್ಷಮಿಸುವುದಿಲ್ಲ ಎಂದು ಬಡಬಡಿಸತೊಡಗಿದರು. ಕುದುರೆಯನ್ನು ಬಿಟ್ಟು ಸೇವಾನ ಹತ್ತಿರ ಓಡಿ ಬಂದವರೆ "ನಮ್ದುಕೆ

ಮಾಪ್ ಮಾಡಿ ಮಹಾರಾಜ್, ತಾವು ದಿವ್ಯ ಜ್ಞಾನಿಗಳೆಂದು ತಿಳಿಯದೆ ಯಕ್‌ಶ್ಚಿತ್ ಸಾಮಾನ್ಯ ನವಾಬನಾದ ನಾನು ತಮ್ಮ ಮೇಲೆ ಶಕ್ ಮಾಡಿ, ನಾನೇ ಅವಮಾನಿತನಾದೆ." ಹಳ ಹಳಿಸತೊಡಗಿದ. "ನವಾಬ್ ಸಾಹೇಬ್, ಮನುಷ್ಯ ಅಂದ ಮೇಲೆ ಎಲ್ಲವೂ ಸಹಜ. ತಮ್ಮ ಸ್ಥಾನದಲ್ಲಿ ನಾನಿದ್ದರೂ ಹಾಗೆ ಮಾಡುತ್ತಿದ್ದೆ. ತಾವು ಅಷ್ಟೊಂದು ನೊಂದುಕೊಳ್ಳುವುದು ಬೇಡ." ಅವರ ಮನಸ್ಸು ಹಗುರಗೊಳಿಸಲು ಸೇವಾ ಮಾತನಾಡಿದ್ದ. ನವಾಬರು ಧೀರ್ಘದಂಡ ನಮಸ್ಕಾರಮಾಡಿದರು. "ಮಹಾರಾಜ ತಾವು ಅರಮನೆಗೆ ಬಂದು ನಮ್ಮ ಆತಿಥ್ಯವನ್ನು ಸ್ವೀಕರಿಸಲು ಕೋರುತ್ತೇನೆ." ತಮ್ಮ ತಪ್ಪಿಗೆ ಪ್ರಾಯಶ್ಚಿತವೆಂಬಂತೆ ಅಹ್ವಾನಿಸಿದರು. ಸೇವಾಗೆ ಅದೇನು ದೇವಿ ವರಕೊಟ್ಟಳೋ "ನಡಿರಿ ನವಾಬಸಾಹೇಬರೆ" ತನ್ನ ಬಳಿ ಕುದುರೆಯನ್ನೇರಿ ಅವರ ಹಿಂದೆ ಹೊರಟಿದ್ದ ಈ ಪವಾಡ ಪುರುಷನ ಕಂಡು ಬಂಜಾರರು ಹಾಡುಕಟ್ಟಿ ಹಾಡುತ್ತಿದ್ದರು.

ದೇಸು ಬಂಜಾರರ ಸಂತನಾದ ಸೇವಾಲಾಲ್ ಬೇಟೆಗಾಗಿ ಕಾತರದಿಂದ ಕಾಯುತ್ತಿದ್ದ. ಹೈದ್ರಾಬಾದ್ ಕಡೆ ತಮ್ಮ ವ್ಯಾಪಾರವನ್ನ ಸಂಪೂರ್ಣವಾಗಿ ನಿಲ್ಲಿಸಿದ್ದ ಥಾವುಗೆ ಅನಿವಾರ್ಯವಾಗಿ ನೂರು ಎತ್ತುಗಳ ಮೇಲೆ ದವಸ ಹೇರಿ ಕಳುಹಿಸಲೇ ಬೇಕಾದ ಪ್ರಸಂಗ ಬಂದು ಒದಗಿತ್ತು. ಅವನ ಅತ್ತಿಗೆಯ ಹತ್ತಿರ ಹೋಗಿ ಚರ್ಚಿಸಿದ. "ಬೋಜಾಯಿ ನನಗೂ ಕೂಡ ಈ ಕರಾರು ಇಷ್ಟವಿಲ್ಲ. ಆದರೆ ದೊಡ್ಡ ಪ್ರಮಾಣದ್ದು, ಏನು ಮಾಡುವುದು ಅಂತ ಯೋಚನೆಯಾಗಿದೆ." ಗೊಂದಲವನ್ನು ಅವಳ ಮುಂದಿಟ್ಟ. "ದೇವಶ್ ಸಾ, ವ್ಯಾಪಾರಕ್ಕೆ ನಮ್ಮ ಎತ್ತುಗಳನ್ನು ಕಳುಹಿಸುವುದು ಅನಿವಾರ್ಯವಿದೆಯೇ" ಕೇಳಿದಳು ಲಚ್ಮಿ. "ಹೌದು ದೊಡ್ಡ ಪ್ರಮಾಣದ ವ್ಯಾಪಾರ ಲಾಭ ಕೂಡ ಹೆಚ್ಚಾಗಿದೆ. ಇತ್ತೀಚೆಗೆ ಅಂತ ದೊಡ್ಡ ವ್ಯಾಪಾರಗಳು ಆಗ್ತಾಯಿಲ್ಲ." ಅನಿವಾರ್ಯತೆಯನ್ನು ಮನದಟ್ಟುಮಾಡಿಸಿದ. ಯಾರನ್ನ ಕಳುಹಿಸಬೇಕು ಅಂದ್ಕೊಂಡಿರಾ" ಕೇಳಿದಳು "ನಾನು ಖುದ್ದಾಗಿ ಲಚ್ಚನ ಜೊತೆಗೆ ಹೋಗಿ ಬಂದು ಬಿಡುತ್ತೇನೆ. ದೇಸು ಹೇಗಾದರೂ ಇಲ್ಲಿಯ ವ್ಯಾಪಾರವನ್ನು ಸಂಬಾಳಿಸುತ್ತಾನೆ." ನಿರ್ಧಾರವನ್ನು ಹೇಳಿದ. ಯಾಕೋ ಲಚ್ಮಿಗೆ ಈ ವ್ಯಾಪಾರದ ಒಪ್ಪಂದವೇ ಬೇಡವೆನಿಸಿತು. ಒಂದಕಡೆಗೆ ದೂರ, ಇನ್ನೊಂದು ಯಾರಾದರೂ ಒಳಸಂಚುಮಾಡಿ ಜೀವಕ್ಕೆ ಘಾತ ಮಾಡಿದರೆ ಗತಿ, ಒಳಗಿನ ಗೊಂದಲ ಹೊರಹಾಕಲಾರದೆ, "ನಿಮಗೆ ಹೇಗೆ ಸರಿ ಅನಿಸುತ್ತದೆಯೋ ಹಾಗೆ ಮಾಡಿ. ಆದರೆ ಯಾರನ್ನೂ ನಂಬಬೇಡಿ. ದೂರದ ಪಯಣ, ಇತ್ತೀಚೆಗೆ ಕಳ್ಳರು ಬೇರೆ ಹೆಚ್ಚಾಗಿದ್ದಾರೆ." ತನ್ನ ಅನುಮಾನವನ್ನ ವ್ಯಕ್ತಪಡಿಸಿದಳು. ವ್ಯಾಪಾರದಲ್ಲಿ ಏರುಪೇರಾಗಿ ಬಹಳಷ್ಟು ನಷ್ಟವಾಗಿತ್ತು. ಕಾಲು ಬಾಯಿಜ್ವರ ಬಂದು ನೂರಾರು ಎತ್ತುಗಳು ಸತ್ತು ಹೋದರೆ ವಯಸ್ಸಾಗಿ ಕೆಲವು ನಿಂತಲ್ಲೇ ಕುಸಿದಿದ್ದವು. ಇನ್ನು ವಾಪಾಸು ಹೋದವರು ಬಂಜಾರ ಗಡನಿಂದ ಯಾವ ಸುದ್ದಿಯು ಬಂದಿರಲಿಲ್ಲ. ಇಲ್ಲಿಂದ ಅಲ್ಲಿಯವರೆಗೆ ಸುದ್ದಿತಲುಪಿಸಲು ಅಸಾಧ್ಯದ ಮಾತಾಗಿತ್ತು. ಬಹುಶಃ ಅಜ್ಜ ಅಜ್ಜಿ ಸತ್ತು ಹೋಗಿರಬೇಕು. ಅವರು ಹಾಗಿರಬಹುದು, ಇವರು ಹೀಗಿರಬಹುದೆಂಬ ಅಂದಾಜಿನ ಮೇಲೆ ಇಬ್ಬರು ಅಕ್ಕ ತಂಗಿಯರು ನೆನಪುಮಾಡಿಕೊಳ್ಳುವುದು ಬಿಟ್ಟರೆ ಮತ್ತೇನು ಇಲ್ಲ. ಅರಮನೆಯಂತಹ ತಮ್ಮ ಮನೆಯನ್ನ ಬಿಟ್ಟಾಗ ಅವರು ಏಳೆಂಟು ವರ್ಷದವರಾಗಿದ್ದರು. ಈಗ ಸನಿಹಕ್ಕೆ ಐವತ್ತರ ಗಡಿಯಲ್ಲಿದ್ದರು. ಆಗಲೆ ನೋಡಬಾರದ್ದನ್ನ ನೋಡಿದ್ದರು, ಕಾಣಬಾರದ್ದನ್ನು

ಕಂಡಿದ್ದರು. ಕೇಳಬಾರದನ್ನ ಕೇಳಿದ್ದರು. ವಾಪಾಸುಹೋಗುವ ಎಲ್ಲ ಅವಕಾಶಗಳು ಸಂಪೂರ್ಣವಾಗಿ ಮುಚ್ಚಿಹೋಗಿದ್ದವು.

ಥಾವು ಗಟ್ಟಿಮುಟ್ಟಾದ ಎತ್ತುಗಳನ್ನು ವ್ಯಾಪಾರಕ್ಕೆ ಆಯ್ಕೆಮಾಡಿಕೊಂಡಿದ್ದ. ಹತ್ತು ಕುದುರೆ ಮೇಲೆ ಹತ್ತು ಮಂದಿ ಸಹಾಯಕರು ಜೊತೆಗೆ ಅವನ ಹಿರಿ ಮಗ ಲಚ್ಮ ಎತ್ತುಗಳ ಮೇಲೆ ಎಲ್ಲಾ ದವಸಗಳನ್ನು ಹೇರಿ ಹೈದ್ರಾಬಾದ್ ಕಡೆಗೆ ಹೊರಟಿದ್ದರು. ಮನೆಯವರಿಗೆ ಇಷ್ಟವಿರಲಿಲ್ಲ ಹಾಗಂತ ಅವಕಾಶಗಳನ್ನು ಬಿಟ್ಟು ಸುಮ್ಮನೆ ಕುಳಿತುಕೊಳ್ಳಲು ಆಗುತ್ತಿರಲಿಲ್ಲ. ಒಂದುವರೆ ತಿಂಗಳಲ್ಲಿ ವಾಪಾಸು ಬರಬಹುದೆಂಬ ನಂಬಿಕೆ ಅವರದಾಗಿತ್ತು. ಲಚ್ಮಿಗೆ ಯಾಕೋ ಅಸಮಧಾನ, ಕಳವಳ, ದೇಸು ಸುಮಾರು ದೂರದವರೆಗೆ ಹೊರಟಿದ್ದು, "ನೋಡು ದೇಸು, ಜೀವನದಲ್ಲಿ ಯಾವಾಗಲೂ ಹಿಂದೆ ಸರಿಯಬಾರದು. ಶಕ್ತಿಗಿಂತ ಮುಖ್ಯವಾಗಿ ಯುಕ್ತಿಯನ್ನ ಬಳಸಬೇಕು. ನಮ್ಮೆದುರಿಗಿನ ಶತ್ರುವಿನ ಶಕ್ತಿಯ ಅಂದಾಜು ಇಲ್ಲದಾಗ ನಾನೇ ಶಕ್ತಿವಂತನೆಂದು ಅವನ ಮೇಲೆ ಬಿದ್ದಾಗ ಅವನು ಎಷ್ಟೆ ಶಕ್ತಿ ವಂತನಿದ್ದರೂ ಒಂದು ಕ್ಷಣ ತಬ್ಬಿಬ್ಬಾಗುತ್ತಾನೆ. ಸರಿಯಾದ ಸಮಯ ನೋಡಿ ಅವನನ್ನ ಮುಗಿಸಿಬಿಡಬೇಕು." ಮಾತುಬಾರದಾಗಿದ್ದವು. "ಇದೆಲ್ಲಾ ಮಗ, ನಾನು ನಿಮ್ಮ ತಂದೆಯಿಂದ ಕಲಿತದ್ದು. ಯಾವತ್ತು ಆತನ ನೆರಳೊಳಗೆ ಬದುಕಿದ್ದೋನು ನಾನು, ಆದರೆ, ಈ ವಿಧಿಯ ಆಟ ನೋಡು, ಅವನನ್ನ ನಮ್ಮಿಂದ ದೂರಮಾಡಿತು." ಕಣ್ಣಿಂದ ನೀರು ಧಾರಾಕಾರವಾಗಿ ಹರಿಯುತ್ತಿದ್ದವು. "ಕಾಕಾ, ಅಪ್ಪನ ಬಗ್ಗೆ ಇಷ್ಟೊಂದ ಗೌರವ ಇಟ್ಟಿರುವ ನೀವು ಆತನ ಯಾಕೆ ಹುಡುಕಲಿಲ್ಲಾ?" ಬಹಳ ವರ್ಷಗಳಿಂದ ಅವ್ಯಕ್ತವಾದ ಸವಾಲುಗಳಿಗೆ ಉತ್ತರ ನಿರೀಕ್ಷಿಸಿದ್ದ "ಅದೆಲ್ಲಾ ಮುಗಿದ ಕತೆ, ಈಗ ಅದನ್ನು ಕೆದಕಿ ಪ್ರಯೋಜನವಿಲ್ಲ" ವಿಷಯಾಂತರ ಮಾಡಲು ನೋಡಿದ. "ಅವರು ಬದುಕಿದ್ದಾರಾ?" ಮರು ಪ್ರಶ್ನೆ, ಥಾವು ಸಂದಿಗ್ಧದಲ್ಲಿ ಬಿದ್ದ. "ಅದು ಮಗ", ಮಾತುಗಳೇ ಹೊರಡಲಿಲ್ಲಾ "ಯಾಕೆ ಸತ್ಯವನ್ನು ನಮ್ಮಿಂದ ಮುಚ್ಚಿಟ್ಟಿದ್ದೀರಾ ಅವರು ಬದುಕಿರುವುದೇ ಆದರೆ ಎಲ್ಲಿದ್ದರೂ ಸರಿ ಅವರನ್ನ ವಾಪಾಸು ನಾನು ತರುತ್ತೇನೆ. ಹೇಳಿ ಯಾವ ಸೀಮೆಯೊಳಗಿದ್ದಾರೆ." ಹುಂಬತನವಿತ್ತು ಮಾತೊಳಗೆ, ದೇಸು, ಬೇಟಾ ನೀನು ಥೇಟ್ ನಿಮ್ಮಪ್ಪನ ಹಾಗೆಯೇ ಛಲಗಾರ, ಶಕ್ತಿವಂತ, ಆದರೆ ಅವತ್ತಿನ ನಮ್ಮ ಸ್ಥಿತಿಗೂ, ಇವತ್ತಿನ ಸ್ಥಿತಿಗೂ ಬಹಳ ಫರಕ್ ಇದೆ ಮಗ, ಖಾನ್ ಸಾಹೇಬರು ತಮ್ಮ ಖಾಸಮನುಷ್ಯರನ್ನ ದೂರವಿಟ್ಟು ನಮ್ಮನ್ನ ಹತ್ತಿರ ಇಟ್ಕೊಂಡಿದ್ದರು. ಆದರೆ, ಅದೊಂದು ಕೆಟ್ಟ ಸನ್ನಿವೇಶ, ಖಾನ್ ಸಾಹೇಬರ ಮಗಳು, ನಿಮ್ಮಪ್ಪನ ಶಕ್ತಿಗೆ ಮಾರುಹೋದವಳೆ ಅವರನ್ನ ವಿವಶನನ್ನಾಗಿಸಿದ್ದಳು. ಅಧಿಕಾರಕ್ಕೆ ತಲೆ ಬಾಗಲೇ ಬೇಕಾಯ್ತು. ಅದು ಅವಳ ಗಂಡ ಲತೀಫ್‌ಖಾನ್‌ಗೆ ಇತ್ತೀಚಿಗೆ ಗೊತ್ತಾಗಿ, ಖಾನ್‌ಸಾಹೇಬರ ಅಧಿಕಾರ ಪಡೆಯಲು ಅವರಿಗೆ ಹತ್ತಿರವಾಗಿದ್ದ ನಿಮ್ಮಪ್ಪನನ್ನ ಮೋಸದಿಂದ ಹತ್ಯಮಾಡಿದ್ದ." ದುಃಖ ಉಕ್ಕಿಬಂದಿತ್ತು. ದೇಸು ಕುದುರೆಯ ಮೇಲೆ ಕುಸಿದ, ಸ್ವಲ್ಪ ಹೊತ್ತು ನೆರಳಲ್ಲಿ ವಿಶ್ರಾಂತಿಗಾಗಿ ಲದೇಣಿಯಾ ನಿಲ್ಲಿಸಲಾಯ್ತು. ದೇಸುನ ಸುಧಾರಿಸಿ ಅವನ ಜೊತೆಗೆ ಥಾವುನ ಖಾಸ ಮನುಷ್ಯನೊಂದಿಗೆ ವಾಪಾಸ ಕಳುಹಿಸಲು ನಿರ್ಧರಿಸಿದ. "ಬೇಟೆ ಯಾವತ್ತು ಜೀವನದಿಂದ ನಿರಾಶೆಗೊಂಡು ಓಡಬೇಡ. ನಮ್ಮ ಬದುಕೆ ಒಂದು ಹೋರಾಟ, ಎಲ್ಲೋ ದೂರದನಾಡಿನಿಂದ ಬಂದವರು ಸ್ವಲ್ಪ ಮೈಮರೆತು ವಿಶ್ರಮಿಸಿದರು ದೊಡ್ಡ ಗಂಡಾಂತರ. ಇದನ್ನು ಪಾಲಿಸು ನಿನಗೆ ಒಳ್ಳೆಯದಾಗುತ್ತದೆ. ನಾನು ಹೇಳಿದ ನಿಮ್ಮ ತಂದೆಯ ಸತ್ಯವನ್ನು ನಿನ್ನ ತಾಯಿಗೆ ಯಾವತ್ತೂ

ಹೇಳಬೇಡ ಹೇಳಿದ ದಿನವೇ ಅದನ್ನು ಕೇಳಿ ಅವಳು ಪ್ರಾಣ ತ್ಯಾಗಮಾಡಿಬಿಡುತ್ತಾಳೆ. ಚಿಕ್ಕಮ್ಮ ಉಳಿದ ನಿನ್ನ ತಮ್ಮಂದಿರ, ತಂಗಿಯರ ಬಗ್ಗೆ ಕಾಳಜಿ ಇಡು. ಈಗ ಇಡೀ ನಮ್ಮ ಕರಮ್ತೋಟ್ ಖಾನ್ ದಾನ್‌ನ ಜವಾಬ್ದಾರಿ ನಿನ್ನ ಮೇಲಿದೆ. ಇದನ್ನು ಮುಂದುವರೆಸು" ಬಹಳ ಹೊತ್ತು ಅವನ ಮನಸ್ಸಿಗೆ ಹೇಳಬೇಕು ಎನಿಸಿದ್ದನ್ನ ಹೇಳುತ್ತಲೇ ಇದ್ದ. ದೇಸುಬುಕ್ಯಾ ಕರಮ್‌ತೋಟ್, ತನ್ನ ಚಿಕ್ಕಪ್ಪ ಯಾಕೆ ಹೀಗೆ ಹೇಳುತ್ತಿದ್ದಾನೆಂದು ಅರ್ಥಮಾಡಿಕೊಳ್ಳುವುದರೊಳಗೆ ಅವರು ದೂರ ಹೋಗಿದ್ದರು. ಅವರು ನಿಂತಿದ್ದ ಜಾಗಕ್ಕೆ ಅಂತರಾಳದಿಂದೊಮ್ಮೆ ನಮಸ್ಕರಿಸಿದ. ಎಷ್ಟೆಲ್ಲಾ ಘಟನೆಗಳು ಘಟಿಸಿರುವುದು ಅವನ್ನೆಲ್ಲಾ ಸಹಿಸಿಕೊಂಡು ಬಂಡೆಗಲ್ಲಿನಂತೆ ಕಷ್ಟಗಳಿಗೆ ಒಡ್ಡಿಕೊಂಡು ನಗುತ್ತಲೇ ಸಂಸಾರದ ಜವಾಬ್ದಾರಿಯನ್ನು ಹೊತ್ತಿರುವ ತನ್ನ ಚಿಕ್ಕಪ್ಪನ ಬಗ್ಗೆ ಹೆಮ್ಮೆ ಎನಿಸಿತು.

ದೇಸು ಉಳಿದ ತಮ್ಮ ಮಂದಿಗಳೊಂದಿಗೆ ಚಿಕ್ಕಪುಟ್ಟ ವ್ಯವಹಾರಗಳನ್ನು ಮಾಡಿ ಲಾಭ ಮಾಡತೊಡಗಿದ. ಅನೇಕ ಜನರು ಆಕಡೆಯಿಂದ ವ್ಯಾಪಾರಕ್ಕೆ ಬಂದು ಹೋಗತೊಡಗಿದ್ದರಿಂದ ವ್ಯಾಪಾರದಲ್ಲಿ ಹೆಚ್ಚು ಕಡಿಮೆಯಾಗತೊಡಗಿತು. ಅವನೇನು ದೂರದ ವ್ಯಾಪಾರಗಳನ್ನು ಒಪ್ಪಿಕೊಳ್ಳುತ್ತಿರಲಿಲ್ಲ. ಒಂದು ದಿನದ ಪ್ರಯಾಣ ಮಾಡುವುದಿದ್ದರೆ ತನ್ನ ಮಂದಿಯನ್ನು ಕಳುಹಿಸುತ್ತಿದ್ದ ಕರ್ನಾಟಕ ಗಡಿಯಲ್ಲಿನ ಜನರೊಂದಿಗೆ ಸಂಪರ್ಕವಿಟ್ಟುಕೊಂಡಿದ್ದ. ಆದರೆ ಮನೆಯಲ್ಲಿ ಪ್ರತಿದಿನ ಥಾವು ಮತ್ತು ಲಚ್ಮ ಬುಕ್ಯಾಕರಮತೋಟ್‌ರದೆ ಚಿಂತೆಮಾಡತೊಡಗಿದ್ದರು. ಥಾವುನ ಮಗಳು ಗೋಮಿ ಮದುವೆ ವಯಸ್ಸಿಗೆ ಬಂದಿದ್ದಳು. ಅವಳಿಗೆ ಮದುವೆಯಾಗಬೇಕಿತ್ತು. ಆತನ ಎರಡನೆ ಮಗ ತೊತ್ಯಾ ದೊಡ್ಡವನಾಗಿ ಅವನ ಅಣ್ಣ ದೇಸು ಜೊತೆಗೆ ವ್ಯಾಪಾರ ಮಾಡುತ್ತಿದ್ದ. ದೇಸುಗೆ ಮನೆಯ ಜವಾಬ್ದಾರಿ ಬರಲೆಂಬುದು ಥಾವುನ ಆಶೆಯಾಗಿತ್ತು. ಲಚ್ಮನಿಗಿಂತ ದೇಸು ಬುದ್ಧಿವಂತನಾಗಿದ್ದ, ಎಲ್ಲದರಲ್ಲೂ ಚಾಣಾಕ್ಷನಾಗಿದ್ದಲ್ಲದೆ ಸೂಕ್ಷ್ಮತಿಯಾಗಿದ್ದ. ಈಗ ಆತನೊಬ್ಬ ಪಕ್ಕ ವ್ಯಾಪಾರಿಯಾಗಿ ಪಳಗಿದ್ದು, ಸುತ್ತಲೂ ಅವನ ವ್ಯಾಪಾರದ ಚರ್ಚೆಯಾಗಿತ್ತು. ಇದು ಅನೇಕ ಬಂಜಾರರಲ್ಲಿ ಇರ್ಷೆಯನ್ನು ಕೂಡ ತಂದಿತ್ತು. ಹೇಗಾದರು ಮಾಡಿ ಅವನ ವ್ಯಾಪಾರವನ್ನು ಕೊನೆಗಾಣಿಸಲು ಒಳಸಂಚುಗಳನ್ನು ಮಾಡತೊಡಗಿದ್ದರು. ಆದರೆ ಅವನ ಚಾಣಾಕ್ಷತೆಯ ಎದುರಿಗೆ ಅದು ಸುಲಭವಾಗಿರಲಿಲ್ಲ. ದೇಸುಗೆ ಹೈದ್ರಬಾದ್‌ಗೆ ವ್ಯಾಪಾರಕ್ಕೆ ಹೋಗಿದ್ದ ಅವನ ಚಿಕ್ಕಪ್ಪ ಥಾವುನಯೋಚನೆ ಬಹಳವಾಗಿ ಕಾಡಿತ್ತು.

ಹೈದ್ರಾಬಾದ್ ಪ್ರವೇಶಿಸಿದ ಥಾವುಗೆ ಅಚ್ಚರಿಯೊಂದು ಕಾದಿತ್ತು. ಕುದುರೆಯ ಮೇಲೆ ಹೊರಟಿದ್ದ ಸೈನಿಕರ ಗುಂಪಿನೊಳಗೆ ಅವನ ಅಣ್ಣನ ಮಗ ದೇಸುನಂತಹವನೆ ಅವನ ವಯಸ್ಸಿನ ಯುವಕನೊಬ್ಬ ಹೊರಟಿದ್ದ, "ಬಾ, ಆತ ಅಣ್ಣನ ಹಾಗೆ ಇದ್ದಾನೆ", ಅಂದು ಬಿಟ್ಟ ಥಾವು ಅವನ ಬಾಯಿ ಮುಚ್ಚಿದ, ಯಾರಾದರು ಕೇಳಿದರಾ ಅಂತ ಸುತ್ತಲು ನೋಡಿದ. "ಜೋರಾಗಿ ಮಾತಾಡಬೇಡ ಮಗ, ಅವನು ನಿನ್ನಣ್ಣನೆ" ಅಂತ ಪಿಸುಮಾತಲ್ಲಿ ಹೇಳಿದ. ಆದರೆ ಅವರಿಗೆ ಆತನನ್ನ ಮಾತಾಡಿಸುವುದಕ್ಕಿಂತ ಆತನ ಹತ್ತಿರ ಹೋಗುವುದೆ ದುಸ್ತರವಾಗಿತ್ತು. ಒಂದು ವೇಳೆ ಹಾಗೇನಾದರು ಆದಲ್ಲಿ ಥಾವು ಜೀವಸಹಿತ ಉಳಿಯುತ್ತಿರಲಿಲ್ಲ. ಹಾಗೆ ನೋಡಿಕೊಂಡು ಮುಂದೆ ಸಾಗಿದರು ಅವರು ಧಾನ್ಯಗಳನ್ನು ತಲುಪಿಸಬೇಕಿದ್ದ ಜಾಗಕ್ಕೆ ಬಂದಾಗ ಕತ್ತಲಾಗಿತ್ತು. ಅಲ್ಲೇ ಕಾಡಿನೊಳಗೆ ಟೆಂಟುಗಳನ್ನ ಹಾಕಿಕೊಂಡು ತಂಗಲು ಅನುವಾದರು. ದಿನಸಿಯ ಬಟವಾಡೆ

ವಾರನೆಯ ದಿನ ಕೊಡುವುದಾಗಿ ಹೇಳಿದ ಆಸಾಮಿ ನಾಪತ್ತೆಯಾಗಿದ್ದ, ಥಾವುಗೆ ಪೇಚಿಗಿಟ್ಟುಕೊಂಡಿತ್ತು. ಹಾದಿಯ ಖರ್ಚು, ಅವರ ಹಿಂದೆ ಬಂದಿದ್ದ ಜನರ ಕೂಲಿ ಎಲ್ಲವೂ ತಲೆ ಮೇಲೆ ಬರುವ ಭಯಕಾಡತೊಡಗಿತು. ಆ ಶ್ರೀಮಂತ ಸಂಜೆಗೆ ಕಾಣಿಸಿಕೊಂಡಿದ್ದ. ಅವನು ಹೈದ್ರಬಾದ್ ಉರ್ದುವಿನಲ್ಲೇ ಮಾತಾಡುತ್ತಿದ್ದ. ಥಾವುಗೆ ಅಲ್ಪಸ್ವಲ್ಪ ಉರ್ದು, ಹಿಂದಿ ಬರುತ್ತಿದ್ದರಿಂದ ಮಾತಿಗೆ ಮಾತು ಬೆಳೆಯಿತು. ಅವನು ಹೇಳಿದಕ್ಕಿಂತ ಕಡಿಮೆ ಕೊಡಲು ಬಂದ. "ಅಲ್ಲಾ ಸಾಮಿ ನಮ್ದುಕೆ ಖರ್ಚು ಇದರ ದಸ್‌ಪಟ್ಟು ಜಾಸ್ತಿ ಹೂವಾಹೈ" ಅಂದ ಥಾವು," "ನೋಡಿ ನಮ್ದುಕೆ ಕೊಡೋದೆ ಇಷ್ಟು ಬೇಕಾದ್ರೆ ತಗಳಿ ಇಲ್ಲಾಂದ್ರೆ ಹೋಗಿ" ಖಡಾಖಂಡಿತವಾಗಿ ಹೇಳಿದ. ಥಾವು ಗಾಬರಿಯಾದ, ಯಾಕೆ ಎಲ್ಲವೂ ಮೈಮೇಲೆ ಬರ್ತಿರೋ ಹಾಗಿದೆ ಅಂದುಕೊಂಡ, "ನಹಿ ಐಸಾಮತಕರೊ ಹುಜೂರ್, ಮೈ ತೊ ಬರಬಾದ್ ಹೋಜಾವುಂಗಾ" ಥಾವು ಬೇಡಿಕೊಂಡ, ಆ ಅಸಾಮಿ ಎನು ದರಕಾರ್ ಮಾಡದಾದ. ಲಚ್ಮಗೆ ಸಿಟ್ಟುಬಂತು "ಹಮಾರ ದೇನಾಹೈದೆದೊ ನಹಿತೋ;" ಅಂದುಬಿಟ್ಟ, "ಕ್ಯಾಕರೋಗೆ, ನಹಿ ದುಂಗಾ ಜಾವೊ" ಅಂತೇಳಿ ಕೊಡಲು ಬಂದಿದ್ದನು ಇಟ್ಕೊಂಡು ಹೊರಡಲು ಮುಂದಾದ, "ನವಾಬ ಪಾಸ್‌ದೆದೆಂಗೆ ಜಾವೊ" ಅಂದ ಥಾವುಗೆ ತಲೆ ಹಾಳಾಯ್ತು, ಅವನ ಕೈಯಲ್ಲಿದ್ದ ಕಾಸಿನ ಚೀಲವನ್ನು ಕಿತ್ತುಕೊಂಡು "ಅಬ್ ಆಪ್ ಜಾಕೆ ಬೊಲೊ ನವಾಬಕೊ" ಅಂದವನೆ ಡೆರೆಯನ್ನ ಕಿತ್ತು ವಾಪಾಸು ಹೊರಡಲು ಮುಂದಾದರು. ಕತ್ತಲಾಗುತ್ತಿದ್ದಂತೆ ಕಾಡಿನ ದಾರಿಗುಂಟ ವಾಪಾಸು ಹೊರಡುವ ಯೋಜನೆಯನ್ನ ಹಾಕಿದ. ಈ ಸುದ್ದಿ ಲತೀಫ್‌ಖಾನ್ ಮಗನಿಗೆ ಕಿವಿಗೆ ಬಿದ್ದರೆ ಅವನೇನಾದರೂ ನನ್ನ ಗುರುತು ಹಿಡಿದರೆ ಮುಗಿತು ಕತೆ ಅಂದವನೆ ಎತ್ತುಗಳನ್ನು ಒಂದು ಕಡೆ ಹೊಡೆಯಿಸಿದ ಲಚ್ಮನೊಂದಿಗೆ ಬಂದಮಾರ್ಗದಲ್ಲಿ ಮುಂಚೆ ಹೋಗಿ ಪಾರಾಗುವುದಾಗಿ ಅಂದುಕೊಮಡಿದ್ದ. ಆದರೆ ಆ ವ್ಯಾಪಾರಿ ನವಾಬನ ಸೈನಿಕರಿಗೆ ಸುದ್ದಿ ಹೇಳಿದ್ದರಿಂದ ಥಾವುಗಾಗಿ ಹುಡುಕಾಟ ನಡೆದಿತ್ತು. ಈಗ ಅವನು ತಪ್ಪಿಸಿಕೊಳ್ಳುವ ಸಾಧ್ಯತೆ ಕಡಿಮೆಯಾಗಿದ್ದವು. ಆದರೂ ಬಂಡಧೈರ್ಯದಿಂದ ಪಾರಾಗಬೇಕೆಂದು ಹೊರಟೇಬಿಟ್ಟಿದ್ದ. ನಾಕಾಬಂದಿ ಮಾಡಿದ್ದ ಸೈನಿಕರು ಮೋಸಮಾಡಿ ಓಡಿ ಹೊರಟಿದ್ದ ಬಂಜಾರ ವ್ಯಾಪಾರಿಯ ಪತ್ತೆಗೆ ವಿಶೇಷ ಆಸಕ್ತಿ ವಹಿಸಿದ್ದರು. ಹೈದ್ರಾಬಾದ್ ಬಿಡುವುದು ತುಸು ಕಷ್ಟವೇ ಆಯಿತು. ಪ್ರಯಾಸ ಪಟ್ಟು ಗಡಿಯನ್ನ ದಾಟಿ ಎತ್ತುಗಳ ಬರುವಿಕೆಯ ಎದಿರು ನೋಡುತ್ತಿರುವಾಗ ಒಬ್ ಸೈನಿಕ ಪಹರೆಕಾಯುವವನು ಹತ್ತಿರ ಬಂದ. ಅವರು ಕುಳಿತಿದ್ದ ಸ್ಥಿತಿಯ ಅಂದಾಜಿನ ಮೇಲೆ ಅನುಮಾನಪಟ್ಟು ಅಲ್ಲೆ ಪಕ್ಕದಲ್ಲಿದ್ದ ತುಕಡಿಯನ್ನ ಕರೆಯಿಸಿ ಥಾವು ಮತ್ತು ಲಚ್ಮನನ್ನ ಸುತ್ತುವರೆದರು. ಅದೇ ಸಮಯಕ್ಕೆ ಎತ್ತುಗಳು ನುಗ್ಗಿದವು. ಸೈನಿಕರ ಮತ್ತು ಥಾವು ನಡುವೆ ಸಣ್ಣದೊಂದು ಹೋರಾಟವೇ ನಡೆಯಿತು. ಬಂಜಾರರು ಯುದ್ದ ಕಲೆಯನ್ನ ತಮ್ಮ ಆತ್ಮರಕ್ಷಣೆಗಂತ ಕಲಿತ್ತಿದ್ದರಿಂದ ಅವರು ಕೂಡ ಸೈನಿಕರಿಗೆ ಸರಿಯಾದ ಪೆಟ್ಟುಕೊಟ್ಟರು. ತುಕಡಿಯನ್ನು ಧೂಳಿಪಟ ಮಾಡಿ ಇನ್ನೇನು ದಾರಿ ಬಿಟ್ಟು ಕಾಡಲ್ಲಿ ಮರೆಯಾಗಬೆಕು ಎನ್ನುವಷ್ಟರಲ್ಲಿ ಮತ್ತೆ ಸೈನಿಕರು ಮುತ್ತಿಗೆ ಹಾಕಿಬಿಟ್ಟರು. ಈಗ ಬದುಕಿ ಉಳಿಯುವ ಅವಕಾಶಗಳು ಕಡಿಮೆಯಾದವು. "ಥಾವು ದೇಕೋರ ಮರೇರೊನ ಜೀವೆರೊ ತಮಾರ ಹಾತೇಮ ಅಫಣ್‌ಮರಗೆತೊ ಮರಗೆ ಚಾರವಾಳದೇನ ದಾಂಜಾಮ" ಗೋರಬೋಲಿಯಲ್ಲಿ ಹುರಿದುಂಬಿಸಿದ. ಈ ಭಾಷೆ ಸೈನಿಕರಿಗೆ ಅರ್ಥವಾಗಲಿಲ್ಲ. ಹತ್ತಿರ ಬರುವವರೆಗೆ ಸುಮ್ಮನಿದ್ದ ಥಾವುನ ದಂಡು ಬಂದತಕ್ಷಣವೇ ಅವರ ಮೆಲೆ ಎಗರಿ

ಆಕ್ರಮಣವೆಸಗಿತ್ತು. ಸೈನಿಕರು ಈ ಬಂಜಾರರು ಶರಣಾದರು ಎಂದು ಬಗೆದರೆ ಇದ್ದಕ್ಕಿದ್ದಂತೆ ಎಸಗಿದ ಆಕ್ರಮಣದಿಂದ ಕ್ಷಣ ಕಾಲ ಗೊಂದಲಗೊಂಡರು. ಬಹಳ ಹೊತ್ತು ಸಂಘರ್ಷ ನಡೆದಿತ್ತು. ಬಂಜಾರರು ಗೆಲ್ಲುವುದಿಲ್ಲ ಎಂದು ಗೊತ್ತಾದಾಗ ಒಬ್ಬೊಬ್ಬರೆ ಕಳ್ಳದಾರಿಯಿಂದ ಪಲಾಯನ ಮಾಡಿದ್ದರು. ಎತ್ತುಗಳೆಲ್ಲಾ ಹೆದರಿ ಚದುರಿಹೋಗಿದ್ದವು. ಥಾವು ಬಲವಾಗಿ ಗಾಯಗೊಂಡಿದ್ದ ಅವನ ಮಗ ಲಚ್ಮನಿಗೂ ಮರಣಾಂತಿಕ ಹಲ್ಲೆ ಮಾಡಲಾಗಿತ್ತು. ಈ ಸುದ್ದಿಯನ್ನು ದೇಸುಗೆ ಮುಟ್ಟಿಸಿ ಅವನಲ್ಲಿದ್ದ ಬಂಗಾರದ ನಾಣ್ಯಗಳನ್ನು ಹೇಗಾದರೂ ಮಾಡಿ ತಲುಪಿಸಲು ಲಚ್ಮ ಬದುಕಿರುವುದು ಅನಿವಾರ್ಯವಾಗಿತ್ತು. ಸೈನಿಕರು ಸುತ್ತುವರಿದರು ಲೆಕ್ಕಿಸದೆ, "ಬೇಟ ನೀ, ಓಡು, ಮುಂದೆ ನಮ್ಮವರು ಸಿಗುತ್ತಾರೆ ಮುಂದಿನ ನಿಮ್ಮ ಜೀವನಕ್ಕೆ ಇದು ಸಹಾಯವಾಗುತ್ತೆ ಬಹಳ ಜೋಪಾನದಿಂದ ನಿಮ್ಮಣ್ಣ ದೇಸುಗೆ ಕೊಡು". ಕುಸಿದುಬಿಟ್ಟ. ಲಚ್ಮ ವರಹಗಳೊಂದಿಗೆ ಮೆಲ್ಲಗೆ ನುಸುಳಿಕೊಂಡು ತನ್ನ ಕುದುರೆಯನ್ನು ಏರಿ ತಪ್ಪಿಸಿಕೊಂಡ. ಥಾವು ನೆಲಕ್ಕುರುಳಿ ಪ್ರಾಣಬಿಟ್ಟಿದ್ದ. ದೂರದಿಂದಲೇ ತಂದೆಯ ಸಾವಿಗೆ ಸಾಕ್ಷಿಯಾದ ಲಚ್ಮ. ತಾಯಿಯನ್ನ ಸೇರಲು ಓಡಿದ. ಅವನ ಮೇಲು ಸರಿಯಾಗಿ ಆಕ್ರಮವಾಗಿದ್ದರಿಂದ ಗಾಯ ಬಹಳ ಆಳವಾಗಿತ್ತು. ರಕ್ತ ಜಿನುಗುತ್ತಿತ್ತು. ತನ್ನ ಬಳಿಯಿದ್ದ ಬಟ್ಟೆಯನ್ನು ಕಟ್ಟಿಕೊಂಡು ಕುದುರೆಯ ಮೇಲೆ ಅಡ್ಡಾಗಿದ್ದ.

ಲಚ್ಮ ಕಣ್ಣುಬಿಟ್ಟಾಗ ಅವರ ಗುಂಪು ಅವನನ್ನ ಶೂಷ್ರುತೆ ಮಾಡುತ್ತಿತ್ತು. ಅವರನ್ನ ನೋಡಿ ತುಸು ಚೇತರಿಸಿಕೊಂಡ. ಗಾಯಕ್ಕೆ ಕಾಡಿಂದ ಔಷಧಿ ತಂದು ಕಟ್ಟಿದರು. ಆದರೆ ಗಾಯದ ನಂಜ ಹೆಚ್ಚಾಗಿ ಅವನಿಗೆ ಜ್ವರ ಬಂದಿತು. "ಹೀಗೆ ಕುಳಿತರೆ ನಮ್ಮ ಜಾಗ ತಲುಪುವುದು ಸಾಧ್ಯವಾಗಲಿಕ್ಕಿಲ್ಲಾ ಹೊರಡಿ" ಅಪ್ಪಣೆಕೊಟ್ಟ ಲಚ್ಮ. ಕಂಡಷ್ಟು ಎತ್ತುಗಳನ್ನು ಒಟ್ಟುಮಾಡಿಕೊಂಡು ವಾಪಾಸು ಮನೆಗೆ ಹೊರಟರು. ಬಹಳ ಪ್ರಾಯಾಸದಿಂದ ಡೇರೆ ತಲುಪಿದರು. ಹೈದ್ರಾಬಾದ್‌ಗೆ ಹೋದವರು ಥಾವುನ ಕತೆ ಕೇಳಿ ಹತಾಶನಾಗಿದ್ದ, ಆ ವ್ಯಾಪಾರಿ ಮೋಸಮಾಡಿದ್ದ. ಯಾಕೆ ಚಿಕ್ಕಪ್ಪಗೆ ಈ ಸತ್ಯ ಗೊತ್ತಾಗಲಿಲ್ಲ ಅಂತ ಹಳಹಳಿಸಿದ. ಲಚ್ಮ ತಂದಿದ್ದ ಬಂಗಾರದ ವರಹಗಳನ್ನು ಅವನ ಕೈಗೆ ಇಟ್ಟು ಕುಸಿದುಬಿದ್ದ. "ಲಚ್ಮ ಏನಾಯ್ತು" ದೇಹತಣ್ಣಗಾಗತೊಡಗಿತು. ಅವನ ಹೆಂಡತಿ ಗುಜಾ ಓಡಿ ಬಂದಳು," ಏನಾಯ್ತು ನಿಮಗೆ, ನನ್ನ ಒಮ್ಮೆ ನೋಡಿ ಅಂದ್ರೆ, ನೋಡಿ" ಗೋಳಾಡಗೊಡಗಿದಳು, ವ್ಯಾಪಾರದಿಂದ ವಾಪಾಸ ಆದಾಗ ಗುಜಾಳನ ಸೇರುವ ಕಾರ್ಯವಿತ್ತು ಲಚ್ಮನದ್ದು. ಏಕೆಂದರೆ ಅವಳ ಮದುವೆಯಾದಾಗ ಅವಳಿನ್ನೂ ಋತುಮತಿಯಾಗಿರಲಿಲ್ಲ. ದೇಸುಗೆ ದಿಕ್ಕೆ ತಿಳಿಯದಾಗಿತ್ತು. ಕತ್ತಿಯ ಅಲಗುಗಳು ಮೈಯನ್ನ ಸೀಳಿದ್ದರಿಂದ ಆ ಗಾಯಗಳಿಗೆ ಚಿಕಿತ್ಸೆಯಿಲ್ಲದೆ ಇಡಿ ದೇಹವೆ ವಿಷಪೂರಿತವಾಗಿ ಅವಳ ತಾಯಿಯ ತೊಡೆಯ ಮೇಲೆ ಪ್ರಾಣಬಿಟ್ಟಿದ್ದ, ಈಗ ಸವಾಲು ಬಂದಿದ್ದು ಆಗತಾನೆ ಋತುಮತಿಯಾಗಿ ಗಂಡನ ಬರುವಿಕೆಯನ್ನ ಕಾಯುತ್ತಿದ್ದ ಗುಜಾಳ ಮುಂದಿನ ಬದುಕಿನದ್ದು. ಇದೊಂದು ಕರಮತೋಟ್ ಮನೆತನದ ಸವಾಲಾಗಿತ್ತು. ದೇಸು, ಅವಳ ಚಿಕ್ಕಮ್ಮನ ಜೊತೆಗೆ ಮಾತಾಡಿದ. ಲಚ್ಮನ ತಮ್ಮನಿಗೆ ಗುಜರಿಯನ್ನು ಗುಗರಿಹಾಕಿಸುವುದು ಅಂತ. ಅವಳೇನೂ ಹೆಣ್ಣಿನ ಅರ್ತನಾದವನ್ನು ಅರಿತವಳು ಒಪ್ಪಿಕೊಂಡಳು. ಈಗ ಅವರ ಖಾನ್‌ದಾನ್‌ಗೆ ಹಿರಿಯಳಾದ ಅವನ ತಾಯಿ ನಿರ್ಧಾರವೇ ಅಂತಿಮವಾಗಿತ್ತು. ನಾಳೆ ಇತಿಹಾಸದಲ್ಲಿ ನಮ್ಮ ಕುಲದ ಬಗ್ಗೆ ಮಂದಿ ಮಾತಾಡಿಕೊಳ್ಳಬಾರದು. ಏಕೆಂದರೆ ಆಗಲೆ ಡೆರೆಗಳಲ್ಲಿ ಮಂದಿ ಗುಸು ಗುಸು ಮಾತಾಡಿಕೊಳ್ತಿದ್ರು. ಲಚ್ಮ ಹೋರಾಟದಲ್ಲಿ ವೀರಮರಣ

ಹೊಂದಿರುವುದಿರಂದ ಅವನ ಹೆಂಡತಿ ಸತಿಯಾಗುವುದೇ ಸೂಕ್ತವೆಂದು ಅನಿಸಿತು. ಈ ಯೋಚನೆಯಿಂದ ಲಚ್ಮಿಗೆ ಯಾರೋ ಹೃದಯವನ್ನು ಕಿತ್ತು ಬಿಡಾಡಿದಂಗಾಗಿತ್ತು. "ಯಾ" ದೇಸುಮಾತಾಡದಾದ, ಸತ್ತಮಗನ ದುಃಖ ಒಂದು ಕಡೆಯಾದರೆ, ಹೆಣ್ಣಾಗಿ ಜೀವಂತ ಹೆಣ್ಣಿನ ಬಲಿಕೊಡುವುದು ದುಃಖತಾಳಲಾಗದೆ ಅಳತೊಡಗಿದಳು. "ಲಾಡೆಲ ಬಾಪೂರೆ, ತಾರಜಭಾಯಿ ಅಪಣೂರೆ ಆಂಗಣೋ ಸೂನೋ ಕರಗೊರೆ" ನೆರೆದ ಮಂದಿ ಕಣ್ಣಿಂದ ನೀರು ಹರಿಯುತ್ತಿತ್ತು. ಗುಜಾ ನಿರ್ಲಿಪ್ತಳಾಗಿ ಗಂಡನ ಹೆಣದ ಪಕ್ಕದಲ್ಲೇ ಕುಳಿತ್ತಿದ್ದಳು. ಥಾವು ಚಿಕ್ಕಪ್ಪ ಸೈನಿಕರೊಂದಿಗೆ ಹೊಡೆದಾಡಿಸುತ್ತಿದ್ದಾನೆ ಹಾಗಂತ ಚಿಕ್ಕಮ್ಮನ ಯಾಕೆ ಸತಿಮಾಡಲ್ಲ. ದೇಸುಗೆ ಪ್ರಶೆ ಕಾಡತೊಡಗಿತು. ಇದೀಗ ತಾನೆ ಬದುಕಿನ ಬಗ್ಗೆ ನೂರೆಂಟು ಕನಸುಗಳನ್ನು ಕಾಣುತ್ತಿರುವ ಗುಜಾ ಸತಿಯಾಗಿ ತಮ್ಮನ ಚಿತೆ ಏರುವುದನ್ನು ನೋಡುವುದಾದರೂ ಹೇಗೆ? ಹಿಂಸೆಯಾಗಿತ್ತು. ಹೆಣವನ್ನು ಹೆಚ್ಚು ಇಡಲು ಆಗದು ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ. ಡೆರೆಯ ಎಲ್ಲಾ ಬಂಜಾರರು ಆಗದು ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ. ಡೆರೆಯ ಎಲ್ಲಾ ಬಂಜಾರರು ಒಂದೆಡೆ ಸೇರಿದರು. ದೇಸು ನನ್ನ ಕಾಡುತ್ತಿರುವ ಪ್ರಶ್ನೆಯನ್ನು ಕೇಳಿದ. "ಹಾವ ಭಾ ನಮ್ಮ ಚಿಗವ್ವನೂನೆ ಈಗ ವಿಧವೆ ಅವಳ್ಯಾಕೆ ಸತಿಯಾಗಲ್ಲ?" ಪ್ರಶ್ನಿಸಿದ. ದೇಸು, "ನಿಮ್ಮ ಚಿಕ್ಕಪ್ಪ ಥಾವು ಹೆಣವನ್ನು ಆ ಸೈನಿಕರು ತಗೊಂಡ ಹೋದ್ರು. ಅದೇನಾದರು ನಮಗೆ ಸಿಕ್ಕಿದ್ದರೆ ಆತನ ಜೊತೆಗೆ ನಿಮ್ಮ ಚಿಕ್ಕಮ್ಮ ಕೂಡ ಚಿತೆ ಎರಲೇಬೇಕಾಗಿತ್ತು" ಹಿರಿಕನಾದ ಮೋಟ್ಲಹೇಳಿದ್ದ "ಅಲ್ಲಾ, ಈಗ ನನ್ನ ತಮ್ಮ ತೋತ್ಯ ಮದುವೆ ವಯಸ್ಸಿಗೆ ಬಂದವ್ನೆ, ಅವನಿಗೆ ಯಾಕೆ ಗುಗರಿಹಾಕಿಸಬಾರದು ಅಂತ", ಗುಜಾಳ ಬದುಕನ್ನ ಉಳಿಸುವ ಪ್ರಯತ್ನ ಮಾಡಿದ್ದ, "ಲೇ ತಮ್ಮ ನೀ ಇನ್ನೂ ಚಿಕ್ಕವ, ನಮ್ಮ ಸಂಪ್ರದಾಯ, ರೀತಿ ರಿವಾಜು ನಿನಗ ತಿಳಿಯಾಣಲ್ಲ. ನಿನ್ನ ತಮ್ಮ ಲಚ್ಮ ಹಾಗೆ ಏನಾರು ಕಾಯಿಲೆ – ಕಸಾಲೆಯಿಂದಲೋ, ಇಲ್ಲ ಯಾವುದಾದರೂ ಜೀವ ಜಂತುವಿಗೆ ಬಲಿಯಾಗಿದ್ದರೆ ನೀ ಅಂದಹಾಗೆ ಮಾಡಬಹುದಿತ್ತು. ಆದ್ರ ಅಂವ ಹೋರಾಡಿ ವೀರಸ್ವರ್ಗ ಸೇರವ್ನೆ., ಅದಕ್ಕೆ ಸತಿ ಯಾಚರಣೆ ಆಗಾಕಬೇಕು" ನಂದುಬಾಣೋತ್ ಖಡಾಖಂಡಿತವಾಗಿ ಕಡ್ಡಿ ಎರಡು ತುಂಡು ಮಾಡಿದಂಗೆ ಹೇಳಿದ. ಅದು ಅಲ್ಲದೆ, ಗುಜ ಅವನ ಮೊಮ್ಮಗಳು ಆದರೂ ಮುದುಕ ಜೀವದಾನ ನೀಡೋದಕ್ಕೆ ಅಡ್ಡಿಯಾಗಿದ್ದ. ದೇಸು ಎಲ್ಲರನ್ನೂ ಎದುರಿಸಲಾಗದೆ ವಿವಶನಾಗಿದ್ದ. ಅವನ ತಾಯಿ ಒಳಗೊಳಗೆ ರೋಧಿಸುತ್ತಿದ್ದಳು. ಚಿಕ್ಕಮ್ಮ ಮಗನ ಸಾವಿನಿಂದ ಕಂಗೆಟ್ಟು ಮಲಗಿದ್ದಳು. ಪಂಚರ ತೀರ್ಮಾನವೇ ಅಂತಿಮವಾಗಿದ್ದರಿಂದ, ಗುಜಾಸತಿಯಾಗಲೇ ಬೇಕಾಯಿತು. ಆದರೆ ದೇಸು ಅಷ್ಟು ಸುಲಭವಾಗಿ ಸೋಲನ್ನ ಒಪ್ಪಿಕೊಳ್ಳಲು ತಯಾರಿರಲಿಲ್ಲಾ. ಪಂಚರಿಗೆ ಆಮಿಷ ಒಡ್ಡಿ ತನ್ನ ಕಡೆಗೆ ನ್ಯಾಯ ಹೇಳಲು ಮಜಬೂರಮಾಡಿದ. ನಿಶ್ಚಿತ ಸಮಯಕ್ಕೆ ಎಲ್ಲವೂ ಮುಗಿಯಬೇಕಾಗಿತ್ತು. ಏಕೆಂದರೆ ಲಚ್ಮ ಸತ್ತು ಆಗಲೆ ಒಂದು ವರೆ ದಿನಗಳಾಗಿದ್ದವು. ಗುಜಾಳ ತಂದೆ ತಾಯಿಗಳು, ಅವಳ ಅಣ್ಣ ಎಲ್ಲಾ ಅವರಂತೆ ಮಾತಾಡಿ ಗುಜಾಳನ್ನ ಉಳಿಸಿಕೊಳ್ಳಲು ಹವಣಿಸುತ್ತಿದ್ದರು. ದೇಸುನ ವಿರೋಧಿಗಳಿಗೆ ಹೇಗೂ ಸುದ್ಧಿ ತಲುಪಿದ್ದೆ ಅವರಿದ್ದ ಡೇರೆಗೆ ನೂರಾರು ಜನ ಬಂಜಾರರು ಮುತ್ತಿಗೆ ಹಾಕಿ, ಇಲ್ಲಿ ನೆಲಿಸಿರುವ ಎಲ್ಲಾ ಬಂಜಾರರನ್ನು ಕುಲದಿಂದ ಹೊರಹಾಕುವುದಾಗಿ ಧಮಕಿಕೊಟ್ಟಿದ್ದರು. ತಾಬಡತೊಬಡ ನಾಯಕನಾಗಿದ್ದ ದೇಸುನನ್ನ ಡಾವೋ, ಕಾರಭಾರಿ ಪಂಚಾಯ್ತಿ ಕಟ್ಟೆಗೆ ಕರೆಯಿಸಿದರು. "ಕಾಂಯಿ ಭಾ, ನಾಯಕಜ ಹೈಯ್ ಕರತೋ ಕ್ಯೂಂ ಕರನ. ಊ ಆದ್ಮಿ

ಲಡತಾಣಿನ ಷ್‌ಹಿದ್ ಓಚ. ಓರಬೋಡಿ ಓರಲಾರ. ಅಗ್ನಿಪರ ಬೇಸನ ಸ್ವರ್ಗರ ಬಾಗಲತೋಯಿ ಕಾಡಿಯಕಾಂಯಿಕೊ. ನಿಶಾಣ ಮಾಟೀರ ಆತ್ಮ ಭಟಕೇನ ಲಾಗಜಾಯ." (ಏನಪ್ಪ ಈ ಡೇರೆಗಳ ನಾಯಕನಾದ ನೀನೆ ಹಿಂಗಮಾಡಿದ್ರೆ ಹೆಂಗಂತ. ಆ ಮನುಷ್ಯ ಹೋರಾಡಿ ವೀರಮರಣವನ್ನಪ್ಪಿದ್ದಾನೆ. ಅವನ ಹೆಂಡತಿ ಅವನ ಕೂಡ ಚಿತೆ ಏರಿದರೆ ಅವನ ಆತ್ಮ ಇಲ್ಲೇ ಸುತ್ತಾಡುತ್ತಿರುತ್ತದೆ. ಸ್ವರ್ಗಸಿಗುವುದಿಲ್ಲ) ಸಾಣುಬುಕ್ಯಾ ವಾದಿಸಿದ. ಅವನ ಮಾತಿಗೆ ಪೂರಕವಾಗಿ ರಾಮಾವತ, ಖೋಲಾ, ಹರಾವತ, ಮೇಘಾವತ, ಪಂಗಡದವರೆಲ್ಲಾ ಒಕ್ಕೊರಲಿನಿಂದ ಸಮರ್ಥಿಸಿದರು. ದೇಸು ಸೋಲನ್ನ ಒಪ್ಪಿಕೊಂಡು ಹದಿಮೂರು ವರ್ಷದ ಪವಿತ್ರಳಾದ ಗುಜಾ ಚಿತೆಯನ್ನ ಎರಲು ಒಪ್ಪಿಕೊಂಡ. ಆದರೆ ಅವನ ಮನಸ್ಸಿಗೆ ಬಹಳ ನೋವಾಗಿತ್ತು. ಮುಗ್ದಳಾದ ಗುಜಾ ನೀರಿನಷ್ಟೆ ಪವಿತ್ರಳಾಗಿದ್ದಳು. ಅಂತಹವಳನ್ನ ಕೈಯಾರೆ ಸಾವಿನ ದವಡೆಗೆ ತಳ್ಳುವುದು ಸಹಿಸಲಾರದಷ್ಟು ನೋವನ್ನ ಕೊಟ್ಟಿತ್ತು. ಚಿಕ್ಕಮ್ಮ ಮೆಲೆದ್ದಿರಲಿಲ್ಲಾ, ಗಂಡ, ಮಗ ಈಗ ಸೊಸೆಯನ್ನ ಕಳೆದುಕೊಳ್ಳುತ್ತಿರುವ ಅವಳಿಗೆ, ಬಾಪು ಮನ್ನಿಬಿ ಮಾರ ಬೇಟಾರ ಜತಾನ ಆಗನೇಪರ ಚಡಾದೋ ಬಾ ಮ ಬಚೂ ನ" (ಅಪ್ಪಾ, ನನ್ನ ಮಗನ ಜೊತೆಗೆ ನನಗೂ ಬೆಂಕಿ ಇಟು ಬಿಡ್ರಿ ನಾನು ಬದಕೋದಿಲ್ಲ) ನೋವಿಂದ ಹೇಳಿದಳು. "ಕಾಕಿ (ಚಿಕ್ಕಮ್ಮ) ಹೀಗೆಲ್ಲಾ ಮಾತಾಡಬಾರದು. ನಮ್ಮನ್ನೆಲ್ಲಾ ಅನಾಥರನ್ನಾಗಿ ಮಾಡಿಹೋಗಬೇಕು ಅಂದ್ಕೊಂಡಿಯ ನಾನು ಯಾವತ್ತಾರು ನಿನ್ನ ಮತ್ತು ಅಮ್ಮನ ನಡುವೆ ವ್ಯತ್ಯಾಸಮಾಡಿದ್ದಿನಾ. ಮನುಷ್ಯ ಜನ್ಮ ಒಂದೇ ಒಂದು ಸಲ ಸಿಗುವುದು." ಅನುಭವ ವಿಲ್ಲದಿದ್ದರೂ ಸಮಾಧಾನ ಪಡಿಸಿದ. ಲಚ್ಮಿ ನಿರ್ಲಿಪ್ತಳಾಗಿದ್ದಳು. ಗಂಡನ ಕಳೆದುಕೊಂಡು ಇಪ್ಪತ್ತು ವರ್ಷ ಗಳೇ ಆಗಿದ್ದವು. ಆವತ್ತಿನಿಂದ ಭಾವನೆಗಳನ್ನ ಕೊಂದುಕೊಂಡೆ ಬದುಕಿದ್ದಳು. ಅವಳೇನು ಮಾತನಾಡಲಿಲ್ಲ. ಗುಜಾಳನ್ನೆ ದಿಟ್ಟಿಸುತ್ತಾ ಕಣ್ಣೀರು ಸುರಿಸುತ್ತಿದ್ದಳು. ಗುಜಾಗೆ, ದುಃಖವೂ ಆಗ್ತಿಲ್ಲಾ ಸಾಯ್ತಿದ್ದಿನಿ ಎನ್ನುವ ಹೆದರಿಕೆಯೂ, ಗಂಡನ ಹೆಣದ ಜೊತೆಗೆ ಜೀವಂತವಾಗಿ ಚಿತೆ ಎರಲು ಧೈರ್ಯವನ್ನು ತಂದುಕೊಳ್ಳುತ್ತಿದ್ದಳು. ಅವನ ತಾಯಿ ತಡೆಯಲಾಗದೆ. "ಘೊಲೆಡಿಯೆ, ಆ ಹಿಂಯಾ, ತಾರನಸೀಬೆಮ ಕಾಂಯಿಲಕಗೀಯೆ ಆ ಹಿಂಯಾ, ಯಾಡಿ ತೋನ, ನಾನಕಿ ಉಮರೇಮ ಮೇಲದಿಂವೂ ಕರನ ಕಳೊಕೋನಿಯಾಡಿ". (ಮಗಳೆ ನಿನ್ನ ಹಣೆ ಬರಹದಲ್ಲಿ ಏನು ಬರದು ಹೋದಳು. ವಿಧಿ ಅರ್ಧ ವಯಸ್ಸಿನಲ್ಲೇ ಕಳೆದುಕೊಳ್ತೀವಿ ಅಂತ ತಿಳಿಯಲಿಲ್ಲಾ). ಭಾರಡಿ ಅತ್ತಳು, ಯಾರೊಬ್ಬರು ಅದರಿಂದ ವಿಚಲಿತರಾಗಲಿಲ್ಲ. ಅವಳನ್ನ ಗಂಡನ ಹೆಣದ ಜೊತೆಗೆ ಕೊನೆಯ ಸ್ನಾನಮಾಡಿಸಿ ಪಡ್ರೇರಫೇಟಿಯಾ, ಕಾಂಚಳಿ ಛಾಂಟೀಯ (ವಧುವಿಗೆ ಕೊಡುವ ಧಾರೆ ಸೀರೆ, ಕುಪ್ಪಸ, ತಲೆಮೇಲಿಧಾವಣಿ) ಉಡಿಸಿ ವಧುವಿನಂತೆ ಸಿರಗರಿಸಿ, ಹೂಮಾಲೆಯನ್ನ ಹಾಕಿ ಒಂದೇ ಚಿತೆಯಲ್ಲಿ ಇಬ್ಬರನ್ನು ಬೆಂಕಿ ಇಡುವ ವ್ಯವಸ್ಥೆ ಮಾಡಲಾಯಿತು.

ಸತಿಯನ್ನ ನೋಡಲು ನೊಣಗಳಂತೆ ಸುತ್ತಲು ವ್ಯಾಪಾರಕ್ಕೆ ಬಂದಿದ್ದ ಬಂಜಾರರು ಅವಳ ಅಂತಿಮ ದರ್ಶನಕ್ಕೆ ಆಗಮಿಸಿದ್ದರು. ಥಾಲಿಯಾ ಹಲಗೆಯನ್ನ ಎತ್ಕೊಂಡು ಜಡ್ನಂಗ್, ಜಡ್ನಂಗ್ ಅಂತೇಳಿ ನುಡಿಸುತ್ತಿದ್ದ, ಲಚ್ಮನ ಹೆಣವನ್ನ ಮಂದಿ ಘಳಿಗೆ ಘಳಿಗೆಗೆ ಹೆಗಲು ಬದಲಿಸಿ ಒಯ್ಯತೊಡಗಿದ್ದರು. ಸಾವನ್ನ ಎದುರಿಸುವ ಧೈರ್ಯ ಗುಜಾಗೆ ಬರಲಿ ಎಂಬಂತೆ ಮಂದಿ ಜೈಕಾರಹಾಕಿ ಹುರಿದುಂಬಿಸತೊಡಗಿದ್ದರು. ಜನಜಂಗುಳಿಯ ನಡುವೆ ಗುಜಾಳ ಸಾವಿನ

ಯಾತ್ರೆಸಾಗಿತ್ತು. ಜೀವಂತವಾಗಿ ಬೆಂಕಿಗೆ ಹಾರಿ ಪ್ರಾಣಬಿಡುವುದನ್ನು ನೆನಪಿಸಿಕೊಂಡೆ ಅವಳ ಹೃದಯ ಅರ್ಧನಿಯವಾಗಿತ್ತು. ಅವಳು ಯೋಚಿಸಿ ಯೋಚಿಸಿ ಮೂರ್ಛೆ ಹೋಗಿದ್ದಳು. ಚಿತೆಯ ಮೇಲೆ ಅವನ ಹೆಣವನ್ನ ಮಲಗಿಸಿ ಪೂಜೆಯ ವಿಧಿವಿಧಾನಗಳನ್ನು ಆಚರಿಸಿದ ಮೇಲೆ, ಅವನಣ್ಣ ದೇಸು, ತಮ್ಮ ತೊತ್ಯಾ ಬೆಂಕಿ ಇಟ್ಟರು. ಒಣಗಿದ ಪುಳ್ಳೆಯಂತೆ ಕಟ್ಟಿಗೆ ಬೆಂಕಿಯ ಕೆನ್ನಾಲಿಗೆಯನ್ನ ಚಾಚಿಕೊಂಡಾಗ ಮೂರ್ಛೆಹೋಗಿದ್ದ ಗುಜಾಳನ್ನು ನಡೆಸಿಕೊಂಡು ಖುಷಿಯಿಂದಲೆ ಚಿತೆ ಎರುತ್ತಿದ್ದಾಳೆ ಎಂಬಂತೆ ಬುಕ್ಯಾ (ಪಂಗಡ) ದವರು ಅಜಾಮತ್ತಾಗಿ ಎತ್ತಿ ಬೆಂಕಿಗೆ ನೂಕಿದರು. ಬೆಂಕಿಯ ಕಾವು ತಾಳದ ಗುಜಾ ಒಂದೇ ಸಾರಿ ಯಾಡಿ, ಎ ಬಾ (ಅಮ್ಮ, ಅಪ್ಪ) ಮುಗಿಲು ಮುಟ್ಟುವ ಚಿತ್ಕಾರದ ನಡುವೆ ದಹಿಸಿ ಹೋಗಿ ಮಹಾಸತಿಯಾದಳು.

ಮಂದಿಹಾಗೆ ಮಂಜಿನಂತೆ ಕರಗಿ ಹೋದರು. ಅವತ್ತಿಂದ ಮೂರು ದಿನಕ್ಕೆ ದಾಡೊ (ಮೂರುದಿನದ ಶಾಸ್ತ್ರ) ಮಾಡುವುದಾಗಿ ಕಾರಭಾರಿಸಾರಿದ. ಮಟ್ಟಿ (ಸ್ಮಶಾನ) ಕ್ಕೆ ಬಂದಿದ್ದವರೆಲ್ಲಾ ದಿನಕ್ಕೆ ಬರಲೇಬೇಕಿತ್ತು. ಬಂದ ಮಂದಿಯೆಲ್ಲಾ ಬಾರಿಹಣ್ಣಿನ ಗಿಡಹುಡುಕಿಹೊರಟರು. ಕಾಡಿನಲ್ಲೇನು ಬೇಕಾದಷ್ಟು ಗಿಡಗಳು ಸಿಗುತ್ತಿದ್ದರಿಂದ ಒಂದು ದೊಡ್ಡ ಕೊಂಬೆಯನ್ನು ಕಡಿದುಕೊಂಡು ತರಲಾಯಿತು. ಮಂದಿ ಒಂದೊಂದೆ ಎಲೆಗಳನ್ನು ಹರಿದುಕೊಂಡು ಹಲ್ಲಿಲೆ ಕಚ್ಚಿ ಉಗುಳಿ ನೀರಿನ ತೊರೆಗಳ ಹತ್ತಿರ ಕೈಕಾಲು ತೊಳೆಯುವವರು ಕೈಕಾಲು, ಸ್ನಾನಮಾಡುವವರು ಬಟ್ಟೆಗಳನ್ನೆಲ್ಲಾ ನೀರೊಳಗೆ ತೋಯಿಸಿ ರಾತ್ರಿಯಾಗಿದ್ದರು ಲೆಕ್ಕಿಸದೆ ಸ್ನಾನಮಾಡಿಕೊಂಡೆ ತಮ್ಮ ಡೇರೆಗಳ ಕಡೆಗೆ ನಡೆದಿದ್ದರು. ದೂರದ ಡೇರೆಯವರು ಮನೆ ಮುಂದೆ ಬಂದು ಹಾತೆಪರ ಪಾಣಿಲೇನ (ಕೈಮೇಲೆ ನೀರು) ತಗೊಂಡು, ಎರಡ ಮೂರು ದಿನಗಳಿಂದ ಸೂತಕದ ಮನೆಯಲ್ಲಿ ಒಲೆ ಉರಿಯದ ಕಾರಣ ಪಕ್ಕದ ಡೇರೆಯವರೆಲ್ಲಾ ತಂದುಕೊಟ್ಟಿದ್ದ ರೊಟ್ಟಿ ಚಟ್ನಿಯನ್ನೆ ಒಂದೊಂದು ತುತ್ತು ತಿಂದು ಹೊರಟರು. ಈಗೆ ಎಲ್ಲವೂ ನಿಶ್ಯಬ್ಧವಾಗಿತ್ತು.

ಬಹಳ ಹೊತ್ತಿನವರೆಗೆ ದೇಸು, ಚಿಕ್ಕಮ್ಮ ಮತ್ತು ಅಮ್ಮನ ಪಕ್ಕದಲ್ಲೆ ಕುಳಿತು ಅವರಿಗೆ ಧೈರ್ಯತುಂಬುತ್ತಿದ್ದ. ಸುಖದ ಸುಪತ್ತಿನಲ್ಲಿ ಬೆಳೆದಿದ್ದ ಇಬ್ಬರೂ ಸಹೋದರಿಯರು ಈ ದಿನಗಳು ಬಂದಾವೆಂದು ಕನಸು ಮನಸ್ಸಿನಲ್ಲೂ ಅಂದುಕೊಂಡಿರಲಿಲ್ಲಾ. ಯಾಕೋ ಲಚ್ಮಿಗೆ ಅಪ್ಪ ಚಿಕ್ಕಪ್ಪ ನೆನಪಾದರು,. ಜಂಗಿ-ಭಂಗಿ ನಾಯ್ಕರ ಮುದ್ದಿನ ಮಗಳು ಲಚ್ಮಿ ಅವರ ಮನೆಯ ಲಕ್ಷ್ಮಿಯಾಗಿದ್ದಳು. ಅವಳು ಹುಟ್ಟಿದ ದಿನವೇ ದೆಲ್ಲಿಯಿಂದ ಭಗನ್ಯನಾಯ್ಕನಿಗೆ ಬುಲಾವ್ ಬಂದಿತ್ತು. ದೊಡ್ಡ ವ್ಯಾಪಾರದ ಒಪ್ಪಂದವಾಗಿತ್ತು. ಸಾವಿರಾರು ವರಹಗಳನ್ನು ಮುಂಗಡವಾಗಿ ದೆಹಲಿಯ ಬಾದ್‌ಷಾ ಔರಂಗಜೇಬ್ ಕೊಟ್ಟು ಗೌರವಿಸಿದ್ದ. ಅದನ್ನ ಇಡಿ ಬಂಜಾರ್‌ಗಡನಲ್ಲೇ ಸಂಭ್ರಮದಿಂದ ಆಚರಿಸಿದ್ದ. ಹಾಗೆಯೇ ಆಸೀಫ್‌ಖಾನ್‌ನ ಹಿಂದೆ ಲಕ್ಷ ಎತ್ತುಗಳ ಮೇಲೆ ಸವಾರಿ ಹೊರಟೆ ಬಿಟ್ಟಿತು. ಹೇಗೆ ಬೆಳೆದಳು ಹೇಗೆ ಹುಲಿಯನ್ನ ಹೆಡಮುರಗಿ ಕಟ್ಟಿ ಹೊತ್ತು ತಂದಿದ್ದ ಮೀಟು ಬುಕ್ಯಾ ಕರಮತೋಟನೊಂದಿಗೆ ಮದುವೆಯಾಯಿತು. ವರ್ಷಕ್ಕೆ ಅಷ್ಟೆ ಶಕ್ತಿಶಾಲಿಮಗ ದೇಸು ಹುಟ್ಟಿದ. ನಂತರ ಆಸೀಫ್‌ಖಾನ್ ಹೈದ್ರಬಾದ್‌ಗೆ ಹೋದಾಗ ಅವರ ಕೆಟ್ಟಕಾಲ ಸುರು ಆಗಿ ಅವಳ ಗಂಡ ಬದುಕಿದ್ದಾನೋ ಇಲ್ಲಾ ಸತ್ತಿದ್ದಾನೆಂಬ ಸತ್ಯವು ತಿಳಿಯದಂಗೆ ಗಂಡನ ನೆನಪಲ್ಲೆ ಐವತ್ತರ ಗಡಿಯನ್ನು ದಾಟಿದ್ದಳು. ಈಗ ತಮ್ಮನಂತೆ ಹಿಂದೆ ಮುಂದೆ ಸುತ್ತಾಡಿಕೊಂಡಿದ್ದ ಥಾವುನ ಸಾವು ಬರಸಿಡಿಲಿನಂತೆ ಬಂದೆರಗಿತ್ತು. ಅವನ ಹಿಂದಿಂದೆ ಮಗ ಲಚ್ಮ, ಸೊಸೆ ಗುಜಾ, ಅವಳ ತಲೆ

ಸಿಡಿಯುತ್ತಿರುವ ಅನುಭವವಾಗ ತೊಡಗಿತು. ದೇಸು ಅವಳ ಮನಸ್ಸನ ತಿಳಿಗೊಳಿಸುವ ಪ್ರಯತ್ನ ಮಾಡುತ್ತಿದ್ದ. ಅನಿವಾರ್ಯವಾಗಿ ತಾಯಿಯನ್ನ ನಿದ್ದೆಮಾಡುವಂತೆ ಮಾಡಲು "ಯಾ ದಸ್ಸೇಕ ಸಿಂದಿ ಪೀಲೆನ ಸೋಜೋ ನಿತೊ, ಮಾತೇರ ನಸ್ಸೆಸೆ ಪೂಟ್ ಜಾಯ" (ಅವ್ವ ಒಸಿ ಹೆಂಡ ಕುಡದು ನಿದ್ದೆ ಮಾಡು ಇಲ್ಲಂದ್ರ ತಲೆಯ ನರಗಳೆಲ್ಲವೂ ಸಿಡಿದು ಹೋದಾವು) ಅಂದವನೆ ಮಡಿಕೆಯಲ್ಲಿ ಹೆಂಡವನ್ನ ಸುರಿದು ಇಬ್ಬರಿಗೂ ಒತ್ತಾಯಮಾಡಿ ಕುಡಿಸಿಮಲಗಿಸಿದ.

ಬೆಳಕು ಹರಿದಾಗ ತಲೆಯೊಳಗಿನ ದುಮ್ಮಾನ ಒಂದಿಷ್ಟು ಕಡಿಮೆಯಾಗಿತ್ತು. ಈ ಬದಕುಹಂಗೆ, ಪೂರ್ವಕ್ಕೆ ಹುಟ್ಟಿ ಪಶ್ಚಿಮಕ್ಕೆ ಮುಳುಗುವ ಸೂರ್ಯನ ಹಾಗೆ ಹುಟ್ಟಿ ಎಷ್ಟು ದಿನ ಬದುಕಬೇಕು ಎಂದಿದೆಯೋ ಅಷ್ಟು ದಿನಗಳವರೆಗೆ ಬದುಕಿ ಕಡೆಗೊಮ್ಮೆ ಭೂತಾಯಿಯ ಗರ್ಭಸೇರುವುದು. ಒಬ್ಬಳೆ ಸೂರ್ಯನನ್ನ ದಿಟ್ಟಿಸತೊಡಗಿದಳು. ದೇಸುಗೆ ಪ್ರಶ್ನೆಯೊಂದು ಕಾಡುತ್ತಿತ್ತು. ಶವಸಂಸ್ಕಾರಕ್ಕೆ ಹೋದವರೆಲ್ಲಾ ವಾಪಾಸುಬರುವಾಗ ಬಾರಿಗಿಡದ ಎಲೆಯನ್ನು ಯಾಕ್ಕೆ ಮುಟ್ಟಿ ಹಲ್ಲಿಂದ ಕಚ್ಚಿದರು? ಯಾರಾದರು ಏನಂದಾರೆಂದು ಒಂದು ರಾತ್ರಿ ಕಳೆದ. ಮಾರನೇ ದಿನ ಪಕ್ಕದ ಡೇರಿಯಲ್ಲಿ ಕುಳಿತ್ತಿದ್ದ ಕೇಮ್ಯಾಭಗತ್‌ಗೆ ಕೇಳಿದ. "ಮೊಟಾಪು, ಮಟ್ಟಿನ ಜಾನ್ ಮರ್ದಾನ ಬಾಳದೇನ ಹೊಟೊ ಆಯೇಜನ್ನ ಬೊರೇರೊ ಪಾಲೊ ಖಸೇನಭಿಪೆ "(ದೊಡ್ಡಪ್ಪ ಶವಸಂಸ್ಕಾರ ಮಾಡಿಬಂದಾಗ ಬಾರಿ ಎಲೆಯನ್ನು ಯಾಕೆ ಮುಟ್ಟಿದರೆಂದು) ಕೇಳಿಯೆಬಿಟ್ಟ." ಓ, ಅದಾ, ಬಾ ಕುಂತ್ಕೊ ಹೇಳ್ತೀನಿ." ಅಂತೇಳಿ ಪಕ್ಕದಲ್ಲಿದ ಈಚಲಚಾಪೆಯನ್ನು ಮುಂದೆ ಮಾಡಿದ, "ಮಗ, ನಮ್ಮ ಮಂದಿ ಹಿಂಗೆ ಹೊತ್ತಿಲ್ಲದ ಹೊತ್ನಾಗೆ ಪನಾಡ ಪಕ್ಷಿಯಂಗೆ ಊರಿಂದೂರಿಗೆ ಅಲೆಯುವವರು. ಕಾಡನ್ನದೆ, ಮೇಡನ್ನದೆ ಅಲೆಯುತ್ತ ವ್ಯಾಪಾರಮಾಡಿ ಬದಕೋರು. ಈ ದಟ್ಟಕಾಡಡವಿಯಲ್ಲಿ ಅಲಿಯುವಾಗ ಸಹಜವಾಗಿಯೇ ಜೀವಜಂತುಗಳ ಹೆದರಿಕೆ ಇದ್ದೆ ಇರುತ್ತೆ. ಆದ್ರೆ ನಮ್ಮವರಿಗೆ ಅವುಗಳಿಗಿಂತ ಕಣ್ಣಿಗೆ ಕಾಣದ ಆತ್ಮಗಳಲ್ಲಿ ಬೋ ನಂಬಿಕೆ. ಅದಕ್ಕೆ ಶವ ಸಂಸ್ಕಾರ ಮಾಡಿ ವಾಪಾಸು ಬರುವಾಗ ಬಾರೆ ಎಲೆ ಮುಟ್ಟಿದರೆ ಅವು ಹಿಂದೆ ಬರಲಾಂತ ನಂಬಿದ್ದಾರೆ. ಅದು ಹಾಗೆಯೇ ಮುಂದುವರ್ಕೊಂಡ ಬಂದೈತೆ". ಸವಿಸ್ತಾರವಾಗಿ ಹೇಳಿದ. ಓ ಹಂಗ ವಿಷಯ ಆಯ್ತು ನಾಳೆ ಬೆಳಗಹರದ್ರೆ ದಿನ ಕರ್ಮ ಮಾಡಬೇಕು ಬರ್ತಿನಿ" ಎಂದು ಹೊರಟ. ಇಂತ ಅನೇಕ ಸವಾಲುಗಳಿಗೆ ಅವನ ಹತ್ತಿರ ಉತ್ತರವೇ ಇರಲಿಲ್ಲಾ ಜೀವನದಲ್ಲಿ ಅನುಭವವಾಗುತ್ತ ಎಲ್ಲವೂ ತಿಳಿಯುತ್ತವೆಂದು ತನ್ನಷ್ಟಕ್ಕೆ ಸಮಾಧಾನ ಪಟ್ಟುಕೊಂಡ.

ಗುಜಾ ಸತಿಯ ಮಹಿಮೆ ಎಂಬಂತೆ ನೂರಾರು ಮಂದಿ ದಿನಕರ್ಮಕ್ಕೆ ಸೇರಿದ್ದರು. ತನ್ನ ಮನೆತನದ ಗೌರವಕ್ಕೆ ಕುಂದು ಬರಬಾರದೆಂದು ಮೊದಲನೆಯ ದಿನದಿಂದಲೇ ಒಂದು ಪಲ್ಲ ಗೋದಿ ಬೀಸಲು ಹೇಳಿದ್ದ. ಐದಾರು ಮಣ ಬೆಲ್ಲವನ್ನು ತರಿಸಿದ್ದ. ಹತ್ತು ಮಂದಿ ಯುವಕರು ಚುರ್ಮೊಚೂರಲು (ಗೋದಿರೊಟ್ಟಿ ಸುಟ್ಟ ಬೆಲ್ಲ ಸೇರಿಸಿ ಮಾಡುವ ಉಂಡೆಗಳು) ಡೇರೆಗಳಿಂದ ಅನತಿ ದೂರದಲ್ಲಿ ಒಲೆಗಳನ್ನ ಹೂಡಿ ಮುಂಜಾನೆಯಿಂದಲೆ ತಯಾರಿ ಮಾಡುತ್ತಿದ್ದರು. ಬಂದ ಬೀಗರಿಗೆ ಊಟಕ್ಕೆ ಎಂದು ಸಾಕಿದ ಟಗರನ್ನ ಕಡಿಯಲಾಯಿತು. ಊರಿಗೊಬ್ಬ ನಾಯಕರು ಕವಡಿಕಾಸನ್ನ ಕೊಟ್ಟ ಪಾಲನ್ನು ಬರೆಯಿಸಿದರು. ಇಳಿಹೊತ್ತಾಗುತ್ತಿದ್ದಂಗೆ ಥಾಲಿಯ ಡಪ್ಪು ಬಾರಿಸುತ್ತಾ, "ಚೂರ್ಮೊತಿನ್ನೋದಕ್ಕೆ, ಎಲ್ಲರೂ ಹೊರಡಬೇಕಂತ್ರಪ್ಪೋ" ಸಾರಿದ.

ಮಂದಿ ದಂಡು ಅಣತಿ ದೂರದಲ್ಲಿ ಗೋದಿಯ ಚುರ್ಮೊ ಮಾಡುತ್ತಿದ್ದ ಜಾಗಕ್ಕೆ ಹೊರಟಿತ್ತು. ಅಲ್ಲಲ್ಲೆ ಜಾಗವಾಡಿಕೊಂಡು ಮಂದಿ ಕುಂತಾದ ಮೇಲೆ ರಾಮೇರ್‌ಘರೊರ್‌ಖಬರ್ (ದೇವಲೋಕದ ಸುದ್ಧಿ) ತರಲುಹೋಗಿದ್ದ. ಗುಜಾಸತಿ ಅಣ್ಣ ಧಾಮಣಿ, ಪಕ್ಕದ ಡೇರೆಯ ಒಳೊತೊತ್ಯಾ ದೂರದಿಂದ ಬಂದಿದ ಖಢಾವಣೊಲಾಲ್ಯ (ಕುಂಟಿ)ಲಚ್ಮ ಮತ್ತು ಅವನ ಹೆಂಡತಿ ಮಹಾಸತಿ ಗುಜಾಳನ್ನ ಚಿತೆಗೇರಿಸಿ ಜಾಗದಿಂದ ಬೂದಿಯನ್ನ ತಂದು ನೆಲದ ಮೇಲೆ ಸಾರಿಸಿ ಸಾಪಾಗಿ ಸಮತಟ್ಟುಮಾಡಿ, ಹಾಲು, ನೀರನ್ನ ಇಟ್ಟು ಬಂದು ಒಂದೊಂದು ಜೂರಿ ಹುಕ್ಕಾಸೇದಿ ವಾಪಾಸುಹೋಗಿ ನೋಡ್ತಾರೆ ಯಾವ ಗುರುತುಗಳು ಕಾಣಲಿಲ್ಲಾ ಹಾಲು ನೀರು ಮುಕ್ಕಾಗಿರಲಿಲ್ಲಾ. "ಕತ್ತ ಆಯೇನ ಜಾ, ಭಗವಾನೇರಘರೆನ ಪೂಂಚಗೆ" ಎಲ್ಲಿ ಬಂದಾರು ಭಗವಂತನ ಮನೆ ಸೇರಿಕೊಂಡ್ರು) ಅಂದ ಒಳೊ ತೊತ್ಯಾ, ಇದೇ ಸುದ್ದಿಯನ್ನು ನೆರೆದ ಮಂದಿಯೊಳಗೆ ಪುನರುಚ್ಚರಿಸಿ ತಾವು ಕಂಡದ್ದನ್ನು ವಿವರಿಸಿದರು. "ಹಾಗಾದ್ರೆ, ನಂತಾಯಿ ಗುಜಾಸತ್ತಿಯಾದಳು ಇನ್ನು ಮುಂದೆ ಕರಮತೋಟ್ ಮನೆತನದ ಆದಿದೇವಿಯಾಗಿ ಅವರ ವಂಶನಾ ಬೆಳೆಗ್ತಾಳ ನನ್ನವ್ವ" ಸಭೆಯಲ್ಲಿ ಕುಂತಿದ್ದ ಉದ್ದ ಮೀಸೆಯ ಪಟಗ ಸುತ್ತಿದ ಮುದುಕ ಭವಿಷ್ಯ ನುಡಿದ. ಎಲ್ರೂ "ಬಂತು ಬಿಡಿ," ಅಂದದ್ದಾಮೇಲೆ ಪಕ್ಕದ ಡೇರೆಯ ಬದಿಯಾನಾಯಕ ಮೇಲೆದ್ದು ಕೋಯಿತೊಯಿಸೀಕ್‌ದೋನಿ ಪಚ "(ಯಾರಾದರು ದುಃಖಸ್ಥರಿಗೆ ಸಾಂತ್ವಾನದ ನಾಕು ಹೇಳಿಕೆ ಮಾತುಗಳನ ಹೇಳಿ ಮತ್ತೆ) ಅಂದವನೆ ಎಲ್ಲಾ ದಿಕ್ಕಿಗೂ ಕತ್ತ ಹೊರಳಿಸಿ ನೋಡಿದ. "ನೀನೆ ಹೇಳಿಬಿಡು ಬದ್ಯಾನಾಯಕ, ನೀ ಹೇಗಾದರೂ ಹಟ್ಟಿನಾಯಕ" ಅಂದ್ರು ಸಭೀಕರು, "ಎಯ್, ಹಾಂಗೆಲ್ಲಾ ಅಲ್ರಪ್ಪ, ಜಗ ಜಗದಿಂದ ಪಂಡಿತಮಂದಿ, ಶಾಣ್ಯಮಂದಿ ಬಂದಾರ ಅವರ ರೀತಿ ರಿವಾಜನ್ನ ನಾವು ತಿಳಿಯೋಣ. ಅಂದಂಗೆ ನಮ್ಮ ಮೀಸಿ ಸೋಮ್ಲಜ ಹೇಳ್ತಾನ. ಅನುಭವಸ್ಥ ನಾಕ ಕಡೀಗ ಅಡ್ಡಾಡದವನು ನಮ್ಮ ಬಂಜಾರ ಸಮಾಜದಾಗ ದೊಡ್ಡ ಹೆಸರು ಆತಂದು" ಅಂದವನೆ ಜವಾಬ್ದಾರಿಯನ್ನ ಆತನಮೇಲೆ ಹಾಕಿ ಕುಂತಬಿಟ್ಟ ಬದ್ಯಾನಾಯಕ. ಮುದಕ ತಯಾರಿ ಇದ್ನಂತ ಕಾಣುತ್ತೆ, "ಹೂಂ, ಕೇಳ್ರಪ್ಪ, ಇಲ್ಲಿ ಸುತ್ತೆಲ್ಲಾ ಪ್ರದೇಶಗಳಿಂದ ಬಂದಿರೋ ಬಂಜಾರ ಸಮಾಜದವರಿದ್ದಿರಿ. ಇವತ್ತು ದುಃಖದಲ್ಲಿರೋ ನಮ್ಮ ದೇಸು ಬುಕ್ಯಾ ಕರಮ್‌ತೋಟ್ ನಮಗೇನು ಬ್ಯಾರೆ ಅಲ್ಲ. ಕುಲಸ್ಥನೆ, ಆದ್ರೂ ಆತನ ಮನಿಯೊಳಗ ಸಾವಾಗ್ಯತಿ ಇಡಿ ಕುಟುಂಬ ದುಃಖದಾಗ ಅದಾರ. ದೇಸು, ತೋತ್ಯಾ, ಮಹತಾಯಿ ಗುಜಾ ಸತ್ತಿಯ ತಂದಿ ಪೀರುನಾಯಕ್ ತಮ್ಮ ಧಾಮಣಿ, ಕೇಳ್ರಪ್ಪ, ಇವತ್ತು ಯಾರು ಭೂಮಿಮ್ಯಾಲ ಶಾಶ್ವತ ಅಲ್ಲ. ಅವರ ರಿಣ ಹರಿತು ಮುಂದೆ ಹೋಗ್ಯಾರ. ನಾವು ಒಸಿ ನಿಧಾನಕ ಹೋಕ್ತೀವಿ ಅಷ್ಟೆಯಾ ಅವರು ಭೂಮಿ ಋಣ ತೀರಿಸಿಕೊಂಡು ಭಗವಂತನ ಪಾದ ಸೇರ್‍ಕೊಂಡಾರ. ಈ ಭೂಮಿ ವ್ಯಾಲಿನ ಅವರ ಋಣಾನುಬಂಧ ಇಷ್ಟೆ ಇತ್ತು. ತಮ್ಮ ದೇಸು ನಿನ್ನ ಚಿಕ್ಕವ್ವ ಗಂಡನ್ನ ಮಗ ಸೊಸಿಯನ್ನ ಕಳ್ಕೊಂಡಾಳ ಏನಪ, ಈಗ ಒಬ್ಬ ತಮ್ಮ ತೊತ್ಯಾ ಉಳ್ಕೊಂಡಾನ ಒಬ್ಬ ತಂಗಿ ಉಳದಾಳ ಹಿಂದ ನಿನ್ನ ಚಿಗಪ್ಪ ಇದ್ದ ಹೆಂಗೋ ನಡಕೊಂಡು ಹೊಂಟಿತ್ತು. ಈಗ ನಿನ್ನ ಹೆಗಲಮ್ಯಾಲ ಜವಾಬ್ದಾರಿ ಬಿದ್ಯೆತೆ, ಲಚ್ಮನ ತಾಯಿ ಈಗ ನಿನ್ನ ತಾಯಿನ, ಅವರನ್ನೆಲ್ಲಾ ಬೋ ಕಾಳಜಿಯಿಂದ ನೀ ನೋಡಬೇಕು. ಬೀಗರು ಮಗಳನ್ನು ಕಳ್ಕೊಂಡಾರ, ಅವರ ಸಂಬಂಧ ಕಡ್ಕೊಬಾರದು. ಇವಿಷ್ಟು ಸೇರಿದ ಸಭೀಕರ ಪರವಾಗಿ ಹೇಳಿನಿ ಅದರಂಗ ನಡೀತಿಯ ಅಂತ ಅಂದ್ಕೊಂಡು ಮಾತ

ಮುಗಿಸ್ತಿನಿ" ಅಂದವನೆ ಕುಂತ. "ಹೂಂ, ಎಲ್ಲರಿಗೂ ಚುರ್ಮೊ ಹಂಚ್ರಪ್ಪ" ಹಿರಿಯನಾದ ಶಕ್ರ್ಯನಾಯ್ಕ ಅಪ್ಪಣೆಕೊಟ್ಟ. ಅದನ್ನ ಕಾಯುತ್ತಿದ್ದ ಹರೆಯದ ಹುಡುಗರ ಗುಂಪು ಸುತ್ತಾಡಿ ಹಂಚಿದರು. ಎಲ್ಲರೂ ತಿಂದಾದ ಮೇಲೆ ಅಲ್ಲೆ ಹರಿಯುತ್ತಿದ್ದ ತೊರೆಯೊಳಗ ಕೈಕೊಳ್ಕೊಂಡು, ಸಂಜಿಮುಂದೆ ಲೋಜಿಮಾಡೋದಕ್ಕೆ ಸಜ್ಜಾದರು (ಮಡಿಕೆ ಹೆಂಡ ಮತ್ತು ಹುರಿದ ಮಾಂಸದ ತುಂಡನ್ನ ಸತ್ತವರ ಮನೆಯವರಿಗೆ ಕೊಡುವುದು) ದೇಸು, ತೊತ್ಯಾ ಅಂಗಳದಲ್ಲಿ ಕುಳಿತರು. ಒಂದು ತುಂಡು ಹುರಿದ ಕಲೇಜ ಮತ್ತು ಕಾನಾಬಾಜ್ (ಕಿವಿಕೊಯ್ದು ಹುರಿದಮಾಂಸ) ಅವರ ಕೈಗೆ ಕೊಟ್ಟು ಕುಡಿಕೆ ಹೆಂಡವನ್ನ ನೀಡಿ ಸಾಂತ್ವನ ಹೇಳಿ ಊಟಕ್ಕೆ ಹೊರಟಿದ್ದರು. ದೂದಿಂದ ಬಂದ ನಾಯಕರುಗಳಿಗೆ ಕುಂದ್ರಿಸಿ ಬಂದು ಹಡಕ (ನಲ್ಲಿ)ಯನ್ನ ಕೊಟ್ಟು ಅವರಿಗೆ ಮರ್ಯಾದೆ ಮಾಡಲಾಯಿತು. ಮಂದಿ ಮಾಂಸದಡಿಗೆಯ ಊಟ ಮಾಡಿ ರಾತ್ರಿ ಉಳಿಬಾರದು ಅಂತೇಳಿ ಮಕ್ಕರಗೌಳದಲ್ಲೆ ಕುದುರೆ ಏರಿ ಕೆಲವರು, ಕಾಲ್ನಡಿಗೆಯಲಿ, ಎತ್ತಿನ ಬಂಡಿಯಮೇಲೆ ಹೊರಟಿದ್ದರು. ಅದೇ ಡೇರೆಯವರು ಒಟ್ಟು ಸೇರಿ ಅವರ ಕುಲದ ಭಜನೆಯಾದ ವಾಜ ಹಾಕಲು ಕಂಚಿನತಟ್ಟೆಗಳನ್ನು ನಗಾರಿ, ಜಾಂಜೆ ತಂದು ಸತ್ತವರ ಡೇರೆಮುಂದೆ ಜಾಗರಣಿ ಮಾಡಲು ಮುಂದಾದರು. ಡೇರೆಯ ಒಂದು ಮೂಲೆಯಲ್ಲಿ ಲಚ್ಮನಿಗೆ ಇಷ್ಟವಾದ ಅಡಿಗೆಯನ್ನ ಮಾಡಿ ನೀರಿನ ಚರಿಗೆಯೊಂದಿಗೆ ಕಲ್ಲುಮಟ್ಟಿಯಕೆಳಗೆ ಇಡಲಾಗಿತ್ತು. ಹಾಗೆನೆ ಅದರ ಪಕ್ಕ ಗುಜಾಳ ಇಷ್ಟದ ಪದಾರ್ಥವನ್ನು ಕೂಡ ಮಾಡಿ ಮುಚ್ಚಿಟ್ಟು ಬಂದು ಮುಕ್ಕು ಮಾಡಿದ್ದರೆ ಪ್ರೇತಗಳಾಗುತ್ತವೆಂತಲೂ, ಮುಕ್ಕುಮಾಡದಿದ್ದರೆ ದೇವರು ಅವರನ್ನ ಕರೆದು ಕೊಂಡಿದ್ದಾನೆಂದು ಬಂಜಾರರ ನಂಬಿಕೆ ಎನ್ನುವುದನ್ನು ಲಚ್ಮಿ ಮಗ ದೇಸುಗೆ ಹೇಳಿದ್ದಳು.

"ಹಾಂಕೆ ಮಾರುಚು ಯಾಡಿ ಗುಜಾ ತೋನ ಅಜೋ ಅಜೋ ನಿಯ

ಬೇಟೇರ ಹರದೇಮ ಸೂತೇರರ ಸಪನೇಮ ದೇಣು ಗುಜ ಹಾಡಾಗಿದ್ದಳು,

(ಕೂಗಿ ಕರೆಯುವೆ ತಾಯಿ ಗುಜಾ ನಿನ್ನ ಬಾರಮ್ಮ ಬಾ ಕುಂತವನ ನೆನಪಲ್ಲಿ ಮಲಗಿದವನ ಕನಸಲ್ಲಿ ಬರಬೇಕು)

ಸುತ್ತ ಮುತ್ತ ಜನರ ಆರಾಧ್ಯ ದೈವಳಾಗಿದ್ದಳು, ಎಲೆ ಅಡಿಕೆ, ತಂಬಾಕು, ನಡು ನಡುವೆ ಹುಕ್ಕಾ ನೀರು ನಡದೆ ಇತ್ತು. ಮಂದಿಮಾತ್ರ ಹೆಂಡಕುಡಿಯುತ್ತಲೆ ನಿದ್ದೆಗಣ್ಣಲ್ಲೂ ಹಾಡು ಹೇಳುತ್ತಾ ಜಾಗರಣೆ ಮಾಡಿದ್ದರು

ಮುಂಜಾನೆ ಅವರ ಮಾಮೂಲಿ ಕೊಟ್ಟು ಕಳುಹಿಸಿದ ದೇಸು. ಯಾವಾಗಲು ಹೇಗಲಿಗೆ ಹೆಗಲು ಕೊಟ್ಟು ತನ್ನ ಎಷ್ಟೋ ಸಮಸ್ಯೆಗಳಿಗೆ ಪರಿಹಾರವಗಿದ್ದ ಲಚ್ಮನ ಕಳೆದುಕೊಂಡು ಒಂಟಿತನ ಅನುಭವಿಸತೊಡಗಿದ್ದ ದೇಸು. ತೊತ್ಯಾ ಇನ್ನೂ ಚಿಕ್ಕವನು, ಆದರೆ ದೇಸುನ ಮನಸ್ಸು ಹಗುರ ಗೊಳಿಸುವುದು ಅನಿವಾರ್ಯವಾಗಿತ್ತು "ಅಣ್ಣಾ, ನಾನು ಚಿಕ್ಕವನು ಆದರೂ ನಿನ್ನ ಎದಿಯೊಳಗಿನ ಸಂಕಟವನ್ನು ಅರ್ಥೈಸಿಕೊಳ್ಳಬಲ್ಲೆ ಈಗ ನಮ್ಮೆಲ್ಲರಿಗೆ ದಿಕ್ಕು ನೀನೆ. ನಮಗಷ್ಟೇ ಅಲ್ಲ ನಮ್ಮ ವಂಶ ಬೆಳೆಯಬೇಕಾದರೆ ನೀನು ಹಿಂದಿನದೆಲ್ಲವನ್ನು ಮರೆತು ಗೆಲುವಾಗಿರಬೇಕು. ನಾನು ನಿನ್ನ ಜೊತೆಗೆ ಸದಾ ಇರ್ತೆನೆ" ಭರವಸೆಯ ಮಾತುಗಳನ್ನು ಆಡಿದ್ದ.

ಚಿಕ್ಕವಯಸ್ಸಿನಲ್ಲೆ ಸಂಸಾರದ ಜವಾಬ್ದಾರಿಯನ್ನ ಹೊತ್ತು ಸುತ್ತಲು ಬರಿ ಶತ್ರುಗಳೇ ತುಂಬಿರುವಾಗ ನಿಬಾಯಿಸುವುದು ಕಷ್ಟ. ಆದರೆ ಶತ್ರುಗಳನ್ನು ದೇಸು ಮಾತಲ್ಲೇ ಹೊಡೆದುರುಳಿಸಿಬಿಡ್ತಿದ್ದಾ. ಈ ಎಲ್ಲಾ ಸಂಕಷ್ಟಗಳ ನಡುವೆ ಗುಜಾಸತ್ತಿ ಅವನಿಗೆ ವರನೀಡಿದ್ದಳು. ಸೋಮ್ಲಿಗೆ ಮೂರುತಿಂಗಳ ಬಯಕೆ ಆರಂಭವಾಗಿದ್ದವು. ಸುದ್ದಿಮದಲು ಲಚ್ಮೆಗೆ ತಿಳಿದದ್ದೆ "ನಂತಾಯಿ ಗುಜಾಸತ್ತಿ ಈಗಲಾದರು ಕಣ್ಣು ತೆಗೆದೆಯಲ್ಲವ್ವ, ನಮ್ಮ ವಂಶದ ಕುಡಿಯನ್ನ ನನ್ನ ಸೊಸೆಯ ಮುಡಿಯೊಳಗ ಹಾಕದೆ, ನೀನು ಮಹಾನ್ ಕರುಣಾಳು ತಾಯಿ". ಖುಷಿಗೆ ಅವಳು ತನಗಿರುವ ಎಲ್ಲಾ ದುಃಖವನ್ನು ಮರೆತಿದ್ದಳು. ಅವಳೊಂದಿಗೆ ಹಾಸಿಗೆ ಹಿಡಿದಿದ್ದ ಅವಳ ತಂಗಿ ಎದ್ದು ಸಂಭ್ರಮಿಸತೊಡಗಿದಳು. ಬಹಳ ವರ್ಷಗಳಿಂದ ದೇಸುಗೆ ಮಕ್ಕಳಾಗಿರದ ಕಾರಣ ಬಹಳ ಚಿಂತಿತರಾಗಿದ್ದರು. ರೂಪ್ಲಿಯ ಕೊರಗು ದೂರವಾಗಿತ್ತು. ಮಗಳು ಬಂಜೆಯಾದಲ್ಲಲ್ಲ ಎಂದು ಕೊರಗಿತ್ತು. ಇನ್ನೂ ಆರುತಿಂಗಳು ಸೋಮ್ಲಿ ಒಡಲೊಳಗೆ ಬೆಳೆಯುತ್ತಿರುವ ಮಗುವಿನ ಬೆಳವಣಿಗೆಯ ವರ್ಣನೆಯನ್ನ ಮಾಡುತ್ತಲೆ ಕಾಲಕಳೆಯಬೇಕಿತ್ತು. "ನೀ ಏನೇ ಹೇಳು ರೂಪ್ಲಿ ನನ್ನ ಸೊಸೆ ಮುಖಲಕ್ಷಣ ನೋಡಿದ್ರೆ ಗಂಡುಮಗು ಆಗುತ್ತೆ. ನಮ್ಮ ಕರಮತೊಟ್ ವಂಶ ಉದ್ಧಾರಕನೆ ಬರ್ತಾನೆ, ಅವನು ಥೇಟ್ ಅವರ ಅಜ್ಜನ ಥರಾನೆ ಶೂರ, ವೀರ ಆಗಿರ್ತಾನೆ." ಮೊದಲ ಭಾರಿ ಗಂಡನನ್ನ ಎಲ್ಲರ ಎದುರು ಹೊಗಳಿದ್ದಳು ಲಚ್ಮಿ. "ಅತ್ತಿಗೆ ಒಂದೇ ಸಾಕೆ, ಮದಲು ನಿನ್ನಂತ ಸುರಸುಂದರಳಾದ ಲಕ್ಷ್ಮಿದೇವಿ ಬರಲಿ ಆಮೇಲೆ ನೂರ ಗಂಡ ಆಗಲಿ ಅನ್ನೋದೆ ನನ್ನ ಬಯಕೆ", ಅವಳ ಇಂಗಿತವನ್ನ ವ್ಯಕ್ತಪಡಿಸಿದಳು. ಅವಳ ತಂಗಿ ನಡುವೆ ಬಾಯಿ ಹಾಕಿ, "ಇಲ್ಲ ಮದ್ಲು ವಂಶ ಬೆಳಗುವ ಭೂಪ ಬರ್ಲಿ ಸುಮ್ಮನಿರಿ ಅಕ್ಕ" ಅಂದ್ಲು ಇವರೆಲ್ಲರ ಜಗಳನವನ್ನ ಹೊರಗಡೆಯಿಂದ ಬರುತ್ತ ಆಲಿಸಿದ ದೇಸು," ಯಾರಿಗೆ ವಂಶೋದ್ಧಾರಕ, ಏನು ಇವತ್ತು ಅಮ್ಮ, ಅತ್ತೆ, ಚಿಕ್ಕಮ್ಮ ಇಷ್ಟೊಂದು ಸಂತೋಷದಿಂದ್ದಿರಾ, ಏನಾದರೂ ಚಮತ್ಕಾರ ನಡೆಯಿತೆ", ಅವರ ಮುಖನೋಡಿದ. ಲಚ್ಮಿ ಅವನ ಕಿವಿಹಿಂಡಿ "ಮಾಡಬಾರದ್ದನ ಮಾಡಿ ಏನೂ ಅರಿಯದವನಂಗೆ ನಾಟಕ ಆಡ್ತೀಯಾ" ರೇಗಿಸಿದಳು ದೇಸುಗೆ ತಾಯಿಯ ಒಗಟಿನಂತ ಮಾತು ಅರ್ಥವಾಗದೆ ಚಿಕ್ಕಮ್ಮನ ಹತ್ತಿರ ಓಡಿ ಅವಳ ಮಡಿಲೊಳಗೆ ಸಣ್ಣಮಗುವಿನಂತೆ ಮಲಗಿ, "ನೋಡು ಚಿಕ್ಕಮ್ಮ ಅಮ್ಮ ಒಗಟಿನಂಗೆ ಏನೋ ಒಂದು ಮಾತು ಹೇಳಿ ನನ್ನ ರೇಗಿಸ್ತಾಳೆ" ಅವಳು ಹೇಳಿಬಿಡ್ತಾಳಂತ ಅವನ ಅನಿಸಿಕೆ. ಲಚ್ಮಿ ಸನ್ನೆ ಮಾಡಿ ಹೇಳದಂತೆ ಅವಳ ಬಾಯಿ ಮುಚ್ಚಿದಳು. "ಏನೋ ಮಗ, ನಿಂದು," ಬಾಯಿಗೆ ಬಂದ ಮಾತನ್ನ ನುಂಗಿಕೊಂಡಳು. "ಅತ್ತೆ ನೀವಾದರು ಹೇಳಬಾರದೆ?" ದೈನ್ಯದಿಂದ ಅವರ ಕಡೆಗೆ ನೋಡಿದ. "ಅತ್ತಿಗೆ, ಹುಡುಗಾಟಸಾಕು. ಹುಡುಗನಿಗೆ ಕುತೂಹಲ ಜಾಸ್ತಿ ಆಗಿದೆ ಹೇಳಿಬಿಡಿ"., ಅವಳ ಕಡೆಗೆ ಚೆಂಡನ್ನ ಎಸೆದಳು. "ಅದೇನೆ ವಿಷಯವಿದ್ದರೂ ನೀವು ಮೂರ ಜನ ನಾನು ಹುಟ್ಟಿ ಇಷ್ಟು ದೊಡ್ಡವನಾಗಿರುವವರೆಗೆ ಹೀಗೆ ಸಂತೋಷದಿಂದ ಇದ್ದಿದ್ದನ್ನ ಕಂಡಿರಲಿಲ್ಲ. ಇವತ್ತು ಬಹಳ ಖುಷಿಯಾಯ್ತು. ನಂತಾಯಿ ಗುಜಾಸತ್ತಿ, ಈ ಕುಟುಂಬನಾ ಹೀಗೆ ಇರೋ ಹಾಗೆ ಮಾಡವ್ವ" ಕಣ್ಣುಗಳು ತುಂಬಿ ಬಂದಿದ್ದವು. "ಅರೇ ಮೇರೆಲಾಡ್ ಇದು ಅಳೂ ಸಂದರ್ಭ ಅಲ್ಲ ನೀನು ಅಪ್ಪ ಆಗ್ತಿದ್ದಿಯಾ". ಅವನನ್ನ ಬಿಗಿಯಾಗಿ ಅಪಿಕೊಂಡಳು ಲಚ್ಮಿ. ಒಂದು ಕ್ಷಣ, ಅವಕ್ಕಾದ "ಹಾಂ, ಅಯ್ಯೋ ದೇವರೆ" ಸಂತೋಷದಲ್ಲಿ ತಾಯಿಯನ್ನೆ ಮೇಲೆತ್ತಿ "ಅಮ್ಮ ಚಿಕ್ಕಮ್ಮ ಅತ್ತೆ, ಸೋಮ್ಲಿ ಎಲ್ಲಿ" ಹುಡುಕಾಡಿದ, "ಎಯ್, ಹುಷಾರು," ಲಚ್ಮಿ ಕೂಗಿದಳು.

ತಿಂಗಳುಗಳು ಉರುಳಿದ್ದೆ ಗೊತ್ತಾಗಲಿಲ್ಲ. ಒಂಬತ್ತು ತಿಂಗಳು ಮುಗಿದದ್ದೆ ನೋವು ಆರಂಭವಾಗಿತ್ತು. ದೇಸು ಗುಜಾಸತ್ತಿಗೆ ಇಡಗಾಯಿ ಹೊಡೆಸಿದ. ತನ್ನ ಮನೆ ದೇವರುಗಳಿಗೆಲ್ಲಾ ಹರಕೆ ಹೊತ್ಕೊಂಡ. ಗಂಡಸರೆಲ್ಲಾ ಡೇರೆ ಮುಂದೆ ಜಮಾಯಿಸಿದ್ದರು. ಆದರೆ ದೇಸು ಭುಕ್ಯಾಕರಮತೋಟ್‌ಗೆ ಮಾತ್ರ ಕುಂತಲ್ಲಿ ಕೂಡದ ನಿಂತಲ್ಲಿ ನಿಲ್ಲಲಾಗದ ತಾಕಲಾಟ. ಅನೇಕ ಸಂದರ್ಭಗಳಲ್ಲಿ ಮಗುವಿಗೆ ಜನ್ಮಕೊಡುತ್ತಲೆ ತಾಯಿ ಕೂಡ ತೀರಿಕೊಳ್ಳುವ ಸಾಧ್ಯಗಳು ಹೆಚ್ಚಿದ್ದವು. ಅದಕ್ಕಂತ್ನಲೆ ಡೇರೆಯ ಎಲ್ಲಾ ನುರಿತ ಸೂಲಗಿತ್ತಿಯರನ್ನ ಕರೆಯಿಸಿದ್ದ. "ಏಯ್, ಬಿಡು ಮಗ ಯಾಕಿಷ್ಟು ಬೇಚನಾಗಿದ್ದೀಯಾ, ನಿನ್ನ ಹೆಂಡ್ರು ಒಳ್ಳೆ ದಪ್ಪ ಪುಷ್ಟ ಕುಲಪುತ್ರನಿಗೆ ಜನ್ಮಕೊಡ್ತಾಳೆ. ಯಾಕೆ ಗಾಬರಿಯಾಗಿಯ" ಹಿರಿಯನಾದ ಸೋಮ್ಲ ಡೊಕರ (ಮುದುಕ) ದೇಸುಬುಕ್ಯಾನನ್ನ ಸಮಾಧಾನಪಡಿಸಲು ನೋಡಿದ. ಆದರೆ ಅವನ ಚಡಪಡಿಕೆ ಹೆಚ್ಚಾಯಿತೇ ವಿನಃ ಕಡಿಮೆಯಾಗಲಿಲ್ಲ. ಒಳಗಡೆ ಸೋಮ್ಲಿ ಕಿರುಚುತ್ತಿದ್ದಳು. 'ಯಾ ಮರಗೀಯೆ' (ಅವ್ವ ಸತ್ನೆ) ಅವಳ ತಾಯಿ ರೂಪ್ಲಿ "ಎಯ್, ಹುಚ್ಚಮ್ಮ ಹಂಗೆಲ್ಲಾ ಹೇಳಬಾರದು, ನೋವು ನುಂಗಿ ಒಂದು ಸಲ ಜೋರಾಗಿ ಉಸಿರಾಡು" ಸಮಾಧಾನಪಡಿಸಲು ನೋಡುತ್ತಿದ್ದಳು. ಪ್ರತಿಯೊಬ್ಬರ ಮುಖದಲ್ಲೂ ಆತಂಕ ಮನೆಮಾಡಿತ್ತು. ತೊತ್ಯಾನಾಯ್ಕ, ಗೋಮಿ ಅಣ್ಣನ ಹಿಂದಿಂದೆ ಅವನನ್ನ ಸಮಾಧಾನಪಡಿಸಲು ಹವಣಿಸುತ್ತಿದ್ದರು." ಅಣ್ಣ, ಒಳಗಡೆ ದೊಡ್ಡಮ್ಮ, ಅಜ್ಜಿ, ಅತ್ತೆ ಎಲ್ಲಾ ಅದಾರ. ಯಾಕಿಷ್ಟು ಗಾಬರಿಯಾಗಿಯ? ಸುಮ್ನಿರು ಅತ್ತಿಗೆಗೆ ಏನೂ ಆಗೋದಿಲ್ಲ" ತೊತ್ಯಾನ ಮಾತು ಬಾಯೊಳಗ ಇದ್ದಂಗೆ ಮಗು ಅತ್ತ ಶಬ್ದ ಹೊರಗ ಬಂದಿತ್ತು. ಒಳಗಡೆಯಿಂದ ಅವನ ಅತ್ತೆ "ಚೋರಾ" (ಗಂಡು) ಅಂದಿದ್ದೆ ತಡ ಕಂಚಿನ ತಟ್ಟೆಗಳನ್ನು ಬಡಿಯುತ್ತ ತೊತ್ಯಾ, ಕಾಣು, ಹನಮಿ, ಚೋಕ್ಲ, ಬಾಣು ಡೇರೆಯ ಸುತ್ತ ಸುತ್ತಾಡಿ ಜಗಜಾಹಿರಾತು ಮಾಡತೊಡಗಿದರು. ದೇಸು ಸಮಾಧಾನದಿಂದ ಒಂದು ಮೂಲೆಯೊಳಗೆ ಕುಂತಿದ್ದ. ಅಲ್ಲಿಗೆ ಬಂದ ಯಜಮಾನರ ದಂಡು "ಹೂಂ, ಮಾಡೋದ ಮಾಡಿ ಹೆಂಗ ತಣ್ಣಗ ಕುಂತಾನ ನೋಡ್ರಪ್ಪ" ಒಬ್ಬ ಕೀಟಲೆ ಮಾಡಿದ. "ಲೇ ತಮ್ಮ ತಂದಿಯಾದ ಖುಷಿಗ ಹೋಗು ಹೆಂಡ ತರಸು" ಅಂದಿದ್ದ. "ಅಷ್ಟೆಸಾಕ" ಕೇಳಿದ ದೇಸು. ಮಂದಿ ಗಾಬಾದರು. ಸಿಹಿ ಹಂಚುತ್ತಿದ್ದ ತೊತ್ಯನ ಕರದ. "ಹೋಗಿ ಒಂದು ಕೇಸು ಹೆಂಡತಗಂಡ ಬಾ" ಈಗ ಪಾಡಾಗೆ ಕುಡಿರಿ. ಸಂಜಿಗ ಆ ಕುರುಬ ಕೆಂಚಗ ಹೇಳಿ ಒಂದ ಒಳ್ಳೆ ಬೀಜದ ಟಗರನ್ನ ತಂದು ಕೊಯ್ದು ಸಾರು ಒಂದಕಡೀಗ ಸಳ್ಳೋಯಿ ಒಂದ ಕಡೀಗ ಮಾಡ್ಸು" ಅಂದ. ಹುಡುಗರು ಕ್ಷಣಾರ್ಧದಲ್ಲಿ ಹಿರಿಯರಿಗೆ ಹೆಂಡತಂದ್ರು ಕೆಂಚನ ಕುರಿಮಂದೆಗೆ ಹೋಗಿ ಟಗರನ್ನ ತಂದು ಕೋಯ್ದು ಸಾರು ಮತ್ತು ಸಳೋಯಿಗೆ ತಯಾರಿ ಮಾಡಿದ್ರು. ಇಡೀ ಡೇರೆ ತುಂಬ ಹಬ್ಬದ ವಾತಾವರಣ ಏರ್ಪಟ್ಟಿತ್ತು. ಹೆಣ್ಣು ಗಂಡು ಕುಡಿದು ತಿಂದು ದೇಸು ಬುಕ್ಯಾನ ಉದಾರತೆಯ ಬಗ್ಗೆ ಮಾತನಾಡಿಕೊಂಡು ಹೊರಟರು.

ಮಗ ಹುಟ್ಟಿದ ಖುಷಿಯಲ್ಲಿ ದೇಸು ವ್ಯಾಪಾರವನ್ನು ಮತ್ತಷ್ಟು ಚುರುಕು ಗೊಳಸಿದ್ದ. ಗುಜಾಸತ್ತಿಗೆ ಒಳಂಗ (ಪ್ರಾರ್ಥನೆ) ಮಾಡಿಸಿದ. ಕಾಯಿ ಹೊಡೆದು, ಗಂದದ ಕಡ್ಡಿ ಬೆಳಗಿ, ಹರಕೆಯನ್ನ ತೀರಿಸಲಾಯಿತು. ದೇಸು ಏನೇ ಮಾಡುವುದಿದ್ದರೂ ಗುಜಾಸತ್ತಿಯ ಹೆಸರನ್ನ ಹೇಳಿ ಮಾಡುತ್ತಿದ್ದ. ರೂಪ್ಲಿ, ಲಚ್ಮಿ, ಅವಳ ಮಕ್ಕಳಾದ ತೊತ್ಯ, ಗೋಮಿ ಅಪರಿಮಿತ ಸಂತಸದಲ್ಲಿದ್ದರು.

ಈಗ ದೇಸು ಒಬ್ಬನೆ ಆ ಕುಟುಂಬವನ್ನು ಸಾಕುವ ಅರ್ಹತೆಯುಳ್ಳ ಯಜಮಾನನಾಗಿದ್ದ. ಹದಿನೆಂಟನೆ ವಯಸ್ಸಿಗೆ ಇಡಿ ವ್ಯಾಪಾರ, ಮನೆ, ಸಂಸಾರದ ಜವಾಬ್ದಾರಿ ಅವನ ಹೆಗಲಮೇಲೆ ಬಿದ್ದಿತ್ತು. ಚಿಕ್ಕಪ್ಪ ಥಾವು ಮತ್ತ ಅವನ ಮಗ ಲಚ್ಮ ಸತ್ತನಂತರ ಏಕಾಂಗಿಯಾಗಿದ್ದ. ಅವನಲ್ಲಿ ಆ ಎದೆಗಾರಿಕೆ ಇದ್ದಿದ್ದರಿಂದ ಅವನು ಸೋಲನ್ನು ಒಪ್ಪಿಕೊಳ್ಳಲು ತಯಾರಿರಲಿಲ್ಲ. ಲಚ್ಮಿ ಅಜ್ಜಿ ಯಾದ ಖುಷಿಯಲ್ಲಿ ಮೊಮ್ಮಗನ ಹೆಸರನ್ನ ಸೋಮವಾರ ಹುಟ್ಟಿದಕ್ಕೆ ಸೋಮ್ಲುಬುಕ್ಯಾ ಕರಮ್‌ತೋಟ್ ಎಂದೆ ಕರೆಯಲು ಆರಂಭಿಸಿದಳು. ಅದನ್ನೇ ನಾಮಕರಣದ ದಿನ ಇಡಲು ಲಚ್ಮಿ ಹೇಳಿದಳು. ಹೋಳಿ ಆಚರಣೆ ಸಮೀಪದಲ್ಲೇ ಇದಿದ್ದರಿಂದ ಧೂಂಡ್ (ಹುಡುಕಾಟ) ಮಾಡಿಸಲು ದೇಸು ಮುಂದಾಗಿದ್ದ. "ಎ, ಅದೇಟಾರು ಆಗ್ಲಿ ಯೋಚ್ನೆ ಮಾಡಬ್ಯಾಡಿ ನೀವು ದೂಂಡ್‌ಗೆ ತಯಾರಾಗ್ರಿ" ದೇಸು ಹೇಳಿದ ಯುವಕರ ಗುಂಪು ಅದಕ್ಕಂತೇಳಿಯೇ ಹೋಳಿ ಹಬ್ಬದಲ್ಲಿ ಮಾತ್ರ ಅವರು ಹಾಕುವ ಕೋಲಾಟವಾದ ಲೆಂಗಿಯನ್ನು ತಿಂಗಳಿಂದಲೆ ಆರಂಭಮಾಡಿದರು. ಹೆಂಗಸರು ಯುವತಿಯರು ಆಗಾಗ ಕುಣಿಯಲು ಸೇರುತ್ತಿದ್ದರು, ಇದರಿಂದ ಗಂಡಸರ ಲೇಂಗಿಯ ಕುಣಿತಕ್ಕೆ ಮತ್ತೊಂದಿಷ್ಟು ಹುರುಪು ಬರುತ್ತಿತ್ತು. ಯುವಕರಿಗೆ ಬೇಕಂತ್ಲೆ ಅತ್ತಿಗೆಯಾಗುವಳು ಕಾಡಿಸುವುದು ವಾಡಿಕೆಯಾಗಿತ್ತು. ಪೀತ್ಲುನಾಯ್ಕನ ಹೆಂಡತಿ ಸೋನ್ಕಿ ಅವಳಿಗೆ ಮೈದುನನಾಗುತ್ತಿದ್ದ ಬದ್ಯಾ ನಾಯ್ಕನನ್ನ ಕಣ್ಣಲ್ಲೇ ಕೊಲ್ಲುವಂತೆ ನೋಡ್ತಿದ್ಲು. ಕುಣಿಯೋರು ಒಂದುಕಡೆಯಾದರೆ ಅಕಿ ನಿಗಾನೆ ಒಂದಕಡೀಗ. "ಯಾಕ್ಲೆ ಸೋನ್ಕಿ, ಹಿಂಗ್ಯಾಕ" ಅಂತೇಳಿ ಹಿರಿಯಳಾದ ಸಾವಿಬಾಯಿ ಕೇಳಿದಳು. ಅನುಮಾನ ಬಂದೀತು ಮಂದಿಗಂತ ಸುಧಾರಿಸಿಕೊಂಡಳು. ಆದರೆ ಅವನ ಮೇಲಿನ ಸೇಡನ್ನ ಬಿಡಬಾರದಂತೇಳಿ ಹಟತೊಟ್ಟಿದ್ದಳು.

ಮಾರನೇ ದಿನ ಮುಂಜಾನೆ ಹೋಳಿಯ ಧೂಂಡ್ ಇದ್ದಿದ್ದರಿಂದ ದೇಸು, ಸೋಮ್ಲಿ ಮತ್ತು ಇಡೀ ಕುಟುಂಬದವರು ಡೇರೆಯನ್ನ ಶೃಂಗಾರ ಮಾಡಿ ಮುಂದೊಂದು ಹಂದ್ರ ಹಾಕಿದರು. ಬಂದ ಮಂದಿ ಕುಂತ್ಕೋಳೋದಕ್ಕೆ ವ್ಯವಸ್ಥೆ ಮಾಡಿದರು. ಹೋಳಿ ಮಾಮೂಲು ಧೂಂಡ್‌ನಲ್ಲಿ ಭಾಗವಹಿಸುವವರ ಹೆಂಡದ ಖರ್ಚು ಅವರು ತರುವ ಕುರಿಯ ಖರ್ಚನ್ನ ದೇಸುನೇ ನೋಡಿಕೊಳ್ಳಬೇಕಾದ್ದರಿಂದ ಎಲ್ಲಾದನ್ನು ಅವನೆ ವಹಿಸಿಕೊಂಡಿದ್ದ. "ದೇಕೋರ (ನೋಡ್ರಪ್ಪ) ಆಚರಣೆಯೊಳಗ ಏನೇನು ಕಮ್ಮಿಯಾಗಬಾರದು. ನನ್ನ ಮಗ ಸೊಮ್ಲನ ಧೂಂಡ್ ಮುಂದ ಮಂದಿ ನೆನಪಿನೊಳಗ ಉಳ್ಕೊಬೇಕು ಹಂಗ ದುಮ್ ಧಾಮ್ ಮಾಡ್ರಿ. ಖರ್ಚು ಏಟಬೇಕಾರ ಆಗಲಿ ಅದನ್ನ ನಾ ಕೊಡ್ತಿನಿ. ಕುಡಿಯೋರು ಕುಡಿರಿ, ತಿನ್ನೋರು ತಿನ್ರಿ ಆದ್ರ ಡೇರೆಯ ಎಲ್ಲಾ ಮಂದಿನೂ ಒಟ್ಟಾಗಿ ಮಾಡ್ರಿ". ದೇಸು ಖುಷಿಯಿಂದಲೇ ಹೇಳಿದ. "ಛೆ, ನಿನ್ನ ಮಗನ ವಿಷಯಕ್ಕ ಹಂಗ ಮಾಡ್ತೀವಾ ದೇಸಣ್ಣ, ನೀ ಮನುಷ್ಯ ಹ್ಯಾಂಗಂತ ನಮಗೂ ಗೊತ್ತು. ನೀ ಏನು ಕಾಳಜಿ ಮಾಡಬ್ಯಾಡ ನಮ್ಮ ಮ್ಯಾಲ ಭಾರಹಾಕಿ ಸುಮ್ನಾಗು. ಆ ನನ್ನವ್ವ ಗುಜಾಸತ್ತಿಗ ಹಣ್ಣು ಕಾಯಿ ಮಾಡ್ಸು ಆಟೇಯ". ಕುಡಿದ ಅಮಲಿನೊಳಗೆ ತಿಂದಗ ಹೇಳಿದ.

ಇಡೀ ರಾತ್ರಿ ಬೆಂಕಿ ಹಾಕ್ಕೊಂಡು ಲೇಂಗಿ ಹಾಕೋರು, ಕುಣಿಯೋರು ಕುಣಿತಾನೆ ಇದ್ರು. ಯಾರಿಗ ಹೆಂಡದ ನಿಶೆ ಇಳಿಯಿತ್ತೋ, "ಅಯ್ಯಪ್ಪ ಏನ ಛಳಿ" ಅಂದವರೆ ಮತ್ತೆ ಒಂದು ಮಡಕೆ ಹೆಂಡ ಏರಿಸಿಕೊಂಡು ಲೇಂಗಿಗೆ ಸೇರಿಕೊಳ್ತಿದ್ರು, ಪೀತ್ಲುನ ಹೆಂಡತಿ ಸೋನ್ಕಿ ಬದ್ಯಾ ಮಂದಿ

ಕಣ್ಣು ತಪ್ಪಿಸಿ ಅದ್ಯಾವಾಗ ಕಾಡಸೇರಿದ್ರೂ ಅಂತು ತಪ್ಪಿಸಿಕೊಂಡಿದ್ರು. ಹೋಳಿಯ ಕಾಮ ದಹನಕ್ಕೆ ಮಂದಿ ಕಟಗಿ ಕದಿಯೋಷ್ಟು ಕದ್ರು ಉಳಿದಿದ್ದನ್ನ ಕಾಡಿಂದ ತರಾಕ ಹೋದಾಗ್ಲೆ ಅವರಿಬ್ಬರ ಗುಸುಮಸು ಕೇಳಿ ದೆವ್ವ ಅಂತ ಹೆದರಿದ್ರು. "ಲೇ ಯಾರಲೇ ಅದು" ಒಬ್ಬ ಕೇಳಿದ. ಯಾರೋ ಬಂದಂಗಾತು ಇನ್ನ ಮರ್ಯಾದೆ ಕಾಸಿಗ ಪಂಚರಾಗೋದು ದಿಟ ಅಂದವನೆ ಬದ್ಯಾ ಅವಳನ ಪೊಟರೆಯೊಳಗೆ ಅಡಗಿಸಿ, ಹೊರಬಂದು "ಏನಣ್ಣ, ನಿಮ್ಮ ಮುಂದೆನೆ ಕಟ್ಟಿಗೆ ಆಯೋಕ್ಕೆ ಬಂದೆ ನೀವು ಗಮನಿಸಲಿಲ್ಲವಾ" ಅಂದ. ಹೋಳಿ ಹಬ್ಬದ ಮುಂದ ರಂಪ ಮಾಡೋದ ಬೇಡ ಅಂದವರೆ ಸತ್ಯ ಗೊತ್ತಾದರು ತಮ್ಮ ಮರ್ಯಾದೆಯನ್ನ ತಾವೆ ಕಳ್ಕೋಳೋದು ಸರಿ ಅಲ್ಲ ಅಂತ ಆ ಜಾಗ ಬಿಟ್ಟು" ನಡಿಯಲೆ ಬೇವರ್ಸಿ ನನಮಗಂದ ಏನ್ ಹಚ್ಚರಿ" ಅಂತ ಅವನನ್ನು ಗುಂಪುನೊಳಗ ಸೇರಿಸಿಕೊಂಡರು. ಯಾಕಂದ್ರ ಈ ಹರ್ಕತೆಲ್ಲಾ ಡೇರೆ ಮಂದಿಗ ಗೊತ್ತಾದ್ರ ಇಬ್ರನ್ನು ಕತ್ತರಿಸಿ ತುಂಡು ಮಾಡಿಬಿಡ್ತಾರನ್ನೋ ಸತ್ಯ ತಿಳಿದಿತ್ತು.

ಮುಂಜಾನೆ ಹೊತ್ತಾರೆ ಕಾಮದಹನ ನಡೆಯಿತು. ಇಡಿ ದಿನದ ಕಾರ್ಯಕ್ರಮವೆ ದೇಸುನ ಮಗ ಸೋಮ್ಲನನ್ನ ಹುಡುಕುವುದು. ಬೆಳಕು ಹರಿತಿದ್ದಂಗೆ ಮಂದಿ ಕುಡಿದಿದ್ದರು. ಕೋಲು ಹಾಕುತ್ತ, ಹೋಳಿಯಾಯಿ, ಹೋಳಿಯಾಯಿ ರಾಮದಂಡ ಘಾಟೇಸೆ ಪೇಟಿಯಾಮ ಘಾಲದಂಡ (ಹೋಳಿಬಂತು ಕೋಲುಕೊಲೆ, ಹರಕು ಸೀರೆಯೊಳು ಹಾಕದಂಡ) ಎನ್ನುತ್ತ ಬರಿ ಅವಾಚ್ಯ ಶಬ್ದಗಳನ್ನ ಬಳಸುತ್ತ, ಅತ್ತಿಗೆಯಾಗುವವಳನ್ನ ಅಪ್ಪಿಕೊಂಡು "ಭೋ" ಎನ್ನುವುದು ವಾಡಿಕೆಯಾಗಿತ್ತು. ಅತ್ತಿಗೆಯಾಗುವವಳು, ಮೈದುನನಾದವನ ಟವಲನ್ನ ಕಸ್ಕೊಂಡು ಬಚ್ಚಿಟ್ಟು ಅವಳಿಗೆ ಹೆಂಡಕುಡಿಸುವವರೆಗೆ ಅದನ್ನ ಹಿಂದಿರುಗಿಸುತ್ತಿರಲಿಲ್ಲ. ಸಂಜೆಯಾಗುತ್ತಿದ್ದಂತೆ ಬಣ್ಣ ಆಡುವುದು, ಸಂಜೆಮುಂದ ಗೇರ (ಮಾಂಸದ ಪಾಲು) ಮಾಡಿಂದ ಹೋಳಿ ಮುಗಿಯುತ್ತಿತ್ತು.

ಆರು ತಿಂಗಳ ಕೂಸು ಸೋಮ್ಲು ಬದ್ಯಾನನ್ನ ಪಕ್ಕದ ಡೇರೆಯಲ್ಲಿ ಅಡಗಿಸಿಟ್ಟಿದ್ದರು. ಹೋಳಿಯಕೋಲು ಹಾಕುವ ಗೇರಿಯ್ಯ ಮತ್ತು ಗೇರಣಿ ಅವನ್ನ ಹುಡಕಬೇಕಿತ್ತು (ಹೋಳಿಯಲ್ಲಿ ಕುಣಿಯುವ ಪುರುಷ ಮತ್ತು ಮಹಿಳೆ) ಹುಡುಕಿ ಅವನ ಮೇಲೆ ಹಾಡನ್ನ ಹೇಳಿ ಅವನಿಗೆ ಶುಭಕೋರಬೇಕು. ಸೋಮ್ಲು ಬುಕ್ಯಾನನ್ನ ಹುಡುಕುತ್ತ ಎರಡು ಮೂರು ಡೇರೆಗಳನ್ನ ಸುತ್ತುತ್ತ ಹಾಡು ಹೇಳಿದ ಗೇರ್ಯ, ಗೇರಣಿಗಳು, ಅವನು ಹೇಗಾರು ಅತ್ತೇಅಳ್ತಾನ ಅವಾಗಂತು ಸಿಕ್ಕಾಕಿಕೊಳ್ತಾನಂತ ಕಾಯುತ್ತಿದ್ದರು. ಅವರ ಊಹೆ ಸರಿಯಾಗಿತ್ತು. ಸೋಮ್ಲು ಬುಕ್ಯಾ "ವಂಯ್ಯ ವಂಯ್ಯ" ಅಂತ ಅಳುವುದು ಕೇಳಿಸಿದ್ದೆ ಅಲ್ಲಿಗೆ ಹೋಗಿ ಅವನ ಕುರಿತು ಹಾಡಹೇಳಿ ಅವನಪ್ಪ ದೇಸುಬುಕ್ಯಾನಿಗೆ ಹೋಳಿ ಮಾಮೂಲು ಕೇಳಿದರು. ದೇಸುಗೆ ಬಹಳ ಖುಷಿಯಾಗಿತ್ತು. ಇಬ್ಬರೂ ಪತಿ ಪತ್ನಿ ಮಗನ ಮುಂದಿನ ಸುಭದ್ರ ಭವಿಷ್ಯಕ್ಕೆ ಅವನ ಏಳಿಗೆಗೆ ಶುಭಕೋರಿದ ಗೆರಿಯಾ, ಗೇರಣಿಯರಿಗೆ ಹಿಂದೆಮುಂದೆ ನೋಡದೆ ಉಡುಗೊರೆ ನೀಡಿದರು. ಪಕ್ಕದ ಡೇರೆಯಲ್ಲಿ ಅಡಗಿಸಿಟ್ಟಿದ್ದ ಸೋಮ್ಲನನ್ನ ಹುಡುಕಿದ ನಂತರ ಢೂಂಡ್ ಮುಗಿದಿತ್ತು.

ದೇಸುನ ಜವಾಬ್ದಾರಿಗಳು ದಿನೇ ದಿನೇ ಹೆಚ್ಚಾಗತೊಡಗಿದವು. ಮನೆಯೊಳಗೆ ಮೂರು ಜನ ವಿಧವೆಯರು, ಮದುವೆಯಾಗಲಿರುವ ತಂಗಿ ಗೋಮ್ಲಿ ಅವಳ ಅಣ್ಣ ತೊತ್ಯ. ಅವರ ಮದುವೆಗೆ ಪ್ರಯತ್ನ ಮಾಡಿಯೇ ಬಿಟ್ಟ. ಅವರ ಹಾಗೆಯೇ ಲದೇಣಿಯಾಗೆ ಬಂದವರ ಪೈಕಿ

ಅವರ ಡೇರೆಗಳಿಂದ ಐವತ್ತು ಠಾವು ದೂರದಲ್ಲಿನ ಕೊರ್ರಾ ಕುಟುಂಬದ ರಣಸೋತನ ಮಗಳನ್ನ ತೋತ್ಯಾನಿಗೆ ತಂದುಕೊಳ್ಳುವುದು ಮತ್ತು ಗೋಮ್ಲಿಯನ್ನ ಅಲ್ಲೆ ಇದ್ದ ಸಬಾವುಟ್ ಪಂಗಡದ ದಾಂಡುನಾಯ್ಕನ ಮಗನಿಗೆ ಕೊಡುವುದಾಗಿ ವಾತ್ ಬೋಲಿ (ಮಾತು ಕತೆ), ಗೋಳಪೇರೆರೊ (ಸಿಹಿ ಹಂಚುವುದು) ಆಗೆ ಹೋಯಿತು. ದೀಪಾವಳಿಯ ಹಿಂದಿನ ದಿನ ಮದುವೆಯನ್ನು ಕೂಡ ಮಾಡಿಕೊಳ್ಳುವುದಾಗಿ ಭರವಸೆ ಕೊಟ್ಟು ಬಂದಿದ್ದ ದೇಸು. ದಿನೆ ದಿನೆ ಹೆಚ್ಚುತ್ತಿರುವ ವ್ಯಾಪಾರದಲ್ಲಿನ ಪೈಪೋಟಿ ಅವನನ್ನ ಅಧೀನರನ್ನಾಗಿಸಿತ್ತು. ಆದರೂ ದೃತಿಗೆಡದೆ ಲಾಭಮಾಡಿಕೊಂಡೇ ಬರುತ್ತಿದ್ದ. ಆದರೆ ಮತ್ತೆಂದು ಹೈದ್ರಬಾದ್ ಕಡೆಗೆ ಪ್ರಯಾಣ ಮಾಡದಿರಲು ಅವನ ತಾಯಿ ತಾಕಿತ್ತು ಮಾಡಿದ್ದಳು. ಅದನ್ನು ಅವನು ಒಪ್ಪಿಕೊಂಡಿದ್ದನು ಕೂಡ. ಆಂದ್ರದ ಗಡಿಯೊಳಗೆ ಪ್ರವೇಶ ಮಾಡಲೇ ಬಾರದೆಂದಿದ್ದಳು. ಆದರೆ ಮಾಡಲೇ ಬೇಕಾದ ಅನಿವಾರ್ಯ ಒಮ್ಮೆ ಬಂದೇ ಬಿಟ್ಟಿತು. ಹೈದ್ರಾಬಾದ್‌ನ ರಾಜ ಸತ್ತಮೇಲೆ ನಿಜಾಮನ ದರ್ಬಾರು ಬಂದ ಮೇಲೆಂತು, ಅನ್ಯಾಯ, ಆಕ್ರಮಣ ಹೆಚ್ಚಾಗತೊಡಗಿದವು. ಆದರೆ ವ್ಯಾಪಾರ ಮಾಡಿ ಬದುಕಲೇ ಬೇಕಾದ ಅನಿವಾರ್ಯತೆ ಇದ್ದಿದ್ದರಿಂದ ದೇಸು ಪ್ರಯಾಣಮಾಡಬೇಕಾಯ್ತು. ಒಬ್ಬ ದೊಡ್ಡ ವ್ಯಾಪಾರಿಗೆ ಅವನಲ್ಲಿದ್ದ ಉಪ್ಪನ್ನ ಕರ್ನಾಟಕಕ್ಕೆ ಸಾಗಿಸಲು ಸುಮಾರು ಸಾವಿರ ಎತ್ತುಗಳು ಬೇಕಾಗಿದ್ದವು. ದೇಸುನ ಬಳಿ ಈಗ ಉಳಿದಿರುವುದು ಕೇವಲ ಏಳೆಂಟುನೂರು ಎತ್ತುಗಳು. ಒಂದೊಮ್ಮೆ ಅವನ ಅಜ್ಜನವು ಲಕ್ಷಾಂತರ ಎತ್ತುಗಳಿದ್ದವೆಂದು ಕತೆ ಮಾಡಿ ಹೇಳುವುದೇ ಆಯ್ತು. ಅಲ್ಲಿ ಇಲ್ಲಿ ಇಬ್ಬರು ಮೂವರನ್ನ ಸೇರಿಸಿಕೊಂಡವನೆ ಉಪ್ಪನ್ನ ಸಾಗಿಸುವ ಕಾರ್ಯದಲ್ಲಿ ನಿರತನಾಗಿದ್ದ. ಅವನ ಆಳುಗಳು ಎತ್ತುಗಳನ್ನು ಹೊಡ್ಕೊಂಡು ಈ ಕಡೆಯಿಂದ ಸಿಕ್ಕ ಮತ್ತೊಂದು ವ್ಯಾಪಾರವನ್ನು ಬಳಸಿಕೊಂಡು, ಆ ಕಡೆಯಿಂದ ಅನುಕೂಲವಾಗುವ ಹಾಗೆ ಮಾಡಿಕೊಂಡಿದ್ದ. ಒಂದುವಾರ ಈ ಕಡೆಯಿಂದ ನಡೆದ ಎತ್ತುಗಳಿಗೆ ಮಧ್ಯದೊಳಗೆ ವಿಶ್ರಾಂತಿ ನೀಡಿ ಜಾಗ ತಲುಪಿದಾಗ ಸೌರಾತ್ರಿ. ವ್ಯಾಪಾರಿ ಹೇಳಿದ ಜಾಗದಲ್ಲಿ ಹೇರಿದ ಸಾಮಾನುಗಳನ್ನು ಇಳಿಸಿ ಮತ್ತೊಂದ ವ್ಯಾಪಾರದ ಒಪ್ಪಂದದ ಪ್ರಕಾರ ಹೇರಲು ಮಧ್ಯಾಹ್ನ ಹನ್ನೆರಡರ ಸಮಯಕ್ಕೆ ಹೊರಡಬೇಕು ಅನ್ನುವಷ್ಟರಲ್ಲೇ ನಿಜಾಮರ ಸೈನ್ಯ ಬಂತು ಅಂತ ಹೇಳಿ ಮಂದಿ ಅಲ್ಲಲ್ಲೇ ಅವಿತುಕೊಂಡರು. ಮಂದಿ ಏನೋ ಅವಿತುಕೊಂಡರು. ಆದರೆ ಎತ್ತುಗಳಿಗೇನು ಗೊತ್ತು. ಕುದುರೆಗೆ ಅಡ್ಡ ಬಂದ ಎತ್ತುಗಳಿಂದ ಕೋಪಗೊಂಡಿದ್ದ ಸೈನಿಕನೊಬ್ಬ "ಏಯ್, ಕಂಹಾ ಮರಗಯೇರೆ, ಹಠಾವೊ ಸಾಮ್ನೆಸೆ" ಎಂದು ಕೂಗಿದ. "ಏಯ್, ಬಸವ" ದೇಸು ಖುದ್ದಾಗಿಯೇ ಎತ್ತುಗಳನ್ನು ದಾರಿಬಿಡಿಸಲು ಮುಂದಾದ. ದೇಸುನ ಕಂಡ ಸೈನಿಕ ಹೈರಾಣಾದ. ಅಂವ ಮತ್ತೊಬ್ಬನಿಗೆ ಹೇಳಿದ, ಮತ್ತೊಬ್ಬ ಇನ್ನೊಬ್ಬನಿಗೆ ಹೀಗೆ ಸುದ್ದಿ ಯುವರಾಜ ಜಂಗ್ಲಿಖಾನ್‌ವರೆಗೆ ತಲುಪಿತು. "ಕ್ಯಾ ಮೇರಾ ಏಮ ಶಕಲ್ ಓಯಿ ಏಕ್ ಬಂಜಾರ, ಜಾವೋ, ಪಕಡಕೆ ಲಾವೋ" ಅಪ್ಪಣೆ ಮಾಡಿದ. ಸೈನಿಕರು ದೇಸುನನ್ನ ಹುಡುಕುತ್ತ ಅದೇ ಜಾಗಕ್ಕೆ ಬಂದರು. ದೇಸು ತಾನು ತಂದಿದ್ದ ಬುತ್ತಿಯನ್ನ ಬಿಚ್ಚಿ ಊಟಮಾಡುತ್ತಿದ್ದ. ಸೈನಿಕರು ಬಂದವರೆ ಅಜಾಮತ್ತಾಗಿ ಎತ್ಕೊಂಡು ಹೊರಟರು. "ಏಯ್, ಕ್ಯಾ, ಬಿಡ್ರಿ" ಬಾಯಿ ಬಿಡುತ್ತಿದ್ದಂಗೆ, ಜಂಗ್ಲಿಖಾನ್ ಎದಿರು ಹಾಜರಾಗಿದ್ದ. "ಯಾ ಅಲ್ಹಾ, ಕ್ಯಾ ಹೈ ಯೇ ಕಂಹಿ ಮೇರ ಜುಡವಾಬಾಯಿತೊ ನಹಿ ಹೈ" ಜಂಗ್ಲಿ ಮಾತಾಡಿದ. ದೇಸು ಕಣ್ಣು ಕಣ್ಣು ಬಿಟ್ಕೊಂಡು ಕನ್ನಡಿಯೊಳಗ ತನ್ನ ಪ್ರತಿಬಿಂಬ ನಿಂತಿರುವಂತೆ ಅನಿಸಿದ್ದೆ ಅವನನ್ನೆ ನೋಡತೊಡಗಿದ. ಜಂಗ್ಲಿ "ಕೋನ್ ಹೈ ತು" ಕೇಳಿದ.

"ನಾನೊಬ್ಬ ಸಣ್ಣ ವ್ಯಾಪಾರಿ ಅದೀನಿ ಹೂಜೂರ್ " ವಿನಮ್ರವಾಗಿಯೇ ದೇಸು ಮನದಟ್ಟು ಮಾಡಿಸಿದ. ಅವನ ಹಿನ್ನೆಲೆಯನ್ನ ಕೆದಕಲು ನೋಡಿದ ಜಂಗ್ಲಿಖಾನ್. ಆದರೆ, ದೇಸುಗೆ ಅವನ ಚಿಕ್ಕಪ್ಪ ಥಾವು ಹೇಳಿದ್ದು ನೆನಪಾಗಿ ಯಾವ ಸತ್ಯವನ್ನು ಬಾಯಿಬಿಡಲಿಲ್ಲ. ಇವನು ಯಾರು, ಏನು ಎಂಬ ಎಲ್ಲಾ ಸತ್ಯ ಅವನಿಗೆ ತಿಳಿದಿತ್ತು. ಹೇಳುವುದು ಉಚಿತವಲ್ಲವೆಂದು ಪರಿಗಣಿಸಿ ಬಾಯಿ ಮುಚ್ಕೊಂಡಿದ್ದ. ಖಾನ್‌ನೊಳಗೆ ಅನುಮಾನದ ಹುತ್ತ ಬೆಳೆಯತೊಡಗಿತು.

ಅವನ ತಾಯಿಯ ಸ್ನೇಹಿತೆ ದಾಸಿಯಾಗಿದ್ದ ಅವನ ಸಾಕುತಾಯಿ ಪರ್ವಿನ್ ಹೇಳಿದ ಸತ್ಯ ನೆನಪಾಯಿತು."ಓ ಇವನೇನ ಮೀಟುಬುಕ್ಯಾಕರಮತೋಟ್‌ನ ಮಗ" ಮನಸ್ಸಿನೊಳಗೆ ಅಂದುಕೊಂಡ. ಮಂದಿ ಏನಾರು ತಿಳಿದುಕೊಂಡಾರೆಂಬ ಆತಂಕ ಕಾಡತೊಡಗಿತು ಅವನಿಗೆ. "ದೇಕೊ, ಇಸ್ ಬಾರ್ ಚೋಡ್ತಾ ಹೂಂ ಅಗಲಿ ಬಾರ್ ಯಾಂಹ ನಹಿ ಆನಾ" ಎಂದು ತಾಕೀತು ಮಾಡಿದ ಜಂಗ್ಲಿಖಾನ್. ಅವನ ಸೊಂಟದಲ್ಲಿದ್ದ ನಾಣ್ಯದ ಚೀಲ ಅವನ ಕಡೆಗೆ ಎಸೆದು ಈ ಕಡೆಗೆ ಮತ್ತೆಂದು ಕಾಣಬಾರದು. ಕಂಡ್ರೆ ನಿಮ್ಮ ಕತೆ ಮುಗಿದಂಗೆ ಹೆದರಿಸಿದ. ದೇಸು ಬುಕ್ಯಾ ಕರಮ್‌ತೋಟ್ ಚೀಲವನ್ನು ವಾಪಾಸು ಮಾಡಿ, "ಹೂಜೂರ್ ಇದು ವಾಪಾಸು ತಗೋಳಿ" ಕೊಡಲು ಹೋದ, ಸೈನಿಕನೊಬ್ಬ ಮುಂದೆ ಬಂದು "ಅರೆ, ಹೂಜೂರಗೆ ಕೊಟ್ಟಿದ್ದು ವಾಪಾಸ ಕೊಟ್ರೆ ಬೋ ಸಿಟ್‌ಬರುತ್ತೆ, ಸುಮ್ನೆ ಇಟ್ಕೊಂಡು ಹೋಗಿ", ಹೆದರಿಸಿದ. ಇವರ ಸವಾಸವೇ ಬೇಡ ಅಂದ್ಕೊಂಡ ದೇಸು ಮೊದಲು ಜಾಗ ಖಾಲಿಮಾಡಿದ್ರ ಆತು ಅಂತ ಮನಸ್ಸಲ್ಲಿ "ದೊಡ್ಡ ಜನರ ಸವಾಸ ಬೆಂಕಿ ಜೊತೆಗೆ ಸರಸವಿದ್ದಂತೆ" ಅಂದು ಕೊಂಡವನೆ ಕುದುರೆ ಏರಿ ತನ್ನ ಕೆಲಸದವರಿಗೆ ಎತ್ತುಗಳನ್ನು ವಾಪಾಸು ತಿರುಗಿಸಿ ಹೊಡೆಯಲು ಹೇಳಿದ. ಅವನಿಗೂ ಸತ್ಯ ಅರ್ಥವಾಗಿತ್ತು. ಜಂಗ್ಲಿ ಒಳ್ಳೆಯವನು ಏಕೆಂದರೆ ಅವನು ಮೀಟುಬುಕ್ಯಾನ ಮಗ, ಬಹುತೇಕ ನಾವಿಬ್ಬರು ಸಹೋದರರು, ಆದರೆ ಅವನಿಗೆ ಅಧಿಕಾರವಿದೆ, ಅವನು ಅಲ್ಲಿದ್ದಾನೆ ನಮ್ಮಪ್ಪ ಬದುಕಿದ್ದರೆ ನಾನು ಇಲ್ಲೆ ಎಲ್ಲೋ ರಾಜನಂತೆ ಬೆಳೆಯುತ್ತಿದ್ದೆ. ಅಂತ... ಅನುಮಾನ, ಚಿಂತೆ ಒಮ್ಮೆಲೆ ನುಗ್ಗಿ ಬಂದವು. ವಾಸ್ತವವನ್ನ ಅರ್ಥ ಮಾಡಿಕೊಂಡಿದ್ದ ದೇಸು ಕುದುರೆಯನ್ನ ಎತ್ತುಗಳನ್ನು ವೇಗವಾಗಿಯೇ ಚಲಾಯಿಸತೊಡಗಿದ. ಅವನ ವ್ಯಾಪಾರದ ಬಟವಾಡೆಯಾಗಿತ್ತು. ಅಲ್ಲಿಂದ ಹೇರಿಕೊಳ್ಳಬೇಕಿದ್ದ ಉಪ್ಪನ್ನು ಹೇರಿಕೊಂಡು ಅವರಿಂದಲು ಹಣಪಡೆದುಕೊಂಡು ಭದ್ರವಾಗಿ ಕುದುರೆಯ ಜೀನೊಳಗೆ ಇಟ್ಟಿದ್ದ. ರಸ್ತೆಯಲ್ಲಿ ಕಳ್ಳರ ಹಾವಳಿ ವಿಪರೀತವಾಗಿದ್ದರಿಂದ ಹಣದ ವ್ಯವಹಾರ ಕಠಿಣವಾಗಿತ್ತು. ಅದರೂ ಅವನಿಗೆ ಇದು ಅನಿವಾರ್ಯವಾಗಿತ್ತು. ಜಂಗ್ಲಿ ಕೊಟ್ಟ ಚೀಲವನ್ನು ಹಾಗೆಯೇ ಇಟ್ಟಿದ್ದ, ಸ್ವಾಭಿಮಾನಿ ದೇಸುಗೆ ಬಿಚ್ಚಿ ನೋಡುವ ಆಸೆ ಕೂಡ ಹುಟ್ಟಲಿಲ್ಲ. ಎಷ್ಟು ನಾಣ್ಯಗಳಿರಬೇಕು ಇದರಿಂದ ಅವನೆಲ್ಲಾ ಸಮಸ್ಯೆಗಳು ಪರಿಹಾರವಾಗಬಹುದಾದರೂ ಅದರಲ್ಲಿ ಅವನಿಗೆ ಆಸಕ್ತಿ ಉಂಟಾಗಲಿಲ್ಲ. ಇನ್ನೇನು ಆಂಧ್ರದ ಗಡಿಯು ಮುಕ್ತಾಯದ ಹಂತಕ್ಕೆ ಬಂದಿತ್ತು. ಇದ್ದಕ್ಕಿದ್ದ ಹಾಗೆ ದರೋಡೆಕೋರರ ಗುಂಪೊಂದು ಅವರ ಮೇಲೆ ಅಕ್ರಮಣ ಮಾಡಿಯೇ ಬಿಟ್ಟಿತು. ದೇಸು ದೃತಿಗಡೆದೆ ಆಳುಗಳನ್ನು ಹುರಿದುಂಬಿಸಿ ಸರಿಯಾಗಿ ಕಳ್ಳರನ್ನು ಚಚ್ಚಲು ಹೇಳಿದ. ಕತ್ತಿಯನ್ನ ತೆಗೆದುಕೊಂಡವನೆ ನಾಲ್ಕು ಜನರನ್ನ ಗಾಯಗೊಳಿಸಿದ. ಒಂದು ತಂಡದ ಮೇಲೆ ಬಿದ್ದ ಅವರು ಇನ್ನೊಂದು ಗುಂಪು ಹಿಂದೆಯೇ ಇದೆ ಎಂದು ಊಹಿಸಿರಲಿಲ್ಲ. ಅವರು ಬಲವಾಗಿ ಇವರ ಮೇಲೆ ಪ್ರಹಾರಮಾಡಿ ಉಪ್ಪಿನ

ಮೂಟೆಗಳನ್ನು ಚೆಲ್ಲಾಪಿಲ್ಲಿ ಮಾಡತೊಡಗಿದರು. ದೇಸುನ ಬಂಧಿಸಿದ್ದರು. "ನಾಣ್ಯಗಳು ಎಲ್ಲಿದ್ದಾವೆ ಬೊಗಳು" ಒಬ್ಬ ದಡೂತಿ ಕಳ್ಳ ಹೆದರಿಸಿದ. "ಯಾವ ನಾಣ್ಯ, ಈಗ ಸರಂಜಾಮ ಹೋಗ್ತಾಯಿದೆ, ಅದು ತಲುಪಿದೆ ಮೇಲೆ ತಾನೆ ಕಾಸು". ದೇಸು ಧೈರ್ಯವಾಗಿಯೇ ಉತ್ತಿರಿಸಿದ. "ಲೋ ದೊಡ್ಡ, ಹಂಗೆ ಒಳ್ಳೆ ಮಾತಿಂದ ಹೇಳಿದ್ರ ಕಾಸು ಸಿಕ್ಕಾತ ನಮ್ಗೆ ಬಿಗಿಬೇಕು ನಾಕು, ಬಿಗಿಯೋಣ" ಮುಖಂಡ ಹೇಳಿದ ದೇಸುಗೆ ನಡುಕ ಹುಟ್ಟಿತು. ಈ ಕಡೆಯಿಂದ ನಾಕುಮಂದಿ ಆ ಕಡೆಯಿಂದ ನಾಕುಮಂದಿ ಹೊಡೆಯತೊಡಗಿದರು. ದೇಸು ನೋವಿಂದ "ಯಾಡಿ ಮರಗೋಯೆ (ಅಮ್ಮ ಸತ್ತೆ) ಅಂದ. ಹೊಡಿತಿದ್ದೋರು ಇನ್ನೂ ಜೋರಮಾಡಿದರು. ದೂರದಲ್ಲಿ ಜಂಗ್ಲಿಯ ಸೈನಿಕರು ಇವರ ಕಡೆಗೆ ಬರುತ್ತಿರುವುದು ಕಂಡು "ಹೂಜೂರ್" ಕೂಗಿದ ದೇಸು. ಜಂಗ್ಲಿಖಾನ್ ಹಿಂದಿದ್ದರಿಂದ ಸೈನಿಕನೊಬ್ಬ ಇಲ್ಲಿ ಏನೋ ನಡಿತಿದೆ ಅಂತ ಊಹಿಸಿಕೊಂಡವನೆ ಮುಂದೆ ನುಗ್ಗಿ ಬಂದು ಎತ್ತುಗಳ ಆವಸ್ಥೆಯನ್ನು ನೋಡಿ ಜಂಗ್ಲಿಖಾನ್‌ಗೆ ತಿಳಿಸಿದ. ಜಂಗ್ಲಿಯ ಕುದುರೆ ನಾಗಾಲೋಟದಿಂದ ದೇಸುನ ಕಡೆಗೆ ಧಾವಿಸಿತು. ದರೋಡೆ ಕೋರರಿಗೆ ಇನ್ನೂ ಉಳಿಗಾಲವಿಲ್ಲ ಎಂದು ಅನಿಸಿದ್ದೆ ಓಡಲು ಹವಣಿಸಿದರು. ಜಂಗ್ಲಿಯು ವೇಗದ ಮುಂದೆ ಅವರು ತಪ್ಪಿಸಿಕೊಳ್ಳದಾದರು. ಕ್ಷಣಾರ್ಧದಲ್ಲಿ ಅವರನ್ನೆಲ್ಲಾ ಹಿಡಿದು ಹಾಕಿದ. "ಯಾರ್‍ದು ದರ್ಬಾರಂತೆ ತಿಳ್ಕಂಡಿರಾ, ಜಂಗ್ಲಿದು, ಇಲ್ಲಿ ಇದೆಲ್ಲಾ ನಡಿಯಾಕಿಲ್ಲ, ಎಲ್ಲಾ ಎತ್ತುಗಳ ಮೇಲೆ ಮೂಟೆ ಹಾಕಿ, ಹೂಂ ಮೊದ್ಲಿದ್ದಂಗೆ ಸರಿಪಡಿಸಲು ಹೇಳಿದ. ದೇಸುನ ಹತ್ತಿರ ಬಂದವನೆ "ನೀವು ಬಾಳ ಬಲಶಾಲಿ ಅಂತ ಕೇಳಿದ್ದೆ", ಮಾತಾಡಲಿಲ್ಲಾ. ದೇಸು ಕೂಡ ಏನೂ ಪ್ರತಿಕ್ರಿಯೆ ಕೊಡಬಾರದು ಅಂದ್ಕೊಂಡಿದ್ದ "ಕಾಲ ಬದಲಾದಂಗೆ, ಪರಿಸ್ಥಿತಿ ಕೂಡ ಬದಲಾಗುತ್ತೆ ಹೂಜೂರ್, ಶಕ್ತಿವಂತನ ಶಕ್ತಿ, ಯುಕ್ತಿವಂತನ ಯುಕ್ತಿ ಎಲ್ಲಾ ಹಾಗೆ ಕಡಿಮೆಯಾಗಿ ಇತಿಹಾಸ ಸೇರುತ್ತವೆ" ಅವನ ಮಾತು ಸ್ಪಷ್ಟವಾಗಿತ್ತು. ಅವನ ಅಸಹಾಯಕತೆಯನ್ನು ಹೊರಹಾಕಿದ್ದ. ಜಂಗ್ಲಿಗೆ ಅರ್ಥಮಾಡಿಕೊಳ್ಳುವುದು ತುಸುಕಷ್ಟವಾಗಿತ್ತು. "ನಿಮ್ದುಕೆ ಸಾಯ ಬೇಕಾದರೆ, ನಾಕು ಜನ ಸೈನಿಕರನ್ನ ಕರ್‍ಕೊಂಡ ಹೋಗಿ" ಹೇಳಿದ, "ಇಲ್ಲ ಹೂಜೂರ್, ಇನ್ನು ಮೇಲೆ ನಮ್ಮ ಗಡಿ ಬರುತ್ತೆ ಹೆದರಿಕೆ ಇಲ್ಲ ಧನ್ಯವಾದಗಳು" ಅಂದವನೆ ಅಪ್ಪಣೆ ಪಡೆದು ಗಡಿದಾಟಿದ. ಜಂಗ್ಲಿಗೆ ಖೇದವೆನಿಸಿತು. ಎಂತ ಒಳ್ಳೆಯ ಮನಸ್ಸು ಅವನದು, ನನ್ನಪ್ಪನ ಕುಕೃತ್ಯದಿಂದಾಗಿ ತಂದೆಯನ್ನ ಕಳ್ಕೊಂಡಿರೋ ದೇಸು ಖುದ್ದಾಗಿಯೇ ವ್ಯಾಪಾರ ಮಾಡಿಕೊಂಡು ಬದುಕಿದ್ದಾನೆ. ಇಲ್ಲ ನಾನು ಹೇಗಾರುವಮಾಡಿ ಆತನಿಗೆ ಸಹಾಯಮಾಡಬೆಕು ಮನಸ್ಸಿನೊಳಗೆ ಅಂದ್ಕೊಂಡ ಜಂಗ್ಲಿಖಾನ್.

ದೇಸು ಡೇರೆ ತಲುಪಿದಾಗ ಮಳೆ ಬಿರುಗಾಳಿಗೆ ಡೇರೆಗಳ ಸ್ಥಿತಿ ಹದಗೆಟ್ಟಿತ್ತು. ಮಗನ ಚಿಂತೆಯಲ್ಲಿ ಮುಷ್ಟಿಯೊಳಗೆ ಜೀವ ಹಿಡಿದಿದ್ದ ತಾಯಿ ಲಚ್ಮೆಗೆ ಗುಜಾಸತ್ತಿಯ ಪ್ರಾರ್ಥನೆ ಮಾಡುತ್ತ ದೇಸು ವಾಪಾಸು ಬರುವವರೆಗೆ ಜೀವದಲ್ಲಿ ಜೀವ ಇಲ್ಲದಂತಾಗಿತ್ತು. ಹೊರಗಡೆಯ ಭೀಕರತೆಯ ಅರಿವು ಅಷ್ಟಾಗಿ ಲಚ್ಮೆಯ ಮೇಲೆ ಪರಿಣಾಮ ಬೀರಲಿಲ್ಲ. ಅವನನ್ನ ಕಂಡತಕ್ಷಣ, "ಬೇಟಾ ಇನ್ನೂ ಮೇಲೆ ಅಷ್ಟು ದೂರದ ಪ್ರಯಾಣ ನಿಲ್ಲಿಸಿಬಿಡು. ನೋಡು ಎಲ್ಲಾನೂ ಕಳೊಂಡೀನಿ. ನಿಮ್ಮಪ್ಪ, ಚಿಕ್ಕಪ್ಪ ನಿನ್ನ ತಮ್ಮ ಲಚ್ಮ" ಭಾವುಕಳಾಗಿದ್ದಳು "ಅವ್ವ, ನಾ ವಾಪಾಸು ಬಂದಿನಲ್ಲಾ" ನಡೆದ ಘಟನೆಗಳ ಬಗ್ಗೆ ಗೊತ್ತಾದರೆ ಹುಚ್ಚಿಯಾಗ್ತಾಳಂತ ಅವಳ ಎದುರಿಗೆ ಏನನ್ನು ಹೇಳಲಿಲ್ಲ. ಯಾಕೋ ಅವಳಿಗೆ ಅನುಮಾನಗಳು ಕಾಡಲು ಸುರು ಆಗಿದ್ದವು. ಇರೊ ಒಬ್ಬ ಮಗನಿಗೂ

ಏನಾದರೂ ಹೆಚ್ಚು ಕಡಿಮೆ ಆದರೆ ಗತಿ ಏನು? ಆತಂಕ ಕಾಡತೊಡಗಿತ್ತು. "ಯಾ, ನೀ ಏನು ಗಾಬರಿಯಾಗಬೇಡ, ನಿನ್ನ ಸಂಕಟ ಏನು ಅಂತ ನನಗೆ ಗೊತ್ತಾಗುತ್ತೆ. ಇನ್ನು ಮುಂದೆ ನಿನಗೆ ಹೇಳದೆ ಎಲ್ಲೂ ಹೋಗುವುದಿಲ್ಲ." ಅವಳ ಮಡಿಲಲ್ಲಿ ತಲೆಯಿಟ್ಟ ತನ್ನ ಮಗುವಿನಂತಹ ಸ್ವಭಾವವನ್ನು ವ್ಯಕ್ತಪಡಿಸಿದ್ದ. "ನನ್ನಪ್ಪ ನೀ ಯಾವತ್ತು ಬೆಳೆದು ದೊಡ್ಡೋನು ಆಗಲೇ ಬಾರದಿತ್ತು. ಹೀಗೆ ಯಾವಾಗಲೂ ನನ್ನ ತೊಡೆಮೇಲೆ ಕುಂತು ಆಟ ಆಡುವ ಮಗುವಾಗಿದಿದ್ದರೆ" ಎದೆಯಾಳದಿಂದ ಉಸಿರು ಹೊರಗಡೆ ಬಂದಿತ್ತು. "ಅವ್ವ ಈಗೇನು ನಾನು ದೊಡ್ಡೋನಾಗಿದ್ದಿನಿ ಅಂತ ತಾನೆ ಆಯ್ತು, ಜಗತ್ತಿಗೆ ನಾನೆಷ್ಟು ದೊಡ್ಡವನಾದರೂ ನಿನಗ ನಾನು ಮಗುವೆ ಕಣವ್ವ" ಸಮಾಧಾನ ಪಡಿಸಲು ನೋಡಿದ. ತಾಯಿಕರಳು ಬಹುಬೇಗನೆ ಎಲ್ಲವನ್ನು ಮರೆತು ಮಗನ ಏಳಿಗೆ, ಶ್ರೇಯಸ್ಸು, ಅವನ ತುಂಟತನ ಎಲ್ಲಾದರ ಕಾಳಜಿ ಮಾಡುವ ತಾಳ್ಮೆಯನ್ನ ಪಡೆದುಕೊಳ್ಳುತ್ತದೆ ಎಂಬುದಕ್ಕೆ ಸಾಕ್ಷಿಯಾಗಿದ್ದಳು ಲಚ್ಮಿ.

ದೇಸು ಬುಕ್ಯಾನ ಜವಾಬ್ದಾರಿಗಳು ಹೆಚ್ಚಾಗತೊಡಗಿದವು. ತಂಗಿಯ ಮದುವೆ, ತಮ್ಮನ ಮದುವೆ, ತನ್ನ ಸಂಸಾರ, ವ್ಯಾಪಾರ ಬೇರೆ ಡೋಲಾಯಮಾನ ಸ್ಥಿತಿಯಲ್ಲಿತ್ತು. ಒಮ್ಮೊಮ್ಮೆ ವ್ಯಾಪಾರಬಿಟ್ಟು ಬೇರೆ ಏನಾದರೂ ಮಾಡುವ ಯೋಚನೆ ಮಾಡತೊಡಗಿದ. ಏನು? ತಲೆಗೆ ಹೊಳೆಯಲಿಲ್ಲಾ. ಇವೆಲ್ಲವುಗಳ ನಡುವೆ ಬದುಕನ್ನ ಕಟ್ಟುವ ಪ್ರಕ್ರಿಯೆಯಲ್ಲಿ ತೊಡಗಿದ್ದ ದೇಸುಬುಕ್ಯಾ. ದೀಪಾವಳಿ ಸಂಜೆಗೆ ಗೋಮ್ಲ ಗಂಡುಮನೆಗೆ ಬಂದರೆ ತೊತ್ಯಾ ಮದುಮಗನಾಗಿ ಹುಡುಗಿಯ ಡೇರೆಗೆ ಹೋಗಿದ್ದ. ಎರಡು ಮದುವೆಗಳನ್ನ ಬಹಳ ನೈಪುಣ್ಯತೆಯಿಂದಲೇ ಮಾಡಿದ ದೇಸು. ತೊತ್ಯಾಬುಕ್ಕಕರಮತೋಟ್, ಬಾವುಕನಾಗಿದ್ದ ತಂದೆ ಇಲ್ಲದಿದ್ದರೂ ಅಣ್ಣ ಸಂಸಾರದ ಜವಾಬ್ದಾರಿಯನ್ನ ಹೊತ್ತು ಏಗುತ್ತಿರುವುದ ಕಂಡು ಸಂಕಟಪಟ್ಟಿದ್ದು. ಗೋಮಿ ದೇಸುನ ಕತ್ತು ಹಿಡಿದು, ತನ್ನೆಲ್ಲಾ ಭಾವನೆಗಳನ್ನು ಹೇಳಿಕೊಂಡಿದ್ದಳು. ಬಾಲ್ಯದಿಂದಲೂ ಅವನ ಜೊತೆಗೆ ಆಡಿ, ಸಂಸಾರದ ಏಳುಬೀಳುಗಳನ್ನ ಕಂಡಿದ್ದರಿಂದ ದೇಸುಬುಕ್ಯಾ ದೊಡ್ಡಪ್ಪನ ಮಗನಾದರೂ ಸ್ವಂತಃ ಒಡಹುಟ್ಟಿದವನಂತೆಯೆ ಸಾಕಿದ್ದ. ಅವಳ ತಾಯಿಯಂತು ಮಗಳನ್ನು ವಿಧಾಯಮಾಡುವಾಗ ಮದುಮಗಳಿಗಿಂತ ಮುಂಚೆಗೆ ಮೂರ್ಛೆಹೋಗಿದ್ದಳು. ದೇಸು ತನ್ನ ಚಿಕ್ಕಮ್ಮನನ್ನೂ ಕೂಡ ತಾಯಿಯಂತೆ ಪ್ರೀತಿಸಿದವನು, ಅವನೆ ಓಡಿಹೋಗಿ ನೀರು ಹಾಕಿ ಸಮಾಧಾನ ಪಡಿಸಿದ್ದ.

ದೇಸು ಬುಕ್ಯಾಗೆ ಹೈದ್ರಾಬಾದ್ ಕಡೆಗೆ ವ್ಯಾಪಾರ ಬೇಡವೆಂದರೂ ಅನೇಕ ಅವಕಾಶಗಳು ಆ ಕಡೆಗೆ ಬರತೊಡಗಿದವು. ಈ ಸಾರಿ ಅವನು ಬರಿ ಆಳುಗಳ ಮೇಲೆನೆ ಹೇರಿ ಕಳಿಸಲು ನಿರ್ಧರಿಸಿದ. ಆ ವ್ಯಾಪಾರ ಮೊದಲೆ ಎಲ್ಲಾಹ ಕಾಸನ್ನ ಕೊಡಲು ಒಪ್ಪಿಕೊಂಡರೆ, ಅದಕ್ಕೆ ವ್ಯಾಪಾರಿ ಕಟಬದ್ಧನಾಗಿದ್ದರಿಂದ ಎತ್ತುಗಳನ್ನು ಆ ಕಡೆಗೆ ಓಡಿಸಿದ. ದಕ್ಷಿಣದ ಕಡೆಗೆ ಅಲ್ಪಸ್ವಲ್ಪ ವ್ಯಾಪಾರವನ್ನ ಮಾಡುತ್ತಾ ತನ್ನ ಅಸ್ತಿತ್ವವನ್ನ ಗಟ್ಟಿಪಡಿಸಿಕೊಳ್ಳಲು ನೋಡಿದ. ವರ್ಷಕ್ಕೆ ಒಂದರಂತೆ ಏಳೆಂಟು ಮಕ್ಕಳೂ ಕೂಡ ಆದವು ದೊಡ್ಡವನು ಸೋಮ್ಲ ಭುಕ್ಯಾ, ಎರಡನೇಯವನು ಮಂಗಲ್ಯಾಬುಕ್ಯಾ, ಮೂರನೇಯವಳು ಭೀಮಣಿ, ನಾಲ್ಕನೆಯವಳು ಫಕ್ಕೀರಿ, ಐದನೇಯವನು ಚಾಪ್ಲಬುಕ್ಯಾ, ಆರನೆಯವನು ಚೊಕ್ಲಾ, ಡೇರೆ ತುಂಬ ಪಿಳ್ಳಿಪಿಚ್ಚಗಳು ತುಂಬಿಕೊಂಡಿದ್ದರು. ದೇಸುಗೆ ಇವರನ್ನೆಲ್ಲಾ ಸಾಕುವುದು ಒಂದು ದೊಡ್ಡ ಸವಾಲಾಗಿತ್ತು. ವಯಸ್ಸಾದ ತಾಯಿ, ಚಿಕ್ಕಮ್ಮ ಆಗಲೆ ಹಾಸಿಗೆ ಹಿಡ್ಕೊಂಡಿದ್ದರು. ಇದೆಲ್ಲಾ ರಂಪ ನನಗ್ಯಾಕೆ ಅಂತ ತೊತ್ಯ ಕೆಲವು ಎತ್ತುಗಳನ್ನು

ಹೊಡ್ಕೊಂಡು ಅವರ ಡೇರಿಯಿಂದ ಅಣತಿ ದೂರ ತನ್ನದೇ ಹೊಸದೊಂದು ವ್ಯಾಪಾರವನ್ನ ಆರಂಭಮಾಡಿದ್ದ. ದೇಸುನ ಚಿಕ್ಕಮ್ಮಗೆ ಆಘಾತವಾಗಿತ್ತು. ತನ್ನ ಮಗ ತೊತ್ಯಬುಕ್ಕಾ ದೇಸುನಿಂದ ದೂರ ಹೋಗಿ ಸ್ವಂತ ವ್ಯಾಪಾರ ಮಾಡಿದ್ದು ಅವಳಿಗೆ ಒಪ್ಪಿಗೆಯಾಗಲಿಲ್ಲ. ಅವನು ಅವಳನ್ನ ಕರೆಯಲಿಲ್ಲಾ, ಅವಳು ಹೋಗಲಿಲ್ಲ, ಇಡೀ ಜೀವನದಲ್ಲಿ ಸ್ವಂತಃ ಒಡಹುಟ್ಟಿದ ಅಕ್ಕಳ ಹಾಗೆ ಭಾವಿಸಿದ್ದ ಲಚ್ಮಿಯ ಕೊನೆಗಾಲದಲ್ಲಿ ಅವಳನ್ನ ಬಿಟ್ಟು ದೂರವಿರುವುದು ಅಸಾಧ್ಯವೆನಿಸಿತು. ಹಾಗಾಗಿಯೇ ತನ್ನ ಮಗ ತೊತ್ಯ ಹೊರಗೆ ಹೋದರು ಅವನೊಂದಿಗೆ ಹೋಗಲು ಮನಸ್ಸು ಮಾಡಲಿಲ್ಲ. ದೇಸು ಬುಕ್ಯನ ಹಿರಿಮಗ ಸೋಮ್ಲ ಬುಕ್ಯಾಕರಮತೋಟ್ ಆಗಲೆ ದೊಡ್ಡವನಾಗಿದ್ದ. ಇಬ್ಬರು ಅಜ್ಜಿಯಂದಿರಿಗೆ ಬಹಳ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದಿದ್ದರಿಂದ, ಲಚ್ಮಿ ಅವನ ಮದುವೆಯನ್ನ ನೋಡಬೇಕು, ಮೊಮ್ಮಕ್ಕಳನ್ನು ಆಡಿಸಬೇಕೆಂಬ ಬಯಕೆಯನ್ನು ಮಗ ದೇಸುನ ಎದುರಿಗೆ ಹೇಳಿದಳು. "ಬೇಟಾ, ನಾ ಸಾಯೋದ್ರಾಗ ಮೊಮ್ಮಕ್ಕಳನ್ನ ಆಡಿಸಬೇಕು ಹೇಗಾರು ಮಾಡಿ, ಕಷ್ಟದಲ್ಲಿ ಕಷ್ಟ ಆದ್ರೂವೆ ಸೋಮ್ಲನ ಮದ್ವೆ ಮಾಡು" ಅಂದ್ಲು ದೇಸು ಮಾತಾಡಲಿಲ್ಲ, ತಾಯಿಯ ಆಸೆಯನ್ನು ಪೂರೈಸಲು ಹುಡಿಗಯನ್ನ ಹುಡುಕುವ ಕೆಲಸದಲ್ಲಿ ನಿರತನಾದ.

ತೊತ್ಯಾನ ಮಾವ ಕಾಳು ಅಳಿಯ ಎಲ್ಲಾ ಸಂಪತನ್ನ ಅವನ ದೊಡ್ಡಪ್ಪನ ಮಗನಿಗೆ ಬಿಟ್ಟು ಬಂದಿರುವುದು ಸರಿಕಾಣಲಿಲ್ಲ ಅವನನ್ನ ಕರೆದು ಕಿವಿಯೂದಿದ. "ಅಲ್ಲಾಕಣ ಅಳಿಂದ್ರೆ, ನೀವ ಮಾಡಿದ್ದ ಸರಿನಾ, ಲೆಕ್ಕಾಚಾರದಿಂದ್ಲೆ ಮಾತಾಡೋನ, ನಿಮ್ಮಣ್ಣನತಾವ ಒಟ್ಟು ವ್ಯಾಪಾರ ಎತ್ತುಗಳು ಇರೋದು ಸಾವಿರ. ಅದ್ರಾಗ ನ್ಯಾಯವಾಗೆ ನಿಮಗೆ ಬರಬೇಕಾಗಿರೋದು ಐದು ಸಾವಿರ. ಇನ್ನ, ಬಂಗಾರದ ವರಹಗಳು, ಬೆಳ್ಳಿನಾಣ್ಯಗಳು ಮಣಗಟ್ಟಲೆ ಮನಿಯೊಳಗಿರುವಾಗ ಬರಿ ನೂರ ಎತ್ತುಗಳನ್ನು ಹೊಡೆದುಕೊಂಡು ಬಂದು ಬೇರೆಯಾಗಿದ್ದಿರಲ್ಲಾ ನನ್ನ ಮಗಳಿಗೆ, ಮೊಮ್ಮಕ್ಕಳಿಗೆ ನಾಳೆ ಬಿಕ್ಷೆ ಬೇಡುವುದಕ್ಕೆ ಹಚ್ಚಬೇಕು ಅಂದುಕೊಂಡಿರೋ ಹೇಗೆ". ಅವನ ಪ್ರತಿಕ್ರಿಯೆಯನ್ನು ಗಮನಿಸಿದ, ತೊತ್ಯ ಗಲಿಬಿಲಿಗೊಂಡಿದ್ದ, ಅವನು ಪೂರ ಅಲುಗಾಡಿದ್ದ, ನಾನೇನೊ ಹೆಂಡತಿಮಾತು ಕೇಳ್ಕೊಂಡು ಹೊರಗ ಬಂದ್ರೆ ಈವಯ್ಯಾ ಪೂರ್ತಿಗೇರಿ ಕೊಯ್ಕೊಂಡು ಬಿಡು ಅಂತವನಲ್ಲಾ, ಮನಸ್ಸು ವಿಚಲಿತಗೊಂಡಿತು ಎನು ಮಾಡುವುದಂತ ತಿಳಿಯದೆ, " ಅದನ್ನ ಆಮೇಲೆ ನೋಡಿದರಾಯ್ತು ಬಿಡಿ ಮಾವ, ಈಗ್ಯಾಕೆ ತಲೆ ಕೆಡಿಸಿಕೊಳ್ಳುವುದು," ಮೆಲ್ಲನೆ ಜಾರಿಕೊಳ್ಳಲು ನೋಡಿದ. ಕಾಳುನ ಸ್ನೇಹಿತ, ದೇಸುನ ಬದ್ದವೈರಿ ಸಾಣು ವಿಸಾಳವಾತ. "ಹೂಂ ನೀ ಆಮೇಲೆ ನೋಡ್ತಿರು, ಅವನು ಗಂಟು ಎಂಟಣೆ ಮಾಡ್ತನೆ, ಆಮೇಲೆ ಟಿಂಗಾಟೋಳ ಪರಶರಾಮ ಆಗ್ತಿಯಾ, ಎಯ್ ನೀವು ಯಾವ ಸೀಮೆ ಮನುಷ್ಯರು ಅಂತ, ಇದು ಸರಿಯಾದ ಸಮಯ ಅಳಿಂದ್ರೆ ಹೋಗಿ ಏಕ್‌ಮಾರ್ ದೋ ತುಕಡಾ ಮಾಡಿಬಿಡಿ. ಉಳಿದಿದ್ದನ್ನ ಆಮ್ಯಾಕಿಂದ ನೋಡಮ", ತೊತ್ಯನ ಮನಸ್ಸು ಸಂಪೂರ್ಣವಾಗಿಯೇ ದಿಕ್ಕು ತಪ್ಪಿತು ಅವನು ಅಂದ್ಕೊಂಡಿದ್ದು ಸರಿನೋ, ಇಲ್ಲ ಅವನ ಮಾವ ಮತ್ತು ಅವನ ಸ್ನೇಹಿತ ಹೇಳ್ತಿರುವುದು ಸರಿ ಎಂಬುದು ಅವನಿಗೆ ಸ್ಪಷ್ಟವಾಗಲಿಲ್ಲ. ಅವರಿಬ್ಬರಿಂದ ತಪ್ಪಿಸಿಕೊಳ್ಳುವ ದಾರಿಯನ್ನ ಯೋಚಿಸುತ್ತಿರುವಾಗಲೇ ಕಾಳು ಮತ್ತೊಂದು ಹುಳಬಿಟ್ಟಿದ್ದಾ. "ನಿಮ್ಮಜ್ಜಂದಿರಾದ ಜಂಗಿ-ಭಂಗಿ ಮಹಾರಾಜರಿಗೆ ಬಹಳ ಹತ್ರರಾಗಿದ್ದು ಅವರು ಮಾಣಿಗಟ್ಟಲೆ ಬಂಗಾರ ಕೊಟ್ಟವ್ರೆ, ನೀ ಏನಾರು ಹಂಗೆ ಬಿಟ್ಯೋ, ನಿಮ್ಮಣ್ಣ ಎಲ್ಲಾನೂ ಹಡಪ ಬಿಡ್ತಾನ. ಎಚ್ಚರಿಕೆಯಿಂದಿರು", ಸಾಣುವಿಸಳಾವತ ಕಡೆ ನೋಡಿದ. ಇಬ್ಬರು ಸೇರಿ ಅವನ

ತಲೆತಿಕ್ಕುತಿರುವುದನ್ನ ಖಾತ್ರಿಪಡಿಸಿಕೊಂಡ ತೊತ್ಯನ ಮನಸ್ಸು ಗೊಂದಲದ ಗೂಡಾಗಿತ್ತು. ತಾನೇನಾದರೂ ಹೀಗೆ ಮಾಡಿದರೆ, ದೊಡ್ಡಮ್ಮ, ಅಮ್ಮ ಏನಂದು ಕೊಂಡಾಳು, ಯಾವತ್ತು ನನ್ನ ಬೇರೆ ಎಂದು ಬಗೆಯದ ಅಣ್ಣ ಮುಂದೆ ಊಹಿಸದಾದ. ಅವನು ಯೋಚಿಸತ್ತಿರುವುದ ಕಂಡ ಸಾಣುವಿಸಳಾವತ್, ಕಬ್ಬಿಣಕಾದಿರುವಾಗಲೇ ಬಿಡಯಬೇಕಂದವನೆ. "ಏನ ಯೋಚನೆ ಮಾಡ್ತಿದ್ದಿಯಾ, ನಾಳೆ ಹೊತ್ತಾರೆ ಪಂಚಾಯ್ತಿ ಸೇರಿಸಿ ನಿಮ್ಮಣ್ಣನ್ನ ಕರೆಸು ಅಷ್ಟಕ್ಕೂ ಅವನೇನು ನಿನ್ನ ಒಡಹುಟ್ಟಿದವನಲ್ಲ ದೊಡ್ಡಪ್ಪನ ಮಗ". ಬಾಯಾನ ಮಾತು ಬಾಯಲ್ಲಿರುವಾಗಲೆ, ತೊತ್ಯಾನ ಪಿತ್ತನೆತ್ತಿಗೇರಿತ್ತು. "ಮಾವ, ನಿಮ್ಮ ಕೆಲಸ ಎಷ್ಟು ಐತೆ ನೋಡ್ಕಳಿ, ನಮ್ಮ ಮನೆ ವಿಷಯದಲ್ಲಿ ಹೀಗೆ ಮಾತಾಡೋದು ಸರಿಕಾಣಂಗಿಲ್ಲ" ಅಂದ. "ಹಂಗೋ ವಿಷಯ, ಆಯ್ತು ನನ್ನ ಮಗಳನ್ನ ನಾನು ಕರ್ಕಂಡ ಹೊಕ್ತಿನಿ. ನಾನು ಮದುವೆ ಮಾಡ್ಸಿದ್ದು ನಿನ್ನ ಮೂತಿ ನೋಡಿ ಏನಲ್ಲ ನಿನ್ನ ದಂಡು ದರ್ಬಾರು ನೋಡಿ, ನೀ ಏನಾರು ನಿಮ್ಮಣ್ಣನ ಗುಲಾಮ ನಂಗೆ ಮಾತಾಡ್ದೊ ಯಾವತ್ತು ನನ್ನ ಮಗಳನ್ನ ಕಳಿಸೋದಿಲ್ಲ" ಅಂದವನೆ ಹೊಂಟುಬಿಟ್ಟ. ತುಂಬು ಗರ್ಭಿಣಿಯಾದ ಸೇವ್ಲಿ ಮಾತು ಕೇಳ್ಕೊಂಡು ನೂರ ಐನಾತಿ ಎತ್ತುಗಳನ್ನು ಹೊಡೆದುಕೊಂಡು ಬಂದಾಗ ಅವನಣ್ಣ ಬಾಯಿಯಿಂದ ಬ್ರಾ. . . ಎಂದು ಮಾತಾಡಲಿಲ್ಲ. ಈಗ ಏನು ಮಾಡುವುದಂತೆ ತಿಳಿಯದೆ, ಮಾಡಿದ ಸ್ವಯಂಕೃತ ಅಪರಾಧಕ್ಕಾಗಿ ಪಶ್ಚಾತ್ತಾಪ ಪಡತೊಡಗಿದ.

ತೊತ್ಯ ಒಬ್ಬನೆ ಡೇರೆಯಲ್ಲಿದ್ದ, ಸಂಜೆ ಯಾಗುತ್ತಿದ್ದಂತೆ ಹೆಂಡ ಕುಡಿಯುವುದು ಯಾರ್‍ಯಾರಿಗೊ ಬೊಯ್ಯುವುದು ಕಾಲು ಕೆರದು ಜಗಳಕ್ಕೆ ಹೋಗುವುದು ಮಾಡತೊಡಗಿದ. ಜನ ನೋಡೊಮಟ ನೋಡಿದ್ರು. ಸಹಿಸಿಕೊಳ್ಳೋದಕ್ಕೆ ಆಗದಿದ್ದಾಗ ನಾಕು ತದಕಿದ್ರು, ಹೆಂಗೂ ಸುದ್ದಿ ತಿಳಿದ ದೇಸು ಎದ್ನೋ ಬಿದ್ನೋ ಅಂತ ತಮ್ಮನ ಡೇರೆಗೆ ಓಡಿದ. ತೊತ್ಯಾ ಮಾತಾಡುವ ಸ್ಥಿತಿಯಲ್ಲಿರಲಿಲ್ಲಾ. ಸಾಣು ವಿಸಳಾವತ, ಕಾಳ್ಯ ಬಾಣೋತ್ ಅವನಿಗಿಂತ ಮುಂಚೆ ಜಮಾಯಿಸಿದ್ದರು. "ಬಂದ್ಯಾ, ಸತ್ತಾನೋ ಬದುಕಿದಾನೋ ಅಂತೇಳಿ ನೋಡ್ಕೊಂಡ ಹೋಗಾಕ ಬಂದಿರಬೇಕು, ಎಲ್ಲಾ ನಿನ್ನಿಂದಲೇ ಆಗಿದ್ದು, ಅವನ ಪಾಲಿಗೆ ಬರೋದನ್ನ ಕೊಟ್ಟಿದ್ರ ಇವತ್ತು ನನ್ನ ಅಳಿಯನಿಗೆ ಈ ಸ್ಥಿತಿ ಬರ್ತಿರಲಿಲ್ಲಾ" ಕಾಳು ಬಾಣೊತ್ ಖಾರವಾಗಿ ಮಾತಾಡಿದ್ದ. ದೇಸು, ಇಂವಂದ್ದೇನು ಅಂತ ಸುಮ್ಮನಾದ. ಆದ್ರ ಸಾಣುವಿಸಳಾವತ್, "ಅವನಿಗೆ, ಯಾರದೋ ಸಂಪತ್ತಿನ ಬಲದ ಮೇಲೆ ಮದಬಂದೈತೆ, ಡೆರೆಯೊಳಗೆ ಬಂಗಾರದ ವರಹಗಳು ಕೊಳಿತಿದ್ದಾವೆ ಅದಕ್ಕೆ ಹಿಂಗ ಮಾಡ್ತಾನ, ನಮ್ಮಂಗೆ ಯಾರದು ಸಹಾಯ ಇಲ್ಲದೆ ಬೆಳದಿದ್ರ ಗೊತ್ತಾಗುತ್ತಿತ್ತು" ಏನೇನೊ ಅಸಂಬದ್ಧ ಮಾತುಗಳನ್ನು ಆಡತೊಡಗಿದ. ದೇಸುಕೇಳೋಮಟ ಕೇಳಿದ. "ಏಯ್, ನೀ ಯಾವನ ಅದನ್ನ ಕೇಳೋಕೆ? ಅವರೆನೊ ನಮ್ಮ ಬೀಗರು ಹಕ್ಕು ಐತೆ ಕೇಳ್ತಾರು. ನಿನಗೇನ ಗರಜು," ಅವನ ಎದೆ ಮೇಲೆ ಹೋದ. "ಅವನು ನನ್ನ ಸ್ನೇಹಿತಹಯ್ಯ, ಅವನಿಗೆ ಹಾಕ್ರಣ್ಣ, ಅವನೇನು ಸುಳ್ಳಾಡ್ಲಿಲ್ಲ ಹೇಳಿದ್ದು ಸತ್ಯ. ಅಂತ ಮರ್ಯಾದಸ್ಥನಾಗಿದ್ರೆ, ಏನೇನು ಕೊಡಬೇಕಿತ್ತೋ ಕೊಟ್ಟು ಕೈತೊಳ್ಕೊಂತಿದ್ದೆ. ಆಹಾ, ಬಂದಬಿಟ್ಟ ಭಾರಿ ದೊಡ್ಡಮನುಷ್ಯ" ಕಾಳ್ಯಬಾಣ್ಣೋತ್ ಬೇಕಂತ್ಲೆ ರೇಗಿಸಿದ. ತೊತ್ಯಾನ ಆವಸ್ಥೆಗೆ ಇವರೆ ಕಾರಣರಾಗಿದ್ರು ಈಗ ದೇಸುನ ಕೆರಳಿಸಿ, ಜಗಳಮಾಡಿ ಹೇಗಾದರೂ ಮಾಡಿ ಅವರನ್ನ ಬೇರೆ ಮಾಡಬೇಕು ಅನ್ನೋದೆ ಅವರ ಮಹಾದಾಸೆಯಾಗಿತ್ತು. ದೇಸು ಎಲ್ಲಾ ಸೂಕ್ಷ್ಮವನ್ನು ಗಮನಿಸಿದ, ಆದರೆ, ಈಗ ಸುಮ್ಮನೆ ಇವರು ಹೇಳಿದಂಗೆ ಕೇಳಿದರೆ ಹೆದರಿದ

ಅಂತ ನಾಳೆ ಮೈಮಲೆ ಬಿಳ್ತಾರನ್ನೋದು ಗೊತ್ತಾಗಿದ್ದೆ. "ಯಾರು ದೊಡ್ಡ ಮನುಷ್ಯ, ಯಾರಿಗಮರ್ಯಾದೆ ಇಲ್ಲ, ಪಾಲಕೇಳೋನು ಅವನು, ಕೇಳಲಿ ಆಮೇಲಿನ ಮಾತು, ನಿ ಯಾವನು? ಹೆಣ್ಣುಕೊಟ್ಟಮಾವ ಅಷ್ಟ್ರಲ್ಲೇ ಇರು, ಅದರಾಚೆ ದಾಟಿದೆಯೋ ಕತ್ತರಿಸಿಬಿಡ್ತಿನಿ ಹುಷಾರ್". ಜೋರಾಗಿ ಅವಾಜ ಹಾಕಿದ ಹಿಂದೆ ವಿಸಳಾವತ್‌ನ ಬೆಂಬಲ ಇದ್ದಿದ್ದರಿಂದ ಅವನೇನು ಗಪ್ಪಾಗೋ ಮಗನಲ್ಲ, "ಏನಲೇ ನಿಂದು, ಗಡಿದಾಟಿದೆ ಏನೀಗ, ಹೊಡಿತಿಯಾ, ಹೊಡಿಯೋಗಂಡಮಗನ, ನೀ ನಿಮ್ಮಪಗ ಹುಟ್ಟಿದವನಾದ್ರ, ನೀ ಕರಮತೋಟ್ ಕುಲದವನ ಆಗಿದ್ರ ನನ್ನ ಮುಟ್ಟಲೇ" ಸವಾಲ ಹಾಕದವನೆ ಅವನ ಮೇಲೆ ಏರಿ ಹೋದ. ಬಿಸಿರಕ್ತದ ದೇಸು, ತಗದು ಒಂದೇ ಒಂದು ಕಪಾಳಕ್ಕೆ ಬಿಟ್ಟ ಕಾಳ್ಯ ಬಾಣೋತನ ಕಣ್ಣೋಳಗ ಬೆಳಕ ಕಾಣಿಸಿಕೊಂಡಿದ್ದೆ ಗಿಮಿಗಿಮಿ ಮೂರ ಸುತ್ತ ತಿರುಗಿ "ಯಾ ಮರಗೋಯೆ" (ಯವ್ವಸತ್ನೆ) ಅಂದವನೆ ನೆಲಕ್ಕುರುಳಿದ, ವಿಸಳಾವತ್, ಒಂದು ಘಳಿಗೆ ಯೋಚನೆ ಮಾಡಿದ, ನಾಕೆಂಟಮಂದಿ ಚೆಲಾಗಳಿದಿದ್ದರಿಂದ, "ಏನ್ರಲೇ ನೋಡ್ತಿದ್ದಿರಾ, ಹೂಂ" ಸನ್ನೆಮಾಡಿದ, ದೇಸು, ಒಬ್ಬೊಬ್ಬರನ್ನೆ ಸದೆಬಡಿದು ಗದುಮಿದ. ಅಷ್ಟಕ್ಕೆ ಸುಮ್ಮನಾಗದ ಕಾಳುಬಾಣೋತ್, ಕಿವಿಯೊಳಗಿಂದ ರಕ್ತ ಸೋರಿರೋದನ್ನೆ ನೆಪಮಾಡಿಕೊಂಡು "ಸಾಯಿಸಿಬಿಟ್ನಪ್ಪ, ಎನಮಾಡ್ಲಿ, ನನ್ನ ಅಳಿಯನಿಗೆ ನ್ಯಾಯಕೊಡು ಅಂತ ಕೇಳಿದಕ್ಕೆ ಹೊಡಿತಿದ್ದಾನೆ. ಅಯ್ಯೋಬರ್‍ರಪ್ಪ ನನ್ನ ಕೊಲೆಮಾಡಿದ್ದಲ್ಲದೆ ಸಾಣುವಿಸಳಾವತ್ ನನ್ನು ಕೊಂದಹಾಕ್ತಾನ." ಜೋರಬಾಯಿಮಾಡಿ ಅಳತೊಡಗಿದ. ಅದೇ ಸಮಯಕ್ಕ ಸರಿಯಾಗಿ ತೊತ್ಯಬುಕ್ಯಾ ಕಣ್ಣುಬಿಟ್ಟ.

ತೊತ್ಯ ಬುಕ್ಯಾಗ ಮಂದಿ ಹೊಡೆದ ಹೊಡ್ತಕ್ಕ ಕಣ್ಣುಗಳು ಊದಿಕೊಂಡಿದ್ದು, ಮುಕ ಮುಸಿಡ ಹೊಡದ ಹೋಗಿದ್ದು. ದೇಸು, ವಿಸಳಾವತ್ ಮಂದಿನ ಅಟ್ಟಾಯಿಸ್ಕೊಂಡು ಹೊಡಿತಿರೋದನ್ನ ಅವನ ಮಾವ ತಿರುಚಿ ಕತೆಯನ್ನಾಗಿಸಿ ಅವನಿಗೆ ಹೇಳಿದ. "ನೋಡದೇನಪ್ಪ, ಹೆಂಗಹೊಡೆದವ್ನೆ, ನಿನ್ನ ಸಾಯಿಸೋದಕ್ಕೆ ಮಂದಿನ ಕಳಿಸಿದವನು ಅವನೆ. ನೀನ ನೋಡಿದ್ರೆ ನನ್ನ ಆಸ್ತಿ ಅವನೆ ಅನುಭವಿಸಲಿ ಅಂತ ದೊಡ್ಡ ಮನುಷ್ಯನ ಹಾಗೆ ಹೇಳಿದೆ. ಯಾಕಪ್ಪ ಹೀಗೆ ಮಾಡಿದೆ ಅಂತ ಕೇಳಿದಕ್ಕೆ ನನ್ನ ಹೊಡದು, ನನ್ನ ಸ್ನೇಹಿತನಿಗೂ" ಅಳತೊಡಗಿದ. ಅರೆಬರೆ ಪ್ರಜ್ಞೆಯಲ್ಲೆ ತೊತ್ಯ ಎದ್ದವನೆ "ಎಯ್, ಬಿಡು ಅವರನ್ನ, ಕೊಂದಹಾಕ್ತಿ ಏನು? ನನ್ನ ಹೊಡೆಸಿದ್ದೆ ಸಾಕು. ನೀ ಇಷ್ಟೆಲ್ಲಾ ಮಾಡಿದ ಮೇಲೆ ಇನ್ನೂ ನಿನಗೆ ನನ್ನ ಪಾಲು ಬಿಡುವುದರಾಗ ಅರ್ಥಇಲ್ಲ." ದೇಸುನ ವಿರುದ್ಧ ಮಾತಾಡಿದ. ದೇಸುಗ ಮೊದ ಮೊದಲು ಅರ್ಥ ಆಗಲಿಲ್ಲಾ. ಯಾವಾಗ ನನ್ನ ಹೊಡೆಸಿದೆ ಅಂದಾಗ ಬೇಸರವಾಯ್ತು. "ಎಯ್, ತೊತ್ಯ, ನಾನು ನಿನ್ನ. . . . ಯಾರಹೇಳಿದ್ರು, ಈ ಮಾತನ ಹೇಳು?" ಅವನ ಭುಜ ಹಿಡಿದು ಅಲುಗಾಡಿಸಿದ. ಅವನು ಮಾತಾಡಲಿಲ್ಲ. ಹಿಂಗಸುಮ್ಮನಿದ್ರೆ ಬಿಡೋನಲ್ಲ ನಾನು "ಗುಜಾಸತ್ತಿ ಮೇಲೆ ಪ್ರಮಾಣ ಮಾಡಿ ಹೇಳ್ತಿನಿ, ನಿನಗ ಯಾ ಮಗ ಹೇಳಿದ್ನಲ್ಲಾ ಅವನ ಹೆಸರ ಹೇಳಬೇಕು, ಅವನು ಅದನ್ನ ಸಾಬೀತ ಮಾಡಬೇಕು ಆಮೇಲೆ ನೀ ಏನಂತಿಯೋ ನಾ ಅದನ್ನ ಮಾಡಾಕ ಸಿದ್ದ ನಾನು ನಿನಗ ಮಾತ ಕೊಡ್ತಿನಿ, ಹೋಗು ಹೇಳಿಸು ಯಾರು ನಿನಗೆ ಹೇಳಿದವರು". ಸಿಟ್ಟಿನಿಂದ ಕೆಂಪಗಾಗಿದ್ದ ದೇಸು. ತೊತ್ಯ ಭುಕ್ಯಾ ಹೇಳ್ಳೋದ ಹೇಳಿ ಪೇಚಿಗೆ ಸಿಗಾಕಿಕೊಂಡಿದ್ದ. ಅದು ಸುಳ್ಳಾದ್ರ ದೇಸು ಚರ್ಮಸುಲತಾನಂತ ಗೊತ್ತಾಗಿ ಸುಳ್ಳನ ಸತ್ಯ ಮಾಡಲು ಮತ್ತೊಂದು ಸುಳ್ಳು ಹೇಳಿದ. " ಯಾರು ಯಾಕ ಹೇಳಬೇಕು ನನಗೆ ಗೊತ್ತಾಗಲ್ವೇನು. ಈಗ ಯಾರ ಹೇಳ್ಯಾರನ್ನೋದು ಮುಖ್ಯ ಅಲ್ಲ,

ನನ್ನ ಪಾಲ ಕೊಡಬೇಕು ಅಷ್ಟೇ". ತೊತ್ಯ ಗಟ್ಟಿಯಾಗಿ ನಿಂತ ಬಿಟ್ಟು, ಕಾಳ್ಯ ಬಾಣೋತನ ಕಿವಿಯ ನೋವೆಲ್ಲ ಮಾಯವಾಯ್ತು. "ಇದಪ್ಪ ಗಂಡಸ್ತನದ ಮಾತಂದ್ರ, ನಾಳೆ ಕುಲಪಂಚಾಯ್ತಿ ಸೇರಿಸಿ ಅದ್ರಾಗ ಮಾತಾಡಾನು." ಎದ್ದು ವಿಸಳಾವತನ ಹಿಂದೆ ಜಾರಿಕೊಂಡ.

ನಾಯಕ ಖುದ್ದಾಗಿದ್ದ ದೇಸು ತನ್ನ ತಮ್ಮನೆ ಕರೆದ ನ್ಯಾಯ ಪಂಚಾಯ್ತಿಯೊಳಗೆ ಏನನ್ನು ಮಾತಾಡದ ಸ್ಥಿತಿ ತಲುಪಿದ್ದ. ಅವನೆ ನೂರಾರು ಜನರಿಗೆ ಬುದ್ದಿ ಹೇಳೋನು ತನ್ನ ಮನೆಯೊಳಗೆ ಹಿಂಗಾದಾಗ ಅವನು, ಕಾರಬಾರಿ ಮತ್ತು ಡಾವೋ (ಹಿರಿಕ) ಇಬ್ಬರ ಮೇಲೆ ಹೆಚ್ಚಿನ ಜವಾಬ್ದಾರಿಯನ್ನ ಕೊಟ್ಟಿದ್ದ. ನ್ಯಾಯಕ್ಕೆ ಸುತ್ತೆಲ್ಲಾ ಡೇರೆಮಂದಿ ದೇಸು ಬುಕ್ಯಾನ ಹತ್ತಿರ ಬರುತ್ತಿದ್ದದ್ದು ಕಾರಬಾರಿ ಡಾವೋಗೆ ಗೊತ್ತಿತ್ತು. ಯಾವಾಗಲೂ ನಿಷ್ಠೂರವಾಗಿ ಸರಿಯಾದದನ್ನೇ ಮಾತಾಡುವ ದೇಸುಬುಕ್ಯಾ ನನ್ನ ಸರಿಯಾಗಿ ಇಕ್ಕಟ್ಟಿಗೆ ಸಿಗಾಕಿಸಲು ಕಾರಬಾರಿ ಮತ್ತ ಡಾವೋ ತೊತ್ಯಾನಿಂದ ಕಾಸು ಪಡೆದಿದ್ದರು. ಲಚ್ಮಿ ಹಾಸಿಗೆ ಹಿಡಿದಿದ್ದವಳು ತನ್ನ ಕುಲದ ಬಳ್ಳಿಯೊಂದು ಹೀಗೆ ತುಂಡರಿಸಿಕೊಂಡು ಹೋಗುತ್ತಿರುವುದನ್ನ ಸಹಿಸಿಕೊಳ್ಳಲಾಗದೆ ಸಂಕಟಪಡುತ್ತ, ಪಂಚರ ತೀರ್ಮಾನವಾದರೂ ಏನು ಎಂದು ತಿಳಿಯಲು ತಂಗಿಯ ಜೊತೆಗೆ ಬಂದು ಜುಲ್ಮಿಯಿಂದ ಕುಳಿತುಕೊಂಡಿದ್ದಳು. ಅವಳಿಗೆ ಒಳಗೊಳಗೆ ನೋವು ಆಗ್ತಿರೋದನ್ನ ಹೇಳಲು ಆಗದೆ ಚಡಪಡಿಸುತ್ತಿದ್ದಳು. ಕಾರಬಾರಿಯೇ ನಾಯಕನ ಸ್ಥಾನದಲ್ಲಿದ್ದಿದ್ದರಿಂದ. "ನೋಡ್ರಪ್ಪ, ನೀವೆಲ್ಲ ಪಂಚರು, ಇಲ್ಲಿ ಸೇರಿದ್ದಿರಾ, ಇದ್ರಾಗ ನಮ್ಮ ಡೇರೆಗಳ ಗುಂಪಿನ ನಾಯಕನೆ ಆದ ದೇಸುಭುಕ್ಯಾ ಕರಮತೋಟ್ ಖುದ್ದಾಗಿ ಪಿರ್ಯಾದುದಾರರಲ್ಲಿ ಒಬ್ಬನಾಗಿರುವುದರಿಂದ, ಅವರ ಸ್ಥಾನವನ್ನು ಹಾಗೆಯೇ ಬಿಟ್ಟು ಕಾರಬಾರಿ ಆದ ನಾನು ಮತ್ತು ಡಾವೊ, ಏನು ನಿರ್ಣಯ ತಗೋತಿವಿ ಅದೇ ಅಂತ್ಯ". ಎಲ್ಲರಿಗೂ ವಿಷಯವನ್ನ ಸ್ಪಷ್ಟಪಡಿಸಿದ. ಮಂದಿಗ ಏನೋ ಕರಾಮತ್ತು ನಡಿತಾಯಿದೆ ಅಂತ ತಿಳಿಯೋದಕ್ಕೆ ಹೆಚ್ಚು ಹೊತ್ತು ಹಿಡಿಯಲಿಲ್ಲ. ಆಯ್ತು ಈ ಮಕ್ಕಳಕೈಯಾಗ ಪಂಚಾಯ್ತಿ ಸಿಗ್ತಂದ್ರ ಮಂದಿ ಮಗ್ಗಲು ಮುರಿತಾರ ಅಂತೇಳಿ ಎಲ್ಲರೂ ಮಾತಾಡಿಕೊಳ್ಳತೊಡಗಿದರು. ತೊತ್ಯ ಎದ್ದು ತನ್ನ ಪಿರ್ಯಾದು ಹೇಳಿದ. "ನನಗೆ, ನನ್ನ ಪಾಲಿನ ಎತ್ತುಗಳು, ಮನಿಯೊಳಗಿರುವ ಬಂಗಾರದ ವರಹ, ಬೆಳ್ಳಿ ನಾಣ್ಯದೊಳಗೆ ಭಾಗಬೇಕು." ಅಂದವನೆ ಮೂಲೆಗೆ ಹೋಗಿ ಕುಳಿತುಕೊಂಡ. ಅವನ ತಾಯಿಗೆ ಮೈಯೆಲ್ಲಾ ಉರಿಯತೊಡಗಿತ್ತು. ಯಾವತ್ತು ಧನಿ ಎತ್ತಿ ಮಾತಾಡದವಳು, ಮೇಲೆದ್ದವಳೆ, "ಏಯ್, ಬೇವರ್ಸಿ ಎಲ್ಲಿದುಡದ ಇಟ್ಟಿದಿಯೋ ಅವನೆಲ್ಲಾ, ಹೋಗೆ ಡೇರೆಯೊಳಗ ನೋಡು ಒಟ್ಟಿದ್ರ ತಂಗೊಂಡಬಾ. ಎಷ್ಟು ವರ್ಷ ದುಡದಿಯಾ? ಏನ ವ್ಯಾಪಾರ ಮಾಡಿಯ. ದೇವರು ಕಣೋ ಅವನು, ಅಪ್ಪನ ಕಳೊಂಡು ಚಿಕ್ಕ ವಯಸ್ಸಿಂದ ಮನಿ ಜವಾಬ್ದಾರಿ ಹೊತ್ಕೊಂಡು ಜೀವತೇಯ್ತಿರೊ ದೇವರ ವಿರುದ್ಧ ಬಿದ್ದಿರೋ ನೀ ಏನು ಉದ್ದಾರ ಆಗಿಯ, ಸರ್ವನಾಶ ಆಗ್ತಿ ಹೋಗು. ನನ್ನವ್ವ ನಂತಾಯಿ ಗುಜಾಸತ್ತಿಯೊಳಗ ಸತ್ಯ ಇದ್ರ ನಿನ್ನ ನೋಡ್ಕೋಂತಾಳ. ಯಾಕಾರ ಹುಟ್ಟಿದ್ಯೋ ನನ್ನ ಹೊಟ್ಟಿ ಉರ್‍ಸಾಕ." ನೋವು ತಡಿಯಾಕ ಆಗದೆ ಕಣ್ಣೀರಿಡತೊಡಗಿದಳು. ದೇಸುಗ ತಡಿಯಾಕ ಆಗಲೇ ಇಲ್ಲ. "ಮಾಸಿ (ಚಿಕ್ಕಮ್ಮ) ಈಗೇನಾಯ್ತು ಅಂತ ಹೀಗೆ ದುಃಖ ಪಡ್ತಿದ್ದಿರಾ, ಅವನು ಮಾಡ್ತಿರೋದು ಸರಿಯಾಗಿದೆ. ಆ ದೇವರು ಅವನಿಗೆ ಜವಾಬ್ದಾರಿ ಹೊರುವ ಮನಸ್ಸು ಕೊಟ್ನಲ್ಲಾ ಸುಮ್ಮನಿರು. ಎಷ್ಟು ದಿನಾ ನಾನೆ ಎಲ್ಲಾದನ್ನು ನಿಭಾಯಿಸೋದು. ಅವನಿಗೂ ವ್ಯಾಪಾರ ಅಂದ್ರೇನು ಅಂತ ಗೊತ್ತಾಗಲಿ, ಸಮಾಧಾನ ಮಾಡ್ಕೊ,

ನಿನ್ನ ಕಣ್ಣಾಗ ನೀರ ಬರೋದನ್ನ ನಾನು ಸಹಿಸೊಲ್ಲ. ಯಾವತ್ತು ನಿನಗ ಈ ಸ್ಥಿತಿ ಬಂದಿರಲಿಲ್ಲ." ಅವನು ಮಾತಾಡದಾದ.

ತೊತ್ಯ ಬುಕ್ಯಾ ಕರಮ್‌ತೋಟ್, ಸಮನಾಗಿ ಎತ್ತುಗಳನ್ನು ಹಂಚಿಕೊಂಡ, ಚೂರುಪಾರು ನಾಣ್ಯಗಳನ್ನು ಪಡೆದು ಹುಮ್ಮಸ್ಸಿನಿಂದಲೆ ವ್ಯಾಪಾರ ಆರಂಭಿಸಿದ. ಆದರೆ ಅವನಿಗ ಅವನ ಮಾವ ಕಾಳ್ಯ ಬಾಣ್ಗೋತ್ ಮತ್ತು ಸಾಣುವಿಸಳಾವತ್ ಇಬ್ಬರ ಕೈಗೊಂಬೆಯಾಗಿದ್ದು, ಅವನ ಹೆಂಡತಿ ಮದಲು ಹೆಣ್ಣು, ನಂತರ ಸಾಲಾಗಿ ಐದಾರು ಹೆಣ್ಣು ಮಕ್ಕಳಿಗೆ ಜನ್ಮಕೊಟ್ಟು ಸುಸ್ತಾಗಿ ಹೋಗಿದ್ದಳು. ಕರಮತೋಟ್ ಕುಲ ಇಬ್ಭಾಗವಾದುದಕ್ಕೆ ಸಾಕ್ಷಿಯಾಗಿದ್ದ ಅವನ ತಾಯಿ ಮತ್ತು ದೊಡ್ಡಮ್ಮ ಅವನ ಬಗ್ಗೆ ಎಳ್ಳಷ್ಟು ಆಲೋಚನೆ ಮಾಡದಾಗಿದ್ದರು. ಅವರಿಗೆ ದೇಸುಬುಕ್ಯಾನೆ ಮುಖ್ಯವಾಗಿದ್ದ. ಏಕೆಂದರೆ, ನ್ಯಾಯವನ್ನ ಪ್ರತಿಪಾದಿಸುವ ಅಯ್ಯೋ ಅನ್ನುವವರಿಗೆ ಸಹಾಯ ಮಾಡುವ ಗುಣ ಅವನಲ್ಲಿತ್ತು. ಇಬ್ಬರು ಸಹೋದರಿಯರು ಸೋಮ್ಲುಬುಕ್ಯಾನ ಮದುವೆಯನ್ನ ಎದುರು ನೋಡುತ್ತಿದ್ದರು. ಹತ್ತು ಗಾವುದ ದೂರದ ಹೈದ್ರಾಬಾದ್ ಗಡಿ ಪ್ರದೇಶದೊಳಗಿದ್ದ ರಂಗ್ಯ ವಿಸಳಾವತ್ ಮಗಳು ಜಾನಕಿಯನ್ನ ನೋಡಿ ಮಾತುಕತೆ ಗಟ್ಟಿಮಾಡಿ ಬಂದಿದ್ದ. ಅವನ ತಾಯಿ ಲಚ್ಮಿಯ ಆರೋಗ್ಯ ದಿನೆ ದಿನೆ ಹದಗೆಡುತ್ತಾ ಇತ್ತು. ಸಂಸಾರ ದೊಡ್ಡದಾಗಿ ವ್ಯಾಪಾರ ಕಡಿಮೆಯಾಗುತ್ತಿದ್ದಂತೆ ದೇಸುನ ನೆಮ್ಮದಿ ಹಾಳಾಗಿತ್ತು. ತೊತ್ಯಾಹೊರಗೆ ಹೋದ ಮೇಲಂತು ವ್ಯಾಪಾರದ ಎತ್ತುಗಳ ಸಂಖ್ಯೆ ಕಡಿಮೆಯಾಗಿದ್ದೆ ದೊಡ್ಡವ್ಯಾಪಾರಗಳು ಕುದುರದಾಗಿದ್ದವು. ಅಲ್ಲೇ ಸಣ್ಣಪುಟ್ಟವುಗಳನ್ನ ಮಾಡುತ್ತ ಬದುಕಲು ಸಂಘರ್ಷವನ್ನೆ ಮಾಡತೊಡಗಿದ. ಅವನ ಅತ್ತೆ ರೂಪ್ಲಿ, ಹೆಂಡತಿ ಸೊಮ್ಲಿ ಜೀವನವಿಡಿ ಅವರ ಕಾಪಾಡಿಕೊಂಡು ಬಂದಿದ ಅವಳ ಅತ್ತಿಗೆ ಲಚ್ಮಿಗೆ ಏನು ಆಗಬಾರದಂತ ಗುಜಾಸತ್ತಿಗೆ ಹರಕೆ ಹೊತ್ತರು. ಸೇವಾಲಾಲ್ ಮಹಾರಾಜನಲ್ಲಿ ಬೇಡಕೊಂಡರು. ಲಚ್ಮಿ ಮಾತ್ರ "ಅಯ್ಯೋ ಯಾಕಿಂಗ ಹೆದರ್ತಿರಾ. ನಾನೇನು ಇಷ್ಟು ಬೇಗ ಸಾಯೋದಿಲ್ಲ. ನಂತಾಯಿ ಗುಜಾಸತ್ತಿಯ ಅನುಗ್ರಹ ನನ್ನ ಮ್ಯಾಲೈತೆ, ನನ್ನ ಸೋಮ್ಲುನ ಮದ್ವೆ ಮಾಡಿ ಅವನ ಮಕ್ಕಳನ್ನ ಆಡಿಸಿ". ಕಣ್ಣಿಂದ ನೀರು ಸುರಿಯೋದನ್ನ ಸೆರಗಿನಿಂದ ಒರೆಸಿಕೊಳ್ಳಲು ಹವಣಿಸಿದಳು. "ಅತ್ತಿಗೆ, ನಿನಗ ಏನು ಆಗಿಲ್ಲ ಯಾಕಿಂಗೆ ಗಾಬರಿಯಾಗ್ತಿಯ, ನೋಡು ನಾವದಿವಿ, ಸುಮ್ಮನಾಗು" ರೂಪ್ಲಿ ಧೈರ್ಯ ತುಂಬಿದಳು. ಮೂವರು ವಿಧವೆಯರು ಕೆಲಸಬಗಿಸಿ ಇಲ್ಲದೆ ದೇಸು ದುಡದಿದ್ದನ್ನ ಉಂಡು ವ್ಯರ್ಥಕಾಲ ಕಳತ್ತಿದ್ದಿವೇನೊ ಎಂಬ ಅಪರಾಧಿ ಭಾವ ಅವರಲ್ಲಿ ಆವರಿಸಿತ್ತು.

ಮಗನ ಮದುವೆ ಬಹಳ ಸರಳವಾಗಿಯೇ ಮಾಡಿದ. ಹುಡುಗಿಯ ತಂದೆ ರಂಗ್ಯಾವಿಸಳಾವತ್‌ನೂ ಕೂಡ ರಾಜಸ್ಥಾನದ ಗಡಿಯಿಂದಲೇ ವ್ಯಾಪರಕ್ಕೆ ಬಂದವನು. ಮೂಲದಲ್ಲಿ ಅಜ್ಜ ದೊಡ್ಡ ಶ್ರೀಮಂತನಾಗಿದ್ದ. ರಾಜಕೀಯ ಸ್ಥಿತ್ಯಂತರ ಮತ್ತು ವ್ಯಾಪಾರದಲ್ಲಿನ ಬದಲಾವಣೆಯಿಂದಾಗಿ ದೊಡ್ಡ ಪೆಟ್ಟು ಬಿದ್ದಿದ್ದರಿಂದಾಗಿ ಊಟ ಬಟ್ಟೆಗೆ ಕೊರತೆ ಇಲ್ಲದಂತೆ ಬದುಕಿದ್ದರು. ಹಾಗಾಗಿ ದೇಸು ಬುಕ್ಯಾನ ಸಂಬಂದ ಒಪ್ಪಿಕೊಂಡು ಮದುವೆ ಮಾಡಿಸಿದ್ದ. ಸೋಮ್ಲು ಬುಕ್ಯಾ, ಜಾನಕಿ ಮದುವೆ ಶಾಸ್ತ್ರಗಳು ಮುಗಿದು ದಿಬ್ಬಣ ಬಂದು ಹೋದ ಮೇಲೆ ಗುಜಾಸತ್ತಿಗೆ ಪ್ರಾರ್ಥನೆ ಸಲ್ಲಿಸಿ ಒಣಕೊಬ್ಬರಿ ಗಿಟಕು ನೈವೇದ್ಯ ಮಾಡಿ ಕೋಯ್ದು ತುಂಡು ಮಾಡಿ ಹುಡುಗರಿಗೆ ಹಿರಿಯರಿಗೆ ಹಂಚಿದ ಮೇಲೆ ಪರಿಪೂರ್ಣವಾಗಿತ್ತು. ದೇಸು ತಾಯಿಯ ಆಶೆ ತೀರಿಸಿದ ಖುಷಿಯನ್ನ ಅತ್ತೆಯೊಂದಿಗೆ ಹಂಚಿಕೊಂಡಿದ್ದ. ಲಚ್ಮಿಯ ಮುಖದಲ್ಲಿ ಗೆಲುವ

ಕಂಡಿತ್ತು. ಮನೆಯವರಿಗೆಲ್ಲಾ ಅತೀವ ಸಂತೋಷವಾಗಿತ್ತು. ಸೋಮ್ಲು, ಮಂಗ್ಲ್ಯಾ, ಅಪ್ಪನ ಜೊತೆಗೆ ವ್ಯಾಪಾರಕ್ಕೆ ನಿಂತ ಮೇಲೆ ಸ್ಥಿತಿ ಸುಧಾರಿಸಿತ್ತು. ದೇಸುಗೆ ಸೋಮ್ಲುನಿಗಿಂತ ಚಿಕ್ಕವನಾದ ಮಂಗ್ಲ್ಯಾನ ಮೇಲೆ ಹೆಚ್ಚು ಭರವಸೆ ಇತ್ತು. ಆದರೆ ಲೆಕ್ಕಾಚಾರ ಮಾತುಕತೆ, ಧೈರ್ಯದಲ್ಲಿ ಅವನ ಕೊನೆಯ ಮಗ ಚೊಕ್ಲ ಬುಕ್ಯಾಕರಮತೋಟ್ ಎಲ್ಲರನ್ನೂ ಮೀರಿಸುವಂತಿದ್ದು, ಚಾಪ್ಲ ಮಾತ್ರ ಪೆದ್ದು ಪೆದ್ದಾಗಿ ಊಟಮಾಡಿ ಹೇಳಿದಷ್ಟು ಕೆಲ್ಸ ಮಾಡಿಕೊಂಡಿದ್ದ. ಹುಡುಗಿಯರು ಒಬ್ಬರ ಹಿಂದೆ ಒಬ್ಬರು ಮದುವೆಗೆ ಬಂದು ನಿಂತಿದ್ದರು. ಮನೆಯ ಪ್ರತಿಯೊಬ್ಬ ಸದಸ್ಯರು ಒಂದಲ್ಲ ಒಂದು ಕೆಲಸದಲ್ಲಿ ತೊಡಗಿಕೊಂಡಿದ್ದರು. ಹಾಗಾಗಿ ದೇಸು ಬುಕ್ಯಾನ ಮೇಲಿನ ಒತ್ತಡ ಕಡಿಮೆಯಾಗಿತ್ತು. ಆದರೆ ವ್ಯಾಪಾರದಲ್ಲಿನ ಪೈಪೋಟಿಯನ್ನ ಕೆಲವರು ವೈಯಕ್ತಿಕವಾಗಿ ತೆಗೆದುಕೊಂಡು ಅವನ ಮೇಲೆ ಹಗೆತನ ಸಾಧಿಸುತ್ತಿದ್ದರು. ಹೊಡೆದು ಕಿವಿ ಕೇಳದ ಹಾಗೆ ಮಾಡಿದ್ದ ಕಾಳ್ಯಬಾಣೋತ್, ಅವನ ಅಳಿಯನ ಅವನತಿಗೆ ಕಾರಣ ನಾಗಿದ್ದಲ್ಲದೆ ಅಳಿಯನನ್ನ ಅವಾಗವಾಗ ಅವನ ಮೇಲೆ ಛೂ ಬಿಡುತಿದ್ದ. ದೇಸುನಷ್ಟೇ ಸಮನಾಗಿ ಸಂಪತ್ತಿನ ತೆಗೆದುಕೊಂಡು ಹೋಗಿದ್ದ ತೊತ್ಯ ಆರಂಭದಲ್ಲಿ ಹುರುಪಿನಿಂದಲೇ ವ್ಯವಹಾರ ಮಾಡಿದ, ಆದರೆ ಯಾರೋ ದೊಡ್ಡದೊಂದು ವ್ಯಾಪಾರಕ್ಕೆ ಕರೆದುಕೊಂಡು ಹೋದವರು ಕಾಸನ್ನೆನೊ ಕೊಟ್ಟರು. ದಾರಿನಡಕ್ಕೆ ಬಂದು ಕೊಟ್ಟ ನಾಣ್ಯಗಳೆನ್ನೆಲ್ಲಾ ಕಸಿದುಕೊಂಡು ಮಾಯವಾಗಿದ್ದರು. ಅದೇ ಬೇಸಿಗೆಯಲ್ಲಿ ಎತ್ತುಗಳಿಗೆ ಕಾಲುಬಾಯಿ ಜ್ವರ ಬಂದು ಕೆಲವು ಬಡಕಲಾಗಿ ಸತ್ತುಹೋದವು ಇನ್ನು ಕೆಲವು ಉಪಯೋಗಕ್ಕೆ ಬಾರದಾದವು. ತೊತ್ಯ ಬುಕ್ಯಾ ತಾನು ಮಾಡಿದಕ್ಕೆ ಸರಿಯಾಗಿಯೇ ಪಶ್ಚಾತ್ತಾಪ ಪಡತೊಡಗಿದ.

ದೇಸುಬುಕ್ಯಾ ಬುದ್ಧಿವಂತಿಕೆಯಿಂದ ಎತ್ತುಗಳಿಗೆ ಕೆಂಧೂಳಲ್ಲಿ ಓಡಿಸಿ ಅವನ್ನ ಸರಿಯಾದ ರೀತಿಯಲ್ಲಿ ದೇಕರಿಕೆ ಮಾಡಿ ಗುಣಪಡಿಸಿಕೊಂಡ. ಕೆಲವು ತೀರ ಸೊರಗಿ ಹೋದವುಗಳನ್ನ ಮಾರಿಬಿಟ್ಟ ಹೊಸ ಎತ್ತುಗಳನ್ನು ಖರೀಧಿಸಿದ. ಅವನ ಈ ಬೆಳವಣಿಗೆ ಕಂಡು ತೊತ್ಯ ಖುಷಿ ಪಟ್ಟಿದ್ದ. ಆದರೆ ಅವನನ್ನ ಆಟ ಆಡಿಸುತ್ತಿದ್ದ ಅವನ ಮಾವ ಮತ್ತೆ ಅವನ ಸ್ನೇಹಿತ ಏನಾದರೂ ಮಾಡಿ ದೇಸುನ ನೆಮ್ಮದಿ ಹಾಳು ಮಾಡಲೇ ಬೇಕೆಂಬ ಶಪತ ತೆಗೆದುಕೊಂಡ ಹಾಗಿತ್ತು. ಅಂತ ಕಾಣುತ್ತೆ ತೊತ್ಯನ ಕಿವಿ ತುಂಬಿದರು. "ನೋಡು, ನಿನಗ ಮೋಸಮಾಡಿ, ನಿಮ್ಮಪ್ಪ ದುಡದಿದ ಸಂಪತ್ತನ್ನ ಅವನು ಲಪಟಾಯಿಸಿಕೊಂಡು ಈಗ ಮೆರಿತವ್ನೆ, ನೀ ಮಾತ್ರ ಒಂದ ಮಾತು ಕೇಳದೆ ಕೆಲ್ಸಕ ಬಾರದವನಂತೆ ಬಿದ್ಕಂಡಿಯಾ". ಅವನ ಸಿಟ್ಟು ಕೆರಳಿಸುವ ಪ್ರಯತ್ನ ಮಾಡಿದ ಕಾಳ್ಯ ಬಾಣೋತ್. "ಸುಮ್ನೆ, ಬಂದು ಏನಮಾತಾಡಬೇಕಂತ ತಿಳಿದೆ ಮಾತಾಡ್ತಿರಾ, ನಮಣ್ಣ ಬುದ್ಧಿವಂತ, ಅವನು ವ್ಯಾಪಾರಗೊತ್ತಿರೋನು ನಿಮ್ಮಗಳ ಹಾಗೆ ನರಿಬುದ್ದಿಯವನಲ್ಲ. ಮತ್ತೊಮ್ಮೆ ಅವನ ವಿಷಯ ನನ್ನೆದುರು ಮಾತಾಡುವಾಗ ಭಾರಿ ಹುಷಾರಿಂದ ಮಾತಾಡಿ". ತಾನು ಮಾಡಿದ ತಪ್ಪಿಗೆ ಪಾಶ್ಚಾತ್ತಾಪ ಪಡುತ್ತಿರುವಂತೆ ಮಾಡನಾಡಿದ. ಅವನನ್ನ ಹೇಗೆ ಹಾದಿತಪ್ಪಿಸಬೇಕು ಎನ್ನುವುದರಲ್ಲಿ ಮಹಾನಿಷ್ಣಾತರಾಗಿದ್ದ ಇಬ್ಬರು ಅಷ್ಟಕ್ಕೆ ಬಿಡದೆ, "ಅಯ್ಯೋ, ಮೂರ್ಖ ನೀನು ಇವತ್ತು ಈ ಸ್ಥಿತಿಗೆ ಬರೋದಕ್ಕೆ ಅವನೆ ಕಾರಣ. ನಿನ್ನ ವ್ಯಾಪಾರ ಹಾಳಾಗೋದಕ್ಕೆ ಅವನೆ ನಿನ್ನ ಸಂಸಾರ ಬೀದಿಪಾಲು ಆಗೋದಕ್ಕೂ ಅವನೆ ಕಾರಣ". ಅವನೊಳಗಡೆ ನಡೆಯುತ್ತಿರುವ ತಾಕಲಾಟವನ್ನು ನೋಡಿ ಸರಿಯಾದ ಸಮಯಕ್ಕೆ ಸರಿಯಾದ ರೀತಿಯ ಮಾತುಗಳಿಂದ ಕೆರಳಿಸಿ ಅವನು ಮಾನಸಿಕವಾಗಿ ದೇಸುಬುಕ್ಯನ ಕೂಡ ಜಗಳಕ್ಕಿಳಿಯುವಂತೆ ಮಾಡಿಯೇ ಕೈ ಬಿಟ್ಟರು. ತೊತ್ಯ ಕಂಠಮಟಕುಡಿದವನೆ ಸೀದಾ ಅವನ ಅಣ್ಣ ದೇಸು ಮನೆಗೆ ಹೋಗಿ ಜಗಳಕ್ಕೆ ನಿಂತಿದ್ದ.

ತೊತ್ಯಾನ ಕಿರುಕುಳ ದಿನೆ ದಿನೆ ಹೆಚ್ಚಾಗತೊಡಗಿತು. ದೇಸು ಏನೋ ವಿಷಯವನ್ನ ಸರಿಯಾಗಿ ಗ್ರಹಿಸಿ ಅವನ ಗುಣವನ್ನ ಹತ್ತಿರದಿಂದ ಬಲ್ಲವನಾಗಿದ್ದರಿಂದ ಬ್ರಾ ಎನ್ನದೆ ಸುಮ್ಮನಾಗಿದ್ದ. ಆದರೆ ಯೌವ್ವನಕ್ಕೆ ಬಂದಿರುವ ನಾಲ್ಕು ಜನ ಮಕ್ಕಳು ಕೆಟ್ಟ ಕೊಳಕ ಮಾತನ್ನಾಡಿದರೆ ಎಷ್ಟು ದಿನಾಂತ ಸಹಿಸಿಕೊಂಡಾರು, ಚೊಕ್ಲ ಅವನ ಅಜ್ಜಿ ಎದುರಿಗೆ ತೊತ್ಯನ ವಿರುದ್ಧ ಮಾತಾಡಿದ್ದ." "ಅರೇ, ಅವನು ನಿನ್ನ ಚಿಕ್ಕಪ್ಪ ಕಣೋ ಮಗ, ಏನೋ ತಿಳಿಯದೆ ಮಾತಾಡ್ತಾನ, ಸುಧಾರಿಸಿಕೋ ಬೇಕು ಕಣಪ್ಪ. ನೀವು ಒಂದೇ ರಕ್ತ ಹಂಚಿಕೊಂಡು ಬೆಳದೋರು. ಯಾವಾತು, ಇಂಥ ಆಲೋಚನೆ ಮಾಡಬೇಡ. ನಿಮ್ಮಪ್ಪ ಇಷ್ಟು ದಿನಗಳಿಂದ ಅವನು ಬೊಯ್ಯುತ್ತಿದ್ದರು ಯಾವತ್ತು ನೆನ್ನೆದುರು ಬಂದು ಮಾತಾಡಿಲ್ಲ ಹೋಗು ನನ್ನ ಹ್ವಾರೆ ನೋಡ್ಕ" ದ್ವೇಷ ಬೆಳೆಯುವ ಮುಂಚೆನೆ ಚಿವುಟಿ ಹಾಕಲು ನೋಡಿದಳು. ಆದರೆ ತೊತ್ಯನ ತಾಯಿಗ ಬಾಳ ನೋವಾಗಿತ್ತು. "ಅಕ್ಕ, ಎಷ್ಟು ಅಂತ ನನ್ನ ಮಗನ್ನ ಸೆರಗಿನೊಳಗೆ ಹಾಕ್ಕೊಂಡು ಕಾಪಾಡ್ತಿ, ಎಂತ ನೀಚಹುಟ್ಟಿದ ನನ್ನ ಹೊಟ್ಟೊಯೊಳಗ ಅಂತೀನಿ. ನನಗಂಡ ರಾಮನ ಹಿಂದೆ ಕಾಡಿಗ ಹೊಂಟ ಲಕ್ಷ್ಮಣನಂಗ ಸದಾ ಅಣ್ಣನ ಸೇವೆ ಮಾಡಿಯೇ ತೀರ್‍ಕೊಂಡ್ರು, ಈ ಬೇವರ್ಸಿ ಯಾವತ್ತು ನೆಮ್ಮದಿ ಬದಕು ಬದಕಾಕಬಿಡುತ್ತಿ" ಸಾವಿ ಸೆರಗಿನಿಂದ ಕಣ್ಣೀರು ಒರೆಸಿಕೊಳ್ಳತೊಡಗಿದಳು.

"ಏಯ್, ಸಾವು, ಹುಚ್ಚ ಆಗಿ ಏನು? ತೊತ್ಯ ನನ್ನ ಮಗ, ಯಾವತ್ತಾರು ಭಿನ್ನ ಭೇದ ಮಾಡಿನೇನು. ದೇಸು ಏನಾರು ಆಡಿದನೇನು, ಅವ, ನಮ್ಮ ರಕ್ತ, ಈಗ ನಡಕ ಯಾರದೊ ಮಾತಕೇಳಿ ಹಂಗಾಡ್ತಾನ, ಬುದ್ಧಿ ಬಂದವ್ಯಾಲ ನೆಟ್ಟಿಗಾಗ್ತಾನ ಬಿಡು ನೀ ಯಾಕ ಸಂಕಟಪಡ್ತೀಯಾ" ಸಮಾಧಾನಮಾಡಿದಳು ಲಚ್ಮಿ. "ಯಾವಾಗ ಸುಧಾರಿಸ್ತಾನ? ಆಂ, ಯಾವಾಗ,? ನಾ ಸತ್ತಮ್ಯಾಲ, ಅವನ ಬಾಯ್ಯಾಗ ನನ್ನ ಹಾಟ್ ಹೊಯ್ಯ, ಏನ ಪಾಪಕ ಹುಟ್ಟಿದ್ನೊ, ನನ್ನ ಹೊಟ್ಟೆಉರ್‍ಸಾಕ ಅತ್ಲಾಗ ಅವರು ಸತ್ತದಿನಾನ ಅವನ ಕೂಡ ಚಿತೆ ಏರಿದ್ರೆ ಪಾಡಿತ್ತು ನೋಡು. ಇವತ್ತು ಈ ದಿನನಾರು ನೋಡೋದ ಆಗ್ತಿರಾಕಿಲ್ಲ". ನಿಜವಾಗಿಯೂ ಅವಳು ಬಹಳ ನೊಂದು ಕೊಂಡಿದ್ಲು. ಲಚ್ಮಿ ಸಾವಿಗೆ ಸಮಾಧಾನ ಹೇಳುವುದು ಹೇಗೆಂದು ತಿಳಿಯದೆ ಒದ್ದಾಡತೊಡಗಿದಳು.

ಕುಡಿಸಿ, ಕುಡಿಸಿ ತೊತ್ಯ ದೇಸುನ ಬದ್ಧ, ವೈರಿಯಂತೆ ಮಾಡಿದ್ದರು ಕಾಳ್ಯ ಮತ್ತ ಸಾಮು. ಅವನು ಬೇಡವೆಂದರೂ ಅವನ ಇಡಿ ಕುಟುಂಬವನ್ನ ದ್ವೇಷಿಸುವಂತಾಗಿತ್ತು. ಜಗಳಕ್ಕೆ ದಿನವನ್ನ ಗೊತ್ತುಪಡಿಸಿ, ವ್ಯಾಪಾರದಲ್ಲಿ ಬಗ್ಗುಬಡಿಯಲಿಕ್ಕೆ ಆಗದಿದ್ದರೂ ಅವನನ್ನ ದೈಹಿಕವಾಗಿ ಹಿಂಸೆ ನೀಡಬೇಕೆಂದು ಕಾಳ್ಯ ಮತ್ತು ಸಾಮು ವಾದವಾಗಿತ್ತು. ಅದರಲ್ಲೂ ದೇಸು ಬಗ್ಗೋದಿಲ್ಲಾ ಅಂತಗೊತ್ತಿದ್ದರೂ ಒಂದು ಪ್ರಯತ್ನ ಯಾಕೆ ಮಾಡಬಾದು ಅಂತೇಳಿ ಈ ಬಾರಿ ಸರಿಯಾಗಿಯೇ ಸಜ್ಜಾಗಿದ್ದರು. ಸಾಲದಕ್ಕೆ ಒಂದಿಷ್ಟು ಮಂದಿಗೆ ಕುಡಿಸಿ ತಿನಿಸಿ ಕರ್‍ಕೊಂಡು ಬಂದಿದ್ದರು. ದೇಸು ಯಾವುದನ್ನ ತಲೆ ಕೆಡಸಿಕೊಳ್ಳದೆ ಸೋಮ್ಲನ ಹೆಂಡತಿ ಜಾನಕಿ ಪ್ರಸವ ವೇದನೆ ಕಾಣಿಸಿಕೊಂಡಿದಕ್ಕೆ ಒದ್ದಾಡತೊಡಗಿದ್ದ. ಡೇರೆಯೊಳಗೆ ಮೂವರು ಅನುಭವಸ್ಥ ಹಿರಿಯರು ಇದ್ದಿದಕ್ಕೆ ಸ್ವಲ್ಪ ಸಮಾಧಾನದಿಂದ ಹೊರಗಡೆ ಬೇವಿನಮರದ ಕಟ್ಟೆಮೇಲೆ ಕುಳಿತಿದ್ದ. ತೊತ್ಯ ಕುಡುದು, "ಲೇ ದೇಸು, ನನಗೆ ಮೋಸ ಮಾಡಿದೆ, ನೀ ಉದ್ದಾರ ಆಗೋದಿಲ್ಲ ಮಗನೆ, ಕೆಟ್ಟ ಎತ್ತುಗಳನ್ನು ನನಗೆ

ಕೊಟ್ಟೆ ಒಳ್ಳೆವನ್ನ ನೀ ಇಟ್ಕೊಂಡೆ. ಕಡಮಿ ವರಹಗಳನ್ನ, ಬೆಳ್ಳಿ ನಾಣ್ಯಗಳನ್ನು ನನಗೆ ಕೊಟ್ಟೆ ಬಂಗಾರ ನೀ ಇಟ್ಕೊಂಡೆ, ಯಾರಪ್ಪನವು, ಹೇಳಲೇ ಬೋಳಿಮಗನೆ" ಅವನ ಕತ್ತು ಪಟ್ಟಿಹಿಡಿದ, ಮೈಮೇಲೆ ಬಿದ್ದ, ಏಕಾಏಕಿ ಮೈಮೇಲೆ ಬಿದ್ದ, ತೊತ್ಯ ಕುಡದಾನಂತ ಸಮಾದಾನದಿಂದಲೆ "ಲೇ ತಮ್ಮ, ಮನಿಯಾಗ ನನ್ನ ಸೊಸೆ ಒದ್ದಾಡ್ತಾಳ. ಸುಮ್ಮನೆ ಹೋಗು, ನಾಳೆ ಮುಂಜಾನೆ ಲೆಕ್ಕಚಾರ ಮಾಡನ", ಬಾಯಾನ ಮಾತು ಬಾಯಾಗಿ ಇದ್ದಂಗೆ ಐದಾರ ಮಂದಿ ಬಡಗಿ ತಗೊಂಡು ಅವನನ್ನ ಹೊಡೆಯುವುದಕ್ಕೆ ಸುರುಮಾಡಿಕೊಂಡ್ರು. ಡೇರೆ ಆಚೆ ಇಚೆ ಕುಂತಿದ್ದ ಸೋಮ್ಲ ಚೊಕ್ಲ, ಮಂಗ್ಲ್ಯಾ, ಚಾಪ್ಲ ಓಡಿಬಂದವರೆ ಕೈಗೆ ಸಿಕ್ಕದನ್ನ ತಗೊಂಡು, ಜಗಳಕ ನಿಂತ್ರು. ಕುಡದಿದ್ದ ತೊತ್ಯಾಗ ಯಾರ ಹೊಡದ್ರೋ ಏಟು ಸರಿಯಾಗೆ ಬಿದ್ದು ತಲೆಗೆ ಗಾಯವಾಗಿ ಮೂರ್ಛೆ ಹೋಗಿದ್ದ. ದೇಸು ಮತ್ತ ಅವನ ಮಕ್ಕಳಿಗೆ ಕತ್ತಲೊಳಗೆ ಯಾರ ಹೊಡದ್ರುಂತ ಗೊತ್ತಾಗಲೇ ಇಲ್ಲ. ಆದ್ರ ತೊತ್ಯನ ಹಿಂದೆ ಯಾದಾರಂತ ಗೊತ್ತಿತ್ತು. ಹಿಂಗಾಗಿ ಬಿದ್ದ ಪೆಟ್ಟುಗಳಿಗೆ ಅರಿಶಿಣಪುಡಿ ಹಚ್ಕೊಂಡು ಪಟ್ಟಿಕಟ್ಟಿಕೊಂಡು ಸೋಮ್ಲನ ಹೆಂಡತಿ ಗಂಡು ಮಗನಿಗೆ ಜನ್ಮಕೊಟ್ಟಿರೋ ಖುಷಿಯನ್ನ ಆಚರಿಸೋದಕ್ಕೆ ಹೊಂಟ್ರು.

ತೊತ್ಯ ಹೆದರಿ ಓಡಿ ಹೋಗಿರಬಹುದಂತ ದೇಸು ಅವನ ಆಲೋಚನೆಯನ್ನೇ ಬಿಟ್ಟಿದ್ದ. ಆದರೆ ಮುಂಜಾನೆ ಬೆಳಕಹರಿಯುತ್ತಿರುವಾಗಲೇ ಅವನ ಕೈಯೊಳಗೆ ಆಡಿ, ಅವನ ಹಿಂದೆ ಮುಂದೆ ತಿರುಗಾಡುತ್ತಿದ್ದವನು ಕೊಲೆಯಾಗಿದ್ದ. ಕುಡಿದು ತೇಲಾಡುತ್ತಿದ್ದ ತೊತ್ಯನ ಮೈಮೇಲೆ ಪ್ರಜ್ಞೆನೆ ಇರಲಿಲ್ಲ. ಯಾರು ಹೊಡದ್ರು ಆನ್ನೋದು ಯಾರಿಗೂ ತಿಳಿಯಲಿಲ್ಲ, ಜಗಳದ ಆರಂಭಕ್ಕೆ ಅವನು ಬಾಯಿ ಮಾಡಿದ, ದೇಸುನ ಮಕ್ಕಳು ಓಡಿಬಂದ್ರು ತಳ್ಳಾಟನಡೀತು. ಅದೇ ಸಂದರ್ಭದ ಉಪಯೋಗತಗೊಂಡು ದೇಸುನ ಹೊಡೆಯೋ ಸಮಯದಾಗ ಅವನ ತಲಿಗ ಸರಿಯಾಗಿ ಹೊಡದು ನೆಲಕ್ಕ ಉರುಳಿಸ್ಯಾರ. ತಲಿಯಿಂದ ರಕ್ತ ಸೋರಿ ತೊತ್ಯ ಮುಂಜಾನೆ ಹೆಣವಾಗಿದ್ದ. ಮಂದಿ ನಜರಿಗ ದೇಸು ಮತ್ತು ಅವನ ಮಕ್ಕಳ ಕೊಲೆಮಾಡ್ಯರಂತ ಆತು. ಅದರ ಅದರ ಹಿಂದಿನ ಒಳಸಂಚು ಮಾಡಿದ ಮಂದಿ ಹೊತ್ತಾರೆ ಡೇರೆ ಬಿಟ್ಟು ಓಡಿಹೋಗಿದ್ರು. ಸಾವಿ ನಿರ್ಲಿಪ್ತಳಾಗಿದ್ದಳು. ತನ್ನ ಮಗ ತೊತ್ಯನಿಗಿಂತ ಹೆಚ್ಚು ದೇಸುನ ಪ್ರೀತಿಸುತ್ತಿದ್ದಳು. ಅವನು ಮನಿಬಿಟ್ಟು ಹೊರಗ ಹೋದಾಗಿನ ಎಲ್ಲಾ ವಿದ್ಯಾಮಾನಗಳನ್ನು ಬಲ್ಲವಳಾಗಿದ್ದರಿಂದ ದೇಸುನೆ ತನ್ನ ಮಗನ್ನ ಕೊಂದಾನಂತ ಅವಳ ಮನಸ್ಸಿಗ ಅನಿಸಲಿಲ್ಲ. ಆದ್ರ, ಅವಳ ಅಕ್ಕ ಲಚ್ಮಿಗ, ತನ್ನ ಕುಟುಂಬದವರ ಹಿಂಗ ಹೊಡದಾಡಿ ಸಾಯೋದಂದ್ರ, ತೊತ್ಯಾನ ಹೆಣನ, ಅವನ ಡೇರೆಗೆ ಒಯ್ಯದೆ ತನ್ನ ಡೇರೆಗೆ ತರಿಸಿದ ದೇಸು. ದೊಡಮ್ಮ, ದೊಡಮ್ಮ ಅಂತ ಸೆರಗುಹಿಡಿದು, ತಾಯಿ ಹತ್ರ ಹೋಗದೆ ಬೆಕ್ಕು ಹಾಲಿಗಾಗಿ ಕಾಲ ಬುಡಕ್ಕೆ ಸುತ್ತರಿಯೋ ಹಾಗೆ ಸುತ್ತುತ್ತಿದ್ದ ತೊತ್ಯ ಮೌನವಾಗೇ ಮಲಗಿರುವುದು ಅವಳಿಂದ ನೋಡಾಕ ಆಗಲಿಲ್ಲ. "ಯಾಕ ಮಗ ತೊತು, ಯಾಕಿಷ್ಟೊತ್ತು ಮಲಗಿಯಾ, ಏಳು, ಅಗ ನೋಡು ನಿಮ್ಮಪ್ಪ ಥಾವು ಬಂದ, ದೊಡ್ಡಪ್ಪ ಬಂದ, ಅಣ್ಣಬಂದ, ಎಳಲೇ ಮಗ ಏಳಮ್ಮ ನನ ಜಾಣಮರಿ", ಒಡಲಾಗಿನ ಕಿಚ್ಚು ತಡಿಯಾಕ ಆಗದ ತಾಂಡದ ಮಂದಿ ಗೋಳೋ ಅಂತಿದ್ರು, ದೇಸು ಎಲ್ಲೋ ಮೂಲಿಯೊಳಗ ತಾನುಮಾಡದ ತಪ್ಪಿಗೆ ಅಪರಾಧಿಯಂತೆ ಮಾರಿ ಮುಚ್ಕೊಂಡಿದ್ದ. ಏನು ಮಾಡುವುದಕ್ಕೂ ಕೈಕಾಲು ಆಡದೆ ಒದ್ದಾಡುತ್ತಿದ್ದ ಹೈದ್ರಾಬಾದ್ ನಿಜಾಮರಿಗೆ ಸುದ್ದಿ ಹೋದ್ರ ದೇಸು ಕುಟುಂಬಕ್ಕೆ ನೆಣ್ಣಾಗುವುದು ದಿಟವಾಗಿತ್ತು.

ಅಥವಾ ಸ್ಥಳಿಯ ಚಿತ್ರದುರ್ಗದ ನಾಯಕರಿಗೇನಾರು ತಿಳಿದರು ಅವನಿಗೆ ತೊಂದರೆ ಅಂತ ತಿಳಿದ ತಾಂಡದ ಮಂದಿ ದೇಸುನ ಬಗ್ಗೆ ಗೊತ್ತಿದ್ದರಿಂದ ಸುದ್ದಿಯನ್ನ ಹೊರಗೆ ಬಿಡದೆ ಮುಚ್ಚಿ ಹಾಕುವ ಪ್ರಯತ್ನ ಮಾಡಿದರು.

ತಾಯಿ ಕರಳು ಮಗ ಎಷ್ಟೆ ದುಷ್ಟನಾಗಿದ್ರು ಕಣ್ಣೆದುರಿಗೆ ಇದ್ನಲ್ಲಾಂತ ಸಂತೋಷವಾಗಿದ್ದ ಸಾವಿಗೆ ಅವನಿಲ್ಲ ಅಂತ ನಂಬುವುದು ಜಡವಾಗಿತ್ತು. ಅವಳ ವಂಶ ಹೀಗೆ ನಿರ್ವಂಶವಾಗುತ್ತೆ ಅಂತೇಳಿ ನಂಬಿರಲಿಲ್ಲ. "ಅಯ್ಯೋ ದೇವರೆ, ಯಾಕಾರ ಬದುಕಿಸಿಯಪ್ಪ ಈ ಕೆಟ್ಟ ಗಳಿಗೆ ನೋಡಾಕ. ನನ್ನ ವಂಶಾನೆ ನಿರ್ವಂಶ ಆಯ್ತು. ಯಾರನ್ನ ಕೇಳಲಿ, ಯಾರಿಗ ಹೇಳಲಿ," ಗೋಳಾಡುತ್ತಿದ್ದಳು. ಅವಳ ದುಃಖಕ್ಕೆ ಕೊನೆಯೆ ಇಲ್ಲದಾಗಿತ್ತು. ಅವನು ಡೇರೆ ಬಿಟ್ಟು ದೂರದಲ್ಲಿ ವಾಸಿಸಲು ಹೆಂಡತಿ ಹಿಂದೆ ಹೋದಾಗಲೇ ಅವಳಿಗೆ ಅನುಮಾನವಿತ್ತು. ಹಾಗಾಗಿ ಅವನ ಕುರಿತು ಯೋಚನೆನೆ ಬಿಟ್ಟಿದ್ದಳು. ತೊತ್ಯನಿಗೆ ಮಕ್ಕಳಾಗಿದ್ದು ಕೂಡ ಬಂದು ಹೇಳಿರಲಿಲ್ಲ. ತೊತ್ಯಾನ ಹೆಂಡತಿ ಚೌಲಿ ಒಂದು ಗಂಡು, ಹೆಣ್ಣು ಹುಡುಗಿಯರನ್ನ ಕಟ್ಕೊಂಡು ಗಂಡನ ಕಳೆಬರಹದ ಹತ್ತಿರ ಬಂದು ಅಳತೊಡಗಿದಳು. ಅವಳಿಗೊಬ್ಬಳಿಗೆ ಮಾತ್ರ ಎಲ್ಲಾ ಸತ್ಯ ಗೊತ್ತಿತ್ತು. ಹಾಗಾಗಿಯೇ ಒತ್ತಾಯದಿಂದ ತಡೆಹಿಡಿದಿದ್ದ ಸಾಮುನ ಮಂದಿಯಿಂದ ತಪ್ಪಿಸಿಕೊಂಡು ಓಡಿಬಂದಿದ್ದಳು. ಸ್ವತಃ ತಂದೆ ಅಳಿಯನನ್ನು ಕೊಲೆ ಮಾಡುವ ನೀಚಮಟ್ಟಕ್ಕೆ ಇಳಿಯಬಹುದು ಅಂತ ಅಂದುಕೊಂಡಿರಲಿಲ್ಲಾ. ಮುಂದೆ ತನಗೆ ಬಂದು ಒದಗಬಹುದಾದ ಸ್ಥಿತಿಯನ್ನ ನೆನಪು ಮಾಡಿಕೊಂಡ ಚೌಲಿ ಹೇಗಾದರೂ ಮಾಡಿ ಅವರ ಹಿಂದೆ ಬಂದ್ರ ಏನೋ ಒಂದಾದಿತು ಅಂತ ಬಂದಿದ್ಲು. ಅವಳ ಅತ್ತೆ ಸಾವಿಗ ತನ್ನ ಮೇಲೆ ಸಿಟ್ಟಿದೆ ಅಂತ ಗೊತ್ತಿತ್ತು, ಮಗನ ಸಾವಿಗೆ ತಾನೇ ಕಾರಣ ಅಂತನೂ ಅವರು ತಿಳ್ಕೋಂಡಾರ. ಆದ್ರ ಅಸ್ಥಿತ್ವವೇ ಇಲ್ಲದ ಅವಳಾದರೂ ಏನು ಮಾಡಾಕ ಸಾಧ್ಯ. ಯಾರೋ ಮಾಡಿದ ಸಂಚಿಗೆ ಯಾರೋ ಬಲಿಪಸು ಆದರು. ಚೌಲಿ ಎಲ್ಲ ಸತ್ಯ ಹೇಳಿ ಬಿಡ್ತಾಳಂತ ಆತಂಕಗೊಂಡಿದ್ದ ಸಾಮು ಮತ್ತ ಕಾಳ್ಯ ಹೆಂಗಾನ ಮಾಡಿ ಚೌಲಿಯನ್ನ ಮುಗಿಸಿ, ಅವಳ ಎಲ್ಲಾ ಮಕ್ಕಳನ್ನು ಕೊಲೆಮಾಡುವ ಸಂಚು ಹೂಡಿದ್ದರು. ಆದರೆ ದೇಸು ಚಾಣಾಕ್ಷ ಅಂತ ಅವರಿಗೆ ಗೊತ್ತಾಗಲೇ ಇಲ್ಲ. ಚೌಲಿಯನ್ನ ಮುಂದೆ ಬಿಟ್ಟು ಆಟ ಆಡುವ ಯೋಜನೆಯೊಂದನ್ನ ಹಾಕಿಕೊಂಡಿದ್ದ. ತೊತ್ಯನ ಸಾವಿಗೆ ದೇಸುನೆ ಕಾರಣ ಅಂತ ಮಂದಿ ನಂಬಿದ್ದರು. ಹಾಗೆಯೇ ನಂಬಲಿ ಎಂದು ಅವನು ಸುಮ್ಮನಾಗಿದ್ದು ಡೇರೆಯ ಮಂದಿಗೆಲ್ಲಾ ಸತ್ಯ ಗೊತ್ತಿತ್ತು. ಹಾಗಾಗಿಯೇ ಎಲ್ಲರೂ ಒಟ್ಟಾಗಿ ಕಟ್ಟಿಗೆ ಕಡಿದು ಸುದ್ದಿ ಹೊರಗಡೆ ಹೋಗಿ ಹೈದ್ರಾಬಾದ್‌ನೋ, ಇಲ್ಲ ಸ್ಥಳೀಯ ಪಾಳೆಗಾರರಿಗೆ ಮುಟಿ ರಾದ್ಧಾಂತ ಆಗುವ ಮುನ್ನ ಅಗ್ನಿ ಸ್ಪರ್ಶಮಾಡುವ ಸಿದ್ಧತೆ ಮಾಡಿದರು. ತೊತ್ಯಾನ ಎರಡು ವರ್ಷದ ಮಗ ರೇಖ್ಯಾ ಬುಕ್ಯಾಕರಮತೊಟ್ ತಂದೆಯ ಚಿತೆಗೆ ಬೆಂಕಿ ಇಟ್ಟಿದ್ದ. ಲಚ್ಮಿ, ಸಾವಿಗೆ ತೊತ್ಯ ಸತ್ತ ದುಃಖಕ್ಕಿಂತ ವಂಶಬೆಳಗೋಕೆ ರೇಖ್ಯಾ ಮತ್ತು ನಾಕು ಹುಡುಗಿಯರು ಹುಟ್ಟಿರೋದು ಖುಷಿ ತಂದಿತ್ತು. ಇಬ್ಬರು ಅಜ್ಜಿಯಂದಿರೊಟ್ಟಿಗೆ ರೇಖ್ಯಾ ಕಾಳಿ ಆಡತೊಡಗಿದರು. ಚೌಲಿ ಅವರೊಂದಿಗೆ ಇರುವುದಾಗಿ ಹೇಳಿದಳು. ಆದರೆ ಕಾಳ್ಯ ಬಾಣ್ಣೋತ್ "ನನ್ನ ಮಗಳನ್ನ ಕಳಸೋದಿಲ್ಲಾಂದ್ರೆ ನಾನು, ಹೈದ್ರಾಬಾದ್ ನಿಜಾಮರಿಗೆ ದೂರು ಕೊಡ್ತೀನಿ" ಅಂದ ದೇಸು ಸೌಮ್ಯವಾಗಿಯೇ, ಸಂಯಮದಿಂದ "ನೋಡ ಮಾವ, ನಿನ್ನ ಮಗಳು, ನಮ್ಮ ಸೊಸೆ, ಅಕಿ ಅಲ್ಲಿದ್ರೂ ಆಟೆ, ಇಲ್ಲಿದ್ರು ಆಟೇಯ ಸಂತೋಷದಿಂದ ಬಂದ್ರ ಕರ್ಕೊಂಡು ಹೋಗು, ನಮ್ಮದೇನು

ಅಭ್ಯಂತರಿಲ್ಲ. ಆದ್ರ ನಮ್ಮ ವಂಶದ ಕುಡಿಗಳಾದವಲ್ಲ, ಅವು ನಮ್ನ ಸಂಬಂಧಪಟ್ಟವು ಅವಕ್ಕೇನಾದರೂ ಕೈ ಹಚ್ಚಿದ್ರ ಒಬ್ಬಬ್ರೊನ ತಲಿನ ತಗಿತೀನಿ"ಖಡಾಕಂಡಿತವಾಗಿಯೇ ಹೇಳಿದ. "ಅದೆಂಗ ಇಟ್ಕಂತೀಯಾ ನಾನು ನೋಡೆ ಬಿಡ್ತೀನಿ" ಅಂದವನೆ ಅಂಗಿಕೊಡವಿಕೊಂಡು ಹೊರಗಡೆ ಓಡಿದ್ದ.

ದೇಸುಗೂ ಎಲ್ಲವೂ ವಿಚಿತ್ರವಾಗಿದ್ದವೂ, ತೊತ್ಯ ಡೇರೆ ಬಿಟ್ಟುಹೋಗಿ ಆರೇಳುವರ್ಷಗಳೆ ಆಗಿದ್ದವು. ಅವನಿಗೆ ಮಕ್ಕಳಾಗಿದ್ದ ಕೂಡ ಸುದ್ದಿಮಾಡದಂತೆ ನೋಡಿಕೊಂಡಿದ್ದ ಕಾಳ್ಯಬಾಣ್ಣೋತ್. ಯಾಕೆ ಮನುಷ್ಯನ ಮನಸ್ಸಿನ ತುಂಬ ವಿಷವೆ ತುಂಬಿಕೊಂಡಿರುತ್ತದೆ ಅವನು ಒಂದುಗಳಿಗೆ ವಿಚಲಿತನಾಗಿದ್ದು ಸ್ವತಃ ಮಗಳು, ಅಳಿಯ ಮೊಮ್ಮಕ್ಕಳು ಎನ್ನುವ ಕಿಂಚಿತ್ತು ಆಲೋಚನೆ ಮಾಡದೆ ಎಲ್ಲರ ಸಂಹಾರಕ್ಕೆ ಮುಂದಾಗಿದ್ದ ಅವನ ನೀಚತನಕ್ಕೆ ದೇಸು ಬುಕ್ಯಾನಿಗೆ ಅಸಹ್ಯವೆನಿಸಿತು. ಆದರೆ ತನ್ನ ತಮ್ಮನನ್ನ ಬಲಿತಗೊಂಡದ್ದು ಒಳಗೊಳಗೆ ಅವನ ಕ್ರೌರ್ಯ ಹೆಚ್ಚಾಗುವಂತೆ ಮಾಡಿತ್ತು. ಸೇಡಿಗೆ ಸರಿಯಾದ ಸಮಯವನ್ನ ಕಾಯತೊಡಗಿದ್ದ.

ಮನೆ ತುಂಬ ಮೊಮ್ಮಕ್ಕಳು ಆಟ ಆಡಿ ಇಬ್ಬರು ಅಜ್ಜಿಯಂದಿರ ಸಂತೋಷವನ್ನ ಹೆಚ್ಚಿಸಿದರು. ಬಹಳ ವರ್ಷಗಳಿಂದ ಕಾಯಿಲೆಯಿಂದ ಕೃಷಳಾಗಿದ್ದ ಲಚ್ಮಿ ಇದ್ದಕ್ಕಿದ್ದಂತೆ ಹಾಸಿಗೆ ಹಿಡಿದಳು. "ಯಾ, ಎ. ಬಾ" (ಅಮ್ಮ, ಅಪ್ಪ) ಎರಡೆ ಶಬ್ದಗಳು. "ಲೇ ಮಗ ಸೋಮ್ಲು, ನಿಮ್ಮಪ್ಪ," ಮಾತುಬರದಾಗಿದ್ದವು ಯಾವುದೋ ವ್ಯಾಪಾರದ ಸಂಬಂದಿ ಐವತ್ತು ಮೈಲಿದೂರ ಕುದುರೆ ಏರಿ ಹೋಗಿದ್ದ ದೇಸುಗೆ ಸುದ್ದಿ ತಲುಪಿಸಲು ಚೊಕ್ಲನ ಜೊತೆಗೆ ಇಬ್ಬರು ಆಳುಗಳನ್ನ ಕಳುಹಿಸಿದ್ದ. ಒಟ್ಟೊಟ್ಟಿಗೆ ಹುಟ್ಟಿ ಬೆಳೆದು ಈಗ ಒಬ್ಬಳೆ ಹೋದ ಲಚ್ಮಿಯ ಹೆಣದ ಮುಂದೆ ಕುಳಿತು ಸಾವಿ ಸಾವನ್ನೊ ಸರದಾನ ಜೊತೆಗೆ ಜಗಳಕ್ಕೆ ಬಿದ್ದಿದ್ದಳು. "ಒಟ್ಟೊಟ್ಟಿಗೆ ಆಡಿ, ಹಾಡಿ, ಮದುವೆ ಸಂಸಾರ ಎಲ್ಲವು ಮುಗಿಸಿ ಈಗ ಅವಳೊಬ್ಬಳನ್ನೇ ಒಯ್ಯುತ್ತಿದ್ದೀಯಾ. ನಾನು ಸುತರಾಂ ಒಪ್ಪಾಕಿಲ್ಲ ನಿನ್ನ ಈ ಅನ್ಯಾಯವನ್ನ" ಅನುವಂತಿತ್ತು. ಅವಳ ಭಾವನೆ ಅವಳೂ ಕೂಡ ಯಾವ ಕ್ಷಣದಲ್ಲಾದರೂ ಪ್ರಾಣಬಿಡಲು ಸಿದ್ದಳಾಗಿದ್ದಳು. ಅಕ್ಕನ ಜೊತೆಗೆ ರಾಜಸ್ಥಾನದಿಂದ ಆರಂಭಿಸಿದ ತನ್ನ ಪಯಣವನ್ನ ಅವಳೊಟ್ಟಿಗೆ ಮುಗಿಸಲು ನಿರ್ಧರಿಸಿದಂತಿತ್ತು. ಲಚ್ಮಿ ಮಗ ದೇಸುನ ಮಾರಿ ಒಂದು ಸಲ ಕಣ್ಣುತುಂಬ ತುಂಬ್ಕೊಂಡು ಅವನ ಕೈಯಿಂದ ಗುಟುಕು ನೀರು ಕುಡಿದು ಪ್ರಾಣಬಿಡಲು ಕಾಯುತ್ತಿದ್ದಳು. ಜೀವ ಜಡವಾಗಿರುವ ದೇಹವನ್ನ ಬಿಡಲು ತಯಾರಿಲ್ಲ. ಉಸಿರೊಳಗೆ ಜೀವ ಟುಕು, ಟುಕು ಆಡ್ತಿತ್ತು. ಅವಳ ಹಿಂದೆನೆ ಕಣ್ಣು ಮುಚ್ಚಿ ಪ್ರಾಣ ಬಿಡಲು ಕಾಯುತ್ತಿದ್ದ ಸಾವಿಗ ಗುಟುಕು ನೀರು ಬಿಡಾಕ ತನ್ನ ಸಂತತಿ ಇಲ್ಲವಲ್ಲ ಅನ್ನೋದ ನೆನಪು ಮಾಡಿಕೊಂಡಾಗ ಅತೀವ ದುಃಖವಾಗಿತ್ತು. ಮಗ ತೊತ್ಯನ ಕೊಲೆಯಾದ ನಂತರವಂತು, ದೇಸು, ಸೋಮ್ಲು, ಚೊಕ್ಲ ಒಬ್ಬರಲ್ಲ ಒಬ್ಬರು ನಾಕು ತುತ್ತು ಕೈಯಿಂದಲೇ ಉಣಿಸಿದಾಗ ಮಾತ್ರ ಉಣ್ಣುತ್ತಿದ್ದಳು.

ಸುತ್ತ ಡೇರೆಯಮಂದಿ ದೇಸುನ ಡೇರೆ ಮುಂದ ನೆರೆದಿದ್ದರು. ಹಂಗಾಮು ವಯಸ್ಸಿನೊಳಗೆ ಗಂಡನ್ನ ಕಳ್ಕೊಂಡು ಮಗನಿಗಾಗಿ ಸಾರ್ಥಕ ಬದುಕನ್ನ ಬದುಕಿದ್ದಳು ಲಚ್ಮಿ, ಸ್ವಲ್ಪದಿನ ಥಾವುನ ಆಶ್ರಯ, ಗಂಡ ಬದುಕಿದ್ದಾನೆ ಬಂದೆ ಬರುತ್ತಾನೆಂಬ ಭರವಸೆಯಿಂದ ಜೀವಹಿಡಿದಿದ್ದಳು. ಅವಳ

ಮೈದುನ ಥಾವುನ ಸಂಘರ್ಷದಲ್ಲಿ ಸತ್ತಾಗ ಉಳಿದ ಒಬ್ಬನೆ ಕರಮತೋಟನ ಕುಲಸ್ಥ ಮಿಟುಬುಕ್ಯಾನ ಸಂತತಿ ದೇಸು ಬುಕ್ಯಾನಿಗಾಗಿಯೇ ಜೀವ ಹಿಡಿದಿದ್ದಳು. ಬದುಕಿನ ಏರಿಳಿತಗಳನ್ನು ಕಂಡಿದ್ದಳು. ಅವಳೊಂದಿಗೆ ಅವಳ ತಂಗಿ ಸಾವಿಯೂ ಕೂಡ ಅಷ್ಟೆಯಾತನೆಯನ್ನ ಸಹಿಸಿದ್ದಳು ಗಂಡನಸಾವು, ಹರೆಯದ ಮಗ, ಉಳಿದಿದ್ದ ಒಬ್ಬನೆ ಮಗ ತೊತ್ಯಾನ ಕೊಲೆ,. ಸಾವಿಯಂತು ಜರ್ಜರಿತಳಾಗಿದ್ದಳು. ಎರಡು ಸಾರ್ಥಕ ಜೀವಿಗಳ ಸುಖವಾದ ಸಾವಿನ ಯಾತ್ರೆಗೆ ಮಂದಿ ತಮ್ಮ ರಿವಾಜನಂತೆ ನಗಾರಿ, ಕಂಚಿನ ತಟ್ಟೆಯೊಂದಿಗೆ ದೇವರ ಪ್ರಾರ್ಥನೆಗೆ ಮುಂದಾಗಿದ್ದರು. ಸುತ್ತೆಲ್ಲ ಡೇರೆ ಮಂದಿಗೆ ದೇಸುನ ತಾಯಿ ಯಾವಾಗಲಾದರು ದೇವರ ಪಾದಸೇರಬಹುದೆಂಬ ಸುದ್ದಿಯನ್ನ ಮುಟ್ಟಿಸಲು ಸ್ವತಃ ನಾಯಕನಾಗಿದ್ದ ದೇಸು ಇಲ್ಲದ ಕಾರಣ, ಆ ಡೇರೆಯ ಕಾರಬಾರಿ. ಡಾವೊ ಇಬ್ಬರು ಕಾಳಜಿವಹಿಸಿ ಮಂದಿಯನ್ನ ನಾಕುದಿಕ್ಕಿಗೂ ಗದಮಿದ್ದರು. ಇಡೀ ರಾತ್ರಿ ವಾಜ, ಹೆಂಗಸರು ಒಂದು ಕಡೆ ಹಾಡುತ್ತಿದ್ದರು. ಸೋಮ್ಲನ ಹೆಂಡತಿ ಭೀಮಣಿ ಮತ್ತು ಮಂಗ್ಲ್ಯಾನ ಹೇಣ್ತಿ ಪಕ್ಕೀರಿ ನೆರೆದೆಲ್ಲ ಮಂದಿಗೆ ಚಹಕಾಸಿ ಕೊಡುತ್ತಿದ್ದರು. ಚಾಪ್ಲ ಚೊಕ್ಲ ಅಜ್ಜಿಯಂದಿರ ಪಕ್ಕ ಕುಳಿತು ನೊಣಗಳು ಮುಖದ ಮೇಲೆ ಮುಕ್ಕರಿದ ಹಾಗೆ ನೋಡಿಕೊಳ್ತಿದ್ರು.

ಲಚ್ಮಿ ಕಣ್ಣು ಮುಚ್ಚಿದಾಗ ಎಂಭತ್ತು ವರ್ಷಗಳೇ ಆಗಿದ್ದವು. ಅಪ್ಪ, ಚಿಕ್ಕಪ್ಪನೊಂದಿಗೆ ಲದೇಣಿಯಾ (ಹೇರುವ ವ್ಯಾಪಾರ) ಮಾಡುತ್ತ ಪಶ್ಚಿಮದಿಂದ ದಕ್ಷಿಣಕ್ಕೆ ಹೊರಟುಬಂದವರು. ಬದುಕಿನ ಸಂಘರ್ಷವನ್ನ ಬಹಳ ಹತ್ತಿರದಿಂದ ಕಂಡಿದ್ದಳು. ಗುಡುಗು, ಮಿಂಚು ಒಂದೆಡೆಯಾದರೆ ಭೀಕರಗಾಳಿ, ಕಾಡ್ಗಿಚ್ಚು ಮತ್ತೊಂದು ಕಡೆ, ಭಯಾನಕ ಕಾಯಿಲೆಗಳು ಇವುಗಳಿಂದ ತಪ್ಪಿಸಿಕೊಂಡು ಬದಕುವುದೆಂದರೆ ಯಮಧರ್ಮನಕೈಯಿಂದ ತಪ್ಪಿಸಿಕೊಂಡಂತೆಯೇ ಸರಿ. ಯಾರ ಹಣೆಬರಹ ಗಟ್ಟಿ ಅದಾವೊ ಉಳ್ಕೊಂಡ್ರು ಯಾರದು ತುಂಬಿಬಂದಿತ್ತೋ ಹೊಂಟುಹೋದ್ರು ಇದು ಮಂದಿ ನಂಬಿದ್ದ ಸತ್ಯ. ದೆಹಲಿ ಬಾದಷನ ಹುಕುಂ ನಂತೆ ದಕ್ಷಿಣಕ್ಕೆ ಬಂದ ಖಾನ್ ಸಾಹೇಬರ ಡೆರೆಯಲ್ಲಿ ಬೆಳೆದಿದ್ದ ಲಚ್ಮಿ ಎಲ್ಲ ಜೀವಪರ ಕಾಳಜಿ ಬಿಟ್ಟು ಹೊರಡಲು ಸಜ್ಜಾಗಿದ್ದಳು.

ದೇಸುಗ ಸುದ್ದಿ ತಿಳಿದಾಗ ಅವನ ನಿಂತ ನೆಲ ಕಾಲಡಿಗ ಕುಸಿಯುತ್ತಿರುವ ಅನುಭವವಾಗತೊಡಗಿತು. ಅವನ ಅಸ್ಥಿತ್ವದ ಕೊನೆಯ ಕೊಂಡಿ ಕಳಚಿಕೊಳ್ಳುತ್ತಿರುವುದು ಅವನಿಗೆ ಅಸಹನೀಯವಾಗಿತ್ತು. ಆದರೆ ಇದು ಅನಿವಾರ್ಯಕೂಡ ಆಗಿತ್ತು. ಅವನಿಗೆ ತಾಯಿಯ ಮೆಲೆ ಇದ್ದ ವ್ಯಾಮೋಹ ಆಲೋಚನೆಗೆ ಎಡೆಮಾಡಿತ್ತು. ಆದರೆ ನಿಸರ್ಗದ ನಿಯಮವನ್ನ ಉಲ್ಲಂಘಿಸಲು ಯಾರಿಂದಲೂ ಸಾಧ್ಯವಿರಲಿಲ್ಲ. ದೇಸುನ ಕುದುರೆ ನಾಗಲೋಟದಿಂದ ಓಡುತ್ತಿತ್ತು. ತಾಯಿಯ ಸಾವಿನ ಕೊನೆಯ ಕ್ಷಣ ಅವಳ ಪಕ್ಕದಲ್ಲಿರಲಿಲ್ಲಾ ಎಂಬ ಅಪರಾಧಿಭಾವ ಅವನನ್ನ ಕಾಡುತ್ತಿತ್ತು. ಅವಳ ಕೊನೆಯ ಮಾತನ ಕೇಳುವ ಭಾಗ್ಯ ಇಲ್ಲದಕ್ಕೆ ಬಹಳವಾಗಿ ನೊಂದುಕೊಂಡಿದ್ದ.

ಅವನು ಬಂದಾಗ ಆವಾಗಲೇ ಪೊರ್ಯತಾರ (ಬೆಳ್ಳಿ ಚುಕ್ಕಿ) ಮೂಡಿತ್ತು. ಮನೆ ಮುಂದೆ ಕುದುರೆಬಿಟ್ಟವನೆ "ಎಯಾ, ತಾಯಿ ಕಾಂಯಿಕೇಗಿಯೆ ಮನ್ನ" (ಅವ್ವ ಏನು ಹೇಳಿಹೋದೆ ನನಗ) ಎದೆಯಾಳದಿಂದ ದುಃಖ ಹೊರಟಿತ್ತು. ಲಚ್ಮಿಯ ದೊಡ್ಡ ಜೀವ ಹೊಂಟಿತ್ತು. ಸಣ್ಣಜಿವದಲ್ಲಿ ಎಲ್ಲೋ ಅಟ್ಕಾಯಿಸಿಕೊಂಡಿದ್ದ ಉಸಿರು ಕಳಚಿಕೊಳ್ಳಲು ಹವಣಿಸುತ್ತಿರುವಾಗಲೆ ದೇಸು ಬಂದಿದ್ದ. ದೇಸು ಜುಲ್ಮಿಯಿಂದ ಕಣ್ಣುಬಿಟ್ಲು. ಅವನ ಮುಖ ವನ್ನ ಗುರುತಿಸುವಷ್ಟು ಪ್ರಜ್ಞೆ ಇರಲಿಲ್ಲ. ನೆರದ

ಮಂದಿ ಅವನ ಕೈಯಿಂದ ಒಂದು ಗುಟುಕು ನೀರನ್ನ ಅವನ ತಾಯಿ ಲಚ್ಮಿಯ ಬಾಯಿಗೆ ಬಿಡಿಸಿದರು. ನೀರು ಗಂಟಲೊಳಗೆ ಇಳಿತೊ ಇಲ್ಲೋ ಚೆಂಡುವಾಲಿತು ಕಣ್ಣುಗಳು ನಿಸ್ತೇಜಗೊಂಡು ಬೆಳಕೆಂಬ ಬೆಳಕೆ ಹರಿದು ಮಾಯವಾಗುತ್ತಿದ್ದಂತೆ ಮುಂಜಾನೆಯ ಸೂರ್ಯನ ಎಳೆಗಿರಣಗಳಲ್ಲಿ ಲೀನವಾಗಿತ್ತು. ತಾಯಿಯ ತಾಯಿಯಷ್ಟೆ ಪ್ರೀತಿಯಿಂದ ಸಾಕಿದೊಡ್ಡವನನ್ನಾಗಿ ಮಾಡಿದ ಅವಳ ಚಿಕ್ಕಮ್ಮ ಸಾವಿಯನ್ನ ಮರೆತಿದ್ದು ದೇಸುಗೆ ಇದ್ದಕ್ಕಿದ್ದಂತೆ ನೆನಪಾಗಿ "ಕಾಕಿ. ." ಕೂಗಿದ, ಡೇರೆಯ ಇನ್ನೊಂದು ಮೂಲೆಯಲ್ಲಿ ಸದ್ದಿಲ್ಲದೆ ಯಾರಿಗೂ ಹೇಳದೆ, ಕೇಳದೆ ಚಿರಮೌನಕ್ಕೆ ಜಾರಿದ್ದಳು ಸಾವಿ. "ಅಯ್ಯೋ ನೀನು ಹಿಂಗ ಬಿಟು ಹೋಗಬಿಟೆಯಾ, ಅಪ್ಪನ ಜೊತೆಗೆ" ಭಾರಾಡಿ ಅಳತೊಡಗಿದ. ಇಡೀ ಡೇರೆ ತುಂಬ ಕಿಚೋ ಅಂತ ಅಳುವುದೆ ಕೇಳತೊಡಗಿತ್ತು. ಹೊರಗಿನ ಮಂದಿ ಸುತ್ತಲ ಡೇರೆಗಳಿಂದ ದೇಸುನ ಬೀಗರು ಬಿಜ್ಜರು, ಹಿರಕರು, ಸರಿಕರು ಬಂದಾರೇನಂತ ಖಚಿತಪಡಿಸಿಕೊಂಡು, ಅವರನ್ನ ಅಗ್ನಿಸ್ಪರ್ಷ ಮಾಡುವ ಜಾಗ ಗುರುತು ಪಡೆಸಿಕೊಂಡವರೆ ಕಟ್ಟಿಗೆಯನ್ನ ಒಟ್ಟು ಮಾಡಲು ಕೊಡ್ಲಿ, ಮಚ್ಚು ತಗೊಂಡು ಕೆಲಯುವಕರನ್ನ ಮುಂದೆ ಕಳುಹಿಸಿದರು.

ಆಕಡೆಗೆ ಎರಡು ಚಟ್ಟಗಳು ತಯಾರಾಗುತ್ತಿದ್ದಂತೆ ಇಬ್ಬರಿಗೂ ಕೊನೆಯ ಸ್ನಾನಮಾಡಿಸಿ ಪಡ್ರೇರ ಫೆಟಿಯಾ, ಕಾಂಚಳಿ, ಛಾಂಟಿಯಾ ಉಡಿಸಿದರು. (ಧಾರೆ ಸೀರೆ, ಕುಪ್ಪಸ, ದಾವಣಿ) ದೇಸು ನಡಹಿಡದಂಗಾಗಿತ್ತು ಇಬ್ಬರು ತಾಯಂದಿರು ಒಂದೇ ಸಲ ಸಾವಿನಲ್ಲೂ ಸಮಾಗಮವಾಗಿದ್ದರು. ಜೀವನದುದ್ದಕ್ಕೂ ತಪ್ಪುಸರಿ, ನ್ಯಾಯ ಅನ್ಯಾಯ, ಒಳ್ಳೆಯದು ಕೆಟ್ಟದ್ದು ತೋರಿಸುತ್ತ ದಾರಿತೋರಿಸುತ್ತಿದ್ದ ಇಬ್ಬರೂ ಮನೆ ಖಲಿಮಾಡಿ ಹೊರಟಿದ್ದಕ್ಕೆ ಅವನ ಮನಸ್ಸು ಸಿದ್ಧರಾಗಿರಲಿಲ್ಲ. ಇಬ್ಬರಿಗೂ ಹೆಗಲು ಕೊಟ್ಟು ಬಂದಿದ್ದ. ಎರಡು ಚಿತೆಗಳ ಮೇಲೆ ಮಲಗಿದಸಿದ ನಂತರ ಅವಕ್ಕೆ ಅವನೆ ಅಗ್ನಿಸ್ಪರ್ಶಮಾಡಿದ. ಚಿತೆಯ ಬೆಂಕಿ ಜ್ವಾಲೆಯಾಗಿ ಸುಡುತ್ತಿರುವಾಗ ಉದ್ದನೆಯ ಕಟ್ಟಿಗೆಯಿಂದ ಇಬ್ಬರ ತಲೆಗೂ ಟೀಚೋ ಕೊಡುವ ಶಾಸ್ತ್ರ ಮಾಡಿದ (ತಲೆಗೆ ಶಾಸ್ತ್ರೀಯವಾಗಿ ಕಟ್ಟಿಗೆಯಿಂದ ಮುಟ್ಟುವುದು). ಮಂದಿಲೆಕ್ಕ ತಗೊಂಡು ಸೋಮ್ಲು ಚೊಕ್ಲ ಅವರೆ ಅಣ್ಣತಮ್ಮಂದಿರು ಮುಂದೆ ನಿಂತು ಎಲ್ಲಾ ಶಾಸ್ತ್ರಗಳನ್ನ ಮುಗಿಸಿದರು.

ದೇಸು ತಾಯಿಯನ್ನ ಕಳೆದುಕೊಂಡು ಅನಾಥನಂತಾಗಿದ್ದ. ಈಗ ಜಗತ್ತಿನೊಂದಿಗೆ ಅವನೊಬ್ಬನೆ ಹೋರಾಡಬೇಕಿತ್ತು. ಏನಾದರೂ ನಿರ್ಣಯ ತಗೊಳಬೇಕಾದರೆ ಮೊದಲು ತಾಯಿಯನ್ನ ಕೇಳ್ತಿದ್ದ. ನಂತರ ಚಿಕ್ಕಮ್ಮ, ಅವರು ಹೂಂ ಅಂದರೆ ಮುಂದುವರೆಯುತ್ತಿದ್ದರು. ಅವರೇನಾದರು ಬೇಡವೆಂದರೆ ಅವರಿಗೆ ತಿಳಿಸಿಹೇಳಿ ಮನವರಿಕೆ ಮಾಡಿಸಿ ಕೆಲಸದ ಸಾದಕ ಬಾದಕಗಳನ್ನು ಹೇಳಿದನಂತರ ಅವರೂ ಒಪ್ಪಿಕೊಳ್ಳಲೇ ಬೇಕಿತ್ತು. ಈಗ ಎಲ್ಲವೂ ಅವನ ತಲೆಯಮೇಲೆ ಭಾರವೆನಿಸತೊಡಗಿತ್ತು. ಮನೆ ತುಂಬ ಮಕ್ಕಳು ಮದುವೆಯಾಗಲಿರುವ ಮನೆ ನಾಕೈದು ಹರೆಯದವರು, ಜವಾಬ್ದಾರಿ ಹೆಚ್ಚಾಗಿತ್ತು. ವ್ಯಾಪಾರ ವಹಿವಾಟಿನಲ್ಲಿ ಕೊರತೆಯಾಗಿತ್ತು. ಅವನ ಆಳುಗಳಿಗೆ ಕೆಲಸವಿಲ್ಲದಾಗಿತ್ತು. ಅವರಿಗೆ ಕೂಲಿ ಕೊಡುವುದು ದುಸ್ತರ ಅನಿಸಿತ್ತು. ಆವಾಗ ಆಗಲೇ ದೆಹಲಿ ಸುಲ್ತಾನನ ಹತ್ತಿರ ವ್ಯಾಪಾರಕ್ಕಂತ ಕೆಂಪಮಂದಿ ಬಂದಿದ್ದರು. ಸುಲ್ತಾನ ಕೇಳಿದ್ನಂತೆ, ಏನ ವ್ಯಾಪಾರ ಮಾಡ್ತಿರಾ" ಅಂತ, ಅದ್ಯಾವುದೋ ಇಂಗ್ಲಿಷ್ ಭಾಷೆನಾಗ All business (ಎಲ್ಲಾ ವ್ಯಾಪಾರ) ಅಂದ್ರಂತೆ. "ಬಂಡವಾಳವಿಲ್ಲದೆ"? ಮತ್ತೆ ಅವರ ಪ್ರಶ್ನೆ ಬಂಡವಾಳ

"ನಮ್ದು ಇಲ್ಲಾ, ನಿಮದೆ ಮಾಲು ಖರೀದಿಮಾಡ್ತಿವಿ. ನಿಮಗೆ ಮಾರ್‍ತಿವಿ ಬರೋ ಲಾಭದಲ್ಲಿ ನಿಮಗೆ ಪಾಲಕೊಡ್ತೀವಿ," ಕೆಂಪಮಂದಿ ಬಾದ್‌ಷಗೆ ಉತ್ತರಿಸಿದರಂತೆ ಆಮೇಲೆ ಅದೆಂಗೆ ಪ್ರವೇಶ ಪಡೆದು ಕೊಂಡರೊ ಅಂತು 1600 ನೇ ಇಸ್ವಿಯೊಳಗಗೆ ಆ ಮಂದಿ ಭಾರತ ದೇಶದೊಳಗ ಪ್ರವೇಶಮಾಡಿದ್ರು ಸುದ್ದಿಗಳು ಹಾಗೆ ದೆಹಲಿ ಕಡೆಯಿಂದ ವ್ಯಾಪಾರಕ್ಕೆ ಬರೋ ಮಂದಿಕೂಡ ದಕ್ಷಿಣದ ಕಡಿಗೆ ಹರಡಿದ್ದವು. ಕೆಂಪಜನ ಭಾರಿಬುದ್ದಿವಂತರಂತೆ, ನಮ್ಮ ದೇಶದಾಗ ವ್ಯಾಪಾರಕ್ಕಂತ ಕಾಲಿಟ್ಟವರು. ಇಲ್ಲೇ ಇರೋ ಇರಾದೆ ಮಾಡಿದಂಗೆ ಕಾಣುತ್ತೆ. ವಾಮನ ಬಲಿಚಕ್ರವರ್ತಿ ಮೂರಪಾದ ಇಡಾಕ ಜಾಗ ಕೇಳಿದಂಗೆ ಕೆಂಪಮಂದಿ ವ್ಯಾಪಾರದ ಪ್ರವೇಶಕೇಳಿ ಬಲಿಯನ ವಾಮನ ತುಳಿದಂಗೆ ಇವರು ಬಂಗಾಳನ ತಮ್ಮ ವಶಕ್ಕೆ ತಗೊಂಡು ಆಳೋದಕ್ಕೆ ಆರಂಭಿಸಿದ್ದರು.

ಬದಲಾವಣೆಯ ಗಾಳಿ ಮೆಲ್ಲಗೆ ಬೀಸತೊಡಗಿತ್ತು. ಕೆಂಪ ಮಂದಿ ವ್ಯಾಪಾರದಾಗ ಬಲು ಮುಂದಿದ್ದರು. ಅವರು ಲಾಭಕ್ಕೆ ಯಾರನ್ನ ಬೇಕಾರು ಬಳಸಿಕೊಂಡು ಕಡಿಗ ಅವರ ಕತ್ತನ್ನೆ ಕೋಯ್ದು ಬಿಡುವ ಪೈಕಿ ಮಂದಿ. ಭಾರತ ದೇಶದ ಭೂಮಾರ್ಗದ ತುಂಬ ಬಂಜಾರಮಂದಿ ಅಡ್ಡಾಡಿ ಸಂದಿಗೊಂದಿ ಬಿಡದಂಗೆ ವ್ಯಾಪಾರಮಾಡಿದ್ದರು. ಅವರಿಗ ಜಾಡುಗೊತ್ತಿರೋದಕ್ಕೆ ಆ ಮಂದಿ ಬಂಜಾರರನ್ನು ಕೆಲ್ಸಕ ಇಟ್ಕೊಂಡು, ದೆಹಲಿಯೊಳಗ ಲಕ್ಕಿಸಾ ಬಂಜಾರ ಔರಂಗಜೇಬನ ದೆಹಲಿ ಸುಲ್ತಾನ ಅವಧಿಯೊಳಗೆ ಒಂದು ಲಕ್ಷ ಎತ್ತುಗಳ ವಹಿವಾಟನ್ನ ಆರಂಭಿಸಿದ್ದ. ಅವನ ವಹಿವಾಟು ನೋಡಿದ ಬಾದ್‌ಷಾ ಅರ್ಧ ದಿಲ್ಲಿಯ ಜಮೀನನ್ನ ಆತನ ಹೆಸರಿಗೆ ಬರೆದುಕೊಟ್ಟಿದ್ದ. ವ್ಯಾಪಾರದ ಪರಕಾಷ್ಠತೆಯಲ್ಲಿರುವಾಗ ಬಾದ್‌ಷಾಗೂ ಸಿಖ್‌ರ ಗುರು ಗೋವಿಂದಸಿಂಗ್‌ಗೆ ನಡೆದ ಯುದ್ದದಲ್ಲಿ ಭಾದ್‌ಷಾ ಗೋವಿಂದ ಸಿಂಗ್ ಹತ್ಯ ಮಾಡಿ ಆತನ ದೇಹ ಸಂಸ್ಕಾರ ಮಾಡಲು ಸಿಗಬಾರದ ಹಾಗೆ ಮಾಡುವ ಯೋಜನೆಯಲ್ಲಿದ್ದ. ಅದೇಗೋ ಲಕ್ಕಿಸಾ ಬಂಜಾರಿಗೆ ವಿಷಯ ತಿಳಿತು. ಹತ್ತಿ ತುಂಬಿದ ಚಕ್ಕಡಿ ಗಾಡಿಗಳು ಚಾಂದನಿ ಚೌಕದಿಂದ ಧೂಳ ಎಬ್ಬಿಸುತ್ತಾ ಓಡಿದವು. ಅಲ್ಲಿ ಎದ್ದ ಕೆಂಧೂಳು ಇಡಿ ದೆಹಲಿಯನ್ನ ಆವರಿಸಿತು. ಬಂಜಾರ ಬಾವಡಿ ಪ್ರದೇಶ ಪೂರ ಕಾಣದಾಗಿತ್ತು. ಇದೆ ಸಮಯಕ್ಕಾಗಿ ಕಾಯುತ್ತಿದ್ದ ಲಕ್ಕಿಸಾ ಕುದುರೆ ಮತ್ತ ಎತ್ತಿನಗಾಡಿಗಳ ನಡುವೆ ನುಸುಳಿ, ಔರಂಗಜೇಬನ ಖಾಸಾ ವ್ಯಾಪಾರಿಯಾಗಿದ್ದರೂ ಲೆಕ್ಕಿಸಿದ, ಗುರುಗೋವಿಂದಸಿಂಗ್‌ನ ಕಳೆಬರಹವನ್ನು ಹತ್ತಿ ತುಂಬಿದ ಗಾಡಿಯಲ್ಲಿ ತುಂಬಿದವನೆ ತನ್ನ ಕುದುರೆಯ ಮೇಲೆ ಗೋವಿಂದ್‌ಸಿಂಗರ ರುಂಡ-ಮುಂಡಗಳನ್ನು ತೆಗೆದುಕೊಂಡು ಓಡಿದನು. ಸೈನ್ಯ ಬೆನ್ನತ್ತಿದ್ದಕ್ಕೆ ದೆಹಲಿಯ ಬಂಜಾರ ಬಾವಡಿ ಪ್ರದೇಶದಲ್ಲಿದ ತಮ್ಮ ಮನೆಯೊಳಗೆ ಮಕ್ಕಳು ಮರಿ ಇರುವುದನ್ನು ಲೆಕ್ಕಿಸದೆ ಗೋವಿಂದ್‌ಸಿಂಗರ ಅಂತ್ಯಕ್ರಿಯೆಗಾಗಿ ಮನೆಗೆ ಬೆಂಕಿ ಹಚ್ಚುವುದರೊಂದಿಗೆ ಮಾಡಿದನು. ಲಕ್ಕಿಸಾಬಂಜಾರ ಬಾದಷ್‌ನ ಅವಕೃಪೆಗೆ ಕಾರಣನಾಗಿ. ಅವರ ವ್ಯಾಪಾರ ವಹಿವಾಟು ಅಷ್ಟೇನು ಸರಿಯಾಗಿ ಮುಂದುವರೆಯಲಿಲ್ಲಾ. ಆದರೆ ಸಿಖರಿಗೆ ಬಂಜಾರರ ಮೇಲೆ ವಿಶೇಷವಾದ ಬಾಂಧವ್ಯ ಬೆಳೆಯಿತು. ಲಕ್ಕಿಸಾ ಬಂಜಾರನ ಜಮೀನು ಕ್ರಮೇಣ ದೆಹಲಿಸುಲ್ತಾನ ಪಾಲಾಯಿತು. ಮುಂದೆ ಬಂದ ಕೆಂಪುಮಂದಿ ಆ ಜಾಗವನ್ನು ತಮ್ಮದಾಗಿಸಿಕೊಂಡರು.

ಕಲ್ಕತ್ತಾದ ನವಾಬ ಮೀರ ಜಾಫರ್‌ನ ಪಿತೂರಿಯಿಂದ ಸೋತನಂತರ ಬ್ರಿಟೀಷರ ಡೂಪ್ಲೆ ಎನ್ನುವ ವ್ಯಕ್ತಿ ಬ್ರಿಟೀಷ್ ಸರ್ಕಾರದ ಪರವಾನಿಗೆಯ ಮೇರೆಗೆ ಭಾರತದಲ್ಲಿನ ಬ್ರಿಟೀಷರ ನಾಯಕನಾದ. ಮುಂದೆ ಭಾರತೀಯರ ಇತಿಹಾಸವನ್ನು ತಿಳಿದು, ಇಲ್ಲಿಯ ಸುಮಾರು ಒಂದು

ಸಾವಿರ ಪ್ರಾಂತ್ಯಗಳಲ್ಲಿ ಒಗ್ಗಟ್ಟಿಲ್ಲವೆಂಬುದನ್ನ ಅಧ್ಯಯನ ಮಾಡಿದರು. ಅಷ್ಟೆ ಅಲ್ಲ ಇಲ್ಲಿಯ ಜಾತಿ ವ್ಯವಸ್ಥೆಯನ್ನು ಸರಿಯಾಗಿ ಅರ್ಥಮಾಡಿಕೊಂಡ ಬ್ರಿಟೀಷಮಂದಿ ಒಡೆದಾಳುವ ನೀತಿಯಿಂದಲೇ ಉತ್ತರದಿಂದ ದಕ್ಷಿಣದವರೆಗೆ ಮೆಲ್ಲಗೆ ಒಂದಾದ ಮೇಲೆ ಒಂದರಂತೆ ರಾಜ್ಯಗಳನ್ನು, ಸಾಮ್ರಾಜ್ಯಗಳನ್ನು ಕಬಳಿಸುತ್ತಾ ಭಾರತದಲ್ಲಿ ಬ್ರಿಟೀಷರ ಆದಿಪತ್ಯವನ್ನ ಸ್ಥಾಪಿಸಲು ಮುಂದಾದರು. ಭಾರತ ಅಷ್ಟೇನು ಪರಿಚಯವಿರದ ಕಾರಣ ಅವರಿಗೆ ದಾರಿತೋರಿಸಲು ಜನಬೇಕಿತ್ತು. ಆಗ ಅವರು ಬಳಸಿಕೊಂಡಿದ್ದು ಬಂಜಾರರನ್ನ.

ಕೆಲ ಸಂದರ್ಭದಲ್ಲಿ ಬಂಜಾರರಿಗೂ ಬ್ರಿಟೀಷರಿಗೂ ತಿಕ್ಕಾಟ ಉಂಟಾಗಿದ್ದು ಉಂಟು. ಗುಜರಾತ್ ಮತ್ತು ರಾಜಾಸ್ಥಾನದ ಗಡಿಪ್ರದೇಶದಲ್ಲಿ ನಡೆದ ಬ್ರಿಟೀಷರ ವಿರುದ್ಧದ ಹೋರಾಟದ ನೇತೃತ್ವ ವಹಿಸಿದವರು ಗುರುಗೋವಿಂದಬಂಜಾರ, ಬಂಜಾರ, ಮೀನಾ, ಇನ್ನೂ ಅನೇಕ ಆದಿವಾಸಿಗಳನ್ನು ಒಟ್ಟು ಸೇರಿಸಿ ಹೋರಾಟವನ್ನ ಆಂಭಿಸಿದ್ದರು. "ನೋಡಿ, ನಾವು ಈ ನೆಲದ ಮೂಲನಿವಾಸಿಗಳು, ಈ ನೆಲ ನಮ್ಮ ತಾಯಿ, ಈ ಮಣ್ಣಿನೊಂದಿಗೆ ನಮ್ಮ ಭಾವನೆಗಳು ಒಂದಾಗಿವೆ. ಈ ಕಾಡು, ಬೆಟ್ಟ ಗುಡ್ಡಗಳೆಲ್ಲಾ ನಮ್ಮವು ಆದರೆ ನೆನ್ನೆ ಮನ್ನೆ ಬಂದ ಕೆಂಪುಮಂದಿ ನಮ್ಮ ಮೇಲೆ ಸವಾರಿಮಾಡಲು ಹೊರಡಿರುವುದು ಸರಿಯಲ್ಲ". ಆದಿವಾಸಿಗಳ ದಂಡು ತಮ್ಮ ಅಸ್ತಿತ್ವದ ಉಳವಿಗಾಗಿ ಹೋರಾಟವನ್ನೇ ಆರಂಭಿಸಿತ್ತು. "ತಾವು ಅಪ್ಪಣೆಕೊಟ್ಟರೆ ಕೆಂಪುಮಂದಿನ ವಾಪಾಸು ಅಟ್ಟುವುದೇನು ದೊಡ್ಡ ಕೆಲಸವಲ್ಲ. ತಾವು ಹೂಂ ಅನ್ನಿ ಈಗಲೆ ಅವರನ್ನ" ಸಕಿರಾಂ ಮೀನಾ ತನ್ನ ರೋಷವನ್ನ ಪ್ರದರ್ಶಿಸಿದ್ದ ಗೋವಿಂದ ಬಂಜಾರ, ಇಂಥ ಅನೇಕ ಬಿಸಿ ರಕ್ತದ ಯುವಕರನ್ನ ಒಂದುಗೂಡಿಸಿದ್ದ. ಸರಿಯಾದ ದಿನ, ಸರಿಯಾದ ಸಮಯದ ಸಲುವಾಗಿ ಕಾಯುತ್ತಿದ್ದ. ಬ್ರಿಟೀಷರು ಕಾಡನ್ನ ಆಶ್ರಯಿಸಿರುವ ಅನೇಕ ಮಂದಿಗೆ ಕಿರುಕುಳ ಕೊಡಲು ಆರಂಭಿಸಿದರು. ಅವರನ್ನ ಸುಕಾಸುಮ್ಮನೆ ಗೂಡಾಚರರು ಎಂದು ಚಿತ್ರಹಿಂಸೆಗೆ ಗುರಿಪಡಿಸುತ್ತಿದ್ದರು. ಅನೇಕಜನ ಆದಿವಾಸಿಗಳನ್ನ ನಿರ್ದಯೆಯಿಂದ ಕೊಲೆಮಾಡಿದ್ದರು. ಇದರಿಂದ ಇತರೆ ಆದಿವಾಸಿಗಳಲ್ಲಿ ಭಯ ಉಂಟು ಮಾಡುವುದಲ್ಲದೆ ಬ್ರಿಟೀಷರನ್ನ ಪ್ರಭುಗಳೆಂದು ಒಪ್ಪಿಕೊಂಡು ಸ್ವಾಮಿನಿಷ್ಠೆಯನ್ನು ತೋರುವಂತೆ ಮಾಡುವುದಾಗಿತ್ತು. ಇವೆಲ್ಲವುಗಳನ್ನು ಗಮನಿಸಿದ್ದ ವೀರ ಗೋವಿಂದಸಾಬಂಜಾರ ಹೋರಾಟವನ್ನು ಆರಂಭಿಸಿದ್ದ. ಕಂಡ ಕಂಡಲ್ಲಿ ಕೆಂಪು ಮಂದಿಯ ಮುಗಿಸುವ ಯೋಜನೆ ಹಾಕಿಕೊಂಡಿದ್ದ.

ಬ್ರಿಟಿಷರು ಬಂಜಾರನ ಉಪಟಳ ತಾಳಲಾರದೆ ಸುಸಜ್ಜಿತವಾದ ತುಕಡಿಯನ್ನ ಹೋರಾಟದ ಪ್ರದೇಶಕ್ಕೆ ಕಳುಹಿಸಿಯೇಬಿಟ್ಟರು. ಕಾಡಿನೊಳಗೆ ಅವಿತು ಯುದ್ದಮಾಡುವ ಆದಿವಾಸಿಗಳ ಹತ್ತಿರ ಕೇವಲ ತಲವಾರ್, ಕೊಡ್ಲಿ ಇತ್ಯಾದಿ ಅಸ್ತ್ರಗಳಿದ್ದವು. ಅಲ್ಲದೆ ಸಿದಾಸಾದ ಮಂದಿ ನೇರವಾಗಿಯೇ ಆಕ್ರಮಣವನ್ನು ಮಾಡುವಂತಹವರು ಆದರೆ ಚುರುಕಾಗಿದ್ದ ಕೆಂಪುಮಂದಿ ಸುಸಜ್ಜತ ಶಸ್ತ್ರಾಸ್ತ್ರಗಳು ಹೊಂದಿರುವುದರೊಂದಿಗೆ ಯುದ್ದ ಕೌಶಲ್ಯವನ್ನು ಅರಿತವರಾಗಿದ್ದರು. ಸ್ಥಳೀಯರನ್ನ ದುಡ್ಡಿನ ಆಮಿಷದಿಂದ ಖರೀಧಿಸಿ ಗೋವಿಂದ ಬಂಜಾರರ ಆದಿವಾಸಿ ಸೈನ್ಯದ ಜೊತೆಗೆ ಹೋರಾಟಕ್ಕಿಳಿದಿದ್ದರು. ದಟ್ಟಕಾಡಿನೊಳಗೆ ಬ್ರಿಟೀಷರು ಹೋಗುವುದೇ ದುಸ್ಥರವಾಗಿತ್ತು. ಗೋವಿಂದ ಬಂಜಾರನ ಸೈನಿಕರು ಹೇಗೆ ದಾಳಿ ಮಾಡುತ್ತಾರೆಂಬುದನ್ನು ಅಧ್ಯಯನಮಾಡಿದರು.

ಅವರ ಗುಂಪಿನ ಒಬ್ಬ ಆದಿವಾಸಿಯನ್ನೆ ಹಿಡಿದು ಆಮಿಷ ತೋರಿಸಿ ತಮ್ಮ ಯೋಜನೆಯನ್ನ ಬದಲಾಯಿಸಿಕೊಂಡರು. ಸೈನ್ಯದ ಸೇನಾದಿಪತಿ ಆಗಿದ್ದ ಬ್ರಿಟೀಷ್‌ರ ಕ್ಯಾಪ್ಟನ್ ಬ್ಲೇರ್ ಅವರನು ನಿರ್ನಾಮ ಮಾಡಿಬಿಡಿ" ಅಪ್ಪಣೆಮಾಡಿದ್ದ. ಗೋವಿಂದಬಂಜಾರ. "ವೀರರೆ, ಇದು ನಮ್ಮ ತಾಯಿನಾಡಿನ ಉಳಿವಿನ ಪ್ರಶ್ನೆ. ನಮ್ಮನ್ನ ಈ ಜನ ಬಿಡುವುದಿಲ್ಲ. ಇಲ್ಲ ನಾವು ಅಥವಾ ಅವರು. ನಾವು ಗೆದ್ದರೆ ಈ ದೇಶ ಕೆಂಪುಮಂದಿಯಿಂದ ಮುಕ್ತಿಪಡೆಯುತ್ತದೆ. ಒಂದವೇಳೆ ನಾವು ಸೋತರೆ ಅವರ ಪ್ರಾಬಲ್ಯ ಈ ದೇಶದಲ್ಲಿ ಮತ್ತೊಂದಿಷ್ಟು ಹೆಚ್ಚಾಗುತ್ತದೆ. ನಿಮ್ಮ ಕೊನೆಯ ಉಸಿರುವವರೆಗೂ ಹೋರಾಡಿ. ಜೈ ಬೊಲೊ ಭಾರತಮಾತಾಕಿ ಆದಿವಾಸಿ ದೇವಿಕಿ" ಅವರ ಹುರುಪು ಆದಿವಾಸಿಯೋದರನ್ನ ಹುಚ್ಚೆಬ್ಬಿಸಿತ್ತು. ಗಿಡಮರ, ಬಳಿ ಲೆಕ್ಕಿಸದೆ ಕೆಂಪುಮಂದಿಯ ರುಂಡ ಚೆಂಡಾಡಲು ನುಗ್ಗಿದರು. ದುರಂತವೆಂದೆ ಗೋವಿಂದಬಂಜಾರ ಆಲೋಚನೆಯನ್ನೆ ಮಾಡಿರಲಿಲ್ಲ. ಅವರ ಅಡಗುದಾಣದ ಸುತ್ತಲು ನಿಂತು ತುಪಾಕಿಯಿಂದ ಗುಂಡುಹಾರಿಸತೊಡಗಿದ್ದರು. ಆದರೂ ದೃತಿಗೆಡದ ಆದಿವಾಸಿ ಸೈನಿಕರು ತಪ್ಪಿಸಿಕೊಂಡು ಸಿಕ್ಕ ಕೆಂಪು ಜನರ ರುಂಡವನ್ನ ಚೆಂಡಾಡಿದರು. ಅವರ ಆಧುನಿಕ ಸಶಾಸ್ತ್ರ ಮತ್ತು ಯುದ್ದ ಕೌಶಲ್ಯದ ಎದುರಿಗೆ ಹಳೆಕಾಲದ ಯುದ್ದನೀತಿ ಸೋತಿತ್ತು. ಬೆಂಕಿಗೆ ಸುಟ್ಟು ಸುತ್ತಲು ಉದುರಿದ ಕೆಂಪಿರುವೆಗಳಂತೆ ಆದಿವಾಸಿಗಳು ಪೊದೆಗಳಲ್ಲಿ ಬಿದ್ದಿದ್ದರು. ಗೋವಿಂದಬಂಜಾರನೂ ಕೂಡ ಯುದ್ದದಲ್ಲಿ ಮಡಿದಿದ್ದ. ಬ್ರಿಟೀಷರ ತಾಕತ್ತಿನ ಎದುರಿಗೆ ಏನು ಮಾಡಲು ಆಗಿದೆಂದು ಅನೇಕ ಸಣ್ಣ ಪಾಳೆಗಾರರು ದೊಡ್ಡ ರಜಪೂತ ರಾಜರು, ದೆಹಲಿ ಸುಲ್ತಾನನೂ ಕೂಡ ಶರಣಾಗಿದ್ದ. ಗೋವಿಂದ ಬಂಜಾರ ಸೋಲು ಬಂಜಾರರಿಗೆ ಬಹಳ ದುಬಾರಿಯಾಗಿತ್ತು. ಬಂಜಾರ ಎಂದಕ್ಷಣ ಕೆಂಪು ಮಂದಿ ಕೆಂಡಮಂಡಲವಾಗತೊಡಗಿದರು. ಹೇಗಾದರು ಮಾಡಿ ಇವರ ವ್ಯಾಪಾರವನ್ನು ಸರ್ವನಾಶಗೊಳಿಸಬೇಕು ಎಂಬುದು ಅವರ ಉದ್ದೇಶವಾಗಿತ್ತು. ಅದಕ್ಕಾಗಿಯೆ ಕೆಲಮಂದಿಯನ್ನ ಅವರು ಅವರ ಚಲನವಲನಗಳನ್ನ ಗಮನಿಸಲು ಇಟ್ಟಿದ್ದರು. ಅಲ್ಲದೆ ಅವರು ಮಾಡುವ ವ್ಯಾಪಾರ ವ್ಯವಹಾರ, ಅವರ ಅಸ್ತಿತ್ವದ ಬೇರನ್ನ ಹುಡುಕ ತೊಡಗಿದರು.

ಅಲ್ಲಿ ಬೀಸಿದ ಗಾಳಿ ದಕ್ಷಿಣಕ್ಕೂ ತಾಗಿತ್ತು. ಗೋವಿಂದಬಂಜಾರನ ಸೋಲಿನ ನಂತರ ಸರಿಸುಮಾರು 1860ರ ಸುಮಾರಿಗೆ ರಲ್ಲಿ ಬ್ರಿಟೀಷರು 'ಕಾಡನ ಕಾಯಿದೆ'ಯನ ಜಾರಿಗೊಳಿಸಿ, ಕಾಡನ ಆಶ್ರಯಿಸಿರುವ ಅನೇಕ ಆದಿವಾಸಿಗಳನ್ನ ಕಾಡೊಳಗಿನಿಂದ ಹೊರಗೆ ಓಡಿಸುವ ಪ್ರಯತ್ನ ಮಾಡಿದ್ದರು. 1860ರವರ ಕಾಯಿದೆ ಪ್ರಕಾರ, ಕಾಡುಸರ್ಕಾರದ ಸ್ವತ್ತಾಗಿದ್ದು ಅಲ್ಲಿ ದೊರೆಯುವ ಎಲ್ಲಾ ಸಂಪನ್ಮೂಲಗಳು ಸರ್ಕಾರಕ್ಕೆ ಸೇರಿವೆ ಹಾಗಾಗಿ, ದನಗಳು ಕೂಡ ಮೇಯಲು ವನದೊಳಗೆ ಹೋಗುವುದನ್ನ ನಿಷೇಧಿಸಿದರು. ಬಡ ಅಡವಿ ಮಂದಿ ಜೇನು, ಗೆಡ್ಡೆಗೆಣಸು, ಅಂಟು, ಕಟ್ಟಿಗೆ, ಕಸ್ತೂರಿ, ಹಣ್ಣುಹಂಪಲುಗಳನ್ನ ವಿನಿಮಯಮಾಡಿಕೊಂಡು ಬದುಕಿದ್ದವರಿಗೆ ವನದಿಂದಲೆ ಎತ್ತಂಗಡಿಮಾಡಿದಾಗ ಸಂಪೂರ್ಣ ಕಾಡನ್ನು ಅವಲಂಬಿಸಿದ್ದ ಬಂಜಾರರ ಪಾಡೇನಾಗಬೇಕು. ಬಂಜಾರರ ದನಕರುಗಳು, ಲದೇಣಿಯಾಕೆ ಬಳಸುತ್ತಿದ್ದ ಎತ್ತುಗಳು ಕಾಡಲ್ಲಿ ಮೇಯುತ್ತಿದ್ದವು ಅವುಗಳಿಗೆ ನಿಷೇಧ ಹೇರಲಾಯಿತು. ಕವಳಿಹಣ್ಣು, ಕಾರಿಹಣ್ಣು, ಬಾರಿಹಣ್ಣು, ಪತ್ರಾವಳಿಯ ಎಲೆಗಳನ್ನು ಹರಿದುಮಾರಿ ವಿನಿಮಯ ಮಾಡಿಕೊಂಡು ಜೀವನಸಾಗಿಸುತ್ತಿದ್ದ ಬಹಳ ಬಡವರ ಬಾಳು ನರಕವಾಗಿತ್ತು. ಕಾಡಿನಜಾಡಿಗುಂಟ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಪ್ರಯಾಣ

ಮಾಡುವುದನ್ನು ನಿಲ್ಲಿಸಲಾಯಿತು. ಈ ಪ್ರತಿಕೂಲ ಸ್ಥಿತಿಯಿಂದ ಬಂಜಾರರು ತತ್ತರಿಸಿಹೋದರು. ಸಾಲದಕ್ಕೆ ಒಂದಿಷ್ಟು ಕಾನೂನು ಉಲ್ಲಂಘನೆ ಮಾಡಿದರೊ ಇಲ್ಲವೋ ಹಿಡಿದು 'ನೋಟಿಫೈಡ್' ಜನಾಂಗವೆಂದು ಹಣೆಪಟ್ಟಿಯನಿಟ್ಟು ಅಪರಾಧಿ ಜನಾಂಗದ ಗುಂಪಿಗೆ ಸೇರಿಸಿ ಅವರ ಮೇಲೆ ಕಾನೂನನ್ನು ಒತ್ತಾಯದಿಂದ ಹೇರಲಾಯಿತು.

ಆಗ ದಕ್ಷಿಣದಲ್ಲಿ ಬಲೀಷ್ಠವಾಗಿದ್ದು ಶ್ರೀರಂಗಪಟ್ಟಣ ಮಾತ್ರ. ಹೈದರ್ ಅಲಿ, ಮೈಸೂರು ಸಂಸ್ಥಾನದ ಅಡಿಯೊಳಾಗದೆ ಸ್ವತಂತ್ರನಾಗಿ ಶ್ರೀರಂಗಪಟ್ಟಣದಲ್ಲಿ ತನ್ನ ರಾಜ್ಯವನ್ನು ಸ್ಥಾಪಿಸಿದ್ದು ಅಲ್ಲದೆ ಸುತ್ತಲೂ ಪಾಳೆಗಾರರನ್ನು, ಸಾಮ್ರಾಜ್ಯದ ಅಧಿಪತಿಗಳನ್ನು ಸೋಲಿಸಿ ಶ್ರೀರಂಗಪಟ್ಟಣವನ್ನ ಬಲಿಷ್ಠ ಶಕ್ತಿಯನ್ನಾಗಿ ಮಾಡಹೊರಟಿದ್ದ. ದಕ್ಷಿಣದೆಡೆಗೆ ಮುಖಮಾಡಿದ ಕೆಂಪು ಜನರಿಗೆ ಶ್ರೀರಂಗಪಟ್ಟಣ ಗೋಡೆಯಂತಿತ್ತು. ಅವರ ದೃಷ್ಟಿಯು ಕೂಡ ಆ ಗೋಡೆಯನ್ನ ಬೀಳಿಸುವ ಕಡೆಗೆ ನೆಟ್ಟಿತ್ತು. ಹೈದರ್ ಅಲಿಗೆ ದವಸದಾನ್ಯಗಳನ್ನು ವಿಲೇವಾರಿ ಮಾಡುತ್ತಿದ್ದ ಬಂಜಾರರ ಮೇಲೆ ಬ್ರಿಟೀಷರ ದಬ್ಬಾಳಿಕೆ ಕಡಿಮೆಯಾಗಿರಲಿಲ್ಲ. ಮುಸ್ಲಿಮರ ಉಪಟಳ, ನಂತರ ಬ್ರಿಟೀಷರ ದುರಾಡಳಿತದಿಂದ ಬೇಸತ್ತಿದ್ದ ಬಂಜಾರರು ದಕ್ಷಿಣದ ಕಡೆಗೆ ಮುಖಮಾಡಿದ್ದರು. ಅವರೆಲ್ಲ ಒಂದೇ ಜಾಗಕ್ಕೆ ಬಂದು ಸೇರಿದ್ದರು. ಅದು ಕೊಪ್ಪಳದ ಬಹಾದ್ದರೂರ್ ಬಂಡಾ ಎನ್ನುವ ಪ್ರದೇಶ. ಬ್ರಿಟೀಷರು ಅಪರಾಧಿ ಬುಡಕಟ್ಟು ಎಂದು ಹೆಸರು ಕೊಟ್ಟು ಕಾಡು ಪ್ರವೇಶ ನಿಷೇಧಿಸಲ್ಲದೆ, ಕಾನೂನನ್ನ ತೀವ್ರಗೊಳಿಸಿ ಬಂಜಾರರು ಎಲ್ಲಿದ್ದರೂ ಅವರು ಕರೆದಾಗ, ಇಲ್ಲವೆ ವಾರ ಒಪ್ಪತ್ತಿಗೆ ಹೆಬ್ಬೆಟ್ಟು ಹಾಕುವ ನೆಪದಲ್ಲಿ ಕರೆದು ಹಿಂಸೆಮಾಡತೊಡಗಿದ್ದರು. ಈ ಎಲ್ಲಾ ಹಿಂಸೆಗಳ ವಿರುಧ ಪ್ರತಿರೋಧ ನಡೆಸುವಸಲುವಾಗಿ ಸುಮಾರು ಇಪ್ಪತ್ನಾಲ್ಕು ಇಪ್ಪತ್ತೈದು ಡೇರೆಗಳ ನಾಯಕರು ಸಭೆ ಸೇರಿದ್ದರು. ಬಹಾದ್ದೂರ್ ಬಂಡಾ ದಕ್ಷಿಣಕ್ಕೆ ಬರುವ ಪ್ರತಿ ಬಂಜಾರರಿಗೂ ಒಂದು ರಹದಾರಿಯಾಗಿದ್ದು ಪ್ರತಿಯೊಬ್ಬ ಬಂಜಾರನೂ ಆ ಮಾರ್ಗದಿಂದಲೇ ಮುಂದೆ ಪ್ರಯಾಣ ಮಾಡುವ ದಾರಿಕೂಡ ಅದಾಗಿತ್ತು. ಬ್ರಿಟೀಷ್ ಮಂದಿಯ ಉಪಟಳ ಸಹಿಸಲಾಗದ ಬಂಜಾರರು ಸಮಸ್ಯೆಯ ಪರಿಹಾರಕ್ಕೆ ಮಾರ್ಗೋಪಾಯ ಕಂಡುಹಿಡಿಯುವ ಸಭೆ ಎಂದೆ ಮಂದಿ ಭಾವಿಸಿದ್ದರು. ಐತಿಹಾಸಿಕವಾಗಿ ಈ ಸಭೆ ಬಹಳ ಮಹತ್ವ ಪೂರ್ಣವಾಗಿದ್ದರೂ, ಸಾಂಸ್ಕೃತಿಕವಾಗಿ ಇದು ಬಹಳ ಮುಖ್ಯವಾಗಿತ್ತು. "ಬುಕ್ಯಾ' ಮತ್ತು 'ಜಾತ್' ಎರಡು ಪಂಗಡದ ನಾಯಕರು ಇಲ್ಲಿ ಸೇರಿದ್ದರು. ಸಭೆಗೆ ಬಂದವರನ್ನುದ್ದೇಶಿಸಿ ದೇಸುಮಾತನಾಡಿದ್ದ. ಹ ರಾಮ ರಾಮ ರಾಮ. ಪಂಚಪಂಚಾಯಿತಿ ರಾಜ ಜೋಜೇರ ಸಭಾ, ಪಚಾರೆಲಾಕ್ ಬನ್ ಪಚಾರೆ ಸವಾಲಾಕ್ ಸಗಳ ಸಭಾ ಆನಂದ ಚ ಕಾಯಿಬಾ" (ನೆರದ ನಿಮಗೆಲ್ಲ ಶುಭಾಶಯಗಳು, ಬೋಜರಾಜನ ಸಭೆಯಲ್ಲಿ ಸೇರಿದ ಮಹತ್ವದ ಜನಸೇರಿದಂತೆ ಸೇರಿರುವ ನಿಮಗೆಲ್ಲಾ ಸ್ವಾಗತ ಎಲ್ಲರೂ ಸೌಖ್ಯವಾಗಿದ್ದೀರಾ) ಎಲ್ಲರನ್ನೂ ಉದ್ದೇಶಿಸಿ ಆಡಿದ್ದ. "ಆನಂದ್ ವಾ ಬಾಪೂ, ಆನಂದ ವಾ" (ಚೆನ್ನಾಗಿದ್ದಿವಪ್ಪ ಚೆನ್ನಾಗಿದ್ದಿವಿ) ಮತ್ತೊಬ್ಬ ನಾಯಕ, "ನಮಗೆ ಬಂದಿರುವ ಈ ಗಂಡಾಂತರದಿಂದ ಪರಿಹಾರ ಕಂಡುಹಿಡಿಯಿವುದು ನಮ್ಮ ಮೊದಲ ಆಧ್ಯತೆಯಾಗಬೇಕು" ಬ್ರಿಟೀಷರ ತಲೆನೋವಿಗೆ ನಿವಾರಣೋಪಾಯ ಕಂಡುಹಿಡಿಯುವ ದೆಸೆಯಿಂದ ಹೇಳಿದ. ಮೂಡ್‌ಪಂಗಡದ ಹಿರಿಯನಾಯಕನೊಬ್ಬ ಎದ್ದವನೆ, "ಈ ಕೆಂಪುಮಂದಿಯ ಪೀಡನೆ ಅಷ್ಟೊಂದು ಸುಲಭದಿಂದ ನಮ್ಮನ್ನ ಕೈಬಿಡುವಂತೆ ಕಾಣೋದಿಲ್ಲ, ಎಂಥೆಂಥ ಸಾಮ್ರಾಜ್ಯಗಳನ್ನೇ ಧ್ವಂಸಮಾಡಿ ಇಡಿ ನಮ್ಮ

ದೇಶವನ್ನೆ ನುಂಗಿನೀರುಕುಡಿಯೋಕ ಬಂದಿರೋ ಇವರಿಂದ ನಾವು ಬಚಾವ ಆಗೋದು" ಅನುಮಾನ ವ್ಯಕ್ತಪಡಿಸಿದ. ವಡ್ತ್ಯಾ ನಾಯಕನೊಬ್ಬ ಎದ್ದವನೆ "ಹಾಗಾದರೆ ಇದಕ್ಕೆ ಪರಿಹಾರವೆ ಇಲ್ಲವೆ?" ಪ್ರಶ್ನೆ ಮಾಡಿದ, ಕೊರ್ರಾಪಂಗಡದನಾಯಕ, "ನೋಡಿ, ಹೊರಗಡೆಯಿಂದ ಬಂದ ನಮ್ಮ ಶತ್ರು ಬಹಳಾನೆ ಚಾಲಕಿ ಅದಾನ, ಆ ಮಂದಿ ಬುದ್ದಿವಂತರು, ನಮಗಿಂತ ಬಹಳ ಮುಂದದಾರ, ನಾವ್ಯಾಕ ಅವರ ಕೂಡ ಒಪ್ಪಂದಮಾಡಿಕೊಂಡು ಬದುಕಬಾರದು" ಒಂದು ಸಾಧ್ಯತೆಯನ್ನ ಮುಂದಿಟ್ಟೆ. ಬಹುತೇಕ ನಾಯಕರು ಒಕ್ಕೊರಲಿಂದ, "ಛೇ ಛೇ ಅದು ಸಾಧ್ಯವಾಗದ ಮಾತು. ಅ ಮಕ್ಕಳಿಗ ನಾವ್ಯಾಕೆ ಗುಲಾಮರಾಬೇಕು ಬೇಡ" ಕೂಗಿದರು, ಬಹಳ ಬುದ್ದಿವಂತನೆಂಬಂತೆ ಎದ್ದು ನಿಂತ ವಡ್ತ್ಯಾ ನಾಯಕ, "ಈಗೇನು ಮಾಡೋದಂತಿರಾ", ಕುಂತಬಿಟ್ಟ ನೆರದವರೆಲ್ಲಾ ಜೋರಾಗಿ ನಕ್ಕರು. ಬ್ರಿಟೀಷರಿಗೆ ಅನುಮಾನ ಬಂದಿತ್ತು. ಬ್ರಿಟಿಷ್ ಮಂದಿ ತಲಿ ಒಂಚೂರ ಕೆಲಸಮಾಡುತ್ತೆ. ಮತ್ತೆ ಏನಾರು ಸಭೆಸೇರಿ ನಮ್ಮ ವಿರುದ್ಧ ಪ್ರತಿರೋಧ ಒಡ್ಡಬಾರದು ಅಂತ ಎಚ್ಚರಿಕೆಯಿಂದಲೇ, ಬಹಾದ್ದೂರ್ ಬಂಡಾ ಸಭೆಯನ್ನ ವೀಕ್ಷಿಸಲು ಬಂದಿದ್ದರು. ಸಭೆಗೆ ಬ್ರಿಟೀಷರು ಅಂತೇಳೆ, ಬಣ್ಣವನ್ನ ತಂದಿದ್ದ ನಾಯಕರು ಅವರ ಪ್ರವೇಶಕ್ಕೆ ಸರಿಯಾಗಿ ಹೋಳಿಹಬ್ಬದ ಆಚರಣೆಯನ್ನ ಆರಂಭಿಸಿದ್ದರು. ಬಹದ್ದೂರ ಬಂಡದಲ್ಲಿ ಅನೇಕ ವಿಷಯಗಳು ಚರ್ಚೆಯಾಗಿದ್ದವು. ಬಹಳ ಮುಖ್ಯವಾಗಿ ಬಂಜಾರರಿಗೆ ಶತ್ರು ಕೆಂಪುಮಂದಿ ಉಳಿದಂತೆ ಭಾರತದ ಎಲ್ಲಾ ಭಾಗಗಳಲ್ಲಿಯೂ ರಾಜಾಶ್ರಯ ದೊರೆತಿತ್ತು ಅವರಿಗೆ. ಏಕೆಂದರೆ ಅವರ ಸಣ್ಣಪುಟ್ಟ ಬೇಡಿಕೆಗಳನ್ನು ಇಡೇರಿಸುವವರೆ ಇವರಾಗಿದ್ದರು. ದಕ್ಷಿಣದಲ್ಲಿ ಪ್ರಬಲವಾಗಿ ಬೆಳೆಯುತ್ತಿದ್ದ ಹೈದರ್ ಅಲಿಗೆ ನೆರವು ನೀಡುತ್ತಿರುವ ವಿಷಯ ತಿಳಿದು ಬ್ರಿಟೀಷರು ಮತ್ತಷ್ಟು ಬಂಜಾರರನ್ನ ಕಿರುಕುಳಕ್ಕೆ ಇಡು ಮಾಡಿದ್ದರು. ಆದರೆ ಬಹದ್ದೂರ ಬಂಡದಲ್ಲಿ ನಡೆದ 24 ಡೆರೆಗಳ ನಾಯಕ ಸಭೆ ಐತಿಹಾಸಿಕವಾಗಿ ಬಹಳ ಮುಖ್ಯವಾಗಿತ್ತು. ಅದು ಬಂಜಾರರ ಮುಂದಿನ ನಡೆಯನ್ನ ನಿರ್ಧರಿಸಿತ್ತು.

ದೇಸುಬುಕ್ಯಾ ಕರಮ್‌ತೋಟ್ ವಿಚಲಿತನಾಗಿದ್ದ. ದಿನೆ ದಿನೆ ಬದಲಾಗುತ್ತಿರುವ ಪರಿಸ್ಥಿತಿ ಅವನ ಆಲೋಚನೆಯನ್ನೆ ಬುಡಮೇಲಾಗಿಸಿತ್ತು. ಒಮ್ಮೊಮ್ಮೆ ವ್ಯಾಪಾರಕ್ಕೆ ಹೋದ ಎತ್ತುಗಳನ್ನ ಕೆಂಪುಮಂದಿ ಜಪ್ತಿಮಾಡ್ಕೊಂಡ ಬಡ್ತಿದ್ರು. ವ್ಯಾಪಾರ ಬಿಟ್ಟು ಬಿಡುವುದೋ, ಇಲ್ಲ ಮುಂದುವರಿಸುವುದೋ ಒಂದು ಅರ್ಥ ಆಗದಾಗಿತ್ತು. ಸೋಮ್ಲ ಬುಕ್ಯಾ ಕರಮ್‌ತೋಟ್, ಚೊಕ್ಲ ಬುಕ್ಯಾಕರಮತೊಟ್, ತಂದೆಯ ಒಳಗೆ ನಡೆದಿರುಬಹುದಾದ ತಾಕಲಾಟದ ಅಂದಾಜನ್ನ ಮಾಡತೊಡಗಿದರು. "ಅಪ್ಪ ನಿಮ್ಮ ತಾಕಲಾಟ ಅರ್ಥ ಆಗುತ್ತೆ, ಸಂಸಾರದೊಡ್ಡದಾಗಿ ಬೆಳಿತಾಯಿದೆ, ದುಡಿಮೆ ಕಡಿಮೆಯಾಗ್ತಿದೆ. ನಾವೆಲ್ಲ ವ್ಯಾಪಾರದ ಜೊತೆಗೆ ಸಣ್ಣ ಸಣ್ಣ ಉದ್ಯೋಗ ಆರಂಭಮಾಡೋದಂತ" ರಾಗ ಎಳದ ಚೋಕ್ಲಾ. ಅವನ ಮನಸ್ಸಿನೊಳಗೆ ಏನಾದರು ಇದ್ದೀತು ಅಂತ ತಿಳಿಯುವ ಕುತೂಹಲ ದೇಸುಗಾಯಿತು. "ಏನು ಉದ್ಯೋಗ ಮಾಡ್ತಿಯಪ್ಪ" ಕೇಳಿದ. "ನಾನು ಸರಾಯಿಬಟ್ಟಿ ಹಾಕೋದು ಅಂತ ವಿಚಾರಮಾಡಿನಿ" ಅವರಪ್ಪ ಮಾರಿನೋಡಿದ. ದೇಸುನ ಮುಖಗಂಟಿಕ್ಕಿತು. "ಅಲ್ಲಾ ಕಣಲೇ, ಇದು ಬ್ರಿಟೀಷರ ಸರ್ಕಾರಕ್ಕೆ ವಿರುದ್ದ ಅಲ್ವಾ, ಯಾಕ ಸುಮ್ನೆ ಪೇಚಿಗೆ ಸಿಗಾಕ್ಕೋತಿಯಾ, ಆ ಸೇವಾಭಾಯ ನಡೆಸಿದಂಗಾಗುತ್ತೆ" ಮಾತಾಡದಾದ, "ಈಗ, ನಮ್ಮ ವ್ಯಾಪಾರನೂವೆ ಬ್ರಿಟೀಷರಿಗೆ ವಿರುದ್ಧವೆ ಕಾಡಿಂದ ಕಟ್ಟಿಗೆ ಆಯುವುದು ಅವರಿಗೆ

ವಿರುದ್ಧವೆ ಅಂದಮೇಲೆ ನಮ್ಮಂಥ ಬಡಮಂದಿ ಸಾಯಬೇಕು, ನೀ ಏನು ಯೋಚನೆಮಾಡಬೇಡ, ಅದನ್ನ ನಾನು ನೋಡ್ಕಂತಿನಿ" ಚೋಕ್ಷ ನಿರ್ಧಾರ ಮಾಡಿಕೊಂಡವನಂತೆ ಹೊರಟಿದ್ದ. ಸೋಮ್ಲ ಅವನನ್ನ ತಡಿಯಾಕ ನೋಡಿದ. "ಹೂಂ, ಹೋಗಲಿ" ಸನ್ನೆಮಾಡಿದ. ಸೋಮ್ಲ ತಾನು, ಕಟ್ಟಿಗೆ ವ್ಯಾಪಾರ, ಈಜ್ಜಲು ವ್ಯಾಪಾರಕ್ಕೆ ತೊಡಗುವುದಾಗಿ ಆಲೋಚಿಸಿದ. ಮಕ್ಕಳು ಸ್ವಯಂ ನಿರ್ಧಾರ ತಗೊಳದಕ್ಕೆ ಬಿಟ್ಟು ಮೌನವಾಗಿ ಬದಲಾವಣೆಯ ಬಿರುಗಾಳಿಯನ್ನ ಗಮನಿಸಿತೊಡಗಿದ. ಸುತ್ತಲ ಅನೇಕ ಡೇರೆಗಳ ಮೇಲೆ ಬ್ರಿಟೀಷರ ಸೈನಿಕರು ಧಾಂಧಲೆ ಮಾಡಿ ಧ್ವಂಸಗೊಳಿಸಿ ಮಂದಿಯನ್ನ ಓಡಿಸಿದ್ದರು. ಏನು ಮಾಡಬೇಕೆಂದು ತಿಳಿಯದೆ ದೇಸುನ ಹತ್ತಿರ ಓಡಿಬಂದಿದ್ದರು. ದೇಸು ಕೂಡ ಬ್ರಿಟೀಷರಿಂದ ಅನೇಕ ಸಲ ತೊಂದರೆ ಅನುಭವಿಸಿದ್ದ. "ಈ ಕೆಂಪ ಮಂದಿ ಕಿರುಕುಳ ಸಾಕಾಯ್ತು ವ್ಯಾಪಾರ ಬೇಡ ಏನುಬೇಡ ತಣ್ಣಗ ಮನಿಯೊಳಗ ಇರೋದು ಪಾಡ ಅನ್ನಿದೆ ನೋಡ್ರಿ" ವಿಷಾದದಿಂದ ಹೇಳಿದ. "ಅಲ್ಲಾ ನಾಯಕಪ್ಪ, ನೀವ ಹಿಂಗಂದ್ರ ಹೆಂಗ ನಮ್ಮ ಪಾಡೇನು ಅಂತೀನಿ, ನಮ್ಮ ಮುಂದಿನ ಜೀವನ ಏನು ಮಕ್ಕಳ ಮರಿ ಭವಿಷ್ಯ" ಮಂದಿ ದಿಗಿಲುಗೊಂಡಿದ್ರು. "ನಮ್ತಾವ ಉಳಿದಿರೋದ ಒಂದೇ ಮಾರ್ಗ" ಗಂಭೀರವಾಗಿಯೇ ನುಡಿದಿದ್ದ. "ಏನಪ್ಪ ಅಂದ್ರ, ಒಂದು, ಬಂದ ದಿಕ್ಕಿನಿಂದ ಹೇಗೆ ಬಂದೆವೋ ಅದೇ ದಿಕ್ಕಿಗ ಹೋಗಿ ನೆಲಸೋದು, ಅಲ್ಲಿ ಮಳಿಮಾರಿಲ್ಲ, ಕಾಡಿಲ್ಲ, ಹುಲ್ಲಿಲ್ಲ ಮಂದಿ ಬದುಕೆ ದುಸ್ಥರ ಆಗ್ಯೆತೆ ಇಲ್ಲ, ಇಲ್ಲಿ ಮಂದಿ ಹ್ಯಾಂಗ ಕೂಲಿ, ನಾಲಿ ಮಾಡ್ಕೊಂಡು, ಹೊಲ, ಜಮೀನು ಅಂತೇಳಿ ಚೂರುಪಾರು ಒತ್ತುವರಿ ಮಾಡ್ಕೊಂಡು ಬದುಕ ಕಟ್ಟಿಕೊಳ್ಳಬೇಕು". ಕೆಲಮಂದಿ ಹೌದು ಇದೆ ಸೂಕ್ತ ಅಂತ ಒಪ್ಪಿಕೊಂಡು ಹೊಂಟೆಹೋದ್ರೆ ಇನ್ನೂ ಕೆಲಮಂದಿ ತಲಿಯೊಳಗ ವಿಚಾರ ಹೋಗದೆ "ಅಲ್ಲ ನಾಯಕರೆ ನಮತಾವ ಏನೂ ಇಲ್ಲ, ಅದೇನೋ ಅಂತಾರಲ್ಲ 'ಕೈಯಾಗ ಕಾಸಿಲ್ಲ ಮೈಯಾಗ ಉಸರಿಲ್ಲ' ಹಂಗಾಗ್ಯೆತೆ ನಮ್ಮ ಬಾಳವೆವು ಅಂತಾದ್ರಾಗ ನೀವು ಏನೋ ವಿಷಯ ಹೇಳಿದ್ರಿ ನಮ್ಮ ತಲಿಗ ಹೋಗಲೆ ಇಲ್ಲ" ಗೊಂದಲದಿಂದ ಅದರ ಸರಳಿಕರಣಕ್ಕಾಗಿ ಅವನ ಮಾರಿ ನೋಡಿದರು. "ಅಲ್ಲ ಕಣ್ರಯ್ಯ, ನಮ ಸ್ಥಿತಿ ಹ್ಯಾಂಗ ಆಗ್ಯೆತೆ ಅಂತಂದ್ರ, ಹೊಸನೀರಿನ ಗುಂಟ, ಇಳಿಯೋ ನದಿ ಮೀನಿನ ಹಂಗ ನಾವೆಲ್ಲ ಹೊಸ ಜಗತ್ತಿನ ಕಡಿಗ ನಮ್ಮ ನದಿಯನ್ನ ಬಿಟ್ಯೆವಿ. ನಾವೀಗ ವಾಪಾಸು ನಮ್ಮ ನದಿಗೆ ಹೋಗಾಕಂತು ಆಗಾಕಿಲ್ಲ. ಯಾಕಂದ್ರ ಕೆಂಪಮಂದಿ ಸರ್ಕಾರ ಅಷ್ಟು ಹಡ್ಡಿಲ್ಲಾ ಏನ್ರಪ್ಪ. ಕಾಡೊಳಗೆ ಕಾಲಿಟ್ರೆ ತಲಿಕಡಿತಾರ ನಮಗ ಜಾಡಿರೋದ ಕಾಡಿನೊಳಗಿಂದ. ಪ್ರವೇಶ ಮಾಡಿದ್ವಿ ಹೇಣ್ತಿ ಮಕ್ಕಳ ಸಮೇತ ಗೊತ್ತಿಲ್ಲದ ಯಾವುದೋ ಜೈಲಿಗೆ ಹಾಕಿ ಬೀಗ ಜಡದು ನಮ್ಮ ಜೀವನ ನರಕಮಾಡ್ತಾರ. ಈಗ ಬಂದೀವಿ ಬಂದೀವಿ ಇಲ್ಲೇ ಸಾಯಬೇಕು". ಒಂದು ಸ್ಪಷ್ಟವಾದ ಚಿತ್ರಣವನ್ನ ಅವರೆದುರಿಗೆ ಬಿಡಿಸಿಟ್ಟಿದ್ದ. "ಓ ನೀ ಹೇಳೋದು ಬರಾಬರಿ ಐತೆ ಬಿಡಣ್ಣ. ನಾವಿನ್ನು ಬರ್ತಿವಿ". ಮುಗ್ದಮಂದಿ ಅನಿವಾರ್ಯತೆಯನ್ನ ಅರಿತುಕೊಂಡಿದ್ದರು. ಹೊರಗಿನ ಶತ್ರು, ಒಳಗಿನ ಶತ್ರು ಇಬ್ಬರಿಂದಲೂ ಅವರಿಗೆ ದೊಡ್ಡ ಅಘಾತವಾಗಿತ್ತು.

ಡೇರೆಯ ಮೇಲೆ ಕೆಂಪಮಂದಿ ಹಲ್ಲೆ ಮಾಡಿ ಹೆಂಗಸರನ್ನ ಮಕ್ಕಳನ್ನ ಓಡಿಸಿದ್ದರು. ದೇಸುಗೆ ಅವನ ಕಾಲಡಿಗೆ ನೆಲ ಬಾಯಿ ಬಿಟ್ಟಂಗಾಗಿತ್ತು. ಸೋಮ್ಲ, ಚೊಕ್ಲ, ಮಂಗ್ಯಾ, ಚಾಪ್ಲ ಎಲ್ಲರನ್ನೂ ಎಳ್ಕಂಡಹೋಗಿ ಜೈಲಿಗಹಾಕಿದ್ರು, ಅವರೆಲ್ಲರನ್ನ ಬಿಡಸೋದಕ ಅಂವ ಹೋರಾಟ ನಡೆಸಬೇಕಿತ್ತು. ಡೇರೆ ತುಂಬ ಕಿಚೋ ಅನ್ನುವ ಮೊಮ್ಮಕ್ಕಳು, ವ್ಯಾಪಾರ ನಿಂತು ಬಹಳ ದಿನಗಳೇ ಆಗಿದ್ದವು.

ಇವ್ವದ್ರಲ್ಲೇ ರೊಟ್ಟಿನೋ ಗಂಜಿನೋ ಕುಡದು ಕಾಲ ಕಳಿತ್ತಿದ್ದ ಮನಿಮಂದಿಗ ದುಸ್ತರ ಆಗಿತ್ತು. ಸೋಮ್ಲನ ಮಗ ಧನ್‌ಸಿಂಗ್ ಆಟ ಆಡೋವಯಸ್ಸಿನ ಬಾಲಕ. ಕೆಂಪಮಂದಿ ಅವನಿಗೂ ಮರೆ ಮುಸಡಿ ನೋಡದಂಗ ಹೊಡದು ಹೋಗಿದ್ರು. ದೇಸುಗ ಕರಳು ಚುರಗುಟ್ಟಿತ್ತು. ಅತ್ತರೆ ಮನಿಮಂದಿ ಸಹಿಸಾಕಿಲ್ಲ ಅಂದವನೆ ಆಗಿಂದಾಗ್ಗೆ. ಅವನ ವ್ಯಾಪಾರಕ್ಕ ಆವಾಗವಾಗ ನಾಣ್ಯಕೊಡುತ್ತಿದ್ದ ದೊಡ್ಡ ಕುಳ ಹಿರೆನಂದಿ ಪರಸಪ್ಪನ ತಾವ ಹೋಗಿ ಬಂದ ಸಂಕಟ ಹೇಳ್ಕೊಂಡ್ರೆ ಸಹಾಯಮಾಡ್ತ್ಯಾನಂತ ಹೋದ. "ಏನ್ಲೆ ನಾಯಕ ಈ ಕಡಿಗ ಬಂದಿ, ಏನ ಸಮಾಚಾರ, ಕೆಂಪಮಂದಿ ಕಾಟಾ ಸಾಕಾಗಹೋತನೋಡು, ಆಟೀಟು ವ್ಯಾಪಾರಮಾಡ್ಕಂದ್ವಿ ಈಗ ಮುಕ್ಕಾಲು ಪಾಲ ಆ ಮಕ್ಕಳಿಗೆ ಕೊಡಬೇಕಾಗ್ಯೆತಿ, ಹೂಂ, ನಿಂದೇನ ಕತಿಯಪ್ಪ." ಅವನ ಕಡಿಗ ಮುಖವಾಡಿ ಕೇಳಿದ. ದೇಸುಗ ಆವಾಗಲೇ ವಯಸ್ಸಾಗಿತ್ತು ಬದಲಾಗುತ್ತಿರುವ ಪರಿಸ್ಥಿತಿಯೊಂದಿಗೆ ಹೋರಾಡಲಿಕ್ಕೆ ಶಕ್ತಿನ ಇಲ್ದಂದಾಗಿತ್ತು. ಕಣ್ಣಾಗ ನೀರು ಹರಿಯುತ್ತಿತ್ತು. ಮಾತೆ ಹೊರಡದಾಗಿದ್ದವು. ಎಷ್ಟೆ ಆದ್ರೂ ದೇಸುಬುಕ್ಯನ ಬಹಳ ಹತ್ತಿರದಿಂದ ನೋಡಿದ ಪರಸಪ್ಪ. ಇಂವ ನಮ್ಮ ಮನುಷ್ಯ ಅಂತ ಅನಿಸಿತ್ತು ಆತನಿಗ. ಯಾವಾಗಲು ಧೈರ್ಯದಿಂದ, ಸತ್ಯ ನಿಷ್ಠೆಯನ್ನ ಪಾಲಿಸುವ ದೇಸು ಈಗ ಹೆಂಗಸರ ಹಾಗೆ ಅಳುತ್ತಿರುವುದು ಕಂಡು ಅಚ್ಚರಿಗೊಂಡ ಪರಸಪ್ಪ. "ಲೇ ನಾಯ್ಕ, ಛೇ, ಏನಾತ್ಲೆ. ನಾ ಅದೀನಿ ಹೇಳು. ನಿನ್ನ ನೋಡಿ ಧೈರ್ಯ ಕಲ್ತವನು ನಾನು. ಈ ದಟ್ಟ ಅರಣ್ಯದಾಗ ಎಗ್ಗಿಲ್ಲದೆ ಪ್ರಯಾಣಮಾಡಿ ನನ್ನ ಸಾಮಾನು ಸರಂಜಾಮನ್ನ ಹೈದ್ರಬಾದ್ ಮಟ ಸಾಗಿಸಿದವನ ನೀನು. ಇಲ್ಲಕ್ರ ನಮಗೆಲ್ಲಿ ಧೈರ್ಯ ಬರಬೇಕು. ನೀನ ಹಿಂಗ ಅತ್ರ ಹೆಂಗೋ ನನ್ನಪ್ಪಾ. ಹೇಳು ಏನಾತು" ಅವನನ್ನ ಸಮಾಧಾನಪಡಿಸಿದ. "ಏನ ಹೇಳ್ಲಿ ಸೋಮಿ, ಕೆಂಪಮಂದಿ ನಮ್ಮ ಡೇರೆಗಳನ್ನ ಧ್ವಂಸ ಮಾಡಿ; ಹೆಂಗಸರು ಮಕ್ಕಳನ್ನ ಥಳಿಸಿ ನಾಕುಮಂದಿ ನನ್ನ ಮಕ್ಕಳನ್ನ ಹಿಡ್ಕೊಂಡು ಹೋಗ್ಯಾರ" ದುಃಖ ತಡಿಯಾಗ ಆಗದ ಬಿಕ್ಕಳಿಸಿದ. ಪರಸಪ್ಪನ ಮಾರಿ ಕಪ್ಪಿಟ್ಟಿತು. ಅಲ್ಲಪ್ಪ, ನಿನ್ನೆ ಮನ್ನೆ ಬಂದ ಈ ಸೂಳಿಮಕ್ಕಳ್ದು ಅದೇನ ಉಪಟಳ ಆತು ಅಂತೀನಿ", ಒಂದ ಗಳಿಗೆ ಆಲೋಚನೆ ಮಾಡಿದ. ಅದೇನ ಹೊಳಿತು, " ಹೂಂ ಕುದುರೆ ಏರು" ಅಂದವನೆ ಕುದುರೆ ಹತ್ತಿ ಕೊಪ್ಪಳಗ ಗಡಿಯೊಳಗ ಬೀಡು ಬಿಟ್ಟಿದ್ದ ಕೆಂಪಮಂದಿಯ ಅಧಿಕಾರಿ ಹತ್ತಿರ ಕರ್ಕೊಂಡು ಹೊಂಟ.

ಸೊವ್ಲ್ಲಾ, ಚೊಕ್ಲ, ಮಂಗ್ಯಾ್ಲ, ಚಾಪ್ಲ ಅಲ್ಲದೆ ಡೇರೆಯ ಅನೇಕ ಬಂಜಾರರನ್ನ ಖೈದಮಾಡಲಾಗಿತ್ತು. ಅವರಿಗ ತೀಳಿಲ್ಲದೆ, ನೀರಿಲ್ಲದೆ ಕಟ್ಟಿಗೆ ಕಡಿಯಾಕ ಹಚ್ಚಿದ್ದರು. "ಪರಸಪ್ಪ, ವಾಟ್ ಪರಸಪ್ಪ," ಬ್ರಿಟೀಷ್ ಅದಿಕಾರಿ ರಾಬರ್ಟ್ ಮಸಲೀನ್ ಕೇಳಿದ. ಪರಸಪ್ಪ, ಕನ್ನಡದಲ್ಲೇ ಏನೇನೋ ವಿಷಯ ಹೇಳಿದ. ಆದರೆ ಅವನಿಗೆ ಅದೆಲ್ಲ ಅರ್ಥ ಆಗಲಿಲ್ಲ. ರಾಬರ್ಟ್ ಮಸಲಿನ್, ಕನ್ನಡ – ಇಂಗ್ಲಿಷ್ ಮಾತಾಡುತ್ತಿದ್ದ ಬಟ್ಲರ್‌ನನ್ನ ಕರೆದು ವಿಷಯ ಪ್ರವೇಶಕ್ಕೆ ಹವಣಿಸಿದ. ಏನು ವಿಷಯ ಮಿಸ್ಟರ್ ಬಟ್ಲರ್. "ವೈ ದೆ ಹಾವ್ ಕಂ". ಕೇಳಿದ. ",ಮೈಲಾರ್ಡ್ ದೆ ಹಾವ್ ಸಂಮ್ ಪ್ರಾಬ್ಲಮ್ಸ್" ಅವನ ಪಾಂಡಿತ್ಯ ಪೂರ್ಣ ಇಂಗ್ಲಿಷನಲ್ಲಿ ಆತನಿಗೆ ಸನ್ನಿವೇಶದ ಇಡಿ ಸಾರಾಂಶವನ್ನ ವಿವರಿಸಿದ. ಅವನಿಗೆ ಅದೇನು ಅರ್ಥ ಆಯ್ತೊ ಇವನು ಅದೇನು ಕಮ್ಯುನಿಕೇಟ್ ಮಾಡಿದ್ನೋ ಮಸಲಿನ್‌ಗೆ ಅಂತ ಪರಸಪ್ಪ ಹಾಗೂ ದೇಸುಗೆ ಅರ್ಥವೇ ಆಗಲಿಲ್ಲ. ಮಸಲಿನ್ ಮಾತ್ರ ತೆಪರನಂತಹ ಚೊಕ್ಲ, ಮತ್ತು ಮಂಗ್ಲ್ಯಾನ ಬಿಡುಗಡೆಮಾಡಾಕ ಒಪ್ಪಿಕೊಂಡ. ದೇಸು ಬುಕ್ಯಾ,

ತೀರ್ಪುಕೇಳಿ ಕುಸಿದುಬಿಟ್ಟ. ಸೋಮ್ಲು, ಚೊಕ್ಲ ಇಬ್ಬರೆ ತನ್ನ ವಂಶದ ಪರಂಪರೆಯನ್ನ ಮುಂದುವರೆಸಿಕೊಳ್ಳಬಲ್ಲರು ಎಂಬ ನಂಬಿಕೆ ಇತ್ತು. ಆದರೆ ಅವರೆ ಜೈಲಿನೊಳಗೆ ಕೊಳೆಯುವಂತಾಯಿತು. ಮುಂದಿನ ಭವಿಷ್ಯದ ಬಗ್ಗೆ ದೊಡ್ಡದೊಂದು ಕೊರಗು ಕಾಡಿಸಿತ್ತು. ಪರಸಪ್ಪ ಸಮಾಧಾನ ಪಡಿಸಿದ. "ನೋಡ್ಲೆ ದೇಸು, ಈ ಮಂದಿ ನಮ್ಮನ್ನ ಆಳಾಕಬಂದಾರ ನಿಜ, ಆದ್ರ ಅವರಿಗೆ ನಮ್ಮ ಸಂಪತ್ತಿನ ಮ್ಯಾಲ ಆಟಕಣ್ಣಿರೋದು. ನೀ ಏನು ಕಾಳಜಿ ಮಾಡಬ್ಯಾಡ ಎನಪ, ಮನಿ ಮುಲಿಯೊಳಗ ಬಂಗಾರದ ನಾಣ್ಯಗಳದಾವೇನು ತಗಂಡಬಾ ಮುಚ್ಕೊಂಡ ಬಿಡ್ತಾನ," ಮರ್ಮದಮಾತ ಹೇಳಿದ "ಅಯ್ಯೋ ಸಾವ್ಕಾರ ಆ ಬಂಗಾರದ ನಾಣ್ಯ ಇದ್ದಿದ್ದರ ನಾಯಾಕ ಹಿಂಗೆ ಪರದಾಡತಿದ್ದೆ? ಡೇರೆಯೊಳಗೆ ಮಮ್ಮಕಳು ಉಪಾಸ ಬಿದ್ದ ಸಾಯ್ತಿರಲಿಲ್ಲ. ಎಲ್ಲಿಂದ ಬಂದೀತ ಹೇಳ್ರಿ, ಕೆಂಪಮಂದಿ ಬಂದಿಂದ ನಮ್ಮ ಎತ್ತುಗಳು ಮೇಯಕ ಹುಲ್ಲು ಇಲ್ಲದ ಸಾಯ್ತಿರೋವನ್ನ ಸಾಬ್ರಿಗ ಮಾರಿದಿವಿ. ಭಟ್ಟಿ ಸರಾಯಿ ಮಾಡಾಕ ಕಾಡಿಂದನೂ ಓಡಿಸಿದ್ರು, ಏನೋ ಹೆಂಗಸರು ಕಳುವಿಲೆ ಕಾಡಿನೊಳಗಿಂದ ಕವಳಿ, ಕಂಚು, ಕಾರಿ, ಬಾರಿಹಣ್ಣು ತಂದು ಮಾರು ಚೂರುಪಾರು ಕಾಳುಕಡಿ ತರ್ತವೆ." ಬಹಳ ವರ್ಷಗಳಿಂದ ಎದಿಗೂಡಿನೊಳಗೆ ಸುತ್ತುಹೊಡಯುತ್ತಿದ್ದ ಭಾವನೆಗಳನ್ನು ಹೊರಹಾಕಿದ್ದ.

ಡೇರೆಗೆ ವಾಪಾಸು ಬಂದಾಗ ಸೌರಾತ್ರಿಯಾಗಿತ್ತು. ಛಳಿಯೊಳಗೆ ಮಕ್ಕಳು ಮುದುರಿಕೊಂಡಿಮಲಗಿದ್ದವು. ತನ್ನ ಮುಂದಿನ ಪರಂಪರೆಯನ್ನ ಎತ್ತಿಹಿಡಿಯುವ ಏಕೈಕವಾರಸುದಾರ ಸೋಮ್ಲನ ಮಗ ಧನ್‌ಸಿಂಗ್ ಬುಕ್ಯಾ ಕರಮ ತೋಟ್‌ನ ಮೇಲೆ ತನ್ನ ಶಾಲು ತೆಗೆದುಹೊದಿಸಿದ. ತನ್ನಿಬ್ಬರು ಮಕ್ಕಳು ಬ್ರಿಟೀಷ್‌ರ ಹತ್ತಿರ ಗುಲಾಮರಾಗಿ ದುಡಿಯುತ್ತಿರುವುದು ನೆನಪು ಮಾಡಿಕೊಂಡು ದುಃಖಿಸತೊಡಗಿದ. ಪರಂಗಿಮಂದಿಯ ದುರಾಡಳಿತ ದಿನೆ ದಿನೆ ಹೆಚ್ಚಾಗತೊಡಗಿತು. ದೇಸು ಹೊತ್ತಾರೆ ಎದ್ದು ಕಾಡಿಂದ ಕಟ್ಟಿಗೆ ಕಳುವು ಮಾಡುವುದು ಅನಿವಾರ್ಯವಾಗಿತ್ತು. ಸೋಮ್ಲಿ ಅವನೊಂದಿಗೆ ಹೋಗಿ ಕಾಡಿಂದ ಕವಳಿಹಣ್ಣು, ಕಾಡಿನ ಮರಗಳ ಅಂಟು ಕಂಚು, ಬಾರೆ, ಕಾರೆ ಹಣ್ಣುಗಳನ್ನು ಹರಿದುಕೊಂಡು ಬಂದು ಪಕ್ಕದ ಹಳ್ಳಿಗಳಿಗೆ ಹೋಗಿ ಮಾರಿದರೆ, ದೇಸು ತಲೆಯಮೇಲೆ ಮಜಬೂತಾದ ಕಟ್ಟಿಗೆ ಹೊರೆಯನ್ನ ಹೊತ್ತು ನಾಕೈದು ಮೈಲಿದೂರ ನಡೆಯುವುದು ಅನಿವಾರ್ಯವಾಗಿತ್ತು. ನೆತ್ತಿ ಉರಿಕಿತ್ತಾಗ ಹೆಗಲಮೇಲೆ, ಭುಜದಮೇಲೆ, ಹಾರಿಸುತ್ತ, ದುಗ್ಗಾಣಿಗೊಂದರಂತೆ ಮಾರಿ ಕೊಂಡು ಅಣಿಯಸಂತೆಮಾಡಿ, ಅಣೆಕೊಟ್ಟು ಗಂಡಹೆಂಡತಿ ಇಬ್ಬರು ಈಚಲಹೆಂಡವನ್ನು ಕುಡಿದು ಮನೆ ಕಡೆಗೆ ಹೊರಡುತ್ತಿದ್ದರು. "ಎಂಥ ದಿನ ಬಂತು ಅಂತಿನಿ. ಡೇರೆಯೊಳಗ ಮಕ್ಕಳು, ಮೊಮ್ಮಕಳೊಂದಿಗೆ ಆರಾಮವಾಗಿ ಕಾಲಕಾಲಿಬೇಕಾಗಿದ್ದು ನೀನು.. ಊಹೂಂ .. ಆ ಗುಜಾಸತಿ ಇನ್ನೂ ಎಂಥೆಂಥ ದಿನಗಳನ್ನು ತೋರಿಸುತ್ತಾಳೋ ನಮಗೆ ಆ ದೇವರೆ ಬಲ್ಲ" ಹೆಂಡತಿಯ ಕಷ್ಟನೋಡಲಾಗದೆ ಹೇಳಿದ. "ಅಯ್ಯೋ, ನೀ ಯಾಕೆ ಸಂಕಟಪಡ್ತಿಯಾ ಪರಿಸ್ಥಿತಿ ಬಂದಹಾಗೆ ಬದುಕಬೇಕು. ಇದೇನು ಮಹಾಬಿಡಿ ಹಿಂಗೆ ಏನು ಇರಾಕಿಲ್ಲ ನಮ್ಮ ಮುಂದೆ ದಿನಗಳು ಹೆಂಗಬರ್ತಾವಂತ ಯಾರಿಗೊತ್ತು", ಸಮಾಧಾನ ಆಗುವಂತೆ ನುಡಿದಿದ್ದಳು. "ಆದ್ರೂ, ನಮ್ಮ ಹೆಣ್ಣು ಮಕ್ಕಳು ಈ ಹಿಂದ ಯಾವತ್ತು ದುಡಿಯುತ್ತಿರಲಿಲ್ಲ. ಪರಂಗಿ ಮಂದಿ ಬಂದ ಮೇಲೆ ನಮ್ಮ ಪರಿಸ್ಥಿತಿಗಳು ಬದಲಾದವು. ನಮ್ಮ ತಿಳುವಳಿಕೆ, ನಮ್ಮ ಆರ್ಥಿಕಸ್ಥಿತಿ ಎಲ್ಲಾನು ಬದಲಾದವು. ಹಿಂದೆ ಮುಸ್ಲಿಂರಾಜರಿಗೆ ಧವಸಧಾನ್ಯ

ಪೂರೈಸುತ್ತ ನೆಮ್ಮದಿಯಿಂದ ಬಂದಮಂದಿ. ಈಗ ಬ್ರಿಟೀಷರ ಗುಲಾಮರಾಗುವುದೆಂದರೆ". ಬದಲಾವಣೆಯ ವೈಪರೀತ್ಯವನ್ನು ಬಿಡಿಸಿಡುವು ಪ್ರಯತ್ನ ಮಾಡಿದ. ಸೋಮ್ಲಿಗೆ ಏನೂ ಅರ್ಥವಾಗಲಿಲ್ಲಾ, ಡೇರೆಯೊಳಗೆ ಹಾಸಿಗೆಹಿಡಿದು ಮಲಗಿರುವ ಅವಳ ತಾಯಿ ರೂಪ್ಲಿಯದ್ದೆ ಚಿಂತೆ ಕಾಡಿತ್ತು. ಈಗ, ಆಗ ಎನ್ನುವ ಆವಸ್ಥೆಯಲಿರುವ ಅವಳಿಗೆ ಸೋಮ್ಲಿ ಹತ್ತಿರವಿರಬೇಕಿತ್ತು. ಹಾಗಾಗಿ ತಾಯಿಯ ಪರಿಸ್ಥಿತಿಯ ಬಗ್ಗೆ ಅನುಮಾನ ಕಾಡಿತ್ತು. ಯಾಕೋ ಅವಳಿಗೆ ಅಸಮಾಧಾನ, ಕಳವಳ ಹೊಟ್ಟೆಯೊಳಗ ಸಂಕಟ ಅನಿಸಿ ಗಂಡನ ಎದುರಿಗೆ ಹೇಳಲಾಗದೆ ಒಳಗೆ ನುಂಗಿಕೊಂಡು ಬೇಗ, ಬೇಗ ಕೇಳಿದಷ್ಟಕ್ಕೆ ಹಣ್ಣುಗಳನ್ನ ಮಾರಾಟ ಮಾಡಿ ಕಟ್ಟಿಗೆ ಮಾರಲು ಶ್ರೀಮಂತರ ಗಲ್ಲಿಗೆ ಹೋಗಿ "ಕಟಗಿಬೇಕನವ್ವ, ಕಟಗಿ" ಹೊರೆಯನ್ನ ಹೊತ್ತು ಕೂಗತ್ತಿದ್ದ ದೇಸುನ ಹತ್ತಿರ ಹೋದಳು. ಗಂಡನ ಆವಸ್ಥೆ ಕಂಡು ಕರಳು ಕಿತ್ತುಬಂದಂಗಾಯ್ತು. ಕುದುರೆ ಮೇಲೆ ಕುಳಿತು ಆಳುಗಳಿಗೆ ಅಪ್ಪಣೆ ಮಾಡ್ತಾಯಿದ್ದ ಸರದಾರ ಈಗ ಬೀದಿ ಬೀದಿ ಅಲೆದು ಕಟ್ಟಿಗೆ ಮಾರುವುದೆಂದರೆ ಸಹಿಸಿಕೊಳ್ಳಲಾಗದೆ ಸೆರಗು ಅಡ್ಡಹಿಡಿದು ಬಿಕ್ಕಳಿಸಿದಳು. "ಯಾರು ಕೇಳ್ತಾ ಇಲ್ಲಾ" ಹೆಂಡತಿಯ ಮಾರಿನೋಡಿದ. "ನೀವೇನು ಯೋಚನೆ ಮಾಡಬೇಡಿ, ಗಳಿಗೆ ಆ ಹೊರೆಯನ್ನ ನನ್ನ ತಲೆ ಮೇಲಿಡಿ," ಎನ್ನುತ, ಮುಂದೆ ಹೋಗಿ ಹೊರೆಯನ್ನ ತಲೆಮೇಲೆ ತೆಗೆದುಕೊಂಡವಳೆ "ಕಟ್ಟಿಗೆ ಬೇಕೆನವ್ವ" ಅಂತೇಳಿ ಒಂದೆರಡು ಸಾರಿ ಕೂಗಿದಳು. ಯಾರು ಚಕಾರ ಎತ್ತದವರು "ಎಯ್, ಯಾಡಿ ಹೆಂಗ ಹಾಕ್ತಿಯ ಹೊರೆನಾ" ಧ್ವನಿ ಸೋಮ್ಲಿ ಹಿಂದೆ ಇದ್ದ ದೇಸು "ಎಂಟಾಣಿ ಕೊಡಿ ಬುದ್ದಿ" ಅಂದ, "ಎಂಟಾಣೆ ಯಾಕಲೇ ಅದ್ಕ, ಐದಾಣಿ ಕೊಡ್ತಿನಿ ಹಾಕಹೋಗ್ತ್ರಗೆ" ಬೇಕಾಬಿಟ್ಟೆ ಮಾತಾಡಿದ ದೇಸುಗೆ ಅನಿವಾರ್ಯವಿತ್ತು. "ಆಯ್ತು ತಗಳಿ," ಅಂದವಳೆ ಅವರು ತೋರಿಸಿದ ಜಾಗದಾಗ ಹೊರೆ ಹಾಕಿದಳು. "ಬೇ ಯಾಡಿ, ಮುಂದೆ ಬರ್ವಾಗ ಒಬ್ಬಾಕಿನ ಬಾ ಹೆಚ್ಚು ಕಾಸುಕೊಡ್ತೀನಿ" ಅಂತ ಕಣ್ಣು ಮಿಟಕಿಸಿದ. ಸೋಮ್ಲಿಗ ಏನೊಂದು ಅರ್ಥವಾಗಲಿಲ್ಲ. ತಂದೆ ವಯಸ್ಸಿನ ಮುದಿಯ "ನಿನ್ನ ಬಾಯಾಗ ನನ ಹಾಟು, ಮರ್ಯಾದಿಗೆಟ್ಟೋನು" ಅಂದ್ಕಂತ ಕಾಸು ಇಸ್ಕಳದೆ ಓಡಿದಳು. ಗಂಡನಿಗೆ ಗೊತ್ತಾದರೆ ರಾಮಾಯಣಾ ನಡೆದಬಿಡುತ್ತೆ ಅಂದವಳೆ. ಮನಸ್ಸಿನೊಳಗೆ ಮುಚ್ಚಿಟ್ಕೊಂಡು ವಾಪಾಸಹೋಗಿ ಕಾಸ ಇಸ್ಕೊಂಡವಳೆ ದೇಸುನ ಕರೆದುಕೊಂಡು ಜಾಗ ಖಾಲಿಮಾಡಿದಳು.

ಡೇರೆಯೊಳಗ ಈಗ ಆಗ ಅಂತಿದ್ದ ತೊಂಬತೆಂಟರ ರೂಪ್ಲಿ, ಇರೋ ಒಬ್ಬಳೆ ಮಗಳ ಮಾರಿನೋಡಿ ಕಣ್ಣು ಮುಚ್ಚಲು ಕಾಯುತ್ತಿದ್ದಳು. ಜೀವ ಈಗ, ಆಗ ಅಂತಿತ್ತು, ಸೋಮ್ಲನ ಹೆಂಡತಿ ಭೀಮಣಿ; "ಏಯ್ ಯಾರಾದ್ರು ಆಟದೂರ ಹೋಗಿ ನೋಡಬಾರದ ನಮ್ಮತ್ತೆ ಮಾವ ಬಂದ್ರೆನಂತ ಮುದುಕಿ ನಿತ್ರಾಣ ಆಗ್ಯಾಳ. ಹೋಗ್ರಪ್ಪ" ಗೋಗರೆದಳು, ಯಾರೋ ಒಂದಿಬ್ಬರು ಓಡಿದರು. ಧನ್‌ಸಿಂಗ್ ಆಗಲೆ ದೊಡ್ಡವನಾಗಿದ್ದ ಅವ್ವ ನಾ ಹೋಗ್ಲ ನೋಡಾಕ, ಅಜ್ಜಿ ಬಹಳ ತ್ರಾಸಮಾಡಾಕ ಕುಂತಾಳ" ಅಮ್ಮನ್ನ ಕೇಳಿದ. "ಈ ಕಾಡ ಅಡವಿಯೊಳಗ ಎಲ್ಲಿ ಹೋದಿಯಾಮಗ ಗಪ್ಪಾಗು, ಇನ್ನೇನು ಬಂದಾಳು ಅಂತ ಸುಮ್ಮನಾಗಿಸಿದಳು. ರೂಪ್ಲಿಗ, ತನ್ನ ತಾಯಿ ಸಾಕಿದ ಅಣ್ಣನ ಮಗ ಮತ್ತ ಅಳಿಯ ದೇಸುನ ನೋಡಬೇಕು ಕೊನೇಯದಪ ತನ್ನ ಕರಳುಬಳ್ಳಿಯ ಮುಖವನ್ನ ಕಣ್ಣತುಂಬ ತುಂಬಿಕೊಂಡು ಭೂಮಿಯ ಋಣ ಹರ್ಕೋಬೇಕಂತ ಆಶೆಯಾಗಿತ್ತು. ಅದು ಎಲ್ಲಿ ಈಡೇರದೊ ಎನ್ನುವ ಆತಂಕ ಕೂಡ ಒಂದೆಡೆ ಮನೆ ಮಾಡಿತ್ತು. ರೂಪ್ಲಿಗೆ ಎಲ್ಲೋ ದೂರ

ಪ್ರಯಾಣ ಮಾಡುತ್ತಿರುವ ಅನುಭವ, ಇಡಿ ಜಗತ್ತೆ ಕತ್ತಲು ಆವರಿಸಿತ್ತು ಒಬ್ಬಳೆ ಅಪರಿಚಿತ ಜಗತ್ತಿನೊಳಗೆ ಪ್ರವೇಶಮಾಡುತ್ತಿರುವಾಗಲೆ "ಯಾ, ಎಯಾ, ಯಾಡಿ" (ಅವ್ವ, ಎ ಅವ್ವ, ಅವ್ವ) ಎಂದೂ ಕೀರಲು ಧನಿಯೊಳಗೆ ಕರೆದಂತಾಯಿತು. ಆದರೆ ಯಾರು ಅಂತ ಗುರುತು ಹಿಡಿಯಲಾಗುತ್ತಿಲ್ಲ. ಭೂಮಿ ಮೇಲಿನ ಸಂಪೂರ್ಣವಾದ ಬದುಕನ್ನ ಬದುಕಿ ಗೆದ್ದಲುತಿಂದ ದೇಹದಿಂದ ಜೀವ ಸಂಭಂಧವನ್ನ ಹರಿದುಕೊಂಡು ಮತ್ತೊಂದು ಹೊಸಹುಟ್ಟಿನ ಶೋದನೆ ಮಾಡುತ್ತಿತ್ತು. ಯಾರೋ ತನ್ನ ಜಡವಾಗಿರುವ ದೇಹವನ್ನ ಅಲುಗಾಡಿಸಿ ಅಳುತ್ತಿರುವಂತೆ ಅನಿಸಿತು. ರೂಪ್ಲಿ ಎಷ್ಟು ದೂರ ಪಯಣಬೆಳೆಸಿದ್ದಳು ಅಂದರೆ, ಮತ್ತಾವ ಜನ್ಮದಲ್ಲೂ ಕೂಡ ವಾಪಾಸು ಬರಲಾಗದಷ್ಟು.

ಸೋಮ್ಲಿಗ ದುಃಖ ತಡಯಲಿಕ್ಕೆ ಆಗದೆ ಡಾವಲೋ ಸುರುಮಾಡಿದಳು". "ನಾಯಕಣ ಯಾಡಿಯೇ, ತಾರ ರಾಜೇಮ ಸೆಜ ಭೂಲನ ಬೆಟಿತಿಯಾಡಿ, ಅಬ್ಬಕೇನ ಯಾಡಿ ಕೇತಾಣಿನ ಬಲಾವೂ ಯಾಡಿ. ಕೆರಮುಂಡಾಗ ಮಾರಿ ದಲೇರಿ ವಾತೆಕೇನ ಭೂಲಜಾವೂ ಯಾಡಿ ಆ ಹಿಂಯಾ". (ನೀ ಅದಿ ಅಂತೇಳಿ ಎಲ್ಲ ಮರೆತು ಕುಳಿತಿದ್ದೆ. ಈಗ ಯಾರನ್ನ ಅವ್ವ ಅಂತ ಕರಿಯಲಿ, ಯಾರ ಮುಂದೆ ನನ್ನ ಮನದಾಳದ ಮಾತ ಹೇಳಿ ಮನಸನ್ನ ಹಗುರಮಾಡಿಕೊಳ್ಳಲಿ) ಅವಳ ಅಳುವನ್ನ ಕೇಳಿ ಡೇರೆಯ ಹೆಂಗಸರು ಗಂಡಸರು ಅಳತೊಡಗಿದರು. ತನ್ನ ತಾಯಿ ಸತ್ತ ನಂತರ ಜಡವಾಗಿದ್ದ ಅವಳ ದೇಹದ ಮುಂದೆ ಬೋರ್‍ಯಾಡಿ ಅಳುತ್ತಿದ್ದಳು. ದೇಸುಬುಕ್ಯಾ, ಅತ್ತೆಯ ಸಾವಿನಿಂದ ಕೊಂಚ ವಿಚಲಿತನಾದರೂ ಪರಿಸ್ಥಿತಿಯನ್ನು ಮೆಟ್ಟಿನಿಲ್ಲುವ ತಾಕತ್ತು ಬೆಳೆಸಿಕೊಂಡಿದ್ದರಿಂದ, ನೋವನ್ನ ನುಂಗಿಕೊಂಡು ಶವಸಂಸ್ಕಾರಕ್ಕೆ ಅಣಿಮಾಡಿದ. ಅವನ ಹಿರಿಮಗ ಸೋಮ್ಲು, ಚೊಕ್ಲ ಇಲ್ಲದೆ ರೂಪ್ಲಿಯ ಅಂತ್ಯ ಸಂಸ್ಕಾರ ನಡೆಯಿತು. ರೂಪ್ಲಿಯ ಜೊತೆಗೆ ಹೆಚ್ಚು ಒಡನಾಟಹೊಂದಿದ್ದ ಬಾಲಕ ಧನ್‌ಸಿಂಗ್ ಬುಕ್ಯಾ ಕರಮ್‌ತೋಟ್ "ನಾನಿ, ನಾನಿ" ಅಂತ ಜೋರಾಗಿ ಅಳುತ್ತಿದ್ದ. "ನಿನ್ನ ಅಜ್ಜಿ ಸೋಮ್ಲಿ ನಾನಿ ಇನ್ನೆಂದು ಬಾರದ ದೂರದಲೋಕಕ್ಕೆ ಹೋದಳು ಮಗ, ಅಳಬಾರದು" ಸಮಜಾಯಿಸಿದಳು. ಆದರೆ ಅದು ಅವನ ಪ್ರಶ್ನೆಗೆ ಉತ್ತರವಾಗಿರಲಿಲ್ಲ. ಸೋಮ್ಲಿ ಒಬ್ಬಂಟಿಯಾದೆ ಅನಿಸತೊಡಗಿತು. ತಾಯಿ ಇದ್ದಾಗ ಸಂಬಂಧದ ಮಿಡಿತವಿತ್ತು. ತಾಯಿಯೊಂದಿಗೆ ಎಲ್ಲಾ ಸಂಬಂಧಗಳು ಕಡಿದುಹೋಗಿದ್ದವು. ತಾಯಿಯೆ ಕೊನೆಯ ಕೊಂಡಿ, ಅದನ್ನ ಬಿಟ್ಟರೆ ದೇಸು ಬುಕ್ಯಾ ಕರಮ್‌ತೋಟ್ ಸ್ವಂತಃ ಮಾವನ ಮಗನಾಗಿದ್ದರಿಂದ ಅಲ್ಲಿಗೆ ಅವಳನ್ನ ಎಲ್ಲರಿಗಿಂತಲೂ ಹೆಚ್ಚು ಪ್ರೀತಿಸುತ್ತಿದ್ದುದರಿಂದ ಸೋಮ್ಲಿಗೆ ಬದಕಬೇಕು ಅನಿಸಿತ್ತು. ರೂಪ್ಲಿಯ ಅಸ್ತಿತ್ವ ಈಗ ಅರಿವಾಗಿತ್ತು. ಬದುಕಿನ ಬಡಿದಾಟದಲ್ಲಿ ಹೆಚ್ಚು ವೇಳೆ ರೂಪ್ಲಿಯ ಜೊತೆ ಕಳೆಯಲಾಗದಕ್ಕೆ ದೇಸುಗೆ ಬೇಸರವಾಗಿತ್ತು.

ಬ್ರಿಟೀಷರ ಕಿರುಕುಳ ಹೆಚ್ಚಾಗಿದ್ದೆ ಬಂಜಾರರ ಬದುಕು ಸಂಪೂರ್ಣ ನೆಲೆಯನ್ನ ಕಳೆದುಕೊಂಡಿತು. ಡೇರೆಗಳ ಮುಂದೆ ಹಸುಗಳು ಎತ್ತುಗಳ ಹಿಂಡು ಹಿಡಿಸದಷ್ಟು ಇದ್ದದ್ದು ಸಗಣಿ ಸಾರಿಸಲಿಕ್ಕೆ ಬೇರೆಯವರ ತಿಪ್ಪೆಯಿಂದ ಸಗಣಿ ಕದಿಯುವ ಮಟ್ಟಕ್ಕೆ ಬಂದು ನಿಂತಿತು. ಸುತ್ತಲ ಹಳ್ಳಿಮಂದಿ ಇವರ ಗೊಬ್ಬರದ ತಿಪ್ಪೆಗಳಿಗೆ ಜಾತಕ ಪಕ್ಷಿಗಳಂಗೆ ಕಾಯುತ್ತಿದ್ದವರು ಈಗ ಡೇರೆಗಳ ಕಡೆಗೆ ಇಣುಕಿ ಸಹ ನೋಡದಾದರು. ಮಂದಿ ಕುಂತಲ್ಲಿ ನಿಂತಲ್ಲಿ ಕಾಲಬಂತ್ರಪ್ಪ, ದನಕರಗಳ ಹಿಂಡಗಳ ಹಿಡಿಸುತ್ತಿರಲಿಲ್ಲಾ ಮನಿಮುಂದ ಎಲ್ಲಾ ಕಾಣೆಯಾಗಿ, ಇವತ್ತ" ಎಂತ

ನಮ್ಮ ತಾವ ಏನೂ ಇಲ್ಲದ ಖಾಲಿ ಕುತ್ಕೊಳ್ಳೊದಾಗೈತೆ". ಅಂತ ಹಳಹಳಿಸುವುದೇ ಆಗಿತ್ತು. ಮಂದಿ ಮನಸ್ಸಿನೊಳಗ ದೊಡ್ಡ ಆತಂಕ ಮನಿಮಾಡಿತ್ತು. ದೇಸುಬುಕ್ಯಾನ ಎಲ್ಲಾದಾರಿಗಳು ಬಂದಾದಹಾಗೆ ಕಾಣತೊಡಗಿದ್ದವು. ಇಬ್ಬರು ಮಕ್ಕಳು ಬೇರೆ ಕಾಡೊಳಗೆ ಪ್ರವೇಶಮಾಡಿದ ನೆಪ ಒಡ್ಡಿ ಜೈಲಿಗೆ ಹಾಕಿದ್ದರು. ಸುತ್ತ ಡೇರೆಗಳ ಬಂಜಾರರು ಬಹದ್ದೂರ್‌ಬಂಡಾದ ಸಮಾವೇಶದ ನಂತರ ಜಾಗರೂಕರಾಗಿದ್ದರು. ಮುಂಬಯಿ ಕಡೆಯಿಂದ ದೊಡ್ಡ ವ್ಯಾಪಾರಿಗಳು ಶ್ರೀರಂಗಪಟ್ಟಣದ ಹೈದರಲಿಗೆ ದವಸಧಾನ್ಯಗಳನ್ನು ಸರಬರಾಜು ಮಾಡುತ್ತಿದ್ದವರು ಆತನ ನಿಧನದ ನಂತರವೂ ಅವನ ಮಗ ಟಿಪ್ಪುವಿನ ಕಾಲದಲ್ಲಿ ಮುಂದುವರೆಸಿದ್ದರು. ಇದನ್ನ ಸಹಿಸದ ಬ್ರಿಟೀಷರು ಹೆಚ್ಚಿನ ಕಿರುಕುಳ ಆರಂಭಿಸಿದ್ದರು.

ಇಪ್ಪತ್ತ್ಮೂರು ಡೇರೆಗಳ ನಾಯಕರ ಸಭೆಯ ಪ್ರತಿಫಲವೆಂಬಂತೆ ಬಹದ್ದೂರ್ ಬಂಡದಲ್ಲಿ ಬಂಜಾರರೆಲ್ಲಾ ಸೇರಿ ಬ್ರಿಟೀಷರ ವಿರುದ್ಧ ಹೋರಾಟಕ್ಕೆ ಇಳಿಯಲು ಯೋಜನೆಯೊಂದು ರೂಪುಗೊಂಡಿತ್ತು. ಪೂರ್ವದಲ್ಲಿನ ಡೇರೆಗಳಿಂದ ಬೀಮಾನಾಯ್ಕ ನೇತೃತ್ವ ವಹಿಸಿ ಸುಮಾರು ಒಂದು ಸಾವಿರ ಬಂಜಾರರನ್ನ ಸಂಘಟಿಸಿದ್ದ. ಪಶ್ಚಿಮದಿಂದ ರೇಖ್ಯಾನಾಯ್ಕ ಎರಡು ಸಾವಿರ ಬಂಜಾರರನ್ನ ಸಂಘಟಿಸಿದರೆ ಉತ್ತರದಿಂದ ದೇಸುಬುಕ್ಯಾ ಕರಮ್‌ತೋಟ್ ಅತಿ ಹೆಚ್ಚು ಮೂರು ಸಾವಿರ ಬಂಜಾರರ ನೇತೃತ್ವ ವಹಿಸಿದ್ದ. ದಕ್ಷಿಣದಿಂದ ಒಂದು ಸಾವಿರ ಬಂಜಾರರನ್ನ ಒಗ್ಗೂಡಿಸಿಕೊಂಡು ಟಿಪ್ಪುಸುಲ್ತಾನನ ಸೇನೆಯ ಸುಬೆದಾರ್ ಭೀಮಾನಾಯ್ಕ ಹೊರಟಿದ್ದ. ಮೊದಲ ಹೋಳಿ ಆಚರಣೆಯಾದ ಜಾಗದಲ್ಲಿ ಮತ್ತೊಮ್ಮೆ ಹೋಳಿಯ ನೆಪ ಒಡ್ಡಿದ ಬಂಜಾರರು ಮೊದಲಬಾರಿಗೆ ಕರ್ನಾಟಕದಲ್ಲಿ ಪ್ರತಿರೋಧವನ್ನು ವ್ಯಕ್ತಪಡಿಸಿದ್ದರು. "ನಮ್ಮ ಜಾಗಕ್ಕ ಬಂದು, ನಮ್ಮ ವ್ಯಾಪಾರ ಹಾಳಮಾಡಿದ್ದಲ್ಲದೆ. ನಮ್ಮ ಪಶುಸಂಪತ್ತು ನಾಶಕ್ಕೆ ಕಾರಣರಾದ ಕೆಂಪಮಂದಿನ ಏಟ ದಿನಾಂತ ಸಹಿಸಲಿಕ್ಕಾದೀತು," ಭೀಮನಾಯ್ಕ ರೋಷವನ್ನ ವ್ಯಕ್ತಪಡಿಸಿದ. "ಕಾಡುಬೆಟ್ಟಗಳು ನಮ್ಮವೆ, ಸಂಪತ್ತು. ಈ ಕೆಂಪು ಮಂದಿ ಬೋಳಿಮಕ್ಕಳು ಯಾವಾಗ ಗಿಡನೆಟ್ಟು ಬೆಳಸಿರಬಹುದು?, ಅಲ್ಲ ಈ ಕಾಡು ಅವರು ನಮ್ಮದು ಅಂತೇಳಿ ನಮ್ಮನ್ನ ಅಡವಿಯೊಳಗೆ ಪ್ರವೇಶ ಕೂಡ ನಿಷೇಧಿಸಿದ್ದಾರೆ. ನನ್ನ ಇಬ್ಬರು ಮಕ್ಕಳನ್ನ ಸೆರೆಹಿಡಿದಿದ್ದಾರೆ. ಎಲ್ಲಿ ಮಟ ಈ ದೌರ್ಜನ್ಯ ಸಹಿಸಾಕ ಆದೀತು" ದೇಸು ತನ್ನ ಅಳಲನ್ನ ತೋಡಿಕೊಂಡಿದ್ದ. "ಅಸಲಿಗೆ, ಅವರು ಇಲ್ಲಿಯವರಲ್ಲ ನಾವು ಈ ದೇಶದ ಮೂಲನಿವಾಸಿಗಳು, ಇಲ್ಲಿ ಏನೆ ಇದ್ದರೂ ನಮ್ಮ ಹಕ್ಕಿದೆ, ನಮ್ಮನ್ನ ತಡಿಯೋಕೆ ಇವರ್‍ಯಾರು?, ನದಿಗೆ ಇಳಿಯೋಕೆ ದೊಣ್ಣೆನಾಯಕನ ಅಪ್ಪಣೆ ಬೇಕೆ". ಭೀಮಾನಾಯ್ಕ ಗುಟುರ್ ಹಾಕಿದ. "ಬಹದ್ದೂರ್ ಬಂಡದ ರಹದಾರಿಗಳು ಅಡಗುತಾಣಗಳು ನಮಗೆ ಮಾತ್ರಗೊತ್ತು. ಈ ಜಾಗದಿಂದ ಅವರ ಮೇಲೆ ಮುತ್ತಿಗೆ ಹಾಕಿದರೆ ಗೊತ್ತೆ ಆಗುವುದಿಲ್ಲ. ಅವರನ್ನ ಮಣಿಸೋದಕ್ಕೆ ಸರಿಯಾದ ಜಾಗ" ರೇಖ್ಯಾ ನಾಯ್ಕ ವಿವರಿಸಿದ. ಬ್ರಿಟೀಷರ ಅನೇಕ ಯೋಜನೆಗಳನ್ನ ಅಲ್ಲಿಂದಲೇ ಹಾಳುಗೆಡವಲು ಹವಣಿಸಿ ಯಶಸ್ವಿಯಾದರು. ಅವರು ಕಂದಾಯ ಸಂಗ್ರಹಿಸಿ ಇಂಗ್ಲೆಂಡಿಗೆ ಕಳುಹಿಸುವ ಮುಂಚಿತವಾಗಿಯೇ ಲೂಟಿಮಾಡಲಾಯ್ತು. ಬಂಜಾರರ ಕೃತ್ಯದಿಂದ ಎಚ್ಚೆತ್ತ ಕ್ಯಾಪ್ಟನ್ ರಾಕ್‌ಫೆಲರ್, ಬಳ್ಳಾರಿಯ ಕಮಿಷನರ್ ಕಛೇರಿಯಿಂದ ಕೊಪ್ಪಳದ ಬಹದ್ದೂರ್ ಬಂಡಕ್ಕೆ ಮುತ್ತಿಗೆ ಹಾಕಿ ತೋಪು ಮತ್ತು ತುಪಾಕಿಗಳಿಂದ ಬಂಜಾರರ ಹುಟ್ಟು ಅಡಗಿಸಲು ಯೋಜನೆಯೊಂದನ್ನು ರೂಪಿಸಿದ.

ಅವನ ಯೋಜನೆ ಹೇಗಿತ್ತೆಂದರೆ ಇಟ್ಟ ಗುರಿ ಹುಸಿಯಾಗಲೇ ಬಾರದು ಎಂಬಂತಿತ್ತು. ಬಹದ್ದೂರ್ ಬಂಡದ ಸಂಪೂರ್ಣ ಪರಿಚಯವಿರುವ ಕಟ್ಟಿಗೆ ಮಾರುವ ಬಂಜಾರರನ್ನು ಕಟ್ಟಿಗೆ ಖರೀದಿಸುವ ನೆಪ ಒಡ್ಡಿ ಹಿಡಿದು ತರಲು ಬಳ್ಳಾರಿಯಿಂದ ಅವನ ಸೈನ್ಯದ ತುಕಡಿಯ ಸುಬೇದಾರರನ್ನ ಕಳುಹಿಸಿದ. "ಎಯ್, ಲಮಾಣಿ, ಹೆಂಗೆ ಕಟ್ಟಿಗೆ ಹೊರೆ" ಒಬ್ಬ ಕೇಳಿದ, "ಹೆನ್ನೆಲ್ಡಾಣೆ ಕಣ್ರೇಯಪ್ಪಾ," ಧಾಮಣಿ ನಾಯ್ಕ ಹೇಳಿದ. "ಹೂಂ, ಆ ಹೊರೆ" ಮತ್ತೊಬ್ಬ ಕೇಳಿದ, "ಅದು ದೊಡ್ಡದೈತೆ, ಒಂದರೂಪಾಯಿಗ ಬೇಕಾರ ಕೊಟ್ಟೇವು" ಧಾಮಣಿ ಸಕ್ರನಾಯ್ಕನ ಪರವಾಗಿ ಮಾತಾಡಿದ. "ಆಯ್ತು, ದುಡ್ಡಕೊಡ್ತಿವ ಎತ್ಕೊಂಡು ನಮ್ಮಮನಿಗಂಟ ಬರ್ರಿ" ಒಬ್ಬ ಹೇಳಿದವನೆ ಅವರ ಮುಲಾಜು ಕಾಯದೆ ನಡೆದಿದ್ದ. ಗಿರಾಕಿ ಸಿಕ್ಕಿದ್ದಕ್ಕೆ ಧಾಮಣಿ, ಸಕ್ರ್ಯ ಖುಷಿಪಟ್ಟು ಅವರ ಹಿಂದೆ ಹೊರಟಿದ್ದರು. ಹೊರೆ ಬಹಳ ಒಜ್ಜೆಯಾಗಿದ್ದರಿಂದ ತಿಣಕಾಡುತ್ತಲೆ ನೆರೆಯತೊಡಗಿದರು, "ಇನ್ನು ಸ್ವಲ್ಪ ದೂರ" ಅಂತ, ಊರಿಂದ ದೂರ ಬಂದಮೇಲೆ ಅಲ್ಲಿದ ಐದಾರು ಮಂದಿ ಸೈನಿಕರು "ಮಕ್ಕಳ, ಬ್ರಿಟೀಷ್ ಸರ್ಕಾರದ ವಿರುದ್ಧ ದಂಗೆ ಏಳ್ತಿರಾ, ನೀವು ಎಟಗಡತ್ರ ಅಂತೀನಿ" ಅಂದವರೆ ಇಬ್ಬರನ್ನು ಹೆಡಮುರಗಿಕಟ್ಟಿ ಹೊತ್ಕೊಂಡ ಹೋದ್ರು. "ಎಯ್, ಬಿಡ್ರಿ ನಾವೇನು ದಂಗೆ ಮಾಡೋರಲ್ಲ. ಏನೋ ಹೊಟ್ಟೆಪಾಡಿಗ ಕಟಿಗೆ ಮಾರಿದುಡಿಯೋರು" ಪರಿಪರಿಯಾಗಿ ಬೇಡಿಕೊಂಡರು. ಆದರೆ ಕರುಣೆಯೇ ಇಲ್ಲದ ಸೈನಿಕರು ಅವರ ಮಾತುಕೇಳದೆ ರಾಕ್‌ಫೆಲ್ಲರ್ ಸೈನಿಕರಿಗೆ ಇನಾಮು ಕೊಟ್ಟವನೆ, ಇಬ್ಬರನ್ನೂ ವಿಚಾರಣೆಗೊಳಪಡಿಸಿದ. "ಹೇಲು, ಯಾರೂ ನಿಮ್ಮ ನಾಯಕ" ಸಕ್ರ್ಯಾನ್ನ ಕೇಳಿದ. "ಗೊತ್ತಿಲ್ಲ ಒಡೆಯಾ, ನಾವು ಕಟ್ಟಿಗೆ ಮಾರ್ಕೊಂಡು ಬದಕೋರು" ಅಂದ, ಚಬುಕದಿಂದ ಚರ್ಮಕೀಳೋಹಂಗೆ ಬಾರಿಸಿದ." ಅಯ್ಯೋ ಸತ್ನೆಯಪ್ಪಾ, ಸತ್ನೆಯಪ್ಪಾ, ಯಾರಾರು ಕಾಪಾಡ್ರಿ" ಅಂದವನೆ ನಿತ್ರಾಣನಾಗಿ ಕುಸಿದಲ್ಲೆ ಮೂರ್ಛೆ ಹೋದ. ರಾಕಫೆಲ್ಲರ್ ಅತ್ಯಂತ ಕ್ರೂರಿ ಯಾಗಿದ್ದ. ಸಕ್ರ್ಯಾನ ಬಿಟ್ಟು ಧಾವಣಿ ಹಿಡ್ಕಂಡ. "ಹೇಲು ಯಾರು ಕ್ರಾಂತಿಕಾರರು, ನಾಯಕ ಯಾರು, ಎಲ ಎಲಿದರೆ" ಧಾಮಣಿಗ ತಲೆ ತಿರುಗಿದಂಗಾತು ಅವನ ಕ್ರೌರ್ಯತುಂಬಿದ ಮಾರಿಯನ್ನ ನೋಡಿ ಅಲ್ಲೆ ಉಚ್ಚೆಮಾಡಿಕೊಂಡ, ಅವರು ಮುಗ್ದರಂತ ಗೊತ್ತಾದರೂ ರಾಕ್‌ಫೆಲರ್ ಭಾರತೀಯರ ಎದೆಯೊಳಗೆ ನಡುಕ ಹುಟ್ಟಿಸಲು ಅತ್ಯಂತ ಕ್ರೂರವಾದ ಶಿಕ್ಷೆಗಳನ್ನ ನೀಡುತ್ತಿದ್ದ. ಇಬ್ಬರ ಮೈಮೇಲೆ ಒಂದು ಪದರು ಚರ್ಮಕಿತ್ತು ಬಂದಿತ್ತು. ಕೂಳು ನೀರಿಲ್ಲದೆ ಹೆಂಗೋ ಬದುಕಿದ ಬಡವರಿಗೆ ಈ ಪರಿಶಿಕ್ಷೆ ಕೊಡುವುದು ಎಷ್ಟು ಸರಿ ಎಂದು ಕೇಳುವ ಧ್ವನಿಗಳೇ ಇಲ್ಲ. ಸರಿಯಾದ ಮಹಿತಿ ಸಿಗದಕ್ಕೆ "ನೀವು, ಎಂಥವರನ ತಂದಿರ, ಯುಸಲೆಸ್ ಹೋಗಿ ಬೇರೆಯವರನ್ನ ಹಿಡಿದು ತನ್ನಿ" ಅಪ್ಪಣೆಮಾಡಿದ. ಸೈನಿಕರು ತಲೆ ಅಲ್ಲಾಡಿಸಿ ಹೊರಗೆ ಬರುತ್ತಿದ್ದರು. ಕ್ಯಾಪ್ಟನ್‌ರಾಕ್‌ಫೆಲರ್, "ಎಯ್, ಯು ಬ್ಲಡಿ ಇಂಡಿಯನ್ ಬರ್ರಿ, ಇವರನು ಒಯ್ದು, ಡೇರೆಗಳ ಮುಂದೆ ನೇಣು ಹಾಕಿಬಿಡಿ" ಅಪ್ಪಣೆ ನೀಡಿದ. ಸೈನಿಕರು ಕಿಂಚತ್ತು ಗೊಂದಲಕ್ಕೀಡಾದರು ವಿನಾಕಾರಣ ಈ ಇಬ್ಬರು ಸಯುತ್ತಿದ್ದಾರಲ್ಲಾ. ಉತ್ತರಸಿಗದೆ ಅವರ ಕೈಕೆಳಗೆ ಕೆಲಸ ಮಾಡುವವರು ಹೇಳಿದಹಾಗೆ ಕೇಳಲೇ ಬೇಕು. ಸಕ್ರ್ಯಾ ಮತ್ತ ಧಾಮಣ್ಣಿಯನ್ನ ಎಳೆದು ಒಯ್ದು ಲಂಬಾಣಿಮಂದಿ ಡೇರೆ ಇರುವಲ್ಲಿ ದೊಡ್ಡಮರಗಳಿಗೆ ಇಬ್ಬರನ್ನೂ ನೇಣುಹಾಕಿ ಬ್ರಿಟೀಷ ಬಾವುಟ ಹಾರಿಸಿ ಕೆಂಪುಮಂದಿ ವಿರುದ್ಧ ದಂಗೆ ಏಳುವವರಿಗೆ ಇದೆ ಗತಿ' ಎಂದು ಬರೆಯಲಾಗಿತ್ತು.

ಎರಡು ಹೆಣಗಳು ಸಕ್ರ್ಯಾ ಮತ್ತು ದಾಮಣಿವು ಅವರ ಸಂಬಂಧಿಕರಿಂದ ಗುರುತಿಸಲ್ಪಟ್ಟು, ಬಹದೂರ್ ಬಂಡಾದ ಕ್ರಾಂತಿಯ ನೇತಾರರಿಗೆ ಬ್ರಿಟೀಷರ ಕೃತ್ಯವನ್ನ ತಿಳಿಸಲಾಯಿತು. "ನಮ್ಮನ್ನ ಹೆದರಿಸುವ ಧೈರ್ಯವಿಲ್ಲದೆ, ಅಮಾಯಕರನ್ನ ಹಿಡಿದು ನೇಣು ಹಾಕಿ ನಮ್ಮ ಮಂದಿಯೊಳಗ ಹೆದರಿಕೆ ಉಂಟುಮಾಡಾಕ ಹತ್ಯಾರ." ಭೀಮನಾಯ್ಕ ಸಿಟ್ಟನ್ನ ವ್ಯಕ್ತಪಡಿಸಿದ, "ಹಿಂಗ ಕೈಕಟ್ಕೊಂಡ ಕುಂತ್ರ ಆಗಾಕಿಲ್ಲ, ಇದು ನಮ್ಮ ಅಡಗುದಾಣ ನಾವಿಲ್ಲಿದ್ದಿವಿ ಅಂತ ಬ್ರಿಟೀಷರಿಗೆ ಗೊತ್ತಾಗೋದಕ್ಕೆ ಮುಂಚೆ ಅವರ ಖಜಾನೆ ಲೂಟಿ ಮಾಡಿ ಕ್ಯಾಪ್ಟನ್ ರಾಕ್‌ಪೆಲ್ಲರ್‌ಗೆ ಬುದ್ದಿಕಲಿಸಲೇಬೇಕು ಅ ಕೆಲಸ ಇವತ್ತು ರಾತ್ರಿನೇ ಆಗಬೇಕು" ದೇಸುಬುಕ್ಯಾ ತನ್ನ ವಿಚಾರ ಮುಂದಿಟ್ಟಿದ್ದ. ಇತರೆ ನಾಯಕರಿಗೆ ಸರಿಅನಿಸಿತು. "ಕೈಮ್ಯಾಲ ಕೈ ಇಟ್ಕೊಂಡ ಕುಂತ ಡೇರೆಮಂದಿಗಳನ್ನ ಹಿಂಗ ಒಬ್ಬೊಬ್ಬರನ್ನಾಗಿ ಕೊಂದಹಾಕ್ತಾರ, ನಾವೆಲ್ಲ ಒಂದೇ ನಿರ್ಧಾರದಿಂದ ನಮ್ಮ ಜನಾಂಗದ ಗುರು ಸೇವಾಲಾಲ್ ನೆನಪ ಮಾಡ್ಕಂಡ ಮುನ್ನುಗ್ಗಬೇಕು. ಏನಂತೀರಾ" ಭೀಮ್ಯಾನಾಯ್ಕ ಕೇಳಿದ. ನೆರೆದಿದ್ದ ಸಾವಿರಾರು ಮಂದಿ ಬಂಜಾರರು "ಜೈಸೇವಾಲಾಲ್" ಅಂದವರೆ ಮುನ್ನಿಗ್ಗಿದರು. ಬಹದ್ದೂರ್ ಬಂಡಾದಿಂದ ರಾತ್ರಿ ಕತ್ತಲಲ್ಲಿ ಕೊಪ್ಪಳ, ಕೊಪ್ಪಳದಿಂದ ಹಗಲು ಹೊತ್ತಿನಲ್ಲಿ ಕೆಲಸಮಾಡುವಂತೆ ಕೆಲಸ ಕೇಳುವಂತೆ ನಾಟಕಮಾಡುವುದು ತದನಂತರ ಕ್ಯಾಪ್ಟನ್ ರಾಕ್ ಫೆಲರನ ಹೆಡಮುರಗಿ ಕಟ್ಟುವುದು ಹಾಗೆನೆ ಜೈಲಿನಲ್ಲಿರುವ ಬಂಜಾರ ಯುವಕರನ್ನ ಬಿಡುಗಡೆ ಮಾಡುವುದು ಅವರ ಯೋಜನೆಗಳಾಗಿದ್ದವು. ಒಬ್ಬೊರೆ ಕೆಲಸಮಾಡುವಂತೆ ಕೆಲಸಕೇಳುವಂತೆ ಬ್ರಿಟೀಷರ ಪರವಾಗಿರುವ ಮಂದಿಯನ್ನ ಗುರುತಿಸಿಕೊಂಡರು. ರಾತ್ರಿ ಕತ್ತಲಾಗುತ್ತಿದ್ದಂತೆ ಕೊಪ್ಪಳ, ಬಳ್ಳಾರಿ ಎರಡೂ ಕಡೆಗೆ ಆಕ್ರಮಣ ಮಾಡಿದರು. ರಾಕ್‌ಫೈಲರ್, ಏಕಾಏಕಿ ನಡೆದ ದಾಳಿಗೆ ಗಾಬರಿಯಾದ. ಆದರೆ ದೃತಿಗಡೆದೆ ತನ್ನ ಸೈನಿಕರನ್ನ ಹುರಿದುಂಬಿಸಿ ಗುಂಡು ಹಾರಿಸುವಂತೆ ಆಜ್ಞೆ ಮಾಡಿದ. ಮುಸುಕುಧಾರಿಗಳು ತಮ್ಮ ಕೈಯಲ್ಲಿನ ತಲ್ವಾರ್, ಮಚ್ಚು, ಕೊಡಲಿಗಳಿಂದ ಸೈನಿಕರ ಮೇಲೆ ಹಲ್ಲೆಮಾಡಿದರು. ಸಿಕ್ಕದ್ದನ ಲೂಟಿ ಮಾಡಿ ಪರಾರಿಯಾದರು. ಹೋಗುವಾಗ ಜೈಲಿನ ಬೀಗಗಳನ್ನ ಮುರಿದು ಎಲ್ಲರನ್ನು ಬಿಡುಗಡೆ ಮಾಡಸಿಕೊಂಡು ಹೋದರು. ರಾಕಫೆಲರ್ ಅದೇಗೋ ಬಂಜಾರಿಂದ ತಪ್ಪಿಸಿಕೊಂಡಿದ್ದ. "ಓ ಈ ಜನರು ನಮ ಕಂಪನಿ ಸರಕಾರಕೆ, ಅವಮಾನ ಮಾಡಿದರು, ಇವರನ್ನು ಸದೆಬಡಿಯಬೇಕು. ಅದು ಹೇಗೆ ಸಾಧ್ಯ". ಅವನ ಪಕ್ಕದೊಳಗಿದ್ದ ಯಾರೋ ಕೆಲಸಕ್ಕೆ ಬಾರದ ಸೈನಿಕ ಕೇಳಿದ. ಅವನು ಏನೂ ಅರ್ಥವಾಗದವನಂತೆ ಅವನ ಮಾರಿನೋಡಿದ. ಮತ್ತಷ್ಟು ಅವಮಾನವಾದಂತಾಗಿ ಎದ್ದವನೆ ಹೈದ್ರಾಬಾದ್‌ನ ಕೇಂದ್ರ ಕಛೇರಿಗೆ ವಿಷಯ ತಿಳಿಸಲು ಟ್ರಂಕಾಲ್ ಮಾಡಿದ. "ಹಲೋ ಮಿಸ್ಟರ್ ಬ್ರೌನ್, ದೆರಿಜ್ ಎ ಸಂಮ್ ಪ್ರಾಬ್ಲಮ್ ಬೈ ಬಂಜಾರ, ದೇ ಅಟ್ಯಾಕ್ಡ್ ಮಿ, ಆನ್ ಲಾಸ್ಟಯನೈಟ್ ಸಾರ್," ಹೆದರುತ್ತಲೇ ಮಾತಾಡಿದ. "ಯೂ ಫೂಲ್, ಹೌ ಯು ಸ್ಪೆರ್ ದೆಮ್, ಕಿಲ್ ದೆಮ್ ಆಲ್ ಇಟಿಸ್ ಮೈ ಆರ್ಡರ್", ಮಿ. ಬ್ರೌನ್ ಕೇಂದ್ರ ಕಛೇರಿಯ ಮುಖ್ಯಸ್ಥ ಕ್ಯಾಪ್ಟನ್ ಮೇಲೆ ಕೆಂಡ ಮಂಡಲವಾದ. ಸಂಪರ್ಕ ಕಡಿದುಹೋಯಿತು. ಕ್ಯಾಪ್ಟನ್ ರಾಕ್‌ಪೆಲರ್‌ಗೆ ದೊಡ್ಡ ಚಿಂತೆಯಾಯಿತು. ಬಂಜಾರರ ಈ ದಂಗೆಯನ್ನ ಹತ್ತಿಕ್ಕಲು ಅವನು ಮಾಡಿದ ಅನೇಕ ಪ್ರಯತ್ನಗಳು ವಿಫಲವಾಗಿದ್ದವು.

ಜೈಲಿನಿಂದ ಬಿಡುಗಡೆಯಾದ ಚೊಕ್ಲ, ಸೋಮ್ಲರನ್ನ ಕರೆದುಕೊಂಡು ದೇಸುಬುಕ್ಯಾ ತಮ್ಮ ಡೇರೆಕಡೆಗೆ ಹೊರಟ. ಈ ಹೋರಾಟದ ತೀವ್ರತೆಯ ಪರಿಣಾಮ ಊಹಿಸಲಾಗದೆ, "ಬೆಟ

ಸೋಮ್ಲ ನೀನು, ನಿಮ್ಮಮ್ಮ ಮತ್ತ ಮಕ್ಕಳನ್ನೆಲ್ಲಾ ಕರೆದುಕೊಂಡು ಆಂದ್ರದ ಈ ಗಡಿಯನ್ನ ಬಿಟ್ಟು ಕರ್ನಾಟಕದ ಒಳಗೆ ಹೋಗಿ ಒಂದು ಕಡೆಗೆ ನೆಲೆಸು, ಎಲ್ಲಿಯವರೆಗೆ ಈ ಸಂಚಾರಿ ಬದುಕನ್ನ ಬದುಕುವುದು. ಇನ್ನು ನಾವಂತು ವಾಪಾಸು ನಮ್ಮ ಊರುಗಳಿಗೆ ಹೋಗುವುದಿಲ್ಲ. ರಾಜಸ್ಥಾನದಲ್ಲಿಗ ಸನ್ನಿವೇಶವೆ ಬದಲಾಗಿದೆ. ಅಲ್ಲಿ ನಮ್ಮದಂತ ಏನೂ ಇಲ್ಲ. ನಮ್ಮ ವರಂತ ಯಾರೂ ಇಲ್ಲ ಹೋಗು ಮಗ, ಎಲ್ಲಾ ಹೆಂಗಸರನ್ನ, ಮಕ್ಕಳನ್ನ ಕಾಳಜಿಯಿಂದ ಈ ಗಡಿಯಿಂದ ಪಾರುಮಾಡಿ, ಒಂದಿಷ್ಟು ಜಮೀನು ಖರೀಧಿಮಾಡು. ನಮ್ಮ ವಂಶವನ್ನ ಬೆಳೆಸುಮಗ," ಗದ್ಗಿತನಾದ. "ನೀ ಇಲ್ಲದೆ ನಾನು ಏನಪ್ಪ ಮಾಡಲಿ, ಈಗ ನಿಮಗೆ ವಯಸ್ಸು ಬೇರೆ ಆಗಿದೆ. ನನಗೆ ಒಂದು ತಿಳಿದರೆ ಇನ್ನೊಂದು ತಿಳಿಯೋದಿಲ್ಲ. ಏನು ತಿಳಿಯದವನಂತೆ ಹೇಳಿದ ಸೋಮ್ಲ. "ಯಾಕೆ, ನಿಂಜೊತೆಗೆ, ಚೊಕ್ಲ ಇರ್ತಾನಲ್ಲ, ಇನ್ನುಳಿದ ಇಬ್ಬರನ್ನ ಚೆನ್ನಾಗಿ ನೋಡ್ಕ ಮಗ ಅವರಿಗೆ ಒಂದ ತಿಳಿದ್ರ ಇನ್ನೊಂದ ತಿಳಿಯಾಗಿಲ್ಲ ಎಲ್ಲಾನು ನೀನ ನಿಭಾಯಿಸಬೇಕು" ಕಣ್ಣು ಒದ್ದೆಯಾಗಿದ್ವು, "ಅಪ್ಪ ಈ ವಯಸ್ಸಿನ್ಯಾಗ ನಿನ್ನೊಬ್ಬನ್ನ ಬಿಟ್ಟು ನಾವೆಲ್ಲರು ಹೆಂಗಹೋಗಿ ಹೊಸಬದುಕು ಆರಂಭಮಾಡಾಕ ಆದೀತು ನಾನಂತು ನಿನ್ನ ಕೂಡ ಇರ್ತೀನಿ. ಅವರೆಲ್ಲಾ ಹೋಗ್ಲಿ" ಹಠಮಾಡಿದ ಚೊಕ್ಲ," ನೋಡಪ, ನೀನು ಮುಂದಕ್ಕ ಬಾಳಿಬದಕ ಬೇಕಾಗಿರೋ ಭವಿಷ್ಯ. ನಾನು ಇವತ್ತೋ ನಾಳೆ ಬಿದ್ದುಹೋಗಿ ಇತಿಹಾಸ ಸೇರಲಿರುವ ಹಳೆಮರ, ಆದ್ರ ಈ ಪಿರಂಗಿ ಮಂದಿಗ ಬುದ್ದಿಕಲಿಸಿ ಈ ದೇಶದಿಂದ ಓಡಿಸಿ ನಿಮಗ ಸುಸೂತ್ರ ಬದುಕು ಬದುಕೋಹಂಗ ಮಾಡಾಕ ಹೊಂಟೀವಿನೀ ಹಿಂಗ ಹಠಮಾಡಬೇಡ." ದೇಸು ಚೊಕ್ಲನಿಗೆ ತಿಳಿಹೇಳಿದ. ಆದ್ರ ಅವನೇನು ಕೇಳುವ ಸ್ಥಿತಿಯೊಳಗ ಇದ್ದಂಗಿಲ್ಲ. ಬ್ರಿಟೀಷರ ಜೈಲಿನಲ್ಲಿ ಅನುಭವಿಸಿದ ಕಷ್ಟ ಸೇಡಿನ ರೂಪದೊಳಗೆ ಅವನನ್ನ ಕಾಡತೊಡಗಿತ್ತು. ಹೆಂಗಾರು ಮಾಡಿ ಅವರಿಗೆ ಹಿಂಸೆಕೊಡಬೆಕೆಂಬ ಪ್ರತಿಕಾರ ತೀರಿಸುವ ಬಯಕೆ ಅವದಾಗಿತ್ತು. ಇದು ಸರಿಯಾದ ಸಂದರ್ಭ ಅಂದುಕೊಂಡವನೆ, "ನೀ ಹಿಂಗ ನನ್ನ ತಡಿಬ್ಯಾಡ, ನಾ ಒಂದ ಕೈ ನೋಡಾಕಬೇಕು" ಹುಂಬತನದಮಾತಾಡಿದ ಚೊಕ್ಲ, ಅಂವ ಹಿಡಿದ ಹಠ ಬಿಡೋದಿಲ್ಲಂತ ದೇಸುಗೆ ಗೊತ್ತಿದ್ದರಿಂದ ಮುಂದಾದ್ದನ ನೋಡಿದ್ರಾತಂತ ಡೇರೆ ಕಿತ್ತುಗುಳೆ ಸಾಗಿಸುವ ಕಾರ್ಯದೊಳಗೆ ತೊಡಗಿದ.

ದೇಸು ಬಹಳವಾಗಿ ಕಾಳಜಿಮಾಡಿದ್ದು ಅವನ ಚಿಕ್ಕಪ್ಪನ ಮಗ ತೊತ್ಯನ ವಿಧವೆ ಹೆಂಡತಿ ಸಾಂಕಿ ಮತ್ತು ಅವನ ಮಗ ದೇವ್ಲನ ಸಲುವಾಗಿ. ಅಪ್ಪನ ಹೆಗಲಿಹೆಗಲು ಕೊಟ್ಟು ಎಲ್ಲೋ ಚದುರಿ ಚೆಲ್ಲಾಪಿಲ್ಲಾಯಾಗಬೇಕಿದ್ದ ಸಂಸಾರವನ್ನ ಕಟ್ಟಿದವರು ಮೀಟು, ಥಾವು, ಅಪ್ಪ ಮೀಟುಬುಕ್ಯಕರಮತೋಟ್, ನಿಗೂಢರೀತಿಯಿಂದ ಕಾಣೆಯಾದಾಗ ಅವ್ವ ಮತ್ತು ನನ್ನ ಭರವಸೆಯಾಗಿದ್ದವನೆ ಥಾವುಕಾಕ, ಅವನ ವಂಶದ ಒಂದೇ ಕುಡಿ ತೊತ್ಯ ಹೀಂಗ ಮಾಡ್ತಾನಂತ ಗೊತ್ತಾಗಲಿಲ್ಲ. ಅವನ ಒಬ್ಬನೆ ವಂಶ ಉದ್ದಾರ ಮಾಡುವ ದೇವ್ಲನಿಗೆ ಯಾವ ತೊಂದರೆಯಾಗಬಾರದು ಎನ್ನುವ ಅತಂಕ ದೇಸುನ ಎದಿಯೊಳಗೆ ಮಡುಗಟ್ಟಿತ್ತು. " ಬೇಟ ಸೋವ್ಲ್ಲ, ನೋಡು ನಿಮ್ಮಥಾವು ಅಜ್ಜನ ವಂಶದ ಕುಡಿ ಅದಾನಲ್ಲ ಆ ದೇವ್ಲ ಬುಕ್ಯಾಕರಮತೋಟ್, ನನ್ನ ಚಿಕ್ಕಪ್ಪ ತೊತ್ಯನ ಮೊಮ್ಮಗ, ಅವನಿಗೆ ಸರಿಯಾದ ಸಂಸ್ಕಾರ ಕೊಟ್ಟು ಇವನನ್ನ ಮುಂದೆ ಒಳ್ಳೆ ಮನುಷ್ಯನನ್ನಾಗಿ ರೂಪಿಸುವ ಜವಾಬ್ದಾರಿ ನಿಂದು. ಸೌರಾತ್ರಿಯಾದಿಂದ ಗುಪ್ ಚುಪ ಪತ್ತೆ ಇಲ್ಲದಂಗ ಪಶ್ಚಿಮಕ್ಕೆ ಹೊರಡು, ಈ ನಾಡಿನ ಕಡಿದಾಟ, ಮುಂದ ಕನ್ನಡ

ಮಾತಾಡುವ ನಾಡಿನೊಳಗ ಕಷ್ಟಪಟ್ಟು ಮನಿಮಾಡುಮಗ. ಈಗ ನೆಲೆನಿಲ್ಲುವುದು ಅನಿವಾರ್ಯ ಆಗ್ಯೆತೆ. ನಾನೇನಾರು ಬದುಕಿದ್ರೆ ಮುಂದ ಬೆಟ್ಟಿಯಾದೇನು." ಯಾರಾರು ಕೇಳಿಸಿಕೊಂಡಾರಂತ, ಜೋರಾಗು ಅಳಲಿಕ್ಕ ಆಗದೆ ಅಳುವನ್ನ ನುಂಗಿ ಸೋಮ್ಲು, ತಂದೆಯನ್ನ ಅಗಲಿದಳು. ಅವರ ಹಿಂದೆ ಬಹಳಷ್ಟು ಮಂದಿ ಬಂಜಾರರು ಗುಳೆಹೊರಟಿದ್ದರು. ಅವರಲ್ಲಿ ಸಬಾವುಟ್ ಗಾಂಗ್ಯ, ಕರ್ರಾ ಕಮಲ್ಯಾ, ವಿಸಳಾವತ ಚೊಕ್ಲ, ಖೋಲಾರ ಡಕಣ್ಯ. ಕೇಳೂತ ಲಿಂಬ್ಯಾ, ಮೂಡ್ಯ ಮಕ್ರ್ಯಾ ನಾಯ್ಕ ಪಾಳೂತೇರ ಪೋಮ್ಯ ಖೇವತೇರ ಭೀಮ, ರಾಮವತೇರ ಲಸಣೂ, ಕಿಮಾವತೇರ ಪಾತ್ಲೋರಾಮ, ಮೇಘಾವತೇರ ಹಂಡೇರ, ಬಾಣೋತ ಧಾವು, ದೇವಸೊತ ದೇಮ, ಗೋಪ್ಯರ, ಮಂಜ್ಯ ಮುಂತಾದವರ ಕುಟುಂಬದ ಹೆಂಗಸರು ಮಕ್ಕಳು ಹೊರಟರೆ ಬ್ರಿಟೀಷರ ವಿರುದ್ದ ಹೋರಾಟಕ್ಕೆ ಒಬ್ಬಿಬ್ಬರು ಹಿಂದೆ ಉಳಿದಿದ್ದರು. "ಬದುಕಿ ಉಳಿದರೆ ಖಂಡಿತ ನೀವು ಅದೆಲ್ಲೆ ಇದ್ರೂವೆ ಬಂದು ಸೇರ್‍ಕೊಂತೀವಿ. ಸತ್ರ ನಮ್ಮ ಹೆಣಗಳು ಸಿಗಲ್ಲ. ಯಾವಾಗಲೋ ಒಂದು ದಿನ ದಿನ ಕರ್ಮ ಮಾಡಿ ದೀಪಾವಳಿಗೊಮ್ಮೆ ಧಭಕಾರ (ಹವನ) ಕೊಡ್ರಿ ಆತು." ಹೊರಟವರಿಗೆ ಎಲ್ಲರೂ ಈ ಮಾತುಗಳನ್ನ ಹೇಳಿಧೈರ್ಯ ತುಂಬಿ ಸಾಗುಹಾಕಿದರು. ಮನಿಮಂದಿ ಇವರನ್ನ ಬಿಟ್ಟು ಹೋಗಾಕ ಮನಸ್ಸು ಇಲ್ಲದಿದ್ದರು ದೇಶದ ಉಳವಿನ ಸಲುವಾಗಿ ಹೊರಟು ನಿಂತಿದ್ದರು. ಅತ್ತು ಕರೆಯುವ ಸಮಯ ಅಲ್ಲವೆಂದು ಅರಿತ ಮಂದಿ ಬರೋಬರಿ ಸೌವರಾತ್ರಿಗೆ ಗುಳೆ ಕಿತ್ತು ಹೊರಟಿದ್ದರು. ಕೃತಕ ಡೇರೆಗಳು ಬ್ರಿಟೀಷರನ್ನ ನಂಬಿಸಲಿಕ್ಕೆ ಹಾಗೆಯೇ ಬಿಟ್ಟು ಹೋಗಿದ್ದರು.

ಬಹದ್ದೂರ ಬಂಡ ಬ್ರಿಟೀಷರಿಗೆ ನಿಜವಾದ ಸವಾಲಾಗಿತ್ತು. ಕ್ಯಾಪ್ಟನ್ ರಾಕ್‌ಫೆಲ್ಲರ್‌ನ ಪೈಶಾಚಿಕ ಕೃತ್ಯಕ್ಕೆ ನೂರಾರು ಬಂಜಾರರು ಬಲಿಯಾಗಿದ್ದರು. ಕೆಲವರಂತು ಹೆದರಿ ಗಡಿಯನ್ನ ಬಿಟ್ಟೆ ದೂರ ಓಡಿಹೋಗಿದ್ದರು. ಈ ಸಲ ಬಂಜಾರರ ಹುಟ್ಟಡಗಿಸಲು ಸೈನ್ಯಸಜ್ಜಾಗಿತ್ತು. ನಾಲ್ಕು ಜನ ನಾಯಕರು ರಹಸ್ಯವಾಗಿ ಬೆಟ್ಟಿಯಾಗುವುದು ರಾಕ್‌ಫೆಲರ್ ಹೇಗೋ ಪತ್ತೆಹಚ್ಚಿದ್ದ. ಸೈನ್ಯದ ತುಕಡಿಗಳು ಬಹುದ್ದೂರ ಬಂಡಾ ಪ್ರದೇಶವನ್ನ ನಾಲ್ಕುದಿಕ್ಕುಗಳಿಂದ ಒಮ್ಮೊಂದೊಮ್ಮಿಗೆ ಘೇರಾವ್ ಮಾಡುವ ಯೋಜನೆಯನ್ನ ರೂಪಿಸಲಾಗಿತ್ತು. ಆದರೆ, ಟಿಪ್ಪು ಸೈನ್ಯದಲ್ಲಿ ಅಂಗರಕ್ಷಕ ಪಡೆಯ ಆದೀನ ಕೆಲಸಮಾಡುತ್ತಿದ್ದ ಭಿಮಾನಾಯ್ಕನಿಗೆ ಟಿಪ್ಪುನಿಂದ ಕರೆ ಬಂದಿದ್ದಕ್ಕೆ ವಾಪಾಸಾಗಿದ್ದ. ಟಿಪ್ಪುನ ಮೊಂಡುತನಕ್ಕೆ ಒಕ್ಕೂಟ ವ್ಯವಸ್ಥೆಯೊಂದನ್ನ ರಚಿಸಿ ಮರಾಠರು, ಹೈದ್ರಾಬಾದ್ ನಿಜಾಮರೊಂದಿಗೆ ಸೇರಿ ಬ್ರಿಟೀಷರು ನಾಲ್ಕನೆಯ ಆಂಗ್ಲೋ ಮೈಸೂರು ಯುದ್ದವನ್ನು ಸಾರಿರುವ ಹಿನ್ನೆಲೆಯಲ್ಲಿ, ಸ್ವಾಮಿನಿಷ್ಠೆಯನ್ನುಳ್ಳ ಭೀಮಾನಾಯ್ಕ ಬಂಜಾರರ ಸಣ್ಣ ತುಕಡಿಯೊಂದಿಗೆ ಬಹದ್ದೂರ ಬಂಡ ದಂಗೆಯಿಂದ ಹೊರಗೆ ಉಳಿಯಲೇ ಬೇಕಾದ ಅನಿವಾರ್ಯತೆ ಒದಗಿಬಂದಿತ್ತು. ದೇಸುನ ಮೇಲೆ ಹೆಚ್ಚಿನ ಜವಾಬ್ದಾರಿ ಬಿದ್ದಿದ್ದರಿಂದ ಪ್ರತಿಯೊಬ್ಬರಲ್ಲೂ ಒಳ್ಳೆಯ ಧೈರ್ಯ ಮತ್ತು ಕೆಚ್ಚೆದೆಯನ್ನ ತುಂಬತೊಡಗಿದ. "ಬಂಜಾರ ಬಂಧುಗಳೇ, ನಾವೇಲ್ಲಾ ಹೊರಗಡೆಯಿಂದ ಬಂದು ನಮ್ಮ ಶತ್ರುಗಳಾದ ಬ್ರಿಟೀಷರನ್ನ ಹೊಡೆದು ಓಡಿಸಿದರೆ ನಮ್ಮ ಕಾಡು, ನಮ್ಮ ವ್ಯಾಪಾರ, ಅರಣ್ಯಸಂಪತ್ತು, ನಮ್ಮ ತನ ಪ್ರತಿಯೊಂದು ನಮಗೆ ಸಿಗುತ್ತದೆ ಇಲ್ಲದಿದ್ದರೆ ದೇವರೆ ನಮ್ಮನ್ನ ಕಾಪಾಡಬೇಕು." ದೇಸುನ ಬಾಯನ ಮಾತು ಬಾಯೊಳಗಿತ್ತು. ಹಿಂದಿಂದ ಗುಂಡುಹಾರಿಸಿದ್ದು ಅಪ್ಪಳಿಸಿಬಂದು ಅವನ ಎದೆಗೆ ಬಡಿದಿತ್ತು. ಎ ಭಗವಾನ್ ಅಂದವನೆ ನೆಲಕ್ಕುರುಳಿದ್ದ. ಮಂದಿಗೆ ಏನು ನಡೆಯುತ್ತಿದೆ ಎನ್ನುವುದು ಅರಿಯುವ ಮುಂಚೆ ಐದಾರು

ಹೆಣಗಳು ಉರುಳಿದ್ದವು. ಬಿದ್ದವರನ್ನ ಬಿಟ್ಟವರೆ ಕಲ್ಲುಬಂಡಗಳ ನಡುವೆ ಸೇರಿಕೊಂಡ ಬಂಜಾರರು ಕೆಂಪುಮಂದಿಯ ಸಲುವಾಗಿ ಕಾಯತೊಡಗಿದರು. ಆದರೆ ಚಾಣಾಕ್ಷ ರಾಕ್‌ಫೆಲರ್, ಸೈನಿಕರಿಗೆಲ್ಲಾ ಬಂಜಾರರು ಉಡುಪುಗಳನ್ನು ತೊಡಿಸಿ ಯುದ್ದಮಾಡುವಂತೆ ಹೇಳಿದಕ್ಕೆ, ನಿಜವಾದ ಬಂಜಾರರಿಗೆ ಯಾರು ತಮ್ಮವರು ಮತ್ತೆ ಯಾರು ಶತ್ರುಗಳೆಂದು ಗುರುತಿಸುವುದು ಜಡವಾಗಿತ್ತು. ತಮ್ಮವರೆಂದು ಆಚೆ ಬಂದವರ ಮೇಲೆಲ್ಲಾ ಗುಂಡುಹಾರಿಸತೊಡಗಿದರು. ಇದ್ದಿದ್ದರಲ್ಲೇ ಸ್ವಲ್ಪ ಬುದ್ದಿವಂತನಾಗಿದ್ದ ದೇಸುಬುಕ್ಯಾ ಗಾಯಾಳು ಆಗಿ ನೆಲಕ್ಕೆ ಉರುಳಿಯಮಯಾತನೆ ಅನುಭವಿಸುತ್ತಿದ್ದ. ಅವನನ್ನ ಎತ್ಕೊಂಡು ಹೋಗಿದ್ದ ಕಿರಿಯಮಗ ಚೊಕ್ಲ, "ಅದಕ್ಕೆ ಹೇಳಿದ್ದು, ನೀ ಒಬ್ಬನೆ ಬರೋದು ಬೇಡ ಅಂತ," ದೇಸು ಬುಕ್ಯಾ ದುಃಖಿಯಾದ, "ನೀನು, ಗುಳೆಹೋಗಲಿಲ್ಲವೇ?" ಅಚ್ಚರಿಯಿಂದ ಕೇಳಿದ. "ಯಾಕಬಂದೆ ಮಗ ಈ ಮೋಸಗಾರಮಂದಿ ನಡಕ್ಕ" ನಾಲಿಗೆ ದಪ್ಪವಾಗತೊಡಗಿತ್ತು. ಎದೆಯನ್ನ ಬೇಧಿಸಿರುವ ಗುಂಡು ಹೊರಗಡೆ ತೆಗೆಯುವುದು ಅಷ್ಟು ಸುಲಭವಾಗಿರಲಿಲ್ಲ. "ಅಪ್ಪ, ಮಾತಾಡಪ್ಪ, ನಿನಗೆ ಏನೂ ಆಗುವುದಿಲ್ಲ, ಯಾಕಿಂಗೆ ಮೌನವಾಗಿದ್ದೀಯಾ ಮಾತಾಡು" ಚೊಕ್ಲ ಅವನನ್ನ ಎಚ್ಚರಿಸಲು ಹವಣಿಸಿದ. "ಮಗ, ನಾ ಬದಕೋದಿಲ್ಲ ಹುಚ್ಚು ಪ್ರಯತ್ನಬಿಡು, ಇಲ್ಲೇ ಎಲ್ಲಾದರು ಕಟ್ಟಿಗೆ ಸಿಕ್ಕರೆ ದೇಹನ ಅದರ ಮೇಲಿಟ್ಟು ಬೆಂಕಿಹಚ್ಚು, ನನ್ನ ದೇಹ ಒಯ್ಯುವ ಸುಳ್ಳು ಸಾಹಸಕ್ಕೆ ಕೈಹಾಕಬೇಡ. ಹಾಗೇನಾದರು ಮಾಡಿದೆಯೋ, ಈ ಮಂದಿ ಇಡಿ ವಂಶವನ್ನ ನಿರ್ವಂಶ ಮಾಡಿ ಬಿಡ್ತಾರೆ. ಸಾಧ್ಯವಾದರೆ, ನೀನು ತಪ್ಪಿಸಿಕೊಂಡು ಓಡು" ಅಂದವನೆ ಅವನ ತೊಡೆಯ ಮೇಲೆ ಪ್ರಾಣಬಿಟ್ಟಿದ್ದ. ಚೊಕ್ಲ ಕುಸಿದುಹೋದು. "ಅಪ್ಪ ಏನಪ್ಪ ಮಾಡ್ಲಿ". ಗೊಂದಲದಿಂದ ಕಂಗಾಲಾದ. ಒಂದು ಘಳಿಗೆ ಸಮಾಧಾನದಿಂದ ಆಲೋಚಿಸಿದ. ಅಲ್ಲೇ ಇದ್ದ ಕಟ್ಟಿಗೆ ತುಂಡುಗಳನ್ನು ಆಯ್ದು ದೊಡ್ಡಮರದ ಒಣ ದಿಮ್ಮೆಗಳನ್ನು ತಂದ ಜೋಡಿಸಿ ಚಿತೆಯ ಮಾಡಿ ಸೂಕ್ಷ್ಮವಾಗಿ ಹೆಣವನ್ನ ಇಟ್ಟು ಒಣಗಿದ ಹುಲ್ಲು ತಂದವನೆ ಹೆಣದ ಮೇಲೆ ಮುಚ್ಚಿ ಚಿತೆಗೆ ಬೆಂಕಿ ಇಟ್ಟ.

ಬಾಲ್ಯದಿಂದಲೂ ತಂದೆಯ ಪ್ರತಿಯೊಂದು ಚಟುವಟಿಕೆಯನ್ನ ಹತ್ತಿರದಿಂದ ಗಮನಿಸಿದ್ದ, ಚೊಕ್ಲ, ವ್ಯಾಪಾರದ ಕೊನೆಯ ಘಟ್ಟದಲ್ಲಿ ತಂದೆ ಪಡುತ್ತಿದ್ದ ಸಂಕಟ ಗಮನಿಸಿದ್ದ, ದೊಡ್ಡ ಸಂಸಾರ, ಆಳು ಕಾಳುಗಳನ್ನು ನಿಭಾಯಿಸಲು ಹೆಣಗಾಡುತ್ತಿದ್ದ ಪರಿ ಅವನಲ್ಲಿ ಅಚ್ಚರಿಉಂಟುಮಾಡಿತ್ತು. ಒಮ್ಮೊಮ್ಮೆ ಖಿನ್ನರಾಗಿ ಭವಿಷ್ಯದ ಬಗ್ಗೆ ಆಲೋಚನೆ ಮಾಡುತ್ತಾ ದುಃಖಿಸಿವುದನ್ನು ನೋಡಿದ್ದ. ಅಂತಹ ಒಬ್ಬ ಧೀರನಿಗೆ ಇಂಥಹ ಸಾವು ಬರುತ್ತದೆಂದು ಯಾವತ್ತು ಕನಸು ಕಂಡಿರಲಿಲ್ಲ. "ಅಪ್ಪ ಪರಂಪರೆಯ ಕೊಂಡಿಯನ್ನ ಕಳಚಿ, ಸಂಬಂಧಗಳನ್ನು ಹರಿದುಕೊಂಡು ಶಾಶ್ವತವಾಗಿ ಚಿರಮೌನಕ್ಕೆ ಜಾರಿದೆಯ. ನಿನಗೆ ಅಲ್ಲಾದರೂ ನೆಮ್ಮದಿ ಸಿಗಲಿ, ನಿನ್ನ ಮೇಲೆ ಗುಂಡು ಹಾರಿಸಿದವರಲ್ಲಿ ಕೆಲವರನ್ನಾದರೂ ಬಲಿತೆಗೆದುಕೊಳ್ಳದಿದ್ದರೆ ನಾನು ನಿನ್ನ ಮಗನೇ ಅಲ್ಲ" ಶಪಥಮಾಡಿದ, ಬಂಜಾರ ಪೋಷಕನಲ್ಲಿದ್ದ ಒಬ್ಬ ಸೈನಿಕ ಬಂದೂಕು ಹಿಡಿದು ತನ್ನತ್ತ ಬರುವುದನ್ನು ಗಮನಿಸಿದ ಚೊಕ್ಲ ಬಂಡೆಗಲ್ಲಿನ ಮೇಲಿಂದ ಅವನ ಮೇಲೆ ಹಾರಿ ಕೈಯೊಳಗಿದ್ದ ಖಡ್ಗದಿಂದ ಕತ್ತನ್ನೇ ಹಾರಿಸಿದ. ಯಾರ‍್ಯಾಯ ಕೈಯಲ್ಲಿ ಬಂದೂಕಿದೆಯೋ ಅವರನ್ನ ಕೊಲ್ಲುತ್ತಲೇ ಹೋದ. "ಆದರೆ, ಕೆಂಪಮೂತಿ ಮಂದಿ ಕಾಣ್ತಾಇಲ್ಲವಲ್ಲ". ಗೊಣಗಿದ, ಅವನು ಗೊಣಗಿಕೊಂಡಿದ್ದು ಬಹುಶಃ ಕೇಳಿಸಿಕೊಂಡ ಕೆಂಪು ಮನುಷ್ಯ ಯಮನಂತೆ ಅವನೆದುರು ಪ್ರತ್ಯಕ್ಷನಾದ, ಅವನ ಅಜಾನು ಭಾವ ವ್ಯಕ್ತಿಯನ ಕಂಡ ಚೊಕ್ಲನಿಗೆ, ರಾಮಾಯಣ, ಮಹಾಭಾರತದ ರಾಕ್ಷಸರ ನೆನಪಾಯಿತು. ಅವನ

ಖಡ್ಗ ರಕ್ತಸಿಕ್ತವಾಗಿರುವುದನ್ನು ಕಂಡು ಗುಂಡುಹಾರಿಸಿದ, ಅದು ಅವನ ಭುಜಕ್ಕೆ ತಾಗಿ ರಕ್ತ ಜಿಲ್ಲ್ ಅಂತ ಹೊರ ಚಿಮ್ಮಿತು. ನಾನು ಸಾಯುವುದು ನಿಶ್ಚಿತ ಈ ಕೆಂಪು ಮೂತಿಯ ಮಂಗ್ಯನನ್ನ ಕೊಲೆಮಾಡಲೇ ಬೇಕು" ಚೋಕ್ಲ, ಓಡಿದ, 'ಜೈ ಸೇವಾಲಾಲ್' ಕೂಗಿದವನೆ ಅವನ ಹೊಟ್ಟೆಯೊಳಗೆ ಖಡ್ಗ ಚುಚ್ಚಿ ಅವನನ್ನ ನೆಲಕ್ಕುರುಳಿಸುತ್ತಿದ್ದಂತೆ ಹಿಂದಿನಿಂದ ಒಬ್ಬ ಗುಂಡು ಹಾರಿಸಿದ ಅವನನ್ನು ನೆಲಕ್ಕುರಿಳಿಸಿದ. "ಅಪ್ಪ, ಒಬ್ಬನೇ ಕೆಂಪು ಮನುಷ್ಯನ ಕೊಂದೆ ನನ್ನ ಕ್ಷಮಿಸು" ಕಣ್ಣು ಮುಚ್ಚಿದ.

ಬಹದ್ದೂರ ಬಂಡದಲ್ಲಿ ಬಂಜಾರು ಸೋತು ಚೆಲ್ಲಾ ಪಿಲ್ಲಿಯಾಗಿದ್ದರು, ಬ್ರಿಟೀಷರ ಒಳಸಂಚು, ಮೋಸದ ಯುದ್ದ ಕೌಶಲ್ಯದ ಎದಿರು ಯಾರುತಾನೆ ಗೆಲುವನ್ನು ಸಾಧಿಸಲು ಸಾಧ್ಯ. ಬಂಜಾರರ ಬದುಕು ಇನ್ನೂ ದುಸ್ಥರಗೊಂಡಿತ್ತು. ಸಿಕ್ಕ ಸಿಕ್ಕಲ್ಲೇ, ದಂಗೆಕೋರರು, ಅಪರಾಧಿಗಳು ಸುಕಾಸುಮ್ಮನೆ ಜೈಲಿಗೆ ಕಳಿಸುವುದು ಚೆನ್ನಾಗಿ ಹರಿಹಾಯತೊಡಗಿದರು. ಅಲ್ಪಸ್ವಲ್ಪ ಪ್ರಮಾಣದಲ್ಲಿ ನಡೆಯುತ್ತಿದ್ದ ವ್ಯಾಪಾರ ಸಂಪೂರ್ಣವಾಗಿ ನಿಂತುಹೋಗಿತ್ತು. ನೂರಾರು ಬಂಜಾರರು ಬಹದ್ದೂರ ಬಂಡಾದಲ್ಲಿ ಹಾದಿ ಹೆಣವಾಗಿದ್ದರು. ಅವರಲ್ಲ ಚೊಕ್ಲನೂ ಒಬ್ಬವನಾಗಿದ್ದ. ಬ್ರಿಟೀಷರ ಬೇರುಗಳು ಆಳಕ್ಕೆ ಇಳಿದಿದ್ದವು, ಈಗಂತು ಹೇಳುವರು ಕೇಳುವರು ಯಾರೂ ಇಲ್ಲದಂಗಾಗಿತ್ತು. ಜನರ ಹತ್ತಿರ ಹೆಚ್ಚು ಕರ, ತೆರಿಗೆ ವಸೂಲಿ ಮಾಡುವುದೊಂದೆ ಅವರ ಉದ್ಯೋಗವಾಯ್ತು. ಬಹದ್ದೂರ ಬಂಡಾದಂಗೆಯನಂತರ ಬಂಜಾರರು ತಮ್ಮ ನೈಜತೆಯನ್ನು ಅರಿತುಕೊಂಡು, ಇದ್ದ ಪ್ರದೇಶಗಳಲ್ಲಿ ಡೇರೆಗಳನ್ನು ಕೆಡವಿ ಶಾಶ್ವತವಾಗಿ ನೆಲೆಗಳನ್ನು ನಿರ್ಮಿಸಿಕೊಳ್ಳತೊಡಗಿದರು. ಸಣ್ಣಪುಟ್ಟ ವ್ಯಾಪಾರ ಅಸಾಧ್ಯವೆಂದು ಅರಿತುಕೊಂಡ ನಂತರ ಕೆಲವರು ಭೂ ಹಿಡುವಳಿಯತ್ತ ಹೋದರೆ, ಕೆಲವರು ಕೂಲಿವಾಡುವುದು, ಬ್ರಿಟೀಷರ ಹಿಂದೆ ಸಾವಾನು ಸರಂಜಾವು ಸಾಗುವಳಿಗೆ ಹೋಗತೊಡಗಿದರು.

ಕರ್ನಾಟಕದ ಗಡಿ ಭಾಗ ಪ್ರವೇಶಿಸಿ, ಮೊಳಕಾಲ್ಮೂರಿನ ಹತ್ತಿರ ಹಾನ್‌ಗಲ್ ಪ್ರದೇಶದಿಂದ ಮುಂದೆ ಮೂರ ಕಿಲೋಮೀಟರ್ ದೂರಕ್ಕೆ ಬಂದು ಗುಡ್ಡದ ಹಿಂದೆ ನೆಲೆನಿಲ್ಲಲು ನಿಶ್ಚಯಿಸಿದ ಸೋಮ್ಲ ಬುಕ್ಯ ಕರಮತೋಟ್. ಸುತ್ತಲ ಕಲ್ಲುಗುಡ್ಡ, ಎತ್ತರದ ಮರಗಳು ನಡುವೆ ಪೂರ್ತಿ ಬಯಲು. ಎತ್ತರ ಹುಲ್ಲು, ಲಂಚಾಣ ಪೆದೆಗಳು, ಕಾರಿಹಣ್ಣು, ಬಾರಿಹಣ್ಣಿನ ಪೊದೆ, ಗಿಡಗಳಿಂದ ಸಮೃದ್ದವಾಗಿದ್ದ ಜಾಗವನ್ನು ನೋಡಿ ವಾಸಿಸಬಹುದೆಂದು ಅನಿಸಿದ್ದೆ ಸೋಮ್ಲ, ತನ್ನ ಇಬ್ಬರು ಸಹೋದರರಾದ ಮಂಗ್ಲ್ಯಾ ಮತ್ತು ಚಾಪ್ಲರ ಜೊತೆ ಸೇರಿಕೊಂಡು ಡೇರೆಗಳ ಬದಲಿಗೆ ಶಾಶ್ವತವಾಗಿ ನೆಲೆಸಲು ದೊಡ್ಡಹುಲ್ಲು, ಉದ್ದನೆ ಕಟ್ಟಿಗೆ, ನಡೆಕ್ಕೆ ದೊಡ್ಡ ಮರದ ದಿಮ್ಮೆಯನ್ನು ನಿಲ್ಲಿಸಿ ಗುಡಿಸಲುಗಳ ನಿರ್ಮಾಣಕ್ಕೆ ತೊಡಗಿಕೊಂಡರು. ಕಲ್ಲುಬಂಡೆಗಳು, ದೊಡ್ಡ ಬಂಡೆಯ ಗುಡ್ಡವೆಂದರೆ ಚಿರತೆ, ಹುಲಿ, ಕರಡಿ ಮುಂತಾದ ವನ್ಯ ಪ್ರಾಣಿಗಳು, ಇರಲೇಬೇಕೆಂಬುದು ಅವರ ತರ್ಕವಾಗಿತ್ತು. ಆದರೂ ಸೋಮ್ಲ ಯಾಕೆ ಇಲ್ಲಿ ಬಂದು ತಾಂಡ ಕಟ್ಟುತ್ತಿದ್ದಾನೆಂಬ ಸತ್ಯ ಯಾರೊಬ್ಬರಿಗೂ ಅರಿಯದಾಗಿತ್ತು. ಆದಾಗ್ಯೂ, ಚೊಂಚ ಪಕ್ಕೀಕನಾಯ್ಕು, ಪೀಲೊ ಹನುಮ ಕೇಳಿಯೆಬಿಟ್ರು. "ಅಲ್ಲಾ ನಾಯಕಪ್ಪ, ಯಾಕಿಲ್ಲಿ ತಾಂಡಕಟ್ಯಾಕ ಶುರುಮಾಡಿ ಅನ್ನೋದ ನಮ್ಮ ತಲಿಗ ಹೋಗವಲ್ದನೋಡು" ಅವನ ಉತ್ತರಕ್ಕಾಗಿ ಕಾದ. ಸೋವ್ಲು, ಮಾತಾಡಲಿಲ್ಲ. ಪೀಳೊಹನುಮ ಜಿಗಟಮನುಷ್ಯ "ಅಲ್ಲಾ ಈ ಬಂಡೆಗಳು, ಕಾಡು, ಹುಲಿ, ಚಿರತೆಗಳಿಲ್ಲದೆ ಇರಾಕ

ಸಾಧ್ಯನಾ. ಮಾತಾಡವಲ್ಲೆಯಲ್ಲ ನಾಯಕಪ್ಪ, ಹೇಳು ನಮಗ ನೆಮ್ಮದಿಸಿಗುತ್ತೆ" ನೇರವಾಗಿ ಹೇಳಿದ, "ಏ ಬೇಕೂಪಗಳಿರಾ, ಅದಕ್ಕ ಇಲ್ಲ ತಾಂಡ ಕಟ್ಟಿರೋದು. ಕಾಡಿಂದ ಹೊರಗಿ ಹೋದ್ವಿ ಅಂದ್ರ ಮಂದಿಬದಕಾಕ ಬಿಟ್ಟಾರೇನೋ, ಅವರು ಒಂದು ವೇಳೆ ಬಿಟ್ಟಾರುವೆ ಕೆಂಪಮಂದಿ, ಹುಡುಕಾಡಿ ಹೊಡಿತಾರ. ಕಾಡೊಳಗಿನ ಪ್ರಾಣಿಗಳು ಒಮ್ಮೆ ಬೇಟೆ ಆಡಿ ಪ್ರಾಣಕೊಂದು ತಿಂದ್ರ ಹಸಿವಾಗೊವರಿಗೆ ಸುಮ್ಮನೆ ಇರ್ತಾವೆ. ಹೊರಗ ಮನುಷ್ಯ ಪ್ರತಿದಿನ ಕೊಲ್ತಾನ. ಯಾವದ ಪಾಡು ನೀವ ಆಲೋಚನೆ ಮಾಡಿ ಕಟ್ಟೋರು ಕಟ್ಟಿ, ಯಾರಿಗೆ ಬೆದರಿಕೆ ಆಗತೈತೊ ನಿಮಗ ಎಲ್ಲಿ ಅನುಕೂಲನೋ ಅಲ್ಲಿಗ ಹೋಗಿ ನಿಮ್ಮದು ಒಂದಹೊಸತಾಂಡನ ಕಟ್ಟಿಕೊಳ್ರಿ" ಕೆರದ ಹತ್ರ ತುರಿಸಿಕೊಳ್ಳದಂಗೆ ಹೇಳಿದವನೆ ಸುಮ್ಮನಾಗಿದ್ದ. ಕೆಲಮಂದಿ ಗೋಣಗಿಕೊಂಡು ಸುಮ್ಮನಾದರು ಇನ್ನೂ ಕೆಲಮಂದಿಗ ಅರ್ಥ ಆಗದೆ ಸುಮ್ಮನಾಗಿದ್ರು. ಆದ್ರ ಹೊಸತಾಂಡ ಕಟ್ಟುವ ಪ್ರತಿಕ್ರಿಯೆಯೊಳಗೆ ಎಲ್ಲರೂ ಸಂತೋಷದಿಂದಲೆ ಪಾಲ್ಗೊಂಡಿದ್ದರು.

ನೋಡ ನೋಡುತ್ತಿದ್ದಂತೆ ಐವತ್ತು ಕುಟುಂಬಗಳವು ಐವತ್ತು ಗುಡಿಸಲುಗಳು ಎದ್ದುನಿಂತಿದ್ದವು. ಸೋಮ್ಲ ದೊಡ್ಡದೊಂದು ಗುಡಿಸಲು ಮಾಡಿಕೊಂಡಿದ್ದ ಅವನ ತಮ್ಮ ಮಂಗ್ಲ್ಯಾ ಚಪುರಕ್ಕೆ ಆನಿಸಿಕೊಂಡೆ ಹಾಕಿದ್ದ. ಚಾಪ್ಲ ಮಂಗ್ಲ್ಯಾನ ಹತ್ತಿರವೆ ಇದ್ದಿದ್ದುರಿಂದ ಅವನೇನು ಗುಡಿಸಲು ಸವಾಸಕ್ಕೆ ಹೋಗಿರಲಿಲ್ಲ. ರೇಖ್ಯಾ, ಕಾಳಿ ಮತ್ತು ಅವರ ತಾಯಿ ಚೌಲಿಗಂತ ಒಂದು ಜೋಪಡಿಯನ್ನು ಸೋಮ್ಲನೆ ಕಟ್ಟಿಕೊಟ್ಟಿದ್ದ. ಈಗ ಇಡಿ ಕರಮತೋಟ್ ಕುಟುಂಬಕ್ಕೆ ಹಿರಿಯ ತಲೆ ಎಂದರೆ ಸೋಮ್ಲಿ. ಯಾವಾಗಲೂ ದೇಸುನ ಚಿಂತೆಯಲ್ಲೆ ಕಾಲಕಳೆಯತೊಡಗಿದಳು. ಒಮ್ಮೊಮ್ಮೆ "ಮಗ ಸೋಮ್ಲು, ನಿಮ್ಮಪ್ಪ ಅಗಲಿ ವರ್ಷನೆ ಆಯ್ತು ಎಲ್ಲದಾನಂತ ವಿಚಾರಸವಲ್ಲೆ, ಬದಕ್ಯಾನೋ ಇಲ್ಲ ಸತ್ತಾನಂತಾನೂ ತಿಳ್ಕವಲ್ಲೋ ಮಗ, ಏನ ನಿನ್ನ ಹರೀಕತ್ತು, ಅವನ ಹಿಂದೆ ನಿನತಮ್ಮ ಚೊಕ್ಲ ಉಳ್ಕಾಂಡಾನ. ಆ ಬೇವರ್ಸಿನನ ಮಗನಾಗುವೆ ನಮ್ಮನ ಹುಡುಕೋ ಪ್ರಯತ್ನ ಮಾಡಬಾರದ." ಹೇಳೊಮಟ ಹೇಳಿ, ಸೋಮ್ಲು ಪ್ರತಿಕ್ರಿಯೆ ನೀಡದಾಗ ಕಣ್ಣಿಂದ ತೊಟ್ಟಿಕ್ಕುವ ನೀರನ್ನ ಒರೆಸಿಕೊಂಡು ಮೌನಿಯಾಗಿ ಕುಳಿತು ಬಿಡುತ್ತಿದ್ದಳು. ಆದರೆ ದುರಂತ ವೆಂದರೆ ತಂದೆಯ ರಕ್ಷಣೆಗೆ ಹೋದ ಚೋಕ್ಲ ಬ್ರಿಟೀಷರ ಗುಂಡಿಗೆ ಬಲಿಯಾದ ತಂದೆಯನ್ನ ಕಂಡು ಸೇಡು ತೀರಿಸಕೊಳ್ಳಲು ಹೋಗಿ ಬಲಿಷ್ಠರಾದ ಬ್ರಿಟೀಷರ ವಿರುದ್ಧ ಹೋರಾಡಲಾಗದೆ ಮಡಿದನೆಂಬ ಸತ್ಯ ಅವನೊಂದಿಗೆ ಹೂತುಹೋಗಿತ್ತು. ತಾಯಿಯ ಮಾತನ್ನ ಕೇಳಿ ಹುಡುಕುವ ಪ್ರಯತ್ನ ಮಾಡೋದಕ್ಕೆ ಸೋಮ್ಲನಿಗೆ ಧೈರ್ಯವೂ ಇಲ್ಲ, ಹಣನೂ ಇಲ್ಲದಕ್ಕೆ, ಮನಸ್ಸಿಗೆ ಹಿಂಸೆಯಾದರೂ ಸುಮ್ಮನಾಗಿ ಬಿಡುತ್ತಿದ್ದ. ಕೆಂಪುಮಂದಿ ಕಣ್ಣಿಗೇನಾರು ಬಿದ್ದರೆ ಕಟ್ಟಿದ ಗುಡಿಸಲುಗಳು ನೆಲಸಮ ಅಗುವುದು ನಿಶ್ಚಿತವಾಗಿದ್ದರೂ ಹೇಗೋ ರಾತ್ರಿ ಪಕ್ಕದ ಹಾನಗಲ್ಲು, ರಾಂಪುರ, ಮೊಳಕಾಲ್ಮೂರು, ಚಳ್ಳಕೆರೆ ಗಳಿಗೆ ಹೋಗಿ ಕಾಡಲ್ಲಿ ಸಿಗುವ ಅಂಟು, ಅಂಟವಾಳಕಾಯಿ, ಕಾರಿ, ಬಾರೆಹಣ್ಣು, ಒಣಕಟ್ಟಿಗೆಯನ್ನು ಮಾರಿ ಜೀವನಸಾಗಿಸ ತೊಡಗಿದರು.

ಹಾನಗಲ್ಲಿಂದ ರಾಡಿಬೆಲ್ಲತಂದು ಕಾಡಿನ ಕೊರಕಲೊಳಗೆ ನೀರಿರುವ ವರ್ತಿಗಳ ಪಕ್ಕ ಭಟ್ಟಿಸರಾಯಿ ತಯಾರು ಮಾಡುವುದನ್ನು ಆರಂಭಿಸಿದರು. ಪತ್ರಿ ಮರದ ಚಕ್ಕಿ ಸುಲಿದು, ಬೆಲ್ಲಾನ ವಾರಗಟ್ಟಲೆ ಕೊಳೆಹಾಕಿ ಹೂತಿಟ್ಟಿದ್ದನ ತಗದು ಒಲೆಯಮೇಲಿನ ಮಣ್ಣಿನ ಸೋರಿ ಮೇಲೊಂದು

ಸ್ವಾರಿಯನ್ನ ಮುಚ್ಚಿ ಆವಿ ಹೊರಾಗ ಬರಾಕ ನಳಿಕೆ ಬಿಟ್ಟು ಸುತ್ತಲು ಮಣ್ಣು ಮೆತ್ತಿ ಒಲಿಗೆ ಉರಿಯಿಟ್ಟರೆ ನೀರುಕಾದು ಕುದಿಯುತ್ತಿದ್ದಂತೆ ನಳಿಕೆಯ ಮೂಲಕ ಬಂದು ಶೇಖರಣೆಯಾಗುವುದೇ ಭಟ್ಟಿ ಸರಾಯಿ. ಸೋಮ್ಲನ ಈ ತಾಂಡದ ಹೆಸರು ಕೆಡುವುದು ಅನಿವಾರ್ಯವಾಗಿತ್ತು. ಐವತ್ತು ಗುಡುಸಲುಗಳನ್ನು ಆ ತಾಂಡವನ್ ದೇಸುನಾಯ್ಕನ ತಾಂಡವೆಂದು ಕರೆಯಲು ತಾಂಡದ ಕಾರಭಾರಿ, ಡಾವೋ, ಅಭಿಪ್ರಾಯವನ್ನ ಕೇಳಿ ಅದನ್ನೇ ಪ್ರಚಾರ ಮಾಡಿದರು. ಸೋಮ್ಲ ಬುಕ್ಯ ಕರಮತೋಟ್ ಮನೆಯೊಳಗೆ ಹೆಚ್ಚು ಮಂದಿ ಇದ್ದಿದ್ದರಿಂದ ಐದಾರು ಕಡೆಗೆ ಭಟ್ಟಿ ಹಾಕಿಸಿದ್ದ. ದಿನಕ್ಕೊಂದು ಹತ್ತು ಮಡಿಕೆಯಷ್ಟು ಭಟ್ಟಿ ಸರಾಯಿ ಇಳಿಯಿಸುತ್ತಿದ್ದ. ಅದನ್ನ ರಾಮಪುರಕ್ಕೆ ಹಾನಗಲ್ಲಿಗೆ ಹೋಗಿ ರಾತ್ರೋರಾತ್ರಿ ಮಾರಾಟಮಾಡಿ ಬರುತ್ತಿದ್ದ. ಸೋಮ್ಲ ಐದಾರು ಮಂದಿ ಕೆಲಸಗಾರರನ್ನು ಕೂಡ ಇಟ್ಕೊಂಡಿದ್ದ. ಧನಸಿಂಗ್ ಬುಕ್ಯಾಕರಮತೋಟ್ ಅವನಪ್ಪನ ಕೂಡ ಒಂದೊಂದೆ ಕೆಲಸಗಳನ್ನ ತಿಳಿಯುವ ಪ್ರಯತ್ನ ಮಾಡಕೊಳ್ಳತೊಡಗಿದ. ಅವನ ಅಜ್ಜಿಯ ಕೊರಗು ಉದಾಸೀನತೆಯ ನಡುವೆಯು ಭವಿಷ್ಯತ್ತಿನ ಬದಕು ಕಟ್ಟಿಕೊಳ್ಳುವ ಮೊಮ್ಮಗನಿಗಾಗಿ ತನ್ನೆಲ್ಲಾ ನೋವನ್ನು ಮರೆತಿದ್ದಳು.

ದಟ್ಟವಾದ ಕಾಡಡವಿಯೊಳಗೆ ಬರಿಕಲ್ಲು ಬಂಡೆಗಳೆ, ಅವುಗಳ ನಳಕಿನೊಳಗೆ ಚಿರತೆಗಳು, ಕರಡಿ ಬಹಳಷ್ಟು ಇದ್ದಿದ್ದರಿಂದ ದೇಸುನಾಯ್ಕನ ತಾಂಡದ ಮಂದಿ ಬಲು ಎಚ್ಚರಿಕೆಯಿಂದಲೇ ಕೆಲಸಮಾಡುತ್ತಿದ್ದರು. ಮಂದಿ ಗುಂಪು ಗುಂಪಾಗೆ ಅಡ್ಡಾವುದು ವಾಡಿಕೆಯಾಗಿತ್ತು. ಕಾಡಿನೊಳಗೆ ಸಂಚರಿಸಿ ಅನುಭವ ಇರುವ ಅವರಿಗೂ ಒಮ್ಮೊಮ್ಮೆ ಕಾಡು ಪ್ರಾಣಿಗಳು ಚಳ್ಳೆ ಹಣ್ಣು ತಿನ್ನಿಸುತ್ತಿದ್ದವು. ಭಟ್ಟಿ ಕುದಿಯಲು ಬಿಟ್ಟು ಊಟಕ್ಕಿಂತ ಬಂದಿದ್ದ ಬೇವಿನ ಮರದ ಪಕ್ಕದ ದುಡಿಸಲಿನ ಡಕಣ್ಯಾನಾಯ್ಕ ಅವಸರದಿಂದಲೇ ಉಂಡು ವಾಪಾಸು ಹೊರಟಿದ್ದ. ಹೋಗುವಾಗ ತನ್ನ ಹತಾರ್ ಕೊಡ್ಲಿಯನ್ನ ಮರತು ಹಳ್ಳಿ ದಾಟಿರಬೇಕು. ಹಿಂದಿಂದ ಕರಡಿಯೊಂದು ಅಮರಿಕೊಂಡು ಬಿಟ್ಟಿದೆ. "ಯಪ್ಪ ಸತ್ನೊ" ಅಂದವನೆ ಹೇಗೋ ಬಿಡಿಸಿಕೊಂಡು ತುಸು ಓಡಿದ. ಆದರೆ ಹೆಣ್ಣು ಕರಡಿ ಅವನನ್ನ ಬೆನ್ನು ಹತ್ತಿ ಅವನ ಮೇಲೆ ಬಿದ್ದು ಅವನನ್ನ ಎತ್ಕೊಂಡು ಗವಿಯಂತಹ ಜಾಗಕ್ಕೆ ಒಯ್ದು ಕೂಡಿಹಾಕಿ, ಅವನ ಕಾಲಿನ ಚರ್ಮವನ್ನೆಲ್ಲಾ ನೆಕ್ಕಾಬಿಟ್ಟು ಅವನು ನೆಲದ ಮೇಲೆ ಕಾಲು ಇಡದಂತೆ ಮಾಡಿತ್ತು. ಡಕಣ್ಯಾನಿಗೆ ಎಚ್ಚರವಾಗಿ ನೋಡ್ತಾನೆ ಅಯಾಸ, ಹೆಣ್ಣುಕರಡಿ ಅವನನ್ನ ತನ್ನ ಅದೀನದಲ್ಲಿಟ್ಟುಕೊಂಡಿದೆ., ಕಾಲನ್ನ ನೆಲಕ್ಕಿಟ್ಟರೆ ಯಮಯಾತನೆ. ಸಾಯಲಿಕ್ಕೂ ಆಗದ ಬದುಕಲಿಕ್ಕೂ ಆಗದ ಸ್ಥಿತಿಯಿಂದ ಹೊರಗಡೆ ಬರುವುದಾದರೂ ಹೇಗೆ? "ಯಾರಾರು ಕಾಪಾಡಿ" ಕೂಗಿದ. ಕರಡಿ ಒಮ್ಮೆ ಘರ್ಜಿಸಿತು. ಡಕಣ್ಯಾನಾಯ್ಕ ಸುಮ್ಮನಾದ. ಊಟ ನೀರು ಇಲ್ಲದ ನಿಸ್ತೇಜಗೊಂಡಿದ್ದ ದೇಹ, "ಹೇಗಾದರು ಮಾಡಿ, ಇದರ ಹಿಡಿತದಿಂದ ತಪ್ಪಿಸಿಕೊಳ್ಳಲೇಬೇಕು". ಒಬ್ಬನೆ ಮಾತಾಡಿಕೊಂಡ. ಕರಡಿ ಹೊರಗೆ ಹೋಗಿದ್ದೆ ತಡ ತೆವಳುತ್ತ ಕಲ್ಲುಗಳ ಸಂದಿಯಿಂದ ಹೊರಬಂದು ಕಾಲಗೆ ತಾವರಿಕೆ ತಪ್ಪಲನ್ನದಪ್ಪನಾಗಿ ಕಟ್ಟಿಕೊಂಡು ರಕ್ತಸೋರುತ್ತಿದ್ದರು ಸಹಿಸಿಕೊಂಡು ಹೊರಗಡೆ ಬಂದಿದ್ದ.

ದೂರದಲ್ಲಿ ಭಟ್ಟಿ ಹಾಕಿದವರ ಕಣ್ಣಿಗೆ ಬೀಳುತ್ತಿದ್ದಂತೆ ಕೀರಲು ಧನಿಯಲ್ಲಿ "ಯಪ್ಪ ಕಾಪಾಡ್ರೋ" ಅಂದವನೆ ಮೂರ್ಛೆ ಹೋದ. ಕೋಮ್ಲನಾಯ್ಕ, ಅವನ ಪಕ್ಕದಲ್ಲೇ ಭಟ್ಟಿ ಹಾಕಿದ

ಕಾಣು, ಹನುಮ ಡೊಂಗ್ರಿ, ಧ್ವನಿಬಂದ ಕಡೆಗೆ ಓಡಿದರು. ಕರಡಿ ಮನುಷ್ಯನ ಮೇಲೆ ನಿಂತಿರುವುದನ್ನ ನೋಡಿ ಹೌಹಾರಿದ ಸೋಮ್ಲು, ಯಾರಿರಬಹುದು ಎಂದು ಯೋಚನೆಮಾಡಿದ, "ಎಯ್ ಕಾಣು, ಭಟ್ಟಿಗೆ ಹೋಗಿ ಉರಿತಿರುವೆ ಎರಡು ಕಟ್ಟಿಗಳನ್ನು ಬೆಂಕಿ ಸಮೇತ ತಗೊಂಡ ಬಾಹೋಗು" ಅಂದವನೆ ಉಪಾಯದಿಂದ ಮನುಷ್ಯನನ್ನ ಆಚೆ ಸಾಗಿಸುವ ಬಗೆಯನ್ನ ಯೋಚಿಸತೊಡಗಿದ. ಕಾಣು ಒಂದೇ ಉಸರಿಗೆ ಓಡಿಹೋದವನೆ ಉರಿಯುತ್ತಿದ ಬೆಂಕಿಯಿಂದ ಎರಡು ಕಟ್ಟಿಗೆಗಳನ್ನು ಬೆಂಕಿಸಮೇತವಾಗಿ ಹಾಗೆಯೆ ತೆಗೆದುಕೊಂಡುಬಂದಿದ್ದ. ಬೆಂಕೆಬಂದಿದ್ದೆ ಕರಡಿ ಜಾಗ ಖಾಲಿ ಮಾಡಿತು. ಡಕಣ್ಯಾನಾಯ್ಕನ್ನ ಹತ್ತಿರ ಹೋದ ನಾಲ್ಕು ಜನ, ನಮ್ಮ ತಾಂಡದ ಡಾಕಣ್ಯಾ ಅಂತ ಗೊತ್ತಾಗಿದ್ದೆ ಅಜಾಮತ್ತಾಗಿ ಎತ್ತಿಕೊಂಡು ಭಟ್ಟಿಯ ಹತ್ತಿರ ಓಡಿದರು. ಹೆಣ್ಣು ಕರಡಿ ಅಷ್ಟು ಸುಲಭವಾಗಿ ಡಕಣ್ಯಾನನ್ನ ಬಿಡಲು ತಯಾರಿರಲಿಲ್ಲ. ಅವನನ್ನ ಮತ್ತೆ ವಾಪಾಸು ಒಯ್ಯಲು ಹವಣಿಸಿತ್ತು. ಸೋಮ್ಲು ಅದನ್ನ ಗಮನಿಸದವನೆ "ಅರೇ, ಕರಡಿ ಮತ್ತ ವಾಪಾಸು ಬಂದೈತಲ್ರೋ, ಯಾರಾರು ಅದರ ಕೂದಲಿಗ ಬೆಂಕಿ ಇಡ್ರಿ, ಸುಟ್ಟುಹೋಗಲಿ" ಮತ್ತೆ ಅದು ಮಂದಿ ಮೇಲೆ ಆಕ್ರಮಣ ಮಾಡುವುದನ್ನ ಖಾತ್ರಿಪಡಿಸಿಕೊಂಡವನೆ ಹೇಳಿದ. ಕಾಣು ಕೈಯೊಳಗಿದ್ದ ಬೆಂಕಿದೊಂದಿಯನ್ನ ಹಿಡಿದು "ಹೇ, ನಿನ್ನವ್ವನ ಡಕಣ್ಯಾನಾಯ್ಕನ್ನ ಕೂಡ ಸಂಸಾರ ಮಾಡಿದ್ದ ಸಾಲದೇನು ಸರಿ ಅತ್ಲಗೆ" ಗದರಿಸಿದ. ಕರಡಿ ಓಡಿತು.

ಡಕಣ್ಯಾನಾಯ್ಕನ ಕಾಪಾಡಿದ ಸೋಮ್ಲು ಅವನನ್ನ ಅಜಾನುಮತ್ತಾಗಿ ಎತ್ಕೊಂಡು ಊರಮಟ ಹೋಗಿದ್ದ. ಅವನ ಹೆಂಡತಿ ಪೀಡಿ, ಕೂಳಬಿಟ್ಟು ಗಂಡನ ಸಲವಾಗಿ ಹುಡುಕಾಡುತ್ತಿದ್ದವಳಿಗೆ ಅವನ್ನ ಕಂಡು ಆನಂದವಾಗಿತ್ತು. ಸೇವಾಭಾಯಿ, ಮರಿಯಮ್ಮನ ಗಾಡಿ ಎದಿರು ಅವನ್ನ ಇಳಿಸಿದ ಸೋಮ್ಲು ಮಂದಿ ಹಾಗೆ ಜಮಾಯಿಸತೊಡಗಿದರು. "ಏನಾಯಿತಂತೆ" ಒಬ್ಬ ಕೇಳಿದ. "ಏನೋ ಡಕಣ್ಯಾ ಸಿಕ್ಕವ್ನನಂತ". ಮತ್ತೊಬ್ಬ "ಹೆಂಗೆ?" ಇನ್ನೊಬ್ಬ ಗದ್ಲ ಜೋರಾಗಿತ್ತು. ಡಕಣ್ಯಾನ ಅರವಿ ಹರಿದಿದ್ದವು. ಕಾಲು ಕೈಯನ್ನ ನೆಕ್ಕಿ, ಚರ್ಮವನ್ನ ಸುಲಿದಿತ್ತು. ಅಯ್ಯೋಪಾಪ ಅಂವ ಉಳದದ್ದೆ ದೊಡ್ಡಮಾತು" ಯಾರೋ ಲೊಚಗುಡುತ್ತಿದ್ದರು. "ಜಾಗಬಿಡ್ರಿ, ಗಾಳಿಬರಲಿ, ಮದ್ಲೆ ಸಯಾಕಹತ್ಯಾನ", ವಯಸ್ಸಾದ ಸೇವ್ಯಾನಾಯ್ಕ ತನ್ನ ಅನುಭವದ ಹಿನ್ನೆಲೆಯಲ್ಲಿ ಹೇಳಿದ, ಮಂದಿ ದೂರ ಸರಿದು ನಿಂತ ಮೇಲೆ, ಗಾಯಕ್ಕೆ ಹಚ್ಚಬೇಕಾದ್ದನ್ನ ಕೊಟ್ಟು ಮುದುಕ, ಮಂದಿನೆಲ್ಲಾ ಚದುರಿಸೋದಕ್ಕೆ "ಹೋಗ್ರಲೆ ತಮ್ಮ ಇಲ್ಲೇನು ಕೋತಿ ಕುಣಿಸಕತ್ತಿಲ್ಲಾ, ಬದುಕು ಬಾಳೇವು ನೋಡಹೋಗ್ರಿ. ಗಾಳಿ ಆಡ್ಲಿ ಆಟು, ಗಾಬರಿ ಆಗ್ಯಾನ, ನಾಳೆ ಅಂದ್ರ ಪಾಡ ಆಗತಾನ" ಅರ್ಥಮಂದಿ ಸರಿ ಅಂತ ಹೋದ್ರು ಉಳಿದವರು ಅಲ್ಲೇ ಕಟ್ಟಿಗ ಅಂಡೂರಿ, ಅದು ಇದು ಸುದ್ದಿ ಮಾತಾಡೋದಕ್ಕೆ ಆರಂಭಿಸಿದ್ರು. ಆದರೆ ಕರಡಿಯ ಆಕ್ರಮಣಕ್ಕೆ ಲಂಬಾಣಿಗರು ಹೆದರಿದ್ದರು. ಕೈಯಲ್ಲಿ ಹತಾರ್, ಜೆಬಲ್ಲಿ ಬೆಂಕಿ ಪೆಟ್ಟಿಗೆಯನ್ನು ಇಟ್ಕೊಂಡೆ ಅಡ್ಡಾಡುವಂತೆ ಪ್ರತಿಯೊಬ್ಬರಿಗೂ ತಿಳಿಸಿದರು. ಹಾಗೆಯೇ, ಯಾರು ಒಂಟಿಯಾಗಿ ಅಡ್ಡಾಡದಂತೆ ಎಚ್ಚರಿಕೆ ಹೇಳಿದರು. ದುರ್ಗಮ ಪ್ರದೇಶದಲ್ಲಿ ತಾಂಡ ಕಟ್ಟಿದ ಸೋಮ್ಲನ ಎದೆಗಾರಿಕೆಯನ್ನ ಮೆಚ್ಚಿದ ಬಂಜಾರರು, ತಾಂಡವನ್ನ ಸುರಕ್ಷಿತವಾಗಿ ಕಾಪಾಡುವುದು ತಮ್ಮ ಕರ್ತವ್ಯವೆಂದು ಬಗೆದಿದ್ದರು. ಸರಾಯಿ ಕುಡಿಯಲು ಸುತ್ತಲ ಊರುಗಳಿಂದ ಕನ್ನಡ ಮಾತಾಡುವ ಕೋರಿಕೊಕ್ (ಕನ್ನಡ ಜನ) ಬರುತ್ತಿದ್ದರು. ಕಾಲಬದಲಾಗುತ್ತಿದ್ದಂತೆ, ಮಂದಿ ಮನಸ್ಸುಗಳು ಬದಲಾಗುತ್ತಿದ್ದವು. ಕಳ್ಳಭಟ್ಟಿ ಸರಾಯಿ

ಕುಡಿಯುವುದು ಹೆಚ್ಚಾಗಿ ಸರ್ಕಾರಕ್ಕ ತಲಿನೋವಾಗಿತ್ತು. ಸರಾಯಿ ತಯಾರಿ ಮಾಡುತ್ತಲೇ ಕುಡಿದು ಮಲಗಿಬಿಡುತ್ತಿದ್ದ ಯಂಕ, ಕಾಳ್ಯ, ಪೀರು ಮನೆಗೆ ಬರುವುದೆ ಎರಡು ಮೂರುದಿನಗಳಿಗೊಮ್ಮೆ. ಕಾಳ್ಯನ ಹೆಂಡತಿ ಪೀರಿ ಗುಡಿಸಲಿಗೆ ಮೊಳಗಿಲ್ಮೂರ್ ಜಮೀನ್ದಾರ ಗೌಡ್ರ ಮಲ್ಲಪ್ಪನ ಮಗ ಸಿದ್ದೇಶಿ ಕುಡಿಯುವ ನೆಪದಿಂದ ಬಂದು ಹೋಗಿ ಮಾಡ್ತಿದ್ದೇನೋ, ರೊಕ್ಕದ ದರ್ಪದಿಂದ, ಕಾಳ್ಯಾನ ಹೆಂಡತಿ ಪೀಕಿತಾವ ಸಲಗಿಬೆಳಿಸಿಕೊಂಡಿದ್ದ. "ಬೇ, ಲಮಾಣಿ, ಎಟುನಿಂದು" ಅಂತ ಏಕವಚನ ದಿಂದಲೇ ಮಾತಾಡುತ್ತಿದ್ದ. ಅವನ ಹಿಂದೆ ನಾಯಕರ ತಿಪ್ಪ, ಚೆಲವಾದಿ, ಚೆನ್ನ, ಉಪ್ಪಾರ ಮಂಜ್ಯ ಕುಡದು ಅವಳ ಮೈ ಕೈ ಉಜ್ಜೋದು ಮಾಡ್ತಿದ್ರು "ಏಯ್ ಏನಾಗತೆಯಪ್ಪ ನಿಂದುಕೆ" ಕನ್ನಡದಾಗ ಮಾತಾಡೊ ಪ್ರಯತ್ನ ಮಾಡಿದ್ಲು. ಅವನು ಹೆಂಡತಿಯಂಗೆ ಕರೆಯೋದು ಅಕ್ಕಪಕ್ಕದವರಿಗೆ ಸರಿ ಅನಿಸುತ್ತಿರಲಿಲ್ಲಾ. ಸಿದ್ದನ ಚೇಲಗಳು ಹೊಸದೊಂದು ಹುಳ ಅವನ ತಲಿಯೊಳಗ ಬಿಟ್ಟಿದ್ರು. ಮದಲು, ಅವಳು ಕೇಳಿದಾಟು ಕಾಸಕೊಡುವುದು ನಂತರ ರಾತ್ರಿ ಕೋಳಿಸಾರು ರೊಟ್ಟಿ ಮಾಡಿಸಿಕೊಂಡು ಉಂಡು ಒಂದೆಲ್ಡ ಸಲ ಅವಳ ಮನಿಯೊಳಗೆ ಉಳಿಯೋದು ಮಾಡಿದ. ಅಷ್ಟೆ ಪೀರಿ ಹೆಸರು ತಾಂಡದಾಗ ಮನಿಮಾತಾಗಿತ್ತು. ಬಡವರ ಸುದ್ದಿಗಳಿಗೆ ರೆಕ್ಕೆಪುಕ್ಕ ಬಂದಬಿಡ್ತಾವ. ಆದ್ರ ಶ್ರೀಮಂತರ ಮನಿನಾಕ ಗೋಡಿಯೊಳಗೆ ಏನೆಲ್ಲಾ ನಡಿತಾವ ಯಾರಕಿವಿಗೂ ಸುದ್ದಿ ಬೀಳೋದಿಲ್ಲ. ಯೌವ್ವನದ ಕಾವು ಕಳ್ಳಭಟ್ಟಿ, ಕಾಸೋದು, ಕುಡಿಯೋದು ಅಷ್ಟೇ ಜೀವನ ಅನ್ಕೊಂಡ್ರೆ ಆದೀತೆ, ಮನಿಯೊಳಗಾ ಹರೆಯದ ಹೇಣ್ತಿ ಅದಾಳನ್ನೋ ಖಬರ ಬೇಡವಾ, ನೋಡಿದ್ಲು ದೇಹದ ಕಾವು ಹೆಚ್ಚಾಗಿತ್ತು. ತಂಪಮಾಡೊ ಸೂರನ ಸಲವಾಗಿ ಕಾದಳು, ಲಮಾಣಿ ಮಂದಿ ಸಿಗದಕ್ಕ ಸಿದ್ದೇಶಿಕೂಡ ಮಲಗಿದಳು.

ತಾಂಡ ಹದಗೆಡುವುದರೊಳಗೆ ಏನಾರು ಮಾಡಲೇಬೇಕಂತ ಸೋಮ್ಲು ಬುಕ್ಯ ಅಂದ್ಕೊಂಡಿದ್ದ ಬದಲಾವಣೆ ಬಯಸ್ಕೊಣ ಮಂದಿಕೂಡ ಗುದ್ದಾಡೋದು ಆಗಲ್ಲಂತ ಸುಮ್ಮನಾದ ಅಷ್ಟಕ್ಕೂ ಪೀರಿ, ಸಿದ್ದೇಶಿ ಮಲಗಿದ್ದನ್ನ ಯಾ ಮಗಾನು ನೋಡಿಲ್ಲ, ಎಲ್ಲಾ ಊಹಾಪೋಹಗಳೆ ಬಡಮಂದಿಮ್ಯಾಲ ಜಾಸ್ತಿ ಕಣ್ಣು, ಬಡತನದ ಭವಣೆ ಸಹಿಸಿಕೊಳ್ಳೋದಕ್ಕೆ ಆಗದ ಅಡ್ಡದಾರಿ ಹಿಡಿತಾವಂತ ಪುಕಾರಗಳು ಹೆಚ್ಚು. ವಸ್ತುಸ್ಥಿತಿ ಹೀಗಿರುವಾಗ ನಾನೇನು ಕಡದು ಕಿಸಿಯೋದ ಐತಿ ಅಂತ ಸುಮ್ಮನಾಗಿದ್ದ, ಆದ್ರ ಡಾವೂ ಮತ್ತ ಕಾರಭಾರಿ ಸುದ್ದಿಯ ಮೂಲಕ ಹೋಗಿ ಇದಕ್ಕೊಂದು ಗತಿ ಕಾಣಿಸಬೇಕಂತೇಳಿ, ಕಣ್ಣಾರೆಕಂಡವರನ್ನ ಸಾಕ್ಷಿಗಂತ ಕರ್ಕೊಂಡು ಬಂದಿದ್ದರು. ಡಾವೂ ಡಕಣ್ಯಾನಾಯ್ಕ, "ಅಲ್ಲ ಹಟ್ಟಿನಾಯಕ ನೀನ ಹಂಗ ಸುಮ್ಮನಾದ್ರ ಹೆಂಗಂತ. ನಾಳೆ ತಾಂಡ ಹದಗೆಟ್ಟ ಹೋಗಿತೈತೆ", ಡಾವೂ ಹೇಳಿದನ್ನ ಕಾರಭಾರಿ ಓತಿಕಾಟಕ್ಕೆ ಬೇಲಿ ಸಾಕ್ಷಿ ಎಂಬಂತೆ ತಲೆಯಾಡಿಸಿದ. ಸೋಮ್ಲು ಬುಕ್ಯಾಗ ಎಲ್ಲಾ ಗೊತ್ತಿತ್ತು ಆದರೂ ವಿಷಯ ರಂಗಪಡಲಿ ಅಂತೇಳಿನೆ ಸುಮ್ಮನಾಗಿದ್ದ. ಇದರಿಂದ ಏನು ಪರಿಣಾಮ ಆಗಬಹುದು ಎಂದು ಯಾರು ಯೋಚನೆನೆ ಮಾಡಿರಲಿಲ್ಲ. ಸೋಮ್ಲು ಬುಕ್ಯಾ ಯೋಚಿಸತೊಡಗಿದ, ಮೊಳಕಾಲ್ಮೂರ ಜಮೀನ್ದಾರ ಬ್ರಿಟೀಷರ ಮನುಷ್ಯ ಇಲ್ಲಿ ಬಂಜಾರ ಮಂದಿವಾಸ ಆಗ್ಯಾರಂದ್ರ ಅವರು ಸೈನಸಮೇತ ಬಂದಾರು ಅನ್ನುವ ಅಂಜಿಕೆ, ಇದನ್ನೇ ದೌರ್ಬಲ್ಯ ಅಂತೇಳಿ ಸಿದ್ದ. ಮಂಜ್ಯ ತಾಂಡದಾಗ ದಾಂಧ್ಲಿಮಾಡಾಕ ಹತ್ಯಾರ. ಯೋಚಿಸಿದ, ಇದನ್ನ ಹಿಂಗ ಬಿಟ್ರೆ ತಾಂಡದ ಎಲ್ಲಾ ಹೆಂಗಸರಿಗೂ ಈ ಮಕ್ಕಳು ಕಾಟ ಕೊಡ್ತಾರೆ. "ಕಾಯಿ ಕರೇರೊ ಕಾರಬಾರಿ" (ಏನು ಮಾಡೋದು ಕಾರಬಾರಿ) ಕಂಕಾಳಿ ಕಡೀಗ ನೋಡಿದ.

ಅವನು ಏನತಾನೆ ಹೇಳಾಕ ಸಾಧ್ಯ, "ಏನೋ ಮಾವ, ನೀ ತಿಳವಳಿಕೆ ಇರೋ ಮನುಷ್ಯ ನೀನ ದಾರಿ ತೋರಿಸಬೇಕು." ತಲಿಕೆಡಿಸಿಕೊಳ್ಳಕ ಹೋಗಲಿಲ್ಲಾ. ಡಕಣ್ಯಾಮಾತ್ರ "ಇದಕ್ಕೊಂದು ಗತಿಕಾಣಿಸಾಕಬೇಕು ಹಟ್ಟಿನಾಯಕಪ್ಪ, ಇಲ್ಲದಿದ್ದರ ನಮ್ಮ ಹೆಂಗಸರು ಮಕ್ಕಳು ಮಂದಿಪಾಲಾದವು." ಸಿಟ್ಟಿನ ತಡ್ಕೊಂಡು ಹೇಳಿದ. ಆವೇಷ ಒಳ್ಳೆದಲ್ಲಾ, ತಣ್ಣಗ ಯೋಚನೆ ಮಾಡಬೇಕು. ಯಾಕಂದಿ ಪರಿಸ್ಥಿತಿ ನಮ್ಮ ಪರವಾಗಿಲ್ಲ. ಕೆಂಪಮಂದಿಗ ನಾವು ಇಲಿ ಇರೋದೇನಾದರು ತಿಳಿತೋ ನಮ್ಮ ಮಕ್ಕಳು, ಮರಿಗಳು, ಹೆಂಗಸರ ಸಮೇತ ಕೊಂದ ಹಾಕ್ತಾರೆ. ಸೋಮ್ಲ ಕಡಾಖಂಡಿತವಾಗಿಯೇ ಹೇಳಿದ. "ಅಲ್ಲ ನಾವೇನು ಮಾಡಬಾರದ ಮಾಡಿವಿ ನಮ್ಮನ್ನ ಹಿಂಗಕೊಲ್ಲಾಕ". ಕಂಕಾಳಿ ಕೇಳಿದ. ನೋಡು, ಕೆಂಪಮಂದಿ ಈ ದೇಶದೊಳಗ ಬರಾಕ ನಾಮಕಾರಣ, ನಮ್ಮ ಮಂದಿನ ಅವರಿಗೆ ದಿಕ್ಕುಗಳನ್ನು ತೋರಿಸಿದವರು, ಅಂದಮೇಲೆ ನಮಗೆ ದಾರಿಗೊತ್ತಾದಾವು ಅಂತಾರು. ದಾರಿತೋರಿಸಿದವ ನಮಗ ಮುಳ್ಳಾಗಬಹುದು ಅನ್ನೋ ಆತಂಕ. " ಅದೇನ ಅರ್ಥ ಆಯ್ತೊ, ಕಂಕಾಳಿ ಹೂಂ ಅಂದು ಎಲಿಅಡಿಕೆ ಚಂಚಿ ತಗದು ನಿರುಮ್ಮಳವಾಗಿ ಎಲೆಹಾಕತೊಡಗಿದ. ಸೋಮ್ಲನ ತಲಿಯೊಳಗ ನೂರೆಂಟು ಆಲೋಚನೆಗಳು ಏಳುತ್ತಿದ್ದವು.

ಗುಡ್ಡದ ನಳಿಕೆಗೆ ಬರುತ್ತಿದ್ದಂತೆ, ನಾಕು ಮಂದಿ ಸಿದ್ದೇಶಿ ಮತ್ತು ಅವನ ಗೆಳೆಯರ ಕುದುರೆಗಳೇ ಎಂಬದನ್ನು ಖಚಿತಪಡಿಸಿಕೊಂಡು ವಿಕಾರವಾಗಿ ಕೂಗಿ ಕಲ್ಲುಗಳನ್ನು ಅವರ ಕಡೆಗೆ ಎಸೆಯತೊಡಗಿದರು. ಗುಡ್ಡದ ನಳಕಿಂದ ಮಕ್ಕರಗೌಳಿನಲ್ಲಿ ಎಸದೆ ಕಲ್ಲುಗಳು ಯಾವು? ಎಂಬುದನ್ನು ಅರಿಯಲು ಆಗದೆ, ಗಲಿಬಲಿಗೊಂಡರು. "ಅಣ್ಣ, ಏನಣ್ಣ ಇದು" ಮಂಜ್ಯ ಕೇಳಿದ. ಆದೆ ನನಗೂ ತಿಳಿತಾಯಿಲ್ಲ" ಸಿದ್ದೇಸಿ ತಲಿಕೆರ್‍ಕೊಂಡ, ಹೆಂಗಾರುಸರಿ, ಏನಮಾಡಿದ್ರು, ಸರಿ ಅವನು ಪೀಕೆಯನ್ನು ಸೇರಲೇಬೇಕೆಂಬ ಹಂಬಲದಿಂದ ಬಂದಿದ್ದ. ಅಚಾನಕ್ ಹಿಂಗೆ ರಸ್ತೆ ನಡಕ ಆದ ಅನಾಹುತಕ್ಕೆ ಗಾಬರಿಯಾಗಿದ್ದ. "ಲೇ ಬೆಪ್ಪ ನನ್ನ ಮಕ್ಕಳ್ರ, ಯೋಚನೆ ಮಾಡ್ರಲೇ ಏನ ಮಾಡೋದು" ಗದರಿಸಿದ. ಅದೇ ಅಣ್ಣ ನಮಗು ತಿಳಿತಾಯಿಲ್ಲ. "ಇದ್ದಕ್ಕಿಂದಂಗ ಕಲ್ಲು ಬೀಳೋದಂದ್ರೇನು? ಏನಾರು ಬ್ರಹ್ಮರಾಕ್ಷಸ.. . . ಇಲ್ಲ. ದೆವ್ವ ಬೂತ ಪ್ರೇತ ಗಳೇನಾರು ಎದ್ದವೆ ಹೆಂಗಂತೀನಿ" ಮಂಜ ಅನುಮಾನ ಪಟ್ಟಿದ್ದ. ವಾಪಾಸು ಊರಿಗೆ ಹೋಗದೆ ಬೇರೆ ದಾರಿನ ಇಲ್ಲದಂಗಾಗಿತ್ತು. ಸಿದ್ದೇಶಿಗ ಮಾತ್ರ ಪೀಕಿನ ನೋಡದಾಕ ಹೋಗೋದಕ್ಕೆ ಮನಸ್ಸು ಆಗಿ ತೊಳಲಾಡತೊಡಗಿದ. ಆದ್ರ ಕಲ್ಲು ಬೀಳೋದು ಹೆಚ್ಚಾಗಿ ಪ್ರಾಣಕ್ಕೇನಾರು ಅಪಾಯ ಆದ್ರ ಹೆಂಗಂತ ಯೋಚನೆ ಮಾಡಿದ. "ಲೇ ಸೂಳಿಮಕ್ಕಳ್ರ, ತಡಕೋಳಾಕ ಆಗವಲ್ದು ಏನಾರ ದಾರಿ ಹೇಳ್ರಲೇ. ನಿಮಗ ತಿನ್ನಿಸಿ ಉಣ್ಣಿಸಿ ನನ್ನ ಹಿಂದ ಅಡ್ಡಾಡಕ ಹಚ್ಚಿರೋದು ಏನಕ್ಕ? ದಂಡಪಿಂಡಗಳಂಗೆ, ಕೆಲಸಕ್ಕ ಬಾರದ ನಾಮರ್ಥಕರ ಹಂಗೆ ಇರಾಕಲ್ಲಾ ತಲಿ ಓಡಿಸ್ರಿ ತಲಿನ" ಬಾಯಾನ ಮಾತು ಬಾಯಾಗ ಇತ್ತು ಎಲ್ಲಿಂದಲೋ ಸೊಯ್ ಅಂತ ಬಂದ ಕಲ್ಲು ಸಿದ್ಧೇಶಿ ಹಣಿಗ ಬಡದದ್ದೆ "ಎಯ್, ಯವ್ವ, ಸತ್ನೆ" ಅಂದವನ ನೆಲಕ್ಕೆ ಕುಸಿದ. "ಅಣ್ಣಾ, ಅಣ್ಣಾ" ತಲಿ ಒಡೆದು ಸುರಿತಿದ್ದ ರಕ್ತಕ ಟವಲು ಅಡ್ಡಕಟ್ಟಿದ ಮಂಜ್ಯ. ಚಲವಾದಿ ಚೆನ್ನ "ಧಣಿಯೋರ, ಅಣ್ಣ ಉಸರು ನಿಮತಂಗಾಗ್ಯೆತೇನು ನೋಡ ಆಟು" ಅಂದ, "ಲೇ ಬೊಸುಡಿಕೆ, ಅಣ್ಣ ಮೂರ್ಛೆ ಹೋಗಿರೋ ಹೊತ್ನಾಗ ನಗಚಾಟಿ ಮಾಡ್ತಿಏನಲೇ, ಬಾ ಹಿಡಿ ಎತ್ಕಂಡ ಹೋಗಾಮ" ಅಂದವನೆ ಕಾಲಕಡಿಗ ಹಿಡಿದು ಎತ್ತಿ ಜಾಗ ಬದಲಿಸಿ, ಅಲ್ಲೇ ಇದ್ದ ವರ್ತಿಯಿಂದ ನೀರತಂದು ಚಿಮುಕಿಸಿದ.

ತಾಸ ಮಟ ಸುಧಾರಿಸಿಕೊಂಡ ಸಿದ್ದೇಶಿ, "ಪೀಕಿ" ಅಂದ. "ತಗೊಳಪ್ಪ, ತಲಿ ಹೊಡದು ರಕ್ತ ಸುರಿಸ್ತಿದ್ರು ಪೀಕಿ ಅಂತಾನ ಸೂಳಿಮಗ, ಬಡವರ ಹೆಂಗಸರು ಅಂದ್ರ ಪ್ರಾಣಾನ ಬಿಡಾನ ಹಲ್ಕಟಕ್ ಗೌಡ. ಮನಿಯಾಗ ಗೊಂಬಿಯಂತ ಹೆಣ್ತಿದ್ರು ಅದೇನ ಚಟಾನೊ". ಚಲವಾದಿ ಚೆನ್ನ ಗೊಣಗಿಕೊಂಡ. ಸಾಕುತ್ತಲೇ ಹಡಬಿನನಮಗನ, ಅಣ್ಣಾಗ ಪ್ರೀತಿ ಬೇಕೆಂತ, ಗೊತ್ತಾಗವಲ್ಲದೇನ ನಿನಗ." ತಲಿ ಓಡ್ಕ ಮಂಜ ಒದರಿದ. "ಅಲ್ಲಣ್ಣ ಅದಕ್ಕ ನನ್ನೇನು ಮಾಡಂದಿ ಹೇಳು, ಬಾಕಿಗುಡ್ಡ ಕಡದು ಸಾರಥಿ ತರಲೇನು? ನೀ ಹೇಳಿದ್ರ ನಾ ಹೊತ್ಕಂಡ ಬರ್ತೀನಿ", ಚೆಲವಾದಿ ವಾಪಾಸಹೇಳಿದ. "ನನ್ನ ಅನ್ನ ತಿಂದು ನನ್ನ ಸರಾಯಿ ಕುಡಿದು, ಗುಡ್ಡ ತರ್ಲಿ ಅಂತಿಮಗನ" ಸಿದ್ದೇಶಿ ಸಿಟ್ಟಿಂದ ಹೇಳಿದ.

ಹೊಡೆಯೋದ ಹೊಡದು ಹುಚ್ಚಾಮಂಗ್ಯಾ ಆಗಿ ತಾಂಡದ ಹುಡುಗರು ಓಟಕಿತ್ತಿದ್ರು ನಡದದನ್ನ ಹಟ್ಟಿ ನಾಯಕ ಸೋಮ್ಲನ ಮುಂದ ಚಾಚು ತಪ್ಪದೆ ಹೇಳಿದರು. ಸೋಮ್ಲ ಒಂದಘಳಿಗೆ ಸುಮ್ಮಾನಾಗಿ "ನೀವೇನು ಗಾಬರಿಯಾಗಬೇಡ, ಅವೆಲ್ಲ ಮಾಮೂಲು, ಆದ್ರ ಇಲ್ಲಿ ನಡದದನ್ನ ಯಾರ ಮುಂದು ಹೇಳಾಕಹೋಗಬ್ಯಾಡ್ರಿ, ಮಂದಿಪಾಡಿಲ್ಲ, ನಾಳೆ ಒಂದ ಹೋಗಿ ಮತ್ತೊಂದ ಆದೀತು." ಎಚ್ಚೆರಿಸಿದ ಸೋಮ್ಲ. ಆದರ ಈ ಘಟನೆ ಇನ್ಯಾವ ವಿರಾಟ ಸ್ವರೂಪ ಪಡಿತೈತೊ ಶಿವನ ಅನ್ನೋ ಆತಂಕವಾದಿಯೊಳಗೆ ಇದ್ದೆ ಇತ್ತು. ಅದು ಅಲ್ಲದೆ ಬಂಜಾರರು ಅಂದ್ರ ಕೆಂಪಮಂದಿ ಉರಿದು ಬೀಳಾಕ ಹತ್ತಿತ್ತು. ಅಂತಾದ್ರಾಗ ಈ ಮುರುಕಾಸಿನ ಹೆಂಗಸರು ಮಾಡೋ ಆಟಕ ನಾವೆಲ್ಲ ಬಲಿಪಶುಗಳಾಗಬೇಕು ನೋಡು ಅಂದ್ಕೊಂತ ತನ್ನ ಕಾರುಬಾರಿನ ಕಡೀಗ ನಡ್ಡ. ಅಪ್ಪನ ಮಗ ಧನ್‌ಸಿಂಗ್ ಬುಕ್ಯಾ ಕರಮ ತೋಟ್, ಜವಾಬ್ದಾಯಿರಯನ್ನೆಲ್ಲಾ ಅಚ್ಚ ಕಟ್ಟಾಗಿ ನಿಭಾಯಿಸತೊಡಗಿದ್ದು, ಅವರಪಗ ಗೊತ್ತಾಗದಂಗೆ ಕಾಡಿನೊಳಗ ಜಮೀನು ತಗದು ಹಸನ ಮಾಡಿದ್ದ ಧನ್‌ಸಿಂಗ್, ದೊಡ್ಡ ಕನಸಗಾರ, ಅಲೆಮಾರಿಬದಕನ್ನ ಕೊನೆಗಾಣಿಸ ಬೇಕು ಅನ್ನೋ ಛಲ ಅವನದಾಗಿತ್ತು. ಈ ಭಟ್ಟಿ ಸರಾಯಿ ಭಾಳದಿನಗಳವರೆಗೆ ನಡಯುವುದಿಲ್ಲ ಅಂತಕೂಡ ಅವನಿಗ ಮಾಹಿತಿ ಇತ್ತು. ಅವನ ಕುಟುಂಬ ದೊಡ್ಡದಾಗಿತ್ತು. ಸತ್ತ ಅವನ ಚಿಕ್ಕಪ್ಪಂದಿರ ಮಕ್ಕಳು, ಚಿಕ್ಕ ಮಂದಿರುಗಳು ಪಕ್ಕದಾಗ ಅವನ ಇನ್ನೊಬ್ಬ ಅಜ್ಜನ ಮೊಮ್ಮಕ್ಕಳು, ಎಲ್ಲರಿಗೂ ಧನ್‌ಸಿಂಗ್ ಮೇಲೆ ಭರವಸೆಯಿತ್ತು. ಅಂವ ಮದ್ವಿವಯಸ್ಸಿಗ ಬಂದಾನಂತ ಅವನ ಅಜ್ಜಿ ಸೋಮ್ಲಿಗ ತಿಳಿದಿತ್ತು. ಮಗ ಸೋಮ್ಲನ ಕರದು "ನಾ ಸಾಯೋದ್ರಾಗ, ನನ್ನ ಮರಿ ಮೊಮ್ಮಗನ, ಮುಖ ಆಟು ತೋರಿಸೊ ಹಂಗಮಾಡು, ಸತ್ತ ಹೋಕ್ತಿನಿ, ನಿಮ್ಮಪ್ಪ ಅದಾನೋ ಸತ್ತಾನ ಅಂತ ತಿಳಿಯದಂಗ ಆಗಲಿಲ್ಲಾ. ನಿನ್ನ ತಮ್ಮ ಚೊಕ್ಲನ ಖಬರು ನೀ ತಗೊಳೋ ಯೊಚನೆ ಮಾಡಲಿಲ್ಲ." ಸೆರಗಿನೊಳಗೆ ಅಳತೊಡಗಿದಳು. ಪ್ರತಿಕೂಲ ಪರಿಸ್ಥಿತಿಯಲ್ಲಿ, ಏನ್ನನು ಮಾಡಲಾಗದೆ ಕೈಕಟ್ಟಿದಂತಿತ್ತು. "ನೀ ಹಿಂಗ, ಮನಸ್ಸು ಸಣ್ಣದ ಮಾಡಬ್ಯಾಡಬೆ, ನಾ ಏನು ಬೇಕಂತ ಮಾಡಿಲ್ಲ ಹೊರಗ ಬ್ರಿಟೀಷ್ ಮಂದಿ ಹುಡುಕಿ ಹುಡುಕಿ ಕೊಲ್ಲಾಕ ಹತ್ಯಾರ, ಆ ವಯಸ್ಸಿನ್ಯಾಗ ಅಪ್ಪಗ ಹೋರಾಟ ಬೇಕಿರಲಿಲ್ಲ. ಅವನಹಿಂದೆ ಭಾರಿ ದೊಡ್ಡ ಶೂರನಂಗೆ ಆ ಚೊಕ್ಲಬ್ಯಾರ್. ಈಗ ಹೆಂಗದಾರೋ ಆ ದೇವರಿಗ ಗೊತ್ತ". ಸಮಾಧಾನ ಪಡಿಸೋದಕ್ಕ ನೋಡಿದ.

ಕಾರಬಾರಿ ಕಂಕಾಳಿಮಗಳು ಸಿಕ್ಕಿ ಧನ್‌ಸಿಂಗ್‌ಗೆ ತರೋದಂತ ಮನಿಮಂದಿ ಮಾತಾಡಿ ಸುದ್ದಿಕಳಿಸಿಯೇ ಬಿಟ್ರು ಕಾರಬಾರಿ ತುದಿಗಾಲ ಮ್ಯಾಲೆ ನಿಂತಿದ್ದ. ಹಿಂದೆ ಮುಂದೆ ನೋಡದೆ ಹೂಂ ಅಂದಿದ್ದ. ಎಲೆ ಹಂಚುವ ಶಾಸ್ತ್ರ ಮುಗಿಸಿ ಮದುವೆನ ದೀಪಾವಳಿ ಮಾರನೇದಿನ ಇಟ್ಕೋಳೊದಾಗಿ ಮಾತುಕತೇನು ಮುಗಿತು. ಸಿತ್ಕಿ ಅದೇ ತಾನೆ ಋತುಮತಿಯಾಗಿದ್ಲು, ಹಟ್ಟಿನಾಯಕನ ಸಂಬಂಧ ಸಿಗೋದು ಪುಣ್ಯ ಅಂದ್ಕೊಂಡಿದ್ದ ಕಾರಬಾರಿ, ಅದು ಅಲ್ಲದೆ ದೊಡ್ಡ ಕುಟುಂಬದಲ್ಲಿ ಕರಮ ತೋಟ್ ಪಂಗಡದ್ದಿರುವಾಗ ತಮ್ಮ ಅಸ್ತಿತ್ವದ ಪ್ರಶ್ನೆನೂ ಬಂದಿತ್ತು. ಹಾಗಾಗಿ ಅಲ್ಪ ಸಂಖ್ಯೆಯಲ್ಲಿರುವ ಝುರಪ್ಲಾ ಕುಲದ ಕಾರಬಾರಿ ಕಂಕಾಳಿ 'ಹೂಂ' ಅನ್ನಲೇ ಬೇಕಾದ ಸ್ಥಿತಿ ಉಂಟಾಗಿತ್ತು. ಧನ್‌ಸಿಂಗ್ ಬುಕ್ಯಾ ಕರಮ್‌ತೋಟ್, ಒಳ್ಳೆ ದುಡಿಮೆ ಮಾಡುವ ಹುಡುಗ. ಲದೇಣಿಯಾನಿಂತಾ, ಅವನ ಅಜ್ಜ, ಚಿಕ್ಕಪ್ಪ ಬ್ರಿಟೀಷರ ಗುಂಡಿಗೆ ಆಹುತಿಯಾಗಿ ಚೆಲ್ಲಾಪಿಲ್ಲಿಯಾಗಿದ್ದ ಇಡೀ ಕುಟುಂಬದ ಹೊಣೆಯನ್ನ ಖುದ್ದಾಗಿ ಅವನೇ ಹೊತ್ತಿದ್ದ. ಹಾಗಾಗಿಯೇ, ದಕ್ಷಿಣಕ್ಕೆ ಇದ್ದ ಸಮತಟ್ಟ ಜಾಗದಲ್ಲಿನ ಕಾಡು ಮರಗಳನ್ನು, ದೊಡ್ಡ ದೊಡ್ಡ ಪೆದೆಗಳು, ಕಂಟೆಗಳನ್ನು ಹಗಲು ರಾತ್ರಿ ಅನ್ನದೇ ಆಳುಗಳೊಂದಿಗೆ ಮುಂದು ನಿಂತು ಖುದ್ದಾಗಿ ತಾನೆ ತೆಗೆದು ನೂರು ಎಕರೆಯಷ್ಟು ಜಮೀನು ತೆಗೆದು ಮೇರೆ ಮಾಡಿದ್ದ. ಕೆಂಪಮಂದಿಗ ಗೊತ್ತಾದ್ರು ಎಲ್ಲಾ ಸರ್ವನಾಶಮಾಡ್ತಾರಂತ ಮಂದಿಗೆಲ್ಲಾ ಗೊತ್ತಿತ್ತು. ಆದ್ರ ತಾಂಡ ಕಟ್ಟುವ ಅನಿವಾರ್ಯತೆ ಇದಿದ್ದರಿಂದ ಮತ್ತು ತಮ್ಮ ಮೂಲ ನೆಲೆ ರಾಜಸ್ಥಾನವನ್ನು ಬಿಟ್ಟಿದ್ದು ನಾಕು ತಲೆ ಮಾರುಗಳೇ ಕಳೆದಿದ್ದವು. ಹೆಚ್ಚು ಕಡಿಮೆ ಒಂದು ಶತಮಾನದ ಆಸುಪಾಸು, ಅಲ್ಲಿದ್ದ ಜಮೀನು, ಮನೆಗಳು, ಸಂಬಂಧಿಕರು ಕ್ರಮೇಣ ಮರೆತೆಹೋಗಿದ್ದರು. ಸದ್ಯದ ಪ್ರತಿಕೂಲ ಪರಿಸ್ಥಿತಿಯಲ್ಲಿ ದೇಸುನಾಯ್ಕ ತಂಡದಲ್ಲೇ ನೆಲೆಸುವುದು ಸೂಕ್ತ ಅಂದುಕೊಂಡಿದ್ದ ಧನ್‌ಸಿಂಗ್ ಏಕೆಂದರೆ, ಒಂದು ಕಾಡಿನ ನಡುವೆ, ಸುತ್ತಲು ದೊಡ್ಡ ಬೆಟ್ಟಗಳು ದನಕರುಗಳಿಗೆ ಮೇವು, ಮಂದಿಗೆ, ಸರಾಯಿ ತಯಾರಿ ಮಾಡೋದಕ್ಕೆ ಅನುಕೂಲ ಆಗುತ್ತೆ ಅನ್ನೋ ಉದ್ದೇಶದಿಂದ ದೇಸುನಾಯ್ಕ ತಾಂಡವನ್ನೇ ತಮ್ಮ ಶಾಶ್ವತ ನೆಲೆಯನ್ನಾಗಿಸುವ ಧನ್‌ಸಿಂಗ್‌ನ ಕನಸಿಗೆ ಪೂರಕವಾಗಿ ಅನೇಕ ಯುವಕರು ಅವನ ಜಮೀನಿನ ಸುತ್ತಲು ಅಲ್ಪಸ್ವಲ್ಪ ಜಮೀನನ್ನ ತೆಗೆದಿದ್ದರು.

ಸಿದ್ದೇಶಿಯ ಆವಸ್ಥೆ ನೋಡಿದ ಜಮೀನ್ದಾರ ಕೆಂಡಮಂಡಲವಾಗಿದ್ದು. ಚೆಲವಾದಿನ, ಉಪ್ಪಾರ ಮಂಜ್ಯನ ಹಿಡದು ಮುಕ್ಕಾರೆ ನಾದಿದ? "ಬೋಗಳ್ರಲೆ ಹಡಬಿ ಮಕ್ಕಳ್ರ, ಏನಾತ ನನಮಗನಿಗ, ಸುತ್ತ ಹರದಾರಿಯೊಳಗೆ ಈ ಗೌಡ್ರ ಮಲ್ಲಪ್ಪ ಸುದ್ದಿ ಕೇಳಿ ಮಂದಿ ಕಂಡಲ್ಲಿ ಉಚ್ಚಿ ಹೊಕ್ಕೊಂತಾರ. ಅಂತಾದ್ರಾಗ ಯಾ ಮಗನಿಗೆ ಧೈರ್ಯಬಂತು ನನ್ನ ಮಗನಿಗೆ ಮುಟ್ಟೋದು." ಚಪ್ಪಲಿಯಿಂದಲೇ ಹೊಡೆಯತೊಡಗಿದ. ಎನು ಹೇಳಾಕು ಬಾಯಿ ಬರದೆ, "ಆ ಲಮಾಣಿ ತಾಂಡದ ಕಡೆ ದೆವ್ವ" ಅಸಂಬದ್ಧವಾಗಿಯೇ ತೊದಲಿದ ಮಂಜ್ಯ." "ಆಯ್ತು, ನಾ ವಿಚಾರಮಾಡ್ತಿನಿ ಮತೊಂದ ದಪ ಆ ಕಡೀಗ ಹೋಗಬ್ಯಾಡ್ರಿ" ಅಂದವನೆ ವಿಷಯದ ಸಂಪೂರ್ಣ ಮಹಿತಿ ಕೊಡೋದಕ್ಕ ಮಂದಿನಬಿಟ್ಟ. ಕೆಂಪಂದಿ ಸೇವಾ ಮಾಡ್ಕೊಂಡು ಒಸಿಕಾಸುಗಿಸು ಮಲ್ಲಪ್ಪ ಮಾತ್ರ ಮಾಡ್ಕೊಂನು ಅಂದ್ರ ಈ ಮಗ ಏನಾರ ಒಂದು ಅನಾಹುತ ಮಾಡ್ತಾನ. ಹೆಂಗಸರ ವಿಷಯದಾಗ ನನ್ನೂ ಮೀರಸ್ತಾನ ಬಡ್ಡಿಮಗ. ಮಗನ ಪ್ರತಾಪ ನೆನಪು ಮಾಡಕೊಂಡಿದ್ದ ಮಲ್ಲಪ್ಪ. ಪೂರ್ವದಾಗ ಯಾರ ಆದಾರ? ಆ ಕಡೆಗೆ ಗುಡ್ಡಗಳು, ಕಾಡು ಬಿಟ್ರ ಊರಗಳಿಲ್ಲಾ.

ಆದ್ರ ಬಹಳ ದಿನಗಳಿಂದ ಜನಮಾತಾಡ್ಕೊಳ್ತಿದ್ರು, ಬಂಜಾರಮಂದಿನ ಒಂದ ಗುಂಪು ದುರ್ಗಮಕಾಡಿನೊಳಗೆ ಉಳ್ಕೊಂಡೈತೆ, ಒಳ್ಳೆ ಭಟ್ಟಿ ಸರಾಯಿ ಸಿಗತೈತಂಕೇಳಿ. ಆ ಲಮಾಣ್ಯೆರ ಹೆಂಗಸರಿಗೇನಾರು ಗಂಟೆ ಬಿದ್ರೆನ ಮತ್ತ. ಆ ಮಂದಿ ನಂಬಿದ್ರ ಜೀವಾನ ಕೊಡ್ತಾರ ದ್ರೋಹ ಮಾಡಿದ್ರ ಜೀವಾನ ತಗಿತಾರ ಈ ಸೂಳಿಮಗ ಅವರ ಹೆಂಗಸರ ಪುಟ ಹೋದ್ನ? ಅಲೋಚಿನೆಗಳು ತುಂಡಾದವು. ಸುದದಿ ಕಿರಾಕ ಹೋದವನು ನಾಪಾಸಾಗಿದ್ದು, ಬುದದಿ ಅದ್ಯಾವುದೋ ಲಮಣ್ಕೇರ ಹೆಂಗಸು ಪೀಕೆ ಅನ್ನೋಳ ಕೂಡ ಚಿಕ್ಕ ಬುದ್ದಿದ್ದ ಸಂಬಂಧ ಐತಂತೆ. ಮುಂದಬಾಯಿ ತಗದಿದ್ದ ಹೂಂ, ಆತಿಬಿಡು ಹೋಗನಿನು." ಅಂದ ಮುಗೀತ, ಆ ಮಗನಂಗ ಹೆಡಮುರಗಿ, ಕತಾರಿನ, ಹೈದ್ರಾಬದ ನೀಜಾಮನ ಸೈನಿಕರಿಗೆ ಜಪ್ಪನದ ಮಂದಿ ನಮಗೆ ಸೊಪ್ಪ ಹಕ್ಯಾರೇಲು. ಮಲ್ಲಪ್ಪ ಅಂವ ಚಿಕ್ಕವನಿರುವಾಗ ನಡೆದ ಘಟನೆಯನ್ನು ನೆನಪಮಾಡಿಕೊಂಡು ಅಲ್ಲಿ ಕುಂತಿದ್ದ ಕಡೆಮನಿ ರಾಮ, ಹಾದಿಮನೆ ಶ್ರೀಶೈಲದ ಕತಿನ ಹೇಳಾಕ ಪ್ರಾಂಭಿಸಿದ. ಅಲ್ಲಪ್ಪ ಈ ಲಾಮಣಕೇರ ಮಂದಿ ಭಾರಿಗಟಗಟಿಗರನೋಡು, ಅಲೆ ಅಲ್ಲ ಧೈರ್ಯವಂತ್ರೂನುವೆ, ನನಗೆ ಈಗೂ ನೆನಪೈಕಿ ನಮ್ಮಜ್ಜನ ಕಾಲದಾಗ, ನಮ್ಮೂರ ಅಸಪಾಸನಾಗ ವ್ಯಾಪಆರ ಮಾಡಕಂತೇಳಿ ಬಂದಿರ್ರು. ಏನಾಕಪಂದ್ರ, ನಿಜಮಾನ ಸೇನಾದಿಪತಿಗೂ ಬಾಂಬ್ರಹ ಹಾಗೂ ಆಗ್ರಿರಲಿಲ್ಲ. ಇಡಿಬಾಂಬ್ರ ಊರಿಂದಾರೆ ನಮ್ಮೂರ ಪಕ್ಕನ ಬಂಜಾರಗಳ ಡೇರೆಗೆ ಬಂದು ಹೊತ್ಕೊಂಡು. ಸೇನಾದಿಪತಿಸಿದ ಸುದ್ದಿತಿಳಿದಿಂದ ಡೇರೆಗಳನ್ನು ಸುತ್ತವರದ, ಡೇರೋ ಬಂಜಾರ ಲೋಗ ನಮದುಕೆ ನಿಮದಾಕೆ ದುಷ್ಮನಿ ನಹಿ ಹೈ, ನಿಮ್ಮ ಡೇರೆನಾಗಿಂದ ಬಾಂಬ್ರನು ಹೆಂಗಸರನ್ನ ನಮ್ಮ ತಆವ ಕಳಸಿ, ಅಂದ. ಒಬ್ಬ ಬಂಜಾರನಾಯಕ ಹುರಿಮೀಸೆ ಮೇಲೆ ಕೈ ಇಟ್ಟು ತೀಡಿದವನೆ, ಬಾಪಕ ಮಗ ಆಗಿದ್ರ ನಮ್ಮ ಡ್ಯಎ ಒಳಗ ಬಂದು ನೋಡ್ಕಂಡ ಹೋಗು. ಇಲ್ಲ ಸುಮ್ಕೆ ಬಂದದಾರಿಗ ಸುಂಕವಿಲ್ಲದಂಗೆ ವಾಪಾಸು ಹೋಗಿಬಿಡು, ಸವಾಲಹಾಕಿದ. ಈಗ ಬಿಡ್ತಿನಿ, ಮತ್ತೆ ವಾಪಾಸ ಬರ್ತಿನಿ ಅವಾಗ ಐತೆ ನಿಮ್ದುಕೆ. ಧಮಕಿಹಾಕಿ ಹೋಗಿದ್ದು, ಮುಂದ ಅವರು ಅಂಜಿ ವಾಪಾಸ ಬರಲೇ ಇಲ್ಲ. ಇಂಥ ಮಂದಿ ಇವರು, ಇವರ ಸವಾಸಕ್ಕ ಯಾಕ ಹೋಗ್ಲೋ ಈ ಹಾಳಮನಿಸಳಿಮಗ, ಮಲ್ಲಪ್ಪ ತನ್ನ ಕತೆಯನ್ನ ಮುಗಿಸಿದ. ಅದೇ ಸಮಯಕ ಸರಿಯಾಗಿ ಬಳ್ಳಾರಿ ಕೇಂದ್ರ ಕಛೇರಿಯಲ್ಲಿದ್ದ ಬ್ರಿಟೀಷರ ಕಮಿಷನರ್ ಕೌಲ ರಾಂಪುರದ ಮೂಲಕ ಹಾದು ಮಲ್ಲಣ್ಣನ ಮನೆಯಲ್ಲಿ ತಿಂಡಿತಿಂದು ಹೋಗುವುದಾಗಿ ಸುದ್ದಿ ಕಳುಹಿಸಿದ್ದ. ದಪೇದಾರ ಹಸನು ಸಾಬಿ ಸುದ್ದಿ ತಂದಿದ್ದ. "ಏನ ಕೇಡ ಬಂತಪ್ಪ ಸಾಹೇಬಣ್ಣ' ಮಲ್ಲಣ್ಣ ಬೇಸರದಿಂದಲೇ ಕೇಳಿದ್ದಾ. ದಣೊಯೋರ, ದೊಡ್ಡೋರ, ತಾವು ತಮ್ಮ ದೇನ ಹಕಿರಿತ್ತೋ, ನಮ್ಮಂತ ಸಣ್ಣಮಂದಿಗೇನ ಗೊತ್ತು ಅಂತೀನಿ. ಹಂಗೂ ಕೌಲ್ ಸಾಹೇಬರು ಬರ್ತಾರಲ್ಲ ಕೇಳಬಿಡಿ" ಅಂದವನೆ ಗೊತತಿಲ್ಲದ ವಿಷಯ ಪ್ರಸ್ತಾಪ ಮಾಡೋದು ಯಾಕೆ ಅಂತ ಎದ್ದುಹೋಗಿದ್ದ.

ಆದ್ರ, ಕೌಲ್ ಸಾಹೇಬ ಸಂಜೆ ವಸ್ತಿಗ ಬಂದಿದ್ದ. ಅವನ ಹಿಂದೆ ಸಣ್ಣದೊಂದು ಸೈನ್ಯದ ತಕಡಿನೇ ಇತ್ತು. ಮೇಳ್ಕಾಮಾಚ್‌ನ ಮಲ್ಲಪ್ಪನ ನಿವಾಸದಲ್ಲೇ ಅವರಿಗೆ ವಾಸ್ತವ್ಯ. ಕುರಿ, ಕೋಳಿ, ಮೀನು ಏನ ಬೇಕೋ ಅವರಿಗೆ ಅದೆಲ್ಲಾ ತಯಾರಿಯಾಗಿತ್ತು. ವು ಮುಲನ್ನ ಇಲಿ ಕಲ್ಲ ಬಟ್ಟೆ ಸರಾಯಿ ಸಿಗೋದಿಲ್ಲವೆ" ಕ್ಯಾಪ್ಟನ್ ಕೌಲ್ ಕೇಳಿದ, ಹೂಂ ಅಂದ್ರ ಒಂದು ಸಂಕಟ ಇಲ್ಲಿ ಅಂದಿಯ ಮತ್ತೊಂದು ರೀತಿಯ ಸಂಕಟ. ಹೂಜೂರ್, ಅದು ಬಂದು ರಾಗ ಎಳೆದ. . .

ಪರವಯಿಲ್ಲ ಬಿಡಿ, ನಾವೆ ನೋಡುತ್ತೇವೆ. ನಿಮ್ಮ ತಲೆಕೆಡಿಸ ಕೊಳ್ಳುವುದು ಬೇಡ". ಅವನಿಗೆ ಹೊಗಳದೆ, ತೆಗಳದೆ ಸುಮ್ಮನಾಗಿದ್ದು ಮಲ್ಲಪ್ಪಗೆ ದಿಗಿಲು ಹುಟ್ಟುಕೊಂಡಿತ್ತು. ಯಾರಾದರು ತನ್ನ ವಿರುದ್ಧ ಹೋಗಿ ಚಾಡಿ ಏಳರು ಚುಚ್ಚಿ ಬಂದ್ಯಾರ? "ದೇವರ, ಎರಡ ಸ್ತಿತಗ ತಂದೆ ಯಲ್ಲಪ್ಪ ಈ ಸೂಳಿಮಕ್ಕಳು ಉಲ್ಟಾ ಯೋಚಿಸ್ತಾರೊ ಸೀದಾ ಯೋಚಿಸ್ತಾರೋ ಗಂಟೆಗೆ ಒಂದ ನಮೂನಿ ಇರ್ತಾರ. ಇವತ್ತಿನ ಸ್ಥಿತಿಯಿಂದ ಪಾರಾಗೋ ಹಂಗ ಮಾಡಪ್ಪ" ಮನಿದೇವತಾವ ಪ್ರಾರ್ಥನೆ ಮಾಡಿದ್ದು, ಕ್ಯಾಪ್ಟನ್ ಕೌಲ್ ರಾತ್ರಿ ಬೇಟೆಗಂತ ಕಾಡಿನೊಳಗ ಹೋಗೋ ಅಲೋಚನೆ ಮಾಡಿ ಅದಕ್ಕೆ ಬೇಕಾದ ಸಿದ್ಧತೆಗಳನ್ನು ಮಾಡಾಕ ಮಲ್ಲಪ್ಪನಿಗೆ ತಿಳಿಸಿದ. ಕಾಡೊಳಗೆ ಪ್ರಾಣಿಗಳಿದವ, ಇಲಿ ಮನುಷ್ಯ ಕೌಲ್ ಕೇಳಿದ. ಮನುಷ್ಯ, ಎಲ್ಲಿ ಬರಬೇಕುಬುದ್ದಿ ಬರಿ ಪ್ರಾಣಿಗಳಿವೆ. ಬಾಯಿತಪ್ಪಾಇ ಅಂದ, ಆಮಾಣ್ಯರ ಗುಡಿಸಲುಗಳೇನಾರು ಕಂಡ್ರ ನನ್ನ ತಲಿ ಹೋಗುತ್ತಲ್ಲಾ ಅಂತ ಆಲೋಚನೆ ಮಾಡಿದವನೆ, ಅವನ ದಿಕ್ಕು ತಪ್ಪಿಸೋ ಪ್ರಯತ್ನಮಾಡಿದ. ಹೂಜೂರ್ ಆ ಕಡೆ ಪ್ರಾಣಿಗಳು ಕಡಿಮೆ, ಈ ದಿಶೆಗೆ ಹೋಗೋಣ ಅಂತ ಪಶ್ಚಿಮದ ಬದಲು ಪೂರ್ವಕ್ಕೆ ಕರ್‌ಕ್ಕೊಂಡ ಹೊಂಟ, ಕ್ಯಾಪ್ಟನ್ ಕೌಲ್‌ಗೆ ಈ ಕಾಡಿನೊಳಗೆ ಬಂಜಾರಗಳು ಅಡಗಿದ್ದರೆ ಅನ್ನೋ ಮಾಹಿತಿ ಇತ್ತು. ಆದರೆ ಮಲ್ಲಪ್ಪ ಹೇಳಿದ ಅಂತ ಆ ಕಡೆಗೆ ಹೋಗುವುದನ್ನು ಬಿಟ್ಟು ಮುಂದು ಹೋದ. ರಾತ್ರಿ ಜಿಂಕೆಗಳು ಹಿಂಡುಗಟ್ಟಲೆ ಬಂದಾವೆಂದು ಕೌಲ್‌ನ ಅನಿಸಿಕೆಯಾಗಿತ್ತು. ಆದರೆ ಒಂದು ಮೊಲಕೂಡ ಸಿಗದ ಪರಿಸ್ಥಿತಿ ಬಂದಿತ್ತು. ಆದರೂ, ಛಲಬಿಡದಂಗೆ ಮುಂದೆ ಹೊರಟ, ಮಲ್ಲಪ್ಪ ಇಷ್ಟು ದಡ್ಡಕಾಇನಲಿ ಒಂದ ಪ್ರಾಣಿ ಇಲ್ಲ ಅಂದರೆ ಏನು?" ಕೇಳಿದ. "ಇಲ್ಲಾ ಹೂಜೂರ್, ಇಲ್ಲ ಅಂದರೆ ಇಲ್ಲಂತನೆ ಅರ್ಥ". ಏನು ಹೇಳದ ಸಂದಿಗ್ಧ ಸ್ಥಿತಿಯಲ್ಲಿ ಅವನಿದ್ದ. ಮಲ್ಲಪ್ಪ ಕುದುರೆ ಮೇಲೆ ಕುಂತಲ್ಲೇ ತುಕಡಿಸತೊಡಗಿದ್ದ,. ಕೌಲ್ ಮಾತ್ರ ಬೇಟೆಯಾಡುವ ಒಳ್ಳೆ ಹುರುಪಿನಲ್ಲಿ ನಿದ್ದೆಯನ್ನು ಕೂಡ ಮರೆತಿದ್ದ. "ಮಲ್ಲಪ್ಪ, ವೈ ಆರ್ ಯು ಸ್ಲಿಪಿಂಗ್" ಗದರಿಸಿದ. ಅದು ಬುದ್ದಿ ನಿದ್ದೆ ಬಂದಿದೆ" ಅಸಾಯಕತೆಯಿಂದ ಹೇಳಿದ. "ಸೈನಿಕರೆ ನೀವು ಇಲ್ಲೆ ರೆಸ್ಟ್ ಮಾಡಿ, ನಾನು ಮುಂದೆ ಹೋಗುತ್ತೇನೆ". ನಾಕೈದು ಸವಾಕರೊಂದಿಗೆ ಮುಂದೆ ಹೋದ.

ಧನ್‌ಸಿಂಗ್ ಕುಕ್ಯಾಕರಮತೋಟ್ ಮದುವೆ ತಯಾರಿ ಭರ್ಜರಿಯಾಗೆ ನಡೆದಿತ್ತು. ಕಾರಬಾರಿನೂ ಕೂಡ ತನ್ನ ಕೈಲಾದಷ್ಟು ಖರ್ಚನ್ನ ಮಾಡಿದ್ದ. ಸೋಮ್ಲ ಭೀಮಣಿಗೆ ಮಗನ ಮದುವೆ ದೊಡ್ಡ ಹಬ್ಬದಂತೆ ಕಂಡರೆ ಧನ್‌ಸಿಂಗ್‌ನ ಅಜ್ಜ ಸೋಮ್ಲಿ ತನ್ನ ವಂಶದ ಕುಡಿಯನ್ನ ಬೆಳೆಸಲಿರುವ ಮೊಮ್ಮಗ, ಮರಿ ಮೊಮ್ಮಗನ ನೋಡಿಯೇ ಸಾಯುವ ಹಂಬಲ, ಬ್ರಿಟೀಷರ ಆತಂಕದ ನಡುವೆ ಗಡಿಬಿಡಿಯಿಂದ ಮದುವೆ ಮುಗಿಸಿ ಕೈತೊಳೆದುಕೊಂಡಿದ್ದರು. ಪ್ರತಿಕ್ಷಣನೂ ಅವರಿಗೆ ಆತಂಕಕಾರಿಯಾಗಿತ್ತು. ಬ್ರಿಟೀಷರು ಯಾವ ಕಡೆಯಿಂದ ನುಗ್ಗಿಬರುತ್ತಾರೆ ಅನ್ನೋದು ಒಂದಾದರೆ, ಮತ್ತೊಂದು ಹಾಂಡಿಗುಡಿಯಾ (ಮಡಿಕೆ ಕುಡಿಕೆ) ಕರಾಕ ಹೋದೋರನ್ನ ಎಲ್ಲ ಗುರುತಿಸಿ ಬಂದಾರೆಂಬ ಆತಂಕ. ಅವಸರ ಅವಸರವಾಗೇ ಮಂಡೇವಡೊನಿಲ್ಲಿಸಿ ನಾಕ ಮಂದಿಗೆ ಬೆಲ್ಲದ ನೀರು ಹಂಚುವ ಶಾಸ್ತ್ರ ಮುಗಿಸಿದ್ದೆ, ಎಲೆ, ಬೀಡಿ, ಮದುಮಗ ಹುಡುಗಿಯ ಮನೆಯಮುಂದೆ ಹಜರ್. ಕ್ಯಾಪ್ಟನ್ ಕೌಲ್, ಮೊಳಗಿಲ್ಲೂರ್‌ನಲ್ಲಿ ಬೀಡುಬಿಟ್ಟು ಬಂಜಾರರ ಚಲನವಲನಗಮನಿಸುತ್ತಿರುವುದು, ಪೇಟೆಗೆ ಹೋಗಿದ್ದ ಯಾರಿಂದಲೋ ಸುದ್ದಿ ತಿಳಿದ ಸೋಮ್ಲಿ ಹುಡುಗಿಯರ ಬೋಯಿಗಳನ್ನ ನಿಲ್ಲಿಸಿದ್ದ. ನಾಯಕ, ಡಾಷ್ ಪಂಚಾಂಗ ಓದಲು ಕೂತರೆ,

ಹುಡುಗ ಸಿಂಹ, ಹುಲಿ ಜಿಂಕೆಯ ರೂಪದಲ್ಲಿ ಕಂಡು ಬಂದೊಡನೆ ಸಿಹಿಹಂಚಿ ಮದುವೆ ಕಟ್ಟಲಾಯಿತು. ಎರಡು ಸ್ನಾನಗಳು ಮುಗದಿಂದೆ ವರತ್ಯ ಸಂಕ್ರಿನಾಯ್ಕ ನೌಸೌದಾನ್ ಸುರುಮಾಡಿದ. ಎಲ್ಲರನ್ನು ಬೋಯ್ದು ಪುರೋಹಿತರಂತೆ ಮಂತ್ರ ಹೇಳ್ತಿದ್ದ. ಪೌರಸೌಧಾನ ಜರಪ್ಯಾ, ಭೀಮಿ ಸೌಧಾನ, ಬೆಂಕಿಗ ಒಣ ಹುಲ್ಲು, ಲೋಬಾನ ಸುರಿಯುವುದು ಸೌಕ ಸೌಧಾನ ಕಾರಬಾರಿ ಅವನ ಹೆಣ್ತಿಕೂಡ ರಾತ್ರಿ ಹೂಂಹೂಂ ಅವನ ಅವತಾರನೆ ಮಂದಿಗ ನಗುಬರುವಂತಿತ್ತು. ಪಂಚೆ, ಹಳೆ ಅಂಗಿ, ತಲಿಗೊಂದು ಕೆಲ್ಸಕ ಬಾರದ ಟೋಪಿ ಅದರ ಒಟ್ಟಿಗೆ ಮಾವಿನ ತೊಂಡಾ ಇಲ್ಲಾ ಬೇವಿನ ದೊಪ್ಪು ಕಟ್ಟಿ ನೋಡುವರಿಗೆ ಗೆ ಬರಬೇಕು ಹಂಗಿದ್ದ ಮನೆ ಮೇಲೆ ನಿಲ್ಸಿರುವ ಬೆದರಿನಂತೆ ಕಾಣಂತಿದ್ದು ಧನ್‌ಸಿಂಗ್‌ಬುಕ್ಯಾ ಕರಮ್‌ತೋಟ್ ಸೀತ್ಕಿಬಾಯಿದ ಮದುವೆ ಮುಗಿಯೋ ಮಜನುವೆ ಎಲ್ಲರನ್ನೂ ರಂಜಿಸಿದ್ದ. ಗಪ್ ಚುಪ್ಪಾಗೆ ಧನ್‌ಸಿಂಗ್‌ನ ನಿಟ್ಟಣ ಬಂದು ಮನೆ ಸೇರಿಕೊಂಡಿತು. ಅವನ ಅಜ್ಜಿಗೆ ಎಲ್ಲಿಲ್ಲದ ಸಂತೋಷ. ಸೋಮ್ಲಿ ಮೊಮ್ಮಗ ಮೀಟುನ ಕೊರಳು ಹಿಡಿದು ಎಷ್ಟೋ ವರ್ಷಗಳಿಂದ ಎದೆಯೊಳಗೆ ಅವ್ಯಕ್ತಪಡಿಸಲಾಗದೆ ಉಳಿದಿದ್ದಾ ಭಾವನೆಗಳನ್ನು ಹಂಚಿಕೊಂಡಿದ್ದಳು. ಧನ್‌ಸಿಂಗ್ ಅಜ್ಜಿ ಹೇಳುತ್ತಿದ್ದ ಪ್ರತಿಯೊಂದು ಶಬ್ದಗಳನ್ನ ಅರ್ಥೈಸಿಕೊಂಡು ದುಃಖ ಉಮ್ಮಳಿಸಿ ಇನ್ನೂ ಜೋರಾಗಿಯೇ ಅಳತೊಡಗಿದ. ಬಾಗಲಿಗೆ ತಮ್ಮದು ಬಿಲ್ಲೆ ಬಡಿದು ಒಳಗೆ ಒಯ್ಯುವ ಶಾಸ್ತ್ರವಿದ್ದುದರಿಂದ, ಜಕ್ಕ ಜುಲುಮೆಯಿಂದ ಅವರನ್ನ ಬಿಡಿಸಲಾಯಿತು. ಅಜ್ಜಿ ಮತ್ತೆ ಮುಸಿ ಮುಸಿ ಅಳುತ್ತಿದ್ದಳು. ಧನ್‌ಸಿಂಗ್ ಮುಕ ಒರಿಸಿಕೊಂಡು ಮುಂದಿನ ಶಾಸ್ತ್ರಕ್ಕೆ ಅಣಿಯಾಗಿ ಬಂದಿದ್ದ.

ತಾಮ್ರದ ಬಿಲ್ಲಿಯನ್ನ ಬಾಗಿಲ ತೋಳಿಗೆ ಮಳೆ ಸೇರಿಸಿ ಜಡದಾನಂತರ, ಇಬ್ಬರನ್ನು ಒಳಗೆ ಸೇರಿಸಿ, ಸಿಹಿತಿನಿಸಿದರು. ಬಂದವರಿಗೆಲ್ಲಾ ಊಟೋಪಚಾರಮಾಡಿಸಿದ ಮೇಲೆ ಎರಡು ಮೂರು ದಿನಗಳಿಂದ ನಿದ್ದೆಕೆಟ್ಟವರೆಲ್ಲಾ ಜಾಗ ಸಕ್ಕಲ್ಲೇ ಮುದುಡಿಕೊಂಡಿದ್ದರು. ಮನಿಯೊಳಗಿನ ಹೊಸ ಈಚಲ ಚಾಪೆಗಳು, ಗೋಣಿ ತಟ್ಟುಗಳು ಬಂದಮಂದಿಗೆ ಸಕಾಗಿದ್ದವು. ವಧು–ವರ ಕೂಡ ಒಂದೊಂದು ಕಡೆಗೆ ಮಲಗಿದ್ದರು. ಇಡಿ ತಾಂಡಕ್ಕೆ ತಾಂಡವೆ ಮೌನವಾಗಿತ್ತು. ಪಹರೆ ಕಾಯುವವರು ಎಲ್ಲೋ ಬೆಳಕು ಇಲ್ಲದ ಹಾಗೆ ನಂದಿಸಿ ಮರ ಏರಿ ಕುಳಿತಿದ್ದರು. ಅನತಿ ದೂರದಲ್ಲಿ ಜನರು ಮಾತಾಡುವ ಸದ್ದು ಕೇಳಿಸಿದ್ದೆ ತಮ್ಮ ಎಂದಿನ ಪ್ರಾಣಿಧನಿಯಿಂದ ಒಬ್ಬರಿಗೊಬ್ಬರು ಎಚ್ಚರಿಕೆ ಕೊಟ್ಟುಕೊಂಡರು. ಆ ತಂಡದ ನಾಯಕ ಮಾತ್ರ ಆತಂಕ ಇಲ್ಲ ಅನ್ನೋ ಸೂಚನೆಯ ಧನಿಯುವ ಹೊರಡಿಸಿದ್ದ. ಐದಾರು ಮೈಲಿದೂರದಲ್ಲಿದ್ದ ಗುಂಪು ಕೂಡ ಜನನಾಡು ಪ್ರವೇಶ ಮಾಡಿದ್ದರೆ ಆದರೆ ತಾಂಡ ಕಡೆ ಬರುತ್ತಾರೋ ಇಲ್ಲ ಮತ್ಯಾವುದಾದರು ಕಡೆಗೆ ಹೊರಟು ಹೋಗುತ್ತಾರೆ ಅನ್ನೋದು ಸ್ಪಷ್ಟವಾಗಿಲ್ಲ ಎಂದೆ ಸಂದೇಶ ರವಾನಿಸಿದ್ದರು. ಇಡಿ ಎರಡು ತಂಡಗಳು ಜೀವವನ ಕೈಯಲ್ಲಿ ಹಿಡಿದುಕೊಂಡೆ ಪಹರೆ ಕಾಯುತ್ತಿದ್ದವು. ಕ್ಯಾಪ್ಟನ್ ಕೌಲ್ ಮೊದಲದಿನ ಅನುಮಾನ ಬಂದಿದ್ದರಿಂದ ಅವನ ಪ್ರಯಾಣ ಮುಂದಕ್ಕೆ ಹಾಕಿ ಮಲ್ಲಪ್ಪನ ಮನೆಯಲ್ಲೆ ವಸತಿ ಹೊಡೆದು ಪಶ್ಚಿಮಕ್ಕೆ ಬೇಟೆಯಾಡುವ ಇಂಗಿತವನ್ನ ವ್ಯಕ್ತಪಡಿಸಿದ್ದ. ಮಲ್ಲಪ್ಪನುವೆ ಅಸಹಾಯಕನಾಗಿದ್ದ ಬ್ರಿಟೀಷ್ ಅಧಿಕಾರಿ ಹೇಳಿದರೆ ಮುಗಿಯಿತು ಅದು ಕಾನೂನೆ. ಮರುದಿನರಾತ್ರಿ ಯತಾವತ್ತಾಗಿ ಕ್ಯಾಪ್ಟನ್ ಹೊರಡುತ್ತಾನೆ ಎಂದಾದಾಗ ಅವನ ಸಹಚರ ಭಾರತೀಯನಾಗದ ಪಟೇಲ್ ರುದ್ರನಗೌಡ ಮತ್ತು ಅವನ ಅಡಿಗೆಯವರನಾದ ಚಾಂದ್‌ಸಾಬ್‌ಗೆ

ಇದ್ದ ವಾಸ್ತವಹೇಳಿದ. ಚಾಂದ್‌ಸಾಬ್, ರಾತ್ರಿ ಕ್ಯಾಪ್ಟನ್ ಕುಡಿಯುವ ಬ್ಲಾಕಹಾಕ್ಸ್ ಅನ್ನುವ ಮಧ್ಯದ ಪ್ರಮಾಣವನ್ನ ಅವನಿಗೆ ತಿಳಿಯದಂತೆ 20% ರಷ್ಟನ ಹೆಚ್ಚಿಸಿದ. ಪಟೇಲ್ ರುದ್ರಗೌಡ ತಾನಲ್ಲ ನೋಡಿಕೊಳ್ಳುವುದಾಗಿ ಭರವಸೆ ನೀಡಿದ.

ಕೌಲ್ ಹೊರಡುವಾಗ ಪೂರಾ ತಯಾರಿಯಿಂದ ಹೊರಟಿದ್ದ ಆದರೆ ನಡಕ್ಕೆ ನಿದ್ದೆ ಜಾಸ್ತಿಯಾಗಿದ್ದಲ್ಲದೆ ರುದ್ರಗೌಡ ಬೇರೆ "ಯುವಕ್ ಹೇನೆಸ್ ತಮಗೆ ಅನ್‌ಜಿನೆಸ್ ಅನಿಸ್ತಿದ್ರೆ" ರಾಗ ಎಳೆದ. "ನೋ, ಗೌಡರೆ ಅಯಾಮ್ ಆಲ್‌ರೈಟ್ ಅಂದವರೆ ಕುದುರೆಯನ್ನು ತಿರುಗಿಸಿದ್ದರು. ಚಾಂದ್‌ಸಬ್, ರುದ್ರಗೌಡ ಮತ್ತು ಮಲ್ಲಣ್ಣನ ಹೋದ ಜೀವ ಬಂದಂಗಾಗಿತ್ತು. ಪಾಪ ಲಮಾಣಕ್ಕಾರು ಯಾರ ಪಾಡಿಗ ಹೋಗದಂಗೆ, ಕವಳಿ, ಕಂಚಿ ಹಣ್ಣು, ಕಟ್ಟಿಗೆ, ಭಟ್ಟಿಸರಾಯಿ ಅಂತೇಳಿ ಮಾರ್‍ಕೊಂಡ ಬದುಕ್ಯಾವ. ಈ ಮಕ್ಕಳು ಅವರನ್ನ ಕಂದ್ರ, ಇವರಪ್ಪನ ನಾಡು ಅನ್ನೋ ಹಂಗ ಅವರನ್ನ ಹಿಡಿದು ಜೈಲಿಗ ಹಾಕ್ತಾರ. ಅವರ ಮನಸ್ಸಿನೊಳಗೆ ಬಂದುಹೋಯಿತು.

ಪಹರೆ ಕಾಯುತ್ತಿದ್ದ ಗುಂಪಿನನಾಯಕ ವಾಲ್ಯ ವಿಸಳಾವತ್ ಜಾಗರೂಕತೆಯಿಂದಲೇ ಅವರು ಕಾಡಿಂದ ದಾಟಿರುವುದನ್ನ ಕುದುರೆಯನ್ನೇರಿ ಅವರ ಹಿಂದೆ ಹೋಗಿ ಖಚಿತಪಡಿಸಿಕೊಂಡಿದ್ದ. "ಬದಕ್‌ಗೇರ" (ಬದುಕಿದೆವು) ವಾಲ್ಯ ಹೇಳಿದ. ಇಲ್ಲದಿದ ಮಲಗಿದ್ದವರ ಮೇಲೆ ದಾಳಿಮಾಡಿ ಇಡಿ ತಾಂಡನ ಧ್ವಂಸಮಾಡಿ ಬಿಡುತ್ತಿದ್ದ. ಬ್ರಿಟೀಷರ ಕೌರ್ಯ ರುದ್ರಗೌಡರಿಗೆ ತಿಳಿದಿತ್ತು. ಹಾಗಾಗಿ ಕ್ಯಾಪ್ಟನ್ ಕೌಲ್‌ನ್ನ ದಿಕ್ಕುತಪ್ಪಿಸಿದ್ದ. "ಯಾರಿದ್ರೆನಪ್ಪ ನಮ್ಮ ಮಂದಿ ಹಂಗಿಂದ್ರು ಇತ್ತು ಉಳಿದಂಗೆ ಕೆಂಪಮಂದಿ" ಹತ್ತಿರದಿಂದ ಗಮನಿಸಿದ್ದ ವಾಲ್ಯಾ ಹೇಳಿದ. ಅಂತು ದೊಡ್ಡ ಅನಾಹುತ ತಪ್ಪಿತು. ಅವರ ಕಣ್ಣಿಗೇನಾರು ಬಿದಿದ್ದದ್ರ ನಮ್ಮನ ಜೈಲವಾಸ ಮಾಡೋರು ಇಲ್ಲ ಗುಂಡಹಾರ್‍ಸಿ ಕೊಂದಹಾಕೋರು ವಾಲ್ಯ ತನ್ನ ತರ್ಕವನ್ನ ಮಂಡಿಸಿದ, ನಾಯಕ ಸೋಮ್ಲುನಿಗೆ ನಡೆದ ಘಟನೆಯನ್ನ ವಿವರಿಸಿದರು. ಸೋಮ್ಲು ಯಾವ ಪ್ರತಿಕ್ರಿಯೆ ನೀಡದಾದ. ಕಾರಬಾರಿಗೆ "ಹಿಂಗಾರ ನಮ್ಮ ಬದುಕು ಜಡ ಐತ್ರಪ್ಪೋ" ಅಂದ ಡಾವು ಮದಲೆ ಹೆದರಿಕೆ ಸ್ವಭಾವದವನು, "ಅಲ್ಲಾ ಎಲ್ಲಾರೂ ಹೋಗಿ ಅತ್ಲಗೆ ಅವರಿಗೆ ಹೇಳಿ ಬಿಡಮು, ನಾವು ಬದ್ದ ಲಮಾಣಿಮಂದಿ ಇಲ್ಲೇ ಕಾಡ್ನೊಳಗೆ ವಾಸ ಆಗಿವಂತ" ಬ್ರಿಟೀಷರು ದೊಡ್ಡಪ್ಪನ ಮಕ್ಕಳು ಅನ್ನೋ ಹಂಗಿತ್ತು ಅವನ ವಾದ. ಎಲ್ಲರ ಮನಸ್ಸಿನೊಳಗೂ ಆತಂಕ ಮನೆ ಮಾಡಿತ್ತು. ಸರಿಸುಮಾರು ನೂರೈವತ್ತು ಇನ್ನೂರು ಗುಡ್ಲುಗಳನ್ನ ಕಟ್ಕೊಂಡಿದ್ದ ಬಂಜಾರರಿಗೆ ವಲಸೆ ಸಾಕಾಗಿ, ದನಕರುಗಳನ್ನ ಮೇಯಿಸಿಕೊಂಡು, ಭಟ್ಟಿ ಸಾರಾಯಿ, ಕಾಡಿನ ಹಣ್ಣು, ಕಟ್ಟಿಗೆ ಮಾರಿ ಜೀವನಮಾಡಬಹುದೆಂಬ ಭರವಸೆಯಿಂದ ಬದುಕನ್ನ ಕಟ್ಟಿಕೊಳ್ಳುವ ಕನಸನ್ನೇನೊ ಕಂಡಿದ್ದರು. ಆದರೆ ನೂರಾ ಎಂಟ ವಿಘ್ನಗಳು ಎದುರಾಗಿ ಬದುಕೆ ಸವಾಲಾಗಿತ್ತು. ಒಂದು ಕಡೆ ಅರಣ್ಯ ಕಾನೂನು ಜಾರಿಗೊಳಿಸಿದ ಕೆಂಪುಮಂದಿ ಕಾಡಿನೊಳಗೆ ಅವರನ್ನ ಬಿಟ್ಟು ಬೇರೆಯಾರು ಪ್ರವೇಶಿಸದಂತೆ ನಿಷೇದಹೇರಿ, ಕಾಡಿನೊಳಗಿಂದ ದೊಡ್ಡ ಮರಗಳನ್ನು ಹಡಗು ಕಟ್ಟಿ ಭಾರತದಿಂದ ಸಂಪತ್ತನ್ನ ಲೂಟಿಮಾಡಲು ಕಾಡನೆಲ್ಲಾ ಸರ್ವನಾಶಮಾಡುತ್ತಿದ್ದರು. ಇನ್ನೊಂದು ಕಡೆ ಇನಾಮಿಗಾಗಿ ಹೊಗಳಿ ಅವರಿವರ ಬಗ್ಗೆ ಚಾಡಿ ಹೇಳಿ ಅವರನ್ನ ಬೇರೆಯವರ ವಿರುದ್ದ ಎತ್ತಿಕಟ್ಟಿದ ಮಂದಿಯಿಂದ ಪಾರಾಗಬೇಕಿತ್ತು. ಇಂತ ಸಂದಿಗ್ದದಲ್ಲಿ ಸೋಮ್ಲು ಯೋಚನೆಯಮಾಡಿ ಸೊರಗಿ ಹೋಗಿದ್ದ. ಅವನ ಮಗ ಧನ್‌ಸಿಂಗ್

ಮತ್ತು ಅವನ ತಮ್ಮ ರಾಮಸಿಂಗ್ ದೇಸುನಾಯ್ಕನ ತಾಂಡದ ಜವಾಬ್ದಾರಿಯನ್ನು ಹೊರಲು ತಯಾರಿದ್ದರು. ಅವರ ಕರಮತೋಟ್ ಬೆಡಗ ಬೆಳೆದು ಐವತ್ತು ಮನೆಗಳೇ ಆಗಿದ್ದವು. "ಅವೆಲ್ಲಾ ಒಂದೇ ವಿಚಾರದಲ್ಲಿ ಗುಡಿಸಲನ್ನ ಕಟ್ಟಿಕೊಂಡು ದನಕರುಗಳ ಸಗಣಿ, ಬೆಣ್ಣಿ, ಹಾಲು, ಮಾರ್ಕೊಂಡು ಜೀವನ ಸಾಗಿಸುತ್ತಿದ್ದರು. ಅವರಿಗೆ ಶ್ರೀಮಂತಿಕೆಯ ಅರಿವೆ ಇರಲಿಲ್ಲಾ ಅವತ್ತಿನ ಊಟ, ಆವತ್ತಿಗೊಂದಿಷ್ಟು ಸರಾಯಿ ನಾಳೆಯ ಚಿಂತೆಯನ್ನು ಮರೆತು ಬದುಕನ್ನು ಸಾಗಿಸುತ್ತಿದ್ದರು. ಸೋಮ್ಲ ತೋತ್ಯಾನ ಮಗ ರೇಖ್ಯಾನ ಮಕ್ಕಳ ಜವಾಬ್ದಾರಿಯನ್ನ ಅವನ ತಂಗಿ ಮಕ್ಕಳ ಜವಾಬ್ದಾರಿಯನ್ನ ಅವನೆ ವಹಿಸಿಕೊಂಡಿದ್ದು. ತೊತ್ಯಾ ಅಜ್ಜ ಕೂಡ ತಮ್ಮ ಒಡಹುಟಿದವನೆ ಎಂಬ ನಂಬಿಕೆಯನ್ನು ಯಾವತ್ತು ಕಳೆದುಕೊಂಡಿರಲಿಲ್ಲ. ರೇಖ್ಯಾನ ಮಗ ಬದ್ಯಾನಾಯ್ಕ, ಮಗಳು ರೇವಣಿಯ ಜವಾಬ್ದಾರಿ ಅವನು ಬಹಳ ಖುಷಿಯಿಂದಲೇ ತೆಗೆದುಕೊಂಡಿದ್ದು ರೇಖ್ಯಾ ಯಾವಾಗಲು ಸೋಮ್ಲನ ಎಲ್ಲಾ ಕೆಲಸಗಳಿಗೂ ಸಹಕಾರಿಯಾಗಿದ್ದ ಸೋಮ್ಲನ ಹಿರಿಮಗ ಧನ್‌ಸಿಂಗ್‌ನ ತಾಂಗಡಿ ಬಂದಾಗ ಅವನೆ ಖುದ್ದಾಗಿ ಮುಂದೆ ನಿಂತು ಸಂಜೆಯ ಊಟದ ಏರ್ಪಾಡು ಮಾಡಿದ್ದ. ಯಾಕಂದ್ರ ಅವನ ಮಗ ಬದ್ಯಾನ ಮದುವೆ ಮಗಳು ರೇವಣಿಯ ಮದುವೆಯನ್ನ ಖುದ್ದಾಗಿ ಅವನೆ ನಿಂತಿದದು ಮಾಡಿಸಿದ್ದ. ಹೆಚ್ಚು ಕಡಿಮೆ ಒಂದೇ ಮನಸ್ಥಿತಿಯನ್ನು ಹೊಂದಿದ್ದರು. ಹಾಗಾಗಿಯೇ ಇಡಿ ತಾಂಡದಲ್ಲಿ ಅವರ ಸುದ್ದಿಗೆ ಯಾರೊಬ್ಬರು ಬರುತ್ತಿರಲಿಲ್ಲ.

ಸದ್ಯ ಬಂದೊದಗಿರುವ ವಿಪತ್ತಿನಿಂದ ಪಾರಾಗಲು ಹಾನಗಲ ಶಾನುಭೋಗ ಶೇಷಪ್ಪ ಭಟ್ಟರಿಗೆ ಹೇಗಾದರು ಮಾಡಿ ಕಾಲು ಕೈ ಹಿಡಿದೋ ಇಲ್ಲ ಕೇಳಿದಷ್ಟು ಕಾಸನ್ನ ಕೊಟ್ಟು ತಾಂಡದ ಜಮೀನು ಮತ್ತು ಜಾಗವನ್ನು ಸರ್ಕಾರದ ಖಾತೆಯೊಳಗೆ ಸೇರಿಸೋದು ಒಂದೇ ಮಾರ್ಗವಾಗಿತ್ತು. ಶೇಷಪ್ಪ ಭಟ್ರು ಮಲ್ಲಪ್ಪನ ಮಾತನ್ನ ಮಾತ್ರ ಕೇಳುತ್ತಿದ್ದರು. ಮಲ್ಲಪ್ಪ ತಾಂಡದ ಮಂದಿ ಮ್ಯಾಲ ಸಿಟ್ಟಾಗಿದ್ದ. ಅವನ ಮಗನ್ನ ಯಾರೋ ಬೇಕಂತ ಹೊಡದು ಗಾಬಮಾಡ್ಯಾರಂತ ಅವನ ಅಂಬೋಣ. ತಂದೆಯ ಎದುರಿಗೆ ಮಗ ಮಾತಾಡೋದು ಪಾಡಲ್ಲಂತ ಧನ್‌ಸಿಂಗ್, ತನ್ನ ತಲಿಯೊಳಗಿನ ವಿಚಾರವನ್ನ ಸಭಾದಾಗ ಹೇಳಲಿಲ್ಲಾ. ಆದ್ರೂ ಅದನ್ನ ಅದುಮಿಟ್ಟು ಪ್ರಯೋಜನ ಇಲ್ಲ ಅಂದವನೆ ಮನುಷ್ಯ ಒಬ್ಬನ ಹತ್ರ ಗುಟ್ಟಾಗಿ ಹೇಳಿ ತುಂಬಿದ ಸಭಾದಾಗ ಚರ್ಚೆಯಾಗಬೇಕು ಇಲ್ಲದಿದ್ದರೆ ಊರು ಉಳಿಯೋದಿಲ್ಲಂತ ಪ್ರತಿಯೊಬ್ಬರಿಗೂ ಗೊತ್ತಿದ್ದದ್ದೆ. ಸಭಾ ಅಪ್ಪಣೆ ಕೊಟ್ರೆ ನಂದೂ ಒಂದು ವಿನಂತಿ ಐತಿ, ವ್ಯಕ್ತನಿವಾಗಿ ಹೇಳಂದ್ರ ಹೇಳತ್ತೀನಿ. ಚೆಂದಿಯಾನಾಯ್ಕ ನಿಂತಿದ್‌ದ. ನಾಯಕ, ಕಾರಭಾರಿ ಮಾರಿ ಮಾರಿ ನೋಡಿಕೊಂಡ್ರು, ಸೋಮ್ಲಗ ಯಾವ ಮೂಲಿಯಿಂದನಾದರು ಒಳ್ಳೆಯ ಸಲಹೆಬಂದ್ರ ಪಾಡಾದಿತು ಅಂತ ಕಾಯುತ್ತಿದ್ದ. "ಹೂಂ, ಹೇಳು ಚೆಂದಿಯಾ ಅದೇನ ಹೇಳಬೇಕಂತಿ" ಅಂದ. ಮಂದಿ ಗಪ್ಪಾದ್ರು. "ನಾಯಕರ, ಈಗ ನಮ್ಮ ಮುಂದಿರೋದ ಒಂದೇ ದಾರಿ, ಅದನ್ನ ಬಿಟ್ರೆ ಮುಂದ ಗತಿ ಇಲ್ಲ. ನಾವ ಎಲ್ಲರೂ ಖುದ್ದಾಗಿ ಹೋಗಿ ಮಲ್ಲಪ್ಪನ ಕಾಲು ಹಿಡಿದಾದ್ರೂ ನಮ್ಮ ತಾಂಡ ಉಳಿಸಿ ಸವುಕಾರ್ರ ಅಂತ ಬೇಡಿಕೊಳ್ಳೋಣ" ಅಂದ. ಯಾರು ಮಾತಾಡಲಿಲ್ಲ, ಏನ ಮಾಡೋದು ಅಂತ ಯಾರಿಗೂ ತಿಳಿಯಲಿಲ್ಲ. ದನ್‌ಸಿಂಗ್, ಚಂದಿಯಾಮಾಮ ಹೇಳಿದ್ದು ಬರಾಬರಿಐತೆ. ಕಾರ್ಯವಾಸಿ ಕತ್ತೆ ಕಾಲು ಹಿಡಿ ಅಂತರ. ಯಾಕ ನಾವು ಮಲ್ಲಪ್ಪನ ತಾವ ಹೋಗಿ ಕೇಳಕಬಾದು. ಹಿಂಗ ಬಿಟ್ರೆ ತಾಂಡ ಯಾವ ಕ್ಷಣದಲ್ಲಾದರೂ

ಧ್ವಂಸ ಆಗಬಹುದು." ತಾಂಡದ ಮುಖಂಡರ ಮಾರಿ ನೋಡಿದ. ನೀ ಹೇಳೋದು ಬರೋಬರಿ ಐತೆ ಆದ್ರೂ, ಅವನಮಾವ ಕಾರಬಾರಿ ರಾಗ ಎಳದ.," ಆದ್ರೆ ಗಿದ್ರೆ, ಏನೂ ಇಲ್ಲಾ ಈ ಜಾಗದಾಗ ನಾವು ವಾಸಮಾಡಬೇಕಂದರೆ ಸಾವುಕಾರರ ಕಾಲು ಹಿಡಿದು ಶಾನಭೋಗರ ತಾವ.

ನಮ್ಮ ತಾಂಡ ಇಲ್ಲೆ ಇತ್ತು ಅಂತ ಬರಸಾಕಬೇಕು. ಇದ ನಮ್ಮೆಲ್ಲರ ಬದುಕಿನ ಪ್ರಶ್ನೆ". ಧನ್‌ಸಿಂಗ್ ಜೋರಾಗೆ ಹೇಳೋದೇನೊ ಹೇಳಿದ. ಅವರಪ್ಪ ಏನಾಂದನಂತ ಆ ಕಡೆ ನೋಡಿದ ಅವರಪ್ಪ ಗಂಭೀರವಾಗಿಯೇ ಆಲೋಚಿಸುತ್ತಿದ್ದ., ಸೋಮ್ಲ ನಾಯಕಿಗೆ ಮಗ ಹೇಳ್ತಿರೋದು ಸರಿ ಅನಿಸಿತು. ಆ ಮಾರ್ಗವನ್ನ ಬಿಟ್ಟರೆ ತಾಂಡ ಉಳಿಯಲಾರದೆಂಬುದು ಅರಿವಾಯಿತು. ಕಾರಭಾರಿ, ತಾವೂ, ಸೋಮ್ಲ ಮತ್ತು ಐದಾರು ಮಂದಿ ಹಿರಿಕರು ಸಾವುಕಾರನ ಹತ್ರ ಹೋಗಿ ತಮ್ಮ ಸಂಕಟವನ್ನು ತೋಡಿಕೊಳ್ಳಬೇಕೆಂದು ನಿರ್ಧರಿಸಿ ಎರಡು ಮೂರು ಕುದುರೆ ಸವಾರಿ ಮೇಲೆ ಹೊರಟು ನಿಂತರು. ಸಾವುಕಾರ ಮಲ್ಲಪ್ಪ ಬಂಜಾರಮಂದಿ ಕೂಡ ಒಡನಾಟ ಹೊಂದಿದ್ದ, ಅವರ ಬಗ್ಗೆ ಅವನಿಗೆ ಗೊತ್ತಿದ್ದರಿಂದ ಸೋಮ್ಲ ನಾಯಕನೇನು ಅಪರಿಚಿತ ಅನಿಸಲಿಲ್ಲ. ಸೋಮ್ಲ ಬುಕ್ಯಾಕರಮತೋಟ್‌ಗೆ ಸ್ವಲ್ಪ ಕನ್ನಡಮಂದಿ ಒಡನಾಟದಿಂದಾಗಿ ಕನ್ನಡ ಭಾಷೆ ಬರುತ್ತಿದ್ದರಿಂದ ಅವನೆ ಮುಂಚೆ ಕುದುರೆ ಇಳದು, ಪೇಟ ತಗದು ಶರಣು ಮಾಡಿದ." ನಮಸ್ಕಾರಿ ಧಣಿಯರ, ನಾವ ಬಂಜಾರಾಮಂದಿ, ಇಲ್ಲೇ ಒಂದು ಹರದಾರಿ ದೂದಾಗ ದೇಸುಬುಕ್ಯಾನ ತಾಂಡದಾಗ ಅದೀವ್ರಿ. ಏನೋ ಪಾಪಿ ಪರದೇಶಿಗಳು, ದೇಶಾಂತರಬಂದೀವಿ, ನಿಮ್ಮಂತ ದಣಿಯರು ಆಶ್ರಯ ಕೊಟ್ರೆ ನಾವು ಬದುಕನ್ನ ಕಟ್ಕೊಂಡೇವು", ನಿವೇದಿಸಿದ. ಮಲ್ಲಪ್ಪ ಗಂಭೀರವಾಗೆ ಕುಂತಿದ್ದ. ಅಬಾಬ, ಆ ಮಂಗ್ಯಾನಮಕ್ಕಳು ಕೆಂಪಮಂದಿ ಅಣ್ಣತಮ್ಮಂದಿರು ಇದ್ದಂಗದಾರಲ್ಲಪ್ಪ ಈ ಹಡಸಿ ಮಕ್ಕಳು. ಇವರ ಹಿಂಗಿರಬೇಕಾರ, ಇವರ ಹೆಂಗಸರು"ಒಳಗೊಳಗೆ ಮಾತಡ್ಕೊಂಡ ಮಲ್ಲಪ್ಪ, ಅಲ್ಲಪ್ಪನಾಯ್ಕ ನಿನ್ನ ಹೆಸರು ಏನಂದೆ" ಕಿವಿ ಕೇಳ್‌ದೋರ ಹಂಗೆ ಕಿವಿಯಾಗ ಬೆಳ್ಳ ಹಾಕಿ ಸ್ವಚ್ಛಮಾಡಿದ. "ಕಾಂಯಿಪುಚರೋ ಚ ಊಕೋರ" (ಏನಕೇಳ್ತಾನಪ್ಪ ಆ ಮನುಷ್ಯ) ದಾವೊ ಕೇಳಿದ. "ಸೋಮ್ಲಬುಕ್ಯಾ, ಕಣ್ರೇಯಪ್ಪ" ಸೋಮ್ಲ ದೈನಾಸದಿಂದ ಹೇಳಿದ. ಈಗ ಈ ಕೆಂಪಮಂದಿ ಕಾಟಬಾಳ ಆಗ್ಯೆತಿ, ಶಾನಬೋಗ ಬೇರೆ ಕಿತಾಪತಿ ಮನುಷ್ಯ. ಅನುಮಾನಪಟ್ಟ. ಸೋಮ್ಲ, ಅರವಿಗಂಟಿನೊಳಗಿಂದ ನಿಜಾಮರ ಕಾಲದ ಐದಾರು ಬಂಗಾರದ ನಾಣ್ಯಗಳನ್ನು ಮುಂದಿಟ್ಟು "ನಾವು ಬಡವರ್‍ರಿ ತಂದೆ, ಏನೋ ನಮ್ಮ ಅಜ್ಜಂದಿರು ನಾಕಕಾಸ ಇಟ್ಟಿದ್ರು, ನಮ್ಮ ಬದುಕಿನ ಪ್ರಶ್ನೆ ಬಂದೈತೆ. ಇದ್ದಿದ್ದು ಈಗ ಇಲ್ಲದಂಗಾಗತೈತೆ. ಏನಮಾಡಹೇಳಿ, ನಮ್ಮಂತ ಪರದೇಶಿ ಮಂದಿ ಬಾಳೆ ಆಟು. ಹೊಟ್ಟೆ ಒಳಗಿನ ಸಂಕಟವನ್ನೆಲ್ಲಾ ಹೊರಹಾಕಿದ್ದ, ಐದ ಬಂಗಾರದ ನಾಣ್ಯಕಂಡ ಮಲ್ಲಪ್ಪ ನಿಯತ್ತು ಖರಾಬಾಗಿತ್ತು. ಅಯ್ಯೋ ಹಂಗ್ಯಾಕಂತಿ ಬಿಡಲೇ ನಾಯ್ಕ. ನಾಯಾಕದೀನಿ ಹೇಳು? ನಿಮ್ಮಂತ ಅನಾಥಮಂದಿ ಸಲುವಾಗಿ ಆದ್ರ ನಂದೊಂದ ಕರಾರು ಐತಿ, ಏನಪ? ಮುದಿಯ ಮಲ್ಲಪ್ಪನ ನಡಿದಾಗ ಕಸುಕಿತ್ತ ಬಂದಂಗಾಗಿತ್ತು. ಸೋಮ್ಲಗೆ ಅನಿವಾರ್ಯವಾಗಿತ್ತು. ಬ್ರಿಟೀಷರಿಂದ ಬಚಾವಾಗಾಕ ಇದ್ದಿದ್ದು ಒಂದೇ ಹಾದಿ. ಎಲ್ಲರೂ ಗೊಂದಲದಾಗ ಬಿದ್ರು. ಕಾಂಯಿಬಿಕೇರೋಚ ಮನ್ನಿತೊ ಕೋಗಿ ಕೋರಿಕೋರೂರಿ ವಾತೇಜ್ ಕಳೇನಿ ಭಾ ಮನ್ನತೋ" (ಏನಾರು ಹೇಳಕ್ಕೆ ಹತ್ಯಾನಸ್ರ ಆ ಮನುಷ್ಯ, ಆತನ ಮಾತುಗಳೆ ತಿಳಿತಾ ಇಲ್ಲಾ).

ತಾಂಡದ ಹಿರಿಯ ಜಗನ್ನಾ ಭಗತ್ ಹೇಳಿದ. ಆತನ ಮಾತಿಗೆ ಪ್ರತಿಕ್ರಿಯಿಸಿವುದು ಅವಶ್ಯ ಅನಿಸಿದೆ, ಮಲ್ಲಪ್ಪನ ಕರಾರಿನ ಬಗ್ಗೆನೆ ಎಲ್ಲರೂ ಯೋಚನೆಮಾಡತೊಡಗಿದ್ದರು. ಏನಿರಬಹುದು ಎಂದು ಎಲ್ಲರ ಮುಖಗಳು ಕಪ್ಪಿಟ್ಟಿದ್ದವು. ಆದರೂ ಕೇಳುವುದು ಅನಿವಾರ್ಯವಾಗಿತ್ತು. "ಹೂಂ, ಹೇಳಿಬುದ್ದಿ ಅದೇನ ತಮ್ಮ ಕರಾರು" ಅವನ ಮಾರಿನ ನೋಡಿದ ಸೋಮ್ಲ. "ನಾನು ಯಾವಾಗಬೇಕಾದ್ರು ನಿಮ್ಮ ತಾಂಡಕ ಬರಬಹುದು. ಅಲ್ಲಿನಾನ ಏನಕೇಳ್ತೀನಿ ಇಲ್ಲ ಅನ್ನಂಗಿಲ್ಲ". ತಾಂಡದ ಮಂದಿ ಮಕನೋಡಿದ ಅವರ ಮಕ ಕಪ್ಪಿಟ್ಟಿತ್ತು. ಆದ್ರೂ ಅನಿವಾರ್ಯ. "ಅದಕ್ಕೇನಂತೆ, ಸಾಮ್ಯೋರ ಅದು ನಿಮ್ಮ ತಾಂಡನೆ, ನೀವು ಯಾವಾಗಬೇಕಾದರು ಬರಬಹುದು." ಸೋಮ್ಲನಿಗೆ ಅನಿವಾರ್ಯವಾಗಿತ್ತು. ಕನ್ನಡ ತಿಳಿಯುತ್ತಿದ್ದ ಕಾರಭಾರಿ, ತಾಂಯಿವಾತ ದೇನಾ ಕೊ ನಾಯಕತು (ಏನ ಮಾತಕೊಟ್ಟೆ ನಾಯಕಪ್ಪ) ಸೋಮ್ಲನ ಕೇಳಿದ. ಕಾರಭಾರಿ, ಈಗ ಆ ವಿಚಾರಬೇಡ, ಸುಮ್ಮನಾಗು ಅಂದವನೆ ಮಲ್ಲಪ್ಪನ ಪ್ರತಿಕ್ರಿಯೆಗೆ ಕಾಯುತ್ತಿದ್ದ. ಒಂದೊಂದು ಸವರನ್ ತೂಕದ ನಾಣ್ಯಗಳು ಮಲ್ಲಪ್ಪ ನನ್ನ ಸಂದಿಗ್ಧತೆಗೆ ಸಿಗಾಕಿಸಿದ್ದವು.: ಹೊಂ ನಡಿರಿ ನಿಮ್ಮ, ಅದೃಷ್ಟದ ಪರೀಕ್ಷೆನೂ ಆಗವಲ್ದಾಕ: ಅಂದವೆ ಒಳಗೆ ಹೋದ,. ಅವನ ತಿಜೋರಿಯಿದ್ದ ಕತ್ತಲ ಕೋಣೆಗೆ ಹೋಗಾಕ ಬುಡ್ಡಿದೀಪ ಹಿಡಿದು ಹೊರಟ. ನಾಯಕ ಕೊಟ್ಟಿದ್ದು ನಾಕು ಬಂಗಾರದ ನಾಣ್ಯಗಳನ್ನು ಬಂಗಾರದ ನಾಣ್ಯಗಳಿದ್ದ ಗಂಟನ್ನ ಬಿಚ್ಚಿ ಅದಕ್ಕೆ ಸೇರಿಸುವ ಮುಂಚೆ ಹಿಂದೆ ಇದ್ದ ಗುರುತನ್ನ ಒಮ್ಮೆ ಪರೀಕ್ಷಿಸಿದ. ಗುರುತು ಸರಿಯಾಗೆ ಐತೆ, ಒಮ್ಮೆ ಎಣಿಸಿದರೆ ಹೇಗೆ"? ಅನುಮಾನದ ಸುಳಿಯೊಂದು ಹಾದುಹೋತು. " ಬೇಡ ಹೆಂದಗ ಲಮ್ಯಾಣ್ಯಕಾ ರು ಕಾಯಾಕ ಹತ್ಯಾರ, ಇನ್ನೇನು ಹಟ್ಟಿ ಅಮಾಸಿಬಂದ ಬಿಡ್ತಲ್ಲ ಪೂಜೆ ಮಾಡಿ ಎಣಿಸಾಕಬೇಕಲ್ಲ" ಸಮಾಧಾನ ಪಡ್ಕೊಂಡವನ ಗಂಟನ್ನ ಕಟಿಟದ. ಒಂದು, ಎರಡು, ಮೂರು, ನಾಕು, ಐದು, ಆರು, ಏಳು, ಯಾವಂಗನ ಕೈಯಿಂದಲೂ ಬಿಚ್ಚಾಕ ಆಗಿರಬಾರದು. ಹಂಗಕಳ್ಳಗಂಟಿ ಹಾಕೀನಿ." ಖಾತರಿ ಪಡಿಸಿಕೊಮಡವನೆ, ಬೆಳ್ಳಿ ಗಂಟನ್ನ ಬಿಚ್ಚಿ ಹತ್ತು ಬೆಳ್ಳಿ ನಾಣ್ಯಗಳನ್ನು ತಗೊಂಡು ಮತ್ತೆ ಗಂಟುಕಟ್ಟಿ ಪೆಟಾರಿಯೊಳಗ ಹಾಕಿ ಚಿಲಕ ಸರಿಸಿ, ಭದ್ರವಾಗಿ ಬೀಗಹಾಕಿ ಬಿದ್ದಿದೆಯೋ ಇಲ್ಲವೋ ಎಂಬುದನ್ನು ಖಾತ್ರಿಪಡಿಸಿಕೊಂಡು ಅವಸರದಿಂದಲೇ ಹೊರನಡೆದ. ಎಲ್ಲಾ ಮಂದಿ ಕಾಯ್ತಿದ್ರು. ಅವರ ಭವಿಷ್ಯ ಅವನ ಕೈಯಾಗಿತ್ತು. ರೇಷ್ಮ ಬಟ್ಟ ಶಾನಬೋಗ ಸಾವುಕರನ ವಿರುದ್ಧ ಚಕಾರ ಎತ್ತುತ್ತಿರಲಿಲ್ಲ. ಬ್ರಿಟೀಷರು ತೆರಿಗೆ ಎತ್ತುವ ಜವಾಬ್ದರಿ ಮಲ್ಲಪಗ ಕೊಟ್ಟಿದ್ದು. ಶ್ಯಾನಭೋಗ ಶೇಕಪ್ಪ ಪಸಂದಾಗೆ ಲೆಕ್ಕ ಇಟ್ಟಿದ್ದ. ಜೊತೆಗೆ ದೇಸಗಲಿ, ಉಂಬಳಿ ಭೂಮಿ ಕಬಜ ಮಾಡ್ಕೊಂಡಿದ್ದು ಸಾವುಕಾರ್ರಿಗ ಗೊತ್ತಿತ್ತು.

ಸೇವಕಲಗೇರಿಸಿ, ಜೋಡನ್ನು ಮೆಟ್ಟಮೂಡ ಸಾವುಕಾರ ಹೋದಾಗ ಬದ್ದಿಂದಂಗ, ಅವನ ಆಳು ಮಾದರ ಇಂಗ ಕುದುರೆ ತಂದು ನಲ್ಲಿಸಿದ್ದ. ಸಾವುಕಾರ ಕುದುರೆ ಹತ್ತಿ ಮುಂದೆ ಹೋಗ್ತಿದಂಗೆ, ಹಿಂದೆ ನಾಯಕನ ಗುಂಪು ಹೊಂಟಿತ್ತು. ಮೊಳಕಾಲ್ಮೂರು ಹಾನಗಲು, ಎರಡ ಮೈಲು ಸಾವುಕಾರನ ಆಳು ಮಾದರ ನಿಂಗ ಹಿಂದಿಂದೆ ಓಡಿಹೊಂಡಿದ್ದು. ಅವು ಹಾನಗಲ್ಲಿನ ದೊಡ್ಡ ಮಾಳಗಿಮನಿಮುಂದ ನಿಂತಾಗ ನಿಂಗ ಕುದುರೆ ಹಿಡಿದು ನೀರ ಕುಡಿಸಾಕ ಹೊಡ್ಕೊಂಡ ಹೊಂಡಿದ್ದ. ಶಾನಬೋಗ ಶೇಷಭಟ್ಟ, ಸಾವುಕಾರ ಮಲ್ಲಪ್ಪನ್ನ ಕಂಡವನೆ ಒಳಗಡೆಯಿಂದ ಹೊರಗ ಓಡಿಬಂದಿದ್ದ" ಬನ್ನಿ ಸಾವುಕಾರ್ರೆ, ಬನ್ನಿ ಅಲ್ಲ ನನಗೆ ಹೇಳಿಕಳುಹಿಸದ್ರೆ ನಾನೆ..." ತನ್ನ ವಿನಮ್ರತೆ

ತೋರಿಸಿದ. "ಇಲ್ಲಾ ಶಾನಬೋಗಪ್ಪ, ಕೆಲ್ಸ ಅಂತಹದಿತ್ತು. ನಾನ ಬರಬೇಕಾಯ್ತು" ಅಂದ "ಯಾಕ ಏನಾರು ಕೆಂಪಮಂದಿ ಸರಕಾರ ಕಂದಾಯ ವಸೂಲಿಗೇನಾರು. . . ತಾಕಿತು ಮಾಡ್ಯಾರೇನ್ರಿ ಮತ್ತ" ಆತಂಕ ವ್ಯಕ್ತಪಡಿಸಿದ. "ಎಯ್, ಅಂತದ್ದೇನು ಇಲ್ಲ ಇದೊಂದು ಹೊಸನಮೂನೆ ಸಮಸ್ಯೆ. ಅದನ್ನು ಹೇಳ್ತೀನಿ ನೀವು ಆಟುಒಳಗೆ ನಡಿರಿ. " ಅಂದವನ ಅವನ ಅನುಮತಿಗೂ ಕಾಯದೆ ಮುಂದೆ ಹೊರಟ. "ಅಂಥಹ ಸಮಸ್ಯೆ, ಈಗ ಎಲ್ಲಿಂದ ಬಂತು ನಿಮಗೆ" ಶೇಷಪ್ಪ ಶಾನಬೋಗ ಅನುಮಾನಿಸುತ್ತಲೇ ಒಳನಡೆದ. ಅವರ ತಲೆಯೊಳಗೆ ನೂರೆಂಟು ಆಲೋಚನೆಗಳು ಸುಳಿದಾಡತೊಡಗಿದವು.

ಮಲ್ಲಪ್ಪನಿಗೆ ಶಾನಬೋಗ ಏನಾದರೂ ಒಪ್ಪದಿದ್ದರೆ ನಾಲ್ಕು ಚಿನ್ನದ ನಾಣ್ಯಗಳು ವಾಪಾಸ್ಸು ಹೋಗ್ತಾವಲ್ಲ ಎನ್ನುವ ಆತಂಕ ಒಂದು ಕಡೆಯಾದರೆ ಲಂಬಾಣಿ ತಾಂಡಕ್ಕೆ ಹೋಗುವುದು ಭಟ್ಟಿಸರಾಯಿ, ಅವರ ಕೆಲಸಮಾಡಿಸಿದನಂತರ ಅವನ ಋಣಕ್ಕೆ ಬದ್ದು ಕೇಳಿದ್ದನ್ನ ಕೊಡಲು ಸಿದ್ದವಾಗಿರುವ ಮಂದಿ ಸೇವೆ ತಪ್ಪಿಹೋಗುತ್ತಲ್ಲಾ ಎನ್ನುವ ಆತಂಕಕಾಡತೊಡಗಿತು. ಆದರು, ಶಾನಭೋಗರ ಹಳೇಯ ಕೆಲವು ತಪ್ಪುಗಳನ್ನು ಮುಂದಿಟ್ಟುಮಾಡಿಸುವ ಧೈರ್ಯಸಾವುಕಾರಗೆ ಇದಿದ್ದರಿಂದ ಆತನೇನು ಹೆಚ್ಚು ತಲೆಕೆಡಿಸಿಕೊಳ್ಳಾಕ ಹೋಗಲಿಲ್ಲ." ಸಾವುಕಾರು ಬಡವರ ಮನೆಗೆ ಬಂದಿದಾರ ಚಹಾ ಇಲ್ಲಾ ಪಾನಕ" ಶೇಷಪ್ಪರಾಗ ವಳದ ಚಹಳಿಗಬಹುದು ಸಾವುಕಾರರು ಸ್ಪಷ್ಟವಾಗಿಯೇ ಹೇಳಿ ಪೀಠಿಕೆ ಹಾಕಿದರು. ಶಾನಬೋಗರೆ, ನಮ್ಮ ಹಾನಗಲ್ಲಿಂದ ಪಶ್ಚಿಮಕ್ಕೆ ಒಂದು ಮೈಲಿದೂರದ ಆ ಬಂಡಗುಡ್ಡದ ನಳುಕಿನೊಳಗೆ ಲಂಭಾಣಿತಾಂಡವಿದೆ. ಅದೇನದು" ಸೋಮ್ಲನ ಮಾರಿನೋಡಿದ. ಅದೇ ಬುದ್ದಿ, ದೇಸು ನಾಯ್ಕನ ತಾಂಡ". ಸುಮ್ಮನಾದ." ಅಲ್ಲ ಯಾವತಾಂಡನೂ ಇಲ್ದೆ" ಶೇಷಪ್ಪ ಕಡ್ಡಿ ತುಂಡ ಮಾಡಿದಂಗ ಹೇಳಿದ. ಸಾವುಕಾರ ಸೋಲು ಒಪ್ಪಾಕ ವರ್ಷಗಳಾದುವು ಲಮಾಣ್ಕೇರ ಬಂದು ವಾಸ ಆಗಿ. ಮನಿಮಹ, ದನಕರು, ಕಮತಿ ಗಿಮತು ಎಲ್ಲಾ ಮಾಡ್ಯಾರ, ನನಗ ಬಾಳಹಿಂದೆನ ಮಾಹಿತಿ ಇತ್ತು. ಈಗ ಅದನ್ನ ಸರ್ಕಾರಿ ಖಾತದೊಳಗ ತಗೊಂಡು ದಾಖಲೆಮಾಡಿದ್ರ ಕಂಪನಿ ಸರ್ಕಾರ ಈ ಪಾಪಿಪರದೇಶಿಗಳಿಗೆ ಕಿರುಕುಳ ಕೊಡಾಕಿಲ್ಲ". ಗಂಭೀರವಾಸಿ ಹೇಳಿದ್ದು. ಕಂಪನಿ ಸರ್ಕಾರಕ್ಕೆ ಈಗಾಗಲೇ ಹಾನಗಲ್ಲು, ಮೊಳಕಮ್ಮಾರ ಸುತ್ತಲೆ ಇಂಚಿಂಚು ಜಾಗದ ಮಾಹಿತಿ ಐತೆ. ಈಗ ನಾವೇ ನಾರು ದಾಖಲೆ ಮಾಡಿದ್ರ ನಮ್ಮ ಬುಡಕ್ಕ ಬೆಂಕಿ ಬರೆರೋದು ನಿಶ್ಚಿತ" ಅಷ್ಟೇ ನಿಷ್ಠುರದಿಂದ ಉತ್ತರಿಸಿದ." ಹಂಗಂತಿರಾ, ಹಿಮದೆ ನೀವು ಕಂಪನಿ ಸರ್ಕಾರಕ್ಕೆ ನೂರಾರು ರೂಪಾಯಿ ವಂಚನೆ ಮಾಡಿದ್ದು ಗೊತ್ತಾದ್ರ". ಸಾವುಕಾರ ಒಂದ ಹಾವನ್ನ ಹರಿಬಿಟ್ಟು," ಅದು ಹಳೆಲೆಕ್ಕ, ಸರ್ಕಾರದ ಖಜಾನೆಗೆ ಬರ್ತಿಯಾಗಿ ಕಂಪನಿಸರ್ಕಾರದ ಅಪ್ಪಣೆಗೂ ಸಿಕ್ಕಿದೆ." ಶೇಷಪ್ಪ ಮೈಗೆ ಎಣ್ಣೀ ಸವರಿಕೊಳ್ಳದೆ ಜಾರಿಕೊಳ್ಳುತ್ತಾ ನೋಡಿದ. ಹೌದು ಐದ ಎಕ್ಕರೆ ಇದ್ದ ಇನಾಮ ಭೂಮಿ ಈಗ ಐವತ್ತು ನರು ಎಕ್ಕರೆ ಸರ್ಕಾರದ ಜಮೀನು ಒತ್ತುವರಿಯಾಗಿ ಶೇಷಪ್ಪ ಬಟ್ಟರಿಗೆ ಇನಾಮು ನೀಡಿದ್ದ ಅಂತ ಆಗಿದ್ದು ; ಮುಲಾಜಿಲ್ಲದೆ ಎರಡನೆಯ ತಪ್ಪನ್ನ ಹೊರಹಾಕಿದ್ದ, ಸಾವುಕಾರ್ರೇ, ತನೀಗ, ತಾಂಡ ನಮ್ಮ ಕಡಕದೊಳಗೆ ದಾಖಲಾಗಿ ಕಂಪನಿಗ ಮಾಹಿತಿ ಹೋಗಬೇಕು. ಆಟೆಯಲ್ಲಿ ನೀವು ಕಾಳಜಿ ಮಾಡಾಕಹೋಗಬ್ಯಾಡ್ರಿ. ಕೆಲ್ಸ ಆದಂಗೆ," ಶಾನಬೋಗಹಾಂಗ ಬಂದಿದ ಹಲಿಗಂಕ ಅವನ ಬಣ್ಣದ ಮಾತ ಕೇಳಿ ಎದ್ದುಹೋದ್ರ ಕೆಲ್ಸ ಆಗಾನಾಲ್ಲಂತ ನ್ನನ್ನ ಸಮಕ್ಷಮ ಆಗಬೇಕಪ್ಪ. ಅಲ್ಲಾ ನೀವೇನು

ಖಾಲಿಪೋಕಟ್ ಮಾಡೋದ ಬ್ಯಾಡ. ಅಂದವನೆ ಐದಾರು ಬೆಳ್ಳಿನಾಣ್ಯಗಳಿದ್ದ ಚೀಲತಗದು ಶೇಷಪ್ಪನ ಕಡೀಗ ಬಿಸಾಡಿದ, "ಈಗ ಇದರ ಅವಶ್ಯಕತೆ. . . " ಶೇಷಪ್ಪ ಔಪಚಾರಿಕವಾಗಿಯೇ ಹೇಳಿದ. ಛೇ, ವೋ, ಶಾನಬೋಗಪ್ಪ, ಆಯಾಕೆಲಸಕ್ಕೆ ಕೊಡಬೆಕಾದ ಗೌರವ ಮನ್ನಣೆ ಕೊಡ್ಲಾಕಬೆಕು. ನಿಮ್ಮದು ಖರ್ಚು ಅಂತಇರುತ್ತೆ ನೋಡಿ. ಮಲ್ಲಪ್ಪನೂ ಕುಡ ಅಷ್ಟೆ ನಾಟಕೀಯವಾಗಿ ಉತ್ತಿರಿಸಿದ. ಶೇಷಪ್ಪ ಹಳೆ ಕಡತವನ್ನು ತರಲು ಒಳಗೆ ಹೋದ. "ಕೆಂಪಮಂದಿ ನಂಭೊದು ಇವರನ್ನ ಕಣ್ರಪ್ಪ. ನಮ್ಮ ನಿಮ್ಮಂತೋರನಲ್ಲಾ. ಈ ಮಂದಿ ಏನಂದ್ರು ಹೂಂ ಅಂತಾರ ಅದೇನ ಮಾಡಿಮಾಡ್ಯಾಕೆ ಕೆಂಪ ಮಂದಿಗೆ, ಆ ಹಡ್ಸಿಮಕ್ಕಳು ನವೆ ಹೇಳಿದ್ರು ನಂಬಂಗಿಲ್ಲಾ. ಯು ಟೆಲ್ ಶಾಬೋಗ ಅಂತಾರೆ. ಆವಂದ್ರ ಹಡ್ಡಂತ ತಳ್ಯಾರ ನೋಡು. ಆದ್ರೂ, ನಮ್ಮ ಮಂದಿ ಜನಸಂಖಿ ಜಾಸ್ತಿ ಇರೋದಕ್ಕ, ವಿರೋಧ ಮಾಡಬಾದಂತ ನಮ್ಮನ್ನು ಇಟ್ಕಟೊಂಡಾರ ಆಟಕುಂಟುಲೆಕ್ಕಕಿಲ್ಲಾ ಅನ್ನೋರಗತಿ" ಮಲ್ಲಪ್ಪ ಬ್ರಿಟೀಷಮಂದಿ ಮ್ಯಾಲಿನ ಸಿಟ್ಟಿನ ಹೊರಹಾಕಿದ್ದ. ಆತನ ಕುರಿತು ಕೆಂಪಮಂದಿಗೆ ಚಾಡಿ ಹೇಳುವ ಶೆಷಪ್ಪನ್ನು ಆಫ್ ಮಡಿಕೊಂಡಿದಕ್ಕ ಅವನಿಂದ ಹೇಗ ಕೆಲ್ಸ ಮಾಡಿಸಿಕೊಳ್ಳಬಹುದು. ಅನ್ನೋದ ಕಲ್ತಿದ್ದ. ಶೇಷಪ್ಪ ಶನುಬೋಗ ಕಡತ ತಯಾರಿಮಾಡಾಕ ಆರಂಭಮಾಡಿದ. ಅಪರೂಪಕ್ಕೆ ಕನ್ನಡ ಓದುವ ಮಲ್ಲಪ್ಪ ಸಾವುಕಾರನ ಶಾನಬೋಗರಿ ಹಳೆಗನ್ನಡ ದಂತಹ ಅಕ್ಷರಗಳು ಅರ್ಥವಾಗದಾದವು. ಆದರೂ ಛಲಬಿಡದ ಮಲ್ಲಪ್ಪ, ಸನ್ನಸಾವಿರದೊಂಬೈನೂರ ಒಂದರ ಈ ಕ್ರಮ ನಾಮ ಸಂಸರದಲ್ಲಿ" ಅಂತ ತಪ್ಪು ತಪ್ಪು ಓದಲು ಆರಂಭಿಸಿದ. ಶಾನುಬೋಗರು ಇಡಿಕಡತವನ್ನ ಒಳ್ಳೆ ಕಲ್ಲಿನ ಮೇಲಿನ ಶಾಸನದಂತೆ ಬರೆದು ಮುಗಿಸಿ ಒಮ್ಮೆ ಓದಲು ಶುರುಮಾಡಿದರು. ದೇಸುನಾಯಕನ ತಾಂಡ ಈಗ್ಗೆ ಸುಮಾರು ನಲ್ವತ್ತು ವರ್ಷದ ಹಿಂದೆ ಹಾನಗಲ ಪಾರ್ಕ್‌ದಿಂದ ಸರಿಸುಮಾರು ಎರಡವರೆ ಮೈಲಿ ದೂರದ ಕಲ್ಲಿನ ಬೆಟ್ಟಗಳ ನಡುವೆ ದಟ್ಟ ಅರಣ್ಯದಲ್ಲಿ ಕಟ್ಟಲಾಗಿದ್ದು. ಇದು ಕಡತಗಳಲ್ಲಿ ದಾಖಲಾಗಿದೆ. ಹಳೆ ಸಿಕ್ಕವನ್ನ ಒತ್ತಿ ಆಗಬದುಕಿದ್ದ ಶೇಷಪ್ಪ ಶಾನಬೋಗರ ತಂದೆ ನರಸಿಂಹಭಟ್ಟ ಶಾನಬೋಗರ ಯಕಾವತ್ತು ಸಹಿಯನ್ನ ಹಾಕಿ ಹಳೆಯ ದಿನಾಂಕವನ್ನ ನಮೂದಿಸಿ ಕೆಂಪು ವಸ್ತರದಲ್ಲಿ ಯತಾವತ್ತಾಗಿ ಕೆಟ್ಟ ಹಳೆ ಪೇಟಾರಿಯೊಳಗೆ ಬದ್ರವಾಗಿಟ್ಟು ಕೀಲಿಹಾಕಿದ ಮೇಲೆ ಸೋಮ್ಲು ಬುಕ್ಯಕರಮಗತೋಟ್ ಕಾರಭಾರಿ ಕಂಕಾಳಿನಾಯ್ಕ ಡಾವ್ಯೆ ಡಕಣ್ಯಾನಾಯಕ್, ಜಗನ್ಯಾಪೂಜಾರಿ, ವಾಡ್ಯ, ವಆಲ್ಯ, ತೊತು, ಸತ್ತ್ಯ ನಿಟ್ಟಿಸಿರುಬಿಟ್ಟಿರು. ದದಣೇರ, ದೊಡ್ಡ ಉಪಕಾರ ಆತು. ತಾವು ನಮ್ಮಂತ ಪರದೇಶಿಗಳಿಗೆ ಸಹಾಯ ಮಾಡಿದ್ರಿ, ಜೀವಮಾನದಾಗ ಯಾವತು ಮರಿಯಂಗಿಲ್ರಿ ಯಾಪ್ಪ ನೆಪ್ಪ ಮಡಿಗಿಕೊಳ್ತೀರಿ." ನಾಯಕ ಸೋಮ್ಲು ಹೇಳಿದ ಏನೆ, ಕುದುರೆಯನ್ನೇರಿದ, ಉಳಿದರು ಬಡಬಡನೆ ಎದ್ದು ಕುದುರೆ ಏರಿ ತಾಂಡಕ ಹೊರಟರು. ತಾಂಡದ ಮಂದಿಗ ನೆಮ್ಮದಿ ಅನಿಸಿತ್ತು. ಅಂತು ಒಂದು ಪೀಡೆ ಹರಿತಲ್ಲಾ" ಸೋಮ್ಲು ಉಳಿದವರಿಗೆ ಹೇಳಿದ. ಅದೇ ದೊಡ್ಡ ಗಂಡಾಂತರ ಇತ್ತು ನಾಯಕಪ್ಪ, ಮಕ್ಕಳು ಮರಿ, ಹೆಂಗಸರು ವಯಸ್ಸಾದೋರ್ನ ಕಡ್ಕೊಂಡು ಎಲ್ಲಿ ಮಟ ಅಲಿಯಾಕ ಆದೀತು. ಏನೋ ಒಂದ ಮಾಡಿ ನಮ್ಮನ್ನ ಕಷ್ಟದಿಂದ ಪಾರಮಾಡ್ದಿ ನೋಡು. ಜಗನ್ಯಾಪೂಜಾರಿ ತನ್ನ ನಿರುಮಳವಾದ ಮನಸ್ಸಿನ ಹಿಂದಿದ್ದ ಆತಂಕವನ್ನು ತೋಡಿಕೊಂಡಿದ್ದ. ಎಲ್ಲರೂ ಹದೌದೆಂಬಂತೆ ಹೂಂಗುಟ್ಟಿದ್ದರು, ಅಷ್ಟೊತ್ತಿಗಾಗಲೇ ಹೊತ್ತು ಹಿಂದಕ ಸರದು ತನ್ನ ತಾಯಿಗರ್ಭಸೇರಿತ್ತು. ಮಕ್ಕರಗೌಳಿ, ಮಜಬೂತಾದ ಕಡವೆ ಪಿದೆಯೊಂದರ ಎಲೆಗಳನ್ನು

ತಿನ್ನುತಿರೋದ ನೋಡಿದ ದಾವೊ ಡಕಣ್ಯಾ ನಾಯ್ಕ. "ಹಣ್ಣಿ ಚರ್‍ರಿಚ ನಾಯಕ, ಆಜ ತೊ ವೋಟೋಜ ಏಕೊವೇಜಾಚ" (ಜಿಂಕೆ ಮೇಯ್ತಿದೆ ನಾಯಕಪ್ಪ ಇವತ್ತೋ, ದೊಡ್ಡ ಬೇಟೆನೆ ಆಗುತ್ತೆ). ಕುದುರೆ ನಿಲ್ಲಿಸಿ ಸೂಕ್ಷ್ಮವಾಗೆ ಅಣತಿ ದೂರ ಸರದು ಹೇಳಿದ. "ಖಾಲಿ ಕೈಯಿಂದ ಅದೆನ ಬೇಟೆ ಯಾಡಿರಾ, ಸುಮ್ಕೆ ಗಾಳಿ ಗುದ್ದಿ ಮೈನೋವ ಮಾಡ್ಕ ಬ್ಯಾಡ್ರಿ ನಡೀರಿ" ನಾಯಕ ಕಂಡ ತುಂಡಾಗೆ ಹೇಳಿದ. ಏಯ್, ಪ್ರಯತ್ನ ಮಾಡೋದ್ರಾಗ ಅರ್ಜನೈತಿ, ನೀವು ಸುಮ್ಕಿರಿ, ಆನದೀನಿ" ಅಂದ ಕಾರಭಾರಿ, ಪೂಜಾರಿಗೆ ಏನೇನೋ ಹೇಳಿದ. ಅವರ ನಡದಾಗಿದ್ದ ಚೂರಿಗಳನ್ನು ಹಿರಿದು, ಹಸಿಕಟ್ಟಿಗೆಯ ಉದ್ದಕೋಲುಗಳನ್ನು ಚೂಪುಮಾಡಿಕೊಂಡು ಪೆಳಿಸುತ್ತ ಸುತ್ತುವರಿದು ಅದರ ಹೆಡಮುರಗಿ ಕಟ್ಟುವ ಯೋಜನೆಯನ್ನು ರೂಪಿಸಿದರು. ಇಂತ, ಎಷ್ಟೋಕಾಡಪ್ರಾಣಿಗಳನ್ನು ಬರಿಗೈಯಿಂದ ಬೇಟೆಯಾಡಿದ್ದ ಜಗನ್ಯಪೂಜಾರಿ, ನೋಡ್ರೀ, ಅದು ಸಪ್ಪಳ ಕೇಳ್ತಿಂದ್ರ ನಾಕಡಿ ಮ್ಯಾಗ ಜಿಗಿತೈತೆ, ಜಿಗಿತಿದ್ದಂಗ, ನಾವು ಜಿಗಿದು ಹೊಟ್ಟಿಗ ಚುಚ್ಚಿ ನೆಲಕ್ಕ ಕೆಡವ ಬೇಕು." ನಿಶ್ಚಿತವಾದ ಯೋಜನೆ ಹೇಳಿದ. ಹೂಂ ಆಗವಲ್ಲ್ಯಾಕ, ಮದ್ಲು, ಕುದುರಿಗಳನ್ನು ನಾಯಕಪ್ಪತಾವಬಿಟ್ಟು ಒಬ್ಬೊಬ್ಬರಾಗಿಯೇ ಹೆಜ್ಜೆಸಪ್ಪಳ ಆಗದಂಗ ನಡಿರಿ, ಮುಗಿತು, ಅದ್ರಕತಿ," ದಾವೊ, ಕಳ್ಳ ಹೆಜ್ಜೆ ಹಾಕ್ತ ಮುಂದಕ ಹೊರಟ.

ನಾಕು ಕಡಿಯಿಂದ ಮುತ್ತಿಗೆ ಹಾಕಿದ ವಿಚಿತ್ರ ಪ್ರಾಣಿಗಳಿಂದ ಗಾಬರಿಯಾದ ಒಂದು ಸಣ್ಣ ಮಣಕ ದಷ್ಟು ಇರೊ ಕಡವೆಗೆ ಗಾಬರಿಯಾಗಿ ಸುತ್ತಲು ನೋಡಿ, ಒಂದೆ ಏಟಿಗೆ ಛಂಗನೆ ಮೇಲಕ್ಕೆ ನೆಗೆಯಿತು.

ಪೂಜಾರಿ ಮದಲೆ ಹೇಳಿದಂಗೆ ಒಂದೇ ಸಲಕ್ಕ ಅದರ ಜೊತೆಗೆ ಜಿಗಿದ, ದಾವೊ, ಕಾರಬಾರಿ, ಪೂಜಾರಿ, ದಾವ್ಯ, ಸರಿಯಾಗಿ ಹೊಟ್ಟೆಗೆ ಚೂಪಏಕಟ್ಟಿಗೆಯಿಂದ ತಿವಿದು ಅದರ ಜೊತೆಗೆ ನೆಲಕ್ಕೆ ಬಿದ್ದು ಅದು ಏಳುವ ಮುನ್ನವೆ ಮತ್ತೆ ಆಕ್ರಮಣ ಮಾಡಿ ಗಾಯಗೊಳಿಸಿದರು. ಮರಣಾಂತಿಕ ಹವೆಯಿಂದ ಪಾರಾಗುವ ಉಪಾಯ ಕಾಣದ ಕಡುವೆ ನೆಲಕ್ಕುರುಳಿತು. ನಾಯಕ ಗಾಬರಿಯಿಂದ ನೋಡ್ತಾ ನಿಂತಿದ್ದ. ಎಯ್, ಆಯಕ, ನಿಮ್ಮಜ್ಜನ ಕತಿ ಕೇಳಿಕೇಳಿನ ನಾವು ಬ್ಯಾಟಿ ಆಡೋದನ್ನು ಕಲ್ತಿದ್ದು. ನೀನು ಅದಿಯ, ಕೆಲ್ಕ ಬಾರದನ್ನ ಹಂಗೆ" ಗೆದ್ದ ಹುರುಪಿನೊಳಗ ಜಗಮ ಪೂಜಾರಿ ಚುಡಾಯಿಸಿದ. "ಪರವಾಗಿಲ್ಲ ಬಿಡು ಪೂಜಾರಿ ಮಾವ, ವಯಸ್ಸದು, ಹರೆಯದ ಹುಡುಗರಿಗೆ ಜಿಂಕೆ ಹಿಂದಿಂದ ಜಿಗಿತಿಯ ಶಹಬಾಸ್, ಭಾರಿಬಿಡಪ್ಪ ನೀನುವೆ". ಅವನನ್ನ ಅಭಿನಂದಿಸಿದ ನಾಯಕ. "ನಮ್ಮ ಪೂಜಾರಪ್ಪನ ಗುರಿ ಅಂದ್ರ ಗುರಿ" ಕಾರಭಾರಿ ತಡಿಯಾಕ ಆಗದೆ ಹೇಳಿದೆ" ಲೇ ತಮ್ಮಂದಿರ್‍ರಾ ನಾವೆಲ್ಲ ಎಟಗ ಡತ್ರ. ನಮ್ಮ ಹಟ್ಟಿನಾಯಕ ಅದಾನಲ್ಲ ಸೋಮ್ಲಬುಕ್ಯಾ ಕರಮತೋಟ ಅವನ್ನ ತಾತ, ಬೇಟೆಯಾಡೊದ್ದಾಗ ನಿಸ್ಸೀಮನಿದ್ದನ್ನಂತ. ಹೂಜೂರ ಆಸಿಫ್‌ಖಾನ್ ಸಾಹೇಬರನು ಹುಲಿಯಬಾಯಿಯಿಂದ ಬಚಾವ ಮಾಡಿ, ಅದರ ಜೊತೆಗೆ ಖುದ್ದಾಗೆ ಹೊಡೆದಾಡಿ ಕೊಂದುಹಾಕಿದ್ದನ್ನ ನಮ್ಮಜ್ಜ ನಾ ಸಣ್ಣವನಿದ್ದಾಗ ಕತಿಮಾಡಿ ಹೇಳ್ತಿದ್ದ. ಆತನ ಕತಿಕೇಳಿ ಕೇಳಿನ ನಾ ಬ್ಯಾಟಿ ಆಡೋದನ್ನ ಕಲ್ತಿದ್ದು. ಮೀಟು ಬುಕ್ಯಾ ಕರೆಮತೋಟ್ ಕತೆಯನ್ನು ಸವಿಸ್ತಾರವಾಗಿಯೇ ಹೇಳಿದ್ದ. ಹೌದದು ನಾವು ಮೀಟು ನಾನಾನ ಕತೆಗಳನ್ನು ಬಹಳಷ್ಟು ಕೇಳಿವಿ ಬಿಡ್ರಿ ಅವರ ಹಂಗ ಹುಲಿಹೆಜ್ಜೆ ಕಂಡುಹಿಡಿದು ಕೊಲ್ಲುವ ಗಂಡಮಗ ಜಗತ್ನಾಗೆ ಇಲ್ಲ" ಕಾರಬಾರಿ ತನಗ ತಿಳಿದಷ್ಟನ ಹೇಳಿದ.

ಜುಕ್ಕಜುಲ್ಮಿಯಿಂದ ಕಡವೆಯನ್ನ ಮಜಬೂತಾದ ಸೋಮನಾಯ್ಕನ ಕುದುರೆಯ ಮೇಲೆ ಅಡ್ಡಡ್ಡ ಹಾಕಿ, ಸೋಮ್ಲ ಕಂತುಸವಾರಿ ಮಾಡಾಕ ಜಾಗಬಿಟ್ಟ ತಮ್ಮ ತಮ್ಮ ಕುದುರೆಗಳನ್ನೇರಿ ತಾಂಡಾದ ಕಡೆಗೆ ಪ್ರಯಾಣಬೆಳೆಸಿದರು. ಸೂರ್ಯ ಗುಡ್ಡದ ನರೆಳಿನೊಳಗೆ ಇಳಿದಿದ್ದ ಕಡವೆ ನೋಡಿ ತಾಂಡದ ಮಂದಿ ನಾಮುಂದ ನೀಮುಂದಂತ ಮುಗಿಬಿದ್ರು. ಹಟ್ಟಿನಾಯಕ ಸೋಮ್ಲ ಬುಕ್ಕಾ ಕರಮತೋಟ್ ನ ಗುಡಿಸಲು ಪಕ್ಕದ ದನದ ಕೊಟ್ಟಿಗೆ ಯೊಳಗೆ ಸಪ್ಪುಹಾಕಿ ಕಡವೆಯನ್ನ ಇಳಿಸಿದ್ದೇತಡ ಮಂದಿ ಮಚ್ಚ ಬಾಕು ಚೂರಿ ತಗೊಂಡು ಪಾವಾಡಕಬಂದೆಬಿಟ್ರು. ತಮಟೆಹೊಡೆಯೋ ಡಲಿಯ ರಾಮುನಿಂದ ಹಿಡಿದು, ಸೋನಾರ್ ಚಿನ್ಯಾ, ಡಾಢಿ ಜಗನು ಪರತಿಯೊಬ್ಬರ ಪಾಲು ಮಾಡಲಗಿತ್ತು. ಹಟ್ಟಿನಾಯಕ ಸೋಮ್ಲುಬುಕ್ಯಾ ಕರಮ್‌ತೋಟ್‌ಗೆ ಒಂದು ಗುಂಡಿಪಾಳೊಹಡಕ (ದೊಡ್ಡನಲ್ಲಿ ಎಲುಬ) ಡಾವೊಣೆಗೊಂದು ಕಾರಭಾರಿದೊಂದು ನಲ್ಲಿ ಹಂಚಿ ಆದ ಮೇಲೆ ತಂಡದ ಮುಖಂಡರಿಗೆ ಸೊಮ್ಲುನೆ ಹೇಳಹಾಕಿಸಿದ. ಕುಲದ ರಿವಾಜಿನಂತೆ ಬಿಟ್ಟಗಳಿಂದ ಪರಾಯಕುಂಬಗಳನ್ನು ತರಿಸಿ ಒಂದೊಂದು ಮಡಕೆ ಸೆರೆ ಹಂಚಿ ಒಂದೊಂದು ಎಲೆಯ ಮೇಲೆ ಬಂಜಾರರಲ್ಲಿ ಮಾತ್ರವೇ ಮಾಡುವ ವಿಶೇಷ ಭೋಜನವಾದ ಸಳೋಯಯನ್ನ (ಬೋಟಿ) ಯನ್ನ ಹಂಚಲಾಯ್ತು. ಮನೆಗೊಂದು ಥಾಕಣಿಯಂತೆ ತಾಂಡದ ಮೂವತ್ತು ಮೆನಗಳಿಗೆ ಫೇರೆರರಸ್ಸ (ಸೇರು) ಹಂಚಿದ ಮೇಲೆ ಎಲ್ಲವೂ ಸುಸೂತ್ರವಾಗಿ ಮುಗಿತು ಅಂತ. ಧನ್‌ಸಿಂಗ್, ಸ್ವತಃ ತಾನೆ ಮುಂದೆ ನಿಂತು ಹೆಚ್ಚು ಕಡಿಮೆ ಯಾಗದಂಗೆ ಮುತುವರ್ಜಿವಹಿಸಿದ್ದಕ್ಕೆ ಗಲಾಟೆ ಏನು ಆಗಲಿಲ್ಲ. ಅದು ಅಲ್ಲದೆ ಇದಕ್ಕೆ ಯಾರೊಬ್ಬರು ಹಂಚಿಕೆಯನ್ನು ಹಾಕಿರಲಿಲ್ಲವಾದ್ದರಿಂದ ಹಕ್ಕೊತ್ತಾಯದಿಂದ ಕೇಳುವ ಹಕ್ಕನ್ನ ಕಳ್ಕೊಂಡಿದ್ರು. ಇಲ್ಲದಿದ್ದರೆ ಕುಡಿದ ಅಮಲಿನೊಳಗ ಯಾರಾದರೂ ಒಬ್ಬರು ಜಗಳತಗದೆ ತಗಿಯುತ್ತಿದ್ದರು.

ಧನ್‌ಸಿಂಗ್ ಬುಕ್ಯಾಕರಮತೋಟ್ ಹೆಚ್ಚು ಕಡಿಮೆ ಎಲ್ಲಾ ರೀತಿಯ ವ್ಯವಹಾರವನ್ನು ಕಲಿತಿದ್ದ. ಹೆಣಸ ಬದಲಾವಣೆಯ ಸಂದರ್ಭದಲ್ಲಿ ಅತಂಕ್ರವಾಗಿದ ತನ್ನ ಮನೆತನ ಬದುಕನ್ನ ಮತ್ತೆ ಪುನರ್‌ಸ್ಥಾಪಿಸುವ ಆಲೊಚನೆಯಲ್ಲಿದ್ದ. ಕಳ್ಳಭಟ್ಟಿ ಸರಾಯಿ ಅಂತಹದ್ದೇನು ಲಾಭ ತಂದುಕೊಡುವ ಉದ್ಯೋಗವಾಗಿರಲಿಲ್ಲಾ. ಇನ್ನು ಕಳ್ಳತನದಿಂದ ಕಾಡಿನೊಳಗಿನಿಂದ ಒಣಕಟ್ಟಿಗೆಗಳನ್ನು ಸಂಗ್ರಹಿಸಿ ಹೊತ್ತುಮಾರೋದು ಇನ್ನೂ ಅಪಾಯದ ಕೆಸಲ. ಸ್ವಾಭಿಮಾನದ ಬದುಕನ್ನು ಬದಕೋದು ಹೇಗೆ ಎಂದು ಆಲೋಚಿಸಿ ತೊಡಗಿದ. ಅವರ ಒಡನಾಟದಲ್ಲಿದ್ದ ಹಾನಗಲ್ಲಿನ ಹುಸೇನಿ, ಮೂಲಿಮನಿ ಈಗ, ರಾಚೋಡಿ ಯರನ್ನು ಭೆಟಿಟಯಾಗಿ ವಿಷಯ ಪ್ರಸ್ತಾಪ ಮಾಡಬೇಕೆಂದು ಕುದುರೆ ಹೊರಗೆ ತಗದಿದ್ದ ದೂರದಲ್ಲಿ ಕುದುರ ಕಾಲು ಸಪ್ಪಳ ಕೇಳಿದ್ದೆ. ಕೂಹೂ ಅಂತಧನಿ ತಗದ. ಕ್ಷಣಾರ್ಧದಲ್ಲೇ ಬ್ರಿಟೀಷರ ಅಧಿಕಾರಿ ಈ ಕಡೆಗೆ ಬರುತ್ತಿರುವ ಮುನ್ಸೂಚನೆಯನೀಡಿದ. ಮೂವತ್ತು ಮನೆಗೆ ಓಡಿಹೋಗಿ ತಯಾರಿಯಲ್ಲಿ ಇರೋದಕ್ಕೆ ಕೇಳಿದ. ಮಕ್ಕಳು ಕೈಗೆ ಸಿಗುವ ಸಮಾನು ಅಷ್ಟೆ ಅಂದ. ಕಾವಲುಗಾರರು ಕೂಹೂ ಎಂದಾಗ ಕೊನೆಯಮನೆಯಲ್ಲಿದ್ದ ಧ್‌ನ್ ಸಿಂಗ್ ವಾಪಸು ಅಧೇ ಧನಿಯೊಳಗೆ ಕುಹೂ ಎಂದ. ಬ್ರಿಟೀಷರಕೆಂಪು ಮನುಷ್ಯನೆ ಹಿಂದೆ ಸೈನ್ಯವಿತ್ತು. ತಾಂಡದಮಾರ್ಗಕ್ಕೆ ಬರದೆ ದಿಕ್ಕು ಬದಲಿಸಿ ದಟ್ಟ ಅಡವಿಯೊಳಗೆ ಪ್ರವೇಶಮಾಡಿದ್ದುನೆ ಅಂತ ಸುದ್ದಿ ಮುಟ್ಟಿಸಿದ. ಧನ್‌ಸಿಂಗ್ ಸ್ವಲ್ಪ ಸಮಾಧಾನ ಪಟ್ಕೊಂಡು ಅವರ ಈ ಆವಸ್ಥೆಗೆ ಮರುಕಪಟ್ಟ. ಯಾಕೆ ನಮ್ಮದೆ ನೆಲದಾಗ ನಮ್ಮನ್ನ ನಿಲ್ಲಾಕ, ಯಾರೋ ಹೊರಗಿನಿಂದ ಬಂದ

ದೊಣ್ಣೆನಾಯಕನ ಅಪ್ಪಣೆ ಪಡಿಬೇಕು. ತಲಯೊಳಗೆ ಯೋಚನೆ ಕೊರೆಯತೊಡಗಿತು. ಕೆಂಪಮಂದಿ ಸೂಳಿಮಕ್ಕಳು ಬರಾಕಮದ್ಲು, ಎಂಥ ವ್ಯಾಪಾರ ನಮ್ಮದು. ಅವರಿಂದಾಗಿಯೇ ನಮಗ ಈ ಕೆಟ್ಟದಿನಗಳು ಬಂದಿಕೊಣದು. ಧನ್‌ಸಿಂಗ್‌ನ ಆಲೋಚನೆಗಳಿಗೆ ಕೊನೆ ಎಂಬೋದೆ ಇರಲಿಲ್ಲ. ಇವುಗಳಿಗೆ ಉತ್ತರ ಕಂಡುಹಿಡಿಯಾಕ ಬೇಕಂತ ಹಠಹಿಡಿದೆ. ಹೊಂಟವನಿಗೆ ಮತ್ತೆ ಬ್ರಿಟೀಷ್ ಮಂದಿಗೆ ಅಡ್ಡಗಾಲು ಹಾಕಿದ್ದು ಬೇಸರತಂದಿತ್ತು.

ಸಾವುಕಾರ ಮಲ್ಲಪ್ಪ ಅದಿಕೃತವಾಗಿಯೇ ತಾಂಡಕ್ಕೆ ಬರತೊಡಗಿದ ಅವನ ಮಗ ಹೊಂದೊಮ್ಮೆ ಹೆದರಿ ಓಡಿಹೋದವನು ಈಗ ಹುಲಿಯಂತೆ ರಾಜಾರೋಷವಾಗಿಯೇ ಬೇರೆಮನಿಗ ಬರೋದು ಹೋಗೋದು ನಡೆಸಿದ್ದ. ಮುದಿಯ ಮಲ್ಲಪ್ಪನೂವೆ ಕೆಂಪುಲಂಗದ ಲಮಾಣ್ಕೇರ ಹುಡುಗಿಯರನ್ನ ನೋಡಿ ಜೊಲ್ಲುಸುರಿಸಿದ್ದು, ಸೋಮ್ಲ ಬುಕ್ಯಾನ ಕುಟುಂಬದೊಡ್ಡದು ಮೂವತ್ತರಲ್ಲ ಇಪ್ಪತ್ತೈದು ಮನಿಗಳು ಕರವು ತೋಟರವೆ ಅಂತೇಳಿ ಗೊತಾಗಿ ಅವರ ಸುದ್ದಿಗ ಹ್ವಾದ್ರ ಹೆಡಮುಗಿ ಕಟ್ತಾರಂತ ಗೊತ್ತಾಗಿಯೇ ಅವರನ್ನ ಬಿಟ್ಟು ಕಡಬಡವ ಬದ್ಯಾಬಡ್ತ್ಯಾನ ಮನಿಯೊಳಗ ಮೈನೆರೆತ ಇಬ್ಬರು ಹುಡುಗಿಯರು ಇರೋದನ್ನ ಗಮನಿಸಿ, "ಏನ್ಲ ನಾಯ್ಕ ನಾ ಯಾರಂತ ಗೊತ್ತೇನು?" ಕೇಳಿದ. "ಕುಣತೂ?" ಬದ್ಯಾ ಕೇಳಿದ" ಲೇ ಏನಂತನ್ಲೆ ಈ ಲಮಾಣ್ಯಾ. ನನ ಬಗ್ಗೆ ಹೇಳ ಅವನಿಗ ಆಟು". ಅವನ ಹಿಂದೆ ಸೇರಿಕೊಂಡಿದ್ದ ತಾಂಡದ ಬುದ್ನಾಗ ಹೇಳಿದ. "ಏಯ್ ಮೊಚಾಪು ಕಾಯಿ ಹೈಂಕೆಚ್ಚಿತು, ಈ ತೊ ಮೊಟೋ ಸಾವ್ಕಾರ ಹಾವರಾತಡಕ ಆದ್ಮೀ ಜ ಎರ್‌ಫಾಯಿಅವಚ್. ಅಪಣತಾಂಡೊ ಬಚಾಟ ಕೊ ಈಜ ಮಾರಾಜ ಹಾವಬಾಪು ಈಜ್" (ಏಯ್, ದೊಡಪ್ಪ ಎನಂಗಂತೀಯಾ, ಇವರು ದೊಡ್ಡಸಾವುಕಾರು, ಕೆಂಪಮಂದಿನ ಇವರ ತಾವ ಬರ್ತಾರ, ನಮ್ಮ ತಾಂಡದೊಳಿಸಿದ ಮಹಾರಾಜ ಇವ್ರೇ) "ಹಾವಾಕ ಬೇಟೆ' ಸದ್ಯಾ ಅಂದವನೆ ತನ್ನ ಹುಕ್ಕಕೇ ತಂಬಾಕು ತುಂಬಿ ಬೆಂಕಿಹಚ್ಚಿ ಗುಡ್, ಗುಡ್, ಅಂತೇಳಿ ಎಳಿಯತೊಗಿದ. ಏನ ಹೇಳಿದ್ಲಾ ಅಂವ ವನೂ ಪ್ರತಿಕ್ರಿಯೆ ಮಾಡ್ತಿಲ್ಲ. ಸಾವುಕಾರ ಕೇಳಿದ. "ಭಾರಿ ಹೇಲಿನ್ರಿ ಧಣಿಯೋರ, ಈ ಜಗಕ್ಕ ನಿಮ್ಮ ತಾಕತ್ತಿನ ಅಂದಾಜು ಏಟೋಟು ಇಲ್ರಿ"? ಅವನ್ನ ದಿಕ್ಕ ತಪ್ಪಿಸಿದ್ದ." ಏನಮಾಡಂದಿನನ್ನ " ಸಾವುಕಾರ ತಯಾರಾದ. ನಾ ಹೇಳಿದಂಗ ಮಾಡ್ರಿ, ಈ ಮುದ್ಕಗ ಕುಡಿಯಾಕ ನಾಕ ಪೈಸ ಬಿಸಾರಿ ಆವ್ಯಗಿಂದ ನೋಡಿ" ಮುದುಕನ ಬಡತನದ ಪಾಯಿದೆ ತಗೊಳಾಕ ಹೇಳಿದ ಬುದ್ನಾ. ಮಲ್ಲಪ್ಪ ಹಿಂದ ಮುಂದ ನೋಡದೆ, ಕಿಸೆದಾಗಿಂದ ಎರಡು ಬೆಳ್ಳಿ ನಾಣ್ಯಗಳನ್ನು ತಗದು, "ಏಯ್, ನಾಯಕ ತಗಳೂ, ಮಜಮಾಡ್ಕ" ಅವನ ಕಟಿಗ ಬಿಸಾಡಿದ. ಬೆಳ್ಳಿ ನಾಣ್ಯ ನೋಡ್ತಿದ್ದಂಗೆ, ಮುದ್ಕಗವನ ಮಾಡಾಕ ತಿಳಿಯಲಿಲ್ಲಾ ಹುಕ್ಕ ಬಿಟ್ಟವೆನ. ನಗ್ಯಾ ಎತ್ಕೊಂಡು. "ಬರ್ರೆ ಸಾವು ಶರ ಮಾಯಿ ಬರ್ರೆ" ಕರವ, ಬೆಟಚಂದ್ರ ಸಾವುಕಾರೇನ ತಾಯಿ ಚಾಂವದೇಕ ಮ ಹ ಚಾಲ ಜಾನವುಚು" ಅಂದವನೆ ಹೊರಗ ಹೋದ. ಗೊಂಬಿಯಂತ ಹದಿನೈದರ ಚಂದ್ರಿ ಹೊರಗ ಬಂದಾಗ ಸಾವುಕಾರ ಮಲ್ಲಪ್ಪನ ಎದಿಬಡಿತ ನಿಂತಂಗಾಗಿತ್ತು. ಅವನ ಎರಡನೇ ಮೊಮ್ಮಗಳು ಅನಸೂಯನಂಗೆ ಇದ್ಲು ಆದ್ರ ನಾಚಿಗೇಡಿ ಸಾವುಕರಗ ಅದೇನ ಅನಿಸಿತೋ ಚಂದ್ರಿಕ ಐದಾರು ಬೆಳ್ಳಿನಾಣ್ಯದ ಆಸೆ ತೋರಿಸಿದ.

ಬುದ್ನಾನಂತ ಭಾಡಕಾವ್‌ಗಳು ತಾಂಡದ ಹೆಣ್ಣು ಹುಡುಗಿಯರ ತಲಿಹಿಡಿತಿರೋದು ಧನ್‌ಸಿಂಗ್‌ಗೆ ಗೊತ್ತಾಗಿ ಬಹಳ ಬೇಸರ ಪಟ್ಕೊಂಡ. ಈ ಮಂದಿನ ಸುಧಾರಿಸೋದಾರು

ಹ್ಯಾಂಗಂತ ಹಗಲು ರಾತ್ರಿ ಕಲಿಕೆಡಿಸಿಕೊಂಡಿದ್ದ. ಹೆಂಗಾನಮಾಡಿ ಮಂದಿನ ದುಡಿಯಾಕ ಹಚ್ಚಬೇಕು. ಏನು ಉಪಾಯ ಮಾಡೋದು ಅಂದವನೆ, ಅವನಂಗೆ ಆಲೋಚನೆ ಮಾಡ್ತಿದ್ದ ಕೇಳು. ಪೀರ್ಯಾ, ಮಂಗ್ಲ್ಯಾ, ಥಾವುರನ್ನ ಸೇರಿಸಿದ. "ತಾಂಡ ಕೆಟ್ಟಕೆರಹಿಡಿತು. ಅಲ್ರತೀ, ಈ ಸೋಮಾರಿನನ ಮಕ್ಕಳು ಕಷ್ಟಪಟ್ಟು ದುಡಿಯೋದಿಲ್ಲ ಅಂತಾರಲ್ಲ." ಸೂಕ್ಷ್ಮವಾಗಿಯೇ ವಿಷಯ ಪ್ರವೇಶವಮಾಡಿದ್ದ ಧನ್‌ಸಿಂಗ್, ಅದ್ದನ್ನೆ ಕಾಯ್ತಿದ್ದ ಥಾವು, ನಾಳೆ ನಮ್ಮ ಹೆಂಡ್ರು ಹಿಂಗಾಗಿಬಿಟ್ವಾರನ್ನೋ ಆತಂಕ. ಊರ ಮಂದಿ ಹೊತ್ತು ಗೊತ್ತಿಲ್ಲದೆ ಗುಡಿಸಲು ಹೊಕ್ಕೋಂತಾರ ಏನಪ್ಪ. ಅಷ್ಟೆ ಅಲ್ಲ ಯಾವನೋ ಕೊಟ್ಟಿಗೊ ಕಾಸಿನೊಳಗ ಮಾಡ್ತಿರೊ ದಿಮಾಕ ನೋಡಿ ನಾಳೆ." ಅವನ ಅನುಮಾನ ಸಹಜವಾಗಿಯೇ ಇತ್ತು." ಇದಕ್ಕ ಏನಪ್ಪ ಪರಿಹಾರ ಮಂದಿನ ಮಾಡಾಕ ಕೆಲ್ಸಬಗ್ಸಿ ಇಟ್ಟಿರೋದು. ಒಂದು ಕಾರಣ, ಯಾಕನಾವು ಜಮೀನ ಮಾಡ್ಕಬಾರದು? ಧನ್‌ಸಿಂಗ್ ಸವಾಲನ್ನ ಮುಂದಿಟ್ಟ, ಜಮೀನು "ನಮ್ಮಪ್ಪಂದಿರಂತು ಮಾಡಿಟ್ಟಿಲ್ಲ, ಈ ಕಾಡಡವಿಯೊಳಗ ಎಲ್ಲ ಜಮೀನ ತರ್ತಿಯಾ" ಮಂಗ್ಲ್ಯಾ ಕೊಂಕಾಡಿದ. "ನನಗೊತ್ತು ನನಮಕ್ಕಳ್ರ್ಯಾ ನೀವೆಲ್ಲ ಹಿಂಗ ಹೇಳ್ತಿರಂತ. ನಮ್ಮ ಮುಂದಿರೋ ಲಕ್ಷ್ಯ ಅದೊಂದೆ. ತಾಂಡದ ಜನರನ್ನ ಹೇಗಾರು ಮಾಡಿ ಉಳಿಸಕಬೇಕು. ನನಗ ಒಂದು ಉಪಾಯ ಹೊಳದೈತೆ", ಗಪ್ಪಾದ ಧನ್‌ಸಿಂಗ್, ಏನಲೆ ಅಂತ ಉಪಾಯ ನಮಗು ಒಸಿಹೇಳು" ಶೇಕ್ರ ಕುತೂಹಲ ತಡಿಯಾಕ ಆಗದೆ ಕೇಳಿದ. ಈಗಲ ಹೇಳಿದ್ರ ನನಮಕ್ಕಳ್ರ್ಯಾ ತಾಂಡದ ತುಂಬಾ ಟಾಂ ಟಾಂ ಬಾರ್ಸಿ ಇರೋ ಉಪಾಯಾನ ಹಾಳುಮಾಡಿ ಇಟ್ಟ ಬಿಡ್ತಿರಿ. ಸಮಯಬರ್ಲಿ ಮುಚ್ಕೊಂಡಿರ್ರಿ" ಅಂತ ಎಲ್ಲರ ಬಾಯಿ ಮುಚ್ಚಿಸಿದ. ಆದರೆ ತಾಂಡದಲ್ಲಿ ನಡೆಯುತ್ತಿದ್ದ ಅಕ್ರಮ ಸಂಬಂಧಗಳನ್ನು ತಡೆಗಟ್ಟೋದು ಅಲ್ಲದೆ ಕುಡದು ಸಾಯುತ್ತಿರೋ ಗಂಡಸರನ್ನ ಕುಡಿಯೋ ಚಟದಿಂದ ವಿಮುಕ್ತಿ ಗೊಳಿಸಿ ಅವರನ್ನ ಮತ್ತೆ ವಾಪಾಸ್ಸು ತರೋದು ಬಹಳ ಅವಶ್ಯವಾಗಿತ್ತು. ಮಲ್ಲಪ್ಪ, ಅವನ ಮಗ ಸಿದ್ದ, ಅವನ ಹಿಂದಿನ ಆಳಗಳು ತಾಂಡವನ್ನ ಪ್ರವೇಶ ಮಾಡದಂಗೆ ಮಾಡೋದು ಧನ್‌ಸಿಂಗ್ ಬುಕ್ಯಾನ ಆಲೋಚನೆಯಾಗಿತ್ತು.

ಮತ್ತೊಂದು ಕಡೆ ಬ್ರಿಟಿಷರು ಯಾವಾಗ ತಾಂಡಪ್ರವೇಶಮಾಡಿ ಕಾಡಿನ ನಡುವೆ ಇರೋದಕ್ಕೆ ಯಾರು ಅಧಿಕಾರ ಕೊಟ್ರು. ಹೊರಗಡೆ ಹೋಗಿ ಅಂತ ದಬ್ಬುವ ಅಸ್ಥಿರತೆಯುಕಾಡಿತ್ತು. ಆ ಮಕ್ಕಳು ಮಾತೆತ್ತಿದರೆ ಬಂದೂಕು ರಕ್ತಪಾತ ಅಂತಾರೆ. ಸೋಮ್ಲು ಬುಕ್ಯಾ ಕರಮಟೋಟ ಬದಲಾಗುತ್ತಿರುವ ಸನ್ನಿವೇಶವನ್ನ ಕಂಡು ನಿಬ್ಬೆರಗಾಗಿದ್ದ. ಅವನ ನಡೆ ಏನಾಗಿರಬೇಕೆಂಬುದು ಅವನಿಗೆ ತಿಳಿಯದಾಗಿತ್ತು. ನಮ್ಮಂದಿ ಮುಂದಿನ ಭವಿಷ್ಯ ಏನು? ಯೋಚಿನೆ ಮಾಡಿದರೆ ಯಾಕೋ ಹೆದರಿಕೆ ಆಗ್ತಿದೆ ಕಾರಭಾರಿ" ಅವನ ಸಂಬಂಧಿ ಕಾರಬಾರಿಯನ್ನ ಕೇಳಿದ. ಏನೋ, ಆ ದೇವ ಕೃಪೆ ಐತೆ ನಮ್ಮ ಜನಕ್ಕೆ ಹೆಂಗೋ ಬದಕೊಂತವೆ ಬಿಡಿ" ಕಾರಬಾರಿ ಸಮಾಧಾನ ಪಡಿಸಿದ್ದ, ಆದರೆ ತೂಗು ಕತ್ತಿ ನೆತ್ತಿಯ ಮೇಲೆ ತೂಗಾಡುತ್ತಿದೆ. ಅಂತ ಅವನಿಗೂ ಅನಿಸದೆ ಇರಲಿಲ್ಲಾ ದೇಸುನಾಯ್ಕನ ತಾಂಡದ ಮಂದಿಗೆ ಆತಂಕ ಆಗಿದ್ದಂತು ನಿಜ. ಯಾವಾಗ ಏನಾಗಿತ್ತೊ ಎಂಬ ಭಯ ಒಂದು ಕಡೆಯಾದರೆ ತಮ್ಮ ತಾಂಡದೊಳಗೆ ಕೋರಿತ್ಯಾಗಳು ಪ್ರವೇಶಿಸಿ ತಮ್ಮ ಹೆಂಡರು ಮಕ್ಕಳನ್ನು ಪೀಡಿಸುತ್ತಿರುವುದು ಇನ್ನೊಂದು ಆತಂಕದ ಸುದ್ದಿಯಾಗಿತ್ತು.

ಧನ್‌ಸಿಂಗ್ ಹೆಂಡತಿ ಸೀತ್ಕಿಗೆ ಹೆರಿಗೆ ನೋವು ಕಾಣಿಸಿಕೊಂಡಾಗ ಖುಷಿಪಟ್ಟಿದ್ದು ಅವನ ಅಜ್ಜಿ ಸೋಮ್ಲಿ, ತನ್ನ ಕರಮತೋಟ್ ವಂಶದ ಕುಡಿಯೊಂದು ಮತ್ತೆ ಭವಿಷ್ಯದ ಭರವಸೆಯನ್ನು ಮೂಡಿಸಿತ್ತು. ಸೋಮ್ಲ ಕಾರಬಾರಿಕೂಡ ಬಹಳ ಖುಷಿಪಟ್ಟಿದ್ದರು. ಇಡಿತಾಂಡತುಂಬ ಅದೇಣಂದು ದೊಡ್ಡ ಸುದ್ದಿಯಾಗಿತ್ತು. ಧನ್‌ಸಿಂಗ್ ಮಾತ್ರ ಸಾವುಕಾಖ ಮಲ್ಲಪ್ಪನನ್ನ ಹೇಗಾದರೂ ಮಾಡಿ ಬುದ್ನಾನನ ಮಗಳು ಚಂದ್ರಕೂಡ ಚೋವನ್ನ ಹಿಡಿದು ತಾಂಡ ಸಲುವಾಗಿ ಅವನನ್ನ ಆಟ ಆಡಿದ ಬೇಕಂತ ನಿರ್ಣಾಯಿತಿ, ಚಂದ್ರಿಗೆ ಮದಲೆ ವಿಷಯ ತಿಇಸಿ ಬಲೆಯನ್ನ ಬಿಸೋದಕ್ಕೆ ಸಜ್ಜಾದರು. ಈ ಪಟ್ಟು, ಸಾಹುಕಾರನ ಚೇಲ ಬದ್ವನಾಯ್ಕನಿಗೂ ಚೆಳ್ಳೆಹಣ್ಣು ತಿನಿಸಿದ್ದ. ಸಾವುಕಾರ ಚಂದ್ರಕೂಡ ಏಕಾಂತದಲ್ಲಿರುವ ಸಮಯವನ್ನ ಕಂಡುಹಿಡಿಯಲು ತುಂಟರ ಪಡೆಯೊಂದನ್ನ ನೇಮಿಸಿದ್ದು. ಅವನ ಹೆಂಡತಿ ಗಂಡು ಮಗುವಿಗೆ ಜನ್ಮಕೊಟ್ಟ ಸುದ್ದಿಯನ್ನು ಖಾಸೇರಥಾಳಿಯನ್ನ ಬಾರಿಸಿ ಯಾರತುಂಬ ಸುದ್ದಿಮಾಡಿದ್ದನ್ನ ಕೇಳಿ ಧನ್‌ಸಿಂಗ್ ಹುಡುಗರಿಗೆ "ಎಚ್ಚರಿಕೆ ಕಣ್ರಲೆ ಇವತ್ತು ಮಿಕ ತಪ್ಪಿಸಿಕೊಳ್ಳಬಾರದು. ಒಂದ ವೇಳೆ ಹಾಗೇನಾದರೂ ಆಯ್ತು ನಮ್ಮ ತಾಂಡ ಉಳಿಯಾಕಿಲ್ಲ." ಅಂತ ಹೇಳಿದವನೆ ಮನೆಗೆ ಓಡಿದ. ಸೀತ್ಕಿ ಸೋತುಸುಣ್ಣಾವಾಗಿ ಮಲಗಿದ್ದಳು. ಮಗುವನ್ನ ಸ್ನಾನಕ್ಕೆ ಒಯ್ಯಲಾಗಿತ್ತು. ಅವಸರದಿಂದ ಗುಡಿಸಲು ಪ್ರವೇಶಿಸಲು ಹವಣಿಸಿದ. ಸೋಮ್ಲಜ್ಜಿ" ಎ ಕಳ್ಳ ಅವಸರನೋಡು, ಮಾಡೋದ ಮಾಡಿ ಈಗ ನಾಚ್ಕೊಂತಿಯ. ಹೊರಗಡೆಯಿಂದ ಬಂದಿಯ, ಗಾಳಿಧೂಳಿಮೆಟ್ಕೊಂಡು, ಬಾಣಂತಿ ಹತ್ರಹೋಗಬ್ಯಾಡ. ಅವಳಿಗೆ ಸ್ನಾನ ಮಾಡಿಸಿ, ಎಲ್ಲಾ ಆದಮ್ಯಲ ನೀನು ಸ್ನಾನಮಾಡ್ಕೊಂಡು ಒಳಗೆ ಬಾ" ಹೊರಗ ಹಾಕಿದ್ಲು." ದಾದಿಮಾ, ಇದೇನ ಅನ್ಯಾಯ", ಅಂದವನೆ ವಾಪಾಸುಗುಡ್ಡದ ನಳಕಿನಲ್ಲಿರುವ ಹೊಂಡಕ್ಕೆ ಹೊರಟ. ಮಂಗ್ಲ್ಯಾ ಅವನ ಕುದುರೆಗೆ ಅಡ್ಡವಾಗಿ ಓಡಿ ಬರ್ತಿರೋದನ್ನ ಗಮನಿಸಿದ ಧನ್‌ಸಿಂಗ್, ಕುದುರೆಯನ್ನು ನಿಲ್ಲಿಸಿದ. "ಏನಪ್ಲೆ, ಯಾಕಿಂಗೆ ನಿಧಿಸಿಕ್ಕೊದಂಗೆ ಓಡಿಬರ್ತಿದ್ದಿಯಾ" ರೇಗಿಸಿದ. "ಥು ನಿನಮಂಜಾಳಾಗ, ನಿಧಿ ಅಲ್ಲಲೆ ಅದಕ್ಕಿಂತಲೂ ದೊಡ್ಡದು, ಹೂಂ>" ಅಂತ ಸನ್ನೆ ಮಾಡಿದ. ಅವನನ್ನ ಹಿಂದೆ ಕೂಡಿಸಿಕೊಂಡು ಬುದ್ನಾನ ಮನೆ ಕಡೆಗೆ ಹೊರಟ. ಎಂದಿನಂತೆ ಮಂದಿಯ ಸಾವುಕಾರ ಚಂದ್ರಿ ಹತ್ತಿರ ಏನು ಕಡಿದು ಕಿಸಿಯಲು ಆಗದಿದ್ದಾರೂ ತನ್ನ ಚಟದ ಪೂರ್ತಿದೆ ಬಂದು ಆಚೆ ಈಚೆ ಗುಡಿಸಲೊಳಗೆ ಯಾರು ಇಲ್ಲದ್ದನ್ನು ಖಾತ್ರಿಪಡಿಸಿಕೊಂಡವನೆ ಚಂದ್ರಿ ಗುಡಿಸಲೊಳಗೆ ನುಗ್ಗಿದ.

ಸುತ್ತಲು ಗುಡಿಸಲುಗಳೊಳಗೆ ಅಡಗಿಕೊಂಡಿದ್ದ ಧನ್‌ಸಿಂಗ್ ಬುಕ್ಕಾನ ಹುಡುಗರು ಅವನು ಒಳಗೆ ಹೋಗಿ ದೊತ್ರ ಕಳೆಯುವವವರೆಗೆ ಕಾದು ಗುಡಿಸಲು ಸುತ್ತಲು ಕಾವಲು ಕಾದು ನಿಂತವರೆ ಧನ್‌ಸಿಂಗ್‌ಗೆ ಸುದ್ದಿಯನ್ನ ಮುಟ್ಟಿಸಿದರು. ಬದ್ಯಾನಾಯ್ಕ ವಿಸಳಾವರ್ ಸಾಮಾನಾಯ್ಕನ ಮನಿಯೊಳಗೆ ಆರಾಮವಾಗಿ ಭಟ್ಟಿ ಸಾರಾಯಿಯನ್ನ ಮಡಿಕೆಗಟ್ಟಲೆ ಏರಿಸಿ ಹುಕ್ಕ ಸೇವತೊಡಗಿದ್ದು. ಸಾವಕಾರ ಒಂದೆರಡಗಂಟೆ ವಂದೇನು ಹೊರಗ ಬರಂಗಿಲ್ಲ ಅಲ್ಲಿ ವುಟ ಇಲ್ಲೆ ಠಿಕಾಣಿಹೊಡದ್ರಾತಂತ ಅಲ್ಲೇ ಜಮಾಯಿಸಿದ್ದ. ಅವನನ್ನ ಇನ್ನೂ ಹೆಚ್ಚು ಕುಡಿಸಿ ದಿಕ್ಕ ತಪ್ಪಿಸೋಕ ಕಾಳು, ಢೇನುತೊಡಗಿದ್ದರು.

ಚಂದ್ರಿಯ ಯೌವ್ವನಕ್ಕೆ ಗುಲಾಮನಾಗಿ ಹೋಗಿದ್ದ ಸಾವುಕಾರ ಮಲ್ಲಪ್ಪ, "ಲೇ ಚೆಂದ್ರಿ, ಅದೇನ ಕೆಂಪಗದಿಯೇ, ನಿಮ್ಮ ಲಮಾಣ್ಯಾರ ಹೆಂಗಸರು ಒಳ್ಳೆ ಕೆಂಪಗ ರಸಪೂರಿ ಹಣ್ಣಂಗೆ ನೋಡು. ತಿನ್ನಯಿದ್ರೆ ತಿನ್ತಾನೆ ಇರಬೇಕು. ಅದ್ರಾಗ ನೀನಂತು, ಸ್ವರ್ಗದಿಂದ ಭೂಮಿಗ ಬಂದ ಅಪ್ಸರೆಯಂತೆ ಬಾರೆ ನನ್ನ ಚಿನ್ನ." ಅವನ ಮಗನ ನೀಯತ್ತು ಸರಿಸಿದ್ದು ಮಕ್ಕಳಾಗಿದ್ದರೆ ಚಂದ್ರಿಯಷ್ಟು ದೊಡ್ಡ ಮೊಮ್ಮಗಳು ಇರುತ್ತಿದ್ದಳು. ಆದರೆ ಹಣ ಅಧಿಕಾರದ ಅಮಲು ಅಸಹಾಯಕರನ್ನ ಮರುಪಯೋಗ ಪಡಿಸಿಕೊಳ್ಳುವಂತೆ ಪ್ರೇರೆಪಿಸುತ್ತವೆ. ಅವನ ಕಿಸೆಯಿಂದ ಐದಾರು ಬೆಳ್ಳಿನಾಣ್ಯಗಳನ್ನು ತೆಗೆದವನೆ ಅವಳ ಕಡೆಗೆ ಬಿಸಾಡಿದ. ಹೂಂ ಸನ್ನೆಮಾಡಿದ. ಕಾಡಿನ ನಡುವೆ ಬೆಳೆದ ಕಾಡುಮಲ್ಲಿಗೆ ಚಂದ್ರಿ ಧನ್‌ಸಿಂಗ್ ಹೇಳಿದ್ದನ್ನ ಮರೆಯದೆ, ಅಯ್ಯೋ, ಯಾಕಿಷ್ಟು ಅವಸರ ನನ್ನೊಡೆಯ, ಇವತ್ತು ನಿಮಗೆ ವಿಶೇಷವಾದ ದಿನ. ಹೂ ತಗಳಿ ಮದಲು ಕುಡಿರಿ ಸರಯಿನ" ಮತ್ತೆ ಮತ್ತೆ ನಾಕು ಮಡಿಕೆ ಸರಾಯಿಯನ್ನ ಕುಡಿಸಿ ಅವನ ಮೈಮೇಲಿನ ಬಟ್ಟೆಯನ್ನೆಲ್ಲಾ ಬಿಚ್ಚಿಟ್ಟಳು. ಕೊರಳಲ್ಲಿದ್ದ ಬಂಗಾರ ಉಂಗುರ, ಎಲ್ಲವನ್ನು ಬಿಚ್ಚಿದಳು. ಸಂಪೂರ್ಣವಾಗಿ ಅವಳ ವಶೀಕರಣಕ್ಕೊಳಗಾದ ಮಲ್ಲಪ್ಪ ಅವಳು ಹೇಳಿದಂತೆ ಕೆಳತೊಡಗಿದ. ಅವಳನ್ನ ಬಿಗಿಯಾಗಿ ಅಪ್ಪಿಕೊಂಡು ಅವಳ ಮೈಮೇಲಿನ ಬಟ್ಟೆಯನ್ನ ಇಳಿಸಲು ದುಶ್ಯಾಸನನಂತೆ ಆವೇಷಭರಿತನಾಗಿಯೇ ಮುಂದಾದ. ಅವರ ಆಟವನ್ನ ಹೊರಗಿನಿಂದಲೇ ನೋಡುತ್ತಿದ್ದ ಧನ್‌ಸಿಂಗ್ ಮತ್ತು ತಾಂಡದವರು ಏಕಾಏಕಿ ಒಳನುಗ್ಗಿದರು. ಮಲ್ಲಪ್ಪ ಸಾವುಕಾರನಿಗೆ ಅವಮಾನದಿಂದ ಕುಡಿದಿದ್ದೆಲ್ಲಾ ಝುರ್‌ಂತ ಇಳದಂಗಾಯ್ತು. "ಏನ ಸಾವುಕಾರೆ ನೀವ ಮಾಡ್ತಿರೋದ ಸರಿನಾ. ನಾವು ಸ್ವಾಭಿಮಾನದ ಬದಕನ್ನ ಹುಡುಕುತ್ತಾ ಬಂದ ಮಂದಿ ಏನೋ ಕಾಲಚರಿದೊಳಗೆ ಸಿಲುಕಿ ಇವತ್ತು ನಿಮ್ಮಂತ ಶ್ರೀಮಂತರ ಅಡಿಯಾಳು ಆಗಬೇಕಯಿತೆ ವಿನಃ ನಾವು ಯಾರಿಗೂ ಕಡಿಮೆಯಾಗಿರಲಿಲ್ಲ. ಬ್ರಿಟೀಷರ ಗುಲಾಮ ಗಿರಿ ಮಾಡಿದ್ದಾರೆ ನೀವು ನಮ್ಮ ಜಾಗದೊಳಗೆ ಇರ್ತಿದ್ರಿ ನಾವು ನಿಮ್ಮ ಜಾಗದಾಗೆ ಆದ್ರ. ಕೆಂಪಮಂದಿ ಹಂಗಿನೊಳಗೆ ಬದುಕಬಾರದಂತೇಳಿ ಕಾಡಡವಿಯೊಳಗೆ ಕಾಲಕಳಿತಾ ಅದೀವಿ". ಮಲ್ಲಪ್ಪನ ಮೂತಿಗೆ ತಿವಿದಂಗೆ ಹೇಳಿದ. ಸಾವುಕಾರ ಬೆವತುನೀರು ನೀರಾಗಿದ್ದ, ಲೇ ಧನಸಿಂಗ, ಏನಾಗಬೇಕು ಕೇಳು ಆದ್ರ ತಾಂಡದಾಗ ಹಾಗ ಮರ್ಯಾದಿ ತಗಿಬ್ಯಾಡ." ಮಾತುಬಾರದಾಗಿದ್ದವು. ನಿಂತ ನೆಲಕುಸದ ಹಾಗಾಗಿತ್ತು. ಮೊಳಕಾಲ್ಮೂರು, ಹಾನಗಲ್ಲು, ರಾಂಪುರ, ಚಳಕೇರಿ ಕೆ.ಬಿ.ಕ್ರಾಸ್, ಮಂದಿ ಮಲ್ಲಪ್ಪ ಸಾವುಕಾರ ಅಂದ್ರ ಮಾರಿಕೆಳಗ ಹಾಕ್ಕೊಂಡು ಹೊಂಟಬಿಡ್ತಿದ್ರು. ಅವನ ಮುತ್ತಜ್ಜನ ಕಾಲದಿಂದಲು ಅನುಭವಿಸುತ್ತಾ ಬಂದಿದ್ದ ಸಂಪತ್ತು, ಅಧಿಕಾರ, ಗತ್ತು, ಗಮ್ಮತ್ತು ಪೂರ್ಣಾರ್ಧದೊಳಗೆ ಮಣ್ಣುಪಾಲು ಮಾಡಿದ್ನಲ್ಲಾ ಈ ಲಮಾಣಿ ಹುಡುಗ, ಒಳಗೊಳಗೆ ಕೆಂಡಮಂಡಲವಾಗಿದ್ದರೂ ಸಮಯಬಂದಾಗ ಕತ್ತೆಕಾಲುಕಟ್ಟಬೇಕಲ್ಲ. "ನಿನಗ, ನಿಮ್ಮ ತಾಂಡಕ್ಕ ಏನಬೇಕ ಕೇಳು, ಅಲ್ಲಪ್ಪ ಆ ಶಾನಬೋಗಗ ಹೇಳಿ ನಿಮ್ಮ ತಾಂಢ ಬಹಳ ಹಿಂದೆ ಇಲ್ಲಿತ್ತು ಅಂತ ಕಡತ ಮಾಡಿಸಲಿಲ್ವೆ". ಪುಸಲಯಿಸಿ ಪಾರಾಗಕ ನೋಡಿದ. "ನೀವು ದೊಡ್ಡೋರು ನಮ್ಮಂತ ಬಡವರ ಬದುಕಿನ ಸ್ಥಿತಿ ಅರ್ಥಮಾಡಕೊಳ್ತಿರಾ ಅಂತ ನಿಮ್ಮ ಮರ್ಯಾದಿಯಿಂದ ಹೋಗಾಕ ದೂರದ ವರೆಗೆ ಬಿಟ್ಟುಬಂದಿದ್ದ. ಆದರೆ ಅವನ ಚೇಲ ಬದ್ಯಾನಾಯ್ಕನ್ನ ಮಾತ್ರ ಸುಮ್ನೆ ಬಿಡಲಿಲ್ಲಾ. ಹಿಡುದು ಬಟ್ಟೆ ಬಿಚ್ಚಿ ಜಾಲಿಮರಕ್ಕೆ ಕಟ್ಟಿ ಬೆಲ್ಲದ ನೀರು ಹೊಯ್ದು ಬಿಟ್ಟಿದ್ರು. " ತಾಂಡದ ಹುಡುಗಿಯರ,

ತಲೆ ಹಿಡಿತೀ ಏನಲೇ ಭಠಡ್ಕತಾವ ನನ್ನ ಮಗನೆ" ಅಂತ ಬರೋರು ಹೋಗೋರೆಲ್ಲಾ ಕ್ಯಾಕರಿಸಿ ಉಗಿತಿದ್ರು.

ಸುದ್ದಿ ಒಳಗೊಳಗೆ ಬೆಂಕಿಯುಗೊಳವಾಗಿ ಉರಿಯುತೊಡಗಿತ್ತು. ಯಜಮನ ತನ್ನತಪ್ಪನ್ನೇನೋ ಒಪ್ಪಿಕೊಂಡು ತಿದ್ದಿಕೊಳ್ಳಲು ಹವಣಿಸಿದರೆ ಅವನ ಹಿಂದಿನ ಚೇಲಗಳು ಅದು, ಇದು ಅಂತ ನೂರೆಂಟು ಸುಳ್ಳುಗಳನ್ನು ಹೇಳಿ ತಲೆ ಕೆಡಿಸೋದಕ್ಕೆ ಪ್ರಯತ್ನಪಟ್ಟಿದ್ದರು. ರಾಂಪುರದಲ್ಲಿ ನಡೆದ ದೊಡ್ಡಕಳ್ಳತನ ಪತ್ತೆಗೆ ಬಂದಿದ್ದ ಪೋಲೀಸರು ಸಾವುಕಾರದ ಮನೆಯಲ್ಲೇ ಬೀಡು ಬಿಟ್ಟಿದ್ದರು. ಬಾಣಂತಿಗೆ ಖಾರದ ಸಾಮಾನಿಗಂತು ಬಂದಿದ್ದ ಸೋಮ್ಲಬೂಕ್ಯ ಮತ್ತು ಅವನ ತಾಯಿ ಅವರಸರ ಅವಸರದಿಂದಲೇ ಬೇಕ ಬೇಕಾದ ಸಾಮಾನು ಖರೀದಿಸಿ, ಸಂಜೆಯಾಗುವದರೊಳಗೆ ತಾಂಡ ಸೇರುವ ಈರಾದೆಯಿಂದ ವಾಪಾಸು ಹೊರಟಿದ್ದರು. ಅದು ಹೇಗೋ ಬ್ರಿಟೀಷರ ಸೈನಿಕನೊಬ್ಬ ಬಂಜಾರ ಹೋಗ್ತವ್ರೆ, ಅವರೆಮಾಡಿರಬೇಕು" ಅಂದಿದ್ದೆ ತಡಮ ಸೈನ್ಯದ ಕೆಲ ಪೋಲೀಸರು ಅವರನ್ನು ಬೆನ್ನುಹತ್ತಿದರು. ಸೋಮ್ಲ ಬುಕ್ಯಾ ತನ್ನ ತಾಯಿಯನ್ನ ಕುದುರೆಯ ಮೇಲೆ ಕೂಡಿಸಿಕೊಂಡು ತಾಂಡ ಬಿಟ್ಟು ವಿರುದ್ಧ ದಿಕ್ಕಿಗೆ ಓಡಿಸಿದ. ತಾಂಡದ ಕಡೆಗೆ ಹೋದರೆ ನೂರಾರು ಮಂದಿ ಬಲಿಯಾದಾರು ಅನ್ನುವ ಗುಮಾನಿ ಇತ್ತು ಅವನಿಗೆ. "ಮಗ, ನಾವು ಸತ್ತರೂ ಚಿಂತೆಯಿಲ್ಲ ತಾಂಡದಲ್ಲಿರುವ ಮಕ್ಕಳು ಮರಿಗಳಿಗೆ ಏನೂ ಆಗಬಾರದು. ತಾಂಡದ ದಾರಿ ಕೆಂಪಮಂಗ್ಯಗಳಿಗೆ ಸಿಗಲೇಬಾರದು ಹೋಗು ಮಗ, ಸೇವಾಲಾಲ್ ಮಾಡಿದ್ದಾಗುತ್ತೆ" ಮಗನ ಮನಸ್ಸಿನೊಳಗಿದ್ದ ಹೋಯ್ದಾಟವನ್ನು ದೂರಮಾಡಿದಳು. ಸೋಮ್ಲ ಅವರೆಲ್ಲರಿಗಿಂತ ವೇಗ ವಾಗಿ ಓಡಿಸಿದ ಕಾಡಿನೊಳಗೆ ಪ್ರವೇಶಿದ್ದೇ ತಡ, ಕಿರುದಾರಿಗಳ ಗುಂಟ ದೂರಹೋಗಿದ್ದ, ಪೋಲೀಸರು, ಸೈನಿಕರು ಸೇರಿಕೊಂಡಿದ್ದರಿಂದ ಅವನು ಬದುಕಿ ಉಳಿಯುವ ಅವಕಾಶಗಳು ಕಡಿಮೆಯಾದವು. "ಯಾ, ನಾವು ಸಾಯುವುದು ಖಚಿತ, ಈ ಮಕ್ಕಳನ್ನು ಐದಾರು ಜನರನ್ನಂತು ಕೊಲ್ಲಲೇಬೇಕು. ಇಲ್ಲದಿದ್ದರೆ ತಾಂಡದ ಬಗ್ಗೆ ಕೇಳಿ ಹಿಂಸೆ ಮಾಡ್ತಾರೆ. ಅಂದವನೆ ಅವಿತು ಕೊಂಡಿದ್ದ ಸ್ಥಳದಿಂದ ಒಮ್ಮೊಂದೊಮ್ಮಿಗೆ ತನ್ನ ನಡಕತ್ತಿಯಿಂದ ಇಬ್ಬರ ಮೇಲೆ ಹುಲಿಯಂತೆ ಎರಗಿಕೊಂದು ಹಾಕಿದ. ಇಬ್ಬರು ಸೈನಿಕರು ಇಲ್ಲದಾದದ್ದನ್ನ ಗಮನಿಸಿದ ಪೋಲೀಸರು ಜಾಗರೂಕರಾದರು. ಕಾಡು ಕತ್ತಲು ಆವರಿಸಿದ್ದರಿಂದ ಮನುಷ್ಯನ ಆಕೃತಿ ಸ್ಪಷ್ಟವಾಗಿರಲಿಲ್ಲ. ಇಬ್ಬರ ಸೈನಿಕರ ಬಂದೂಕುಗಳು ನಡೆಸಲು ಬಂದಿದ್ದರೆ ಇಡೀ ತುಕಡಿಯನ್ನೇ ಕೊಂದು ಹಾಕಿ ಬಿಡುತ್ತಿದ್ದ. ಆದರೆ ಬಂದೂಕು ನಡೆಸಲು ಬಾರದೆ ನಡುಕತ್ತಿಯಿಂದಲೇ ಮತ್ತಿಬ್ಬರ ಮೇಲೆ ಹಲ್ಲೆ ಮಾಡಿದ. "ಇಲ್ಲಿ, ಇಲ್ಲಿ ಅಯ್ಯೋ ಕೊಂದ" ಸೈನಿಕರ ಚಿತ್ಕಾರದ ಕೂಗಿಗೆ ಜಾಗರೂಕರಾದ ಸೈನಿಕರು ಅವನು ಜನರ ಪ್ರದೇಶದ ಕಡೆಗೆ ಗುಂಡುಹಾರಿಸಿದಳು. ಅವನ ಕೈಯಲ್ಲಿದ್ದ ಮೂವರ ಎದೆಬಗಿದು ನೆಲಕ್ಕುರುಳಿದ ಸೋಮ್ಲ. ಮಗನ ಆವಸ್ಥೆಯನ್ನು ಕಂಡ ತಾಯಿ ಇನ್ನೂ ನನ್ನ ಚಿತ್ರಹಿಂಸೆ ಮಾಡಿಯೇ ಕೊಲ್ಲುತ್ತಾರೆಂದು ಖಾತ್ರಿ ಪಡಿಸಿಕೊಂಡವಳೇ, ನೆಲಕುರುಳಿದ ಮಗನ ಕೈಯಾನ ನಡುಕತ್ತಿಯನ್ನ ಕಸಿದುಕೊಂಡವಳೇ ಮಗನ ಮೇಲಿ ಗುಂಡುಹಾರಿಸಿದ ಕೆಂಪನ ಮೂತಿಯನ ಮೇಲೆರಗಿ ಅವನ ಕುತ್ತಿಗೆಗೆ ಜೋರಾಗಿಚುಚ್ಚಿ ಕತ್ತಿಯನ್ನು ಹೊರಗಡೆ ತೆಗೆದಳು. ಕ್ಯಾಪ್ಟನ್ ಮೈಕಲ್ ಮೇಲೆ ಮುದುಕಿಮಾಡಿದ ಆಕ್ರಮಣಕ್ಕೆ ಹೆದರಿದ ಪೋಲೀಸರು ಅನಿವಾರ್ಯವಾಗಿ ಗುಂಡುಹಾರಿಸಲೇ ಬೇಕಾಯ್ತು. ಕೆಂಪು ಜನರ ನೆತ್ತರು

ಬಗೆದ ತಾಯಿ ಮಗ ತಾಂಡಕ್ಕೆ ಒದಗಿಬರಬಹುದಾದ ಅಪಾಯದ ಅಂದಾಜು ಮಾಡುತ್ತವೆ ಪ್ರಾಣಬಿಟ್ಟಳು.

ಸೌ ರಾತ್ರಿಯಾದರೂ ಮೊಳ್ಳಾಲ್ಲೂದಿಂದ ವಾಪಾಸುಬರದ ತಂದೆ ಮತ್ತು ಅಜ್ಜಿಯ ಬಗ್ಗೆ ಚಿಂತಿತನಾದ ಧನ್‌ಸಿಂಗ್, ಗಂಡಾಂತರದ ಮುನ್ಸೂಚನೆಯನ್ನು ಅನುಮಾನಿಸಿದ. ಹೆಣಗಳ ಹುಡುಕಾಟದಲ್ಲಿ ಲಂಬಾಣಿಗಳು ಬಂದೆ ಬರುತ್ತಾರೆಂದು ಅಂದಾಜು ಮಾಡಿದ ಬ್ರಿಟೀಷ್ ಧಪೆದಾರ ಮಿ. ಜಾನ್ ಹೆರಾಲ್ಡ್, ಕ್ಯಾಪ್ಟನ್ ಮೈಕಲ್‌ನ ದುರಂತ ಸಾವಿನ ಬಗ್ಗೆ ವಸ್ತು ಆರೇಳು ಸೈನಿಕರು ಸತ್ತ ಸುದ್ಧಿಯನ್ನು ಕೌಲ್‌ಸಾಹೇಬರಿಗೆ ಸುದ್ದಿ ತಲುಪಿಸಿ, ಹೆಣಗಳನ್ನು ಬಳ್ಳಾರಿಗೆ ಸಾಗಿಸಿದ್ದು ತಾಯಿ ಮಗನ ಹೆಣಗಳನ್ನು ನಾಯಿ ನರಿಗೆ ತಿನ್ನಲು ಬಿಟ್ಟು ದೂರದಲ್ಲಿ ಅಡಗಿ ಕೂತು ಅವರ ಕಡೆಯವರು ಬಂದೆ ಬರುತ್ತಾರೆಂದು ರಾತ್ರಿಹಗಲು ಕಾಯತೊಡಗಿದ. ಕಾಡೊಳಗೆ ರಹಸ್ಯ ಆಚರಣೆ ಮಾಡಿದ ಧನ್‌ಸಿಂಗ್‌ನ ಸಹಚರರು ಹದ್ದುಗಳ ಹಾರಾಟದಿಂದಲೇ ಅನುಮಾನಪಟ್ಟ ಸೋಮ್ಲ ಬುಕ್ಯ ಮತ್ತು ಅವನ ತಾಯಿ ಖಂಡಿತವಾಗಿಯೂ ಅದೇ ಜಾಗದಲ್ಲಿ ಸತ್ತಿದ್ದಾರೆಂದು ಖಾತ್ರಿಪಡಿಸಿಕೊಳ್ಳಲು ಉಪಾಯಮಾಡಿ, ರಾತ್ರಿ ಕತ್ತಲಾಗುತ್ತಿದ್ದಂತೆ ಮರಗಳಿಂದ ಮರಕ್ಕೆ ಜಿಗಿಯುತ್ತ ಯಾರಿದ್ದಾರೆ, ಏನಕ್ಕೆ ಹೀಗಾಯಿತು ಎಂದು ರಹಸ್ಯವಾಗಿಯೇ ಕಂಡುಹಿಡಿದು ಸುದ್ಧಿ ಸಂಗ್ರಹಿಸಿ ತಾಬಡತೊಬಡ ಧನ್‌ಸಿಂಗ್‌ಗೆ ರವಾನಿಸಿದರು.

ಹೆಣಗಳು ವಾರದಿಂದ ಕೊಳೆತು ಹುಳುಗಳು ಇರುವೆ ಹದ್ದು ನರಿಗಳು ಮುಕರಿದ್ದವು. ಸುತ್ತಲು ಸರ್ಪಗಾವಲು, ಹೇಗಾದರು ಮಾಡಿ ಶವಸಂಸ್ಕಾರ ಮಾಡಲೇಬೇಕು. ಆದರೆ ಬಲಿಷ್ಟ ಬ್ರಿಟೀಷರ ವಿರದ್ಧ ಹೋರಾಟ ಅಸಾಧ್ಯ. ಹೆಣಗಳು ಮಾಯವಾದರೆ ಕಾಡೆಲ್ಲ ಹುಡುಕಾಡಲು ಶುರುಮಾಡುತ್ತಾರೆ. ಧನ್‌ಸಿಂಗ್ ನಿರುಪಾಯನಾಗಿದ್ದ. ಸಾವುಕಾರನೆನಾದರು ಸಹಾಯ ಮಾಡಿಯಾನೆ ಎಂದು ಒಂದು ಪ್ರಯತ್ನಮಾಡಲು ಅವನ ಮಾವ ಕಾರಬಾರಿಯನ್ನು ಕಳುಹಿಸಿದ್ದ. ಸೇಡಿನ ಜ್ವಾಲೆಯಲ್ಲಿ ಬೇಯುತ್ತಿದ್ದ ಮಲ್ಲಪ್ಪ ಹಿಗ್ಗಾಮುಗ್ಗಾ ಬೋಯ್ದು ಅವಮಾನ ಮಾಡಿಕಳುಹಸಿದ್ದ. ಸುದ್ದಿ ಕೇಳಿ ಮತ್ತಷ್ಟು ನಿರಾಶೆಗೊಂಡ ಧನ್‌ಸಿಂಗ್, ಖುದ್ದ ತಾನೆ ಶಾನಬೋಗನ ಹತ್ತಿರ ಹೋಗಿ ತಾಂಡದ ದಾಖಲೆ ಮತ್ತು ಏನಾದರೂ ಉಪಾಯಹೇಳಬಹುದೆಂದು ಉಮೇದಿನಿಂದಲೇ ಹೋದ. “ಬುದ್ಧಿ, ಧಣೊಯೋರ” ಅಂತೇಳಿ ಕೂಗಿ, ಹೆಬ್ಬಾಗಿಲಲ್ಲೆ ಕಾದ, ಒಳಗಡೆಯಿಂದ ಏನೂ ಪ್ರತಿಕ್ರಿಯೆ ಬರಲಿಲ್ಲ ಮತ್ತೆ ಜೋರಾಗಿ ಕೂಗಿದ. ಕದ ತೆರೆಯುವ ಯಾವ ಮುನ್‌ಸೂಚನೆಯು ಕಾಣಲಿಲ್ಲ. ಬೀದಿಯಲ್ಲಿ ಅಡ್ಡಾಡ್ತಿದ್ದೋರು ಅನುಮಾನದಿಂದಲೇ ನೋಡ್ತ ಮುಂದಕ್ಕೆ ಹೋಗ್ತಿದ್ರು. ಪೋಲೀಸರು, ಸೈನಿಕರ ಕಾಟ ಬೇರೆ ಹೆಚ್ಚಾಗಿತ್ತು. ಏನು ಮಾಡಲು ತೋಚದೆ ಮತ್ತೊಮ್ಮೆ ಜೋರಾಗಿ ಕದ ತಟ್ಟಿದ. “ಯಾವನ್ಲೆ ಅವನು, ಹೊತ್ತಿಲ್ಲದ ಹೊತ್ನಾಗೆ, ಇದನ್ನೇನು ಧರ್ಮಛತ್ರ ಅಂತ ಅಂದ್ಕೊಂಡಿರೇನು”? ಗೊಣಗುತ್ತಲೆ ಬಂದು ಧನ್‌ಸಿಂಗ್‌ನ ನೋಡಿ. “ಯಾರನೀನು”? ಕೇಳಿದ ಧನ್‌ಸಿಂಗ್ “ನಾನು ಬುದ್ದಿ ದೇಸುನಾಯ್ಕನ ತಾಂಡದ ಧನ್‌ಸಿಂಗ್ ಬುಕ್ಕಾಕರಮತೋಟ. ಅದೇ ನಮ್ಮಪ್ಪ ಸೋಮ್ಲ ಬಯಕ್ಯ ತಮಗೆ ಮತ್ತೆ ಸಾವುಕಾರ ಮಲ್ಲಪ್ಪನವರಿಗೆ ಬಂಗಾರದ ವರಹಕೊಟ್ಟು ತಾಂಡದ ದಾಖಲು ಮಾಡೋದಕ್ಕೆ” ಗೋಗರದು ಕೇಳಿದ. “ಯಾವ ತಂಡ? ದೇಸುನಾಯ್ಕ ಇಲ್ಲ ಪೇಸುನಾಯ್ಕ

ಇಲ್ಲ ಅಂತ ಯಾವ ತಾಂಡಾವೆ ನಾನು ಕಡತದೊಳಗೆ ಮಹಜರ್‌ಮಾಡಿಲ್ಲ ನಡಿ" ನಾಯಿಗೆ ಗದರಿದಂಗೆ ಗದರಿದ ಜೇಷ್ಟಭಟ್ ಶಾನಬೋಗ. ಧನ್‌ಸಿಂಗ್‌ನ ಪಿತ್ತನೆತ್ತಿಗೇರಿತ್ತು ಆದರೂ ಸುಧಾರಿಸಿಕೊಂಡು, "ಬುದ್ಧಿ ದೂರದಿಂದ ಸಾವು ಬದುಕಿನ ನಡುವೆ ಹೋರಾಡ್ತಾ ಈ ಪ್ರದೇಶಕ ಬಂದೀವಿ. ನಾವು ಕೂಡ ಈ ನೆಲದ ಮಕ್ಕಳೆ, ಎನೂ ಪರಿಸ್ಥಿತಿಯ ಒತ್ತಡಕ್ಕೆ ಸಿಲುಕಿ ನುಚ್ಚುನೂರಾಗಿದೆ ನಮ್ಮಗಳ ಬದುಕು. ತಾವು ಅಕ್ಷರವಂತ್ರು, ಪಂಡಿತ್ರು ಹೀಂಗಂದ್ರ ಹ್ಯಾಂಗ, ಈಗ ನೀವನಮಗ ಗತಿ". ಅವನ ಕಾಲಿಗೆ ಧೀರ್ಘದಂಡ ನಮಸ್ಕಾರ ಮಾಡಿದ". ಛೇ ಛೇ ಪಶುಮುಂಡೇದ ಮೈಲಿಗೆ ಮಾಡಿಬಿಟ್ಟ, ಏಳು, ಅಸಹ್ಯ, ಪ್ರಾರಭ್ಧ, ಏಳು, ನೋಡ್ಲ ನಾಯ್ಕ ಯಾರ ಬಲಿಷ್ಟರಿದ್ದರೋ ಅವರ ಹಿಂದಿಕೋನ ಜಾಣ ಏನಪ್ಪ, ಈಗ ನೀನು ಅಸಾಹಯಕ ಕೈಲಾಗದವನು ನಿನ್ನ ಬಲಕಟ್ಟೆ ಘಾಯಿದೆ ಏನು? ಕೆಂಪುಮಂದಿ ವಿರೋಧಿಗಳು ನಮ್ಮಗಳ ವಿರೋದಿ. ಕೆಂಪಮಂದಿ ಶತ್ರುಗಳು ನಮಗೂ ಶತ್ರುಗಳೇ ಸುಮ್ಮನೆ ವ್ಯಾಳೆ ಹಾಳಮಾಡಬೇಡ ಹೋಗು". ತನ್ನ ನಿರ್ಣಯವನ್ನು ಖಂಡು ತುಂಡಾಗಿಯೇ ಹೇಳಿದ. ಧನ್‌ಸಿಂಗ್ ನಿತ್ರಾಣಾಗಿ ಹೆಣಗಿದ್ದ ಈಗ ಅವನೆದುರಿಗಿದ್ದಿದ್ದು ಅವನಪ್ಪ, ಅಜ್ಜಿಯ ಹೆಣಗಳ ಚಿಂತೆಯಲ್ಲ ಹೆಂಗಾನವಾಡಿ ದೇಸುನಾಯ್ಕನ ತಾಂಡವನ್ನು ದಾಖಲು ಮಾಡಿ ಬ್ರಿಟೀಷರಿಂದ ಮುಂದೆ ಆಗ ಬಹುದಾದ ಅನಹುತ ತಪ್ಪಿಸುವುದು. ಇಲ್ಲವೆ ಅದಕ್ಕೆ ಪರ್ಯಾಯವಾದ ಬೇರೊಂದ ಆಲೋಚನೆ ಮಾಡುವುದು. "ಬುದ್ಧಿ ವರಹತೆಗೊಂಡು ಕಡತದಲ್ಲಿ ದಾಖಲಿಸಿದ್ದು ಸುಳ್ಳೇ" ಕೊನೆಯದಾಗಿ ಕೇಳಿದ. ಯಾವುದು ಸುಳ್ಳು, ಯಾವುದು ಜಿಜ, ಎಲ್ಲಾ ಅವನಿಗೆ ಗೊತ್ತು. ಮಲ್ಲಪುರ ಬಂಗಾರ ಶೇಷಪ್ಪನ ಬೆಳ್ಳಿ, ಕೊಟ್ಟನ್ನ ಹೋಗಿ ಕೇಳಹೋಗಲೇ, ಕಳ್ಳಲಮಾಣ್ಯಾ, ಏಯ್, ದಬ್ಬೀ ದರ್ವಾಜ ಬಂದಮಾಡ್ರಲೆ" ಆಳುಗಳಿಗೆ ಹೇಳಿದ. ರಕ್ತ ಕುದ್ದು ಬಾಯಿಗೆ ಬಂದ ಶಬ್ದಗಳು ತಾಂಡದ ಹೆಂಗಸರು ಮಕ್ಕಳ ಸಲುವಾಗಿ ಅಲ್ಲೇ ಕಳಗಿಹೋದವು. ಧನ್‌ಸಿಂಗ್ ಸೋತಿದ್ದು, ಆದರೂ ದೃತಿಗೆಡಲಿಲ್ಲ, "ಮೊದಲು ನಮ್ಮಪ್ಪನ ಹೆಣಕ್ಕೆ ಬೆಂಕಿಹಚ್ಚುವುದು" ಅವನ ಜೊತೆಗಿದ್ದ ಪೀರ್‍ಯಾ, ಥಾವು, ಮಂಗ್ಲ್ಯಾ,, ಸಕ್ರ್ಯಾರಿಗೆ ಹೇಳಿದ. "ಅಲ್ಲಾ ಈ ಸೂಳಿಮಕ್ಕಳಿಗೆ ಅಷ್ಟುಬುದ್ದಿ ಬ್ಯಾಡವ, ಇಲ್ಲೆ ಎಲ್ಲಾರು ತಾಂಡ ಇರಬೇಕಂತ ಹುಡುಕೋದ ಬಿಟ್ಟು ವಾದಿಂದ ಹೆಣಕಾಯ್ತರ್‍ವ್ರೇ" ಪೀಕ್ಯಾ ಬ್ರಿಟೀಷ್ ಸೈನ್ಯದ ದಡ್ಡತನವನ್ನ ಎತ್ತಿ ಹೇಳಿದ. ಆ ಮಕ್ಕಳು, ಲಮಾಣ್ಯರೆ ಇಲ್ಲಿಗ ಬರ್ತಾರ ನಾವ್ಯಾಕ ಹೋಗಾಕು ಅಂದ್ಕೊಂಡಾರ. ನಾವು ಹೋಗಲ್ಲ ಆದರ ಹೆಣಸುಡ್ತಿವಿ ಅಂತ ತೋರಿಸಬೇಕು. ಯಾವ ಸೈನಿಕರಿಗೂ ಹಾನಿಯಾಗಬಾರದು ನಮ್ಮ ಕೆಲ್ಸಾನು ಮುಗಿಬೇಕು', ಮಂಗ್ಲ್ಯಾ ಖಚಿತವಾದ ನಿರ್ಣಯ ಮುಂದಿಟ್ಟ. ಧನ್‌ಸಿಂಗ್ ತಲೆಯೊಳಗೆ ಏನೇನೋ ವಿಚಾರಗಳು ನಡಿತಾಯಿದ್ದು, "ಲೇ ಥಾವು, ನೀನು ಮತ್ತ ಬದ್ಯಾ, ಯಾಕಡಿಗ ಎಷ್ಟೆಷ್ಟು ಸೈನಿಕರಿದಾರ ಅವರ ಸನೀಹಕ ಹೋಗಿ ಈ ಸೊಪ್ಪನ್ನು ಎರಡೂ ಕೈಯಿಂದ ತಿಕ್ಕಿ ವಾಸೆ ತೋರಿಸಿಬಂದ ಬಿಡ್ರಿ ಮುಂದಿನ ಕೆಲ್ಸ ನಾಮಾಡ್ತಿನಿ". ಧನ್‌ಸಿಂಗ್ ಎಲ್ಲಾರ ಕೈಯೊಳಗೆ ಕಾಡಡವಿಯೊಳಗೆ ಸಿಕ್ಕಿದ ಮೂರ್ಛೆಬರುವ ತರಗೆಲೆಯನ್ನ ಕೊಟ್ಟು, ಹುಷಾರಲೆ, ತಿಕ್ಕುವಾಗ ವಾಸನೆ ನಿಮಗ ಬಡದ್ರ ನೀವು ಅಲ್ಲೇ ಮಕ್ಕೊಂಡಬಿಡ್ತಿರಾ" ಎಚ್ಚರಿಸಿದ. ಧನ್‌ಸಿಂಗ್ ಕೊಟ ಎಲಗೆಗಳ ಕೈಯೊಳಗೆ ಹಿಡ್ಕೊಂಡು ಮೂತಿಗೆಂಬೊರಂತೆ ಹೋದವರು ಸೂಕ್ಷ್ಮವಾಗೆ, ಮರಗಳ ಹಿಂದೆ ಅವಿತುಕೊಂಡು ಎಲೆಗಳನ್ನು ಎರಡು ಕೈಗಳಲ್ಲಿ ಹಿಡಿದು ಪುಡಿಮಾಡಿ ಅವರ ಮೂಗಿಗೆ

ಹಿಡಿದು ಎಚ್ಚರ ತಪ್ಪಿಸಿದರು. ಅಲ್ಲೇ ಇದ್ದ ತುಂಡಕಟ್ಟಿಗೆಗಳನ್ನು ಜೋಡಿಸಿ ಕೊಳತ್ತು ಹೋಗಿದ್ದ ಹೆಣಗಳ ಮೇಲೆ ಮುಚ್ಚಿ ಅವರೊಂದಿಗೆ ತಂದಿದ್ದ ಶುದ್ಧ ಬಟ್ಟೆ ಸಾರಾಯಿಯಗಳನ್ನು ಸುರಿದು ಬೆಂಕಿಹಚ್ಚಿ ನಾಪತ್ತೆ ಆದರು.

ಕ್ಯಾಪ್ಟನ್ ಕೂಲ್ ತಲೆ ಕೆಟ್ಟಿತ್ತು. ಇಷ್ಟೊಂದು ಜನ ಸೈನಿಕರು ಕಾವಲು ಕಾಯುತ್ತಿದ್ದರೂ ಹೆಣಗಳಿಗೆ ಬೆಂಕಿ ಹತ್ತಿಕೊಂಡಿದ್ದಾದರೂ ಹೇಗೆ. "ಮಿ ಶಾನಬೋಗ ಅಲ್ಲಿ ಬ್ಯಾಕ್ ಮಾಜಿಕ್ ಏನಾದರೂ ಪ್ರಾಕ್ಟೀಸ್ ಮಾಡ್ತಾರ. ಇಲ್ಲದಿದ್ದರೆ ಆ ಬಂಜಾರ ಹೆಣಗಳಿಗೆ ಬೆಂಕಿ ಹೇಗೆ ಹತ್ತುತ್ತದೆ". ಅಚ್ಚರಿಯಿಂದ ಕೇಳಿದ. ಶಾನಬೋಗ ಏನೋ ಹೇಳಬೇಕೆಂದು ಬಾಯಿ ತೆಗೆದಿದ್ದ. ಅಷ್ಟರಲ್ಲೇ ಮಲ್ಲಪ್ಪ ಧಣಿ, ಅದೇನು ಮಾಯನೋ, ಆ ಕಾಡಿನೊಳಗೆ ಏನಾರು ದೆವ್ವ" ಏನೇನೊ ಪುರಾಣ ಸುರುಮಾಡಲು ನೋಡಿದ. ಕೌಲ್, ಸಾಹೇಬ ಸಿಟ್ಟಿಂದ "ವಾಟ್ ನಾನ್‌ಸೆನ್ಸ್ ಮಲ್ಲಪ್ಪ. ದೆವ ಹೆಣ ಸುಡಲು ಸಾಧ್ಯ ಹೇಗೆ? ಟೆಲ್ ಮಿ " ಅವನ ಬಾಯಿ ಮುಚ್ಚಿಸಿದ ಶಾನಬೋಗನಿಗೆ ಹೊಟ್ಟೆ ತೊಳಸಿದಂತಾಯ್ತು ಏನೋ ಸಬೂಬು ಹೇಳಬೇಕಂತ ಶಬ್ದಗಳಿಗಾಗಿ ಹುಡುಕಾಟ ನಡೆಸಿದ. 2 ಕೆ. ನಾವೆಲ್ಲ ನೊಡುತ್ತೇವೆ ನೀವು ಹೋಗಬಹದು. ಅವರನ್ನ ಕಳುಹಿಸಿದ ಬದುಕಿದೆಯ ಬಡಜೀವವೆ ಎಂಬಂತೆ ಇಬ್ಬರೂ ದೋತ್ರ ಕೈಯಲ್ಲಿ ಹಿಡಿದು ಹೊರಗಡೆಗೆ ಓಡಿದರು.

"ಶಾನಬೋಗ, ಈಗೇನೋ ತಪ್ಪಿಸಿಕೊಂಡ್ವಿ, ನಾಳೆ ನಮಗ ಏಳಗಾಲ ಇಲ್ಲ, ಹೆಂಗಾನ ಮಾಡಿ ತಾಂಡ ಖಾಲಿ ಮಾಡಿಸಬೇಕು. ಇಲ್ಲ ಕಡತದೊಳಗೆ ತೋರಿಸಬೇಕು." ವಿಚಾರವನ್ನು ಮುಂದಿಟ್ಟ, ಇದು ಸರಿಯಾದ ಸಮಯ ಅಂದವನೆ "ಅಲ್ಲೇ ಮಲ್ಲಪ್ಪ ನೀ ಬಂಗಾರದ ವರಹಗಳನ್ನು ತಗೊಂಡು ನನಗೆ ಮಾತ್ರ ಬೆಳ್ಳಿ ನಾಣ್ಯಗಳನ್ನು ಕೊಟ್ಟೆಯಲ್ಲ ಇದು ಯಾವ ಸೀಮೆ ನ್ಯಾಯ ಹೇಳು. ಮತ್ತು ಕಡತದಾಗ ಹಳೆ ತೇದಿಯೊಳಗ ತೋರ್ಸು ಅಂತಿಯಲ್ಲ ನ್ಯಾಯನೇ?" ಕಡ್ಡಿ ಎಲ್ಲ ತುಂಡ ಮಾಡದಂಗ ಹೇಳಿದ. ಯಾವಮಗ ಹೇಳಿದ್ನಪ್ಪ ನಾ ಲಮಾಣ್ಯೇರ ತಾವ ಬಂಗಾರದ ವರಹ ತಗೊಂಡೀನಿ ಅಂತ. ಆ ಮಗನ್ನ ನನ್ನ ಜೋಡ ಎಕ್ಕಡದಲೆ ಹೊಡಿತೀನಿ". ಸಿಟ್ಟಿಂದಲೇ ಜಾಡಿಸಿದ. ಯಾಮಗಯಾಕ? ಖುದ್ದ ಅಧ್ಯಾವನೊ ಲಮಾಣಿ ಹುಡುಗ ಬಂದಿದ್ದ, ಅವನ ಹೊಗಳಿದ ನಿನ್ನ ಚರಿತ್ರೆಯನ್ನ". ಅವನ ಮಾರಿನೋಡಿದ. ಏಯ್, ಹಂಗೆ ಸುಮ್ಮನೆ ನಗಬಾಚಿಗಂದ್ನಪ್ಪ. ಕೊಟ್ಟಿದ್ರು ಎಲ್ಡಮೂರ ವರಹಗಳನ್ನ, ನಿಮಗ ಗೊತ್ತಾಗಲ್ಲಂತ ನಾನೇ ಲಪಟಯಿಸಿದ್ದೆ ಆದ್ರ ನೀ ಈ ಪಾಟಿ ಹುಟಮಿಂಡ್ರಿ ಅಂತ ಗೊತ್ತೇ ಇರಲಿಲ್ಲ. ಮೆತ್ತಗೆ ಹೇಳಿದ. "ಏನಂದ್ರಿ" ಶಾನಬೋಗ ಕೇಳಿಸಿಕೊಳ್ಳದೆ ಕೇಳಿದ. "ಏನೂ ಇಲ್ಲ, ಏನೋ ಪರಪಟ್ವಾಗೈತೆ, ತಲಪಿಸ್ತಿನಿ ಮದ್ಲು ಏನೋ ಒಂದು ಮಾಡ್ರಿ" ಅಂದವನೆ ನಿಲ್ಲದಂಗೆ ಜಾಗಖಾಲಿಮಾಡಿದ.

ತಾಂಡದ ದಾಖಲೆ ತೋರಿಸುವುದಕ್ಕೆ ಮುಂದಾಗಿರುವ ಗೌಡ ಮಲ್ಲಪ್ಪ ಶಾನಬೋಗ ಶೇಷಪ್ಪ ತಾಂಡದ ಕಡಾಯಿಸಿ ರಾತ್ರೋರಾತ್ರಿ ಧನ್‌ಸಿಂಗ್ ಬುಕ್ಯಾನ ಕಲುಕೈ ಬಿದ್ದು ನೂರಾರ ಎಕರೆ ಜಮೀನು ತಗಿಸಿ ಹಸನು ಮಾಡಿದ್ರು. ಸಾಲದಕ್ಕೆ ಕಾಡಿನ ಪಕ್ಕದಾಗಿದ್ದ ಗೌಡ್ರಮಲ್ಲಪ್ಪ ಜಮೀನನ್ನ ಧನ್‌ಸಿಂಗ್ ಬುಕ್ಯಾನ ಹೆಸರಿಗೆ ಇಪ್ಪತ್ತೈದು ವರ್ಷದ ಹಿಂದೆ ಮಾಡಿಕೊಹಂಗೆ ಕಡತಮಾಡಿಸಿದ. ಬ್ರಿಟೀಷ್ ಸರ್ಕಾರಕ್ಕೆ ತಾವು ದೋಖಮಾಡಿಲ್ಲ ಅನ್ನೋದನ್ನ ಸಾಬೀತು ಪಡಿಸಾಕ. ಶಾನಬೋಗ ಗೌಡ ನಾಮುಂದ, ತಾಮುಂದ ಅಂತೇಳಿ ಮುಂದಾಗಿದ್ದರು. ಯಾವಾಗಬೇಕಾದರೂ ಕೌಲ್

ಸಾಹೇಬರು ಸವಾರಿತಗೊಂಡು ತಪಾಸಣೆ ಮಾಡಾಕಬಂದಾರು ಎಂಬ ಆತಂಕ ಎಡಬಿಡದೆ ಕಾಡತೊಡಗಿತ್ತು. ಕಡತದಲ್ಲೇನೋ ಬರದಗಿತ್ತು. ಕೌಲ್ ಸಾಹೇಬರಿಗೆ ನಂಬಿಸೋದು ಹೇಗೆ? ಒಂದು ವೇಳೆ ಅವರೇನಾರು ಸುಳ್ಳು ಅಂತ ಕಂಡುಹಿಡಿದ್ರ ಸ್ವಾತಂತ್ರ್ಯ ಹೋರಾಟಗಾರರನ್ನ ನೇಣುಹಾಕೋ ಗಿಡಗಳ ಪಕ್ಕದಾಗ ನಮ್ಮನ್ನು ನೇಣಹಾಕ್ತಾರ ಅಂತೇಳಿ ಇಬ್ರೂ ಅಂದ್ಕೊಂಡ್ರು.

ಧನ್‌ಸಿಂಗ್ ತಂದೆಯನ್ನು ಕಳ್ಕೊಂಡು ಅನಾಥವಾಗಿದ್ದ ಭೀಮಣಿ ದಿನಾ ಸಂಜೆ ದಾಡ (ಮೂರನೇದಿನ) ಮಾಡುವವರೆಗೆ ಗಂಡನ ನೆನಪು ಮಾಡಿಕೊಂಡು ಥಾವರೊ ಮಾಡುತ್ತಿದ್ದವಳು (ಅಳುವುದು) ಬಾರೊತೇರೋ (ಹನ್ನೆರಡ–ಹದಿಮೂರು) ಆಗೋಣ ಮಚಾನು ಅಳುವುದನ್ನ ಮುಂದುವರೆಸಿದ್ದಳು. ಕರಮ್ ತೋಟ್ ವಂಶದ ಕುಡಿಯನ್ನ ಹೆತ್ತಿದ್ದ ಸೊಸೆ ಸಿಕ್ಕಿಯನ್ನು ಬಹಳಪ್ರೀತಿಯಿಂದ ನೋಡುತ್ತಿದ್ದ ಅವನ ಅಜ್ಜಿ ಸೋಮ್ಲಿ ಕೂಡ ಹುತಾತ್ಮಳಾಗಿದ್ದಳು. ಭೀಮಣಿ ಅನಿವಾರ್ಯವಾಗಿಯೇ ಮೊಮ್ಮನಿಗೆ ಹೆಸರನ್ನ ಇಡಲು, ಅವರ ಸಂಬಂದಿ ಕಾರಭಾರಿ ಮನೆಯವರನ್ನ ಕರೆದು ಹನುಮನಾಯಕ ಅಂತೇಳಿ ನಾಮಕರಣ ಮಾಡಿಯೇ ಬಿಟ್ಟರು. ಹನುಮನಾಯ್ಕನ ಬೆಳವಿಗೆ ನೋಡ್ತಾ, ನೂರಾರು ಎಕರೆ ಜಮೀನು ಸಾಗುವಳಿ ಮಾಡುತ್ತಾ ತನ್ನ ಸಹೋದರರನ್ನೆಲ್ಲಾ ಉತ್ತಮರೀತಿಯಿಂದಲೇ ಮಾರ್ಗದರ್ಶನ ಮಾಡತೊಡಗಿದ. ಧನ್‌ಸಿಂಗ್ ಬುಕ್ಯಾ ಕಾಲ ಎಲ್ಲವನ್ನು ಮರೆಸುತ್ತೆ, ಸತ್ತವರ ನೆನಪುಗಳು ಕೇವಲ ನೆನಪುಗಳು ಮಾತ್ರ.

ಅಷ್ಟೇ, ಅದರಿಂದಾಚೆ ಏನೂ ಇಲ್ಲ, ಇಲ್ಲದಿದ್ದರೆ ಮನುಷ್ಯ ಬದಕುವುದಿಲ್ಲ. ಹುಚ್ಚನಾಗಿಬಿಡುತ್ತಾನೆ, ಮಲ್ಲಪ್ಪಗೌಡ ಅದೇನೋ ಖ್ಯಾನಿ ಎಂದು ಸತ್ತುಹೋದ. ಅವನ ನಂತರ ಅವರ ಮಗ ತೆಪ್ಪರಸಿದ್ದ ಗೌಡರಿಗೆ ಬಂದ ಮ್ಯಾಲಂತು ಅವನ ಚೇಲಗಳಾದ ನಾಯಕರ ತಿಪ್ಪ, ಚೆಲವಾದಿ ಚೆನ್ನಬಸವ, ಉಪ್ಪಾರ ಮಂಜ್ಯಾ ಇವರದ್ದೇ ಕಿತಬಹೆಚ್ಚಾಗಿತ್ತು. ನಾಯಕರ ತಿಪ್ಪಗಂತು ಮುಂದಮುಂದಿನ ಕಾಣದಂಗಾಗಿತ್ತು. ಕೆಂಪಮಂದಿ ದೂರದಾಗ ಇದ್ದು ಕರವಸೂಲಿಕೆಲ್ಸ ಏನ ಗೌಡ್ರು ಶಾನಬೋಗರು ತಳವಾರ ಕಡಿಗ ಕೊಟ್ಬೋ ಮುಗದಹೋತವ್ಯತಿ. ಕರ ವಸೂಲಿ ನೆಪದಾಗ ಏನೆಲ್ಲಾ ಕೆಲ್ಸ ಮಾಡತೊಡಗಿದರು. ಶಾನಬೋಗರ ಶೇಷಪ್ಪಗ ಲಕ್ವಾ ಹೊಡದಿತ್ತು, ಎಡಗೈ ಪೂರಾ ಸ್ವಾಧೀನ ತಪ್ಪಿ, ಡಗಿನ ಸ್ಪಾಟಿ ಪೂರಾ ತಿರುಗಿತ್ತು. ಶೇಷಪ್ಪ ಭಟ್ರ ಮಗ ದತ್ತ ಶಾನಬೋಗನಾಗಿದ್ದ. ಕೌಲ್ ಸಾಹೇಬ ಮುಂಬೈಗೆ ವರ್ಗಾವಣೆಯಾದಾಗಿನಿಂದ ಬ್ರಿಟಿಷ್ ಅಧಿಕಾರ ರೂಪವೆಲ್ಲ ಬಳ್ಳಾರಿಯ ಮುಖ್ಯಸ್ಥನಾಗಿದ್ದ. ಭಾರತದ ಮೂಲೆ ಮೂಲೆಗಳಲ್ಲಿ ಪ್ರತಿರೋಧ ಆರಂಭವಾಗಿತ್ತು. ಭಗತ್‌ಸಿಂಗ್, ರಾಜಗುರು ಸುಖದೇವ ಮುಂತಾದ ಯುವಕರನ್ನ ಗಲ್ಲಿಗೇಸಿದ್ದರ ಹಿನ್ನೆಲೆಯಲ್ಲಿ ದೊಡ್ಡ ಹೋರಟವೇ ಏರ್ಪಟ್ಟಿತ್ತು. ಮಹಾತ್ಮ ಶಾಂತಿ ಮಂತ್ರ ಜಪಿಸುತ್ತ ಗಲ್ಲಿಗೇರಿದವರ ಬಗ್ಗೆ ಮಾತಾಡದಿದ್ದಕ್ಕ ಮಂದಿಗ ತ್ರಾಸಾಗಿತ್ತು. ಈ ಯಾವ ಸುದ್ದಿಗಳು ದೇಸುನಾಯ್ಕನ ತಾಂಡಕ್ಕೆ ಮುಟ್ತಾನೆ ಇರ್ಲಿಲ್ಲ. ಯಾಕಂದ್ರ, ಅಕ್ಷರದ ಗಂಧಗಾಳಿ ತಿಳಿಯದ ನಿರಕ್ಷರ ಕುಷಿಗಳೆ ತುಂಬಿಕೊಂಡು ಭಟ್ಟಿಸರಾಯಿ, ಕಾಡಿನ ಹಣ್ಣು ಮಾರುವುದು, ಒಣಕಟ್ಟಿಗೆ ಹೊತ್ತು ಒಯ್ದು ವ್ಯಾಪಾರಾಟವಮಾಡುವುದು ಇಷ್ಟೆ ಅವರ ಬದುಕು. ಧನ್‌ಸಿಂಗ್ ಬುಕ್ಯಾಗೆ ತಿಳುವಳಿಕೆಬಂದನಂತರ ಬದಲಾವಣೆಯ ಹೊಸ ಮುನ್ನುಡಿಯನ್ನು ಬರೆದಿದ್ದ. ಅವನಿಗೆ ಒಟ್ಟು ನೂರಾಐವತ್ತು ಎಕರೆ ಜಮೀನು ಮಾಡಕೊಂಡು ಶಾನಬೋಗರಿಂದ ಚಕಬಂದಿ ಹಾಕಿಸಿಕೊಂಡು

ಕಾನೂನುಪ್ರಕಾರ ಪಕ್ಕಾ ಮಾಡಿಕೊಂಡಿದ್ದ. ಅವನ ಚಿಕ್ಕಪ್ಪ ತೊಕ್ಕನ ಮಕ್ಕಳು ರೇಖ್ಯಾ, ದೇವ್ಲ ಕೂಡ ಅವನ ಪಕ್ಕದಲ್ಲೇ ಹತ್ತಿಪ್ಪತ್ತು ಎಕರೆ ಜಮೀನಿನ ಒಡೆಯರಾಗಿದ್ದರು.

ಬದಲಾವಣೆಯ ಎಲ್ಲಾ ಮುನ್ಸೂಚನೆಗಳು ಕಾಣತೊಡಗಿದವು. ಸುಭಾಷ್‌ಚಂದ್ರಬೋಸ್, ನೀವು ರಕ್ತಕೊಡಿ ನಾನು ಸ್ವಾತಂತ್ರ್ಯಕೊಡುತ್ತೇನೆಂದು ಉಗ್ರ ಹೋರಾಟವನ್ನೇ ಆರಂಭಿಸಿ ಜರ್ಮನಿ, ಜಪಾನಿನ ಸಹಾಕಾರಕ್ಕಾಗಿ ಉನ್ನತ ಮಟ್ಟದ ಸಭೆಗಳನ್ನು ನಡೆಸುವ ಸಂದರ್ಭ ವಿಮಾನ ಅಪಘಾತದಲ್ಲಿ ಸತ್ತರು ಎಂಬ ಸುದ್ದಿ ದೇಶದ ತುಂಬೆಲ್ಲಾ ಹರಡಿತ್ತು. ಕ್ರಾಂತಿಕಾರಿಗಳಿಗೆ ದೊಡ್ಡ ಅಘಾತವಾದರೆ ಗಾಂಧಿವಾದಿಗಳಿಗೆ ಖುಷಿಯಾಗಿತ್ತು. ಆಗಲೆ ಅಸಹಾಕಾರ ಚಳುವಳಿಯ ಸಂದರ್ಭ ಬ್ರಿಟೀಷರನ್ನ ಶಾಂತಿಯಿಂದಲೇ ಹೊರದೂಡುವ ಗಾಂಧೀಜಿಯವರ ಕನಸು ಈಡೇರುವ ಲಕ್ಷಣಗಳು ಆರಂಭದಲ್ಲಿ ಕಾಣಲಿಲ್ಲ. ಆದರೆ ರೈತರ ಮೇಲೆ, ಜನಸಾಮಾನ್ಯರ ಮೇಲೆ ಸುಕಾ ಸುಮ್ಮನೆ ತೆರಿಗೆಯನ್ನು ವಿಧಿಸುವುದು ನಿಲ್ಲಲಿಲ್ಲ. ಸಿದ್ದೇಗೌಡ ಬ್ರಿಟೀಷ್ ಮಂದಿ ಬಂದ ಹೇಳಿದ್ರ ನಾಕಪಟ್ಟು ಹೆಚ್ಚು ವಸೂಲಿ ಮಾಡತೊಡಗಿದ. ಶ್ಯಾನಬೋಗನ ಮಗ ದತ್ತ ಕೂಡ ಗೌಡನಿಗಿಂತ ನೂರು ಪಾಲು ಧನದಾಹಿಯಾಗಿದ್ದ. ಇಬ್ಬರೂ ಕೇಲ್ಸಕ್ಕೆ ಬಾರದವನ ಕಾರುಬಾರು ನಡೆಯುತ್ತಿತ್ತೆ ವಿನಃ ಬ್ರಿಟೀಷರೇನು ಪ್ರವೇಶ ಮಾಡುವ ಸನ್ನಿವೇಶ ಕಂಡುಬರಲಿಲ್ಲ.

ಧನ್‌ಸಿಂಗ್ ತಂದೆ ತೀರಿಕೊಂಡ ವರ್ಷದವರೆಗೆ ಬಹಳ ನೋವನ್ನ ಅನುಭವಿಸಿದ. ಮೊದಲನೇಯ ಕಿರಿಕಿರಿ ಎಂದರೆ ಸಿದ್ದೇಗೌಡ ಅವನು ಪೀಕಿಮನೆಗೆ ಬರುತ್ತಿದದಾಗ ಕಾಡಿನೊಳಗೆ ದೆವ್ವ ಹೆದರಿಸಿದ್ದು ಸುಳ್ಳು ಧನ್‌ಸಿಂಗ್ ಮತ್ತು ಅವನ ಸಂಗಡಿಗರು ಅಂತೇಳಿ ಗೊತ್ತಾದಮೇಲಂತು ಅವನ ಮೇಲೆ ಉರಿದು ಬೀಳತೊಡಗಿದ್ದ. ಎರಡನೇಯ ಸಮಸ್ಯೆ ಭೂಮಿ ಹೆಚ್ಚಿದ್ದರೂ ಮಳೆ ಸರಿಯಾಗಿ ಆಗದೆ ದೊಡ್ಡ ಸಂಸಾರವನ್ನ ನಿಭಾಯಿಸಲು ತೊಂದರೆಯಾಗುತ್ತಿರುವುದು. ಈ ಎರಡು ಸಮಸ್ಯೆಗಳ ನಡುವೆ ಸಿಗಾಕಿಕೊಂಡು ಒದ್ದಾಡುತ್ತಿದ್ದಾಗಲೇ ಅವನ ಎರಡನೆಯ ಮಗ ಹುಟ್ಟಿದ್ದು. ಅವನ ತಾಯಿ ಭೀಮಣಿ ಮತ್ತು ಅವನ ಹೆಂಡತಿ ಸೀತ್ಕಿ ಅವನ ಹೆಸರು ಭದ್ರ ಬುಕ್ಯಾ ಕರಮತೋಟ ಅಂತ ನಾಮಕರಣ ಮಾಡಿದರು. ಧನ್‌ಸಿಂಗ್ ಕಷ್ಟದ ದಿನಗಳನ್ನು ಎದುರಿಸುತ್ತಲೇ ಇದ್ದ. ತಾಂಡದಲ್ಲಿ ನಡೆಯುತ್ತಿದ್ದ ಅನೇಕ ಕೆಟ್ಟ ಕೆಲಸಗಳನ್ನು ನಿಯಂತ್ರಣಕ್ಕೆ ತಂದಿದ್ದು ಹಾಗಾಗಿಯೇ ಅವನ ಸುತ್ತಲು ಒಳ್ಳೆಯವರಿಗಿಂತ ಕೆಟ್ಟವರು ಹೆಚ್ಚಾಗಿದ್ದರು. "ಈ ಮಗ ಏನು ಇವರಪ್ಪನ ಉಮ್ಮಳಿ ಹಾಕ್ಯಾನೇನು? ತಾಂಡನೆ ತನ್ನದು ಅಂತೇಳಿ ತಿಳ್ಕೊಂಡಂಗೈತೆ" ಅಂತೇಳಿ ಸಿದ್ದನ ಹತ್ರ ಮಾತಾಡೋರು ಮಾತಾಡಿದ್ರ, ಶ್ಯಾನಬೋಗನ್ನ ಹತ್ರ ಹೋಗಿ ಇದಿದ್ದು ಇಲ್ಲದನ್ನ ಹೇಳಿ ಅವನ ತೆಕೆಡಿಸಿದ್ದವರೂ ಭಾಳಮಂದಿ ಈ ಎಲ್ಲಾ ತಲೆನೋವುಗಳ ನಡುವೆ ಸಂಸಾರದ ಭಾರವನ್ನ ಹೊರಲು ತಿಣುಕಾಡುತ್ತಿದ್ದ.

ವ್ಯವಸ್ಥೆಯೊಡನೆ ಮುಸುಕಿನ ಗುದ್ದಾಟನಡೆದೆ ಇತ್ತು. ಯಾವಾಗ ಸ್ಫೋಟಗೊಳ್ಳುತ್ತದೆ ಎಂಬುದು ಯರಿಗೂ ತಿಳಿಯದಾಗಿತ್ತು. ಕಟ್ಟಿಗೆ ಮಾರುವುದು ಭಟ್ಟಿ ಸರಾಯಿ ಪ್ರಚಲಿತದಲ್ಲಿದ್ದರೂ ಭೂಮಿಯನ್ನ ಉಳುವವರು ಭೂಮಿಯನ್ನ ಸಮರ್ಪಕವಾಗಿಯೇ ಮಾಡುತ್ತಿದ್ದರು. ಧನ್‌ಸಿಂಗ್ ಮುಂಜಾನೆ ಮುಂಗೋಳಿಕೂಗುವುದಕ್ಕೂ ಮುಂಚೆ ಮನೆಯನ್ನು ಬಿಟ್ಟು ರಾತ್ರಿ ಅದ್ಯಾವಾಗಲೋ ಮನೆ ಸೇರುತ್ತಿದ್ದ. ಮನೆಯಲ್ಲಿದ್ದವರೆಲ್ಲರೂ ಹೊಲದಲ್ಲಿ ಕೆಲಸ ಮಾಡುವುದು ಸಮಯಬಂದರೆ

ಸರಾಯಿ ಮಡಕೆಯನ್ನು ಕೂಡ ಒಲೆಯ ಮೇಲೆ ಇಡುವ ಕಾರ್ಯದಲ್ಲಿ ತೊಡಗಿದ್ದರು. ಪರಿಸ್ಥಿತಿ ಸ್ವಲ್ಪ ಸ್ವಲ್ಪ ಉತ್ತಮಗೊಳ್ಳಲು ಆರಂಭವಾಗಿತ್ತು. ಕಾಲಕಾಲಕ್ಕೆ ಒಳ್ಳೆಯ ಮಳೆ ಬಿದ್ದು ನೂರು ಎಕರೆ ಜಮೀನನ್ನು ಸರಿಯಾಗಿಯೇ ಹದಮಾಡಿ ರಾಗಿ, ಜೋಳ, ಸಾಮು, ನವಣೆ, ಸಜ್ಜೆ, ಗೊರೆಳ್ಳು, ಎಳ್ಳು, ನೆಲಗಡಲೆ, ಸಣೇವು ಬಿತ್ತಿ ಕೂರ್ಗಿ ಹೊರತಗಿತಿದ್ದಂಗೆ ಎಡೆಹರಗಲು ಬಂದಿತ್ತು. ಕಾರುಣ್ಣಿಮೆಯ ಜಡಿಮಳೆ, ಥಂಡಿಸೀತ ಹೇಡಿಗಾಳಿಯಲ್ಲಿ ಶೀತ, ಕಫ ಪ್ರಕೃತಿಯವರ ಪಾಡು ಹೇಳತೀರದು. ಕಾರಬಾರಿ ಇಡೀ ರಾತ್ರಿ ಮಲಗಾಕ ಆಗದೆ "ಕಂವ್, ಕಂವ್," ಅಂತ ಕೆಮ್ಮಿ ಕೆಮ್ಮಿ ಮುಖವೆಲ್ಲ ದದರು ಬಂದು ಹಳದಿ ಎಲೆಯಂತಾಗಿದ್ದ ಅವರ ಮನೆಯವರು ಇನ್ನೇನು ಹೋಗೆ ಬಿಡ್ತಾನೆ ಅಂತೇಳಿ ತಿಳ್ಕಂಡಿದ್ರು ಆದ್ರ ಭಟ್ಟಿ ಸರಾಯಿ ಕೊಳಿಸಾರಿನ ಸಹಾಯದಿಂದ ಕಾರಭಾರಿ ಕಾಂರಹುಣಿಮೆಯನೆನೊತಡಾಯಿಸಿದ ಮುಂದಿನ ಶ್ರಾವಣದಲ್ಲಿ ಬಂದ ಛಳಜ್ವರ ಅವನನ್ನು ತೆಗೆದುಕೊಂಡು ಹೋಗುವವರೆಗೂ ತಣ್ಣಗಾಗಲೇ ಇಲ್ಲ. ಧನ್‌ಸಿಂಗ್‌ಗೆ ಮತ್ತೊಂದು ಅಘಾತವಾಗಿತ್ತು. ಅವರಪ್ಪನ ನಂತರ ಒಳ್ಳೆಯದು ಕೆಟ್ಟದಕ್ಕೆಲ್ಲ ಅವನ ಮಾವನೆ ಆಸರೆಯಾಗಿದ್ದ. ಅವನು ಹೋದ ಮೇಲೆಂತು ಒಬ್ಬಂಟಿಯಂತೆ ಅನಿಸಿತ್ತು. ಆದರೂ ನೆಲೆಯೇ ಇಲ್ಲದ ಈ ಮಂದಿಗೆ ನೆಲೆಯಾಗಿ ಧನ್‌ಸಿಂಗ್ ಧೈರ್ಯವಾಗಿ ಇರಲೇಬೇಕಿತ್ತು. ಹನುಮ, ಭದ್ರರ ನಂತರ ಮೂರನೇಯ ಹುಡುಗಿ ದೇವ್ಲಿ ಬೇರೆ ಹುಟ್ಟಿದ್ದಳು. ಈಗಂತು ಧನ್‌ಸಿಂಗ್ ಪ್ರತಿಹೆಜ್ಜೆಗಳನ್ನು ಬಹಳ ಎಚ್ಚರಿಕೆಯಿಂದಲೇ ಇಡಬೇಕಿತ್ತು. ಅವನನ್ನು ಆಶ್ರಯಿಸಿರುವುವವರ ಸಂಖ್ಯೆ ಇನ್ನೂ ಹೆಚ್ಚಳವಾಗಿತ್ತೆ. ಬೆಳೆ ಇನ್ನೇನು ಹೊಡಿ ಹೊರಟ ಹಾಲುಗಳಿಗೆ ಬರೊಸಮಯ ಜನ ಅಲ್ಲಲ್ಲೆ ಎತ್ತರ ಚಾಟು ಮಾಡಿಕೊಂಡು ಹಾಹೂ ಅಂತೇಳಿ ರಾತ್ರಿ ಪ್ರಾಣಿಗಳನ್ನು ಬೆದರಿಸುತ್ತಿದ್ದರು. ಕೆಲಸಣ್ಣಪುಟ್ಟ ನರಿ, ತೋಳ, ಕಾಡುಹಂದಿಯಂತವು ಹೆದರಿ ಓಡುತ್ತಿದ್ದವು. ಆದರೆ ಅವರ ದುರಾದೃಷ್ಟಕ್ಕೆ ಕಾಡಾನೆ ಹಿಂಡೊಂದು ಅದ್ಯಾವ ಕಡೆಗೆ ಹೊಂಟಿತ್ತೊ ಹೊತ್ತಾರೆ ಮಕ್ಕಗೌಳದಾಗ ತಾಂಡದ ಹೊಲಗಳಿಗೆ ನುಗ್ಗಿ ತಿಂದಿದ್ದು ಕಡಿಮೆ ಧ್ವಂಸ ಮಾಡಿದ್ದೆ ಜಾಸ್ತಿ. ಅದೆಂಗೊ ಸುದ್ದಿ ತಿಳಿದ ಧನ್‌ಸಿಂಗ್ ಹತ್ತಿಪ್ಪತ್ತು ಮಂದಿಯೊಂದಿಗೆ ನಗಾರಿ ದಪ್ಪಾ, ಬಾರಿಸುತ್ತ ಕಿರುಚಾಡಿ ಕೈಯೊಳಗೆ ಅಗ್ಗಷ್ಟಿಕೆ ಹಿಡ್ಕೊಂಡು ಬಂದು ಹೆದರಿಸಿ ಓಡಿಸುವ ಪ್ರಯತ್ನ ಮಾಡಿದರು. ಕೋತಿ ಹೊಕ್ಕವನ ಹಾಳು ಆನೆ ಹೊಕ್ಕ ಹೊಲಹಾಳು ಎಂಬಂತೆ ಅವು ಹೋದಲ್ಲೆಲ್ಲಾ ಬೆಳೆ ಚಪಾಟೆಯಾಗಿತ್ತು. ಸುಧಾರಿಸಿಕೊಳ್ಳೋ ಆಗದಿದ್ದರೂ ಅನಿವಾರ್ಯವಾಗಿತ್ತು.

ಉಳಿದಷ್ಟನ್ನ ಹಗಲುರಾತ್ರಿ ಜೋಪಾನ ಮಾಡಾನಂದ್ರೆ ಉಳಿದ ಸಣ್ಣ ಪ್ರಾಣಿಗಳು ಹಂಗೆ ಸುರು ಹಚ್ಕೊಂಡಿದ್ದವು. ದಂಡಿಗಿದ್ದ ಹೊಲಗಳು ಒಟ್ಟು ನಡುವಿನ ಕೆಲವು ಹೊಲಗಳಲ್ಲಿ ಬೆಳೆ ಆಟು ಕೈಗೆ ಬರುವಂತಿದ್ದರೆ ನರಿಗಳು, ಮಿಕಗಳು ಗೆಜ್ಜೆಸೇಂಗಾದ ಬುಡಗಳನ್ನೆಲ್ಲಾ ಕೆದರಿ ಮೋಟು ಗಿಡಗಳನಷ್ಟೇ ಉಳಿಸುತ್ತಿದ್ದವು. ದುಬಾರಿಬೀಜ, ಕೊಟ್ಟಿಗೆ ಗೊಬ್ಬರ, ಕಾದದ್ದು, ಕೆಲಸ ಮಾಡಿದ್ದು ದಂಡ ಅನಿಸಿ ಮಂದಿ ಎಷ್ಟು ಬ್ಯಾಸರಾಗಿದ್ರು ಅಂತಂದ್ರ ಯಾವಾದರು ಸಣ್ಣ ಪ್ರಾಣಿ ಕೈಗ ಸಿಕ್ರು ಹೊಡೆದು ಉರಿಳಿಸಬೇಕು ಅನಿಸಿಬಿಟ್ಟಿತ್ತು. ರಾತ್ರಿ ಒಂದೊಂದು ಸಲ ಮಿಕಗಳ ಬೇಟೆಯನ್ನು ಆಡಿ ಸುತ್ತಲ ಊರುಗಳಿಗೆ ಅದರ ಮಾಂಸದ ವ್ಯಾಪಾರ ಮಾಡುತ್ತಿದ್ದರು. ಧನಸಿಂಗ್ ಬುಕ್ಯಾನ ನೂರ ಎಕರೆ ಜಮೀನು ಅವನ ಸಂಸಾರಕ್ಕೆ ಆಗೋಅಷ್ಟು ಕಾಳು ಸಿಗ್ತಿರಲಿಲ್ಲ. ಮೊದಲೇ ಕಾಡಡವಿ ನೆಲ ಕಲ್ಲುದಿಬ್ಬಗಳು, ಮುಳ್ಳಿನ ಪೊದೆಗಳು, ನಾನಾ ನಮೂನಿಯ ಹುಲ್ಲು, ಕೋಲಾಣಿ,

ಹಾಕರ್ಕಿ ಸಪ್ಪ ಬೆಳೆದಿರೋದನ್ನ ಕಡಿಮೆ ಮಾಡಾಕ ಆಗ್ತಿರಲಿಲ್ಲ. ಮುಂಚೆನಿಂದ ಮಂದಿ ಕಳೆ ತಗದು ಎದಿಮಟ ಹುಲ್ಲನ ಹೊರಿಗಳು ದನಕರುಗಳಿಗೆ ಬಂಡಿಯೊಳಗೆ ಹುಲ್ಲು ಹೇರ್ಕೊಂಡು ಬಿಸ್ತಿದ್ರು ಪರಿಸ್ಥಿತಿ ಹೀಗಿರುವಾಗ ಬ್ರಿಟೀಷ್ ಸರ್ಕಾರ ಮಂದಿ ನೆಮ್ಮದಿಯಿಂದ ಉಂಡುಟ್ಟು ಸ್ಥಿತವಂತರಾದ, ನಮ್ಮ ವಿರುದ್ಧ ದಂಗೆ ಏಳೋದ್ರಾಗ ಎರಡಮಾತಿಲ್ಲಂತ ಮಂದಿತಲಿಮ್ಯಾಲ ಕರಹೆಚ್ಚು ಮಾಡ್ತಾನೆ ಇದ್ರು. ಸಿದ್ದ ಉರುಫ್ ಸಿದ್ದೇಗೌಡ ಶ್ಯಾನಬೋಗ ಅವರ ಹೇಳಿದ್ದ ವೇದವಾಕ್ಯ ಅಂತ ತಿಳ್ಕಂಡಿದ್ದೆ. ಸರ್ಕಾರ ಒಂದಪಟ್ಟು ಹೆಚ್ಚು ಮಾಡಿದ್ರ ಇವರು ತಮಗ ಬೇಕಾದಷ್ಟನ್ನ ಹೆಚ್ಚುಮಾಡಿ ಮಂದಿ ಜೀವ ಹಿಂಡುತ್ತಿದ್ದರು. ತಾಂಡಕ ಬಂದ್ರು ಅಂದ್ರ ಕರ ಕೋಡಾಕ ಆಗದೆ ಗಂಡಸರೆಲ್ಲಾ ಕಾಡಸೇರಿಕೊಳ್ತಿದ್ರು. ಶ್ಯಾನಬೋಗಪ್ಪ ದೊಡ್ಡ ಮಾತುಗಾರ. ಒಂದು ಹೈನಾದ ಆಕಳುಗಳನ್ನು ಇಲ್ಲ ಗಬ್ಬದ ಅಕಳುಗಳನ್ನು ಹೊಡ್ಕೊಂಡುಹೊಕ್ಕಿದ್ದ. ಅವೆರಡು ಇಲ್ಲಕ್ರ, ಕೆಲಸಮಾಡಕ ಬಂದಿರೋ ಏಯಪ್ಪನೋಡಿ ಹುಡುಗಿಯರನ್ನ ಒತ್ತೆಯಾಳಿಸಂಗೆ ಎಷ್ಟೇ ಪ್ರತಿರೋಧ ಮಾಡಿದ್ರು ಬಿಡದಂತೆ ಎಳ್ಕೊಂಡ ಹೋಕ್ಕಿದ್ದ. ಅದರೊಳಗೆ ಅರ್ಧಪಾಲು ಸಿದ್ದನಿಗೂ ಇದ್ದೇ ಇರುತ್ತಿತ್ತು. ಮಕ್ಕಳು ಬೇಕನ್ನೋರು ಅವರಿವರ ಹತ್ರ ಕಾಲಬಿದ್ದು ಸಾಲಸೋಲ ಮಾಡಿ ರಾತ್ರೋ ರಾತ್ರಿ ಬಿಡಿಸಿಕೊಂಡು ಬರ್ತಿದ್ರು. ಇಲ್ಲದಿದ್ರ, ಗೌಡ ಶ್ಯಾನಬೋಗನ ಕಾಮದ ಕಣ್ಣಿಗೆ ಗುರಿಯಾಗುತ್ತಿದ್ದವು ಹರೆಯಹುಡುಗಿಯರು.

ತಾಂಡದ ಮಂದಿ, ಕಳ್ಳಬಟ್ಟಿ, ಕಟ್ಟಿಗೆ, ಕವಳಿ, ಕಂಚು, ಅಂಟು, ಇತ್ಯಾದಿಗಳನ್ನು ಮಾರಿ ನಾಕು ಕಾಸು ಮಾಡಿಕೊಂಡು ನೆಮ್ಮದಿಯಿಂದ ಬದುಕಬಹುದು. ಆದರೆ ಭಟ್ಟಿ ಇಳಿಸಿದಾಗ ಅರ್ಧ ಅವರೆ ಕುಡದು ನೆಂಜಕಿಗ ಕೋಳಿ, ಕುರಿ, ಮೀನು ಬೇಕೇ ಬೇಕು ಅಂದ್ರ ಯಾವಾಗ ಉದ್ದಾರ ಆದಾನು. ಅವಷ್ಟೆ ಅಲ್ಲ, ಹುಕ್ಕ, ಭಂಗಿ ಚಟಗಳು ಬೇರೆ, ಕಾಲಕೆಳಗಿನ ನೆಳ್ಳು ನೋಡಿ ಬದುಕಿರೋ ಮಂದಿಗ ನಾಳೆ ಏನುಗೊತ್ತು ನಾಡಿದ್ದೇನು ಗೊತ್ತು. ಅಲ್ಲೆ ಉಂಡು ಅಂಗಿಗ ಕೈ ಒರೆಸಿಕೊಂಡು ಮೈಮರೆಯುವ ಜನ ನಾಳಿನ ಭವಿಷ್ಯ, ಮಕ್ಕಳ ಬಗ್ಗೆ ಯಾವತ್ತು ಯೋಚನೆ ಮಾಡದಾಗಿದ್ದರು. ಇದ್ದಿದ್ರಾಗ ಯಾರ ಬಳಿಯಲ್ಲೂ ಹೋಗದೆ ಊಟಬಟ್ಟೆಗೆ ಸಾಕಾಗುವಂತೆ ಮಾಡಿಕೊಂಡಿದ್ದೋನು ಅಂದ್ರೆ ಧನ್‌ಸಿಂಗ್ ನಾಯ್ಕ ಮಾತ್ರ. ಅವನ ಮುತ್ತಜ್ಜನ ಕಾಲದಿಂದಲೂ ಒಂದೇ ಸ್ಥಿತಿಯನ್ನು ಕಾಯ್ದುಕೊಂಡು ಬಂದಿದ್ದರಿಂದ, ಆಗಾಗೆ ಅವನಿಗೆ ಸರಿಯಾದ ಮಾರ್ಗದರ್ಶನ ಸಿಗುತ್ತಿತ್ತು. ಸಾಯೋದಕ್ಕೆ ಮುಂಚೆನೆ ಅವನಪ್ಪ "ನೋಡ ಮಗ ಎರಡಮಾತನ್ನ ಯಾವಾಗಲು ಗಂಟಿಕಟ್ಟಿ ಇಟ್ಕೋ. ಭಾಂಧಿಬುಂಧಿ ಬಾಟೆ ಸಿಕಿಸಾಕಿವಾತ ಫಣದಾಡರೇಸ" (ಕಟ್ಟಿದ ಬುತ್ತಿ ಕಲಿಸಿದ ಮಾತು ಭಾಳದಿನ ಉಳಿಯೋದಿಲ್ಲ) ಎರಡನೆಯದು "ತನ್ನ ಬಲವೇ ಬಲ" ಇವೆರಡನ್ನ ಬಲವಾಗಿಯೇ ನಂಬಿಕೊಂಡು ಬಂದಿದ್ದ ಧನ್‌ಸಿಂಗ್ ಬುಕ್ಯಾಕರಮ ತೋಟ್. ಅದಕ್ಕೆ ಅವನು ತನ್ನ ಸ್ವಂತ ಬಲದ ಮೇಲೆ ಎಲ್ಲಾ ಕೆಲಸಗಳನ್ನು ಮಾಡುತ್ತ ಬಂದಿದ್ದ. ಅವನ ಚಿಕ್ಕಪ್ಪ ಮಂಗ್ಲ್ಯಾನ ಮಕ್ಕಳು ಜರಪ್ಲ. ದೇವ್ಯ, ಬದ್ಯಾ ಅವರ ದೊಡ್ಡಪ್ಪ ಸೋಮ್ಲನ ಹಿಡಿತದಲ್ಲಿದ್ದವರು. ಒಟ್ಟಿಗೆ ಕೂಡುಕುಟುಂಬ ಮೂವರು ಮದುವೆ ಆದ್ರು, ಮಕ್ಕಳು ಹೆಂಡಂದಿರು ಪಾಡಾಗೆ ತಿನ್ಕೊಂಡು ಉಣ್ಕೊಂಡು ಇದ್ದವರು ದೀಪಾವಳಿ ಅಮವಾಸೆಗೆ ನಮಗ ಬಟ್ಟೆ ತಂದಿಲ್ಲ. ನಮ್ಮ ಮಕ್ಕಳಿಗೆ ಬಟ್ಟೆ ತಂದಿಲ್ಲಾಂತ, ಕೊಟ್ಟ ಸಾರಾಯಿಯನ್ನು ಬಿಸಾಕಿ ಮೂವರು ಹೊರಗೆ ಬಂದಿದ್ದರು. ಭೀಮಣಿಗ ಅವರ ತಲಿಯೊಳಗೆ ಏನು ನಡಿತಿದೆ ಅಂತ ಗೊತ್ತಾಯ್ತು "ಮಗ ಧನು, ಇನ್ನು ಅವರು ಈ ಮನಿಯೊಳಗ

ಇರಂಗಿಲ್ಲ, ಮಡಕಿ ಮತ್ತ ಮನಸ್ಸು ಒಮ್ಮೆ ಒಡೆದ್ರ ಮುಗಿಯಿತು ಜೋಡಿಸೋಕೆ ಬರಂಗಿಲ್ಲ. ಅವರಿಗೆ ಹೋಗಬೇಕಾಗಿರೋದನ್ನ ಒಳ್ಳೆ ಮಾತಿನಿಂದಲೇ ಕೊಟ್ಟ ಪ್ರೀತಿಯಿಂದಲೇ ದೂರ ಉಳಿಯುವುದರಲ್ಲೇ ಒಳಿತಿದೆ. ಒಡಹುಟ್ಟಿದವರೆ ಬೆನ್ನು ಕಟ್ಟುವುದಿಲ್ಲ, ಇನ್ನೂ ಚಿಕ್ಕದೊಡ್ಡಪ್ಪನ ಮಕ್ಕಳು ಆದಾರೇನೋ ಹುಚ್ಚಪ್ಪ, ದೊಡ್ಡಮಹಾಭಾರತ ಏರ್ಪಟ್ಟು ತಾಂಡದ ಮಂದಿ ನೋಡೋಹಂಗ ಆಗಾಕ ಮುಂಚೆ ಬಿಸಾಡು ಮಗ. ನೀ ಇರೋದು ಒಬ್ಬಂಟಿ ನಾಳೆ ಏನಾರು ಹೆಚ್ಚುಕಮ್ಮಿ ಆದ್ರ. . ." ತಾಯಿ ಕರಳು ಎಲ್ಲಾ ಸಾಧ್ಯತೆಗಳ ಬಗ್ಗೆ ಆಲೋಚನೆ ಮಾಡಿತ್ತು. ಅವನ ವಿರೋಧಿಗಳಾದ ಸಬಾವುಟಿ ಸಾಮಿ, ವಿಸಳಾಮ್ ಓಂಕಾರಿ, ರಾಮಾವತಯಂಕ, ಮಂಗ್ಲ್ಯಾನ ಮಕ್ಕಳಿಗೆ ಉಬ್ಬೆಟ್ಟಿದ್ದರು. "ಲೇ ದಿಮಾಕ ಗೇಡಿ ನನಮಕ್ಕ್ಯಳ್ರಾ ಹೊಲದಾಗ ದುಡಿಯಾಕ ನೀವು ಬಿಳಿದೋತ್ರ, ಬಿಳಿಅಂಗಿ ಹಾಕ್ಕೊಂಡು, ಹಾನಗಲ್ಲ, ಮೊಳಾನು ದೇವದುರ್ಗ, ಚಿತ್ರಕಾಲದುರ್ಗ ಚಳಕೇರಿ ಅಂತಾ ನೀವು ದುಡದಿದ್ದೆಲ್ಲಾ ಗಂಟು ಎಂಟಣಿ ಮಾಡಿ ನೀರಿ ಕುಡಿತಾನ ನಿಮಗೆ ಅವರತ್ರ ಇವರ ಹತ್ರ ಸಾಲ ತೋರಿಸಿ ಇಡಿಗಂಜಿ ಮಾಡ್ಕೊಂಡು ಕುದುರಿ ಮಾಡ್ಕೊಂಡು ಎದ್ದಬಿಡ್ತಾನ." ಕೌರವರ ಕುಲವನ್ನೇ ನಾಶಮಾಡಿದ ಶಕುನಿ ದುರ್ಯೋದನನಿಗೆ ಹೇಳಿದಂಗೆ ತಲೆಕೆಡಿಸಿದ, ಸಾಮಿ ಓಂಕಾರಿ, ಯಂಕ್ಯಾ ಹೇಳಿದ್ದ ವೇದವಾಕ್ಯ ಅನಿಸಿದ್ದೆ ಮಂಗ್ಲ್ಯಾ ಬುಕ್ಯಾ ಕರಮತೋಟನ ಮಕ್ಕಳು ಸೆಡ್ಡಹೊಡದು ಲೇ ತಮ್ಮ, ನಿ ಹೆಚ್ಚಾಗಿ ಹಾರಾಡಬ್ಯಾಡ ನಮ್ಮದೇಟ ಬರತೈತೊ ಒಂದ ತುಂಡನೆಲ ಬೇಕಾರ ಬರವಲ್ಡ್ಯಾಕೆ ಬಿಸಾಡು" ಅಂತ ಕುಂತೆಬಿಟ್ಟರು. ದೀಪಾವಳಿಯ ಅಮವಾಸ್ಯೆ ಕೂಡ ದಾಟೋದಕ್ಕೆ ಬಿಡದಂಗೆ ಮನಿಮುಂದೆ ಕುಂತು ಬಿಟ್ಟರು.

ಧನ್‌ಸಿಂಗ್ ಈಗ ಒಬ್ಬಂಟಿಯಾಗೆ ಹೋರಾಡಬೇಕಾಯಿತು. ಅವನ ಸಹೋದರ ಸಂಬಂಧಿಗಳು ಅನೇಕರು ಅವನ ಹಿಂದೆ ನೆರಳಾಗಿದ್ದರು. ಅವನ ಅಜ್ಜನ ಮೊಮ್ಮಕ್ಕಳು ಯಾಕಂದ್ರೆ, ಸೋಮ್ಲ ಬುಕ್ಯಾನೆ ಅವರ ಬದುಕಿಗೆ ಒಂದು ಆಸರೆ ಮಾಡಿಕೊಟ್ಟಿದ್ದ ನೀಯತ್ತಿನ ಮೇಲೆ ಆತನ ಒಬ್ಬಂಟಿ ಮಗನ ಮ್ಯಾಲೆ ಎಲ್ಲರೂ ಜೀವ ಮಾಡ್ತಿದ್ದರು. "ನೀ ಹೇಳು ಕಾಕ, ಆ ಮಕ್ಕಳ ಹೆಡಮುರಗಿ ಕಟ್ಕೊಂಡ ಬಂದು ನಿನ್ನ ಪಾದದ ಮೇಲೆ ಬಿಸಾಡ್ತಿವಿ" ಅಂತ ಅವನನ್ನ ಸಮಾಧಾನಪಡಿಸುತ್ತಿದ್ದರು. ಇದು ಅತಿಯಾದ ಭಾವನಾತ್ಮಕತೆಯಿಂದ ಆಲೋಚನೆಮಾಡುವುದಲ್ಲ ಅಂತ ಧನ್‌ಸಿಂಗ್‌ಗೆ ಗೊತ್ತಿತ್ತು. ಅವನೆ ಮಾಡಿದ ಆಸ್ತಿಯಲ್ಲಿ ಅವರಿಗೆ ಅರ್ಧಕೊಟ್ಟು ತಾನು ಅರ್ಧ ತಗೊಂಡ. "ಅದು ನಿನಗ್ಯಾಕಪ್ಪ, ನೀನೆ ಈ ಕಡೆಯದನ್ನು ತಗೋ" ಆಟೋ ಇಟೋ ವ್ಯವಹಾರ ಗೊತ್ತಿದ್ದ ಝುರ್‌ಪ್ಲಾಬು ಕರಮತೋಟ್ ಕೇಳಿದ. ಧನ್‌ಸಿಂಗ್ ಮಾತಾಡಲಿಲ್ಲ. ಪಂಚಾಯ್ತಿ ಸೇರಿದವರಲ್ಲಿ ಬಹುಪಾಲು ಕಮರತೋಟ್ ಖಾನ್‌ದಾನ್ ಹಾಳಾಗಬೇಕು ಅನ್ನುವವರೆ ಇದ್ದಿದ್ದರಿಂದ ಅವನು ತುಟಿಪಿಟಕ್ ಅನ್ನಲಿಲ್ಲ ಅವನ ತಾಯಿ ಕಣ್ಣಲ್ಲೆ ಮಗನಿಗೆ ಸುಮ್ಮನಿರುವಂತೆ ಸೂಚಿಸಿದ್ದಳು. ಅವನ ಅಳಿಯ ಕಾರಬಾರಿ ಚಂದ್ರಯನಾಯ್ಕ ತೋರಿಕೆಗೆ ಮಾವನಂತಿದ್ದರು, ಒಳಗೊಳಗೆ ಅವನ ಬೆಳವಣಿಗೆ ಸಹಿಸದೆ ಗಡಾನ ಈ ಮನಿತನ ಹಾಳಾಗಬೇಕು ಅನ್ನೋ ಗುಂಪಿನೊಳಗೆ ಇದ್ದೋನು "ಪಂಚಾಯ್ತಿಯೊಳಗ ಝುರಪ್ಲಾ ತನ್ನಬೇಡಿಕೆ ಮುಂದಿಟ್ಟವ್ನೆ. ಅವನಿಗೆ ಈಗ ಕೊಟ್ಟ ಜಮೀನು ಬೇಡವಂತೆ, ನೀನು ತಗೊಂಡದ್ದೆ ಅವನಿಗೆ ಬೇಕಂತೆ ನೀ ಎನ ಅಂತಿಂದು ಹಟ್ಟಿನಾಯ್ಕ ಧನ್‌ಸಿಂಗ್ ಬುಕ್ಯಾಕರಮತೋಟ್" ವಯುಸ್ಸಿನೊಳಗೆ ಅವನಿಗಿಂತ ದೊಡ್ಡವನಲ್ಲದಿದ್ರು ಪಂಚಾಯ್ತಿಯಲ್ಲಿ ನಾನೆ ದೊಡ್ಡವನು ಎಂಬ ಅಹಂ ನಿಂದ ಮಾತಾಡಿದ್ದ

ಚಂದ್ಯ. ಬೇರೆ ಮಾರ್ಗವೇ ಇಲ್ಲದೆ, "ನಾನೆ ಅದನ್ನು ತಗೋತಿನಿ ಕಾರಿಬಾರಿಗಳೆ, ನನ್ನ ತಮ್ಮಂದಿರೆ ಈಗ ನಾನು ತಗೊಂಡಿರೋ ಐವತ್ತು ಎಕರೆ ತಗೊಳಲಿ" ಒಪ್ಪಿಗೆ ಸೂಚಿಸಿ ಎದ್ದ ಹೋದ, ಓಂಕಾರಿ, ಯಂಕ, ಸಾಮಿ ತಮ್ಮ ಗೆಲುವಿಗೆ ಬೆನ್ನು ತಟ್ಟಿಕೊಂಡವರೆ ಝುರ್‌ಪ್ಲಾನ್ ಸರಿಯಾಗಿ ಸುಲಿಗೆ ಮಾಡಿದ್ರು.

ಯಾವ ಸಮಸ್ಯೆಗೂ ತಲೆಕೆಡಿಸಿಕೊಳ್ಳದ ಧನ್‌ಸಿಂಗ್ ನೂರಾರು ವರ್ಷಗಳಿಂದ ನಡೆದುಬಂದ ಪರಂಪರೆಯನ್ನು ಒಮ್ಮಿಂದೊಮ್ಮೆಗೆ ಜರಪ್ಲಾ ದೇವೂ, ಬದ್ಲಾ, ನುಚ್ಚಾ ನೂರ ಮಾಡಿಬಿಟ್ಟಿದ್ರು. ಸಂಬಂಧಗಳಿಗೆ ಯಾವ ಅರ್ಥ ಇಲ್ಲದಂತೆ ಅವರ ವರ್ತನೆ ಇತ್ತು. ತಾಂಡದಲ್ಲಿ ನಾಯಕನ ಪಟ್ಟ, ಆಸ್ತಿಮಾಡ್ಕಂಡ ಹಳೆ ಹೆಪ್ಪು ಇರಬಹುದು. ಅಂತೆಳಿತಾಂಡದ ಮಂದಿ ಕುಂದ್ರಿಸಗೊಡಲಿಲ್ಲಾ. ಸೋಮ್ಲ ಇರೋಮಟ ಕಿಮಕ್ ಅನ್ನದ ಮಂಗ್ಲ್ಯಾನ ಮಕ್ಕಳು, ಧನ್‌ಸಿಂಗ್ ಹಗಲು ರಾತ್ರಿ ಕಷ್ಟಪಟ್ಟು ಸಂಪಾದಿಸಿದ ನೂರು ಎಕರೆ ಜಮೀನು ಅವರಿಗೆ ನಿದ್ದೆ ಕೆಡಿಸಿತ್ತು. ದರಿದ್ರಲಕ್ಷ್ಮಿ ಕುಂದ್ರಾಕ ಬಿಡಲಿಲ್ಲ. ಮನೆಯನ್ನ ಎರಡು ಭಾಗ ಮಾಡಿಯೇಬಿಟ್ಲು. ಬದಲಾಗುತ್ತಿರುವ ಪರಿಸ್ಥಿತಿಯ ಒತ್ತಡದಿಂದ ಧನ್‌ಸಿಂಗ್ ಸ್ವಲ್ಪ ತೊಂದರೆಗೊಳಗಾಗಿದ್ದ. ಯಾಕಪ್ಪ, ಹಿಂಗಾತು, ಎಲ್ಲಾ ಅವರಿಗೆ ಬಿಟ್ಟಿದ್ದೆ. ಅವರನ್ನ ನಂಬಿ ಏನೇನೋ ಯೋಜನೆಗಳನ್ನು ಹಾಕಿಕೊಂಡಿದ್ದೆ ನನ್ನ ಎಲ್ಲಾ ಕನಸುಗಳು ನುಚ್ಚುನೂರಾದವು. ಬೀಮಣಿಯ ತೊಡೆಯ ಮೇಲೆ ತಲೆಯಿಟ್ಟು ಗಳಗಳನೆ ಅಳತೊಡಗಿದ. ಯಾವತ್ತು ದೃತಿಗಡೆದ ಮಗ ಇವತ್ತು ಈವತ್ತು ಭಾವುಕನಾಗಿರುವುದು ಕಂಡು ದುಃಖಿತಳಾದಳು. "ಬದುಕಿನಲ್ಲಿ ಇವೆಲ್ಲವೂ ಸಹಜ ಕಣೋ ಹುಚ್ಚಪ್ಪ. ಯಾರು ಈ ಭೂಮಿಮೇಲೆ ಚಕ್ರಾದಿಪತ್ಯವನ್ನು ಕಟ್ಟಿ ಆಳಿದ್ದಾರೆ ಹೇಳು, ಕನಸುಕಂಡವರು ನನಸಾಗದೆ ಹೀಗೆ ನಿನ್ನ ಹಾಗೆ ಖಿನ್ನರಾಗುತ್ತಾರೆ. ನಾವು ಕಂಡ ಸಾವಿರ ಕನಸುಗಳಲ್ಲಿ ಅವನಿಚ್ಚೇಯಿಂದ ಇಡೇರುವುದು ಕೆಲವೆ ಕೆಲವು. ಇಲ್ಲದಿದ್ದರೆ ನಾವು ಅಲ್ಲದ್ದಾನಲ್ಲ ಅವನ ಮರತು ನಾವೆ ಸಾಕ್ಷಾತ್ ಅವನಾಗಿ ವರ್ತನೆ ಮಾಡುತ್ತಿದ್ದೆವು.ನಾವು ಕೇವಲ ಅಲ್ಪ ಮಾನವರು ಕಣಮಗ" ಸಮಾಧಾನಪಡಿಸುವ ಪ್ರಯತ್ನ ಮಾಡಿದಳು. ಕ್ಷಣಕಾಲ ಅವನು ನೊಂದು ಕೊಂಡಿದ್ದ ತಾಂಡಕ್ಕೆ ಬಂದ ಅನೇಕ ಸಮಸ್ಯೆಗಳಿಗೆ ಬಂಡೆಗಲ್ಲಾಗಿ ನಿಂತವನು ಹೀಗೆ ಮೃದುವಾಗಿಬಿಡುತ್ತಾನೆಂದು ಯಾರು ಊಹಿಸಲಿಲ್ಲ. "ಆದರೂ, ಇಷ್ಟು ಬೇಗ ಈ ಜನ ಹಿಂಗ ಮೋಸ ಮಾಡ್ತಾರಂದುಕೊಂಡಿರಲಿಲ್ಲ". ತನ್ನ ಅಸಮಾಧಾನ ಹೊರಹಾಕಿದ. "ಲೇ, ಮಗ ಕೌರವ, ಪಾಂಡವ ಒಂದೇ ಅರಮನಿಯೊಳಗ ಇರಾಕ ಆದಿತೆನ್ಲಾ, ಎಲ್ಲಾ ಸುಖವಾಗಿ ದಿನ ಕುರುಕ್ಷೇತ್ರ ಯುದ್ದ ಎಲ್ಲಿ ಆಕ್ತಿತ್ತು. ಆ ಕಳ್ಳ ಅರ್ಜುನನಿಗೆ ಕೃಷ್ಣ ಕೊಲ್ಲುವ ಯೋಜನೆಗಳನ್ನು ಹೇಳದಿದ್ದರೆ ಕಲಿಯುಗ ಬರ್ತಿತ್ತಾ. ಎಲ್ಲಾ ಆ ಪರಮಾತ್ಮನಿಚ್ಛೆ. ಆದದ್ದೆಲ್ಲಾ ಒಳ್ಳೆಯದಕ್ಕೆ ಅಂದ್ಕೊಂಡು ನಿನ್ನ ಮಕ್ಕಳ ಭವಿಷ್ಯ ನೋಡು" ಅವನ ಚಿಕ್ಕಪ್ಪ ಮಂಗ್ಲ್ಯೆ ಸಮಧಾನ ಮಾಡಿದ.

ಇದ್ದ ದೊಡ್ಡ ಗುಡಿಸಲು ತಮಗೆ ಬೇಕೆಂದು ಝುರಪ್ಲ ಜಗಳ ತಗದ. ಓಂಕಾರಿ, ಸಾಮಿ, ಯಂಕ್ಯ ಶನಿಗಂಟು ಬಿದ್ದಂಗೆ ಗಂಟುಬಿದ್ದಿದ್ರು. ಏನು ಮಾಡಿದ್ರು ದನ್‌ಸಿಂಗ್ ಉದ್ದಾರ ಆಗಿರಬಾರದು ಹಂಗ ಮಾಡಾಕಬೇಕಂತ ಹಟತೊಟ್ಟಿದ್ರು. ಯಾರು ಏನ ಮಾಡಿದ್ರೇನು? ಮನುಷ್ಯನ ಹಣೆಬರಹದಲ್ಲಿ ಎನಿದೆಯೋ ಹಾಗೆ ಆಗುತ್ತೆ ಆದರೆ ಅದನ್ನೇ ನಂಬಿ ಬೇಕಾಬಿಟ್ಟು ಲಂಗುಲಗಾಮಿಲ್ಲದ ಕುದುರೆಯಂತೆ ಚೆಲ್ಲು ಚೆಲ್ಲಾಗಿ ವರ್ತನೆ ಮಾಡಿದರೆ ಎಲ್ಲಾನೂ

ಕಳೆದುಕೊಳ್ಳಬೇಕಾಗುತ್ತದೆ ಧನ್‌ಸಿಂಗ್‌ಗೆ ಈ ಎಚ್ಚರಿಕೆ ಇತ್ತು. ಹಾಗಾಗಿಯೇ ಅವನು ತನ್ನಪ್ರತಿಯೊಂದು ನಡೆಯನ್ನ ಪ್ರಜ್ಞಾ ಪೂರ್ವಕವಾಗಿಯೇ ಇಡುತ್ತಿದ್ದ. ಅಣ್ಣತಮ್ಮಂದಿರು ಬೇರೆಯಾದಿಂದ ಅವನ ವಿರೋಧಿಗಳ ಬಲ ಹೆಚ್ಚಾಗಿತ್ತು. ಆದರೆ ಇಡಿ ತಾಂಡದಲ್ಲಿ ಒಂದಿಷ್ಟು ತಿಳುವಳಿಕೆ, ಒಳ್ಳೆಯ ಆಲೋಚನೆಗಳು ಅವನಲ್ಲಿ ಇದ್ದಿದ್ದರಿಂದ ಕೆಲವರಾದರೂ ಅವನಿಗೆ ಗೌರವ ಕೊಡುತ್ತಿದ್ದರು. ಸ್ವತಃ ಸಿದ್ದೇಗೌಡ, ಶಾಬೋಗರೆ ಧನ್‌ಸಿಂಗ್‌ನ ಕಂಡು ಅಂಜುತ್ತಿದ್ದರು. ಏಕೆಂದರೆ ಬ್ರಿಟೀಷರ ಗುಲಾಮಗಿರಿ ಮಾಡುತ್ತಾ ಅವರ ಕಡತಗಳನ್ನ ಬೆಕಾಬಿಟ್ಟೆ ಬರದು ಬಡವರ ಮನೆ ಮುರಿಯುವುದು ನಿರ್ಗತಿಕರನ್ನ ಕೊಳ್ಳೆ ಹೊಡೆಯುವುದು ಅವರ ದಿನನಿತ್ಯದ ಕೆಲಸವಾಗಿತ್ತು. ನಿರಕ್ಷರ ಕುಕ್ಷಿಯಾಗಿದ್ದ ಧನ್‌ಸಿಂಗ್ ತನ್ನ ತಾಯಿನೆಲ್ಲವನ್ನು ಹಾಳುಮಾಡುತ್ತಿದ್ದ ಕೆಂಪಮಂದಿ ಅವರ ಊರಿಗೆ ವಾಪಾಸು ಹೋಗಬೇಕೆಂಬುದು ಅವನ ಮಹತ್ವದ ನಂಬಿಕೆಯಾಗಿತ್ತು. ಹಾನಗಲ್ಲಿನಲ್ಲಿ, ಮೊಳಲ್ಮೂರಿನಲ್ಲಿ, ರಾಂಪುರದಲ್ಲಿ ಚಹ ದುಕಾನ್‌ನಲ್ಲಿ ಲಿಂಗಾಯ್ತರ ಮೊನ್ನಪ್ಪ, ಬ್ಯಾಡರ ಅಂದಾನಪ್ಪ ಸಾಬರ ಬಡೆ ಅಲಿ ಗಾಂಧೀಜಿ ಬಗ್ಗೆ ಮಾತಾಡೋದನ್ನ ಕೇಳಿದ್ದ. "ಇಲ್ಲ ಕಣಪ್ಪ ಸೊಂಟಕ್ಕ ದೋತ್ರ ಬಿಕ್ಕೊಂಡ ಗಾಂಧಿ ಮುತ್ಯ ಕೆಂಪಮಂದಿ ಹಿಂದ ಕೈತೊಳ್ಕುಂಡು ಗಂಟೆ ಬಿದ್ದಾನ" ಚೆನ್ನಪ್ಪ ವರ್ಣನೆ ಮಾಡಿದ." ಅಲ್ಲೇ ಚೆನ್ನಪ್ಪಣ್ಣ, ಅದ್ಯಾರೊ ಭಗತ್‌ಸಿಂಗ್, ಚಂದ್ರಶೇಖರಪ್ಪ, ಇನ್ಯಾರೋರೋ ಹುಡ್ರಪ್ಪ ಮನಿನ್ಯಾಗ ಬಳ್ಳಾರಿಗೆ ಹೋಗಿದ್ದಾಗ ಮಂದಿ ಮಾತಾಡಕಹತ್ತಿದ್ರು, ಕೆಂಪುಮಂದಿ ಸಭಾದಾಗ ಬಾಂಬ ಹಾಕಿದ್ರಂತಪ್ಪ. ಅವರು ಬಾರಿ ಧಾಡಸಿ ನನಮಕ್ಕಳು ನೋಡ. ಅಲ್ಲಪ್ಪ ಈ ಪಾರಿಕೆಂಪುಮಂದಿ, ಕೈಯಾಗ ಬಂದೂಕ ಇರ್ತಾವ ಅಂತಾದ್ರಾಗ ಹೋಗಿ ಬಾಂಬ ಹಾಕೋದಂದ್ರೇನ ಸಣ್ಣಮಾತೇನು ಅಂತು ಆ ಹುಡುಗರನ್ನ ಬಿಟ್ರ ದೇಶ ಗಡಾನ, ಸ್ವತಂತ್ರ್ಯ ಆಕೈತ ನೋಡು". ಅಂದಾನಿ ತನಗ ತಿಳಿದಿದ್ದನ್ನ ಹೇಳಿದ. ಗಾಂಧೀಜಿಯ ಕಟ್ಟಾಭಿಮಾನಿ ಚೆನ್ನಪ್ಪನ ಅಂದಾನಿ ಅಂದದ್ದು ಸರಿ ಅನಿಸಲಿಲ್ಲಾ. "ಲೇ ಅಂದಾನಿ, ಏನಮಾತು ಅಂತ ಆಡಾಕತ್ತೀಯಲೆ, ಅಲ್ಲ ಒಂದು ಹನಿ ರಕ್ತ ಚೆಲ್ಲದೆ ಅಹಿಂಸೆಯಿಂದ ಗೆಲ್ಲಬೇಕು ಅಂತಿರೋ ಗಾಂಧಿತಾತನ ಬಗ್ಗೆ ಏನಲೇ ಗೊತ್ತ ನಿನಗೆ, ಅದ್ಯಾರೋ ಪಡೆಹುಡ್ರು, ಬಿಸಿರಕ್ತದವು ಒಂದೇ ದಿನ ದೊಳಗ ಈ ಕೆಂಪಮಂದಿನ ಓಡಿಸಿಬಿಟ್ಟೇವು ಅಂತವೆ ಆಗದ ಮಾತು. ಅಲ್ಲಪ್ಪ, ತಡಿ, ನೀನು ಹೇಳೂ ಹಂಗಾದ್ರಿಗಿನ, ಈ ಕೆಂಪಜನಬಂದು ಏಟುವರ್ಷ ಆದ್ವು? ನನ್ನ ಲೆಕ್ಕದ ಪ್ರಕಾರ ಒಂದು ಇನ್ನೂರ ವರ್ಷ ಆಗಿರಾಕಿಲ್ವ, ಇಂತ ಏಟಮಂದಿ ಅವರ ಮುಂದ ಎಗರಾಡಿರಾಕ್ಕಿಲ್ಲಾ. ಯಾ ಮಗನಿಗೂ ಜಗ್ಗಿಲ್ಲ ಈ ಮಂದಿ ಅಂತಾದ್ರಾಗ ನಾಕಹುಡುಗರೆಲ್ಲೋ ಏನೋ ದಾಂಧ್ಲಿ ಮಾಡಿದ್ರ ಆದಿತೇನ್ಲಾ. ನಮ್ಮ ಗಾಂಧಿ ತಾತ ಇಡಿ ಜೀವನಾನ ಈ ದೇಶಕ್ಕ ಸಮರ್ಪಣೆ ಮಾಡಿ ಬಿಟ್ಟಾವ. ಏನಪ್ಪ, ಅವನಿಂದ್ಲೆ ಈ ಮಂದಿ ಮಾತಕೇಳೋದು". ಗಾಂಧಿವಾದಿ ಚೆನ್ನಪ್ಪ, ದೊಡ್ಡ ದೊಂದು ಭಾಷಣನೆಮಾಡಿದ. ದೂರದಾಗ ಅವರ ಮಾತನ ತದೇಕಚಿತ್ತದಿಂದ ಕೇಳಿಸಿಕೊಳ್ತಿದ್ದ ಧನ್‌ಸಿಂಗ್ ತನಗೂ ತಿಳಿದಿದ್ದು ಹೇಳಬೇಕು ಅನಿಸಿತು. "ಬುದ್ಧಿ ತಾವು ತಿಳದಂತೋರು, ನಾಕ ಒಳ್ಳೆ ಮಾತ ಹೇಳಿದ್ರಿ, ಆದ್ರ ನಾ ನಿಮ್ಮ ಮಾತ ಒಪ್ಪಾಕಿಲ್ಲ. ನಾವು ಈ ಪ್ರದೇಶವವರೆತಾನೆ, ನಮ್ಮ ತಾಂಡದಮಂದಿ ಕಾಡ ಬಿಟ್ಟು ನಾಡಿನೊಳಗೆ ಬದುಕಲಿಕ್ಕೆ ಆದೀತ. ಆದ್ರ ಕೆಂಪಮಂದಿ ನಮ್ಮನ್ನ ಕಾಡಬಿಟ್ಟು ಓಡಿಸಿದ್ರು, ಎಲ್ಲಾದ್ರೂ ನೆಮ್ಮದಿಯಿಂದ ಬದಕಾನಪ್ಪ ಅಂದ್ರ, ಯಾರ ಕಳ್ಳತನಮಾಡಲಿ, ಸುಲಿಗೆ ಮಾಡಲಿ ನಮ್ಮ ಮಂದಿ ಹೆಂಗಸರನ್ನ, ಮಕ್ಕಳ್ಳನ ಬಿಡದಂಗೆ ಒಯ್ದು ಜೈಲಿನ ತುಂಬ್ತಾರ

ಇದ್ಯಾವ ನ್ಯಾಯ? ಗಾಂಧಿತಾತನ ಮಾತ ಕೇಳಿ ಈ ಮಂದಿ ದೇಶ ಬಟ್ಟಾರೇನು? ಆ ಹುಡ್ರು ಅದ್ಯಾರೋ ಅದಾರಲ್ಲ ಭಗತಪ್ಪ, ಚಂದ್ರಪ್ಪ ಮಾಡಿದ್ದ ಬರೋಬರಿ ಐತೆ, ನಮ್ಮಂತ ಯುವಕರು ಒಂದಾಗಿ ಮುಗಿಬಿದ್ರ ಎಷ್ಟೊತ್ತಿನ ಕೆಲಸ ಅಂತೀನಿ" ಭಾವನಾತ್ಮಕವಾಗಿಯೇ ಮಾತಾಡಿದ್ದ ಧನ್‌ಸಿಂಗ್, ಚೆನ್ನಪ್ಪ ಏನೋ ಹೇಳೋದಕ್ಕೆ ಬಾಯಿ ತಗದಿದ್ದ ಕೆಂಪಮಂದಿ ಸೈನಿಕರು ರಾಂಪುರದ ಮೂಲಕ ಹಾದು ಹೋಗುತ್ತಿತ್ತು. ಮಂದಿ ಮಾಡುತ್ತಿದ್ದ ಕೆಲಸವನ್ನು ಬಿಟ್ಟು ಅಲ್ಲಲ್ಲೆ ಅಡಗಿಕೊಂಡರು. ಚೆನ್ನಪ್ಪ, ಅಂದಾನಿ, ಧನ್‌ಸಿಂಗ್ ಮಾತ್ರ ನಿಂತಲ್ಲೇ ನಿಂತಿದ್ರು. ಎತ್ತರದ ಕುದುರೆಗಳು ಅವುಗಳ ಮೆಲೆ ಅಜಾನುಬಾಹು ಕೆಂಪಮಂದಿ, ಭಾರತದ ಮಂದಿ ಎದಿಯೊಳಗೆ ಭಯ ಹುಟ್ಟಿಸೋದಕ್ಕ ಸುಮಸುಮ್ಮನೆ ಹೋಗೋದು ವಾಡಿಕೆಯಾಗಿತ್ತು. ಸೈನಿಕರು ಕಣ್ಮರೆಯಾದಾಗಿನಿಂದ ಧನ್‌ಸಿಂಗ್ ತಾಂಡದ ಕಡೆಗೆ ಹೊರಟ. ಆದರೆ ಅವನ ಮನಸ್ಸಿನ ಮೂಲೆಯಲ್ಲಿ ಏನೋ ಒಂದು ಅನುಮಾನ ಕಾಡುತ್ತಿತ್ತು.

ದೇಶಸ್ವಾತಂತ್ರ್ಯ ಗಳಿಸಲು ತೀವ್ರವಾಗಯೇ ಹೋರಾಟ ಆರಂಭವಾಗಿತ್ತು. ಭಗತ್‌ಸಿಂಗ್, ಸುಖದೇವ್, ಮುಂತಾದವರನ್ನ ಗಲ್ಲಿಗೇರಿಸಿದ ಸುದ್ದಿ ಮೂಲೆ ಮೂಲೆಯಲ್ಲು ವಿದ್ಯುತ್ ಸಂಚಾರವನ್ನ ಪ್ರವಹಿಸಿತ್ತು. ಯಾರೋ ಮತಾಡ್ತಿರೋದನ್ನ ಕೇಳಿದ ದನ್‌ಸಿಂಗ್ ಕೂಡ ತೀವ್ರವಾಗಿ ನೊಂದುಕೊಂಡು, ಯಾವತ್ತು ಸರಾಯಿ ಕುಡಿಯದವನು, ಅವನ ಹಳೆಯ ಸ್ನೇಹಿತರಾದ, ಪೀರ್‍ಯಾ, ದಾಮು, ಮಂಗ್ಲ್ಯಾ, ಸಕ್ರನಾಯ್ಕರ ಎದುರಿಗೆ ಹುತಾತ್ಮರಾದ ತಮ್ಮ ವಯಸ್ಸಿನವರೆ ಆದ ಭಗತ್, ಸುಖದೇವ ಅವರನ್ನ ಗಲ್ಲಿಗೇರಿಸಿದ ವಿಷಯವನ್ನು ಹೇಳಿದ. ಯಾವತ್ತೂ ಸರಾಯಿ ಮುಟ್ಟದ ಧನ್‌ಸಿಂಗ್ ಹಿಂಗ ಕುಡಿತಿರೋದ ನೋಡಿದ ಗೆಳೆಯರು. "ಲೇ ಏನಾತ, ಒಳ್ಳೆ ನೀರ ಕುಡದಂಗ ಕುಡಿತ್ತಿದ್ದಿಲ್ಲಾ ಸಾಕು ಮಾಡು." ಎಷ್ಟು ಬಡಕೊಂಡ್ರು ಕೇಳದೆ ಕುಡಿಯತೊಡಗಿದ, ಯಾರದು ಸುಳಿವಿಗಾಗಿ ಬಂದ ಸೈನ್ಯ ಕಾಡೊಳಗಿನಿಂದ ದೇಶಬುಕ್ಕನತಾಂಡದ ಕಡೆಗೆ ಬಂದಿತ್ತು. ಸೈನ್ಯದ ಕ್ಯಾಪ್ಟನ್ ಲಿಂಗ್ಡೊ ಲಂಬಾಣಿ ತಾಂಡ ಅಂದ ತಕ್ಷಣ ಉರಿದುಬಿದ್ದಿದ್ದ. ಹೂಯಿಸ್ ದಿಸ್ ಪಿಪಲ್, ಎಷ್ಟು ವರುಷದಿಂದ ಇದ್ದರೆ," ಕೇಳಿದ, ಸಿದ್ದೇಗೌಡ, ಶಾನಬೋಗನ ಮಕನೋಡಿದ ಶಾಬೋಗ ಸಿದ್ದೇಗೌಡನ ಮನ್ನನೋಡಿದ. "ಶಾನಬೋಗ, ಅಯಮ ಆಸ್ಕಿಂಗ್ ಯು ಹೇಳಿ ಎಷ್ಟು ಸಮಯದಿಂದ ಇದಾರೆ ಈ ಪೀಪಲ್" ಶಾನಬೋಗನ ಕಡೆಗೆ ನೋಡಿದ. ಶಾನಬೋಗನಿಗೆ ಪೇಚಿಗೆಟ್ಟಿಕೊಂಡಿತು. ಸತ್ಯ ಹೇಳಿದರೆ ತಳಬುಡ ಎಲ್ಲಾ ತಗಿತಾನ, ತಮ್ಮ ಹಳೆಯ ದಾಖಲೆಗಳಲ್ಲಿ ಇಲ್ಲ, ಹೊಸದನ ಸೇರಿಸಿರೋದು ಗೊತ್ತಾದರೆ ನಮ್ಮ ಕುತ್ತಿಗೆಗೆ ಉರಲು ಬೀಳೋದು ಖಚಿತ ಲಿಂಡ್ಕೊಂಡವನೆ "ಸ್, ಅವರು Just come and Tanda built I not give permission" ಗೌಡನ ತಲೆಗೆ ಬರೋಹಾಗೆ ಸುಳ್ಳು ಹೇಳಿದ. ಧನ್‌ಸಿಂಗ್ ಒಮ್ಮೆ ಅವನ ಮಾರಿ, ಮತ್ತೊಮ್ಮೆ ಕೆಂಪ ಮಂದಿ ಮಾರಿ ನೋಡಿ ತಾಂಡದ ಹಿನ್ನೆಲೆ ಬಗ್ಗೆನೆ ಮಾತಾಡ್ತವೆ, ಅಂತ ಗ್ರಹಿಸಿ ಬಂದೊದಗಬಹುದಾದ ಅನಾಹುತವನ್ನ ಗ್ರಹಿಸಿದ. ಸಿದ್ದೇಗೌಡ, ಶಾನಬೋಗನ ಮಾತು ಕೇಳಿ ಹೈರಾಣಾಗಿದ್ದ "ಲೇ ಶಾನಭೋಗಪ್ಪ, ನೀ ಏನಾರ ತರ್ಲೆ ಬುದ್ದಿ ಮಾಡಿ ವಿಷಯನ ನನ್ನ ತಲಿಗ ಬರೋಹಂಗ ಮಾಡಿದೆ, ಈ ಕೆಂಪ ಮನುಷ್ಯ ಹೋದಿಂದ" ಎಚ್ಚರಿಸಿದ. ಕ್ಯಾಪ್ಟನ್ ಲಿಂಗ್ಡೊ. ಎಲ್ಲಾ ಸೈನಿಕರಿಗೆ ಎಚ್ಚರಿಸಿದ. "ಎಲ್ಲಾ ಬಂಜಾರ, ಗಂಡಸರನು, ಎಳೆದುತನ್ನಿ" ಕೂಗಿದ, ಹೆಂಗಸರು ಮಕ್ಕಳನ್ನ, ಕೆಲ ಹೆಳವರು, ಕೈಲಾಗದವರನ್ನ ಬಿಟ್ಟು ಮಂದಿ, ಕಾಣೆಯಾಗಿದ್ರು. "ನೋ

ಮೆಲ್ ಇಸ್ ಪೌಂಡ್" ಭಾರತೀಯ ಸೈನಿಕ ವರದಿ ಒಪ್ಪಿಸಿದ. "ವಾಟ್, ಒಬ್ಬರೂ ಇಲ್ಲಾ ಎಲ್ಲಿಹೋದರು, ಎಲ್ಲಾ ಮೇಲ್ ಪುರುಷರು. ಕಮ್ ಅನ್ ಸರ್ಚ್‌ದೆಮ್ ಸರಿಯಾಗಿ" ಕ್ಯಾಪ್ಟನ್ ಲಿಂಗ್ಡೊ ಎಚ್ಚರಿಸಿದ. ಕುಡಿದ ಅಮಲು ಇಳಿದಿತ್ತು. ಮಂದಿಮನಿಗ ಅಡ್ಡಾಡಿ, ಅವರು ಇವರ ಮಾತಾಡೋದ ಕೇಳಿಸಿ ಧನ್‌ಸಿಂಗ್, ತೊದಲುತ್ತ, "ಐ ಟೆಲ್, ಐ ಟೆಲ್ ಈ ಜಾಗ ತಾರಪೇರ ತಾರ ಬಡಬೂಡೇರಿ ಕಾವರೆ ರಾತಡೊ ವಾಂದರ್, ಜಾಗ್ ಛೋಡಾನ್ ನಿಕಳೊತೊ ಸಮ್ಮೋರ ನಿಕಾಣ" (ಈ ಜಾಗ ನಿಮ್ಮಪ್ಪಂದಲೆ ಕೆಂಪಮಂಗ್ಯಾ, ಬಿಟ್ಟು ಹೊಂಟೆ ಸರಿ ಇಲ್ಲಾಂದ್ರ) "ವಾಟ್ ವಾಟ್ ಲಾಂಗ್ವಿಜ್ ಹಿ ಸ್ಪಿಕಿಂಗ್," ಎನು ಹೇಳಿದ ಎಂದು ಕ್ಯಾಪ್ಟನ್ ತಲೆ ಕೆರಿದುಕೊಂಡಿದ್ದ." ಬಂಜಾರಿ ಭಾಷೆ ಬುದ್ದಿ. ಕುಡಿದಾಗ ಸೂಳಿಮಗ, ಅದೇನಂದ್ನೊ": ಸಿದ್ದೇಗೌಡ ಧನ್‌ಸಿಂಗ್ ಕಡೆ ನೋಡಿ ಹೇಳಿದ, ಅವನ ಬೋಯ್ದು ಸಿದ್ದೇಗೌಡನ ತಿಂದ ಹಾಕೋಹಂಗ ನೋಡಿ, ಲೇ ಸೂಳಿಮಗನ ಗೌಡ, ಕೆಂಪಮಂಗಗಳು ಬದಕದೆ ಅವರಿಲ್ಲದೆ ಹಾಗ ಒಂದ ಚಕಾರ ಶಬ್ದ ಎತ್ತಬೇಕಿತ್ತು". ಸಿಟ್ಟುಬಂದಿರೋದನ್ನ ಕಡಿಮೆ ಮಾಡಿಕೊಳ್ಳಲು ನೋಡಿದ. "ವಾಟ್, ಇವನು ನಮಗೆ ಸಿಟ್ಟ ತೋರಿದ್ದನೆ ಆಪ್ಟರಾಲ್, ಕಾಡುಮನುಷ್ಯ, ಕಮನ್ ಬಿಟ್ ಹಿಮ್" ಅಪ್ಪಣೆ ಮಾಡಿದ. ಸೈನಿಕರು ಧನ್‌ಸಿಂಗ್‌ನ ಹಿಡಿದು ಹೊಡೆಯತೊಡಗಿದರು. ಅವರ ಸಂಖ್ಯೆ ಕಡಿಮೆ ಇರುವುದನ್ನು ಗಮನಿಸಿದ್ದ ಅಡಗಿ ಕುಳಿತವರು ಒಂದೇ ವೇಳೆಗೆ ಆಕ್ರಮಣ ಮಾಡಿದರು. ಬ್ರಿಟೀಷರ ಸೈನಿಕರು ಬಂದೂಕು ಸಿಡಿಸುವ ಮೊದಲು ಎಲ್ಲರ ರುಂಡವನ್ನ ಬೇರ್ಪಡಿಸಿದ್ದರು ತಾಂಡದ ಮಂದಿ. ಧನ್‌ಸಿಂಗ್ ಏನು ನಡಿತಿದೆ ಅಂತ ಗಮನಿಸುವುದರೊಳಗೆ ಎಲ್ಲಾನೂ ಘಟಿಸಿತ್ತು. ಉಳಿದಕೊಂಡವರು ಸಿದ್ದೇಗೌಡ ಮತ್ತು ಕ್ಯಾಪ್ಟನ್ ಲಿಂಗ್ಡೊ. ತಮ್ಮ ಜನಾಂಗದ ಮೇಲೆ ಕೀಳು ಭಾವನೆ ಇಟ್ಕೊಂಡಿರುವ ಇಬ್ಬರನ್ನು ಹೀನಾಯವಾಗಿ ಕೊಲ್ಲಬೇಕೆಂದು ಮಂದಿ ಮುಂದಾದರು. ನೂರಾರು ಜನರ ನಡುವೆ ಸಿಗಾಕಿಕೊಂಡರು.

ಲಿಂಗ್ಡೊ "ನಾನು ಸೂಟ್ ಮಾಡಿ ನಿಮ್ಮನ್ನ ಕೊಲ್ಲುತ್ತೇವೆ" ಗುಡುಗಿದ. "ನೀನು ಒಂದು ಗುಂಡು ಹಾರಿಸುವುದರೊಳಗೆ ನಿನ್ನ ಎದೆ ಭಗಿತಾರೆ ನಮ್ಮ ಮಂದಿ", ಧನ್‌ಸಿಂಗ್ ಉತ್ತರಿಸಿದ. ಸಿದ್ದೇಗೌಡ ಮತ್ತು ಲಿಂಗ್ಡೊ ತಮ್ಮ ತಾಂಡಕ್ಕೆ ಅನ್ಯಾಯ ಮಾಡಿದ್ದಕ್ಕ, ತಿಪ್ಪೆ ಗುಂಡಿಯಲ್ಲಿದ್ದ ಹುಣಸೆಮರಕ್ಕೆ ಕಟ್ಟಿ ಬೆಲ್ಲದ ನೀರು ಸುರಿದು ಇಡೀ ರಾತ್ರಿ ಅಲ್ಲೇ ಬಿಟ್ಟು, ತಮ್ಮತಾಂಡ ಇನ್ನೂ ಇಲ್ಲೇ ಇದ್ದರೆ ಕೆಂಪಮಂದಿ ಉಳಿಸೋದಿಲ್ಲ ಅಂತ ಮನವರಿಕೆ ಮಾಡಿಕೊಂಡವರೆ, ರಾತ್ರೋರಾತ್ರಿ ತಾಂಡವನ್ನ ಬಿಟ್ಟು ಬೇರೆ ಜಾಗಕ್ಕೆ ಹೋಗಿ ನೆಲಸುವ ಯೋಜನೆ ಹಾಕಿಕೊಂಡರು. ಸಿದ್ದೇಗೌಡ, ಬ್ರಿಟೀಷ್ ಮಂದಿಯ ಹಿಂಸೆ ಅನುಭವಿಸಿ ಅನುಭವಿಸಿ ಸಾಕುಸಾಕಾಗಿತ್ತು. ಸಿದ್ದೇಗೌ ಪ್ರತಿದಿನ ತಾಂಡದೊಳಗೆ ಗೂಳಿಯಂತೆ ನುಗ್ಗಿ ಯಾದ್ಯರು ದುರ್ಬಲರಿದ್ದಾರೋ ಅವರಿಗೆ ಚಿತ್ರಹಿಂಸೆ ಕೊಡತೊಡಗಿದ್ದ. ಮಂದಿ ಸರಿಯಾದ ಸಮಯಕ್ಕಾಗಿ ಕಾಯುತ್ತಿದ್ದರು. ತೆರಿಗೆ ಕೊಡದವರಿಗಂತು ಜೀವನವೆ ಬೇಡ ಎಂಬ ಸ್ಥಿತಿಗೆ ತಂದುಬಿಟ್ಟದ್ದ. ಬ್ರಿಟೀಷರ ಕ್ರೌರ್ಯಕ್ಕೆ ಧನ್‌ಸಿಂಗ್‌ನ ಅಪ್ಪ ಮತ್ತು ಅಜ್ಜಿ ಬಲಿಯಾಗಿದ್ದು ಅವ ಮರೆತಿರಲಿಲ್ಲ.

ಹೋಗಾಕ ಮುಂಚೆ ಇಲ್ಲಿತಾಂಡ ಇತ್ತು ಅಂತ ಪತ್ತನೆ ಆಗಬಾರದು. ಹಂಗೆ ಇದರ ನಿಶಾನೆಯನ್ನ ಧ್ವಂಸಮಾಡಲು ನಿರ್ಧರಿಸಿದ ಧನ್‌ಸಿಂಗ್, ಸಾಮಾನುಗಳನ್ನು ಮಕ್ಕಳನ್ನು ಕಟ್ಕೊಂಡು

ಲದೇಣಿಯನ್ನ ಹೇರಿ ಜನರನ್ನ ಉದ್ದೇಶಿಸಿ ಮಾತಾಡಿದ, "ಬಂಜಾರಬಂಧುಗಳೇ, ಇದೇ ಕೊನೆ ಮತ್ತೆ ನಾವು ಬದಕ್ತಿವ್ರೋ, ಬೆಟ್ಟಿಯಾಗ್ತಿವ್ರೋ ಗೊತ್ತಿಲ್ಲ. ಆದರೆ ದೇಸುನಾಯ್ಕ ತಾಂಡದಲ್ಲಿ ಸುಮಾರು ನುರವರ್ಷಗಳೇ ಕಳೆದಿರಬಹುದು. ಈ ನೆನಪುಗಳು, ಈ ಹೋರಾಟ ಯಾವತ್ತು ನಮ್ಮ ಮನಸ್ಸಿನೊಳಗೆ ಅಚ್ಚು ಒತ್ತಿರುತಾವ. ಮುಂದಿನ ಜಗತ್ತು ದೊಡ್ಡದೈತೆ, ವಿಶಲವಾಗೈತೆ, ಏನೋ, ಆಟು ವರ್ಷಗಳ ಕಾಲ ಕೂಡಾಡಿ ಬದುಕಿದ್ವಿ, ನಿಮ್ಮ ಋಣಾನುಬಂಧವೋ ಏನೋ ನಿಮಗ ಯಾವ ಕಡೆಗೆ ಹೋಗಬೇಕು ಅಂತ ಅನಿಸುತ್ತೆ ಆಯಾ ಕಡೆಗೆ ಆಯಾದಿಕ್ಕುಗಳಿಗೆ ಹೋಗಿ ಮನೆ ಕಟ್ಟಿಕೊಂಡು ಆರಾಮುವಾಗಿರಿ. ಇಲ್ಲಿ ನಡೆದ ಈ ಹತ್ಯಾಕಾಂಡದ ಬಗ್ಗೆ ಯಾರಿಗೂ ಚಕಾರಎತ್ತದಂಗೆ ನಿಮ್ಮೊಳಗೆ ಧಪನ್‌ಮಾಡ್ರಿ, ನಿಮಗೆ ಸೇವಾಭಯ ಒಳ್ಳೆಯದ ಮಾಡಲಿ". ಅವನ ಇಬ್ಬರು ಮಕ್ಕಳು ಎರಡು ಗಾಡಿಗಳ ಮೇಲೆ, ಇಪ್ಪತ್ತು ಎತ್ತುಗಳ ಬೆನ್ನ ಮೇಲೆ ಹೇರಿದ ಸರಂಜಾಮ ಸಮೇತ ರಾತ್ರಿ ಕತ್ತಲಲ್ಲಿ ಎತ್ತುಗಳು ಎಲ್ಲಾರೂ ಹೋದಾವಂತ ಒಂದಕೊಂದು ಜೋಡಿಸಿ ಒಂದೇ ಕಡೆಗೆ ಸಾಗುವಂತೆ ಮಾಡಿದ್ದರು. ಹನುಮು, ಎಲ್ಲಾನೂ ಸರಿಯಾಗಿ ಆಗಿದೆಯಾ?" ಆತ್ಮಸ್ಥೈರ್ಯದಿಂದ ಕೇಳಿದ. "ಹಾಂ ಬಾಪು, ಎಲ್ಲವನ್ನು ಅಚ್ಚುಕಟ್ಟಾಗಿಯೇ ನಾನು ಮತ್ತು ಪಂಪ ಸರಿಯಾಗಿ ನೋಡಿಯೇ ಕಟ್ಟಿದ್ದೀವಿ", "ನಮ್ಮವ್ವ ಗುಣಾಸಕ್ತಿ ಚಿತ್ತ ಹೆಂಗೈತೋ, ಆ ಸೇವಾಲಾಲ್, ಯಾವ ದಿಕ್ಕು ತೋರಿಸುತಾನೋ ನೋಡುವ ಹೊಡಿರಿ ಚಕ್ಕಡಿಯನ್ನ ಏನೂ ಬಿಟ್ಟಿಲ್ಲಾ ತಾನೆ" ಮತ್ತೆ ಕೇಳಿದ. ಸಣ್ಣವನಾದ ಪಂಪಾನಾಯ್ಕ ಮುಂದೆ ಬಂದು "ಹೂಂ, ಬಾಪು ಎಲ್ಲಾನೂ ಕಟ್ಟಿವಿ". ಅಂದವನೆ ಚಕ್ಕಡಿ ಹತ್ತಿದ. ದೇಸುನಾಯ್ಕನ ತಾಂಡ ಬಿಡುವಾಗ ಮಾತ್ರ ಎಲ್ಲರ ಮನಸ್ಸಿನಲ್ಲೂ ದುಗುಡ ತುಂಬಿಕೊಂಡಿತ್ತು. ಒಂದಿಷ್ಟು ಕುಟುಂಬಗಳು ಉತ್ತರಕ್ಕೆ ಹೊರಟರೆ, ಕೆಲಮಂದಿ ಪಶ್ಚಿಮಕ್ಕೆ, ಪೂರ್ವಕ್ಕೆ ತಮ್ಮ ಮನಸ್ಸಿಗೆ ಬಂದಂತೆ ಕಾಡಿನೊಳಗೆ ಸೇರಿಕೊಂಡು ಮುಂದೆ ಲಂಬಾಣಿ ತಾಂಡಗಳ ತಲಾಷೆಗೆ ತೊಡಗಿಕೊಂಡರು. ಧನ್‌ಸಿಂಗ್ ಮಾತ್ರ ಪೂರ್ವದಲ್ಲೇ ನಿರ್ಧರಿಸಿದ್ದಂತೆ ಯಾರೋ ಹೇಳಿದ್ದನ್ನ ಕೇಳಿ, ಉತ್ತರಕ್ಕೆ ಒಂದು ತಾಂಡ ಇರೋದನ್ನ ಖಾತ್ರಿಪಡಿಸಿಕೊಂಡಿದ್ದ. ಗಡ್ಡದಹಳ್ಳನೋ ಇಲ್ಲಾ ಗೌಡನಳ್ಳಿ, ಅದೇ ತಾಂಡಕ್ಕೆ ಹೋಗಿ ತಮ್ಮ ಜನಾಂಗದವರನ್ನ ಸೇರಿಕೊಳ್ಳಬೇಕೆಂಬುದು ಅವನ ಇರಾದೆಯಾಗಿತ್ತು. ಬೆಳಕುಹರಿದಾಗ ಆಗಲೆ ಹಾನಗಲ್ ಗಡಿದಾಟಿದ್ದರು. ಎಲ್ಲೋ ಕಾಣದ ಕಾಡಿನೊಳಗೆ ರಾತ್ರಿ ಸ್ವಲ್ಪಹೊತ್ತು ತಂಗಿದ್ದು ಮುಂಜಾನೆ ಕಾಡುದಾರಿಯಲ್ಲೇ ಅಲೆಯತೊಡಗಿದ್ದರು. ಧನ್‌ಸಿಂಗ್ ಹಿಂದಿದ್ದೋರು ಕರಮ್‌ತೋಟ್ ಬೆಡಗಿದವರೆ ಮುವತ್ತೈದು ಕುಟುಂಬದವರು, ಎಲ್ಲರೂ ಹಿಂದೆ ಒಂದೇ ಕುಟುಂಬದಲ್ಲಿದ್ದ ಅಜ್ಜಂದಿರ, ಚಿಕ್ಕಪ್ಪ, ದೊಡ್ಡಪ್ಪಂದಿರ ಮಕ್ಕಳು ಮೊಮ್ಮಕ್ಕಳು, ಹಾಗಾಗಿ ಅವರೆಲ್ಲ ಒಟ್ಟಾಗಿ ಹೋಗುವುದು ಅನಿವಾರ್ಯವಾಗಿತ್ತು. ಪ್ರತಿಯೊಬ್ಬರಿಗೂ ಆತಂಕಕಾಡುತ್ತಿತ್ತು. ಏಕೆಂದರೆ ಕೆಂಪುಮಂದಿ, ಅವರ ಆಡಳಿತದವರನ್ನ ಕೊಂದು ಪಲಾಯನ ಮಾಡಿದ್ದರು. ಯಾರೊಬ್ಬರು ಅವರ ಕೈಗೆ ಸಿಕ್ಕರೆ ಜೀವಂತ ಉಳಿಸುವುದಿಲ್ಲ ಎನ್ನುವ ಸತ್ಯ ದೇಸುನಾಯ್ಕನ ತಾಂಡದ ಪ್ರತಿಯೊಬ್ಬರಿಗೂ ಗೊತ್ತಿತ್ತು. ಹಾಗಾಗಿ ಹಗಲು ಕಾಡನೊಳಗೆ ಅಡಗಿದ್ದು, ರಾತ್ರಿ, ರಾತ್ರಿಮಾತ್ರವೆ ಪ್ರಯಾಣಮಾಡುವ ಅನಿವಾರ್ಯತೆ ಇತ್ತು. ಹೊರಗಿನ ಜಗತ್ತಿನಲ್ಲಿ ಏನು ನಡೆಯುತ್ತಿದೆ ಎನ್ನುವ ಸತ್ಯ ಯಾರೊಬ್ಬರಿಗೂ ತಿಳಿಯದಾಗಿತ್ತು. ಧನ್‌ಸಿಂಗ್ ಗಾಂಧೀಜಿಯ ಚಳುವಳಿ ಏನಾಯಿತು, ಹೊರಗಡೆ ಎಲ್ಲೋ ಮಹಾಯುದ್ಧ ಆಗ್ತಿದೆಯಂತೆ ಎಂಬುದನ್ನು ಕೇಳಿದ್ದ, ಆದರೆ ಸ್ಪಷ್ಟ ಮಾಹಿತಿ

ಸಿಕ್ಕಿರಲಿಲ್ಲ. ಯಾರಾದರು ನರಪಿಳ್ಳೆ ಸಿಕ್ಕರೆ ಹೊರಗಿನ ಸುದ್ದಿ ತಿಳಿಯುವ ಹೆಬ್ಬಯಕೆ ಅವನದಾಗಿತ್ತು. ಇನ್ನು ಎಷ್ಟು ಕಾಲ ನಮ್ಮ ಮಕ್ಕಳನ್ನು ನಮ್ಮ ಜನರನ್ನು ಈ ಸೂಳಿಮಕ್ಕಳಿಗೆ ಬಲಿಕೊಡುವುದು? ಇನ್ನು ಏಸುಕಾಲ ಇವರಿಗೆ ಅಂಜಿ ಕಟ್ಟಿದ ತಾಂಡಗಳನ್ನೇ ಬಿಟ್ಟು ಗುಳೆಏಳಬೇಕು? ಅವನು ಆವೇಷ ಭರಿತನಾಗಿದ್ದ. ತನ್ನ ಸಂಸಾರವನ್ನು ಒಂದು ಸಾರಿನೋಡಿದ. ಇಲ್ಲ ಇವರಿಗಾಗಿ ನಾನು ಬದುಕಲಿಕ್ಕೆ ಬೇಕು. ನಿರ್ಧರಿಸಿ ಕೊಂಡವನೆ ತನ್ನೊಳಗೆ ಎದ್ದಿದ್ದ ಬಿರುಗಾಳಿಗೆ ಕಡಿವಾಣ ಹಾಕಿದ. ತನ್ನೊಳಗಿನ ಸಂಘರ್ಷವನ್ನು ಹೇಳಿಕೊಳ್ಳುವ ಸೂಕ್ತ ಮಂದಿಯಾರು ಇರಲಿಲ್ಲ. ಅವನ ಸಾಥಿಗಳೆಲ್ಲಾ ಬೇರೆ ಬೇರೆ ದಿಕ್ಕಿಗೆ ಹೋಗಿದ್ದರು. ಅವನ ಅಳಿಯನೂ ಕೂಡ ಅದೇನು ತಿಳಿಯಿತೋ ಸ್ವಲ್ಪ ದೂರದವರೆಗೆ ಬಂದವನು ದಿಕ್ಕು ಬದಲಿಸಿ ಹೇಳದೆ ಕೇಳದೆ ಮರೆಯಾಗಿದ್ದ.

ದೇಸುನಾಯ್ಕನ ತಾಂಡ ಇತ್ತು ಎಂಬುದೆ ಪತ್ತೆ ಇಲ್ಲದಂಗೆ ಮಾಯವಾಗಿತ್ತು. ಸಿದ್ದೆಗೌಡ, ಲಿಂಗ್ಗೊಡರನ್ನ ಕಟ್ಟಿಹಾಕಿದ್ದು ನಿಜ. ಆದರೆ ಅವರನ್ನ ವಿಭಿನ್ನವಾಗಿ ಕೊಲೆಮಾಡಲಾಗಿತ್ತು. ಇಬ್ಬರ ಮೇಲೆ ಜನರ ರೊಚ್ಚು ಎಷ್ಟಿತ್ತು ಎಂಬುದು ಅದರಿಂದ ತಿಳಿಯುವಂತಿತ್ತು. ಅವರನ್ನ ಬಿಚ್ಚಿ ಅವರ ಗುದದ್ವಾರದಲ್ಲಿ ಬೆಣ್ಣೆ ಬಡಿಯುವದರ ಮೂಲಕ ಹತ್ಯೆ ಮಾಡಲಾಗಿತ್ತು. ಯಾರು ಏನೂ ಎಂಬ ಸತ್ಯ ಯಾರಿಗೂ ತಿಳಿಯಲಿಲ್ಲಾ. ಕೆಲವರು ಹೇಳುತ್ತಾರೆ ಬದ್ಯಾ ಬಡ್ತ್ಯಾನ ಕಣ್ಣೆದುರಿಗೆ ಅವನ ಹಿರಿಮಗಳನ್ನು ಅವನಪ್ಪ ಮಲ್ಲಪ್ಪ ಕೆಡಿಸಿದ್ದ, ದಿನ ಮುದುಕನ ಕಾಟ ತಾಳದೆ ಹುಡುಗಿ ಸಾಯಕಹೋಗಿದ್ಲು, ಬದ್ಯಹೆಂಗೋ ನೋಡಿಕೊಂಡು "ಮುಂದ ಒಳ್ಳೆಯದಿನ ಬರುತ್ತೆ ಮಗಳ ಕಾಯಿ" ಸಮಾಧನಪಡಿಸಿದ್ದ. ಅವನು ಸತ್ತು ಹೋದಮೇಲೆ ಅವನ ಮಗ ಸಿದ್ಧ ಪೀತಿ ಜೊತೆಗೆ ಅಲ್ಲದೆ ಅವಳ ಎರಡನೇ ಮಗಳು ಮ್ಯಾಲ ಕಣ್ಣು ಹಾಕಿದ್ದ. ಲಮಾಣ್ಯರ ಹೆಣಂದ್ರ ಹಸ್ಕೊಂಡಾರ ಈ ಸೂಳಿಮಕ್ಕಳ್ರು, ದಿಕ್ಕಿಲ್ಲದ ಮಂದಿ ಕೂಡ ಹಿಂಗ ಏನು ಇವರ ವ್ಯವಹಾರ. ಅವಗವಾಗ ಈ ಪ್ರತಿರೋಧ ಇದ್ದೆ ಇತ್ತು. ಬದ್ಯಾ ತನ್ನ ಸಿಟ್ಟನ್ನ ಈ ರೀತಿ ವ್ಯಕ್ತಪಡಿಸ್ಯಾನ ಅಂತ ಜನರ ಮಾತಾಗಿತ್ತು. ಸ್ಥಳೀಯರನ್ನ ಮತ್ತು ಆಳೋಮಂದಿಗಳನ್ನು ಕೊಂದು ಅದೇ ಜಾಗದಾಗ ನೆಮ್ಮದಿಯಿಂದ ಇರ್ಲಾಕ ಆಗೋದಿಲ್ಲಂತ ಗೊತ್ತಾಗಿ ದೇಸುನಾಯ್ಕನ ತಾಂಡ ಹಾಳಗೆಡವಿ, ತಮ್ಮ ಜಮೀನುಗಳನ್ನು ಬಿಟ್ಟು, ಎಷ್ಟೊ ಜನ ತಮ್ಮ ಭಾವನೆಗಳನ್ನು ಬಿಟ್ಟು ಗುಳೆಎದ್ದಿದ್ದರು. ಒಂದು ಶತಮಾನವೆಂದರೆ ಹುಡುಗಾಟನ, ಬದುಕನ್ನ ಕಟ್ಟಿಕೊಂಡು ಮಕ್ಕಳು ಮರಿಗಳೊಂದಿಗೆ, ನೆಮ್ಮದಿಯನ್ನು ಪಡೆಯಬೇಕು ಎನ್ನುವಾಗಲೇ ದೊಡ್ಡೊಂದು ಆಘಾತಕಾದಿತ್ತು. ಒಂದು ವೇಳೆ ಇವರು ಅವರನ್ನ ಕೊಲ್ಲದಿದ್ದರೆ, ಅವರು ಇವರನ್ನ ಕೊಲ್ಲುತ್ತಿದ್ದರು. ಶತೃತ್ವದ ಕಣ್ಣಾಮುಚ್ಚಾಲೆಯಲ್ಲಿ ಯಾರದಾದರೂ ತಲೆ ದಂಡ ಕೊಡಲೇ ಬೇಕಾದ್ದರಿಂದ ಧನ್‌ಸಿಂಗ್ ತನ್ನ ಮುಂದಿನ ಪೀಳಿಗೆಗಾಗಿ, ಅವರ ಉಳಿವಿಗಾಗಿ ಹೋರಾಡಲೇ ಬೇಕಾಗಿತ್ತು. ಹೋರಾಡಿ ಗೆದ್ದರೂ ತನ್ನ ನೂರು ಎಕ್ಕರೆ ಹೈನಾದ ಜಮೀನನ್ನು ಬಿಟ್ಟು ಹೋಗುವುದು ಅನಿವಾರ್ಯವಾಗಿತ್ತು. ಅವನು ಯಾರನ್ನ ನಂಬಿದ್ದಾನೋ ಅವನು ಸರಿಯಾಗಿ ಮೋಸಮಾಡಿದ್ದ.

ಧನ್‌ಸಿಂಗ್‌ನ ಹಿಂದಿದ್ದ ಕರಮತೋಟ ಬೆಡಗದವರು ಕಾಡಿನೊಳಗೆ ಕಳೆದುಹೋಗಿದ್ದರು. ಗುಡ್ಡದ ನಳಕು, ಅಲ್ಲಲ್ಲೆ ಸಣ್ಣ ಹಳ್ಳಗಳನ್ನು ದಾಟಿ ತಮ್ಮ ದನಕರುಗಳನ್ನು ಮೇಯಿಸಕೊಳ್ಳುತ್ತಾ ಮುಂದಕ್ಕೆ ಹೋಗುತ್ತಿದ್ದರು. ಹಗಲು ಒಂದು ದಟ್ಟ ಕಾಡಿಡವಿಯಲ್ಲಿ ಅವಿತುಕೊಳ್ಳುವುದ ರಾತ್ರಿ

ಪ್ರಯಾಣ ಮಾಡುವುದು ಸಾಗೆ ಇತ್ತು. ಸರಿಸುಮಾರು ಒಂದುವಾರ ಕಳೆದರು ಮಂದಿ ಸುಳಿವು ಸಿಗದಾಗಿತ್ತು." ದಿಕ್ಕು ದೆಸೆಇಲ್ಲದ ಯಾಕಿಂಗೆ ಅಲಿತಿದ್ದೀಯಾ ಮಗ, ನಮ್ಮಂದಿ ಎಲ್ಲದಾರು ಅಲ್ಲಿ ಹೋಗಿ, ಜೋಪಡಿ ಕಟ್ಕೊಂಡು ಕೂಲಿನೋ ನಾಲಿನೋ ಮಾಡ್ಕೊಂಡು ಬದಕೋದನ್ನ ಕಲಿ ಯಾಕಿಂಗೆ ಸೂತ್ರವಿಲ್ಲದ ಗಾಳಿಪಟದಂಗೆ ಅಲಿತಿದ್ದೀಯಾ" ಭೀಮಣಿ ಬುದ್ದಿಹೇಳಿದಳು. "ಹೂಂ, ಮುಂದಿನ ದಿನಗಳು ಅಷ್ಟು ಸುಲಭಇಲ್ಲ. ಕಾಡಿನ ಹೊರಗ ಹೋದರೆ ಬ್ರಿಟೀಷರು, ಇಲ್ಲ ಬೇರೆ ಮಂದಿ ಏನ ಮಾಡ್ಯಾರು ಅನ್ನೋ ಆತಂಕ ಕಾಡ ಒಳಗಡೆ ಎಟದಿನಾಂತ ಇರಾಕೆ ಆದೀತು, ಕಾಳುಕಡಿ ಮುಗಿಯಾಕ ಬಂದಾವ ಮುಂದೇನು ಅಂತೇಳಿ ಯೋಚನೆ ಆಗೈತೆ", ನಿರುಪಾಯನಾಗಿ ಉತ್ತರಿಸಿದ್ದ. ದನಮೇಯಿಸಲು ಹೋಗಿದ್ದ ಹನುಮನಾಯ್ಕ "ಬಾಪೂ, ಎ, ಬಾಪೂ, ಒಂದೇ ಉಸಿರಿಗೆ ಓಡಿ ಬರುತ್ತಿದ್ದ. ಅವನು ಓಡಿಬರುತ್ತಿರುವುದನ್ನ ನೋಡಿ ಕುಂತಿದ್ದವರೆಲ್ಲ ಕೊಡ್ಲಿ ಮಚ್ಚು ಹಿಡಿದು ಎದ್ದು ಓಡಿ ಬಂದಿದ್ದರು. "ಹನುಮ, ಏನು ವಿಷಯ ಬೇಟ, ಯಾಕಿಂಗೆ ಹೌಹಾರಿ ಗಾಬರಿಯಿಂದ ಓಡಿ ಬಂದೀಯ, ಏನು ಸಮಾಚಾರ," ಅವನ ಮೈನವರಿಸುತ್ತ ಕೇಳಿದ, "ಕಾಡಿನೊಳಗೆ ನಮ್ಮಂದಿ ಹೆಂಗಸರು ಕಟ್ಟಿಗಿ ಆರಿಸೋದನ ನೋಡಿದೆ. ಅವರು ಇಲ್ಲೇ ಯಾವುದೋ ತಾಂಡದವರಿರಬೇಕು." ಅಂದು ದಮ್ಮ ಆರಿಸಿಕೊಳ್ಳ ತೊಡಗಿದ. ಅಂದ್ರ ನಾವು ಯಾವುದೋ ತಾಂಡದ ಆಸುಪಾಸಿನಲ್ಲದೀವಿ ಅಂದಂಗಾತು. ಜರಪ್ಲಾ ಬಾರೋ ಅಂದವನೆ ತನ್ನ ಕುದುರೆಯನ್ನೇರಿ ಹನುಮನಾಯ್ಕನನ್ನು ತನ್ನ ಕೂಡ ಕರ್ಕೊಂಡು ಹೊಂಟ. ಸಣ್ಣಬೆಟ್ಟದ ನಳಕಿನೊಳಗ ಒಣಕಟ್ಟಿಗೆ ಆಯುತ್ತಿದ್ದ ಹೆಂಗಸರು ಕುದುರೆ ಸದ್ದುಕೇಳಿ ಅಲ್ಲಲ್ಲೆ ಅಡಗಿಕೊಮಡರು. "ಬಾಯಿಯೊ, ನಾವು ನಿಮ್ಮವರ ಬಂಜಾರಮಂದಿ, ಯಾಕಿಂಗ ಗಾಬರಿ ಆಗೀರಿ, ಬರ್ರಿ ಹೊರಗ, ನಾವೇನ ಕೆಂಪಮಂದಿಗಳಲ್ಲ ನಿಮ್ಮನ ಕಾಡಿಂದ ಹೊರಗ ಓಡಿಸೋದಕ್ಕ" ಧನ್‌ಸಿಂಗ್ ಕೂಗಿ ಹೇಳಿದ., ಒಬ್ಬೊಬ್ಬರಾಗಿ ಹೊರಗ ಬಂದ್ರು. "ಕುಣಚೋರೆ ಬಾಪು ತಮ್" (ಯಾರ್ರಪ್ಪ ನೀವು) ಕೇಳಿದರು. "ನಾವು ಹೀಗೆ ಅಲೆದಾಡ್ತಿರೋ ಜನ ನಮ್ಮ ಬಂಜಾರ ಜನರಿಗಾಗಿ ಹುಡುಕಾಡುತ್ತಾ ಈ ಕಾಡಿನೊಳಗೆ ಕುಳಿಲ್ಲದ ಎಷ್ಟೋ ದಿನಗಳಿಂದ ಅಲಿತಾ ಅದೀವಿ. ಈಗ ನೀವು ದೇವರು ಸಿಕ್ಕಂಗ ಸಿಕ್ರಿ, ಅಲ್ಲಾ ಇಲ್ಲೆ ಪಕ್ಕದ ಯಾವುದಾರೂ ತಾಂಡ ಐತೇನು"? ಪೀಠಿಕೆ ಹಾಕಿದ, "ನೀವು ಮಾರವೇಷದಾಗಿರೊ ಸೈನಿಕರೇನು ಅಲ್ಲ ಅಲ್ವಾ?" ಒಬ್ಬ ಹೆಂಗಸು ಕೇಳಿದಳು. ಮತ್ತೊಬ್ಬಳು, "ಮುಂಡೆ ಮಕ್ಕಳು, ನಮ್ಮ ಮಾತಲ್ಲೆ ಮಾತಾಡಿ ನಮ್ಮನ್ನ ನಂಬಿಸಿ, ನಮ್ಮ ಶೀಲಕ್ಕೆ ಕೈಹಾಕ್ತಾರ". ಅನುಮಾನದಿಂದ ನೋಡುತ್ತ ಹೇಳಿದಳು. "ಛೇ ಛೇ, ಅಂತ ನೀಚರಲ್ಲಾ ನೋಡಿ ನಮ್ಮ ಕೂಡ ನಮ್ಮ ಮಗ ಹನುಮನಾಯ್ಕ ಅದಾನ. ನಾವು ಕೆಂಪು ಮಂದಿ ಸೈನಿಕರೂ ಅಲ್ಲ ನಿಮ್ಮನ್ನ ಮೋಸಗೊಳಿಸಿ ದಿಕ್ಕುತಪ್ಪಿಸೋದಕ್ಕೂ ಬಂದಿಲ್ಲ. ನಮುಗ ನಮ್ಮ ಮಕ್ಕಳಿಗ ನೀವಗತಿ" ಕಳಕಳಿಯಿಂದ ನಿವೇದಿಸಿಕೊಂಡ. ಅದನ್ನ ಕೇಳಿದ ವಯಸ್ಸಾದ ಹೆಂಗಸು, ಮರಗಿದವಳ, "ನೀವು ನಮ್ಮವ್ವರ ಬರ್ರಿ ನಮ್ಮ ತಾಂಡಕ್ಕ, ನಮ್ಮ ಹಟ್ಟಿನಾಯ್ಕ ಬೋಕ ತನಾಯ್ಕ ಬಾಳ ಚಲೋಮನುಷ್ಯ ಅದಾನ ನಮ್ಮ ವರಿಗೆ ಜಾಗ ಕೊಡದೆ ಹೊರಗತಳ್ಳಾಕಿಲ್ಲ" ಆಹ್ವಾನ ನೀಡಿದಳು. "ಜರಪ್ಲ, ಹನುಮ ನೀವು ಹೋಗಿ, ನಮ್ಮ ಲದೇಣಿಯಾನೆಲ್ಲಾ ಹೆರ್ಕೊಂಡು ಖಾಡುವಿನೊಂದಿಗೆ ಈ ಜಾಗಕ್ಕೆ ಬರ್ರಿ. ಅಷ್ಟೊತ್ತಿಗೆ ಇವರು ಹ್ವಾರಿಗಳನ್ನ ಕಟ್ಟಿರ್ತಾರ ನಮ್ಮ ಚಕ್ಕಡಿಮೇಲೆ ಹಾಕ್ಕೊಂಡು ಹೋಗೋಣ. ಅವರನ್ನ ಬೇಗೆ ಬರುವಂತೆ ಹೇಳಿ ಕಳುಹಿಸಿದ ಮೇಲೆ, ತಾನು ಕೇಳಿದ ಗೌಡನಹಟ್ಟಿ ಇರಬೇಕೆಂಬ ಅನುಮಾನ ಧನ್‌ಸಿಂಗ್‌ಗೆ ಗಾಢವಾಗಿ ಕಾಡಿತ್ತು. ಅದನ್ನ ಬಗೆಹರಿಸಿಕೊಳ್ಳೋದು

ಒಳ್ಳೆದಂತೆ. "ಅಕ್ಕ, ನಾನು ಯಾರೋ ಹೇಳಿದ್ದನ್ನ ಕೇಳಿದ್ದೆ, ಇಲ್ಲೆಲೊ ಗೌಡನಹಟ್ಟಿ ಅಂತ ತಾಂಡ ಇರಬೇಕಲ್ವಾ? ಅನುಮಾನಿಸಿದ, ಹೆಂಗಸರು ಗಾಬರಿಯಾದರು. "ಅಲ್ಲಾ ನೀವು" ಒಮ್ಮಿಗೆ ಅಚ್ಚರಿಯನ್ನ ವ್ಯಕ್ತಪಡಿಸಿದರು. ಒಮಿಂದೊಮ್ಮಿಗೆ ಆತ ಹೇಳಿದ್ದನ್ನ ಕೇಳಿ ಸುಮ್ಮನಾದರು. ಕಣ್ಣಲ್ಲೇ ಯಾರು ಏನನ್ನು ಹೇಳಬಾರದಂತ ಸನ್ನೆಮಾಡಿಕೊಂಡರು. ಹಿರಕಳಾದ ಶಾಂತಿಬಾಯಿ ಮಾತ್ರ, "ನಿಮ್ಮದು ಯಾವಸೀಮೆ" ಕೇಳಿದಳು. "ನಮಗೆ, ಯಾವಸೀಮೆ ಇರೋದೆಕ್ಕೆ ಸಾಧ್ಯ ಹೇಳಕ್ಕ, ಹೀಗೆ ಕಾಡು ಮೇಡು ಅಲಿತಾ ಅದೀವಿ, ಬದುಕುಸಾಕ ಆಗ್ಯೆತಿ ಎಲ್ಲಾದರೂ ನೆಮ್ಮದಿ ಸಿಕ್ಕರೆ ನೆಲಸೋದಂತ ಆಲೊಚನೆ ಮಾಡಿವಿ" ಧನ್‌ಸಿಂಗ್ ಹೇಳಿದ. ಅಲ್ಲಭಾಪು ಯಾವುದಾದರೂ ಒಂದೂರು, ಕುಲ, ಗೋತ್ರ ಏನಾರು ಒಂದು ಇರಾಕಬೇಕಲ್ಲ ನೀವು ನಿಜವಾಗಿಯೂ ಬಂಜಾರ ಆಗಿದ್ರೆ ನಿಮಗೊಂದು ಬೆಡಗ ಇರುತ್ತೆ." ಮತ್ತೊಬ್ಬಳು ಅನುಮಾನದಿಂದಲೇ ಕೇಳಿದಳು. ಧನ್‌ಸಿಂಗ್‌ಗೆ ತಮ್ಮಜಾತಿ ಹೆಂಗಸರ ಹತ್ತಿರ ಬೆಡಗ ಹೇಳಿದ್ದೆನು ಅಪರಾಧ ಅಲ್ಲ ಅಂತ ಗೊತ್ತಿತ್ತು. "ಹೌದು, ನಾನು ಕರಮತೋಟ್ ಬುಕ್ಯಾದಲ್ಲಿ ಬರ್ತಿನಿ. ಇಲ್ಲಿಂದ ನೂರ ಮೈಲಿ ದೂರದಲ್ಲಿ ನಮ್ಮದು ಅಂತ ಒಂದು ತಾಂಡ ಇತ್ತು. ಆದ್ರ ಅದನ್ನ ಅನಿವಾರ್ಯವಾಗಿ ಬಿಡಲೇ ಬೇಕಾಯ್ತು ಬಿಟ್ವಿ." ಹೆಚ್ಚಾದರ ತನ್ನ ಬುಡಕ್ಕ ಬರುತ್ತೆ ಅಂತೇಳಿ ಸುಮ್ಮನಾದ. "ಇಲ್ಲಾ ಅವನು ಬಂಜಾರನೆ ಬಿಡು, ಎರಡಮಾತಿಲ್ಲ" ತಮ್ಮ ತಮ್ಮೊಳಗೆ ಮಾತಾಡಿಕೊಂಡು ಅವರ ಲದೇಣಿಯ ಬರೊಮಟಾನು ನಿಧಾನಕ್ಕೆ ಒಣಕಟ್ಟಿಗೆಗಳನ್ನು ಆಯತೊಡಗಿದರು.

ಆ ಲಂಬಾಣಿ ಹೆಂಗಸರು ಮೂವತ್ತು ಕುಟುಂಬದ ಹೆಂಗಸರುಗಳೊಂದಿಗೆ ಭಾಳಸಲುಗೆಯಿಂದ ಮಾತಾಡುತ್ತಾ, ಹರಟುತ್ತಾ ತಮ್ಮೂರಿಗೆ ಕರೆದುಕೊಂಡು ಹೊರಟರು. ಇನ್ನೇನು ಊರು ಒಂದು ಫರ್ಲಾಂಗ್ ಇರುವಾಗ ಬೇವಿನಮರದ ಬುಡದಲ್ಲಿ ಕಟ್ಟೆಮೇಲೆ ಕುಂತ ಮಂದಿ ಲದೇಣಿಯಾ ಹೇರಿಕೊಂಡು ಬರ್ತರೋಮಂದಿಯನ್ನ ನೋಡಿ ಎದ್ದು ಮುಂದೆ ಹೋದರು. ಧನ್‌ಸಿಂಗ್‌ಬುಕ್ಯಾಕರಮತೋಟ್ ಕುದುರೆ ಇಳಿದು "ಹ ರಾಮ್ ರಾಮ್ ಪಂಚಪಂಚಾಯಿತಿ ರಾಜ ಬೋಜೇರಸಭಾ, ಪಚಾರೇ ಲಾಕ್, ಅನಪಚಾರೆ ಸವಾಲಕ್ ಸಬ್ ದೇ ಆನಂದ್" ಅಭಿವಂದನೆ ಸಲ್ಲಿಸಿದ. ಹಟ್ಟಿನಾಯ್ಕ ಭೋತನಾಯ್ಕ "ಸಗಳ್ ಸಬಿ ಆನಂದ ಆನಂದ್, ಅಂದಹಾಗೆ ಯಾವ ಸೀಮೆಯಿಂದ ಬಂದಿದ್ದು" ಕೇಳಿದ "ಮೂಡಣದಿಕ್ಕಿಂದ ಹೊರಟಿದ್ವಿ ನಮ್ಮ ಮಂದಿ ಕಂಡಲ್ಲಿ ಬೀಡುಬಿಡಬೇಕು ಅನ್ನೋಬಯಕೆಯಿಂದ ಅಡ್ಡಾಡಿ ಸಕಾಗಿ ತಮ್ಮ ಆಶ್ರಯಕ್ಕೆ ಬಂದೀವಿ ತಾವು ದೊಡ್ಡಮನಸ್ಸು ಮಾಡಿದ್ರ ನಾವೆಲ್ಲ ಅಣ್ಣತಮ್ಮಂದಿರು ಒಟ್ಟು ಮೂವತ್ತು ಜನರಿದ್ದೀವಿ..." ರಾಗಎಳೆದ. "ಅದೇ ಸೇವಾಲಾಲ್, ಈ ಭೂಮಿ ಆ ಭಗವಂತ ಕರುಣಿಸಿದ್ದು ಈ ಕಾಡು, ಗುಡ್ಡ, ಹಕ್ಕಿ ಪಕ್ಷಿ ನಮ್ಮವೇನಪ್ಪ, ಎಲ್ಲವೂ ಆ ಸೃಷ್ಟಿಕರ್ತನ ಅಣತಿಯಂತೆ ನಡೆಯುತ್ತಿವೆ. ಅವನಿಚ್ಚೆ, ಧರ್ಮ, ಕರ್ಮದಿಂದ ಬದಕೋದ ಕಲಿರಿ". ಉಪದೇಶ ಮಾಡುತ್ತಿದ್ದಂತೆ, ಜಾಪ್ಯ ಮತ್ತು ಅವನ ಇಬ್ಬರು ತಮ್ಮಂದಿರು, "ಧನ್‌ಸಿಂಗ್, ನಾವಿಲ್ಲಿ ಇರಲ್ಲ, ನಾವು ಮುಂದಿನ ಸೀಮೆಗೆ ಹೊಕ್ಕೀವಿ" ಅಂದವರೆ ಯಾರ ಪ್ರತಿಕ್ರಿಯೆಯನ್ನು ಕಾಯದೆ ಹೊರಟುಬಿಟ್ಟರು. ಅವನ ಹಿಂದೆ ಮತ್ತೆ ಐದಾರು ಕುಟುಂಬಗಳು ಹೊರಟುಬಿಟ್ಟವು. ಉಳಿದ ಹತ್ತು ಹದಿನೈದು ಮಂದಿ ತಮ್ಮ ಕುಟುಂಬದ ಸದಸ್ಯರು ಮಕ್ಕಳೊಂದಿಗೆ ಬೋತಾನಾಯ್ಕನ ಹಿಂದೆ ಹೊರಟರು. ಪರಾಂಪೋಕ್ ಜಾಗನೋಡಿ ಹಟ್ಟಿನಾಯ್ಕ ಎಲ್ಲರಿಗೂ ಬೇಕಾದಾಟು ಜಾಗಹಿಡ್ಕೊಳಾಕೆ ಹೇಳಿದೆ. ಧನ್‌ಸಿಂಗ್ ತನ್ನ ಇಬ್ಬರು ಮಕ್ಕಳಿಗೆ

ಬೇಕಾಗುವಷ್ಟು ದೊಡ್ಡ ಜಾಗವನ್ನು ಹಿಡಿದದ್ದ ಗಡಿ ಗುರುತಿಸಿ ಬೇಲಿಹಾಕಿದ. ಅವನ ಚಿಗಪ್ಪ, ದೊಡ್ಡಪ್ಪನ ಮಕ್ಕಳು ಅವರು ಪಕ್ಕ ಪಕ್ಕದಲ್ಲಿ ದೊಡ್ಡ ಜಾಗಗಳನ್ನು ಹಿಡಿದುಕೊಂಡರು, ಗುಡಿಸಲು, ಕಣ, ದನಕರುಗಳು ಎಲ್ಲವನ್ನು ಸರಿದೂಗಿಸಿಕೊಂಡು ಜಾಗವನ್ನು ಹಿಡಿದಿದರು. ಹೊಸಜಾಗ, ಹೊಸಮಂದಿ, ಹೊಂದಾಣಿಕೆಗೆ ಸಂಘರ್ಷ ಏರ್ಪಟ್ಟಿತ್ತು. ಆದರೆ ತನ್ನ ಮಕ್ಕಳ ಭವಿಷ್ಯ ಮತ್ತು ತನ್ನ ವಂಶದ ಉದ್ಧಾರಕ್ಕಾಗಿ ತಾನು ದೊರೆಯಂತೆ ಆಳಿದ್ದನು ನಾಯ್ಕಣಿ ಮಾಡಿದ್ದರು. ತಾಂಡವನ್ನು, ಅಲ್ಲಿಯ ಸವಲತ್ತನ್ನ ಸಂಪೂರ್ಣವಾಗಿ ಮರೆಯಬೇಕಾಯಿತು. ತಾನೆ ಸ್ವಂತ ಹಟ್ಟಿನಾಯಕನಾಗಿ ಎಲ್ಲಾ ನ್ಯಾಯಗಳನ್ನ ಬಗೆಹರಿಸಿ ತಾನೆ ಮುಂದೆ ನಿಂತು ಹಬ್ಬಗಳನ್ನು ಮಾಡಿಸಿದ್ದು ಸಂಪ್ರದಾಯಗಳ ತೊಡಕು ಬಂದಾಗ ಸರಿಯಾದ ಮಾರ್ಗೋಪಾಯ ನೀಡಿದ್ದ ಧನ್‌ಸಿಂಗ್ ಗುಡೆಕೋಟೆ ತಾಂಡದ ರೀತಿ ರಿವಾಜುಗಳಿಗೆ ಹೊಂದಿಕೊಳ್ಳಲು ಹೆಣಗಾಡಿದ.

ಮೂಲನಿವಾಸಿಗಳು ಮತ್ತ ವಲಸೆ ಬಂದವರು ಒಮ್ಮೊಮ್ಮೆ ಕೈಕೈ ಮೀಲಾಯಿಸಿದ್ದರು. ಧನ್‌ಸಿಂಗ್‌ನೆ ಎಲ್ಲರನ್ನು ಸಮಾಧಾನಪಡಿಸಿ ಬುದ್ಧಿಹೇಳುತ್ತಿದ್ದ "ಲೇ ಹುಚ್ಚಪ್ಪ, ಒಂದೂರಗೌಡ ಮತ್ತೊಂದಿರಗ ಹೋದ್ರ ಸಾಮಾನ್ಯ ಮನುಷ್ಯ ಕಣ್ಣಲೇ, ತನ್ನೂರಲ್ಲಿ ನಡಸೋ ಗೌಡಕಿನ ಮತ್ತೊಂದೂರಿನೊಳಗ ನಡಸಾಕಹೊದ್ರೆ ನಡಮುರಿತಾರ. ನಮ್ಮ ಪರಿಸ್ತಿತಿ ಸರಿ ಇಲ್ಲಪ್ಪ ನಾವು ಗಪ್ಪಾಗೋದು ಒಳ್ಳೆದು. ಮಕ್ಕಳ ಮರಿ ಸಲುವಾಗಿ ತೋಟಕ, ಹೊಲಗಳನ್ನು ತಗಿಯೋಣ ನಡಿರಿ ಕಾಡಿಗ" ಅವನ ಚಿಗಪ್ಪನ ಮಗ ಶೇಖ್ಯಾನಾಯ್ಕಗ ಬುದ್ಧಿ ಹೇಳಿದ್ದ. ತಾಂಡದ ಒಳಗಿನ ಒಣರಾಜಕೀಯ ಧನ್‌ಸಿಂಗ್ ನನ್ನ ನಿಶಕ್ತ ಗೊಳಿಸಿತ್ತು. ಅವನ ವಿದ್ವತ್ತು, ಪಾಂಡಿತ್ಯ, ತಳವಳಿಕೆಯನ್ನ ಯಾರು ಮೂಸಿನೋಡದಾಗಿದ್ದರು. ಅದನ್ನು ತೋರ್ಪಡಿಸೋದಕ್ಕ ಸರಿಯಾದ ಸಂದರ್ಭಕೂಡ ಒದಗಿ ಬಂದಿರಲಿಲ್ಲ. ತಾನೆ ಖುದ್ದಾಗಿ ಹಾರಿ, ಪಿಕಾಸಿ, ಗುದ್ದಲಿ ಸಲ್ಕಿ ಹಿಡಿದು ಕಾಡಿನೊಳಗೆ ಒಳ್ಳೆನೆಲಗುರುತಿಸಿ ಜಮೀನು ಮಾಡಲು ಮುಂದಾದ. ಅವನು ಆಯ್ಕೆ ಮಾಡಿದ್ದ ಐನಾತಿ ಜಾಗದ ಜಾಡನ್ನ ಹಿಡಿದ ಗುಡಿಕೋಟೆ ತಾಂಡದ ಗಜನಿನಾಯ್ಕ ಅವನು ತಗದಿರುವುದನ್ನು ಸೇರಿಸಿ ಗಡಿಯನ್ನ ಒತ್ತುವರಿ ಮಾಡಿದ್ದಲ್ಲದೆ ರಕ್ಕಸಪಟ್ಟಿಯ ಮರಿಗಳನ್ನು ತಂದು ನೆಟ್ಟು ಮೇರೆಯನ್ನು ಕಟ್ಟಿದ. ತಮ್ಮ ಶ್ರಮವನ್ನು ಅನಾಯಾಸವಾಗಿ ತನ್ನದನ್ನಾಗಿ ಮಾಡಿಕೊಳ್ಳುತ್ತಿರೋ ಗಜನಿನಾಯ್ಕ ಮತ್ತು ಅವನ ನಾಲ್ಕು ಮಕ್ಕಳೊಂದಿಗೆ ಹನುಮನಾಯ್ಕ ಜಗಳತಗದಿದ್ದ. ಲೇ ಹೇಳೋರ ಕೇಳೋರು ಯಾರಲ್ಲೇನ ನಿಮಗ. ನಾವು ಶ್ರಮಪಟ್ಟು ತಗದಿರೋ ಭೂಮಿಯನ್ನೆಲ್ಲಾ ನೀವು ಹಡಪಾಕ ಬಂದಿರಿ ನಮ್ಮನ್ನ ಏನಂತ ತಿಳ್ಕೊಂಡಿರಿ ವಲಸೆ ಬಂದೋರು ಏನು ಮಾಡಲ್ಲ ಹೇಡಿಗಳಂತೆ ತಿಳಿದಿರನ. ನಮಗ ಸೇರಬೇಕಾದ ಜಮೀನನ್ನು ಒಂದು ತುಂಡು ನೀವು ಊಳಬಾರದು. ಹಂಗೇನಾದರು ಮಾಡಿದ್ರೆ ನನಗಿಂತ ಕೆಟ್ಟವನು ಯಾರು ಇಲ್ಲ" ಅವಾಜಹಾಕಿದ್ದ. ಎದಿಯಿಂದ ಅಡ್ಡಾಡುತ್ತಿದ್ದ ಗಜನಿಮಕ್ಕಳಿಗೆ ಅವನ ಮಾತಿನಧಾಟಿ ನಾಟಿದ್ದಕ್ಕೆ ಗರಂ ಆಗಿ, "ಯಾಕಲೇ, ವಲಸೆ ಬಂದವನ ತಾಂಡ ಕಟ್ಟಿದೋರು ನಮ್ಮಜ್ಜ ಮುತ್ತಜ್ಜ, ಗೆದ್ಲುಕಟ್ಟಿದ ಹುತ್ತದಾಗ ಹಾವು ಹೊಕ್ಕಂಡಂಗ, ನಾವೆಲ್ಲ ಸರಿಯಾಗಿ ಮಾಡಿದ್ದು, ಅದ್ರಾಗ ಬಂದು ಕೈಹಾಕಿದ್ದಲ್ಲದೆ ನಮಗೆ ಉಲ್ಟಾಮಾತಾಡ್ತಿ". ಅವನ ಕೊರಳಪಟ್ಟಿ ಹಿಡಿದು ಜಗ್ಗಾಟಮಾಡಿದ್ದ. ಅವನ ಚಿಕ್ಕಪ್ಪಂದಿರು ಬಂದು ಲೇ ತಮ್ಮ ಹನಮ ಸುಮ್ಮನಾಗು ನಿಮ್ಮಪ್ಪ ನಾಡ ಪಂಚಾತಿ ಮಾಡದೋನು ಅವನು ಬಗೆಹರಿಸ್ತಾನ ನೀಯಾಕ ತಲಿ ಹಾಳಮಾಡ್ಕತಿ" ಅಂತೇಳಿ ಎಲ್ಲರನ್ನು ಬಿಡಿಸಿ ದೂರ ದಬ್ಬಿದರು.

ವಿಷಯ ಒಳಗೊಳಗೆ ಹೊಗೆ ಆಡ್ತಿತ್ತು. ಗಜನಿ ಮಕ್ಕಳ ಉಪಟಳ ಹೆಚ್ಚಾಯಿತು. ಧನ್‌ಸಿಂಗ್ ಚಿಕ್ಕಪ್ಪನ ಮಗ ರಾಮನಾಯಕ ತಗದ ಜಮೀನನ್ನೆಲ್ಲಾ ನಮ್ಮದ ಅಂತ ಮೇರಿಹಾಕಕ ಹೋದ್ರು. ರಾಮ ಒಬ್ಬನೆ ಪ್ರತಿರೋಧ ಮಾಡಾಕ ಹೋದ ಅವನನ್ನ ಹಿಡಿದು ಸರಿಯಾಗಿ ಹೊಡೆದು ತಾಂಡಕ್ಕ ಅಂಜಿಕೆ ಹುಟ್ಟಿಸುವ ಹುನ್ನಾರ ನಡೆಸಿದರು. ಸುದ್ದಿ ಧನ್‌ಸಿಂಗ್‌ಗೆ ಮುಟ್ಟಿತು. ಅಣ್ಣತಮ್ಮರನ್ನೆಲ್ಲಾ ತನ್ನ ಗುಡಿಸಲಿಗೆ ಕರದ. "ಹಿಂಗಾರ, ನಾವು ಈ ಊರಾಗ ಉಳಿಯಾಕ ಆದಿತೇನು, ನಡಿರಿ ಮುಂದ ಜಗತ್ತು ವಿಶಾಲವಿದೆ ಎಲ್ಲರೂ ನೆಮ್ಮದಿಯಿಂದ ಇರೋಣ" ಧನ್‌ಸಿಂಗ್ ಸೋದರ ಸಂಬಂಧಿ ಶೇತುನಾಯ್ಕ ಹೇಳಿದ. ಮತ್ತೊಬ್ಬ ಮತ್ತೊಂದು ಹೇಳಿ, ಗುಳೆ ಹೊರಡಲು ಮುಂದಾದರು. ಧನ್‌ಸಿಂಗ್ ಸುಮ್ಮನೆ ಕೇಳಿಸಿಕೊಳ್ತಿದ್ದಾ "ಲೇ ನೀವೇನು ನಾಮರ್ದರ, ಕೈಗ ಬಳಿ ತೊಟ್ಕೊಂಡೀರ. ಈ ಜಗತ್ತಿನ ಎಲ್ಲಾ ಭಾಗದೊಳಗು ಇಂಥ ಮಂದಿ ಇದ್ದ ಇರ್ತಾರ. ಎಷ್ಟಂತ ಹೆದರ್ತಿರಿ. ಎಲ್ಲಿವರಿಗೆ ಹೆದರ್ತೀರಿ. ಗಂಡಸಾದವನು ಎಂಥ ಪ್ರತಿರೋಧವನ್ನು ಎದುರಿಸಿ ಬದುಕನ್ನು ಕಟ್ಟುತ್ತಾನೆ. ಇಲ್ಲೇನೋ ಹೆಸರಿಸಿ ಅದ್ಯಾವನೋ ಕೆಲ್ಸಕ ಬರದೋನು ಅಂಜಿಕಿ ಹಾಕಿದಂತ ಈ ಉರ ಬಿಟ್ಟ ಮುಂದಿನೂರನಲ್ಲಿ ಇಂಥ ಮಂದಿ ಇಲ್ಲಾಂತ ಏನು ಗ್ಯಾರಂಟಿ. ಆ ಊರಾಗೂ ಹೆದರಿಸಿದ್ರೆ ಅಲ್ಲಿಂದನೂ ಗುಳೆ ಕೀಳಬೇಕಲ್ಲ. ಹಿಂಗಮಾಡ್ತ ನೀವೇನೋ ಸತ್ತು ಹೆಣ ಆಗ್ತಿರಿ ನಿಮ್ಮ ಮಕ್ಕಳ ಭವಿಷ್ಯದ ಗತಿಏನು? ಊರಾಗಮನಿ ಇಲ್ಲ ಅಡಿವ್ಯಾಗ ಹೊಲ ಇಲ್ಲ. ಮತ್ತೊಬ್ಬರ ಗುಲಾಮರಾಗಿ ಕೆಲ್ಸ ಮಾಡ್ಕೊಂತ ಬದುಕೋದು ಅಷ್ಟೇ. ಇಲ್ಲಿ ಅಪತ್ಕಾಲಕ್ಕಂತ ನಾವೆಲ್ಲ ಅಣ್ಣತಮ್ಮಂದಿರು ಒಟ್ಟಾಗಿ ಅದೀವಿ"., ತುಟಿಪಿಟಕ್ ಅನ್ನದ ಕೇಳಿದರು. ಗಜನಿ ಮಕ್ಕಳ ಸಮಸ್ಯೆ ಒಂದು ಸವಾಲಾಗಿತ್ತು. ರಾಮ ಈ ಸಮಸ್ಯೆಯಿಂದ ಪಾರಾಗಾಕ ಉಪಾಯಕಾಣದೆ, "ಅಲ್ಲ ಕಾಕ, ಆ ಗಜನಿ ಮಕ್ಕಳು ತೂಕ, ಕಾಣು, ಉಪಟಳ" ಏನೋ ಹೇಳಾಕ ಬಾಯಿತೆಗೆದ, ಅಲ್ಲಲ್ಲೆ ರಾಮ ಕಡದ್ರ ನಾಕ ತುಂಡ ಆನಂದದಿ ಮಗನ, ಒಬ್ಬೊಬ್ಬರನ್ನ ಸಿಗದು ಬಿಡಬಹುದು ಅಂತಾದ್ರಾಗ ಹೊಡ್ತಾತಿಂದು ಬಂದಿ ಅಂದ್ರ". ಅವನ ತಾಕತ್ತಿಗೆ ಸವಾಲು ಹಾಕಿದ್ದ ಧನ್‌ಸಿಂಗ್, "ಆವತ್ತು ಪರಸ್ಥಳ, ಪರಸಂಕಟ, ಅಂತೇಳಿ ಸುಮ್ನಾಗಿದೆ ಕಾಕ. ಈಗೇನಾರು ತಂಟೆಗೆ ಬಂದರೆ ನಡಾನೆ ಮುರಿತಿನಿ. ನೀವು ಹೇಳಿದ್ರಲ್ಲಾ ಆತು ಬಿಡು". ಅಂದವನೆ ತಾನು ಮರೆಹಾಕಿದ್ದನ್ನ ಭದ್ರಪಡಿಸೋದಕ್ಕೆ ಹೊರಟು ನಿಂತ. ದುಡೊಯೋರಿಗೆ ಅಡ್ಡಿ ಆಗೋದನ್ನ ಯಾರು ಸಹಿಸೋದಿಲ್ಲ. ಅವನು ತಿಳ್ಕೊಂಡು ಮತ್ತ ಮೇವು ಹಾಕತೊಡಗಿದ. ಗಜನಿ ನಾಯ್ಕನ ಮಕ್ಕಳು ಕಾಣು ಮತ್ತ ಪೀಕ. ಹಿಂದ ಮುಂದ ನೋಟಡದೆ "ನಾವು ಬೇಲಿ ಹಾಕಿದ್ರೆ ನೀ ಅದನ್ನ ಕೆಡಸಿ ಬೇರೆದ ಹಾಕಾಕ ಹತ್ತಿ ಏಟು ಪೊಗರು ಮೈಯಾಗಂತೀನಿ." ಕಾಣು ಕೈಯಾಗಿದ ಮಚ್ಚನ ಎತ್ತಿಕೊಂಡವನೆ, ರಾಮನಾಯ್ಕ ಹೆದರಿ ಓಡ್ತಾನಂತ ಅವನ ಕಡೆಗೆ ಓಡಿದ. ರಾಮ, ಅಂವ ಹತ್ತಿರ ಬರೋಮಟ್ಟಾನು ಕಾದವನೆ ಕೈಹಿಡಿದು ಅಜಾಮತ ಎತ್ತಿ ನೆಲಕ ಬಿಸಾಡಿದ. ಯವ್ವ ಸತ್ನೆ" ಚೀರಿದ, ತಮ್ಮನ್ನ ಹೊಡದುರುಳಿಸಿದ್ದ ನೋಡಿದವನೆ, "ಲೇ ಪರದೇಶ ನನಮಗನೆ, ಮುಟ್ಟಿ ಹೊತ್ಕೊಂಡು ಊರಿಗೆ ಬಂದೋನು ನನ್ನ ತಮ್ಮಾಗ ಹೊಡಿತಿ ಏನಲೇ, ಬಂದೆ ತಡಿ ಮಾಡ್ತಿನಿ." ಅಂದವನೆ ಕಟ್ಟಿಗೆ ತುಂಡೊಂದನ್ನು ಎಳೆದುಕೊಂಡವನೆ ರಾಮನಾಯ್ಕನ ಮೇಲೆ ಎಗರಿದ ಕಟ್ಟಿಗೆಯಿಂದ ಅವನ ತೋಳಮೇಲೆ ಬಲವಾಗಿ ಹೊಡೆದ. ರಮನಾಯ್ಕ ಜುಪ್ಪನದೆ ನಿಂತಿದ್ದ. ಮತ್ತೊಮ್ಮೆ ಬೀಸಿದ, ತಪ್ಪಿಸಿಕೊಂಡವನೆ ಅವನ ಕೈಯಿಂದ ಕಟ್ಟಿಗೆಯನ್ನ ಕಸಿದುಕೊಂಡು.

"ಬೋಳಿಮಗನೆ, ನಾನು ನಮ್ಮಪ್ಪ, ಮನಿಯಾನ ಹೆಂಗಸರು ಮಕ್ಕಳು ಕಷ್ಟಪಟ್ಟು ತಗದ ಜಮೀನು ನಿನ್ನದೆಂಗಾಗುತ್ತೋ". ಅಂದವನೆ ಹಿಗ್ಗಾಮುಗ್ಗಾ ಹೊಡೆಯತೊಡಗಿದ. ಹೊಡ್ತಾತಾಳದೆ, "ಅಯ್ಯೋ ಯಾರಾರು ಅದೀರೇನ್ರಪ್ಪ, ಈ ಸೂಳಿಮಗ ನಮ್ಮನ್ನ ಕೊಂದಹಾಕ್ತಾನ. ಕಾಪಾಡ್ರಪ್ಪೋ, ಕಾಪಾಡಿ" ಲಬಲಬ ಹೊಯ್ಕೊಂಡ, ಯಾರೂ ಬರದನ್ನು ನೋಡಿದ ಗಜನಿ ಮಕ್ಕಳು, "ಲೇ ಬಾರಲೆ ತಾಂಡಕ್ಕೆ ನೋಡ್ತೀವಿ ಒಂದು ಕೈ" ಅಂದವರೆ ಕುಂಟುತ್ತ, ತೆವಳುತ್ತಾ ಓಡಿದರು.

ಸೇವಾಲಾಲ್ ಗುಡಿಮುಂದ ಮಂದಿ ಸೇರಿತ್ತು. ಬೋತಾನಾಯ್ಕನ ಪಕ್ಕದಲ್ಲಿ ಕಾರಚಾರಿ ಕಲಮನಾಯ್ಕ ಎಡ್ಕೆಕ ಡಾಮಾ ಸೇಣುನಾಯ್ಕ ಕುಂತಿದ್ರು. ಊರ ಎಲ್ಲಾ ಮುಖಂಡರು ಬಂದಿದ್ದರಿಂದ ಹಟ್ಟಿನಾಯ್ಕ ಕಾರಭಾರಿಗೆ ಅಪ್ಪಣೆಕೊಟ್ಟ. "ನೋಡ್ರಪ್ಪ ಇದು ನಮಗ ಗೋರ್ ಪಂಚಾಯ್ತಿ. ಸೇವಾಭಾಯನ ಗುಡಿಮುಂದೆ ಸೇರಿರೋ ನಾವು ಯಾವತ್ತು ಸತ್ಯದಿಂದಲೇ ನಡಿಯೋದು. ಇಲ್ಲಿ ಒಬ್ಬರಿಗೊಂದು ಮತ್ತೊಬ್ಬರಿಗೊಂದು ಆಗದಂತೆ ನೋಡಿಕೊಳ್ಳೋದು ನಮ್ಮ ಆದ್ಯ ಕರ್ತವ್ಯ. ಫೀರ್ಯಾದಿದಾರರಾದ ಗಜನಿಮಕ್ಕಳು ತಮ್ಮ ಪಿರ್ಯಾದನ್ನ ಹೇಳಬಹುದು". ಕಾರಭಾರಿ ಕುಂತ ಮೇಲೆ ಗನಜಿ ಎದ್ದ. "ಹಟ್ಟಿನಾಯ್ಕರ, ಇದು ನಿಮ್ಮ ತೆಪ್ಪು, ಅಲ್ಲಾ ಎಲ್ಲಿಂದಲೋ ನೆನ್ನೆ ಮೊನ್ನೆ ಗುಳೆ ಬಂದವನ ಹಿನ್ನೆಲೆ, ಮುನ್ನೆಲೆ ಯೋಚನೆಮಾಡದೆ ತಾಂಡದಾಗ ಜಾಗಕೊಟ್ರಿ. ಈ ಪಿಕನಾಸಿ ನನಮಕ್ಕಳು ಈ ತಾಂಡಕಟ್ಟಿದ ನಮ್ಮ ಮೇಲೆ ದೌರ್ಜನ್ಯ ನಡೆಸೋದನ್ನು ಸಹಿಸೋದಕ್ಕೆ ಆಗಾಣಲ್ಲ." ಧನ್‌ಸಿಂಗ್ ಎದ್ದವನೆ, "ಹಟ್ಟಿನಾಯಕರೆ, ಕಾರಬಾರಿಗಳೆ, ತಾವೂ, ಮೂಲದಲ್ಲಿ ನಾವೆಲ್ಲ ಒಂದಲ್ಲ ಒಂದು ಪ್ರದೇಶದಿಂದ ವಲಸೆ ಬಂದವರೆ, ಯಾರೇನು ಮಳೆ ಬಡ್ಕೊಂಡು ಇದ್ದವರಲ್ಲ. ನೀವು ಒಂದು ಐವತ್ತು ವರ್ಷದ ಮುಂಚೆ ಬಂದು ಈ ಮೂರಲ್ಲಿ ನೆಲೆಸಿ ತಾಂಡಕಟ್ಟಿದಿರಿ ಒಪ್ಕೊಳೋಣ. ನಾವು ಪ್ರಾರ್ಥನೆ ಮಾಡುವಾಗ ಸೇವಾಬಾಯಿ ಮರಿಯಮ್ಮ ಇಲ್ಲ ನಮ್ಮ ಹಿರಿಕರನ್ನೇ ಪೂಜೆ ಮಾಡಿದರೂ ಏನಂತ ವಿನಂತಿ ಮಾಡ್ತಿವಿ ಹೇಳಿ. ಕೀಡಿ ಮೂಂಗಿನ ಸಾಯಿವೇಣು, ಜೀವಜನಗಾನಿನ ಸಾಯಿವೇಣು. ವಾಟೇಪಾಟೇನು ಸಾಯಿವೇಣು (ಇರುವೆ ಅರವತ್ತು ಕೋಟಿ ಜೀವಿಗಳನ್ನು ಕಾಪಾಡಬೆಕು, ಎಲ್ಲಾ ಜೀವಜಂತುಗಳನ್ನು ಕಾಪಾಡಬೇಕು. ದಾರಿನಡಕ ಏನಾರ ಆದರ ಕಾಪಾಡಬೇಕು ಅಂತ ಮಾಡೋದು ಕೇವಲ ಜೀವಜಂತುಗಳಿಗೆ ಮಾತ್ರಾನಾ? ಇಲ್ಲಿ ಮನುಷ್ಯ ಹಾಗೂ ಪ್ರಾಣಿಗೂ ಅನ್ವಯಿಸುತ್ತೆ ಗಂಭೀರವಾಗಿಯೇ ಕೇಳಿದ, ಗಜನಿಮಕ್ಕಳ ಉಪಟಳ ಅಡಗಿಸೋದು ಈ ಕರಮತೋಟ್‌ಗಳಿಂದ ಸಾಧ್ಯ. ಇದು ಸರಿಯಾದ ಮೋಕ ಇವನ ಬಿಡಬಾದು. ಅಂತ ಹಟ್ಟಿನಾಯ್ಕ ಬೇಷ್, ಎಂಥ ಮಾತು ಹೇಳಿದೆ ಧನ್‌ಸಿಂಗ್ ನಾಯ್ಕ. ತೂಕದಮಾತು, ಇಷ್ಟಸಣ್ಣ ವಯಸ್ಸಿಗೆ ಇಂಥದೊಡ್ಡ ಮಾತು. ಒಪ್ಪತಕ್ಕಂಥದ್ದೆ. ನೀ ಏನಂತಿ ಕಾರಬಾರಿ" ಗಜನಿ ಸೋದರ ಸಂಬಂದಿಯಾಗಬೇಕಿದ್ದ ಆತನ ಹೆಗಲಮೇಲೆ ನ್ಯಾಯದ ತಕ್ಕಡಿಯನ್ನು ಹೊರಿಸಿದ. ನಮ್ಮ ಬಂಜಾರರಲ್ಲಿ ಯಾವತ್ತು, ಹೊರಗೈಯಿಂದ ನಾವು ಹೊಡದಿಲ್ಲ. ಇವರು ನಮ್ಮ ಅಣ್ಣತಮ್ಮಂದಿರು, ಈ ಊರಾಗ ಇರೋದಕ್ಕೆ ಎಲ್ಲಾ ಹಕ್ಕು ಐತೆ. ಅದು ಅಲ್ಲದೆ ಇಂತ ತಿಳುವಳಿಕೆ ಇರೋ ಧನ್‌ಸಿಂಗ್ ನಾಯ್ಕ ನಮ್ಮೂರಾಗ ಇರಾಕಬೇಕು" ಹಟ್ಟಿನಾಯ್ಕನ ಸೊಕ್ಕ ಮುರಿಯಾಕ ಇದೇ ಸಂದರ್ಭ ಅಂದವನೆ ಅವನನ್ನು ಕೆಳಗವಾಡಿ ಮಾತಾಡಿದ. ಡಾವೋ ಎಲ್ಲಾನೂ ಆರ್ಥಮಾಡಿಕೊಂಡಿದ್ದ. ಕಾರಬಾರಿ ಮತ್ತು ಹಟ್ಟಿನಾಯ್ಕನ ಕುಲಸ್ಥರು ಬಹುಸಂಖ್ಯಾತರಾಗಿದ್ದು

ಅಲ್ಪಸಂಖ್ಯಾತ ಅಮಗೋತ ಪಂಗಡಕ್ಕೆ ಸೇರಿದ ಡಾವೋನ ಕುಟುಂಬದ ಮೇಲೆ ಇವರು ದೌರ್ಜನ್ಯ ನಡೆಸುತ್ತಿದ್ದರು ವಿಸಳಾವತ್ ಪಂಗಡಕ್ಕೆ ಸೇರಿದ ಕಾರಬಾರಿ ಕಡೆಯವರು ದೌರ್ಜನ್ಯ ನಡೆಸುತ್ತಿದ್ದರು. ನಾಯಕ, ಕಾರಭಾರಿಯ ಉಪಟಳಕ್ಕೆ ರೋಸಿಹೋಗಿದ್ದ ಆಮಗೋಪ್ ಡಾವೊಧೇನಾನಾಯ್ಕ ಅವರಿಗೆ ಪರ್ಯಾಯವಾಗಬಲ್ಲ ಒಂದು ಬಣವನ್ನ ತಾಂಡದಲ್ಲ ಬೆಳಸಲೇಬೇಕಿತ್ತು. ಅದಕ್ಕೆ ನಡಕ್ಕೆ ಬಾಯಿ ಹಾಕಿ "ಹಟ್ಟಿನಾಯ್ಕ ನಿಂದೇನೆ ತೆವಲಿದ್ದರೂ, ಅದನ್ನ ನ್ಯಾಯಪಂಚಾಯ್ತಿ ನಡಕ್ಕ ತರಬಾರದು. ಕಾರಬಾರಿ ನೀನು ಅಷ್ಟೆ ನಿನ್ನ ವೈಯಕ್ತಿಕತೆಯನ್ನ ಬಿಟ್ಟು ನ್ಯಾಯದ ಪರ ನಿಲ್ಲಬೇಕು ಯಾರ ತಪ್ಪು ಒಪ್ಪು ಹೇಳಿ ಸರಿಗೆ ನಿರ್ಣಯ ನಿಡಲಿಲ್ವೋ, ನಾಳೆ ಮಂದಿತಾಂಡದ ಪಂಚಾಯ್ತಿ ಮೇಲಿನ ವಿಶ್ವಾಸ ಕಳ್ಕೋಂತಾರ, ಒಮ್ಮೆ ಹಾಗೇನಾದರೂ ಆದ್ರೆ ಮಂದಿ ಮತ್ತೆಯಾವತ್ತು ನಮ್ಮತಾವ ಬರೋದಿಲ್ಲ." ಅವನ ಮಾತುಕೇಳಿ ಮಂದಿ ಹೌದು ಅಂದರು. "ರಾಮನಾಯ್ಕ, ಏನನಡೀತು ಹೇಳಾಟು" ಕಾರಬಾರಿ ಅವಾಗ ದಾರಿಗೆ ಬಂದಿದ್ದ. ಪಂಚರೆ, ತಾವದೇವರು, ತಮ್ಮ ಮುಂದೆನಾ ಯಾವತ್ತೂ ಎನೆ ಆದ್ರು ಸುಳ್ಳು ಹೇಳೋದಿಲ್ಲ. ಇಡಿ ನಮ್ಮ ಮನಿಮಂದಿ ಹಗಲು ರಾತ್ರಿ ಕಷ್ಟ ಪಟ್ಟು ಒಂದು ಐದು ಎಕರೆ ಆಟು ಭೂಮಿ ತಗದು ಮೇರಿಕಟ್ಟಿ ಹಸನ ಮಾಡಿದ್ವಿ. ಆದರೆ ಗಜನಿನಾಯ್ಕನ ಮಕ್ಕಳಾದ ಪೀಕನಾಯ್ಕ ಮತ್ತು ಕಾಳು ಬಂದು, ಲೇ ಇದು ನಾವು ತಗದ ಹೊಲ ಅಂತೇಳಿ ದಬ್ಬಾಳಿಕೆ ಮಾಡಿ ತಾವೆ ಮೇರಿಯನ್ನ ಹಾಕೋದಕ್ಕೆ ಮುಂದಾದರು. ಇವರ ಉಸಾಬರಿನ ಬೇಡ ಅಂತ ಗೌಡನಹಬ್ಬ ತಾಂಡನ ಬಿಡೊದು ಅಂತ ನಮ್ಮ ಅಣ್ಣ ತಮ್ಮಂದಿರೆಲ್ಲರೂ ಯೋಚನೆ ಮಾಡಿದ್ವಿ. ಒಂದು ಮಾತು ನಮ್ಮ ಚಿಕ್ಕಪ್ಪ ಧನ್‌ಸಿಂಗ್‌ಗೂ ತಿಳಿಸಿ ಹೊರಡೋದು ಅಂತೇಳಿ ಆಲೋಚನೆ ಮಾಡಿ ಆತನಿಗೆ ಹೇಳಿದಾಗ ಆತನೆ ಬೋಯ್ದು ವಾಪಾಸು ಉಳಿಸಿದ. ಎಂದಿನಂತೆ ನಾವತಗದ ಹೊಲದಾಗ ಕೆಲ್ಸಮಾಡಾಕ ಹೋದ್ವಿ, ಪೀಕ, ಕಾಣು ಹೊಡಿಯಾಕ ಬಂದ್ರು. ಎಷ್ಟಂತ ಸಂಭಾಳಿಸೋದು ನೀವ ಹೇಳಿ." ನಡೆದದ್ದನ್ನ ಚಾಚುತ್ತಪ್ಪದೆ ಹೇಳಿದ. "ಪೀಕ ಎದ್ದವನೆ ಸುಳ್ಳು, ಆ ಪರದೇಶಿ ನನಮಗ, ಬೇಕಂತನಮ್ಮ ಹೆಸರಕೆಡಿಸೋ ಪ್ರಯತ್ನ ಮಾಡ್ಲಾಕಿ ಹತ್ಯಾನ. ನಾಯಕರೆ, ನಾವು ಅಂತ ಯಾವ ತೆಪ್ಪು ಮಾಡಿಲ್ಲ". ನಾಟಕಮಾಡಾಕ ನೋಡಿದ " ಲೇ ತಮ್ಮ ಪೀಕ, ನಾವೆಲ್ಲರೂ ಪರದೇಶಿಗಳ ಇಲ್ಲಿಯಾರು ಉಮ್ಮಿ ಇಟ್ಟಿಲ್ಲ. ಏನೋ ನಾವು ಮದಲು ಬಂದು ಮನಿಕಟ್ಕೊಂಡಿದ್ಕ ಮೂಲ ನಿವಾಸಿಗಳಾದ್ವಿ, ಅಷ್ಟ ಬಿಟ್ಟರ ಮತ್ತೇನು ಇಲ್ಲ. ಪದೆ ಪದೆ ಮಂದಿನ ಹೀಂಗ ಹೀಯಾಳಿಸೋದು ಸರಿ ಅಲ್ಲ ಅಂತ ನನ್ನ ಅನಿಸಿಕೆ. ತಾಂಡ ದೊಡ್ಡದಾಗ ಬೇಕು. ಇಲ್ಲಿಗೆಬಂದು ನೆಲೆಸಿದ ಪ್ರತಿಯೊಬ್ಬರು ಸುಖ-ಸಂತೋಷದಿಂದಿರಬೇಕು. ನಾವುಗಳು ಸುಖವಾಗಿದ್ದು ನಮ್ಮ ಜಾತಿಯವರೆ ಆದ ಇವರು ಉಪವಾಸಿದ್ರೆ ಆದೀತೆ. ಎಲ್ಲರೂ ಸಮನಾಗಿರಬೇಕು. ಉಂಡು ಉಟ್ಟು ನೆಮ್ಮದಿಯಿಂದಿರಬೇಕು, ಅದೆ ನಮ್ಮ ಬಂಜಾರಜನರ ಆಶಯ. ಯಾರಮನಿಗೆ ಹೋದ್ರು, ಮದಲು ಊಟಮಾಡಾಕ ಕರಿತಾರ. ಇದು ನಮ್ಮಗಳ ಬದುಕಿನ ರೀತಿ ನೀವು ಹಿಂಗ ಹೆದರಿಸೋದು ಸರಿಅಲ್ಲ. ಅವರ ಜಮೀನನ್ನ ಅವರು ನಿರ್ಭಯದಿಂದ ಮಾಡಿಕೊಳ್ಳಲಿ ನಿವೇನಾರು ಪ್ರವೇಶ ಮಾಡಿದ್ರೆ ಸರಿಯಲ್ಲ", ಹಟ್ಟಿನಾಯಕ ಮಾತು ಮುಗಿಸಿದ.

ಗಜನಿ ಮತ್ತು ಅವನ ಮಕ್ಕಳು ಕಾರಭಾರಿ ಕಡೀಗ ನೋಡಿದ್ರು ಅವನೇನು ಮಾತಾಡದಿದ್ದಾಗ, ಸಭೆ ಬಿಟ್ಟು ನಡೆದು ಬಿಟ್ಟರು. ಧನ್‌ಸಿಂಗ್ ಹಟ್ಟಿನಾಯ್ಕನಿಗೆ ವಂದನೆಗಳನ್ನು

ಹೇಳಿ ಎದ್ದು ಮನೆಗೆ ಹೊರಟಿದ್ದ. ಡಾವೊ ಅವನ ಹಿಂದಿದ್ದ ಹೋಗಿ "ಧನ್‌ಸಿಂಗ್ ಮಹಾರಾಜ್", ಕರದ "ಅರೇ ಡಾವೊ ನೀವು ಒಂದ ಮಾತು ನನಗೆ ಹೇಳಿದ್ರ ನಾನೇ ವಾಪಾಸು ಬರ್ತಿದ್ದೆ ನೀವ್ಯಾಕ ನನ್ನ ಹಿಂದೆ ಬರುವ ಪ್ರಮೇಯ ಮಾಡಿದ್ರಿ" ಅವರ ಮೇಲಿನ ಗೌರವವನ್ನು ವ್ಯಕ್ತಪಡಿಸಿದ." ಇಲ್ಲ ನೀವು ತಿಳುವಳಿಕೆ ಉಳ್ಳವರು ಗಂಭೀರವಾಗಿ ವಿಷಯವನ್ನು ವ್ಯಕ್ತಪಡಿಸಿದ್ದು ನಮಗೆ ಖುಷಿಯಾಯಿತು. ನಿಮ್ಮಂತೋರು ಈ ತಾಂಡದೊಳಗೆ ಇರೋದು ಅವಶ್ಯಕತೆಯಿದೆ. ತಾವೇನು ತಪ್ಪುತಿಳಿಯುವುದಿಲ್ಲ ಅಂದ್ರೆ ನನ್ನದೊಂದು ವಿನಂತಿ," ಅವನ ಕಡೆಗೆ ನೋಡಿದ, "ಹೇಳಿ ಏನುವಿಷಯ, ತಮ್ಮ ಬಗ್ಗೆ ತಪ್ಪು ತಿಳಿಯುವ ಪ್ರಶ್ನೆನೆ ಬರುವುದಿಲ್ಲ" ಅವರ ಮಾತಿಗೆ ಸರಿಯಾಗಿ ಪ್ರತಿಕ್ರಿಯೆ ವ್ಯಕ್ತಪಡಿಸಿದ.

"ನಾನು ಅಮಗೋತ್ರ್ ಪಂಗಡಕ್ಕೆ ಸೇರಿದವನು. ಈ ತಾಂಡದೊಳಗ ನಮ್ಮವ್ರು ಮೂರನಾಕು ಮನಿಗಳದಾವು. ಈ ಹಟ್ಟಿ ನಾಯ್ಕಂದು ರಮಾವತ್. ಬಹು ಸಂಖ್ಯಾತರು. ಅದಕ್ಕ ಊರು ಅವನಕಡಿಗದ. ಅವನ ಸಂಖ್ಯೆ ಹೆಚ್ಚಿರೋದಕ್ಕೆ ಅವನ ಉಪಟಳ ಹೇಳತೀರದು. ಇನ್ನ ಕಾರಬಾರಿದು ವಿಸಳಾವತ್ ಬೆಡಗ. ಅವರು ಸರಿಸಮನಾಗಿ ರಮಾವತ್ ಬೆಡಗದವರಷ್ಟೇ ಸಂಖ್ಯೆಯಲ್ಲಿದ್ದಾರೆ. ಈ ಗಜನಿ ಅದ ಹಮ್ಮಿನಮೇಲೆ ಮಂದಿನ ಹೆದರಿಸ್ತಾನ. ನಾವು ಬಂದ ಅರಂಭದಲ್ಲಿ ನಿಮ್ಮಗಳ ಹಾಗೆಯೇ ಅಲೋಚನೆ ಮಾಡಿದ್ವಿ. ಆದ್ರ ದಿಲ್ಲಿಗೆ ಹೋದ್ರು ಡೊಳ್ಳಿಗ ಒಂದೇ ಪೆಟ್ಟು. ಎಲ್ಲ ತಾಂಡಗಳಲ್ಲು ಸಮಸ್ಯೆಗಳು ಇರೋವೆ. ಹಂಗಾಗಿ ಇಲ್ಲೆ ಇರೋದಂತೇಳಿ ಉಳ್ಕೊಂಡ್ವಿ " ಯಾವತ್ತು ಯಾರಮುಂದೂ ಹೇಳದ ಸಂಗತಿಯನ್ನು ಅವತ್ತು ಹಂಚಿಕೊಂಡಿದ್ದ. "ಇವೆಲ್ಲ ತಾಂಡಗಳಲ್ಲಿ ಸರ್ವೆಸಾಮಾನ್ಯ ಡಾವೋ, ಇನ್ನ ಮೇಲೆ ನಾವೆಲ್ಲ ನಿಮ್ಮ ಕೂಡ ಇರ್ತಿವೆ, ನಿವೇನು ಅಂದ್ಕೋಬೇಡಿ".

ಧನ್‌ಸಿಂಗ್ ಸಮಾಧಾನ ಪಡಿಸಿದ. ಒಂದು ಐದಾರು ತಿಂಗಳಾಗಿದ್ರು ಒಬ್ಬರ ಮನೆಗೆ ಹೋಗದೆ ಬದುಕು ಕಟ್ಟಿಕೊಳ್ಳೋ ಪ್ರಕ್ರಿಯೆಯಲ್ಲಿ ಭಾಗಿಯಾಗಿದ್ದ ಧನ್‌ಸಿಂಗನಿಗೆ ಸಮಾಜೀಕರಣಗೊಳ್ಳುವುದು ಕೂಡ ಅನಿವಾರ್ಯವಾಗಿತ್ತು. ಅವನೆ ಡಾವೋ ಸಾಣನಾಯ್ಕನನ್ನು ಹುಕ್ಕ ಸೇದಲು ಮನೆಗೆ ಕರೆಯುವುದಕ್ಕೆ ಮುಂಚೆ, "ತಾವು ಅನ್ಯತ ಭಾವಿಸದಿದ್ದರೆ, ನಮ್ಮ ಮನೆಗೆ ಬಂದು ಸ್ವಲ್ಪ ಜಲಪಾನ ಮಾಡಿ ಹುಕ್ಕ ಸೇದಬಹುದಲ್ಲ " ಆಹ್ವಾನಿಸಿದ. ಊರಿಂದ ಆಚೆ ದಕ್ಷಿಣದ ಕಡೆಗೆ ಅತನ ಮನೆ ಇತ್ತು. ಉತ್ತರಕ್ಕೆ ಧನ್‌ಸಿಂಗ್‌ಮನೆ. ಮಂದಿ ಆಡಕೊಂಡು ಬಣ್ಣ ಬಳಿತಾರಂತೇಳಿ ಧನ್‌ಸಿಂಗ್‌ಗೆ ಗೊತ್ತಿದ್ದರು ಸದಾಬುದಾ " ಆಯ್ತು ನಡೀರಿ " ಒಪ್ಪಿಕೊಂಡು ಅವನ ಹಿಂದೆ ಹೊರಟ.

ಚಾರಪಾಯಿ ಅಟವಾಳಿಗಿಯೊಳಗೆ ಹಾಕಲಾಗಿತ್ತು. "ಬನ್ನಿ ದಯಮಾಡಿ ಒಳಗೆ ಬಂದು ಅಸೀನರಾಗಿ" ಅಹ್ವಾನಿಸಿ ಒಳಗೆ ಹೋದ ಡಾವೋ ಸೇಣುನಾಯ್ಕ ಅವನ ಹೆಂಡತಿ ರುಕ್ಕಿಯನ್ನು ಕರೆತಂದು ಪರಿಚೆಯಿಸಿದ. ಗುಂಗಟೋ ಹಕ್ಕೊಂಡಿದ್ದ ರುಕ್ಕಿ ನಮಸ್ಕಾರ ಮಾಡಿ, ಅವರ ಮನೆಯವರ ವಿಷಯವನೆಲ್ಲಾ ಕೇಳಿ ತಿಳಿದುಕೊಂಡಳು. ಅವನ ಒಬ್ಬಳೆ ಮಗಳು ಧರ್ಮಿಬಾಯಿನ ಕರೆದ. "ಬಾ ಮಗಳೆ, ಮಾಮ ಬಂದವರೆ" ಕೂಗಿದ. ಅವಳು ನಾಚಿಕೆಯಿಂದ ಹೊರಗೆ ಬರಲಿಲ್ಲ. ಟುಕಿರಿಯ ಸೆರಗಿನಿಂದ ಮಾರಿ ಮುಚ್ಕೊಂಡೆ ಧನ್‌ಸಿಂಗನ ಕಾಲಿಗೆ ಬಿದ್ದು ನಮಸ್ಕಾರ ಮಾಡಿದಳು.

"ಭಗವಾನ ತಾಡೊಸಿಳೊ ಕರಿಯಬೇಟೆ" (ದೇವೆರು ಒಳ್ಳೆಯದಯ ಮಾಡಲಿ) ಅಂತೇಳಿ ಅವಳನ್ನು ಮೇಲೆಬ್ಬಿಸಿ ಮುಖ ನೋಡಿದ. ಕೊಟ್ಟ ಪಾನಕದ ನಡುವೆ ಹುಕ್ಕದ ಎರಡೆರಡು ಜುರಿಯನ್ನು ಎಳೆದಾದ ಮೇಲೆ " ಅಪ್ಪಣೆ ಕೊಟ್ಟರೆ ನಾನು" ಅಂದ ಧನಸಿಂಗ್, " ಬಹಳ ಸಂತೋಷ, ತಮ್ಮಂತೋರು ನಮ್ಮ ಮನೆಗೆ ಬಂದಿದ್ದು "ಇಬ್ಬರು ಗಂಡ ಹೆಂಡತಿ ಹೇಳಿದರು." "ಯಾವು ಸಕುಟುಂಬ ಸಮೇತರಾಗಿ ಬನ್ನಿ ನಮ್ಮ ಮನೆಗೆ. ಯಾವಾಗ ಅಂತ ಹೇಳಿ ಕಳುಹಿಸಿ ಬಂದ್ರೆ ಅನಕೂಲ " ಎಂದು ಧನ್‌ಸಿಂಗ್ ಹೊರಟು ಬಿಟ್ಟ. ಆದರೆ ಈ ತಾಂಡದಲ್ಲಿ ತನ್ನ ಅಸ್ತಿತ್ವವನ್ನು ಗಟ್ಟಿಗೊಳಸಿಕೊಳ್ಳಲು ಇಂಥಹ ಮಂದಿ ಸಹವಾಸ ಬೇಕು. ಅಂದ್ಕೊಂಡವನೆ ಅದಕ್ಕೆ ಬೇಕಾದ ತಯಾರಿ ನಡೆಸಲು ಮುಂದಾದ.

ಒಂದು ವಾರ ಕಳದಿತ್ತು. ಒಂದು ದಿನ ಧನ್‌ಸಿಂಗ್‌ನೆ ಖುದ್ದಾಗಿ ಅವನ ಹೆಂಡತಿ ಸೀತ್ಕಿ ಮುಂದ ಹಿರಿಮಗ ಹನುಮನಾಯ್ಕನಿಗೆ ಮದುವೆ ಮಾಡುವ ಪ್ರಸ್ತಾಪ ಇಟ್ಟ. ಹನ್ನೆರೆಡು ಹದಿಮೂರರ ಆಸುಪಾಸಿನಲ್ಲಿದ್ದ ಅವನ ಮದುವೆಗೆ ಧನ್‌ಸಿಂಗ್ ತಾಯಿ ಬಹಳ ದಿನಗಳಿಂದ ಗಂಟು ಬಿದ್ದಿದ್ದು. "ಹುಡುಗ ಹರೆಯಕ್ಕ ಬಂದಾನ, ಎಲ್ಲರ ಒಂದು ಹುಡುಗಿ ನೋಡಿ ಮದ್ವಿಮಾಡು. ನನಗೂ ಮೊಮ್ಮಕ್ಕಳನ ಆಡಿಸಬೇಕಂತ ಆಸೆಯಾಗೈತಿ" ಅಂತೇಳಿ ಅಂದಿದ್ದು ಅವನು ನೆಪ್ಪ ಮಾಡಿಕೊಂಡ. ಹುಡುಗಿ ನೋಡೀರೇನು ಸೀತ್ಕಿ ಕೇಳಿದಳು. "ಹೂಂ ಕಣೆ ಹುಡುಗಿ ನೋಡಿದಕ್ಕ ಹೇಳಾಕತ್ತಿನಿ. ಹುಡುಗಿ ಪಸಂದಾಗದಳ, ಒಳ್ಳೆ ಗೊಂಬಿ ಇದ್ದಂಗದಾಳ. ಹನುಮಗ ಸರಿಜೋಡಿ ಆಕ್ಕಾಳ ನೋಡು" ಎಲ್ಲಾ ವಿವಿರಗಳನ್ನು ಹೇಳಿ ಉತ್ತರಕ್ಕಾಗಿ ಕಾದ. ಮದಲೇ ಕುತೂಹಲ ಹೆಚ್ಚಿ ಸಿತ್ಕಿ, " ಯಾರ್‍ರಿ, ಯಾವ ತಾಂಡದವನು. ಯಾವಾಗ ಹೋಗಾನು. ಅಲ್ಲ ನೀವು ಇತ್ತೀಚಿಗೆ ತಾಂಡ ಬಿಟ್ಟು ಎಲ್ಲೂ ಹೋಗಿಲ್ಲ ಹುಡಿಗಿ ಬಗ್ಗೆ ಇಷ್ಟು ಕರಾರು ವಕ್ಕಾಗಿ ಹೇಳ್ತೀರಂದ್ರ" ಕುತೂಹಲ ಅನುಮಾನ ಒಮ್ಮೆಗೆ ವ್ಯಕ್ತ ಪಡಿಸಿದಳು. ಧನ್‌ಸಿಂಗ್ ಘಳಿಗೆ ಸುಮ್ಮನಾದ. ಅವನ ಹೆಂಡತಿ ಸೀತ್ಕಿ ಚಟಪಡಿಸೋದನ್ನ ನೋಡಿ ನಗತೊಡಗಿದ. "ಅದೇನು ಅವಸರವೆ ನಿನಗೆ, ಒಟ್ಟು ನಿನಗೆ ಅಜ್ಜಿಯಾಗಿ ಆಡಿಸೋಕೆ ಮೊಮ್ಮಗಬೇಕು. ಆಯ್ತು ಇನು ಒಂದುವಾರ ಒಪ್ಪತ್ತು ತಡ್ಕೋ ಎಲ್ಲಾನು ಗೊತ್ತಾಗುತ್ತೆ. "ಮಾತು ಹೊರಳಿಸುವುದಕ್ಕೆ ನೋಡಿದ." "ನೀವದೀರಲ್ಲಾ, ನನ್ನ ರೇಗಿಸದಿದ್ದರೆ ತಿಂದಿದ್ದು ಮೈಗೆ ಹತ್ತಂಗಿಲ್ಲ. ಹೇಳ್ತಿರೋ ಇಲ್ಲ ಅಮ್ಮನಿಗೆ ಹೇಳಲ" ಹೆದರಿಸಿದಳು. "ಆಯ್ತು ಕಣೆ ಹೇಳ್ತಿನಿ. ಡಾವೊ ಸೆಣುನಾಯ್ಕ ಅಮಗೊತ್ ಬೆಡಗದವನು. ಅವನ ಮಗಳು ಜಾನ್ಕಿ ಎರೆಡು ತಿಂಗಳ ಹಿಂದೆ ಮೈನೆರತಾಳ. ನೋಡಾಕ ಒಳ್ಳೆ ಗೊಂಬಿಹಂಗ ಅದಾಳ. ನಮ್ಮ ಸಂಬಂಧ ಬೆಳಸೋದಕ್ಕೆ ಬಹುಶಃ ಮನಸೈತೆ ಅದರೂ ಅತನೇನು ಬಾಯಿ ಬಿಟ್ಟು ಹೇಳಿಲಿಲ್ಲಾ. ನಾನು ನಮ್ಮ ಮನಿಗೆ ಕರಿದೀನಿ ಬರಬಹುದು". ಬಾಯಾಗ ಮಾತು ಬಾಯಿಯೊಳಗ ಇದ್ದಂಗೆ ಡಾಮೊಸೆಣು ನಾಯ್ಕ ಅವನ ಹಿರಿಮಗ ತಿಂಧ್ಗನನ್ನು ಧನ್‌ಸಿಂಗ್ ನಾಯ್ಕ ಮನಿಗೆ ಕಳುಹಿಸಿದ್ದ.

"ಧನ್‌ಸಿಂಗ್ ಮಾಮ, ಸಂಜೆ ಅಪ್ಪ ಅವ್ವ ನಿಮ್ಮಮನಿಗೆ ಬರ್‍ತೀದ್ದಾರೆ" ಸುದ್ದಿ ಹೇಳಿ ಹೊರಡಲು ಮುಂದಾದ. ಸೀತ್ಕಿಗೆ ಆದ ಸಂತೋಷ ಅಷ್ಟಿಷ್ಟಲ್ಲ. ಖುಷಿಯ ಭರಾಟೆಯೊಳಗ ಸುದ್ದಿ ಹೇಳಿದ ತಿಂಧ್ಗನಿಗೆ ಉಪಚಾರ ಮಡೋದ ಮರತ್ಲು. ಪಾಪದ ಹುಡುಗ ಐದಾರು ಗುಡಿಸಲುದಾಟಿರಬೇಕು ಪಂಪಾನಾಯ್ಕನ ಓಡಿಸಿದ್ಲು, "ಲೇ ಮಗ ಆ ಅಣ್ಣಾ ಹೋದ್ನಲ್ಲಾ, ಅವನ್ನ ಕರಿ ಆಟು " ಹೇಳುತ್ಲೆ ಅವ ಮುಂದ ಮೂರುನಾಕು ಗುಡಿಸಲುಗಳನ್ನು ದಾಟಿದ್ದ. " ನಿಮಗೆ,

ನಮ್ಮಯಾಡಿ ಕರೀತಳೆ ವಾಪಾಸು ಬರಬೇಕಂತೆ" ಅಡ್ಡದಾರಿಗೆ ನಿಂತ ಹೇಳಿದ ಪಂಪ. ತಿಂಧ್ಗನಿಗೆ ಏನೊಂದು ತಿಳೀಲಿಲ್ಲ. "ಯಾರಮನಿ ಹುಡುಗ ನೀನು?" ಸ್ಪಷ್ಟಪಡಿಸಿಕೊಳ್ಳೋದಕ್ಕೆ ಕೇಳಿದ. "ಯಾರಮನಿ ಆದ್ರೇನು, ಯಾಡಿ ಕರ್ಕೊಂಡ ಬಾ ಅಂದ್ಲು ಕರಿಯಾಕ ಬಂದೀನಿ ಅಷ್ಟೆ" ಪಂಪಾನಾಯ್ಕ ಉತ್ತರಿಸಿದ. ಅವನ ಸಿದಾಸಾದ ಮಾತು ತಿಂಧ್ಗನನ್ನ ಮತ್ತೆ ಗೊಂದಲಕ್ಕೆ ಸಿಕ್ಕಿಸಿತು. "ನಾನೇನು ಧನ್‌ಸಿಂಗ್ ಮಾಮನ ಮನಿಗೆ ಹೋಗಿದ್ನೋ ಇಲ್ಲೊ ಎಂದು ಯೋಚಿಸಿದ." ಅದೆ ನೀವು ಆಗ್ಲೆ ಬಂದಿದ್ರಲ್ಲ ಆ ಮನೆಗೆ "ಓ. ಧನ್‌ಸಿಂಗ್ ಮಾಮ" "ಹೂಂ ಜಾಣ" ಅವರೆ, ನಮ್ಮಯಾಡಿ ಯಾಕೋ ಕರಿ ಅಂದ್ಲು ಬಂದೆ. ಬನ್ನಿ ವಾಪಾಸು. ಕೈ ಹಿಡಿದು ವಾಪಾಸು ಎಳೆಯುತ್ತಿದ್ದಂಗೆ ಸೀತ್ಕಿ ಬಂದಿದ್ಲು. "ಮಗ ಮನಿಮಟ ಬಂದು ಜಲಪಾನ ನಾದ್ರು ಮಾಡದೆ ಹೋದ್ರ ಹೆಂಗೆ. ಅದಕ್ಕ ನಾನೆ ಕರಿಯಾಕ ಕಳುಹಿಸಿದ್ದೆ "ಸ್ಪಷ್ಟ ಪಡಿಸಿದಳು. ಆದರೆ ತಿಂಧ್ಗನೊಳಗಿನ ಅನುಮಾನ ಬಗೆ ಹರಿಸಿಕೊಳ್ಳಲು "ಅಲ್ಲಾ , ಅಪ್ಪ ಧನ್‌ಸಿಂಗ್ ಮಾಮನ ಬೆಟ್ಟಿಯಾಗಿ ಗಡಾನ ವಾಪಾಸ ಬಾ ಅಂದವರೆ "ರಾಗ ಎಳೆದ. ಆಯ್ತು ಇಗ ಸುದ್ದಿ ಹೇಳಿದೆ. "ಅಟು ಜಲಪಾನ ಮಾಡಿಕೊಂಡು ಹೋಗುವಂತೆ " ಒತ್ತಾಯಿಸಿದಳು. " ಇಲ್ಲ ಮಾಮಿ ಬೇಗನೆ ವಾಪಾಸು ಬರೋದಕ್ಕೆ ಅಪ್ಪ ಹೆಳ್ಯಾನ" ತಪ್ಪಿಸಿಕೊಳ್ಳುವ ಪ್ರಯತ್ನ ಮಾಡಿದ. " ಮೊದಲಸಲ ಬಂದಿ ಮಂದಿ ಹಂಗ ಹೋದ್ರ ಒಳ್ಳೇದಲ್ಲ ಅರೆ ಗಳಿಗಿ ಒಳಗ ಹೊರಡುವಿ ಬಾ" ಎಂದು ಕೈ ಹಿಡಿದ ಎಳೆಯಲು ನಿರುಪಾಯನಾದ ತಿಂಧ್ಗ ಹೊರಟು ನಿಂತ. ಸೀತ್ಕ ನೀರಿಗೆ ತುಂಡು ಬೆಲ್ಲ ಹಾಕಿ ಕೊಟ್ಟಳು. ಕುಡಿದ ತಿಂದ್ಗಾ ನಾಯ್ಕ ಮನೆ ಕಡೆ ಹೊರಟ. ಸೀಕ್ಕಿ ನಡೆಯುತ್ತಿರುವುದೇನು ಕನಸೋ, ಭ್ರಮೆನೊ ಇಲ್ಲ ವಾಸ್ತವನಾ ತಿಳಿಯದಾಗಿತ್ತು. ಗಂಡ ಹೇಳಿದ್ದು ಸತ್ಯ, ಅವರ ಮನಸಿನಲ್ಲೂ ಹನುಮನಾಯ್ಕನಿಗೆ ತಮ್ಮ ಮಗಳನ್ನು ಕೊಟ್ಟು ಮದುವೆ ಹುಡಬೇಕು ಅನ್ನುವ ಬಯಕೆ ಇದೆ ಅನಿಸಿತು. ತಿಂಧ್ಗ ಬಂದು ಹೋದ ಮೇಲಂತು ಅವಳು ಮತ್ತೊಂದಿಷ್ಟು ವಿಚಲಿತಲಾಗಿದ್ದಳು. ಯಾಕೆ ಸಂಜೆ ಆಕ್ತಿಲ್ಲಾ, ಅನುಮಾನದಿಂದ, " ಕಾಯಂ ಏನ್ರಿ ಅವರು ಬಂದ್ರ ಅಡುಗೆಮಾಡಿ ಊಟ ಮಾಡೋದಾ ಇಲ್ಲ ಬರಿ ಬೆಲ್ಲದ ನೀರಾ. . ." ಉತ್ತರಕ್ಕಾಗಿ ಕಾದಳು. " ಅಲ್ಲ ಕಣೆ, ಅವರಿನ್ನೂ ಬರೋದು ಐದಾರು ಘಳಿಗೆ ಅಗುತ್ತೆ ನೀನು ಈಗಲೆ ತಯಾರಿಗೆ ಸಜ್ಜಾಗಿದಿಯಲ್ಲ. ಅಂದಂಗ ಪದ್ದತಿ ಪ್ರಕಾರ ಅವರು7 ಊಟ ಏನೂ ಮಾಡಂಗಿಲ್ಲ. ಬಂದು ಕುಂತು ಪಾನಕ ಕುಡುದು ಹೋಗಬಹುದೇನೊ. ಯಾವದಕ್ಕೂ ಅಪ್ಪನ್ನ ಒಂದು ಮಾತು ಕೇಳಿ ಬಿಡು". ಎಂದು ಅವಳ ಗೊಂದಲ ನಿವಾರಣೆ ಮಾಡಿದ್ದ. ಇಬ್ಬರು ಮಕ್ಕಳನ ಕರೆದುಕೊಂಡು ಅವನು ಕಾಡು ಕಡಿದು ಮಾಡಿದ್ದ ಇಪ್ಪತ್ತೈದು ಎಕ್ರೆಯಷ್ಟು ಜಮೀನಿನ ಮೇರೆಗೆ ಮಣ್ಣು ಹಾಕಿ ಎತ್ತರಿಸಿದ ಕೊರ್ಕಲ್ಲಿಗೆ ಜಾಲರಿ ಕಟ್ಟಿ ರಕ್ಕಸ ಪರಿ ಮರಗಳನ್ನು ನೆಟ್ಟು ಬರಲು ಹೆಗಲ ಮೇಲೆ ಕೊಡ್ಲಿ ,ಕುಡುಗೋಲು, ಸಲ್ಕಿ ಇಟ್ಕೊಂಡು ಹೊರಟ.

ಡಾವೋ ಸೇಣು ನಾಯ್ಕ ಮನಿಗೆ ಬರಾಕ ಮುಂಚೆ ಧನ್‌ಸಿಂಗ್ ಮಕ್ಕಳೊಂದಿಗೆ ಮನೆ ಸೇರಿದ್ದ. ಕಾಲ ಮೇಲೆ ನೀರು ಹಕ್ಕೊಂಡು ಮನಿಯೊಳಗ ಹೋಗಾಕು ಡಾವೋ ಮತ್ತು ಅತನ ಹೆಣ್ತಿ ರುಕ್ಕಿ ಬರೋದಕ್ಕೂ ಸರಿಯಾಗಿತ್ತು. ಧನ್‌ಸಿಂಗ್ ಹೊರಗೆ ಬಂದು , " ಬನ್ನಿ ಬನ್ನಿ ದಯಮಾಡಿ ಒಳಗ ಬನ್ನಿ " ಕರ್ಕೊಂಡು ಹಿಂದೆ ಹಿತ್ತಲೊಳಗೆ ಹಾಕಿದ್ದ ಚಾರ್‌ಪಾಯಿ ಮೇಲೆ ಡಾವೋ ಕುಂತ್ರು ಆತನ ಹೆಂಡಿತ ರುಕ್ಕಿ ಅಡುಗೆ ಮನೆಯಲ್ಲಿದ್ದ ಸೀತ್ಕಿಯ ಪಕ್ಕ ಹೋಗಿ ನೆಲದ ಮೇಲೆ ಕುಂತ್ಲು. ಧನ್‌ಸಿಂಗ್‌ನ ತಾಯಿ ಬಂದು ಡಾವೊ ಸೇಣುನಾಯ್ಕ ನ ಪರಿಚಯ

ಮಾಡಿಕೊಂಡು ಒಳಗೆ ಹೋದಳು. ಅವನಿಗೆ ಇಬ್ಬರು ಗಂಡು ಮಕ್ಕಳನ್ನು ಕರೆದು ಪರಿಚೆಯಿಸಿದ. ಒಬ್ಬಳೆ ಮಗಳು ಚಿಕ್ಕವಳಾದ ಸೋಮ್ಲಿಯ ಪರಿಚೆಯವನ್ನು ಮಾಡಿಸಿದ. ಲೋಕಾಭಿರಾಮವಾಗಿ ಮಾತಾಡ್ತಾ ಡಾವ್ರೋನ ಮಾತಮಾತಿನಲ್ಲೂ "ಧನ್‌ಸಿಂಗ್ ನಾಯ್ಕ ತಾವು ಅನ್ಯತಾ ಭಾವಿಸದಿದ್ದರೆ ನಿಮ್ಮ ಕೂಡ ನಮ್ಮ ಸಂಬಂಧ ನಡೀಬಹುದಲ್ಲಾ." ಅಳಕುತ್ತಲೆ ಪ್ರಸ್ತಾಪಿಸಿದ. "ಡಾವ್ರೋ ಸೇಣುನಾಯ್ಕೆ ಅದಕ್ಯಾಕ ಹಿಂಜರಿಕೆ. ನನ್ನ ಮಗನು ಈಗ ಪ್ರಾಯಕ್ಕ ಬಂದಾನ, ನಿಮ್ಮ ಮಗಳು ಮೈ ನೆರತವಳೆ. 'ವಾತ್‌ಬೋಲಿ' ಮಾಡಿಬಿಡಿ. ವಿಶ್ಯಾ ಶ್ಯಾಸ್ತ್ರ, ಗೋಳ್ (ಬೆಲ್ಲ) ತಿನ್ನೋದು, ಸಗಾಯಿ ಎಲ್ಲನೂ ಮುಂದೆ ಮಾಡಿದ್ರಾತು." ಧನ್‌ಸಿಂಗ್ ತಮ್ಮ ಒಪ್ಪಿಗೆಯನ್ನು ಸೂಚಿಸಿದ. "ನೋಡಿ ಋಣಾನುಬಂಧ ಅನ್ನೋದು ಇದಕ್ಕೆ. ತಾಂಡದಾಗ ಅನೇಕರು ಬಂದು ಕೇಳಿ ಹೋದ್ರು, ಆದ್ರ ಯಾಕೋ ಮನಸಿಗೆ ಬಂದಿರಲಿಲ್ಲ. ನೀವು ಎಲ್ಲಂದಿಲೋ ಬಂದ್ರಿ. ನಿಮ್ಮ ಮಾತುಕತೆ, ಸಂಸ್ಕೃತಿ, ಸಂಪ್ರದಾಯ ನನಗಂತು ಬಹಳ ಇಷ್ಟ ಆಯ್ತು. ನೀವು ಏನು ಹೇಳಿದ್ರು ನಾ ಒಪ್ಪಾಕ ತಯಾರಿದ್ದೀನಿ. ನಿಮ್ಮ ಸಂಬಂಧ ನಮಗ ಬೇಕು." ಡಾವ್ರೋ ಒಪ್ಪಿಕೊಂಡಿದ್ದ. ಧನ್‌ಸಿಂಗ್ ಹುಕ್ಕ ಹತ್ತಿಸಿ ಮೊದಲು ಡಾವ್ರೋ ಸೇಣು ನಾಯ್ಕನಿಗೆ ಕೊಟ್ಟು ಅವನಾದಮೇಲೆ ಧನ್‌ಸಿಂಗ್ ಒಂದು ಜುರಿಯನ್ನು ಎಲೆದು ಮಾಗದಮಾಸ್ಯೆಯಾದಮೇಲೆ ವಾತಬೋಲಿ (ಮಾತುಕತೆ) ಮಾಡುವುದಾಗಿ ಇಬ್ಬರು ಒಪ್ಪಿಕೊಂಡ ಮೇಲೆ ಅವರನ್ನ ಬಿಳ್ಕೊಟ್ಟಿದ್ದ ಧನ್‌ಸಿಂಗ್. ಡಾವ್ರೋ ಸೇಣು ನಾಯ್ಕನ ಹಿಂದೆ ಹಟ್ಟಿ ನಾಯ್ಕ ಒಬ್ಬ ಜಾಸೂಸನ್ನ ಬಿಟ್ಟಿದ್ದರೆ ಕಾರಬಾರಿ ಇಬ್ಬರನ್ನು ಬಿಟ್ಟಿದ್ದ. ಅವರೆಲ್ಲ ಪ್ರತಿ ಹಂತದಲ್ಲಿ ನಾಯ್ಕನಿಗೆ ಮತ್ತು ಕಾರಬಾರಿಗೆ ಸುದ್ದಿಯನ್ನು ತಲುಪಿಸುತ್ತಿದ್ದರು.

ಧನ್‌ಸಿಂಗ್ ಹಟ್ಟಿನಾಯ್ಕ, ಕಾರಬಾರಿಗೆ ತನ್ನ ಮಗನ ಮಾತುಕತೆಗೆ ಹೇಳಿ ಕಳುಹಿಸಿದ್ದ. ಕರಮ್‌ತೋಟ್ ಓಣಿಯ ಮೂವತ್ತು ಮೆನಗಳಲ್ಲಿ ದೊಡ್ಡ ಸಂಭ್ರಮವೇ ಏರ್ಪಟ್ಟಿತ್ತು.

ಪ್ರತಿ ಯೊಬ್ಬರೂ ಅಡ್ಡಾಡಿ ಕೆಲಸ ಮಾಡುತ್ತಿದ್ದರು. ದಿನೆದಿನೆ ವರ್ಚಸ್ಸು ಬೆಳಕೊಳ್ಳೂತ್ತಾ ಧನ್‌ಸಿಂಗ್ ಭಶ್ಯಾ ಕರಮ್‌ತೋಟ್ ಮೆಲೆ ಹಟ್ಟಿನಾಯ್ಕನಿಗೆ ಅನೇಕ ಅನುಮಾನಗಳು ಎದ್ದವು. " ಅಲ್ಲಪ್ಪ ನೆನ್ನೆ ಮನ್ನೆ ಬಂದವನು ತಾಂಡತುಂಬಾ ಹೆಸರು ಮಾಡಕೊಂಡ, ತಾಂಡ ಹುಟ್ಟಿದಾಗಿನಿಂದಳು ನಮ್ಮ ಅಜ್ಜಂದಿರು ನಾಯಕರಾಗಿ ತಾಂಡ ಆಳಿದ್ರೂ ಮಂದಿ ಮನಸಿನಾಗ ಉಳಿದಿಲ್ಲ." ಬೊತನಾಯ್ಕ ಎಲ್ಲೊ ಒಂದು ಕಡೆ ಕಾಡುತ್ತಿದ್ದ ಅನುಮಾನವನ್ನು ವ್ಯಕ್ತಪಡಿಸಿದ. ಅವನ ಬೆಡಗದವನಾದ ರೂಪ್ಲನಾಯ್ಕ, "ಇಡೀ ತಾಂಡನೇ ಹಾಳು ಬಾಡಿದ್ರಿ, ರಂಡಿಮುಂಡೆ ಗಂಟನ್ನು ಬಿಡದಂಗ ಹಾಕ್ಕೊಂಡ್ರಿ, ಇನ್ನೇನು ಮಂದಿ ನಿಮ್ಮನ್ನ ನಂಬ್ಯಾರು." ಗೊಣಗಿದ. "ಏನಂದೆ" ನಾಯಕ ಸಿಟ್ಟಿಂದ ಕೇಳಿದ. " ಕೃತಜ್ಞ ಹೀನ ಮಂದಿ ಅಂದೆ." "ನೀನೊಬ್ಬನೆ ನೋಡು ರೂಪೂ ನಮ್ಮನ್ನ ಅರ್ಥಮಾಡಿಕೊಂಡವನು ಅಂದ್ರ. ಅಲ್ಲ ನನಗನುಸುತ್ತೆ ಈ ಮಕ್ಕಳು ಏನು ನಡೆಸ್ಯಾರಂತೀನಿ, ಡಾವ್ರೋನ ಮಗಳನ್ನ ಧನ್‌ಸಿಂಗ್ ಮಗನಿಗೆ ಕೊಟ್ಟು ಸಂಬಂಧ ಮಾಡಿದ ತಕ್ಷಣ ತಾಂಡ ಆಳಾಕಾದೀತೇನು." ಎಲ್ಲೋ ಮೂಲೆಯಲ್ಲಿ ಅನುಮಾನ ಕಾಡದತಿರೋದನ್ನ ವ್ಯಕ್ತಪಡಿಸಿದ. "ಏಯ್, ನೀ ಯಾಕ ಹೆದುರ್ತೀಯಾ ಬಿಡು ಧನ್‌ಸಿಂಗ್ ಏನು ನಿನ್ನ ಪದವಿ ಕಿತ್ಕೋಳೊಂತ ಮನಷ್ಯಾ ಅಲ್ಲ, ಆದ್ರೂ ಯಾರು ಯಾವಾಗ ಹೆಂಗಿರ್ತಾರೊ ಯಾ ಮಗ ಬಲ್ಲ." ಮೊದ್ಲು ಅವನ ಪರವಾಗಿ ಮಾತಾಡಿದಂತೆ ಆಡಿ ತಲೆಯೊಳಗೆ ಹುಳ ಬಿಟ್ಟಿದ್ದ, "ಈಗೆ ಏನು ಮಾಡಂದಿ, ಆಮೇಲೆ ಹೆಣಗೋದು ಬ್ಯಾಡ." ರೂಪನಾಯ್ಕ ಸಲಹೆ ಕೇಳಿದ ನಾಯಕ. "ಒಂಚೂರು ಪಾರು

ಮರ್ಯಾದಿ ಐತೇನೊ ಅದನ್ನ ಉಳ್ಸಕೊ. ನೀ ಇಲ್ಲದ್ದಿದ್ರು ಕಾರ್ಯೆವು ನಡದ ನಡಿತೈತಿ." ಮತ್ತೆ ಗೊಂದಲ ಬಿತ್ತಿ ಕಿರುಗಣ್ಣಿನಿಂದ ನಾಯ್ಕನ ಸಂದಿಗ್ಧತೆಯನ್ನು ನೋಡಿ ಒಳೊಳಗೆ ನಗುತ್ತಾ ಎದ್ದು ಹೊರಟ ರೂಪ್ಲ ನಾಯ್ಕ. ತಾವಿಬ್ಬರೆ ಇದ್ದಾಗ ಧನ್‌ಸಿಂಗ್ ಬಗ್ಗೆ ಕೆಟ್ಟದಾಗಿ ಮಾತಾಡಿಕೊಂಡಿದ್ದ ಕಾರಬಾರಿ ಮತ್ತು ನಾಯಕ ಈಗ ಒಟ್ಟಿಗೆ ಅವನ ಮನೆಗೆ ಹೋಗುವುದು ಹೇಗೆಂದು ಮನಸ್ಸಿನೊಳಗೆ ಅಳುಕಿತ್ತು. ಧನ್‌ಸಿಂಗ್ ಮನೆಗ ಹೋಗಲು ಹಟ್ಟಿನಾಯಕನ ಓಣಿಯಿಂದಲೆ ಹೊರಟಿದ್ದ ಕಾರಬಾರಿ, ನಾಯಕ ಕಟ್ಟೆ ಮೇಲೆ ಕುಂತಿದ್ದನ್ನು ನೋಡಿ ಮಾರಿ ಮುಚ್ಚಿಕೊಂಡು ವಾಪಾಸು ತಿರುಗಲು ಹವಣಿಸೋದಕ್ಕು ನಾಯ್ಕ ನೋಡುವುದಕ್ಕೂ ಸರಿ ಹೋಯಿತು. "ಏಯ್ ಕಾರಬಾರಿ, ಯಾಕ ವಾಪಾಸ್ ಹೊಂಟಿ ಬಾ. ಇಬ್ಬರೂ ಹೊಂಟಿರೋದು ಅದೇ ಜಾಗಕ್ಕ, ಹಿಂದಾದ್ರೇನು ಮುಂದಾದ್ರೇನು ಬ್ಯಾರೆ ಓಣಿಯಿಂದ ಹಾದ ಹೋದ್ರೇನು." ಕಾರಬಾರಿ ಮರು ಮಾತಾಡದೆ ವಾಪಾಸಾಗಿದ್ದ.

" ಎಲ್ಲಿಗೆ ಹೊಂಟೀರಿ ನೀವು." "ಅದೆ ತಾವು ಹೊಂಟೀರಲ್ಲ ಅಲ್ಲಿಗೆ" ಹಟ್ಟಿ ನಾಯಕ ಸಮರ್ಥಿಸಿಕೊಂಡ. "ನಾನು ಆಟ ರಾಂಪುರಕ್ಕೆ ಹೊಂಟಿದ್ದೆ, ಮತ್ತ ನೀವು ಹೊಂಟೀರಿ ಅಂದ್ರ ನಾನು ಬರ್ತೀನಿ." ದೊಡ್ಡ ಸುಳ್ಳು ಹೇಳಿದ.

"ಕಳ್ಳಗೊಂದು ಪಿಳ್ಳೆ ನೆವ, ಮಗನ ನನಗ ಗೊತ್ತಿಲ್ದಂಗೆ ಧನ್‌ಸಿಂಗ್ ಮುಂದೆ ಒಳ್ಳೆವ ಆಗಾಕ ಹೊಂಟಿದ್ದೋನು, ನಾ ಕೇಳದ್ರ ರಾಂಪುರ ಅಂತಾನ. ಇಲ್ಲಿ ಸತ್ಯ ಎಷ್ಟು ದಿನ ಮುಚ್ಚಿಡೋದಕ್ಕ ಆದೀತು." ಮೆತ್ತಗೆ ಹೇಳಿದ.

"ಛೆ ಛೆ ಛೇ... ಹಾಗೇನಿಲ್ಲ. ನಡಿ ಮೊದ್ಲು ಧನ್‌ಸಿಂಗ್‌ನಾಯ್ಕನ ಮನಿಗೆ ಹೋಗೋಣ, ಕಾರ್ಯೆವು ಆದಮ್ಯಾಗ ಊಣ್ಣಾಕ ಹೋದ್ರ ಇವರೇನು ಊಣ್ಣಾಕ ಬಂದಾರ ಅಂದಾರು ಜನ. ರವೋಟರ ಮರ್ಯಾದೆ ಬ್ಯಾಡ." ನಾಯಕ ಹೇಳಿದ. ಇಬ್ಬರ ಮನದಲ್ಲೂ ಅಪರಾಧಿ ಭಾವನೆ ತುಂಬಿತ್ತು. ಇಬ್ಬರೂ ಒಬ್ಬನೊಬ್ಬರು ತಮ್ಮ ಕಳ್ಳ ಬುದ್ದಿಯನ್ನು ಬೈದುಕೊಳ್ಳುತ್ತಾ ಹೊರಟರು. ಧನ್‌ಸಿಂಗ್ ನಾಯ್ಕ ಯಾರ ಗೊಡವೆಗೂ ಹೋಗದೆ ಜನರನ್ನು ತನ್ನ ಕಡೆಗೆ ಸೆಳೆವ ವ್ಯಕ್ತಿತ್ವವನ್ನು ಹೊಂದಿದ್ದ. ನೇರವಾದ ಮಾತು, ಜನಪರ ಯೋಚನೆ, ಮಂದಹಾಸದ ಮುಖ. ಕಿಡಿಗೇಡಿಗಳಂತೆ ತಾಟು–ತಗಲು ಮಾಡದೆ ಸಮಯಕ್ಕೆ ತಕ್ಕಹಾಗೆ ಸತ್ಯವನ್ನು ಪ್ರತಿಪಾದಿಸಿ ಮಂದಿಗೆ ಭರವಸೆ ಬರುವಂತೆ ನಡೆದುಕೊಳ್ಳುತ್ತಿದ್ದ. ತಾನಾಯ್ತು, ತನ್ನ ಮನೆ, ಮಕ್ಕಳು, ಕೆಲಸವಾಯ್ತು ಎಂಬಂತಿದ್ದ. ಅಕ್ಕಪಕ್ಕದ ತಮ್ಮ ಸೋದರ ಸಂಬಂಧಿ ಮನೆಯೊಳಗೆ ಏನು ನಡೆದರೂ ಅದರ ಗೋಜಿಗೆ ಹೋಗುವವನಲ್ಲ. ಯಾಕಂದ್ರ ಅವನಪ್ಪ ಆಗಾಗ ಹೇಳ್ತಿದ್ದ "ತನ್ನ ಬಲ್ಲವ ಬಲ್ಲ." ಮಾತನ್ನು ಗಾಢವಾಗಿ ನಂಬಿದ್ದ. ಇದು ಗುಡಿಕೋಟೆ ತಾಂಡದ ಬಹುಪಾಲು ಜನರಿಗೆ ಜೀರ್ಣಿಸಿಕೊಳ್ಳದಂತಾಗಿತ್ತು. ಕಾಡಿಂದ ಕವಳಿ, ಕಾರಿ, ಕಂಚು, ಬಾರಿ ಹಣ್ಣು ಮತ್ತು ಒಣ ಕಟ್ಟಿಗೆ ಆಯ್ದು ತಂದು ಮಾರಿ ಹೆಂಗಸರು ಮಕ್ಕಳ, ಗಂಡಂದಿರ ಹೊಟ್ಟೆಯನ್ನು ಹೇಗೋ ತುಂಬಿಸುತ್ತಿದ್ದರು. ಗಂಡಸರು ಭಟ್ಟಿ ಇಳಿಸಿ ಗಿರಾಕಿಗೆ ಅರ್ಧಮಾರಿ ಉಳಿದರ್ದವನ್ನು ತಾವೆ ಕುಡಿದು ಮತ್ತಿನಲ್ಲಿ ಬದುಕುತ್ತಿದ್ದರು. ಅಂಥಹ ವಾತಾವರಣದಲ್ಲಿ ಪ್ರಾಮಾಣಿಕನೊಬ್ಬ ಬಂದರೆ ಸರಿಯಾದೀತೆ? ತಾಂಡ ಮಂದಿಯ ನಡುವೆ ಅವನು ಅಪ್ರಸ್ತುತನಾಗಿದ್ದ. ಆದಾಗ್ಯೂ ಭಾರತ

ದೇಶದೊಳಗೆ ನಡೆದ ಸ್ವಾತಂತ್ರ್ಯ ಆಂದೋಲನವನ್ನು ಬಹಳ ಹತ್ತಿರದಿಂದ ನೋಡಿ ಅಲ್ಲಲ್ಲಿ ಕೆಂಪು ಮದಿಜೊತೆ ಸೆಣಸಾಡಿ ಅನೇಕರನ್ನು ಕೊಂದು ಈಗ ಭೂಗತನಾಗಿದ್ದ. ಸುದ್ದಿ ಏನಾದರೂ ಬ್ರಿಟೀಷರಿಗಾಗಲಿ. ಇಲ್ಲ ರಾಂಪುರದ ಸಿದ್ದೇಗೌಡನಾಗಲಿ, ಶಾನಭೋಗರ ಮನೆತನದವರಾಗಲಿ ಸುದ್ದಿ ಗೊತ್ತಾದರೆ ದೇಸುನಾಯ್ಕನ ತಾಂಡದಲ್ಲಿದ್ದ ನೂರಾರು ಲಂಬಾಣಿಗಳ ಮರಣ ಹೋಮ ನಡೆಯುತ್ತಿದ್ದುದು ಸತ್ಯ. ಅದೇನೋ ಮರಿಯಮ್ಮ ತಾಯಿ, ಸೇವಾಭಾಯಿ ದೊಡ್ಡೋರು ಕಾಪಾಡಿದ್ರು. ಈಗ ಅಂವ ನಿರ್ಲಿಪ್ತನಾಗಿದ್ದ. ಯಾರ ಬಗ್ಗೆ ಏನನ್ನೂ ಮಾತನಾಡುತ್ತಿರಲಿಲ್ಲ.

ಜಗ್ಗಿ ಮಂದಿ ನೆರದಿತ್ತು. ಹಟ್ಟಿ ನಾಯಕನಿಗೆ ಜನರ ಮಳಾವಿನಲ್ಲಿ ಅಗ್ರ ಸ್ಥಾನ. ಪಕ್ಕದಲ್ಲೇ ಉತ್ಸವ ಮರ್ತಿಯಂತೆ ಕಾರಬಾರಿ. ಡಾವೋ ಖುದ್ದಾಗಿ ಮಗಳ ಸಂಬಂಧ ಮಾಡ್ತಿದ್ದರಿಂದ ಅಡ್ಡಾಡುತ್ತಿದ್ದ. " ಹಟ್ಟಿ ನಾಯಕರು ಬಂದ್ರಲ್ಲ ಈಗ ಧಾರಾಳವಾಗಿ ಮಾತುಕತೆ ಮುಗಿಸಿ, ಪಾನಪೆರ (ವಿಳ್ಯೆದೆಲೆ) ಶ್ಯಾಸ್ತ್ರ ಮುಗಿಸಿ ಬಿಡ್ರಿ. ಈಗೇನು ಕಾಯುವುದು ಬೇಡ." ಸಭೆಯಲ್ಲಿದ್ದ ಹಿರಿಕ ಗಂಗಾನಾಯಕ ಹೇಳಿದ. ಕಾರಬಾರಿ ಹಟ್ಟಿ ನಾಯಕನಿಗೆ ಡಾವೋನ ಜೊತೆಗೆ ಧನ್‌ಸಿಂಗ್ ಸಂಬಂಧ ಬೆಳೆಸುತ್ತಿರುವುದು ಇಷ್ಟ ಇರಲಿಲ್ಲ. ಏನಾರು ಆಗಿ ಈ ಸಂಬಂಧ ಮುರುದ್ರೆ ಒಳ್ಳೆಯದು ಅನ್ನೋ ವಿಚಾರ ಅವನದಾಗಿತ್ತು. ಆದರೆ ಅಂಥಹ ಸನ್ನಿವೇಶ ಏರ್ಪಡುವ ಯಾವ ಲಕ್ಷಣ ಕಾಣಲಿಲ್ಲ. ಇಬ್ಬರು ಮಕಮಕ ನೋಡಿಕೊಂಡು ಗಡ್ಡ ಕೆರೆಯತೊಡಗಿದರು. ಇನ್ನೇನು ಕಾರಬಾರಿ ಎದ್ದು ಕಸಳಾವತ್ ಹೇಳಿ (ಶ್ಯಾಸ್ತ್ರ) ಇಬ್ಬರು ಬೀಗರ ಆಶೆಯವನ್ನು ಬಹಿರಂಗ ಪಡಿಸಬೇಕು ಅಂತೇಳಿ ಹೇಳ್ತಿದ್ದಂಗೆ, ಸಭೆಯ ನಡುವೆ ಒಬ್ಬ ಮೇಗಾವತ್ ಬೆಡಗದವನು ಎದ್ದುನಿಂತು, "ಎಲ್ಲಾ ಹಿರಿಯರು ಒಟ್ಟಿಗೆ ಅದೀರಿ ಒಳ್ಳೆಯದೇ ಅಯ್ತು, ಈ ಡಾವೋ ಸೇಣುನ ಮಗಳು ಜಾನಕಿನುವೆ ನನಮಗ ಕರಂದಿ ಕಾಡೆಲ್ಲ ಸುತ್ತಾಡಿ, ಹಣ್ಣು ಹಾರಿಯೋ ಮುಂದ ಮಾವನ ಮಗ ಅನ್ನೋ ಸಲಿಗೆಯಿಂದ, ಮದುವಿ ಅಗೋದಾಗಿ ಮಾತು ಕೊಟ್ಟಾಳ." ದೂರದ ಸಂಬಂಧಿ ವಾಮಾ ನಾಯ್ಕ ಡಾವೋನ ಮೇಲೆ ರಾಡಿ ಎರಚಿದ. ಮಂದಿ ಗಲಿಬಿಲಿ ಸುರು ಮಾಡಿದ್ರು. ಕಾರಬಾರಿ ಮೀಸೆಯೆಲ್ಲೆ ನಗುತ್ತಿತ್ತು. ನಾಯಕ ಬಾಳ ಕುಷಿಯಲ್ಲಿ, "ಹಂಗಾರ ಈ ಸಂಬಂಧ ಮುರಿರಿ, ಮೇಗಾವತ್ ದಾನು ನಾಯ್ಕನ ಮಗ ಚೆನ್ನಾ ನಾಯ್ಕನಿಗೆ ಕೊಟ್ಟು ಮದ್ವಿ ಮಾಡ್ರಿ. ಎಲ್ಲ ಸರಿಹೋಗ್ತದ." ಅಂದು ಎಡವಟ್ಟು ಮಾಡಿದ. ಡಾವೋ ಗಂಬೀರವಾಗಿ ಕುಳಿತಿದ್ದ. ಧನ್‌ಸಿಂಗ್ ವಿಚಲಿತ ನಾಗಿರಲಿಲ್ಲ. ಕಾರಬಾರಿ, "ನೆರದ ಮಂದಿ ಏನಂತೀರಪ್ಪ, ಪರಿಸ್ಥಿತಿ ಹಿಂಗೈತಿ, ಏನು ತೀರ್ಮಾನ ಹೇಳ್ರಲ್ಲ." ಬೆಂಕಿಗೆ ತುಪ್ಪ ಸುರಿಯಲು ಹವಣಿಸಿದ. ತಲೆ ಇಲ್ಲದ ಕೆಲ ಮಂದಿ, "ಮೊದಲು ಹುಡುಗನ ಕೂಡ ಅಡ್ಡಾತ್ತಿದ್ಲು ಅಂದ್ರ. . ." ಏನೇನೋ ಅನುಮಾನಗಳು ಏಳ ತೊಡಗಿದವು. ಈಗ ಸುಮ್ಮನಿದ್ದರೆ ಸರಿಯಲ್ಲ ಅಂದವನೆ ಧನ್‌ಸಿಂಗ್, "ನಾವು ಕಟ್ಟಿಗೆ ಆಯೋಕೆ, ಹಣ್ಣು ಹರಿಯೋಕೆ ಬೇರೆ ಹೆಣ್ಣುಮಕ್ಕಳ ಕೂಡು ಹೋಕ್ಕಿದ್ವಪ್ಪ. ಇದರ ಅರ್ಥ ನಮಗೂ ಅವರಿಗೂ ಸಂಬಂಧ ಐತಿ ಅಂತಾನಾ? ಎಷ್ಟೋ ಜನ ಹೆಂಗಸರು ನಮ್ಮ ಅಕ್ಕಂದ್ರು, ತಂಗ್ಯಾಂದ್ರು, ಅತ್ತಿಗೆಮ್ಮೋರು, ಸೊಸೆಯಂದ್ರು ಮಾನವ ಮಗಳೂ ಏನೇನೋ ಸಂಬಂಧದ ತಳಕು ಅದಾವು. ಹಂಗಂತ ಏನೇನೊ ಹುಚ್ಚು ಕಲ್ಪನಾ ಕಟ್ಟಾಕ ಆದಿತಾ? ಆಟ ಅಡೋ ವಯಸ್ಸಿನ ಮಕ್ಕಳು ಅವಕ್ಕೇನು ಗೊತ್ತು. ಅದ್ರಾಗೆಲ್ಲ ನನಗೆ ನಂಬಿಕಿ ಇಲ್ಲ. ಈಗ ನಾವೇನು ನಿರ್ಧಾರ ಮಾಡೀವಿ ಅದಾ ಕೊನೆ." ಖಡಾ ಖಂಡಿತವಾಗಿ ಹೇಳಿದ. ಡಾವೋ, ಮೇಗಾವತ್ ದಾನೂ ನಾಯ್ಕನ ಮಾತು

ಕೇಳಿ ಕುಸಿದಿದ್ದ. ಯಾವಾಗ ಧನ್‌ಸಿಂಗ್ ಮಾತಾಡಿದನೋ ಧರ್ಯ ಬಂದಂಗಾಗಿ, "ಲೇ ದಾನು, ಮನೆ ಮುರುಕ, ನನ್ನ ಮಗಳು ಹೇಳಿದ್ಲ ನಿನ ಮಗನ್ನ ಮದುವೆ ಮಾಡಿಕೋತೀನಿ ಅದ್ನ. ಲಂಬಾಣಿ ಇತಿಹಾಸದಾಗ ಯಾವತ್ತಾರ ಇಂಥದ್ದು ನಡೆದೈತೇನು? ನಡೆದಿದ್ದದ್ರೂ ನಮ್ಮ ವಂಶದಾಗ ನಡೆದಿಲ್ಲ. ನಮ್ಮ ಹುಡುಗಿಯೇನು ಬಾಯಿ ಬಿಟ್ಟು ಗಂಡನನ್ನು ಆಯ್ಕೆ ಮಾಡಿಕೊಳ್ಳುವಂತ ಪಾಪದ ಕಾಲ ಬಂದಿಲ್ಲ. ಅದೇನು ಇದ್ರು ನಿಮ್ಮ ಬೆಡಗಿನಲ್ಲಿ, ಇಲ್ಲಂದ್ರ ನಿಮ್ಮಸಂಬಂಧಿಕ್ರಾಗ ನಡೆದಿರಬೋದು. ಇನ್ನೊಂದು ಸರ್ತಿ ಇಂಥಾ ನೀಚ ವಿಚಾರ ಮಾಡಿದ್ರ ನನ್ನ ಮಗಳಕೂಟ ನಿನ್ನೂ ನಿನ್ನ ಮಗನ್ನೂ ಮೂಗಹರಕಿಂದಲೆ ಹೊಡೆಸ್ತೀನಿ ನೆಪ್ಪಿರ್ಲಿ." ಜೋರು ಗದರಿಸಿದ. ದಾನು ನಾಯ್ಕ ಕಾರಬಾರಿ ಬಲದ ಮೇಲೆ ಟಸ್‌ಪುಸ್ ಎಗರಾಡಿದ. ಮಂದಿಗೆ ಗೊತ್ತಾತಿದು ಯಾರೋ ಆಡಿದ ಆಟ ಅಂತಂದು, ಯಾರು ತಲೆ ಕೆಡಿಸಿಕೊಳ್ಳಲಿಲ್ಲ. ಮಾತುಕತೆ ವಿಳ್ಯ ಶ್ಯಾಸ್ತ್ರ ಮುಗಿಸಿ ನಾಲ್ಕು ಗಡಿಗೆ ಸರಾಯಿ, ಕೋಳಿ ಕುರಿಮಾಂಸ ಕತ್ತರಿಸಿ ಧನ್‌ಸಿಂಗ್‌ನನ್ನ ಹೊಗಲೂತ್ತಾ ತಮ್ಮತಮ್ಮ ಮನಿಗೆ ಹೋದ್ರು.

ಮದುವೆ ಬಟ್ಟೆ ಹರ್ರೋದಕ್ಕೆ ರಾಂಪುರ ಸಂತೆ ಹೋಗಲು ಎಲ್ಲಾ ತಯಾರಿ ಮಾಡಿಕೊಂಡರು. ಅದರೆ ಧನ್‌ಸಿಂಘ್ ಗೆ ಚಿಂತೆ ಕಾಡಿತು. ಹಿಂದೆ ತಾವು ಮಾಡಿದ್ದ ಬ್ರೀಟೀಷರಿಗೆ ತಿಳಿದು ಅವರೇನಾದ್ರು ಬೆನ್ನು ಹತ್ತಿದರೆ ವಂಶನೆ ನಿರ್ವಂಶ ಅಗೋದು ನೂರಕ್ಕೆ ನೂರು ಸತ್ಯ ಅಂದುಕೊಂಡು, ರಾಂಪುರ ಬದಲಿಗೆ ಚೆಳ್ಳಿಕೆರೆ ಇಲ್ಲ ಚಿತ್ರದುರ್ಗದ ಸಂತೆ ಹೋಗೋದ ವಾಸಿ ಅನಿಸಿತು. ಬಿಗರಿಗೆ ಒಂದು ಮಾತು ಹೇಳಿ ಕಳಿಸಿದ. ಅವರೇನೂ ಮರು ಮಾತಾಡದೆ ಒಪ್ಪಿಕೊಂಡರು. ಕಾರಬಾರಿ, ನಾಯಕ ಮಾತ್ರ ಆಟೊಂದು ದೂರ ಯಾರ ಬರ್ತಾರಪ್ಪ. ಅದು ಕಾಡಡವಿ ದಾರಿ, ಅದು ಬಂಡಿ ವ್ಯಾಲೆ ಕುಂತ ಹೋಗೋದು. ಹಿಂದಗಡೆ ಕೈಕಾಲ ನೋವಿಗಿಟ್ಟಕೊಂಡ್ರ." ಎಂದು ಗೊಣಗಿದರು. ಬರೋರು ಬರ್ಲಿ ಅಂತೇಳಿ ಸಾಡಿ–ಮೊಳಿಯಾ (ಮದುವೆ ಬಟ್ಟೆಬರೆ) ತರೋದಕ್ಕ ಹತ್ತು ಬಂಡಿಗಳು ಸಜ್ಜುಗೊಂಡವು.

ದೊಡ್ಡ ಅಂಗಡಿಯಲ್ಲಿ ಹುಡುಗಿಗೆ ಇವರೇನು ಕೊಡಿಡಬೇಕೋ ಅದನ್ನು ಮೊದಲು ಕೊಡಿಸಿದರು. ತೊಂಡ್ಲಿಕ್ಕೆ ಬೇಕಾದ ಗುಗರಿ, ಟೊಪ್ಲಿ, ಆಡಿಕಡ್ಡಿ, ಬಯಾ (ರಟ್ಟೋಳೆ) ಜಾಲಿತೊಡೇವು. ಭೂರಿಯಾ, ಸರ್ರೆ, ಖಾಸಡಿ (ಚಪ್ಪಲಿ), ಅದಮೇಲೆ ಹುಡಗನಿಗೆ ದೊಡ್ಡಂಗಿ, ಪಂಜೆ, ಕಿವಿಗೆ ಮುರ, ಖಾಸಡ ತಗೊಂಡು ವೀಯಾರ್‌ಹಾಟ (ಮದುವೆ ಸಂತೆ) ಗೋಟೇರ್ ಹಾಟ (ಬೀಗರೂಟದ ಸಂತೆ) ಅದಮ್ಯಾಲೆ ಸಂಜೆ ಇಳಿ ಹೊತ್ತಿನ ಸುಮಾರಿಗೆ ಊಟಕ್ಕೆ ಕರೆದರೆ ಯಾರೂ ಒಪ್ಪದೆ ಒಂದೇ ಸಲ ರಾತ್ರಿ ಭರ್ಜರಿ ಬೋಜನದ ವ್ಯವಸ್ಥೆ ಮಾಡಬೇಕೆಂದು ಬೇಡಿಕೆ ಇಟ್ಟರು. ರಿವಾಜಿನಂತೆ ಆಗತಾನೆ ಬಂದಿದ್ದ ಈಚಲ ಹೆಂಡದ ದೊಡ್ಡ ಎರಡು ಮೂರು ಕುಂಭಗಳನ್ನು ಖರೀಧಿಸಿ, ಸಣ್ಣ ಮಡಿಕೆಗಳಿಗೆ ಸರುವಿ ಹೆಂಗಸು ಗಂಡಸರು ಪ್ರತಿ ಯೊಬ್ಬರಿಗೂ ಕೊಟ್ಟರು. ಸೊಂಡಿ ರಾಮಾನಾಯ್ಕನ ಹೆಂಡ್ತಿ ಪೊಲಿ ಬಗಲಾಗಿದ್ದ ಕೂಸು ಅಳ್ತಾತೈತಿ ಅಂತೇಳಿ ಮಡಿಕೆಯಿಂದ ಒಂದಿಷ್ಟು ಗಸಿ ಹೆಂಡಾನ ಕೂಸಿನ ಬಾಯಿಗೆ ಹಾಕಿದಳು, ಅಳುತ್ತಿದ್ದ ಕೂಸು ಗಪ್ಪಾತು. " ಅಲ್ಲಾ ಈಗರ ಕುಯ್ಯೋಂ ಅಂತಿತ್ತು. ಗಸಿ ಹೆಂಡ ಕುಡಿಯೋಣ ಗಪ್ಪಾತು ನೋಡು." ಮಂದಿಗೆ ದೊಡ್ಡ ಅಚ್ಚರಿಯಿಂದ ಹೇಳಿದಳು. ಅಷ್ಟ್ರಾಗ ಚಂದ್ರಾನಾಯ್ಕ ಬಾಯಿ ತೆಗೆದು, " ಮುಂದ

ದೊಡ್ಡ ಕುಡಿಕಿ ಆಕಾಳ ನೋಡ್ರಿ." ಅಂದ. ಮಂದಿ ಗೊಳ್ಳಂತ ನಕ್ಕರು. ಹಿಂದಿನ ಮನಿ ಬಾಬುರಿ ನಾಯ್ಕನ ಹೆಂಡ್ತಿ ಚಾಲಿ, " ಬೆ ನಿಮ್ಮವ್ವನ್, ಮೊದ್ಲ ಕುಡುಕರ ಜಾತಿ ನಮ್ದು, ಹೆಣ್ಣು ಗಂಡು ಕಲತ ಕುಡಿತಾವ. ಅಂತ್ರಾದಾಗ ನೀ ಹುಟ್ಟೋತ್ಲನೇ ಕುಡಿಯೋ ಚಟ ಕಲ್ಸಾಕ ಹತ್ತಿ. ಮುಂದುಕ ಅದಕ್ಕೇನು ಕುಂಬ ಸಾಲಂಗಿಲ್ಲ ಬಿಡು, ಹಂಡೆ ಬೇಕಾಗ್ತದ." ಆಟು ತಿಳುವಳಿಕಿ ಇರೋ ಸಾಮಿನಾಯ್ಕ ಅಯ್ಯೋ, ಮುಂದಿಂದು ಯಾರ ಕಂಡರೋ ಯಪ್ಪ, ಮುಂದಿಂದು ಹಾಳಾಗಿ ಹೋಗ, ಈಗ ಅರಾಮಾಗಿ ಮಲಗು ತಲೆ ತಿನ್ನಬ್ಯಾಡ." ಎಂದು ಪೊಲಿ ಸಾಮಿನಾಯ್ಕನ ಬಾಯಿ ಮುಚ್ಚಿಸಿದಳು.

ಮಂದಿಯ ವಿನೋದ ಪ್ರಸಂಗವನ್ನು ಧನ್‌ಸಿಂಗ್ ಗಂಭೀರವಾಗಿ ಆಲಿಸುತ್ತಿದ್ದ. ಈ ಮಂದಿ ಜೀವನ ಇಷ್ಟೇನಾ? ಮೈಕೈ ಗಾಯ ಮಾಡಿಕೊಂಡು ಕಟ್ಟಿತಂದು ಮಾರೋದು. ಮಾರಾಕ ಹೋದಾಗ ಸವಕಾರ ಮಂದಿಕೂಟ, " ಬೇ, ನಿಮ್ಮವನ್ನ ಲಮಾಣಿ ಹೆಂಗ್ರಸನ್ ತಗಂಡು." ಎಂದು ಅವಮಾನಿಸಿದಾಗ ನಗುತ್ತಲೆ ಹೊರೆ ಹಾಕಿ, ಕುಡಿದು ತಿಂದು ಆಕ್ಷಣದಲ್ಲಿ ಮರೆತು ಬಿಡೋದು. ಈ ನಿಷ್ಕಲ್ಮಷ ಜೀವಿಗಳ ಮುಂದಿನ ಭವಿಷ್ಯ ಏನಾದೀತು. ತನ್ನ ಮೊಮ್ಮಕ್ಕಳನ್ನಾದರೂ ಈ ಮಂದಿಗಿಂತ ಭಿನ್ನವಾಗಿ ಬೆಳಸಬೇಕೆಂದು ನಿರ್ಧರಿಸಿದ.

ಹನುಮಾ ನಾಯ್ಕನ ಮದುವೆ ಮಾಡಿದ ಧನ್‌ಸಿಂಗ್ ತನ್ನ ಮುಂದಿನ ಹೆಜ್ಜೆ ಗುರುತುಗಳನ್ನು ಸ್ಪಷ್ಟವಾಗಿ ನಿರ್ಧರಿಸಿ ಇಡುವ ನಿಟ್ಟಿನಲ್ಲಿ ಕೆಲಸ ಮಾಡಿದ.

ಇಪ್ಪತ್ತೈದು ಎಕ್ಕರೆ ಜಮೀನು ಕಾಡಲ್ಲಿ ತಗದದ್ದು. ಗುಡೆಕೋಟೆ ಶಾನುಭೋಗ ಕಿಟ್ಟಣ್ಣ ಬಟ್ಟರಿಗೆ ಗೊತ್ತಾಗಿ ತಕರಾರು ಆಗಿತ್ತು. ಶಾನಬೋಗ ಆ ಜಮೀನನ್ನು ತಾನೇ ತನ್ನ ಹೆಸರ ಮೇಲ ಮಾಡಿಕೊಳ್ಳುವ ಹುನ್ನಾರ ನಡೆಸಿದ. " ಲೇ. ನಾಯಕ , ಕಾಡನ್ನ ಹಿಂಗೆ ಒತ್ತುವರಿ ಮಾಡಿಯಲ್ಲ. ಇದೇನು ನಿಮ್ಮಪ್ಪನ ಜಮೀನು ಅಂದ್ಕೊಂಡಿಯಾ?. ಇದು ಬ್ರಿಟೀಸ್ ಸರಕಾರದ್ದು, ಮೈಮೇಲಿ ಕಬರ ಇಟಕೋ, ಕಂಪನಿ ಸರಕಾರಕ್ಕ ಏನಾರ ತಿಳೀತಂದ್ರ ಹೆಡಮುರಿಗೆ ಕಟ್ತಾರ." ಹೆದರಿಸೋಕೆ ನೋಡಿದ. " ಏನೋ ಬುದ್ದಿ ತಮ್ಮಂಗ ನಮಗ ವಿದ್ಯಾ ಬುದ್ದಿ ಇಲ್ಲ. ತಮ್ಮಂತೋರೆ ನಮಗ ಬುದ್ದಿ ಹೇಳಬೇಕುಲ, ಬಡಮಂದಿ ಏನೋ ನಾಕ ಕಾಳು ಬೆಳದೀತಂತ ತಕ್ಕೊಂಡೀವಿ, ತಾವು ಮನಸು ಮಾಡಿದ್ರ. . ." ಮಾತಾಡಲಿಲ್ಲ. ಕಿಟ್ಟಪ್ಪಗ ಅದೇನೊ ಅನಿಸಿತೊ, ಧನ್‌ಸಿಂಗ್ ಕೆಲ್ಸದ ಮನುಷ್ಯ ಅಂದ್ಕೊಂಡು ಸುಮ್ಮನೆ ಹೋಗಿದ್ದ. " ಏನ್ ಚಿಕಪ್ಪ ಆ ವಯ್ಯ ಏನೇನೋ ಹೇಳಿದ್ರು, ಏನು ಹೇಳಿದ್ರಂತ ಸುಮ್ಮನೆ ಬಂದೆ. ಇದೇನು ಆವರಪ್ಪನ ಮನೆ ಆಸ್ತೀನಾ." ಅವನ ಸೋದರ ಸಂಬಂಧಿ ರಾಮಾ ನಾಯ್ಕ ಸಿಟ್ಟಾಗಿದ್ದ. ಮತ್ತೊಂದಿಬ್ಬರು ಬಾಯಿಗೆ ಬಂದಿದ್ದನ್ನು ಹೇಳಿ ಸುಮ್ಮನಾದರು. ಧನ್‌ಸಿಂಗ್ ಮಾತ್ರ ವಿಚಲಿತ ನಾಗದೆ ಏನೂ ಆಗದಹಾಗೆ ಹೆಜ್ಜೆ 0ಹಾಕಿದ.

ಧನ್‌ಸಿಂಗ್ ಕೊಡ್ಲೀಗಿ ಕಡೆಗೆ ಹೆಚ್ಚು ಹೋಗ ತೊಡಗಿದ. ಕೂಡ್ಲೀಗಿ ಅಂದಾನಪ್ಪ ಗಾಂಧಿಜಿಯ ಪರಮ ಭಕ್ತ. ಹಾಗೆಯೇ ಚಿಕ್ಕ ಜೋಗಿಹಳ್ಳಿ ತಾಂಡದಲ್ಲಿ ಸಕ್ರ್ಯಾ ನಾಯ್ಕ, ಧಾಮ ನಾಯ್ಕ, ಚೋಟಾ ಭೀಮಾ ನಾಯ್ಕ ಮುಂತಾದ ಬಂಜಾರರು ಅಂದಾನಪ್ಪನ ಗರಡಿಯಲ್ಲಿ ಪಳಗಿದವರು. ಬ್ರೀಟೀಷರ್ ಅಡಳಿತದ ವಿರುದ್ಧ ಹೋರಾಟವನ್ನು ಆರಂಭಿಸಿದ್ದರು. ಅಂಚೆ ಕಚೇರಿ

ಪತ್ರಗಳನ್ನು ಸುಟ್ಟು ಹಾಕುವುದು. ಪೊಲೀಸರಿಗೆ ಹೊಡೆಯುವುದು. ಸ್ವಾತಂತ್ರ್ಯ ಹೋರಾಟಗಾರರು ಅಚ್ಚು ಮಾಡುತ್ತಿದ್ದ ಪ್ರತಿಕೆಗಳನ್ನು ಜನರಿಗೆ ಮುಟ್ಟಿಸಿ ಜಾಗೃತಿ ಮೂಡಿಸುವ ಕೆಲಸ ಮಾಡುತ್ತಿದ್ದರು. ಧನ್‌ಸಿಂಗ್ ತನ್ನ ಕೈಲಾದ ಕೆಲಸದಲ್ಲಿ ತೊಡಗಿಕೊಂಡ. ಆದರೆ ಅವನು ದೊಡ್ಡ ಕ್ರಾಂತಿಕಾರಿ ಎನ್ನುವ ಸತ್ಯ ಕಲ್ಲು ಚಪ್ಪಡಿಯಲ್ಲಿ ಹುದುಗಿಕೊಂಡಿತ್ತು. ಅದು ಶಾಶ್ವತವಾಗಿಯೇ ಗೋರಿಯಗಿತ್ತೆ ವಿನಃ ಅದಕ್ಕೆ ಯಾವ ಇತಿಹಾಸವೂ ಇರಲಿಲ್ಲ. ಅದು ಭಾರತದ ಕ್ರಾಂತಿಕಾರಿಗಳ ಹೋರಾಟ ಕೊನೆಯ ಮತ್ತು ತೀವ್ರವಾದ ಹೋರಾಟದ ದಿನಗಳು. ಸೂರ್ಯ ಮುಳುಗದ ಸಾಮ್ರಾಜ್ಯ ಕಂಪನಿ ಸರಕಾರ ಎರಡನೇಯ ಜಾಗತಿ ಯುದ್ದದಲ್ಲಿ ಅದರ ಮಿತ್ರ ಪಕ್ಷಗಳೆಲ್ಲವೂ ಸೋಲನ್ನು ಅನುಭವಿಸಿದಕ್ಕೊ ಏನೋ, ಜಪಾನ್ ಎನ್ನುವ ಚಿಕ್ಕ ರಾಷ್ಟ್ರದ ಮೇಲೆ ಅಮೇರಿಕಾ ಆಟಮ್ ಬಾಂಬ್ ಹಾಕಿ ಸಾವಿರಾರು ಜನ ಸತ್ತು, ಲಕ್ಷಾಂತರ ಜನ ಊನರಾಗಿದ್ದರು. ಪ್ರಕೃತಿಯೇ ಸರ್ವನಾಶವಾಗಿದ್ದರ ಹಿನ್ನಲೆಯಲ್ಲಿ ಜಗತ್ತು ತತ್ತರಿಸಿದ್ದಂತು ಸತ್ಯ. ಪ್ರಭುತ್ವ ಶಾಹಿಗಳ ಎದೆ ನಡುಗಿತ್ತು. ಜಗತ್ತಿನಾದ್ಯಂತ ಬ್ರಿಟೀಷರ ಕಾಲೋನಿಗಳಲ್ಲಿ ಸಂಚಲನ ಉಂಟಾಗಿ ಹೊಸ ಜಗತ್ತು ಸೃಷ್ಟಿಯಾಗುವ ಕುರುಹುಗಳು ಕಂಡಿದ್ದವು. ಧನ್‌ಸಿಂಗ್ ಮಂದಿ ಮಾತಾಡೋದನ್ನ ಕೇಳಿ ತಿಳಿದುಕೊಂಡು ತಾಂಡದ ಮಂದಿಯ ಮುಂದೆ ಪ್ರತಿಯೊಂದನ್ನೂ ಹೇಳಿ ಜಾಗೃತಿಗೊಳಿಸುತ್ತಿದ್ದ. ತಲೆಬುಡವೇ ಅರ್ಥವಾಗದ ಮಂದಿ ಧನ್‌ಸಿಂಗ್ ಹೇಳೋದನ್ನ ಬಾಯಿಬಿಟ್ಟು ಕೇಳುತ್ತಿದ್ದರು. ಅವನೇನು ಹೇಳಿದನೊ ಇವು ಏನು ಅರ್ಥಮಾಡಿಕೊಂಡವೊ ಅಂತು ಒಂದು ಸಂವಹನ ಏರ್ಪಡುತ್ತಿತ್ತು. ಆದರೆ ತಾಂಡದ ಸಮೀಪದ ಗುಡಿಕೋಟೆಯ ಶಾನಬೋಗ ಕಿಟ್ಟಪ್ಪ, ಜಮೀನ್ದಾರ ಪುರ್ಲಪ್ಪ ಇವರ ಪ್ರಭಾವ ಕಡಿಮೆ ಯಾಗಲಿಲ್ಲ. ಗುಡಿಕೋಟೆ ಪಂಚಾಯ್ತಿ ಕಟ್ಟೆಮೇಲೆ ಪುರ್ಲಪ್ಪ, ಅವನ ಪೈಕಿ ಮಂದಿಗೆಲ್ಲಾ ಕಿವಿಮಾತು ಹೇಳ್ತಿದ್ದ. "ಲೇ ಹುಚ್ಚ ಹಡ್ಸಿ ಮಕ್ಕಳ, ಗಾಂಧಿ ತಾತ ಬಡದಾಡಿ ಸುಖ ಪಡದೆ ಸತ್ತಹೋದ. ಬ್ರಿಟೀಷರು ದೇಶ ಬಿಟ್ಟು ಹೋದ್ಮ್ಯಾಲೆ ಅಧಿಕಾರ ಸೀದ ನಮ್ಮ ಕೈಯಾಗ ಬರ್ತ್ರೈತಿ. ಅಗ ಯಾರ ಅದಾರಪ್ಪ ಅಂತ ಭೂಪತಿ ಸರ್ದಾರ ನನಮಗ, ನಮ್ಮ ಗೌಡ್ರ ಮಂದಿನ ಬಿಟ್ಟು?" ಅವೇಷ ಭರಿತನಾಗಿದ್ದ. ಅವನ ಪೈಕಿನೇ ಒಬ್ಬಾವ ಎದ್ದು, " ಯಾಕ್ರಿ ದಾವುಕಾರ್ರ. ಉಳದ ಜಾತಿ ಮಂದಿ ಸತ್ತಾರೇನು?. ನೀವು ಹಿಂಗ ಆಡ್ಕಂತಿರಿ ಅಟೇಯ. ಯಾಕ್ರಪ್ಪ ನಮ್ಮ ಶಾನಬೋಗ ಕಿಟ್ಟಪ್ನೋರಿಲ್ವೆ, ಕುಲ್ಕರ್ಣಿ ಶಾಂತಪ್ಪನೋರಿಲ್ವೆ, ತಾಂಡದಾಗ, ಕೇರಿಯೊಳಗ, ಗೊಲ್ಲಹಟ್ಟಿ. ಬ್ಯಾಡರ ಕೇರಿ ಏನ ಮಂದಿ ಸತ್ತೋಗ್ಯಾರೇನು?" ತನಗೆ ತಿಳಿದಿದ್ದ ವಾದ ಮಂಡಿಸಿದ. ಕುಲಕರ್ಣಿ ಶಾಂತಪ್ಪಗೆ ಏನೋ ಹೇಳೋದಕ್ಕು ಬಾಯಿ ಬರಲಿಲ್ಲ. " ಲೆ. ಲೇ. ಬಸಣ್ಣ ನಾವು ಈ ಊರಾಗ ಪಾಡಾಗಿರೋದ ಬ್ಯಾಡ ಆಗೈತೇನು ನಿನಗ. ನಾವ ಅಧಿಕಾರ ಛೆ.ಛೆ. . .ಛೇ. ಗೌಡರ ಹಿಂದುಕೋಗೊ ಮಂದಿ ನಾವು." ತನ್ನ ಪ್ರಾತಿನಿಧ್ಯವನ್ನು ತಾತ್ಕಾಲಿಕವಾಗಿ ಹಿಂಪಡೆದಿದ್ದ. ಕಿಟ್ಟಣ್ಣನ ಕಡೀಗೆ ನೋಡಿದ ಪುರ್ಲಪ್ಪ, "ನಮ್ಮ ತಾಕತ್ತೇನಂತ ನಮಗ ಗೊತ್ತೈತೆ, ಅಧಿಕಾರ ನಮ್ಮ ಕೈಲೆ ಅಗದ್ದು. ಅದೆನೇ ಇದ್ರು ಗೌಡರ್ರೆ ನಿಭಾಯಿಸಬೇಕು. ಸೂಳಿ ಮಕ್ಕಳು ಸ್ವಾತಂತ್ರ್ಯನೆ ಬಂದಿಲ್ಲಾ. ಆ ನೆಹರು ಅದ್ಯಾವಾಕಿದೋ ಹುಟ್ಟುದಿನ ಸ್ವಾತಂತ್ರ್ಯ ಬೇಕಂತ ಕುಂತಾನಂತ. ಈ ಮಕ್ಕಳು ಮನಸ್ಸಿನ್ಯಾಗ ಮಂಡಕ್ಕಿ ತಿನ್ನಾಕತ್ತ್ಯಾವು." ತನ್ನ ಪಥಿಗೆ ತಾನು ಅನಕೊಂಡ. ಏನು ಶ್ಯಾಬೋಗರೆ ಎಲ್ಲಿದ್ದೀರಿ ಏನೋ ಗೊಣಗುತ್ತಿದ್ದೀರಾ, " ಏನ್ ಪುರ್ಲಪ್ಪ, ಅಲ್ಪ ಸಂಖ್ಯಾತಮಂದಿ, ಏನು ಗೊಣಗಾಕ ಸಾಧ್ಯ." ಪಲಾಯನ ಮಾಡಿದ್ದ. ಚರ್ಚೆ ಬಹಳ ಹೊತ್ತಿನವರೆಗೂ ನಡೆದಿತ್ತು. ಎಲ್ಲಾ

ವಿಷೆಯಗಳು ಹಳ್ಳಿಹಳ್ಳಿಗೆ ಮುಟ್ಟಿದವು. ಮೌಂಟ್ ಬ್ಯಾಟನ್ ನೆಹರೂ ಗಾಂಧೀಜಿಯವರ ವಿಷೆಯಗಳು ಎಲ್ಲಾ ಹರಡಿದ್ದವು. ಅಂಬೇಡ್ಕರ್ ಅವರು ಜಾತಿ ವ್ಯವಸ್ಥೆಯ ಕುರಿತು ಹೋರಾಡುತ್ತಿರುವುದು ಕೇವಲ ಕೆಲ ಮಂದಿಗೆ ಮಾತ್ರ ತಿಳಿದಿತ್ತು. ಅವು ಹೆಚ್ಚೇನು ಸುದ್ದಿ ಮಾಡುತ್ತಿರಲಿಲ್ಲ. ಕೆಲವು ಪತ್ರಿಕೆಗಳನ್ನು ಓದಿ ಹೇಳುವುದನ್ನು ಮಂದಿ ಸುತ್ತಲು ಕುಂತು ಕತೆ ಕೇಳಿದಂತೆ ಕೇಳುತ್ತಿದ್ದರು.

ಧನ್‌ಸಿಂಗ್ ನಾಯ್ಕನಿಗೆ ಇಷ್ಟು ಮಾತ್ರ ತಿಳಿದಿತ್ತು. ಕೆಂಪು ಮಂದಿ ಹೊಂಟಾರ ಭಾರತಿ ದೇಶದಾಗ ಹೊಸ ದೊಂದು ಯುಗ ಆರಂಭ ಆಕೈತಿ ಅಂತ. ತಿಳುವಳಿಕೆ ಇಲ್ಲದ ತಾಂಡದ ಮಂದಿಗೆ ಇದನ್ನು ಹೇಳಿದ್ರು ಕೇಳಿ ಏನು ಹೇಳ್ಯಾರು, ತೋಚದೆ ಗಪ್ಪಾಗುತ್ತಿದ್ರು. ದೆಹಲಿ ಒಳಗ ನಡೆಯುತ್ತಿರುವ ಸಂಘರ್ಷ ಒಂದಾದರೆ ರಜಾಕರು ಹಿಂಸೆ ಮಾಡುತ್ತಿದ್ದು ಇನ್ನೊಂದು. ಹೈದ್ರಾಬಾದ್ ನಿಜಾಮನ ಮಂದಿ ಹಗಲು ದರೋಡೆ ಮಾಡ ತೊಡಗಿದ್ದರು. ಜನ ಸಾಮಾನ್ಯರ ಬದುಕು ಅಸಹನೀಯ ವಾಗಿತ್ತು. ರಜಾಕಾರರು ತಾಂಡದ ಗಡಿಯವರೆಗೆ ಬಂದಿದ್ದಾರೆಂಬ ಸುದ್ದಿ ಹಬ್ಬಿದ್ದ ಹಟ್ಟಿ ನಾಯಕ , ಕಾರಬಾರಿ ಹೆದರಿ ಬಾಲ ಮುದುರಿಕೊಂಡು ಕಾಡಿನ ಕಡೆಗೆ ಹೆಂಡ್ರು ಮಕ್ಕಳನ್ನು ಕರ್ಕೊಂಡು ಓಡಿ ಹೋಗಿದ್ದರು. ಧನ್‌ಸಿಂಗ್ ಮತ್ತು ಡಾವೋ ಮಾತ್ರ ಹೆದರದೆ, " "ಸಾಯೋದು ಬದಕೋದು ಒಂದೇ ಸಲ, ನಮ್ಮ ಕುಟುಂಬಕ್ಕಾಗಿ ಸಾಯೋ ಸ್ವಾರ್ಥಕ್ಕ. ನಾಳೆ ನಮ್ಮ ಮೊಮ್ಮಕ್ಕಳು ನಮ್ಮ ಅಜ್ಜ ಹೇಡಿ ಯಾಗಿದ್ದ, ಯಾರಿಗೂ ಹೇಳದೆ ಕೇಳದೆ ಪಲಾಯನ ಮಾಡಿದ್ದ ಎನ್ನವು ಅಪವಾದಕ್ಕಿಂತ ಹೆಂಡಂದಿರ ಮುಂದೆ ವೀರನಾಗಿ ಹೋರಾಡಿ ಮಕ್ಕಳಿಗೆ ಮಾದರಿಯಾಗೋಣ. ಓಡಿ ಹೋದವರು ಹೋಗಲಿ. ನಾವು ಮಾತ್ರ ಇಲ್ಲೇ ಇರೋಣ, ಅದ್ಯಾವ ಗಂಡಸು ಬಂದು ನಮ್ಮನ್ನ ಮುಟ್ಟತಾನ ನೋಡೆ ಬಿಡೋಣ." ಧನ್‌ಸಿಂಗ್ ಎಲ್ಲರನ್ನೂ ಹುರಿದುಂಬಿಸಿದ. ನಾಯಕ, ಕಾರಬಾರಿ ಅವರ ಕೆಲವರು ಹಿತೈಷಿಗಳು ರಾತ್ರೋರಾತ್ರಿ ಹದರಿ ಕಂಬಿ ಕಿತ್ತಿದ್ದರು. ಅದನ್ನು ಡಾವು ಮನಗಂಡಿದ್ದ ಅಂದ, " ನೋಡಿದ್ರ, ನಾವು ಯಾರನ್ನು ನಂಬಿಲ್ಲ. ಯಾರು ನಮ್ಮ ನಾಯಕರಾಗಿದ್ದರೋ ಎಲ್ಲದಾರ ಇವತ್ತು. ನಮ್ಮ ಕಾರಬಾರಿ ಹೆತ್ಲಾಂಡಿ ಹಂಗೆ ಹೆದರಿಕೊಂಡು ಓಡಿ ಹೋಗುವುದನ್ನು ಬಿಟ್ಟು ನಮ್ಮೊಂದಿಗೆ ಕೈ ಜೋಡಿಸಿದ್ದರೆ ನಮಗೆ ಈ ಗತಿ ಬರ್ತಿರಲಿಲ್ಲ." ಅಪರೋಕ್ಷವಾಗಿ ಹಟ್ಟಿ ನಾಯಕನನ್ನು ಧೂಷಿಸಿ ಅವನನ್ನು ತೆಗೆದು ತನ್ನ ಬೀಗನಾದ ಧನ್‌ಸಿಂಗ್‌ನನ್ನು ಹಟ್ಟಿ ನಾಯಕನನ್ನಾಗಿ ಮಾಡಿ ಅಧಿಕಾರ ಚುಕ್ಕಾಣಿ ಹಿಡಿವ ತರಾತುರಿಯಲ್ಲಿದ್ದ. ರಜಾಕಾರರು ರಾಂಪುಕ್ಕೆ ನುಗ್ಗಿ ಲೂಟಿ ಮಾಡಿದ್ದರು. ಅವರು ಅಪ್ಪೇನ ಹಳ್ಳಿ ದುರ್ಗಮ ಕಾಡಿಗೆ ನುಗ್ಗುವ ಬದಲು ಜಟಿಂಗ ರಾಮೇಶ್ವರ ಕಡೆಗೆ ಹೋದ ಸುದ್ದಿ ತಿಳಿಯಿತು. ಆದರೂ ಎಲ್ಲಾ ತಯಾರಿಯಲ್ಲಿದ್ದರು. ಖಾರಪುಡಿ, ಮಚ್ಚು, ಕುಡಗೋಲು, ಬಡಿಗೆಗಳ ರಾಶಿ, ಮರದ ಮೇಲಿಂದ ಕಲ್ಲು ಎಸೆಯುವ ತಂಡ ಸಜ್ಜಾಗಿತ್ತು. ರಾತ್ರಿ ಊರು ಸುತ್ತಲೂ ಪಹರೆ ಕಾಯುವ ಕಟುಮಸ್ತ ಯುವಕರನ್ನು ನೇಮಿಸಲಾಗಿತ್ತು. ಧನ್‌ಸಿಂಗ್‌ನ ಇಬ್ಬರೂ ಮಕ್ಕಳು ಗುಂಪೊಳಗೆ ಸೇರಿದ್ದರು. ಹದಿನೈದು ದಿನ ರಜಾಕರು ಬರದ್ದನ್ನು ಕಂಡು

ತಾಂಡದಲ್ಲಿ ವಾತಾವರಣ ತಿಳಿಯಾಯಿತು. ಸುದ್ದಿಯನ್ನು ತಿಳಿದ ಹಟ್ಟಿ ನಾಯಕ, ಬೋತ ರಾತ್ರೋರಾತ್ರಿ ಬಂದು ತಾಂಡ ಸೇರಿಕೊಂಡಿದ್ದ. ಮತ್ತೊಂದು ಕಡೆಯಿಂದ ಕಾರಬಾರಿನೂ ಹಾಜರಾಗಿದ್ದ.

ತಾಂಡೆದ ದುರ್ಗವ್ವನ ಗುಡಿಮುಂದೆ ಮಂದಿ ಜಮಾಯಿಸಿದ್ದರು. ಡಾವೋ ಬಹಳ ಮುಖ್ಯವಾದ ಭೂಮಿಕೆಯನ್ನು ನಿಭಾಯಿಸಿದ್ದ. ಧನ್‌ಸಿಂಗ್ ಕೂಡ್ಲಿಗೆ ಹೋದವನು ಯಾವದೊ ವಿಷಯದ ಹಿಂದೆ ಬಿದ್ದು ಬರುವುದು ಎರೆಡು ದಿನ ತಡವಾಗಿತ್ತು. ಆತ ಬರುವ ದಿನ ನೋಡಿಯೇ ತಾಂಡದ ಪಂಚಾಯ್ತಿಯನ್ನ ಆತನಿಗೆ ಗೊತ್ತಿಲ್ಲದ ಆಯೋಜಿಸಲಾಗಿತ್ತು. ಢಾಲಿಯ ಬಂದು ಮನೆ ಮುಂದ ನಿಂತು " ಬಾಪೂ, ತಾಂಡೆ ದುರ್ಗವ್ವನ ಬೇವಿನ ಕಟ್ಟೆಯ ಮೇಲೆ ಮಂದಿ ಪಂಚಾಯ್ತಿಗೆ ಕುಂತಾರ ಬರಬೇಕಂತ." ಡಾಲಿಯಾ ಬಾಬುರಿ ಹೇಳಿದ.

"ಹಾಂ ಏನು ಪಂಚಾಯ್ತಿನೋ ಅದು.!"

"ನನಗ ಗೊತ್ತಿಲ್ಲ ಒಡೆಯ, ಕರದು ಬಾ ಅಂದ್ರು ಬಂದೆ."

ತನ್ನ ಪಾಲಿನ ಕೆಲಸ ಮುಗಿಸಿದ ಸಾರ್ಥಕತೆಯಲ್ಲಿ ಡಾಲಿಯಾ ಹೊರಟು ಬಿಟ್ಟ. ಧನ್‌ಸಿಂಗ್ ದಾರಿಯಲ್ಲಿ ಎದುರಾದ ಕೆಲವರನ್ನು ಕೇಳಿದ.

"ಎನಪ್ಪ ಯಾರದು ಪಂಚಾಯ್ತಿ, ಯಾರು ಕರದವರೆ.?"

"ಗೊತ್ತಿಲ್ಲಣ್ಣ." ಎಂದರು. ಚೂರುಪಾರು ಗೊತ್ತಿದ್ದ ಮತ್ತೊಬ್ಬ ಹೇಳಿದ.

" ಅದ್ಯಾಕೋ ಡಾವೋ ಕರದವರಂತೆ, ಎನಕಂತ ಗೊತ್ತಿಲ್ಲ."

" ಏನು ಡಾವೋನಾ." ಉತ್ತರಿಸದೆ ಮುಂದೆಕ್ಕೆ ದಾಟಿದ.

ಇವಳಾ ತಲೆ ಕಡೆಸಿಕೊಂಡು ಯಾಕಿರಬಹುದು? ಏನಾರು ಸಮಸ್ಯೆ? ಹಾಗೇನಾದರೂ ಇದ್ರೆ ಗೊತ್ತಾಗುತ್ತಿತ್ತು. ಇರ್ಲಿ ಅಲ್ಲೆ ಹೋಗಿ ನೋಡಿದರಾಯಿತು ಅಂದುಕೊಂಡವನೆ ಏಕ ಬಾವದಿಂದ ಸಭೆಗೆ ಹೊರಟ.

ಇಡೀ ತಾಂಡ ಮಂದಿ ಜಮಾಯಿಸಿದ್ದರು. ಕಾರಬಾರಿ ಮುಖದ ಮೇಲೆ ವಸ್ತ್ರ ಮುಚ್ಚಿಕೊಂಡು ಕುಳಿತಿದ್ದ. ನಾಯ್ಕ ಕಟ್ಟೆಯ ಮೂಲೆಯಲ್ಲಿ ತಲೆ ಮೇಲೆ ಕೈ ಇಟ್ಟುಕೊಂಡಿದ್ದ. ಧನ್‌ಸಿಂಗ್ ನನ್ನ ನೋಡಿದ ಒಬ್ಬ, " ಏಯ್ ಅಣ್ಣಾ ಬಂದ್ರು." ಎಂದು ಮಂದಿ ಹಿಂದಕ್ಕೆ ತಿರುಗಿ ಆತನನ್ನು ಕರೆದು ತರಲು ಅವನು ಬರುತಿದ್ದ ನಿಂಗಾಪುರದ ಸಾನ ನಾಯ್ಕನ ಮನಿ ಮಬಾನು ಓಡಿದರು. ಧನ್‌ಸಿಂಗ್‌ಗೆ ಸ್ವಲ್ಪ ಇರಿಸುಮುರಿಸಾಯಿತು. " ಏಯ್ ಅಲ್ಲೇ ಇರ್ರಿ, ಬರ್ತೀನಿ, ನೀವು ಯಾಕೆ ಬರ್ತಿದ್ದೀರಾ." ಕೂಗಿದ. ಯಾವನೋ ಒಬ್ಬ ಕುಡುಕ ಧುತ್ ಎನ್ನೋದ್ರೊಳಗೆ " ಅಣ್ಣಿನಿಗೆ ಅಂದು ಬಿಟ್ಟ." ನೆರೆದವರೆಲ್ಲ "ಜೈ" ಅಂದರು.

ನಾಯಕ, ಕಾರಬಾರಿಗೆ ದಿಟವಾಯಿತು. ಮಂದಿ ನಮ್ಮನ್ನ ಹಣೀತಾರ ಹೆಚ್ಚುಕಮ್ಮಿ ಮಾತಾಡಿದರ ಅಂತ. ತುಟಿ ಪಿಟಕ್ ಅನ್ನದಂಗೆ ಅಪರಾಧಿಸ್ಥಾನದಲ್ಲಿ ಕುಳಿತು ಕೊಂಡರು. ಧನ್‌ಸಿಂಗ್ ಬುಕ್ಯಾಕರೀಮ್‌ತೋಟ್ ನನ್ನ ಅಜಾಮತ್ತಾಗಿ ಮೇಲೆತ್ತಿ ಜೈಕಾರ ಹಾಕುತ್ತ ಕಟ್ಟೆಯ ಮೇಲೆ ಕೂಡಿಸಿದರು. ಧನ್‌ಸಿಂಗ್ ಡಾವೋ ಕಡೆಗೆ ನೋಡಿದ. ಆತ ಗೆದ್ದನೆಂಬಂತೆ ಬೀಗುತ್ತಿದ್ದ. ಧನ್‌ಸಿಂಗ್ ಬುಕ್ಯಾನ ಮಾತು ಕೇಳೋದಕ್ಕೆ ಮಂದಿ ಕಾತರರಾಗಿದ್ದರು. " ನೋಡ್ರಣ್ಣಾ., ನೀವು ಯಾವ ಉದ್ದೇಶದಿಂದ ಸಭೆ ಕರೆದಿದ್ದಾರ ನನಗೆ ತಿಳಿಯದು. ನಮ್ಮ ಡಾಲಿಯಾ ಬಾಬುರಿ ಬಂದು ಕರದ ಅತ ಬಂದೀನಿ. ಇದೆಲ್ಲಾ ಏನು ಅಂತ ನನಗೆ ಗೊತ್ತಿಲ್ಲ."

ನೇರವಾಗಿಯೇ ಹೇಳಿದ. " ಓ. . . ಇದು ಡಾವ್ಲೋ ಹುಡುಕಿರುವ ಸಂಚು, "ಲೆ ಮುಠಾಳ ಯಾಕ ಸಭೆ ಕರೆದೆ, ಏನು ನಿನ್ನ ಇರಾದೆ.?" ನಾಯ್ಕ ಮೇಲೆದ್ದವನೆ ತಡತಡದಿಂದ ಮಾತುಗಳನ್ನು ತಡಾಯಿಸಿದ. " ಏಯ್, ಯಾರಪ್ಪ ನೀನು? ರಜಾಕರು ಬಂದಾಗ ನಮ್ಮ ಕಾಪಡಿದ್ದು ಡಾವ್ಲೋ ಮತ್ತು ನಮ್ಮ ನಾಯಕ ಧನ್‌ಸಿಂಗ್, ನಾಯ್ಕ ಧನ್‌ಸಿಂಗ್ ಬುಕ್ಯಾ, ಇಷ್ಟೊತ್ತು ಸುಮ್ಮನೆ ಮೂಲೆಯಲ್ಲಿ ಕೂತಿದ್ದೆಲ್ಲ ಕೂರು, ಇಲ್ಲ ಎದ್ದು ನಡಿ." ಹಿಂದಿನ ಮನಿ ದಾವು ನಾಯ್ಕ ಕಡ್ಡಿ ಎರೆಡು ತುಂಡು ಮಾಡಿದಂತೆ ಹೇಳಿದ. " ಏನ್ ಭಾರಿ ರಕ್ಷಣೆ ಮಾಡಿದ್ರು, ರಜಾಕಾರರು ತಾಂಡದ ಮೇಲೆ ಬರಲೇ ಇಲ್ಲಂತೆ, ನಾವಿದ್ದದ್ದೀರು ಅದನ್ನೆ ಮಾಡ್ತಿದ್ವಿಪ್ಪ." ಕಾರಬಾರಿ ಕೆಸರನಲ್ಲಿ ಕಲ್ಲು ಬಿಸಾಡಿದ. ಧರ್ಮಾನಾಯ್ಕನ ತಾಯಿ ಘೂಲಿ ಬಾಯಿ ಎದ್ದವಳೆ, " ಏಯ್ ಕಾರಬಾರಿ ಅಷ್ಟು ಧರ್ಯ ಇದ್ದೋನು ಯಾಕ ಬಾಲ ಮುದಿರಿಕೊಂಡು ಓಡಿ ಹೋದೆ? ಹಿಂದಿಂದ ಮಾತಾಡೋರು ಗಂಡಸರಲ್ಲ. ಕೌರವ ಪಾಂಡವರ ಕಥೆ ಒಳಗೆ ಬರ್‍ತಾನಲ್ಲಿ ಬೃಹನೆಳೆ ಅಂತೋರು ನೀವು, ನೀನು ಥು! ಆ ಹಟ್ಟಿ ನಾಯಕ." ಎಲ್ಲತ್ತೋ ಸಿಟ್ಟು ಒಮ್ಮಿಂದೊಮ್ಮೆಗೆ ಹೊರ ಹಾಕಿದ್ದಳು. ಮಂದಿ ಕಾರಬಾರಿ ಮೇಲೆ ಇನ್ನೇನು ಮುಗಿಬೀಳಬೇಕು ಎನ್ನವುದರೊಳಗೆ ಧನ್‌ಸಿಂಗ್ ಎದ್ದವನೆ "ಅಣ್ಣಂದಿರಾ ಶಾಂತಿ. ಈಗ ಏನೋ ಆಗಿ ಹೋಗಿದೆ. ಸಮಾಧಾನ ಮಾಡಿಕೊಳ್ಳಿ ಮುಂದೆ ನೋಡುವ." ಬುಡ್ಡಾನಾಯ್ಕ ಎಲ್ಲವನ್ನೂ ಕೂಲಂಕುಶವಾಗಿ ಗಮನಿಸುತ್ತಿದ್ದವನು ತನ್ನ ಅಭಿಪ್ರಾಯವನ್ನು ಕೂಡ ಮಂಡಿಸಬೇಕು ಎಂದ, " ಕಾರಬಾರಿ, ನಾಯಕ ನೀವು ಯಾವುದಕೆ ಯೋಗ್ಯ ? ನಿಮ್ಮನ್ನ ನಂಬಿದ ನೂರಾರು ಮಂದಿ ಭಾವನೆಗಳಿಗೆ ಬೆಲೆ ಕೊಡಲಿಲ್ಲ. ನಿಮ್ಮ ಬೀಗರು ಅಷ್ಟೆ ಮನುಷ್ಯರ. ಏನೋ ಧನ್‌ಸಿಂಗ್ ಬುಕ್ಯಾ ಅಂತ ಒಬ್ಬ ಧರ್ಯಿಷ್ಟ ಮನುಷ್ಯ ನಿದ್ದ. ನಮ್ಮ ತಾಂಡದ ಅದೃಷ್ಟವೋ ರಜಾಕಾರರು ಪಕ್ಕದ ಹಳ್ಯಾಗ ಬಂದ್ರು ಆದ್ರ ನಮ್ಮ ಮೇಲೆ ದಾಳಿ ಮಾಡಲಿಲ್ಲ. ಈಗ ನನಗೊಂದು ಪ್ರಶ್ನೆ ಕಾಡ್ತಿದೆ. ಏನಪ್ಪ ಅಂದ್ರ , ನಮ್ಮನ್ನ ರಕ್ಷಣೆ ಮಾಡಲು ಆಗದವರು ಹೇಗೆ ನಮ್ಮ ನಾಯಕ ನಾಗಲು ಸಾಧ್ಯಾ? ಮೊದಲು ಉತ್ತರ ಹೇಳರಿ. ನಿಮ್ಮ ತಲಿ ಮೇಲಿನ ಪಟಗ ಬರ್ರಿ, ಇಲ್ಲ ಬಿಟ್ಟು ಕೆಳಗ ಇಡ್ರಿ ". ಮಂದಿ ಬುದ್ದನಾಯ್ಕನ ಮಾತಿಗೆ, " ಹೌದು ಬರೋಬ್ಬರಿ." ಎಂದು ಹಚ್ಚೆದ್ದು ಕೂಗಾಡಿದರು. ನಾಯಕ ಮುಖದ ಮೇಲಿನ ಬೆವರನ್ನು ಒರೆಸುವ ನೆಪದಲ್ಲಿ ತಲೆ ಮೇಲಿದ್ದ ಪಟಗವನ್ನು ಬಿಚ್ಚಿಕೊಂಡ. ಏನೇನೋ ಸಮರ್ಥನೆ ಹೆಳೋದಕ್ಕೆ ಪ್ರಯತ್ನ ಪಟ್ಟ. ಅದರೆ ಮಂದಿಗೆ ವಾಸ್ತವ ಗೊತ್ತಿದ್ದಕ್ಕೆ ಅವನ ಮಾತುಗಳನ್ನು ತಿರಸ್ಕರಿಸಿದರು. ಕಾರಬರಿ ಎದೆ ಡವಡವ ಅನ್ನಾಕತ್ತು. ಮಂದಿ ಎಲ್ಲಿ ಎದ್ದು ಹೊಡಿತಾರೊ ಅಂತ ಅಂಜಿದ್ದ. ಮಾತಿಗೆ ಮಾತು ಬೆಳೆದು ಅನಾಹುತ ಆಗೋದು ತಪ್ಪಿಸಲ ಧನ್‌ಸಿಂಗ್ ಹೇಳಿದ. " ಏನೊ, ಮನುಷ್ಯನಿಗೆ ಸಹಜವಾದ ಆತಂಕದಿಂದ ಕಾರಬಾರಿ, ನಾಯಕ ನಮ್ಮನ್ನು ಬಿಟ್ಟು ಓಡಿಹೋದರು. ಅದನ್ನೆ ದೊಡ್ಡದಾಗಿ ಮಾಡಿ ಅವರನ್ನ ಕೆಳಗಿಳಿಸಿ ನನ್ನ ನಾಯಕನನ್ನಾಗಿ ಮಾಡುವುದರಲ್ಲಿ ಯಾವ ಪುರಷಾರ್ಥವೂ ಇಲ್ಲ. ಏನೋ ಕೆಟ್ಟ ಘಳಿಗೆ ಕಾರಬಾರಿ ನಾಯಕ ಮನಸಿನೊಳಗೆ ಏನು ಅಂದುಕೊಂಡಿದ್ದರೊ. ಆದರೆ ಅದು ಆದಾದ್ದೆ ಬೇರೆ. ಈ ತಾಂಡದಾಗ ನಾಯ್ಕ ನಾನು ಆಗೋದಕ್ಕೆ ನನಗೆ ಸುತಾರಂ ಒಪ್ಪುದಿಲ್ಲ. ನಾಯಕ ಇರುವಾಗ ಮತ್ತೊಬ್ಬರು ಆಗುವುದು" ಖಂಡಿತವಾಗಿ ನಿರಾಕರಿಸಿದ. ಡಾವ್ಲೋನ ಮರ್ಮಾಂಗಕ್ಕೆ ಘಾತವಾಯಿತು. ಧನ್‌ಸಿಂಗ್ ನಾಯಕನಾದರೆ ಆಡಳಿತವನ್ನು ತಾನು ಚಲಾಯಿಸ ಬಹುದೆಂದು ಮನಸ್ಸಿನಲ್ಲಿ ಮಂಡಿಗೆ ತಿನ್ನುತ್ತಿದ್ದ. " ಇಲ್ಲ ನೀವು

ಹಾಗೆ ಹೆಳಿದರೆ ಹೇಗೆ, ಜನರ ನಂಬಿಕೆಗೆ ಮೋಸ ಮಾಡಿದಂತಾಗುತ್ತದೆ. ನಾಯಕ ಯಾವಾಗಲ ಬಹುಜನರ ಪರವಾಗಿ ವಿಚಾರ ಮಾಡುವ ದರ್ಯವಂತನಾಗಿರಬೇಕು. ಅದನ್ನು ಬಿಟ್ಟು, ತಾಂಡದ ಜನ ನಿಮ್ಮ ಮೇಲೆ ನಂಬಿಕೆ ಇಟ್ಟಿದ್ದಾರೆ. ಭಾವ ನೀವು ಹೂಂ ಅನ್ನಬೇಕು."

ಮೊದಲ ಬಾರಿ ಹಟ್ಟಿನಾಯಕನಿಗೆ ನಿಷ್ಠುವಾಗಿ ಮಾತಾಡಿದ್ದ ಡಾವೋ ಅಷ್ಟೆ ಸಾಲದೆಂಬಂತೆ ಬೋತಾ ನಾಯಕನ ಕುಲದವನೇ ಅದ ರಾಮವತ್ ನರಸಿಂಗ ನಾಯಕನ್ನು ಸರಿಯಾಗಿ ತಯಾರಿ ಮಾಡಿದ್ದ. "ಡಾವೋ ಹೇಳೋದು ನೂರು ಪಾಲು ಸತ್ಯ ಇದೆ. ಹಟ್ಟಿ ನಾಯಕ ಬೋತ ಆ ಪದವಿಗೆ ಅಯೋಗ್ಯ ನ್ಯಾಯ ಪಂಚಾಯ್ತಿಯಲ್ಲಿ ಯಾರಾದರೂ ಒಂದು ಮಗಿ ಹೆಂಡ ಕುಡಿಸಿ ಕೋಳಿ ಸಾರು ಕೊಟ್ರೆ ಅವರಪರವಾಗಿಯೇ ಮಾತಾಡಿ ಬಿಡುತ್ತಾನೆ. ಸಾಲದಕ್ಕೆ ನಾವೆಲ್ಲರು ಜೀವದ ಹಂಗನ್ನು ತೊರೆದು ನಮ್ಮ ತಾಂಡ ಉಳಿಸಿಕೊಳ್ಳೋದಕ್ಕ ಹೋರಾಟ ಮಾಡಿದರೆ ಈ ಮನುಷ್ಯ ರಾತ್ರೋರಾತ್ರಿ ತಾಂಡ ಖಾಲಿ ಮಾಡಿದ್ದ. ಯಾ ಸೀಮೆ ನಾಯಕ ಇವನು. ನಾನು ಹೇಳೋದು ಇಷ್ಟೆ ಧನ್‌ಸಿಂಗ್ ಬುಕ್ಯಾನೆ ಯೋಗ್ಯ ಆದವನು. ಅತನನ್ನು ಹಟ್ಟಿ ನಾಯಕನನ್ನಾಗಿ ಮಾಡಿ. ಬೋತಾ ನಾಯಕನನ್ನು ಗಡಿಪಾರು ಮಾಡಿ." ಎಂದು ಹೇಳಿ, ಹೆಗಲೆ ಮೇಲಿನ ಟವಲ್ ಕೊಡವಿ ಅಡಿಗೆ ಹಾಕ್ಕೊಂಡು ಕುಂತ. ಇದು ರಾಮವತ್ ಪಂಗಡದ ಇತರರಿಗೆ ಸರಿ ಕಾಣಲಿಲ್ಲ. ಐದಾರು ಮಂದಿ ಎದ್ದವರೆ, "ಯಾಕಲೆ ಮಗನ ಬಗಲಾಗ ಹಲ್ಲು ಬಂದಾವೇನು? ನಮ್ಮ ಕುಲಾನ ಹಿಯಾಳಿಸಿ ಮಾತಾಡೊ ಪೊಗರ ಬಂತ ನಿನಗ. ನೀ ಯಾ ಕುಲದವನು? ನಿನ್ನೆ ಮನ್ನೆ ಬಂದು ಟಿಕಾಣಿ ಹೂಡಿದ ಧನ್‌ಸಿಂಗ್ ಯಾವ ಸೀಮೆ ನಾಯಕ. ವಂಶ ಪಾರ್ಯಂಪರ್ಯವಾಗಿ ತಾಂಡದ ಉಸ್ತುವಾರಿ ನಾವು ನೋಡ್ತಾ ಬಂದೀವಿ. ನಾವೆ ನಾಯಕರು. ಅದ್ಯಾವ ಮಗ ಬರ್ತಾನ ಬರ್ಲಿ, ನೋಡ್ತೀವಿ." ನರಸಿಂಗನ ಮೇಲೆ ಎಗರೋದಕ್ಕೆ ಹೆಂಡ ಕುಡಿಸಿ, ತಿನಿಸಿ ಸಜ್ಜು ಮಾಡಿಕೊಂಡ ಬಂದಿದ್ದ ಕಾರಬಾರಿ –ನಾಯಕನ ಮಂದಿ ಎಗರಾಡಿದರು. ಈ ಸೂಕ್ಷ್ಮ ಗೊತ್ತಾಗೆ ಧನ್‌ಸಿಂಗ್ ಪರಿಸ್ಥಿತಿ ನಿಯಂತ್ರಣಕ್ಕೆ ಮುಂದಾದ. " ಏಯ್, ದಾನು, ಸೀತ ಬಂಜಾರು, ಗನಿಯಾ ಕೂಡ್ರಿ. ನೀವು ಮಾತಾಡಿದ್ದು ಸರಿಐತಿ, ನರಸಿಂಗ ಹೇಳಿದ್ದು ಸರಿಐತಿ. ಈಗ ವಿಷಯ ಏನೂ ಅಂದ್ರ ನಿಮ್ಮ ನಾಯಕನ ಪಟ್ಟಕ್ಕ ನಾನು ತಯಾರಿಲ್ಲ. ನೀವು ಈ ತಾಂಡದಾಗ ಇರು ಅಂತ ಜಾಗ ಕೊಟ್ರ ಅದಕ್ಕ ನಾನು ಋಣಿ ಏನಪ್ಪ. ಆದ್ರ ತಮ್ಮ ನಿಷೇದಾಗಿನ ಮಾತು ಕಿಸೆದಾಗ ಇರಲ್ಲಂತ. ನೋಡು ಈ ತಾಂಡ ಕಟ್ಟಿದವರು, ನಿನ್ನೆ ಮನ್ನೆ ಬಂದರೋ ಆಂದೆಯಲ್ಲ. ಅದು ಸರಿಯಲ್ಲ. ಯಾವ ಬಂಜಾರ ಈ ನಾಡಿನವ ಹೇಳು? ಅಪ್ಪಗುಟ್ಟಿದವನಾದ್ರ ಇದನ್ನ ನಿರೂಪಿಸು. ನಾವೆಲ್ಲ ದೇಶಾಂತರ ದಿಮದ ಬಂದೋರು.ನೀವು ಮುಂಚೆ ಬಂದೀರಿ ಇಲ್ಲಿ ತಾಂಡ ಕಟ್ಟೀರಿ. ನಾವು ಬೇರೆ ಎಲ್ಲೋ ಇದ್ವಿ, ಏನೋ ನಮ್ಮ ವ್ಯಾಳ್ಯಾಖ ಕರಾಬಿತ್ತು. ಹಿಂಗ ಹಿಂದ ಬಂದ್ವಿ, ನನ್ನ ಮಾತು ಕೇಳ್ರಿ ಎಲ್ಲ. ಬೋತನಾಯ್ಕ ತಿಳಿವಳಿಕಸ್ತ. ಆತನೆ ಹಟ್ಟಿನಾಯಕನಾಗಿ ಮುಂದುವರಿಲಿ. ತಾಂಡದ ಸಂಕಷ್ಟ ಬಂದ ಸಮಯಕ್ಕ ಎಲ್ಲಾ ಸೇರಿ ಒಗ್ಗಟ್ಟಿನಿಂದ ಕೆಲಸ ಮಡೋನು. ಇದರೊಳಗ ಎರಡಮಾತಿಲ್ಲ. ಯಾರು ಯಾರನ್ನು ಹೊಡೆಯವುದು, ಆಡಿಕೊಳ್ಳುವುದು ಬೇಡ. ನಾಯಕ ಆತನೆ, ಆತನೇ ಇರ್ತಾನ. ಇದರಲ್ಲಿ ಯಾವ ರೀತಿಯ ದ್ವಂದ್ವ ಇಲ್ಲ." ಸಮಜಾಯಿಸಿದ. "ಏಯ್, ಅದನ್ನ ಕೇಳೋಕ ನೀಯಾರು? ನಮ್ಮ ತಾಂಡ ಇದು. ನಾವು ಬೇಕಾದಂಗ ಬದುಕ್ತೀವಿ. ಬೇಕಾದಂಗ ಮಾತಾಡೀವಿ. ಇಷ್ಟ ಇದ್ರ ಇರು, ಕಷ್ಟಾದ್ರ ಜಾಗ ಖಾಲಿ ಮಾಡು." ಕುಡದದ್ದು ಹೆಚ್ಚಾಗಿ

ದುಂಡೋರಾಮ ನೆಲಕ್ಕ ಬೀಳುತ್ತಿದ್ದವನು ಮೇಲೇದ್ದು ಹೇಳಿದ. "ಲೇ ಹುಚ್ಚ ಮುಕ್ಕಳ್ರ್ಯಾ, ನಿಮಗೇನೋ ಗೊತ್ತು ಧನ್‌ಸಿಂಗ್ ಬುಕ್ಕ್ಯಾ ಕಮ್‌ರ ತೋಟ್ ಬಗ್ಗೆ, ನಮ್ಮ ಜನಾಂಗದ ಮರ್ಯಾದೆ ಕಾಪೋಡದಕ್ಕ ಆತನ ತ್ಯಾಗ ದೊಡ್ಡದು. ಮೊಳಕಾಲ್ಮೂರು ಗೌಡ. ಶಾನಬೋಗ, ಬ್ರಿಟೀಷ್ ಅಧಿಕಾರಿಗಳನ್ನು ಮಟ್ಟಹಾಕಿ ನಮ್ಮ ಹೆಂಗ್ಸರನ್ನ ಕಾಪಾಡಿದ ಮಹಾನ್ ಪುರಷ ಆತ. ಕೆಂಪು ಮಂದೀದು ಈಗೇನ್ ಆಟ ನಡೀತಿಲ್ಲ ಅನ್ನೋದಕ್ಕ ಈ ಮಾತು ಹೇಳಾಕ ಹತ್ತೀನಿ. ದೇಸು ತಾಂಡದ ಹಟ್ಟಿ ನಾಯಕನ ಈತ. ಯಾವಾಗಲು ನ್ಯಾಯ ನಿಷ್ಠೂರಕ್ಕ, ಧರ್ಯಕ್ಕ ಹೆಸರು ವಾಸಿ. ನಮ್ಮ ಲಾಮಾಣೇರ ಸಲುವಾಗಿ ಏನು ಬೇಕಾದ್ರೂ ಮಾಡಕ ಸಿದ್ಧ, ಇಂತಾವ ನಮ್ಮ ಗುಡೆಕೋಟೆ ತಾಂಡದಾಗಿರೋದು ನಮ್ಮ ಪುಣ್ಯ ಕಣ್ರಲೇ." ಅಪ್ಪೇನ ಹಳ್ಳಿ ತಾಂಡಾದ ನಾಯಕ ಪಾಂಕ ಡೋತ್ ಸೂರ್ಯಾನಾಯ್ಕ ಭಾವುಕನಾಗಿದ್ದ. ಆದ್ರ ಗುಡೆಕೋಟೆ ತಾಂಡದ ಮಂದಿಗೆ ಅದೇನು ಪರಿಣಾಮಕಾರಿಯಾದಂತೆ ಅನಿಸಲಿಲ್ಲ. ಹಿತ್ತಲಗಿಡ ಮದ್ದಲ್ಲ ಎಂಬಂತೆ ಅವರ ತಿರಸ್ಕಾರವನ್ನು ಕಂಡು ಸುರ್ಯಾನಾಯ್ಕ, "ಹಾಳಾಗಿ ಹೋಗ್ರಿ ಸೂಳಿ ಮಕ್ಕಳ್ರ, ಒಬ್ಬ ಮನಸ್ಯಾನ ಬೆಲೆನಾ ಅತ ಇದ್ದಾಗ ತಿಳೀಬೇಕ್ರಲೆ, ನಿಮಗ ಅದು ಗೊತ್ತಾಗಲ್ಲ ಅಂದ್ರ, ಸಾಯಿರಿ" ಅಂತ ಅಂದ್ಕೊಂಡು ಸುಮ್ಮನಾದ ಆಟೇಯಾ. ಕೆಲ ಮಂದಿ ಮಾತ್ರ, ವಾಂಕಡೋತ್ ಸೂರ್ಯ ಖರೆ ಹೇಳಿದ ಅನಕೊಂಡ್ರು. "ಈತ ಸಾಮಾನ್ಯನಲ್ಲ, ಎಲ್ಲರೂ ಹೆದ್ರಕೊಂಡು ತಾಂಡ ಬಿಟ್ಟು ಓಡಿಹೋದಾಗ, ನಮ್ಮಲ್ಲಿ ಧೈರ್ಯ ತುಂಬಿ ಹೋರಾಟಕ ಅಣಿಮಾಡಿದ ಪುಣ್ಯಾತ್ಮ, ತಾಂಡದ ಹಿರಿತನ, ಇಂತೋರು ಕೈಗೆ ಸಿಗಬೇಕು" ಅಂದ ನಡುವಿನ ಓಣಿಯ ಜಾಂಗಡ. ಇವನ ಅಭಿಪ್ರಾಯ ಸರಿಯಾಗಿದೆ ಅಂತ ನಾವಿಚಂಧ್ರ, ಡಾಲ್ಯಾರ ರೂಪ್ಲ, ಧಾಡಿ ಹರಿಶಚ್ಚಂದ್ರ, ಸೊನಾರ ನಂದ್ಯಪ್ಪ, ಪಾತಕೋಳ ತಂಬೂರ ನಾಯ್ಕ, ಖೋಲ್ಯಾರ ಲಚ್ಚಾನಾಯ್ಕ, ಸಬಾವಟೇರ್ ಬಾಡೊ ಭೀಮಾವತೇರ್ ಛತ್ರಾನಾಯ್ಕ, ಝುರಪ್ಲಾರ್ ಜಾತ್ಯನಾಯ್ಕ, ಬುಣಾವತೇರ್ ಭಿಮ್ಯಾ, ಗಟ್ಟಿಯಾಗಿ ಮಾತನಾಡಿದರು. ಆದ್ರ ಎರೆಡು ಪಂಗಡದ ಬಹು ಸಂಖ್ಯಾತರು ಈ ಎಲ್ಲಾ ಅಲ್ಪ ಸಂಖ್ಯಾತರ ಮೇಲೆ ದಬ್ಬಾಳಿಕೆ ಹೇರಿ, "ಹಟ್ಟಿ ನಾಯಕ ಆಗೋದಾದ್ರ ನಮ್ಮ ತಾಂಡದವನೇ ಆಗಬೇಕು. ಬೋತ ಬ್ಯಾಡ. ಅವನು ಅಂಜುಬುರಕ ಅಂತೀರಲ್ಲಪ್ಪ, ಅವನ, ಅವನ ಹಿಂದೆ ಓಡಿ ಹೋದೋರ್‍ನ ಬಿಟ್ಟು. ಅವನ ತಮ್ಮ ಸಣ್ಯಾನಾಯ್ಕ ತಾಂಡಾದಾಗೆ ಇದ್ನಲ್ಲಾ, ಧನ್‌ಸಿಂಗ್ ಬುಕ್ಯಾನ ಕೂಡ ಇದ್ದ. ಅವನಿಗೆ ಕೊಡ್ರಿ, ರಮಾವತ್‌ನವನೇ ಅತ " ಎಂದು ಶಂಕ್ರಿನಾಯ್ಕ ಒತ್ತಡ ಹೇರಿದ. ಅವರೆಲ್ಲರ ಮಾತು ಕೇಳಿ ಬೇಸರಗೊಂಡಿದ್ದ ಧನ್‌ಸಿಂಗ್ ಕರಮ ತೋಟ್, " ನಿಮಗೆಲ್ಲಾ ರಾಮರಾಮ, ಏನೋ ಕೆಲ್ಸ ಬಂದಿದ್ದೆ ಹೋಗಿ ಬರ್ತೀನಿ." ಅಂದವನೆ ಹಿಂದಿದ್ದ ಮಂದಿ ಕರೆದರೂ ನೋಡದಂತೆ ಎದ್ದು ಹೋಗಿಬಿಟ್ಟ. ಅವನ ಎದುರಿಗೆ, "ಅಣ್ಣಾ ನೀ ನಾಯಕ ಆದ್ರ ತಾಂಡ ಉದ್ದಾರ ಆದೀತು " ಎಂದು ಅಂದವರೂ ಬ್ಯಾರೆ ಮಾತಿಗೆ ತಿರುಗಿದರು. ಅದು ಅಲ್ಲದೆ ಖಾಲಿ ಪುಕ್ಕಟೆ ತೌಡು ಕುಟ್ಟುವಮಂದಿನ ತುಂಬಿಕೊಂಡೈತಿ ಅಂತ ತಿಳಿದು ಹೊರಟ. ಭಾರತದ ಸ್ವಾತಂತ್ರ್ಯದ ಸುದ್ದಿನಾರು ತಿಳಿಯೋದಂತ ಅನಿಸಿ, ತನ್ನ ವಯಸ್ಸಾದ ಕುದುರೆಯನ್ನು ಏರಿ ರಾಂಪುರದ ಕಡೆಗೆ ಹೊರಟ.

ಅವನು ದೇಸುನಾಯ್ಕನ ತಾಂಡಾದಲ್ಲಿದ್ದಾಗ ಪ್ರತಿ ದಿನ ರಾಂಪುರಕ್ಕೆ ಹೋಗಿ ಕ್ರಾಂತಿ ಕಾರಿಗಳ ಸುದ್ದಿ ಪತ್ರಿಕೆಗಳನ್ನು ಕಳ್ಳತನದಿಂದ ಬೇರೆಬೇರೆ ಕ್ರಾಂತಿಕಾರಿಗಳಿಗೆ ತಲುಪಿಸುವುದು, ಹಣಕಾಸಿನ ಮತ್ತು ಊಟದ ವ್ಯವಸ್ಥೆಯನ್ನು ಮಾಡುತ್ತಿದ್ದ. ಲಿಂಗಾಯಿತ ಚೆನ್ನಪ್ಪನ ಪರಮ

ಶಿಷ್ಯನಾಗಿದ್ದ. ಆದರೆ ಎರೆಡು ಮೂರು ವರ್ಷದಿಂದ ಇದ್ದಕ್ಕಿದ್ದಂತೆ ಭೂಗತನಾದದ್ದು ಕೇಳಿ ಚೆನ್ನಪ್ಪ ಬಹಳವಾಗಿ ಬೇಸರ ಗೊಂಡಿದ್ದ. ಮುಂದೆ ಚೆನ್ನಪ್ಪ ರಜಾಕೋರರ ವಿರುದ್ಧ ಧ್ವನಿ ಎತ್ತಿದ್ದಕ್ಕೆ, ನಡು ರಸ್ತೆಯಲ್ಲೆ ಆತನ ರುಂಡ ಚೆಂಡಾಡಿ ಬಿಸಾಡಿದ್ದು ಕೇಳಿದ ಧನ್‌ಸಿಂಗ್

ತನ್ನ ಗುರುವಿಗೆ ನಮನ ಸಲ್ಲಿಸಿದ. ತಾವೆಲ್ಲ ಸೇರುತ್ತಿದ್ದ ತಿಪ್ಪೇರುದ್ರ ಚಾ ದುಖಾನ್‌ಗೆ ಹೋದ. ದುಖಾನ್ ಮಾಲಕ ಹಡಪದ ತಿಪ್ಪೇಶಿಯನ್ನು ರಜಾಕಾರರು ಕೈಕಾಲು ತಿರುಚಿ ಬಿಸಾಕಿದ್ದರು. ಕೈಕಾಲು ಸ್ವಾಧೀನ ವಿಲ್ಲದ ತೆವಳುತ್ತಾ ತನ್ನ ಕತೆಯನ್ನು ಹೇಳಿದ. ಧನ್‌ಸಿಂಗ್ ಬೇಸರವಾಗಿದ್ದ. ರಜಾಕೋರರ ಮೇಲೆ ಕೆಂಡಮಂಡಲವಾದ. ಅದರೆ ಅದೆಲ್ಲಾ ತಮ್ಮಿಂದಾಗದ ಕೆಲಸ , ನವಾಬನ ಮಂದಿ ಬಲಿಷ್ಠರು ಅವರನ್ನು ತನ್ನಂತಹ ಒಬ್ಬ ಸಾಮಾನ್ಯ ಮನುಷ್ಯ ಏನು ಮಾಡಲು ಸಾಧ್ಯ ? ತಾನೆ ಸಮಾಧಾನ ಪಟ್ಟುಕೊಂಡ.

ಸಾಕಷ್ಟು ಬದಲಾವಣೆ ಯಾಗಿತ್ತು ರಾಂಪುರ. ಮಂದಿ ಭಾರತದ ದೇಶದ ಸ್ವಾತಂತ್ರ್ಯಕ್ಕಾಗಿ ಜಾತಕ ಪಕ್ಷಿಯಂತೆ ಕಾಯುತ್ತಿದ್ದರು. ಅದೇನೋ ದೊಡ್ಡ ಯುದ್ಧ ನಡೆದು ಕೆಂಪು ಮಂದಿ ಕಡೆಯವರಿಗೆ ಸೋಲು ಉಂಟಾಗಿದ್ದಕ್ಕೆ ಭಾರತ ಬಿಡ್ತಾರೆ ಅಂತ ಪುಕಾರು ಎದ್ದಿತ್ತು. ಜನ ಜಾಗೃತಿ ಹೆಚ್ಚಾಗಿ ಅನಾಹುತವಾದೀತು ಎನ್ನುವ ಭಯ ಕೆಂಪು ಮಂದಿಗೆ ಇದಿದ್ದರಿಂದ ಹಾಗೂ ಗಾಂಧೀಜಿ. ಅಂಬೇಡ್ಕರ್, ನೆಹರೂ ಮುಂತಾದ ನಾಯಕರು ತೀವ್ರವಾಗಿ ಹೋರಾಟ ನಡೆಸಿದ ಪರಿಣಾಮ 1947 ಆಗಸ್ಟ್ 15ಕ್ಕೆ ಸ್ವಾತಂತ್ರ್ಯ ಸಿಗವ ಲಕ್ಷಣಗಳು ಕಂಡು ಬಂದರೆ, ನಾಯಕತ್ವದ ಪ್ರಶ್ನೆ ಎದ್ದಾಗ, ನೆಹರು ಜಿನ್ನಾರ ನಡುವೆ ಅಧಿಕಾರದ ಪೈಪೋಟಿ ನಡೆದು ಭಾರತವನ್ನು ಇಬ್ಭಾಗ ಮಾಡಿದ ಬ್ರಿಟೀಷರು ತಲೆಯನ್ನು ಕತ್ತರಿಸಿ ಪಾಕಿಸ್ಥಾನ ಮಾಡಿದರು. ಅಲ್ಲಿಂದ ಹಿಂದುಗಳು, ಸಿಕ್ಕರು ಭಾರತಕ್ಕೆ ಸುಸ್ಥಿತಿಯಲ್ಲಿ ಬರಲಿಲ್ಲ. ಅನೇಕ ಹೆಣಗಳನ್ನು, ನಿರ್ಗತಿಕ ಹೆಂಗಸರು ಮಕ್ಕಳನ್ನು ಹೊತ್ತ ರೈಲು ಬೋಗಿಗಳು ಭಾರತಕ್ಕೆ ಬಂದರೆ, ಇಲ್ಲಿಂದ ಮುಸ್ಲಿಮರು ಹೆಣಗಳನ್ನು ಹೊತ್ತ ರೈಲುಗಳು ಅತ್ತ ಹೋಗುತ್ತಿದ್ದವು. ಸತ್ತವರು ಮಾತ್ರ ಅಮಾಯಕರು. ಈ ಸುದ್ದಿ ನಾಡಿನಾದ್ಯಂತ ಹಬ್ಬಿತ್ತು. ಜನ ಮರಗುತ್ತಿದ್ದರು. ಅನಿವಾರ್ಯ ವೆಂಬಂತೆ ತಮ್ಮ ಪಾಡಿಗೆ ತಾವು ಕೂಲಿನಾಲಿ ಮಾಡಿ ಹೊಟ್ಟೆ ಹೊರೆಯಲು ಬಡಿದಾಡುತ್ತಿದ್ದರು. ಧನ್‌ಸಿಂಗ್ ಬುದ್ದಿವಂತರ ಹಿಂದೆ ಅಡ್ಡಾಡ್ಡಿದ್ದರಿಂದ ತಿಳುವಳಿಕೆ ಪಡೆದಿದ್ದ. ಹಾಗಾಗಿ ಬಹಳಷ್ಟು ನೊಂದು ಕೊಂಡಿದ್ದ. ಮರಣ ಹೋಮ ನಡೆಯುತ್ತಿರುವ ಚಿತ್ರಗಳನ್ನು ಪತ್ರಿಕೆಗಳಲ್ಲಿ ನೋಡಿ ದುಖಿಃತನಾಗಿದ್ದ. ಸತ್ತವರಿಗೆ , ನಿರ್ಗತಿಕರಿಗೆ ಸಾಂತ್ವನ ಹೇಳುವುದನ್ನು ಬಿಟ್ಟು ಇನ್ನೇನಿದೆ ಎಂದು ಕೊಂಡು ಸುಮ್ಮನಾದ. ಗಾಂಧೀಜಿ ಜಿದ್ದಿನಿಂದಾಗಿ ಆಗಸ್ಟ್ 15ಕ್ಕೆ ಸ್ವಾತಂತ್ರ್ಯ ಸಿಕ್ಕತು. "ಯಾರಿಗು ಕಾಣದ ಕಪ್ಪುಕತ್ತಲೆಯಲ್ಲಿ ಅನುಭವಿಸಿದರು ಯಾರು?" ದೆಹಲಿಯಲ್ಲಿದ್ದ ಕೆಲವರು ಮೌಂಟ್‌ಬ್ಯಾಟನ್ ಕೊನೆಯ ವೈಸರಾಯ್, ದೇಶವನ್ನು ಬಿಟ್ಟು ಹೋಗುವ ತಯಾರಿ ನಡೆಸಿದ್ದ. ಮೊದಲನೇಯ ಗೃಹ ಮಂತ್ರಿ ಸರದಾರ್ ವಲ್ಲಭಾಯಿ ಪಟೇಲ್ ಎದುರಿಗೆ ಪ್ರಜಾಪ್ರಭೂತ್ವ ಕಟ್ಟುವ ದೊಡ್ಡ ಜವಾಬ್ದಾರಿ ಎದುರಾಗಿತ್ತು. ಐದುನೂರಕ್ಕೆ ಹೆಚ್ಚು ಪ್ರಾಂತಗಳನ್ನು ಸೇರಿಸಿ ಅಖಂಡ ಭಾರತವನ್ನಾಗಿಸುವ ಪಟೇಲರ ಕನಸು ಒಮ್ಮೆ ಈಡೇರಿದು ಎನ್ನುವ ಅನುಮಾನ ಕಾಡಿತ್ತು. ಸಣ್ಣ ರಾಜರು, ಮಾಂಡಲೀಕರು, ಬ್ರಿಟೀಷರ ಗುಲಾಮರು, ಪ್ರಭಾವಶಾಲಿಯಾಗಿದ್ದರು. ಅವರಿಗೆಲ್ಲ ರಾಜ ಪ್ರಭುತ್ವದ ಕೊನೆ ಗಾಲದ ತಿಳುವಳಿಕೆ ನೀಡಿ ವಾಸ್ತವತೆಯ ಪರಿಚೆಯ ಮಾಡಿಸಿ ಭಾರತದೊಳಗೆ ಸೇರಿಸುವ ಕಠಿಣ ಹಾದಿಯಲ್ಲಿ ಪಟೇಲರು

ದಾಪುಗಾಲು ಹಾಕುತ್ತಾ ಹೊರಟಿದ್ದರು. ಜಮ್ಮು ಕಾಶ್ಮೀರ ಕೈ ಬಿಡುವ ಆತಂಕ ಒಂದೆಡೆಯಾದರೆ, ನಿಜಾಮರು ನಾವು ಸ್ವತಂತ್ರರು ಬಾರತ ದೇಶದೊಳಗೆ ಬರುವುದಿಲ್ಲ ಎಂಬ ಸವಾಲನ್ನು ಒಡ್ಡಿದ್ದರು. ಇವರನೆಲ್ಲಾ ನಮ್ಮ ಸೈನ್ಯ. ಪೊಲೀಸ್ ಪಡೆಯನ್ನು ಬಳಸಿ ಮಣಿಸುವ ಸಾಹಸ ಮಾಡಿದ್ದರು ಪಟೇಲರು.

ಎಲ್ಲೆಲ್ಲೂ ಬಿಡಗಡೆಯ ಸಂಭ್ರಮ, ಧನ್‌ಸಿಂಗ್ ಲಂಬಾಣಿ ಜನರನ್ನು ಸೇರಿಸಿ ದೇಶ ಬಿಡುಗಯ ಖಷಿಯನ್ನು ಹಂಚುತ್ತಿದ್ದರೆ. ಢಾಲ್ಯಾರ ರೂಪ್ಲ, " ಅಣ್ಣಾ ಹಂಗಂದ್ರೇನು?" ಅಂತ ಕೇಳಿದ. ಅವನ ಮಾತು ಸರಿಯಾಗೆ ಇತ್ತು. ತಾಂಡದ ನೂರಿನ್ನೂರು ಮನೆಗಳಲ್ಲಿ ಪ್ರತಿಯೊಬ್ಬರೂ ಒಂದಿಷ್ಟು ಭೂಮಿಯನ್ನು ಮಾಡಿಕೊಂಡಿದ್ದರೆ ಡಾಲ್ಯಾರ ರೂಪ್ಲ್ಯಾ ಮಾತ್ರ ಏನು ಮಾಡಿಕೊಳ್ಳಲಿಲ್ಲ. ಕಾಡನ್ನು ಒತ್ತುವರಿ ಮಾಡಿ ತುಂಡು ಜಮೀನು ಮಾಡಬಹುದಿತ್ತು. ಯಾರೂ ಅವನಿಗೆ ಈ ಮಾತನ್ನು ಹೇಳಲಿಲ್ಲ. ಅವನು ಪ್ರಯತ್ನ ಮಾಡಲಿಲ್ಲ. ಅವನು ಇಡಿ ಊರ ಗುಲಾಮ. ತಾಂಡದ ದನ ಮೇಯಿಸ ಬೇಕು, ಇಡೀ ತಾಂಡದ ಮನೆಗಳಿಂದ ಕೊಟ್ಟ ಅಂಬ್ಲಿ ರೊಟ್ಟಿಯನ್ನು ಉಣ್ಣಬೇಕು. ಅವನಿಗೆ ಅವನ ಅಸ್ತಿತ್ವವೆ ಇಲ್ಲ. ಧನ್‌ಸಿಂಗ್ ತಬ್ಬಿಬ್ಬಾದ. ಕ್ಷಣ ಸುಧಾರಿಸಿ ಕೊಂಡು ಏನೇನೋ ಹೇಳಿದ. ಅವನಿಗೆ ಏನು ಅರ್ಥವಾಯಿತೋ ಸುಮ್ಮನೆ ದನ ಹೊಡೆದುಕೊಂಡು ಹೋಗಿದ್ದ. ಸ್ವಾತಂತ್ರ್ಯದ ಆರಂಭದ ದಿನಗಳು ಅಷ್ಟೇನು ಸರಿಯಾಗಿರಲಿಲ್ಲ. ಇಡೀ ದೇಶದ ಸಂಪತ್ತು ಕೊಳ್ಳೆ ಹೊಡೆದಿದ್ದ ಕೆಂಪುಮಂದಿ ನಮಗೇನು ಉಳಿಸದೆ ಲೂಟಿ ಮಾಡಿಕೊಂಡು ಹೋಗಿದ್ದರು.

ನುರಾರು ಭಾಷೆ, ನೂರಾರು ಭಾವನೆ, ನೂರಾರು ವೈವಿದ್ಯತೆಗಳ ನಡುವೆ ನಲುಗಿ ಹೋಗಿದ್ದ ದೇಶವನ್ನು ಒಂದು ಗೂಡಿಸಲು ದೆಹಲಿಲ್ಲ ನಾಯಕರು ಹೆಣಗುತ್ತಿದ್ದರೆ, ಮಂದಿ ತಿನ್ನೊದಕ್ಕೆ ಕೂಳಿಲ್ಲದೆ ಊಟ ಮಾಡುವುದು ಕೊಲೆ ಮಾಡುವುದನ್ನು ಆರಂಭಿಸಿದರು. ಮತ್ತೊಂದು ಕಡೆಗೆ ಹಿಂದೂ ಮುಸುಲ್ಮಾನರ ಗಲಭೆ, ಗಾಂಧಿಜಿಯವರು ಈ ಮತೀಯ ಬಿನ್ನತೆಯನ್ನು ಹೋಗಲಾಡಿಸಲು ಅವರ ನಡುವೆಯೇ ವಾಸ್ತವ್ಯ ಹೂಡಿದ್ದರು. ದೇಶ ಹತ್ತಿಕೊಂಡು ಉರಿಯ ತೊಡಗಿತು. ಅದರಲ್ಲಿ ಛಳಿ ಕಾಯಿಸಿಕೊಳ್ಳುವ ಹಲವು ಪ್ರಯತ್ನಗಲೂ ನಡೆದಿದ್ದವು.

ಧನ್‌ಸಿಂಗ್ ನಂತೆ ಅಪ್ಪಟ ದೇಶಭಕ್ತ ಪ್ರಾಮಾಣಿಕ ಕುಟುಂಬದಲ್ಲೂ ಪರಿಸ್ಥಿತಿ ಫಾಯಿದೆ ಪಡೆಯುವ ಮೀರ್ ಸಾದಕ್ ಹುಟ್ಟಿಕೊಂಡಿದ್ದರು. ಧನ್‌ಸಿಂಗ್ ಚಿಕ್ಕಪ್ಪನ ಮಗ ದಾಮ್ಲ ಬುಕ್ಕ್ಯಾ ಕರಮ್‌ತೋಟ್ ಕಳ್ಳರ ಗುಂಪನ್ನು ಕಟ್ಟಿಕೊಂಡು ಸುತ್ತಲೂ ಬಳ್ಳಾರಿ ಶ್ರೀಮಂತರ ಮನೆ ಲೂಟಿ ಮಾಡುತ್ತಿದ್ದ. ಪೊಲೀಸರ ಕಾಟವಿಲ್ಲ, ಸರಕಾರದ ಹೆದರಿಕೆ ಇಲ್ಲ. ಕಳ್ಳರು ಆಡಿದ್ದೇ ಅಟ ಹೂಡಿದ್ದೆ ಲಗ್ಗೆ ಎನ್ನುವ ಸ್ಥಿತಿ ನಿರ್ಮಾಣವಾಗಿತ್ತು. ಚೆಂದ, ಜಾಪಾ, ಸೂರ್ಯ. ಉಮ್ಮ, ಲಸಣು, ತಿಂಧ್ಗ ಕಟ್ಟುಮಸ್ತಾದ ಆಸಾಮಿಗಳೆ ಗುಂಪಿನೊಳಗೆ ಸೇರಿಕೊಂಡಿದ್ದರು. ತಾಂಡದ ಪಕ್ಕಕ್ಕೆ ಕುರಿ ಮೇಯಲು ಬಂದರೆ ಹಬ್ಬ. ಕುರುಬರ ಕಣ್ಣಿಗೆ ಬೆರಳಿಟ್ಟು ಎರೆಡು ಮೂರು ಮರಿಗಳನ್ನು ಅನಾಮತ್ತಾಗಿ ಎತ್ತಿಕೊಂಡು, ಪೆಳೆಗಳ ಹಿಂದೆ ನಿರ್ದಯೆಯಿಂದ ನಾಲಿಗೆಗೆ ಮುಳ್ಳು ಚುಚ್ಚಿ ಅದು ಒದರದಹಾಗೆ ಮಾಡಿಬಿಡುತ್ತಿದ್ದರು. ಸಂಜೆ ಕುರಿಮಂದೆ ಹೋದಮೇಲೆ ರಾತ್ತೋ ರಾತ್ರಿ ಕೊಯ್ದು , ಚರ್ಮ ಸುಲಿದು, ಉಪ್ಪು ಖಾರ ಹಾಕಿ ಬೇಯಿಸಿ ಐದು ಹತ್ತು ಕೇಜಿ ಅರೆಬರೆ ಮಾಂಸವನ್ನೇ ತಿಂದು, ಎಲುಬುಗಳನ್ನು ಭೂಮಿಯೊಳಗೆ ಹೂತಿಡುತ್ತಿದ್ದರು. ಕುರುಬರಿಗೆ ತೋಳಕ್ಕಿಂತ ದಾಮ್ಲ ದೊಡ್ಡ

ಭಯವನ್ನು ಉಂಟುಮಾಡಿದ್ದ. ತಾಂಡದ ಸುತ್ತಲ ಕಾಡಿನಲ್ಲಿ ಕುರಿಮಂದೆ ಬಂದರೆಂದರೆ ನಡೆಯುತ್ತಲೆ ಎರೆಡು ಪಗಡದಸ್ತ್ ಕುರಿಗಳನ್ನು ಹೆಗಲ ಮೇಲೆ ಹೊತ್ತು ಲಂಬಾಣಿಗಳು ನಡೆದು ಬಿಡುತ್ತಿದ್ದರು. ಅದಕ್ಕಂತೆ ಕುರುಬರ ಬೀರಪ್ಪ ತಾಂಡ ಅಂದ್ರೆ ನಡುಗುತ್ತಿದ್ದ. ಮೈಯೆಲ್ಲಾ ಕಣ್ಣಾಗಿ ನಾಯಿಗಳನ್ನು ಸುತ್ತಲು ಕಾವಲಿಟ್ಟು ಕಾದರು. ಒಂದು ಮೇಯುವಲ್ಲಿಯಿಂದಲೆ ಎಗ್ಗರಿಸುತ್ತಿದ್ದರು. ಇಲ್ಲಾ ಅಂದರೆ ದೊಡ್ಡಿಗಳಿಂದ , ಅದೆಂಥ ಭಯಂಕರ ನಾಯಿ ಬೊಗಳಿದರೂ ಅದರ ಕಣ್ಣು ತಪ್ಪಿಸಿಯೊ, ಇಲ್ಲ ಅದಕ್ಕೆ ಚೆಳ್ಳೆ ಹಣ್ಣು ತಿನಿಸಿ ಕುರಿಕದಿಯುತ್ತಿದ್ದರು.

ದಾಮ್ಲ ಬುಕ್ಯಾ ಕರಮ್‌ತೋಟ್ ಐದನೇಯವನು. ಅವನ ತಂದೆ ಸೋಮ್ಲ ಬುಕ್ಯಾರ ಚಿಕ್ಕಪ್ಪ ತೋತ್ಯಾನ ಕಾಲದಿಂದಲೂ. ಧನ್‌ಸಿಂಗ್ ಕುಟುಂಬದ ಮೇಲೆ ಹೆಗೆತನ ಸಾಧಿಸುತ್ತಲೆ ಬಂದಿದ್ದರು. ಅವನಜ್ಜ ದೇಸು ಬುಕ್ಯಾನ ಮಕ್ಕಳಲ್ಲಿ ದೊಡ್ಡವನಾದ ಸೋಮ್ಲಾ ಮಾತ್ರ ತಮ್ಮಂದಿರಿಗೆ ಒಳ್ಳೆಯ ಸಂಸ್ಕಾರ ಕೊಟ್ಟಿದ್ದಕ್ಕೆ ಧನ್‌ಸಿಂಗ್‌ನ ಕಾಲದ ವರೆಗೆ ಒಳ್ಳೆಯವರಾಗಿದ್ದರು. ತೋತ್ಯಾ ಬುಕ್ಯಾ ಕರಮ್‌ತೋಟ್‌ನ ಮೊಮ್ಮಕ್ಕಳಲ್ಲಿ ಒಬ್ಬನಾದ ದಾಮ್ಲ ಅವನಜ್ಜನ ಎಲ್ಲಾ ಗುಣಗಳನ್ನು ಪಡೆದುಕೊಂಡೇ ಹುಟ್ಟಿದ್ದ. ಬ್ಯಾಲದಿಂದಲೆ ಧನ್‌ಸಿಂಗ್‌ನನ್ನು ವಿರೋಧಿಸುತ್ತಾ ಅವನ ಎಲ್ಲಾ ಒಳ್ಳೆಯ ಕೆಲಸ ಗಳಿಗೆ ಅಡ್ಡಿಗಾಲು ಹಾಕುತ್ತಿದ್ದ. ವಿರೋಧಿಸು ವುದು, ಪ್ರಶ್ನಿಸುವುದು, ಅವನೇನು ಮಹಾ ಎಂಬಂತೆ ತಿಸ್ಕಾರದಿಂದಲೆ ನೋಡುತ್ತಿದ್ದ. ಧನ್ ಸಿಂಗ್ ಮಾತ್ರ ಅವನೊಬ್ಬ ಮುಟ್ಠಾಳ ಅಂತೇಳೀ ನಿರ್ಲಕ್ಷಿಸುತ್ತಿದ್ದ. ಅವನು ನಿರ್ಲಕ್ಷಿಸುತ್ತಿದ್ದಂತೆ ಹೆಚ್ಚು ಮಾತನಾಡತೊಡಗಿದ. ಕೆಂಪು ಮಂದಿಯ ಕಠಿಣವಾದ ಕಾನೂನು ಸಡಿಲ ಗೊಳ್ಳುತ್ತಿದ್ದಂತೆ ರಾಜ್ಯದ ತುಂಬೆಲ್ಲಾ ಅರಾಜಕತೆ ಆವರಿಸಿತ್ತು. ದಾಮ್ಲ ಬುಕ್ಯಾ ಒದೇ ಸಮಯಕ್ಕಾಗಿ ಕಾಯುತ್ತಿದ್ದ. ಅವನು ಯಾ ಮಗನಿಗೂ ಹೆದರುತ್ತಿದ್ದಿಲ್ಲ. ಜೋಡು ಗುಂಡಿಗೆ ಅರು ಅಡಿ ಎತ್ತರ, ಕೆಂಪಗೆ ಪರಂಗಿಯಂತಿದ್ದ. ಅವನ ಹಿಂದಿದ್ದೋರು ಅಷ್ಟೇ ಬಲಿಷ್ಟರಾಗಿದ್ದರು. ಅವರ ಕೆಲಸ ಇಡೀ ದಿನ ಮಲಗುವುದು. ರಾತ್ರಿ ಕೈಗೆ ಸಿಕ್ಕಿದನ್ನು ಕದಿಯೋದು ಅಷ್ಟೆ. ಮೊದಲು ತಾಂಡದ ಹೊಲಗಳಲ್ಲಿ ಮಾಡಿದರು. ಮಂದಿ, ತಾಯಿ, ಹೆಂಡಿರು ಮಂದಿ ಬೈಯಲು ಸುರುಮಾಡಿದರೊ ಅವತ್ತಿನಿಂದ ತಾಂಡದ ಉಸಾಬರಿ ಬಿಟ್ಟು ಬಿಟ್ಟರು. ಲಂಬಾಣಿಗಳ ಸಹವಾಸವೇ ಬೇಡ ಅಂತೇಳಿ ಊರ ಮಂದಿ ಜಮೀನುಗಳಿಗೆ ನುಗ್ಗ ತೊಡಗಿದರು. ಬೆಳೆ ಬಂದಿದ್ದನ್ನು ರಾತ್ರೊ ರಾತ್ರಿ ಕಟಾವು ಮಾಡಿ ಹೇರಿಬಿಡುತ್ತಿದ್ದರು. ಒಂದೇ ಸಲಕ್ಕೆ ಒಂದು ಎಕರೆ ಅರ್ಧಎಕರೆ ಹಂಗೆ ಧ್ವಂಸ ಮಾಡಿಬಿಡುತ್ತಿದ್ದರು. ಕೆಲ ಮಂದಿ ಬೈಕೊಂಡು ಹಿಡಿ ಶಾಪ ಹಾಕಿ ಸುಮ್ಮನಾಗುತ್ತಿದ್ದರು. ಕೆಲವರು ಬೆಳೆ ಮನೆಗೆ ಒಯ್ಯುವ ಮಟಾನು ಕಾದು ಕಟಾವು ಮಾಡುತ್ತಿದ್ದರು.

ತಾಂಡದ ಮಂದಿ ಚಾಪ್ಲ, ಚೆಂದ, ಜಾಂಪ, ಲಸಣು, ತಿಂದ್ಗ, ಉಮಾ, ಸೂರ್ಯ ಕೆಲಸಕ್ ಹೋಗಂಗಿಲ್ಲ. ಆದ್ರ ಮಂದಿ ಮಾಡದೆಲ್ಲ ದಿಮಾಕ ಮಾಡ್ತಾರಲ್ಲ ಹೆಂಗೆ ಯೋಚನೆ ಮಾಡ ತೊಡಗಿದರು. ಆದರೆ ಪ್ರತಿಯೊಬ್ಬರಿಗೂ ಅವರಲ್ಲಿರುವ ಚಾಟಕಿ ವಿದ್ಯೆಯ ಅರಿವಿತ್ತು. ಹಾಗಾಗಿಯೇ ಅವರ ಸಹವಾಸಕ್ಕೆ ಹೋಗದಂತೆ ದೂರವೇ ಉಳಿಯುತ್ತಿದ್ದರು. ಅವರಿಗೇನಾದರೂ ಬೊಯ್ಯುವುದು, ಅವರೊಂದಿಗೆ ಜಗಳ ಏನಾದರು ಆಡಿದ್ದೆ ಅದರೆ ಅವರ ಕತೆ ಮುಗಿದಂತೆ. ಮನೆ ಯೊಳಗಿಂದ ಕೋಳಿ, ಕುರಿ, ಬೆಲೆ ಬಾಳುವ ವಸ್ತುಗಳಿ ರಾತ್ರೋ ರಾತ್ರಿ ಗಯಾಬ್ ಆಗಿ ಬಿಡುತ್ತಿದ್ದವು. ಹಂಗಂತೇಳಿ ಮಂದಿ ಚೆಂದಣ್ಣ, ಜಾಂಪಣ್ಣ, ಲಸುಣನ್ನ, ತಿಂದ್ಗಣ್ಣ ಅಂತೇಳಿ ಪೂಸಿ

ಹೊಡೆಯುತ್ತಿದ್ದರು. ಅವರ ಜೊತೆಗೆ ಚೆನ್ನಾಗಿದ್ದವರ ಮನೆಗೆ ಸವರಾತ್ರಿ ಯಾಗವಲ್ಲದ್ಯಾಕ ಕುರಿ ಮಾಂಸ. ಕೋಳಿ ಮಾಂಸ, ಆಡಿನ ಮಾಂಸ ಕೊಡುತ್ತಿದ್ದರು. ಒಮ್ಮೊಮ್ಮೆ ಜೋಳದ ತನೆ ಏನ ಬೇಕಾದ್ದು ಸಿಗುತ್ತಿತ್ತು. ಹಾಗಾಗಿಯೇ ಅಕ್ಕಪಕ್ಕದವರು ಅವರ ದೌರ್ಜನ್ಯವನ್ನು ಸಹಿಸಿಕೊಂಡಿದ್ದರು. ಸಣ್ಣಪುಟ್ಟದ್ದ ಆಯಿತು ಎಂದು ದೊಡ್ಡ ಕೈ ಹೊಡೆಯೋದಕ್ಕೆ ದಾಮ್ಲು ಯೋಜನೆಯೊಂದನ್ನು ಹಾಕಿದ್ದ. ಕರ್ನಾಟಕದ ಗಡಿಯಿಂದ ಆಚೆ ಐವತ್ತು ಮೈಲಿ ದೂರದ ರಾಯದುರ್ಗಾ ತೆಲಗು ಶೆಟ್ಟಿಯ ಮೆನಯಲ್ಲಿ ಕನ್ನ ಹಾಕುವ ಕರಡನ್ನು ದಾಮ್ಲು ತಯಾರಿಸಿದ. ಚೆಂದ, ಜಾಂಪ, ಲಸಣು, ತಿಂಡ್ಗ ಒಟ್ಟಾಗಿಯೇ ಸೇರಿದ್ದರು. ಉತ್ತರದಿಂದ ಮೂವರು, ದಕ್ಷಿಣದಿಂದ ಮೂವರು ಬಂದವರೆ ಮೊದಲು ಆ ಮನೆಗೆ ಯಾರು ಬರ್ತಾರೆ, ಯಾರು ಹೋಗ್ತಾರೆ ಎನ್ನುವುದನ್ನು ವಾರೊಪ್ಪತ್ತು ಅಧ್ಯಯನ ಮಾಡಿದರು. ನಂತರ ಬಹಳ ಹತ್ತಿರದಿಂದ ಗೋಡೆಯ ವಿಸ್ತೀರ್ಣ, ಮನೆಯ ಒಳಗೆ ಪ್ರವೇಶಿಸಲು ಇರುವ ಸಾಧ್ಯತೆಗಳನ್ನು ಮನದಟ್ಟು ಮಾಡಿಕೊಂಡು ಕನ್ನ ಹಾಕಲು ಪ್ರಾಶ್ಯಸ್ತವಾದ ಸಮಯ ಯಾವುದೂ ಎಂಬುದನ್ನು ಗಮನಿಸಿ ಅಮವಾಸ್ಯೇಯ ಕತ್ತಲರಾತ್ರಿಯಲ್ಲಿ ಶೆಟ್ಟಿ ಸಂಜೆ ವ್ಯಾಪರ ಮುಗಿಸಿ, ಸರಿಯಾಗಿ ರಾತ್ರಿ ಹೆನ್ನೆರೆಡು ಗಂಟೆಗೆ ಲಕ್ಷ್ಮೀ ಪೂಜೆಗೆ ಕುಳಿತು , ಸುಮಾರು ಒಂದು ಗಂಟೆಯುವರೆಗೆ ಪೂಜೆಯನ್ನು ವಾಡಿ ಬೆಳ್ಳಿ ನಾಣ್ಯದ ಚೀಲವನ್ನು ಜುಕ್ ಜುಲುಮೆಯಿಂದ ಕಬ್ಬಿಣದ ತೆಜೂರಿಗೆ ಸೇರಿಸಿ ಮಲಗಲು ಹೋದ ದನದಾಹಿ ಶೆಟ್ಟಿ ಎಷ್ಟು ಬೇಗ ನಿದ್ದ ಹೋಗಲು ಸಾಧ್ಯವೆ. ಮನೆಯ ಹಿಂದೆ ದುರ್ಬಲವಾಗಿದ್ದ ಗೋಡೆಯನ್ನು ಸದ್ದು ಗದ್ದಲವಿಲ್ಲದೆ ಕೆಡವಿದ ಒಬ್ಬಂತ್ತು ಜನರ ತಂಡ ತಂದಿದ್ದ ನಿದ್ದೆ ಮಂಪರಿನ ಬೂದಿಯನ್ನು ಮಲಗಿದ್ದವರ ಮೇಲೆ ಎರಚಿದರು. ಓಳಗೆ ಹೋಗಿ ಅಮವಾಸ್ಯೆಯ ವಿಶೇಷ ಅಡುಗೆಯನ್ನು ಉಂಡು ಮಿಕ್ಕಿದನ್ನು ಚೆಲ್ಲಿ ತುಪು ಹಾಲಿನ ಪಾತ್ರೆಗಳನ್ನು ಖಾಲಿ ಮಾಡಿ ಯಾರೋ ಕಣ್ಣೆಸರು ತೆಗದರು. ಅಷ್ಟೊತ್ತಿಗೆ ತಿಜೋರಿಯ ಬೀಗ ಮುರಿದು ಬೆಳ್ಳಿ ನಾಣ್ಯದ ಚೀಲಗಳನ್ನು ಹೊತ್ತು ಒಂದು ತಂಡ ಹೊರಗಡೆ ಸಾಗಿಸಿತ್ತು. ಅಡಿಗೆ ಮನೆಯಲ್ಲಿದ್ದವರು ಬಂಗಾರ ನಾಣ್ಯ ಗಳ ಸೋಧನೆ ನಡೆಸಿ, ಬೆಳ್ಳಿಯ ಪಾತ್ರೆಗಳನ್ನು ಎತ್ತಿಕೊಂಡು ಪರಾರಿಯಾದರು. ಸಮಯತಪ್ಪಿ ಮಲಗಿದ್ದ ಶೆಟ್ಟಿ ಗಾಢ ನಿದ್ದೆಗೆ ಜಾರಿದ್ದ. ದಾಮ್ಲು ಬುಕ್ಕ್ಯಾ ಮತ್ತವನ ಸಂಗಡಿಗರು ಕಾಡಿನೊಳಗೆ ಹತ್ತಾರು ಗಾವುದ ನಡೆದು ಮಾಯವಾದರು. ಆದರೆ ತಂಡದಲ್ಲಿದ ಒಬ್ಬ ಸದಸ್ಯ ಮುಂಜಾನೆ ಎನೇನು ನಡೆಯುತ್ತದೆ ಎಂಬುದನ್ನು ತಿಳಿಯಲು ಉಳಿದು ಕೊಂಡಿದ್ದ.

ಮುಂಜಾನೆ ಆರುವರೆ ಸುಮಾರಿಗೆ ನಿದ್ದೆಯಿಂದ ಎಚ್ಚರಗೊಂಡ ಶೆಟ್ಟಿಯ ಹೆಂಡತಿ ಅಡಿಗೆ ಮನೆಯೊಳಗೆ ಚೆಲ್ಲಾಪಿಲ್ಲಿಯಾಗಿರುವ ಪಾತ್ರೆ ಪಡುಗಗಳನ್ನು, ಯಾರೋ ಊಟಮಾಡಿ ಖಾಲಿ ಮಾಡಿರುವ ತುಪ್ಪ, ಹಾಲಿನ ಪಾತ್ರೆಗಳು ಕಣ್ಣೆಸರು ತೆಗೆದು ತಂಬಿಗೆಯನ್ನು ಉಲ್ಟಾ ಹಾಕಿರುವುದನ್ನು ನೋಡಿ ಗಾಬರಿ ಯಾದಳು. ಏನು ನಡೆದಿರ ಬಹುದು ಎಂದು ಊಹಿಸುವ ಮೊದಲೆ ಶೆಟ್ಟಿಗೆ ಏನಾಗಿರಬಹುದೆಂದ ಚಿಂತಿತಳಾಗಿ ನಿಧಾನಕ್ಕೆ ಶೆಟ್ಟಿ ಮಕ್ಕಳು ಮಲಗಿರುವಲ್ಲಿಗೆ ಹೋದಳು. ಏನೋ ಅನುಮಾನ ಬಂದದಕ್ಕೆ ವಾಪಾಸು ತಿಜೋರಿಯಿದ್ದ ಜಾಗಕ್ಕೆ ಮರಳಿ ಖಾತ್ರಿ ಪಡಿಸಲು ತಿಜೋರಿಯನ್ನು ತಗೀತಾಳೆ, "ಯಂಕಟರಮಣ, ಎಮಪ್ಪ ಎಲ್ಲ ಪೊಯಿಂದಿ, ಏಮಂಡಿ ದೊಂಗ!" ಬಾಯಿಂದ ಮಾತೇ ಹೊರಡದೆ ಗಂಡ ಮಲಗಿದ್ದಲ್ಲಿಗೆ ಓಡಿದಳು. "ಅಯ್ಯೋ ಎಮಂಡಿ ದೊಂಗ ನಾಣ್ಯ ಪೆಟ್ಕೊಂಡು ಪೊಯಿಂದಿ. ನೀವು ಇಕ್ಕಡ ಗಡ್ಡದ್ದಾಗಿ ನಿದ್ರೆ ಚೇಸ್ತಾವಂಡಿ. ಏಮಂಡೀ. .."

ಜೋರು ಬಾಯಿ ತೆಗೆದು ರಂಪಾಟ ಮಾಡಿದ್ದರಿಂದ ಶೆಟ್ಟಿ ಎಚ್ಚರವಾಯಿತು. "ಏಯ್ ಏಮಾಯಿಂದೆ, ನೀಯಮ್ಮ, ನಂಜಿನಕೊಡರೆ, ಎವರು ಪೋಯಾರೆ ನೀ ಅಬ್ಬ, ನಾ ಅಮ್ಮ." ಸಿಟ್ಟಿನಿಂದ ಕಣ್ಣು ಉಜ್ಜಿಕೊಳ್ಳುತ್ತಾ ಹೇಳಿದ. "ವರೆಂತುಕು ಪೋತಾರು ನೀಯಮ್ಮ ನಾ ವಾಸ್ತೆ, ನಿ ತಿಜೋರಿ ತೀಸ್ಕಂಡ ಪೊಯ್ಯಾರು ಸೂಡು ಅಕ್ಕಡ." ಅಳುತ್ತಿದ್ದಳು ಅವಳ ಅಪ್ಪ ಅಮ್ಮ ಸತ್ತರು ಅಂದಾಗ ಸಹಜವಾಗೆ ಸಿಟ್ಟು ಬಂದು ಜಾಡಿಸಿದ್ದಳು. "ಏಮು ನಾ ತಿಜೂರಿ" ಅರೆಬತ್ತೆಲ ಓಡಿದ. ತಿಜೂರಿಯಿಂದ ಸಪತ್ತು ಮಾಯವಾಗಿರುವುದನ್ನು ಗಮನಿಸಿದ ಶೆಟ್ಟಿ ಎದೆ ಎದೆ ಬಡಿದುಕೊಂಡು , " ಪೊಯಾಡಪ್ಪೋ ನಾ ಡಬ್ಲು ಪೊಯಾಡು, ಏಯ್ ದೊಂಗನ್ನ ಕೊಡಕ, ಇದೇಮು ಚೇಸ್ಯಾರೆ ನಿ ಯಬ್ಬ, ಎವರು ನೀವು." ಒಳಗೆ ಹೊರೆಗೆ ಓಡಿದ್ದೆ ಓಡಿದ್ದು. " ರಂಡಿ ಸೂಡಂಡಿ ನಾ ಡಬ್ಬು ದೊಂಗಡು ಪೆಟ್ಕೊಂಡು ಪೊಯಾರು. ಸೂಡಂಡಿ ಕೊಂಚ ಸೂಡಂಡಿ." ಹುಚ್ಚನಂತೆ ಅವೇಶ ಭರಿತನಾಗಿ ಎದೆ ಎದೆ ಬಡಿದುಕೊಳ್ಳುತ್ತಿದ್ದ. ಶೆಟ್ಟಿಯ ಆಕ್ರಂದನ ಕೇಳಿ ಸುತ್ತುತ್ತಲ ಮಂದಿ ಮನೆ ಮುಂದೆ ಜಾತ್ರೋಪಾದಿಯಲ್ಲಿ ಸೇರಿದ್ದರು. ಕೆಲವರು ಅಯ್ಯೋಪಾಪ ಶೆಟ್ಟಿಗೆ ಹಿಂಗಾಗಬಾರ್ದಿತ್ತು ಎಂದು ಕರುಣೆ ತೋರಿಸಿದ್ರೆ, ಇನ್ನೂ ಕೆಲವರು ಅದೇನೋ ಅಂತಾರಲ್ಲ ಗಳಿಸಿದೋನ. . . . ನಮ್ಮ ಹತ್ತಿರ ಒಂದಕ್ಕೆ ಎರಡರಂತೆ ಸುಲಿಗೆ ಮಾಡಿದ್ದ. ಯಾರೋ ಪುಣ್ಯಾತ್ಮ ಸರಿಯಾಗೆ ಚೇಸ್ಯಾರು ಅಂತ ಮಾತಾಡಿಕೊಂಡಿದ್ದರು. ಗುಂಪಿಂದ ಉಳಿದ ಮಾಹಿತಿ ಸಂಗ್ರಹಿಸುತ್ತಿದ್ದ ತಿಂದ್ಗ ಮಾತ್ರ ದೂರದಿಂದಲೆ ಮಂದಿ ಏನೇನು ಮಾತಾಡುತ್ತಿದ್ದಾರೆ. ಏನು ನಡೆಯುತ್ತಿದೆ ಎಂಬ ಮಾಹಿತಿಯನ್ನು ಸಂಗ್ರಹಣೆ ಮಾಡುತ್ತಿದ್ದ. ಯಾರಾದರೂ ಅನುಮಾನ ಪಟ್ಟು ಹಿಡಿದರೆ ಜಿವ ಸಹಿತಿ ಉಳಿಸುವುದಿಲ್ಲ ಅಂತ ಗೊತ್ತಿದ್ದು ಗಂಡಾತರದ ನಡುವೆ ತಾನೆ ಖುದ್ದಾಗಿ ಸಿಗಾಕಿ ಕೊಂಡಿದ್ದ. ಯಾರೋ ಶೆಟ್ಟಿಯ ಸಂಬಂಧಿ ಬಂದು, " ಏನು ತಮ್ಮುಡು ಏಮಾಯಿಂದ್ರಾ ಏವರ್ರಾವಾಳು ದೊಂಗನಾ ಕೊಡಕ. ನೇನು ವಚ್ಚಿಂದ ಕದ ನೀವೇಮಿ ಭಯಪಡಲೇದ್ರಾ. . . ಏವರದಿ ಆ ದೊಂಗನಾ ಕೊಡಕ ನೇನು ಚೂಸ್ಕುಂಟಾನು." ಸಮಾಧಾನ ಪಡಿಸೋದಕ್ಕೆ ಪ್ರಯತ್ನಿಸಿದ. ಆದರೆ ಅವನು ದಿವಾಳಿಯದದ್ದಕ್ಕೆ ಖುಷಿಯಲ್ಲಿದ್ದ ಬಂದ ಶೆಟ್ಟಿ. ಅವನ ವರ್ತನೆ ನಾಟಕೀಯವಾಗಿತ್ತು. ಮೇಲ್ನೋಟಕ್ಕೆ ಅದು ಇದು ಅಂತ ದೊಡ್ಡದಾಗಿ ತೋರಿಕೆ ವ್ಯಕ್ತಪಡಿಸುತ್ತಿದ್ದ. " ಏಯ್. ರಾರ, ಪೊಲೀಸ್ರಿಗೆ ತೆಲಿಸಾ ಈ ವಿಷಯ? ನೇನು ಪೊಲೀಸ್ ಚೌಕಿಗೆ ಪೋಯಿ ಪೊಲೀಸ್ ವಾಳಿಕಿ ಕಂಪ್ಲೇಟ್ ಇಸ್ತಾನು." ಎಂದು ಮೇಲೆದ್ದ ಹೊರಟ. " ಒದ್ದು ಅನ್ನಯ್ಯ ಒದ್ದು, ದೋಂಗ ಪಾರಿಪೋಯಾರು, ಪೊಲೀಸ್‌ವಾಳೇಮು ಚೇಸ್ತಾರು, ನೇನೆ ಚೂಸುಕುಂಟಾನು ಒದ್ದು." ಅವನನ್ನು ಹಿಡಿದು ಬಲವಂತವಾಗಿ ಕೂಡಿಸಿದ. ಒಂದು ಘಳಿಗೆ ಒತ್ತರಿಸಿ ಬಂದ ಉಚ್ಚೆಯನ್ನು ನಿಲ್ಲಿಸಿಕೊಂಡಿದ್ದ ತಿಂಡ್ಗ ಪೊಲೀಸು ಅನ್ನಾನ ಅಲ್ಲೆ ಪಕ್ಕದ ಮಂದಿ ಲೆಕ್ಕಿಸದೆ ಕಾಲ್ಕಿಡಿದು, ಎದ್ದವನೆ ಮೆಲ್ಲಗೆ ಹಿಂದೆ ಸರಿಯುತ್ತಾ ಯಾರಿಗೂ ಅನುಮಾನ ಬರದಂತೆ ಗುಂಪಿನಿಂದ ಮಂಗ ಮಾಯವಾಗಿದ್ದ.

ಅವರು ಹೋಗಿರಬಹುದಾದ ದಾರಿಯನ್ನು ಗಮನಿಸುತ್ತಾ ದಿಕ್ಕೆಟ್ಟು ಓಡಿದ. ಶೆಟ್ಟಿ ಮನೆ ಬಿಟ್ಟಾಗ ಮಧ್ಯಾಹ್ನ. ಮಾರು ದೂರು ಹೋಗುತ್ತಿದ್ದಂತೆ ಸಂಜೆ ಯಾಗಿತ್ತು. " ಥು ಇವನವನ್ ಹಾಳು ಬದುಕು, ಇನ್ನು ಮುಂದೆ ನಡಿಯೋದು ಹೇಗಪ್ಪ ಶಿವನೆ, ಯಾವಾನಾರ ಇರುವಲ್ನಾಕ ನಾ ಸುಮ್ಮನೆ ಹೋಗಿ ಬಿಡಬೇಕಿತ್ತು. ತಲೆಯೊಳಗೆ ಒತ್ತರಿಸಿ ಬಂದ ಆಲೋಚನೆಗಳನ್ನು ಉಚ್ಚರಿಸುತ್ತ ಅರ್ಧಓಡುವುದು ಅರ್ಧ ನಡೆಯುವುದನ್ನು ಮಾಡುತ್ತಿದ್ದ. ಸೂರ್ಯನ ಬೆಳಕು ಒಳಗೆ

ಹೊರಗೆ ಇರುವಾಗಲೆ ಜುಮುಜುಮು ಮಕ್ಕರಗೋಳು. "ಸೇವಾಭಾಯ, ಹನುಮಪ್ಪ, ಏನಪ್ಪಾ ಮಾಡಲಿ?." ಜೋರಾಗಿ ಉಚ್ಚರಿಸಿದ. ಹೊರಗಡೆ ಶೆಟ್ಟಿ ಮಂದಿ ಬೆನ್ನ ಹತ್ತಿ ಯಾರು ಎಂಬುವ ಭಯ. ಕತ್ತಲು ಆವರಿಸುತ್ತಿದ್ದಂತೆ ದಾರಿ ಕಾಣದಂತಾಗಿತ್ತು. ಏನು ಮಾಡಲು ತೋಚದೆ ಸುಮ್ಮನೆ ನಡೆಯುತ್ತಿದ್ದ. ರಾತ್ರಿಯ ನೀರವತೆಯಲ್ಲಿ ಕಾಡು ಬಣ್ಣ ಬದಲಿಸಿತ್ತು. ನಿಶಾಚರ ಜೀವಿಗಳು ಜಾಗೃತಗೊಂಡು ಬೇಟೆಗೆ ಹೊಂಚು ಹಾಕುತ್ತಿದ್ದವು. ಜೀರುಂಡೆ, ನರಿ ಘೀಳಿಸಿದವು. ಕಾಡು ಪ್ರಾಣಿಗಳ ಧ್ವನಿಯಿಂದ ಹೆದರಿಗೆ ತಿಂಡ್ಗನ ಹೃದಯ ಬಾಯಿಗೆ ಬಂದಿತ್ತು. ಮುಂದಿನ ದಾರಿ ಸ್ಪಷ್ಟವಾಗಲಿಲ್ಲ. ಮೆದಳು ಕ್ರಿಯೆಯನ್ನು ನಿಲ್ಲಿಸಿತ್ತು. ಇನ್ನು ನಡೆಯೋದಕ್ಕೆ ಆಗೋದಿಲ್ಲ ಅಂದವನೆ ಯಾವುದಾದರೂ ಮರ ಹತ್ತಿ ಕುಂತು ಮುಂಜಾನೆ ಬೆಳಕು ಹರಿಯಾನ ಹೋದರಾಯ್ತು ಅಂತೇಳಿ ಅಲೋಚನೆ ಮಾಡಿ, ಸರಿಯಾದ ರೆಂಬೆಕೊಂಬೆಯ ಮರ ಹುಡುಕಾಡಿದ. ಹಳೇಯ ಎತ್ತರದ ಮರ ಹುಡುಕಿ, "ಹೂಂ. ಇದು ಪಾಡೈತಿ ತಡಿ, ಸಾಧ್ಯವಾದರೆ ಅಗಲನ ರೆಂಬೆ ಮೇಲೆ ಮಲಗಬಹುದು? ಆದ್ರ ಹೆಬ್ಬಾವು ಏನಾರ ಬಂದ್ರ, ಏನು ಮಾಡಾಕ ಆಗೋದಿಲ್ಲ. ಎಲ್ಲ ದೈವಿಚ್ಚೆ." ಅಂದವನೆ ಸರಸರನೆ ಹತ್ತಿದ. ಒಂದು ಕೊಂಬೆಯನ್ನು ಹಿಡಿದು ಮೇಲೆ ಹತ್ತುವಾಗ ದೂಎದಲ್ಲಿ ಬೆಂಕಿ ಕಾಣಿಸಿತು. " ಯಾರಿರಬಹುದು? ನಮ್ಮವರೇನಾರ? ಆ ಸೂಳಿ ಮಕ್ಕಳು ಯಾಕಿರ್ತಾರ. ಕಾಸು ಸಿಕ್ಕೈತಿ ಹೆಂಡ ಕುಡಿತ ಮಜ ಮಾಡ್ತಿರಬೇಕು. ನಾನು ಈ ಕಾಡಿನೊಳಗ ಹೆದರಿ ಸಾಯಬೇಕು." ಇನ್ನೂ ಮೇಲೆ ಹೋದ, ಏನೋ ಮೆತ್ತಂದು ಕೈಗೆ ತಾಕಿತು. "ಯವ್ವಾ ಹೆಬ್ಬಾವು "ಅಂದವನೆ ಕೆಳಗೆ ಜಾರಿದ. ಯಾರೋ ಗಬಕ್ಕಂತೆ ಹಿಡಿದು ಮೇಲೆತ್ತಿದರು. "ಇಲ್ಲಣ್ಣ ನಂದೇನು ತಪ್ಪಿಲ್ಲಣ್ಣ, ಬಿಟ್ಟಿ ಬಿಡ್ರಣ್ಣ, ಕದ್ದೋನು ನಾನಲ್ಲ." ಏನೇನೋ ಬೊಗಳಿದ. "ಏಯ್ ಹಡಸಿಕೆ ಬಾಯ್‌ಮುಚ್ಚುಲೆ." ಅಂದವನೆ ಜಾಡಿಸಿ ಒದ್ದು. "ಯಾರು ಲಸುಣನಾ, ಮೆಲ್ಲಕಲೆ ಸೂಳಿ ಮಗನ ಸಾಯಿಸ್ತಿ ಏನು? ನೀವಲ್ಲ ಅಂತ ಕನವರಿಸಿದೆ. "ಹಡಬಿ ಮಗನೆ ಹಿಂಗ ಮಂದಿ ಎದುರಿಗೆ ಬಾಯಿ ಬಿಟ್ಟಿ ಅಂದ್ರ ನಮ್ಮ ಕತಿ ಮುಗಿದ್ದಂಗೇಯಾ." ಅಂದವನ ಮತ್ತೊಂದು ಗುದ್ದಿದ. ಆ ಕಡೆಯಿಂದ ಲಾಲ್ಯ ಮತ್ತೊಂದು ಒದ್ದು, " ಬೋಸುಡಿಕೆ ನಿನ್ನ ನಂಬಿ ಹಿಂದ ಬಿಟ್ಟು ಬಂದ್ರ ಮಂದಿ ಮುಂದೆ ಟಾಮ್ ಟಾಮ್ ಬಾರಸ್ತೀಯಾ, ಇದೇನಾರ ನಮ್ಮ ಮುಖಂಡ ದಾಮ್ಲ ಬುಕ್ಕ್ಯಾಗ ಎನಾರ ಸುದ್ದಿ ತಿಳಿತಂದ್ರ ನಿನ್ನ ಚರ್ಮಾನೆ ಸುಲಿತಾನ." ಹೆದರಿಸಿದ. ತಿಂಡ್ಗ ತನ್ನ ತಪ್ಪಿನ ಅರಿವಾಯಿತು. ಕಳ್ಳತನಕ್ಕೆ ಹೋಗುವ ಮುಂಚೆ ದಾಮ್ಲ ಬುಕ್ಕ್ಯ ಇಡೀ ಗುಂಪಿನ ಮೆದಳನ್ನೆ ಬದಲಿಸುವ ಆಲೋಚನೆಗಳನ್ನು ತುಂಬಿದ್ದ. "ನಾವು ಮಾಡ್ತಿರೋದು ಸಮಾಜ ವಿರೋಧಿ ಕೆಲಸ. ಈ ಕೆಲಸದಲ್ಲಿ ಒಂದು ಸಾಯಬೇಕು. ಇಲ್ಲ ಗೆಲುವನ್ನು ಸಾಧಿಸಬೇಕು. ನಾವೇನಾದರು ಮಂದಿ ಕೈಗೆ ಸಿಗಾಕಿಕೊಂಡರೆ ಚಿತ್ರ ಹಿಂಸೆ ಮಾಡಿ ಕೊಲ್ತಾರೆ. ಅದಷ್ಟು ಸಿಗದಂಗೆ ತಪ್ಪಸಿಕೊಳ್ಳವುದೆ ಲೇಸು." ಭಾಷಣ ಉದ್ದವಾಗಿತ್ತು. ಕೆಲವರಿಗೆ ಅರ್ಥವಾಗಿತ್ತು. ಮತ್ತೆ ಕೆಲವರು ಹೂಂ ಅದು ಸುಮ್ಮನಾಗಿದ್ದರು. ಇದೇ ಮೊದಲು ದೊಡ್ಡ ಕೈ ಹೊಡದ್ದದ್ದು. ತಿಂಡ್ಗನಿಗೆ ದಾಮ್ಲ ಏನು ಮಾಡುತ್ತಾನೆಂಬ ಭಯ ಅವರಿಸಿತು. " ಲೆ ಲಸುಣ, ಲಾಲ್ಯ ನಿಮ್ಮ ಕಾಲು ಬಿಳ್ತೀನಿ." ಗೊಗರೆದ. ಆದ್ರ ಇಬ್ಬರು ನಿಕೃಷ್ಟ ಹೃದಯದವರು. ದಾಮ್ಲನ ಮುಂದೆ ಚಾಚು ತಪ್ಪದೆ ಎಲ್ಲನೂ ಒದರಿದರು. " ಲೇ ಏಳ್ಕಂಬಾರಲೆ ಸೂಳಿಮಗನ್, ಅಲ್ಲಲೆ ಕೈ ಹೊಡಿಕಾ ಹೋಗೊ ಮುಂಚೆ ಏನು ಹೇಳಿದ್ದೆ ಹೇಳು, ಸತ್ತರೂ, ಯಾರರ ಮುಂದೆ ಗುಂಪಿನ ವಿಷಯ ಹೇಳಬಾರದಂತೆ ತಾನೆ, ಹಿಂದು ಮುಂದೆ ನೋಡ್ದ ಎಚ್ಚರ ತಪ್ಪಿ ಓದರ್ತೀಯಾ?"

ಚಾಟಿಯಿಂದ ಬಾರಿಸಿದ. ಮೈಮೇಲಿಂದ ಒಂದು ಪದರು ಚರ್ಮಾನೆ ಕಿತ್ಕಂಡು ಬಂದಿತ್ತು. " ಇಲ್ಲಣ್ಣ ಮತ್ತೊಂದ ಸರ್ತಿ ಮಾಡಲ್ಲ." ಗೋಗರೆದರು ಕೇಳದಂಗೆ ಬಾರಿಸಿದ. " ಏಯ್, ಸತ್ತೋದಾನೋ ನಾಳೆ ತಾಂಡದಾಗ ನಿನ್ನ ಉಳಸಂಗಿಲ್ಲ ಬಿಡತ್ಲಾಗ" ಅಂತೇಳೀ ಅವನ ಖಾಸ ಗೆಳೆಯ ಚಂದ್ರನಾಯ್ಕ ಹೇಳಿಂದ ಕೈ ಬಿಟ್ಟ. ರಾತ್ರಿ ಕಾಡಿನೊಳಗೆ ಶೆಟ್ಟಿ ಮನಿಯಿಂದ ಕದ್ದತಂದಿದ್ದ ಆಹಾರವನ್ನು ಉಂಡು ಒಂದು ಜಂಪು ನಿದ್ದೇ ಮಾಡಿ ದಾರಿ ತಪ್ಪಿಸಿ ಮುಂದೆ ಹೊಂಟರು. ತಿಂದ್ಗನ ಚರ್ಮ ಸುಲಿದು ನೋವಾಗಿ ಜ್ವರ ಬಂದಿತ್ತು. ಇದ್ದಕ್ಕಿದ್ದಂತೆ ಕನವರಿಸತೊಡಗಿದ. ಬೆಳ್ಳಿ ನಾಣ್ಯಗಳು ಬಂಗಾರದ ಒಡೆವೆಗಳು ಭಾರವಾಗಿದ್ದವು. ತಿಂದ್ಗ ಏನಾದರೂ ನಡೆಯದಂತೆ ಮಲಗಿರದಿದ್ದರೆ ಅವನ್ನು ಗಾವುದ ದೂರದ ಮಟ ಹೊತ್ತೊಯ್ಯವುದು ಜಡವಾಗಿತ್ತು. ತಿಂದ್ಗ ಗಟ್ಟಿಯಾಗಿದ್ದರಿಂದ ಅದರಲ್ಲೆ ಏಳುತ್ತಾ ಬೀಳುತ್ತ ಅವರ ಹಿಂದೆ ಹೊರಟಿದ್ದ.

ಅದ್ಯಾವಾಗ ಮನೆಒಳಗ ಬಂದು ಸೇರ್ಕಂಡ್ರೊ ಹೊತ್ತಾರೆ ಎಲ್ಲ ತಾಂಡಾದೊಳಗೆ ಇದ್ದೋರಂಗೆ ಮಂದಿಯೊಳಗ ಬೆರಿತ್ತಿದ್ದರು. ಒಬ್ಬಬರ ಪಾಲಿಗೆ ಬಂದಿದ್ದು ಅಂದ್ರ ಒಂದೊಂದು ಚೀಲದಷ್ಟು ಬೆಳ್ಳಿ ನಾಣ್ಯಗಳು. ಕೆಲವರು ಮಡಿಕೆ ಒಳಗ ತುಂಬಿ ನೆಲ ಬಗುದು ಹುಗುದು ಮಣ್ಣು ಮುಚ್ಚಿದರೆ ಇನ್ನೂ ಕೆಲವರು ತಮ್ಮ ಹಳೆ ಪೆಟಾರಿ ಒಳಗೆ ಗಂಟು ಕಟ್ಟಿ ಬಿಸಾಕಿದ್ರು. ಇನ್ನೂ ಕೆಲವರು ಗುಡಿಸಲು ಮುಂದಿನ ಜಂತಿಗೆ ಹಗ್ಗ ಕಟ್ಟಿ ಚೀಲ ನೇತಾಡಕ ಬಿಟ್ಟರು. ಅವತ್ತಿನ ಘಟನೆಯಿಂದಾಗಿ ತಿಂದ್ಗ, ಲಸುಣ, ಉಮ್ಮಾ, ಸೂರ್ಯಾ, ಇದುಒಳ್ಳೆ ಕಲ್ಸ ಅಲ್ಲ ಹೆಂಡ್ರು, ಮಕ್ಕಳಿರೋ ನಾವು ಹಿಂಗ ಮಾಡಿದ್ರ ನಮ್ಮ ಹೆಣ ಕೂಡ ಸಿಗಾಕಿಲ್ಲ. ಅಂದವರೆ ನೇರವಾಗಿ ಚಂದ್ರ ಮತ್ತು ದಾಮ್ಲನ ಹತ್ತಿರ ಹೋಗಿ, " ನಿಮ್ಮ ಸವಾಸ ಸಾಕು ಎನೋ ಹೊಟ್ಟೆ ಹೊರಿಯೋದಕ್ಕ ಸಣ್ಣ ಪುಟ್ಟ ಕೆಲ್ಸ ಮಡಾನಂದ್ರ ನೀವು ಮಾಡಿದ್ದು ಅಬ್ಬಬ್ಬಾ ನೆನಪಮಾಡಿಕೊಂಡ್ರ ಮೈ ನಡುಗತೈತಿ. ಅದೆಂಗ ನಾವು ಅಟು ಧೈರ್ಯದಿಂದ ನಿಮ್ಮ ಹಿಂದೆ ಬಂದೆವೊ ದೇವರಿಗೆ ಗೊತ್ತು. ಅಣ್ಣ, ನೀವು ಕೊಟ್ಟಿದ್ದನ ಈಗಲೆ ವಾಪಾಸ ಕೊಡ್ತೀವಿ. ನಮ್ಮನ್ನ ಮಾತ್ರ ಇನ್ನಮ್ಯಾಕ ಕರೀಬ್ಯಾಡ್ರಿ. ನಾವು ಬರೋದಿಲ್ಲ ಅಂದ್ರ ಬರೋದಿಲ್ಲ." ಲಸುಣ ಕಡ್ಡಿ ತುಂಡು ಮಾಡಿದಂಗೆ ಹೇಳಿದ. ಚಂದ್ಯಾ, ದ್ಯಾಮ್ಲ ತುಟಿಪಿಟಕ್ ಅನಲಿಲ್ಲ. ಇವರೆ ಬಾಳ ಹೊತ್ತು ಮಾತಾಡಿ ಎದ್ದು ವಾಪಾಸು ಹೊರಟಿದ್ದರು. "ಹೋಗ್ರಿ ಮಕ್ಕಳ ಹಾದರ ಮತ್ತು ಕಳ್ಳತನ ಒಮ್ಮೆ ಸುರುವಾತು ಅಂದ್ರ ಬಿಡೋದು ಅಷ್ಟು ಸುಲಭಲ್ಲ. ಅವರ ನೋಟದಲ್ಲಿ ಅಡಗಿದ ಮಾತುಗಳಾಗಿದ್ದವು. ನಾಣ್ಯಗಳನ್ನು ಹೊರಗ ತೆಗೆದರೆ ಮಂದಿಗೆ ಅನುಮಾನ ಬಂದು ಪೊಲೀಸರಿಗೆ ಹಿಡಿಸುವುದು ಖಾತ್ರಿಯಾಗಿದ್ದೆ. ಎಲ್ಲರನ್ನೂ ಕರೆದು, ನಾಣ್ಯಗಳನ್ನು ಈಗಲೆ ತೆಗೆದು ಖರ್ಚುಮಾಡುಡಂತೆ ತಾಕೀತು ಮಾಡಿದರು. ಅಂತ ಅವಶ್ಯಕತೆ ಇದ್ದರೆ, ದೊಡ್ಡ ಪಟ್ಟಣಕ್ಕೆ ಹೋಗಿ ಅದನ್ನ ಮುರಿಸಿ ಖರ್ಚು ಮಾಡಬಹುದೆಂದು ಪರ್ಮಾನು ಹೊರಡಿಸಿದ ದಾಮ್ಲ. ಕುಡಿಯೋರು ತಿನ್ನೋರು ಎಲ್ಲ ಸುಮ್ಮನಿದ್ದವು. ತಯಾರಿಗಂತೇಳಿ ತಿಂದ್ಗ ಒಂದು ಹಿಡಿ ನಾಣ್ಯ ತಗಂಡು ರಾಂಪುರಕ್ಕೆ ಹೋಗಿ ಅಣ್ಣ, ದಮ್ಮಡಿ ಬಿಲ್ಲಿ ಅಂತೇಳಿ ಚಿಲ್ಲರೆ ಮಾಡಿಕೊಂಡು ಬಂದ. ಅದರಂಗೆ ಲಸುಣು, ಸೂರ್ಯ, ಎಲ್ಲರೂ ಬೇರೆ ಬೇರೆ ಊರುಗಳಿಗೆ ಹೋಗಿ ಮಂದಿ ಜನರಿಗೆ ಅನುಮಾನ ಬರದಂಗೆ ಚಿಲ್ಲರೆ ತಂದಿದ್ದರು. ಕುಡಿಯೋದು ತಿನ್ನೋದು ದಿಮಾಕ ಮಾಡೋದು ಹೆಚ್ಚಿತು. ಮಂದಿ ಮಾತಾಡ್ತಿದ್ದರೂ ಅವರಿಗೆ ಗೊತ್ತಾಗಲಿಲ್ಲ. ಮಂದಿ ಎಲ್ಲೋ ದೊಡ್ಡ ಕೈ ಹೊಡದಾರ ಮಕ್ಕಳು ಅದಕ್ಕ ಈಟು ದಿಮಾಕು ಎಂದು ನಾನಾ ನಮೂನಿ

ಮಾತಾಡಿಕೊಂಡರು. ತಮ್ಮ ದುಡಿಮೆ ತಮ್ಮ ಸಮಸ್ಯೆಗಳ ನಡುವೆ ಮಂದಿದೇನು ಕೆಳೋದು ಅಂತಹೇಳಿ ತಮ್ಮ ತಮ್ಮ ಪಾಡಿಗೆ ತಾವು ಸುಮ್ಮನಾದರು. ದಾಮ್ಲ ಬುಕ್ಯಾ ಮಾತ್ರ ಅಪ್ಪೇನ ಹಳ್ಳಿ ತಾಂಡದಲ್ಲಿ ಭನ್ಯಾ ಪುಜಾರಿ ಎನ್ನುವ ಕಂಕಾಳಿಯ ಭಕ್ತನ ಮನೆಯೊಂದಿಗೆ ತನ್ನ ಕಾಸಿನ ವ್ಯವಹಾರ ಇಟ್ಟುಕೊಂಡಿದ್ದ. ಭಗನ್ಯಾಗೆ ಇಬ್ಬರು ಗಂಡು ಮಕ್ಕಳು, ವಾಲ್ಯ ವಿಸಳಾವತ್ ಮತ್ತು ಲಾಲ್ಯ ಉಸಳಾವತ್. ಗಂಡನೊಂದಿಗೆ ಇರಲಾಗದೆ ವಾಪಾಸು ಬಂದಿದ್ದ ಅವನ ತಂಗಿ ಸಾವಿಕೂಡ ಸಂಬಂಧ ಹೊಂದಿದ್ದ. ಬೆಳ್ಳಿ ನಾಣ್ಯಗಳನೆಲ್ಲ ಅವರ ಮನಿಗೆ ಒಯ್ದು ಸುರಿಯುತ್ತಿದ್ದ. ಅವಳೂ ಕೂಡು ಕೈಲಾದ ಗಂಡನ ಜೊತೆ ಬಡಿದಾಡುವುದಕ್ಕಿಂತ ದಾಮ್ಲಾನ ಸವಾಸವೇ ಲೇಸೆಂದು ಬಗೆದು ಅವನು ಕಳ್ಳನಾದರೇನು ಸುಳ್ಳನಾದರೇನು ಕದಿಯಲು ಹೋಗಿ ಸಿಗಾಕಿಕೊಂಡರೆ ಹೆಂಗೂ ಅವನ ಕತೆ ಮುಗಿಯುತ್ತೆ ಒಳ್ಳೆಯ ಕಟುಮಸ್ತಾದ ಅಸಾಮಿ ಅಂದುಕೊಂಡವಳೆ ಅವನನ್ನು ತನ್ನ ಬುಟ್ಟಿಯೊಳಗೆ ಹಾಕಿಕೊಂಡಿದ್ದಳು. ಗುಡಿಕೋಟೆಯಲ್ಲಿ ಅವನ ಹೆಂಡತಿ ಗೋಮ್ಲಿ ನಾಕೈದು ಗಂಡು ಮಕ್ಕಳು ಹಾಗೂ ಎರೆಡು ಹುಡುಗಿಯರಿಗೆ ಜನ್ಮ ಕೊಟ್ಟಿದ್ದಳು. ಅವನ ಪಾಪದ ದುಡಿಮೆಯನ್ನು ಮೆನಗೆ ತರದೆ ಹಾಳಾಗಿ ಹೋದರೆ ಸಾಕೆಂದು ಬಗೆದು ದನ್‌ಸಿಂಗ್‌ನ ಹೊಲದೊಳಗೆ ಎಲ್ಲ ಮಕ್ಕಳೊಂದಿಗೆ ದುಡಿಯಾಕೆ ಹೋಗುತ್ತಿದ್ದಳು. ಅವಳ ಕಷ್ಟನೋಡಲಾರದೆ ದನ್‌ಸಿಂಗ್ ಹೆಂಡತಿ ಅವಾಗ ಅವಾಗ ಮನಿಗೆ ಬೇಕಾದ್ದನ್ನು ಹುಡುಗರ ಸಂಗಡ ಕಳುಹಿಸಿಕೊಡುತ್ತಿದ್ದಳು.

ದಾಮು ತಂದ ಬೆಳ್ಳಿ ನಾಣ್ಯದ ಚೀಲ ಎಲ್ಲಿ ಅಡಗಿಸಿಟ್ಟಾನೋ ಹೆಂಡತಿ ಮಕ್ಕಳಿಗೆ ಒಟ್ಟು ತಿಳಿಯದಾಗಿತ್ತು. ಸಂತೆ ಸಂತೆ ಕರಗಿಯೇ ಹೋಗಿತ್ತು. ಅವನ ಸರಾಯಿ ಚಟ ಸಾವಿಯ ಸವಾಸದೊಳಗೆ ಏನಾದ್ರು ಉಳಿಸೋದಕ್ಕೆ ಸಾಧ್ಯವಾದೀತೆ? ದಿನದ ಇಪ್ಪತ್ನಾಲ್ಕುಗಂಟೆ ಕೆಲಸ ಮಾಡಿ ಸಂಪಾದನೆ ಮಾಡಿದ ಈಡುಗಂಟೆ ಉಳಿಯೋದಿಲ್ಲ ಅಂತಾದ್ರಲ್ಲಿ ಹರಾಮಿದು ಹರಾಮಿಯಾಗೆ ಹೋಗಬೆಕು. ಯಾವಾಗ ಬೆಳ್ಳಿ ರುಪಾಯಿ ಖಾಲಿ ಯಾದವು ಎಂದು ಗೊತ್ತಾದ ಮೇಲೆ ಹಿರಯನಾದ ಲಾಲ್ಯ ವಿಸಾಳವತ್ ಮತ್ತು ಅವನ ತಂಗಿ ಸಾವಿ ಅವನನು ಅಷ್ಟಾಗಿ ಹಚ್ಚಿಕೊಳ್ಳದ ತಿರಸ್ಕಾರದ ರೀತಿಯಲ್ಲಿ ನಡೆದುಕೊಳ್ಳ ತೊಡಗಿದರು. ಮೆದುಳೆ ಇಲ್ಲದ ದಾಮುಗೆ ಅವರ ಗಮನ ಸೆಳೆಯುವುದು ಅನಿವಾರ್ಯ ವಾಯಿತು. ಮತ್ತೊಂದ ದೊಡ್ಡ ಕೈಗೆ ಅಲೋಚನೆ ಮಾಡೋದಕ್ಕೆ ಹೆಳೆಯ ತಂಡದ ಸದಸ್ಯರು ಸರಾಸಗಟಾಗಿ ನಿರಾಕರಿಸಿದ್ದರು. ಅವನಿಗೆ ಉಳದ ಒಂದೆ ಆಯ್ಕೆ ಅವನ ಖಾಸಾ ಗೆಳೆಯ ಚಂದ್ಯಾ. ಅವನ ಬಳಿ ಓಡಿದ. " ಏನ್ಲಾ ಚಂದು, ಏಸ್ ದಿನಾಆಯ್ತು ಯಾಕೋ, ಕೈ ಕಡಿಯಾಕ ಹತ್ತುತೆ ಕಣ್ಲ, ಏನಾರ ಮಾಡು." ಎಂದವನೆ ಅವನ ಪ್ರತಿಕ್ರಿಯೆಗಾಗಿ ಕಾದ. " ಏನೋಪ, ಹಳೆ ಚಾಳಿ ಬಿಟ್ಟು ಶುದ್ದಾಗಿರೋ ಸೂಳಿ ಮಕ್ಕಳು ಬರಂಗಿಲ್ಲ ಅಂತಾರ.?ಏನ್ ಮಾಡೋದು ಇದ್ರ. ನೀ ಒಬ್ಬಾಂವ ಅಟ." ಗಂಭೀರವಾಗಿಯೇ ವಿಷಯ ಪ್ರಸ್ತಾವನೆ ಮಾಡಿದ್ದ. "ನೀನು ಆಮಕ್ಕಳ ಪಾರ್ಟಿ ಸೇರಿದೆ ಅನ್ನ, ಹಂಗೆತಿಯನ್ನು ದೋಣೆ ದಾಟಿದಮ್ಯಾಗ ಅಂಬಿಗರ ಮಿಂಡಿ ಅಂತಾರಲ್ಲ ಹಂಗ. ಸೂಳಿಮಕ್ಕಳ್ರ ಅವತ ನಿಮಗ ರೂಪಾಯಿ ಬೇಕಿತ್ತು ಇಡಿ ಗಂಟೆಗೆ ಹೂಂ ಅಂದ್ರಿ. ಗಂಟು ಸಿಗಾಣ ಎಲ್ಲರೂ ದೂರ ಆದ್ರಿ. ಆಯ್ತ ಬಿಡ್ರಲೆ, ನಾ ಒಬ್ಬನ ಹೋಕ್ಕೀನಿ. ಇದೇನು ಹೊಸದಲ್ಲ ನನಗ." ಸಿಟ್ಟಿನಿಂದಲೆ ಹೇಳಿದ. "ಅಲ್ಲಲೆ ದಾಮು, ಅವರ್‍ಯಾಕೋ ಬರಲಾಂತ ನಾ ಬಿಟ್ಟೀನ ನಡಿ ಹೋಗಾನು ಎಲ್ಲಂತಿ ಅಲ್ಲಿಗೆ." ಅವನ ಹಿಂದೆ ಹೊರಡಲು ಮುಂದಾದ. "ಅದೇ ಕಣೋ ಕಾಸು ಮುಗಿದಿದ್ದಕ್ಕ ಮಾರಿ ತೋರ್‍ಸಂಗಿಲ್ಲ ಅಂತಾಳ

ಸಾವಿ. ಮೂರು ದಿನದಿಂದ ಆಕೆ ಮುಸಡಿ ನೋಡಿಲ್ಲ." ಅಸಹಾಯಕತೆಯನ್ನು ವ್ಯಕ್ತಪಡಿಸಿದ. "ಹಂಗೇನು ಗೆಳೆಯ ನಡಿಯಲ್ಲ ಹೋಗಾನು, ಎಲ್ಲರೂ ದೂರಕ್ಕೆ. ಈ ಸಲ ದೊಡ್ಡ ಕೆಲಸವನ್ನೆ ನೋಡುವ, ಯಾವುದಾದ್ರು ಅಂತ ಮನಿ ಕೇಳಿಯಾ?" ಪ್ರಶ್ನಿಸಿದ. "ಯಾರೋ ಮಾತಾಡ್ತಿದ್ರು, ಆದೋನಿ ರಂಗಾರಾಮರೆಡ್ಡಿ ಮನಿ ಕನ್ನಾ ಹಾಕುವ ನಿಲಿ ನಕಾಶೆಯೊಂದು ಸಿದ್ಧವಾಯಿತು. "ಅಲ್ಲ ಗೆಳೆಯ ಇಬ್ಬರಿಗೆ ಅಂದ್ರ ಕೆಲ್ಸ ಒಜ್ಜಾ ಅಕೈತಿ." ಚಂದ್ರ ಸಲಹೆ ನೀಡಿದ. "ಈಗ ನೀ ಬರಲಿಕ್ರ ನಾ ಒಬ್ಬವನೆ ಹೋಗಂವ. ಇದಕ್ಕೇನಂತಿ." ದಾಮು ಕೇಳಿದ. ವೃತ್ತಿ ಕಳ್ಳನಾದ ಚಂದ್ಯಾಗ ಅವನ ಮಾತು ದಿಟ ಅನಿಸಿತು. "ಲೇ ಹುಚ್ಚು ಸೂಳಿ ಮಗನ, ನಾ ಏನೋ ನಗೆಚಾಟಿಗೆ ಹೇಳಿದ್ರ ನೀ ಒಮ್ಮಿಂದೊಮ್ಮಿಗೆ ಸೆಡವಾಗ್ತಿ ಯಲ್ಲಲೆ, ನಿನ್ನ ಒಬ್ಬನ್ನ ಕಳಿಸಿ ನಾ ಇಲ್ಲ ಏನಾತೋ ಏನಿಲ್ಲೋ ಅಂತ ಹಳಿಹಳಿಸೊದಕ್ಕಿಂತ ನಿನ್ನ ಕೂಡ ಅದೋನಿಗೆ ಬಂದ್ರನ ಪಾಡ ನಡಿ ಹೋಗಾನು." ಅಂದವನೆ ಹಿಂದು ಮುಂದು ನೋಡದೆ ಅದೋನಿಗೆ ಪ್ರಯಾಣ ಬೆಳಿಸಿ ಬಿಟ್ರು, ರಂಗಾರಡ್ಡಿ ಸುತ್ತ ನೂರೈವತ್ತು ಹಳ್ಳಿಗಳಲ್ಲಿ ದೊಡ್ಡ ಜಮೀನ್ದಾರ, ಅವನ ಮಾತು ಅವನ ಧೈರ್ಯಕ ಹೆಸರಾದವ. ಸಾವಿರಾರು ಮಂದಿ ಆಳು ಕಾಳು, ರಾತ್ರಿ ಪಹರೆ ಕಾಯೋರು. ಹಗಲು ಕಾಯೋರ ನಡುವೆ ಅವನ ಮನಿ ಗೋಡಿ ದಾಟೋದೆ ಜಡವಾಗಿತ್ತು.

ದಾಮು ಘಳಿಗೆ ನಡುಗಿಹೋದ. ಕಾವಲು ಗಾರರ ಕೈಗೆನಾರು ಸಿಕ್ಕರೆ, ತುಂಡುತುಂಡು ಮಾಡಿ ನಾಯಿನರಿಗೆ ಹಾಕಲ್ಲ ತಾವ ತಿಂದು ಬಿಡ್ತಾರ. ಒಳ್ಳೆ ನರ ಭಕ್ಷಕ ರಾಕ್ಷಸರು ಇದ್ದಂಗದಾರ ಎಂಬ ಮನಸ್ಸಿನೊಳಗಿನ ತಾಕಲಾಟವನ್ನು ಚಂದನಿಗೆ ತೋರಗೊಡದೆ ಅವನು ಘಳಿಗೆ ಅಲೋಚಿಸಿದ. ಇದ್ದಕ್ಕಿದಂತೆ ತಲಿಗೆ ಏನೋ ಹೊಳಿತು. ಎದ್ದವನೆ ಎದುರಿಗೆ ನಿಂತಿದ್ದ ಆಳನ್ನು ಕರೆದ, "ಅಣ್ಣಾ, ತೋ ಗೋರ್‌ಮಾಟಿ ಕಾವಕೆ" ಅಣ್ಣ ನೀನು ಗೋರ ಅಲ್ವಾ) ಮಾತನಾಡಿಸಿದ. ಎದುರಿಗಿದ್ದ ರಂಗಾರೆಡ್ಡಿ ಆಳು ಬೋಂದಾನಾಯ್ಕ ಹೌಹಾರಿದವನೆ, " ಹಾವ, ತೂಕೂಣ್, ಮನ್ನ ಕಿಂವ್,, ಗುರುತು ಪೆಟ್ಟ್ಯಾವೊ." (ಹೌದು ನೀನು ಹೆಂಗೆ ಗುರುತು ಹಿಡಿದೆ?) ಅಚ್ಚರಿಯಿಂದ ಕೇಳಿದ. ಯಾರು ಗುರುತು ಹಡಿಯದಿದ್ದರು ಈ ಮಗ ಹೆಂಗ ಕಂಡು ಹಿಡಿದ ಎನ್ನುವುದೆ ದೊಡ್ಡಸವಾಲಗಿತ್ತು. ಯಾರಿಗೂ ಅನುಮಾನವೇ ಬರದ ಹಾಗೆ ಇದ್ದೆ ನಾನು, ಬೊಂದ್ಯಾ ಯೋಚನೆ ಮಾಡುತ್ತಲೆ ಇದ್ದ. " ಅಣ್ಣ ಏನು ಯೋಚನೆ ಮಾಡ್ತಿದ್ದಿಯಾ? ಏನೋ ಅಚಾನಕ್ ಸಿಕ್ಕೆ ನನ್ನ ಮನಸ್ಸು ಹೇಳ್ತಪ್ಪ ನೀನು ಬಂಜಾರ ಸಹೋದರನೆ ಅಂತ, ಹಿಂದು ಮುಂದು ನೋಡದೆ ಮಾತಾಡಿಸದೆ ನಿನಗ ತೊಂದರೆಯಾಗೋದಾದರೆ ಬರ್ತಿವಿ." ಅಂದವನೆ ಚೆಂದ್ಯಾನ ಕರ್ಕೊಂಡು ಹೊರಟ. ಪೆದ್ದುಪೆದ್ದಾಗಿ ಆಡ್ತಿದ್ದ ಚೆಂದ್ಯಾನ್ನ ನೋಡಿ, " ಏಯ್, ಇರೋ ಮರಾಯ ನಿನ್ನ ಜೊತೆಗೆ ಯಾರೋ ಹೆಳವ ಇದ್ದುಂಗವ್ನೆ, ಯವೂರು? ಯಾಕ ಬಂದಿರಿ?" ಪ್ರಶ್ನೆಗಳ ಮೆಲೆ ಪ್ರಶ್ನೆಗಳನ್ನು ಕೇಳತೊಡಗಿದ. "ಏನು ಇಲ್ಲ. ಇಂವ ನನ್ನ ತಮ್ಮ ಅಧೋನಿಯಲ್ಲಿ ಈ ಹೆಳವನಿಗೆ ಔಷಧ ಕೊಟ್ಟು ಒಂಚೂರು ಬಾಯಿ ಬರೋಹಾಗೆ ಎಲಬುಗಳಲ್ಲಿ ತಾಕತ್ ಬರೋಹಂಗ ಮಾಡ್ತಾರಂತೆ, ವಿಷಯ ತಿಳಿತು. ಸ್ವಂತ ಒಡಹುಟ್ಟಿದವನು ನೋಡು ಕರಳು ತಡಿಯಾಕ ಆಗಲಿಲ್ಲಾ. ನಡಿಯಪ್ಪ, ಯರೋ ನಮ್ಮವರು ಸಿಕ್ಕಾರು. ಏನೋ ಒಂದು ಸಣ್ಣ ಪಟ್ಟುದ ಕೆಲಸ ಮಾಡಿ ಔಷಧಿ ತಂಗೊಂಡು ಬರಾನಂತೆ ಹೆಳಿ, ಕರಕೊಂಡು ಬಂದೀನಿ." ತನ್ನ ಕರುಣಾಜನಕವಾದ ಕತೆಯನ್ನು ಅತನ ಮುಂದಿಟ್ಟ ಕೊಂಚ ನಡುಗುತ್ತ. "ಹಿಂಗ ವಿಷಯ ಒಳ್ಳೆಯದಾಯ್ತು. ಈ ಊರಾಗ ಅಂತ

ಔಷಧಿ ಕೊಡೋರು ನಾನಂತು ಕೇಳಿಲ್ಲ." ಅನುಮಾನಿಸದ. "ಆಯ್ಯೋ ಪಾಪ, ನಿಮಗೆಲ್ಲ ಹೇಗೆ ಗೊತ್ತಾಗಬೇಕು. ಇಂತ ದೊಡ್ಡ ಸಾಹುಕಾರರ ಹತ್ತಿರ ಕೆಲಸಮಾಡ್ತೀದ್ದಿರಾ. ಪರವಾಗಿಲ್ಲ, ನಾನೆ ಹುಡುಕುತ್ತೇವೆ." ಅವನಿಗೆ ನೇರವಾಗಿ ಹೇಳಿದ. " ಆಯ್ತು ಎಲ್ಲಿ ಉಳುಕೊಂಡೀರಿ" ಕೇಲದ ಬೋಂದ್ಯಾಲು. " ಈಗಿನ್ನಾ ಬಂದೀವಣ್ಣಾ, ಊಟ ತಿಂಡಿ ಇಲ್ಲದೆ ಕೆಲಸಕ್ಕ ಅಲಿತಾ ಅದೀವಿ." ಭಾವನಾತ್ಮಕವಾಗಿ ಅವನಿಗೆ ತಾಟುವಂತೆ ಹೇಳಿದ. " ಅಯ್ಯೋ ಪಾಪ, ಕೆಲ್ಸ ಆಮೇಲೆ ಬರ್ರಪ್ಪ ಊಟ ಮಾಡ್ರಿ." ಅಂದವನೆ ತುಸು ದೂರ ವಿದ್ದ ತನ್ನ ಮನೆಗೆ ಕರೆದುಕೊಂಡು ಹೋಗಿ, ತನ್ನ ಹೆಂಡತಿ ಮಕ್ಕಳನ್ನು ಪರಿಚಯಿಸಿದ.

ದಾಮು– ಬೊಂದ್ಯಾಲು ಸ್ನೇಹ ಗಟ್ಟಿಯಾಗಲು ಹದಿನೈದು ದಿನಗಳು ಹಿಡಿದವು. ಅವನೆ ರಂಗಾರಾರೆಡ್ಡಿಯ ಬಲಗೈ ಬಂಟ. ಸಾಂಬಶಿವಾರೆಡ್ಡಿಗೆ ಹೇಳಿ ಮನೆಯೊಳಗೆ ಸಣ್ಣಪುಟ್ಟ ಕೆಲಸಕ್ಕೆ ಪರಿಚಾರಕನನ್ನಾಗಿ ಸೇರಿಸಿದ. ದಾಮು ಸಣ್ಣ ಕೆಲಸಗಳನ್ನು ಬಾಳ ನಿಪುಣತೆಯಿಂದ ಮಡುತ್ತಲೆ ರಂಗಾರೆಡ್ಡಿಯ ಸಮೀಪ ಬಂದಿದ್ದ. ಅವನ ವರ್ತನೆ ಹೆಗಿತ್ತೆಂದರೆ ಸ್ವತಃ ರಂಗಾರೆಡ್ಡಿನೆ ಅವನ ಮಕ್ಕಳಾದ ತಿಪ್ಪಾರೆಡ್ಡಿ ಮತ್ತು ಸತ್ಯನಾರಾಯಣ ರೆಡ್ಡಿಮೇಲೆ ಅನುಮಾನ ಪಡತೊಡಗಿದ. ರೆಡ್ಡಿಯ ದರ್ಬಾರಿನಲ್ಲಿ ನಡೆಯವು ಪ್ರತಿಯೊಂದು ಘಟನೆಗಳನ್ನು ಎದುರಿಗೆ ಹೇಳಿ "ಕಾಳಿ ಮಾವಸ" (ಬಲಿಪಾಡ್ಯ ಅಮಾಸ್ಯೆ) ದಿನ ತಮ್ಮ ಯೋಜನೆಯ ಗಡವನ್ನು ತಲುಪುವ ಸನ್ನಾಹದಲ್ಲಿದ್ದರು. ದಾಮುಗೆ ಮೊದಲೆ ಆಟೀಟು ತೆಲಗು ಬರುತ್ತಿತ್ತು. ರಂಗಾರೆಡ್ಡಿ ಮನಿಯೊಳಗೆ ಮಂದಿ ಮತಾಡೋದನ್ನೆ ಕೆಳಿಯೇ ಒಳ್ಳೆಯ ತೆಲಗನಾಗಿದ್ದ. ರಂಗಾರೆಡ್ಡಿ ಹೆಂಡತಿ ಸಾವಿತ್ರಿ, ಮಗಳು ಕಸುಮಬಾಲ ದಾಮು ಮನೆಯವನೆ ಎನ್ನುವ ನಂಬಿಕೆಯನ್ನು ತಂದಿದ್ದಾ. ಒಂದು ಕಡೆ ಸಂಬಂಧದದ ಸುತ್ತ ಬಲೆ ಹೆಣೆಯುತ್ತಲೆ ಮತ್ತೊಂದೆಡೆ ನಾಣ್ಯಬಂಗಾರ. ರೊಕ್ಕ ರುಪಾಯಿಯ ಇಡಿಗಂಟಿನ ಜಾಗೇವಿನ ಪತ್ತೆ ಮಾಡುವ ಜಮ್ಮೆದಾರಿ ಅವನ ಮೇಲಿತ್ತು. " ಎಲ್ಲೈತೆಪ್ಪಾ ತಿಜೂರಿ, ಇಷ್ಟುದಿನಗಳಾದವು ಇನ್ನೂ ಕಾಣವಲ್ದಲ್ಲಾ. ಅಮವಾಸ್ಯೆ ಹತ್ತಿರಕ್ಕೆ ಬಂದೆ ಬಿಡ್ತು." ಪ್ರತಿದಿನ ಗೊಣಗಿಕೊಳ್ಳುತ್ತಿದ್ದ. ಮೂವತ್ತು ನಲವತ್ತು ಕೊಣೆಗಳು, ಎಲ್ಲಾ ಕಡೆಗೂ ಸಾಮಾನು, ಆಳುಕಾಳು, ಎಲ್ಲಿ ಏನಿದೆ ಅಂತ ತಿಳಿಯೋದೆ ಕಷ್ಟ. ದಾಮುನ ಹದ್ದಿನ ಕಣ್ಣಿನಿಂದ ಯಾವುದು ತಪ್ಪಿಸಿಕೊಳ್ಳಲು ಸಾಧ್ಯವೇ ಇರಲಿಲ್ಲ. ಅವತ್ತು ರಂಗಾರೆಡ್ಡಿ ಮೂತ್ತೊಂಬತ್ತನೇಯ ಅತಿ ದೊಡ್ಡದು ಅಲ್ಲ, ಚಿಕ್ಕದು ಅಲ್ಲದ ಕೋಣೆಯಿಂದ ಹೊರ ಬಂದಿದ್ದನ್ನು ನೋಡಿದ. ರಂಗಾರೆಡ್ಡಿ ಕೈ ಯೊಳಗೆ ಕಾಸಿನ ಚೀಲ ಇದಿದ್ದನ್ನ ಖಾತ್ರಿ ಪಡಿಸಿಕೊಂಡನೆ. ಅವನು ಆಚೆ ಹೋಗುವುದನ್ನೆ ನೋಡಿದ. ಅವನ ಬೆನ್ನ ಹಿಂದೆ ರಂಗಾರೆಡ್ಡಿ ಭದ್ರವಾಗಿ ಬಾಗಿಲು ಜಡಿದು ದೊಡ್ಡ ದೊಂದು ಬೀಗ ಜಡಿದ. ಆದು ಏನು ಪರಿಗಣನೆಗೆ ತೆಗೆದುಕೊಳ್ಳುವಂತಹ ವಿಷವೇನಲ್ಲ. ಆದರೂ ಇದೇ ಅಂತ ಖಾತ್ರಿಯಾಗಿತ್ತು ಎಂಬ ಹಳಹಳಿ ಇತ್ತು. ಅಂತು ಒಂದು ಹಂತ ತಲುಪಿದೆನಲ್ಲಾ ಎನ್ನುವ ಖುಷಿಯಲ್ಲಿ ಒಳಗೆ ನುಗ್ಗುವ ಮತ್ತು ಹೊರಗೆ ಜಿಗಿಯುವ ಅವಕಾಶಗಳ ಸಾಧ್ಯಾಸಾಧ್ಯತೆಗಳನ್ನು ಆದಷ್ಟು ಬೇಗ ಕಂಡು ಹಿಡಿದು ವಿಷಯವನ್ನು ಚಂದ್ರನಿಗೆ ಹೇಳಿ ಅವನನ್ನು ಈ ಕೆಲಸಕ್ಕೆ ಅಣಿ ಆಡಬೇಕಿತ್ತು. ಬೇರೆ ಕಡೆ ಕೆಲಸಗಳನ್ನು ಕಡಿಮೆ ಮಾಡಿ ಆ ಕೋಣೆಯ ಸುತ್ತಲೆ ತಿರುಗಾಡಿ ಅಲ್ಲಿಯ ಗೋಡೆ ಕಲ್ಲು ಹರ್ನಾಳಿಗೆ ಜಂಟಿ ತೊಲೆಗಳನ್ನು ಅಭ್ಯಾಸ ಮಾಡ ತೊಡಗಿದ. ಐದಾರು ಸಾವಿರ ಎಕರೆ ಜಮೀನ್ದಾರ ರಂಗಾರೆಡ್ಡಿ ಮೊದಲಿನಿಂದಲೆ ಆಗರ್ಬ ಶ್ರೀಮಂತ. ವಜ್ರ ಮುತ್ತು ಬಂಗಾರ

ರಾಶಿರಾಶಿ ಬಿದ್ದಿತ್ತು. ಬ್ರಿಟೀಷರ ಕಾಲದಿಂದಲೆ ಬ್ರಿಟೀಷರಿಗೆ ಪರವಾಗಿ ನಿಂತು ಅನೇಕ ಬಿರುದಾವಳಿ ರಂಗಾರೆಡ್ಡಿಯ ಅಜ್ಜ ಚೆಂಗಾರೆಡ್ಡಿ ಪಡೆದಿದ್ದ ಭಾವ ಚಿತ್ರಗಳು ಗೋಡೆಯ ಮೆಲೆ ನೇತಾಡುತ್ತಿದ್ದವು. ಕಡಿಮೆ ಅಂದ್ರು ನೂರ ಜನ ಮನೆಯ ಒಳಗೆ ಬಂದು ಹೊರಗಡೆ ಹೋಗುತ್ತಿದ್ದರು. ದುರಾದೃಷ್ಟವೋ ಇಲ್ಲ ಅದೃಷ್ಟವೋ ದಾಮು ಮಾತ್ರ ಆಪ್ತನಾಗಿ ಮನೆಯೊಳಗೆ ಕೆಲಸ ನಿರ್ವಹಿಸ ತೊಡಿಗಿದ್ದ. ಬೊಂದ್ಯಾಲು ಸಹಾಯದಿಂದ ಒಂದೊಂದೆ ಹೆಜ್ಜೆ ಇಡುತ್ತಾ ತಿಜೂರಿ ಅನ್ನುವುದಕ್ಕಿಂತ ಬಂಗಾರ ಬೆಳ್ಳಿ ವಜ್ರ ತುಂಬಿದ ಕೋಣೆಯ ಸಮೀಪಕ್ಕೆ ಬಂದಿದ್ದ. ಅದಕ್ಕೆ ಕಿಟಕಿ ಇಲ್ಲ. ಒಂದೇ ಬಾಗಿಲು, ಮನೆಯ ನಟ್ಟು ನಡುವೆ ಕಟ್ಟಲಾಗಿತ್ತು. ಉದ್ದೇಶ ಪೂರಕವಾಗಿ ಆ ಕೋಣೆಯತ್ತ ಯಾರಾದರೂ ನೋಡಿದ್ದು ಕಂಡು ಬಂದರೆ ಕೈಕಾಲು ಕತ್ತರಿಸಿ ನಾಯಿಗೆ ಬಿಸಾಕುತ್ತಿದ್ದ ರಂಗಾ ರೆಡ್ಡಿ. ಸುತ್ತ ಐವತ್ತು ಹಳ್ಳಿಯಲ್ಲಿ ರಂಗಾರೆಡ್ಡಿ ಅಂದರೆ ಮಂದಿಯೊಳಗೆ ಒಂದು ಸಂಚಲ ಹೊಮ್ಮುತ್ತಿತ್ತು. ಆಂತಹ ಅವನ ಮನಿಯೊಳಗೆ ಕನ್ನ ಹಾಕೋದಕ್ಕೆ ಜೋಡು ಗುಂಡಿಗೆ ಬೇಕಿತ್ತು. ಎಮ್ಮೆ ಮಣಕದಂತೆ ನಾಯಿಗಳು ಹೊರಗಡೆ ಒಮ್ಮೆ ಬೊಗಳಿದರೆ ಎಂಥಹ ಧೈರ್ಯವಂತನ ಗುಂಡಿಗೆನೆ ನಡಗುತ್ತಿತ್ತು.

ದಿಪಾವಳಿಯ ತಯಾರಿ ಭರ್ಜರಿ ನಡೆದಿತ್ತು. ವಾರದಮುಂಚೆ ಗೋಡೆಯ ಸುಣ್ಣಬಣ್ಣ ಬಳಿಯುತ್ತಿದ್ದರು. ದಾಮು ಮನೆಯ ಒಳಗೆ ಸುಣ್ಣ ಬಳಿಯುತ್ತಾ ಆ ಕೋಣೆಯ ಮೆಲೆ ನಿಗಾ ಇಟ್ಟಿದ್ದ. ಆಳುಗಳೆಲ್ಲಾ ಊಟಕ್ಕೆ ಹೋದಾಗ ರಂಗಾರೆಡ್ಡಿ ಇಲ್ಲಾ ಹಿರಿಯ ಹೆಂಡತಿ ಸಾವಿತ್ರಿ, ಇಲ್ಲ ಮಗಳು ಕುಸುಮಬಾಲೆ ಮತ್ರ ಆ ಕೋಣೆಗೆ ಹೋಗುವುದೆಂಬ ಮಾಹಿತಿಯನ್ನು ಸಂಗ್ರಹಸಿದ. ಅವತ್ತು ಮದ್ಯಾಹ್ನ ಯಾರೋ ನೆಂಟರು ಹಣಕ್ಕಾಗಿ ಬರುತ್ತಿದ್ದಾರೆಂಬ ಮಾಹಿತಿಯನ್ನು ಪಡೆದವನೆ ಆಳುಗಳು ಕೆಲಸದ ನಡುವೆ ಊಟಕ್ಕೆ ಹೊರಡುವ ಸಮಯ ನೋಡಿ, ಕೋಣೆಯ ಎದುರುಗಿನ ಕಂಬದ ಮೆಲೆ ಅಡ್ಡ ಹಲಗೆಯ ಜಂತಿಯ ಮೇಲೆ ಅಡ್ಡ ಮಲಗಿದ. ಕೋಣೆಯ ಒಳಗೆ ಹೋಗುವುದು, ಬಾಗಿಲು ಹಾಕದಿದ್ದರೆ ಒಳಗಡೆ ಏನಿದೆ ಎಂಬುದೆಲ್ಲ ಕಾಣುತ್ತಿತ್ತು. ಉಸಿರು ಬಿಗಿ ಹಿಡಿದು ಕಾದು ಕುಳಿತಿದ್ದ. ರಂಗಾರೆಡ್ಡಿಯ ಹಿರಿ ಮಗಳು ಕುಸುಮಬಾಲ ತಿಜೂರಿಯ ಬೀಗ ಹಿಡಿದು ಬಂದವಳೆ ತೆರೆದು ಒಳಗೆ ಹೋದಳು. ರಾಶಿಯಿಂದ ಬಂಗಾರದ ಸರವನ್ನು ಹೀಡಿದು ಬಂದವಳೆ ತಗೆದು ಕುತ್ತಿಗೆಗೆ ಹಾಕಿಕೊಂಡು ಅಲ್ಲೆ ಇದ್ದ ಕನ್ನಡಿಯೊಳಗೆ ತನ್ನ ಮುಖವನ್ನು ನೋಡಿಕೊಂಡಳು. ಅದನ್ನು ತೆಗೆದು ಬೇರೆ ಮತ್ತೊಂದು ಹೀಗೆ ಬಿದ್ದಿದ್ದ ನೂರಾರು ಬಂಗಾರದ ಸರಗಳನ್ನು ಹಾಕಿ ತಾನು ಹೇಗೆ ಕಾಣುತ್ತೇನೆಂಬುದನ್ನು ನೋಡಿ ಖುಷಿ ಪಟ್ಟಿದ್ದಳು. ಬೆಳ್ಳಿ ನಾಣ್ಯದ ರಾಶಿ ಬಂಗಾರದ ಒಡೆವೆಗಳು ಬಿದ್ದಿರುದನ್ನು ಕಂಡು ದಾಮುಗೆ ಮಲಗಿದ್ದಲ್ಲೆ ತಲೆ ಸುತ್ತು ಬಂತು. ಬಿದ್ದು ಸಿಗಾಕಿಕೊಂಡೆನೆಂಬ ಭಯದಿಂದ ಗಟ್ಟಿಯಾಗಿಯೇ ಹಿಡಿದು ಸುಧಾರಿಸಕೊಂಡಿದ್ದ. ಹೆದರಿಕೆ ಒಂದು ಕಡೆ. ಸಂತೋಷ ಮತ್ತೊಂದು ಕಡೆ, ಆ ಹುಡುಗಿ ಒಳಗಿರುವಾಗಲೆ ಒಳಗೆ ಹೋಗಿ ಅಡಗಿಕೊಂಡರೆ ಹೇಗಾದೀತು. ? ಅಲೋಚಿಸಿದ ಅವನ ಸಾತಿ ಚಂದ್ಯಾನಿಗೆ ಸರಿಯಾದ ಮಾಹಿತಿ ಇಲ್ಲದಿರುವುದರಿಂದ ಹೇಳಿದ ಸಮಯಕ್ಕೆ ಸರಿಯಾಗಿ ಮಡುವುದು ಅನಿವಾರ್ಯ ವಾಯಿತು. ಆದರೆ ತಿಜೋರಿ ಕೋಣೆಯ ಬಗ್ಗೆ ಸರಿಯಾದ ಮಾಹಿತಿಯನ್ನು ಕೆಲೆ ಹಾಕುವುದನ್ನು ಸರಿಯಾಗೆ ಮಾಡಿದ್ದ. ಕುಸುಮಬಾಲ ಹಣದ ಚೀಲ ಒಯ್ಯುವುದು ತಡವಾಗಿದಕ್ಕೆ ರಂಗಾರೆಡ್ಡಿ ಒಳಗೆ ಓಡಿ ಬಂದಿದ್ದ. " ಎಮಮ್ಮ ಏಮಾಯಿಂದಿ." (ಏನಮ್ಮ ಏನಾಯ್ತು) ಎಂದು ಕೇಳಿದ. " ಏಮಿ ಲೇದು

ನಾನ, ವಸ್ತಾನು." (ಏನು ಇಲ್ಲಪ್ಪ ಬರ್ತ್ತೀದ್ದೀನಿ) ಅತನಿಗೆ ತೃಪ್ತಿಯಾಗುವ ಸಂಗತಿಯನ್ನು ಹೇಳಿದಳು. ರಂಗಾರೆಡ್ಡಿಯ ಬರುವಿಕೆಯಿಂದ ಜಂತಿಯಲ್ಲಿ ಎನೋ ಚುಚ್ಚುತ್ತಿದ್ದರೂ ಸಹಿಸಿಕೊಂಡು ಮಲಗಿದ್ದ ದಾಮುಗೆ ಒತ್ತರಿಸಿ ಒಂದಕ್ಕೆ ಬಂತು. ಆದರೆ ಹೊಯ್ಯವುದೆಲ್ಲಿ? ತಡೆದುಕೊಂಡು ರಂಗಾರೆಡ್ಡಿ ಹೊರಗೆ ಹೋಗುವವರೆಗೆ ಕಾಯ ತೊಡಗಿದೆ. ತಂದೆ ಮಗಳು ಆಚೆ ಹೋದದ್ದನ್ನು ಖಾತ್ರಿ ಮಾಡಿಕೊಂಡು ಜಂತಿಯ ಮೇಲಿಂದ ಇಳಿದು ನಿಧಾನಕ್ಕೆ ಹೊರಗಡೆಗೆ ಹೋದ.

ವಿಷಯವನ್ನು ಚಂದ್ಯಾಗೆ ಹೇಳಿದಾಗ ಚಂದ್ಯಾ ಬೂಮಿಯ ಮೆಲೆ ನಿಲ್ಲದಾಗಿದ್ದ. ಅವನ ಮುಂದಿನ ಕನಸುಗಳ ಬಗ್ಗೆ ಆಲೋಚನೆ ಮಾಡಿದ. ದಾಮು ಮಾತ್ರ ಬಲಿಪಾಡ್ಯದ ಅಮವಾಸ್ಯೆ ದಿನವೇ ಕೆಲಸ ಮುಗಿಸುವ ತನ್ನ ದೃಢ ನಿರ್ಧಾರವನ್ನು ಬದಲಿಸಲಿಲ್ಲ. ಮರುದಿನ ಮುಂಜೆಗೆ ಊರನ್ನು ಬಿಡುವ ಅಲೋಚನೆಯೊಂದನ್ನು ಸೃಷ್ಟಿಸಿದ. ಇದನ್ನು ಬೊದ್ಯಾನ ಮುಕಾಂತರ ರಂಗಾರೆಡ್ಡಿಗೆ ಕೂಡ ತಲುಪಿಸಿದ್ದ. ಹಬ್ಬ ಹೊರಟಿರಬಹುದೆಂದು ರಂಗಾರಡ್ಡಿ ಸುಮ್ಮನಾಗಿದ್ದ. ಅವತ್ತು ಸಂಜೆ ಚೆಂದ್ಯಾ ರಂಗಾರೆಡ್ಡಿಮನೆಗೆ ಬಂದು ದಾಮುನ ಬೆಟ್ಟಿಯಗುವುದ. ದಾಮು ಚೆಂದ್ಯಾನ ಕರೆದುಕೊಂಡು ಯಾರಿಗೂ ಗೊತ್ತಾಗದಂತೆ ಬಂಗಾರ ಮತ್ತು ನಾಣ್ಯವಿರುವ ಕೋಣೆಯ ಎದುರಿಗಿನ ದೊಡ್ಡದೊಂದು ಕೋಣೆಯಲ್ಲಿ ಒಟ್ಟಿರುವ ಹತ್ತಿ ರಾಶಿಯೊಳಗೆ ಮೂರು ದಿನಗಳ ವಾಸ. ಅವರ ಯೋಜನೆಯಂತೆ ಇಬ್ಬರೂ ಒಳ ಸೇರಿ ಕೊಂಡಿದ್ದರು. ಹತ್ತಿಯ ರಾಶಿಯಲ್ಲಿ ಜಾಗ ಮಾಡಿಕೊಂಡು ಹೊರಗಡೆ ನಡೆಯುವುದಷ್ಟೆ ಕಾಣುವಂತೆ ಮುಖ ತೆರೆದು ಇಡೀ ದೇಹವನ್ನು ಹತ್ತಿಯಲ್ಲಿ ಹುದುಗಿಸಿಕೊಂಡಿದ್ದರು. ರಾತ್ರಿ ಯಾರೂ ಇಲ್ಲದಿದ್ದಾಗ ಇವರ ಕೆಲಸ ಆರಂಭವಾಗಿತ್ತು. ಮನೆ ತುಂಬ ಆಳುಗಳು ಆಕಡೆಯಿಂದ ಈಕಡೆಗೆ ಪರುಸೊತ್ತಿಲ್ಲದ ಮಂದಿ. ಆ ಕಡೆ ಕೋಣೆಗೆ ಕನ್ನ ಕೊರೆಯುವುದು ಹರ ಸಾಹಸವೇ ಆಗಿತ್ತು. ರಂಗಾರೆಡ್ಡಿ ಬಂದು ಬೀಗ ಪರೀಕ್ಷಿಸಿದ ನಂತರವೇ ಎಲ್ಲ ಸ್ಥಬ್ದವಾಗುತ್ತಿತ್ತು. ಸರಿಯಾಗಿ ಗಮನಿಸಿದ ದಾಮು ಅವನು ಹೋಗಿದ್ದ ಅಂದವನೆ ಮೇಲೆದ್ದ ಹೊರ ಬಂದು ಗೋಡೆಯನ್ನು ಪರೀಕ್ಷಿಸಿದ ಎಲ್ಲಿ ಹೊಡೆದರೆ ಒಂದೇ ಏಟಿಗೆ ಗೋಡೆ ತೂತು ಬಿದ್ದು ಇವರು ಹೊರ ಬರಬಹುದು? ಇಡೀ ಮನೆಯ ಆಯಕಟ್ಟಿನ ಬೀಗಗಳನ್ನು ಪರೀಕ್ಷಿಸಿದ. ಚೆಂದ್ಯಾ ಮಲಗಿ ಗೊರಕೆ ಹೊಡೆಯುತ್ತಿದ್ದ. ದಾಮು ಕೆಲಸ ಮುಗಿಯುವವರೆಗೂ ನಿದ್ದೆ ಮಾಡಬಾರೆದೆಂದು ಶಪಥ ಮಾಡಿದ್ದ. ತಿಜೋರಿ ಪಕ್ಕದ ಹೊರಗೊಡೆಯನ್ನು ಬಾರಿಸಿದ. ಹದಿನಾರು ಇಂಚಿನ ಗೋಡೆ ಎಲ್ಲಿಯೂ ದುರ್ಬಲದ ಸದ್ದೆ ಕೇಳಿಸದಾಗಿತ್ತು. ಎಲ್ಲಿಯಾದರೂ ಕಾಲಮೇಲೆ ಕಲ್ಲು ಹೆಚ್ಚುಕಮ್ಮಿಯಾಗಿರುತ್ತದೆಂಬುದು ಅವನಿಗೆ ಗೊತ್ತಿತ್ತು. ಅದನ್ನು ಕಂಡು ಹಿಡಿಯುವುದರಲ್ಲಿ ಬಹಳ ನಿಪುಣನಾಗಿದ್ದ ದಾಮು ಗೋಡೆಯನ್ನು ಗಮನಿಸುತ್ತಲೆ ಬಂದ. ಒಂದು ಜಾಗದಲ್ಲಿ ಗೋಡೆ ಉಬ್ಬಿರುವುದು ಕಂಡು ಬಂತು. ದಾಮುಗೆ ಜಗತ್ತಿನ ಎಲ್ಲ ಸುಖ ಸಿಕ್ಕಷ್ಟು ಸಂತೊಷವಾಗಿತ್ತು. ಆ ಜಾಗವನ್ನು ಮುಟ್ಟಿದ. ಮೆಲ್ಲಗೆ ಬಡಿದ. ಡಬ್‌ಡಬ್ ಸದ್ದು ಮಾಡಿತು. ಆ ಜಾಗವನ್ನು ಗುರಿತಿಸಿಕೊಂಡು ಯಾರೋ ಒಳಗೆ ಬಂದಂತೆ ಹೆಜ್ಜೆ ಸಪ್ಪಳವಾಯಿತು. ಹೆದರಿಕೆಯಿಂದ ಜೀವ ಹೋದಂತಾಯಿತು. ಎಷ್ಟೆ ವೇಗದಿಂದ ಹೋದರು ಹತ್ತಿ ರಾಶಿಯನ್ನು ತಲುಪಲು ಕನಿಷ್ಟ ಎರೆಡು ಇಲ್ಲವೆ ಮೂರು ನಿಮಿಷಗಳಾಗುತ್ತವೆ. ಬಂದ ವ್ಯಕ್ತಿಗೇನಾದರೂ ಕಂಡರೆ ಒಂದೇ ಏಟಿಗೆ ಪ್ರಾಣ ಹೋಗುತ್ತದೆ. ಕ್ಷಣ ಕಾಲ ಗಲಿಬಿಲಿಗೊಂಡ. ಹೆಜ್ಜೆ ಸಪ್ಪಳ ಹತ್ತಿರವಾಗುತ್ತಿದ್ದಂತೆ ಅವನ ಆರನೇ ಜ್ಞಾನ ಜಾಗೃತ ಗೊಂಡಿತ್ತು. ಸರ್ರನೆ ಕಂಬ ಹತ್ತಿ ತೊಲೆ

ನಾಗೊಂದಿಗೆ ಮೆಲೆ ಮೂರ್ತಿಯ ಹಾಗೆ ಅಡ್ಡ ಮಲಗಿದ. ಲಾಲು ಹಿಡಿದು ಒಳಗೆ ಬಂದಿದ್ದ ರಂಗಾರೆಡ್ಡಿಯ ಖಾಸಾ ಮನುಷ್ಯ ಗೊಪಾಲ ರೆಡ್ಡಿ ಸಂಬಂಧಿಕ. ಮತ್ತು ನಂಬಿಕೆಯ ಬಂಟ. ಅವನೊಬ್ಬನಿಗೆ ಯಾವಾಗಲೂ ಆ ಕೋಣೆಗೆ ಪ್ರವೇಶ ವಿತ್ತು. ಅವನಿ ನಿದ್ದೆಯಿಂದ ಎಚ್ಚರವಾದಗೊಮ್ಮ ಆ ಕೋಣೆಯೊಳಗೆ ಸುತ್ತಾಡಿ ನೋಡಿ ಹೋಗುವುದು ವಾಡಿಕೆಯಾಗಿತ್ತು ಅಂತೆಯೇ ಗೋಪಾಲರಡ್ಡಿ ಬಂದ. ನೋಡಿದ ಯಾರು ಕಾಣದಾಗ ವಾಪಾಸು ಹೊರಟ.

"ಈ ರಾಕ್ಷಸನ ಕೈಯಿಂದ ಸದ್ಯ ಪಾರಾದೆ." ಅಂದುಕೊಂಡ ದಾಮು ಮುಂದೆ ತಾನು ಒಂದು ಸುತ್ತ ಯೋಜನೆಯ ಮುಂದಿನ ಭಾಗ ವೆಂಬಂತೆ ಅಡ್ಡಾಡಿ ನೋಡಿದ. ಮಂದಿ ಏಳುವುದು ಖಾತ್ರಿಯಾಗುತ್ತಿದ್ದಂತೆ ಹತ್ತಿ ರಾಶಿಯನ್ನು ಮತ್ತೆ ಎರಿದ. ಸಣ್ಣಗೆ ಗೊರಕೆ ಹೊಡೆಯುತ್ತಿದ್ದ ಚಂದ್ಯಾನನ್ನು ತಿವಿದು ಎಬ್ಬಿಸಿದ. "ಏಯ್ಏಯ್ ಯಾರಲೆ." ಜೋರು ಬಾಯಿ ಮಾಡಿದ. ಬಿಗಿಯಾಗಿ ಬಾಯಿ ಮುಚ್ಚಿದ ದಾಮು. ಅವಾಗ ನಾವು ಎಲ್ಲಿದ್ದೀವಿ ಎನ್ನುವ ಸತ್ಯ ಗೊತ್ತಾಗಿ ಅವನಿಗೆ ಕೆಟ್ಟದಾಗಿ ಅನಿಸಿ ಸುಮ್ಮನಾದ. ಮುಂದಿನ ಯೋಜನೆಯನ್ನು ಪಿಸುಮಾತಿನಲ್ಲೆ ಬನದಲಾಯಿಸಿಕೊಂಡ ಚೆಂದ್ಯಾ ದಾಮು. ಬಲಿಪಾಡ್ಯಾದ್ದು ಅಮಾವಾಸ್ಯೆ ಕರಾಳ ರಾತ್ರಿಯನ್ನೆ ಕಾಯತೊಡಗಿದರು. ಅವರ ಯೋಜನೆ ಪ್ರಕಾರ ಇಡೀ ರಾತ್ರ ಲಕ್ಷ್ಮಿ ಪೂಜೆ ನಡೆಯುತ್ತದೆ. ಎಷ್ಟೇ ಎಚ್ಚರವಾಗಿರ್ತೀನಿ ಅಂದ್ರನುವೆ ನಸುಕಿನಲ್ಲಿ ಮೂಡಣ ದಿಕ್ಕಿಗೆ ಬೆಳ್ಳಿ ಚುಕ್ಕಿ ಕಾಣುವ ಸಮಯದಾಗ ಒಂದು ಜಂಪು ಕಣ್ಣು ಎಳೆಯುವುದ ದಿಟವೆ. ಅವಾಗ ಎಂಥಹ ನಿದ್ದೆ ಬಾರದವನ ಕಣ್ಣು ಮಬ್ಬುಗಟ್ಟುತ್ತವೆ. ಇಡೀ ರಾತ್ರಿ ನಿದ್ದೆ ಗೆಟ್ಟವರು ಕಣ್ಣು ಮುಚ್ಚಿರುತ್ತಾರೆ. ಕ್ಷಣಾದ್ರದಲ್ಲಿ ಮಾಡೋ ಕೆಲ್ಸ ಮಾಡಿ ಪರಾರಿಯಾಗಬೇಕು. ಸಿಗಾಕಿಕೊಂಡರೆ ಸಾವೇ ಗತಿ. ಹಾಗಂತ ದೃಢ ನಿಚ್ಚೆಯಮಾಡಿದ ಇಬ್ಬರು ಮನಿ ಮಂದಿ ಸವರಾತ್ರಿಯೊಳಗೆ ಗಾಢ ನಿದ್ದೆ ಮಾಡುತ್ತಿರುವ ಸಮಯದೊಳಗೆ ಸ್ವಲ್ಪ ಸ್ವಲ್ಪವೇ ಗೋಡೆಯನ್ನು ಸಡಿಲುಸುತ್ತಿದ್ದರು ಮತ್ತೆ ಸದ್ದು ಆದ ತಕ್ಷಣ ಜಗಲಿ ಇಲ್ಲ ಹತ್ತಿ ರಾಶಿ ಮೇಲರಗಿಬಿಡುತ್ತಿದ್ದರು. ಊಟ ತಿಂಡಿ ಏನೂ ಇಲ್ಲದೆ ಹತ್ತಿಯಲ್ಲೆ ಒಂದು ಮೂಲೆಯಲ್ಲಿ ಉಚ್ಚೆ ಹೊಯ್ದುಕೊಂಡು ಆ ಘಟು ವಾಸನೆಯಲ್ಲೆ ಕಾಲ ಕಳೆಯುವುದು ಯಮಯಾತನೆಯಾದರೂ ಮಾಲಿಗಾಗಿ ಎಲ್ಲವನ್ನು ಮರೆತಿದ್ದರು. ಮುಂಜಾನೆ ಐದು ಗಂಟೆಗೆ ಮನೆಯ ಹೆಂಗಸಲು ಸ್ನಾಮಡೋಸಕ್ಕೆ ಮನೆಗುಡಿಸ ಸಾರಿಸಿ ನೀರು ರಂಗೋಲಿ ಹಾಕಿ ಸಿಗರಿಸುವುದರೊಳಗೆ ರಂಗಾರೆಡ್ಡಿ ಸ್ನಾನಮಾಡಿ ತಯಾರಿಯಗಿದ್ದ. ಮುಂಚಿನ ಬಾಗಿಲನಿಂದ ಇಪ್ಪತ್ನಾರನೆ ಕೋಣೆ ಒಳಗೆ ಬರುವ ಹೆಬ್ಬಾಗಿಲಿಗೂ ಈ ಹಣದ ಕೋಣೆಗೂ ಅವಿನಾಭಾವ ಸಂಬಂದವಿತ್ತು. ಹೆಬ್ಬಾಗಿಲು ಪ್ರವೇಶಿಸಿದರೆ ಎಡಕ್ಕೆ ತಿರುಗಿ ಮುಂದೆ ಬಲಕ್ಕೆ ತಿರುಗಿದರೆ ನೇರವಾಗಿ ಹಬ್ಬಾಗಿಲಿಗೆ ಮುಖಮಾಡಿಯೇ ತಿಜೋರಿಯ ಕೋಣೆ ಆದರೆ ಇದೆ ತಿಜೋರಿ ಎಂದು ಪತ್ತೆ ಹಚ್ಚುವುದಕ್ಕೆ ಒಂದು ತಿಂಗಳಾದರೂ ಬೇಕು. ರಂಗಾರೆಡಿಯ ತಾತನ ಮತ್ತಾನ ಕಾಲದಿಂದಳು ದೊಡ್ಡ ಮನೆಯ ಅಬಿವೃದ್ಧಿ ಪಡಿಸುತ್ತಾ ಕೋನೆಯ ಸುತ್ತಲು ಬಂದೋಬಸ್ತ್ ಗೋಡೆಯನ್ನು ಕಟ್ಟತ್ತಾ ಬಂದಿದ್ದರು. ಅಂಥಹ ಭದ್ರಗೋಡೆಯ ಪೊಳ್ಳು ದಾಮುಗೆ ಕಂಡಿದ್ದು ಸೋಜಿಗವೇನಲ್ಲ. ದಾಮುನ ಹದ್ದಿನ ಕಣ್ಣಿಂದ ತಪ್ಪಿಸಿಕೊಳ್ಳುವ ಹದ್ದು ಈಜಗತ್ತಿನಲ್ಲೆ ಇಲ್ಲ. ಕನ್ನ ಹಾಕುವುದರಲ್ಲಿ ಅಷ್ಟು ನಿಷ್ಣಾತನಾಗಿದ್ದ. ಕೆಲ ಹೆಂಗಸರು ಬಂದು ಆಭರಣಗಳನ್ನು ತೆಗೆದುಕೊಂಡು ಹೋದರು. ಅದನ್ನು ಬಿಟ್ಟರೆ ಈ ಕೋಣೆಯತ್ತ ಯಾರು ಸುಳಿಯಲೇ ಇಲ್ಲ. "ನಡಿಯಲೆ ಯಾರು ಇಲ್ಲ." ಚೆಂದ್ಯ ಪಿಸುಮಾತಿನಲ್ಲಿ

ಹೇಳಿದ. "ಮಗನಲ್ಲಿ ನೋಡು" ರಂಗಾರ ರಡ್ಡಿ ಹೆಂಡತಿ ಮಗಳು ಮಡಿಯುಟ್ಟು ಪೂಜಾ ಸಾಮಾನು ಹಿಡಿದುಕೊಂಡು ಲಕ್ಷ್ಮಿ ಪೂಜೆಗೆ ಆಗಮಿಸಿದ್ದರು. ಚೆಂದ್ಯಾ ನಾಲಿಗೆ ಕಚ್ಚಿಕೊಂಡ. ಒಳಗೆ ಹೋದವರು ಮದ್ಯಾಹ್ನದ ಎರಡು ಗಂಟೆಗೆ ಹೊರಗಡೆ ಬಂದಿದ್ದರು. ಯಾರೊಬ್ಬರಿಗೂ ಆ ಜಾಗಕ್ಕೆ ಪ್ರವೇಶವೇ ಇರಲಿಲ್ಲ. ಅಂದು ಮುಂಚಾನೆ ತೆಗೆದ ಬಾಗಿಲು ಮರುದಿನ ಸಂಜಾನೆ ಅದೇ ಸಮಯಕ್ಕೆ ಮುಚ್ಚಲಾಗುತ್ತಿತ್ತು. ಆ ಸಮಯದೊಳಗೆ ಲಕ್ಷ್ಮಿ ದಕ್ಕಿದಳೊ ದಾಮು ಗೆದ್ದ. ಇಲ್ಲದಿದ್ದರೆ ರಂಗಾರೆಡ್ಡಿ ಗೆದ್ದಂತೆ. ಇಡೀ ರಾತ್ರಿ ಕೋಣೆಯನ್ನು ಬಿಟ್ಟು ಉಳಿದೆಲ್ಲಾ ಕೋಣೆಯಲ್ಲಿ ಮಂದಿ ತುಂಬಿಕೊಂಡು ಗದ್ದಲ ಮಾಡುತ್ತಿದ್ದರು. ಹುಡುಗರ ಪಟಾಕಿಸದ್ದಿಗೆ ಸರಿಯಾಗಿ ಗೋಡೆಗೆ ಪೆಟ್ಟು ಕೊಟ್ಟು ಒಂದೋಂದೆ ಕಲ್ಲುಗಳನ್ನು ಕೆಳಗುರುಳಿಸಿದರು. ಒಬ್ಬ ಮನುಷ್ಯನ ಗೋಣು ನಿರಾಳವಾಗಿ ತಡಾಯಿವಂತಹದೊಂದು ಬೋನು ಮಾಡಿದವರೆ ಅಲ್ಲೆ ಇದ್ದ ಚೀಲಗಳಲ್ಲಿ ನಾಣ್ಯಗಳನ್ನು, ಬಂಗಾರದ ಒಡವೆಗಳನ್ನು ತುಂಬಿ ಬಾಯಿ ಜೋಡಿಸಿದರು. ಹೆಬ್ಬಾಗಿಲಲ್ಲಿ ನಾಯಿಯೊಂದು ವಿಪರೀತ ಗದ್ದಲ ಮಾಡತೊಡಗಿತ್ತು. ರಂಗಾರೆಡ್ಡಿ ಅವನ ಆಳು ಚಿಕ್ಕನನ್ನು ಕರೆದು, "ಏಮದಿ, ಏಮಾಯಿಂದ ಕೊಂಚ ಸೂಡು." ಅಂದವನೆ ಒಳಗೆ ಹೋದ. ನಾಯಿ ಅವನು ಬಂದು ಹೋದರು ಒದರುವುದನ್ನು ನಿಲ್ಲಿಸಲಿಲ್ಲ. ಯಾರೋ ಅದಕ್ಕೆ ಏನೋ ಆಗಿರಬೇಕೆಂದು ಆಳುಗಳು ಗಮನ ಹರಿಸುವುದನ್ನು ಬಿಟ್ಟರು. ನಾಯಿ ಮತ್ರ ಕೊರಳಿಗೆ ಕಟ್ಟಿದ ಕಬ್ಬಿಣದ ಚೈನನ್ನು ಕಿತ್ತಿಕೊಂಡು ಬರುವಂತೆ ಬೊಗಳತೊಡಗಿತ್ತು. ಆಕಸ್ಮಿಕ ಅದನ್ನೇನಾದರೂ ಕೈ ಬಿಟ್ಟಿದ್ದರೆ ದಾಮು ಬದುಕನ್ನೆ ನಾಶ ಮಾಡಿಬಿಡುತ್ತಿತ್ತು. ಅವನ ಅದೃಷ್ಟವೋ ಏನೋ, ರಂಗಾರಡ್ಡಿಯ ಅಳಿಯ ಸೋಮ ರೆಡ್ಡಿ, "ಏಯ್ ದೋಂಗನಾ ಕೊಡಕ ಎಂಟಿರಾ ಏಮಯಿಂದಿರಾ ನೀಕು, ಲೇ ದುರ್ಗಾ ತೀಸ್ಕೋ ಪೊ ಅಕ್ಕಡ." ಅಂದಿದ್ದ, ಆಳು ದುರ್ಗಾ ಕಟ್‌ಮಸ್ಥಾದ ಆಳು. ಅದು ಎಷ್ಟು ಜೋರಾಗಿ ಬೊಗಳಿದರೂ ರಂಪಾಟ ಮಾಡಿದರೂ.ಹಿಡಕೊಂಡು ತೋಟಕ್ಕೊಯ್ದು ಬಿಟ್ಟ. ರಂಗಾರೆಡ್ಡಿಯ ನಾಯಿ ಬೊಗಳುವುದನ್ನು ಕೇಳಿ ಮಂದಿ ಗಾಭರಿಯಿಂದ ಎದ್ದು ಹೊರ ಬಂದಿದ್ದರು. "ಏಮಿರಾ ದುರ್ಗಾ ಎಮಾಯಿಂದ ಪಾಪ" ಎಂದು ಒಬ್ಬ ಕೇಳಿದ. "ಏಮು ಲೇದನ್ನ ಅಕ್ಕಡ ಚೆನ್ನ ಪಾಪು ಮಂದಿ ಅಂಟೆ." ಏನೋ ಸಾಬೂಬು ಹೇಳಿ ಹೊಲಕ್ಕೆ ಹೋಗಿ ಬಿಗಿಯಾಗಿ ಕಟ್ಟಿದ. ಕಡು ರಾತ್ರಿಯೊಳಗಿನ ಪ್ರಕ್ರಿಯೆಗಳೂ ಕೂಡ ಮಹತ್ವ ಪಡೆದಿದ್ದವು.

ಆಕಡೆಯಿಂದ ಈ ಕಡೆಗೆ ಮಂದಿಯ ತಿರುಗಾಟ ಹೆಚ್ಚಾಗಿತ್ತು. ಆದು ಕ್ರಮೇಣ ಬೆಳಗಾಮುಂಜಾನೆ ನಾಲ್ಕು ಗಂಟೆಯ ಸಮಯಕ್ಕೆ ಕಡಿಮೆಯಾಗಿತ್ತು. ಮಂದಿ ಅಲ್ಲಲ್ಲೇ ಕುಂತಲೆ ನಿದ್ದೆಗೆ ಜಾರಿದರು. ಇನ್ನು ಕೆಲವರು ಅಲ್ಲೆ ಉರುಳಿದ್ದರು. ಮೀನಿಗೆ ಮತ್ತಿನ ಎಣ್ಣೆ ಹಾಕಿ ಗುಂಡಿಯಿಂದ ಹಿಡುವಂತಾಗಿತ್ತು. ಅದನ್ನ ಮೊದಲೆ ಊಹಿಸಿದ್ದ ದಾಮು ಚೆಂದ್ಯಾ ಕ್ಷಣಾರ್ಧದಲ್ಲಿ ಈಡೀ ತಿಜೂರಿಯನ್ನೆ ಲೂಟಿ ಮಾಡಿ ಪರಾರಿಯಾಗಿದ್ದರು. ದೇವರ ಮೂರ್ತಿಗಳನ್ನು ಬಿಟ್ಟರೆ ತಿಜೂರಿಯೊಳಗಡೆ ಏನೇನು ಇಲ್ಲದಂತ ಖಾಲಿಯಾಗಿತ್ತು. ಎರೆಡು ಚೀಲ ಬೆಳ್ಳಿ ನಾಣ್ಯ, ಒಂದು ಚೀಲ ಬಂಗಾರದ ಒಡೆವೆ, ಕನ್ನ ಹಾಕಿದ್ದ ಜಾಗಕ್ಕೆ ಜೋರಾಗಿ ಹಾರಿಯಿಂದ ಗುದ್ದಿ ಕಲ್ಲು ಆಚೆ ಬಿಳುವಂತೆ ಮಾಡಿ ಚೀಲ ಸಾಗಿಸಿ ನಂತರ ಇಬ್ಬರೂ ದಾಟಿಕೊಂಡು ಹಿಂತಿರುಗಿಯೂ ನೋಡದಂತೆ ದಾರಿಗಳನ್ನು ಬದಲಿಸುತ್ತಾ ತಾಂಡವನ್ನು ತಲುಪುವ ಯೋಚನೆ ಆವರದಾಗಿತ್ತು. ರಂಗಾರೆಡ್ಡಿ ಮನೆಯಿಂದ ಐದಾರು ಮೈಲಿ ದಕ್ಷಿಣಕ್ಕೆ ನಡೆದರು ದೊಡ್ಡ ಕಾಡು ಆಕಾಡು ಸೇರಿದರೆ

ಎಂಥಹವರು ಬಂದರು ಹುಡುಕಲು ಅಸಾಧ್ಯವ ಎಂಬುದು ದಾಮುಗೆ ಗೊತ್ತಿತ್ತು. ಧೃವತಾರೆ ಮೂಡುವ ಮುನ್ನ ಕಾಡನ್ನು ಸೇರಲು ಹೆಣಬಾರ ದುಡ್ಡು, ಬಂಗಾರ ಒಡವೆಗಳನ್ನು ಒಜ್ಜೆಯಾದರೂ ಅದೇಗೋ ನಿಭಾಯಿಸಿಕೊಂಡು ಆರ್ಧ ಓಡುತ್ತಾ ನಡೆಯುತ್ತಾ ಕಾಡನ್ನು ಪ್ರವೇಶಿಸಿದ್ದರು. ಕಾಡು ಇನ್ನೇನು ಆರಂಭವಾಗುತ್ತದೆ ಎನ್ನುವಾಗ ದಾರಿಯಲ್ಲಿ ದಾಮು ಮನುಷ್ಯರು ಎಲ್ಲಿಯಾದರು ಬಯಲಿಗೆ ಕುಂತಾರೆಯೇ ಎಂದು ಹುಡುಕಿದ. ಎಲ್ಲೂ ಕಾಣದಕ್ಕೆ ಅವನೇ ಕೂತು ಎರೆಡುಕಾಲಿನ ಪಾದದಲ್ಲಿ ಅದನ್ನು ತುಳಿದು ಮುಂದೆ ಅಣತಿ ದೂರದಲ್ಲಿದ್ದ ನೀರಿನ ಹಳ್ಳದಲ್ಲಿ ಪಾದತೊಳೆದು ಸ್ನಾನ ಮಾಡಿಕೊಂಡು ದಕ್ಷಿಣ ದಿಂದ ಪೂರ್ವಕ್ಕೆ ನಡೆದ. ಚೆಂದ್ಯಾನು ಹಾಗೆ ಮಾಡಿದ. ಸೂರ್ಯನ ಕಿರಣಗಳು ಸ್ಪರ್ಶಮಾಡುದಕೆ ಪೂರ್ವದಲ್ಲಿ ಅವರು ಅಗಲೆ ಸುಮಾರು ದೂರ ಸಾಗಿದ್ದರು. ವರ್ಷಾನು ಗಟ್ಟಲೆ ಕುರಿಮಂದೆಯಿಂದ ಕರಿಗಳನ್ನು ತಂದು ತಿಂದು ಸಾಕಾಗಿತ್ತು. ಈಗ ಕೆಲಸಕ್ಕೆ ಬಂದಿತು. ಅವರ ಗಡಿ ಇನ್ನೂ ಬಹಳ ದೂರ ಉಳಿದಿತು. ಹಗಲು ಯಾರಕಣ್ಣಿಗೆ ಬಿದ್ದೇವು ಅಂತ ಯೋಚನೆ ಮಾಡಿ ದೊಡ್ಡದೊಂದು ಮರವನ್ನು ನೋಡಿ ಅದರ ಮೇಲೆ ಕುಳಿತು ಕಾಲಕಳೆಯುವುದು ಪಾಡೆಂದು ಬಗೆದ ದಾಮು ಕೈಯಾನ ಹಗ್ಗವನ್ನು ಕೊಂಬಿಗೆ ಬಿಸಾಕಿ ಚೀಲಗಳನ್ನು ಮೆಲಿತ್ತಿದ. ಅವರು ನಾಕು ಚೀಲಗಳಲಿ ಇಡೀ ಮಾಲನ್ನು ಹಾಕಿಕೊಂಡು ಜಾಗ ಬಿಟ್ಟಿದ್ದರು. ನಾಕು ಚಿಲಗಳನ್ನು ಮರದಮೇಲೆ ಏರಿಸಿ ಯಾರೆ ಬಂದರೂ ಕಾಣದಂತೆ ಅಗಡಿಕೊಂಡು ಇಡೀದಿನ ಕುಳಿತರು.

ರಂಗಾ ರೆಡ್ಡಿಗೆ ಸುದ್ದಿ ತಿಳಿದಾಗ ಭೂಮಿ ಕುಸಿದಂತಾಯಿತು. "ಯವ್ವರೆ ದೊಂಗನ ಕೊಡಕ." ಅವೇಶದಿಂದ ಕೂಗಿದ. ಈಡೀ ಕೊಣೆಯಲ್ಲಿ ನಾಕು ದೇವರ ಬೆಳ್ಳಿ ಮೂರ್ತಿಗಳನ್ನು ಬಿಟ್ಟು ಸ್ವಚ್ಚ ಮಾಡಿರುವುದನ್ನು ನೋಡಿ ಆಸಮಾನ್ಯರು ಎಂದು ಅನಿಸಿತು. "ಯವರು, ಏ ಯವ್ವೃತ ನಾಕು ಕಾವಲ," ಕೂಗಾಡಿದ ರೆಡ್ಡಿ. ಇಡೀ ಊರೊಂದೂರಿಗೆ ಗರ ಬಡಿದಂತೆ ಮೌನವನ್ನಾವರಿಸಿತ್ತು. ಎಲ್ಲ ಎಡವಟ್ಟಾಯಿತು. ಎಂದು ಮನೆಯಲ್ಲಿ ಒಂದೊಂದೆ ಪ್ರಕರಣಗಳು ಹೊರ ಬಿದ್ದವು. ಬೊಂದ್ಯಾಲು ಹೌಹಾರಿದ್ದ. ಸೂಳಿ ಮಗ ದಾಮು ನಮ್ಮ ಮಂದಿಯವ ಅಂತ ನಂಬಿಸಿ ಹಿಂಗ ಮಾಡಿಹೋದ್ನಲ್ಲಾ. ರಂಗಾರೆಡ್ಡಿಗ ಸುದ್ದಿ ತಿಳಿದ್ರ ಬಂದೂಕಿಂದ ಗುಂಡುಹಾರಿಸಿ ನನ್ನ ಕೊಲ್ತಾನ. ಅವನ ಒಳಗಿನ ವಿಚಾರಗಳು ಅವನ್ನನ್ನು ಕಾಡತೊಡಗಿದವು. ಯಾರಿಗೂ ಹೇಳೋ ಹಾಗಿಲ್ಲ, ಬಿಡುವ ಹಾಗಿಲ್ಲ. "ರೇ ದುರ್ಗಾ ಪಾಪಕು ತೀಸ್ಕೊಂಡು ಪೋರಾ ನೀ ಯಬ್ಬ." (ನಾಯಿಯನ್ನು ತಗೊಂಡ ಓಡು) ಅಂದ ದುರ್ಗಾ ನಾಯಿಯನ್ನು ಬಿಚ್ಚಿಕೊಂಡು ಬರಾಕ ಹೊಲಕ ಹೋದ. ಈ ಕಡಿಗೆ ತನ್ನ ಪೂರ್ವಜರ ಸಂಪತ್ತಿನ ತಾನು ಕಳೆದೆ ಎನ್ನುವ ಯೋಚನೆಯೊಳಗೆ ಅವನ ಮೆದುಳಲ್ಲಿ ನರ ಹರಿದು ಅರ್ಧಗಂಟೆಯಲ್ಲೆ ರಂಗಾರೆಡ್ಡಿ ಹೆಣವಾಗಿದ್ದ.

ದೂರದಲ್ಲಿ ಎಲ್ಲೀ ರಂಗಾರಡ್ಡಿ ನಾಯಿ ಬೊಗಳೋದು ಕೇಳಿಸಿ ಚೆಂದ್ಯಾ ಪಂಚೆ ಒಳಗ ಉಚ್ಚಿಹೊಯ್ಕಂಡ, " ಲೇ ಬೇವರ್ಸಿ ಸೂಳಿಮಗನ, ಪಂಚೆ ಎತ್ತಿ ನಿಕ್ಕರ ಸರಸಬಾರದ?" ರೇಗಿದ ದಾಮು. " ಸುಮ್ಮಕಿರೋ ನಿಮಾಪ್ನ, ಅವನೌವ್ವನ ಆ ದೆವ್ವದಂತ ನಾಯಿನ ನೆಪ್ಪು ಮಾಡಿಕೊಂಡ್ರನಾ ಉಚ್ಚೆ ಬರುತ್ತದೆ. ಅದು ಬೊಗೊಳೋದು ಕೇಳಿದ್ರ." ಸಮಜಾಯಿಷಿ ನೀಡಿದ. ಎಲ್ಲೋ ದೂರದಲ್ಲಿ ನಾಯಿ ಬೊಗಳೋದು ಕಾಡಿನಲ್ಲಿ ಕೇಳಾಕ ಹೇಗೆ ಸಾಧ್ಯ,ದಾಮೂಗೂ ದಟ್ಟವಾದ

ಅನುಮಾನ ಕಾಡಿತು. ಎಲ್ಲೆರ್ಯಾ ರಂಗಾರೆಡ್ಡಿ ನಾಯಿ? ಅನುಮಾನ ಪಟ್ಟ. ಯಾವಾಗಲು ನಾಯಿಗೆ ದಿಕ್ಕು ತಪ್ಪಿಸುವ ಕ್ರಮ ಮರೆಯದೆ ಅನುಸರಿಸುತ್ತಿದ್ದರು. ಈಗ ಆಗಿರಲಿಲ್ಲ. ರೆಡ್ಡಿ ನಾಯಿ ಅಷ್ಟು ಮೀತಿ ಮೀರಿದ್ದು. ಇಬ್ಬರು ಮನಸ್ಸಿನಲ್ಲಿ ಅಂದುಕೊಂಡರು. ಸದ್ದು ನಿಂತಿತು. "ನಾ ಹೇಳಿದ ಬ್ಯಾಡಲೆ ಇದು, ಯಾಕೋ ದೊಡ್ಡ ಗಂಡಾತರ ಕಾಯಕ ಹತ್ಯಾದ ಅಂದ್ರ ನೀ ನನ್ನ ಮಾತೆಲ್ಲಿ ಕೇಳ್ತಿ. ಈಗ ಅನುಬೋಸು." ಚೆಂದ್ಯಾ ಸಿಟ್ಟಾದ. " ಯಾಕ ಸುಕಾಸುಮ್ಮನೆ ಒದ್ರಾಡ್ತಿ, ನಾಯಿ ಸೊಲ್ಲು ಅಡಗ್ತು ನೋಡು, ಇನ್ನ ಅಮಮಾ ಅಂದ್ರ ಎರೆಡು ಮೂರು ಗಂಟಿಗೆ ಸೂರ್ಯ ಮುಳುಗುತಾನ. ಇಲ್ಲಿಂದ ಬಿಟ್ರ ಊರು ಗಡಿಮಟ ನಿಲ್ಲಂಗಿಲ್ಲ." ಸಮಾಧಾನ ಪಡಿಸಿ ಮರದ ಮೇಲೆ ಕಣ್ಣು ಮುಚ್ಚಿ ನಿದ್ದೆ ಮಾಡುವಂತೆ ಹೇಳಿದ. ಚೆಂದ್ಯಾನಿಗೆ ದಾಮೂ ಮೇಲೆ ನಂಬಿಕೆ ಇತ್ತು. ಹಗಾಗಿ ಅವನ ಹಿಂದೆ ಬಿದ್ದಿದ್ದ. " ನಮ್ಮಪ್ಪ ನಮ್ಮತಾಯಿ ಮಹಾಕಾಳಿ. ಸೇವಾಭಾಯ್, ಮರಿಯಮ್ಮ ಇದೊಂದಪ ಹೆಂಗಾರ ಮಾಡಿ ಪಾರು ಮಾಡ್ರಿ, ಇನ್ನೊಂದಪ ಈ ಹಾಳು ಮನಿಯೋನ್ ಕೂಡ ಎಲ್ಲೂ ಹೋಗಲ್ಲಂದ್ರೆ ಹೋಗಲ್ಲ." ಮೆಲ್ಲಗೆ ಹೇಳಿ ಕಣ್ಣು ಮುಚ್ಚಿ ನಿದ್ದೆ ಮಾಡುವ ನಾಟಕ ಮಾಡಿದ.

ತಾಂಡದ ಮಂದಿ ತಿಂಗಳಾದರೂ ಬಾರದ ಚೆಂದ್ಯಾ, ದಾಮುನ ಬಗ್ಗೆ ಚಿಂತಿಗೀಡಾದ ಅವರ ಹೆಂಗಸರಿಗೆ ಅನುಕಂಪ ತೋರಿದರು. "ಕಳ್ರ ಹೆಂಡ್ರು ಯಾವತ್ತಿದ್ರು ಮುಂಡೇರೆ, ಸಮಾಧಾನ ಮಾಡಿಕೊಳ್ರವ್ವ , ನಿಮ್ಮ ಹಣೆಬರದಾಗ ಹಿಂಗಂತ ಬರದಿರ್ದ ಯಾರೇನು ಮಾಡಾಕ ಆದೀತು. ಹೋಗಿ ಆರು ತಿಂಗಳಮ್ಯಾಲಾತು. ಇನ್ನು ಬರಲಿಲ್ಲ ಅಂದ್ರ ಯಾರೋ ಇಬ್ಬರನ್ನೂ ಹಿಡಿದು ಎಡೆ ಒಡದಾರ ಬಿಡು." ಹಾಲ್ಯಾ ನಾಯಕನ ಹೆಂಡತಿ ಚಾವಲಿ ಹೇಳಿ ಸಮಾಧಾನ ಮಾಡಿದಳು. ದಾಮೂ ಹೆಂಡ್ತಿ ಸೋಮ್ಲಿ ಮದವಿಯಾದಾಗಿಂದ ಈಮಾತು ಕೇಳಿಕೇಳಿ ಕಠಿಣ ಹೃದಯಿ ಆಗಿದ್ದಳು. ಆದದ್ದ ಆಗಲಿ ಈಗೇನು ಅದಾನ, ಇಲ್ಲ ಬಂದನಂದ್ರ ಈರ್ತಾನ ಸತ್ತ ಹೋಗಿದ್ರ ಸತ್ತಾನಂತ ತಿಳಕೊಳ್ಳುತೀನಿ ಎಂದು ದೃಢ ನಿಚ್ಚಯ ಮಾಡಿದ್ದಳು. ಆದ್ರ ಮನೀ ತುಂಬಾ ಕಿಚೋ ಅನ್ನೋ ಮಕ್ಕಳ ಕಾರಖಾನೆ ತಯಾರಿಸಿ ಹೋಗ್ಯಾನಲ್ಲ ಹಾಳು ಮನಿಯೋನು ಅವುಗಳ ಹೊಟ್ಟಿ ಬಟ್ಟಿಗೆ ಹಾಕೋನು ಯಾರು? ಅದೊಂದೆ ಅವಳ ಚಿಂತೆ. ಕಳ್ಳತನಕ್ಕ ಹೋಗೋದಿನ ನಿದ್ದ ಮಾಡ್ತಿರಲಿಲ್ಲ ರಾತ್ರಿ ಇಡೀ ಕಾಡಿಸೋನು. ಹಂಗಾಗೆ ಆರುತಿಂಗಳಿಗೊಮ್ಮ ಗರ್ಭವತಿಯಾಗಿ ಐದಾರು ಮಕ್ಕಳನ್ನ ಹೆರೋ ಹಂಗಾತು. ಸೋಮ್ಲಿ ಗಂಡನ ಮಕ್ಕಳ ಯೋಚನೆಯಿಂದ ಹೊರಗ ಬರಾಕ ಒದ್ದಾಡಿದಳು. ದಿನ ಬೆಳಕ ಹರದ್ರ ಚೆಂದ್ಯಾನ ಹೆಂಡ್ತಿ ಸಾಮಿ, ಸೋಮ್ಲಿ ಕೂಡ ಕಾಡಿಗೆ ಹೋಗಿ ಕಟ್ಟಿಗಿ ಹೊರೆ ತಂದು ಗುಡಿಕೋಟೆ ಊರೊಳಗ "ಕಟ್ಟಿಗವ್ವಾ. . ." ಕೂಗಿ ಮಾರಿ ಬಂದ್ರ ಮಕ್ಕಳ ಹೊಟ್ಟಿ ತುಂಬುತ್ತಿತ್ತು. ಇಲ್ಲಿಕ್ರ ಉಪವಾಸನೆ ಗತಿ. ಗಂಡ ದೊಡ್ಡ ಕಳ್ಳ, ಲೂಟಿ ಮಾಡಿದ್ರ ತಳಬುಡಾನೆ ಬಾಚುತ್ತಿದ್ದ. ಆದ್ರ ತಂದಿದ್ದನ್ನು ಸೂಳಿಗೆ ಇಲ್ಲಂದ್ರ ಮತ್ಯಾರಿಗೋ ಸುರಿತಿದ್ದ. ಸೋಮ್ಲಿ, ಸಾವಿ ನಿಕೃಷ್ಟವಾಗಿ ಹಾಳ್‌ಮನೀವು ಹೋದ ದಾರಿಗೆ ಬರದಂಗ ಅಗಬಾರದ ಅಂತ ಶಾಪ ಕೂಡ ಹಾಕಿದ್ರು. ಸೂಳಿ ಮಕ್ಕಳ ನಸೀಬ ಗಟ್ಟಿ ಇರಬೇಕಾರ ಯಾರೇನು ಮಾಡಿದರ ಏನಾದೀತು. ಅವರು ಅಂತ ಯೋಚನೆ ಮಾಡಿದ ದಿನಾನೂ ಪ್ರತ್ಯಕ್ಷರಾಗುತ್ತಿದ್ದರು.

ಸೌರಾತ್ರಿ, ಮಂದಿ ಗಾಢ ನಿದ್ದೆ ಒಳಗ ಇರೋ ಸಮಯ. ತಾಂಡದ ಯಾವುದೇ ಒಂದು ನಾಯಿ ಬೋ ಅಂತೇಳಿ ಬಾಯಿಯೊಳಗ ನಾಲಗಿ ಇಕ್ಕಿದಂಗೆ ಬೊಗಳಾಕ ಹತ್ತಿತ್ತು. ಸಿಕ್ಕರೆ ಗೋಣು ಮುರುದು ಬಿಸಾಡುವಷ್ಟು ಸಿಟ್ಟು ದಾಮ್ಲ ನಿಗೆ. ಭಾರ ಹೊತ್ತು ನಡೆದ ಆಯಾಸ, ಆದರೂ ಕಾಲಕೆಳಗೆ ಬಂದಾಗ ಒಮ್ಮೆ ಜಾಢಿಸಿ ಒದ್ದಿದ್ದ. ಆ ಹೊಡ್ತಕ್ಕೆ ಕುಯ್ಯೋಮರೋ ಅಂತೇಳಿ ಸುಮ್ಮನಾಯ್ತು. ಗುಡಿಸಲು ಹತ್ತಿರ ಹೋಗಿ ಕತ್ತಲು ಕಾಣದೆ ಯಾರಾದರೂ ಗುಡಿಸಲು ಪ್ರವೇಶ ಮಾಡಬಾದರಂತೇಳಿ "ಸೋಮ್ಲಿ" ಅಂದ. ಯಾರೋ ಕನಸಿನೊಳಗ ಕೂಗಿದಂಗಾಗಿ ದಡಬಡನೆ ಎದ್ದವಳೆ ಗಂಡನ ಧ್ವನಿ ಗುರುತಿಸಿ ತಟ್ಟಿ ಸರಿಸಿ ಒಳಗ ಕರೆದಳು. ಒಂದು ಚೀಲ ಹೊರಗಿಟ್ಟು ಒಳಗ ಹೋದ. ಅವಳು ಏನೋ ಕಾಳು ಇರಬೇಕಂತ ಎತ್ತಾಕ ಹೋದಳು, ಜಪ್ಪಯ್ಯ ಅನ್ನಲಿಲ್ಲ. ಸುಮ್ಮನೆ ಒಳಗ ಬಂದ್ಲು. " ಏನು ತಂದು ಏನು ಪ್ರಯೋಜನ ಅದ್ಯಾವನದೋ ಮನಿ ತುಂಬಾಕ ಅದ್ಯಾವಳನ್ನೋ ಒಲ್ಯೆಸೊದಕ್ಕ ಈ ಬಾಳೇವು ಬೇಕಿತ್ತ." ಅಟೊತ್ತಿಗೆ ಗೊಣಗಿದಳು. ದಾಮು ದಣಿದು ಸಾಕಬೇಕಾದ್ದರಿಂದ ಹೆಚ್ಚೇನು ಮಾತಾಡಾಕ ಹೋಗಲಿಲ್ಲ. ಸುಮ್ಮನೆ ಹೋಗಿ ಮಕ್ಕಳ ಪಕ್ಕ ಮೂಲೆಯೊಳಗ ಗೋಣಿ ತಟ್ಟಿನ ಮೇಲೆ ಅಡ್ಡಾದ. ಅಕೀನು ಅವನನ್ನು ಪರಿಗಣಿಸದೆ ಮತ್ತೊಂದು ಮೂಲೆಯಲ್ಲಿ ಮಲಗಿಕೊಂಡಳು. ಉಂಡಿಯಾ ಉಪಾಸ ಇದ್ದೀಯಾ ಅಂತ ಕೇಳಲು ಗುಡಿಸಲಲಿ ಎನಾದ್ರು ಇದ್ರ ತಾನೆ. ಆದ್ರ ಅವ ಏಳೋದ್ರಾಗ ಮಕ್ಕಳ ಸಲುವಾಗಿ ಎನಾರ ಮಾಡಬೇಕಂತ ದುರಾಲೋಚನೆ ಮಾತ್ರ ಆಕಿ ತಲೆಯೊಳಗ ಕೊರಿತಿತ್ತು. ದಣಿದು ಬಂದು ಗಾಢ ನಿದ್ದಗೆ ಜಾರುತ್ತಿದ್ದುದನ್ನೆ ಕಾಯುತ್ತಿದ್ದ ಸೋಮ್ಲಿ ಎರೆಡೂ ಚೀಲಗಳನ್ನು ಜುಕ್ಕ ಜುಲಿಮೆಯಿಂದ ಬಿಚ್ಚಿದಳು. ಒಂದು ಬೇಸನ್ ಪಟ್ಟಿಯಷ್ಟು ತುಂಬಿ ಮಡಿಕೆಯೊಳಗ ಹಾಕಿ ಅಡುಗೆ ಮಾಡುವ ಕೋಣೆಯೊಳಗೆ ತಗ್ಗುಮಾಡಿ ಹುಗದಳು. ಒಡೆವೆಗಳನ್ನು ಜೋಪಾನವಾಗಿ ತೆಗೆದು ತನ್ನ ತೌರುಮನೆಯರು ಕೊಟ್ಟ ಹಳೇ ಕಾಲದ ಪೆಟಾರಿಯೊಳಗೆ ಇಟ್ಟು ಬಂದಮಾಡಿದಳು. ಏನೂ ಗೊತ್ತಿಲ್ಲದ ಹಾಗೆ ಗಂಟುಗಳನ್ನು ಹಾಕಿ ಚೀಲಗಳನ್ನು ಸರಿಯಾಗಿ ಜೋಡಿಸಿಟ್ಟು ಬಂದು ಮಲಗಿದಳು. ಮುಂಗೋಳಿ ಕೂಗೋಕೆ ಮುಂಚೆ ಎಳುವ ಎಳು ಅವನು ಎದ್ದಮೇಲೆನೆ ಎದ್ದಳು.

ದಾಮು ಚೀಲಗಳನ್ನು ಗಮನಿಸದೆ ಎತ್ಕೊಂಡು ಹೋದವನು ಎಲ್ಲಿ ಮಾಯ ಮಾಡಿದನೋ ಅಲ್ಲಿ ಇರೋಮಬಾನೂ ಮನೆಗೆ ಬೇಕಾದನ್ನ ತಂದು ಹಾಕ ತೊಡಗಿದ. ಆದರೆ ವಾಲ್ಯ ವಿಸಶಾವತ್‌ನ ತಂಗಿ ಸಾವಿಯ ಮೋಹದ ಎದುರು ಪುಂಗಿ ಊದಿದ ಹಾವಿನಂತಾಗಿ ಬಿಡುತ್ತಿದ್ದ. ಅವಳೆಂದರೆ ಅದೇನು ಆಗಿಬಿಡುತ್ತಿತ್ತೊ. ಅಂತ ದೊಡ್ಡ ಕಳ್ಳ ದಾಮು ಹಲ್ಲು ಕಿತ್ತ ಹಾವಾಗಿ ಬಿಡುತ್ತಿದ್ದ. ರಂಗಾರೆಡ್ಡಿ ಹೆಂಡತಿಯ ವಜ್ರದ ಹಾರವನ್ನು ಜೋಪಾನವಾಗಿ ಒಯ್ದು ಕೊಡುತ್ತಿದ್ದಂತೆಯೇ ಸಾವಿ ಮಳ್ಳಾಗಿ ಬಿಟ್ಟಳು. " ಗಂಡಸು ಅಂದ್ರ ನೀನೇ ಕಣೋ ದಾಮು, ಹೇಣ್ತೀನ ಬಿಟ್ಟು ಈಪರಿ ಪ್ರೇಯಸಿಯನ್ನು ಪ್ರೀತಿ ಮಾಡ್ತೀಯಲ್ಲ,, ನಿನ್ನ ತಾಕತ್ತು ಮೆಚ್ಚತಕ್ಕಂತದ್ದೆ. ನಡಿ ಮೊದ್ಲು ಉಟ ಮಾಡು. ನನ್ನ ಕೈಯಾರ ನಿನಗ ಬೇಕಾದ್ದು ಮಾಡೀನಿ." ಒಯ್ಯಾರದಿಂದ ಒಳಗೆ ಕರೆದುಕೊಂಡು ಹೋದಳು. " ನೀವು ಹೆಂಗಸ್ರೇ ವಿಚಿತ್ರ ಕಣ್ರಿ, ಒಮ್ಮೊಮ್ಮೆ ಹೃದಯಾನ ಕಿತ್ತು ಕೈಯಾಗ ಕೊಟ್ಟು ಬಿಡ್ತೀರಿ, ಮತ್ತೊಮ್ಮೆ ಹೃದಯದ ಬಾಗಿಲು ಹಾಕಿ ನಿರಾಕರಿಸಿ ಬಿಟ್ತೀರಿ. ನಗುತ್ತಲೆ ಕೆನ್ನೆಗೊಂದು ಬಾರಿಸಿದ." ಅವನ ಮಾತಿನೊಳಗೆ ಪ್ರೀತಿ, ರೋಷ, ದ್ವೇಷ ಎಲ್ಲಾನು ಇತ್ತು. ಕಾಸುಮುಗಿಯುವವರೆಗೂ ಸಮಾರೋಪ ನಡೆಯುವುದು ಖಾತ್ರಿಯಾಗಿತ್ತು, ಹಾಗೆ ನಡೆಯತೋಗಿತ್ತು.

ವಾಲ್ಯ ಏಳಸಾವತ್ ಮನೆ ತಿಜೋರಿಯೊಳಗ ಬೆಳ್ಳಿ ನಾಣ್ಯಗಳು ಹೆಚ್ಚಾದ ಬಳಿಕ ಅವನೊಳಗೂ ದುರಾಸೆ ಹೆಪುಗಟ್ಟ ತೊಗಡಿತು. ವಾಲ್ಯ ಅವನ ತಂಗಿ ಸಾವಿ ಇಬ್ಬರದ್ದು ಒಂದೇ ಮನಸ್ಥಿತಿ. ಆದರೆ ಅವರ ತಮ್ಮ ಲಾಲ್ಯನಿಗೆ ಇದಾವುದು ಹಿಡಿಸುತ್ತಿರಲಿಲ್ಲ. ತಂಗಿಯ ಹಾದರದ ಮೇಲೆ ಬರುವ ಶ್ರೀಮಂತಿಕೆಯನ್ನು ನಿರಾಕರಿಸಿ ಒಂದೆರೆಡು ಬಾರಿ ಖಾರವಾಗೆ ಮಾತನಾಡಿದ್ದ. ಸಾಲದಕ್ಕೆ ದಾಮುನನ್ನು ಕರೆದು ಎಚ್ಚರಿಕೆ ನೀಡಿದ್ದ. ಸಾವಿಯ ಪ್ರೀತಿಗೆ ಎನು ಬೇಕಾದರೂ ಮಾಡಲು ತಯಾರಿದ್ದ ದಾಮುಗೆ ಲಾಲ್ಯ ವಿಸಳಾವತನ ಮಾತುಗಳು ನಿದ್ದೆ ಕೆಡಿಸಿದ್ದವು. “ಅಲ್ಲೆಲೆ ಸೂಳಿ ಮಗನ, ಎದಿಮಟ ಮಕ್ಕಳಾದವ ಇನ್ನು ಬುದ್ದಿ ಬರಿಲ್ಲಾಂದ್ರ ಹ್ಯಾಂಗ, ನೋಡು ನನ್ನ ಮಕ್ಕಳನ್ನು ತೊಲಿತುಂಡು ಆಗ್ಯಾವು. ಅವರ ಎದುರಿಗೆ ನಿನೂ ನನ್ನ ಮನಿಗೆ ಬಂದು ಅವರ ಅತ್ತಿಯಕೂಡ ಮಾಡೂವ ಅವ್ಯವಹಾರ ಗೊತ್ತಾಗಿ.. . .” ಅವನೊಳಗೆ ದ್ವೇಷ ಹುಟ್ಟಿತ್ತು. ಯಾವತ್ತ ಕೊಲೆಯನ್ನು ಮಾಡದ ದಾಮುಗೆ ಅದನ್ನು ಮಾಡಿ ಮುಗಸಿ ಬಿಡುವ ಅಂತೇಳಿ ಅನಿಸಿತ್ತು. ಸರಿಯಾದ ಸಮಯಕ್ಕಾಗಿ ಕಾಯುತ್ತಿದ್ದ. ಲಾಲ್ಯಾ ವಿಸಳಾವತ್ ಅವನ ಅಣ್ಣ ವಾಲ್ಯಾನ ಅವ್ಯವಹಾರದಿಂದ ಬೇಸರಗೊಂಡು ದಿನ ಜಗಳ ಆಡಲು ಸುರುಮಾಡಿದ. ಜಗಳ ಕೊನೆಗೆ ಕೈಕ್ಯ ಮಿಸುಲಾಯಿಸುವ ಮಟ್ಟಕ್ಕೆ ಹೋಗಿತ್ತು. ಅಷ್ಟೆ ಅಲ್ಲ, “ ಲೇ ನೀ ಏನು ದೊಡ್ಡ ಮನುಷ್ಯ , ನನ್ನ ಪಾಲು ನನಗ ಬಿಸಾಕು ನಾ ಆಚೆ ಹೋಕ್ಕೀನಿ.” ಅಂದು ಹೋಗಿ ಬಿಟ್ಟ ಲಾಲ್ಯ. ವಾಲ್ಯನ ಪಟಾಕಿ ಸಡಿಲಾತು. ಕಳ್ಳ ಮಾಲು ಮನಿ ತುಂಬಿರುವಾಗ ಪಾಲು ಕೊಟ್ರೆ ಅರ್ಥ ಹೋಗುತ್ತದೆ ಎಂದು ಆಲೋಚನೆ ಮಾಡಿದವನೆ ದಾಮುಗೆ ಸುಪಾರಿ ಕೊಟ್ಟ. “ನೋಡಲೆ ನನಗ ಮತ್ತು ನಿನಗ ಅಡ್ಡದಾರಿ ಮುಳ್ಳುಆಗಿರೋದು ಲಾಲ್ಯ. ಹೆಂಗಾರ ಮಾಡಿ ಅವನ್ನ ಎತ್ತಿಬಿಡು. ನನ್ನ ತಂಗೀನ ನೋಡಾಕ ಯಾವಾಗ ಬೇಕಾರ ಅವಾಗ ಬರಬಹುದು. ಅಷ್ಟ ಅಲ್ಲಾ ಮನೀನ ನಿಂದಪ.” ಎಂದು ಹೇಳಿದ. ಅವನಿಗೂ ಲಾಲ್ಯಾನ ಮೇಲೆ ಸಿಟ್ಟಿತ್ತು. ಆದರೆ ಯಾವತ್ತೂ ಅದನ್ನು ಅವನೆದರು ವ್ಯಕ್ತಪಡಿಸಿರಲಿಲ್ಲ. ದೀಪಾವಳಿ ಕಾಳಿ ಅಮಾಸಿ ದಿನ ಬೇಟೆಗೆ ತಾಂಡಕ್ಕ ತಾಂಡಾನೆ ಹೊರಟಿತ್ತು. ವಾಲ್ಯ ಮಾತ್ರ ಯಾವುದೋ ಕುಂಟು ನೆಪ ಹೇಳಿಕೊಂಡು ಪಾರಾಗಿದ್ದ.

ದಾಮು, ಚೆಂದ್ಯಾ ಮತ್ತ ಅವನ ಗುಂಪು ಲಲ್ಯಾ ವಿಸಲಾವತ್‌ನ ಗುಂಪು ಸೇರಿಕೊಂಡಿದ್ದರು. ಗುಡಿಕೋಟೆ ಹಿಂದಿನ ಬೆಟ್ಟದ ನಳಕಿನಿಂದ ಹೊರಟವರು ಸೊಂಡೂರು ಬೆಟ್ಟದ ಆಚೆಗೆ ಇಳಿದು ನಾರಿ ಹಳ್ಳದ ಕಾಡನ್ನು ಸೇರಿದರು. ಒಂದು ಜಿಂಕೆ ಮೊಲ ಯಾವುದೂ ಕಾಣದಾಗಿದ್ದವು. ಯಾರ ಮನಸ್ಸಿನೊಳಗೆ ಏನಿತ್ತು ಅಂತ ಬಲ್ಲವರಾರು? ಒಬ್ಬರನ್ನೊಬ್ಬರು ನಂಬಿಯೇ ಬೇಟೆಗೆ ಬಂದಿದ್ದರು. ದೊಡ್ಡ ಪೊದೆಯೊಂದರ ನಡುವೆ ಸದ್ದು ಅದಂಗಾಗಿ ಹಿಂದಿದ್ದ ಎಲ್ಲರೂ. “ಏಯ್ ಲಾಲ್ಯ ವಿಸಲಾವತ್, ಪೊದೆ ಒಳಗೆ ಏನೋ ಅಡಿಗಿಕೊಂಡಂಗಾತು ನೋಡು.” ಅಂತ ಚೆಂದ್ಯಾ ಹೇಳಿದ. ಸಾದಾಬುದ ಲಾಲ್ಯ ಇದ್ದರೂ ಇರಬಹುದೆಂದು ಕತ್ತು ಮುಂದು ಮಾಡಿ ಪೊದೆಯೊಳಗೆ ನೋಡುತ್ತಿದ್ದಂಗೆ ಮಚ್ಚಿನಿಂದ ಒಂದೇ ಹೊಡೆತಕ್ಕೆ ರುಂಡವನ್ನು ಬೇರ್ಪಡಿಸಿದ ದಾಮು., ರಕ್ತ ಚೆಲ್ಲಂತೆ ಅವನ ಮೈಮೇಲೆ ಚಿಮ್ಮಿತು. ಅಲ್ಲೆ ಹರಿಯುತ್ತಿದ್ದ ನಾರಿ ಹಳ್ಳದಾಗ ಮೈತೊಳಕೊಂಡು ತನ್ನ ಗುಂಪನೊಂದಿ ವಾಪಾಸು ಬಂದ.

ವಾಲ್ಯ ಸಾವಿ ಖುಷಿಯಾಗಿದ್ದರು, ಸುದ್ದಿ ಕೇಳಿ "ಒಂದು ವಿಷಬೀಜ ಹೋಯಿತು". ವಾಲ್ಯ ತಂಗಿಯ ಮುಂದೆ ಹೇಳಿದ. ಆದರೆ ದಾಮೂನ ಗುಂಪಿನೊಳಗೆ ಹೋದವರು ಬಂದರು. ಆದರೆ ತನ್ನ ಗಂಡ ಯಾಕೆ ಬರಲಿಲ್ಲ? ಲಾಲ್ಯನ ಹೆಂಡತಿ ವಾಲ್ಕಿ ಬಾಯಿಗೆ ಸವಾಲು ಕಾಡ ತೊಗಿತು. ಅವಳು ಅಷ್ಟಕ್ಕೆ ಸುಮ್ಮನಾಗಲಿಲ್ಲ. ಕುಪ್ಪೇನ ಹಳ್ಳಿಯ ಹಿಂದಿನ ಓಣಿಯಲ್ಲಿದ್ದ ತನ್ನ ತಂದೆ ಮನೆಗೆ ಓಡಿದಳು. , "ಅಪ್ಪ ಅವ್ವ, ಅಣ್ಣ, ಬ್ಯಾಟಿಗೆ ಹೋದ ಬಂದ್ರು, ನನಗಂಡ ಮಾತ್ರ ಬರಲಿಲ್ಲ,. ಏನಾಯ್ತು ಅವನಿಗೆ ಯಾಕೋ ಜೀವ ಗಾಬ್ರಿಯಾಗಾಕ ಹತ್ತೈತಿ. "ದುಖಃ ತಡೆಯಲಾರದೆ ಭಾರಾಡಿ ಅಳತೊಡಗಿದಳು. ಹುಲಿಯಂತೆ ಆವನ ಆರುಜನ ಅಣ್ಣ ತಮ್ಮಂದಿರು ಒಬ್ಬರಿಂದ ಒಬ್ಬರು ಜಮಾ ಆದ್ರು, "ಯಾಕ ಏನಾತು, ಆ ಬೊಳಿ ಮಗನಿಗೆ ಬ್ಯಾಟಿ ಆಡಾಕ ಹೋಗಂದೋರು ಯಾರು? ಯಾರ ಹಿಂದೆ ಹೋಗಿದ್ದ." ವಾಲ್ಕಿಯ ಹಿರಿಯಣ್ಣ ಸೇವಾ ಕೇಳಿದ. "ಆ ಗೌಡನಹಟ್ಟಿಯ ಕಳ್ಳ ದಾಮುನ ಗುಂಪಿನೊಳಗ ಹೋಗಿದ್ನಂತೆ". ಅಂದ್ಲು. ಅಷ್ಟೊತ್ತಿಗಾಗಲೆ ದಾಮುನ ಬೆಟ್ಟಿಯಾಗಿ ಅವರಪ್ಪನ ಬಗ್ಗೆ ವಿಚಾರಣೆ ಮಾಡಕಾ ಹೋಗಿದ್ದ ಕಿರಮಗ ಭೀಮ್ಲ ಸುದ್ದಿ ತಂದಿದ್ದ. "ಅಪ್ಪ ಊರು ಬಿಟ್ಟು ಹದಿನೈದಿಪ್ಪತು ಕಿಲೋಮೀಟರ್ ಹೋದ ಮೇಲೆ ಬೇರೆಮತ್ತೊಂದು ಗುಂಪು ಸೇರಿಕೊಂಡನಂತ, ಅವರ ಹಿಂದೆ ಹೋಗಲಿಲ್ಲಂತ." ಅಂದ. ಕುಪ್ಪೇನಹಳ್ಳೀ ಪಕ್ಕದ ಬ್ಯಾಡರ ಹಟ್ಟಿ, ಕುಪ್ಪೇನಳ್ಳಿ ಕೆರಿ ದಾಟದ ಮಂದಿನ ಹಳ್ಳದವರೆಗೆ ಹೆಂಡತಿ ಮಕ್ಕಳೆಲ್ಲ ಸೇರಿ ಜಾಲಾಡಿದರು. ಲಾಲ್ಯನ ಸುಳಿವು ಸಿಗಲಿಲ್ಲ. ವಾರ ಗಟ್ಟಲೆ ಹುಡುಕಾಟ ಆದಮೇಲೆ ಅನುಮಾನ ಬಂದು ನಾರಿ ಹಳ್ಳದ ಕಾಡಿಗೆ ಆರು ಜನ ಅಣ್ಣ ತಮ್ಮಂದಿರು ತಂಗಿ ವಾಲ್ಕಿಯ ಗೋಳು ನೋಡಲಾರದೆ ಹೊರಟಿದ್ದರು.

ಲಾಲ್ಯನ ಇಬ್ಬರು ಮಕ್ಕಳು ಹೊರಟು ನಿಂತಿದ್ದನ್ನು ನೋಡಿದ ಅವರ ದೊಡ್ಡ ಮಾವ ಗೊಪ್ಯಾನಾಯ್ಕ ಬೇಡ ಅಂದ. "ಸಣ್ಣ ಹುಡುಗರು ಆಗ್ತೀರಿ, ನಮ್ಮಮ್ಮ ಕೂಡ ಕಾಡಿನೊಳಗೆ ಎಲ್ಲಂತ ಸುತ್ತುತೀರ. ನಾವೆಲ್ಲ ಹುಡುಕಿ ತರ್ತರೀವಿ ಹೋಗ್ರಿ" ಅಂತ ಹೇಳಿಂದ ಇಬ್ಬರು ವಾಪಾಸಾಗಿದ್ದರು. ಹಿಲಾಲ್ ಹಿಡಿದು ರಾತ್ರಿ ಇಡೀ ಹುಡುಕಾಡಿದರು. ಸುಳಿವು ಸಿಗಲಿಲ್ಲಾ ಸೋಮ್ಲಾನಾಯ್ಕ ಊಹಿಸಿದ. ಲಾಲ್ಯ ಹೆಣ ಆಗಿರಬೇಕು. ಇಲ್ಲಾಂದ್ರ ಅಂವ ಸಿಗಬೇಕಿತ್ತು. ತಲೆ ತುಂಬ ಕೆಟ್ಟ ಆಲೋಚನೆಗಳು ಸುಳಿದವು. ಸೂರ್ಯ ಪೂರ್ವದೊಳಗೆ ಮೂಡುತ್ತಿದ್ದಂತೆ. ದಟ್ಟ ಕಾಡಡವಿಯೊಳಗ ಪ್ರವೇಶ ಮಾಡಿದರು. ಗೋಪ್ಯಾ ನಾಯ್ಕನ ಕಿರಿಯ ತಮ್ಮ ಪಿರ್ಯಾ ನಾಯ್ಕ ಕೂಗಿದ. "ಯಾವುದೋ ಪ್ರಾಣಿ ತಿಂದು ಕೋಳೆತು ನಾರ್ತಿರೋ ಹೆಣ ಐತಿ ಬರ್ರಿ." ಅಂದಕ್ಷಣವೇ ಅರುಮಂದಿ ಕೂಡಿದರು. ಹೆಣ ಪೂರ್ಣ ಜೀರ್ಣಾವಸ್ತೆಯಲ್ಲಿತ್ತು. " ಹೌದು ತಲೆ ಎಲ್ಲಿ." ಎರಡನೆಯವನಾದ ಜಾಂಪ ಹುಡುಕಾಡಿದ. ಪೊದೆಯೊಳಗೆ ಬಿದ್ದದ್ದ ರುಂಡ ಹೊರತೆಗೆದ ನಂತರ ಖಾತ್ರಿ ಯಾಗಿತ್ತು ಹೆಣವನ್ನು ಒಯ್ಯೋದಕ್ಕೆ ಸಾಧ್ಯವಿಲ್ಲ. ಅಂದವರೆ ಕಾಡಿನೊಳಗಿಂದ ಒಣ ಕಟ್ಟಿಗೆ ಆಯ್ದು ಹೆಣದ ಮೇಲೆ ಬಿಸಾಡಿ ರುಂಡ ಸಮೇತ ಸುಟ್ಟು ತಮ್ಮ ಕುಲದ ಪದ್ದತಿಯನ್ನು ಆಚರಿಸಿದರು.

ಕಾರ್ಯಕ್ರಮಗಳನ್ನು ವಿಧಿವತ್ತಾಗಿ ಮಾಡಲು ಮುಂದಾದರು. ಕಾರೇವು ಮುಗಿದು ಮಂದಿಗೆ ಅನ್ನ ಹಾಕಿದರು. ಒಂದೀಟು ಮಂದಿ ಲಾಲ್ಯನ ಗುಣಗಾನ ಮಾಡಿ ಕಣ್ಣೀರು ಸುರಿಸಿದರು. ಅದ್ರಲ್ಲ. ಆಲ್ಯ ಅವನ ಹಿರಯಣ್ಣ ವಾಲ್ಯ ಮತ್ತು ಅವನ ತಂದಿ ಸಾವಿ ಎಲ್ಲಾನು ಮರೆತು ಏನೂ ಆಗಿಲ್ಲ

ಎಂಬಂತೆ ಇದ್ದರು. ಆದರೆ, ಲಾಲ್ಯಾನ ಹಿರಿಮಗ ಚಿನ್ನ ಮತ್ತು ಸಹೋದರ ರೂಪ್ಲನಾಯ್ಕ ಮಾತ್ರ ಪಕ್ಕ ಮಾಹಿತಿ ಕಲೆಹಾಕುವವರೆಗೂ ಅನುಮಾನ ಪಡೋದೆಬೇಡ ಅನ್ನುವ ಪ್ರಕ್ರಿಯಲ್ಲಿ ತೊಡಗಿದ್ದರು. ಕಾಲ ಎಲ್ಲವನ್ನು ಮರೆಸಿತ್ತು. ಆದರೆ ತಂದೆಯ ಕೊಲೆಯನ್ನು ಹೇಗೆ ಮರೆಸೀತು? ವಾಲ್ಕಿಯ ಅಣ್ಣಂದಿರು ಕೂಡ ಕೊಂದವರಿಗೆ ಅನುಮಾನ ಬರದ ರೀತಿಯಲ್ಲಿ ವರ್ತಿಸತೊಡಗಿದರು. ವಾಲ್ಯ ಮತ್ತು ಅವನ ತಂಗಿ, ವಾಲ್ಕಿಗೆ ಪಾಲು ನಿರಾಕರಿಸಿದರು. ವಾಲ್ಯನ ಮಕ್ಕಳು ಅಪ್ಪನ ದಾರಿಯನ್ನೇ ಅನುಸರಿಸುತ್ತಿದ್ದಕಾರಣ. "ನಿವೇನು ಮಾಡತೀರೋ ಮಾಡ್ರಿ, ನನ್ನ ತಮ್ಮನ್ನೇ ಕೊಂದು ಹಾಕಿದ್ರು ನಿನ್ನ ಅಣ್ಣತಮ್ಮಂದಿರು. ಈಗ ಆಸ್ತಿನೂ ಹಡಪಿಕೊಂಡು ಅವನ ಇಬ್ಬರೂ ಮಕ್ಕಳನ್ನು ಬೀದಿಪಾಲು ಮಾಡಾಕ ಹೊಂಟರಿ".ಮೊಸಳೆ ಕಣ್ಣೀರು ಸುರಿಸಿದ. ಹಿಂಗಾದ್ರ ಲೆಕ್ಕ ಬಗಿಹರೆಯಂಗಿಲ್ಲ ಅಂದವನೆ ಪರ್ಯಾಯ ಅಲೋಚನೆ ಮಾಡಿದನು. ದಿಪಾವಳಿ ಕಾಳಿ ಅಮಾಸೆ ದಿವಸ ಸೇಡಿಗೆ ಸೇಡು ತೆಗೆದುಕೊಳ್ಳುವ ಶಪತ ತಂಗೊಂಡು ಆದಿನಕ್ಕಾಗಿ ಕಾಯತೊಡಗಿದರು.

ಬಲಿ ಪಾಡ್ಯಮಿ ಬಂದೇ ಬಿಟ್ಟಿತು. ಹೋದ ಸಲದ ಭೀಕರ ಕೊಲೆ ಹಿನ್ನಲೆಯಲ್ಲಿ ಬೇಟೆ ಎನ್ನುವ ಶಬ್ದ ನಮ್ಮಪ್ಪ ಶೂರನ ಎದೆಯನ್ನು ನಡುಗಿಸಿತ್ತು. ತುಂಡು ಮಾಂಸವೋ ಇಲ್ಲ ರಸವೋ ಹೆಂಗೋ ಒಂದು ಪಾಲ ತಗೊಂಡು ನಮ್ಮ ಮನಿಯೊಳಗ ನಾವು ನೆಮ್ಮದಿಯಿಂದಿದ್ದರೆ ಸಾಕು ಅಂದುಕೊಂಡು ತಾಂಡೆ ದುರುಗವ್ವನ ಗುಡಿ ಎದಿರು ಏರಡು ಹಸನಾದ ಮರಿ ಕಡಿದು ಪಾತ್ರೆಯಲ್ಲಿ ಹಿಡಿದ್ದಿದ್ದಾ ರಕ್ತದ ಮಾರಿ ನೋಡಾಕ ಮಂದಿ ಮುಗೆ ಬಿದ್ದಿತ್ತು. ದಾಮು, ಚೆಂದ್ಯಾ ತಮ್ಮ ಎಂದಿನ ಗಡಿಬಿಡಿಯೊಳಗ. ರಕ್ತ ಮಕ ನೋಡಾಕ ಬಂದು ಎಡಗೈ ಬೆರಳನ್ನು ರಕ್ತದಲ್ಲಿ ಅದ್ದಿ ಅಲ್ಲೆ ಇದ್ದ ಬೇವಿನ ತೊಪ್ಲದಿಂದ ಒರಸೋದಕ್ಕ ಕೆಳಗ ಬಗ್ಗಿದ್ದ. ಅಲ್ಲೆ ನಿಂತಿದ್ದ ಲಾಲ್ಯ ನಾಯ್ಕನ ಮಗ ಬಂಡಿ ಕಣಗದಿಂದ ರಮ್ಮಂತ ದುಬ್ಬಕ್ಕ ಹೇರಿದ. ಬಿದ್ದು ಹೊಡೆತಕ್ಕ ಹೌಹಾರಿ ಮೇಲೆಳಲು ಪ್ರಯತ್ನ ಮಾಡುತ್ತಿದ್ದಂತೆ. ಮತ್ತೊಬ್ಬ ಹೊಡೆದ. ದಾಮು ಏಕೆ ಎನು ಅಂತ ತಿಳಿಯೋಕೆ ಮುಂಚೆ ಎಂಟುಹತ್ತು ಮಂದಿ ಊರು ನಡುಕ್ಕ ಎಳಕಂಡು ಬಂದ್ರು, ಕಲ್ಲು ಬಂಡೆ ಎಸೆದರು. ಗೌಡನಹಟ್ಟಿ ತಾಂಡದ ಮಂದಿ ಹೌಹಾರಿ ನೋಡತೊಡಗಿದರು. ಯಾರೊಬ್ಬರೂ ತುಟಿಪಿಟಕ್ ಎನ್ನಲಿಲ್ಲ. ಗೌಡನಹಟ್ಟಿ ತಾಂಡದ ವಿಸಳಾವತ್ ಪಂಗಡದ ಮುಂದೆ ನಿಂತೆ ಎಲ್ಲಾನು ಮಾಡತೊಡಗಿದ್ದರು, ಮಾಂಸ ತಿಂದೂ ತಿಂದೂ ಕೊಬ್ಬಿದ ದಾಮ್ಲಾಗ ಹೊಡೆತ ಏನು ಫರಕ್ ಬಿದ್ದಂತೆ ಕಾಣಲಿಲ್ಲ. ಆದರೆ ಅವನು ಮೇಲೆದ್ದು ಸುಧಾರಿಸಿಕೊಂಡು ಒಬ್ಬರನ್ನಾದರು ಹೊಡೆಯುವ ತಾಕತ್ತು ಪಡೆಯದಂತೆ ಹೊಡೆಯ ತೊಗಡಿದರು. ತಾಂಡದ ಮಂದಿ ಅವನು ಕೆಟ್ಟವನಾದರೂ ಅಯ್ಯೋ ಎಂಬ ಮರುಕದ ಮಾತುಗಳು ಬಾಯಿಂದ ಬರತೊಡಗಿದವು. ಹೊಡೆದಂತೆ ಮೈ ಉಬ್ಬುತ್ತಿತ್ತು. ಯಾವಾಗ ಗೊಪ್ಯಾ ಮತ್ತವನ ತಮ್ಮ ದೊಡ್ಡ ಕಲ್ಲನ್ನು ಎತ್ತಿ ಎದೆಯಮೇಲ ಬಿಟ್ಟರೊ ಆಗ ದಾಮೂ ಸಾಯುವ ಭಯದಿಂದ ಹೌಹಾರಿ ನೆಲ ಕಚ್ಚಿದ. ಆದರೂ ಸುಧಾರಿಸಲು ಬಿಟ್ಟರೆ ಯಾರೊಬ್ಬರನ್ನೂ ಬಿಡಲಾರ ಎನ್ನುವ ಆತಂಕ ಬಂದಿದ್ದೆ ಊರಮುಂದಿನ ಕಣದಲ್ಲಿದ್ದ ವಿಸಳಾವತ್ ಭೋಜ್ಯಾ ನಾಯ್ಕನ ಸೊಪ್ಪಿದಂಟಿನ ರಾಶಿಗೆ ಬೆಂಕಿ ಹಚ್ಚಿ ಜೀವಂತ ವಾಗಿದ್ದ ದಾಮೂನ ಎಂಟು ಮಂದಿ ಅನಾಮತ್ತಾಗಿ ಎತ್ತಿ ಬೆಂಕಿಗೆ ಎಸೆದರು. ಅವನ ಗುಡಿಸಲಿಗೆ ಬೆಂಕಿ ಹಾಕಿ ಮಕ್ಕಳನ್ನು ಕೊಂದು ಕೇಕೆ ಹಾಕಿ ಓಡುತ್ತಿರುವಾಗ ಕಮರತೋಟ್ ಪಂಗಡದವರಿಗೆ ಸುದ್ದಿ ತಿಳಿದು ಒಟ್ಟು ಸೇರುವುದರೊಳಗೆ ದಾಮೂನ ಇಡೀ ಕುಟುಂಬವನ್ನು ಧ್ವಂಸ ಮಾಡಿದ್ದರು.

ವಯಸ್ಸಾಗಿದ್ದ ಧನ್‌ಸಿಂಗ್ ತನ್ನ ಕುಲದ ಮೇಲಾಧ ಅಕ್ರಮಣವನ್ನು ಮಕ್ಕಳಿಗೆ ಹೇಳದ ಸ್ಥಿಯಲ್ಲಿದ್ದ. ಅವನ ಸೋದರ ಸಂಬಂಧಿಗಳೆಲ್ಲಾ ಒಬ್ಬರ ಮಾತು ಒಬ್ಬರು ಕೇಳದಾಗಿದ್ದರು. "ಅವತ್ತೆ ನಾನು ಕೂಡ ಮುಂದೆ ವಲಸೆ ಹೋಗಿದ್ದರೆ ಪಾಪಿ ಸೂಳಿಮಗ ಬದುಕುತ್ತಿದ್ನೋ ಏನೊ." ಪಶ್ಚಾತಾಪ ಪಟ್ಟ. ಹದಿನೈದು ದಿನಗಳ ಕಾಲ ಹಾಸಿಗೆ ಹಿಡಿದ. ಧನ್‌ಸಿಂಗ್‌ಗೆ ಒಳಗೊಳಗೆ ಕಾಡುತ್ತಿದ್ದುದ್ದು ಅವನ ಎರೆಡನೇ ಮಗ. ಮಾತನಾಡಲು ಬಾರದ ಮುಗ್ದ. ಅವನ ಭವಿಷ್ಯ ಏನು? ಏನೆ ಆದರೂ ಅವನದ್ದಂತ ಒಂದು ಬದುಕಿದೆ. ಅದನ್ನು ಕಟ್ಟಿಕೊಳ್ಳಲೇ ಬೇಕು. ಯೋಚಿಸಿ ಯೋಚಿಸಿ ಸಾಕಾಗಿ ಹೋಗಿದ್ದ. ಈ ಪರಿಸ್ಥಿತಿಯಲ್ಲಿ ಹೆಣ್ಣು ಯಾರುತಾನೆ ಕೊಟ್ಟಾರು. ಎನ್ನುವ ದೊಡ್ಡ ಚಿಂತೆಯಲ್ಲಿ ಅಪ್ಪೆನಹಳ್ಳಿ ತಾಂಡದ ಕಡೆಗೆ ಹೊರಟಿದ್ದ. ಅವನ ಸೋದರ ಸಂಬಂಧಿ ದಾಮು ಕೊಲೆಯ ನಂತರ ಎಷ್ಟೋ ದಿನಗಳಲ್ಲಿ ಅಂವ ಹೊರಗಡೆ ಬಂದಿದ್ದ. ಅನುಮಾನದಲ್ಲೆ ಹೊರಟಿದ್ದ ಅವನಿಗೆ ಆಮಗೊಳತ್ ಬದ್ಯಾನಾಯ್ಕ ಬ್ಯಾಡರ ಕೇರಿಗೆ ಸರಾಯಿ ತಗೊಂಡು ಹೊದವನು ಮಾರಿ ಅರ್ಧ ತಾನು ಏರಿಸಿಕೊಂಡು ಕುಪ್ಪೇನ ಹಳ್ಳಿ ಕಡಿಗೆ ಹೊಂಟಾಗ ಸಿಕ್ಕ. "ಹಾಂ ರಾಮ್‌ರಾಮ್." ಅಂದ ಧನ್‌ಸಿಂಗ್. ರಾಮ್‌ರಾಮ್ ತಗೊಂಡು ಲೋಕಾಭಿರಾಮವಾಗಿ ಮಾತಾಡುತ್ತ ಬರುತ್ತಿದ್ದಂತೆ ಊರ ಕೊನೆಯಲ್ಲಿದ್ದ ಆತನ ಮನೆಗೆ ಬಂದು ಹೋಗುವಂತೆ ಕರೆದ. "ಇಲ್ಲ ಬಿಡು ಬೇರೊಂದು ಕೆಲಸಕ್ಕೆ ಹೊಂಟೀನಿ ಮತ್ತೊಂದ ದಪ ಬರ್ತೀನಿ." ಅಂದ. " ಛೆ ಧನ್‌ಸಿಂಗ್. ಇಲ್ಲಿ ಮಟ ಬಂದು ಹಂಗ ಹೋದರ ಹಳ್ಳ್ಯಾಗ ಸಂಬಂಧಕ್ಕೆ ಏನು ಬೆಲೆ ಕೊಟ್ಟಂಗಾತು. ಒದವೇಳೆ ನಿನ್ನ ಮನಸ್ಸಿನೊಳಗಿನ ಸಮಸ್ಯೆಗೆ ನನ್ನ ಮನೆಯಲ್ಲಿ ಉತ್ತರ ಇದ್ದರು ಇರಬಹುದು." ಬದ್ಯಾನಾಯ್ಕನ ಮಾತು ಅರ್ಥಆಗಲಿಲ್ಲ. ಆದರೆ ಅವನ ಮನೆಗೆ ಹೋಗಲು ನಿರ್ಧರಿಸಿದ.

ಧನ್‌ಸಿಂಗ್ ಹಿಂದೆ ಮುಂದೆ ಯೋಚಿಸಿದೆ ಮುಗ್ದನಾದ ತನ್ನ ಮಗನಿಗೆ ಇವಳೆ ಸರಿಯಾದ ಜೋಡಿ ಅಂದು ಒಪ್ಪಿಗೆ ಸೂಚಿಸಿದ್ದ. ವಾರೊಪ್ಪತ್ತಿನಲ್ಲಿ ಬೆಲ್ಲದ ಶ್ಯಾಸ್ತ್ರ ಮಾಡುವುದಾಗಿ ಹೇಳಿದ. ಬದ್ಯಾ ನಾಯಕನೂ ಕೂಡ ಅದಕ್ಕ ಒಪ್ಪಿಗೆ ಸೂಚಿಸಿದ. ಹೇಳಿದ ಮಾತಿನ ಪ್ರಕಾರ ಸೋಮವಾರ ಸಂಜೆ ಗುಡಿ ಗೌಡರಹಟ್ಟಿಯಿಂದ ಏಳೆಂಟು ಮಂದಿ ಕೂಡಿ ಬೆಲ್ಲದ ಶಾಸ್ತ್ರ ಮಾಡಲು ಹೊರಡಲು ಧನ್‌ಸಿಂಗನೆ ಖುದ್ದಾಗಿ ಹೋಗಿ ಹಟ್ಟಿ ನಾಯಕನನ್ನು ಕರೆದ. ತಾನೆ ಪೋತ್‌ನಾಯ್ಕ ಅಂತ ತಿಳದಿದ್ದ ಭೋತಾನಾಯ್ಕ, ಧನ್ ಸಿಂಗ್‌ಕರಮ ತೋಟ್ ಕುಲದಲ್ಲಿ ನಡೆದ ಭೀಕರವಾದ ಕೊಲೆಗೆ ಸಾಕ್ಷಿಯಗಿದ್ದ. ಸಾಧ್ಯವಾದಷ್ಟು ಧನ್‌ಸಿಂಗ್ ಬಗ್ಗೆ ಆಡಿಕೊಳ್ಳಬೇಕು ಅಂದವನೆ, " ಅಯ್, ಶಿವನೇ ಯಾರಿಗೆ ಬ್ಯಾಡಾಗ್ಯಾಳಪ್ಪ ಆ ಹುಡುಗಿ, ಬ್ಯಾಡಂದ್ರ ಹೋಗಿ ಕಾಡಿನೊಳಗಾದ್ರು ಬಿಡಬಾರದ. ಹೋಗಿ ಹೋಗಿ ನಿಮ್ಮಂತೋರ ಮನಿಗೆ ಹೆಣ್ಣು ಕೋಡಾಕ ಬಂದಾನಲ್ಲ ಆ ಮುಟ್ಠಾಳ ಯಾವನಂತೀನಿ. ಇಲ್ಲ ಧನ್‌ಸಿಂಗ್, ನಾನೇನು ಬರಲ್ಲ. ನಿಮ್ಮಂತ ಕಳ್ಳಮಂದಿ ಕೊಲೆಗಾರರಹಿಂದ ಬಂದ್ರ ನಮ್ಮ ಮಾರ್ಯಾದೆ ಉಳಿಯಾಕಿಲ್ಲ." ಕಡ್ಡಿ ಎರೆಡು ತುಂಡು ಮಾಡಿದಂಗೆ ಹೇಳಿದ. ಅವನ ಸಂಬಂಧಿ ಡಾವೊ ಸೇಣೂ ವಿಷಯ ತಿಳಿದು ನೊಂದು ಕೊಂಡ. " ಅಲ್ಲ ಬೀಗ್ರೆ ಅವತ್ತು ತುಂಬಿದ ಸಭೆ ಒಳಗ ಬಡಕೊಂಡವಿ. ಹೂಂ ಅನ್ರಿ ಅಂತೇಳಿ. ನಿಮ್ಮದೊಡ್ಡಮನಸ್ಸು ಒಪ್ಪಲಿಲ್ಲಾ, ಇಲ್ಲಾಂದ್ರೆ ಆ ಮಗ ಹಿಂಗ ಮಾತೋಡೋಕೆ ಆಗಿತ್ತಾ? ಮನಸ್ಸಿಗೆ ಹಚ್ಚಿಕೋ ಬೇಡಿ. ಆನಿ ಹೊಂಟಿತಂತ ಸ್ವಾನ ಬೊಗಳಿತ್ತಂತ, ಆನಿ ಹೊಳ್ಳಿ ನೋಡದ ಗಂಭೀರವಾಗಿ ಹೋಯಿತು."

ಕತೆಯನ್ನು ಹೇಳಿ ಅವರ ಪೈಕಿ ನಾಕು ಮಂದಿನ ಹೂಡ ಮಾಡಿದ. ಧನ್‌ಸಿಂಗ್‌ಕಡೆ ಏಲೆಮಟು ಮಂದಿ ಹೊಂಟರು. ಕುಪ್ಪೇನ ಹಳ್ಳಿ ತಲುಪಿದಾಗ ಸಂಜೆಯಾಗಿತ್ತು. ರಿವಾಜಿನಂತೆ ಧನ್‌ಸಿಂಗ್ ಹೆಂಡದ ಮಡಿಕೆಗಳನ್ನು ತರಿಸಿದ್ದ. ಯಾರಾದ್ರು ಬಟ್ಟಿ ಸರಾಯಿ ಕೆಳ್ಯಾರಂತೆ ಅದನ್ನು ವ್ಯವಸ್ಥೆ ಮಾಡಿದ್ದ. ಗೂಡ್ಲಿ ಬಾಯಿನ ಅವನ ಎರಡನೇ ಮಗ ಪಂಪಾನಾಯ್ಕನಿಗೆ ಕೊಡುತಗೊಳುವ ಮಾತುಕತೆಯನ್ನು ಮುಗಿಸಿ, ಒಂದು ತಿಂಗಳಲ್ಲೆ ಇರುವ ಮಹೂರ್ತಗಳನ್ನು ಗೌಡರಹಟ್ಟಿ ಬ್ರಾಂಬ್ರ ಅಚ್ಚುತಬಟ್ಟರ ತಾವ ಕೇಳಿಕೊಳ್ಳವುದಾಗಿ ತಿಳಿಸಿ ರಾತ್ರಿ ಊಟದ ನಂತರ ಹೊರಟು ನಿಂತರು. ಸೀತ್ಕಿಬಾಯಿಗೆ ತನ್ನ ಎರಡನೇ ಮಗ ಪಂಪಾ ನಾಯ್ಕನ ಮದುವೆ ದೊಡ್ಡ ಚಿಂತೆಯಾಗಿತ್ತು. ಒಂದು ತಿಳಿದರೆ ಒಂದು ತಿಳಿಯದ ಸಾದಾಬುದಾ ಬದುಕನ್ನು ಹೇಗೆ ಕಟ್ಟಿಕೊಂಡಾನು ಎಂಬ ಆತಂಕ ಮನೆ ಮಾಡಿತ್ತು. ಆಮಗೋತ್ ಪಂಗಡದ ಗೂಡ್ಲಿಬಾಯಿ ಬಹಳ ಜೋರಿದ್ದಳು, ಮನಗನಿಗೆ ಸರಿಯಾದ ವರ ಅವಳಾದರೂ ಬುದ್ದಿವಂತೆ, ನಿಭಾಯಿಸಿಕೊಂಡು ಹೋಗುತ್ತಾಳೆ ಅನ್ನುವ ಭರವಸೆಯಿಂದ ಭಟ್ಟರ ಹತ್ತಿರ ಮಹೂರ್ತ ನೋಡಿಸೋದಕ್ಕೆ ಚೆಕ್ಕಡಿ ಕಟ್ಟೇ ಬಿಟ್ಟರು.

ದೀಪಾವಳಿ ಮಾರನೆ ದಿನ ಒಳ್ಳೆಯ ಲಗ್ನ ಮಹೂರ್ತದಂದು ಭಟ್ಟರು ಅನುಮತಿ ಕೊಟ್ಟರು. ದೀಪಾವಳಿ ಬರೆ ಒಂದುವರೆ ತಿಂಗಳು ಉಳಿದಿತ್ತು. ಮದುವೆ ತಯಾರಿಯನ್ನು ತರಾತುರಿಯಲ್ಲಿ ಮಾಡಬೇಕಿತ್ತು. ಖೇಧು ನಾಯ್ಕನಿಗೆ ಐದು ಮಂದಿ ಗಂಡು ಒಂದು ಹೆಣ್ಣು ಹುಟ್ಟಿದ್ದರು. ಆ ಮತಿ ಹೀನನಿಗೇಕೆ ಮದುವೆ ಅಂದುಕೊಂಡಿದ್ದರು. ಆದರೆ ತಂದೆ ತಾಯಿ ಅವನಿಗೂ ಒಂದು ಬದುಕು ಇದೆ. ಅವನ ವಂಶವೂ ಕೂಡಾ ಬೆಳೆಯ ಬೇಕು. ಹಾಗಾಗಿ ಅವನ ಮದುವೆ ಆನಿವಾರ್ಯ ಎಂಬುದನ್ನು ಮನಗಂಡಿದ್ದರು. ಧನ್‌ಸಿಂಗ್ ಬುಕ್ಕ್ಯಾ ತಾನೆ ಇಳಿವಯಸ್ಸಿನಲ್ಲಿ ಮದುವೆ ಕೆಲಸಗಳನ್ನು ಮಾಡುತ್ತಿದ್ದ. ಬೀಗರನ್ನು ಕರೆಯುವುದು, ಮನೆಗೆ ಬೇಕಾದ ದಾಸ್ತಾನು ಬಟ್ಟೆ ಬರೆ, ಪಾತ್ರೆ ಪಡುಗ ಎಲ್ಲಾ ತಯಾರಿಯೂ ನಡೆದಿತ್ತು. ಮಗಳ ಮದುವೆ ಮಾಡಿದಾಗ ಅಷ್ಟೇನು ತಲೆ ಕಡೆಸಿಕೊಂಡಿರಲಿಲ್ಲ. ಆದರೆ ಬೊಲಾಶಂಕರನಂತಿದ್ದ ಪಂಪಾ ನಾಯ್ಕನ ಮದುವೆಯನ್ನು ಭರ್ಜರಿಯಾಗಿ ಮಾಡಲೇ ಬೇಕೆಂದು ನಿರ್ಧರಿಸಿದ್ದನು. ಹಾನಗಲ್ಲಿಂದ ಹಿಡಿದು ಚಿಕ್ಕ ಜೋಗಿಹಳ್ಳಿ, ಗೋವಿಂದಗಿರಿ, ಬಂಡೆ ಬಸ್ಸಾಪುರ ಮುಂತಾದ ತಾಂಡಗಳಲ್ಲಿ ಹರಿದು ಹಂಚಿ ಹೋಗಿದ್ದ ಎಲ್ಲಾ ಕರಮ್‌ತೋಟ್ ಸಹೋದರರನ್ನು ಖುದಾಗಿ ಹೋಗಿ ಅವನೇ ಕರೆದು ಬಂದಿದ್ದ. ಲಗ್ನ ಪತ್ರಿಕೆಯ ಪರಿಕಲ್ಪನೆ ದೊಡ್ಡ ಊರುಗಳಲ್ಲಿ ನಡೆಯುತ್ತಿದ್ದರಬೇಕು. ತಾಂಡಗಳಲ್ಲಿ ಕೇವಲ ಬಾಯಿ ಮಾತಿನ ಕರೆಗೆ ಮಂದಿ ಜಮಾವಣೆ ಯಾಗುತ್ತಿದ್ದರು. ದೂರದ ಸಂಬಂಧಿಗಳಿಗೆ ಕರೆಯಲು ಹುಡುಗರನ್ನು ಕಳುಹಿಸಿದ್ದ. ಮದುವೆ ತಯಾರಿಯಂತೂ ಮುಗಿದಿತ್ತು.

ಕೂಡ್ಲಿಗಿಯ ಚಂದು ಶೇಠನ ಅಂಗಡಿ ಲಂಬಾಣಿಗರ ಮದುವೆಯ ಬಟ್ಟೆಗಳಿಗೆ ದೊಡ್ಡ ಅಡ್ಡೆಯಾಗಿತ್ತು. ಚಂದು ಶೇಠ ಮಾರ್ವಾಡಿ ಭಾಷೆಗೆ ಹತ್ತಿರವಾದ ಗೋರ್‌ಬೊಲಿಯನ್ನು ಅಸ್ಪಷ್ಟವಾಗಿ ಮಾತಾಡುತ್ತಿದ್ದ. ಹತ್ತು ಚಕ್ಕಡಿಗಳು ಸಾಡೀ ಮೋಳಿಯಾ (ಮದುವೆ ಬಟ್ಟೆ) ತರಲು ಹೋಗಿ ಅಂಗಡಿಮುಂದೆ ಇಳಿಯುತ್ತಿದ್ದಂತೆ, “ಹಾಂ ಧನ್‌ಸಿಂಗ್ ಬಾಪು, ರಾಮ್‌ರಾಮ್ ಘರೇಮೆ ಸೇ ವಾರುಭಕ” (ಮನ್ಯಾಗ ಎಲ್ಲರೂ ಅರಾಮು ಅದಾರ) ಕೇಳಿ, “ನಾನ್ಯಬೇಟಾರ ವೀಯಚ್” (ಚಿಕ್ಕ ಮಗನ ಮದುವೆ) ಘಾಟು ಗೋಡಿಕೊಟವಾಲ ಅವೆ. ನಾನ್ಯ ನೋವ ಸಾಮನಬ್ಯಾವತೊ ದೋಣ” (ಅವರಿಗೆ ಸಣ್ಣಪುಟ್ಟ ಸಾಮಾನು ಕೊಡು) ಅಂದು, “ಹಾಂ ವೇಗಗೊದೇವೂಚೂ”

(ಆಯ್ತು ಕೊಡ್ತೀನಿ) ಅಂದ ಹುಡುಗ ಒಳಗೆ ಹೋದ. ಧನ್ ಸಿಂಗ್ ಹನುಮಾ ನಾಯ್ಕ ಮತ್ತು ಮಗಳುಟೋಲಿ ಮದುವೆಯಲ್ಲಿ ಪಡದಷ್ಟು ಖುಷಿ ಪಟ್ಟದ್ದು. ಪಂಪಾನಾಯ್ಕನಗೊಂದು ರಳಕಿ ದೋತಿ, ಒಂದರೆಡು ಮಾಮೂಲಿ ದೋತ್ರಗಲನ್ನು ಅಮಗಿ, ಒಳಂಗಿ ಪಟಪಟಿ ಚಣ್ಣಾ ಟವೇಲು ಅವನಿಗೆ ಬೇಕಾದ ಖಾಸಡ ಖರೀಧಿಸಿದ. ಸೊಸೆಗೆ ಮಾರ್ವಾಢಿ ಅಂಗಡಿಯಲ್ಲೆ ಟುಕರಿ, ಖಾಸಡಿ, ತಗೊಂಡು ಧೊಳ್‌ಖೊಳ್ ಆದಮೇಲೆ ಜೋಪಾನವಾಗಿ ಗಂಟುಗಳನ್ನು ಕಟ್ಟಿಸಿ ಚಕ್ಕಡಿ ಏರಿದರು. ಗುಡಿಕೋಟೆ ಕೆರೆದಾಟಿ ತಾಂಡಕ್ಕೆ ಬಂದಾಗ ಅಗಲೆ ರಾತ್ರಿಯ ಅರ್ದ ಜಾವ ಮುಗಿದಿತ್ತು. ಮಂದಿ ಆವಾಗ್ಲೆ ನಿದ್ದೆ ಮಾಡಿಯಾಗಿತ್ತು. ಖೆಮುನಾಯ್ಕ ಹೆಂಡತಿ ರೇಮಣಿ ಅವಳ ಕೊನೆಯ ಮಗ ಗೋಮ್ಲು, "ಯವ್ವ ಹೊಟ್ಟೆ ನೋವ ಬೇ." ಅಂದವನೆ ದಡಬಡಿಸಿ ಎದಿದ್ದಕ್ಕ ಎರಡಕ್ಕ ಕುಂದ್ರ ಸಾಕಂತ ಕೈಯಾಗ ಲಾಟೀನ ಹಿಡಿದುಕೊಂಡು ಕಣದ ಮೂಲಿಗೆ ಬಂದವಳೆ ದೂರದೊಳಗೆ ಚಕ್ಕಡಿ ಸದ್ದು ಕೇಳಿ ಖಾತ್ರಿ ಪಡಿಸಿಕೊಂಡಾಕಿನ ಗೋಮ್ಲಾನ್ನ ಪೂರಾ ಆಗಾಕ ಬಿಡದೆ ಅರ್ಧಕ್ಕೆ ತೊಳೆದು ಏಳಕೊಂಡು ಬಂದಳು. "ಇನ್ನು ಆಗಿಲ್ಲಬೆ ಕುಂದ್ರಬೇಕು" ಅಂತೇಳೀ ಲಬಲಬ ಹೊಯ್ಕೊಂತಿದ್ದ ಮಗನ ಬೆನ್ನಿಗೆ ಹೇರಿ ಏಳ್ಕಂಡು ಬಂದ್ಲು. "ಬೇ ನಿನ್ನವ್ವನ ನಾ. ಇನ್ನೂ ಕುಂದ್ರಾಕು." ಚಕ್ಕಡಿಗಳು ಅಗಸಿಬಾಗಲಿಂದ ಒಳಗೆ ಪ್ರವೇಶಿಸುತ್ತಿದ್ದಂತೆ. ಅಜ್ಜಿ ಅಂತೇಳಿ ಓಡಿದ.

ಮರುದಿನ ಮುಂಜಾನೆ ಒಂದು ಚೆಕ್ಕಡಿ ಗಾಡಿ ಗುಡಿಕೋಟಯ ರಾಂಬಟ್ಟರ ತೋಟದ ಕಡೆಗೆ ಹೋರಟಿತು. " ಲೇ ತಮ್ಮ ನಾಕು ಅಂತರ ಕಾಯಿ ತರೋದ ಮರಿಬ್ಯಾಡ. ಜೋಪಾನ ಕಣಪ್ಪ, ಎಲ್ಲಿ ನೆಲಕ್ಕ ತಾಗಬಾರದು."ಎಚ್ಚರಿಸಿದ ಧನ್‌ಸಿಂಗ್. "ಆಯ್ತು ದೊಡ್ಡಪ್ಪ ಹಂಗೆ ಆಗಲಿ, ನೀವು ಹೇಳಿದಂತೆ ತಗಂಡು ಬರ್ತೀವಿ." ಸಾಣು ನಾಯ್ಕ ಒಪ್ಪಿಕೊಂಡಿದ್ದ. ಅವನ ಹಿಂದೆ ಡಕಣ ಸಮತೆಗೆ ಹೊರಟಿದ್ದರು. "ಗಡಾನ ಬರ್ರೆಪ್ಪೊ ಹಂದ್ರಕಾಯಿ ಇಲ್ದ ಹಂದ್ರ ನಿಲ್ಲಾಕ ಬರಂಗಿಲ್ಲ." ಅಂದ್ಕೋತ ಯಾರೋ ಯಜಮಾನ್ರು ಬಂದಂಗಾಗಿ ಅವರ ಕಡೆ ನಡೆದ. ಯಕ್ಕೆಗಿಡ, ಹೊಂಗೆ ತಪ್ಪಲು, ಮಾವಿನ ಸೊಪ್ಪು, ತರಾಕ ಎರೆಡುಮೂರು ಹುಡುಗರು ಓಡಿದರು. ಕೆಸುಲಾದಹೂವು, ದರ್ಬೆಹುಲ್ಲು ಬಿಡಿ ಎಲೆಗಳನ್ನು ತರುವಂತೆ ಹೇಳುವುದನ್ನು ಮರೆಯಲಿಲ್ಲ. ಪ್ರತಿಯೊಂದು ಕಾರ್ಯಕ್ಕೂ ಪ್ರಕೃತಿಯ ಒಂದೊಂದು ಸಮಾನುಗಳನ್ನು ಬಳಸಲಾಗಿತ್ತಿತ್ತು. ಕಾಡು ಪಕ್ಕದಲ್ಲೇ ಇದ್ದುದರಿಂದ ಯಾವುದನ್ನು ಹುಡುಕುವ ಪ್ರಮೇಯ ಒದಗಲಿಲ್ಲ. ಹಗಾಗಿ ಹನ್ನೆರುಡು ಗಂಟೆ ಹೊತ್ತಿಗಾಗಲೆ ಧನ್‌ಸಿಂಗ್ ಬುಕ್ಯಾನ ಮನೆ ಎದರು ದೊಡ್ಡದಾದ ಹಂದ್ರ ನಿಂತಿತು. ಹಟ್ಟಿ ನಾಯಕ, ಕಾರಬಾರಿ ಇಬ್ಬರನ್ನು ಬಿಟ್ಟು ಗುಡಿಕೋಟೆ ತಾಂಡದ ಪ್ರತಿಯೊಬ್ಬ ಮುದುಕರು, ನಡುವಯಸ್ಸಿನ ಯುವಕರು ಹಂದರದೊಳಗಿದ್ದರು. ಲೋಕಾಭಿರಾಮ ಮಾತುಕತೆಗಳನ್ನು ಆಡುತ್ತಾ ಮದುವೆ ಕಾರ್ಯಗಳಿಗೆ ಸಾಕ್ಷಿಯಾದರು. ನೂರು ವರ್ಷದ ಪಿಕ್ಲಾ ನಾಯ್ಕ ಗಡದ್ದಾಗಿ ಕುಂತು ತಿಳಿಯದ ತನ್ನ ಭಾಷೆಯಲ್ಲಿ ಎಲ್ಲಾ ಶ್ಯಾಸ್ತ್ರಗಳ ಬಗ್ಗೆ ಮಾಹಿತಿ ನೀಡುತ್ತಿದ್ದ. ನೂರು ವರ್ಷದ ರಾಮಜ್ಜಿ ಕೂಡ ಪಂಪಾನಾಯ್ಕನಿಗೆ ಮದುಮಗನ ಮಾಡಿಸುವಲ್ಲಿ ನೆರವು ನೀಡಿದ್ದಳು.

ಮೇದಿ ಪೀಟಿಯನ್ನು ಮೈಗೆ ಹಚ್ಚಿದಮೇಲೆ ಅವನ ಮಾವ ದೇವ್ಲ ನಾಯ್ಕ ಅವನ ಹಿಂದೆ ಕೀರಿಯ ಆಗಿ ಎಲ್ಲಾ ಕಾರ್ಯಗಳನ್ನು ಆತನೆ ಮಾಡಲು ಮುಂದಾದ. "ಕಾಲಿಗೆ ಕಾಸಡ ಇಲ್ಲದ ಹೊರಗೆ ಹೋಗಬೇಡ ಮಗ, ಹಸಿ ಮೈ ಇರುವುದರಿಂದ ದುಷ್ಟ ಶಕ್ತಿಗಳು ಮೈಯೊಳಗೆ ಪ್ರವೇಶ

ಮಾಡುತ್ತವೆ. ಒಂದು ನಿಮ್ಮಪ್ಪನ ಜೋಡು ಹಾಕು ಇಲ್ಲಂದ್ರ ಖಾಸಡ ಹಕ್ಕೊಂಡು ಹೊರಹೋಗಬೇಕು. ಅಂತಾದ್ದೇನಾದ್ರು ಅರ್ಜೆಂಟ ಆದರೆ ನಿಮ್ಮ ಮಾವನಿಗೆ ಹೇಳು." ಸೀತ್ಕಿ ಮಗನಿಗೆ ಹೇಳಿದಳು. "ಅವನೇನು ಸಣ್ಣಾವ ಅಲ್ಲ ಬಿಡಕ್ಕ ಯಾವಾಗ್ಲೋ ಮದ್ವಿ ಆಗಬೇಕಿತ್ತು ಇಷ್ಟೊತ್ತಿಗೆ ಐದಾರು ಮಕ್ಕಳ ತಂದೆ ಆಕಿದ್ದ. "ಜೀವಾ ನಾಯ್ಕ ನಗೆಚಾಟ್ಲಿ ಮಾಡಿದ. ಹೂಂ ನೀನ ಇನ್ನೊಂದು ನಾಕೈದು ಮದವಿ ಮಾಡ್ಕೋಹೋಗು. ಹೆಚ್ಚುಕಮ್ಮಿ ಮಾಡಿದ್ರ ನಾ ಎಲ್ಲನೂ ಕಿತ್ತು ಬಿಸಾಕುತೀನಿ ನೋಡು ಮತ್ತ." ಬೆದರಿಕೆ ಹಾಕಿದ. "ಲೇ ಪಂಪಾ ಸುಮ್ಮನೆ ನಗೆಚಾಟ್ಲಿ ಮಾಡಿದನಲೆ ನಿಮಾಪ್ನ." ದೇವಲಾನಾಯ್ಕ ಸಮಾಧಾನ ಮಾಡಿದ. ಹೊರಗಡೆ ಹೆಂಗಸರ ಗುಂಪು ತಮಗೆ ಬರುವ ಎಲೆಅಡಿಕೆ ಸಲುವಾಗಿ, "ಹಾಂ ಎಲ್ಲಾ ವೆತಡೂ, ಎಯ್, ತಂಗಿ ಸರಿರೆ ಅತ್ಲಾಗ ವೇತಡೂನ ಹೊರಗಡೆ ಒಯ್ಯಬೇಕು, ನೀವೇನು ಗಂಟು ಬಿದ್ದೀರೆ ನಮ್ಮವ್ವ." ಹಿರಿಯಳಾದ ಸಾಮ್ಕಿಬಾಯಿ ಹೇಳುತ್ತಲೆ ಸಣ್ಣ ಹುಡುಗರನ್ನು ದಬ್ಬಿದಳು. ಗಳೆಯ ನಗಕ್ಕೆ ಕಂಬಳಿಯನ್ನು ಕಟ್ಟಿ ರೆಡಿಮಾಡಿದ. ಮಂಡೇವ ಡೋ ತೆಳಗೆ ನಿಂತ್ತಿದ್ದ ಪಂಪಾನಾಯ್ಕನನ್ನು ಹಾಡು ಹೇಳುತ್ತ ಕೆರೆದುಕೊಂಡು ಹೋದ ಹೆಂಗಸರು ಪೂರ್ವಾಭಿಮುಖವಾಗಿ ಕುಂದರಿಸಿ ಹೊಳ್ಳಿ ವಾಪಾಸು ತಮ್ಮ ಜಾಗಕ್ಕೆ ಹೋಗಿ ನಿಂತರು. ಧನ್‌ಸಿಂಗ್ ದೊಡ್ಡಪ್ಪನ ಮಗ ಧೂಪ್ಲಾ ನಾಯ್ಕ ಮುಕ್ಕಾರೆ ಕುಡಿದು ಕಾರ್ಯಕ್ರಮಕ್ಕೆ ಅಡ್ಡಿ ಪಡಿಸುತ್ತಿದ್ದ. ಧನ್‌ಸಿಂಗ್ ಒಳ್ಳೆಯ ಮಾತಿನಿಂದ ಸುಮ್ಮನಾಗಿಸಲು ನೋಡಿದ. ಆದರೆ ಅಸಾಮಿ ಅತನ ಮಾತಿಗೆ ಕವಡೆ ಕಿಮ್ಮತನ್ನು ಕೊಡದಾಗ ಸುಮ್ಮನೆ ಬೇರೆ ಕೆಲಸದಲ್ಲಿ ತೊಡಗಿಕೊಂಡ. ಆದರೆ ತಮ್ಮ ಪೂರ್ವಜರು ಕಟ್ಟಿ ಬೆಳೆಸಿದ ಲಮಾಣಿ ಸಂಸ್ಕೃತಿ ಹೀಗೆ ಕುಡಕರ ಕೈಗೆ ಸಿಕ್ಕು ಎಕ್ಕುಟ್ಟಿ ಹೋಗುತ್ತಿರುವುದ ಕಂಡು ಬೇಸರವಾಗಿತ್ತು. " ಹೆಂಡತಿಯರ ದುಡಿಮೆ ತಿನ್ನುವ ಸೂಳಿ ಮಕ್ಕಳು ಸಮಾಜವನ್ನೆ ಹಾಳು ಮಾಡಿದರಪ್ಪ, ಏನ್ ಮಾಡೋದು ಹೇಳು." ತಾಂಡದ ಹಿರಿಯ ರೂಪ್ಲಾನಾಯ್ಕ ತನ್ನ ಅಂತರಾಳದಲ್ಲಿ ಹುದುಗಿದ್ದ ಬಹು ಕಾಲದ ಮಾತನ್ನು ಧನ್‌ಸಿಂಗ್‌ಗೆ ಹೇಳಿದ. "ದೊಡ್ಡೋರು ಅನ್ನಂಗಿಲ್ಲ. ಸಣ್ಣೋರು ಅನ್ನಂಗಿಲ್ಲ, ಎಲ್ಲಾ ಒಂದೆ. ಹೂಂ, ಭಗವಂತನೆ ಕಾಪಾಡಬೇಕು ಇವರ್ನ" ಮಡುಗಟ್ಟಿದ ಯೋಚನೆಯ ಎಳೆಯೊಂದನ್ನು ಹೊರ ಹಾಕಿದ್ದ.

ಧೂಪ್ಲಾ ನಾಯ್ಕ ಮಾತ್ರ, "ಲೇ ಹಡ್ಸಿಮಕ್ಕಳ, ಏನಂದ್ಕೋಡಿರ್ರಲೇ, ನಿಮ್ಮಜ್ಜ ಮೋಸ ಮಾಡಿದ, ನಮಗೇನು ಕೊಡದಂಗೆ. ಇಡೀ ಮನಿಗ ಮನಿನ ಹಕ್ಕೊಂಡ. ಈಗ ಏನಾತು? ಈ ಪಂಪ ಅರೆ ಹುಚ್ಚ, ಅವನಿಗೊಂದು ಮದುವಿ ಮಾಡ್ತಾನ, ಏಯ್, ಧನ್‌ಸಿಂಗ್‌ನಾಯ್ಕ ಬಾರೋ ನ್ಯಾಯ ಪಂಚಾಯ್ತಿಮಾಡು. ಓ ಹೋ ಬೆರೆಯವರಿಗೆ ಮಾತ್ರ ಬಣ್ಣದ ಗಿಲಿಟ್ ಹಚ್ಚಿದ ಮಾತು ಆಡಿ ನ್ಯಾಯ ಕೊಡುಸ್ತೀಯಾ, ನಮಗೆ ಮೊಸ ಮಾಡ್ತೀಯ. ಏಯ್ ನಿಲ್ಲಿಸಿರಿ ಅಳೋದನ್ನ." ದೇಹದ ಮೇಲೆ ಸಂಪೂರ್ಣವಾಗಿ ನಿಯಂತ್ರಣ ಕಳೆದುಕೊಂಡಿದ್ದ. ನಾಕು ಮಂದಿ ಹಿಡಿದು ಕೂಡಿಸಲು ಪ್ರಯತ್ನಿಸಿದರೂ ಕೇಳದ ಕೊಸರಿಕೊಂಡು ಹೋಗಿ ಹಿನಾಮಾನ ಶಬ್ದಗಳಿಂದ ಬೊಯ್ಯತೊಡಗಿದ. ಯಾರೋ ತಡೆದರು ಅವರನ್ನೆ ನೂಕಿದ. ಅವನು ಕುಡಿದಾಗ ಯಾ ಮಗನ ಕೈಯಿಂದಲೂ ಅವನನ್ನು ಹಿಡಿದು ನಿಲ್ಲಿಸಲಿಕ್ಕಾಗದಷ್ಟು ಫಜೀತಿ ಮಾಡುವುದರಿಂದ ಅವನ ಸವಾಸಕ್ಕೆ ಯಾರೂ ಹೋಗುತ್ತಿರಲಿಲ್ಲ. ಯಾಕೆ ಸಗಣಿಗೆ ಕಲ್ಲು ಹೊಡೆದು ಮೈ ರಾಡಿ ಮಾಡಿಕೊಳ್ಳಬೇಕು ಎನ್ನುವರೆ. ಇಲ್ಲ ಅವನ ಜೊತೆ ಹೊಡೆದಾಡಬೇಕು. ಇಲ್ಲ ಬಾಯಿಗೆ ಬಾಯಿ ಮಾಡಬೇಕು, ಕೈಕೈ

ಮಿಲಾಸಿ ಹೊಡೆದಾಡಿ ಏನು ಪ್ರಯೋಜನ? ಅಂದವರೆ ಅವನು ಅಂದ್ರೆ ಮಂದಿ ಸುಮ್ಮನೆ ಅಚೆ ಈಚೆ ಸರಿದು ಹೋಗುತ್ತಿದ್ದರು. ದ್ಲೂಪಾನ ಉಪಟಳ ಹೆಚ್ಚಾಯಿತು. ದೂಕಿ ಕೆಳಗೆ ಬೀಳಿಸಿ ಅವನ ಮೇಲೆ ಕೂಂತು ಹೊಡೆಯುತ್ತಿದ್ದವನನ್ನು ಮಂದಿ ಜುಲ್ಮಲೆ ಎಬ್ಬಿಸಿದರು. ಕೆಳಗೆ ಬಿದ್ದು ಏನೇನೊ ಹಡಬಿ ಬೋಯ್ಕಂತ ಓಡಿದ. ಹೊಡೆದ ಅವನನ್ನು ಬಿಟ್ಟು ಬಿಡಿಸಿದ ಕೈ ಹಿಡಕಂಡ. "ಲೇ ಕೈಬಿಡಲೆ, ಒಳ್ಳೆ ಮಾತಿಂದ ಹೇಳಾಕ ಹತ್ತೀನಿ, ದೂಪ್ಲಾ ಇಲ್ಲಾಂದ್ರ ನಿನ್ನ ಹೆಡಮುರಗಿನ ಕಟ್ತೀನಿ." ಬಾಯಿ ಜೋರಮಾಡಿ ಹದರಿಸೊದಕ್ಕ ನೋಡಿದ. "ಏನು ನೋಡ್ತಿಯಪ್ಪ ನನ್ನ ಕೊಂದು ಹಾಕ್ತಿಯಾ, ನಾನು ಅಂದ್ರೆ ಅಷ್ಟ ಹಡ್ದೇನು. ನೀ ಯಾಕ ಅವನ್ನ ಬಿಡಿಸಿದಿ? ಉತ್ತರಕೊಡು ಮೊದಲು." ಮಾತಾಡ್ತಾ ಜೋಲಿ ಹೋಗಿ ಯಾರೋ ಕುಂತವರ ಮೇಲೆ ಬಿದ್ದ. ಇವನ ಕೈ ಬಿಳೋಮುಂದ ಬಿಟ್ಟದ್ದ. ಬದುಕಿದ್ನಪ್ಪ ಅಂದವನೆ ಮಂದಿ ಹಿಂದ ಸರಿದು ಬಿಟ್ಟ. ಯಾರಮೇಲ ಬಿದ್ದಿದ್ನೋ ಅವನು ಹಿಡಿದು ನಾಕು ಬಾರಿಸಿದ. ಅಲ್ಲೆ ಸುರುವಾಯಿತು ಮಾರಾಮಾರಿ. ಅವನು ಹಿಡಿದು ಹಿಗ್ಗಾಮುಗ್ಗಾ ಥಳಿಸಿದ. ಕುಡಕ ದೂಪ್ಲನ ಧೂಳೂ ಕೊಡವಿದ. ಹೊಡ್ತಾತಿಂದು ಸತ್ತೋರಂತೆ ಬಿದ್ದು ಬಿಟ್ಟ. ಮದುವೆಗೆ ಬಂದ ನೂರಾರು ಮಂದಿಗೆ ಮಜುಗರ, ಕಿರಿಕಿರಿ ಅನಿಸಿತು. ಆದರೂ ತಮ್ಮ ಜಾತಿ ಮದುವೆಗಳಲ್ಲಿ ಇವಿದ್ರೆನೆ ಚೆನ್ನಾಗಿರುತ್ತೆ ಅಂತ ಕೆಲ ಮಂದಿ ಭಾವನೆ ಕೂಡ ಆಗಿತ್ತು.

ಕುಡುಕನಿಗೆ ಒಂಚೂರು ಪ್ರಜ್ಞೆ ಬರೋವರೆಗೆ ಸುಮ್ಮನಿದ್ದು ಎದ್ದವನೆ, ಸೀದಾ ಹೋಗಿ ನಿಂತಿದ್ದ. ಹಂದರದ ನಡಕ್ಕೆ ನಿಲ್ಲಿಸಿದ್ದ ಮುಂಡೇವಡೋ ಕಿತ್ತು ಬಿಸಾಕಿದ. " ಸೂಳಿ ಮಕ್ಕಳ್ರ, ಅರೆ ಹುಚ್ಚನ ಮದುವಿ ಹೆಂಗ ಮಾಡಿರಿ, ಬಂದ್ ಮಾಡ್ರಿ." ಅಂತೇಳಿ ಬೊಯ್ಯ ತೊಡಗಿದ. ಕುಂತನಿಂತ ಮಂದಿ ದಂಗಾಗಿ ನಡೆದು ಹೋದ ಅಮಂಗಳವನ್ನು ನೋಡ್ತಾನೆ ಹೌಹಾರಿದ್ರು. "ಛೆ ಯವನಾರು ಹಿಡದು ಏಳದು ಬಿಸಾಕಬಾರದ. ಎಂಥ ಅಪಶಕುನ, ಛೆ ಆಗಬಾರದ್ದು ಆಗಿ ಹೋಯಿತಲ್ಲ." ಡಾವ್ರೋ ಹಳಹಳಿಸ ತೊಡಗಿದ. ತಮ್ಮ ಸಂಪ್ರದಾಯದಲ್ಲಿ ಮುಂಡೇವಡೋಗೆ ಹೆಚ್ಚಿನ ಆದ್ಯತೆ. ಅದನ್ನೆ ಇವನು ಬಿಳಿಸದನೆಂದರೆ ಹುಡುಗನ ಬಾಳು ನೆಟ್ಟಗಾಗೊದಿಲ್ಲ. ಧನ್‌ಸಿಂಗ್, ಮಂಡೇವಡೋ ನೆಲಕ್ಕ ಬಿಳೂತ್ತಿದ್ದಂಗೆ ಕುಸಿದು ಬಿಟ್ಟ. ಬಾಳಾ ಸಂತೋಷದಿಂದ ನಡೆಯುತ್ತಿದ್ದ ಮದುವೆಯಲ್ಲಿ ಏಂಥ ಅಚಾತುರ್ಯ ಘಟಿಸಿ ಹೋಯಿತಲ್ಲ ಎನ್ನುವ ಆತಂಕದಿಂದ ಸಂಯಮವನ್ನು ಕಳೆದುಕೊಂಡ. "ಏನು ತಿಳಿಯದ ನನ್ನ ಮಗನ ಬದುಕನ್ನೆ ಹಾಳೂ ಮಾಡಿದೆಯಲ್ಲೊ ಸೂಳಿ ಮಗನ. ನಾವು ನಿನ್ನ ಮನಿಗಿ ಮುಳ್ಳೂ ಬಡುದಿದ್ವಾ. ಏನು ಮಾಡೋದಪ್ಪ ಶಿವನೆ ಈಗ ಏನು ಮಾಡಲಿ." ಮಂದಿ ಧನ್‌ಸಿಂಗ್‌ನ್ನು ಇನ್ನೊಂದು ಕಡೆ ಅವನ ಹೆಂಡತಿಯನ್ನು ಸಮಜಾಯಿಸುತ್ತಿದ್ದರು. ಪಂಪಾನಾಯ್ಕನೂ ಗಾಬರಿಯಾಗಿದ್ದ. ಇಡೀ ಗುಡಿಕೋಟೆ ತಾಂಡವೇ, ಎಂಥಾ ಅನಾಹುತ ಆಗಿಹೋಯ್ತು ಎನ್ನುವವರೆ. ಸುದ್ದಿ ಕಾಳ್ಗಿಚ್ಚಿನಂತೆ ಹಬ್ಬಿತು. ನಾಯಕ, ಕಾರಬಾರಿ, "ಮಗ ಮಹಾ ಪಂಡಿತ ನಂಗೆ ಆಡ್ತಿದ್ದ, ಈಗ ಸರಿಯಾಗಿ ಆಯ್ತು ನೋಡು. ಏನು ಮಾಡ್ತಾನ ಸುಮ್ಮನೆ ನೋಡುವ ಅಷ್ಟೆ." ನಾಯಕ ಕಾರಬಾರಿಗೆ ಹೇಳಿದರೆ ಕಾರಬಾರಿ ನಾಯಕನಿಗೆ ಹೇಳಿದ. ದೂರದಿಂದ ಬಂದಿದ್ದ ಸಂಬಂಧಿಕರೆಲ್ಲಾ ಸೇರಿ, "ನೋಡ್ರಪ್ಪ ಮಂಡೇವಡೊ ಮುಟ್ಟುಬಾರದಾಗಿತ್ತು. ಆದರೆ ಅವನು ಎಂಥ ಅನಾಹುತ ಮಾಡಿಬಿಟ್ಟ ಸೂಳಿ ಮಗ. ಬಂಜಾರ ಮದುವೆಯೊಳಗೆ ಮಂಡೇವಡೋ ಬಹಳ ಮುಖ್ಯ, ಅದು ಕಳಸ ಇದ್ದಂಗ,

ಗಂಡು ಹೆಣ್ಣಿನ ಸಂಬಂಧ, ಅವರು ಬಾಳಿ ಬದುಕುವುದರ ಸೂಚಕವಾಗಿತ್ತು. ಆದರೆ ಕುಡಿದ ಅಮಲಿನಲ್ಲಿ ಧೂಪ್ಲಬುಕ್ಯಾ ಕರಮತೋಟ್ ತನ್ನ ಸೋದರ ಸಂಬಂಧಿಯಾದ ಪಂಪಾನಾಯ್ಕ ಅರೆ ಹುಚ್ಚ ಅಂತೇಳಿ ಮಂದಿ ಏನು ನಂಬಿದ್ರು. ಆವನ ಬಾಳು ಹಾಳಾಗ ಬೇಕಂತೇಳಿ ಮಾಡಿದನೋ, ಇಲ್ಲ ಧನ್‌ಸಿಂಗ್ ಮೇಲಿನ ಕೋಪಕ್ಕೆ ಮಾಡಿದನೋ ಘಟನೆ ಅಂತು ನಡೆದು ಹೋಯಿತು. ಅಲ್ಲಿದ್ದವರ ಮನಸ್ಸಿನೊಳಗೆ ಸೂಕ್ಷ್ಮವಾಗಿಯೆ ಕೆಲವು ವಿಷಯಗಳು ಕಾಡ ತೊಡಗಿದವು. " ಪಾಪ ಪಂಪಾನಾಯ್ಕನ ಬಾಳೇವು ನೆಟ್ಟಗಾಗಂಗಿಲ್ಲ, ಮೊದ್ಲ ಅವನು ಸಾದು ಮನುಷ್ಯ. ಅಯ್ಯೋ ದೇವರೆ ಎಂಥ ಅನಾಹುತ ಮಾಡಿದೆ, ಇದು ಯಾರ ಮಕ್ಕಳಿಗೂ ಆಗಬಾರದು." ಖೂದ್ದಾಗಿ ಹಟ್ಟಿ ನಾಯಕನೆ ಮಾತುಗಳನ್ನು ಹೇಳಿದ. ಧೂಪ್ಲಾನ ಎಳಕೊಂಡು ಹೋಗಿದ್ದ ಬೇಮುನಾಯ್ಕ ಮತ್ತೊಂದು ನಾಕ ಮಂದಿ ಚೆನ್ನಾಗಿ ಒದ್ದು ನಿಶೆ ಇಳಿಯೋಮಟ ಬಿದ್ದರಲಿ ಅಂತೇಳಿ ಕಂಭಕ್ಕ ಕಟ್ಟಿಹಾಕಿ ತಣ್ಣೀರು ಸುರುವಿದರು.

ಇಡೀ ಊರೇ ಘಟನೆಯಿಂದ ಅಘಾತಕ್ಕೆ ಒಳಗಾಗಿದ್ದರು. ಯಾರಬಾಯಲ್ಲಿ ಕೇಳಿದರು ಪಂಪಾನಾಯ್ಕ ಮಾತುಗಳೆ, ಮೂಲೆ ಮೂಲೆಗಳಲ್ಲಿ, ಸಂದಿ ಸಂದುಗಳಲ್ಲಿ ಹೆಂಗಸರು, "ಕೇಳಿದೇನವ್ವ, ಪಾಪ ಆ ಪಂಪಾನಾಯ್ಕ ಬದುಕು ನೆಟ್ಟಗಾಗಲಿ ಅಂತೇಳಿ ಅವರಪ್ಪ ಧನ್‌ಸಿಂಗ್ ಮದುವೆ ಮಾಡಾಕ ನೋಡಿದ. ಮಂಡೇವಡೋನ ಡೂಪ್ಲ ಕೆಳಗ ಬೀಳಿಸಿದನಂತೆ. ಯಾವ ಕೇಡು ಕಾದ್ಯೆತೋ ಏನೋ ಆ ಮನಿಗೆ. ಧೂಪ್ಲ ಯಾರ ಸುದ್ದಿಗೆ ಹೋಗದವ ಅಕ್ಕ." ಅಲ್ಲಲ್ಲೆ ಮಾತುಗಳು ಭಾರಟೆಯಿಂದ ಸಾಗಿದ್ದವು. ಇನ್ನು ಹಿಂಗಾದ್ರ ಮಾತು ಬಣ್ಣ ಪಡೀತು ಅಂತ ಯೋಚನೆ ಮಾಡಿದಡಾವೂ ಸೇಣು ನಾಯ್ಕ, " ಸಮದಿ ಮೇಲೇಳು, ಏನು ಆಗಬಾರದು ಆಗಿಲ್ಲ. ನೀ ಹಿಂಗ ಮಂಕಾಗಿ ಕುಂತ್ರ ಮದುವಿ ನಿಂತು ಬಿಡತೈತಿ. ಅವನೇನು ಪ್ರಜ್ಞೆಯಿಂದ ಮಾಡ್ಯಾನೇನು? ಇಲ್ಲ. ಮುಕ್ಕಾರ ಕುಡಿದು ಪ್ರಜ್ಞೆ ಇಲ್ಲದ ಅದೇನೋ ಮಾಡಕ ಹೋಗಿ ಆಗಿದ್ದು. ಅಂಥವನೆಲ್ಲ ಮನಸ್ಸಿಗೆ ಹಚ್ಕೋಬ್ಯಾಡ. ಆದದ್ದು ಆಗತೈತಿ, ಅಲ್ಲಪ್ಪ ಕ್ಷೌರಿಕ ಬೋಳಿಸಿದ್ರ ಮುಂದ ತಲೆಗೂದಲು ಬೀಳಿತಾವು ತಾನೆ. ಮುಂದು ನೋಡೋನ ನಡೆಯೋದಕ್ಕೆಲ್ಲ ಒಂದು ಪರಿಹಾರ ಇದ್ದೆ ಇರತೈತಿ." ಧೈರ್ಯತುಂಬಿದ. ಧನ್‌ಸಿಂಗ್ ಜರ್ಜರಿತನಾಗಿದ್ದ. ಅವನ ಬಾಯಿಂದ ಮಾತುಗಳು ಹೊರಡದಂತಾಗಿದ್ದವು. ನೋವಿನಲ್ಲೂ ಮೆಲೆದ್ದು ಸೇವಾಭಾಯಿನ ಮೇಲೆ ಭಾರ ಹಾಕಿದವನೆ. ಕೈಸನ್ನೆ ಮಾಡಿ ಚಕ್ಕಡಿಬಂಡಿ ಕಟ್ಟಿ ಮದುಮಗನ್ನ ಹೊರ ತಗೀಯೋದಕ್ಕ ಹೇಳಿದ. ಕೇವಲ ನಾಲ್ಕು ಮೈಲಿ ದೂರವಿದ್ದ ಅಪ್ಪೇನ ಹಳ್ಳಿ ತಾಂಡಕ್ಕೆ ಇಲ್ಲಿ ನಡೆದ ಘಟನೆ ಸುದ್ದಿತಲುಪಿತ್ತು. ಬದ್ಯಾನಾಯ್ಕ ಗೂಡ್ಲಿ ಮದುವೆ ಬಗ್ಗೆ ಯೋಚಿಸಿದ. ಬಹಳಷ್ಟು ಮಂದಿ ಆಮ್‌ಗೋತ್ ಕುಲದವರೆಲ್ಲಾ ಸೇರಿ. ಬದ್ಯಾ ನಾಯ್ಕನಿಗೆ ಮದುವೆ ನಿಲ್ಲಿಸುವಂತೆ ತಾಕತ್ತು ಮಾಡಿದರು. "ಕಾಕ, ನೀ ಹೆಂಗ ಯೋಚನೆ ಮಾಡ್ತೀಯಾ. ನಮ್ಮ ಸಮಾಜದಾಗ ಮಂಡೇವಡೋ ಬಹಳ ಮುಖ್ಯ. ಮದುಮಗ ಮದುವಿ ಮುಗಿಸಿ ವಾಪಾಸು ಬರೋಮಟಾನು ಅದನ್ನ ಯಾರು ಮುಟ್ಟಬಾರದು ಅನ್ನೊ ಕರಾರಿರುತ್ತೆ. ಸಂಪ್ರದಾಯದ ಪ್ರಕಾರ ಮಂಡೇವಡೊ ಅದಾಗೆ ಬಿದ್ರೆ, ಯಾರಾರ ಕೆಡವಿದ್ರೆ ಅಪಶಕುನ. ಹುಡುಗಿ ಬಾಳೆವು ನೆಟ್ಟಗಿರೋದಿಲ್ಲ. ಗಂಡಿನ ಕಡೆಯವರು ಇನ್ನೇನು ಹೊಂಟು ಬರ್ತಾರ ಸುದ್ದಿ ತಿಳಿಸು." ಅವನ ಹಿರಿಯಣ್ಣನ ಮಗ ರಾಮುಡು ಹೇಳಿದ. ಆಮಗೋವ್ ಬದ್ಯಾ ನಾಯ್ಕ ಮಾತಾಡುವುದು ಅನಿವಾರ್ಯವಾದಾಗ ಮಗನ ಮುಂದ, "ಲೇ ತಮ್ಮಗಳಿರಾ, ಮದುವೆ

ನಿಲ್ಲಸೋದು ಬಹಳ ಸುಲಭ. ಒಂದು ಆಳನ ಕಳುಹಿಸಿ ಬರೋದ ಬೇಡಾಂದ್ರೆ ಮುಗಿತು. ಆದರೆ ನಾಳೆ ಕೊಡ ತಗೊಳೊ ಮಗಳ ಗತಿ ಏನು? ಗಡಿಗೆ ಬಾಯಿ ಮುಚ್ಚುಬೋದು. ಆದರ ಮಂದಿ ಬಾಯಿ ಮುಚ್ಚೋಕ ಆದೀತಾ? ಇದ್ರಾಗ ಧನ್‌ಸಿಂಗ್ ಬುಕ್ಯಾ ಕರಮ್‌ತೋಟ್‌ದೇನು ತಪ್ಪೈತಿ ಹೇಳ್ರಿ. . . . ಹೂಂ, ಮಾತಾಡ್ರಪ್ಪ ಅವನದೇನು ತಪ್ಪು?" ಕುಲಸ್ಥರ ಮಾರಿ ನೋಡಿದ. ಅವರ ಪೈಕಿನೆ ಒಬ್ಬನು, "ಏನೆ ಆದ್ರೂ ಇದು ನಮ್ಮ ಮನಿತನದ ಪ್ರಶ್ನೆ, ನಮ್ಮ ಕುಲದ ಮರ್ಯಾದೆ ಪ್ರಶ್ನೆ ನೀವು ಹಿಂಗೆಲ್ಲ ಮನಸಾ ಇಚ್ಛೆ ಮಾಡಕ ನಾವು ಬಿಡೋದಿಲ್ಲ." ಕೇಡಿಹಂಗೆ ತೊಳು ಮಡಿಚಿ ಮೇಲೆದ್ದ. "ಏನು ಮಾಡ್ತೀಯಾ ಹೇಳು, ಏನ್‌ಮಾಡ್ಕೊಂತಿಯಾ? ಹುಡಗಿ ಅಪ್ಪಾನೆ ಸುಮ್ಮನಿದ್ದೀನಿ, ಯಾವನು ಕುಡುಕ ಏನೋ ಮಾಡಿದ್ರ ಅದರಲ್ಲಿ ಹುಡುಗನದೇನು ತಪ್ಪು, ನಾಳೆ ಮುಂಜಾನೆ ಮದುವೆ ನಡೆಯುತ್ತೆ ಅಷ್ಟೆ." ಕಡ್ಡಿ ಎರೆಡು ತುಂಡು ಮಾಡಿದಂತೆ ಹೇಳಿದ. ಕೆಲವರಿಗೆ ಸ್ವಲ್ಪ ಹಿನ್ನಡೆಯಾದಂತೆ ಆಗಿ, "ಆಯ್ತು ನಿಮ್ಮ ಮನಸ್ಸಿಗ ಬಂದಂಗ ಮಾಡಿಕೊಳಪ್ಪ. ನಾವು ಯಾವ ಕಾರ್ಯ ಮಾಡಿದರು ಬರಂಗಿಲ್ಲ." ಅಂದವರೆ ಎದ್ದೆದ್ದು ಹೊರಗಡೆ ಹೋದರು.

"ಯಾರೋ, ದೊಡ್ಡಪ್ಪ ಹುಡುಗನ ಕಡೆಯವರು ಸೇವಾಭಾಯ ಮರಿಯಮ್ಮನ ಮಟ್ಟ್ಯೊದ ಎದರುರಿಗೆ ಬಂದಾರ. ಹಟ್ಟಿ ನಾಯಕನ ಮನಿಯೋರು ಚಾಪೆ, ನೀರು ಕೊಡಬೇಕೊ ಬೇಡವೋ ಅಂತ ಕೇಳ್ತವ್ರೆ." ಅಂದ. "ವಯ್, ನಾಯಕನ ಮನೆಯವರೇನು ಹೊಸ ಪದ್ಧತಿ ತಂದಾರೇನು, ಹೋಗಿ ಹುಡುಗನಿಗೆ ಕುಂದ್ರಾಕ ವ್ಯವಸ್ಥ ಮಾಡ್ರಿ. ಹೋಗ್ರಿ ದೌಡನ." ಅಂದವನೆ ಹೊರಗ ಬಂದು ಮನಿಕಡೀಗೆ ಹೊರಟ. ಅವನ ಮೂರನೇ ತಮ್ಮಚಾಪ್ಲನಾಯ್ಕ ಮದುಮಗನ ಕಡೆಯವರಿಗೆ ಊಟ ಕೊಡವುದಕ್ಕೆ ವಾರದ ಹಿಂದೆನೆ ಮಾದ್ಲಿ ಮಾಡಿಸಿದ್ದ. ಅವರ ನಾಟಿ ಹಸುಗಳಿಗೆ ಸರಿಯಾಗಿ ಮೇಯಿಸಿ ಹಾಲು ಹಿಂಡಿ ಬೆಣ್ಣೆ ಮಾಡಿ ಕಾಯಿಸಿದ್ದ. ತುಪ್ಪದ ದೊಡ್ಡ ಕುಂಭವನ್ನು ತರಿಸಿದ್ದ. ದೊಡ್ಡ ತಪಾಲಿಯಲ್ಲಿ ಹಾಲು ಕಾಯಿಸಿ ಮುಚ್ಚಿಸಿದ್ದ. ಓಂದು ಕಡಿ ನವಣಕ್ಕಿ ಅನ್ನ ಹುಳ್ಳೀ ತೊಕ್ಕು. ಬೀಗರನ್ನ ವಿಜ್ರಂಬಣೆಯಿಂದಲೆ ಆಹ್ವಾನಿಸುವ ಎಲ್ಲ ತಯಾರು ನಡೆದಿತ್ತು. ಎರಡು ಕಡೆಯ ಹುಡುಗಿಯರು ತಾಯಿ ತಂಗಿ ಅತ್ತಿಗೆ ಅಣ್ಣ ತಮ್ಮ ಎಲ್ಲರನ್ನೂ ಹಾಡಿನೊಳಗೆ ಬೋಯ್ದು ನಿವಾಳಿಸಿದ ಮೇಲೆ ಮದು ಮಗನನ್ನು ಹುಡಿಗಿ ಮನೆ ಎದುರಿಗೆ ಕರೆದೊಯ್ಯಲಾಗಿತ್ತು. ಶ್ಯಾಸ್ತ್ರ ದಂತೆ ಅವನ ಹೆಣ್ಣಿನ ಮೆನಯವರು ಬರಮಾಡಿಕೊಂಡ ನಂತರ, ಚಾಪ್ಲನಾಯ್ಕನ ಮನೆಗೆ ಊಟಕ್ಕೆ ಹೊರಟರು. ವೇತಡು ಮತ್ತ ಲೇರಿಯಾ ಉಳುಕೊಂಡ್ರು. ಅವರಿಗೆ ಒಂದೇ ತಟ್ಟೆಯಲ್ಲಿ ಊಟ ಕಳಿಸಿದ ಚಾಪ್ಲನಾಯ್ಕ. ತಟ್ಟೆ ತುಂಬ ಮಾದ್ಲಿ ತಜಪ್ಪ ಹಾಲು ಮದ್ಯಾಹ್ನ ಉಂಡ ಮಂದಿ ಸರಿಯಾಗೆ ಉಂಟು ಎದ್ದಿದ್ದರು. ಬೀಗರ ನಂತರ ಊರು ಮಂದಿ ಪ್ರಮುಖರನ್ನು ಕರೆದು ಊಟಕ್ಕೆ ಹಾಕಲಾಯಿತು. ಕರೆದ ಒಂದೇ ಮಾತಿಗೆ ಹಿರಿಯರು ಆಯ್ತು ನಡಿಯಪ್ಪ ಅಂತೇಳಿ. ಮಕ್ಕೊಂಡವರು ಎದ್ದು ಬಂದು ಊಟ ಮಾಡಿ, ಅಡುಗೆ ಮಾಡಿಸಿದ ಚಾಪ್ಲಾನ ಹೊಗಳಿದರು.

ಹಂದ್ರದೊಳಗೆ ಬಂದ ಮಂದಿ ಸಾಲಿಗೆ, ಈಚಲ ಚಾಪೆ, ಗೋಣಿ ತಟ್ಟು ಹಾಕ್ಕೊಂಡು ತಮ್ಮ ಲಪಾಟಿಯನ್ನೆ ಕಿತ್ತಕೊಂಡು ಕೆಲವರು ಚಾದರ ಮಾಡಿಕೊಂಡರೆ ಇನ್ನೂ ಕೆಲ ಮಂದಿ ಶಾಲು ಟವಲನ್ನೆ ದುಪಟಿ ಅನ್ನಕೊಂಡಿದ್ದರು. ದೀಪಾವಳಿ ಆದ್ದರಿಂದ ತಂಡಿಗಾಳಿ ಬೀಸಾಕ ಸರು ಮಾಡಿತು. ಗಾಳಿ ಹೊಡತಕ್ಕ ಮಂದಿ ಕಾಲು ಮಡಿಚಿ ಹೊಟ್ಟೆ ಒಳಗ ತೂರಿಸಿಕೊಂಡು ಮಲಗಿ

ಚಿಕ್ಕ ಪುಟ್ಟವನ್ನೇ ಹೊದ್ದು ಮಲಗಿ ರಾತ್ರಿ ಕಳದು ಮುಂಜಾನೆಯ ಕಾರ್ಯಕ್ರಮಕ್ಕೆ ಅಣಿಯಾಗಲು ತರಾತುರಿಯಲ್ಲಿದ್ದರು. ಮದುವೆ ವಾರೊಪ್ಪತ್ತು ಹಿಡಿದಿದ್ದಕ್ಕ ಬಹಳಷ್ಟು ಜನ ಮುಂಜಾನೆ ಖಾಲಿ ಮಾಡಿದ್ದರು. ದಿನಕ್ಕೊಂದು ಕಾರ್ಯ ಮುಗುದು ತಾಂಗಡಿ (ದಿಬ್ಬಣ) ಕಳಿಸಬೇಕು ಇದ್ದಕ್ಕಿದಂಗೆ ಕುಡಿದು ಮೈಮೇಲೆ ಪ್ರಜ್ಞೆ ಇಲ್ಲದ ಧೂಪ್ಲನಾಯ್ಕ ಪ್ರತ್ಯಕ್ಷ ನಾಗಿದ್ದ. "ಎನ್ ಈ ಮಗ ನನ್ನ ಮಕ್ಕಳ ಹಿಂದ ಕೈ ತೊಳದು ಬಿದ್ದಾನಲ್ಲ ಎನ್ ಇವನ ಹಕಿಕತ್ತು?" ಯೋಚನೆ ಮಾಡಿದ. ಅಷ್ಟೊತ್ತಿಗಾಗಲೆ ಆಮಗೊತ್ ಗೂಡ್ಲಿ ಅಣ್ಣಂದಿರು ಅನಾಮತ್ತಾಗಿ ಎತ್ಕೊಂಡು ಹೋಗಿ ಚೆನ್ನಾಗಿ ಒದ್ದರು. ಕುಡುದು ನಿಶೇದಾಗಿದ್ದ ಅವನು ಯಾರೊ ಹೊಡಿಬಾರದ ಜಾಗದಾಗ ಹೊಡಿದಿದ್ದಕ್ಕ ಹೆಚ್ಚು ಕಮ್ಮಿಯಾಗಿ ಉಸುರು ಬಿಟ್ಟು ಬಿಟ್ಟು ಹಿಡಿಯಾಕ ಹತ್ತಿದ. ಅಪ್ಪೇನ ಹಳ್ಳಿ ತಾಂಡದ ಮಂದಿ ಗಾಬರಿಯಾದರು. "ಏಯ್ ಯಾರಾರ ಇವನ್ನ ಎತ್ಕೊಂಡು ಹೋಗಿ ಆವನ ತಾಂಡದಾಗ ಬಿಸಾಡಿ ಬರ್ರಿ ಅಂದ್ರು." ಇನ್ನೂ ಕೆಲವರು "ದವಾಖಾನಿಗಾದ್ರು ಹಾಕ್ರಿ ಬಳ್ಳಾರಿ ಓಯ್ದ್ರು." ಅಂದ್ರು. ಅವನು ಸತ್ತಾನೋ ಬದುಕಿದಾನೋ ಆಂತ ತಿಳಿವಲ್ಲದಾತು. ಧನ್‌ಸಿಂಗ್ ನಾಯ್ಕ ತನ್ನ ಕೊನೆ ಗಾಲದಲ್ಲಿ ನೋಡಬಾರದನ್ನು ನೋಡುವ ಪರಿಸ್ಥಿತಿ ಬಂದಿತ್ತು. ಮನಸ್ಸು ಗಟ್ಟಿ ಮಾಡಿಕೊಂಡು ಬಿಟ್ಟಿದ್ದ. ಪರಿಸ್ಥಿತಿ ಕೈಮೀರಿ ಹೋಗುತ್ತಿರುವಂತೆ ಅನಿಸಿತು. ಇಡೀ ಸುತ್ತಲ ತಾಂಡಗಳ ನ್ಯಾಯ ಪಂಚಾಯ್ತಿಯಲ್ಲಿ ಧನ್‌ಸಿಂಗ್ ಮಾತುಗಳೆ ಅಂತಿಮ ವಾಗಿದ್ದವು. ನಾಕು ಮಂದಿ ಹಿಂದೆ ಅಡ್ಡಾಡಿ, ತಿಳಿದ ಮಂದಿಕೂಡ ಹೇಳಿಸಿಕೊಂಡು ಬೆಳೆದಿದ್ದ. ಆನೇಕ ಸಂಗತಿಗಳು ಅವನ ಎದುರಿಗೆ ಘಟಿಸಿ ಹೋಗಿದ್ದವು. ಇನ್ನೂ ಕೆಲವಕ್ಕೆ ಇವನೇ ಕಾರ್ಯ ಕರ್ತನೂ ಆಗಿದ್ದ. ಆದರೆ ತನ್ನ ಮುಗ್ದ ಮಗನಾದ ಪಂಪಾನಾಯ್ಕನಿಗೆ ಆದ ಅನ್ಯಾಯ ನೊಡಾಕ ಆಗದೆ ಮರುಗಿದ. ಇಳಿವಯಸ್ಸು ಕಣ್ಣ ಸಣ್ಣ ಘಟನೆಗಳನ್ನು ಜೀರ್ಣಿಸಿಕೊಳ್ಳಲು ಹೆದರಿಕೆಯಾಗಿತ್ತು.

ಧನ್‌ಸಿಂಗ್‌ಗೆ ದೊಡ್ಡ ಅಘಾತ ಆಗಿದ್ದು, ತನ್ನ ಮಗ ಪಂಪಾ ಬುಕ್ಯಾ ಕರಮ್‌ತೋಟ್ ಸೊಸೆ ಗೂಡ್ಲಿ ಮತ್ತು ಅವಳ ಅಣ್ಣಂದಿರುವ ಪಶಿಚ್ಚಮಕ್ಕೆ ವಲಸೆ ಹೋಗಲು ನಿರ್ಧರಿಸಿ ಮದುವೆಗೆ ಕೊಟ್ಟ ಎಲ್ಲ ದೇಜುವಾ ಎಲ್ಲಾ ಅವಳ ಅಪ್ಪನಿಂದ ಪಡೆದು ಎತ್ತುಗಳ ಚೆಕ್ಕಡಿಮೇಲೆ ಹೇರಿಸಿದಳು. ಒಂದು ತಿಳಿದರೆ ಒಂದು ತಿಳಿಯದ ಮುಗ್ದ ಪಂಪಾನಾಯ್ಕನಿಗೆ ಹಿಂಡನ್ನು ಆಗಲಿಸುವ ಪ್ರಯತ್ನ ನಡೆದಿತ್ತು. ಸೀತ್ಕಿ ಅರಬಾಡಿಸಿ ಅಳತೊಡಗಿದಳು. ಬೇಮನಾಯ್ಕ ಏನು ಮಾಡಲು ತಿಳಿಯದೆ ಸುಮ್ಮನಾಗಿದ್ದ. ಧನ್‌ಸಿಂಗ್ ಸನ್ನಿವೇಶ ಅರ್ಥವಾಗದೆ ಗೊಂದಲದಲ್ಲಿದ್ದ. ಮದುವೆಯಲ್ಲಿ ನಡೆದ ಘಟನೆಯ ನಂತರ ಪಂಪಾನಾಯ್ಕ ಈ ಪ್ರದೇಶದಲ್ಲಿ ಬಾಳಲು ಅಯೋಗ್ಯ ಎನಿಸಿತು. ಮದುವೆ ಬೇರೆ ಆಗಿದೆ, ಗೂಡ್ಲಿ ಎಂಥ ಹುಡಿಗಿನೊ, ಎಲ್ಲಾದರೂ ಇದ್ದು ಒಳ್ಳೆಯ ಬಾಳೇವು ಕಟ್ಟಲಿ ಅಂತ ಆಶಿಸಿದ. ಅವನ ಹೆಂಡತಿ, "ಲೇ ಮಾಟಗಾತಿ, ಏನು ತಿಳಿಯದ ನನ್ನ ಮಗನಿಗೆ ಏನು ಮೋಡಿ ಮಾಡಿದಿ. ನನ್ನ ಹಿಂದೆ ಸುತ್ತ ಹಾಕ್ತಿದ್ದೋನು ನಿನ್ನ ಮಾತು ಕೇಳಿ ವಲಸೆ ಹೊಂಟಾನ, ನೀ ಉದ್ದಾರ ಅಗಲೆ ನೀನು. . ." ಶಾಪ ಹಾಕಿದಳು. ಮದುವೆ ದಿಬ್ಬಣ ಗುಡಿಕೋಟೆ ಹೋಗಬೇಕಾಗಿದ್ದು ಹೋಗಲೇ ಇಲ್ಲ. ಗೂಡ್ಲಿ ಪಂಪಾನಾಯ್ಕ, ಗೂಡ್ಲಿ ಚಿಕ್ಕಪ್ಪನ ಮಗ ಸಾಧು ನಾಯ್ಕ ಅವಳ ಇಬ್ಬರು ಅಣ್ಣಂದಿರು, ಗುರ್‍ಯಾನಾಯ್ಕ, ಪೊತ್ಲ್ಯಾನಾಯ್ಕ, ಸಂಸಾರ ಸಮೇತ ಹೊರಟರು. ಆವರಿಗೆ ಕಾಡಿದ ಅತಂಕ, ಸೂಳಿಮಗ ದೂಪ್ಲನ ಹೊಡದದ್ದು ಕೈತಪ್ಪಿ ಆಯಕಟ್ಟಿನ ಜಾಗಕ್ಕೆ ಬಿದಿದ್ದು ಪೊಲೀಸ್ ಕೇಸು ಅದೀತಂಹೇಳಿ ಗುಳೆ ಗೊಂಟೆ ಬಿಟ್ಟರು.

ಕೆಲ ಮಂದಿ ಬೇಡ ಅಂದ್ರು, ಕೆಲವರು ಈ ಹಾಳು ಕೊಂಪೆಯೊಳಗೇನೈತೆ ಹೋಗ್ರಿ ಅಂದ್ರು, ಅಂತು ಧನ್‌ಸಿಂಗ್ ಹಾಸಿಗೆ ಹಿಡಿಯೋದಕ್ಕೆ ಒಂದು ಕಾರಣ ಬೇಕಿತ್ತು. ಅವನ ಭವಿಷ್ಯದ ಬಗ್ಗೆ ಅಲೋಚನೆ ಮಾಡಿ ಮಾಡಿನೆ ಹಾಸಿಗೆ ಹಿಡಿದಿದ್ದ. ಮುದುಕ ಖೇಮುನಾಯ್ಕನ ಮಕ್ಕಳು ಮನೆತುಂಬ ಅಜ್ಜ ಅಜ್ಜ ಅಂತ ಹಿಂದಿಂದೆ ಸುತ್ತುತ್ತಿದ್ದರು. ಅವನಿಗೆ ಪಂಪಾನಾಯ್ಕನದೆ ಚಿಂತೆ ಗಾಢವಾಗಿ ಕಾಡಿತ್ತು. ಪೂರ್ವಕ್ಕೆ ಪಯಣ ಬೆಸಿದವರಲ್ಲಿ ಮೊದಲನೆಯವರು ಪಂಪಾ ಮತ್ತು ಗೂಡ್ಲಿ ಕೂಡ್ಲಿಗಿಯ ಕಾಡು ರಸ್ತೆಯಲ್ಲಿ ಸಾಗಿ ಕಾಡಿನ ನಡುವೆ ಗುಳೆ ನಿಂತು. ಮತೆ ಮುಂಜಾನೆ ಕೊಟ್ಟೂರು ಮೇಲೆ ಹಾದು ಬೆಣ್ಣಿಹಳ್ಳಿ, ಜಿಗಟೇರಿ ನಂತರ ಹರಪನಹಳ್ಳಿ ಗುಡ್ಡದಲ್ಲಿ ತಂಗಿ ಪ್ರಯಾಣ ಮುಂದುವರೆಸಿದರು. ಹಲವಾಗಲು ಕ್ರಾಸ್ ತಡಾದು, ಚಿರಸ್ತಳ್ಳಿ, ಅಲಗಿಲವಾಡ, ತೆಲಿಗಿ ದಾಟಿ ಅಲ್ಲಿ ಎಲ್ಲಾ ಗುಳೆ ಬಂದವರು ಹರಿದು ಹಂಚಿಹೋದರು. ಪಂಪಾ ಮತ್ತು ಗೂಡಿ ಬಂಡಿಗೇರಿ ತಾಂಡದ ಕಡೆಗೆ ಹೊರಟರೆ ಗುಡ್ಲೇರಿಯ ಚಿಕ್ಕಪ್ಪನ ಮಗ ಸಾಧು ನಾಯ್ಕ ಮತ್ತೆ ಕೆಲವರು, "ಇಲ್ಲ ಮಾವ, ನಿಮ್ಮಗಳ ಜೊತೆ ಇರಬಹುದಿತ್ತು ಯಾಕೋ ಮನಸ್ಸಿಲ್ಲ. ನಾವು ಮುಂದಕ್ಕ ಹೊಕ್ಕೀವಿ." ಅಂದ. "ಅಣ್ಣ ನಮಗೆ ಹಿಂದ ಮುಂದ ಯಾರದರಾ? ನೀವು ಯಾಕೆ ನಾವು ಒಂದೆ ತಾಂಡದಾಗ ಉಳಿಬಾರದು?" ಗೂಡ್ಲಿ ಕೇಳಿಕೊಂಡಳು. " ಇಲ್ಲ ತಂಗಿ, ಇವತ್ತಿನ ಹಿತ ಪ್ರೀತಿ ನಾಳಿಗ ಇರಂಗಿಲ್ಲ ನಾಳೆಯಾವದೋ ವಿಣಸಿ ವಿಂಗಡಿ (ಇಲ್ಲಸಲ್ಲದ್ದು) ಬರುತ್ತೆ. ಆವಾಗ ಮಕ ನಿಷ್ಟುರ ಆಗೋಂದಕ್ಕಿಂತ ಇವತ್ತೆ ದೂರದೂರ ಉಳದ್ರ ನಮ್ಮ ಸಂಬಂಧನೂ ಗಟ್ಟಿ ಉಳಿಯತ್ತೆ." ಸಮಾಧನ ಹೇಳಿ ತೆಲಗಿಯಿಂದ ಗುಳೆ ಮುಂದಕ್ಕೆ ಸಾಗಿಸಿದರೆ, ದಿಕ್ಕಿಲ್ಲದಂಗೆ ಪಂಪಾನಾಯ್ಕ ಗುಜರಿ ಬಂಡಿಕೇರಿ ತಾಂಡದ ಕಡೆಗೆ ಹೊರಟರು.

ಸಾಧು ತೆಲಿಗೆ ತಡಾದು. ಮುಂದ ದುಗ್ಗತ್ತಿ ಕುರಬರ ಹಳ್ಳಿ ಕರ್ಲಳ್ಳಿ ಗಂಗರಸಿ ಕ್ರಾಸ್ ದಾಟಿ ಹರಿಹರ ತಲುಪಿದ. ಅಲ್ಲೂ ನಿಲ್ಲಲಾಗದೆ ಮತ್ತೆ ಪೂರ್ವ ಹೊರಟು ಕಾಡ ಸೇರಿದ. ಪಂಪಾನಾಯ್ಕ ಮಾತ್ರ ಬೆಂಡಿಕೇರಿ ಹಟ್ಟಿನಾಯ್ಕ ರಾಮಜಾಪನನ್ನು ಕೇಳಿದ, "ಮಹಾರಜ್, ನಾವು ಪೂರ್ವ ದಿಕ್ಕಿನ ತಾಂಡದಿಂದ ಬಂದ ಬಂಜಾರರು. ಏನೊ ತಾವು ಒಂದೀಟು ಕರುಣ ತೋರ್ರಿಸಿರಿ ಅಂತ ಬಂದೀವಿ." ಅವನ ಪ್ರತಿಕ್ರಿಯೆಗೆ ಕಾದು ನಿಂತ. "ದಿನಕ್ಕೆ ನೂರೆಂಟು ಮಂದಿ ಹಿಂಗ ಹೊಂಟಾರು. ಬರೋರು ಬರ್ತಾರ ಹೋಗಲೆ ತಮ್ಮ. ನಿನ್ನ ಹೆಸರೇನಂದಿ ". ಕೇಳಿದ. "ಪಂಪಾ ಧನ್‌ಸಿಂಗ್ ಕರಮ್‌ತೋಟ್ "ಹೇಳಿದ ಪಂಪಾನಾಯ್ಕ. "ಪಂಪಾ ನೋಡಪ್ಪ ನೀ ಒಳ್ಳೆ ಹುಡುಗ ಕಾಣ್ತೀಯ. ನಮ್ಮ ಲಾಮಾಣಿ ಮಂದಿ ಕೋರಿಕೋರ್ ಜೊತೆ ಇರಲ್ಲ. ನಮ್ಮ ತಾಂಡಗಳ ಸಂಸ್ಕೃತಿ, ಆಚರಣೆಗಳೇ ಭಿನ್ನ. ನಮ್ಮ ದೇವರೆ ಬೇರೆ. ಹಂಗಾಗಿ ನಾವೆಲ್ಲ ಒಟ್ಟೊಟಿಗೆ ಅಣ್ಣತಮ್ಮಂದಿರಂಗೆ ಇರಬೇಕು. ಏನೋ ದೂರದಿಂದ ಬಂದೀಯ. ನಮ್ಮ ಗಿರಿಜನಾಯ್ಕನ ಮನೆ ಪಕ್ಕ ಜಾಗೆ ಐತಿ ಹೋಗಿ ನಿನಗ ಬೇಕಾದಷ್ಟು ಜಾಗದಾಗ ಮನೆ ಕಟ್ಕೋ ಹೋಗು." ಅಂದಿದ್ದೆ ತಡ ಹಿಂದಕ್ಕ ನೊಡಿದಂಗೆ ಓಡಿದ.

ಎತ್ತುಬಂಡಿ ಹೆರಿಕೊಂಡು ಬಂದಿದ್ದ ಅರ್ದಮರ್ದ ಸಾಮಾನುಗಳನ್ನು ಜೋಡಿಸಿ ಮನೆಯಂಗೆ ವಾರೆ ಚಪ್ರ ಹಾಕಿಕೊಂಡ. ಅವರಪ್ಪ ಧನ್‌ಸಿಂಗ್ ಇಳಿವಯಸ್ಸಿನಲ್ಲಿ ಗೋಳಂತ ಮಕ್ಕಳಂಗೆ ಅಳುತ್ತಿದ್ದ. ಏನು ಇಲ್ಲದ ಮುಗ್ದ ಹೇಗೆ ತಾನೆ ಮಲಕ ಮಾರಿಯಾನು (ಜಗತ್ತು ನೊಡಿಯಾನು) ಎಂಬುದೆ ಅವನ ಕನವರಿಕೆ ಗುಡೆ ಕೋಟೆಯಲ್ಲಿ ಕಣ್ಣು ಮುಂದೆ ಇರ್‍ತಿದ್ದ ಮಗ

ಅಂತೇಳಿ ತಂದೆ, ತಾಯಿ ಇಬ್ಬರು ಗೋಳಾಡುತ್ತಿದ್ದರು. " ಇಲ್ಲ ಅಂವ ಹೋದದ್ದೇ ಒಳ್ಳೆಯದಾಯಿತು ಬಿಡಿ. ಈ ಹಾಳು ತಾಂಡದೊಳಗ ಹೊಂದಾಣಿಕೆ ಯಾಗ್ತಿರಲಿಲ್ಲ. ನನ ಮಗ ಬಾಯಿಸತ್ತವ, ಈ ಚಾಲಕಿ ಮಂದಿ ಅವನ್ನ ನುಂಗಿ ನೀರು ಕುಡಿದು ಬಿಡುತ್ತಿದ್ದರು." ಸೀತ್ಕಿ ಗಂಡನಿಗೆ ಸಮಾಧಾನ ಪಡಿಸಿದಳು. " ಅಲ್ಲ ಏನಾಗುತ್ತೆ ಅಂದ್ಕೊಂಡಿಯಾ, ಈ ಮಂದಿ ಎಲೆಲ್ಲಿನೂ ಹಾಗೆ, ಅದೇನೋ ಅಂತಾರಲ್ಲ, ತಂದಿ........ಗ ಮಾಟ ಮಾಡಿದ್ರು ಹಂಗೆ ಕಣೆ. ಹೊಸ ಮದುವೆ. ಎಲ್ಲಂತ ಅಲಿತಿದ್ದಾನೊ. ಆ ಸೂಳಿಮಗ ಮದುವೆ ದಿನ ಮಂಡೇವಡೊ ಬೀಸದಿದ್ದರೆ ಹೀಂಗ ಆಗ್ತರಾಕಿಲ್ಲ. ಸರಿಯಾಗಿ ಮಾತಾಡಲ್ಲ, ವ್ಯವಹಾರ ಜ್ಞಾನ ಇಲ್ಲ ಜಗತ್ತನ ಹೇಗೆ ಎದುರಿಸಬಹುದು". ಒಳಗೊಳಗೆ ವ್ಯಥೆ ಪಟ್ಟ ಧನ್‌ಸಿಂಗ್. ಎಲ್ಲಿಅದಾನಂತ ಸುದ್ದಿ ಕೇಳಿ ಬರೋಕ ಹೋಗಿದ್ದ ಖೇಮು ವಾಪಾಸಾಗಿದ್ದ. " ಎಲ್ಲ ಹೋದರಂಥೆ ಸುದ್ದಿ ಹೇಳೋಕೆ ಇಲ್ಲ. ಅವರೆ ಇಂಥ ಜಾಗದಾಗಿದ್ದಿವಿ ಅಂತ ಪತ್ರ ಹಾಕಿದ್ರ ಗೊತ್ತಾಗುತ್ತಿಪ್ಪ. ಅಲ್ಲಿಮಟ ಅವನು ಬದಕಿದ್ದಾನೆ ಅಂದ್ಕೊಂಡು ಸುಮಕಿರಬೇಕು. ಅವನೇನು ಅಂಬೆಗಾಲಿಡುವ ಮಗು ಅಲ್ಲ. ಮದುವೆ ಮಾಡಿಕೊಂಡು ಹೋಗವ್ನೆ ಬದುಕ್ತಾನೆ. ಅವನ ಪಾಡಿಗೆ ಅವನ ಬಿಡ್ರಿ." ಖಾರವಾಗಿಯೇ ಮಾತಾಡಿದ. " ಲೇ ತೆಪರನನ್ನ ಮಗ್ನಾ, ಅಂವ ನಿನಂಗ ಅಲ್ಲಲೆ, ಬಾಳ ಸೂಕ್ಷ್ಮ ಮತಿ, ಒಂದಮೋಸ, ವಂಚನೆ ಒಂದು ಗೊತ್ತಿಲ್ಲ. ಅವನ್ನ ಮದುವಿಯಾದ ಹುಡುಗಿ ಗೂಡ್ಲಿ ಏನಾದ್ರು ಅವನ ಹಾಗೆಯೇ ಇದ್ರೆ ಯಾವ ಜನ್ಮಕ್ಕೂ ಉದ್ಧಾರ ಅಗೋದಿಲ್ಲಂತ." ಧನ್‌ಸಿಂಗ್ ದೊಡ್ಡಮಗನ ಉಡಾಫೆ ಮಾತುಗಳಿಗೆ ನಾಂದಿ ಹಾಡಿದ್ದ.

ಮಗನ ಚಿಂತೆಯೊಳಗೆ ಹಾಸಿಗೆ ಹಿಡಿದ್ದಿದ್ದ ಧನ್‌ಸಿಂಗ್ ಬಹಳ ಬಡವಾಗಿದ್ದ. ಸರಿಯಾಗಿ ಊಟ ನಿದ್ದೆ ಮಾಡದೆ ಸೊರಗಿ ಹೋಗಿದ್ದ ಅನ್ನುವುದಕ್ಕಿಂತ ಸಾವನ್ನು ಆಹ್ವಾನಿಸಿದ್ದ. ಅವನ ಸೋರದ ಸಂಬಂಧಿ ಕರಮತೋಟ್ ಕುಲದವನೆ ಕೆಳಗಿನ ಓಣಿಯಲ್ಲಿ ವಾಸವಾಗಿದ್ದ. ಹಾನಗಲ್ ಕಡೆವನ ಆದ ಚಂಪಾನಾಯ್ಕ ಗೋಳೊಂತ ಅಳಕೊಂಡು ಧನ್‌ಸಿಂಗ್ ತಾವ ಬಂದ. " ಏಯ್, ಚಂಪಾನಾಯ್ಕ ಏನಾಯ್ತು. ಯಾಕಿಂಗ ಸಣ್ಣ ಹುಡುಗರಂಗ ಆಳಾಕತ್ತಿ. ನಂದಾ ನನಗೆ ತಿಳಿಯದಾಗೈತಿ ತಮ್ಮ. ಬೇರೆಯವರ ಸಮಸ್ಯೆ ತಗಂಡು ಏನು ಮಾಡ್ಲಿ ." ಸಮಾಧನ ಪಡಿಸಿದ. " ಏನು ಅಂತೇಳೀ ದೊಡ್ಡಪ್ಪ ನಾವು ವಾಪಾಸು ನಮ್ಮ ಅಜ್ಜನ ಇದ್ದಲ್ಲಿಗೆ ಹೊಕ್ಕಿವಿ. ಹಾನಗಲ್ಲಿನ ದೇಸುನಾಯ್ಕನ ತಾಂಡೆಗೆ." ಅಂದ. " ಯಾಕೋ ಏನಾಯ್ತು ಅಂತದ್ದು. ಅದು... . ನಮ್ಮ ಇತಿಹಾಸನಲೇ ಮಗ". ಹಳೆ ಜಾಡಿನ ಪಯಣ ನೆನಪಾಯ್ತು. ಧನ್‌ಸಿಂಗ್ ಕಣ್ಣು ಮುಚ್ಚಿ ಹಳೆಯದ್ದನೆಲ್ಲಾ ಸ್ಮೃತಿಪಟಲದ ಮೇಲೆ ತರುವ ಪ್ರಯತ್ನ ಮಾಡುತ್ತಿದ್ದ. ಅಷ್ಟರಲ್ಲೆ, " ದೊಡ್ಡಪ್ಪ ಈ ಮಂದಿ ಕೂಡ ಏಗಾಕ ಅಗಲ್ಲ. ಇಲ್ಲಪ್ಪ ನಾನಂತು ವಾಪಾಸು ಹೊಕ್ಕಿನಿ." ಒಂದೇ ರೊಚ್ಚು ಹಿಡಿದ. ತನ್ನ ಸ್ವಂತ ಮಗನೇ ಗುಳೆ ಹೊಗಿದ್ದರ ನೋವು ಅವನಿಗಿತ್ತು. ಜಗತ್ತು ಚೆನ್ನಾಗಿರಬೇಕು ಎಂದು ಬಯಸುವ ಧನ್‌ಸಿಂಗ್ ಈ ಮಾತು ಕೆಳಿ ಯಾಕೋ ಮತ್ತಷ್ಟು ಬೇಸರ ಪಟ್ಟಿದ್ದ. "ಯಾಕೋ ಮಗ ಒಂದೇ ಹಟ ಹಿಡಿದಿಯಾ, ಏನಾತು ಅಂತ ಬಿಚ್ಚಿ ಹೇಳು. ನನ್ನ ಕೈಲಾದ ಸಹಾಯ ಮಾಡ್ತೀನಿ." ಸಮಾಧಾನ ಪಡಿಸೋದಕ್ಕೆ ನೊಡಿದ. "ಇಲ್ಲ ದೊಡಪ್ಪ, ಈ ಊರು ಬ್ಯಾಡ. ಇದರ ಸಹವಾಸವೂ ಬೇಡ. ದೆಸು ನಾಯ್ಕನ ತಾಂಡ ನಮ್ಮಪ್ಪ, ಅಜ್ಜ ಹುಟ್ಟಿದ ಊರು, ಅದು ನಮ್ಮೂರು ನಾವು ಅಲ್ಲಿಗೆ ಹೊಕ್ಕಿವಿ." ಮತ್ತೆ ಅದೇ ಮೊಂಡು ವಾದ. " ಆಯ್ತು ಹೋಗಪ್ಪ,

ನಿನ್ನ ತಡೆಯೋಕ ನಾನ್ಯಾರು. ಸ್ವಂತ ಮಗನೆ ನನ್ನ ಮಾತು ಕೇಳದ ದೇಶಾಂತರ ಹೋದ, ಹೆಂಡತಿ ಜೊತೆಗೆ ಹೋದವನು ಸತ್ತಾನೊ ಬದುಕ್ಯಾನೋ ಒಂದು ಗೊತ್ತಿಲ್ಲ. ಅಂವಗ ಕಾರಣ ಇತ್ತು ಹೋದ. ನೀ ಕಾರಣ ಇಲ್ಲದ ಹೆಂಗ ಹೋಕಿ." ಪ್ರಶ್ನೆ ಕೇಳಿದ.

ಚಂಪಾ ನಾಯ್ಕ ಅವನ ದೊಡ್ಡಪ್ಪನಿಗೆ ಘಟನೆಯನ್ನು ಹೇಳಬೇಕೋ ಬೇಡವೋ ಎಂಬ ಗೊಂದಲದಲ್ಲಿದ್ದ. ಹೇಳದಿದ್ದರೆ ಬಹಳ ಸಂಕಟಪಡುತ್ತಾನೆ ಅಂದವನೆ ಹೇಳಲು ಪ್ರಾರಂಭಮಾಡಿದ. "ಅಪ್ಪ, ನಿನ್ನ ಸೊಸಿ ಪಾರ್ತಿ ಚೊಚ್ಚಲ ಗರ್ಭಿಣಿ, ನಮ್ಮ ಪರಿಸ್ಥಿತಿ ನಿನಗ ಗೊತ್ತು. ದುಡಿಬೇಕು ಎಲ್ಲ ಉಣಬೇಕು. ನಾವೆಲ್ಲ ಮನಿ ಮಂದಿ ಗುಡಿಕೋಟೆ ಜಮೀನ್ದಾರ ಭಟ್ರ ಶೇಷಪ್ಪನ ಕೆಲಸಕ್ಕೆ ಸೇರಿಕೊಂಡಿವಿ. ಬಹಳ ವರ್ಷದಿಂದಲು ನಾವು ಅವನ ಮನಿ ಹೊಲ, ಗದ್ದೆ ಕೆಲಸ ಮಾಡಿಕೊಂಡಿರೋರು. ಕೊಟ್ಟ ಪಾವೊ, ಸೇರೋ ಕಾಳನ ತಂದು ಬೀಸ್ಕಂಡು ಗಂಜಿನೊ, ಅಂಬ್ಲಿನೋ ಉಣ್ಣಕ ಹತ್ತಿವಿ. ." ಮಾತು ಹೊರಡದಾದವು. "ಹೌದಪ್ಪ ನಿಮ್ಮಪ್ಪ ಮಾಡಿದ ಹಕಮತ್ತಿದು. ತಾ ಬೂಮಿ ತಗದು ಮತ್ತ್ಯಾವನದೋ ಪಾಲು ಮಾಡಿದ. ಅವತ್ತು ನಾ ಬಡಕೊಂಡೆ, ಕಷ್ಟಪಟ್ಟು ತಗದೀಯಾ ಬಿಡಬ್ಯಾಡಂತ. ಯಾವಾನೋ ಬಂದ ಹೆದರಿಸಿದ ಅಂತೇಳಿ ಬಿಟ್ಟು ಕೂಲಿ ಮಾಡಾಕ ಹೋದ ನೋಡು. ಈಗ ನಿನಗೂ ನಿನ್ನಹೆಂಡ್ರು ಮಕ್ಕಳಿಗೂ ಕಷ್ಟ." ಇಡೀ ಇತಿಹಾಸವನ್ನೆ ಬಿಚ್ಚಿಡುತ್ತಿದ್ದ. ಅವನ ಸೋದರ ಸಂಬಂಧಿಯಾದ ಜಾಂಪನಾಯ್ಕ ತಂದೆ ಚೆಂದ್ಯಾ ಹೆದರಿದನೋ ಇಲ್ಲ ಆಸಕ್ತಿ ಇಲ್ಲದೆ ಹೀಗೆ ಮಾಡಿದನೊ ದೇವರೆ ಬಲ್ಲ. ಆದರೆ ಮಕ್ಕಳಿಗಾಗಿ ಒದು ತುಂಡು ಭೂಮಿಯನ್ನು ಮಾಡಲಿಲ್ಲ. ಕಿವಿಮಟ ತುಟಿತಂದು ಹಲ್ಲು ಗಿಂಜಿದರೂ ದುಗ್ಗಾಣಿ ಕೊಡದ ಸ್ಥಿತಿಯೊಳಗೆ ಯಾರು ಯಾರಿಗಾದಾರು? ಮುಂಜಾನೆಯಿಂದ ಎತ್ತುಗಳ ಜೊತೆಗೆ ಎತ್ತಿನಂಗೆ ದುಡಿದರೆ ಸಂಜಿಗೆ ಒಂದು ಪಾವು ಮುಗ್ಗುಜೋಳನೊ ಇಲ್ಲಂದ್ರ ಮಣ್ಣು ತುಂಬಿದ ರಾಗಿನೋ ಕೊಡೋರು. ಅದೇ ದೊಡ್ಡದು. " ನಮ್ಮಪ್ಪ ಮಾಡಿದ ದೊಡ್ಡ ಘನಂದಾರಿ ಕೆಲ್ಸ ದಿಂದಾಗಿ ತಾನೆ ನಾವು ಇವತ್ತು ಮೂವರು ಅಣ್ಣತಮ್ಮಂದಿರು ಅನುಭವಿಸುತ್ತಿರೋದು. ಅಲ್ಲಪ್ಪ ನನ್ನ ಹೆಂತಿ ಪಾರ್ತಿ ಚೊಚ್ಚಲ ಗರ್ಭಿಣಿ, ಅದೇನೋ ಬಯಕೆ." ಮಾತುಗಳು ತುಂಡಾದವು.

ಊಟಕ್ಕೂ ಗತಿ ಇಲ್ಲದ ಚೊಚ್ಚಲ ಗರ್ಭಿನಿ ಪಾರ್ತಿ ದೇಹದೊಳಗೆ ಪೋಷಕಾಂಶದ ಕೊರತೆಯಿಂದಾಗಿ ಒಲೆಯೊಳಗಿನ ಬೂದಿಯನ್ನು ಹಿಡಿಹಿಡಿಯಾಗಿ ಮುಕ್ಕುತ್ತಿದ್ದಳು. ಒಳ್ಳೆಯ ಕೆಮ್ಮಣ್ಣು ಸಿಕ್ತಂದ್ರೆ ಒಂದು ಹಿಡಿ ಮಣ್ಣನ್ನು ಅಗೆದು ನುಂಗಿ ಬಿಡುತ್ತಿದ್ದಳು. ರಾಗಿಕಾಟಿ ಸಿಕ್ಕರೆ ಸಾಕು ಎನ್ನುವ ಸ್ಥಿತಿ ತಾಂಡದ ಎಲ್ಲ ಕುಟುಂಬಗಳದಾಗಿತ್ತು. ಮಳೆಗಾಲ ಹೆಚ್ಚಾಗಿ ನೆಲವೆಲ್ಲ ಜೌಗು ಹಿಡಿದಿತ್ತು. ಹಾಕಿದ ಪೈರು ಅಲ್ಲೆಲ್ಲೋ ಟಿಂವ್ ಎಂದು ಮೊಳಕೆಯಲ್ಲೆ ಬಾಡಿಹೋಗಿ ಹಳದಿ ಬಣ್ಣಕ್ಕೆ ತಿರುಗಿದ ಕಾರಣ ಬಾಡಿದ ಮೇಲೆ ದನಗಳ ಅಹಾರಕ್ಕಾದರೂ ಆದೀತು ಎನ್ನುವಂತಾಗಿತ್ತು. ಮನೆ ಒಳಗೆ ಕುಂತ್ರ ಊಟಕ್ಕೆ ಹಾಕೋರು ಯಾರು? ಮನೆತುಂಬ ಪುಟ್ಟಿ ಕೆಳಗೆ ಹಾಕಿ ಮುಚ್ಚುವಂತ ಮಕ್ಕಳು. ಅವರು ಪ್ರತಿಯೊಬ್ಬರ ಹೊಟ್ಟೆ ತುಂಬಿಸಬೇಕು. ಅದಕ್ಕೆ ಪಾರ್ತಿಕೂಡ ಕೆಲಸಕ್ಕೆ ಹೋಗಬೇಕಾದ ಅನಿವಾರ್ಯತೆ ಉಂಟಾಗಿತ್ತು. ಬಂಪಾ ನಾಯ್ಕ ಹೆಂಡತಿ ಗೋಳು ನೋಡಲಾರದೆ ಒಮ್ಮೊಮ್ಮೆ ನೊಂದು ಕೊಳ್ಳುತ್ತಿದ್ದ. ತುಂಬು ಗರ್ಭಿಣಿ ಪಾರ್ತಿ ಹೊಟ್ಟೆ ಹೊತ್ತುಕೊಂಡು ಎರೆಡುವರೆ ಕಿಲೋಮೀಟರ್ ದೂರದ ಗುಡೆಕೋಟೆಯ ಶಾನಬೋಗರ ಶೇಷ ಬಟ್ಟರ ಹೊಲದಲ್ಲಿ ಕಳೆಗೆ ಹೋದಾಗ ಹೊಲದ ಮೇರಿಯ ಮೇಲಿದ್ದ ಕುಂಬಳ ಬಳ್ಳಿಯೊಳಗಿನ

ಕಾಯಿಕಂಡು ಆಸೆಯಾಗಿ ಯಾರಿಗೂ ಗೊತ್ತಾಗದಂತೆ ಕಾಯಿ ಹರಿದು ಚೀಲದೊಳಗೆ ಹಾಕಿಕೊಂಡಳು. ಮೆಲ್ಲಗೆ ಮನೆಗೆ ಬಂದು ಹೆಚ್ಚಿ ಪಲ್ಯೆ ಮಾಡಿ ತಿಂದಳು. ಮರುದಿನ ಶೇಷ ಬಟ್ಟರ ಹೊಲದಾಗ ರಾದ್ದಾಂತವೇ ನಡೆದಿತ್ತು. ಶೇಷ ಬಟ್ಟರ ಹೆಂಡತಿ ಅಲುಮೇಲು ಆಳುಗಳನ್ನು ಹಣ್ಣಗಾಯಿ ನೀರು ಗಾಯಿ ಮಾಡಿದ್ದಳು. . "ನನ್ನ ಹೊಲದ ಮ್ಯಾರೆಮೇಲೆ ಬೆಳದ ಕುಂಬಳಕಾಯಿ ಕದಿಯೋ ಧೈರ್ಯಬಂತಾ ನಿಮಗ. ಬ್ರಿಟೀಷರ ಕಾಲದಾಗ ನೀವು ಮಾಡಿದ ಕಳ್ಳತನ ನಮಗೇನು ಗೊತ್ತಿಲ್ಲಂತ ಮಾಡಿರೇನ್ರಲೋ ಲಮಾಣ್ಯಾರ. ಮರ್ಯಾದಿಯಿಂದ ಬಾಯಿ ಬಿಟ್ರ ಸರಿ." ಅಲಮೇಲು ಶ್ರೀಮಂತಿಕೆಯ ದರ್ಪದಿಂದ ಜೋರು ಬಾಯಿ ಮಾಡಿದಳು. "ನಾವಂತು ಅಲ್ರಪ್ಪ" "ಧಾನಿಬಾಯಿ ಜವಾಬುಕೊಟ್ಲು. ಇನ್ಯಾರ ಬೊಗಳೆ ನಾಚಿಗೆ ಕೆಟ್ಟವಳೆ." ಅಲುಮೇಲು ಉತ್ತರಿಸಿದಳು. ಪ್ರತಿಯೊಬ್ಬರನ್ನು ಹಿಂಸೆ ಮಾಡಿ ಕೇಳತೊಡಗಿದಳು. ಅವಳ ಮಾತು ಹಿಂಸೆ ತಾಳಲಾರದೆ ಚೀಲಿಬಾಯಿ ನಿಜ ಹೇಳೇ ಬಿಟ್ಳು. "ಅವ್ವಾರ, ಆ ಚಂಪನ ಹೇಣ್ತಿ ಪಾರ್ತಿ ಬಯಕಿ ಬಂತು ಅಂತೇಳಿ ತಗೊಂಡು ಹೋಗಿ ಪಲ್ಯಾ ಮಾಡಿಕೊಂಡು ತಿಂದಾಳ." ಬಾಯಮಾತು ಬಾಯಾಗ ಇದ್ದಂಗ, "ಏನ್ ಲೌಡಿ, ನಿನ್ನ ಬಯಕಿಗೆ ನನ್ನ ಹೊಲದ ಕುಂಬಳಕಾಯಿ ಬೇಕಾತೇನೆ." ಅಂದವಳೆ ಜಡಿ ಹಿಡಿದು ನೆಲಕ್ಕೆ ಬೀಳಿಸಿ ಎಳೆದಾಡಿದಳು. ಬೆನ್ನಿಗೆ ನಾಕು ಹೇರಿದಳು. ಪಾರ್ತಿ ತುಂಬ ಗರ್ಭಿಣಿ. ಅಲುಮೇಲು ಪ್ರಹಾರ ಮಾಡಿದ್ದನ್ನು ನೋಡಿ ಮಾನಸಿಕವಾಗಿ ಜರ್ಜರಿತಳಾದಳು. ಅವಳಿಗಾದ ಅಘಾತದಲ್ಲಿ ಮಗುನ ಜನಂಕಾಲ ಎಲ್ಲಿ ಆಗಿಬಿಡುತ್ತೊ ಎಲನ್ನುವ ಹೆದರಿಕೆ ಬೇರೆ. ಹೊಟ್ಟೆ ಹೊತ್ಕೊಂಡು ನರಳಾಡ ತೊಡಗಿದಳು. 'ಅವ್ವ ಸತ್ನೆ ಅವ್ವ ಎಲ್ಲಿದಿಯೇ. . . . .ಅವ್ವಾ . . . . ." ಜೋರಾಗಿ ಚೀರಾಡಿದಳು. ತಾಂಡದ ಹೆಂಗಸರು ಅವಳ ನೆರವಿಗೆ ಧಾವಿಸಿದರು. ಅಲುಮೇಲು ಕೋಪ ಇಳಿದಿರಿವುದು ಕಂಡು ಅವಳು ನರಳಾಡುತ್ತಿದ್ದರೂ ಸುಮ್ಮನೆ, " ಪಾಪ, ಇಲ್ಲೆ ಹಡದಗಿಡದಾಳು ಹುಡುಗಿ." ತಮ್ಮೊಳಗೆ ಮಾತಾಡಿಕೊಳ್ಳ ತೊಡಗಿದರು. ಅಲುಮೇಲು ಧ್ವನಿ ತಾರಕ್ಕೇರಿತ್ತು.

ಪಂಚಾಯ್ತಿ ಕಟ್ಟೆ ಮ್ಯಾಲೆ ಧನ್‌ಸಿಂಗ್ ಕುಂತಿದ್ದರೂ. ಏನನ್ನೂ ಮಾತನಾಡದ ಸ್ಥಿತಿಯಲ್ಲಿದ್ದ. ಹಟ್ಟಿನಾಯಕ ,ಕಾರಬಾರಿ, ಶೇಷ ಬಟ್ಟರು, ಅವನ ಬಲಗೈ ಭಂಟ ತಳವಾರ ಕೆಂಚ, ಮಾದರ ಯರಬ ಕಟ್ಟೆ ಬಿಟ್ಟು ದೂರದ ಕಲ್ಲಮೇಲೆ ಕುಂತಿದ್ದ. ಅವನ ಕಡೆ ಮಂದಿ ಹೆಚ್ಚಿನ ಸಂಖ್ಯೆಯಲ್ಲಿ ಕೂತಿದ್ದರು. "ಕಳ್ಳತನ ಸಣ್ಣದಾದರೇನು ದೊಡ್ಡದಾದರೇನು, ಕುಂಬಳಕಾಯಿ ಆದ್ರೇನು, ಬಂಗಾರ ಆದ್ರೇನು ಕಳ್ಳತನನೆ. ಈಗ ಗರ್ಭಿಣಿ ಹೆಂಗಸು ಬಯಕೆ, ಪಯಕೆ ಅಂತಾರ. ಆಕಿ ಗರ್ಭಂಣಿ ತಾಳಿ ಕಟ್ಟಿದನೇನು? ಇಲ್ಲ. ಕಟ್ಟಿದವನು ಹೇಣ್ತಿ ಕೇಳೀದ್ದನ್ನು ತಂದು ಹಾಕಬೇಕು. ಯೋಗ್ಯತೆ ಇಲ್ಲಾಂದ್ರ. . . ." ಶೇಷಪ್ಪ ಭಟ್ಟ ಮಾತಾಡುತ್ತಿದ್ದ. ಚಂಪಾನಾಯ್ಕ ಅವಮಾನದಿಂದ ಚೆಂಡು ಕೆಳಗೆ ಹಾಕಿದ. ಭಟ್ಟನ ವಿರುದ್ಧ ಮಾತಾಡುವ ಎದೆಗಾರಿಕೆ ಸುತ್ತಿ ಹರದಾರಿಯೊಳಗ ಯಾವ ಮಗನಿಗೂ ಇರಲಿಲ್ಲ. ನೂರಾರು ಎಕರೆ ಜಮೀನು, ಮನೆತುಂಬ ಆಳು. ಆರೆತ್ತಿನ ಕಮತ. ಹಳೇಕಾಲದ ಹೆಪ್ಪು ತುಂಬಿ ತುಳುಕಾಡುತ್ತಿತ್ತು. ಅದೇ ದರ್ಪದಿಂದ ಮೆರಿಯಾಕ ಹತ್ತಿದ್ದ . ಸುತ್ತ ಮುತ್ತ ಆತನಷ್ಟು ತಿಳುವಳಿಕೆಯವರಾಗಲಿ, ಹಣಕಾಸು ಸಂಬಂಧಿಸಿದಂತೆ ರೊಕ್ಕ ಉಳ್ಳವರಾಗಲಿ ಇರಲಿಲ್ಲ. ಶೇಷ ಬಟ್ಟನ ಮಾತಿಗೆ ಎದುರಾಡೊ ಎದೆಗಾರಿಕೆ ಯಾವನಿಗೂ ಇರಲಿಲ್ಲ. ಹಟ್ಟಿ ನಾಯಕನೇ ಎದ್ದು, " ಧಣಿಯೋರೆ ಏನೋ ನಡೆಯಬಾರದು ತೆಪ್ಪ ನಡೆದು ಹೋಗೈತೆ, ಮುಂದೇನು?" ಮಾತು

ನಿಲ್ಲಿಸಿ ಆತನ ಆಜ್ಞೆಗಾಗಿ ಕಾಯತೊಡಗಿದ." "ಎನ್ಲಾ ತೆಪ್ಪು, ದೊಡ್ಡ ಅಪರಾಧ, ಕಳ್ಳತನ ಮಾಡ್ತೀರಿ ಅಂದ್ರ" ಚಂಪಾನ ಮನಿಯಾಗ ಐದಾರು ಆಕಳು ಇದಾವಂತ ಕೇಳಿನಿ, ಅವನೆಲ್ಲ ಹೊಡಕೊಂಡು ಹೋಗಿ ನಮ್ಮ ದನದ ಹಿಂಡಿನ್ಯಾಗ ಸೇರಸಬೇಕು. ಅದೊಂದೆ ಪರಿಹಾರ." ಕಡ್ಡಿ ತುಂಡು ಮಾಡಿದಂಗೆ ಹೇಳಿದ ಶೇಷಪ್ಪ. ಇನ್ನೂ ತಿರ್ಮಾನ ಅಗಿರಲಿಲ್ಲ ಆದರೂ ಮಾದರ ಎರಬ ಆರು ಆಕಳುಗಳನ್ನ ಹೊಡಕೊಂಡ ಬಂದಿದ್ದ. ಚಂಪಾನಾಯ್ಕಗ ಎತ್ತ ತೋಚದಂಗಾಗಿತ್ತು. "ಅಪ್ಪಾರ, ಒಂದು ಕುಂಬಳಕಾಯಿಗೆ ಆರು ಆಕಳ ದಂಡ, ಯಾವ ನ್ಯಾಯ.?" ತಾನೇನೋ ಮಾತಾಡಕ ನೋಡಿದ. ತಳವಾರ ಕೆಂಚ ಎದ್ದವನೆ ಚಂಪಾನ ಕೊಳಪಟ್ಟಿ ಹಿಡಿದು, " ಏನ್ಲಾ ಮಗನ ಲಮಾಣ್ಯಾ, ಧಣಿಗೆ ಎದುರುತ್ರ ಕೊಡ್ತೀಯಾ, ಅವರು ಹೇಳಿದ್ರ ಮುಗೀತು. ಯಾವ ಕೋರ್ಟು ಇಲ್ಲ, ಕಚೇರಿ ಇಲ್ಲ, ಅವರ ಎಲ್ಲ." ಅಂದವನೆ ನಾಕು ಬಿಗಿದ. ಧನ್‌ಸಿಂಗ್ ಮಾತು ಕಳಕೊಂಡಿದ್ದ. ಇಡಿ ವ್ಯವಸ್ಥೆನೆ ತಮ್ಮ ವಿರುದ್ಧ ಇರುವಾಗ ಗಾಳಿಗೆ ಗುದ್ದಿ ಮೈ ನೋವು ಮಾಡಿಕೊಳ್ಳುವುದರಲ್ಲಿ ಅರ್ಥ ಏನೈತಿ ಅಂತ ಚಂಪಾನಾಯ್ಕನಿಗೆ ಸಮಾಧಾನ ಮಾಡಾಕ ನೋಡಿದ.

ಚಂಪಾ ನಾಯ್ಕ, ಅವನ ಇಬ್ಬರು ತಮ್ಮಂದಿರು ಹಳೆ ಪೆಟಾರಿಗಳನ್ನು ಹೊರ ತೆಗೆದರು. ಇದ್ದ ಬದ್ದ ಸಾಮನುಗಳನ್ನು ಗೋಣಿ ಚೀಲಗಳಲ್ಲಿ ಕಟ್ಟಿ ಗುಡಿಕೋಟೆ ಬಿಡಾಕ ತಯಾರಾದ್ರು. ಧನ್‌ಸಿಂಗ್ ಏನೂ ಹೇಳದ ಸ್ಥಿತಿ ತಲುಪಿದ್ದ. ಅವನ ಕಿರಿಯ ಪಂಪಾನಾಯ್ಕ ಪಶ್ಚಿಮ ದಿಕ್ಕಿಗೆ ಗುಳೆ ಹೋದವನು ಎಲ್ಲಿ ಅದಾನೆಂದು ಯಾರಿಗೂ ತಿಳಿಯದಾಗಿತ್ತು. ಯಾವ ಬಾಯಿಲೆ ಇಷ್ಟೆಲ್ಲಾ ಅನ್ಯಾಯ ಆದಮೇಲೆ ಹೋಗೋದು ಬೇಡ ನಿಲ್ಲು ಇಲ್ಲೆ ಅಂತ ಹೇಳುವುದು ಹೇಗೆ ಎನ್ನುವ ಸಂದಿಗ್ದತೆಯೊಳಗಿದ್ದ ಚಂಪಾ, ತಿಂದ್ಗ ಯಾರೋ ಕೈಕಾಲು ಬಿದ್ದು ಚೆಕ್ಕಡಿ ಗಾಡಿಗಳನ್ನು ಪಡೆದು ದೇಸುನಾಯ್ಕನ ತಾಂಡಕ್ಕೆ ಹೊರಟರು. ಹಟ್ಟಿ ನಾಯ್ಕ, ಕಾರಬಾರಿ ತಾವು ಮಾಡಿದ ನೀಚ ಕೃತ್ಯಕ್ಕೆ ಪ ಶ್ಚಾತಾಪ ಪಡೆದೆ ನೋಡುತ್ತಾ ನಿಂತಿದ್ದರು. ತಾಂಡದ ಕೆಲವರು, " ಪಾಪ ತುಂಬು ಗರ್ಭಿಣಿ ಹೆಂಗಸು ಆಟು ದೂರ ಹೆಂಗ ಹೋಗ್ಯಾಳು. ಲೆ ತಮ್ಮ ಚಂಪಾನಾಯ್ಕ ನಿನ್ನ ಹೆಂಡ್ರು ಒಳಗ–ಹೊರಗ ಆಗ್ಯಾಳ ವಾರೊಪ್ಪೊತ್ತು ತಡ್ಕಬಾರದೇನಲೆ, ದಾರಿ ಮೇಲೆ ಹೆಚ್ಚುಕಮ್ಮಿ ಆದ್ರ ಏನು ಮಾಡಿಯಾ." ಸಕ್ರಾನಾಯ್ಕ ಹೇಳಿದ. " ಆಯ್ಯೋ ಮಾವ ಈ ಹಾಳು ಊರ ಬಿಟ್ಟು ಮುಂದೆ ಏನಾರು ಆಗವಲ್ಲದಾಕ ಬಿಡು. ಸೇವಾಭಾಯಿ ಮರಿಯಮ್ಮ ಅದಾರ , ನೋಡಿ ಕೊಳ್ತಾರ. ಆದರ ಈ ಹಾಳು ಮಂದಿನಡುವಿಂದ ಮೊದಲು ಪಾರಾಗಬೇಕು. ನಮ್ಮ ಪೂರ್ವಜರು ಹುಟ್ಟಿ ಬೆಳೆದ. ತಾವೇ ಕಟ್ಟಿದ ತಾಂಡಕ್ಕೆ ವಾಪಾಸು ಹೋಗಿ ಮತ್ತ ಅಲ್ಲೆ ಹೊಸದೊಂದು ತಾಂಡ ಕಟ್ಟುತ್ತೀವಿ." ಅವನ ಉತ್ತರಕ್ಕೆ ಕಾಯದೆ ಲುಗಬಗೆಯಿಂದ ಮುಂದಕ್ಕೆ ಸಾಗಿದ. ಅವರ ಸೋದರ ಸಂಬಂಧಿಗಳ ಪೈಕಿ ಖೇಮುನಾಯ್ಕ ತಾಂಡದ ಗಡಿವರೆಗೂ ಹೋಗಿ," ಹೋಗಿ ಬರ್ರಿ, ಚಂಪಾ ತಿಂದ್ಗ ಸೇವಾಭಾಯಿ ನಿಮಗೆ ಒಳ್ಳೆದು ಮಾಡಲಿ, ಪಾರ್ತಿನ ಒಟು ಜೋಪಾನದಿಂದ ನೋಡಿಕೊಳ್ರಿ, ಗುಜಾಸತ್ತಿಗ ಬರ್ತೀರಲ್ಲ ಮೊಳಕಾನ್ಮೂರ ಪಕ್ಕ. ಅವಾಗ ಸಿಗೋಣಂತ ಬಿಡು. ನೀ ಏನು ಕಾಳಜಿ ಮಾಡಬ್ಯಾಡ." ಅಂದವನೆ ಕೊನೆಯ ವಿದಾಯ ಹೇಳಿ ಬಂದಿದ್ದ. ಕಮರ್‌ತೋಟ್ ಪಂಗಡದ ಮನೆಗಳು ಬಹಳ ಕಡಿಮೆ ಯಾದವು. ಅವನ ಮುಂದೆ ಒಬ್ಬ ಮಗ, ಸೋದರ ಸಂಬಂಧಿಯ ಪೈಕಿ ಕೆಲವರು ತಾಂಡ ಬಿಟ್ಟರೂ ಪಂಪಾನಾಯ್ಕ ಮಾತ್ರ ಹಿಂದೆ ಉಳುಕೊಂಡಿದ್ದ. ಅವನು ಹರಪನಹಳ್ಳೀ ತಾಲೂಕಿನ ತಾಂಡ ಒಂದರಲ್ಲಿ ನೆಲ ನಿಂತಿದ್ದ. ಈಗ ಗಡಿಕೋಟೆ ಮುಂದೆ

ಖೇಮುನಾಯ್ಕ ಮಕ್ಕಳೊಂದಿಗೆ ಇದ್ದಿದ್ದನ್ನು ಬಿಟ್ಟರೆ ದೊಡ್ಡ ವಠಾರವೇ ಕರಗಿತು. ಕರಮ್‌ತೋಟ್ ಕುಟುಂಬದವರು ದುರಂತದಲ್ಲಿ ಅರ್ಧ ಜನ ಕಡೆಗೆ ಉಳಿದಿದ್ದು. ಖೇಮುಮಾಯ್ಕನ ಮಗಳು ಠಕರಿ. ದೇನ್ಯಾ, ರಾಮುಡು ಲಾಲ್ ಸಿಂಗ್‌ನಾಯ್ಕ ಮೊದಲಾದವರು. ಮುಂಡೇವಡೋ ಕೆಡವಿದ ದೂಪ್ಲಬುಕ್ಯಾರ ಕರಮತೋಟ್ ಕೋಲೆಯಾಗಿದ್ದ ಅವನ ಇಬ್ಬರು ಮಕ್ಕಳು ಅದ್ಯಾವದೋ ಬೇನೆ ಬಂದು ಸತ್ತು ಹೋದರು. ಅವರ ಅಗಲುವಿಕೆಯನ್ನು ಸಹಿಸದೆ ಅವನ ಹೆಂಡತಿ ಭಾಳ ಬಾಳ ಕಾಲ ಬದುಕಲಿಲ್ಲ. ಆವಳ ಅಂತ್ಯಕ್ರಿಯೆಯನ್ನು ಧನ್‌ಸಿಂಗ್ ಬುಕ್ಯಾನೆ ಮುಂದು ನಿಂತು ಮಾಡಿದ್ದ. “ಕಿಂವವೆತ್ತಕಿಂವವೇಗೆ.” ಅನ್ನೊ ದುಃಖ ಕೋಡಿಯಾಗಿ ಹರಿದಿತ್ತು. ಒಬ್ಬನೆ ತಳಮಳಿಸುತ್ತ ಬಡಬಡಿಸುತ್ತಾ ಅಳತೊಡಗಿದ. ದೇಸು ಬುಕ್ಯಾ ತಾಂಡದ ಗತ ವೈಭವ ಅವನ ಕಣ್ಣ ಮುಂದೆ ಬಂದು ಮಾಯವಾಯಿತು. ಅವನ ಅಪ್ಪ, ಅವ್ವ, ಸಹೋದರರು. ಸಹೋದರಿಯರು, ಇಡಿ ಊರಿಗೆ ಊರೇ ಸಹುಕಾರನ ಜೊತೆ ಸಂಘರ್ಷ, ಅವರ ವಿರುದ್ಧ ಪಿತೂರಿ ಮಾಡಿದ ಮಂದಿ ಕೆಂಪು ಜನರೊಂದಿಗಿನ ಹೋರಾಟದ ಮೂಲದಿಂದ ಬಂದವರು, ಮುಂದೆ ಕೆಟ್ಟ ಹಾದಿ ಹಿಡಿದು ಅವನ ಚಿಕ್ಕಪ್ಪನ ಮಕ್ಕಳಲ್ಲಿ ಒಬ್ಬ ಕುಖ್ಯಾತ ಕಳ್ಳನಾಗಿ ಕರಮ್‌ತೋಟ್ ವಂಶದ ಮರ್ಯಾದೆಯನ್ನು ಹಾಳು ಮಾಡಿದರೆ, ಮತ್ತೊಬ್ಬ ತನ್ನ ಮೇಲಿನ ಹಗೆತನಕ್ಕೆ ಇಡಿ ವಂಶವನ್ನೇ ನಿರ್ವಂಶಮಾಡಿಬಿಟ್ಟ. “ ಏಯ್ ಸೇವಾಭಾಯಿ, ಮರಿಯಮ್ಮ, ಏನು ನಿಮ್ಮಲೀಲೆ, ಕೆಲವರ ವಂಶವನ್ನೇ ನಿರ್ವಂಶಮಾಡಿದಿರಿ. ಅಯ್ಯೋ ತಾಯಿ ಗುಜಾಸತ್ತಿ ಹೇಗವ್ವ ನಿನ್ನ ವಂಶ ಬೆಳೆಯೋದು ನೀರಿಲ್ಲದ ಕರಿ ನೆಲದಲ್ಲಿ ಹುಲುಸಾಗಿ ಹುಟ್ಟುವ ಕರಿಕೆ ಹುಲ್ಲನ್ನು ಕರುಣಿಸವ್ವ ನಿನ್ನ ಮಕ್ಕಳಿಗೆ.” ಹಾಸಿಗೆ ಮೇಲೆ ಬಿದ್ದುಕೊಂಡೆ ಬಹಳ ಹೊತ್ತಿನ ವರೆಗೆ ಒಬ್ಬನೆ ಕನಲುತ್ತಿದ್ದ. ಈ ಕನಸು ಕನವರಿಕೆ ಬಿಟ್ಟರೆ ಧನ್‌ಸಿಂಗ್‌ಗೆ ಬೇರೇನು ಇಲ್ಲ. ಪಡವಲ ಸೀಮೆಗೆ ಹೋದ ಕಿರಿಮಗ ಪಂಪಾನ ಸುದ್ದಿಗಾಗಿ, ಮಹಾ ಭಾರತದ ದೃತರಾಷ್ಟ್ರ, ಕೌರವ ಪಾಂಡವ ಯದ್ಧದ ಸಂದರ್ಭದಲ್ಲಿ ತನ್ನ ಸಾರಥಿಯಾದ ಸಂಜೆಯನನ್ನು ಕುತೂಹಲದಿಂದ ಕೇಳುವಂತೆ ಯಾರಾದರೂ ಪಡವಲ ಸೀಮೆಯಿಂದ ಬಂದವರು ಎಂದರೆ, ಏಳಲಾಗದ ಸ್ಥಿತಿಯಲ್ಲೂ, “ ಏಯ್, ನನ್ನ ಕಿರಿಮಗ ಪಂಪಾ ಅವನ ಹೆಂಡತಿ ಗೂಡ್ಲಿ ಪಾಡದಾರೆನ್ನಪ್ಪ, ಎನಾದ್ರು ಸುದ್ದಿ ಹೆಳಿ ಕಳಸ್ಯಾನ.” ಎಂದು ಕೆಳುತ್ತಿದ್ದ. ಒಮ್ಮೊಮ್ಮೆ ಕೇಳವವನ ಮನಸ್ಸು ಕರಗಿ, “ ಹೂಂ. ಪಾಡದಾರಪ್ಪ, ನೋಡಿಕೊಂಡ ಬಾ ಅಂದಿದಕ್ಕ ನಾ ಇಷ್ಟು ದೂರ ಬಂದಿದ್ದು ಅಜ್ಜ. ಹೆಂಗದಿಯಾ ಹೇಳು. ಇನ್ನ ನಿನ್ನ ಮಗ್‌ಗ ಏನಾದ್ರು ಹೇಳೋದಿದ್ರ ಹೇಳು.” ಎಂದು ಕೇಳಿದರೆ, “ಏನ್ ಹೇಳ್ತಿಯಪ್ಪ, ಬಿರುಗಾಳೀ ಬೀಸಿದ್ರ ಬಿದ್ದುಹೋಗೋ ನುಸಿ ಹಿಡದ ಮರ ಯಾವಗ ಭೂಮಿಗೆ ಬೀಳ್ತದೋ ಗೊತ್ತಿಲ್ಲ. ಸಾಯೋದಿಕಿಂತ ಮುಂಚೆ ಒಮ್ಮ ನಿಮ್ಮಪ್ಪನ ಮುಖ ನೋಡಿಕೊಂಡು ಹೋಗಂತೇಳು. ಯಾಕಂದಿ ಅವ ಸಣ್ಣಾವ ಇದ್ದಾಗಿಂದ್ಲು ನನ್ನ ಎದೆಮ್ಯಾಲೆ ತಲೆಕೊಟ್ಟು ಮಲಗಿದೋನು.” ಕಣ್ಣಂಚಿನಲ್ಲಿ ಜಿಗುವ ಹನಿಯನ್ನು ಒರೆಸಿಕೊಳ್ಳುತ್ತಾ, “ಏನ್ಮಾಡ್ತಿಯಪ್ಪ, ಈಗ ಅವನ ತೊಡೆಮೇಲೆ ಜೀವ ಬಿಡಬೇಕು ಅಂತೀನಿ. ಆದ್ರ . . .” ಧನ್‌ಸಿಂಗ್ ದುಖಃ ತಡಿಯಾರಲದ ಬಿಕ್ಕಳಿಸಿ ಅತ್ತ. “ ಅಪ್ಪ ಯಾಕಿಂಗ್ ವೇದನೆ ಪಡ್ತೀಯಾ. ಅವನೇನು ಸಣ್ಣ ಕೂಸಲ್ಲ. ಎಲ್ಲಿದ್ರೂ ನಿನ್ನ ಆರ್ಶಿವಾದದಿಮದ ಚೆನ್ನಾಗಿ ಇರ್ತಾನೆ. ನೀ ಸುಮ್ಮನಿರು.” ಖೇಮು ಗದರಿಸಿದ್ದಕ್ಕೆ ಧನ್‌ಸಿಂಗ್ ಮಾತು ನಿಲ್ಲಿಸಿ ಬಿಡುತ್ತಿದ್ದ.

ಧನ್‌ಸಿಂಗ್ ಬುಕ್ಕ್ಯಾ ಕರಮ್‌ತೋಟ್ ತನ್ನ ಕೊನೆಗಾಗಿ ಕಾತರಿಸುತ್ತಿದ್ದ. ಬಹುಶಃ ದೇವರು ತನ್ನ ಮರೆತಿರಬಹುದೆಂದು ಶಾಪ ಹಾಕುತ್ತಿದ್ದ. ಅವನ ವಾರಿಗೆಯವರು ಬಹುತೇಕ ಕಡಿಮೆಯಾಗಿದ್ದರು. ಗುಡಿಕೋಟೆ ಹಟ್ಟಿನಾಯ್ಕ, ಬೋತ್ಯಾನಾಯ್ಕ ತೀರಿಕೊಂಡು ಎರೆಡು ವರ್ಷಗಳೇ ಆಗಿದ್ದವು. ಕಾರಬಾರಿ ಕಲಮು ನಾಯ್ಕ, ಹಿಂದಲ ಓಣಿ ದಾವೋ ಸೇಣುನಾಯ್ಕ,

ರೂಪ್ಲಾ. ಧಾನ್ಯ ಮಂಕಾಳಿ ಈಡೀ ತಾಂಡದ ಹಿರಿಯ ತಲೆಮಾರು ಇಲ್ಲದಾಗಿತ್ತು.

ಕೊನೆಯ ಕೊಂಡಿಯಂತಿದ್ದ ಧನ್‌ಸಿಂಗ್ ತನ್ನ ಮಗನ ಪಂಪಾನ ಸಲುವಾಗಿ ಜೀವ ಹಿಡಿದುಕೊಂಡಿದ್ದ. ಆದರೆ ಬದುಕು ಕಟ್ಟುವ ಪ್ರಕ್ರಿಯೆಲ್ಲಿ ತೊಡಗಿಕೊಂಡಿದ್ದ ಪಂಪಾನಾಯ್ಕ ಬಂಡಿಕೇರಿ ತಾಂಡದಲ್ಲಾದ ಒಂದು ಸಣ್ಣ ಘಟನೆಗೆ ಮತ್ತೊಂದು ತಾಂಡಕ್ಕೆ ವಲಸೆ ಹೋಗಲೇ ಬೇಕಾಯಿತು.

ಬಂಡಿಗೇರಿ ಬಿಟ್ಟನಂತರ ಅವನು ಪೂರ್ವಕ್ಕೆ ಒಂದು ತಾಂಡ ಐತೆ ಅಂತೇಳಿ ಯಾರೋ ಹೇಳಿದ್ದನ್ನು ಕೇಳಿದ. ಗುಡಿಕೋಟೆಯನ್ನು ಬಿಟ್ಟು ಸುಮಾರು ಒಂದೂವರೆವರ್ಷದ ಹತ್ತಿರವೇ ಆಗಿತ್ತು. ಗೂಡ್ಲಿಗೆ ಬಯಕೆ ಆರಂಭವಾಗಿದ್ದವು. ಅವನ ಅಳಿಯಂದಿರು ಮಾವ ಅವರನ್ನು ಬಿಟ್ಟು ಅಲೆಯುತ್ತಾ ಹೋಗಿ ಬಾಡ ಕ್ವಾಡ ಹತ್ತಿರ ಹೋಗಿ ಸಣ್ಣ ತಾಂಡ ಒಂದರಲ್ಲಿ ನೆಲಸಿದ್ದರು. ಧನ್‌ಸಿಂಗ್ ಅವರಿವರ ಸಹಾಯದಿಂದ ವಾರಿ ಚಪ್ಪರ ಹಾಕಿಕೊಂಡು ಬದುಕನ್ನ ವಿಸ್ತರಿಸುವ ಹುಮ್ಮನಸ್ಸಿನಲ್ಲಿದ್ದ. ಅವನ ಮುಗ್ಧತೆಯನ್ನು ಬಂಡವಾಳ ಮಾಡಿಕೊಂಡಿದ್ದ ಅವನ ಅಣ್ಣ, ಅತಿಗೆ, ಸೋದರ ಸಂಬಂಧಿಗಳು ಊರವರನೆಲ್ಲ ಮರೆತಿದ್ದರು. ಪ್ರತಿದಿನ ಮಲಗುವಾಗ ಮಾತ್ರ, “ ಕಾಪಾಡಪ್ಪ ತಂದೆ ಜೀವ ಕೊಟ್ಟವನೆ, ಕಾಪಾಡವ್ವಾ ತಾಯಿ ಎನ್ನುವ ಶಬ್ದಗಳನ್ನು ಉಚ್ಚರಿಸದೆ ಮಲಗುತ್ತಿರಲಿಲ್ಲ. ತಂದೆ ತಾಯಿಯ ನೆನಪು, ಆವರ ಆಶೀರ್ವಾದದಿಂದಲೆ ತಾನು ಬದುಕಿದೆ ಎನ್ನುವ ನಂಬಿಕೆ ಅವನಲ್ಲಿ ಗಾಢವಾಗಿತ್ತು. ವ್ಯವಹಾರದಲ್ಲಿ ಅಷ್ಟೇನು ಹುಷಾರಿರಲಿಲ್ಲ. ಮಂದಿ ಜೊತೆಗೆ ವ್ಯವಹಾರ ಮಾಡುವ ಚಲಾಕಿತನವಿಲ್ಲ. ಆಣಿ, ದಮಡಿ ಲೆಕ್ಕ ಕೂಡ ಸರಿಯಾಗಿ ಬಾರದೆ ಫಜೀತಿಗೀಡಾಗಿದ್ದ. ಕಾಳೀ ಕಡಿ ಖರೀಧಿಸುವಾಗಲು ಪಾವು, ಅಚ್ಚೇರು. ಸೇರಿನ ಲೆಖ್ಖ ತಿಳಯದವನಾಗಿದ್ದ. ಈ ಕಾರಣಕ್ಕೆ ಇವನು ಮಂದಿಯ ಮುಂದೆ ಹಾಸ್ಯಕ್ಕೊಳಗಾಗಿದ್ದ. ಗೂಡ್ಲಿಗೆ ಮಾತ್ರ ಲೆಖ್ಖದಲ್ಲಿ ಚುರುಕು. ಮುಗ್ಧ ಗಂಡನ ಜೋಡಿ ಬಾಳೇವು ಮಾಡಲು ನಿಚ್ಚಯಿಸಿದ ಮೇಲೆ ದಡ್ಡನಾದರೇನು, ಮೂರ್ಖನಾದರೇನು ಏಗಲೇಬೇಕು. ಆದರೆ ಪಂಪಾನಾಯ್ಕ ಗುಣದಲ್ಲಿ ಚೆನ್ನ, ನೋಡಲು ಎತ್ತರದ ಆಳು, ಸ್ಪುರದ್ರೂಪಿಯಾಗಿದ್ದ. ಕಿವಿಯೊಳಗೆ ಬಂಗಾರದ ಕೆಂಪು ಹವಳದ ಒಂಟಿ, ಕುಡಿಮೀಸೆ, ಬಿಳಿಧೋತ್ರ, ಬಿಳಿ ಅಂಗಿ, ಹೆಗಲಿಗೆ ಕೆಂಪು ಟವೇಲು ಒಮ್ಮೆ ನೋಡಿದರೆ ಮತ್ತೊಮ್ಮೆ ನೋಡಬೇಕು ಎನ್ನುವ ಕೂತುಹಲ ಹುಟ್ಟಿಸುವ ಸ್ವರೂಪಿ. ಇದನ್ನು ಗೂಡ್ಲಿ ಬಹುವಾಗಿ ಮೆಚ್ಚಿಕೊಂಡಿದ್ದಳು. ತನ್ನ ಆಮಗೋತ್ ಬೆಡಗದ ಮರ್ಯಾದೆ ತನ್ನ ಮೇಲಿದ್ದಿದ್ದರಿಂದ, ಅದಕ್ಕೆ ದಕ್ಕೆಯಾಗದಂತೆ ನಡೆದುಕೊಳ್ಳುವುದು ಅವಳ ಆದ್ಯ ಕರ್ತವ್ಯಕೂಡ.

ಎದೆಯ ಮೇಲೆ ಮಲಗಿಕೊಂಡು ಅಪ್ಪ ಹಾಡುವ ಲಾಲಿಯೊಂದಿಗೆ ತಟ್ಟುವ ಕೈಗಳ ಸ್ಪರ್ಶದಿಂದ ನಿದ್ರಿಸುತ್ತಿದ್ದ ಪಂಪಾನಾಯ್ಕ ಮರೆಯಾಕಾದ? ಆತನನ್ನು ಬಿಟ್ಟು ಜೀವಿಸಲು

ಸಾಧ್ಯವಿಲ್ಲದ ಸ್ಥಿತಿಯಲ್ಲಿದ್ದ ತಂದೆ ಯಾರು ಇಲ್ಲದ ನಾಡಿಗೆ ಪಯಣ ಬೆಳಸಿದ ಎನ್ನುವುದೇ ಸೋಜಿಗದ ವಿಷಯವಾಗಿತ್ತು. ಯವತ್ತು ಮನೆ ಬಿಟ್ಟವನಲ್ಲ. ಗಳೆಯರ ಕೂಡ ಕಾಡ ಹರಟೆ ಹೊಡದವನಲ್ಲ. ತಾನು ತನ್ನ ಮನಿ ಅಣ್ಣನ ಕೂಡ ಕೆಲಸ. ಆವನ ಮಕ್ಕಳ ಜೊರೆಗೆ ಅಟ ಇವೇ ಅವನ ದಿನಚರಿಯಾಗಿತ್ತು. ಗೂಡ್ಲಿಯನ್ನು ಮದುವೆ ಯಾದ ಮೇಲೆ ಸ್ವತಂತ್ರವಾಗಿ ಬದುಕಬಲ್ಲೆ ಎಂಬ ನಿರ್ಧಾರ ಹೇಗೆ ಬಂತು ಎಂಬುದೆ ರಹಸ್ಯವಾಗಿತ್ತು. ಮದುವೆ ದಿನವೆ ದೊಡ್ಡ ರಾದ್ದಾಂತವಾಗಿ, ಅವನು ಮದುವೆಯೇ ಅಗಬಾರದೆಂದು ರೂಪಸಿದ ಒಳಸಂಚು, ಅಲ್ಲಿದ್ದರೆ ನೆಮ್ಮದಿಯಿಂದ ಬದುಕಲಾರೆ ಎಂಬ ಪಂಪಾನಾಯ್ಕನ ನಿರ್ಧಾದ ಕುರಿತು ಅಲೋಚಿಸಿದರೆ ಅವನು ದಡ್ಡನಲ್ಲಾ, ಸೂಕ್ಷ್ಮವಾಗಿ ಅಲೋಚಿಸುವ ಚಾಣಾಕ್ಷ ಎಂಬದು ವೇದ್ಯಾವಾಗುತ್ತದೆ. ಆಂತ ಪಂಪಾ ಮದುವೆಯಾಗಿ ಒಂದು ವರೆ ವರ್ಷಕ್ಕೆ ತಂದೆಯಾಗಿದ್ದ.

ಅವನ ಚಿಂತೆಯಲ್ಲ ಹಾಸಿಗೆ ಹಿಡಿದ್ದಿದ್ದ ತಂದೆಯ ಕುರಿತು ಒಂದು ಪತ್ರವಿಲ್ಲ ಸುದ್ದಿ ಸಮಾಚಾರವೇ ಇಲ್ಲದಾಗಿತ್ತು. ಆಗತಾನೆ ಆರಂಭವಾದ ವಾಹನಗಳು ಗುಡ್ಡದಟ್ಟಿ ತಾಂಡದಿಂದ ಮೂರುವರೆ ಕಿಮೀ. ಚೆನ್ನಳ್ಳಿ, ಇಲ್ಲಾಂದ್ರೆ, ಐದುವರೆ ಮೈಲಿ ದೂರದ ಹನುಮಾಪುರ ಅಥವಾ ಬುಳ್ಳಾಪುರ, ಅದೂ ಇಲ್ಲಾಂದ್ರೆ ಹೆಚ್ಚು ಕಡಿಮೆ ಐದು ಕಿಮೀ. ದೂರದ ಬರಲಿಗೆಗೆ ನಡೆದು ಬಸ್ಸನ್ನು ಹಿಡಿದು ಯಾವ ಕಡೆಗೆ ಬೇಕಾದರೂ ಪ್ರಯಾಣಿಸುತ್ತಿದ್ದರು.

ದಕ್ಷಿಣಕ್ಕೆ ದಾಮೂರು, ಬಗತೂರು ದೊಡ್ಡ ಹಳ್ಳಿಗಳಂತಿದ್ದವು. ಅನೇಕ ಹೊಸ ಕಂಪನಿಗಳ ಕಾರಖಾನೆಗಳು ಪ್ರಾರಂಭಗೊಂಡಿದ್ದವು. ಈ ಸಂಬಂಧ ದೊಡ್ಡ ಹಳ್ಳಿಗಳ ಸ್ವರೂಪ ಬದಲಾಗಿ ಪಟ್ಟಣದಂತಾದವು. ಪಂಪಾ ಮತ್ತು ಗೂಡ್ಲಿಗೆ ಕೂಲಿಕೆಲಸ ಮಾಡಬೇಕಾದ ಅನಿವಾರ್ಯತೆ ಇತ್ತು. ಏಕೆಂದರೆ ಬರುವಾಗ ಅವರಲ್ಲಿದ್ದ ಯಾರೋ ಪುಣ್ಯಾತ್ಮರು ಆಯರ್ ಮಾಡಿದ್ದ ದುಡ್ನು ಏನು ಸಲ್ಪಸ್ವಲ್ಪ ಜೋಪಾನವಾಗಿಟ್ಟುಕೊಂಡಿದ್ದರು. ಅವನ್ನು ಹಾಗೆಯೇ ಉಳಿಸಿ ಕೈ ಖರ್ಚಿಗೆ ಮಾಡಿಕೊಂಡಿದ್ದರು. ಗುಡದಟ್ಟಿ ತಾಂಡಕ್ಕೆ ಬಂದು ಚಪ್ಪರ ಕಟ್ಟುವವರೆಗೆ ಅದೇ ಕಾಸು ಕೈ ಹಿಡಿದಿತ್ತು. ಮುಂದ? ಎಂಬ ಪ್ರಶ್ನೆ ಹುಟ್ಟಿಕೊಂಡಿದ್ದೆ ದುಡಿಮೆ ಅನಿವಾರ್ಯವಾಯಿತು. ಮುಂಜಾನಿಯಿಂದ ಸಂಜಿವರೆಗೆ ದುಡಿದರೂ ಕೈಗೆ ಕೂಲಿ ಕೊಡುತ್ತಿರಲಿಲ್ಲ. ಏನಿದ್ದರು ಹುಳುಕು ಜೋಳ, ಇಲ್ಲಂದ್ರೆ ಮಣ್ಣುರಾಗಿ, ಅವನ್ನು ತಂದು ಹಸನು ಮಾಡಿದರೆ ದಕ್ಕುವುದು ಪಾವು ಮಾತ್ರ ಹೊಟ್ಟೆಗೆ ಅದರದೇ ಗಂಜಿ. ಅದರಲ್ಲು ಜೀವನ ಸಾಗಿತ್ತು. ಮೊದಲು ಕೂಸು ಹುಟ್ಟಿದಾಗಂತು ಬಧ್ರಾನಾಯ್ಕ ಆ ಅಪರಚಿತ ನಾಡಿನಲ್ಲಿ ತಂದೆ ತಾಯಿ ಬಂಧು ಬಳಗ ಇಲ್ಲದೆ ಘನ ಪಜೀತಿ ಪಟ್ಟಿದ್ದ. ತಾಂಡದಲ್ಲಿನ ಹಿರಿಯ ಹೆಂಗಸರು ಚಾವಣಿ, ರೂಪ್ಲಿ, ಪಕ್ಕೀರಜ್ಜಿ ಸೂಲಗಿತ್ತಿಯರಂತೆ ಇದ್ದ ಗುಡಿಸಲಲ್ಲೆ ತಟ್ಟಿ ಮುಂದು ಮಾಡಿ , “ಅಯ್ತು ಮಗಳೆ ನೀ ಬಹದ್ದೂರು ಹೆಣ್ಣಲ್ಲವಾ,” ಎಂದು ಗೂಡ್ಲಿ ಧರ್ಯ ತುಂಬುತ್ತಾ , ತಲೆ ಬರುವುದನ್ನೇ ಕಾದು ಕುಳಿತಿದ್ದರು.

ಗೂಡ್ಲಿ ಹೆಂಡತಿಗೇನಾಯಿತು ಎಂದು ಆತಂಕದಿಂದ ಪಂಪಾ ತನ್ನ ಮನೆ ದೇವರಾದ ಗಜ್ಜಾಸತಿಯನ್ನು ಪ್ರಾರ್ಥಿಸಿಕೊಂಡ. ಇದರೊಂದಿಗೆ ಸೇವಾಭಾಯಿ ಮರಿಯಮ್ಮನ್ನನ್ನು ಮನದಲ್ಲೆ ನಮಿಸಿ ಬೇಡಿಕೊಂಡ. ಗುಡಿಸಲೊಳಗಿನ ವತಾವರಣ ಬಿಗಿಯಾಗುತ್ತಿದ್ದಂತೆ ಇವನ ಉಸಿರುಗಟ್ಟಿ ನಿಂತು ಗುಜ್ಜಾಸತಿಯನ್ನು ನೆನದು. ಹೆಂಡತಿ ಹರಿಗೆ ಸೂಸೂತ್ರ ಆದ್ರ ಆರು ಕೊಬ್ಬರಿ ಬಟ್ಟಲು

ಕಾಣಿಕೆ ನೀಡಿ, ನಮ್ಮ ಪದ್ಧತಿಯಂತೆ ಒಳಂಗ್ ಹೇಳುಸ್ತೇನವ್ವ ಎಂದು ಬೇಡಿಕೊಂಡ. ಪಂಪಾನ ಹರಕೆಯಂತೆ ಗುಡಿಸಲೊಳಗಿಂದ ಕೂಸಿನ ಅಳುವ ಧ್ವನಿ ಕೇಳಿಸಿತು. ಕತ್ತಲು ಬೆಳಕಿನ ತಾಕಲಾಟದಲ್ಲಿ ಕೂಸನ್ನು ತಡಕಾಡಿದ ರಾಮಜ್ಜಿ, "ಲೋ ಪಂಪಾ ಗಂಡು ಕೂಸಲೋ." ನಗುತ್ತಲೆ ಕೂಗಿಕೊಂಡಳು. ಕೂಗು ಕೆಳುತ್ತಲೆ ಉತ್ಸಾಹದಿಂದ ಪಂಪಾನ ಕಾಲುಗಳು ತತ್ತರಿಸಿದವು. ಪಕ್ಕದ ಮನೆಗೋಡಿ ಗಂಗಾಳವನ್ನು ತಂದು ಜೋರಾಗಿ ಬಾರಿಸುತ್ತಾ ಪಂಪಾನಾಯ್ಕನಿಗೆ ಗಂಡು ಮಗು ಹುಟ್ಟಿತಪ್ಪೋ ಎಂದು ಕೂಗಿಕೊಂಡ. ಮುಂದಿನ ಮೆನಯ ಅಡ್ನಾಡಿ ತಿಂಡ್ಗ ಪಂಪನ ಕೈಯಲ್ಲಿದ್ದ ಗಂಗಾಳವನ್ನು ಕಸ್ಕೊಂಡು ಜೋರಾಗಿ ಬಾರಿಸುತ್ತಾ ಕುಣಿದಾಡಿದ. ಊರ ನಡುಕಿನ ಗುಡ್ಡದಮ್ಮನ ಕಟ್ಟೆ ಮೇಲೆ ಕುಂತಿದ್ದ ಸೊಂಬೇರಿ ಹೈಕಳಿಗೆ ಕುತೂಹಲ, "ಲೇ ಅಡ್ನಾನಾಡಿ ಬಾರ್ಲೆ ಇಲ್ಲಿ" ಎಂದು ಕೂಗಿದರು. ಪುಕ್ಕಟೆ ಮಂದಿಯಾಕೋ ಕರದಾರ ಅಂದ್ರ ಎನು ಹಕ್ಕಿಕತ್‌ತೋ ಎಂದು ಮನದಲ್ಲೆ ಅಂದುಕೊಂಡು ಅವರು ಕರೆದದ್ದು ಕೆಳಿಸಿಲ್ಲ ಅನ್ನುವಂತೆ ಹೊರಟು ಬಿಟ್ಟ. ಕಟ್ಟೆ ಮೇಲೆ ಕುಂತವರಿಗೆ ಕುಂಡಿ ಸುಟ್ಟಂಗಾಗಿ, " ಲೇ ಬೇವರ್ಸಿ ಎಟು ದಿಮಾಕಲೆ ನಿನಗ. ಕರೆದರು ಕೇಳದಂಗೆ ಹೊಕ್ಕಿ, ನಾವಂದ್ರ ಕವಡಿ ಕಿಮ್ಮತ್ತು ಇಲ್ಲೇನು."

ಪಂಪಾನಾಯ್ಕನಿಗೆ ಜವಾಬ್ದಾರಿ ಹೆಚ್ಚಾಯಿತು. ಮದುಲಾದ್ರೆ ಗಂಡ ಹೆಂಡತಿ ಇಬ್ಬರು, ದುಡಿದು ಹೆಂಗೋ ಊಟ ಮಾಡುತ್ತಿದ್ದರು. ಈಗ ಒಬ್ಬನೆ ದುಡಿಯಬೇಕು ಹೊಟ್ಟೆ ಹೊರೆಬೇಕು.

ಅಲ್ಲಿ ಇಲ್ಲಿ ಅಂತೇಳಿ ಬಾಣಂತಿಗೊಂದಿಷ್ಟು ಕುರಿತೆಲಿ ಮಾಂಸ, ಖರಿಯಾ ತಂದು ಬೇಯಿಸಿ ಹಾಕಿದ. ರಾಮಜ್ಜಿ ಹೇಳಿದ ಮಾತು ಅವನ ಕಿವಿಯೊಳಗೆ ರಿಂಗಣಿಸಿತ್ತು. ಹುಡುಗನ ಕತ್ತು ನೆತ್ತಿ ಗಟ್ಟಿ ಆಗ್ಬೇಕಂದ್ರ ಕುರಿತಲೆ ಮಾಂಸ ಖರಿಯಾ ತಂದು ಉಣುಸು ಅಂದಿದ್ಲು. ಅವನು ತನ್ನ ಪ್ರಯತ್ನ ಮೀರಿ ಮಾಡತೊಡಗಿದ್ದ. ಶಂಕರಳ್ಳಿಯ ಜಮೀನ್ದಾರ ತಾವ ಹೋಗಿ ಸಾಲ ತಂದು ಮೆನ ನಡೆಸಿದ. "ನೀ ಎನು ಚಿಂತೆ ಮಾಡಬ್ಯಾಡ. ಆರು ತಿಂಗಳು, ನೀರು ಮುಟ್ಟಿಂದ ಕೂಸನ ರಾಮಜ್ಜಿತಾವ ಬಿಟ್ಟು ಕೆಲ್ಸಕ್ಕೆ ಬರ್ತೀನಂತ" ಗಂಡನೊಳಗೆ ಧೈರ್ಯ ತುಂಬಿದಳು. ತಾಂಡದ ಮಂದಿ ಯಾರ ಹತ್ತಿರನೂ ಜಮೀನು ಇರಲಿಲ್ಲ. ಪಂಪ ಬರುವ ಪೂರ್ವದಲ್ಲಿ ಇಪ್ಪತ್ತೋ ಮವತ್ತೋ ವರ್ಷದೊಳಗೆ ಬಹುತೇಕ ಲಾಮಾಣೆರು ವಲಸೆ ಬಂದು ನೆಲಸಿದ್ದರು. ಅದಕ್ಕೂ ಪೂರ್ವ ಐದೊ ಹತ್ತೋ ಮನೆಗಳಿದ್ದವು. ಆದರೆ ಈಗ ದೊಡ್ಡ ಕೋಟೆಯನ್ನು ಹುಟ್ಟಿ ಹಾಕಿದ ನಾಯಕರಂತೆ, ಈ ತಾಂಡನ ಓಂ ಪೂರ್ವಕ್ಕೆ ಕಟ್ಟಿದವರೆ ನಾವು, ನೀವು ಈಗೀಗ ಪುಟ್ಟಿಕೊತು ಬಂದವರು. ಪಂಪಾ ನಾಯ್ಕನಿಗಂತು ಒಂದು ನೂರುಬಾರಿ ಪುಜಾರಿ ತಾತ್ಲುನಾಯ್ಕ ಮತ್ತವನ ಗುಂಪು ಹೇಳಿ ಪಿಡಿಸಿದ್ದರು.

ರಟ್ಟೆ ಮೇಲೆ ಬದುಕು ಕಟ್ಟೋರಿಗೆ ಸುಮ್ಮೆನ ಕೂಡುವುದು ತುಸು ಜಡವಾಗಿತ್ತು. ಗೂಡ್ಲಿಗೆ ದಿನಗಳನ್ನು ಎಣಿಸತೊಡಗಿದಳು ಯಾವಾಗ ಎರೆಡುತಿಂಗಳಾದೀತು. ಹುಡುಗ ಮಲಿ ಉಣ್ಣೋದು ನಿಂತೀತು. ವಡ್ರಾಗಿ ಕಾಟಿ ಸುರುಮಾಡಿ ಗಂಡನ ಕೂಡ ದೆಣೇಯಾಕ ಹೋಗುವ ತವಕ.ಆದರೆ ಇನ್ನೂ ಒಂದೆರೆಡು ತಿಂಗಳು ಕಾಯಲೇ ಬೇಕಾಗಿತ್ತು. ಹಸಿ ಮೈ ನಾಳೆ ಏನಾದ್ರು ಹೆಚ್ಚುಕಮ್ಮಿ ಆದ್ರ ಅಂತೇಳಿ ಹೆದರಿದ್ದಳು. ಅದರೂ ತಿಂಗಳವರೆಗಾಗಲೆ ಅಡ್ಡ ಕೆಲಸಗಳನ್ನು ಮಾಡತೊಡಗಿದಳು. ಕಟ್ಟಿಗೆ ಕಸ ಮುಸುರೆ ಮಾಡಿ ಗಂಡನಿಗಾಗಿ ಕಾಯುತ್ತಿದ್ದಳು. ಬಂದವನೆ ರಾಗಿಯಿಲ್ಲಿ ದೊಡ್ಡ

ಕಲ್ಲುಗಳನ್ನು ಆರಿಸಿ ಸಾಧ್ಯಾವಾದರೆ ಮಣ್ಣನ್ನು ಜರಡಿ ಹಿಡಿದು ಪಕ್ಕದ ಮನೆ ಸೋಮ್ಲಾ ನಾಯ್ಕನ ಮನೆಗೆ ಹೋಗಿ ಬೀಸಿಕೊಂಡು ಬರುವುದರೊಳಗೆ ಗುಜ್ಜರಿ ಒಲೆಯ ಮೇಲೆ ಹಸರಿಟ್ಟಿದ್ದು ಅದರಲ್ಲಿ ಹಿಟ್ಟು ಹಾಕಿ ಕುದಿಗೆ ಬಿಟ್ಟು ಉಕ್ಕು ಬಂದೊಡನೆ ಕೆಳಗಿಳಿಸಿ ಕೈತಟ್ಟಿನಲ್ಲಿ ಎರೆಡು ಮುದ್ದೆಗಳನ್ನು ಮಾಡಿ ಅಗಲದ ಪಾತ್ರೆಯಲ್ಲಿ ಹಾಕಿ ಇಡುತ್ತಿದ್ದ. ನಂತರ ಬೆಂಕಿಯಲ್ಲಿ ಹಸಿ ಮೆಣಸಿನಕಾಯಿಗಳನ್ನು ಸುಟ್ಟು, ಬೆಳ್ಳುಳ್ಳಿ, ಚಿಟಿಗೆ ಉಪ್ಪು, ಹುಣಸೆ ಹುಳಿ ಹಿಂಡಿ ಕಿವಿಚಿ ಜೋಡು ಮಾಡುತ್ತಿದ್ದನು. ನಂತರ ಇಬ್ಬರೂ ತಿಂದು ಮಡಿಕೆಯಲ್ಲಿನ ನೀರು ಕೂಡಿದರೆ ಊಟ ಮುಗಿದಂತೆ. ಆರಂಭದಲ್ಲಿ ಗುರಜ್ಜಿ ಮಾಡಿಕೊಟ್ಟ ಕಾಟಿ ಕುಡಿದು ಗುಡ್ಲೀರಿ ತನ್ನ ಕಳರ ಕುಡಿಯ ಸಲುವಾಗಿ ಕಷ್ಟವನ್ನು ನುಂಗಿಕೊಂಡು ಕಲ್ಲನ್ನು ತಿಂದು ಕರಿಗಿಸಿಕೊಳ್ಳುವ ನಿರ್ಧಾರ ಮಾಡಿದ್ದಳು. ಆರು ತಿಂಗಳು ತನ್ನ ಕೂಸಿನೊಂದಿಗೆ ಕಾಲ ಕಳೆದದ್ದೇ ಗೊತ್ತಾಗಲಿಲ್ಲ. ಅಪ್ಪ, ಅವ್ವ, ಸಂಬಂಧಿಕರ ಯಾರ ನೆನಪು ಹತ್ತಿರ ಸುಳಿಯದ ಸ್ಥಿತಿ ತಲುಪಿದ್ದಳು. ಸಾಕ್ಷಾತ್ ದೇವರೆ ಸ್ವರೂಪವೇ ಆಗಿದ್ದ ಗಂಡ ಪಂಪನಾಯ್ಕನನ್ನು ಪೂಜಿಸಿ, ಅವನ ಪಾದದಡಿಯಲ್ಲಿ ಪಾವನವಾಗಲು ಎಲ್ಲಾ ಸಂಬಂಧಗಳನ್ನು ಕಳಚಿ ಬಂದಮೇಲೆ ಮತ್ತೆ ಭವದ ಭಾಂಧ್ಯವದ ಮೋಹವೇಕೆ? ಗುಡ್ಲೀರಿಗೆ ಭವ್ಯವಾದ ಕನಸುಗಳೇನು ಇದ್ದಂತೆ ಕಾಣಲಿಲ್ಲ. ತನ್ನ ಮಗ ಭಗ್ಯನಾಯ್ಕನನ್ನು ಸಾಕುವುದು, ಅವನ ಸಲುವಾಗಿ ಭೂಮಿಯನ್ನು ಮಾಡುವುದು ಇದೇ ಅವಳ ಕನಸಾಗಿತ್ತು. ಇರುವ ಗುಡಿಸಲನ್ನು ಆಚೆ ಈಚೆ ಸರಿಸಿ ದೊಡ್ಡದ್ದು ಮಾಡುವುದು. ಮನೆಯಲ್ಲಿ ನಾಟಿ ಕೋಳಿ ಸಾಕುವುದು. ಕಾಲ ಕ್ರಮೇಣ ಹಸು ಎಮ್ಮೆ ಎತ್ತುಗಳ ಜೋಡಿ ತರುವ ಅನೇಕ ಅಲೋಚನೆಗಳು ಅವಳ ತಲೆಯಲ್ಲಿ ತುಂಬಿಕೊಂಡವು. ಮುಗ್ಧ ಗಂಡನಿಗೆ ಜಗತ್ತಿನ ಕನಸಾಗಳಾಗಲಿ, ಆಲೋಚನೆಗಳೇ ಕಡಿಮೆ. ಹಾಗಾಗಿ ಅವನ ನಿಷ್ಕ್ರೀಯ ಮೆದುಳಲ್ಲಿ ಗುಜ್ಜರಿ ಅಲೋಚನೆ ತುಂಬಿದ್ದಳು. ಒಂದು ವರೆ ತಿಂಗಳಲ್ಲಿ ದವಳ ದೋಖ್ (ಒಲೆ ಪೂಜೆ) ಕಾರ್ಯಕ್ರಮ ಮುಗಿಸಿ ಐದು ಕಲ್ಲುಗಳನ್ನು ತಂದು ಕೆಮ್ಮಣ್ಣು ಸುಣ್ಣಬಳಿದು ಗುಜ್ಜಾಸತಿಯನ್ನು ಪ್ರತಿಷ್ಠಾಪಿಸಿ ಒಳಂಗ ಹೇಳಲು ಮುತ್ತೈದೆಯರನ್ನು ಕರೆಸಿ ಎರೆಡು ಕೊಬ್ಬರಿ ಗಿಟಕಗಳನ್ನು ತರಿಸಿದಳು. ತಾಂಡದ ಹೆಂಗಸರು, ಗಂಡಸರು, ಮಕ್ಕಳು ತುಂಡು ಕೊಬ್ಬರಿಬೆಲ್ಲದ ಆಸೆಗೆ ಪಂಪಾನಾಯ್ಕನ ಗುಡಿಸಲು ಮುಂದೆ ಸತ್ತದನಕ್ಕೆ ಮುತ್ತಿದ್ದ ರಣ ಹದ್ದುಗಳಂತೆ ನೆರೆದಿದ್ದರು. ಕಣ್ಣಿಗೆ ಕಾಣದಷ್ಟು ಚೂರುಗಳನ್ನು ಮಾಡಿ. ತುಂಡು ಬೆಲ್ಲದ ಜೊತೆಗೆ ಹಂಚಲು ಆರಂಭಿಸಿ ಗುಡ್ಲೀರಿಯ ಮೇಲೆನೆ ಹುಡುಗರು ಬೀಳತೊಡಗಿದರು. "ಏಯ್, ಹಾಳಮನಿವ ಕೊಬ್ಬರಿ ಬೆಲ್ಲ ನೋಡಿಲ್ಲೇನೊ, ಸುಮ್ಮನಾಗ್ರಿ, ಸರಕರ್ರಲೇ ನಿಮ್ಮ ಮನಿ ಹಾಳಾಗ." ಗದರಿಸಿದಳು. ಅವಳ ಮಾತಿಗೆ ಯಾರೊಬ್ಬರೂ ಹೆದರದಂತೆ ಕಾಣಲಿಲ್ಲ. ಬದಲಾಗಿ ಅವಳು ಹಂಚುತ್ತಿದ್ದ ಮರಕ್ಕೆ ಕೈ ಹಾಕಲು ಪ್ರಯತ್ನಿಸಿದರು. "ಆಯ್ಯ ಶಿವನೆ ಲೋ ಹಾಳ ಮನೀವ, ಮಾನ ಮರ್ಯಾದೆ ಇಲ್ಲೇನು ನಿಮಗ. ಅಲ್ಲ ನಾನೇನು ಮಾಡಾಕ ಹತ್ತೀನಿ, ಸರೀರೋ ಅತ್ಲಾಗ." ದಬ್ಬಿ ನಾಕು ಹೆಂಗಸರಿಗೆ ಕೊಟ್ಟು, " ಇನ್ನ ಯಾರಾರ ತಗೊಳ್ರಿಯವ್ವ ಎಂದು ಮರ ಇಟ್ಟು ಹೋದಳು. ಒಂದು ಶ್ಯಾಸ್ತ್ರ ಮುಗಿಯಿತು ಮನೆಯಲ್ಲಿ ಕೂಸನ್ನು ಬಿಟ್ಟು ಕೆಲಸಕ್ಕೆ ಹೋಗುವ ಅನಿವಾರ್ಯತೆ ಗೂಡ್ಲಿಗೆ ಎದುರಾಯಿತು. ಗೂರಜ್ಜಿಗೆ ಸಹಾಯ ಪಡೆದು ಮಗನನ್ನು ಒಪ್ಪಿಸಿ ಕೆಲಸಕ್ಕೆ ಹೋಗುವುದಾಗಿ ನಿರ್ಧರಿಸಿದಳು. ಮುಂಜಾನೆ ಆರಕ್ಕೆ ಬಿಟ್ಟರೆ ಮದ್ಯಾಹ್ನ ಉಣ್ಣೋ ಹೊತ್ತಿಗೆ ಮಾತ್ರ ಅರ್ಧಗಂಟೆ ಹೆಂಗಸರು ಉಂಡು ಏಳುವುದರೊಳಗೆ ಓಡೋಡಿ ಹೋಗಿ ಭಗ್ಯನಾಯ್ಕಗೆ ಹಾಲುಣಿಸಿ ಕೆಲಸಕ್ಕೆ

ಹಿಂತಿರುಗುತ್ತಿದ್ದಳು. ಒಮ್ಮೊಮ್ಮೆ ಗೌಡ್ರು "ಬೇ, ದಿನಾಲೂ ಏನು ಹಚ್ಚಿ ನಿಂದು ಮುಚ್ಚಿಕೊಂಡು ಕೆಲ್ಸ ನೋಡು." ಅಂದಮೇಲೆ ಕತಿ ಮುಗಿದಂಗ. ಮಗುವಿಗೆ ಹಾಲುಣಿಸದ ಎದೆ ಬಿಗಿಯುತ್ತಿತ್ತು. ಆ ವೇದನೆಯನ್ನು ತನ್ನ ಜೊತೆ ಕೆಲಸಗಾತಿ ಯರಾದ ಸೀತ್ಕಿಗೋ, ರಾಮಿಗೋ, "ಏನ್ ಹಾಳಮನಿ ಗೌಡ ಅದಾನಿವ, ಇವ್ನ ಕದ ಕಟ್ಲಿ. ಮನಿ ಒಳಗ ಎಂಟೊಂಬತ್ತು ತಿಂಗಳ ಕೂಸೈತಿ ಅಂದ್ರು ದಯಾತೋರುವಲ್ಲ. ಹಾಲು ಹೆಚ್ಚಾಗಿ ಉಬ್ಬಿದ ಎದೆನಾ ಹುಳ ಕಡಿದವರಂಗ ನೋಡ್ತಾನ." ಅಂದು ಮನಸ್ಸು ಹಗುರ ಮಾಡಿಕೊಳ್ಳುತ್ತಿದ್ದಳು. ಅದಕ್ಕೆ ಹೇಗೆ ಪ್ರತಿಕ್ರಿಯಿಸಬೇಕೆಂದು ಅರಿಯದ ಹೆಣ್ಣುಮಕ್ಕಳು ಅವಳ ಮಾತಿಗೆ ಸಹಮತಿ ವ್ಯಕ್ತಪಡಿಸಿ ಸುಮ್ಮನಾಗುತ್ತಿದ್ದರು. ಯಾರೊಬ್ಬರಿಗೂ ಗೂಡ್ಲಿಯ ತಳಮಳ ಸಂಕಟದ ಅರಿವಾಗದೆ, ಅವಳ ಮನಸ್ಸಿನಲ್ಲಿ ನಡೆಯುತ್ತಿದ್ದ ಮಾನಸಿಕ ಸಂಘರ್ಷ ಅರಿವಾಗುತ್ತಿರಲಿಲ್ಲ. ಗೌಡನದ್ದೇ ಒಂದು ಲೋಕ, ಲೌಕಿಕ ಜಗತ್ತಿನೊಳಗೆ ಸಿಗಬಹುದಾದ ಎಲ್ಲಾ ಸುಖಗಳನ್ನು ಅನುಭವಿಸಿ ಭೂಮಿ ಮೇಲಿಂದ ಮರೆಯಾಗಿ ಬಿಡುವ ಧಾವಂತ ಅವನದು, ಕೆಲವರಿಗೆ ಎರೆಡು ಹೊತ್ತು ಗಂಜಿಗಾಗಿ ಬಡಿದಾಡುವ ಕೂಲಿ ಜೀವಗಳಿಗೆ, "ಲೆ, ಸರೀಗೆ ಕಳೆ ತಗೀರಲೆ, ಬೋಳಿ ಮಕ್ಕಳ, ಸೂಳಿಮಕ್ಕಳ, ನಿಮವ್ವನ್, ಅಚ್ಚೇರು ಪಾವು ಕಾಳೀಗೆ ಆಗೋಹಂಗ ಕೆಲ್ಸ ನೋಡ್ರಿ." ಎಷ್ಟೇ ನಿಯತ್ತಿನಿಂದ ಕೆಲಸ ಮಾಡಿದರು ಮುಗ್ದ ಜನರನ್ನು ಶೋಷಿಸದೆ ಬಿಡುತ್ತಿದ್ದಿಲ್ಲ. ಅವನ ದರ್ಪದ ಮಾತಿಗೆ " ಏಯ್, ಹೋಗಯ್ಯ ಯಾವ ಸೀಮೆ ದಾಸಯ್ಯ, ಜಗತ್ತು ಉದ್ದ ಅಗಲ ಐತೆ, ಅದೇನೊ ಅಂತಾರಲ್ಲ ಈಊರಗೌಡ. ಮುಂದ್ಲೂರಿಗೆ ಕರಕಟ್ಟೊ ಗೂಟ." ಎಂದೇನಾದರು ಅಂದರೆ ಉಪವಾಸದ ಸಾವೇ ಗತಿ. ತಾಂಡದ ಸುತ್ತಲು ಗೌಡರವೇ ಜಮೀನು. ಅವರದು ದೊಡ್ಡ ಹಿಡುವಳಿ. ನೂರಿನ್ನೂರ ರಿಂದ ಸಾವಿರಾರು ಎಕರೆಯ ಭೂಮಾಲಿಕರು. ಸಹಜವಾಗೇ ಜೀತದಾಳುಗಳಿಗೆ ಕಡಿಮೆ ಕೂಲಿ ಕೊಟ್ಟು ಹೆಚ್ಚಿಗೆ ಕೆಲಸ ಮಾಡಿಸುವ ಪ್ರವೃತ್ತಿಯನ್ನು ಇಟ್ಟುಕೊಂಡಿದ್ದರು. ಗೂಡ್ಲಿ ಮತ್ತು ಪಂಪಾನಾಯ್ಕ ಬದುಕಿದ್ದ ಸಮಾಜ ಶ್ರೀಮಂತರುಗಳದ್ದೆ. ಪಂಪಾನಾಯ್ಕನಿಗೇನು ಅಂಥಹ ವ್ಯವಹಾರ ಜ್ಞಾನವಿಲ್ಲ. ಧನ್‌ಸಿಂಗ್ ನಾಯ್ಕ ಗೌಡನಹಟ್ಟಿಯಲ್ಲಿದ್ದಾಗ ಮನೆಯ ಆಗುಹೋಗು ನೋಡುತ್ತಿದ್ದ. ಮತ್ತು ಅವನು ಚೂರುಪಾರು ಜಮೀನು ಹಿಡಿವಳಿದಾರನಾಗಿದ್ದ. ಆದರಿಗ ಕೆಲಸ ಕೃಷಿ ಕೂಲಿಗಳೆ. ಭೂಮಿ ಊಳಬೇಕು, ಬೂಮಿಯಿ ಒಡೆತನ ಹೊಂದಬೇಕು. ತನ್ನ ಮಗ ಭಗ್ಯನಾಯ್ಕ ಎತ್ತುಗಳನ್ನು ಸಾಕುವುದು, ಬಂಡಿ ಹೊಡೆಯುವುದು, ಹೊಲ ಹಸನು ಮಾಡುವದನ್ನು ನೋಡುವ ಕನಸು ಈಗ ಗೂಡ್ಲಿಯದಾಗಿತ್ತು.

ಮುಂಗಾರು ಮಳೆ ಭರ್ಜರಿಯಾಗಿ ಬೀಳಲು ತಾಂಡದ ಕೆರೆ ತುಂಬಿ ಕೋಡಿ ಹರಿಯತೊಡಗಿತು. ತಾಂಡದ ಮಂದಿ ನದಿಯ ಹೊಸ ನೀರಿನ ಪ್ರವಾಹ ಮೇಲೇರಿದ್ದನ್ನು ಕಂಡು ಮೀನು ಹಿಡಿಯಲು ಕೂಳಿ, ಪುಟ್ಟಿ ಹಿಡಿದು ನಾಮುಂದು ತಾಮುಂದು ಎಂದು ನುಗ್ಗಿದರು. ಮಂದಿ ಭಾರಾಟೆಯಿಂದ ಮೀನು ಹಿಡಿಯುವಾಗ ತಾವು ಮೀನು ತಿನ್ನಬೇಕೆಂದ ಆಸೆಯಿಂದ ಹೊತ್ತಾರೆ ಎದ್ದ ಗುಡ್ಲೀರಿ, "ಹೋಗು ಕೋಡಿ ಸರದಾಗ ಮಂದಿ ಮೀನು ಹಿಡಯಾಕ ಹತ್ಯಾರ ನೀನು ಹಿಡಕೊಂಡು ಬಾ." ಎಂದು ಗಂಡನ್ನನ್ನು ಹುರಿದುಂಬಿಸಿದಳು. ಪಂಪಾ ಮೀನು ಹಿಡಯೋದು ಹೇಗೆ, ಗೊತ್ತಾಗದೆ ಒದ್ದಾಡಿದ. ಅಲ್ಲಿ ಯಾರನ್ನಾದರೂ ಕೇಳಿದರೆ ಹೇಳಿಯಾರು ಎಂದು ಹೊರಟ. ಅವನ ಕೂಡ ಸಲುಗೆಯಿಂದ ಮಾತಾಡುತ್ತಿದ್ದ. ಬಿಕ್ಯಾನಾಯ್ಕ, ಸಾಮಿನಾಯ್ಕರನ್ನು ಕೇಳಿದ. "ಆರೆ ಭಾಯ್ ಮೀನು ಹಿಡಿಯಾಕ ನನ್ನ ಹೆಂಡತಿ ಕಳಿಸಿದ್ದಾಳೆ,

ಮೀನು ಹೆಂಗ ಹಿಡಯೋದು ಅಸಲು ಗೊತ್ತಿಲ್ಲ. ರವೋಟು ಕಲಿಸಿ ಕೋಡ್ತೀರಾ." ಅಂಗಲಾಚಿದ. ಬಿಕ್ಕ್ಯಾ ಸಾಮ್ಯಾ ಹಿಡಿದಿದ್ದ ಬಾಳೆ ಮೀನನ್ನು ಬಿಟು ನಗತೊಡಗಿದರು. " ಮೀನು ಹಿಡಯಾಕ ಬಾರದವ ಇವನೆಂಥ ಗಂಡಸು ಅಂತೀನಿ." ಅವನ ಕಡೆ ಕೈಮಾಡಿ ತೋರಿಸ ನಗತೊಡಗಿದರು. ಅವನ ಹಿಂದೆ ಗುಡ್ಲೀರಿ ನಿಂತಿರುವದನ್ನ ನೋಡಲಿಲ್ಲ. ಅವನ ಬಾಯೊಳಗಿನ ಮಾತು ಬಯೊಳಗೆ ಇದ್ದಂಗೆ ಅವನ ಕೊಳ್ಳಪಟ್ಟಿ ಹಿಡಿದು, " ನೀ ಭಾರಿ ಗಂಡಸು ಎಲ್ಲಿ ತೋರಿಸು ಬಾರ್ಲೆ ಸಾಮ್ಯಾ." ಗುಡುಗಿದಳು. "ಯಕ್ಕಾ ತೆಪ್ಪಾತು ಅವ್ವ, ನೀ ಇದ್ದದ್ದು ಗಮನಿಸದೆ ಎನೋ ಮಾತಾಡಿದೆ ಕ್ಷಮಿಸು." ಗೋಗರೆದ. " ಏನು ತೆಪ್ಪಾತು ನಾನೀಗ ಒಂದು ತೆಪ್ಪಮಾಡ್ತೀನಿ ಸುಮುಕಿರ್ತಿಯಾ." ಎಂದು ಅವನ ಚೀಲದಿಂದ ಒಂದು ಕೇಜಿ ಕೆಮ್ಮೀನು ಎತ್ತಿ ಕೊಂಡವಳೆ, " ಬರ್ರಿ , ಅವನು ಮತಾಡ್ಲಿ. ಮೈಯಾಗಿನ ಸೊಕ್ಕು ಇಳುಸ್ತೀನಿ." ಎಂದು ಗಂಡನನ್ನು ಕರೆದುಕೊಂಡು ಹೋದಳು. " ಏಯ್ ಮೂರಾಬಟ್ಟಿ ಸಾಮ್ಯಾ ನಾಯ್ಕ ಬೇಕಿತ್ತ ನಿನಗ. ಹರ್ಕ. ಏನು ಹರ್ಕಂತಿ, ಇದ್ದದ್ದು ಒಂದು ಮೀನು ಅದನ್ನು ಬಾಯ್‌ಮಾಡಿ ಗುಡ್ಲೀರಿ ಹೊಡ್ಕಂಡು ಹೋದ್ಲು, ನೀನು ಆಕೀದ ತೊಂಬ್ಲ ತಿನ್ನು." ಎಂದ. ಅವನೊಂದಿಗೆ ಪಾಲುದಾರನಾಗಿದ್ದ ಬಿಕ್ಕ್ಯಾ" ಹೋಗ್ಲಿ ಬಿಡಲೇ ಮರಾಯ, ಒಂದು ಮೀನಿಗೆ ಯಾಕಿಂಗಾಡಿಯಾ, ಅವನವ್ವನ್ ಲಕ್ಷಾನು ಗಟ್ಟಲೆ ಮೀನು ಇರುವಾಗ, ತಗ ಒಂದೆರೆಡು ಕೆಜಿ. ಗೊಡ್ಲಿ ಮೀನು." ಅಂದವನೆ ಒಂದು ಎರಡು ಕೇಜಿ ಆಗಬಹುದು ಅಂತಹದೊಂದು ಮೀನನ್ನು ಹಿಡಿದು ಮೇಲೆತ್ತಿದ. "ಹೂಂ. ಓಡಿಬಾ ಬಾಳಿ ಮೀನು ಹೊಳಕಿ ಹೊಡೆಯಾಕ ಹತ್ತೈತಿ." ಎಂದು ಬಿಕ್ಕ್ಯಾನ ಕರೆದ ಸಾಮ್ಯಾ. "ಎಲ್ಲಿಎಲ್ಲಿ" ಎಂದು ಬಿಕ್ಕ್ಯಾ ಮುಂದಕ ಓಡಿ ಬಂದು ಎಡಗೈಯಿಂದ ಚಿಲಕ ಹಾಕಿ ದೊಡ್ಡದೊಂದು ಬಾಳೆ ಮೀನು ಅನಾಮತ್ತಾಗಿ ಮೇಲೆತ್ತಿದ. "ಹೂಂ , ಐದು ಕೇಜಿ. ಮನಿಗೆ ಇನ್ನು ಐದ ಕೇಜಿ ಹೆಂಡಕ್ಕಾತು ಬಿಡಲೆ." ಬಿಕ್ಕ್ಯಾ ಅಂದ. "ಆತು ನಾ ಅಲ ಹಿಡೀತೆನಿ, ಮುಚ್ಚಿಕೊಂಡು ಹೊರಗ ಹೋಗಿ ಮೀನು ರಾಶಿ ಮಾಡು." ಅಂದವನೆ ಹಿಡಿದು ಹಿಡಿದು ಬಿಸಾಕಿದ. ಅರ್ಧ ತಾಸಿನೊಳಗೆ ಹತ್ತು ಕೇಜಿ ಮೀನು ದುಂಡಗ ಮಾಡಿಕೊಂಡವನೆ ಬಾಯಿಗೆ ಕೊರೆಬೀಡಿ ಹಚ್ಚಿಕೊಂಡು, "ಹೋತಾರೆ ಯಾರ ಮುಖ ನೋಡಿವಿ." ಸಾಮ್ಯಾ ಯೋಚನೆ ಮಾಡಿ. "ಪಂಪಾ" ಅಂದ. ನೆನಪು ಮಾಡಿಕೊಂಡು ಬಿಕ್ಕ್ಯಾ " ಹೌದಲ್ಲಲೆ, ಆ ಯಪ್ಪನ ದೆಸೆ ಚೆನ್ನಾಗೈತಿ, ದೇವರಂತ ಮನುಷ್ಯ, ನಾ ಹಾಸ್ಯ ಮಾಡ್ಕೊಂತ ಅನುಬಾರದ ಮಾತು ಅಂದಬಿಟ್ಟೆ ಪಾಪ," ಬಿಕ್ಕ್ಯಾ ಮರುಗಿದ.

ಗುಡ್ಲೀರಿ ಆರ್ಭಟದಿಂದ ಬದುಕು ಮಾಡುತ್ತಿದ್ದಳು. ಅದನ್ನು ಗಮನಿಸಿದ ಗೂರಜ್ಜಿ, ಊರಿನ ಸರ್ವತಪ್ಪ ಭಟ್ಟ ಗುಡದಟ್ಟಿ ತಾಂಡದ ಕೆರೆ ಏರಿ ಕೆಳಗಿನ ಎರೆಡು ಎಕರೆ ಗದ್ದೆಯನ್ನು ಗುಡ್ಲೀರಿಗೆ ಕೂರಿಗೆ ಕೊಟ್ಟ. ಗುಡ್ಲೀರಿ ಬೂಮಿಮೇಲೆ ನಿಲ್ಲದಂತಾದಳು. ಮುಗ್ದ ಪಂಪಾ ಏನು ಅರಿಯದವನಂತೆ ಅವಳು ಹೇಳಿದ ಕೆಲಸವನ್ನು ಚಾಚು ತಪ್ಪದೆ ಮಾಡತೊಡಗಿದ. ಈಗ ಅವನಿಗೆ ಹೊಸ ಜವಾಬ್ದಾರಿಗಳು ಒಂದೊಂದಾಗಿ ಬರ ತೊಡಗಿದವು. ಹೊಲ ಉಳಲಿಕ್ಕೆ ಎತ್ತುಗಳು ಬೇಕು ಎನ್ನವ ಯೋಚನೆಯಲ್ಲಿದ್ದ. ಸರ್ವತಪ್ಪ ಬಟ್ಟ ತಮ್ಮ ದನಗಳ ಹಿಂಡಿನಿಂದ ಎರಡು ಹೋರಿಗಳನ್ನು ಗೂಡ್ಲಿ ಬಾಯಿಗೆ ಬಂದು ಹೊಡೆದುಕೊಂಡು ಹೋಗುವಂತೆ ಹೇಳಿದ್ದ. ಗೂಡ್ಲಿ ಗಂಡಿ ಪಂಪಾ ನಾಯಕನ್ನನ್ನು ಕರೆದುಕೊಂಡು ಹೆಜ್ಜೂರಿಗೆ ಹೊರಟೆ ಬಿಟ್ಟಳು. ಸರ್ವತಪ್ಪನ ಬಂಗಲೆ ಮೂಲೆಯಲ್ಲಿ ನಿಂತು. "ಅಪ್ಪಾರ, ಅಪ್ಪಾರ, ನಾನು ಗುಡ್ಲಿರಿ ಲಾಮಾಣಿ ತಾಂಡೆದವಳು,"

ಕೂಗಿದಳು. ಸರ್ವತಪ್ಪನ ಆಳು ಬೇಡರ ಸಿದ್ಲಿಂಗ, "ಯಾರದು ಏನು." ಎಂದು ಹೊರಗೆ ಬಂದ. "ಅಪ್ಪಾರ ನಾನು ಗುಡ್ಲೀರಿಬಾಯಿ, ಅಪ್ಪಾರು ದನದಾಗಿಂದ ಕರುಗಳನ್ನು ಹೊಡ್ಕಂಡ ಹೋಗು ಅಂದಿದ್ರು." ಮಾತು ತುಂಡಾದವು. ಸಿದ್ಲಿಂಗ ಹೊರಗ ಇಣುಕಿ ದಂತದ ಗೊಂಬೆಯಂತಹ ಲಮಾಣ್ಕೇರ ಹೆಂಗಸು ನಿಂತಿರುವುದನ್ನು ಗಮನಿಸಿದವಳೆ ಮನಸ್ಸಿನೊಳಗೆ ನೂರೆಂಟು ಯೋಚನೆಗಳು ಸುಳಿದಾಡಿದವು. "ಹಾಳ್ ಮನಿಯೋನು, ನಮ್ಮಂತ ಬಡವರ ಬದುಕಿನ ಕೂಡ ಚೆಲ್ಲಾಟ ಆಡಿದ್ದು ಸಾಲದ ಲಮಾಣ್ಕೇರಿ ಹುಡುಗಿ ಹಿಂದ ಬಿದ್ದಾನ." ಗಟ್ಟಿಯಾಗಿಯೆ ಅಂದುಕೊಳ್ಳುತ್ತಾ ಏನೋ ಹೇಳಲು ಬಾಯಿ ತೆಗೆದು ಅಷ್ಟೊತ್ತಿಗೆ "ಹೂಂ" ಅಂತ ಸರ್ವತಪ್ಪ ಕಣ್ಣು ಸನ್ನೆ ಮಾಡಿದ. "ಎನ್ ಬೇ ಲಮಾಣಿ, ಎಲ್ಲಿ ನಿನ್ನ ಗಂಡ ಪಂಪಾ ಹಿತ್ತಲ ಕಡೆ ಕಳ್ಸು." ಅಂತೇಳಿ ಕೂಗಿದ. ಪೂಜೆ ಮುಗಿಸ ಜರ್ತಾರಿ ಪಂಜೆಮೇಲ ಹಂಗೆ ಬಂದ ಸರ್ವತಪ್ಪ. ಸರ್ವತಪ್ಪ ಅಂದರೆ ತನ್ನ ಲೀಲೆಗಳಿಗೆ ಹೆಜ್ಜೂರಿಗೆ ಹಾಗೂ ಸುತ್ತ ಊರುಗಳಿಗೆ ಹೆಸರುವಾಸಿಯಾಗಿದ್ದ. ಲಮಾಣ್ಕೇರು ಅಷ್ಟು ಸುಲಭವಾಗಿ ಸಿಗುವುದಿಲ್ಲ ಎಂಬುದು ಗೊತ್ತಿತ್ತು. ಅದರಲ್ಲೂ ಗೂಡ್ಲಿ ಬಾಯಿ ಸವಾಸ ಮಾಡಿದರ ಬೆಂಕಿಕೂಡ ಸರಸ ಮಾಡಿದಂಗೆ ಅಂತೇಳಿ ಬಾಳ ಮಂದಿ ಆಡೋ ಮಾತು ಕೇಳಿದ್ದ. ಆದ್ರೂ ಬಜಾರಿ ಹೆಂಗಸನ್ನ ಹದ್ದುಬಸ್ತಿಗೆ ತರುವ ಪ್ರಯತ್ನ ಮಾಡಿದ್ದ.

ಪಂಪಾನಾಯ್ಕ ಕರುಗಳನ್ನು ಮಕ್ಕಳಂತೆ ಜೊಪಾನ ಮಾಡಿದ. ಆರು ತಿಂಗಳು ಹಸಿರಿಗೆ ಬಿಟ್ಟು ಗೌರಿ ಹುಣ್ಣಿಮೆ ಅಮವಾಸ್ಯೆ ಮುಗಿದು ಬಲಿ ಪಾಡ್ಯದ ಅಮಾಸೆಗೆ ಕರ್ಲಳ್ಳಿ ಕಾಸಿಂಸಾಬಿಗ ಹೋರಿಗಳನ್ನು ಬೀಜ ಕಸಿಮಾಡೋದಕ್ಕೆ ಕಾಸು ಕೊಟಿದ್ದ. ಕಾಸಿಂಸಾಬಿ ಅಮಾವಾಸ್ಯೆ ದಿನ ಮೊಟ್ಟ ಮೊದಲಿಗೆ ಪಂಪಾನಾಯ್ಕ ಹೋರಿಗಳಿಗೆ ಕಸಿ ಮಾಡಲು ಆರಂಭಿಸಿದ. ಮುಂಗಾರಿನಲ್ಲಿ ರಾಗಿ ಜೋಳ, ಕೈಯಲ್ಲಿ ಹಿಡಿದು ಹೋರಿಗಳನ್ನು ಮೇಯಿಸಿದ್ದ ಪಂಪಾನಾಯ್ಕ ಹೋರಿಗಳು ಒಳ್ಳೆಯ ಆನೆಗಳಂತಾಗಿದ್ದವು. ಕಾಸಿಂಸಾಬಿಗೆ ಪಂಪಾನ ಹೋರಿಗಳನ್ನು ಬಗ್ಗಿಸುವುದು ತುಸು ತಾಸ್ರೇ ಅನಿಸಿತು. ಐದಾರು ಮಂದಿ ಬಲಿಪಾಡ್ಯದ ಅಮವಾಸ್ಯೆಗೆ ರಕ್ತದಲ್ಲಿ ಬರೆಳೆದ್ದಲು ಬಂದಿದ್ದ ಥಾಕ್ಯ, ಪೀಕ, ಖೇಮು, ಮಂಗ್ಲ್ಯಾ ಬದ್ಯಾ ಹರೆಯದ ತೊಲೆ ತುಂಡಿನಂತ ಹುಡುಗರು ಮುಗುದಾರ ಹಿಡುದು ಚೆಂಡನ್ನು ತಿರುವಿದರು. ಹೋರಿ ಜಪ್‌ಅನ್ನಲಿಲ್ಲ. "ಆರೆ ಐಸಾ ಅಲ್ಲಾ ಗಪ್ಪಾಗ್ರಿ." ಅಂದವನೆ ಬಂಡಿ ಸೆರಗನ್ನ ತಂದವನೆ ಹೋರಿ ಸೊಂಟಕ್ಕೆ ಬಿಗಿದು ಸೆರಗನ್ನು ಇಬ್ಬರು ಜೋರಾಗಿ ತಳ್ಳಿಬಿಟ್ಟರು. ಗರಡಿ ಮನಿಯೊಳಗ ಕಸರತ್ತು ಮಾಡಿದವರು ಅವರು ಮುಂದೆ ಹೋರಿ ಏನು ಮಹಾ ಅನುಭವ ಆಗಿತ್ತು. ಮುಗುದಾರ ಹಿಡಿದು ಚೆಂಡು ತಿರುಗಿಸಿದವರು ಖಾಸೀಂಸಾಹೇಬರು ಸೆರಗು ಎಳೆದ ಪರಿಣಾಮ ಹೋರಿ ದಡ್ ಅಂತೇಳಿ ನೆಲ್ಲಕ್ಕ ಉರುಳಿತು. ಪಂಪನಾಯ್ಕ ಮನಿಯಿಂದ ತಂದಿದ್ದ ಗೂಡ್ಲಿನೆ ಖುದ್ದಾಗಿ ಮಾಡಿದ್ದ ಅರಳೆಣ್ಣೆಯನ್ನು ಅವಳೆ ಬೀಸಿ ಮಾಡಿದ್ದ ಆರಷಿಣ ಪುಡಿಯನ್ನು ಕಲಸಿ ಕಳುಹಿಸಿದ್ದಳು. ಬಟ್ಟಲನ್ನು ತೆಗೆದುಕೊಂಡವನೆ ಎಡೆಒಡೆಯುವುದಕ್ಕೆ ಪೂರ್ವದಲ್ಲಿ ಬೀಜಕ್ಕೆ ಸವರಿ ಬೀಜವನ್ನು ಗಟ್ಟಿಯಾಗಿ ಹಿಚುಕಿದನು. ನೋವು ತಾಳಲಾರದೆ ಹೋರಿ " ಅಂಬಾ " ಅಂತೇಳಿ ಒದರಿತು. ಪಂಪಗೆ ಸಂಕಟವಾಯಿತು. "ಕಾಸೀಂ ಅಣ್ಣ ಸಲ್ಪ ಹುಲ್ಲು ತರ್ಲೋ ಕರೂಗೆ ತಕಲೀಪ್ ಆಗುತ್ತೆ." ಪಂಪಾನ ಅಳಲನ್ನು ನೋಡಿದ ಕಾಸೀಂ, "ಆರೆ ಪಂಪಾ ಯಾಕ ಗಾಬ್ರಿ ಪಡ್ತಿ ನಿಮ್ಮುದುಕಿ ಬೈಲ್ ಏನೂ ಆಗಾಕಿಲ್ಲ, ಸುಮ್ಮನ ಕೂತ್ಕೋ ದೊಡತಕಲಪ್‌ಗೆ ಆಗುತ್ತೆ. ಏನನ್ಮಾಡಕ ಆಗಲ್ಲ." ಕಾಸೀಂಸಾಬು ಅಷ್ಟೆ ನೇರವಾಗಿ ಹೇಳಿದ. ಪಂಪಾ

ನಾಯ್ಕನಿಗೆ ಅನಿವಾರ್ಯವಾಗಿ ಬಾಯಿ ಮುಚ್ಚಿಡಬೇಕಾಯಿತು. ಎಡೆ ಒಡೆದಮೇಲೆ ಪಂಪನ ಹೆಂಡತಿ ಗುಡ್ಲಿ ಕಳುಹಿಸಿದ್ದ ಔಡಲ ಎಣ್ಣೆ, ನಂಜಾಗಬಾರದಂತ ಐನಾತಿ ಅರಿಷಣವನ್ನು ಒಣಗಿಸಿ, ಕುಟ್ಟಿ ಎಣ್ಣೆಯಲ್ಲಿ ಹಾಕಿ ಕಲಿಸಿದನ್ನ ಸವರಿಸಿದ. "ದೆಕೋಭಾಯಿ ಪಂಪನಾಯ್ಕ, ಒಂದುವಾರದ ಮಟ ಅಪಬಲುತಕಲಿಪ್ ಆಕೃತಿ ಹೋರಿಗಳು ಹುಲ್ಲು ಕೂಡ ಮೇಯಂಗಿಲ್ಲ ಅಂತವೆ. ಅದ್ಕೆ ನೀ ದಿನಾಲು ಕೆರೆಯೊಳಗ ಈಜು ಮಾಡ್ಸು, ಬಾವು ಕಡಿಮೆಯಾಗಿ ಹೋರಿಗಳು ಹಾರಾಡ್ತಾವೆ." ಪಂಪಾನಾಯ್ಕ ಅವನು ಹೇಳಿದ ಎಲ್ಲಕ್ಕೂ ಹೂಂ, ಅಂದು ಕಾಸೀಂ ಸಾಬನಿಗೆ ಒಂದು ದಮ್ಮಡಿ, ಬೇಳೆ, ಬೆಲ್ಲ ಕೊಬ್ಬರಿ ಒಂದು ಗಿದ್ನ ಜೋಳ ಕೊಟ್ಟು ಕರುಗಳನ್ನು ಈಜಾಡ್ಸೋದಕ್ಕೆ ಕರೆಗೆ ಹೊರಟ. ನೋವಿಂದ ನಡೆಯಲಾಗದೆ ಹಿಂಸೆ ಪಡುತ್ತಿದ್ದ ಕರುಗಳು ನೀರಿಗೆ ಇಳಿಯುವುದಕ್ಕೆ ಹಿಂದೆ ಸರಿಯತೊಡಗಿದವು. ಒಂದನ್ನು ಕಳ್ಳಿ ಮರಕ್ಕೆ ಕಟ್ಟಿ ತ್ತೊಂದನ್ನ, " ಏಯ್, ರಾಮ್, ಹೂಂ. ಛೆ,ಛೇ. . . .ಹುಂ" ಮೈಮಟ್ಟಿ ಪ್ರಯತ್ನಿಸಿದ. ಕರುಣೆ ಸಾಕುಬೇಕಾಗಿ ಹೋಗಿತ್ತು ಅಂತ ಕಾಣುತ್ತೆ, ನೀರು ಬೇಡ ಪಂಪಾನಾಯ್ಕನ ಸವಾಸನೂ ಬೇಡ ಅನ್ನೊಹಂಗ ವರ್ತಿಸತೊಡಗಿದವು. ಆದರೆ ಅದನ್ನು ಈಜಾಡಿಸುವುದು ಅನಿವಾರ್ಯವಾಗಿತ್ತು. ಅವನ ಹಿಂಸೆಯನ್ನು ನೊಡಿದ ಸೇಣಬು ನಾಯ್ಕ ಮಗ ಪಿತಾಂಬ್ರಿನಾಯ್ಕ, "ಏನ್ ದೊಡ್ಡಪ್ಪ, ಹೋ ಹುಂ." ಉಗ್ಗುತ್ತಾ ನಿಮಿಷಕ್ಕೊಂದು ಶಬ್ದ ತಗಿಯುತ್ತಿದ್ದ. ಪಂಪನಿಗೆ ಮೊದಲೆ ತಲೆ ರೋಸಿ ಹೋಗಿತ್ತು. " ಹೂಂನಪ್ಪ, ಯಕೋ ನನ್ನ ಮಾತಕೇಳವಲ್ಲವು." ಪಿತಾಂಬ್ರಿ ಕಡೆಗೆ ಹಗ್ಗ ಬಿಸಾಕಿ ಏರಿಮೇಲೆ ಕುಂತ. ಪೀತಾಂಬ್ರಿ ಒಮ್ಮೆ ಹಗ್ಗ ಕೊಡವಿ ಬಾಲ ಮುರಿದು . "ಹೆ." ಅಂದ. ಹೋರಿ ನೀರಾಗ ಟಣ್ ಅಂತ ಜಿಗಿದು ಈಜ ತೊಡಗಿತು. ಪಂಪಾ ನಾಯ್ಕ ಗಾಬರಿಯಾಗಿ ಏರಿಮೇಲೆ ಹುಡುಕಾಡುತ್ತಾನೆ. "ಎಲ್ಲಿ ಹೋತು ನನ್ನ ಎತ್ತು!" ಕೂಗಿದ. ಅಲ್ಲೆ ಮತ್ತೊಬ್ಬ ಯಾರೋ ಎತ್ತುಗಳ ಮೈತೊಳೆತಿದ್ದವನು "ಏಯ್ ನಿನ್ನ ಎತ್ತು ನಿರಾಗ ಈಜಾಡ ಹತ್ತೈತಿ ನೋಡು. ಯಾಕಿಂಗ ಗಾಬರಿಯಾಗಿ ಬಡಕೊತೀಯಾ." ಕೈಮಾಡಿ ತೋರಿಸಿದ. ಪಂಪ ಮತ್ತೊಂದನ್ನು ಬಿಟ್ಟು ಅವನ ಕೈಗೆ ಕೊಟ್ಟ. ಎರಡನ್ನು ಎರಡುಮೂರು ಸುತ್ತ ಈಜಾಡಿಸಿ ನರನಾಡಿಗಳನ್ನು ಸಡಿಲಗೊಳಿಸಿ ತಂದು ಕಟ್ಟಿದ. ಕಾಸಿಂಸಾಬು ಹೇಳಿದ ಹಾಗೆ ಒಂದು ವಾರ ಹುಲ್ಲು ನೀರು ಏನನ್ನು ಮುಟ್ಟಲಿಲ್ಲ. ಕಾಲ ಎಲ್ಲಾ ಗಾಯಗಳನ್ನು ಮಾಯುವಂತೆ ಮಾಡುತ್ತವೆ. ಎಂಬಂತೆ ಹೋರಿಕರಗಳು ಎತ್ತಾದವು. ಗೂಡ್ಲಿಯ ಹಿರಿಮಗ ಭಾಗನಾಯ್ಕ ದನ ಮೇಯಿಸುವಂತಾಗಿದ್ದ. ಆದರೆ ವಿದ್ಯೆಯ ಬಗ್ಗೆ ಅತ್ಯಂತ ನಿಷ್ಕಾಳಜಿಯ ಕಾಲ, ವಾರೊಪ್ಪತ್ತು ಶಾಲೆಗೆ ಹೋಗಿದ್ದ ಭಗನ್ಯಾ ನಾಯ್ಕ ಅಕ್ಷರ ಕಲಿತಿದ್ದ. ಆಗ ಶಿಕ್ಷಣ ಬಾಳ ದುಬಾರಿ ವ್ಯವಹಾರ. ಮನೆಯಲ್ಲಿ ಬಡತನದ ಪರಿಸ್ಥಿತಿ. ಅವನನ್ನು ಓದಲು ಪ್ರೇರೇಪಿಸಲಿಲ್ಲ. ಅಷ್ಟಕ್ಕೆ ಸರಿಯಾಗಿ ತಲೆಯೊಳಗೆ ಇಟ್ಟುಕೊಂಡು ದೊಡ್ಡ ಪಂಡಿತನಂಗೆ ಆಡುತ್ತಿದ್ದ. ತಾಂಡದಲ್ಲಿ ಇದ್ದ ಒಂದಿಬ್ಬರು ಓದಿದವರನ್ನು ಅಡ್ಡ ನಿಲ್ಲಿಸಿ ಸವಾಲು ಮಾಡುತ್ತಿದ್ದ. ಇವನ ಪ್ರಶ್ನೆಗಳಿಗೆ ಉತ್ತರವನ್ನೆ ಕಾಣದ ಅವರು ಭಾಗಗ್ಯನ ಕಂಡರೆ ಓಟು ಕಿಳುತ್ತಿದ್ದರು. ಸೂರಿಲ್ಲದ ಮನೆಯನ್ನು ಎತ್ತಿ ನಿಲ್ಲಿಸುವ ಸಂಪೂರ್ಣ ಜವಾಬ್ದಾರಿ ಭಾಗಗಳು ನಾಯ್ಕನ ಮೇಲಿತ್ತು. ಆದರೆ ಭಗನು ಅದೇ ತಾಂಡದ ಪಾವಡಿ ನಾಯ್ಕನಂಗೇನು ತೀರ ಉದ್ದಟತನದಿಂದ ವರ್ತಿಸುತ್ತಿರಲಿಲ್ಲ. ಚುನಾವಣೆಗಳು ಹಳೆಯದಾಗಿದ್ದವು. ಇತ್ತೀಚಿನ ಚುನಾವಣೆಗಳು ಕೊಲೆ ಸುಲಿಗೆ ದೌಜನ್ಯ, ಕೋಳಿ, ಬಾಟ್ಲಿ ನೋಟಿಂದ ನಡೀತವೆ. ಆವಾಗಿನ್ನು ಅಂತಹ ಕೆಟ್ಟಕಾಲ ಬಂದಿರಲಿಲ್ಲ. ಚುನಾವಣೆಗಳು

ಹೇಳೆಯದಾಗಿದ್ದವು. ತಾಂಡದ ಕೆರೆ ಪೂರ ಒಣಗಿತ್ತು. ಮಂದಿ ಸರಾಯಿ ಕುಡಿಯಾಕ ಪಡಾತು ಬಿಡು ಅಂತ ಖುಷಿ ಪಟ್ಟಿದ್ದರು. ಯಾಕಂದ್ರ ಕೆರೆ ತುಂಬಿದ್ರ ಮೂರುವರೆಕಿಲೊಮೀಟರ್ ಏರಿಯನ್ನು ಸುತ್ತಿ ಬರಬೇಕು. ಒಳಗೆ ಹೋದರೆ ಒಂದೇ ಮೈಲು. ಮಾತಾಡ್ಕೊಂತ ಬಾಯಿ ಒಳಗಿನ ಎಲ್ಲಾ ಮಾತು ಮುಗಿಯುವುದರೊಳಗೆ ಹೋಗಿ ತಲುಪುತ್ತಿದ್ದರು. ಪರಿಸ್ಥಿತಿ ಹೀಗಿರುವಾಗ ಮಂದಿಗೆ ಸುತ್ತಿ ಬರ್ರೆ ಅಂದ್ರ ತಲಿ ಸುತ್ತು ಬರುತ್ತಿತ್ತು. ಪಾವಾಡಿ ಬಲು ಮೋಜಿನ ಮನುಷ್ಯ. ಒಂದು ಕಾಕೆವು ಇರ್ಲಿ, ಹಬ್ಬ ಇರ್ಲಿ ಯಾವತ್ತು ಕುಡಿಯೋದಕ್ಕೆ ರಜೆ ಹಾಕಿದ್ದಿಲ್ಲ. ಮುನ್ನೂರು ಅವರತ್ನಾಕು ದಿನಾನು ತೇಲಾಡುತ್ತಿದ್ದ. ಸಾಲದಕ್ಕೆ ಸುತ್ತ ಐದುಹಳ್ಳಿಗೂ ನಡುವೆ ಗುಡದಟ್ಟ ಕೇಂದ್ರ ಶ್ಥಳವಾಗಿದ್ದಕ್ಕೆ ಸುತ್ತಲಿನ, ಸಂಗಾಲಾಪುರ ಬೋವಿಹಳ್ಳಿ ಸರಳನಹಳ್ಳಿ ಭೇಟಿ ತಾಂಡ. ಇವುಗಳಿಗೆ ಕೇಂಧ್ರ ಸ್ಥಳವೇ ಗುಡದ ಹಟ್ಟಿ. ಹೊತ್ತಾರೆ ಎದ್ದು ವಾರದ ಹಿಂದ ಕಾಸಿದ್ದ ಬಟ್ಟಿ ಸರಾಯಿ ಎರಿಸಿಕೊಂಡ ಓಟಹಾಕೋದಕ್ಕೆ ಬಂದಿದ್ದ. ಡಬ್ಬಿ ಯಾವ ಕಡೆ ಇಟ್ಟಾರೆ, ಮುಂದಿಯಾವ ಕಡೀಗ ಕುಂತಾರ ಗೊತ್ತಾಗದೆ ಹೊಳ್ಳಾಡಿದ. ಯಾರೋ ಪುಣ್ಯಾತ್ಮನ ಕರಕ್ಕೊಂಡು ಹೋಗಿ ಓಟು ಹಾಕಿಸಿ ತಂದು ಬಿಟ್ಟ, ನಿಶಕ್ತ ವಾಗಿದ್ದ ಪಾವಾಡಿ, "ಲೇ ಯಾವನಲೆ ನನ್ನ ಮುಟ್ಟಿದ ಏನು ನಿನ್ನ.. . ." ಔಡುಗಚ್ಚಿ ಕಲ್ಲೆತ್ತಿ ಕೊಂಡವನೆ ಎಸೆಯಾಕ ಹೋದವನು ಮಕಾಡೆ ಬಿದ್ದಿದ್ದ. ಅವನು ಬಿದ್ದ ಹೊಡೆತಕ್ಕೆ ಮಂದಿ ಅಂವ ಸತ್ತೆಹೋದ ಅಂದುಕೊಂಡ್ರು. ಬಿಸಲಾಗ ಸ್ವಲ್ಪ ಹೊರಳಾಡಿದರೆ ನಿಶೆ ಸ್ವಲ್ಪ ಕಮ್ಮಿಯಾಗಿ ಪುಸುಕ್ಕಂತ ಎದ್ದು ಟವೇಲಿಂದ ಮೈ ಒರಸುತ್ತಾ ಮನಿ ಕಡೆಗೆ ಓಡಿದ. ಅವನ ಹೆಂಡತಿ ನಾಗಿ.

"ಲೋ ನಿನ್ನ ಮನಿಕಾಯ, ನಾಕ ಕಾಸು ಮಾಡಾನು ಅಂತ ಇಟ್ಟಿದ ಇಡಿ ಕುಂಬ ಸರಾಯಿಗೆ ಸುರ್ಕೊಂಡು ಹೋಣಿಯಲ್ಲ ನಿನಗ ಮಾನ ಮರ್ಯಾದೆ ಐತ್ಯ. ನಿನ್ನ ಮಕಾಡತ್ತ, ನಿನ್ನ ಮರಿ ಕೆತ್ತಾ, ಹೋದ ದಾರಿ ತಿರುಗಿ ಬಂರ್ದ್ದಂಗವಲ್ಲವಲ್ಲ." ಮುಂಜಾನೆ ನಸುಕಿನ ಮುಲ್ಲಾ ಕೂಗಿದಂತೆ ಒಂದೇ ಸಮನೆ ಬಿಟ್ಟು ಬಿಡದಂಗೆ ಹಚ್ಚಿದ್ಲು. ಇನ್ನ ಇಲ್ಲೇ ಇದ್ದರೆ ಜಟಾಪಟಿ ಸುರುವಾದೀತು ಅಂತೇಳಿ ಬಂಡಿ ನೊಗ, ಪಟಗಣಿ, ಗಾಲಿಕೀಲಗನ್ನು ಹುಡುಕಿದವನೆ ಚಕ್ಕಡಿ ಹಕ್ಕೊಂಡು ಬಡ್ಡಿ ಸುಲಿಸಲಿಕ್ಕೆ ಹೋಗೋದಕ್ಕೆ ಸಜ್ಜು ಮಾಡಿದನು. ಪಾವುಡಿ ಚೆಕ್ಕಡಿಗಾಡಿ ಕೆರೆಯಂಗಳಕ್ಕೆ ಹೊಡಕೊಂಡು ಬರೋದಕ್ಕು ನರಸಾಪುರ ತಹಸೀಲ್‌ದಾರ ಸಾಹೇಬ ಶಿಂಗಾರಾವ್ ಅವರ ಜೀಪು ಬೇಡಿತಾಂಡದ ಕಡೆಯಿಂದ ಒಣಗಿದ ಕರೆಯೊಳಗೆ ನುಗ್ಗೋದಕ್ಕೂ ಸರಿ ಹೋಯಿತು. ಸಣ್ಣ ಡಿಬರಿ ದಾಟಿ ದೊಡ್ಡ ಡಿಬರಿ ಹತ್ತಿದ ಚೆಕ್ಕಡಿ ಜೀಪು ಮುಖಾಮುಖಿಯಾದವು. ಮುಕಳಾರೆ ಕುಡಿದಿದ್ದ ಪಾವಾಡಿ ತಾನು ಚಕ್ಕಡಿಯನ್ನು ದಾರಿ ಬಿಟ್ಟು ಹೊಡಿಬಾರದಂತ, ಜೀಪು ಡ್ರೈವರ ಹಾರನ್ ಹೊಡದೆ ಹೊಡೆದ ಪವಾಡಿ ಕ್ಯಾರೆ ಅನಲಿಲ್ಲ. ಜೀಪ್ ಚಾಲಕನಿಗೆ ದಾರಿಬಿಟು ಆಚೆ ಹೋದರೆ ಕೆರೆಯೊಳಗೆ ಗಾಲಿ ಸಿಕ್ಕಿಹಾಕ್ಕೊಂಡ್ರೆ ಅನ್ನೊ ಭಯ. ಚೆಕ್ಕಡಿಯವನಿಗೆ ಮುಂದ ತುಂಡುಗಳಾದಾವು ಗಾಡಿ ಉಲ್ಟಾ ಆದೀತು ಅನ್ನುವ ಹೆದರಿಕೆ. ಇವರಿಬ್ಬರಲ್ಲಿ ಸೋಲುವ ಲಕ್ಷಣಗಳು ಕಾಣಲಿಲ್ಲ. ಶಿಂಗಾರಾವ್ ಕೆಳಗಿಳಿದು ಬಂದರು ಹಿಂದೆಯ ಸಿರಸ್ತೇದಾರ ಸೋಮಪ್ಪ, ತಲಾಟಿ ನಿಂಗಾನಾಯ್ಕು, ರೆವಮಾರ ಇನಸ್ಪೆಕ್ಟರ್ ಕಾಳಪ್ಪ ಓಡಿ ಬಂದರು.

"ಏಯ್, ಏನೋ ನಿನ್ನ ಹೆಸರು? ತಹಸೀಲ್‌ದಾರರು ಗಡುಸಾಗಿ ಕೇಳಿದರು.

"ಪಾವಾಡಿ ನಾಯ್ಕ" ಕುಡಿದ ಮತ್ತಿನಲ್ಲಿ ಮೇಲ್ಗಣ್ಣು ಮಾಡಿ ಅಷ್ಟೇ ಗಡುಸಾಗಿ ಉತ್ತರಿಸಿದ.

"ಏನು, ಎಸ್ ಪಾವಾಡಿನಾಯ್ಕ." ಎಂದು ತಹಸೀಲ್‌ದಾರರು ಪುನರ್ ಉಚ್ಚರಿಸಿ,

"ಎಸ್, ಅಂದ್ರೇನು." ಎಂದರು.

"ಎಸ್ ಅಂದ್ರೆ ಎಸ್." ಏಕವಚನದಲ್ಲೆ ಉತ್ತರಿಸಿದ.

ಮುಂದುವರೆದ ತಹಸೀಲ್ದಾರರು ತಮಾಷೆಗೆ,

"ಎನ್. ಆಂದ್ರೆ."

"ಎನ್ ಅಂದ್ರೆ ನೊ,"

ತನ್ನಲ್ಲಿ ಸಿದ್ದಪಡಿಸಿಕೊಂಡಿದ್ದನ್ನು ಉತ್ತರಿಸಿದ. . ಅರ್ಥ ತಿಳೀತು ಎಸ್ ಅಂದ್ರೆ ಎಸ್. ಎನ್ ಅಂದೆ ನೊ. ಮತ್ತೆ ಮುಂದುವರೆದ ತಹಸೀಲ್‌ದಾರರು,

" ಹೌಡು ಈ ಮರದ ತುಂಡುಗಳನ್ನು ಎಲ್ಲಿ ಸಾಗಿಸುತ್ತಿದ್ದಯಾ, ಯಾರಮರಗಳು.? "

" ಕಾನೂನಿನ ಪ್ರಕಾರ ನನ್ನ ಹೊಲದ ಮರಗಳು, ನಾನೆ ಕಡಿದವು. ವ್ಯವಸಾಯಕ್ಕೆ ಬೇಕಾದ ಮುಟ್ಟುಮಯ್ಯಿ ಮಡಿಸಲು ಹೊರಟಿದ್ದೇನೆ. ಬೇಕಾದ್ರೆ ಕೇಸ್ ಹಾಕು."

ತಹಸೀಲ್‌ದಾರರು ಬಾಯಿ ಮುಚ್ಚಿಕೊಂಡು ಸುಮ್ಮನಾದರು. ಸಿರಸ್ತೆದಾರ ಸೋಮಪ್ಪನಿಗೆ ಸಿಟ್ಟು ಬಂತು.

"ಏಯ್ ನಾಯ್ಕ ಕಾನೂನು ನಿನ್ನೊಬ್ಬನಿಗೆ ಗೊತ್ತೇನು, ನಡಿ ಸ್ಟೇಷನ್‌ಗೆ."

ಎಂದು ಜೋರು ಮಾಡಿದ.

"ಕಾನೂನು ಗೊತ್ತಿದ್ರು ಸ್ಟೇಷನ್‌ಗೆ ಕರಿತಿದ್ದೀರಿ, ಹೋಗಿ ಕಾನುನು ತಿಳಕಂಡು ಬರ್ರಿ, ಅಮ್ಯಾಲೆ ಮಾತಾಡ್ರಿ."

ಅವರ ಬಾಯಿನ್ನು ಮುಚ್ಚಿಸಿದ. ಇದೊಳ್ಳೆ ಕುಡಕನ ಸವಾಸ ಆಯಿತಲ್ಲ ಎಂದು ತಾಹಸೀಲ್ದಾರರು ಜೀಪ್ ಚಾಲಕ ಹುಸೇನಿಗೆ,

"ರಿವರ್ಸ ಗೇರ್ ಹಾಕಿ ಚೆಕ್ಕಡಿ ಪಕ್ಕದಿಂದ ಓಡ್ಸೋ." ಅಂದ್ರು ಅದರಂತೆ ಜೀಪು ಓಡಿತು.

ಈ ತಮಾಷೆಯನ್ನು ನೋಡುತ್ತಾ ನಿಂತಿದ್ದ ತಾಂಡದ ಹುಡುಗರು ಒಮ್ಮಲೆ ಜೋರಾಗಿ ಕೇಕೆ ಹಾಕಿದರು. ತಹಸೀಲ್ದಾರರಿಗೆ ಮುಜುಗರ ಆಯಿತು. ಕೆಟ್ಟ ಲಮಾಣ್ಯಾರ ಸವಾಸ ಯಾಕಬೇಕು ಅದ್ರಾಗ ಈ ಮುತಾಳ ಕುಡಿದಾನ ಎಂದು ಮನದಲ್ಲೆ ಅಂದುಕೊಂಡು ಸುಮ್ಮನೆ ಪ್ರಯಾಣಿಸಿದರು. ಪಾವಾಡಿ ನಾಯ್ಕ ತಾನು ಕುಡಿದು ತಹಸೀಲ್ದಾರರನೊಂದಿಗೆ ವಾದಿಸಿದ್ದು ಸಾರ್ಥಕ ಎಂದು ಕೊಂಡ. ತಾನೇ ಶ್ರೇಷ್ಠ ಎಂದು ಬೀಗಿದ. ಅವತ್ತಿನಿಂದ ಪಾವಾಡಿನಾಯ್ಕನನ್ನು ತಡವವರು ನೂರು ಬಾರಿ ಯೋಚಿಸತೊಡಗಿದರು. "ಆ ಸೂಳಿಮಗ ತಹಸೀಲ್ದಾರರನ್ನು ಬಿಟ್ಟಿಲ್ಲ, ಇನ್ನ ನಮ್ಮನ್ನ ಬಿಟ್ಟಾನ.!?" ಅಂತೇಳಿ ತಮ್ಮೊಳಗೆ ಮಾತಾಡಿಕೊಳ್ಳ ತೊಡಗಿದರು. ಕುಡುದಾಗ ಪಾವಾಡಿ ನಾಯ್ಕನ ಬಾಯಲ್ಲಿ ಇಂಗ್ಲೀಷ್ ಮಾತು ನಿಶೆ ತುಂಬಿ ಹೊರಬರುತ್ತವೆ.

ಗುಡದ ಹಟ್ಟಿ ತಾಂಡದೊಳಗೆ ಜೋರಾಗಿಯೇ ಕೇಳತೊಡಗಿತು. ಪಾವಾಡಿಗೂ ಗೂಡ್ಲಿಗೂ ಅದೇನು ಜಟಾಪಟಿ ಸುರುವಾಗಿತ್ತೊ. ಪಾವಾಡಿಗೆ ಇನ್ನೂ ನಿಶೆ ತನ್ನ ಪರಮಾವಧಿ ತಲುಪಿರಲಿಲ್ಲ. ಒಂದೆರೆಡುಮೂರ ಮಡಿಕೆ ಕಳ್ಳ ಬಟ್ಟಿ ಸರಾಯಿಯನ್ನು ಮಾತ್ರ ಕುಡಿದಿದ್ದ. "ಏಯ್, ನೀ ಯಾರವ್ವ, ಯಕಚಿತ್ ಪುಟ್ಟಿ ಹೊತ್ಕೊಂಡ ಬಂದೋಳು. ಈ ತಾಂಡ ಕಟ್ಟಿದ ನಮಗೆ ಎದುರಾಡ್ತಿಯಾ, ಎಷ್ಟು ಪೊಗರು ಇರಬೇಕು ನಿನಗ." ಅಸ್ತಿತ್ವದ ಬುಡಕ್ಕೆ ಕೈ ಹಾಕಿದ. "ಯಾಕ್ಲಾ ಭಾಡುಕಾ ನನ್ನ ತಡವಿಕೊಳ್ತಿ, ಯವಾಲ್ಲ ತಾಂಡ ಕಟ್ಟಿದೋನು, ಎಲ್ಲ ಬೇವರ್ಸಿಗಳು ಗುಳೆ ಬಂದವರೆ, ಯಾ ನನ್ನ ಮಗ ಇಲ್ಲೇ ಶ್ಯಾಶ್ವತ ಇದಾನ ತೋರ್ಸಲೆ, ಅದೇನು ಟಸ್‌ಪುಸ್ ನಂತಾವ ನಡೆಯಾಕಿಲ್ಲ. ಎಲ್ಲ್ಯಾರ ಬ್ಯಾರೆ ಕಡೆ ನಡಸು." ಎಂದು ಗುಡುಗಿದಳು. ಪವಾಡಿ ನಾಯ್ಕನ ದೆವ್ವ ಬಿಟ್ಟು ಹೋತು. ಆದ್ರೂ ಗಂಡ್ಸು ಸೋಲಬಾರದು ಅಂತ ನಾದ ಮಾಡಿದ. "ಹೋಗ, ನಿನ್ನ ಬಾಯಾಗ ನನ್ ತೊವ್ಲ್ಲ ಹಾಕ, ಒಂದು ವಾತ ಹಚ್ಚಾಡಿ ಅಂದ್ರ ನಿನ್ನ ವಾನನ ಕಾಸಿಗೆ ಪಂಚೇರ್ರ ಮಾಡೀತಿನೋಡ್." ಅಂತಂದು ಯಾವಾಗ ಬರಸಿಡಿಲಿನಂಗೆ ಎಗರಿದಳೋ, ಪವಾಡಿ ನಾಯ್ಕ ಹೆದರಿ ಬಾಲು ಮುದುರಿಕೊಂಡು ನಾಯಿಹಂಗ ಪಕ್ಕ ಸರಿದಿದ್ದ. ಅವಾಗಿನಿಂದ ಅವನ ದಿಮಾಕು ಕಡಿಮೆಯಾಗಿತ್ತು.

ಗೂಡ್ಲಿಬಾಯಿ, ಬಾಯಿ ಜೋರು, ಬೆಣ್ಣೆಯಂತ ಮನಸ್ಸಿನವಳು ಅವಳ ಕುಟುಂಬದ ಕುರಿತು ತಾಂಡದ ಮಂದಿ ಏನು ಆಲೋಚನೆ ಮಾಡುತ್ತಿದ್ದರು ಎನ್ನುವುದು ಸ್ಪಷ್ಟವಾಗಿತ್ತು. ಯಾರು, ಪುಟ್ಟಿ ಹೊತ್ಕೊಂದು ಬಂದವಳಾ ಅಂತ ಕರಿತಿದ್ದರು." ಆ, ಅವರ ಪಾದದಡಿಗ ಸಾಯೋಹಂಗ ಮಾಡಲಿಲ್ಲ. ನಮ್ಮಪ್ಪ ಆಮ್‌ಗೊತ್ ಬದ್ಯಾಗ ಹುಟ್ಟಿದವಳಲ್ಲ." ಸೆಡ್ಡು ಹೊಡೆದು ಪಂಪಾನಂತಹ ಮುಗ್ದನ ಜೊತೆಗೆ ಏಗ ತೊಡಗಿದ್ದಳು. ತನ್ನ ಮಗ ಭಗನಾಯ್ಕನ ಬಾಲ್ಯವನ್ನು ತಾಂಡದ ಪಡ್ಡೆ ಹುಡುಗರಂಗೆ ಗೊಲಿ ಆಡದೆ, ಆಮ್‌ಗೋತ್ ಆಡದೆ, ಅಂಡೋಲ್ ಪಂಡೋಲ್ ಆಡದೆ ಅನ್ನೋ ಉಸಾಬರಿಗೆ ಬಿಟ್ಟವಳಲ್ಲ. ತಾಂಡೆದ ಹುಡುಗರು ಗುಡಿ, ಹನುಮಪ್ಪನ ತೇರಗಡ್ಡಿ, ಸಾಲಿ ಸ್ಕೂಲ್ ಮೈದಾನ ಊಹುಂ ಎಲ್ಲೂ ಇಲ್ಲ. ಅವನಾಯ್ತು ಅವನ ಮನೆಯಾಯಿತು. ಚಿಕ್ಕವನಿರುವಾಗಲೆ ಗೂಡ್ಲಿಯ ಸಾಲಿಯಲ್ಲಿ ಪಳಗತೊಡಗಿದ. ಅವನ ಅಪ್ಪನ ಹಿಂದೆ ಗದ್ದೆಗೆ ಹೋಗಬೇಕು. ಆ ಪುಟ್ಟ ವಯಸ್ಸಿನಲ್ಲೆ ಅವರಪ್ಪನ ಕೂಡ ಎತ್ತಿನ ಹಗ್ಗ ಹಿಡಿದು ಮೇರೆ ಗುಂಟ ಎತ್ತು ಮೇಯಿಸುವುದು. ಅವನಪ್ಪ ಕುಂತು ಬೀಡಿ ಸೇದುವಾಗ ಅವನೆ ರಂಟಿಮೇಳಿ ನಿಲುಕದಾದರು ಹಿಡಿದು ಸಾಲುಗುಂಟಿ " ಏಯ್, ನಂದಿ ಕುರವತಿ ಹೂಂ." ಅಂತ ಎತ್ತುಗಳನ್ನು ಗದರಿಸುವ ಪರಿ ಎಲ್ಲಾ ಒಳ್ಳೆಯ ಕಮತಮಾಡುವ ಲಕ್ಷಣಗಳು ಕಾಣತೊಡಿದ್ದವು.

ಭಗನು ನಾಯ್ಕ ಎಂಟೊಂಬತ್ತು ವರ್ಷದವಾಗುತ್ತಿದ್ದಂತೆ ತಾಂಡ ಮಂದಿ ಹೇಗೆ ಚಕ್ಕಡಿ ಬಂಡಿಯನ್ನು ಹರದೂನಿಂದ ದ್ಯಾವನೂರು ಪಟ್ಟಣಕ್ಕೆ ಶೇಂಗಾ ಚೀಲಗಳನ್ನು ಬಾಡಿಗೆಗೆ ಹೊಡೆಯುತ್ತಿದ್ದರೊ ಕೇಳಿ ತಾನೂ ಹೋಗಬೇಕೆಂದು ಗೂಡ್ಲಿಯನ್ನು ಕೇಳಿದ. "ಆಯ್ಯೊ ನಮ್ಮಪ್ಪ ನೀ ಇನ್ನು ಬಾಳ ಸಣ್ಣವನು ತಂದೆ, ರಾತ್ರಿ ಕತ್ತಲು, ಕಾಲ ಪಾಡಿಲ್ಲಪ್ಪ, ಒಂದು ವಯಸ್ಸಿಗೆ ಬಂದಮೇಲೆ ಮಾಡೋವಂತಿ." ಅವನ ಕನಸಿಗೆ ಪುಷ್ಟಿ ನೀಡುತ್ತಿದ್ದಳು. ಒಂದೊಂದು ದಿನ ಒಂದೊಂದು ಅನುಭವ ಪಡೆಯುತ್ತಿದ್ದ. ಭಗನ್ಯಾ ನಾಯ್ಕ ತಾನೆ ಎತ್ತುಗಳನ್ನು ಮೇಯಿಸುವ,

ರಂಟೆ, ಕುಂಟಿ, ಕೂರಗಿ ಹಿಡಿಯವ ಕಲೆಯನ್ನು ಕರಗತಿ ಮಾಡಿಕೊಂಡ. "ಅಲ್ಲಪ್ಪ ಆ ಪಂಪಾ ಮಗ ಚೋಟುದ್ದ ಅದಾನ ಸೂಳೀಮಗ, ಅದೇನ ಬೆರಕಿ ಅದಾನಂತಿ, ಏಯ್, ಅಂವ ಹೊಲಹೊಡಿಯೋದನ್ನ ನಿಂತ ನೋಡಬೇಕಲೆ, ಸೂರ್ಯಾನಾಯ್ಕ, ಅಬ್ಬಬಾ ಒಂದೀಟು ಕಡದಾರ ಅದೀತ, ಬಳದಾರ ಕಟ್ಟ್ಯಾನ, ಹಂಗ ನೀಟಾಗಿ ನೆಲ ಸೀಳಿಕೊಂಡು ಬರ್‍ತೈತಲೆ ರಂಟಿ." ಕುತೂಹಲ ತಡಿಯಾಕ ಆಗದೆ ಬ್ಯಾಡರ್ ಕೆಂಪೀರಜ್ಜ ಸೂರ್ಯನಾಯ್ಕನ ಮುಂದೆ ವರದಿ ಒಪ್ಪಿಸಿದ. ಸೂರ್ಯ ನಾಯ್ಕಗೆ ತಡಿಯಾಕ ಅಗಲಿಲ್ಲ. "ಈ ಚೋದಿ ಮಗ ಮಂದಿಮಕ್ಕಳನ್ನು ಹೊಗಳತಾನಲ್ಲ, ತನ್ನ ಮಕ್ಕಳ ಬಗ್ಗೆ ಏನು ಮಾತಾಡವಲ್ಲ. ಅದು ಅಲ್ಲದೆ ಒಬ್ಬ ಪುಟ್ಟಿ ಹೊತ್ಕೊಂಡು ಬಡಿಬಂದವರು. ಇತಿತ್ಲಾಗ ಗುಡದಟ್ಟಿ ತಾಂಡ ಸೇರಿದವರ ಬಗ್ಗೆ ಮಾತಾಡ್ತಾನ. ನಮ್ಮ ಮಕ್ಕಳು ಏನಾಗ್ಯಾತಿ ಒಬ್ಬನೆ ಆಲೋಚನೆ ಮಾಡಿದ.

ಗುಡೆದ ಹಟ್ಟಿ ಲಮಾಣ್ಕೇರ ಕೂಡ, ಉಪ್ಪಾರ ಚೆನ್ನಬಸಪ್ಪ, ಸಾಬರ ದಿನ್ನುಸಾಬಿ. ಕಾಯಕದ ಪಕ್ಕಿರೇಶಿ. ಬಾರಿಕರ ಎಂಕಪ್ಪ ಅದ್ಯಾವಾಗ ಬಂದು ಸೇರಿದ್ರೊ. ಪೂರ್ವಕ್ಕೆ ಐದಾರು ಉಪ್ಪಾರ ಮನಿ ಇದ್ದವು. ಲಿಂಗಾಯಿತರು ಅನ್ನುಕೊಂಡಿದ್ದ ಚಾಕಪ್ಪ ಮಾಸ್ತರ ಇದ್ರು. ಸಾಲದಕ್ಕೆ ಅಗಸರ ಶಿವುಗ. ಕಾಳೇರ ಈರ ತಾಂಡದೊಳಗೆ ವಾಸವಾಗಿದ್ದರಿಂದ. ಗುಡದ ಹಟ್ಟಿ ಸುತ್ತಲ ಸಣ್ಣಟ್ಟಿ, ಅಣೀಮೇಗಲ ತಾಂಡ ಚಾಕಲಬಿ ತಾಂಡಗಳಿಗಿಂತ ಭಿನ್ನವಾಗಿತ್ತು. ಇಡೀತಾಂಡ ಎಲ್ಲಾ ಮಂದಿ ಗೋರ್‍ಬೋಲಿ ಜೊತೆಗೆ ಕನ್ನಡ ಮಂದಿಕೂಡ ಕನ್ನಡ, ಮುಸ್ಲುಮಾನರ ಕೂಡ ಉರ್ದು ಮಾತಾಡಕೊಂಡು ಅನ್ಯೊನ್ಯವಾಗಿಯಿ ಇದ್ದರು. ಆ ಕುಲದಾಗ ಇಡೀ ತಾಂಡದೊಳಗ ಹಂಚಿನಮನಿ ಇದಿದ್ದು ಉಪ್ಪಾರ ಹುಲವಪ್ಪಂದು ಮಾತ್ರವೆ. ಅವನೆ ತಾಂಡಾದಾಗ ದೊಡ್ಡ ಕುಳ. ಇಡೀ ತಾಂಡದ ಲಮಾಣ್ಕೇರ ಮಂದಿ ದಿನ ಬೆಳಕು ಹರೀತಿದ್ದಂತೆ ಅವನ ಮನಿಮುಂದ ಒಂದಲ್ಲ ಒಂದು ಕೆಲಸಕ್ಕೆ ಹೋಗಿ ನಿಲ್ಲುತ್ತಿದ್ದರು. ಅಚೇರು ಅರಪಾವು ರಾಗಿನೋ, ಇಲ್ಲ ಸೀಮಿ ಕೆಂಪಜೋಳ ಕೊಟ್ರ ಇವರ ಒಲಿ ಉರಿತ್ತಿದ್ದವು. ಯಾಕಂದ್ರ ಲಮಾಣ್ಕೇರ ಮಂದಿ ಬದುಕಿಗೆ ಒಂದು ಶಿಸ್ತು ಅನ್ನೋದು ಇರಲಿಲ್ಲ. ವ್ಯಾಪಾರ ವ್ಯವಹಾರ ಮಾಡಿಕೊಂಡು ಲದೇಣಿಯಾ ಹೇರಿಕೊಂಡು ಊರಿಂದೂರಿಗೆ ಅಡ್ಡಾಡಿ, ಸಯ್ಯಾಯಿ, ಮಾಂಸತಿನ್ನೊದರಲ್ಲೆ ಜೀವನ ಸವೆಸಿದವರು. ಈಗ ಇದ್ದಕ್ಕಿದಂತೆ ಮೈ ಬಗ್ಗಿಸಿ ಕೂಲಿನಾಲಿ ಮಾಡೋದಂದ್ರ ಜಡ ಆಗಿತ್ತು. ಹೆಂಗಸರೇನೋ ಕೂಲಿ ಮಾಡಿ ತಂದಿದ್ದನ್ನು ಕುಡಿಯಾಕ, ಇನ್ಯಾವದರ ಚಟಕ್ ಕೊಡಬೇಕಂದ್ರ ಎಲ್ಲಿಂದ ಸಾಧ್ಯವಾದೀತು. ಪನಾಡ ಪಕ್ಷಿಯಾಗಿ ಹಾರ್‍ಕೊಂಡು ಬಂದವರು ತಾಂಡಕಟ್ಟಿ ನೆಲಯೂರ ತೊಡಗಿದ್ದರು. ಭರಮಾನ ಹಟ್ಟಿಯಿಂದ ಪಶ್ಚಿಮಕ್ಕೆ ದುಂಬೂರು ಮೂರು ಕಿಮೀಟರ್. ಪೂರ್ವಕ್ಕೆ ದಿಬ್ಬೇನ ಹಳ್ಳಿ. ಉತ್ತರಕ್ಕೆ ತೇಗೂರು, ದಕ್ಷಿಣಕ್ಕೆ ನಾರದಪುರ, ದ್ಯಾವನೂರು ಲಮತ್ರ ದೊಡ್ಡ ಪಟ್ಟಣವಾಗಿತ್ತು. ದೊಡ್ಡ ಮಾರುಕಟ್ಟೆ , ನೂರೆಂಟು ಮಿಲ್ಲುಗಳು ಮಂದಿ ಗಿಜಿಗುಡತ್ತಿದ್ದರು. ದ್ಯಾವನೂರು ಮಂಡಿ ಪೇಟೆ, ದುರ್ಗವನ ಗುಡಿ, ಮಂಡಕ್ಕಿ ಬಟ್ಟಿ, ಹೊಂದ ಸರ್ಕಲು, ಆಕಡಿ ಹೋದರೆ ದೊಡ್ಡ ಮನುಷ್ಯರ ಆಸ್ಪತ್ರಿ, ಅಣಿಗೊಂದು ಮಂಡಕ್ಕಿ ದಮಡಿಗೆಲ್ಲು ಮರ್ಚಿ. ಮುಂಜಾನೆ ಹೊತ್ತಿಗೆ ಒಂದು ಒಗ್ಗರಣಿ ಎರೆಡು ಮಿರ್ಚಿ ತಿಂದು ಬಿಟ್ಟರೆ ಮದ್ಯಾನ ಬಿಕೆ ಮಿಲ್ಲಿನ ಬೋಂಗಾ ಕೂಗೋ ಮಟಾನು ಹೊಟ್ಟಿ ಹಸಿವು ಆಗ್ತರಲಿಲ್ಲ.

ಗುಡದ ಹಟ್ಟಿ ಮಂದಿ ಮಾತ್ರ ರವಿವಾರದ ಸಂತಿಗೆ ಹೋಗಿ ತರಕಾರಿ, ಎಲಿ ಅಡಕಿ ಮನಿಗೆ ಬೇಕಾದ ಸಾಮಾನು ಖರೀಧಿ ಮಾಡುತ್ತಿದ್ದರು. ಲಮಾಣ್ಕೇರ ಮಂದಿ ಮಾತ್ರ ಕುರಿತಲೆ ಇಲ್ಲಾ ಸಳೋಯಿಗ ಬೇಕಾದ ಸಮಾನಿಗಾಗಿ ಸಂತಿಗೆ ಹೋಕ್ಕಿದ್ರು, ಸೋಮವಾರ ತೇಗೂರು. ಶುಕ್ರವಾರ ನಾರದಪುರ ಸಂತೆ, ಅದು ತಪಿದ್ರ ಮಂಗಲವಾರ ಹರಿಪುರಕ್ಕ ತಪ್ಪದೆ ಹೋಗಿ ಹೋಗ್ತಿದ್ರು. ಅದು ಸಾಲದಕ್ಕೆ ಹಳ್ಳಗಳ ಮೀನು ಏಡಿ ಇದ್ದೇ ಇದ್ದವು. ಕೆಂಪು ಮಂದಿ ನಮ್ಮ ದೇಶ ಬಿಟ್ಟು ತಮ್ಮ ದೇಶಕ್ಕೆ ಹೋದಿಂದ ಶಾನಬೋಗರ ಆಡಳಿತ ಕಮ್ಮಿ ಆಗಿತ್ತು. ತಲಾಟಿ, ತಳವಾರ, ಹೊಸದಾಗಿ ಕಂದಾಯ ವಸೂಲಿ ಅದುಇದು ಹಾಳಮೂಳ ಅಂತ ಅವಾಗ ಆವಾಗ ಬಂದು ಹೋಕ್ತಿದ್ರು. ತಲಾಟಿ ತಮ್ಮಣ್ಣ ಇದ್ದಕ್ಕಿದಂಗೆ ತಾಂಡಕ್ಕೆ ಬಂದವನೆ ತಮಟೆ ಬಾರ್ಸೋ ಕರಿಯನ್ನ ಸಂಗಾಟಿ ಕರಕೊಂಡು ಬಂದ. ತಮಾಟಿ ಬಾರ್ಸಿ, "ಕೇಳ್ರಪ್ಪೊ, ಕೇಳ್ರಿ. ಸರಕಾರದೋರು ಗುಡದ ಹಟ್ಟಿ ತಾಂಡದಾಗ ಪೂರ್ವದಾಗಿರೋರು, ಐದುನೂರು ಎಕರೆ ಪಣಂಪೋಕ್ ಜಮೀನಾಗ ದೊಡ್ಡದೊಂದು ಕರೆ ಕಟ್ಟೋ ಯೋಜನೆ ಹಾಕ್ಯಾರ. ಎಲ್ಲರೂ ಕೂಲಿಗೆ ಬರಬೇಕ್ರಪ್ಪೊ. . ." ಕೂಗಿದ. ತಾಂಡದ ಮಂದಿಗೇನು ಬಾಳ ಖುಷಿ ಆಗಲಿಲ್ಲ. ಯಾಕಂದ್ರ ತಾಂಡದ ಪಕ್ಕದಾಗ ಚೂರುಪಾರು ಜಮೀನು ಮಾತ್ರ ಅವರದಿತ್ತು. ಕೆರೆಕಟ್ಟೆಯ ಕೆಳಗಿನ ಜಮೀನು ದುಂಬಲೂರವು. ಆದರೂ ದನ ಕರುಗಳಿಗೆ ಆಟ ನೀರು ಅದೀತಂತ ಕೆರೆ ಒಡ್ಡು ಕಟ್ಟಾಕ ಬಂದಿದ್ರು. ತಮಿಳು ನಾಡಿನ ಒಡ್ಡರಮಂದಿ ಕಲ್ಲು ಕಟಿಯಾಕ ಕಟ್ಟಾಕೆ ಕರಸಲಾಗಿತ್ತು. ಊರು ಒಡ್ಡರಿಗೆ ಕಲ್ಲು ಎಬ್ಬೋ ಕೆಲಸ. ಯಾರೋ ಒಬ್ಬ ವಡ್ಡನಿಗೆ ತಾಮ್ರದ ಹಂಡೆ ಸಿಕ್ತು ಅಂತೇಳಿ ಗುಲ್ಲು ಎದ್ದಿತು. ಮಂದಿ ತಿಂಗಳು ಮಟಾನು ಕತೆ ಕಟ್ಟಿ ಹೇಳಕ ಹತ್ತಿದ್ರು. ಒಡ್ಡರಗಿಡ್ಡಪ್ಪ ಹೆಸರು ಮಾತ್ರ ಗಿಡ್ಡ. ಆದರೆ ಅಸಾಮಿ ಆರಡಿ ಉದ್ದದ ಆಳು. ಮುಂಜಾನೆ ಹೊತ್ತಾರೆ ರಾಗಿಮುದ್ದೆ ಹಸಿಕಾರ ಬದ್ನೆಕಾಯಿ ಸುಟ್ಟು ಮಾಡಿದ ಚಟ್ನಿ ಇಟಕೊಂಡು ಎರೆಡು ರಾಗಿ ಮುದ್ದೆ ನುಂಗಿ ಎರೆಡು ಚೆಂಬು ನೀರು ಕುಡಿದು ಕೆಲಸಕ್ಕೆ ನಿಂತ್ರ ಸೂರ್ಯ ವಾಲದೇಟಿಗೆ ಕೆಲಸ ಬಿಟ್ಟು, ಬಾವಿಯಿಂದ ನೀರು ಸೇದಿ ಮೈಮ್ಯಾಲೆ ಸುರ್ಕೊಂಡು ಮದ್ಯಾಹ್ನ ಮತ್ತ ಬಿಸಿಬಿಸಿ ಮುದ್ದೆ ಉಂಡು ಸಂಪಾಗೆ ಮರದ ನೆರಳಿಗೆ ಅಡ್ಡಾದ್ರ ಸಂಜೆ ಹೊತ್ತು ಇಳೀತಿದ್ದಂಗೆ ಮತ್ತ ಕೆಲಸಕ್ಕೆ ಬರೋದು. ತಿಂಗಳು ಕಳೆದು ವರ್ಷಗಳೇ ಉರುಳಿದರು ಕಾಲ ಭಾಗ ಕೆರೆಗೆ ಒಡ್ಡು ಕಟ್ಟಾಕ ಆಗಲಿಲ್ಲ. ಮುಂಗಾರು ಸರು ಆಗ್ತಿದ್ದಂಗೆ ತಾಂಡದ ಮುಂದೆ ಕೆಂಧೂಳು ಎದ್ದಿತಂದ್ರ ಕೆಲಸ ಬಂದ್ ಆಗ್ತಿತ್ತು. ಮತ್ತೆ ಬೇಸಿಗೆ ಸುಮಾರಿಗೆ ಕೆಲಸ ಆರಂಭ. ಎರಡನೇ ವರ್ಷಕ್ಕೆ ಕೆಲಸಕ್ಕೆ ಮಂದಿ ಹೆಚ್ಚಾದ್ರು. ಆಂಧ್ರಾ ಕಡೆಯಿಂದಲೂ ಕೆಲ ಮಂದಿ ಕಲ್ಲು ಒಡ್ಡರು, ಮಣ್ಣು ಒಡ್ಡರು, ಸಾಬರ ಗೌಂಡಿಗಳು, ಕಲ್ಲು ಕೊಡುವವರು, ಮಣ್ಣು ಹೊರುವವರು ಕೆಲಸ ಮಾಡುತ್ತಲೆ ಇದ್ದರು. ಗಿಡ್ಡನ ಹೆಂಡತಿ ಲಕ್ಷ್ಮಿ ಐದನೆ ಮಗನಿಗೆ ಜನಂಕಾಲ ಅಂತ ತಮಿಳು ನಾಡಿನ ಇರೋಡ್ ಕಡಿಗೆ ಹೋಗಿದ್ಲು. ಯಾರೋ ಊರವರು ಮುದ್ದೆ ಮಾಡಿ ಹಾಕ್ತಿದ್ರು. ಆಂಧ್ರಾದಿಂದ ಮಂದಿಗೂ ಪಕ್ಕದಲ್ಲೆ ಟೆಂಟ್ ಹಾಕಿದ್ರು. ಗಿಡ್ಡನ ಪಕ್ಕದಲ್ಲೆ ಕೆಲಸ ಮಾಡೋ ಆಂಧ್ರಾದ ತಿಮ್ಮನ ಹೆಂಡತಿ ಬೋವಿಕೂಟ ಸಲುಗೆ ಬೆಳಿಸಿದ್ದ. ಒಂದೇ ಕಡೆ ಕೆಲಸ ಆಸರಕ್ಕ ಬ್ಯಾಸರಕ್ಕ ತಿಮ್ಮನ ಹೆಂಡತಿ ಚಿಕ್ಕಲಿ ಅವರು ಕುಡಿಯುವಾಗ ಕೋಳಿ ಮಾಂಸ ಹುರುದು ಕೊಡೋದು ಮಾಡುತಿದ್ಲು. ಒಮ್ಮೊಮ್ಮೆ ಮುದ್ದಿನಾ ಉಣ್ಣಾಕ ಇಕ್ಕುತಿದ್ಲು. ತಿಮ್ಮಾ ಬೋವಿಗಾಗಲೆ, ಗಿಡ್ಡನಿಗಾಗಲಿ ಯಾವ ಕೆಟ್ಟ ಯೋಚನೆ ಬಂದಿರಲಿಲ್ಲ. ಮಾಮೂಲು ಕಲ್ಲು ಎಬ್ಬವುದು ಹೆಣ್ಣಾಳು ಎತ್ತಿ ಹೊರಗಿಡುವುದು.

ಗಿಡ್ಡ ನೋಡಾಕೇನು ಮನ್ಮಥನಂಗಿರದಿದ್ದರು ತಿಮ್ಮ ಬೋವಿಗಿಂತ ಪಾಡಾಗಿದ್ದ. ತನ್ನ ಪಾಡಿಗೆ ತನ್ನ ಕೆಲಸ ಮಾಡಿಕೊಂಡಿದ್ದ. "ಬಡವರ ನೀ ಮಡಿದಂಗೆ ಇರು' ಅನ್ನೋಹಂಗ.

ತಿಮ್ಮ ಬೋವಿ ಕೂಡ ಕಲ್ಲು ಎಬ್ಬೊದಕ್ಕೆ ಗಿಡ್ಡನ ಪಕ್ಕಕ್ಕೆ ಬಂದ. ಅವನು ಪಡಿ ಹಚ್ಚಿ ಕಲ್ಲು ಕೀಳೋದರಲ್ಲಿ ನಿಸ್ಸೀಮ. ಇಬ್ಬರು ಅರೆ ತೆಲಗು ಭಾಷೆಯೊಳಗ ಮಾತಾಡಿಕೊಂಡು, ಬೀಡಿ ಹಚ್ಚಿಕೊಂಡಿ ಕೆಲಸ ಸುರು ಹಚ್ಚಿದ್ದರು. ಒಮ್ಮೆ ಗಿಡ್ಡಬೋವಿ ಕಲ್ಲು ಏಬ್ಬತ್ತಿದ್ದಂಗೆ ಕಲ್ಲಡಿಗೆ ಏನೋ ಕಂಡಂಗಾಗಿ ಆ ಕಲ್ಲು ಬಿಟ್ಟು ಬೇರೆ ಕಲ್ಲಿಗೆ ಪಡಿ ಹಚ್ಚಿದ. ಕೆಲಸ ಮಾಡುವಾಗ ಕಲ್ಲು ಮರಿಗೆ ಕಂಡದ್ದು ತಾಮ್ರದ ಹಂಡೆ ಇರಬೇಕು ಅನಕೊಂಡ. ಅದೇನಾದ್ರು ತನ್ನ ಪರಿಶ್ರಮಕ್ಕೆ ಒಲಿದ ಸಂಪತ್ತು ಅಂದುಕೊಂಡ. ಚಿಕ್ಕಾಲಿಗೆ ಅದೆಂಗೋ ವಿಷ್ಯ ಗೊತ್ತಾಗಿ ಗಿಡ್ಡ ಬೋವಿ ಹಿಂದ ಬಿದ್ಲು. " ಅಲ್ರಾ ಗಿಡ್ಡ, ನೂವು ಏನು ಸುಸ್ಲಾವು, ನಾಕು ಅದಿ ಕಾವಲ." ಅಂದಳು. "ವದ್ದು ಚಿಕ್ಕಾಲಿ ಅದು ಎವರದೋ ಸಂಪತ್ತು. ಆಶೆ ಪಡೊದ್ದು." ಅವಳ ಬಾಯಿ ಮುಚ್ಚಿಸೋದಕ್ಕೆ ಪ್ರಯತ್ನ ಪಟ್ಟ. ಆದರೆ ಆಸೆ ಬುರುಕ ತಿಮ್ಮಾ ಬೋವಿ ಹೆಂಡತಿಯನ್ನು ಉಬ್ಬಸಿ ಅದೇನಾದರು ಬಂಗಾರವೇ ಆಗಿತಂದ್ರ, ಈ ಕಲ್ಲು ಒಡೆಯೋ ಕೆಲಸ ಬಿಟ್ಟು ರಾಣಿಯಂಗೆ ಇರ್ತಿಯ, ಅದೇನು ಮಾಡ್ತಿಯೋ ಗೊತ್ತಿಲ್ಲ ಅವನ್ನ ಸಮಜಾಯಿಷಿ, ಅಂವ ಕೇಳಿದ್ರ ಅವನ ತಾವ ಮಕ್ಕಂಡು, ಅದನ್ನು ಸಂಪಾದಿಸು ಅಂದಿದ್ದ. "ಪೋವೆ ನೀಯಮ್ಮ." ತಿಮ್ಮ ಗದರಿಸಿದ. ಗಂಡನೆ ಹಿಂಗೆ ಪ್ರೋತ್ಸಾಹಿಸಿದರೆ ಹೆಂಡಿತ ಕೇಳಬೇಕೆ.

ಅವತ್ತು ರಾತ್ರಿ ತಿಮ್ಮ ಬೇಕಂತಲೆ ಕಂಠಮಟ ಕುಡಿದು ಗಿಡ್ಡನಿಗೆ ಕಡಿಮೆ ಸರಾಯಿ ಉಳಿಸಿದ್ದ. ಮನೆಯೊಳಗೆ ಎರೆಡು ನಾಟಿ ಹುಂಜಗಳನ್ನು ಕೋಯ್ದು ಚಿಕ್ಕಾಲಿ, ಮಾಸದ ಸಾರು ಮುದ್ದೆ ಮಾಡಿದ್ದಳು. ಚೆಂದ್ರನ ಬೆಳಕಲ್ಲಿ ಗಡದ್ದಾಗಿ ಬಾಡೂಟ ಉಂಡ ತಿಮ್ಮ ಗಿಡ್ಡನ ಡೇರೆಒಳಗೆ ಹೋಗಿ ಮಲಗಿದ. ಗಿಡ್ಡನ ಊಟ ಇನ್ನೂ ಮುಗಿದಿರಲಿಲ್ಲ. ಚಿಕ್ಕಾಲಿ ಮಣ್ಣಿನ ಲೋಟದಲ್ಲಿ ಮುದ್ದೆ ಸಂಬಾರ ಬಿಡಿಸಿಕೊಂಡು ಅವನ ಪಕಕ್ಕೆ ಬಂದು ಕೂತು ಮಾತು ಸುರುಮಾಡಿದಳು. " ಏಯ್, ಈ ಯಬ್ಬ ಸೂಡ್ರಾ ನಾಕು." ಅವನ ಕೈ ಹಿಡಿದು ಅವಳ ಎದೆಮೇಲೆ ಇಟ್ಟುಕೊಂಡಳು. ಗಿಡ್ಡನಿಗೆ ಚಂದ್ರನ ಬೆಳಕು ಕತ್ತಲಾದಂತೆ ಕಂಡಿತು. ಏನ್ ಆಗ್ತಿದೆ ಅಂತ ತಿಳಿಯೋದ್ರೊಳಗೆ ತಿಮ್ಮ ಬೋವಿ ಡೇರೆಯಲ್ಲಿ ವಸ್ತುಗಳು ಚೆಲ್ಲಾಪಿಲ್ಲಿ ಯಾಗಿದ್ದವು. " ಗಂಡಸು ಅಂಟಿ ನೀವೇ ರಾ, ನಾಕಿ ನೀವು ಕಾವಾಲಿ." ಅವನ ಎದೆಯೊಳಗೆ ಮುಖ ಇಟ್ಟು ಚಿಕ್ಕಾಲಿ ಮಾತಾಡಿದಳು. ತಿಮ್ಮ ಬೋವಿ ಮದುವೆಯಾಗಿ ಐದಾರು ವರ್ಷಗಳಾಗಿದ್ದರೂ. ಚಿಕ್ಕಾಲಿಯ ಸೊಕ್ಕು ಮುರಿದಿರಲಿಲ್ಲ. ಅದೇ ಕ್ಷಣ ಅದೇನು ಮಾಡಿಕೊಂಡರೊ.

ಮುಂಜಾನಿ ಬೆಳಕು ಹರಿದಾಗ ತಿಮ್ಮ ಬೋವಿ ತನ್ನ ಹೆಂಡತಿ ಇಲ್ಲದಕ್ಕೆ ಲಬಲಬ ಬಾಯಿ ಬಡಕ್ಕೊಳ್ತಿದ್ದ. ಅವನ ವ್ಯವಹಾರ ಇದಿದ್ದೆಲ್ಲಾ ಗೂಡ್ಲೇರಿ ತಾವ. ಅವಾಗಾವಾಗ ಅವನ ಮನಿಗೆ ಹೋಗಿ. ದಮ್ಮಡಿ. ಆಣಿ ದುಡ್ಡು ಕೈಕಾಸು ಅಂತ ಇಸ್ಕೊಳ್ತಿದ್ದ. ಪ್ರಸಂಗ ಬಂದ್ರ ಅಲ್ಲೆ ಮುದ್ದಿ ಉಂಡು ಬರ್ತಿದ್ದ. ಗುಡ್ಲೇರಿಗೆ ತಿಮ್ಮಣ್ಣನ ಕಂಡ್ರೆ ಹಿರಿಮಗನ ಪ್ರೀತಿ ಬಾಯಿ ಬಡ್ಕೊಳೊದು ಕೇಳಿ ತನ್ನ ಸಂಬಂಧಿಕರನ್ನ ಕರಕೊಂಡು ಏನಾರ ಆಯ್ತೇನೋ, ಅನ್ನೊಹಂಗ ಓಡಿ ಬಂದ್ಲು. "ಏನಾಯ್ತು ತಿಮ್ಮಾ ಬೋವಿ ಯಾಕಿಂಗೆ ಲಬಲಬಾ ಹೋಯ್ಕಂಡಿ." ಸಹಜವಾಗಿ ವಿಚಾರಿಸಿದಳು. "ಅಯ್ಯೋ ತಿರುಪತಿ ತಿಮ್ಮಪ್ಪ, ಅಕ್ಕ ಎಮಂತ ಚಪ್ಲಿ ನಾ ಭಾರ್ಯ, ಚಿಕ್ಕಾಲಿ ನೂವೆ ಗಿಡ್ಡ ಪಾರಿ

ಪೊಯಾರು." ದುಖಃದಲ್ಲಿ ತನ್ನ ಮಾತೃಭಾಷೆ ಗೊತ್ತಿಲ್ಲದ ಹೊರಗೆ ಬಂದಿತ್ತು. "ಅರೆ ಕನ್ನಡದಲ್ಲಿ ಹೇಳಲೊ ನಿನ್ನ ಒಡ್ಡು ಭಾಷೆ ನಂಗ ಗೊತ್ತಾಗಕಿಲ್ಲ.." ಗುಡ್ಲೀರಿ ಕೇಳಿದಳು. "ಏನ್ ಹೇಳ್ಳಿಯಕ್ಕ ನನ್ನ ಹೆಂಡ್ರು ಪಾರಿ ಪೋಯಾರು." ಕೈ ಸನ್ನೆ ಮಾಡಿದ. ಅದನ್ನೆ ಗುಡ್ಲೀರಿ ಬಾಯಿ ಅರ್ಥೈಸಿಕೊಂಡು , " ಅದಕ್ಕೆ ಕಣಲೆ ಬೇವರ್ಸಿಗಳನ್ನು ಮನಿ ಅಕ್ಕಪಕ್ಕ ಸೇರಿಸ್ಕಬಾರ್ದು ಅನ್ನೋದು. ನೀ ಗಂಡಸಾಗಿದ್ರ ಹಿಂಗೆಲ್ಲ ಅಗ್ತಿತ್ತಾ. ನಿ ಮೊದ್ಲು ಬಿಗಿ ಇಲ್ಲ ಬಿಡು." ಅವನನ್ನೆ ತಪ್ಪು ದಾರನನ್ನಾಗಿ ಮಾಡಿದ್ಲು. ತಿಮ್ಮಾ ಬೋವಿ ಏನೇನೋ ಸಮಜಾಯಿಷಿ ಹೇಳಿದ. ಗುಡ್ಲೀರಿಬಾಯಿನೂ ಸಾಕಷ್ಟು ಸಮಾಧಾನ ಪಡಿಸಿದಳು. ಮಂದಿ ಮಾತ್ರ ಕೆರೆಗೆ ಕಲ್ಲು ಎಬ್ಬೊತಾವ ಗಿಡ ಬೋವಿಗೆ ವಿಜಯನಗರ ಕಾಲದ ಒಂದು ಹಿತ್ತಾಳೆ ಹಂಡೆ ತುಂಬ ಇಕ್ಕೇರಿ ಬಂಗಾರ ಸಿಕ್ಕೈತೆ , ಅದಕ್ಕೆ ತಿಮ್ಮನ ಹೆಂತಿ ಅವನ ಕೂಡ ಓಡಿ ಹೋದ್ಲು ಅಂತೇಳಿ ತಾವೆ ಸ್ವತಃ ಕಣ್ಣಾರಿ ಕಂಡವರಹಾಗೆ ಕತೆಯನ್ನು ರಸವತ್ತಾಗಿ ಹೆಣೆದು ಮಂದಿ ಮುಂದೆ ರಾಗವಾಗಿ ಹಾಡಿದರು.

ತಿಮ್ಮ ಗಾಣದ ಎತ್ತಿನಂಗೆ ಮೌನವಾಗಿ ಕೆಲಸದಲ್ಲಿ ಮುಳುಗಿ ಜೀವ ಸವೆಸಿದ. ಎಲ್ಲೋ ಹೋಗಿ ಕಳ್ಳಬಟ್ಟೆ ಕುಡಿದು ಒಂದೊಮ್ಮೆ ಹೆಂಡತಿಯನ್ನು ಅರೆತೆಲುಗಿನಲ್ಲಿ ಹಿಗ್ಗಾಮುಗ್ಗಾ ಬೋಯಿದು, ತಾನೆ ಕೈಯಾರೆ ತಿನಿಸಿದ ಒಂದು ಮುದ್ದೆ ಬದ್ನೆಕಾಯಿ ಚಟ್ನಿ ಉಂಡವನೆ ಅಡ್ಡಾಗಿ ಬಿಡುತ್ತಿದ್ದ. ದಿನೆದಿನೆ ಬುರುಬುರು ಅಂತ ಮೇಲಕ್ಕೇರಿದ ಗುಡದಹಟ್ಟಿ ಕೆರೆ ಏರಿ ಮಾತ್ರ ಮುಂಗಾರು ಮಳೆಗಾಗಿ ಕಾಯುತ್ತಿರುವಂತೆ ಕಂಡವರಿಗೆ ಭಾಸವಾಗುತ್ತಿತ್ತು. ಕೆರೆಯ ಕೆಳಗಿನ ಮಂದಿ ಅಗಲೆ ಜಯ, ಹೈಯರ್ ಟೊಂಟಿ ಮುಂತಾದ ಭತ್ತದ ತಳಿಗಳನ್ನು ತಮ್ಮ ಸಂಬಂಧಿಕರಿಂದ ಪಡೆಯಲು ಮಾತುಕತೆ ನಡೆಸಿದ್ದರು. ಕೆಲವರು ತಾವೇ ಸಸಿ ಮಡಿಯನ್ನು ತಯಾರಿಸಿ ಅಗಿ ಚಲ್ಲೋದಕ್ಕೆ ಸುರು ಹಚ್ಚಿದ್ದರು.

ಕೆರೆ ಏನೋ ಪೂರ್ತಿಗೊಂಡಿತು. ಪ್ರಾರಂಭದಲ್ಲಿ ಮಾಮೂಲಾಗಿದ್ದ ಮುಂಗಾರು ತೀವ್ರಗೊಂಡಿತು. ಅಡವಿ ಮತ್ತಿತರೆ ಕಡಿಯಿಂದ ಹರಿದ ನೀರು ಸೀದ ಕೆರೆಗೆ ಬಂದು ದಿನದಿಂದ ದಿನಕ್ಕೆ ಸಂಗ್ರಹ ಪ್ರಮಾಣ ಹೆಚ್ಚತೊಡಗಿತು. ಕೆರೆ ತುಂಬಿದಾಗ ಕುಷಿ ಪಟ್ಟವರು ದುಂಬಲೂರು ಮಂದಿ. ಅವರಲ್ಲಿ ಉತ್ಸಾಹ ಇಮ್ಮಡಿಗೊಂಡು. ಎಷ್ಟೊ ಬೆಳೆ ಬೆಳೆದರು ಇಳುವರಿ ಎಷ್ಟಾಗುತ್ತದೆ. ಮಾರುಕಟ್ಟೆಯಲ್ಲಿ ದರ ಎಷ್ಟಿರ ಬಹುದು. ಎಷ್ಟು ಪ್ರಮಾಣದಲ್ಲಿ ನಾಟಿ ಕೈಗೊಳ್ಳ ಬೇಕು ಎಂಬ ಕನಸಿನ ಅಂದಾಜು ನಡೆಸಿ ಮನಸಲ್ಲಿ ಮಂಡಿಗೆ ತಿನ್ನಲು ಸುರು ಹಚ್ಚಿದ್ದರು.

ತಾವು ಕಟ್ಟಿದ ಮೇಲೆ ತುಂಬಿದ ಕೆರೆ ನೀರಲ್ಲಿ ತನ್ನ ಕಣ್ಣೀರು ಹುಡುಕಲು ಹೋದ ತಿಮ್ಮಾಬೋವಿ ಮಾತ್ರ , ಕೆರೆ ಕಟ್ಟಿದವರು ಹೋಗಿ ಎಷ್ಟೋ ದಿನಗಳಾಗಿದ್ದರು, ತನ್ನ ಮೂಲ ನೆಲಯಲ್ಲಿ ಅಗಬಹುದಾದ ಅವಮಾನವನ್ನು ನೆನೆದು ಅರೆ ಹುಚ್ಚನಂತೆ ನೀರಿಗೆ ಹಾರಿ ಕೆರೆಗೆ ಮೊಟ್ಟ ಮೊದಲ ಬಲಿಯಾಗಿದ್ದ. ಬಡ ಮಂದಿ ಅಪಶಕುನ ಎಂದರು. ಕೆಲವರು ಕೆರೆ ಬಲಿತೆಗೆದುಕೊಂಡಿದೆ ಎಂದರು. ಇನ್ನೂ ಕೆಲವರು ಕಂಠಮಟ ಕುಡಿದು ಕಾಲು ಜಾರಿ ಬಿದ್ದಾನ ಅಂದ್ರು, ಇಲ್ಲ ಯಾರೋ ಆಗದವರು ಕೊಂದಿರಬೇಕು ಎಂದರು. ಅವನ ಸಾವಿನ ಸುತ್ತ ಎದ್ದ ಎಲ್ಲಾ ಊಹೆಗಳು ಊಹೆಗಳಾಚೆಗಿನೆ ಸತ್ಯ ತಿಮ್ಮನ ಹೆಣದೊಂದಿಗೆ ಧಪನ್ ಆಗಿತ್ತು. ತಿಮ್ಮ

ಆಪುಗಿದ್ದ. ಬೆಳಕ್ಕಿಯಾಗಿದ್ದ, ಚಾರ್ಲಿಹಕ್ಕಿಯಾಗಿದ್ದ. ಟಿಂವದ ಹಕ್ಕಿಯಾಗಿದ್ದ. ಮುಂದಿ ಮಾತಿನೊಳಗ ನಾನಾ ವೇಷ ತಳೆದಿದ್ದ.

ಮಂದಿ ಭತ್ತದ ನಾಟಿಗೆ ಸಜ್ಜುಗೊಂಡರು. ಮುಂಗಾರು ಮುಗಿಯುತ್ತಿದ್ದಂತೆ ಕೆರೆಯಲ್ಲಿ ನೀರು ಸಂಪೂರ್ಣ ಕರೆಗಿತ್ತು. ಅಲ್ಲೆಲ್ಲೀ ಚಿಲಕು ನೀರಲ್ಲಿ ಮಿಸೇ ಗಿರ್ಲು, ಮಳಲಿ ಮೀನು ಹೊಟ್ಟೆ ಪಚ್ಕಿ, ಔಲಮ್ಮಟು ನಾನಾ ನಮೂನಿ ಮೀನುಗಳನ್ನು ಹಿಡಿದು ತಿಂದು ತಿಂದು ಸಾಕಾಗಿ ಒಣ ಮೀನು ಮಾಡಿಕೊಂಡರು. ಇನ್ನು ಕೆಲವರು ಪಕ್ಕದ ಊರುಗಳಿಗೆ ಹೋಗಿ ಅಣಿ, ದಮ್ಮಡಿಗೆ ಕೇಜಿ ಹಂಗೆ ವಾರಿ ಪಸಂದಾಗಿಯೆ ಕಾಸನ್ನು ಕೂಡುವಮಾಡಿಕೊಂಡಿದ್ದರು. ಈ ಎಲ್ಲ ಕ್ರಿಯೆ ಪ್ರಕ್ರಿಯೆಗಳಾಗುತ್ತಿದ್ದಂತೆ ಭತ್ತ ಬೆಳೆಯುತ್ತಿದ್ದವರು ಕಬ್ಬು ಬೆಳೆಯಲು ಪ್ರಾರಂಭಿಸಿದರು. ಕಬ್ಬು ಬೆಳದವರು ಬೆಲ್ಲದ ಗಾಣ ಹಾಕಿದರು. ಕೆರೆ ಜನರ ಜೀವಾಳವೆ ಆಯ್ತು. ಎತ್ತು ಎಮ್ಮಿ ಆಕಳಿಂದ ಹಿಡಿದು ಗಿಳಿ, ಗೋರವಂಕಗಳಿಗೆ ಕರೆ ಆಸರೆಯಾಯಿತು. ಕೆರೆ ಏರಿಮೇಲೆ ನೆಟ್ಟಿದ ಮಾವಿನಮರಗಳು, ಹುಣಸೆ ಮರಗಳು ಆಲದಮರಗಳು ಸಸಿಯಾಗಿದ್ದು ಗಿಡವಾದವು. ಯಾರೋ ಕೆರೆ ತೂಬಿನ ಕೆಳಗೆ ಒಂದು ಕಲ್ಲಿಗೆ ಸುಣ್ಣ ಕೆಮ್ಮಣ್ಣು ಹಚ್ಚಿ ಅದಕ್ಕೆ ಕುಂಕುಮ , ಬಂಢಾರ ಬಳಿದು ಕರ್ಪೂರ ಬೆಳಗಿ ಕೆರೆ ತೂಬಿನ ಚೌಡವ್ವ ಎಂದರು. ಕೆರೆ ಕೆಳಗಿನ ಗದ್ದೆಯವರು ಕೋರು ಮಾಡುವವರು, ಮಾಲಿಕರು ಚೌಡವ್ವಗೆ ಪೂಜಿಸದೆ ನಾಟಿ ಮಾಡುತ್ತಿರಲಿಲ್ಲ. ಹೀಗೆಯೇ ತಾಂಡದ ಸುತ್ತಲೂ ನೂರಿನ್ನೂರು ದೇವತೆಗಳು ಹುಟ್ಟಿಕೊಂಡವು. ಗುಡ್ಲೀರಿ ಭಾಯಿ ಭಗನ್ಯಾ ಅವನಂತರ ಹುಟ್ಟಿದ ಚಾಂಪು, ಕೇವಡಿ, ಮಂಗು ನಾಕು ಮಂದಿ ಮಕ್ಕಳನ್ನು ಸಾಕುವ ತಾಕಲಾಟದಲ್ಲಿದ್ದಳು. ಸರ್ವತಪ್ಪನ ಗದ್ದಿಯಯೊಂದೆ ಇಡೀ ಕುಟುಂಬಕ್ಕೆ ಆಶ್ರಯವಾಗಿತ್ತು. ತನ್ನ ಹಿರಿಮಗ ಭಗನ್ಯಾ ಬುಕ್ಯಾಯಾನ ಕರಮ್‌ತೋಟ್ ಮಾತ್ರ ಹಾಕಿದ್ದೆ ಹುಟ್ಟುವ ಬೀಜದಂಗೆ ತಾಯಿಗೆ ತಕ್ಕ ಮಗನಾಗಿದ್ದ. ತಯಿ ಕಾಲಿಲೆ ತೋರಿಸಿದ್ದನ್ನು ಶಿರಸಾವಯಿಸಿಮಾಡೋದೊಂದೆ ಅವನ ಕೆಲಸ. ತಾಂಡದ ಬಂಡಿಗಳು ಬಾಡಿಗೆ ದುಡಿಯುತ್ತಿರುವುದು ಕಂಡು ಅವನ ಮನಸ್ಸು ಚಟಪಡಿಸುತ್ತಿತ್ತು. ಐದಾರು ಸಾರಿ ತನ್ನ ಮನಸ್ಸಿನ ಇಂಗಿತವನ್ನು ತಾಯಿಯ ಮುಂದೆ ತೋಡಿಕೊಂಡಿದ್ದ. " ಬೇ ನಾನು ಯಾಕೆ ದಮ್ಮಡಿಗೆ ಚಕ್ಕಡಿಗಾಡಿ ಬಾಡಿಗೆ ಪಡೆದು ಹೇರಾಕ ಹೋಗಬಾರದು." ಕುತೂಹಲ ವ್ಯಕ್ತವಾಗಿತ್ತು. " ನೀ ಇನ್ನು ಆ ವಯಸ್ಸಿಗೆ ಬಂದಿಲ್ಲ ಸುಮ್ಮನೆ ನಿನ್ನಪ್ಪನ, ತಮ್ಮ, ತಂಗಿಯರನ್ನು ಕರ್ಕೊಂಡು ಹೋಗಿ ಮರಗಿಡಗಳನ್ನು ಪೊದೆಗಳನ್ನು ಸ್ವಚ್ಚಮಾಡಿ ಒಂದು ಹದಿನೈದು ಹದಿನಾರು ಎಕ್ರೆ ಆಗುವಷ್ಟು ಹೋಲ ತಗೀರಿ. ಸರಕಾರದ ಜಮೀನು ಯಾವಾಗ ಏನಂತಾನ ನೋಡಿ ಬಿಡೋನು." ಎಂದು ಅವನ ಉತ್ಸಾವನ್ನು ಬೆರೆಡೆಗೆ ತಿರುಗಿಸಿದ್ಲು.

ತಾಂಡದ ಮಂದಿ ಊರಪಕ್ಕ ಅರ್ಧ, ಒಂದು ಎಕರೆ ಜಮೀನು ತಕ್ಕೊಂಡು ಉಸ್ಸಪ್ಪ ಅಂತ ಎದುಸಿರು ಬಿಟ್ಟರೆ. ಭಗ್ಯಾನಾಯ್ಕ ಪುಟ್ಟಪುಟ್ಟ ಇಬ್ಬರು ತಂಮ್ಮಂದಿರನ್ನ, ತಂಗಿಯರನ್ನು ಒಟ್ಟು ಗೂಡಿಸಿಕೊಂಡು ತಂದೆ ಪಂಪಾ ಜೊತೆಗೆ ಆಡವಿಗೆ ಹೋಗಿ ಸಣ್ಣಸಣ್ಣ ಪೊದೆಗಳನ್ನು ಕಡಿಯುವುದು ಅವುಗಳನ್ನು ನಾತ್ಕಾನಾಕಾರದಲ್ಲಿ ಒಟ್ಟಿ ಮೇರೆ ಮಾಡಿದರು. ಕಳೆಗೆ ಹರಿಯುತ್ತಿದ್ದ ಹಳ್ಳದಿಂದ ಆರಂಭಿಸಿ ಮೇಲಿನ ಎತ್ತರದ ಮಣ್ಣಿನ ದಿಬ್ಬದ ವರೆಗೆ ಒಟ್ಟು ಹದಿನೈದೊ ಇಪ್ಪತ್ತೋ ಎಕರೆ ಅವರ ಅಲೋಚನೆಯಾಗಿತ್ತು. ಪಂಪಾ ಮತ್ತು ಮಕ್ಕಳ ತಲೆಯೊಳಗೆ ಒಂದೇ ಅಲೋಚನೆ

ಇತ್ತು. ತಾಂಡದಿಂದ ಮೂರುಮೈಲಿ ದೂರ ಕಾಡಿನೊಳಗೆ ನಡೆದು ಬಂದು ತಂದೆ ಮಕ್ಕಳು ಯಾವುದೇ ಹಿಂಜರಿಕೆ , ಅನುಮಾನಗಳಿಲ್ಲದ ಮಾಡುವುದೆಂದರೆ ಮಾಡುವುದೇ ಎನ್ನುವ ಪೂರ್ಣ ಆತ್ಮ ವಿಶ್ವಾಶದೊಂದಿಗೆ ಹಿಡಿದ ಕೆಲಸವನ್ನು ನೆರವೇರಿಸಿದ್ದರು. ಆದರೆ ದುರಂತವೆಂದರೆ ಗೋಡುನೆಲ, ಅಲಲ್ಲಿ ದೊಡ್ಡ ಕಲ್ಲಿನ ರಾಶಿ ನೋಡುದಕೆ ದೊಡ್ಡದಾಗಿ" ಕಂಡರು. ಬಿತ್ತಿದರೆ ಬೆಳೆಯುತ್ತಿದ್ದು. ಐದಾರು ಚೀಲ ಮಾತ್ರವೇ. ಜೀ ಅಂತ ಹಿಡ್ಕೊಳೊ ಮಳೆ ನಿಲ್ಲಿಲ್ಲವಾಗಿ ಹಾಕಿದ ಪೀಕು ಪಿಳಯಾರಿ ರೋಗ (ಹಳದಿ) ಬಂದಂತೆ ನೆಲದಲ್ಲೆ "ಪಿಂ" ಅಂತಿತ್ತು. ಕಸುವು ಇಲ್ಲದ ನೆಲದೊಳಗೆ ಬೆಳೆ ಬರುವುದೆ ದೊಡ್ಡ ಮಾತಾಗಿತ್ತು ಮುಂಗಾರಿ ನಲ್ಲಿ ಅಡ್ಡಮಳಿ ಹೊಡೀತಂದ್ರ ಒಡ್ಡು ಒಗಾರಿಗಳೆಲ್ಲವೂ ಕೊಚ್ಚಿಕೊಂಡು ದೊಡ್ಡ ದೊಡ್ಡ ಕರಕಲುಗಳೂ ಉಂಟಾಗುತ್ತಿದ್ದವು ಬೆಳದಿದ್ದು ಆಟಕ್ಕೆ ಇಟಕ್ಕೆ ಹೊಟ್ಟ ಪಾಡಿಗೆ ಅಗುತ್ತಿತು. ಆದರೆ ಖರ್ಚಿಗೆ ದುಗ್ಗಾಣಿ ಇಲ್ಲದೆ ಕಾಲಕಳಿಯೋದು ದುರಸ್ತರವಾಗಿತ್ತು.

ಭಗ್ಯಾನ ಬುಕ್ಕ್ಯಾ ಕರಮ್‌ತೋಟ್ ತಾಂಡದೊಳಗೆ ಏನಾದರು ಸಾಧನೆ ಮಾಡಬೇಕು ಎಂಬ ಛಲವನ್ನು ಹೊಂದಿದ್ದ. ಅವನ ಅಪ್ಪ ಪಂಪಾ ಬುಕ್ಕ್ಯಾ ಕರಮ್ ತೋಟ್ ಎಷ್ಟು ಮುಗ್ದನಿದ್ದನೋ ಅವನಿಗೆ ಇವನು ತದ್ವಿರುದ್ಧವಾಗಿದ್ದ. ವ್ಯವಹಾರದಲ್ಲಿ ಬಲು ಚಾಣಾಕ್ಷನಾಗಿದ್ದ. ಪೈಸದ ಬಾಬ್ತು ಆಕಡೆ ಈಕಡೆ ಆಗೊಹಾಗಿಲ್ಲ. ಲೆಕ್ಕ ಪೂರ ಸರಿಹೊಂದಲೇ ಬೇಕು. ಆಕೆಡೆ ಈಕಡೆ ಆದರೂ ಅದು ಸಮ ಬರಲೇ ಬೇಕು. ಅಲ್ಲಿಯ ವರೆಗೂ ಬಿಡುತ್ತಿರಲಿಲ್ಲ. ಸರ್ವತಪ್ಪ ಗದ್ದೆ ಅಳುಗಳ ಲೆಕ್ಕ, ನಾಟಿ ಮಡಿದ್ದು ಕಳೆ ಗದ್ದೆ ತುಳಿದಿದ್ದು, ಕಳೆ ತೆಗೆದಿದ್ದು. ಕೊಯ್ಲಿ ಮಾಡಿದ್ದು ಎಲ್ಲಾನು ಅವನ ತಲೆಯೊಳಗೆ ಇರುತ್ತಿತ್ತು. ಭಟ್ಟರು ಲೆಕ್ಕಕ್ಕೆ ಕುಳಿತಾಗ ಅವನಿಗಿಂತ ಮುಂಚೆ ಮಗ, ಮಗನಿಗಿಂತ ಮುಂಚೆ ಅವ. ಭಟ್ಟರು ಅರ್ಧಕೇಜಿದು ಲೆಕ್ಕ ಏರುಪೇರು ಮಾಡಿದ್ರ ಹಿಡಿದು ಹಾಕಿ ಬಿಡ್ತಿದ್ದ. ಹಂಗಾಗಿ ಭಟ್ಟರು ಬಹಳ ಕಾಳಜಿಯಿಂದ ಲೆಕ್ಕವನ್ನು ಮಾಡಿ ಅವರಿಗೆ ಬರಬೇಕಾಗಿದ್ದನ್ನು ಕೊಟ್ಟು ಮತ್ತೆ ಹೊಸ ಲೆಕ್ಕ ಇಡುತ್ತಿದ್ದ. ಭಾಗನ್ಯ ಮಾತ್ರ ಇಡೀತಾಂಡದ ಮಂದಿಗೆ ಅಚ್ಚರಿ ಮೂಡಿಸುತ್ತಿದ್ದ. ಹೆಂಚಿನ ಮನೆ ವಾಸಿ ಉಪ್ಪಾರ ಹುಲುವಪ್ಪ ಮಾತ್ರ ಕಳ್ಳ ಕೆಲಸ ಮಾಡೋ ಅವನ ಹನ್ನೊಂದು ಮಂದಿ ಗಂಡು ಮಕ್ಕಳನ್ನು ಕುರಿತು ಹದಿನಾರು ಮಂದಿ ಗಂಡು ಮಕ್ಕಳಿರೊ ದಿನ್ನೆ ಸಾಬನೆದುರಿಗೆ, "ಅಲ್ಲ ಕಣಲಾ ದಿನ್ನಿ, ಈ ಚೋಟುದ್ದ ಹುಡುಗ ಮಾಡೋ ಕೆಲಸದಾಗ ಕಾಲ ಭಾಗ ನನ್ನಮಕ್ಕಳು ಮಾಡಿದ್ರ ಸಾಕು ನಮ್ಮ ಮನಿತನ ಉದ್ದಾರ ಅಗಿ ಹೊಕೈತಿನೋಡು. ಅವನಪ್ಪನ್ ಏನಂತೀಯ." ದಿನ್ನಿಯನ್ನು ಕೇಳಿದ. " ಅದೇ ಕಣೋ ಹುಲ್ಲ, ಅದೇನೋ ಕನ್ನಡದಾಗ ಗಾದೆ ಐತೆಲ್ಲ, ಯೋಗಿ ಪಡೆದದ್ದು ಯೋಗಿಗೆ, ಜೋಗಿ ಪಡದದ್ದು ಜೋಗಿಗೆ. ಅನ್ನೋಹಂಗೆ ನಮ್ಮನಿಮ್ಮುದುಕೆ ಪಡಿಪಾಟ್ಲ. ನಮ್ಮದುಕೆ ಹನ್ನೊಂದು ಗಂಡುಮಕ್ಕಳದಾರೆ. ಕಾಮೇ ಮಾಡಾಕಿಲ್ಲ ಅಂತೀನಿ. ರವೋಟು ಹೆಂಡ್ತಿಕೆ ಗಾಂವ್ ಜಾಕೆ ಬರ್ತಿನಿ ಅಂತ ಒಬ್ಬ ಅಂತಾನೆ. ಇನ್ನೊಬ್ಬ ಪೇಟೆಜಾಕೆ ಸಂಜೀಕೆ ವಾಪಾಸು ಅತ ಅಂತಾನೆ. ಹಿಂಗಾದ್ರ ಕೇತ್ತ ಘರ್ ಕೆಲಸ ಏನಾಗಬೇಡ ಬೋಲ್." ಅವನಿಗೆ ಮರು ಪ್ರಶ್ನೆ ಹಾಕಿದ. "ಏನ್ ಮಡೋದು ನಮ್ಮ ಕರ್ಮ, ಅನುಭವಿಸಬೇಕಲ್ಲ.". ಧೀರ್ಘ ಉಸಿರು ತಗೊಂಡು ಹೊರಗೆ ಬಿಟ್ಟಿದ್ದ. "ಹೊಗ್ಲಿ ಬಿಡು ವಲ್ಲು ಭಾಯಿ ಮುಂದುಕೆ ಬಿದ್ದು ಆಯಾ" ಸಮಾಧಾನ ಪಡಿಸೊದಕ್ಕೆ ನೋಡಿದ.

ಅದರೆ ಎಲ್ಲೋ ಅವನ ಮನಸ್ಸಿನ ಮೂಲೆಯೊಳಗೆ ಭಗ್ಯಾನ ಕುಟುಂಬ ನೆನ್ನೆಮೊನ್ನೆ ಬಂದು ವಾಸವಾಗಿ ಬೆಳೆಯುತ್ತಿರುವುದು ಹೇಗೆ. ನೋಡಿದರೆ ತಾನು ಅನುಭವಿಸಿದ ಶ್ರೀಮಂತಿಕೆ ತನ್ನಿಂದ ಏನಾದರು ಇವನಿಗೆ ವರ್ಗವಾಗಬಹುದೆ ಎನ್ನುವ ಆತಂಕ ವಿತ್ತು. ಕನ್ನಡಿಗನಾದ ಉಪ್ಪಾರ ಹುಲವಪ್ಪ ತಾನು ಜಾತಿಯಿಂದ ತುಂಬ ಶ್ರೇಷ್ಠ. ಈ ಲಮಾಣ್ಯೇರು ಬಹಳ ಕನಿಷ್ಟ ಅಂತ ತಿಳಿದುಕೊಂಡಿದ್ದ. ಅವನ ಮನಿಮುಂದ ಅವನಿಗಾಗಿ ಕಾದ ನಾಲ್ಕೈದು ಕುಲಸ್ತ ಕುಟುಂಬಗಳು ಅವನ ಅಣತಿಯಂತೆ ನಡೆಯುವುದ ದೊಡಸ್ತಿಕೆಯಾಗಿತ್ತು. ವರ್ಷದ ಮುನ್ನೂರು ಅರವತ್ತೈತಿ ದಿನಾನು ಜೋಳದ ಹಗೇವು ತುಂಬಿರುತ್ತಿದ್ದವು. ಮನೆಯೊಳಗೆ ಪಣವುಗಳು, ಕಣಜಗಳು ತುಂಬಿ ತುಳುಕಾಡುತ್ತಿದ್ದವು. ಇಪ್ಪತ್ನಾಲು ಗಂಟೆ ಹಾಲು ಹೈನ, ಮಜ್ಜಿಗೆಗೆ ಅಂತಾನೆ ದೊಡ್ಡ ಸಾಲೆ ನಿಂತಿರುತ್ತಿತ್ತು. ಕಟ್ಟೆ ಮೂಲೆ ಮ್ಯಾಲೆ ಜೋಳದ್ದು ನುಚ್ಚು ತುಂಬಿಕೊಂಡು ಬಂದ ಮಂದಿ ಮಜ್ಜಿಗೆ ಬಡಸಿಕೊಂಡು ಅಲ್ಲೆ ಸುರುಹಚ್ಚುತ್ತಿದ್ದರು. ಈ ಎಲ್ಲಾ ದೌಲತ್ತು ಒಂದು ದಿನ ಮಾಯವಾಗುವ ಲಕ್ಷಣಗಳು ಕಂಡಿದ್ದವು. ಹಾಗಾಗಿಯೇ ಈ ಶುಕ್ರದೆಸೆ ಭಗ್ಯಾನ ಪಾಲಾಗುವ ಎಲ್ಲಾ ಲಕ್ಷಣಗಳನ್ನು ಉಪಾರ ಹುಲವಪ್ಪ ಕಂಡಿದ್ದ. ವಯಸ್ಸು ಆಗುತ್ತಿದ್ದಂತೆ. ಮಕ್ಕಳು ಮಾತು ಕೇಳದಾದರು. ಊರ ಮುಂದಿನ ಐನಾತಿ ಜಮೀನು ಕೈಕೊಡುವುದೆ ಅವನ ಶ್ರೀಮಂತಿಕೆಗೆ ಕಾರಣವಾಗಿತ್ತು. ಇಲ್ಲವೆಂದರೆ ಆ ಬಯಾನಕ ಮಳೆಯಲ್ಲಿ ಬೆಳೆ ಬೆಳೆಯುವುದೋ ದುಸ್ಥರವಾಗಿತ್ತು.

ಭಗ್ಯಾನ ಆಶೆಯಂತೆ ಚಂದ್ಯಾನಾಯ್ಕ ಚೆಕ್ಕಡಿಯನ್ನು ಒಂದಾಣೆಗೆ ಬಾಡಿಗೆ ತೆಗೆದುಕೊಂಡ. ಒಂದು ಚಕ್ಕಡಿಗಾಡಿ ಶೇಂಗ ಹೇರಿ ಸುಮಾರು ನಲವತ್ತು ಮೈಲಿ ದೂರ ಸಾಗಿಸಿದರೆ ಒಂದುವರೆ ರೂಪಾಯಿ ಸಿಗುತ್ತಿತ್ತು. ಅವನ ಹೋರಿಕರಗಳು ಚೆನ್ನಾಗಿದ್ದರಿಂದ ತಾನೂ ಕೂಡ ಒಂದುವರೆ ರೂಪಾಯಿ ದುಡಿಯಬಹುದೆಂಬೆ ನಂಬಿಕೆ ಬಂದಿತ್ತು. ಮೊದಲ ಸಲ ಏನೂ ಅರಿಯದ ಮಗ ನಲ್ವತ್ತು ಮ್ಯಲಿ ದೂರದ ನರಸಾಪುರ ತಾಂಡದಿಂದ ಹದಿನೈದು ಮೈಲಿ ದೂರವಿರುವ ದೊಡ್ಡ ಪ್ಯಾಟಿ ದ್ಯಾವನೂರು ಮಾರುಕಟ್ಟೆಗೆ ಶೇಂಗಾ ಹೊಡಯುವುದು. ವಾರಕ್ಕೆ ಎರೆಡು ಸಲ ಹೊಡೆದರೆ ಮೂರು ರುಪಾಯಿ ಆಗುತ್ತಿತ್ತು. ಮಂದಿ ವಾರಕ್ಕೆ ಎರೆಡುಸಲ ಹೊಡೆದರೆ ಅವನು ಒಮ್ಮೊಮ್ಮೆ ಮೂರು ಸಲ ತಡಾಯಿಸಿಬಿಡುತ್ತಿದ್ದ. ಹಾಗಗಿ ಅವನ ದುಡಿಮೆ ಹೆಚ್ಚಾಗುತ್ತಿತ್ತು. ಬೇರೆ ಮಂದಿಯ ಹಾಗೆ ಅಂಗಡಿಯಲ್ಲಿ ತಿಂದೆ, ಶೆಂದಿ ಸರಾಯಿ ಕುಡಿದೆ ಎನ್ನುವ ಮಾತಿಲ್ಲ. ಬಟವಾಡೆ ಕಾಸು ಬಂದೊಡನೆ ಧೋತ್ರದಂಚಿಗೆ ಕಟ್ಟಿ, ಸೀದ ಅವರ ತಾಯಿ ಗುಡ್ಲಿಬಾಯಿ ಮುಂದೆ ಬಿಚ್ಚುತ್ತಿದ್ದ. ಪೈಸೆಗೆ ಪೈಸೆ ಸೇರಿಸಿ ಗಬ್ಬದ ಎಮ್ಮೆ ಮಣಕಗಳನ್ನು ಖರೀಧಿಸಿದಳು. ಅವುಗಳ ಮೇಲೆ ನೂರೆಂಟು ಕನಸುಗಳನ್ನು ಕಟ್ಟಿದ್ದಳು. ಅವು ಈಯುತ್ತಿದ್ದಂಗೆ ಹಾಲು ಮಾರುವುದು, ಬೆಣ್ಣೆ ಮಾರುವ ಯೋಜನೆಗಳನ್ನು ರೂಪಸಿಕೊಂಡಿದ್ದಳು. ಮಂಗಳವಾರ ಹರಪುರದ ಸಂತೆಯಲ್ಲಿ ನಾಟಿ ಹುಂಜ, ಕೋಳಿಗಳನ್ನು ಮಾರಿ ಕಾಸನ್ನು ದುಂಡಗಿರುತ್ತಿದ್ದಳು. ಮಗ ತಂದಿದ್ದನ್ನು ಸೇರಿಸಿ ಪೆಟಾರಿಯ ಮೂಲೆಯಲ್ಲಿ ಗಂಟುಕಟ್ಟಿ ಯಾರಿಗೂ ಗೊತ್ತಾಗದಂತೆ ಮುಚ್ಚಿಡುತ್ತಿದ್ದಳು. ಮುಂದೆ ಮಗಳ, ಹಿರಿ ಮಗನ ಮದುವೆ, ಹೀಗೆ ನಾನಾ ಖರ್ಚು ಬಹಳ ಇದೆಅಂತ ತಿಳದಿತ್ತು. ನಾಲ್ಕು ಜನಸ್ಯೆ ಅನ್ನೋ ಹಗೆ ಬದುಕಬೇಕು ಅನ್ನೋದೆ ಗುಡ್ಲೀರಿಬಾಯಿಯ ಅಭಿಲಾಷೆಯಾಗಿತ್ತು. ದೂರದ ಗುಡಿಕೋಟೆಯಿಂದ ಬಂದ ಮಂದಿ ಛಿ ಅನ್ನೋಹಾಗೆ ಬದುಕಬಾರದು ಅನ್ನೋದೆ ಅವಳ ಇರಾದೆಯಾಗಿತ್ತು. ತನ್ನ ಅಮಗೋತ್ ವಂಶದ ಮಂದಿ ಅಪ್ಪೇನ ಹಳ್ಳಿಗೆ ಹೋಗಿರಬಹುದುದೀಗ,

ಬದ್ಯಾನಾಯ್ಕ ಅವಳ ತಂದೆ ತೀರಿಕೊಂಡು ಸುಮಾರು ವರ್ಷಗಳೆ ಕಳೆದಿದ್ದವು. ಅಣ್ಣಂದಿರು ತಂಗಿ ಚಿಕ್ಕಮ್ಮನ ಮಕ್ಕಳು, ಅವರ ಮಕ್ಕಳು ಬಗ್ಗೆ ಯೋಚನೆ ಮುಂದೆ ಮುಂದೆ ಸಾಗಿತ್ತು. ಮುಗಿಯುವ ಮಾತೇ ಎಂಬುದಿಲ್ಲ. ಹೀಗೆ ಅಲೋಚಿಸುತ್ತಿರುವಾಗ ಯಾರೋ ಅಪರಿಚಿತರಂತೆ ಗುಡಿಸಲು ಮುಂದೆ ನಿಂತು, " ಗುಡ್ಲಿಬಾಯಿ" ಎಂದು ಕೂಗಿದಂತಾಗಿ ಹೊರಗೆ ಬಂದು ನೋಡಿದಳು. "ಅರೆ ರಾಮುಡು ಬೀಯಾ ಯಾವಾಗ ಬಂದೆ." ಅವನು ಬಂದಿರುವ ಖುಷಿಯೊಳಗೆ ಮಾತುಗಳೇ ಮರೆತು ಹೋಗಿದ್ದವು. ಅವನನ್ನು ನೋಡಿದ ಖುಷಿಯೊಳಗೆ ಅಳುವುದನ್ನೇ ಮರೆತಿದ್ದಳು. ದುಃಖ ತಡಿಯಾಕ ಆಗದೆ ಅವನ ಕೊರಳನ್ನ ಹಿಡಿದು ತನ್ನ ಪೂರ್ವ ಇತಿಹಾಸವನೆಲ್ಲಾ ನೆನಯುತ್ತಾ ಅತ್ತಳು. "ಸುಮ್ಮನಿರವ್ವ ಅದ್ದದಾಯಿತು, ಈಗ ಸುಖವಾಗಿದ್ದೀಯಲ್ಲ ಸುಮ್ಮನಿರು." ರಾಮುಡು ಸಮಾಧಾನ ಮಾಡಿದ. ತನ್ನ ತವರು ಮನೆಯವರು ಕಡೆಗೂ ಇಷ್ಟು ದೂರ ಬಂದರಲ್ಲ ಎನ್ನುವ ಸಮಾಧಾನ ಅವಳಿಗೆ. ತಾನು ಹುಟ್ಟಿಬೆಳೆದ ಅಪ್ಪೇನ ಹಳ್ಳಿ ತಾಂಡದ ನೆನೆಪು ಗಾಢವಾಗಿ ಬಂದಿತು. ಮದುವೆಯಾದಾಗ ಕೇವಲ ಹತ್ತು ವರ್ಷ, ಗಂಡ ಪಂಪಾನಾಯ್ಕನ ಕೂಡ ವಲಸೆ ಬಂದಿದ್ದು ತನ್ನ ಮತ್ತೊಬ್ಬ ಅಣ್ಣ ತಮ್ಮನನ್ನು ಬಿಟ್ಟು ಮುಂದೆ ಮಲೆನಾಡಿನ ಕಡೆಗೆ ಹೋಗಿ ವಾಸವಾಗಿದ್ದು ಎಲ್ಲಾ ನೆನಪಾಯಿತು. ಅವನು ಎಷ್ಟೋ ವರ್ಷಗಳ ಹಿಂದೆ ಬಂದಿದ್ದ. ವಾರಕ್ಕೆ ಒಂದೇ ಮೋಟರ್ ಗಾಡಿ ಅಡ್ಡಾಡುವುದರಿಂದಾಗಿ ಸಂಪರ್ಕ ವ್ಯವಸ್ಥೆ ಸರಿಯಾಗಿರಲಿಲ್ಲ. ಇದ್ದರೂ ಸಮಯಕ್ಕೆ ಸರಿಯಾಗಿ ಕಾಸು ಇರೋದು ಬೇಡವೆ. ಹೀಗಾಗಿ ಒಂದೊಂದು ಸೀಮೇಯೂ ಒಂದೊಂದು ರಾಜ್ಯವಾಗಿತ್ತು. ರಾಮುಡು ತನ್ನ ಮಾವ ಪಂಪಾನಾಯ್ಕನನ್ನು ಇದಿರು ನೋಡುತ್ತಿದ್ದ. ಭಗನ್ನಾ ಕರಮ್ ತೋಟ್ ತಿಳುವಳಿಕೆ ಬಂದಾಗಿನಿಂದ ತಂದೆ ತಾಯಿ ಸಂಬಂಧಿಕರನ್ನು ನೋಡಿಯೇ ಇರಲಿಲ್ಲ. ಚಿಕ್ಕನಿರುವಾಗ ಒಮ್ಮೆ ಗುಡೆಕೋಟೆಗೆ ಹೋದ ನೆನಪು. ಅವನ ಅಜ್ಜ ಧನಸಿಂಗ್ ತೀರಿಕೊಂಡಾಗ ಶವ ಸಂಸ್ಕಾರಕ್ಕೆ. ಸಿಕ್ಕಿದ್ದು ದಾಡೋ, ಅದರಲ್ಲಿ ಕಪ್ಲಾ ಮತ್ತು ಅವನ ಅಣ್ಣ ಖೇಮ್ ಸೇರಿ ಓಂದು ದೊಡ್ಡ ಟಗರನ್ನು ಕೊಟ್ಟರು. ಊರವರು ಬಂದು ಹೀಗೆ ಸುತ್ತಲು, ಮಂದಿ ಬಹಳ ಬಂದಿದ್ದರಿಂದ ಊಟದ ವ್ಯವಸ್ಥೆನೂ ಅಚ್ಚುಕಟ್ಟಾಗಿ ಮಾಡಬೇಕಿತ್ತು. ಗುಡಿಕೋಟೆ ತಾಂಡದಲ್ಲಿ ತಮ್ಮ ಕರಮ್‌ತೋಟ್ ವಂಶಸ್ಥರೆಲ್ಲಾ ಸೇರಿ ವಿಜೃಂಬಣೆಯಿಂದಲೆ ಕಾರ್ಯವೂ ಮಾಡಿದ್ದರು. ಸುತ್ತ ಐವತ್ತು ಹಳ್ಳಿಗೆ ಬೇಕಾದ ಮನುಷ್ಯನಾಗಿದ್ದ, ಕೋರ್‌ಗೋರ ಎನ್ನದೆ ದಿನಕ್ಕೆ ಐದನೂರ ಆರನೂರು ಮಂದಿ ಸೇರಿತ್ತು. ಖೇಮುನಾಯ್ಕನೇ ಮುಂದಾಗಿ ಎಲ್ಲಾ ಕೆಲಸಗಳನ್ನು ಮಾಡುತ್ತಿದ್ದ. ಅವನ ಮಕ್ಕಳು ರತನ್ ಸಿಂಗ್, ದೇವಲಾ, ಮುಂಗಲ್ಯಾ, ಲಚ್ಚ ಅಗಲೇ ಮದುವೆ ವಯಸ್ಸಿಗೆ ಬಂದಿದ್ದರು. ದಿನ ಮುಗಿದ ಮೇಲೆ, "ಇಲ್ಲೆ ಇರು ಇರೋಕೆ ನಾವಿಬ್ಬರೆ, ಯಾಕಿಂಗೆ ಗೊತ್ತಿಲ್ಲದ ಜಗತ್ತಿಗೆ ಹೋಗಿ ನಮ್ಮವರಿಲ್ಲದ ಪ್ರದೇಶದಲ್ಲಿ ಯಾರಿಗೇನಾದರೂ ಆದರೆ ಸುದ್ದಿ ಸಹ ತಿಳಿಯಾಕಿಲ್ಲ." ಎಂದು ಖೇಮುನಾಯ್ಕ ಹೇಳಿದ ಏನೆಲ್ಲಾ ಬುದ್ದಿವಾದ ಪಂಪನ ಕಿವಿಗೆ ತಾಕಲಿಲ್ಲ. "ಎನೋ ಹೋಗಿ ಆಗಿದೆ. ಕಷ್ಟನೋ ಸುಖಾನೋ ಬದುಕಿದೀವಿ. ಅಲ್ಲಪ್ಪ, ವಲಸೆ ನಮಗೇನು ಹೊಸದ? ನಮ್ಮ ತಾತ ಮುತ್ತಾತಂದಿರು ಆ ಕಡೆ ಯಾವುದೋ ಸೀಮೆಯಿಂದ ಬಂದವರಂತೆ, ಹೀಗಿರಬೇಕಾರ ಒಂದು ಒಪ್ಪತ್ತಿನ ಹಾದಿ, ಅದೇಟು ದೂರ. ನೀ ಕರದಾಗ ಬಂದೇನು." ತನ್ನ ನಿರ್ಧಾರವನ್ನು ತಿಳಿಸಿದ್ದ.

"ಅರೆರೆ ಎಷ್ಟು ದೊಡ್ಡವ ಅದಾನ ನನ್ನ ಅಳಿಮಯ್ಯ, ಬಾರಲ ಭಗನ್ಯಾನಾಯ್ಕ "ಮಾಮ ಯಾವಗ ಬಂದೆ ತಾಂಡದಲ್ಲಿ ಚೆನ್ನಾಗಿದ್ದಾರೆ." ವಿಚಾರಿಸಿದ. "ಹೌದು ಮಗ ಎಲ್ರು ಬೇಸ ಅದೀವಿ, ನೀನು ಬೇಸ ಇರಬೇಕು. ಮುಂದಿನ ಭವಿಷ್ಯ ನಿನ್ನದೆ." ಎಂದು ಭರವಸೆ ನೀಡಿದ. ಅವರು ಮಾತಾಡುತ್ತಿದ್ದಂತೆ ಪಂಪಾನಾಯ್ಕ ಎತ್ತುಗಳನ್ನು ಹಿಡಿದುಕೊಂಡು," ಭಗುನ ಬೇಟಾ ಬಾ ಆಟು ಎತ್ತುಗಳನ್ನು ಕಟ್ಟು." ಕೂಗಿದ. "ಬಂದೆ ಬಾ(ಅಪ್ಪ)" ಅಂದವನೆ ಒಂದೇ ನೆಗತಕ್ಕೆ ಓಡಿದ. ಎತ್ತುಗಳ ಹಗ್ಗವನ್ನು ಹಿಡಿದು, " ಊರಿಂದ ರಾಮುಡು ಮಾಮ ಬಂದಾನ." ಅಂದ. " ಹೌದಾ ಯಾವಾಗ ಬಂದಾನ." ಅಂದುಕೂಡ್ಲೆ ಒಳಗೆ ಪ್ರವೇಶಿಸಿದ. ಮಾತುಕತೆ ಮುಗಿದ ಮೇಲೆ ತಮ್ಮ ಜಾತಿಯ ರಿವಾಜಿನಂತೆ ತಾಂಡದ ಪೂರ್ವದಲ್ಲಿದ್ದ ಈಚಲ ಹೆಂಡದ ಅಂಗಡಿಗೆ ಹೋಗಿ ಕುಡಿಯ ತೊಡಗಿದರು. ಪಂಪಾ ಯಾವತ್ತು ಬಾರದವ ಬಂದಾನ ಅಂತೇಳಿ ಹಾಸ್ಯ ಮಾಡಲು, "ಏನ್ ಪಂಪಾ ಇವತ್ತು ದಾರಿ ತಪ್ಪಿ ಬಂದಿಯೋ ಹೆಂಗ." ಅಲ್ಲೆ ಕುಂತಿದ್ದ ಜಾಂಬ ಕೇಳಿದ. " ಇಲ್ಲ ಕಣ ಜಂಬಣ್ಣ, ಊರಿಂದ ನಮ್ಮ ಅಳಿಯ ಬಂದಿದ್ದ, ಕುಡಿಸದೆ ಕಳಸೋದಕ್ಕ ಅಂತ." ಮಾತಾಡಿದ. " ಕುಪ್ಪೇನಹಳ್ಳೀ ತಾಂಡ ಬಳ್ಳಾರಿ ಸೀಮೇದು, ಪರವಿಲ್ಲ ನಾಯಕರೆ ಮಳೆ ಬೆಳೆ ಚೆನ್ನಾಗಿದೆಯಾ? ನಮ್ಮದು ಗೆಜ್ಜೆ ಶೆಂಗಾ ಬೆಳೆಯೋದು. ಆದೆ ಇಲ್ಲಿ ಕರಡಿ ಕಾಟ, ಕಾಯಲೇ ಬೇಕು ಇಲ್ಲಂದ್ರ ಹೊಲದಲ್ಲಿ ಕರಡಿಗಳು ಸಾಲುಹಚ್ಚಿ ಮುಗಿಸೇ ಬಿಡ್ತವೆ." ಕೇಳಿದವನಿಗೆ ಸಾಕು ಅನ್ನೊಹಂಗ ಉತ್ರರಿಸಿದ ರಾಮುಡು. ಬಡಯಿ ಕೋರ್ ಡಾವ್ರೋ ತಿಮ್ಮ ಸುಮ್ಮನಿರದೆ, "ನಮ್ಮ ಹುಡಿಗೆ ಒಬ್ಬು ನಿಂತು ಬಿಟ್ಟವಳೆ, ಯಾರಾದರು ಬುಕ್ಕ್ಯಾ ಹುಡುಗಿದ್ರ ಹೇಳಪ್ಪ, ಅತ್ಲಾಗ ಮದುವೆ ಮಾಡಿ ಕೈತೊಳಕೊಳ್ಳೋನು ಅಂದ್ರ ಆಗ್ತಿಲ್ಲ." ತನ್ನದೊಂದು ನಿಲ್ಲಲಾರದ ಮಾತಿನ ಭರಾಟೆಯನ್ನು ತಡಾಯಿಸಿ ಬಿಟ್ಟ. ರಾಮುಡು ನಿಧಾನಕ್ಕೆ ಒಂದು ಮಡಿಕೆಯನ್ನು ಕುಡಿದು. ಉತ್ತರಿಸುವ ಆಲೋಚನೆ ಮಾಡಿದ. ಮಡಿಕೆ ಎತ್ತಿದವನೆ " ತಗೋ ಮಾವ" ಎಂದವನು ಒಂದೇ ಗುಟಕಿಗೆ ಎತ್ತಿದವನು ಇಳಿಸಲಿಲ್ಲ. ಪುನಃ ಡಾವ್ರೋ ಕಡೆ ತಿರುಗಿ, " ಹಾಂ ಅಣ್ಣ, ಈಗ ಹೇಳು, ಆಗಲೆ ಏನೋ."ಮತ್ತೆ ಕೇಳಿದ. ಅವನು ಕುಡಿದಿದ್ದು ನೋಡಿಯೇ ಗಾಬರಿ ಯಾದ ಡಾವ್ರೊ ಬಡಾಯಿ ಕೋರ್ ತಿಮ್ಮನಾಯ್ಕ ಅಂಜುತ್ತಲೆ, "ಏನು ಇಲ್ಲ, ನಮ್ಮ ಮಗಳಿಗೆ ಒಬ್ಬ ಬುಕ್ಕ್ಯಾ ಹುಡುಗ ಬೇಕಿತ್ತು." ಅಂದ. " ಇಲ್ಲಪ್ಪ ನಮ್ಮ ಕಡೆಯ ಪಕ್ಷಿಗಳು ಈ ಊರಿಗೆ ಬರೋದಿಲ್ಲ. ಹಂಗಾಗಿ ನಿಮ್ಮಹುಡಿಗೇರು ನಮ್ಮ ಕಡೆಗೆ ಹೆಂಗ ಹೊಂದ್ಕೋತಾರೆ ಯೋಚನೆ ಮಾಡಿ." ಏನೇನೋ ಮಾತಾಡಿದ. ಇನ್ನೊಂದ ಮಡಿಕೆ ಎತ್ತಿದ ಮೇಲೆ ಮಾತು ಜೋರಾದವು. ಪಂಪಾನಾಯ್ಕ ಅಳಿಯನನ್ನು ಸುದಾರಿಸಿ ವಾಪಾಸು ಒಯ್ಯವುದರಲ್ಲೆ ಸಾಕಾಗಿತ್ತು. ಯಾವಾಗಲೋ ಒಮ್ಮೆ ರುಚಿ ನೋಡುತ್ತಿದ್ದ ಅವನಿಗೆ ನಿಜವಾಗಿರೂ ಸಾಕಾಗಿ ಹೋಗಿತ್ತು. ಡಾವ್ರೋ ತಿಮ್ಮನಾಯ್ಕೆ ಅಷ್ಟಕ್ಕೆ ಬಿಡುವ ಅಸಾಮಿ ಅಲ್ಲ. " ಲೇ ತಮ್ಮ ಕೊಟ್ರೆ, ಅಣ್ಣವರುದೂರದ ಸೀಮೆಯಿಂದ ಬಂದವರೆ, ಒಂದು ಮಡಿಗೆ ನನ್ನ ಲೆಕ್ಕದಾಗ ಕೊಡು." ಅಂಗಡಿಯವನಿಗೆ ಗಂಟು ಬಿದಿದ್ದ. "ಏಯ್, ಸುಮ್ಮನೆ ಹೋಗಪ್ಪ ನಿಂದು ಉದ್ರಿ ಬಾಳ ಆಗ್ಯೆತಿ. ಕೊಡಂಗಿಲ್ಲ." ಅಂದು ಬಿಟ್ಟ. "ಯಾಕಲೆ ಮೈಯಾಗ ಹೆಂಗೈತಿ. ಮುಚ್ಕೊಂಡು ಎರೆಡು ಮಗಿ ಕೊಟ್ಟೆ ಬದುಕ್ತಿ ಇಲ್ಲಂದ್ರ." ಮೈಮೇಲೆ ಏರಿ ಹೋದ. "ಕೊಟ್ರ ದುಡ್ಡ ಸರಿಯಾಗಿ ಕೊಡಂಗಿಲ್ಲ ಕೊಡ್ಲಿಲ್ಲಾಂದ್ರ ದಾಧಗಿರಿ, ಏನು ಮಾತಾಡೋದು ತಿಳಿವಲ್ದಾಗೈತಿ." ಹೆಂಡದಂಗಡಿ ಈಡಿಗರ ಮಂಜ್ಯಾಗೊಣಗುತ್ತ ಕೊಟ್ಟಾಗ ಕೊಡುವಲ್ಲ ಎಂದು

ಎರೆಡು ಮಗಿ ಹೆಂಡ ಕೊಟ್ಟ. "ನೋಡಿದೇನಪ್ಪ ಅಂದಂಗ ನಿನ್ನ ಹೆಸರು ಏನೋ ಐತೆಲ್ಲ." ಭಾರಿ ಗೊತ್ತಿರಿನೋ ಹಾಗೆ ಕೇಳಿದ ಡಾವ್ರೋ ತಿಮ್ಮನಾಯ್ಕ. "ರಾಮುಡು" ಉತ್ತರಿಸಿದ್ದೇ ತಡ, "ಬರೋಬ್ಬರಿ ಬರೋಬ್ಬರಿ ರಾಮುಡು, ಈಗ ತಿಳೀತು ಬಿಡು." ಅಂದವನೆ ಒಂದು ಮಗಿ ಹೆಂಡವನ್ನು ಅವನ ಕೈಗಿಟ್ಟು. "ಹೀಂಗೆ ಕಣಪ್ಪ ಈಮಂದಿ, ಅಲ್ಲ ಈ ತಾಂಡದಾಗ ನಾನೇನು."? ಪ್ರಶ್ನಿಸಿದ. ಅವತ್ತೇ ಸಂಜೆ ಬಂದಿದ್ದ ಅವನಿಗೆ ತಿಳಿಯುವುದಾದರೂ ಹೇಗೆ. " ನೀವು ಕಾರಬಾರಿ," ಅಂದಾಜಿನ ಮೇಲೆ ಹೊಡದ." ಇಲ್ಲ ನಿನಗೆ ಗೊತ್ತಿಲ್ಲಂತ ಕಾಣುತ್ತೆ, ಡಾವ್ರೋ, ಕಾರಬಾರಿಗಿಂತಲು ದೊಡ್ಡ ಸ್ಥಾನ, ನಂದು, ನಾ ನೇನಾರು ಹೇಳಿದರೆ ಹಟ್ಟಿನಾಯ್ಕ ಹೊಯ್ಕೋ ಬೇಕು. ಈ ತಾಂಡಾದಾಗ ನಾನಿಲ್ಲದೆ ಯಾವ ಕಾರ್ಯವೋ ನಡೆಯಂಗಿಲ್ಲ. ಅಂತಾದ್ರಾಗ ಇವ ಯಾವ ಲೆಖ" ಮಾತು ಹೆಚ್ಚಾದವು. ಪಂಪಾನಾಯ್ಕ ಬಾಯಿ ಬಿಟ್ಟರೆ ಕುಡಿದ ಮತ್ತಿನಲ್ಲಿ ಏನಾರು ಅಂದೇ ಬಿಡ್ತಾನ ಅಂತೇಳಿ, ಮೌನವಾಗಿಯೇ ಕೇಳುತ್ತಾ ಕುಳಿತಿದ್ದ. ರಾಮುಡುಗೆ ಕುಡಿಯುವುದು ಬೇಡವೆಂದರೆ ಅವಮಾನ ಎಂದು ಕೊಳ್ಳತೊಡಗಿತು. ಮತ್ತೊಂದು ಕಡೆ ಕುಡಿಯದಿದ್ದರೆ ಈ ಪೀಡೆ ಗೊಮಾಳ ಕೈ ಹಾಕಿ ಕುಡಿಸುತ್ತಾನೆ. ಪರ ಸ್ಥಳ ಪರ ಸಂಕಟವಾಗಿ ಕಾಡಿತ್ತು. ಪಕ್ಕದಲ್ಲೆ ಇಡಿ ನಾಟಕ ಸನ್ನಿವೇಶವನ್ನು ನೋಡುತ್ತಿದ್ದ ಪಂಪಾ ತುಟಿ ಪಿಟಿಕ್ ಅನ್ನಲಿಲ್ಲ. ಆದದ್ದು ಆಗಲಿ ಎಂದು ಮಡಿಕೆ ಎತ್ತಿ ಗುಟಕರಿಸಿದ್ದು ಒಂದೇ. ಡಾವ್ರೋ ತಿಮ್ಮಾ ನಾಯ್ಕನಿಗೆ ಯಾವ ಬಕ್ರಾನು ಸಿಕ್ಕಿರಲಿಲ್ಲ. ತನ್ನ ಹಳೇ ಪುರಾಣದ ಕಂತೆ ಬಿಚ್ಚೋದಕ್ಕೆ ಆರಂಭ ಮಾಡಿದ.

ಡಾವ್ರೋ ತಿಮ್ಮಾನಾಯ್ಕ ಅಂತ ಆಸ್ತಿವಂತನೇನು ಅಲ್ಲ. ಅವನ ಹಿರಿಮಾಗ ಪಕ್ಯಾ ರಂಟೆ ಹಿಡಯೋ ವಯಸ್ಸಿಗೆ ಬಂದಾನಲ್ಲ ಅವನ ರೈತಾಕಿ ಕೆಲಸದ ಜವಾಬ್ದಾರಿಯನ್ನು ಅವನ ಹೆಗಲಿಗೆ ಹೋರಿಸಿ ತಾನು ಮಾತ್ರ ಮೈತೊಳೆದ ಎತ್ತಿನಂತಾಗಿದ್ದ. ಮುಂಜಾನೆ ಗಣಿಯಾನಾಯ್ಕ ದುಖಾನಿನಲ್ಲೋ, ಇಲ್ಲ ಪಿರ್ಯಾ ನಾಯ್ಕನ ದುಖಾನಿನಲ್ಲೊ ದಮ್ಮಂಡಿ ಕೊಟ್ಟು ನಾಕು ವಡೆ ಒಂದುಕಪ್ ಚಾ ಕುಡಿದು ತಮ್ಮ ಪಕ್ಕದ ಹಳ್ಳಿ ಮೊಮ್ಮಿಗೇರಿಗೆ ಹೋಗಿ, ಹಾಗೆ ಯಾರು ಸಿಗ್ತಾರೆ ಅವರ ಹತ್ತಿರ ತಾಂಡದ ಸುದ್ದಿಯನ್ನೆಲ್ಲಾ ಮಾತಾಡೋದು ನಿತ್ಯ ಕಾಯಕ. ಮಮ್ಮಿಗೇರಿ ತಾಂಡದಿಂದ ಒಂದುವರೆ ಕಿಲೋ ಮೀಟರ್ ನಡುಕ ಸಾರಥಿ ಬಟ್ಟರ ಗದ್ದಿದಾಟಿದರೆ, ಮೊಮ್ಮಿಗೇರಿ ತಾಂಡದ ಲಾಮಾಣಿಗಳು ಬಂದೇ ಬಿಟ್ವು, ಕೆಳಗ ಹಳ್ಳ ಇಳಿದು ದಡಕ್ಕೆ ಹತ್ತಿದರೆ ಮೊಮ್ಮಿಗೇರಿ ಪರಿಚೆಯ ಇರಲಿ ಬಿಡಲಿ ಒಟ್ಟು ಸುದ್ದಿ ಕೇಳಾಕ ಒಬ್ಬ ಮನುಷ್ಯ ಬೇಕು ಅಷ್ಟೆ. ತಾಂಡದ ದನ ಕರುಗಳು, ಎತ್ತು, ಕುರಿಕೋಳಿಯಿಂದ ಹಿಡಿದು ಅನ್ಯೆತಿಕ ಸಂಬಂಧದ ದೊಡ್ಡ ಪಟ್ಟಿಯೇ ಅವನ ತಳೆಯೊಳಗೆ ಸಿದ್ಧವಾಗಿರುತ್ತಿತ್ತು. " ಅಣ್ಣ ನಮ್ಮ ತಾಂಡದ ಆ ಕಡೆ ಮೂಲೆಯಲ್ಲಿ ಜಿಂಕಾಲಿ ಅದಾಳಲ್ಲ, ಥೇ ಎನ್ ಹೇಳಲಿ ಬಿಡು." ಈ ಜಿಂಕಾಲಿ ಯಾರು ಅಂತ ತಿಳಿಯದೆ ಎದುರು ಮಾತು ಕೇಳುತ್ತಿದ್ದವನು ಪೇಚಾಟಕ್ಕೆ ಸಿಗಾಕಿಕೊಂಡಂತೆ ಚಟಪಡಿಸುತ್ತಿದ್ದ. " ಅದೇ ಆ ಡಿಬರನ ಹೆಂಡತಿ." ಮತ್ತೊಂದು ಹುಳ ಬಿಟ್ಟಿದ್ದ. ಡಿಬರ ಯಾರು ಜಿಂಕಾಲಿ ಯಾರು ಒಂದೂ ತಲೆಬುಡ ಅರ್ಥವಾಗದೆ ಮೊಮ್ಮಿಗೇರಿ ಒಡ್ಡರ ಬಸರ ಇನ್ನೂ ಇಲ್ಲ ಅಂದ್ರೆ ಮತ್ತೇನೋ ರಾಮಾಯಣ ತಗೀತಾನ ಇವನು ಅಂದಚನೆ "ಅದೆ ಆ ಕಡೆ ಮೂಲಿಯ ಜಿಂಕಾಲಿ ಗಂಡ ಡಿಬರ." ಒಡ್ಡ ಬಸರ ಪುನರಾವರ್ತಿಸಿದ. "ಬರೋಬರಿ ಅವಳೆ." ತಾಂಡದ ಮಂದಿ ಮಾಹಿತಿ ಐತಿ ಬಸರೆಗೆ ಅಂತ ತಿಳಿಯೋಣ, ತಿಮ್ಮಾನಾಯ್ಕನಿಗೆ ಬಹಳೇ ಖುಷಿಯಾಯ್ತು. ಈ ಮಗನಿಗೆ

ಅವರಬಗ್ಗೆ ತಿಳಿಸಿ ಹೇಳುವ ಪೇಚಾಟ ತಪ್ಪಿತು ಅಂತ ತಿಮ್ಮ ಕತೆ ಆರಂಭಿಸಿದ. " ಏನಾತ ಅವರಿಗೆ ಕಾರಬಾರಿ." ಒಡ್ಡರ ಬಸರ ಕೂತೂಹಲದಿಂದ ಕೇಳಿದ. " ಒಳ್ಳೆ ಕುದುರೆಯಂತೆ ಹೆಣ್ಣು, ಅವನ್ನ ನೋಡಿದ್ರೆ ಒಳ್ಳೆ ಮೇಕಿ ಮರಿಹಂಗವನೆ. ಇನ್ನೇನಾಗುತ್ತ ನಮ್ಮೂರು ಪಕ್ಕ ತಿಪ್ಪಶೆಟ್ಟಿ ಹಳ್ಳಿ ಗುಂಡೆ ಗೌಡರ ಕಣ್ಣ ಬಿತ್ತು. ಒಮ್ಮೆ ಯಾವಾಗ್ಲೋ ಸಂತೆಯಲ್ಲಿ ನೋಡಿದ್ದನಂತೆ. ಮುಗಿತು ಕತೆ, ಯಾರು, ಏನು ಅಂತೇಳಿ ವಿಚಾರಿಸಿ ವಿಷ್ಯವನ್ನೇಲ್ಲಾ ತಗದು ಬರೋ ಹೋಗಾಕ ಶುರು ಮಾಡಿದ." ಬಸರನಿಗೆ ತಲೆ ಹಾಳಾಯ್ತು. " ಲೇ ತಿಮ್ಮಾನಾಯ್ಕ ನಿನ್ನ." ಅಂತ ಓಡಿದ. ತಿಮ್ಮನಾಯ್ಕ ಬೇರೆ ಸುದ್ದಿಗಳನ್ನು ಬಿತ್ತರಿಸೋದಕ್ಕೆ ಮತ್ತೆ ಮುಂದಿನ ಊರಿಗೆ ಹೊರಟ. ಅಲ್ಲಿ ಯಾವ ವಿಷಯವನ್ನು ಹೇಳಲಿ. ಯಾರಾರು ಪರಿಚಿತರು, ಚಹಕುಡಿಸಿದರೆ ಚಾ ಕುಡಿದು. ಬೀಡಿ ಕೊಟ್ಟರೆ ಬೀಡಿ ಸೇದಿ, ಸಂಜೆ ಮನೆಗೆ ಬಂದು, ಅಲ್ಲೆನಾಯಿತು ಅಂತ ಮಗ ಮಗಳಿಂದ ಕೇಳಿ ತಿಳಿದು ಕೊಂಡರೆ ಅವನ ದಿನಚರಿ ಮುಗಿದಂಗೆಯ. ದಿನಕ್ಕೆ ಮೂರೋನಾಕು ಊರು ತಿರುಗಾಡಿ ಆ, ಇ ಸುದ್ದಿ ಮಾತಾಡಿ ರಾತ್ರಿ ಮನೆಗೆ ಬಂದು ಮುದ್ದಿಉಂಡು ಮಲಗಿದರೆ ಮತ್ತೆ ಮುಂಜಾನೆ ಅದೇ ದಂದೆ.

ಹೊತ್ತಾರೆ ಹೋದವರು ಇನ್ನೂ ಬರಲಿವಲ್ಲಾ ಅಂತ ಗಾಬರಿಯಾದ ಗೂಡ್ಲೀರಿ ತಾನೆ ಖುದ್ದಿ ಹೆಂಡದ ಅಂಗಡಿಗೆ ಹೋರಟಳು. ಪಂಪಾನಾಯ್ಕ ಮತ್ತು ರಾಮುಡು ಏಳಬೇಕು ಅಂತ ಏಳಲು ಹೋದರೆ ಬುಜ ಹಿಡುದ ಅದುಮಿದಂತೆ ಅವರ ಮಾತಲ್ಲೆ ಕುಂದ್ರಿಸುತ್ತಿದ್ದ. ಯಾವಾಗ ಗುಡ್ಲೀರಿ ಧ್ವನಿ ಕೇಳಿದಂಗಾತೊ, " ಮತ್ತೆ ಯಾವತ್ತರ ಸಿಗಾನ, ಮಾತಾಡೋದು ಬಹಳ ಐತೆ." ಅಂದವನೆ ಗರಗಪ್ ಆಗಿದ್ದ. " ಏಯ್ ನಿಂಗಾರ ಅಟು ತಿಳಿಯೋದ ಬ್ಯಾಡನ. ಪಾಪ ಯಾವಾಗ ಉಂಡು ಬಂದಿದ್ನೋ ನಮ್ಮಣ್ಣ." ತರಾಟೆಗೆ ತೆಗೆದುಕೊಂಡಳು. "ಆಯ್ಯೋ ಪಾಪ ಭವಾನಿಗ್ಯಾಕಂತಿ ಬಿಡು. ಅದ್ಯಾವನೋ ಬೇವರ್ಸಿ ತಾಂಡದ ಡಾವ್ರೋ ಅಂತ ನೋಡು. ಸಿದಾ ನನ್ನ ಮೆದುಳಿಗೆ ಕೈ ಹಾಕಿ ಹೊರಗ ತಗದ ಬಿಟ್ಟ." ಅಂತೇಳೀ ಪಾರಮಾಡಿದ. "ಯಾರು ತಿಮ್ಮನಾಯ್ಕನೆ, ಎಲ್ಲಿ ಹೋದ ನನ ಹಾಟಗಳ, ಅವನ ಮಕಕ್ಕ ನನ್ನ ಚಪ್ಪಲಿಹಾರ ಹಾಕ, ಇಡಿ ಸೀಮೆ ಎಲ್ಲಾ ಸುತ್ತಾಡಿ ಮಾತಾಡಿದ್ರು, ಮುಗಿವಲ್ಲವು ನೋಡ ಅವನ ಮಾತುಗಳು, ನನ್ನ ಕೈಗೆ ಸಿಗಬೇಕಿತ್ತು. ಅವನ ಹಬ್ಬಾ ಮಾಡ್ತಿದ್ದೆ. ಒಂಚೂರಾನ ತಪ್ಪಿಸಿಕೊಂಡಾನ ಭಾಡಕೋ ನನ ಮಗ." ಹಿಗ್ಗಾಮುಗ್ಗಾ ಜಿವಾನೆ ಜಾಲಾಡಿದಳು. ಅಪರೂಪಕ್ಕೆ ಬಂದ ತನ್ನ ಅಣ್ಣನ್ನೆ ಗೊಳು ಹೊಯ್ಕಂಡಿದ್ದು ಕೇಳಿ ಗುಡ್ಲೀರಿ ಚಂಡಿಯಾಗಿದ್ದಳು.

ರಾಮುಡು ವಾಪಾಸು ಹೊರಟಾಗ ಅವನಮನಸ್ಸಿನೊಳಗೆ ಮಾತ್ರ ತನ್ನ ಸೋದರಳಿಯ ಭಗ್ಯನಾಯ್ಕನಿಗೆ ತನ್ನ ಮಗಳನ್ನು ಕೊಡುವ ಕನಸು ಕಂಡಿದ್ದ. ಆದರೆ ಅವನ ತಂಗಿ ಗುಡ್ಲೀರಿ ಒಪ್ಪಿರಲಿಲ್ಲ ಎಂಬ ಸಂಶಯ ಮನಸ್ಸಿನೊಳಗೆ ಸುಳಿಯುತ್ತಿದ್ದಂತೆ ಮನಸ್ಸಿನೊಳಗಿನ ಬಯಕೆಯನ್ನು ಹೊರ ಹಾಕದೆ ಹೊರಟಿದ್ದ. " ಮತ್ತೆ ಬಾ ಮಾಮ ಎಂದು ಬಾಮಿ, ರೇವಡಿ, ಮಂಗು ಒಂದೇ ಸಮನೆ ಅಂಗಲಾಚಿದರು. ಸಣ್ಣವು, ಸಂಬಂಧ ಅಂದ್ರೆ ಏನೂ ತಿಳಿಯದ ವಯಸ್ಸಿನಲ್ಲಿ ಹೊರಗಿನಿಂದ ಬಂದವರು ಆಟು ಪ್ರೀತಿ ತೋರಿಸಿದಕ್ಕೆ ಇಷ್ಟೊಂದು ಭಾವನಾತ್ಮಕರಾಗಿದ್ದರು. ರಾಮುಡು ಭಾರವಾದ ಮನಸ್ಸಿನಿಂದ ಕುಪ್ಪೇನ ಹಳ್ಳಿಗೆ ಹೊರಟಿದ್ದ. ತನ್ನ ತಂಗಿ ಬೊ ಹಠಮಾಡಿ ಹಿಡಿದ್ದನ್ನು ಸಾಧಿಸಿಯೇ ತೀರುತ್ತಾಳೆ ಎಂಬ ನಂಬಿಕೆ ಅವನಿಗಿತ್ತು. ಆಮ್‌ಗೋತ್ ಕುಲಕ್ಕೆ ಗೌರವ

ತರುವಂತೆ ಬುದುಕಿದ್ದಾಳೆ ಎಂಬ ನೆಮ್ಮದಿಯಿಂದ ಕುಪ್ಪೇನ ಹಳ್ಳಿಗೆ ಹೊರಟಿದ್ದ. ಅವನನ್ನು ದುಂಬಲೂರಿಗೆ ಬಿಡಲು ಇಬ್ಬರು ಗಂಡ ಹೆಂಡತಿ ತಮ್ಮದೆ ಚೆಕ್ಕಡಿ ಬಂಡಿಯಲ್ಲಿ ಹೊರಟರು. ಈಗ ಅವರ ಬಳಿ ಸ್ವಂತ ಎತ್ತುಗಳು ಚೆಕ್ಕಡಿ ಗಾಡಿ, ಅಡವಿಯೊಳಗೆ ಹದಿನೈದು ಎಕರೆ ಜಮೀನು, ಸಾಲದಕ್ಕೆ ಸರ್ವಕಷ್ಟನ ಗದ್ದೆ, ನಾರಾಯಣ ಭಟ್ಟರ ಗದ್ದೆ ಅಂತೇಳಿ ಇಬ್ಬರು ಮೂವರು ಜನರ ಗದ್ದೆಯನ್ನ ಕೋರಿಲೆ ಮಾಡುತ್ತಿದ್ದ. ಈಡಾಗಿ ಮನೆಯ ಮೂಲೆ ಮುಕ್ಕಟ್ಟಿನೊಳಗೆ ಆಹಾರಧಾನ್ಯ ತುಂಬಿ ತುಳಕಾಡತೊಡಗಿತು. ಕೈಯಲ್ಲಿ ಕಾಸು ಆಡ ತೊಡಗಿತ್ತು. ಗುಡ್ಲೇರಿ ಹಿರಿಮಗನ ಸಂಬಂಧ ನೋಡಿ ಬಂದಿದ್ದಳು.

ಕರ್ರಾ ಕುಲದ ಚಾವಳಿ ಬಾಯಿ ಮದುವೆಯಾದಾಗ ಒಂಭತ್ತು ವರ್ಷ. ಇನ್ನೂ ರುತುಮತಿಯಾಗದ ಮಗಳನ್ನು ಅನಿವಾರ್ಯವಾಗಿ ಬಡಕು ಜೇಕುನಾಯ್ಕನಿಗೆ ತನ್ನಮಗಳು ಚಾವಳಿ ಮದುವೆ ಮಾಡಿ ಕೊಡಬೇಕಾಯಿತು. ಮನೆ ತುಂಬ ಮಕ್ಕಳು. ಜೇಕು ನಾಯ್ಕನ ಹೆಂಡತಿ ರಾಮಿಬಾಯಿ ಇದ್ದಕ್ಕಿಂದಗೆ ತೀರಿಕೊಂಡಳು. ಹತ್ತು ಗಂಡು ಎರೆಡು ಹೆಣ್ಣು ಮನೆ ನಡೆಸಲು ಮತ್ತೊಂದು ಮದುವೆಯಾದ. ಚೀಟಿಗೆ ಹುಟ್ಟಿದು ಎರಡು ಕೂಸುಗಳು. ಜಿಮಣೂ, ಹುಸೇನಿ, ಡಾಕು, ರಾಜು, ಬಿಲ್ಲಾ, ಹನುಮ, ಪೋಮಿ, ಡಕಣು, ಜಾತ್ರ್ಯಾ ಪಾತ್ಲು ಮೂರನೆಯವಳು. ಚಾವಳಿ ಎಂಟನೇಯವಳು. ರೂಪ್ಲಿ ಜೇಕುನ ಹಿರಿಯ ಹೆಂಡತಿ ಮಕ್ಕಳು ದೊಡ್ಡವರಾದ ಜಮಣು, ಹುಸೇನಿ ಮದುವೆ ನೋಡಿ ಅದ್ಯಾವ ರೋಗಕ್ಕೆ ಬಲಿಯಾದಳಂತ ಯಾರೊಬ್ಬರಿಗೂ ತಿಳಿಯದ ಕಗ್ಗಂಟಾಗಿತ್ತು. ಪೂಜಾರಿಯಿಂದ ಹಿಡಿದು ಹಿರಿಹೆಂಡತಿ ನಾಟಿ ವೈದ್ಯರವರೆಗೆ ಮತ್ತು ಹತ್ತನೆಯವನಾದ ಪಾರ್ಲುನಾಯ್ಕನವರೆಗೆ ಪ್ರತಿಯೊಬ್ಬರೂ ಬೆರಗಾಗಿದ್ದರು. ತಾಂಡದ ಕಾಕತಾಳಿಯ ಪೂಜಾರಿ ಮೈಒಳಗೆ ಕಾಂಕಾಳಿ ಅವತರಿಸಿ, ಗಾಳಿ ಶಕ, ಏನೂ ಆಗೋದಿಲ್ಲ ಎನ್ನುವ ಹೇಳಿಕೆಯನ್ನು ದಯಪಾಲಿಸಿದ್ದ. ಜೇಕುಗೆ ಯಾವುದೇ ತೊಂದರೆ ಬಂದರೂ ಅವನು ತಾಂಡದ ಪೂಜಾರಿ ಛತ್ರ್ಯಾ ನಾಯ್ಕನಿಗೆ ಮೋರೆ ಹೋಗುತ್ತಿದ್ದ. ತಂದೆ ಇವತ್ತು ಘನ ಸಮಸ್ಯೆ ಅಡ್ಡಾಗೈತಿ, "ವಿನಮ್ರವಾಗಿ ಬೇಡಿಕೆ ಇಟ್ಟಿದ್ದ. ಅಲ್ಲಯವರೆಗೆ ಸುಮ್ಮನೆ ಕುಳತಿದ್ದ. ಪೂಜಾರಿ ಛತ್ರ್ಯಾನಾಯ್ಕ ಆಕಳಿಸುವುದ ಮೈಮುರಿಯುವುದು ಮಾಡುತ್ತಿದ್ದ. "ನೀನು ಬಂಡೆಗಲ್ಲಿನ ಹಾಗೆ ಮೌನಿಯಾದೆಯಾ ತಂದೆ." ಅಂಗಲಾಚಿದ ಜೇಕು. ಇದ್ದಕ್ಕಿದ್ದಂಗೆ ಪವಡಿಸಿದ್ದ ತಾಂಡದ ಆದಿ ದೇವಿ ಮಹಾಂಕಾಳಿ, "ಲೇ. ಮಗನೆ ಮನಿಯೊಳಗ ಅಪರಾಧ ಜರುಗೈತೆ. ತಪ್ಪು ನಡುದೈತೆ, ಹೂಂ ಹೂಂ. . ., ಅದೇನೆಂದರೆ, ಯಾರೋ ಮುಟ್ಟುಚಟ್ಟಿನವರು ನನ್ನ ಪವಿತ್ರವಾದ ಮೂರ್ತಿಯನ್ನು ಮುಟ್ಟಿ ಮೈಲಗೆ ಮಾಡಿದ್ದಾರೆ." ಹೆದರಿಸಿದ. ಅಯ್ಯೋ ನಮ್ಮವ್ವ ನಮ್ಮ ತಾಯಿ ನಾವು ಕರಿತಲೆ ಮನುಷ್ಯರು ನಿನೋ ದಿವ್ಯ ದೃಷ್ಟಿ ಉಳ್ಳಂತವಳು, ಕಂತೆವ್ವ ನೀನೇ ಹಿಂಗ ಹೇಳಿದ್ರೆ ಹೆಂಗೆ, ಏನೋ ಆದದ್ದು ಆಗೈತಿ." ಜೇಕು ಬೇಡಿಕೊಂಡಿದ್ದ. ಆಯ್ತು ಮಗನೆ, ನಿನ್ನ ಅಪರಾಧ ಮನ್ನಿಸಬೇಕಾದರೆ ಒಂದು ಕೋಳಿ ಬಲಿಬೇಕು, ಅದು ನಾಳೆ ಶುಕ್ರವಾರ ಆಗಬೇಕು." ಗಡುವನ್ನು ಸೂಚಿಸಿದ್ದ ಪೂಜಾರಪ್ಪ. ಜೇಕು ಒಪ್ಪಿಕೊಂಡು ಶುಕ್ರವಾರ ಪಾಪ ಪರಿಹಾರ ಮಾಡಿಕೊಂಡು ಮನೆಯವರಿಗೆಲ್ಲ? ಒಂದು ಸಣ್ಣ ಭಾಷಣವನ್ನು ಬಿಗಿದ.

ಅದಾಗಿ ಕೆಲ ತಿಂಗಳಲ್ಲಿ ಜೇಕುನಾಯ್ಕನ ಮಗಳು ಗುಡದ ಬರವಮಾನ ಹಟ್ಟಿಯ ಪಂಪಾನಾಯ್ಕನ ಮಗ ಭಗನ್ಯಾನಾಯ್ಕ ಕೂಡ ಸಂಬಂಧನೂ ಆಯಿತು. ಪಂಪಾನ ಮಗ ಭಗನ್ಯಾನಾಯ್ಕನ ಮದುವೆಗೆ ವಧುವನ್ನು ಹುಡುಕುತ್ತಿರುವಾಗ ಸಣ್ಣಹಟ್ಟಿ ತಾಂಡದ ಬಗ್ಗೆ ಯಾರೊ ಮಾತಾಡಿಕೊಂದ್ದನ್ನು ಕೇಳದ. ಅದನ್ನು ಬಂದು ಗುಡ್ಲೇರಿ ಮುಂದೆ ಹೇಳಲು, ಹಿಂದು ಮುಂದು ನೋಡದೆ ಮಗನಿಗೆ ಲಕ್ಷಣವಾದ ಹುಡುಗಿಯನ್ನು ನೋಡಲು ಏರ್ಪಾಟು ಮಾಡಿದ್ದಳು. ಗುಡನ ಹಟ್ಟಿ ತಾಂಡದ ನಾಯ್ಕ ಭಗನ್ಯಾ ಕೆಲಸ ನೋಡಿ ದಂಗಾಗಿದ್ದ. ಅದಕ್ಕಂತೆ ಚೆಕ್ಕಡಿ ಬಂಡಿ ಏರಿ ಮೊದಲ ಕುಂತಿದ್ದ. "ಚಾಲೋನಿರಾ ಘಣಮೇರೋ ಮಲಕ ಅಜರಾತ ವೇಜಾವಚೆ." (ನಡಿರಲಾ ದೂರದ ಊರು ಹೋಗುವುದರೊಳಗೆ ಸೌರಾತ್ರಿ ಅಗಿಬಿಡುತ್ತ) ಸಲಹೆ ನೀಡಿದ. ಕಾರಬಾರಿ, ಊಂಥಮುಂಡಿ ಥಾನನಾಯ್ಕ, ಡಾವೋ ತಿಮ್ಮನಾಯ್ಕ ಎಲ್ಲರೂ ಹೊರಟು ನಿಂತಿದ್ದರು. ಗುಡ್ಲೇರಿಯ ಬ್ಯೋಯಿಗಳಿಗೆ ಹೆದರಿ ಅರ್ಧಮಂದಿ ಮನಸ್ಸಿಲ್ಲದಿದ್ದರು. ಹೊರಟಿದ್ದರು. ಆ ಗುಡ್ಲೇರಿ ಸಾವಾಸನೆ ಬ್ಯಾಡಪ್ಪ ಆಕಿಮಾತೆತ್ತಿದರೆ "ಓರ ಮುಚ್ಚಿಮ ಮಾರಲೋಯ (ಅವನ ಮೀಸ್ಯಾಗ ನನ್ನ ಹಾಟ ಹೊಯ್ಯ) ಅಂತಾಳೆ. ನಡೀರಿ ಅತ್ಲಗೆ ಕಷ್ಟಾನೋ ಸುಖಾನೋ. ಪಂಪಾನಾಯ್ಕ ದೇವರಂತ ಮನುಷ್ಯ ಅವನಿಗೆ ಬೆಟ್ಟಿ ಕೊಡಕಾದ್ರು ಹೋಗಬೇಕು." ಮೇಗಿನ ಓಣಿಯ ವಿಸಳಾವತ್ ಪಂಗಡದ ಭಯ್ಯತನಾಯ್ಕ ಹೇಳಿದ. ಬಹಳ ಮಂದಿ ಅವನ ಮಾತನ್ನು ಒಪ್ಪಿಕೊಂಡಿದ್ದರು. ಇನ್ನೂ ಕೆಲ ಮಂದಿ ರಾತ್ರಿ ಕಾರೇವು ಮಗುದಿಮೇಲೆ ಹೆಂಡ ಕುಡುದು ಮಕ್ಕೊಂಡು ಬೇಳಗಾ ಮುಂಜಾನೆ ಅಷ್ಟೊತ್ತಿಗೆ ಬಂದರಾತು. ರಾತ್ರಿ ಏನು ನಟ್ಟು ಕಡಿಯಾಕೆ ಹೋಗಂಗಿಲ್ಲಾ, ಅಂತೇಳಿ ಹೆಂಡ ಕುಡಿಯಾಕ ಹೋದ ಮಂದೀನು ಇತ್ತು.

ಸಣ್ಣಟ್ಟಿ ತಾಂಡ ತಲುಪಿದಾಗ ನಿಜವಾಗಿ ಸೌರಾತ್ರಿ. ಬಂಡಿ ಸದ್ದು ಕೇಳಿ ಮಲಗಿದ್ದ ಹುಡುಗಿಯರು ಕಣ್ಣು ತಿಕ್ಕುತ್ತ ಓಡಿಬಂದಿದ್ದರು. " ವೆತಡುರಿಯಾಡಿಚೆ ಥಿಲಿಡಚಕಾಳಿ ಡುರಿಬೆನಚೆ ವಾಂದರಿಸರೀಕ "(ಹುಡುಗನ ತಾಯಿ ಬಾಳ ನಿಧಾನ, ಕೆಲಸಕ್ಕೆ ಬಾರದವಳು ಹುಡುಗಿ ತಂಗಿ ಕೋತಿಯಂತಿದ್ದಾಳೆ,) ಹಾಡಿನೊಳಗೆ ಬೊಯ್ಯ ತೊಡಗಿದ್ದರು. ಈ ಕಡೆಯಿಂದಲೂ ನಾಕಾರು ಹುಡುಗಿಯರು ವಧುವನ್ನು ಅವಳ ತಾಯಿಯನ್ನು ಬೊಯ್ಯುತ್ತಿದ್ದರು. ಆಕಡೆಯಿಂದಲು ಬೋಯ್ಯಗಳ ಸುರಿಮಳೆ ಹರಿದಾಡುತ್ತಿತ್ತು. ಈಗ ಯಾರು ಯಾರನ್ನು ಸುಮ್ಮನಿರಸಬೇಕೆಂದು ದೊಡ್ಡ ಸಮಸ್ಯೆಯಾಗಿತ್ತು. ವರ ಹಟ್ಟಿ ನಾಯಕನ ಮನೆ ಮುಂದೆ ಹೋಗ ಬೇಕಾಗಿರುವುದರಿಂದ ಮೋಳಿ (ಸಿಹಿ) ಹಂಚುವ ಕಾರ್ಯಕ್ರಮವನ್ನು ಊರ ಹಿರಿಯ ಹೆಂಗಸೊಬ್ಬಳು ಪೂರೈಸಿದ ನಂತರ, ವೇತಡು (ವರ) ಲೇರಿಯಾ (ಅವನ ಸಹಚರ) ಸಣ್ಣಟ್ಟಿಯ ತಾಂಡದ ನಾಯಕ ಜಗನೂ ನಾಯ್ಕನ ಮನೆಗೆ ಹೋದರು. ಅಲ್ಲಿಯೆ ಅವರಿಗೆ ಊಟದ ವ್ಯವಸ್ಥೆ ಆಗಿತ್ತು. ಅದಾದ ಮೇಲೆ ವಧುವಿನ ಮನೆ ಅಂಗಳದಲ್ಲಿ ಹಾಕಿದ್ದ ಹಂದರದೊಳಗೆ ರಾತ್ರಿಯ ಕೆಲವು ಕಾರ್ಯಗಳಿಗೆ ಎಲ್ಲರೂ ಸೇರಿಕೊಂಡು ಮುಗಿಸಿದರು.

ಮುಂಜಾನೆ ಹೊತ್ತಾರೆ ಬಂಡಿಗಳು ತಿಂಗಳುಗಟ್ಟಲೆ ನಡೆಯುವ ಸಮಾರಂಭಗಳಿಗೆ ಹುಡಗನೊಬ್ಬನನ್ನೆ ಬಿಟ್ಟು ಎಲ್ಲರೂ ವಾಪಾಸಾದರು. ಬಡಕ ಜೇಕು ನಾಯ್ಕನ ಮನಿಯೊಳಗೆ ಭಗಾನ್ಯಾ ಬುಕ್ಕ್ಯಾ ಕರಮತೋಟ್ ಮತ್ತು ಅವನ ಮಾವ ಮಾತ್ರ ಉಳಕೊಂಡಿದ್ದರು. ಮುಂಗಾರು ಆರಂಭವಾಗುವ ಮುನ್ಸೂಚನೆ ಇದಿದ್ದರಿಂದ ಎಲ್ಲರೂ ವಾಪಾಸಾಗಿದ್ದರು. ಭಗನ್ಯಾಯ್ಕ ನಿಲ್ಲದೆ

ಗುಡ್ಲೀರಿಬಾಯಿಗೆ ಏನೋ ಅರೆಕೊರೆ ಅನಿಸಿತ್ತು. ಹಿರಿಮಗನ್ನ ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸುತ್ತಿದ್ದಳು. ಅವನಿಗೆ ಜ್ವರ ಬಂದಾಗ, ಕೆಮ್ಮಿದಾಗ ಸ್ವತಃ ತನಗೆ ಆದೇಂತ ಅನುಭವವಾಗಿತ್ತು. ಏನೂ ತಿಳಿಯದ ಪಂಪಾನಾಯ್ಕ ವಂಶದ ಕುಡಿ ಭಗನ್ಯಾನನ್ನು ಇಬ್ಬರು ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸಿದ್ದರು. ಎರಡನೇ ಮಗಳು ಹಾಮ್ಲಿಗೂ ಹುಡುಗನ್ನ ನೋಡಿ ಮದುವೆ ಮಾಡುವ ಯೋಚನೆ ಹಿಂದನೆ ಮೂರನೇಯ ಫಕಿರನಾಯ್ಕ. ಮದುವೆಗೆ ತಯಾರಾಗಿದ್ದ ಚಿಕ್ಕವಳು ಚಿಮ್ಲಿ ಬಾಯಿ ಕಡೆಗೆ ಮನೆ ಬಿಟ್ಟು ಹೊರಗೆ ಹೋಗುವ ಆಲೋಚನೆಯ ಮಾಡಿದ್ದರು. ಇದರ ನಡುವೆಯೇ ಊರ ಹಿಂದೆ ಯಾರೋ ಎರೆಡುವರೆ ಎಕರೆ ಜಮೀನು ಮಾರಾಟಕ್ಕೆ ಇಟ್ಟಿದ್ದರು. ಜೀವ ಹೋದರು ಒಂದು ಕಾಸು ಹುಟ್ಟದ ಕಾಲ. ಎಪ್ಪತ್ತೈದು ರೂಪಾಯಿಗೆ ಮಾರಾಟ ನಡೆದಿತ್ತು. ಉಪ್ಪಾರ ಹುಲಪ್ಪವ, ಸಾಬರ ದಿನ್ನಿಸಾಬಿ. ಅಗಸ ಶಿವುಗ, ಉಪ್ಪಾರ ಬಸವರಂತ ಹೇಮಾಹೆಮ್ಮಿಗಳು ಇರುವಾಗ ಲಮಾಣಿಕೇರ್‌ದೇನು ಎದೆಗಾರಿಕೆ. ಆದರು ಬಾಂಬ್ರ ಸರ್ವತಪ್ಪನ ಧೈರ್ಯದ ಮೇಲೆ ತಾನೂಕೂಡು ಒಂದು ಕೈ ನೋಡೆ ಬಿಡೋದು ಅಂತ ನಿಚ್ಚಯಿಸಿದ್ದಳು ಗುಡ್ಲೀರಿ. ಹೊಲ ನಾದಾಪುರದ ಪಂಚಮಸಾಲಿ ಪಂಗಡದ ಎಕೇಶಿಯದಾಗಿತ್ತು. " ಯಾರಾರು ತಗೊಳ್ರಿ ಜಮೀನು ಇರೋದು ಬರಮಾನಟ್ಟಿ ಹಾಸಿಗ್ಯಾಗ. ಅಲ್ಲಿಗಂಟ ಬಂದು ಬೇಸಾಯ ಮಾಡಾಕ ಆಗಲ್ಲ, ಯಾರು ರೋಕಡ ಕೊಡ್ತಾರ ಅವರಿಗೆ ಜಮೀನು ಮಾರಾಟ ಮಾಡ್ತೀನಿ." ಅಂತ ಮಂದಿ ಕಿವಿಗೆ ಸುದ್ದಿ ಬಿಟ್ಟಿದ್ದ. ಕೈಲಾಗದ ಬಡವರು ತಮಗ್ಯಾಕಪ್ಪ ಇದರ ಉಸಾಬರಿ ಇಪ್ಪತ್ತೈದು ಕವಡಿ ಕಾಸಿಲ್ಲ. ಇನ್ನ ಇಪ್ಪತ್ತೈದು ಬೆಳ್ಳಿ ರುಪಾಯಿಗಳನ್ನು ಕೊಡಾಕ ಅದೀತ ಅಂತ ವಿಚಾರ ಮಾಡಿ ಸುಮ್ಮನಾಗಿದ್ದರು. ಕೈತುಂಬ ಕಾಸಿರೋ ದಿನ್ನಿಸಾಬು ಬಿಟ್ಟಾನ? ಒಂದು ವೇಳೆ ಅವನು ಬಿಟ್ಟರು ಉಪ್ಪಾರು ಹುಲಪ್ಪ, ಯಾವಾಗಳು ಬಿಳೆಬಟ್ಟೆಹಾಕ್ಕೊಂಡು ಇದ್ದನಾಕು ಕಾಸಿನಲ್ಲೆ ಸವಕಾರಕಿ ಮಾಡ್ತೀರೋ ಅಗಸರ ಶಿವು ಬಿಟ್ಟಾನ? ಮಂದಿ ಬೇವಿನ ಕಟ್ಟಿಮ್ಯಾಲೆ, ಸೇವಾಬಾಯಿ ಮುಟ್ಟೊ ಎದರಿಗೆ, ಹನುಮಪ್ಪನ ಗುಡಿಮುಂದೆ ಕುಂತು ತಮ್ಮೊಳಗೆ ಚರ್ಚೆ ಸುರು ಹಚ್ಚಿದ್ದರು. ದನದ ದಲ್ಲಾಳಿ ಧರ್ಮರಾಯನಂತು ತಾನೆಎಲ್ಲಾ ನೋಡಿರುವ ಹಾಗೆ , "ಈ ಯಾಪಾರ ಉಪ್ಪಾ ಹುಲುವನಿಗೆ ಮುಗಿತೈತಲೆ , ಬೇಕಾರ ಗುರತ ಮಾಡ್ಕಳ್ರಿ." ಅಂದ. "ಏಯ್, ಬಾಯಿ ಮುಚ್ಕೋ ಹರಡ್ಸೀಕೆ, ನಮ್ಮ ದಿನ್ನಿಸಾಬನ ತಾವೇನು ಕಮ್ಮಿ ದುಡ್ಡ ಐತೇನು? ರೊಕ್ಕದ ಮ್ಯಾಲ ಮಲಗ್ಯಾನ ಜಮೀನು ಅದ್ರ ಅವನಿಗೆ ಅಗೋದು ನೋಡು." ಮರದ ವ್ಯಾಪಾರಿ ಗುಂಗುನಾಯ್ಕ ಹೇಳಿದ. ಯಾರು ಯಾರಿಗೆ ಬೇಕಿದ್ರೋ ಅವರ ಹೆಸರು ಹೆಳುತ್ತಿದ್ರು. ತಾಂಡದ ತುಂಬ ಹೊಲದ ಸುದ್ದಿ ಹಗಲು ರಾತ್ರಿ ಅನ್ನದೆ ದೊಡ್ಡ ಸುದ್ದಿಮಾಡಿತ್ತು. ಯಾರ್‍ಯಾರು ದೊಡ್ಡದಾಗಿ ತಮಗೆ ಅಗುವುದು ಅಂತೇಳೆ ಏನು ಬಡಾಯಿ ಕೊಚ್ಕೊಂಡಿದ್ದರೋ ಅವರ್‍ಯಾರಿಗೂ ಆ ಜಮೀನು ಒಲಿದರಲಿಲ್ಲಾ. ಹೆಣ್ಣು ಹೊನ್ನು ಮಣ್ಣು ಯಾರ ಹಣೆಬರಹದಾಗ ಬರೆದಿರುತ್ತೋ ಅವರಿಗೆ ಮಾತ್ರ ಒಲೆಯುತ್ತ ಅನ್ನೋದನ ಈ ದೇಶದ ಜನ ರಾಮಾಯಣ, ಮಹಾಭಾರತದ ಕಾಲದಿಂದಲೂ ನಂಬಿಕೊಂಡು ಬಂದಾರ. ಅಂತದ್ರೊಳಗ ಯಾರ ಹತ್ತು ರೂಪಾಯಿ ಹೆಚ್ಚು ಅದಾವು ಮುಖ್ಯ ಅಲ್ಲ, ಯಾರು ವ್ಯವಹಾರ ಮಾಡ್ತಾರ ಹೆಂಗ ಮಡ್ತಾರ ಮುಖ್ಯ. ಎಲ್ಲರ ಜಗಳದೊಳಗೆ ನುಗ್ಗಿದ ಗುಡ್ಲೀರಿ ಸಣ್ಣದೊಂದು ರಾಜಕೀಯದ ನಾಟಕ ಆಡಿದಳು. ಅವಳು ಜಮೀನು ಖರಿಧಿಸಿದ್ದನ್ನ ಕೇಳಿ ಜನ ದಂಗಬಡಿದು ಹೋಗಿದ್ದರು. "ನಾವು ಮೀಸೆ ಬೋಳಿಸಕೊಳ್ಳಬೇಕು. ಬಿಡ್ರಪ್ಪ. ಯಕಚ್ಚಿತ್ ಹೆಂಗಸೊಬ್ಬಳು ಹೊಲ ಹಿಡಿತಾಳಂದ್ರೆ ಏನು?

ಅವಳ ಧೈರ್ಯ ಎದೆಗಾರಿಕೆಯ ಮುಂದೆ ನಾವು ತೃಣ ಸಮಾನ" ಎಂದು ಹೇಳಿಕೊಂಡು ಹೆಂಡದ ಅಂಗಡಿಯೊಳಗೆ ಹದಿನೈದು ದಿನ ಗಟ್ಟಲೆ ಗುಡ್ಲೇರಿಯದೇ ಚರ್ಚೆಯಾಗಿತ್ತು.

ಭಗನ್ಯಾನಾಯ್ಕ ದಿಬ್ಬಣ ಮನೆ ಮುಂದೆ ಬರೋದಕ್ಕು ಊರ ಮುಂದೆ ಎರೆಡುವರೆ ಎಕ್ರೆ ಜಮೀನಿನ ಕಾಗದ ಪತ್ರ ಮುಗಿಯೋದಕ್ಕೂ ಸರಿಯಾಗಿತ್ತು. ಮುಂಗಾರು ಮಳೆ ಮುಗಿಲನ್ನೆ ಕತ್ತರಿಸಿ ಭೂಮಿಗೆ ಬೀಳುವ ಹಾಗೆ ಮಂಡಿಯೂರಿ ಹೊಡದಿತ್ತು. ಬಂದ ಬೀಗರಿಗೆ ತಿನಿಸಿ ಉಣಿಸಿ ಕಳಸಿಕೊಟ್ಟ ಮಾರನೇ ದಿನ ಚಾವಳಿ ದೊಡ್ಡವಳಾಗಿದ್ದಳು. ತಾಯಿ ಇಲ್ಲದ ಮಗಳು ಅಂತ ಗುಡ್ಲೇರಿನೇ ದೇಖರಿಕೆ ಮಾಡಿದಳು. ತೌವರ ಮನೆಯಿಂದಲು ಅವಳ ತಂಗಿ ಅಣ್ಣಂದಿರು, ಅವಳಪ್ಪ ಕೊಬ್ಬರಿ ಬೆಲ್ಲ , ಖರ್ಜೂರ ತಗೊಂಡು ಭಂದಿದ್ದರು. ಹದಿನೈದು ದಿನ ಚೆನ್ನಾಗಿಯೇ ತಿನ್ನಿಸಿ ಗಟ್ಟಿಮಾಡಿದರು. ಜೋಳವನ್ನು ಬಿತ್ತುವ ಸಮಯಕ್ಕೆ ಹುಡುಗಿ ಕಾಲ್ಗುಣ ಹೆಂಗೈತೆ ಅಂತ ಕಂಡು ಹಿಡಯೋದಕ್ಕೆ ಚಾವಳಿ ಮೈತೊಳೆದ ಎರೆಡುಮೂರು ದಿನಕ್ಕೆ ಹೊಸ ಹೊಲದಾಗ ಜೋಳ ಬಿತ್ತಲು ಕೂರ್ಗಿ ಸಜ್ಜುಮಾಡಿದರು. ಕೂರ್ಗಿ ಬಟ್ಟಲು, ಅಕ್ಕಡಿ ಹಾಕಾಕ ಸೆಡ್ಡಿಕಟ್ಟಿ ನವ ವಧುವಿನ ಕೈಯನ್ನು ಕೂರ್ಗಿ ಬಟ್ಟಲು ಮೇಲೆ ಇರಿಸಿ ಅವಳ ಗಂಡನೆ ಮೊದಲು ಮೂರು ಸಾಲು ಕೂರ್ಗಿಹೊಡದ. ಅದಾದ ಮೇಲೆ ಗುಡ್ಲೇರಿ ಬೇರೆಯವರಿಗೆ ಬಿತ್ತಾಕ ಹಚ್ಚಿದಳು.

ವಾರಕೆ ದೊಡ್ಡ ಜೋಳ ಸಾಲುಸಾಲಾಗಿ ತೆರೆ ಹೊರಟಿದ್ದವು. ಮೊದಲು ಹೊಲಕ್ಕ ಬಂದಿದ ಪಂಪಾನಾಯ್ಕ ಪ್ರತಿಯೊಂದು ಸಾಲನ್ನು ತೂಗಿ ಅಳೆದು ನೋಡಿ ಮನೆಗೆ ಬಂದು," ನವಲೇರಿ (ನವ ವಧು) ಯ ಕಾಲ್ಗುಣ ಚೆನ್ನಾಗಿದೆ ಹೊಲದಾಗ ದೊಡ್ಡ ಜೋಳ ಒಂದು ಬೀಜ ಈಡು ಇಲ್ಲ. ಒಂದು ಬೀಜ ಅಂಗ್ಲಾನು ಇಲ್ಲದಂಗೆ ಒಂದೆ ಸಮನೆ ಮೊಳಕೆ ಹಾದೈತಿ." ಅಂದ. ಗುಡ್ಲೇರಿಗೆ ತಾನು ನೋಡಬೇಕೆಂಬ ಕುತುಹಲ ಹುಟ್ಟಿತು. ವಾರದಲ್ಲಿಯೇ ದಂಟು ಬಲಿತು ಜೋಳ ಮಣಕಾಲು ಎತ್ತರಕ್ಕೆ ಬೆಳೆದಿತ್ತು ಎಡೆ ಕುಂಟ ಹೊಡದು, ಕಳೆ ತೆಗದು ಹಸನು ಮಾಡುವ ಹೊತ್ತಿಗಾಗಲೆ ಸೊಂಟದೆತ್ತರ ಬೆಳೆದಿತ್ತು.

ಮೊದಲ ಪೀಕಿನಲ್ಲೆ ಚಾವಳಿಯ ಹೊಟ್ಟೆ ಒಳಗೆ ಗರ್ಬನಿಂತಿದ್ದು ಜೋಳೆತೆನೆ ಒಡೆದಾಗ ಹೊರ ಬಿತ್ತು. ಗುಡ್ಲೇರಿ ಪಂಪಾನಾಯ್ಕ ಮನಿ ಮಂದಿಗೆ ಖುಷಿಯೋ ಖುಷಿ. ಅವಳ ಜೋತೆಗೆ ಮುದುವೆಯಾದ ಐದಾರು ಜೋಡಿಗಗಳು ಏನು ಇಲ್ಲ ಎಂದು ಎನ್ನುವಾಗ ಚಾವಳಿ ಗರ್ಭಧರಿಸಿದ್ದಳು. ಜೊಳ ದೊಡ್ಡದಾಗಿ ಆಳೆತ್ತರಬೆಳೆದು ತೆನೆಹೊಂಟು ಹಾಲುಗಾಳು ತುಂಬಿ, ತೆನೆ ಬಾಗಿದಾಗ ಆರು ತಿಂಗಳ ಗರ್ಬಿಣಿ ಒಂದೇ ದಂಟನ್ನ ಹಿಡಿದು ಕೊಯ್ಯತೊಡಗಿದಳು. ಬಯಕೆ ಆರಂಭವಾಗಿತ್ತು. ಹೊಲದಲ್ಲೆ ಇದ್ದ ಹುತ್ತದ ಮಣ್ಣನ್ನು ಉಂಡೆ ಮಾಡಿಕೊಂಡು ತಿನ್ನ ತೊಡಗಿದಳು. ತನ್ನ ವಂಶದ ಕುಡಿಯನ್ನು ಹೊತ್ತ ಸೊಸೆಯನ್ನು ಗುಡ್ಲೇರಿ ಸರಿಯಾಗಿಯೇ ನೋಡಿಕೊಂಡಿದ್ದಳು. ಎರೆಡು ಮೂರು ಸಲ ಕಾಡ ಮಾಡಿ ಕುಡಿಸಿದ್ದಳೂ. ಮೊದಲ ಹೆರಿಗೆ ತೌರು ಮನೆಯವರು ಕೆರೆಯಲು ಚಿಕ್ಕಡಿಯನ್ನು ಕಳುಹಿಸಿದ್ದರು. ಖುದ್ದಾಗಿ ಬಡಕ ಜೇಕು ಮತ್ತು ಅವನ ಮಗ ಹುಸೇನಿ ಬಂದಿದ್ದರು. ಗೊಂಬೆಗಳ ಜೊತೆ ಆಟ ಅಡುವ ವಯಸ್ಸಿಗಾಗಲೆ ಮಗುವನ್ನು ಎತ್ತಿಕೊಂಡು ಅಡಿಸುವ ಅವಸ್ಥೆಯನ್ನು ಚಾವಳಿಗೆ ತಲುಪಿಸಿದ್ದರು. ಇದು ಆ ಕಾಲದ ನಿಯಮವಾಗಿತ್ತು. ಸೊಂಟವೇ ಗಟ್ಟಿಯಾಗಿರುವುದಿಲ್ಲ ಕೂಸನ್ನು ಹೊಟ್ಟೆಯೊಳಗೆ ಇಟ್ಟುಕೊಳ್ಳುತ್ತಿದ್ದರು ಅಂತವರಲ್ಲಿ ಚಾವಳಿನೂ ಒಬ್ಬಳು.

ಒಂಬತ್ತನೆ ತಿಂಗಳಿಗೆ ಪ್ರಸವ ವೇದನೆ ಆರಂಭವಾಗಿತ್ತು. ಮೈಕೈ ಬಲಿಯದ ಹನ್ನೆರೆಡು ವರುಷದ ಚಾವಳಿ ಕಷ್ಟ ಪಟ್ಟು ಸೂಲುಗಿತ್ತಿ ನೆರವಿನಿಂದ ಗಂಡು ಮಗುವನ್ನು ಹಡೆದಿದ್ದಳು. ಬಡಕ ಜೇಕ್ಯಾ " ಏಯ್, ಕಂಚಿನ ತಟ್ಟೆ ಬಾರಿಸೋ, ಮೊಮ್ಮಗ ಹುಟ್ಟಿದ್ದಾನೆ." ಅಂತೇಳಿ ಅವನ ಮಕ್ಕಳಿಗೆ ಹೇಳಿದ ಯಾರೋ ಸಣ್ಣ ಹುಡುಗನ್ನ ಕರಕೊಂಡು ಬಂದು ಕಂಚಿನ ತಾಟು ಕೊಟ್ಟು "ಬಡಕ ಜೇಕು ನಾಯ್ಕನಿಗೆ ಮೊಮ್ಮಗ ಹುಟ್ಯಾನಪ್ಪೊ" ಎಂದು ಕೂಗಿ ತಟ್ಟಿ ಬಾರಿಸುವಂತೆ ಹೇಳಿದ್ದರು. ಹುಡುಗ ಸಣ್ಣಟ್ಟಿ ತಾಂಡದ ಗಲ್ಲಿ ಗಲ್ಲಿಗಳಲ್ಲಿ ಡಂಗೂರ ಹೊಡೆದಿದ್ದ. ಮೊಮ್ಮಗನ ಮಾರಿ ನೋಡಾಕ ಗುಡ್ಲೀರಿ, ಪಂಪಾ ಮತ್ತವನ ಹಿರಿಮಗ ನಸುಕಿನೊಳಗೆ ಬಂಡಿ ಕಟ್ಟಿದ್ದರು. ಇವರು ಹೋಗುವಷ್ಟರಲ್ಲಿ ಸೂರ್ಯ ನೆತ್ತಿಮೇಲೆ ಬಂದಿದ್ದ. ಮದ್ಯಾಹ್ನ ಊಟದ ಸಮಯವಾಗಿದ್ದರಿಂದ ರೂಪ್ಲಿಗೆ ಅವಳ ಹಿರಿ ಅತ್ತಿಗೆಯರ ನೆರವಿನಿಂದ ಬಂದಿದ ಬೀಗರಿಗೆ ಬಿಸಿಬಸಿ ಜೋಳದ ರೊಟ್ಟಿ, ಬೆಳೆ ಕಟ್ಟು, ನೆಂಚಿಕೊಳ್ಳಲು ಒಣಗಿದ ಉಪ್ಪ ಮೀನು ಸುಟ್ಟಿ ಬಡಿಸಿದಳು. ಸೊಂಟದ ಮೇಲೆ ಧೋತ್ರ ನಿಲ್ಲದ ವಯಸ್ಸಿಗಾಗಲೆ ಭಗ್ಯಾನಾಯ್ಕ ತಂದೆಯಾಗಿದ್ದ. ಗುಡ್ಲೀರಿ ಕದರಾಗಂತು ಹಿಡಯುವವರೆ ಇಲ್ಲದಾಗಿತ್ತು. ಅಜ್ಜ, ಅಜ್ಜಿಯಾಗಿದ್ದ ಉಷಿಯೊಳಗೆ ಎಲ್ಲಾನು ಮರೆತ್ತಿದ್ದರು. "ಆರೆರೇ, ಕೋಮರಾಮ, ಥೇಟ್ ಅವರಪ್ಪನ ಹಂಗೆ." ಅಜ್ಜಿ ಗುಡ್ಲೀರಿ ಹೇಳಿದಳು. "ಹೌದು ತೇಟ್ ಅವರಪ್ಪನ ಹಂಗೆ" ಎಂದು ಉಳಿದವರು ಹೇಳಿದರು. ಏನಾದರೂ ಹೇಳಿದರೆ ಅವರ ಮನಸ್ಸಿಗೆ ನೋವಾದೀತು ಅಂತೇಳಿ ಅವನ ಮಾವಂದಿರೆಲ್ಲ ಅವರ ಕಡೆಗೆ ಮಾತಾಡಿದರು. ಸಂಜೆಯಾಗುತ್ತಿದ್ದಂತೆ. ಸೂಲಗಿತ್ತಿಯರು, ತಾಂಡದ ಹಿರಿಕರು ತಮ್ಮ ರಿವಾಜಿನಂತೆ ಒಂದು ಕಡೆ ಬಂದು ಸೇರತೊಡಗಿದರು. ತಂದೆ ಮನೆಯವರು ಹೆಂಡ ಕುಡಿಸುವುದು ವಾಡಿಕೆಯಾಗಿದ್ದರಿಂದ ಭಗನ್ಯಾನಾಯ್ಕ ತಾನೆ ಖುದ್ದಾಗಿ ಹೆಂಡದಂಗಡಿಗೆ ಹೋಗಿ ತನ್ನ ಭಾವ ಮೈದುನರ ಹೆಗಲ ಮೇಲೆ ಮೂರುನಾಕು ಮಡಿಕೆ ಹೆಂಡೆ, ಎರಡುಮಡಿಕೆ ಸರಾಯಿ ತರಸಿದ್ದ. ತಾಂಡದ ನಾಯ್ಕನಿಗೆ ಒಪ್ಪಸಿ ತಮ್ಮ ಪಾಡಿಗೆ ಮಗು ಹುಟ್ಟಿ ಏಳನೇ ದಿನವಾದ್ದರಿಂದ ದವಳಾ ದೊಖಾಯೇರ (ಅಗ್ನಿ ಪೂಜೆ) ಕಾರ್ಯದಲ್ಲಿ ಭಾಗಿಯಾಗಿದ್ದರು. ಮನೆಯ ಹೊರಗೆ ಒಂದು ಸಣ್ಣ ಒಲೆಯನ್ನು ಮಾಡಿ ಅದರೊಳಗೆ ಬೆಂಕಿ ಹಚ್ಚಿ ಬಾಣಂತಿ ಮಹಿಳೆಯರು ಕರೆದುಕೊಂಡು ಬಂದು ಗೋದಿಹಿಟ್ಟಿನಿಂದ ಮಾಡಿರುವ ದೀಪವನ್ನು ಉರಿಯುತ್ತಿರುವದಕ್ಕೆ ಎಡಗಾಲ ಹೆಬ್ಬರೆಳಿನಿಂದ ಏಳುಸಲ ಅಗ್ನಿ ಸ್ಪರ್ಶ ಮಾಡಿಸಿದ ನಂತರ ಕಾಯಿ ಒಡೆದು, ಪೂಜೆಗೆ ಬಂದ ಹುಡುಗರು ಹಿರಿಯರಿಗೆ ಎಡೆಮಾಡಿ, ಹುಗ್ಗಿಯನ್ನು ಕೊಡುವುದುರೊಂದಿಗೆ ಪೂರ್ಣಗೊಳಿಸಿದ್ದರು. ಮುಂಜಾನೆ ಹೊತ್ತಾರೆ ಪೂಜೆ ಮುಗಿಸಿ ವಾಪಾಸು ಮನೆಗೆ ಬಂಡಿ ಕಟ್ಟಿದ್ದರು. " ಹೊರಡುವಾಗ ತಿಂಗಳಿಗೆ ವಾಪಾಸು ಕಳಿಸಿ," (ಹುಡುಗಿ ಕೆಲಸ ಮಾಡಾಕ ಸುರುಮಾಡ್ಲಿ) ಅಂತ, ಗುಡ್ಲೀ ಹೇಳುವದನ್ನು ಮರೆಯಲಿಲ್ಲ. ಬಡಕ ಜೇಕನಾಯ್ಕ "ಏನೋ ತಲೆಯಿಂದಲೆ ಮೋರಿಹಾತ್‌ಲ್ಡೇಡ್ ಆಯ್ಕ ಅಕ್ಕ, ನೀನ ತಾಯಿ ಹಂಗೆ ನೋಡ ಆಟ ನಾವು ಕಳಿಸ್ತೀವಿ ನಾವಾರು ಬಾಣಂತಿಯನ್ನು ಇಟ್ಕೊಂಡು ಏನು ಮಾಡೋನು. ನಾಕನೇ ಸೋಮವಾರಕ್ಕೆ ತಿಂಗಳಾಗುತ್ತಲ, ಕಳಿಸಿ ಬಿಡ್ತೇನಿ. ನಿಮ್ಮ ಮನೆ ವಸ್ತು ನಿಮ್ಮನಿಗೆ ಸೇರಬೇಕು. ನಮ್ಮ ಮನಿಯೊಳಗೆ ಎಸುದಿನಾಂತ ಇದ್ರೇನು." ಮಗಳು ಅಲ್ಲು ಸುಖವಾಗಿ ಇರ್ತಾಳ. ಅನ್ನೊ ನಂಬಿಕೆ ಮೇಲ ತನ್ನ ಮನದಾಳದ ಮಾತನ್ನು ಹೇಳಿದ್ದ. ಮನೆ ತುಂಬ ಮಕ್ಕಳು, ದುಡಿಯವರು ಕಡಿಮೆ ಹೊಲ ಇದ್ದರೇನು ಅಡ್ಡಾದಿಡ್ಡ ಹೊಡೆಯವ ಮಳಗೆ ಜೇಕಿನ ಹುಲ್ಲು, ಹಸಿಮೆಡ್ಡ ಬೆಳೆದು ಬೆಳೆ ಬೆಳಿತಾ ಇರಲಿಲ್ಲ.

ಹೇಳಿದ ಮಾತಿನ ಹಾಗೆ ಬಡಕ ಜೇಕು ನಾಯ್ಕ, ಅವನ ಎರಡನೇ ಹೆಂಡತಿ ಸಾವಿ, ಆರನೇಯಮಗ ಜಾತುನಾಯ್ಕ ಚಾವಲಿ ಕರಕೊಂಡು ಬೆಳಿಗ್ಗೆ ಹೋತಾರ ಗುಡದಹಟ್ಟಿ ತಾಂಡಕ್ಕೆ ಬಂದಿಳಿದರು. "ಅರೆ ಬೆಟಿ ಹಾಮ್ಲಿ ಹುಡುಗ ಕಾಡುದಾರ್‍ಯಾಗ ಬಂದಾನ, ನೂರೆಂಟು ಕ್ಷುದ್ರ ಶಕ್ತಿಗಳ ,ಆಟು ದೃಷ್ಟಿನಾಟ್ಯೆತೆ (ಕೆಂದು ಹಳದಿ ನೀರು) ನಿವಾಳಿಸ ಮೂರುದಾರಿ ಸೇರುವ ಈರಗಲ್ಲಮೇಲೆ ಸುರಿ." ಅಂದವಳೆ ಮಗಳು, ಮಣ್ಣಿನ ಕುಂಡಯದೊಳಗೆ ಇಜ್ಜಲನ್ನು ಪುಡಿಮಾಡಿ ಚಟಕಿ ಅರಿಶಿಣದ ಹಿಟ್ಟನ್ನು ಸೇರಿಸಿ ಕಾಳೋಪಿಳೋ ನೀರನ್ನು ಮಾಡಿ ತಿನ್ನೊ ಎಲೆಯನ್ನು ಒಳಗಿಟ್ಟು ಹುಡುಗನ ಮೇಲೆ ನಿವಾಳೀಸಲು ಬಂದಳು. "ಅಲೆಲೇ ರಾಜಾಮಗ ಮಲಗಿಯಾ ನೋಡು ಅತ್ತೆ ಬಂದವಳೆ." ಹಾಮಿ ಗಲ್ಲ ಮುಟ್ಟಿ ಎಬ್ಬಿಸಿ ನೀರಿನ ಬಟ್ಟಲನ್ನು ಎಡಗೈಯೊಳಗೆ ಹಿಡಿದು ಏಳುಸಾರಿ ನಿವಾಳಿಸಿ ಕರಿಗಲ್ಲ ಮೇಲೆ ಸುರಿಯಲು ಹೊರಟಳು. ಅಗಲೆ ದನಗಳು ಊರಮುಂದಿನ ಚೌಡವ್ವನ ಗುಡಿದಾಟದ್ದವು. "ಲೇ ಹಾಮಿ ಹೌದೇನೆ, ಚಾವಳಿಮತ್ತು ಮಗು ಬಂದಾಳಂತೆ." ಚಮ್ಲಿ ಕುತೂಹಲದಿಂದ ಕೇಳಿದಳು. ಇಬ್ಬರಿಗೂ ಹಾವುಮುಂಗಸಿಯಂತೆ. "ಏನೋ ನಂಗೊತ್ತಿಲ್ಲ. ಮನಿಗೆ ಬಂದು ನೋಡು." ಅಂದವಳೆ ಮುಂದೆ ಹೋದಳು. "ಏನ್ ಉರಿತಿಯೇ, ಲೌಡಿ. ಇನ್ನೇನು ಮನಿಗೆ ಬಂದೇ ಬಿಟ್ಟ ನಾನೆ ನೋಡ್ತೀನಿ" ಅಂದು. "ನಿನೇನು ಹೇಳೋದು ಬೇಕಾಗಿಲ್ಲ. ಹೊಣೆ ಏಯ್, ಕೆಂಪೇರಿ ನಿನ್ನ ಮಾಡ್ತೀನಿ ನೋಡ್." ಅಂದವಳೆ ಕೈಯಾಗಿನ ಬಡಿಗೆಯಿಂದ ದಮದಮ ಎಮ್ಮಿ ಬೆನ್ನ ಮೇಲೆ ಹೇರಿದಳು.

ದನಕರ ಕಟ್ಟಿದ ಮೇಲೆ ಮಟ್ಟುಕತ್ತ ದೀಪ ಹಚ್ಚುವ ತರಾತುರಿಯಲ್ಲಿ ಸೀಮೆಣ್ಣೆ ದೀಪ ಸರಿಮಾಡುತ್ತಿದ್ದರು. ಗುಡ್ಲೀರಿ ಬಾಯಿ ಮನಿಮನಿಗೆ ಹೋಗಿ, "ಲೇ ತಂಗಿ ಸಾಮ್ಕಿ ನಿಮ್ಮವ್ವ ರಾಮಿ ಅದಾಳೇನು. ಪೀರಿ ಅದಾಳೇನು, ಸಾವಿ ಆದಾಳೇನು, ಚಂದ್ರಿ ಅದಾಳೇನು, ಥಾವರಿ ಅದಾಲೇನು. ದರ್ಗಿ ಅದಾಳೇನು," ನಿಂತು ಮನಿ ಮುಂದೆ ಹೆಂಗಸರನ್ನು ಸೇರಿಸಿದಳು. ವಂಶೋದ್ಧಾರಕ ಹುಟ್ಟಿರೋದಕ್ಕೆ ಹತ್ತನೇ ತಲೆಮಾರು ವಿಷದ ಬಳ್ಳಿಯಂತೆ ಹಬ್ಬುತ್ತಿರುವುದಕ್ಕೆ ತಮ್ಮ ವಂಶದ ಸತಿಯಾದ ಗುಜ್ಜಾಸತ್ತಿಗೆ ಒಳಂಗ ಹೇಳಲು ಕರೆಯುತ್ತಿದ್ದಳು. " ಏಯ್, ಗುಡ್ಲೀರಿ, ಹುಡುಗನ ಹೆಸರು ಏನಿಟ್ಟೀರೆ, ಅವನ ಹೆಸರು ಹೇಳಿ ಒಳಂಗ ಹೇಳಬೇಕಲ್ಲ." ತಾಂಡೆಯ ಹಿರಿಯ ಯಜಮಾನಿ ಗುಜ್ಜರಿ ಕೇಳಿದಳು. ಏನು ಹೆಸರು ಯೋಚಿಸುತ್ತಿರುವಾಗಲೆ ಗುಡ್ಲೀರಿ, "ಯಾರೋ ಚಾಂಕ್ಯ ಅಂದ್ರು, ಅದೆ ಸರಿಕಂಡಂಗಾಗಿ ಟಾಂಕ್ಯಾ ಅಂತ ಕರಿ." ಅಂದಳು. ಗುಜ್ಜಾಸತ್ತಿನ ಒಳಂಗಿನಲ್ಲಿ ಟಾಂಕ್ಯ ಬುಕ್ಕ್ಯಾ ಕರಮ್‌ತೋಟ್ ಹೆಸರು ಬಂದಿತ್ತು. ಹೆಂಗಸು ಮಕ್ಕಳೆಲ್ಲಾ ಚಾಂಕ್ಯಾ ಚಾಂಕ್ಯ ಅಂತೇಳಿ ಕರೆದರು. ಪಂಪಾನಾಯ್ಕನಿಗೂ ಕರೆಯಲಿಕ್ಕೆ ಸುಲಭವಾಗಿತ್ತು. ಚಾಂಕ್ಯಾನ ಅಪ್ಪ ಭಗುನ್ಯಾ ಬುಕ್ಕ್ಯಾರ ಕರಮ್‌ತೋಟ್ ಕೂಡ ಖುಷಿಯಿಂದಲೆ ಟಾಂಕ್ಯಾ ಎಂದು ಕರೆದ.

ಹಸೀಮ್ಮೆ ಬಾಣಂತಿ ಚಾವಳಿಗೆ ಮೂರು ತಿಂಗಳೂ ಕೂಡ ತುಂಬಿರಲಿಲ್ಲ, ಗುಡ್ಲೀರಿ ಸೌರಾತ್ರಿ ಐದು ಗಂಟಗೆ ಎಬ್ಬಿಸಿ ರಾಗಿ ಬಿಸೋದಕ್ಕೆ ಹೇಳಿದಳು. ಇಡೀ ರಾತ್ರಿ ನಾಯಿಕುನ್ನಿಹಂಗ ಕೂಂಯಿಗುಡುವ ಮಗು, ಸರಿಯಾಗಿ ನಿದ್ದೆ ಇಲ್ದೆ ಒಂದು ಜಂಪು ನಿದ್ದೆಮಾಡುವ ಅಂತ ಕಣ್ಣು ಮುಚ್ಚುವುದರೊಳಗೆ ಅತ್ತೆ ಎಬ್ಬಿಸಿದ್ದಳು. ಆಗಲೆ ಭಗಾನ್ಯಾಯ್ಕ ಸಗಣಿ ಕಸ ಬಳಿದು ಎರೆಡೂ ಎಮ್ಮಿಗಳ ಕರುಗಳನ್ನು ಬಿಟ್ಟಿದ್ದ. ಇವರ ಕಾಟ ತಾಳಲಾರದೆ ಎಮ್ಮಿಗಳು ಬ್ಯಾಸತ್ತು. " ಥೂ ನಿಮ್ಮ

ಮನಿ ಹಾಳಾಗ, ಒಂದು ತಾಸು ಕಣ್ಣು ಮುಚ್ಚಿ ಮಲಗಕ ಬಿಡುವಲ್ಲಲ್ರ." ಶಾಪ ಹಾಕಿದ್ದಂಗಿತ್ತು. ಒಂದು ಗಿನ್ನ ರಾಗಿ ಬೀಸಿ ಒಲಿಮೇಲೆ ಜೋಳದ ನುಚ್ಚಿಗಿಡಾಕ ಒಲೆ ಬೂದಿ ತೆಗೆದು ಬೆಂಕಿ ಹಚ್ಚಿದ್ದಳು. ಅಷ್ಟರೊಳಗೆನಾದರೂ ಮಗು ಎದ್ದರೆ, ಗುಡ್ಲೀರಿ ಗುಡುಗುತ್ತಿದ್ದರು. ಚಾವಳಿ ಮೇಲೆನೆ. ಈ ಸೂಕ್ಷ್ಮವನ್ನು ಅರಿತಿದ್ದ ಭಗ್ಯಾನಾಯ್ಕ ಅವರ ಉಸಾಬರಿಗೆ ಹೋಗುತ್ತಿರಲಿಲ್ಲ. ಪುಟ್ಟಿ ಹೊತ್ಕೊಂಡು ಬಂದವಳು ಅಂತ ಕರಿಯೋ ನನಮಕ್ಕಳಿಗೆ ನಾನೇನು ಆಂತ ತೋರ್ಸಬೇಕು ಅಂತೇಳಿ ಸಡ್ಡು ಹೊಡದು ದುಡಿಯುತ್ತಿದ್ದಳು ಗುಡ್ಲಿರಿ.

ಕತ್ತಲು ಎನ್ನದೆ ಕಣ್ಣಿಗೆ ಕಾಣದ ಹಾದಿಯನ ಮೂರುವರೆ ನಾಕು ಮೈಲಿ ದೂರದ ದುಂಡೂರಿಗೆ ಹೋಗಿ ಈರುಪಾಕ್ಷಯ್ಯ ಸ್ವಾಮಿ ಹೋಟೆಲ್‌ಗೆ ಹಾಲುಹಾಕಿ ಮಂದಿ ಏಳೋದ್ರಾಗ ಮನೆಯಲ್ಲಿರಬೇಕು ಬಗ್ಯಾನಾಯ್ಕ. ಮತ್ತೆ ಪೂರ್ವದ ಈಚಲಿಗೆ ದನ ಮೇಯುತ್ತಿದ್ದಲ್ಲಿಗೆ ಹೋಗಿ ಒಂದೆರೆಡು ಪುಟ್ಟಿ ಸಗಣಿ ಆರಿಸಿ ತಾಳಿ ಮರದ ದುರುಗವ್ವನ ಗುಡಿಮುಂದಿನ ತಿಪ್ಪೆಗೆ ಹಾಕಿಮನಿಗೆ ಬರಬೇಕು. ಅವನಿಗೆ ಕೆಲಸದ ಮೇಲೆ ಅಷ್ಟೊಂದು ಲಕ್ಷ್ಯ ಇತ್ತು. ಅವ ಖಾಲಿ ಕುಂತಿದ್ದನ್ನು ಮಂದು ನೋಡಿರಲೇ ಇಲ್ಲ. ಹುಡುಗರ ಗುಂಪಿನೊಳಗೆ ಆಟ. ಭಜನಿ, ಮಜ ಎಲ್ಲನೂ ಮಾಡ್ತಿದ್ದ. ಗುಡ್ಲೀರಿ ಯಾವುದನ್ನೂ ಬೇಡಾ ಅಂತಿರಲಿಲ್ಲ. ಮಂದಿ ಜೊತೆಗೆ ಊರು ನಡುಕಿನ ಬೇವಿನ ಕಟ್ಟಿಗೆ ಕುಂತನಂದ್ರ ಕೈಯಾಗ ಹಗ್ಗ ಹೊಸೆಯೋದಕ್ಕೆ ನಾರು ಹಿಡುಕಂಡು ಅವರ ಜೊತೆಗೆ ಮಾತನಾಡುತ್ತಾನೆ ಹಗ್ಗ ಮುಗಿಸು ಬಿಡುತ್ತಿದ್ದ. ನಾತು, ಹಗಡ, ಕಿಲ್ಕಣಿ ಹಿಡಿ ಹಗ್ಗ, ಕುಂಟಿ ಮಿಣಿ, ರಂಟೆ ಮಿಣಿ ಹೇರು ಹೇರುವ ಸೆರಗು ಎಲ್ಲನೂ ಭಾಗನ್ಯಾನಾಯ್ಕನೇ ಹೊಸಿತಿದ್ದ. ಬೇಸಾಯದಲ್ಲೂ ಇಂಥಹದ್ದು ಗೊತ್ತಿಲ್ಲ ಅನ್ನಂಗಿಲ್ಲ. ಅಂಥದೇನಾದ್ರು ಗೊತ್ತಿಲ್ಲಂದ್ರ ಮಂದಿಹತ್ರ ಹೋಗಿ ಚೆಕ್ ಕಲಿತುಕೊಂಡು ಅನುಸರಿಸುತ್ತಿದ್ದ. ಆಟಕ್ಕೆ ನಿಂತ್ರ ಅವನ ಎದುರಾಳಿ ದಂಗಾಗಬೇಕು ಹಂಗ ಆಟ ಆಡುತ್ತಿದ್ದ. ಬದುಕು ಕಟ್ಟುವ ಕ್ರಿಯೆಒಳಗೆ ತೊಡಗಿದ್ದ ಭಗಾಕಾಡ ಒಂದು ಒಳ್ಳೆಯ ಕಲ್ಲು ಸಿಕ್ತು ಮನಿಗೆ ತರ್ತಿದ್ದ. ಮಂದಿ ಕಿಂತಮುಂಚೆ ಎಲ್ಲ ಹೊಲಗಳನ್ನು ಮಗಿಮಾಡಿ ಬರ್ತಿದ್ದ. ನೆಲ ಬಿಸಲಿಗೆ ಒಣಗಿ ಮಳೆಗಾಲದಲ್ಲಿ ಚೆನ್ನಾಗಿ ನೀರು ಕುಡುದು ಮಂದಿ ಹೊಲದಾಗ ಬೆಳೆ ಬಾಡಿದರೂ ಇವನ ಹೊಲದಾಗ ಹಸಿರು ಇರುವನದನ್ನು ಕಂಡು ಮಂದಿ ಹೊಟ್ಟೆಕಿಚ್ಚು ಪಡುತ್ತಿದ್ದರು.

ಯಾರು ಎಷ್ಟು ಬತ್ತ ಬೆಳಿಸಿರುತ್ತಾರೆ ಇವಂದು ಅದ್ರಾಗ ಎರೆಡು ಮೂರು ಚೀಲ ಹೆಚ್ಚಿಗೆ ಇರುತಿದ್ವು. ಸರ್ವತಪ್ಪ ಅದಕ್ಕಾಗಿಯೇ, "ಲೇ ನಿನ್ನಮ್ಮ ಕರಿ ಪ್ರೇತ ಆಟು ಜೀವಕ್ಕೆ ನೆಮ್ಮದಿ ಕೋಡು ಅಂತೇಳಿ. ಬೊಯ್ಯುತ್ತಿದ್ದ ಮತ್ತು ಹಾಸ್ಯ ಮಾಡುತ್ತಿದ್ದರು. ಅಯ್ಯೋ ಸುಮ್ಮನಿರಿ ಬುದ್ದಿ ನಿಮ್ಮ ವಯಸ್ಸಿಗೆ ಬಂದಾಗ ಜೀವಕ್ಕೆ ನೆಮ್ಮದಿ ಸಿಕ್ಕೆ ಸಿಗುತ್ತೆ." ಅಂತೇಳಿ ಅವನ ಬುಡಕ್ಕೆ ಕೊಳ್ಳಿ ಇಟ್ಟಿದ್ದ. "ಲೇ ನಿನ್ನ ಮಕದೊಳಗೆ ಬ್ರಾಂಬ್ರಾವ ಕಳೆಐತಿ ಕಣಲೇ ಮಾತಾಡಿದೆ ಅಂದ್ರ ಎದರಿನವನು ಒಂದು ಗಳಿಗೆ ಯೋಚ್ನೆಮಾಡಿ ಉತ್ರ ಹೇಳಬೇಕು" ಹಿಂಙೆ ಪಳಗು ಮುಂದೆ ದೊಡ್ಡ ಮನಸ್ಯಾ ಆಗ್ತೀಯಾ." ಅಂತಂದು, ಆನೇಕ ರೀತಿಯ ಮಾತಿನ ವರಸೆಗಳನ್ನು ಕಲಸಿದ್ದರು.

ಸರ್ವತಪ್ಪ ತನಗೆ ಸಮಯ ಸಿಕ್ಕಾಗೆಲ್ಲಾ ರಾಮಾಯಣ, ಮಹಾಭಾರತದ ಕತೆಗಳನ್ನು, ಚಾಣುಕ್ಯನ ಕತೆಯನ್ನು, ಪುರಾಣಗಳೊಳಗೆ ಬುರವ ಪಾತ್ರಗಳನ್ನು ಅವನಿಗೆ ಪರಿಚಯಿಸಿದ್ದರು.

ಅವನು ಅಷ್ಟೆ ವಿನಮ್ರ ವಾಸಿ ಆಪ್ತ ಸೇವಕನಂತೆ, ವಯಸ್ಸಿನಲ್ಲಿ ಹಿರಿಕರಾದ ಪರ್ವತಪ್ಪ ಬಟ್ಟರ ಮಾಗಾಣಿಯನ್ನು ಅಚ್ಚುಕಟ್ಟಾಗಿ ಮಾಡಿಕೊಡುತ್ತಿದ್ದ. ಸಾವಿರ ಎಕರೆ ಜಮೀನ್ದಾರ ಶಾನಬೋಗ ಸರ್ವತಪ್ಪ ಭಟ್ಟರಿಗೆ ಉಳದಿದ್ದು ಐದಾರು ಏಕರೆ ಮಾತ್ರ. ಸರ್ವತಪ್ಪ ಭಟ್ಟರ ತಂದೆ ಜಿಂಕಾಲಿ ಶಾನಬೋಗರು ಬ್ರಿಟೀಷರ್ ಕಾಲದಲ್ಲಿ ತೆರಿಗೆ ವಸೂಲಿಮಾಡುತ್ತಿದ್ದರು. ದೊಂಬಲೂರು ಸುತ್ತಲು ಇದ್ದ ಜಕಾತಿಪುರ, ಕುರುಬರಳ್ಳಿ ಸಾಬೂರು, ದಿಂಡೂರು, ದಾವೇನಳಿ ಮುಂತಾದ ಹಳ್ಳಿಮಂದಿ ತೆರಿಗೆ ಕಟ್ಟಾಕ ಆಗದೆ ಬಿಟ್ಟಿದ್ದ ಜಮೀನನ್ನು ತಮ್ಮ ಹೆಸರಿಗೆ ಹಚ್ಚಿಕೊಂಡಿದ್ದರು. ಬ್ರಿಟೀಷರು ಬಳ್ಳಾರಿಯಿಂದ, ದೊಂಬೂರರಲ್ಲಿ ನಡೆಯುವುದನ್ನು ನೋಡಲು ಬರುತ್ತಿರಲಿಲ್ಲ. ವರ್ಷಕ್ಕೆ ಅಷ್ಟೋ ಇಷ್ಟೋ ಕಂದಾಯ ವಸೂಲಿ ಮಾಡಿ ಸಲ್ಲಿಸಿ ಬಂದರೆ ಕೆಲಸ ಮುಗಿಯಿತು. ಊರ ಸುತ್ತಲಿನ ಐನಾತಿ ಗೋಮಾಳ ಜಮೀನು, ಪಾಳು ಭೂಮಿ, ಬೇನಾಮಿ ಜಮೀನನ್ನು ತಾವೆ ತಮ್ಮ ಹೆಸರಿಗೆ ವರ್ಗಾಯಿಸಿಕೊಂಡಿದ್ದರು. ಒಟ್ಟು ಒಂದು ಸಾವಿರ ಎಕರೆ ಜಮೀನು ಭಟ್ಟರದಾಗಿತ್ತು. ಜಿಂಕಾಲಿ ಶಾನಭೋಗರ ಮೊದಲ ಹೆಂಡತಿ ಕೊಂತೆಮ್ಮಗೆ ಆರು ಹುಡುಗಿಯರು. ಜಿಂಕಾಲಿ ತಂದೆ ಸುಬ್ಬಾ ಬಟ್ಟರು ಸಾಯುವ ಮುಂಚೆ ಗಂಗಾಜಲ ಬಿಡುವಾಗ ಜಿಂಖಾಲಿಯಿಂದ ಮಾತು ತೆಗೆದುಕೊಂಡಿದ್ದರು. "ಮಗ ಜಿಂಕಾಲಿ ನಿನಗೆ ಸಂಸ್ಕೃತಿ ಗೊತ್ತು ನಾ ಪುತ್ರ ಗರ್ತಿನಾಸ್ತಿ." ಅಂತೇಳಿ. "ನೀನು ಎಷ್ಟಾದರೂ ಮದುವೆಯಾಗು, ಸುಬ್ಬಾಭಟ್ಟನ ವಂಶವನ್ನು ಮಾತ್ರ ಬೆಳೆಸು, ಬೆಳಸ್ತೀನಿ ಅಂತ ಮಾತು ಕೊಟ್ರೆ ನಾನು ನೆಮ್ಮದಿಯಿಂದ ಕಣ್ಣು ಮುಚ್ಚುತ್ತೇನೆ." ಅಂದಾ, ಜಿಂಕಾಲಿಯ ಬೇರೆ ದಾರಿ ಇಲ್ಲದೆ ಆಯಿತಪ್ಪ ಮಾತು ನಡುಸ್ತೀನಿ ಅಂತ ಮಾತು ಕೊಟ್ಟಾಗ ಮುದುಕ ಕಣ್ಣು ಮುಚ್ಚಿದ. ನಂತರ ಜಿಂಕಾಲಿಯ ಕೇಡು ಕಾಲ ಸುರವಾಯತ್ತು.

ಜಿಂಕಾಲಿ ಶಾನುಭೋಗರ ಎರಡನೇ ಹಂಡತಿಗೆ ಮಗಳು ಹುಟ್ಟಿದಳು. ಸಿಟ್ಟಿಗೆದ್ದ ಜಿಂಕಾಲಿ ಎರಡನೇ ಹೆಂಡತಿ ತಂಗಿಯನ್ನೇ ಮದುವೆಯಾದರು. ಅವನ ತಾಯಿ ಅಲುಮೇಲಮ್ಮ ಕಂಡ ಕಂಡ ದೇವರಿಗೆ ಹರಕೆ ಹೊತ್ತು ಪೂಜೆ ಪುನಸ್ಕಾರ ಮಾಡಿದ ಫಲವಾಗಿ ಮೂರನೇಯ ಹೆಂಡತಿ ಸರ್ರೋಜಮ್ಮಗೆ ಗಂಟು ಹುಟ್ಟಿತು. ಇವನೆ ಸರ್ವತಪ್ಪ, ಆಗೇನು ಆಪರೇಷನ್ ಇಲ್ಲ ಏನಿಲ್ಲ ವರ್ಷಒಪ್ಪತ್ತಿಗೊಂದು ಕೂಸು ಹುಟ್ಟುತ್ತಲೆ ಇದ್ದವು. ಹಾಗೆ ಕಾಯಿಲೆಗಳು ಇದ್ದವು. ಪ್ಲೆಗು, ದಡಾರ ಮೈಲಿ ನೂರೆಂಟು ಖಾಯಿಲೆಗಳು. ಕೆಲವು ಜ್ವರ ಬಂದವೆಂದರೆ ಸಾವೇ ಗತಿ. ಹಾಗೆ ಹೀಗೆ ಸತ್ತು ಬದುಕಿದ ಒಂದಿಷ್ಟು ಮಕ್ಕಳು ಉಳಿತ್ತಿದ್ದವು. ಬ್ರಿಟೀಷರ ಕಾಲದಲ್ಲಿ ಶೂದ್ರರು ಅಲ್ಪಸ್ವಲ್ಪ ಜಮೀನಿನ ಹಿಡುವಳಿ ದಾರರು, ಜಮೀನು ಮಾಲಿಕನಿಗೆ ಮುಕ್ಕಾಲು ಕೊಟ್ಟು ಕಾಲು ಭಾಗದೊಂದಿಗೆ ಸಾಲಭಾದೆಯನ್ನೂ ಅನುಭವಿಸುತ್ತಿದ್ದರು. ಗಾಂಧೀಜಿ ಹೋರಾಟದಿಂದಾಗಿ ಬ್ರಿಟೀಷರು 1947ಕ್ಕೆ ಜಾಗ ಖಾಲಿ ಮಾಡಿದಾಗ ಬ್ರಿಟೀಷ್ ಪರವಾಗಿದ್ದವರಿಗೆ ದೊಡ್ಡ ಸೋಲಾಯಿತು. ಸ್ವಾಂತಂತ್ರ್ಯ ಬಂದ ಹುರುಪಿನಲ್ಲಿ ಎಷ್ಟೋ ವರ್ಷಗಳಿಂದ ಉಳುತ್ತಾ ಬಂದಿದ್ದ ತಮ್ಮದೆ ಭೂಮಿಯನ್ನು ಶಾನಬೋಗರ ಹಿಡಿತದಲ್ಲಿದ್ದವುಗಳನ್ನು ಕರ್ನಾಟಕದ ಲಿಂಗಾಯಿತರು, ಕುರುಬಜನಾಂಗದವರು, ಒಕ್ಕಲಿಗರು ತಾವೇ ಮಾಲೀಕರೆಂದು ಘೋಷಿಸಿಕೊಂಡರು. ಆಗ ಜಿಂಕಾಲಿ ವಶದಲ್ಲಿದ್ದ ಸುಮಾರು ಸಾವಿರ ಎಕರೆ ಜಮೀನಿನಲ್ಲಿ ಐದುನೂರು ಎಕರೆ ಮಾತ್ರ ಉಳಿದಿತ್ತು. ಉಳಿದ ಐದುನೂರು ಹಿಂದಿದ್ದ ನೀಯತ್ತಿನ ರೈತರು ಸ್ವಾತಂತ್ರ್ಯ ಸಿಕ್ಕ ನಂತರ ಸಾಮಾನ್ಯವಾಗಿ ಬದಲಾಗಿದ್ದರು. ಆಗ ಶಾನಭೋಗರ ಕೈಯಲ್ಲಿ ಅಧಿಕಾರ ಇತ್ತು. ಮಂದಿಯೂ ಶಾನಭೋಗ ಹೇಳಿದಂತೆ ಕೇಳುತ್ತಿದ್ದರು.

ಯಾವಾಗ ನೆಹರು ಪ್ರಧಾನ ಮಂತ್ರಿಯಾದರೋ ಭಾರತ ದೇಶ ಬದಲಾವಣೆಯಾಗಿತ್ತು. ಹಾಗಾಗಿ ರೈತಾಪಿ ಮಂದಿ ಸಾವುಕಾರರ ಜಮೀನು ಮಾಡುದನ್ನು ಬಿಟ್ಟರು. ಜಿಂಕಾಲಿಯವರು ಐನಾತಿ ಎರಿಜಮೀನಿನಲ್ಲಿ ಗರಿಕೆ ಹುಲ್ಲು ಹಸನಾಗಿ ಬೆಳೆದಿತ್ತು. ಅಲ್ಲಿ ಇಲ್ಲಿ ಭೂಮಿ ಇಲ್ಲದ ಮಾದರ ಚಂದ್ರ, ತಳವಾರ ಕುಂಟೀರ, ಚೂರುಪಾರು ಬೆಳೆದಿದ್ರಲ್ಲೆ ಲೆಕ ಮರೆಮಾಚುತ್ತಿದ್ದರು. ಹಾಗಾಗಿ ಜಿಂಕಾಲಿ ಅನಿವಾರ್ಯವಾಗಿ ಹೆಣ್ಣು ಮಕ್ಕಳವೆಗಂತ ಮದುವೆ ಅರ್ದಜಮೀನನ್ನ ಪಂಚಮಶಾಲಿ ದರೂರು ಸಾವುಕಾರ ನಾಗಪ್ಪನಿಗೆ ಇನ್ನೂರ ಎಕರೆ ಒಂದೇ ಸೀಮೆಯ ಜಮೀನು ಮಾರಿದ್ದ ಜಿಂಕಾಲಿ ಶಾನುಭೋಗ ಈ ಎಲ್ಲಾ ತಾಪತ್ರೆಯ ನೋಡಿ ಎದೆ ನೋವಿನ ಬ್ಯಾನಿ ಬಂದು ಸತ್ತ. ಅವರ ಒಬ್ಬನೇ ಮಗ ಸರ್ವತಪ್ಪ ಭಟ್ಟ, ಹೊಸ ಗಾಳಿಗೆ ಮೈಬಿಚ್ಚಿ ಹಾರಾಡಲು ಸಿದ್ಧನಾದ. ಜಿಂಕಾಲಿಯ ಬಂಗಲೆ ಅಂತೇಳಿ ಪ್ರಸಿದ್ಧವಾಗಿದ್ದ ಜಾಗದಾಗ ಇಸ್ಪೀಟು ಆಟದ ಕ್ಲಬ್ ಆರಂಭಿಸಿದ. ಆಟದೊಳಗೆ ಮುಳುಗಿ ಉಳಿದಿದ್ದು ಮುನ್ನೂರು ಎಕರೆಯಲ್ಲಿ ಇನ್ನೂರ ತೊಂಬತ್ತು ಎಕರೆ ಕೈ ಬಿಟ್ಟಿದ್ದು ಗೊತ್ತಾಗಲಿಲ್ಲ. ಬಾಕಿ ಉಳಿದದ್ದು ಬರಿ ಹತ್ತು ಎಕರೆ. ಅದು ಉಳೀದಿದ್ದು ಹೇಗೆಂದರೆ, ಜಿಂಕಾಲಿ ತನ್ನ ಹೆಂಡತಿ ಹೆಸರಿಗೆ ದಾನ ಪತ್ರ ಮಾಡಿದಕ್ಕೆ. ಭೂಮಿ ಮಾರಾಟಕ್ಕೆ ಬರೋಲ್ಲ ಎಂದು ತಿಳಿದ ಸರ್ವತಪ್ಪ ಸುಮ್ಮನಾಗಿದ್ದ. ಈಗ ಭಗ್ಯಾ ನಿಯತ್ತಿಲೆ ದುಡಿದು ಭತ್ತ ತಂದು ಸುರಿತ್ತಿದ್ದ. ಅದರಲ್ಲೆ ಮಕ್ಕಳನ್ನು ದಾರಿಗೆ ಹಚ್ಚುತ್ತಿದ್ದ. ಹಾಗಾಗಿ ಭಗ್ಯಾನ ಮೇಲೆ ಸರ್ವತಪ್ಪನಿಗೆ ಎಲ್ಲಿದ್ದ ಅಕ್ಕರೆ. ಅವರ ಮನೆ ಅಂಜನೇಯ ದೇವಸ್ಥಾನದ ಮುಂದಿತ್ತು. ಇವನು ಹೋದಾಗಲೆಲ್ಲ ಹೊರಗಿನ ಕಟ್ಟೆಯ ಮೂಲೆ ಯೊಳಗೆ ಸರ್ವತಪ್ಪನ ಹೆಂಡತಿ ಜಾನಕಮ್ಮ ಅಕ್ಕಿ ಅನ್ನ, ಸಾರು, ತುಪ್ಪ, ಉಪ್ಪೊಇನ ಕಾಯಿ ಹಾಕಿ ಕೊಡುತ್ತಿದ್ದರು. ವರ್ಷದೊಳಗೆ ಉಗಾದಿ ಹಬ್ಬಕ್ಕೆ, ದಿಪಾವಳಿ ಎಡೆಗ, ನಾಗಪಂಚಮಿ ಹಬ್ಬಗಳಂದು ಮಾತ್ರ ಅಕ್ಕಿತಂದು ಹಬ್ಬ ಮಾಡುತ್ತಿದ್ದರು. ಅಷ್ಟೆಲ್ಲಾ ಭತ್ತ ಬೆಳದರು ಅವರ ಪಾಲಗಿಎ ಬಂದಿದ್ದನ್ನು ಮಾರುತ್ತಿದ್ದರು. ನವಣಕ್ಕೆ , ಸಾವಕ್ಕಿ, ಬೈಬ್ರೀಡ್ ಜೋಳದ ನುಚ್ಚು, ರಾಗಿ ರೊಟ್ಟಿ, ಜೋಳದ ರೊಟ್ಟಿ, ಇದೆ ಅವರ ಆಹಾರವಾಗಿತ್ತು. ಭಗ್ಯಾನಾಯ್ಕ ಮನಿಗೆ ಬಂದು " ಎನ್ ಅಡಿಗೆ ಮಾಡ್ತೀರಿ ಹೋಗ್ರಿ, ಜಾನಕಮ್ಮನ ಅಡಿಗೆ ರುಚಿ ನೋಡ್ರಿ, ಆಗ ರುಚಿಕಟ್ಟಿನ ಅಡಿಗೆ ಅಂದೆ ಹೆಂಗ ಅಂತ ತಿಳಿಯುತ್ತ." ಒಂದು ಸಣ್ಣ ಭಾಷಣವನ್ನೇ ಮಾಡುತ್ತಿದ್ದ. ಉಪ್ಪು ಇದ್ರೆ ಹುಳಿ ಇಲ್ಲ, ಹುಳಿ ಇದ್ರೆ ಖಾರ ಇಲ್ಲ ಅನ್ನೊ ಪರಿಸ್ಥಿತಿ ಮನೆಯೊಳಗೆ ರುಚಿಯಾದದ್ದನ್ನು ಮಾಡಿ ಹಾಕಲು ಸಾಧ್ಯವಾದೀತೆ.? ಅವರಿವರ ಮನೆಯೊಳಗೆ ಒಂದು ಒಂಟಿ ಮೆಣಸಿನಕಾಯಿ ಕೈಗಡ ತಂದು, ಒಂದು ಲೋಟ ಉಪ್ಪು ತಂದು ಜೀವನ ನಡೆಸೊ ಲಾಮಾಣೇರು ಎಲ್ಲಿ? ತುಪ್ಪದಲ್ಲೆ ಉಂಡು ಕೈ ತೊಳೆವ ಸರ್ವತಪ್ಪ ಎಲ್ಲಿ? ಬಿಡುವಿನ ವೇಳೆಯಲ್ಲಿ ಭಗ್ಯಾ ಹೆಂಡತಿಯನ್ನು ಕರೆದುಕೊಂಡು ತಾಂಡದ ಮುಂದಿನ ಕಾಡಿಗೆ ಹೋಗಿ, ಕಟ್ಟಿಗೆ ಕಡಿದು ದೆವ್ವದಂತ ಹೊರೆಯನ್ನು ಹೆಣ್ತಿಮೇಲೊಂದು ಹೊರಿಸಿ ತಾನೊಂದು ಹೊತ್ಕೊಂಡು ಬಂದು. ಅವನ್ನೇ ನಾಕೈದು ಮಾಡಿ ಇಬ್ಬರು ತಂಗಿಯರು ತಮ್ಮನಿಗೆ ಬೇರೆ ಬೇರೆ ಮಾಡಿ, ಐದು ಹೊರೆಗಳನ್ನು ಮಾಡಿ ಮಾರಾಟಕ್ಕೆ ಪಕ್ಕದ ಕನ್ನಡ ಮಂದಿ ಇರೋ ಊರಿಗೆ ಹೋಗುತ್ತಿದ್ದ. "ಕಟಿಗೆ ಬೇಕ್ರೇನವ್ವಾ." ಅಂತ ಕೂಗಿಕೂಗಿ ಸಾಕಾಗಿ ಹೋದಮೇಲೆ ಸೇರುಕಾಳಿಗೋ, ಇಲ್ಲಾ ಅಚ್ಚೇರಿಗೆ ಒಂದೊಂದು ಹೊರೆಯನ್ನು ಹಾಕಿ ಗಿದ್ನಜೋಳ ತಂಗೊಂಡು ಮನಿಗೆ ಬಂದು ಬೀಸಿ ಅಡುಗೆ ಮಾಡಬೇಕಿತ್ತು. ಒಮ್ಮೊಮ್ಮೆ ಅವರ ಬೇಳೆ ಬೇಳೀತು ಅಂದ್ರ ಮನೆತುಂಬ ಕಾಳಿರುತ್ತಿತ್ತು. ಆದ್ರೂ ಎಲ್ಲಾದೂ ಆದರಲ್ಲೆ ಆಗಬೇಕಿತ್ತು.

ಸಂತಿ ಖರ್ಚು, ಬಟ್ಟಬರೆ, ಹಬ್ಬ ಹರಿದಿನ ಎಲ್ಲಾನು ಆದರೆ ಮೇಲೆ ನಡೆಯಬೇಕು. ಹಗಾಗಿ ಒಮ್ಮೊಮ್ಮೆ ಕೂಲಿ, ಒಮ್ಮೊಮ್ಮೆ ಬಾಡಿಗೆ ಗಳೇವು ಒಮ್ಮೊಮ್ಮೆ ಕಾಡಿಂದ ಕವಳಿಕಾರಿ ಬಾರಿ ಡಿಕಾಂಬಲಿ ಹಣ್ಣುಗಳನ್ನು ಹರ್ರ್ಕೊಂಡು ಪುಟ್ಟಿ ತುಂಬಕೊಂಡು ಮಾರಿ ದಮ್ಮಡಿಗೆ ಅಣಿ, ಚಿಲ್ಲರಿಗೆ ಚಿಲ್ಲರೆ ಸೇರಿಸಬೇಕಿತ್ತು. ಗುಡ್ಲೇರಿ ಯಾರನ್ನೂ ಕುಂತು ತಿನ್ನಾಕ ಬಿಡ್ತಿರಲಿಲ್ಲ. ಚಾವಳಿ ಮಾತ್ರ ಕತ್ತೆಯಂಗೆ ಅಡಿಗೆ ಮನೆ ಬಿಸೋದು ಕುಟ್ಟೋದರಿಂದ ಹಿಡಿದು ಕಳೆ ಬಿತ್ತೋದು ಕೋಯ್ಲು ಮಾಡೋದರಿಂದ ಎಲ್ಲ ಕೆಲಸವನ್ನೂ ಮಾಡಲೇ ಬೇಕಿತ್ತು. ಜೊತೆಗೆ ಮಲಿ ಉಣ್ಣುವ ಮಕ್ಕಳು. ವರ್ಷ ಎರೆಡು ವರ್ಷಕ್ಕೊಂದರಂತೆ ಮಕ್ಕಳಾದವು. ದೊಡ್ಡ ಮಗ ಟಾಂಕ್ಯಾನ ಆರೋಗ್ಯ ಅಷ್ಟೊಂದು ಚೆನ್ನಾಗಿರಲಿಲ್ಲ. ಆವಾಗವಾಗ ವಾಂತಿ ಬೇಧಿ ಜ್ವರದಿಂದ ಬಳಲುತ್ತಿದ್ದ. ಅವನನ್ನು ದವಾಖಾಸಿನೆ ತೋರಿಸಿ ಸಾಕಾಗಿ ಹೊಗಿತ್ತು. ಬುದ್ದೀನು ಅಷ್ಟೇನು ಚುರುಕಾಗಿರಲಿಲ್ಲ. ಹಾಗೆ ಪೆದ್ದುಪೆದ್ದಾಗಿ ಆರು ವರ್ಷದ ಮಗನಾದಾಗ ಕೆರೆ ಏರಿಯ ಕೋಡಿ ಪಕ್ಕದ ದಿಟನಾಳ ತಾಂಡಾದಲ್ಲಿ ಸರ್ಕಾದವರು ಒಂದು ಶಾಲೆ ಅಂತ ಆರಂಭ ಮಾಡಿದರು. ಐದು ಹಳ್ಳಿ ನಡುವಿರುವ ಗುಡಿದ ಹಟ್ಟಿ ತಾಂಡದೊಳಗೆ ಆಗದ ಶಾಲೆ ಅದೆಂಗ ಅಲ್ಲಿ ಆಯಿತೋ ಯಾರಿಗೂ ಗೊತ್ತಿಲ್ಲ. ಕಡಬಗೇರಿ ಶಾಂತಪ್ಪ ಮಾಸ್ತರ್ ತಾವ ಭಗ್ಯನಾಯ್ಕನೆ ಖುದ್ದಾಗಿ ಹೋದ. "ಏನಲೆ ಭಗನ್ಯ, ಇಪ್ಪಟ್ಟು ಯಾರ್ನ ಕರಕೊಂಡು ಬಂದೆಪ್ಪ." ಮಾಸ್ತರ್ ಕೇಳಿದ. "ನನ್ನ ದೊಡ್ಡ ಮಗ ಸಾ, ಅವನಾರ ನಾಕು ಆಕ್ಷರ ಕಲೀಲಿ ಅಂತೇಳಿ ಕರಕೊಂಡು ಬಂದೀನಿ." ವಿನಮ್ರವಾಗಿ ಹೇಳಿದ. " ಹೂಂ ಯಾ ತಾರೀಖಿಗೆ ಹುಟ್ಟ್ಯಾನ, ಯಾವ ದಿನ, ಯಾವ ಘಳಿಗೆ ನಕ್ಷತ್ರದಾಗ ಹುಟ್ಟಿದ." ಮಾಸ್ತರ ಕೇಳಿದ. ಇದನ್ನು ಕೇಳಿದ ಭಾಗ್ಯನ್ಯಾ ದಂಗಾದ, ಬ್ರಾಹ್ಮಣರ ಒಡನಾಟದಿಂದ ತಿಥಿ ನಕ್ಷತ್ರದ ಬಗ್ಗೆ ತಿಳಿದಿದ್ದ. ಅದರೆ ಅವನ ಹಿರಿಮಗ ಹುಟ್ಟಿದ ಸಂದರ್ಭದಲ್ಲಿ ಅವುಗಳ ಬಗ್ಗೆ ಅಲೋಚನೆ ಮಾಡಿರಲಿಲ್ಲ. ಅವನನ್ನು ದವಾಖಾನೆಗೆ ತೋರಿಸುವುದಲ್ಲೆ ಸಾಕು ಬೇಕಾಗಿತ್ತು. ಇನ್ನ ದಿನ ಘಳಿಗೆ ನಕ್ಷತ್ರ ಯಾರಿಗೆ ನೆನಪಿರಬೇಕು.. " ಅದು, ಯವುದೋ ಅಮವಾಸ್ಯೆ ಇತ್ತು ಸಾ, ಅದಕ್ಕೆ ವಾರದ ಮುಂಚೆನೊ ನಂತರನೂ ಹುಟ್ಟಿದ್ದ." ತಲೆ ಕೆರೆದುಕೊಂಡು ನಿಂತು. ಶಾಂತಪ್ಪ ಮಾಸ್ತರ ಅನುಮಾನಿಸುತ್ತಲೆ ಕೇಳಿದ. "ಅಲ್ಲಲೆ ಅಮವಾಸ್ಯೆ ಅಂತೀಯ, ಹಿಂದೆ ಮುಂದೆ ಅಂತ ಮತ್ತೊಮ್ಮೆ ಹೇಳ್ತಿ, ನಿಮ್ಮ ಲಾಮಾಣ್ಕೇರು ಬುದ್ದಿನೇ ಆಟು ನೋಡು, ಸರೀಗೆ ಹೇಳು ಅಮವಾಸ್ಯೆ ಮುಂದ ಹಿಂದ." ಕರಾರುವಕ್ಕಾಗಿ ಕೇಳಿದ. "ಅಯ್ಯೊ ಬುದ್ದಿ ಕಾಡಮಂದಿ ನಾವು ಇತ್ತಿತ್ತಾಗ ನಾಡು ಸೇರಿವಿ, ನಮಗೆಲ್ಲ ಹೆಂಗ ತಿಳೀಬೇಕು. ಅಮವಾಸ್ಯೆ ಮುಂದೇನಾರ ಆಗಲಿ ಹಿಂದೆನಾರ ಆಗಲಿ ಯಾವ ಫರಕು ಬೀಳೋದಿಲ್ಲ. ಅಮವಾಸ್ಯ ಮುಂದೆ ಅಂತನ ಹಚ್ಚಿಕೊಳ್ರಿ." ಅಂದಬಿಟ್ಟ. " ಹೋಗ್ಲಿ ಯಾವ ಅಮವಾಸ್ಯೆ ಅನ್ನೋದರ ಗೊತ್ತ. ಐದಾರು ವರ್ಷದಾಗ ಏಸು ಅಮಾವಸ್ಯೆ ಬರ್ತಾವು ಅವಷ್ಟೂ ಪತ್ತೈಹಚ್ಚಿ, ಅದರೊಳಗೆ ಶಾಲಾ ಆರಂಭದ ಮೇ-ಜೂನ್ ತಿಂಗಳ ಅಸುಪಾಸಿನದ್ದು, ಸರಿಯಾಗಿ ಆರು ವರ್ಷ ತುಂಬುವ ಅಮವಾಸ್ಯೆ ಪತ್ತ್ಯೆ ಹಚ್ಚಿ, ಅದರ ಹಿಂದಿನ ದಿನಾಂಕಗಳನ್ನು ನೋಡಿ ಟಾಂಕ್ಯನ ಹುಟ್ಟಿದ ದಿನಾಂಕವನ್ನು ಶಾಂತಪ್ಪ ಮಾಸ್ತರರೆ ಸೃಷ್ಟಿಸಿದರು.

ಎರಡು ದಿನ ಶಾಲೆಗೆ ಹೋದರೆ ಒಂದು ವಾರ ಅಜ್ಜನಕೂಡ ಎತ್ತು ಮೇಯಿಸಾಕ, ಕುರಿಮರಿ, ದನಕರು ಮೇಯಿಸಾಕ ಹೋಗಿ ಬಿಡ್ತಿದ್ದ ಟಾಂಕ್ಯಾನಾಯ್ಕ. ಬಳ್ಳಿ ಅದೆಂಗೋ ಕಲಿತಿದ್ದ. ಭಗ್ಯಾನಾಯ್ಕ ದಿನಾ ಸಂಜೆ ಅ ದಿಂದ ಜ್ಞಾನದ ವರೆಗೆ ಅಕ್ಷರಗಳನ್ನು ಮರಳಿನ ರಾಶಿಮೇಲೆ ಬರೆದು

ತಿದ್ದು ಸ್ವಂತ ಬರಿಯೋದಕ್ಕೆ ಹೇಳುತ್ತಿದ್ದ. ಭೂಪತಿ ಮಗ ಅ ಬರೆದರೆ ಆ ಬಿಡುತ್ತಿದ್ದ. ಸಿಟ್ಟಿಂದ ಕೆಂಡಾಮಂಡಲವಾಗುತ್ತಿದ್ದ. ಭಗ್ಯಾನಾಯ್ಕ ಎಷ್ಟು ಹೊಡದರೂ ಪ್ರಯೋಜನವಾಗದೆ ತಾನೆಮ ಸುಮ್ಮನಾಗಿ ಶಾಲೆಯನ್ನು ಬಿಡಿಸಿ ಕಮತಮಾಡೋಕೆ ಹಚ್ಚಿದ. ಟ್ಯಾಂಕ ಹಿಂದೆ, ಚಿಮಣಿ ಬದಿಯಾ, ರಾಮಿ, ಜೇಮು ಹಾಬು, ಗಮಲಿ ಕೇಮ್ಯಾ ಈರ ಜೋತ ಜಾಂಪ ಒಂದಾದ ಮೇಲೆ ಒಂದರಂತೆ ಹನ್ನೊಂದು ಮಕ್ಕಳು ಹುಟ್ಟಿದರು. ಸರಕಾರ ಜನ ಸಂಖ್ಯೆ ಹೆಚ್ಚಳದ ವೇಗವನ್ನು ಗಮನಸಿ ಏನಾದರೂ ಒಂದು ದಾರಿಯನ್ನು ಕಂಡು ಹಿಡಿಯ ದಿದ್ದರೆ ಭಾತರ ಕೇಳಲ ಜನ ಸಂಖ್ಯೆಯಿಂದ ತುಂಬಿ ಹೋಗುವ ಅನುಮಾನದಿಂದಾಗಿ ಹೆಚ್ಚು ಮಕ್ಕಳಾದವರಿಗೆ ಸಂತಾನ ಹರಣ ಚಿಕಿತ್ಸೆ ಮಾಡುತ್ತಿದ್ದರು. ಆರಂಭಕ್ಕೆ ನೂರು ರುಪಾಯಿ ಅಮಿಷ ತೋರಿಸಿತ್ತು ಸರ್ಕಾರ. ಹೊರಗೆ ಒಳಗೆ ಚಾವಳಿ ಒಬ್ಬಳೆ ದುಡಿಯಬೇಕಿತ್ತು. ಅದು ಅಲ್ಲದೆ ಅವನ ತಾಯಿ ಗರ್ಬಿಣಿಯಾದರೂ ಬಾಣಂತಿಯಾದರೂ ನೋಡುತ್ತಿರಲಿಲ್ಲ. ಈ ಚಿತ್ರ ಹಿಂಸೆ ನೋಡಿ ಭಗನ್ಯಾಯ್ಕ ಹೊನ್ನೊಂದನೆ ಮಗ ಜಂಪಾ ನಂತರ ತಾನೆ ಶಸ್ತ್ರಚಿಕತ್ಸೆ ಮಾಡಿಸಿಕೊಂಡಿದ್ದ.

ನಾಲ್ಕನೇ ಮಗಳು ರಾಮಿ ಹುಟ್ಟಿದಾಗ ಭಗಗ್ಯಾಣ್ಯನ ದೊಡ್ಡ ತಂಗಿ ಹಾಮ್ಲಿಯನ್ನು ತಾವಿದ್ದ ತಾಂಡದಲ್ಲೆ ಬಂದ ಪಂಗಡದ ಸೋಮ್ಲನೆಂಬ ಹುಡಗನ ಸಂಬಂಧಮಾಡಿ ಮದುವೆನೂ ಮಾಡಿಕೊಟ್ಟಿದ್ದರು. ಆಗ ಸ್ವಲ್ಪ ಉಸಿರಾಡಿದ್ದಳು ಚಾವಳಿ. ಆದರೆ ಇವರ ಹನ್ನೊಂದು ಮಕ್ಕಳು ದೊಡ್ಡವರಾಗುತ್ತಿರುವುದನ್ನ ಗಮನಿಸಿ,ಅವನ ಎರಡನೆ ಮಗ ಫಕೀರನ ಬಗ್ಗೆ ಅಲೋಚಿಸಿದಳು. ಎಲ್ಲಾ ಸವಲತ್ತು ಸಿಕ್ಕು ನಾಳೆ ಮಕ್ಕಳು ದುಡುಮೆದಾರರಾದರೆ ಪಕ್ಕೀರನಿಗೆ ಅನ್ಯಾಯ ವಾದೀತು ಅಂತೇಳಿ ಅಲೋಚನೆ ಮಾಡಿ ಚಿಮ್ಲಿ ಬೇಲೆದು ನಿಂತಿದ್ದರು. ಲಕ್ಷ್ಯ ಕೊಡದೆ ಪಕ್ಕೀರನಿಗೆ ಹತ್ತು ಕಿಮೀ. ದೂರದ ಬಾಚೇನ ಹಳ್ಳೀ ತಾಂಡದ ಚಾಹೋತ್ ಪಂಗಡದಿಂದ ಜೀತಿಬಾಯಿಯನ್ನು ಮದುವೆ ಮಾಡಿಕೊಂಡು ಬಂದರು. ಅವರ ಮಳಾಪುರಕ್ಕೆ ಹೋಗಿ ವಾಪಾಸು ಬರುವುದರಲ್ಲಿ ಗುಡ್ಲೀರಿಯ ಮನಸ್ಸಿನೊಳಗೆ ಸವಿರಾರು ಅಲೋಚನೆಗಳು ಬಂದು ಹೋಗಿದ್ದವು. ಅಂತೇಳಿ ಅವಳೇನು ಸುಮ್ಮನಿರಲಿಲ್ಲ. ಆ ಒಂದೇ ವಾರದಲ್ಲಿ ಚಾವಳಿಯ ಜೊತೆಎ ಇಪ್ಪತ್ತಸಲ ಜಗಳ ಕಾದು ಚುಂಚಗಿಂದ ಕಾಲು ಕೈ ಮೇಲೆ ಬರೆಎಳೆದು ಹನ್ನೊಂದು ಮಕ್ಕಳೊಂದಿಗೆ ಸಣ್ಣಟ್ಟಿ ತಾಂಡಕ್ಕೆ ಓಡಿಸಿದ್ದಳು. ಮಗ ಭಗನ್ನಾ ಬಂದ ತಕ್ಷಣ ಹಾಸಿಗೆ ಹಿಡಿದು ಮಲಗಿದಂತೆ ನಾಟಕವಾಡಿದಳು. “ಏನಾತಬೇಕ ಯಾವತ್ತೂ ಹಾಸಿ ಹಡಿಯದಾಕಿ ಇವತ್ತು ಏನಾತು ಏ ಚಿಮ್ಲಿ , ಎಲ್ಲಿ ಹುಡುಗರೆಲ್ಲ ಕಾಣುಸ್ತಿಲ್ಲ.” ಬಾಡಿಗೆ ಬಂಡಿಯಿಂದ ಹಾಗೆ ಬಂದವನೆ ಮಕ್ಕಳಿಲ್ಲದ ನೋಡಿ ಕೇಳಿದ. “ಅಯ್ಯೋ ಆ ರಂಡಿ ಎಲ್ಲಿ ಅದಾಳಪ್ಪ ಹೊತ್ತಾರೆ ಎದ್ದು ಆಟು ಕೆಲಸ ಮಾಡು ಅಂದದಕ್ಕೆ , ಹೊಲಗೆ ಮುದಿಗೂಬೆ, ಬಂದಾಳಲ್ಲ ನಿನ್ನ ಸೊಸಿ ಅವಳಿಗೆ ಹೇಳು ನಾನು ಮಾಡಿಮಾಡಿ ಸತ್ತು ಹೋಗೀನಿ ಅಂದ್ಲು. ಯಾಕವ್ವ ಹಿಂಗೆ ಮಾತಾಡ್ತಿ ಅಂದ್ರ ನನ್ನ ತೊಂಡ್ಲು ಹಿಡಿದು ಹೊಡೆಯಾಕ ಬಂದ್ಲು. ನನ ದೂಕಿ ಕೆಳಗ ಬೀಳಿಸಿ ನಿಮ್ಮ ತಂಗಿನ ಏಳೆದು ಬಿಸಾಕಿದಳು. ನನ್ನ ಸೌತಿ ಅದೇಟು ದಿನದ ವೈರತ್ವ ಇಟ್ಟಿದ್ಲೋ ಮಗ. ಇಲ್ಲಪ್ಪನಾ ಬದಕಾಕಿಲ್ಲ.” ಭಗಾನ್ಯಾ ರಕ್ತ ಕುದಿಯೋಹಂಗೆ ಸತ್ಯಾನ ಬುಡಮೇಲೆ ಮಾಡಿದಳು. ಅವನಿಗೂ ಸತ್ಯ ಗೊತ್ತಾಗಿತ್ತು. ತನ್ನ ಹೆಂಡತಿ ಚಾವಳಿ ಸಣ್ಣಾಕಿ ಇದ್ದಾಗ್ಲೆ ಮನಿಗೆ ಬಂದೋಳು. ಇಪ್ಪತ್ತೆಂಟು ವರ್ಷದಾಗ ಇಪ್ಪತ್ತೆಂಟು ಸಾವಿರ ಅನುಭವ ಪಡೆದಳು. ಅವಳು ಹಿಂಗ ಮಾಡಾಕ ಸಾಧ್ಯನ ಇಲ್ಲ. ನಮ್ಮವ್ವ ಸುಳ್ಳು ಹೇಳಾಕ ಹತ್ಯಾಳ. ಅಂದ್ರ ಅಕಿ ತಲೆಒಳಗ

ಏನೋ ಬ್ಯಾರೆ ಆಲೋಚನೆ ನಡಿತಿದ್ದಂಗ ಕಾಣ್ತದ ಅಂದುಕೊಂಡು, " ಎಲ್ಲಿ ಅದಾಳಾಕಿ ಇವತ್ತು ಜಿವಸಹಿತ ಉಳ್ಸಂಗಿಲ್ಲ. ಎಲ್ಲಿ ಅದಾಳೊ ಆಟ ತೋರ್ರು. ನಿನ್ನ ಮ್ಯಾಲೆ ಕೈ ಮಾಡೋದು ಅಂದ್ರ ಏನು.?" ಖಾಲಿ ಉಪರಾಟಗಿಲ ಹಾರಾಡಿದ್ದ. ಯಾರಿಗೂ ಮನಿಯೊಳಗ ಇರಂಗ ಆಗಲಿಲ್ಲ. ಮಕ್ಕಳಿಲ್ಲದ ಮನಿ ಭಣಗುಟ್ಟಿತು. ಯಾರದೋ ಸಂಚಿಗೆ ಯಾರೋ ಬಲಿ. ಈ ಮುದಿಕಿ ತಲೆ ಯೊಳಗ ನಡಿತಿರೋದಾದ್ರು ಏನು? ಅಲೋಚಿಸಿದ. ತನ್ನ ಸಂಸಾರದಾಗ ಬಿರುಕು ತರೋಹಂಗ ಕಾಣ್ತಾಳ. ಇಲ್ಲಂದ್ರ ನಮ್ಮ ಮನಿ ಬಿಟ್ಟು ಹೊರಗ ಹಾಕುವ ಯೋಚನೆ ಮಾಡ್ತಿರಬೇಕು. ಕಾರಣಗಳು ಸ್ಪಷ್ಟ ಆದವು. ಇನ್ನು ಇವಳು ನಮ್ಮನ್ನು ನೆಮ್ಮದಿಯಿಂದ ಬದುಕಲು ಬಿಡುವುದಿಲ್ಲ. ಅವಳಿಗೆ ಅವನ ಕಿರಿಮಗ ಪಕ್ಕೀರನ ಭವಿಷ್ಯದ ಬಗ್ಗೆ ಹೆಚ್ಚಿನ ಆಶಕ್ತಿ ಇರೋಹಾಗಿದೆ. ಎಂದು ಕೊಂಡವನೆ, " ಗುಡಲಸು ಕಟ್ಟಿಕೊಳ್ಳೋದಕ್ಕೆ ಜಾಗ ಹುಡುಕಿದ. ಜೀತಿ ಬಾಯಿ ತವರಿಗೆ ಮಳಪಾ ಹೋದವಳು ವಾಪಾಸು ಆಗಿದ್ದಳು. ಅಲ್ಲಿಯವರೆಗೆ ಸೋಗು ಮಾಡುತ್ತಿದ್ದ ತಾಯಿ ಮಗಳು ಸೇವಾ ಬಾಯಿನ ಗುಡಿತಾವ ಬಾಚನ ಹಳ್ಳಿ ತಾಂಡದಿಂದ ಬಂಡಿಗಳು ಬರೋದ್ರಾಗ ಕಡಕ್ಕಂತ ಎದ್ದು ಅವರ ಸ್ವಾಗತಕ್ಕೆ ಸಜ್ಜಾದರು. ಕಿರಯ ಸೊಸೆಗೆ ರತ್ನ ಗಂಬಳಿ ಹಾಸಿ ಸ್ವಾಗತ ಕೋರಿದಳು. ಎಲ್ಲ ನಾಟಕವನ್ನು ಮೌನವಾಗಿಯೇ ಗಮನಿಸುತ್ತಿದ್ದ ಭಗಾನ್ಯಾಯ್ಕ . ಅವನಿಗೆ ನೀನು ಉಂಡಿಯಾ, ತಿಂದಿಯಾ ಏನು ಕೆಲಸಕ್ಕೆ ಹೋಗಿದ್ದಿ, ಏನು ಮಾಡಿದಿ ಏನೂ ಕೆಳಲಿಲ್ಲ. ಬಂದ ಅತಿಥಿಗಳಿಗೆ ಉಪಚಾರ ಮಾಡುವುದರಲ್ಲೆ ತೊಡಗಿದಳು.

ಭಗ್ಯಾನಾಯ್ಕ ನಿರ್ದಾರ ಮಾಡಿದ ಹೆಂಡತಿಮಕ್ಕಳೊಂದಿಗೆ ಬೇರೆಕಡೆ ಹೋಗಲು. ಆದರೆ ಅವರೆ ನಿರ್ಧಾರಮಾಡಿ ಹೊರಗೆ ಹೋಗುವಂತೆ ಪ್ರಚೋದಿಸಿದ ಮುದಿಕಿಯ ಚಾಣಾಕ್ಷತನಕ್ಕೆ ಬೆರಗಾಗಿದ್ದ. ಹುಸೇನ್ ಸಾಬ್ ಮನೆಯಿಂದ ರಾತ್ರಿ ಗಳ ಗೂಟ ತಂದು ಬೆಳಕು ಹರಿಯೋದ್ರೊಳಗೆ ದೊಡ್ಡದೊಂದು ಗುಡಿಸಲನ್ನು ನಿಲ್ಲಿಸಿದ್ದ. ಅವನ ಅವ್ವ ಅಪ್ಪ, ಯಾಕೆ ಕಟ್ಟೀಯಾ ಏನ್ ಸಮಾಚಾರ ಒಂದನ್ನೂ ಕೇಳಲಿಲ್ಲ. ಅವನೆ, " ಯಾಡಿ ನಾನು ಹೆಂಡತಿ ಮಕ್ಕಳನ್ನು ಕರಕೊಂಡು ಬರ್ತಿನಿ, ಎಷ್ಟುದಿನ ಅವರನ್ನು ಅಲ್ಲಿ ಬಿಡಾಕಾದೀತು. ಹುಡುಗನ ಶಾಲಿ ತಪ್ಪಾಕ ಹತ್ಯೆತಿ. ಬಂದಮೇಲೆ ನಾವು ಬೇರೆಕಡೆ ಹೊಕ್ಕೀವಿ. "ಎಂದು ಅವಳ ಪ್ರತಿಕ್ರಿಯೆಗಾಗಿ ಕಾದ. ತುಟಿಪಿಟಕ್ ಅನ್ನದೆ ಸುಮ್ಮನಿದ್ದಳು. ಮತ್ತೆ ಮಾತಾಡಿದರೆ ಮರ್ಯಾದೆ ಗೇಡು ಅಂದವನೆ ಅರೆ ಘಳಿಗೆ ನಿಲ್ಲದಂತೆ ಹೊರಟು ಹೋಗಿದ್ದ. ಹಾವು ಸಾಯಲಿಲ್ಲ, ಕೋಲು ಮುರಿಯಲಿಲ್ಲ ಅಂದುಕೊಂಡಳು ಮುದುಕಿ. ಇದೆಲ್ಲವನ್ನು ಮೌನವಾಗಿಯೇ ಗಮನಿಸುತ್ತಿದ್ದ ಪಂಪಾನಾಯ್ಕ.

ದುಡಿದು ಈಡು ಮಾಡಿದ ಸ್ವಂತ ಮಗನಿಗೆ ಬಿಡಲಿಲ್ಲವಲ್ಲ. ಅವನ ಮನಸ್ಸಿಗೆ ನೋವಾಗುವಂತೆ ಮಾಡಿ ಹೊರಗೆ ಓಡಿಸಿದಳು ಈ ನೀಚ ಹೆಂಗಸು ಅಂತ ಒಳಗೊಳಗೆ ಸಂಕಟಪಟ್ಟುಕೊಂಡು ಹೇಳಲಾಗದೆ, ಬಿಡಲೂ ಆಗದೆ ಒದ್ದಾಡಿದ. ಆದರೆ ಗುಡ್ಲೀರ ಮಾತ್ರ ಇಡಿ ಕುಟುಂಬವನ್ನು ಕಟ್ಟಿ ತಾಂಡದೊಳಗೆ ನಾಕುಮಂದಿ ಹೌದುಹೌದು ಎನ್ನುವಂತೆ ಮಾಡಿದ್ದ ಹಿರಿಮಗನ್ನ ಹೊರಗೆ ಹಾಕಿದ್ದಳು. ಕಟ್ಟಿರಿವೆಗಳು ಕಟ್ಟಿದ ಹುತ್ತದೊಳಗೆ ಹಾವು ಬಂದು ಸೇರಿಕೊಂಡಂತೆ ಅವಳ ಎರಡನೆ ಮಗ ಪಕ್ಕೀರನಾಯ್ಕ ಸೇರಿಕೊಂಡಿದ್ದ ತಾಂಡದಲ್ಲಿ, "ಏಯ್ ಪುಟ್ಟಿಹೊತ್ಕೊಂಡು ಬಂದವರ" ಅಂತೇಳಿ ಹಿಯಾಳಿ ಮಾತಾಡುತ್ತಿದ್ದ ಮಂದಿ ಬಾಯಿ ಮುಚ್ಚಿಸಿದ್ದ

ಭಗನ್ಯಾ ಈಗ ಬೇಡವಾಗಿದ್ದ. ಕಾಡು ಕಡಿದು ಇಪ್ಪುತ್ತು ಎಕರೆ ಹೊಲ ಮಾಡಿದ್ದ. ಐದಾರು ಎಕರೆ ಮಂದಿ ತಾವ ತಗೊಂಡಿದ್ದ. ವೇಗವಾಗಿ ಬೆಳೆಯುತ್ತಿದ್ದವನ ವೇಗವನ್ನು ತುಂಡು ಮಾಡಿದ್ದಳು ಗುಡ್ಲೀರಿ. ಮನೆ ತುಂಬ ಚಿಳ್ಳೆಪಿಳ್ಳೆ ಎನ್ನುವ ಮಕ್ಕಳೊಂದಿಗೆ ಹೊರಗಡೆ ಹಾಕಿದರೆ ಬುದ್ಧಿ ಬೆಟ್ಟಿ ಆಕೈತಿ ಅಂತ ಅವಳ ಅನಿಸಿಕೆಯಾಗಿತ್ತು. ಅಷ್ಟರಲ್ಲೆ ಪಕ್ಕೀರನನ್ನು ಹೇಗಾದರು ಮಾಡಿ ಆಸ್ತಿವಂತನ್ನಾಗಿ ಮಾಡಬಹುದು ಅಂತೇಳಿ ದೂರಲೋಚನೆ ಅವಳದಾಗಿತ್ತು.

ಗುಡ್ಲೀರಿ ಮಾಡಿದ ಯೋಜನೆಯಿಂದಾಗಿ ಕೆಲವರು ನಿಜವಾಗಿಯೂ ಖೂಷಿ ಪಟ್ಟರೆ ತಾಂಡದಾಗ ವೇಗದಿಂದ ಬೇಳೆಯುತಿದ್ದ ಮನಿ ಮುರದುಹಾಳಮಾಡಿದ್ಲು ಬೇವರ್ಸಿಮುಂಡೆ ಅಂತೇಳು ಬೊಯ್ಯವರು ಬಹಳ ಮಂದಿ. ಭಗನ್ಯಾನಾಯ್ಕ ಒಬ್ಬ ಇದ್ರ ಸಾಕು ಏನು ಬೇಕಾದ್ದು ಮಾಡಬಹುದೆಂದು ಮಂದಿ ಮಾತಾಡಿಕೊಂಡಿದ್ದರು. ಐದಾರು ವರ್ಷದ ಅಂತರದಲ್ಲೆ ತನ್ನ ಅಸ್ತಿತ್ವವನ್ನು ಕಳೆದುಕೋಮಡಿದ್ದ ಉಪ್ಪಾರ ಹುಲವಪ್ಪ ತನ್ನ ಇಳಿ ವಯಸ್ಸಿನೊಳಗೂ ದಿನ್ನಿಸಾಬನ ಹುಡಕಿಕೊಂಡು ಹೋಗಿದ್ದ. "ಎಂಥಾ ಕೆಲ್ಸ ಆತಲೇ ದಿನ್ನಿಸಾಬು, ಅವನ್ನಮ್ಮನ ಗುಡ್ಲೀರಿಗೆ ಬುದ್ದಿ ಐತೇನಲೆ. ಇಡೀ ಬರಗುಡದಹಟ್ಟಿ ತಾಂಡದಾಗ ದುಡಿತ್ತಿದ್ದ ಒಂದ ಮನಿ ಹಗಲು ರಾತ್ರಿ ಒಂದು ಮಾಡಿ ದುಡೀತಿದ್ದ ಹುಡಗನ್ನ ಹಾಳ ಮಾಡಿದ್ಲು ನೀಚ ಹೆಂಗಸು, ಏನ್ ಮಾಡೊದು. ಅಲ್ಲಲೇ ದಿನ್ನಿಸಾಬು, ದುಡಿಯೋ ಮಂದಿ ಕಮ್ಮಿಯಾಗರಲೇ, ಈಗ ನಂದ ಪರಿಸ್ಥೀತಿ ತಗೋಳಪ್ಪ, ನೂರಾರು ಎಕರೆ ಜಮೀನು, ಅಣ್ಣ ತಮ್ಮಂದ್ರು ದುಡೀಲಿಲ್ಲ, ನನ್ನ ಮಕ್ಕಳು ದುಡಿಲಿಲ್ಲ. ಹಿಂದೆ ಏನೋ ಜಮೀನು ಕಸುವಿತ್ತು. ಹದವರ್ತಿಮಳೆ ಆಕಿತ್ತು. ಬೆಳೆ ಬೆಳಿತಿತ್ತು. ಮನೆ ತುಂಬ ಕಾಳಿತ್ತು. ಭೂಮಿ ತಾಯಿಗೆ ದ್ರೋಹ ಬಗದ್ರು, ಕಾಳಜಿ ಮಾಡ್ಲಿಲ್ಲ, ಈಗ ಕೂಳಿಗೂ ಗತಿ ಇಲ್ಲಿ ನಡಿ ಅತ್ಲಾಗ." ಬೇಸರದಿಂದ ಹೇಳಿದ್ದ. " ಅಯ್ಯೊ ಬಿಡು ಹುಲುವಪ್ಪ ಯಾಕ ಹೇಳ್ತಿಯಾ, ಆ ಯವ್ವ ಯಾರುದುಕೆ ಮಾತು ಕೇಳಂಗಿಲ್ಲ. ಆಕಿದುಕೆ ಬಾಯಿ ಬೊಂಬಾಯಿ. ಬರಿ ಬಾಯಿಂದಲೆ ಗುಡದಹಟ್ಟಿ ತಾಂಡಕೂ ಹೆದ್ರಸಿದ್ಲು. ಅವಳ ಕರ್ಮಕ್ಕೆ ಭಗನ್ಯಾದೂಕೆ ಜೈಸಾ ಜೀವ ಹುಟ್ಟಿದ್ದ. ಈಗ ಅವನದುಕೆ ಮಕ್ಕಳು ಬಾಳ ಅಂತ ಹೊರಗೆ ಓಡಿಸಿದಳು. ಇನ್ನು ಆಯ್ತು ಬಿಡು." ತನಗೆ ತಿಳಿದ ಸತ್ಯವನ್ನು ಹೇಳಿದ ದಿನ್ನಿಸಾಬು. ಅವರ ಸಂಬಾಷಣೆ ನಡುವೆ ಹಟ್ಟಿನಾಯಕ, ಕಾರಬಾರಿ, ಡಾವೋ ಬಂದು ಸೇರಿದ್ದರು. ಎಲ್ಲರ ಬಾಯಲ್ಲೂ ದೊಡ್ಡ ಮಗನಿಗೆ ಅನ್ಯಾಯ ಮಾಡಿದಳು ಎನ್ನುವ ಮಾತು.

ಭಗನ್ಯಾನಾಯ್ಕ ಗುಡಿಸಲೇನೋ ಕಟ್ಟಿದ, ಆದರೆ ಸಂಸಾರ ಆರಂಭಕ್ಕೆ ಏನೂ ಬೇಡವೆ. ಹೆಂಡತಿಯನ್ನು ಹಾಕಿ ಹೊಡೆದು, ಮುದುಕಿ ಓಡಿಸಿದ್ದಳು. ಘಾಟಿ ಮುದುಕಿ. ಈಗ ಅವನನ್ನು ಹೊರಗೆ ಹಾಕಿದರೆ, ತಂಗಿ ಮದುವೆ, ಪಕ್ಕಿರನ ಮದುವೆ ಅಂತೇಳಿ ಒಂದಿಷ್ಟು ಐನಾತಿ ಜಮೀನು ಹೆಚ್ಚುವರಿಯಾಗಿ ಕೆಳ ಬಹುದು ಸಾಲದಕ್ಕೆ ಗಂಡ ಹೆಂಡತಿಯರ ಪಾಲನ್ನು ಕೂಡು ಪಕ್ಕೀರನಿಗೆ ಸಿಗುತ್ತೆ ಎನ್ನುವ ತಾರ್ಕಿಕ ಅಲೋಚನೆ ಅವಳದಾಗಿತ್ತು. ಸರ್ವತಪ್ಪ ಭಟ್ಟರ ಐದಾರು ಎಕರೆ ಭತ್ತದ ಭೂಮಿನೂ ಪಕ್ಕೀರನೆ ಹಾಗೆ ಯೋಜನೆ ರೂಪಿಸಿದ್ದಳು.

ಭಗನ್ಯಾಯ್ಕ ಎರಡು ಮೂರು ದಿನ ಬೇರೆಯವರ ಹೊಲದೊಳಗೆ ಕೆಲಸಮಾಡಿ, ಹಿರಮಗ ಟಾಂಕ್ಯಾಗ ಹುಷಾರು ತಪ್ಪಿದೆ ಅಂತ ಸುದ್ದಿ ಕೇಳಿ ಸಂಜೆ ಕವಳದಲ್ಲೆ ತಾಂಡ ಬಿಟ್ಟು ಸಣ್ಣಟ್ಟಿ ತಾಂಡಕ್ಕೆ ಹೊರಟಿದ್ದ. ಆರುವರೆ ಕಿಲೋಮೀಟರ್ ದೂರವನ್ನು ಅಲ್ಲಿ ಮಂದಿ ಉಣ್ಣಾಕ ಕೂಡುವಷ್ಟರಲ್ಲಿ

ಕ್ರಯಿಸಿದ್ದ. ಚಾವಳಿಯ ಕೈ ಮತ್ತು ಮೈಮೇಲೆ ಗಾಯಗಳು ಹಾಗೇ ಇದ್ದವು. ಟಾಂಕ್ಯ ಕಣ್ಣು ತಿರುಗಿಸಿದಂತೆ ಮಲಗಿದ್ದ. ಬಾಕಿ ಎಂಟೊಂಬತ್ತು ಮಕ್ಕಳು ಸಾಲಾಗಿ ಮಲಗಿದ್ದವು. ಭಗನ್ಯಾ ದೊಡ್ಡದಾಗಿ ಉಸಿರು ಹಾಕಿದ. ತನ್ನ ಮೇಲೆನೆ ಬೇಸರಗೊಂಡಿದ್ದ. " ನಮ್ಮವ್ವ ಏನು ಹೇಳಿದ್ರು ಸತ್ಯ ಅಂತ ಸತ್ಯವನ್ನೆ ನಂಬಲು ನಿರಾಕಸಿರಿದ್ದೆ. ನನ್ನ ಹೆಂಡತಿದೆ ತಪ್ಪು ಅಂತ ಅವಳ ಮೇಲೆ ದ್ವೇಷ ಹುಟ್ಟಿಸುವ ಪ್ರಯತ್ನ ಮಾಡಿದ್ದಳು." ಅವನ ಅಳಿಯ ಹುಸೇನಿ ಮುಂದೆ ಹೇಳಿದ. " ಅಂತು ನಿನಗ ಸತ್ಯ ತಿಳಿತಲ್ಲ ಮಾವ ಅಷ್ಟು ಸಾಕು. ಎಲ್ಲಿ ನೀನು ನಿಮ್ಮವ್ವನ ಮಾತು ಕೇಳಿ ನಮ್ಮಕ್ಕನ ಬಾಳು ನರಕ ಮಾಡ್ತಿಯೋ ಅಂದು ಕೊಂಡಿದ್ದೆ." ಅಂದ ಹುಸೇನಿ. " ಮಾಡಬಾರದ ಕೆಲಸ ಮಾಡಿ ನಾನು ಕಟ್ಟಿದ ಮನೆಯಿಂದ ನನಗೆ ಹೊರ ಹಾಕಿದಳು ನಮ್ಮವ್ವ. ಮಕ್ಕಳು ಮರಿ ಹೆಂಡತಿ ಅನ್ನೊ ಭಾವನೆ ಇಲ್ಲದೆ. ತಮ್ಮ ತಂಗಿ ಅಂತೇಳಿ ನಮ್ಮವ್ವನ ಮಾತು ಕೇಳಿ ಮನೆ ಕಟ್ಟಿದೆ. ಆದರೆ ಈಗ ದುಡಿಮೆ ಕೈ ಹಿಡಿಯೋ ಸಮಯದಾಗ ತನ್ನ ಕಿರಿಮಗನೊಬ್ಬನ ಸಲುವಾಗಿ ನನ್ನ ಕುಟುಂಬನ ಬೀದಿಪಾಲು ಮಾಡಿದಳು." ಹುಟ್ಟಿದ ಆರಭ್ಯದಿಂದ ತನ್ನ ತಾಯಿಯ ನೆರಳಿಂದ ಹೊರಗೆ ಬರಲಿಕ್ಕೆ ಆಗದೆ ತೊಳಲಾಡುತ್ತಿದ್ದ ಭಗನ್ಯಾಯ್ಕ ಹತ್ತು ಮಕ್ಕಳ ತಂದೆಯಾದರೂ ತನ್ನ ಸಂಕಟವನ್ನು ಹೇಳಿಕೊಳ್ಳಲಾಗದೆ ಪರದಾಡುತ್ತಿದ್ದ. ತನ್ನ ಮಕ್ಕಳ ಜೋತೆಗೆ ವಾಪಾಸು ಬಂದು ಹೋಸ ಬದುಕನ್ನು ಆರಂಭಿಸುವ ಹೊಸ ಕನಸು ಕಾಣತೊಡಗಿದ.

ದಿನ್ನಿ ಸಾಬು ಹಾಗೆ ಭಗನ್ಯಾನ ಬದುಕಿನ ಕುರಿತು ಆತಂಕ ಪಡುವವರ ದೊಡ್ಡದೊಂದು ಗುಂಪೇ ತಾಂಡದೊಳಗಿತ್ತು. ಕೆಲವರು ಎದೆಯಾಳದಿಂದ ಮತನಾಡಿದರು ಮತ್ತೆ ಕೆಲವರು ಮೇಲು ನೋಟಕ್ಕೆ ಮಾತನಾಡಿ ಮಾತನ್ನು ತೇಲಿಸಿ ಬಿಡುವ ಪೈಕಿ ಮಂದಿ. ಮಾರನೇ ದಿನ ಊರ ಮುಂದೆ ಹೊಲ ಹಿಡಿದರು. ಅಡವಿಯೊಳಗೆ ಇಪ್ಪತ್ತು ಎಕರೆ ಜಮೀನು ಭಗನ್ಯನಾಯ್ಕ ಮುಂದೆ ತಾಂಡದೊಳಗೆ ಮೆರಿತಾನ ಅಂತಿದ್ದವರಿಗೆ ಬಲು ಖುಷಿಯಾಗಿತ್ತು. ಅವರಲ್ಲು ಪ್ರಮುಖವಾಗಿ ಅವನ ಬದ್ದ ವೈರಿಗಳಾದ ಹೊನ್ನಾನಾಯ್ಕ, ತಾಂಡದ ಬಂಢ ಪುಜಾರಿ ಭೋತನಾಯ್ಕ, ಕಡೆಮನಿ ಪೂರ್‍ಯ, ಹಿಂದಲ ಓಣಿ ಸಂಕ್ರಿ, ಮಾಂಕಾಳಿ ಮಂಜ್ಯಾ ದೊಡ್ಡ ಗುಂಪೆ ಸೇಂದಿ ಅಂಗಡಿಯೊಳಗೆ ಒಂದೊಂದು ಬಾಟಲಿ ಹೆಂಡ ಹೆಚ್ಚು ಕುಡಿದು ಸಂತೋಷ ಆಚರಣೆ ಮಾಡಿದ್ರು. ಭಗ್ಯನಾಯ್ಕ ಗರಕಿ ಹುಲ್ಲಿನಂತೆ ಅಂತ ಅವರಿಗೆ ಗೊತ್ತೇ ಇಲ್ಲ. ನೀರಿಲ್ಲದಿದ್ದರೂ ಚಿಗಿಯುವ ಜಾಯಮಾನಕ್ಕೆ ಸೇರಿದವನು. ಆದರೆ ಈಗ ಸದ್ಯ ಅವನಿಗೆ ದೊಡ್ಡ ಹಿನ್ನಡೆಯಾಗಿತ್ತು. ಆಸ್ತಿಯಲ್ಲಿ ಅವನ ಪಾಲು. ಅವನ ತಾಯಿಯ ಮುಂದಿನ ನಡಿಗೆಯನ್ನ ಕುರಿತು ಅಲೋಚನೆ ಮಾಡದಾಗಿದ್ದ.

ಬಂಡಿ ತಾಂಡಕ್ಕೆ ಬಂದಾಗ ಸಾರಥಿ ಗುಡ್ಡದ ಹಿಂದೆ ಸೂರ್‍ಯ ಮರೆಯಾಗುತ್ತಿದ್ದ. ಹತ್ತು ಮಕ್ಕಳ ಜೊತೆಗೆ ಗಾಯಮಾಯದ ಕೈಯನ್ನು ಇಟ್ಕೊಂಡೆ ಚಾವಳಿ ಬಂಡಿ ಇಳಿದಳು. ಭಗನ್ಯಾಯ್ಕ ಕಟ್ಟಿದ ನೆರಕಿ ಗುಡಸಲು ಪಕ್ಕ ಹುಸೇನಿ ನಾಯ್ಕ ಬಂಡಿ ನಿಲ್ಲಿಸಿ ಎತ್ತುಗಳನ್ನು ಮರಕ್ಕೆ ಬಿಗಿದು ತಾನೆ ಕೊಡಪಾನ ಇಸ್ಕಂಡು ನೀರು ಸೇದೋ ಬಾವಿಗೆ ಹೋದ. ಗುಡ್ಲೇರಿಯ ಎರಡನೇ ಮಗಳು ಚಿಮ್ಲಿ ಹುಸೇನಿಯನ್ನು ಕಂಡವಳೆ ಮನೆಗೆ ಓಡಿ ತಮ್ಮ ತಾಯಿಗೆ ಸುದ್ದಿ ಮುಟ್ಟಿಸಿದಳು. "ಯಾವಾಗ ಬಂದಾಳ," ಗಂಭೀರವಾಗಿಯೇ ಕೇಳಿದಳು. "ಗೊತ್ತಿಲ್ಲಬೆ. ಆಕಿ ತಮ್ಮನೊ ಅಣ್ಣನೋ ಹುಸೇನಿ , ಅವ ನೀರು ಸೇದಾಕ ಬಂದಿದ್ದ ಅವನ್ನ ನೋಡಿದೆ. ನೀನು ಸುಮ್ಮನಿರ್ತಿಯೋ ಇಲ್ಲ

ಅಂತ ವಿಷ್ಯ ತಿಳಿಸಿದೆ ಆಟೆಯಾ." ಅಂದು ಅವಳ ಮಾರಿ ನೋಡಿದಳು. "ಆ ಭಾಡಕಾವ್ ನನ್ನ ಮಗ ಎಲ್ಲಿ ಅದಾನ, ತಾಯಿಂಗಿಂತ ಹೇಣ್ತಿನಾ ದೊಡ್ಡವಳಾದಳಾ, ಅವನ ಮೀಸ್ಯಾಗ ನನ್ನ ಹಾಟು." ಜೋರು ಬಾಯಿ ಮಾಡ್ತಾ ಅವನ ಗುಡಿಸಲು ಕಡಿಗೆ ಹೋದಳು. "ಏನೋ ಭಾಡಕ ನನ್ನ ಮಗನೇ, ನಂಗ ಹೇಳದ ಕೇಳದ ಈ ಮಿಟಕಲಾಡಿ ಲೌಡಿನ ಹೆಂಗೋ ಕರಕೊಂಡು ಬಂದೆ, ಆಹಾ. ಮಾಟಗಾತಿ ಹೆಂಗ ಕುಂತಾಳ ನೋಡು ಮಳ್ಳಿಹಂಗ." ಗಲ್ಲಕ್ಕೆ ತಿವುದಳು. "ಏಯ್ ಮಾಮಿ, ನೀ ಹಿಂಗೆಲ್ಲ ಮಂದಿ ಮೈಮೇಲೆ ಕೈ ಮಾಡಿ ಮಾತಾಡ ಬ್ಯಾಡ. ಅರ್ಧ ಸುಟ್ಟಿರೋದ ಸಾಲದೇನು? ಹೋಗು ನಿನ್ನ ಮನಿಗೇನು ಬಂದಿಲ್ಲ." ಹುಸೇನಿ ಜೋರು ಮಾಡಿದ. "ಅಲ ಬಕಾರ ನನ್ನ ಮಗನೆ ತಿನ್ನಾಕ ಕೂಳಿಲ್ಲದ ನಿಮಗೆ, ಬಂಡಿ ಗಟ್ಲೆ ದವಸ ಕೊಟ್ಟು ಸಾಕಿದ ನನಗೆ ಎದರು ಮಾತಾಡ್ತಿ ಏನಲಾ ನಿನ್ನ ಓಸಡಗ." ಅಂದವಳೆ ಅವನ ಎದೆಮ್ಯಾಲೆ ಹೋದಳು. ಏನೋ ಹುಡುಕಾಡುತ್ತಿದ್ದ ಭಗನ್ಯ ಗಲಾಟೆ ಕೇಳಿ ಓಡಿಬಂದ. ಯಾವತ್ತು ತಾಯಿ ಎದುರಿಗೆ ಮಾತಾಡಿದವನು ಇವತ್ತು ಎರಡ್ರಾಗ ಒಂದು ಆಗಬೇಕೆಂದು ನಿರ್ಧಾರ ಮಾಡಿಕೊಂಡಿದ್ದ. ಸರ್ವತಪ್ಪ ಹೇಳಿದ ಮಾತು ನೆಪ್ಪಿಗೆ ಬಂತು "ನಿನ್ನ ಅಡಿಗೆ ಬೆಂಕಿ ಬಿದ್ದಾಗ ಹೆಂಗ ಪಾರಾಗಬೇಕು. ಅಂತ ನಿನ್ನ ಯೋಚನೆ ಮಾಡಬೇಕು. ನಿನ್ನ ಅಸ್ತಿತ್ವದ ಪ್ರಶ್ನೆ ಬಂದಾಗ ನೀನೇ ಖುದ್ಧಾಗಿ ಹೋರಾಡಬೇಕು. ಜೋರು ಬಾಯಿ ಮಾತಾಡೋರ ಮುಂದೆ ಮಲ್ಲೆಗೆ ಮಾತಾಡಿದರೆ ಪ್ರಯೋಜನ ಇಲ್ಲ." ಮೌನವಾಗಿಯೇ ಸಹಿಸಿಕೊಂಡಿದ್ದ. "ಯಾಕಿಂಗ ಊರ ಮಂದಿ ಮುಂದ ಮರ್ಯಾದೆ ತಗೀತಿಯಬೆ ಸುಮ್ಮನಿರು." ಅವನ ಬಾಯಿಯೊಳಗೆ ಮಾತು ಇದ್ದಂಗೆ, " ಏನೋ ಹೆಂಡತಿ ಗುಲಾಮ, ಹೆಂಡತಿ ಅಡ ಇಟ್ಟು ತಿನ್ನೋ ಸೂಳಿಮಗನೆ, ನನಗೆ ಎದುರು ಮಾತಾಡ್ತೀ ಏನಲೆ. ಅದೇನು ಮಾಟ ಮಾಡಿದ್ಲೋ ಬೊಸುಡಿ. ಈ ಮಗ ನನ್ನಮೇಲೆ ಎಗರಾಡ್ತಾನೆ. " ಅಂತೇಳಿ ಅವನ ಅಂಗಿ ಹಿಡಿಯಾಕ ಹೋದಳು. " ಸುಮ್ಮನೆ ಕೈ ಬಿಡಬೇ. ನೀನು ತಾಯಿಹಂಗೆ ಸುಮ್ಮನಿದ್ದೆ ಪಾಡಾತು." ಅಂಗಿ ಬಿಡಿಸಕೊಳ್ಳಾಕ ನೋಡಿದ. ಏನುಮಾಡ್ತಿಯಲೆ ಊರ ಹಾಳಾದವನೆ, ಎನ್ಮಾಡ್ತಿ ಮಾಡು." ಪಂಚೆ ಹಿಡಕೊಂಡು ಕುಂತ್ಲು. ಭಗನ್ಯಾನ ಪಿತ್ತ ನೆತ್ತಿಗೇರಿತು. "ಛೆ, ನಿಮ್ಮವ್ವನ ಕೆಟ್ಟ ಜಾತಿಯವಳ, ಊರಾಗ ಮಂದಿನ ಬಾಯಿ ಜೋರುಮಾಡಿ ಹದರಿಸೋ ಹಂಗ ಆಂದ್ಕೋಂಡಿ ಏನು." ಅಂದವನೆ ಕೈಗೆ ಸಿಕ್ಕ ಕೋಲು ತಗೊಂಡು ತಾಯಿ ಅನ್ನೋ ಮಮಕಾರನೂ ಲೆಕ್ಕಿಸದೆ ಬಾರಿಸಿದ. "ಯಪ್ಪ ಸತ್ನೋ. . ." ಬಾಯಿ ಜೋರು ಮಾಡಿದಳು. " ನಿನಗಿಂತ ಬಾಯಿ ಜೋರು ಮಾಡ್ತೇನಿ." ಅಂತೇಳಿ ಯಾವಾಗ ಅವನು ಬಾಯಿ ತಗದನೋ ಮದುಕಿ ತಣ್ಣಗಾದಳು. ಗುಡ್ಲೀರ ಜಗಳಕ್ಕೆ ಹೆದರಿ ಮಂದಿ ಕದ ಮುಚ್ಚಿಕೊಂಡ್ರು, ಅವರಪ್ಪ ಮಗನ ಪರವಾಗಿಯೇ ಮಾತನಾಡಿದ. ತಾಂಡೆದಾಗ ಗುಡ್ಲೀರಿಗೆ ಛೀ, ಥೂ, ಅಂದ್ರು. ಇಷ್ಟೆಲ್ಲಾ ಆದಮೇಲೆ ಕ್ರಮೇಣ ಅವಳ ಬಾಯಿ ಬಡಕತನ ಕಡಿಮೆ ಆತು.

ಪಂಚಾಯಿತಿ ಒಳಗ ಮಂದಿ ಭಗನ್ಯಾಯ್ಯನ ಪರವಾಗಿ ಮಾತನಾಡಿದರು. ಪೂಜಾರಿ, ಪೀರ್ಯ ಮತ್ತು ಅವನ ಗುಂಪ ಮಾತ್ರ ಅವನಿಗೆ ಅಸ್ತಿದಕ್ಕ ಬಾರದು ಅಂತ ಅವನನ್ನ ವಿರೋಧಿಸಿದರು. ಉಪ್ಪಾರ ಹುಲುವಪ್ಪ. ದಿನ್ನಿಸಾಬಿ. ಬ್ಯಾಡರ ಮಲಿಯಪ್ಪ, ಹಳ್ಳಿ ಮಾಸ್ತರ್, ಸರ್ವತಪ್ಪರಂತ ಮಾತುಗಾರರು ಎಂದು ಅವನ ಬಾಯಿಯನ್ನು ಮುಚ್ಚಿಸಿಬಿಡುತ್ತಿದ್ದರು. ಹಾಗಂತ ಅನ್ಯಾಯಕ್ಕೆ ಎಂದೂ ಪ್ರೋತ್ಸಾಹಿಸಿರಲಿಲ್ಲ. " ಈಗ ಎಲ್ಲಾ ಸೇರಿದ್ದಿರಾ, ಪಂಚಾಯ್ತಿ ಶುರುಮಾಡಬಹುದು."

ಸರ್ವತಪ್ಪ ಹೇಳಿದ. ಹಟ್ಟಿನಾಯಕ, ಕಾರಬಾರಿ, ಡಾವ್ರೋ ತಮ್ಮ ಮನಸಿಗೆ ಬಂದಂತೆ ಮಾತನಾಡಿದರು. ಅಗಸರ ಶಿವೂ ಮಾತ್ರ ಧೋತ್ರ ಎತ್ತಿಕೊಂಡು, " ನೋಡ್ರಿ ಭಟ್ರೆ, ಇದು ಅವರ ಮನಿ ವಿಚಾರ, ನಾವ್ಯಾಕ ತಲಿ ಹಾಕಬೇಕು, ಏನೋ ನಾಕು ಮಾತು ಹೇಳಿ ಎದ್ದೇಳಿ ಮ್ಯಾಕೆ. ಇನ್ನೂ ಮದುವೆಯಾಗಬೇಕಾದ ಮಗಳು ಇದ್ದಾಳೆ. ಎದಿಮಟ ಬೆಳೆದು ನಿಂತಾಳ, ಈ ಭಗನ್ಯಾಯ್ಯೆಗೇನು ಹತ್ತು ಮಕ್ಕಳ ಅದಾವು, ಇನ್ನೇನು ಅವನಿಗೆ ಆಸ್ತಿಪಾಸ್ತಿ ಕೊಡದಂಗೆ ಇರ್ಲಿ, ಹೋಗಲಿ ಬಿಡಿ ಹೊರಗೆ.," ತನ್ನ ಒಣ ವಾದವನ್ನು ಮಂಡಿಸಿದ. ಸರ್ವತಪ್ಪ ಚಕಾರ ಎತ್ತಲಿಲ್ಲ. ಅವನ ಪರವಾಗಿ ದಿನ್ನಿಸಾಬಿ ಮಾತನಾಡಿದ, "ಅಲ್ಲಪ್ಪ, ನಿಂದುಕೆ ತಲಿಒಳಗೆ ಏನಾದ್ರು ಐತೆ,? ಆ ಮಗಳದ್ದು ಮದುವಿ ಹೆಂಗೋ ಮಾಡಬಹುದು. ಹತ್ತಮಕ್ಕಳನ್ನ ಸಾಕುವುದಿದೆಯಲ್ಲ ಬೋ ಕಷ್ಟ . ಭಗ್ಯಾನಯ್ಯ ಏನೂಂತತಾಂಡಕ್ಕೆ ಗೊತ್ತು. ಬೇರೆ ಲಮಾಣ್ಕೇರಂಗ ಸೊಂಬೇರಿ ಆಗಿತ್ತು ಅಂತ ಇಟ್ಕೋ ನಾವೇ ಬೇಡಾ ಅಂತಿದ್ವಿ. ಭೂಮಿಯಲ್ಲಿ ಅವನಿಗೆ ಏನು ಬರುತ್ತೆ ಅದನ್ನ ಕೊಡ್ಲೇ ಬೇಕು." ಸರಿಯಾಗೆ ಹೇಳಿದ. ಉಪ್ಪಾರ ಹುಲುವಪ್ಪ, ಹಳ್ಳಿ ಮಾಸ್ತರು ಅವನಿಗೆ ಬೆಂಬಲಿಸಿದರು. ಮಂದಿ ಆಗಲೆ ಹೋಗೋದಕ್ಕೆ ಆರಂಭವಾಗಿದ್ದರು. ಸರ್ವತಪ್ಪ ಎದ್ದು ನಿಂತ. ಹಟ್ಟಿನಾಯ್ಕ ಕಾರಬಾರಿ, ಗುಡ್ಲೀರವ್ವ ಭಗನ್ಯಾನನಗೇನು ಸಂಬಂಧಿಕ ಅಲ್ಲ, ನೀನು ನನಗೆ ಹತ್ರದವಳಲ್ಲಾ. ಅದರೆ ಈ ಪಂಚಾಯ್ತಿ ಕಟ್ಟಿ ಅನ್ನೋದು ದೇವರ ಸನ್ನಿದಿ ಇದ್ದಹಾಗೆ. ಯಾರು ಕಳ್ಳಂಬೆಳ್ಳು ಮಾಡಾಕ ಆಗಲ್ಲ. ನಿನಗೆ ಒಂದು ನ್ಯಾಯ ನಿನ್ನ ಮಗನಿಗೆ ಒಂದು ನ್ಯಾಯ ಅಂತೇಳಿ ಇರೊದಿಲ್ಲ. ಅವನು ನೀ ಹಡೆದ ಮಗನೆ, ನಿನ್ನ ಸಣ್ಣಮಗ ಪಕ್ಕೀರನಾಯ್ಕನಿಗಂತ ಮುಂಚೆ ಹುಟ್ಟಿದ್ದೆ ಭಗನ್ಯಾನಾಲ್ಕು. ಏನೋ ಹತ್ತು ಮಕ್ಕಳಾದವು. ಅವು ನಿನ್ನ ಮೊಮ್ಮಕ್ಕಳೆ. ನಾಲೆ ಯಾರ ಮೊಮ್ಮಕ್ಕಳು ಅಂತ ಕೇಳಿದರೆ ಗುಡ್ಲೀರಿವು ಅಂತ ಹೇಳ್ತಾರ." ಎಂದು ಗುಡ್ಲೀರಿ ಮಾರಿ ನೋಡಿದ. ಭಾವನೆ ವ್ಯಕ್ತಪಡಿಸಿದಿದ್ದರೂ ಒಳಗೆ ಏನೋ ಚಾಲನೆಯಾಗಿದೆ ಅಂತ ಸರ್ವತಪ್ಪಗೆ ತಿಳಿತು. ಮತ್ತೊಂದು ಸರಿಯಾದ ಭಾವನಾತ್ಮಕ ಪೆಟ್ಟು ಕೊಟ್ಟ, "ಅಲ್ಲಬೆ. ನಿನಗ ನಿನ್ನ ಮಕ್ಕಳಲ್ಲೆ ಬೇಧ ಕಾಣಿಸ್ತು. ಭಗನ್ಯಾ ಕಣ್ಣೊಳಗ ಪಿಚ್ಚು ತಗಿಯಾಕ ಬಾರದ ವಯಸ್ಸಿನಿಂದ ದುಡುದ. ಇವತ್ತು ನೀ ಏನು ಅದಿಯಲಿಲ್ಲ ಅದಕ್ಕ ಕಾರಣ ಅವನ. ಅವನಿಗೆ ನೀ ಮೋಸಮಾಡಿದೆ ದೇವರು ನಿನ್ನ ಮುಟ್ಟೋದಿಲ್ಲ." ಅವಳಿಗೆ ತಡಿಯೋದಕ್ಕೆ ಆಗಲಿಲ್ಲ. " ಆಯ್ತು ಬುದ್ದಿ ನೀವು ಹೆಂಗೆ ಹೇಳ್ತಿರೋ ಹಂಗೆ ಆಗಲಿ." ದಾರಿಗೆ ಬಂದ್ಲು. ಇದೇ ಸರಿಯಾದ ಸಮಯ ಅಂದವರೆ ಭಟ್ರು, "ಭೂಮಿಯನ್ನು ಸಮನಾಗಿ ಹಂಚಿಬಿಡು. ಯಾರು ಎಲ್ಲಾದರೂ ಅಲ್ಲೆ ಇರ್ಲಿ. ನೀನಗ ಬೇಕಾದವರ ಮನೆಯೊಳಗ ನೆಮ್ಮದಿಯಿಂದ ಇರು." ಅಂದರು. "ನಾನು ಯಾರ ಹತ್ರ ಹೋಗುವವಳಲ್ಲ. ಕೊನೆವರಿಗ, ಪಕ್ಕೀರನ ಮನಿಯೊಳಗೆ ಬಿದ್ದು ಸಾಯಿತೀನಿ. ಆದ್ರ ಬುದ್ದಿ ನೀವು ಹೇಳಿದ ಹಾಗೆ ಇರೋ ಹೊಲನ ಇಬ್ರಿಗೂ ಸಮನಾಗಿ ಹಂಚ್ರಿ, ಅವನು ನನ ಮಗನೆ, ಪಡಬಾರದ ಕಷ್ಟಪಟು ಬದುಕನ್ನು ಕಟ್ಟಿದವನು. " ಏನೇನೋ ಹೇಳಾಕ ಹೋದಳು ಆದರೆ ಅಗಲಿಲ್ಲ. ಆಡವಿ ಹೊಲದಾಗ ಎರಡು ಭಾಗ ಸೀಳಿ ಉದ್ದಕೆ ಮಾಡಿದರು. ಒಂದು ಪಕ್ಕೀರನಿಗೆ ಒಂದು ದೊಡ್ಡನಾದ ಭಗ್ನಯನಾಯ್ಕನಿಗೆ. ಚಿಕ್ಕವನದು ನಾಳೆ ಏನೋ ಎಂಥೋ ಅಂಥೇಳಿ. ಜಗಳಗಂಟಿ ಪುಜಾರಿ ಹೊಲದ ಕಡೀಗೆ ದೊಡ್ಡವನು ಬಡಿದಾಡಿ ಕೊಳ್ಳಲಿ ಅಂತೇಳಿ ಬಿಟ್ಟು,, ಬೂಮಿ ಸುಮಾರಾಗಿದ್ರು ಅದನ್ನೆ ತಗೊಳ್ಳೋದಾಗಿ ಗುಡ್ಲೀರಿ ಒಪ್ಪಿ ಕೊಂಡಳು. ಹೊಲದೊಳಗೆ ಆರಿಸಿದ ಕಲ್ಲು, ಕಸವನೆಲ್ಲ ಯಾರಾದರೂ ಬದುವಿನ ಮೇಲೆ ಒಟ್ಟಿದರೆ

ಪೂಜಾರಿಯ ಮಗ ಜಿಂಕಾಲುನಾಯ್ಕ ಪಕ್ಕದ ಪಂಪಾನಾಯ್ಕನ ಹೊಲದಲ್ಲಿ ಬಿಸಾಡಿ ಜಗಳ ತಗಿಯುತ್ತಿದ್ದ. ಇದಕ್ಕೆ ರೋಸಿ ಹೋಗಿದ್ದ ಗುಡ್ಲೀರಿ ತನ್ನ ಚಿಕ್ಕಮಗನ್ನ ಆ ಜಂಜಾಟದಿಂದ ಪಾರು ಮಾಡಿದ್ದಳು. ಹೊಸದಾಗಿ ಖರೀಧಿಸಿದ್ದ ಹೊಲದೊಳಗೆ ತಲ ಒಂದುವರೆ ಎಕ್ಕರೆ ಜಮೀನು ಮಾಡಿಕೊಂಡರು.

ಒಟ್ಟಾರೆ ಇಪ್ಪತ್ತು ಎಕರೆ ಜಮೀನು ನಡುವೆ ಬಹು ದೂರವಾಗಿತು. ಪಕ್ಕೀರನ ಮದುವೆಯಾಗಿ ವರ್ಷಕ್ಕೆ ಒಂದು ಹೆಣ್ಣು ಕೂಸು ಹುಟ್ಟಿತು. ಗುಡ್ಲೀರಿಯ ಎದೆಯೊಳಗೆ ಯಾರೋ ಕಿಚ್ಚಿಟ್ಟಂತಾಯಿತು. ದೊಡ್ಡವನಿಗೆ ಮೊದಲನೇಯದು ಗಂಡು, ಸಣ್ಣವನಿಗೂ ಹಾಗೆ ಅಂತ ಅಂದುಕೊಂಡಿದ್ದಳು. ಮುಂದೆ ಆಗ ಬಹುದೆಂದು ಸುಮ್ಮನಾದಳು. ಎರಡನೇದು ಹೆಣ್ಣು ಅಂತ ಕೇಳಿ, " ಏಯ್, ಆ ಚೀಲದಾಗ ಹೆಣ್ಣೆ ತುಂಬಿಕೊಂಡಾಳೇನು?ಅದ್ಯಾವ ಕುಲದಾಕಿನ್ನ ಕಟ್ಟಿಕೊಂಡು ಬಂದ್ನೋ. ಅವನಿಗೆ ಏಳು ಗಂಡು ಮೂರು ಹೆಣ್ಣು. ನಿನಗ.?" ಮಾತಲ್ಲೆ ಇರಿಯತೊಡಗಿದಳು. ಕೇಳೊಮಟ ಕೇಳಿದ ಭಗನ್ಯಾನಂಗೆ ಮುಲಾಜು ನೋಡುವ ಜಾಯಮಾನ ಪಕ್ಕೀರಂದಲ್ಲ. ಏನೇ ಇದ್ರು ಹಿಡ್ತ ಹೊಡ್ತ. ಯಾವ ಅವನ ಪಿತ್ತ ನೆತ್ತಿಗೇರಿತೊ ಗುಡ್ಲೀರಿ ಮೊಳಕೈ ಮುರಿದು ಬಿಟ್ಟ. ಅಷ್ಠಾದರೂ ಸುಮ್ಮನಿರದೆ ಸೊಸೆಗೆ ಹೀನಾಮಾನ ಮಾತುಗಳಿಂದ ಬೊಯ್ಯ ತೊಡಗಿದಳು. ಒಂದೊಂಮೆ ಗುಡ್ಲೀರಿಯನ್ನು ಮನೆಯಿಂದ ಹೊರಗೆ ಹಾಕಿದ್ದ. ಅದರೆ ತಾಯಿ ಅನ್ನುವ ಮಮಕಾರದಿಂದ ಒಳಗೆ ಕರೆದು ಕೊಂಡಿದ್ದ. ಹಿರಿಯ ಮಗನಾದ ಭಗನ್ಯಾಯ್ಕನ ಮೇಲೆ ಅವಳಿಗೆ ಕಿಂಚಿತ್ತು ಮಮಕಾರ, ಕುರುಣೆ ಇರಲೆ ಇಲ್ಲ. ಅವನು ಬೇರೆಹೋದ ಮೇಲೆ ಯಾವತ್ತು ಅವನ ಹೆಸರು ಹೇಳಲಿಲ್ಲ. ಅವನು ಕರೆದರೆ ಹೋಗಲಿಲ್ಲ. ಮುದುಕ ಪಂಪಾನಾಯ್ಕ ಮಾತ್ರ ಹಬ್ಬ ಹರಿದಿನ ಅಂತ ಹಿರಯ ಮಗನ ಮನೆಗೆ ಅಡ್ಡಾಡುತ್ತಿದ್ದ. ಈ ಕಡೆಗೆ ಹೆಣ್ಣುಗಳ ಸಂಖ್ಯೆ ಹೆಚ್ಚಾಗುತ್ತಿದ್ದಂತೆ ಅಣ್ಣನ ಮೆಲಿನ ಸಿಟ್ಟು, ದ್ವೇಷ ಹೆಚ್ಚಾಗ ತೊಡಗಿತು. ಪೂಜಾರಿ ಪೂರ್‍ಯಾ ಬಿಟ್ಟು ಬಿಡದೆ ಅವನ ತಲೆ ಕೆಡೆಸಿದರು.

ಕಾಯಿಲೆ ಕಸಾಲೆ ಬಡತನ ದಾರಿದ್ರ್ಯ ತುಂಬಿ ಹೋಗಿದ್ದ ಮನೆಯಲ್ಲಿ ಭಗಿನ್ಯಾಯ್ಕ ಹಾತಾಶ ನಾಗಿದ್ದ. ಅಷ್ಟಾದರೂ ಯಾರ ಮನೆಗೆ ಹೋಗಿ ಸೇರು ಕಾಳಿಗಾಗಿ ಕೈ ಒಡ್ಡಲಿಲ್ಲ. ಅವನ ಸ್ವಾಭಿಮಾನದ ಪರಿಚಯ ವಿದ್ದ ಸರ್ವತಪ್ಪ ತಾನೆ ಖುದ್ದಾಗಿ ಭಗನ್ಯಾಯ್ಕನನ್ನು ಹುಡುಕಿಕೊಂಡು ಗುಡಿಸಲಿಗೆ ಹೋದ. "ಅಲ್ಲಲೇ, ಒಂದು ಮಾತು ಬಂದು ಹಿಂಗೈತಿ ಪರಿಸ್ಥಿತಿ ಅಂತ ಹೇಳಾಕ ಬರಂಗಿಲ್ಲ ನಿನಗ. ಭಾರಿ ದೊಡ್ಡ ಮನುಷ್ಯ ಆದಿಬಿಡು. ನಿನ್ನ ಸಲುವಾಗಿ ಅಲ್ಲದಿದ್ದರೂ ಹೆಂಡಿತಿ ಮಕ್ಕಳ ಸುಲುವಾಗಿ ಸೋಲಬೇಕು. ವ್ಯವಸ್ಥೆ ಜೊತೆಗೆ ಹೊಂದಾಣಿಕೆ ಮಾಡಿಕೊಳ್ಳಬೇಕು, ನೋಡು ಈ ಜಗತ್ತಿನಲ್ಲಿ ಯಾವುದು ಶಾಶ್ವತ ಅಲ್ಲ. ನೀನು ದುಡಿಮೇಗಾರ, ಮೈ ಮನಸ್ಸು ಮುರಿದು ದುಡಿಯುವವನು. ಒಮ್ಮೆ ಭೂಮಿ ತಾಯಿ ನಿನ್ನ ಕೈ ಹಿಡಿತು ಅಂದ್ರೆ ಯಾರಿಗೂ ಬಗ್ಗದಂಗ ಇರ್ತೀಯಾ. ನಾಳೆ ಮುಂಜಾನೆ ನಮ್ಮೂರಿಗೆ ಬಂದು ಆ ದುರ್ಗಮ್ಮನ ಗುಡಿ ಹಿಂದಿನ ಕುರುಬರ ಸಂಜೀವನ ಎರೆಡೆತ್ತು ಹೊಡಕೊಂಡು ಐದಾರು ಗಿನ್ನ ಜ್ವಾಳ ತಗೊಂಡು ಬಾ ಮುಂದಿಂದು ನೋಡಾನು." ಅವನ ಮಾರಿಯನ್ನು ನೋಡಿದ. ಭಗನ್ಯ ಮಾತಾಡುವ ಪರಿಸ್ಥಿತಿಯಲ್ಲಿರಲಿಲ್ಲ ಅದರೂ. "ಮರಿಬ್ಯಾಡ ನಾ ಭಾರಿ ಪಿರ್ಕಿ ಮನುಷ್ಯ ಕಣಯ್ಯ, ಆ ಗದ್ದೆಗಳನೆಲ್ಲಾ ನೋಡು ಹಸಿ

ಆಗಿದ್ರ ರಂಟೆ ಹೂಡು." ಅಂದು ಮುಂದಕ್ಕೆ ಹೋದ. ಭಗನ್ಯಾಯ್ಯನ ಒಳಗೆ ಹೊರಾಟ ನಡೆದಿತ್ತು. ಅವನಿಗೆ ಪರ್ಯಾಯ ದಾರಿಗಳೇ ಇಲ್ಲ. ಮುಂಜಾನೆ ಎದ್ದವನೆ ಡೊಂಬಲೂರು ದಾರಿ ಹಿಡಿದ.

ಅವನು ಹೋದಾಗ ಸರ್ವತಪ್ಪ ಎದ್ದು ಚಹ ಕುಡಿತ್ತಿದ್ದ. " ಅರೆ ಬಂದೇ ಬಿಟ್ಟೆ ಬಾಯಾವಾಗ ಬಿಟ್ಟಿದ್ದು ತಾಂಡ. ನೀನು ವಿಚಿತ್ರ ಮನುಷ್ಯ ಕಣಯ್ಯ, ಕತ್ತಲು ಬೆಳಕು ಅನ್ನೋದನ್ನು ನೋಡೋದೆ ಇಲ್ಲ. ಮಂದಿ ಮುಂಜಾನೆ ಅರಾಮಾಗಿ ಮಲಗಿರ್ತಾರ. ನೀನು ನೋಡಿದ್ರ ದಂಬಲೂರು ತಲುಪಿದಿಯಾ. ಚಾ. ಕುಡಿ." ಅಂದವನೆ ಹೆಂಡತಿ ಕರೆದು ಚಹ ಕೊಡಲು ಹೇಳಿದ. " ಚಾ ಏನು ಬೇಡ ಬುದ್ದಿ ಎತ್ತುಗಳು." ಅಂದ. " ಹೋಗಾನು ಬಾರಯ್ಯ, ಕುರುಬರ ಸಂಜೀವ ಏಳೋದು ಬ್ಯಾಡವಾ. ನೀ ಏನೋ ಮುಂಗೊಳಿ ಕೂಗಾಕ ಮುಂಚೆನೆ ಎದ್ದು ಬಿಡ್ತಿಯಾ. ಹಂಗಂತ ಮಂದಿ ಏಳುಬೇಕು ಅಂತೇನಾದರು ನಿಯಮ ಐತ?" ತಿಳಿಸಿ ಹೇಳಿದ. ಚಹ ಕುಡಿಯುತ್ತಲೆ ಎತ್ತುಗಳು ಹೇಗಿರಬಹುದು ಎನ್ನವುದನ್ನು ಅಲೋಚಿಸಿದ. ಕರಿ ಎತ್ತು ಹಾಯವುದೋ, ಚುರುಕಿದ್ದಾವೋ ಇಲ್ಲ ಭಂಡ ಅದಾವೊ ಹೆಂಗೆಗೋ ಇದ್ರೆ ಹೆಂಗೆ, ಮಕ್ಕಳು ಮರಿ ಮನಿಯೊಳಗೆ ಅದಾರ ತನ್ನೊಳಗೆ ಆಲೋಚಿಸಿ ಕೇಳಿದ. " ಬುದ್ದಿ ಎಷ್ಟು ಹಲ್ಲು ಅದಾವ." ಅಂದ. ಹದಿನೈದು ಇಪ್ಪತ್ತು ಅಂದಿದ್ದ ಬಟ್ಟ. ಭಗ್ಗನ್ಯಾ ಜೋರಾಗಿ ನಕ್ಕು, "ಅವೇನು ಮನುಷ್ಯರ, ಹದಿನೈದು ಇಪ್ಪತ್ತು ಹಲ್ಲು ಇರಾಕ, ಹಂಗಿದ್ರ ಹುಲ್ಲು ಪೆಂಡಿನಾ ಒಂದೇಟಿಗೆ ನಿರ್ವವಂಶ ಮಾಡ್ತಿದ್ವೋ ಏನೊ, ನಾಕು ಹಲ್ಲು, ಇಲ್ಲ ಆರು ಹಲ್ಲು ಇರಬೇಕು." ಅಂದವನೆ ಒಮ್ಮೆ ನಕ್ಕ. "ಹೌದಲೆ ಬಗನ್ಯಾ, ನಂಗೆ ಗೊತ್ತಿರಾಕಿಲ್ಲ ನೋಡು ಈ ವಿಷ್ಯ. ಪಾಡಾತು ನೀ ಹೇಳಿದ್ದು. ಮತ್ತ ನಾ ಮಂದಿಮುಂದೆ ಹೇಳಿ ಅವರನ್ನ ಹಾಸ್ಯ ಮಾಡೋದ ತೆಪ್ಪಿತು." ತನಗೆ ಗೊತ್ತಿಲ್ಲದ್ದನ್ನು ಒಪ್ಪಿಕೊಂಡ ಸರ್ವತಪ್ಪ.

ಕರುಗಳನ್ನು ಮನಿಗೆ ಒಯ್ಯತ್ತಿದ್ದಂತೆ ಭಗ್ಯಾನ ಮನಿಯೊಳಗೆ ಒಂದು ಸಂಚಲನ ಆರಂಭವಾಗಿತ್ತು. ಒಕ್ಕಲುತನ ಮಾಡೊದಕ್ಕೆ ಜೋಡಿ ಎತ್ತಿನ ಅನಿವಾರ್ಯತೆ ಇತ್ತು. ಯಾರ ಹತ್ರ ಎರಡು ಎತ್ತು ಅದಾವೋ ಅವ ಬಾಡಗಿ. ಸಿಡಗ ಹೊಡದು ನಾಕು ಕಾಸ ಸಂಪಾದಿಸಿ ಆರಾಮ ಜೀವನ ನಡೆಸ್ತಾನ. ಎತ್ತುಗಳಿಲ್ಲದೆ ಭಗಗ್ಯಾ ಒದ್ದಾಡಿದ್ದ. ತನ್ನ ಹಿಂಡು ಮಕ್ಕಳ ಭವಿಷ್ಯ ಕತ್ತಲಾಗಿ ಕಂಡಿತ್ತು. ಆದರೆ, ಸರ್ವತಪ್ಪನ ಸಹಾಯದಿಂದ ಅವನ ಸಮಸ್ಯೆ ಎನೋ ದೂರವಾಯ್ತು. ಬಹು ಮುಖ್ಯವಾದ ನಾಗರ್, ನೊಗ, ಪಟ್ಟಿಗರ್, ಸಂಜೆ ಮಿಣಿ ಬೇಡವೆ. ಯಾರಿಗೆ ಕೆಳೋದು ಅನ್ನುವ ತಾಕಲಾಟದಾಗಿದ್ದ. ಯಾಕಂದ್ರ ಅವನಿಗೆ ಕೇಳಿ ಅಭ್ಯಾಸ ಇದ್ದಿಲ್ಲ. ಎಲ್ಲಾನು ಸೃಷ್ಟಿ ಮಾಡುತ್ತಿದ್ದ ಅಂತಹವನಿಗೆ ಈ ಸ್ಥಿತಿ ಬಂದಿತ್ತು. ಸುಮ್ಮನೆ ಗುಡಿಸಲ ಮುಂದೆ ನಗೆ ಚಾಟಿಕೆ ಮಾಡ್ತಾ ಕುಂತಿದ್ದ. ಎಂದಿನಂತೆ ದಿನ್ನಿಸಾಬಿ, ಉಪ್ಪಾರ ಹುಲವಪ್ಪ ಅವನ ಗುಡಿಸಲ ಮುಂದಿನೆ ಮಾಡ್ರಾ ಹಾದಿಯಿಂದ ಬಯಲ ಕಡೀಗೆ ಹೊಂಟಿದ್ದರು. ಭಗನ್ಯಾ ಗುಡಿಸಲು ಮುಂದೆ ಎರಡು ಕರ ಕಟ್ಟಿದನ್ನು ಗಮನಿಸಿ, "ಕ್ಯಾ ಭಗನ್ಯಾ ಬೇಟೆ ಎತ್ತು ತಗೊಂಡ ಬಂದಿ, ಏನು ಬೆಲೆ." ಅಂದ. "ಇಲ್ಲಾ ಸಾಬಿಕಾಕ, ಇವು ಪರ್ವತಪ್ಪ ಬಟ್ಟರ ದನ, ಹಿಂಡಿನಲ್ಲಿದ್ದವು. ಏನೋ ಧಣಿ ದೊಡ್ಡ ಮನಸುಮಾಡಿ ಯಾಕ ಬಡದಾಡ್ತೀಯಲೆ ತಗೊಂಡು ಹೋಗು ಅಂತ ಕೊಟ್ಟಾರ. ಸಾಕು ಮಾತಾಡಿಲ್ಲ." ಅಂದವನೆ ಎರಡು ಕರುಗಳ ಮೈ ಸವರಿದ. ಅವಕ್ಕೆ ಹಿತ ಎನಿಸಿ ಅವನ ಕೂದಲನ್ನು ನೆಕ್ಕಿದವು. ಅವನ ಮೈಕೈಯನ್ನೆಲ್ಲಾ ನೆಕ್ಕ ತೊಡಗಿದವು. ಅವನು ಎಲ್ಲ ಕಡೆ ಮೈಯಾಡಿಸಿ ಹಿಡಿ ಹುಲ್ಲು ಹಾಕಿ ಒಳಗೆ

ಬರಲು ನೋಡಿದ. " ಆತು ಬಿಡಲೆ ಬಗನ್ಯಾ ನಿನ್ನ ಅದೃಷ್ಟ ಖುಲಾಯಿಸಿತು. ಸರ್ವತಪ್ಪ ನಿನ್ನ ಕೈ ಹಿಡಿದಾನಂದ್ರ ಮುಗೀತು. ಬಾಂಬ್ರು ನಂಬಂಗಿಲ್ಲ. ನಂಬಿದ್ರು ಕೈ ಬಿಡಂಗಿಲ್ಲ." ಉಪ್ಪಾರ ಹುಲುವಪ್ಪ ಬಾಯಿ ತಡೀಲಾರದೆ, "ಹಿಂಗ್ಯಾಕ ಮಾತಾಡ್ತಿ ಬಿಡ ಭಗನ್ಯಾ ಏನು ಕಮ್ಮಿ ಅಂದ್ಕೋಬ್ಯಾಡ. ನೆಲ ಬಗದು ನೀರು ತಗಿಯೋಪೈಕಿ. ಭಟ್ರು ಇವನದೂಕೆ ಕಾಮ್ ನೋಡಿ ಕರು ಕೊಟ್ಟಾರ." ಸಮಾಧಾನ ಪಡಿಸಿದ. ಅದರೂ ಉಪ್ಪಾರ ಹುಲವಪ್ಪನಿಗೆ ಸಮಾಧಾನ ಆಗಲಿಲ್ಲ. ತನ್ನ ಮನೆಯಲ್ಲಿ ದುಡಿಮೆ ಕಡಿಮೆಯಾಗುತ್ತಿದ್ದು ಸಂಪೂರ್ಣವಾಗಿ ದಿವಾಳಿ ಎದಿರಿಸುವ ಸಮಯದಲ್ಲಿ ಭಗನ್ಯಾಯ್ಕ ಏಳಿಗೆ ಪ್ರಾರಂಭವಾಗಿತ್ತು.

ಭಗನ್ಯಾಯ್ಕನ ಹಿರಿಮಗ ಟಾಂಕ್ಯ ಶಾಲೆ ಒಳಗೆ ಶೂನ್ಯ ಬೆಳವಣಿಗೆ ತೋರಿಸಿದ್ದಕ್ಕೆ ಶಾಲೆ ಬಿಡಿಸಿ ಬೇಸಾಯ ಮಾಡಾಕ ಹಚ್ಚಿದ. ದನಗಳು, ಏರಡು ಹೋರಿ ಕರಗಳು ಎಲ್ಲವನ್ನು ಕಾಳಜಿ ಯಿಂದಲೆ ಮೇಯಿಸಿಕೊಂಡು ಬರುತಿದ್ದ. ಕರುಗಳನ್ನು ಕೈಯಾಗೆ ಹಿಡಿದು ಮೇಯಿಸಿದಕ್ಕೆ ಮೈಕೈ ತುಂಬಿಕೊಂಡು ಒಳ್ಳೆ ಗುಳಿಯಂಗೆ ಬೆಳದಿದ್ದವು. ಮುಂದಿ ದಿಪಾವಳಿ ಬಲಿಪಾಡ್ಯದ ದಿನಾನೆ ಕಸಿ ಮಾಡುವ ಹುಸೇನಿಗೆ ಹೇಳಿ ಕಸಿ ಮಾಡಿಸುವ ಯೋಚನೆಯಲ್ಲಿದ್ದ. ಮೊಮ್ಮಿಗೇರಿಗೆ ಹೋಗಿದ್ದ ಭಗನ್ಯಾಯ್ಕ ಅಲ್ಲೆ ಸಿಕಿದ ಹುಸೇನಿಗೆ ಮೊಮ್ಮಿಗೇರಿಯ ಗುದಗನ ಅಂಗಡಿಯಲ್ಲಿ ಚಹ ಕುಡಿಸಿ, ಹೇಳಿದ. " ಈ ಅಮಾಸಿಗೆ ನಮ್ಮ ಹೋರಿಗಳಿಗೆ ಕಸಿ ಮಾಡ್ಬೇಕು ಹುಸೇನಣ್ಣ, ಈಗೇನು ಬಾಳ ಕಷ್ಟಪಟ್ಟು ಅವರಿವರನ್ನು ಕೇಳಿ ಹೋರಿ ಪಡೆದು ಗಳೆ ಹೊಡೆಯಾಕ ಹತ್ತೀನಿ, ಮುಂದೆ ಬಾಳ ಕಷ್ಟ ಅಗತೈತೆ." ಅಂತ ಮನವರಿಕೆ ಮಾಡಿಸುತ್ತಿದ್ದಂತೆ. "ಅರೆ ಭಗನ್ಯಾ ನಮ್ದುಕೆ ಇರುವಾಗ ನಿಮುಕೆ ಚಿಂತೆ ಯಾಕೆ. ಹೊತ್ತಾರೆ ಎದ್ದು ಬಿಟ್ಟು ಕರುಗಳಿಗೆ ಚನ್ನಾಗಿ ತೊಳ್ಕೊಂಡು ಬಂದು ಬಿಡು. ನಾ ಮಾಡಿಬಿಡ್ತೀನಿ." ಹುಸೇನಿ ಭರವಸೆ ಕೊಟ್ಟ. ಭಗನ್ಯಾಯಕನ ಅಂತಕರಣದ ಮಾತಿಗೆ ಹುಸೇನಿ ಅವನಿಗೆ ಸಹಾಯ ಮಾಡಲು ನಿರ್ಧರಿಸಿದ್ದ. ಭಗನ್ಯಾನ ಎದೆಯಲ್ಲಿ ಎಷ್ಟುಬೇಗ ಎತ್ತುಗಳಿಂದ ತನ್ನ ಜಮೀನಿನಲ್ಲಿ ರಂಟೆ ಹೊಡೆಯುತ್ತೇನೆ ಎಂಬ ಆತಂಕ ತುಂಬಿತ್ತು.

ಕಾಳೀಮಾಸದ ದಿವಸ ಮುಂಜಾನೆ ಕೊಳಿಕೂಗುವುದಕ್ಕಿಂತ ಮುಂಚೇನೆ ಎದ್ದು ವಸ್ತುಗಳನ್ನು ಹೊರಗಡೆ ಬಿಟ್ಟು ಸಗಣಿಕಸ ಗುಡಿಸಿ, ಮೂಲೆಯಲ್ಲಿ ದುಂಡಗೆ ಮಾಡಿ, ಎತ್ತುಗಳನ್ನು ಕೆರೆಗೆ ಹೊಡದಕೊಂಡೋಗಿ ಮೈತೊಳೆದುಕೊಂಡು ಬಂದವನೆ ಎಣ್ಣೆಯಲ್ಲಿ ಅರಿಷಣ ಕಲಿಸಿ ಇಟ್ಟಿದನ್ನು ಎತ್ಕೊಂಡು ಯಾರಾದರೂ ಬಂದುಗಿಂದಾರಂತೆ ಗುದ್ದಮ್ಮನ ಗುಡಿಯ ದೊಡ್ಡ ಬೇವಿನ ಮರದ ಕೆಳಗೆ ಹೊಡಕೊಂಡು ಹೋದ. ಯಾವ ಹೋರಿಕರಗಳು ಬಂದಿರಲಿಲ್ಲ. ಹುಸೇನ್ ಸಾಬಿನೂ ಕಾಣದಾಗಿದ್ದ. ಅಲ್ಲೆ ನೆಲದಿಂದ ಮೇಲೆ ಎದಿದ್ದ ಬೇವಿನ ಬೆರುಗಳಿಗೆ ಎತ್ತುಗಳ ಕಟ್ಟಿದವನೆ, ಹಸಿರ ಮರಿ ಕಡಿದ ಪಾತ್ರೆಯಲ್ಲಿ ಹಿಡಿದಿಟ್ಟಿದ್ದ ರಕ್ತದ ಮಕ ನೋಡಿ ಅರಲ್ಲಿ ಕಿರುಬೆರಳನ್ನು ಅದ್ದಿ ಹುಸೇನಿ ಬಂದಿರಬಹುದೆಂದು ಗಾರಿ ಕಟ್ಟೆಯ ಕಡೆಗೆ ಬಂದ. ಆಗ ತಾನೆ ಬಂದಿದ್ದ ಹುಸೇನಿ, "ಅರೆ ಭಗನ್ಯಾ, ಕೂರ್ಗಿದೂಕೆ ಬಟ್ಟಲು ಇದ್ರೆ ತಗೊಂಡು ಬರಬೇಕಲ್ಲ." ಕೇಳಿದ. "ಎನು ಹುಸೇನಿ ಭಾಯಿ ನನ್ನ ಹತ್ರ ಕೂರ್ಗಿ ಬಟ್ಟಲು ಎಲ್ಲಿ ಬರಬೇಕು. ನಾನು ಎಲ್ಲನೂ ಈಗ ಆರಂಭಮಾಡಬೇಕು." ರಾಗ ಎಳೆದು ಹೇಳಿದ ಭಗನ್ಯಾಯ್ಕ. "ಆಯ್ತು ಬಿಡಿ ಭಗನ್ಯಾ ಈಗ ಯಾರ್ದಾದರು ಬೈಲ್ ಬರ್ತಾವೆ. ಅದ್ರಾಗೆ ಬರ್ತದೆ. ಆಗ ಫೈಲೆ ನಿಂದುಕೆ ಮಾಡುವ. "ಅಂತೇಳಿ ಸಮಾಧಾನ ಪಡಿಸಿದ.

ಮಕ್ಕಳನ್ನು ಕಾಜಿಮಾಡುವ ಹಾಗೆ ಕರುಗಳನ್ನು ಕಾಳಜಿ ಮಾಡಿದ ಭಗನ್ಯಾಯ್ಕ. ದಿನಾಸಂಜೆ ಮೇದು ಬಂದ ಮೇಲೆ ಚೆನ್ನಾಗಿ ಮೈ ಉಜ್ಜಿ ಹತ್ತಿಕಾಳು, ನುಚ್ಚು ಇಟ್ಟು ತಯಾರಿ ಮಾಡಿದ. ಆ ವರ್ಷದ ಕೊನೆಯಲ್ಲಿ ಮಾಗಿ ಕಾಲ ಮುಗಿಯುವವರೆಗೂ ಹಸರು ಹುಲ್ಲು ಮೇಯಿಸಿ ಬಿಟ್ಟು ಒಣಹುಲ್ಲಿಗೆ ಬಿಟ್ಟಾಗ ಎರಡು ಹೋರಿಕರುಗಳು ಮೈ ಒಡೆದು ಒಳ್ಳೆ ಗೂಳಿಹಂಗೆ ಕಾಣತೊಡಗಿದವು. ಅವತ್ತೊಮ್ಮೆ ಭಗನ್ಯಾ ಎರಡನೆ ಮಗ ಬದಿಯಾ ಸ್ಕೂಲ್ನಿಂದ ಹೊಗ್ತಿದ್ದನು. ಸೂಟಿ ಐತಿ ಅಂದಿದಕ್ಕ ಟಾಂಕ್ಯನ ಯಾರದೋ ಹೊಲ ಕೂಲಿ ಕಳುಹಿಸಿ ಎತ್ತು ಮೇಯಿಸಾಕಂತ ಬದಿಯಾ ಬುರ್ಕ್ಯಾ ಕಳಿಸಿದ್ದ. ಎತ್ತುಗಳನ್ನು ತಮ್ಮ ಹೊಲದ ಮೇರಿಗುಂಟ ಮೇಯಿಸಕೊಂಡು ಹೋಂಟಿದ್ದ ಅವನ ಓರಿಗೆಯವರಾದ ಚಂದಿಯಾ, ಯಂಕ ಕೂಡ ತಮ್ಮ ಹೊಲದ ಮೇರಿಗೆ ಎತ್ತು ಮೆಯಿಸೋಕ ಹೊಡದು ಕೊಂಡು ಹೊಂಟಿದ್ದರು. ಸುಮ್ಮನೆ ಬಂದ್ಕೆಲಸ ಮಾಡೋದು ಬಿಟ್ಟು, " ಏನೋ ಬದಿಯಾ ಎಲ್ಲೋ ಹೊಂಟಂಗ್ಯೆತೆ." ಅಂದ ಯಂಕ. ಬದಿಯಾ ಮೊದಲೆ ಮುಂಗೋಪಿ ಮತ್ತ ಯಡವಟ್ಟು. ಅದರೂ ತಡಕೊಂಡು, "ಹೂಂ, ಲೆ ಎತ್ತ ಮೇಯಿಸಾಕು ಹೊಲದ ಕಡೀಗೆ ಹೊಂಟೀನಿ." ಅಂದ. "ನಿನ್ನವೇನು ಎತ್ತು. ಅದ್ರ ಕೆಲ್ಸಕ ಬಾರದವು. ಚಂದ್ರಯನ ಅದಾವು ನೋಡುವ ಹೋರಿಗಳಂದ್ರೆ ಹೋರಿಗಳು. ಅವನಪ್ಪನ ಕೈ ಇಟ್ರಸಾಕು ಹಂಗ ಚಂಗಂತ ಜೀಗಿತಾವ." ಅವನ ಮರ್ಮಾಂಗಕ್ಕೆ ಹೊಡದಂತಾಗಿ ಹೇಳಿದ. ಬದಿಯಾ ಸುಮ್ಮನ ಮಾತಾಡಿದಂಗೆ, " ಏಯ್ ನಂದಿ ಕುರುವತ್ತಿ ಹೂಂ. " ಅಂತೇಳಿ ಎರಡರ ಕೈಮೇಲೆ ಕೈ ಇಟ್ಟ. "ಟಂಗ್" ಅಂತ. ನಾಕು ಕಾಲುಗಳನ್ನು ಮೇಲೆತ್ತಿ ಚಣಕ್ಕನೆ ಜಿಗಿದವು. ಅವರುಕೂಡಿ ಸರದ ವರೆಗೆ ಎತ್ತುಗಳನ್ನು ಓಡಿಸಿಕೊಂಡೆ ಬಂದರು. "ಏನ್ಲೆ ಬದಿಯಾ ಬೋಳಿ ಮಗನೆ ನಿನ್ನವೇನು ಗೆಣಸಿ ಹೋರಿ ಅಂದಂಗ ಮಾಡ್ತಿಯಲ್ಲ." ಹೀಗೆ ಏನೇನೋ ಮಾತಾಡಿ ಕಾಲು ಕೆದರಿ ಜಗಳ ಸುರವಾಯತ್ತು. ಯಾಕೋ ಬದಿಯಾ ಜಗಳ ಆಡೋ ಮನಸ್ಸಿಲ್ಲದೆ ಸುಮ್ಮನೆ ತಮ್ಮ ಹೊಲದ ಮೇರೆ ಕಡೆ ಹೊರಟಿದ್ದ. ಆದ್ರೂ ಬಿಡದ ಚಂದ್ರ ಮತ್ತು ಯಂಕ, 'ಲೇ ನೀ ಗಂಡಸಾದ್ರ ನಮ್ಮ ಎತ್ತಿನ ಕೂಡ ಹಾಯಕ ಬಿಡಲೆ ಮತ್ತ ನೋಡಾನು ಯಾರ ದಮ್ಮು ಏಟೈತಿ "ಅಂತ." ಅಂದವನೆ ಅವನನ್ನು ನೇರವಾಗಿಯೇ ಜಗಳಕ್ಕೆ ಅಹ್ವಾನಿಸಿದ್ದ. ಆದರೂ ಬದಿಯಾ ಸುಮ್ಮನಿದ್ದ. ಇಬ್ಬರು ಎತ್ತುಗಳನ್ನು ಎಕ್ಕಿಗಿಡದ ಬುಡಕ್ಕೆ ಕಟ್ಟಿ , "ಏನಲೆ ಬೋಸುಡುಕೆ, ನಾವು ಹೇಳೋದು ಕೇಳವಲ್ದ ನಿನಗ." ಅಂದವನೆ ಚೆಂದಿಯ ಕೊಳಪಟ್ಟಿ ಹಿಡಿದು ಎಳೆದ. ಯಂಕ ಸುಮ್ಮನಿರದೆ ಬದಿಯಾನ ತಲೆಗೆ ಹೊಡೆದ. ಬದಿಯನ ಪಿತ್ತ ನೆತ್ತಿಗೇರಿತ್ತು." ಯಾಕಲೆ ನಿಮ್ಮವ್ವನ್ ಸುಳಿಮಗನೆ ಅಂದವನೆ ಎತ್ತುಗಲ್ಲನು ಬಿಟ್ಟು ಇಬ್ಬರನ್ನು ಎತ್ತಿ ನೆಲಕ್ಕೆ ಕುಕ್ಕಿ ಗ್ವಮಾಳಕ ಹಿಡಿದು ಹಿಸುಕಿದ." ಯಪ್ಪಾ ಸತ್ನೆ ಇನ್ನೊಮ್ಮೆ ನಿನ್ನ ತಂಟಿಗೆ ಬರಂಗಿಲ್ಲ. ಬಿಡಲೆ." ಎಂದು ಗೊಗರೆದರು. ಅವನು ಕೈ ಬಿಟ್ಟಿದ್ದೆ ಅವನ ಎತ್ತುಗಳು, ಅವರು ಕಟ್ಟಿದ್ದ ಎತ್ತುಗಳತ್ತ ಕಡೆಗೆ ಹೋದವು. ಚಂದಿಯಾನ ಕರಿ ಎತ್ತು ಬದಿಯಾನ ಎತ್ತುಗಳತ್ತ ವಾರೆಗಣ್ಣಿನಿಂದ ನೋಡಿ "ಸೂ, , , ,ರ್ ಸೂ, , ,ರ್" ಎನ್ನತೊಡಗಿತು. ನೋಡು ನೋಡುತ್ತಿದ್ದಂತೆ ಎರೆಡು ಎತ್ತುಗಳು ಕಾದಾಟಕ್ಕೆ ಬಿದ್ದವು ಚಂದಿಯಾನ ಎತ್ತು ರೋಷದಿಂದಲೆ ಒಂದೇ ಏಟಿಗೆ ನುಗ್ಗಿದಕ್ಕೆ ಬದಿಯಾನ ಎತ್ತು ನೆಲಕಚ್ಚಿತು. ಅದರ ಹೊಡೆತಕ್ಕೆ ಜೋರಾಗಿ ಅಂಬಾ ಅಂತ ಚೀರಿತು. ಅವರನ್ನು ಬಿಟ್ಟುವನೆ ತನ್ನ ಎತ್ತುಗಳನ್ನು ಹಿಡಿಯಲು ಬಿದಯಾ ಓಡಿದ. ಅಷ್ಟೊತ್ತಿಗಾಗಲೆ ಚಂದಿಯಾನ ಕರಿ ಎತ್ತು ಹಗ್ಗ ಹರಿದುಕೊಂಡು ಓಡಿತು. ಅದರ ಪಕ್ಕಲುಬಿಗೆ ಬದಿಯಾನ ಎತ್ತು ಹಾದು ಒಂದಿಂಚು ಚರ್ಮ ಕಿತ್ತಿತ್ತು. ರಕ್ತ ಸೋರುತ್ತಿತ್ತು. "ಹೋ ಹೋ.."

ಅಂತ ಅಳುತ್ತಾ ಓಡಿದ. ಹಗ್ಗ ಹಕ್ಕೊಂಡು ಮನಿಕಡಿಗೆ ಚೆನ್ನಾಟಕಿತ್ತಿದ್ದ ಕರಿ ಎತ್ತನ್ನು ಚಂದಿಯಾ ಬೆನ್ನು ಹತ್ತಿ ಹಿಡಿದು ತಂದರು. ಗಾಯದಿಂದ ರಕ್ತ ಸೋರುತ್ತಿತ್ತು. "ಏನಲೆ ಮಾಡೋದು ನಮ್ಮಪ್ಪ ನೋಡಿದ್ರ ನನ್ನ ಚರ್ಮ ಸುಲಿತಾನ" ಅಂತೇಳ ಅಳತೊಡಗಿದ. " ಲೇ ಒಂದು ಕೆಲ್ಸ ಮಾಡೋನ ತಡಿ. " ಅಂದವನೆ ಮೊದಲು ಮಣ್ಣು ತಗೊಂಡು ಗಾಯದ ಮೇಲೆ ತಿಕ್ಕಿದ. ನಂತರ ಅಲ್ಲೆ ಇದ್ದ ಸಗಣಿಯನ್ನು ತಿಕ್ಕಿದ. ಚರ್ಮಕ್ಕೆ ಹೊಂದಿಕೊಂಡ ಸಗಣಿ ರಕ್ತ ಹೊರಗೆ ಬರದಂಗೆ ತಡೆದಿತ್ತು. ಇಬ್ಬರು ಸಮಾಧಾನ ಪಟ್ಟು ಬದಿಯಾ ಹೋದ ವಿರುದ್ಧ ಕದಿಕ್ಕಿಗೆ ಎತ್ತುಗಳನ್ನು ಹೊಡೆದುಕೊಂಡು ಹೊರಟರು.

ಈ ಸುದ್ದಿ ಮೆನಯೊಳಗೆ ತಲುಪಿ, ಭಗನ್ಯಾಯ್ಕನ ಕಿವಿಗೆ ಯಾರಿಂದಲೋ ತಲುಪಿ ಅವನ ಮುಕ ಮುಸುಡಿ ಮುರಿಯುತ್ತಾನೆ ಅಂದಿಕೊಂಡಿದ್ದ ಬದಿಯಾ. ಆದರೆ ಹಾಗಾಲಿಲ್ಲ. ಗಾಯ ಸಂಜೆ ಹೊತ್ತಿಗೆ ಹಳೆಯದಾಗಿ ಕಾಣುತ್ತಿತ್ತು. ಎತ್ತು ಹಾದಿದ್ದನ್ನು ಯಾರು ಯಾರಿಗೂ ಹೇಳಲಿಲ್ಲ. ಸುದ್ದಿ ಒಳಗೆ ಮುಚ್ಚಿ ಹೋಗಿತ್ತು. ಬದ್ಯಾನಾಯ್ಕ ಶಾಲೆಗೆ ಹೋಗತೊಡಗಿದ. ಅದೇಗೂ ಶಾಲೆಯಲ್ಲಿ ಪಾಸಾಗ್ತಾ ಮುಂದು ಟಾಂಕ್ಯ ಹೊಸ ಹುರುಪಲ್ಲಿ ಸರ್ವತಪ್ಪನ ಗಿದ್ದಿಗೆ ರಂಟಿಹೂಡಿ ಗಿರಾಬಾರ ಮಾಡಿದಕ್ಕೆ ಅವರಪ್ಪನ ಕೈಯ ಹಣ್ಣುಗಾಯಿ ನೀರುಗಾಯಿ ಆಗಿದ್ದ. ಮರುದಿನ ಅವರಪ್ಪ ತೋರಿಸಿದ್ನಂತೆ ನೀಟಾಗಿ ಹೊಲ ಹೊಡೆದು ಬಂದಿದ್ದ. ತಿಪ್ಪಿ ಗೊಬ್ಬರದ ಗುಂಪಿ ಚೆಲ್ಲಿ ಕುಂಟಿ ಹೊಡೆದು ಕಸ ಆರಿಸಿ, ಮುಂಗಾರ ಬಂದು ಕೆರೆ ತುಂಬಿಂದ ನಾಟಿ ಮಾಡಾಕ ನೆಲ ಹದ ಮಾಡಿದ್ದ. ಮುಂಗಾರು ಮೊದಲ ಮಳೆ ಅಡ್ಡಾದಿಡ್ಡಿ ಹೊಡೆದಿದ್ದಕ್ಕೆ ಕೆರೆಯೊಳಗೆ ಮುಖ್ಕಾಲು ಭಾಗ ನಿರು ಹರಿದು ಬಂದಿತ್ತು. ಮೂರನೆ ದಿನವೇ ಅಗಿಮಡಿ ತಯಾರಿಸಿ ಮೊಳಕೆಗೆ ಭತ್ತ ಕಟ್ಟಿದ್ದರು, ಊರು ಮುಂದಿನ ಹೊಲದಲ್ಲೆ ಅರ್ದ ಸೇಂಗಾ ಅರ್ದ ಉಣ್ಣೋ ಜೋಳ ಬಿತ್ತಿದ್ದರು. ಇಪ್ಪತ್ತೊಂದನೇ ದಿನಕ್ಕೆ ಸರಿಯಾಗಿ ಭತ್ತ ಮಡಿಯಲ್ಲಿ ಮೊಳಕೆ ಹೊಡೆದದ್ದು, ಮಡಿಯನ್ನು ಚೆನ್ನಾಗಿ ತುಳಿದು ಬೀಜ ಚೆಲ್ಲಿದರು. ಎರಡುಮೂರು ದಿನಗಳಲ್ಲೆ ಮಡಿ ತುಂಬ ಬತ್ತದ ಸಸಿ ತುಂಬಿಕೊಂಡಿದ್ದವು. ಹೊಲದಾಗ ಜೋಳ ಕೂಡು ಹುಲುಸಾಗಿ ಬೆಳೆದಿತ್ತು. ತಾಂಡದ ಮಂದಿಗೆ ಇದು ಸಹಿಸಿಕೊಳ್ಳಾಕ ಆಗಲಿಲ್ಲ. ತಾಂಡೆ ದುರ್ಗವ್ವ ಸೇವಾ ಭಾನಿಯ ಪೂಜಾರಿ ಚಟ್ಟಿನಾಯ್ಕ, ವಿಸಾವಳತ್ತ ಬರಮ, ತಿಪ್ಪೇಶಿನಾಯ್ಕ ಮೇಲಿನ ಒಣಿ ಚಾಪ್ಲ ಡಬರ, ಚಕಚಂದ್ರ, ಕೆಳಗಿನ ಓಣಿಯ ಜಾಂಬು, ಚಿಪ್ಪ ಹನುಮ, ಪಾದ್ನೊಬೊತ ಸಿಕ್ಕಸಿಕ್ಕವರ ಹತ್ರ ಬಗನಬ್‌ನಾಯ್ಕನ ಬಗ್ಗೆ ಮಾತುಗಳನ್ನಾಡುತ್ತಿದ್ದರು. ಉಪ್ಪಾರ, ಹಡಪದ ಮಂದಿ ಲಂಬಾಣಿ, ಬಾರಿಕರು ಯಾರನ್ನು ಕೆಳಿದ್ರು, "ಗಳೆ ಮಾಡಿದ್ರ ಅವನಂಗ ಮಾಡಬೇಕು, ಬೆಳಿ ಬೆಳದ್ರ ಅವನಂಗ ಬೆಳೀಬೇಕು." ಹಡಪದ ಚಂದ್ರಪ್ಪನ ಮಾತುಗಳು ಮನ ತುಂಬಿ ಬಂದಿದ್ದವು. ಗಾರಿ ಕಟ್ಟೆ ಕೆಳಗ ಚಕ್ಕಿ ಕಟ್ಟುತ್ತಿದ್ದ ಈರಭದ್ರಾಚಾರಿ ಎದುರಿಗೆ ಹೇಳಾಕ ಹತ್ತಿದ್ದ. ದೂರದಾಗ ಮತ್ತೊಂದು ರಂಟಿ ಕೆತ್ತತ್ತಿದ್ದ ಮೌನಾಚಾರಿ ಎದ್ದು ನಿಂತು, "ಲೇ ಚಂದ್ರಪ್ಪ, ದೇವ್ವ ಕಣಲೆ ಅವನು, ಅವನಪ್ಪನ ಸೂಳಿಮಗ ಯಾವ ನಕ್ಷತ್ರದಾಗ ಹುಟ್ಟ್ಯಾನಪ್ಪ, ಯಾವಾಗರ ನೋಡು ಹ್ವಾರೆ, ಹ್ವಾರೆ ಅಂತಿರ್ತಾನ, ಅದಬಿಟ್ಟು ಬದುಕಿನ್ಯಾಗ ಬ್ಯಾರೇನು ಇಲ್ಲೇನು?" ಒಂದು ಗಳಿಗಿ ಕುಂತವರಿಗೆ ಮಾತು ಹೊರಡಲಿಲ್ಲ.

ಭತ್ತ ತೆರಿಹೊಡಯಾಕ ಹತ್ತಿತ್ತು. ಒಂದು ತಾಟು ಬಿಸಾಕಿದ್ರ ಈ ಕಡಿಂದ ಆ ಕಡಿಗೆ ತಡಾಸದಬಿಡೋ ಹಂಗಿತ್ತು. ಹುಲ್ಲಿಗೆ ಹೋಗೋರು, ನೀನು ಬಿಡಾಕ ಹೋದವರು ನಿಂತು ಗಳಿಗೆ ಕಣ್ತುಂಬ ನೋಡಿ ಮುಂದಕ್ಕೆ ಹೋಕ್ಕಿದ್ರು. ಹೈಯರ್ ಟೆಂಟ್ವೆ ನಾಕು ಎಕರಿ, ಜಯಾ ಸಣ್ಣವು ಒಂದು ಎಕರಿ ಕಸುಕಿತ್ತು ಬೆಳೆದಿತ್ತು. ಸರ್ವತಪ್ಪ ಭಟ್ಟ ಗದ್ದಿಕಡೆ ಬಂದು ಒಂದದಪಾನು ನೋಡಲಿಲ್ಲ. ಭತ್ತ ಕೋಯ್ದು ರಾಶಿ ಮಾಡಿ ಒಂದು ಕಾಳು ಬಿಡದಂಗೆ ಹೇರ್ಕೊಂಡು ಹೋಗಿ ನಿಯತ್ತಿಂದ ಬಟ್ಟರ ಕಣದಾಗ ಮೂಟೆಗಳನ್ನು ಒಟ್ಟಿದ್ದ. ಯಾವುದೋ ಪಂಚಾಯ್ತಿಗೆ ಹೊಗಿದ್ದ ಸರ್ವತಪ್ಪ ಕಾಲ್ಮಡಿಯಾಕ ಅಂತ ಕಣಕ್ಕೆ ಬಂದ್ರ ಭಗನ್ಯಾಯ್ಕ ಕೊನೆ ಮೂಟೆನಾ ಹೇರಿನ ಮೇಲಕ್ಕ ಬಿಸಾಕಾಕ ಹೆಣಗುತ್ತಿದ್ದ. "ಏಸು ಆದ್ವು ನಿನ್ನ ಪಾಲಿಂದ ತಕ್ಕೊಂಡ್ಯಾ." ಎಂದು ಕೇಳಿದ. ಭಗನ್ಯಾಯ್ಕ ಅವರು ಬರೋದನ್ನೆ ಕಾಯ್ತಿದ್ದ. "ಮುನ್ನೂರು ಆಗೇವ್ರಿ ತಂದು ಇಲ್ಲೇ ಒಟ್ಟೇನಿ." ಅಂತೇಳಿ ಅವರ ಮುಲಾಜಿಗೂ ಕಾಯ್ದೆ ಚೆಕ್ಕಡಿ ಹೊಡದ. "ಏಯ್, ಮನಿತಾವ ಹೋಗಿ ಉಂಡು ಹೋಗುವಂತೆ, ಎತ್ತುಗಳ ಕೊಳ್ಳು ಹರಿ. ಹಂಗ ಆಟು ನೀರು ಮೇವು ಹಾಕಿ ಬಾ." ಎಂದು ಮನೀಕಡೆಗೆ ಹೊಂಟ. ಮುಂದೆ ಹಂಡೇವಿನಿಂದ ನೀರು ತಗೊಂಡು ಕಾಲಿಗೆ ಸುರಿದುಕೊಂಡು ಒಳಗೆ ಪ್ರವೇಶಿಸುತ್ತಲೆ, "ಏಯ್, ಭಗ್ಯಾ ಅಲ್ಲಿ ನೀರು ಅದಾವು ಕಾಲಮೇಲೆ ಹಾಕ್ಕೊಂಡು ಊಟಕ್ಕೆ ಬಾ." ಅಂದ. ಮೂಲೆಯಲ್ಲಿ ಕುಂತಿದ್ದ ಜಪಮಾಲೆ ಮುದುಕಿ, "ರಾಮರಾಮ, ರಾಮರಾಮ, ಶೂದ್ರ ಮುಂಡೇಗಂಡ ಹಂಡೆ ಮುಟ್ಟಿದ. ಕಾಲ ಕೆಟ್ಹೋತು. ರಾಮರಾಮ." ಅಂತಂದು ಕಪಾಳ ಬಡಕೊಂಡಳು. ಜಾನಕಮ್ಮ ಹೊರಗೆ ಬಂದಿದ್ದನ್ನು ನೋಡಿದ ಮುದುಕಿ, ಕಣ್ಣಸನ್ನೆಯಿಂದ ಆ ಶೂದ್ರನ್ನ ಹೊರಗಟ್ಟು ಎಂದಳು. ಜಾನಕಮ್ಮ ಮಾತ್ರ ಅನ್ನ ಬೆಳೆದ ದೇವರಿಗೆ ಎಡೆ ಇಕ್ಕದಿದ್ದರೆ ಪೂಜಿಸುವ ಕಲ್ಲು ದೇವರೂ ಸಹ ಮೆಚ್ಚುವುದಿಲ್ಲ ಎಂದು ನಂಬಿದ್ದರು. ಮುದುಕಿ ಹೇಳಿದ್ದನ್ನು ತಲೆಗೆ ಹಚ್ಚಿಕೊಳ್ಳದೆ, " ಏನು ಭಗನ್ಯಾ ಮುನ್ನೂರು ಮೂಟೆ ಭತ್ತ ಆಯಿತಂತೆ, ಭಲೋ ಆಯ್ತು ನೋಡು, ಐನಾತಿ ಜಮೀನೊಳಗೆ ಮುವತ್ತು ಚೀಲ ಭತ್ತ ಯಾರೂ ಕೊಟ್ಟಿರಲಿಲ್ಲ. ದುಡಿಮಿ ಮಾಡಿದ್ರ ಭೂತಾಯಿ ಮೋಸ ಮಾಡಂಗಿಲ್ಲ." ಯಾವತ್ತೂ ನೋಡದ ಜಮೀನಿನ ವರ್ಣನೆ ಮಾಡಿದಳು. " ಹೌದವ್ವ, ಪಾಡು ಬೆಳಿತೈತೆ, ಈಡೀ ಮನಿ ಮಂದಿ ಕಣ್ಣಾಗ ಕಣ್ಣಿಟ್ಟು ದುಡೀತೀವಿ." ಪಟ್ಟ ಪಡಿಪಾಟಲನ್ನು ಅರುಹಿದ. " ಹಂಗ ದುಡಿದ್ರಾನ ಸಿಗೋದು, ಭೂತಾಯಿ ಪಾಪದವಳಲ್ಲ, ನಂಬಿದವರನ್ನು ಕೈ ಹಿಡಿತಾಳೆ. "ಅನ್ನ ತವ್ವೆಸಾರು, ಉಪ್ಪಿನಕಾಯಿ ಬಡಿಸಿದರು. ಉಣ್ಣು ಪಾಯಸ ತರ್ತೀನಿ" ಅಂತೇಳಿ ಒಳಗೆ ಹೋದರು. ತಟ್ಟೆಗಟ್ಟಲೆ ಪಾಯಸ ತಿಂದು ರೂಡಿ ಇರೋ ಭಗನ್ಯಾಯ್ಕನಿಗೆ ಅವರು ಬಡಸಿದ ಒಂದು ಚಮಚೆ ತಿಂದಂಗಾಗಲಿಲ್ಲ ಅನಕೊಂಡ. ಒಂದು ಲೋಟದಲ್ಲಿ ಪಾಯಸ ಹಾಕಿ ಕೊಟ್ಟಳು. ಇನ್ನೊಂದೀಟು ಇಟ್ರ ಪಾಡಾದೀತು ಅನಕೊಂಡ. ಅವನು ಉಣ್ಣುವುದನ್ನು ಕಟ್ಟೆ ಮೇಲಿಂದ ಇಣುಕಿ ನೋಡುತ್ತಿದ್ದ ಮುದುಕಿಗೆ ಅದೇನು ಅನಿಸಿತೋ, "ಥು, ಮುಂಡೇದು ಹೆಂಗ ರಾಕ್ಷಸ ತಿಂದಂಗ ತಿಂತಾನ ನೋಡು." ಗೊಣಗಿದಳು. ಜೋರಾಗಿ ಹೇಳಲಾಗದೆ ಒಡ್ಡಾಡುತ್ತಿದ್ದನ್ನು ನೋಡಿದ ಭಗನ್ಯಾಯ್ಕ "ಏನಜ್ಜಿ ಪಾಡದೀರಾ." ಎಂಜಲು ಕೈ ತಟ್ಟಿಯಲ್ಲಿಟ್ಟುಕೊಂಡು ಮೇಲೆದ್ದ. " ರಾಮರಾಮಾ, ಎಂಜಲು ತೋಳಕಳ್ಳೋ ಮೊದ್ಲು, ಆ ಮೇಲೆ ಮಾತಾಡಿಯೇ ಮುಂಡೇದೆ." ಶಾಪಾಹಾಕಿತು. ತಲೆ ಬೋಳಿಸಿಕೊಂಡಿದ್ದ ವಿಧವೆ ಅಂತ ಗೊತ್ತಾಗಿ ಇವನವ್ವನ್ ರಂಡಮುಂಡೆ ಶಾಪ ಒಳ್ಳೇದಲ್ಲ ಅಂತಾರ. ಎಲ್ಲಿ ಪೀಡೆ ನಡಿ, ಅಂದ್ಕೋತ ಜಾನಕಮ್ಮ

ಮೇಲಿಂದ ಮುಟ್ಟಿಸಿಕೊಳ್ಳದಂತೆ ಸುರುವಿದರು ನೀರು ಕುಡಿದು, "ಆಯ್ತು ಅಮ್ಮೋರೆ, ದಣಿಯೋರು ಮಲಗಿರಬೇಕು, ಆಟು ಹೇಳಿಬಿಡ್ರಿ." ಅಂದವನೆ ಹೊರಟ. ಕುಂತಿದ್ದ ಹೋರಿಗಳನ್ನು ಎಬ್ಬಿಸಿ ನೊಗ ಕಟ್ಟಿ ಊರದಾರಿ ಹಿಡಿದ.

ಸರ್ವ್ತಪ್ಪ ಎಡಪ್ಪಕ್ಕೆ ಮಾರಿದ ಏನು ಮಾಡಿದ ಏನನ್ನೂ ಕೇಳಲಿಲ್ಲ. ಭಟ್ರೂ ಹೇಳಲಿಲ್ಲ. ಆದ್ರ ಅವರಿಗದ್ದಿ ಕೆಳಗೆ ಒಂದು ಮುಕ್ಕಾಲು ಎಕರೆ ಗದ್ದೆಯನ್ನು ಕುರುಬರ ಅರ್ಜುನ ಮಾಡುತ್ತಿರುವುದು ಭಟ್ರಿಗೆ ಗೊತ್ತಾಗಿ, ತಾಂಡಕ್ಕೆ ಹೊಂಟವರ ಕಡಿಗೆ ಸುದ್ದಿ ಹೇಳಿ ಕಳಿಸಿದ. " "ಏಯ್, ಭಗನ್ಯಾಯ್ಕ, ನಮ್ಮ ಗದ್ದಿ ಕೆಳಗೆ ಒಂದುಮುಕ್ಕಾಳು ಎಕರೆ ಗದ್ದಿನಾ ಕುರುಬರ ಅರ್ಜುನ ಮಾಡಾಕ ಹತ್ಯಾನಂತ. ಹಂಗ ಸುದ್ದಿ ಬಂದಾದ ಆಟು ಹೋಗಿ ವಿಚಾರಿಸು." ಅಂದ್ರು. "ಯಾಕ ಅಗವಲ್ದು ಬಿಡ್ರಿ ದಣಿ" ಅಂದವನೆ ಅವನ ತಾಂಡಕ್ಕೆ ಹೋಗಿ ಅಲ್ಲಿಂದ ಒಂದುವರೆ ಕಿಲೋಮೀಟರ್. ದೂರದವರೆಗೆ ಹೋದ. ತಾಂಡಾದಿಂದೆ ಭಗ್ಯಾನಾಯ್ಕನಿಗೆ, ವಡ್ಡರು, ಮಾದ್ರು, ಉಪ್ಪಾರು, ಕುರುಬರುವ ಒಂದೆರಡು ಮನಿ ಇದ್ದವು. ಬಾಂಬ್ರುವು ಒಂದೆರೆಡು, ಲಿಂಗಾಯತ್ರವೋ ಅಷ್ಟೆ. ಭಗ್ಯಾನಾಯ್ಕ ಅಂದ್ರ ವಿಶ್ವಾಸದ ಮನುಷ್ಯ ಅಂತೇಳಿ, ಏನೋ ಭಗನ್ಯಾ, ಏನಣ್ಣ ಭಗ್ಯಾ, ಏನಪ್ಪ ಭಗ್ಯಾ, ಏನ್ಲೆ ಭಗನ್ಯಾ ಅಂತೇಳಿ ಎಲ್ಲರೂ ಮತಾಡಿಸಿದರು. ಎಲ್ಲರಿಗೂ ಒಂದೇ ಸಾಬೂಬು ಹೇಳಿ ಅರ್ಜುನನ ಮನಿತಾವ ಹೋದ. ಅವನಿಗಿಂತ ಸಣ್ಣಾವ ಆದ್ರೂವೆ, " ಅರ್ಜುನಪ್ಪ ಏ, ಅರ್ಜುನಪ್ಪ, ತಾಯಿ ಅರ್ಜುನಪ್ಪ ಇಲ್ಲ ಮನಿ ಒಳಗ" ಜೊರಾಗಿಯೇ ಕೂಗಿದ. "ಇಲ್ಲಪ್ಪೋ ಗೂರಪ್ಪನ ಅಂಗಡಿತಾವ ಹೋಗ್ಯಾನ ನೋಡು." ಉತ್ತರ ಬಂದಿತು. " ಆಯ್ತು ಬಿಡವ್ವ ನಾ ಆಕಡೆಗೆ ಹೊಂಟೀನಿ." ಅಂತ ಮುಂದಕ್ಕೆ ಹೋದ. " ಏನಣ್ಣ ಇಟೋತ್ಯಾಗ ಬಂದಿ ಕವಳದಾಗ." ಎಂದು ವಸರಪ್ಪನ ಕೂಗಿದ. " ಇಲ್ಲೋ ವಸುರ ಅಟು ಅರ್ಜುನಪ್ಪತಾವ ಕೆಲ್ಸ ಇತ್ತು ಬಂದಿದ್ದೆ." ಎಂದದಕ್ಕೆ, " ಈಗ ಇಲ್ಲೇ ಇದ್ದನಪ್ಪ, ಇರ್ಲಿ, ನೀಯಾಕ ಹೋಕ್ಕಿ, ಅಂಗಡಿ ಏಟು ದೂರ್ರೈತಿ, ನಾನ ಹೋಗಿ ಕರಕೊಂಡು ಬರ್ತಿನಿ ತಡಿ." ಅಂದ್ರೂ ಬಿಡದ ವಸರಪ್ಪ ಹಿಂದೆ ಹೊರಟ. ವಡ್ಡರ ವಸುರು ಗುಡದಟ್ಟ ತಾಂಡದ ಬಹುತೇಕ ಮನೆಗಳಿಗೆ ಗೋಡೆ ಕಟ್ಟಿದವ. ಸುತ್ತಲು ಗೋಡೆ ಕಟ್ಟೆ ಮ್ಯಾಲೆ ಮಾತ್ರ, ಆಪಿನ ಹುಲ್ಲುಹಾಕಿ ಮನೆ ಕಟ್ಟಿಕೊಂಡಿದ್ದ. ಅದ್ಯಾವುದೋ ಸೀಮೆಯಿಂದ ಅವರಪ್ಪ ಡೊಣ್ಣಾ ಬೋವಿ, ಯಮನ ಬೋವಿ ಅವನ ದೊಡ್ಡಪ್ಪ ಬಂದು ಈ ಸೀಮೆಯೊಳಗೆ ಸೇರಿಕೊಂಡಿದ್ದರು. ಡೊಣ್ಣೆ ಬೋವಿಗೆ ಐದು ಜನ ಮಕ್ಕಳಲ್ಲಿ ವಸ್ರ ಹಿರಿಯವ. ಅವನ ಹಿಂದೆ ಹನುಮ, ಕಾಕ್ಲ, ಕಂಪಾ, ಮಿಕ್ಕಿ, ಹಿಕ್ಕಿ ಇಬ್ಬರು ಹುಡುಗಿಯರು. ಹಳ್ಳದ ದಂಡಿಗಳ ತಾವ ಕಲ್ಲೆಬಗದು ಹೇರುವುದು ಮಣ್ಣು ಹೇರುವುದು, ಗೋಡೆ ಕಟ್ಟುವುದೇ ಇವರ ಬದುಕು. ಯಾರಿಗೂ ಮೋಸ ಮಾಡಿದ್ದಿಲ್ಲ. ತಾಟ ತಗಲಿ ವ್ಯವಹಾರ ಇಲ್ಲ. ತಾವಾಯತ್ತು ತಮ್ಮ ಹ್ವಾರೆ ಆಯ್ತು ಅಷ್ಟೆ. ಒಮ್ಮೊಮ್ಮೆ ವಸ್ತ್ರ ಹೆಂಡತಿ ಕಾಟ ತಾಳಲಾರದೆ ತಾಂದಾಗ ಹೆಂಡ ಕುಡುದು ಮಕ್ಕೊಂತಾನ ಅಂತ ಮಂದಿ ಹೇಳ್ತಿದ್ರು, ಅವನ ಹಣ್ತಿ ಪಿಡ್ಡವ್ವ ಮಾತ್ರ ಹೊತ್ತಾರೆ ಮುದ್ದಿ ಕೊಡಿಸಿಕೊಂಡು ಹಸಿ ಚಟ್ನಿ ಕಿವುಚ್ಕೊಂಡು, "ಏಮಿ ಯಾಡ ಉನ್ನಾವು." ಅಂತೇಳಿ ಹುಡಿಕೊಂಡು ಬಂದ್ಲು. ಭಗನ್ಯಾಯ್ಕನಿಗೆ ಪೆಚಿಗೆ ಇಟ್ಕೊಂತು. ಅರ್ಜುನನಿಗೆ ಕೇಳುವುದು ಹ್ಯಾಂಗಪ್ಪ ಅಂತ. ವಸ್ರ ತಾಂಡದಾಗ ಎಲ್ಲಿರಿಗೂ ಪರಿಚೆಯ. ಮನಿಮನಿಗೋಗಿ ಚಾ ಕುಡುದು, ಬೀಡಿ ಸೇದಿ ಹೇಳಿ ಬರೊಪ್ಯಕಿ ಯಾರಾದಾರ ಮುಂದೆ ಬಾಯಿ ಬಿಟ್ಟಂದ್ರ ಭಟ್ಟಿಯ ಬೊಯ್ಯತಾರಂತ ಅಂದವನೆ ಜೇಬಿನ ಮೂಲಿಯೊಳಗಿದ್ದ

ಆಣಿ ತೆಗೆದು, " ಇಗಳ ವಸ್ತ್ರ ಹೆಂಡಕುಡಿ" ಅಂತ ಕೋಡಾಕ ಹೋದ. "ಏಯ್, ಏನ ಭಗನ್ಯಪ್ಪ ನೀನು, ನಮ್ಮ ಮನಿದೇವರಾಣೆಗೂ ನಾನು ರೊಕ್ಕಕ್ಕ ನಿನ್ನ ಹಿಂದ ಬರ್‍ತಿಲ್ಲ. ದುಡ್ಡ ಬೇಕಾರ ಮುಲಾಜೇನು ಕೊಡಪ್ಪ ಒಂದಾಣಿ ಹೆಂಡ ಕುಡಿಯಾಡು ಅಂತ ಕೇಳ್ತಿನಿ. "ಕಾಳಜಿಯನ್ನು ತೊಡಿಕೊಂಡಿದ್ದ. " ಇರ್ಲಿ ಇಟ್ಕ, ನನಗೂ ವ್ಯಾಳೆಯಿಲ್ಲ." ಅಂದವನೆ ಅವನಕೈಯಾಗ ಜುಕ್ಕಜುಲುಮಿಯಿಂದ ಹಿಡಿಸಿ ಅವನಿಂದ ಬಿಡುಗಡೆ ಪಡೆದ.

ಕುರುಬರ ಅರ್ಜುನ ಅಡಕಿ ಬಾಯಿ ಹಕ್ಕೊಂಡು ಎಲಿ ತುಂಬು ಹರಿದು ಹೊಲಸಾಗಿದ್ದ ಪಟಪಟ್ಟಿ ಚಡ್ಡಿಲೆ ಒರಿಸಿ ಹಿಂದಿನ ಎಲಿಕುಡಿ ಚಿವುಟಿ ಬೆಸ್ಯಾಗಿ ಸುಣ್ಣ ಸವರುತ್ತಾ ನಿಂತಿದ್ದ. "ಅರ್ಜುನಪ್ಪ" ಭಗಾನ್ಯಾಯ್ಕ ಕರೆದ. "ಓ ಭಗನಪ್ಪ, ಏನಪ್ಪ ಕೌಳದಾಗೆ ಬಂದಿಯೇ ಏನು ಸಾಚಾರ." ಕೇಳಿದ. " ಏನಿಲ್ಲ ಅರ್ಜುನಪ್ಪ ನಿಂತಾವೆ ಕೆಲ್ಸ ಇತ್ತು ಬಂದೆ." ಅಂದ. " ನಂತಾವ" ಅನುಮಾನದಿಂದಲೆ ಅಂದ. " ಹೂಂ ಕಣಪ್ಪ, ಸ್ವಲ್ಪ ಈ ಕಡಿಗೆ ಬಾ" ಹೇಳಿದ. ಮಂದಿ ಅದಾರೆ ಅಂತೇಳಿ ಗವಿಯಪ್ಪನ ಮಾಳಗಿ ಮನಿ ಸಂದಿ ಕಡೀಗ ಹೊಂಟ. ಆತ ನಡಿ ಅಂತೇಳಿ ಕೈಯಾಗಿನ ಎಲಿಯನ್ನು ಹಂಗೆ ಹಿಡಕೊಂಡು ಹೊಂಟ. " ಏನಿಲ್ಲ ಅರ್ಜುನಪ್ಪ, ಸರ್ವತಪ್ಪನವರು, ಏನೋ ನಿನ್ನ ಗದ್ದೆ ಮಾರೋಕೈತೆ ವಿಚಾರ್‍ಸು ಅಂದ್ರು, ಹಂಗೆ ಉರಾಗಿದ್ದೆ ಹೊಂಡಿದ್ದೆ ಈ ಕಡಿಗೆ ಬಂದೆ ನೋಡು. " ಅವನ ಉತ್ತರಕ್ಕಾಗಿ ಕಾದ. " ಹೌದು ಗದ್ದಿ ಏನೋ ಮಾರ್‍ಬೇಕಂತ ಅನಕಂಡೀನಿ." ಅಡ್ಡ ಗೋಡೆಮೇಲೆ ದೀಪಿಟ್ಟಂಗ ಹೇಳಿದ. " ಅಲ್ಲ ಮಾರಾಟ ಮಾಡೊದಿದ್ರ ಸರ್ವತಪ್ಪನವರಿಗೆ ನಾನು ಹೇಳ್ತೀನಿ." ಕೇಳಿದ. "ಹುಂ, ಒಂದು ಕೆಲ್ಸ ಮಾಡು ನಾಳೆ ನಾಡಿದ್ದು ಯಾವ ಮಾತು ಇತ್ಯರ್ಥ ಆಕೈತೆ. ಅವಾಕ್ ನೀ ಒಂದು ಹೆಜ್ಜೆ ಬಂದ್ರ ಪಾಡನೋಡು" ಅಂದ. " ಅಲ್ಲ ನಾಳೆ ಬರ್‍ಲ ಇಲ್ಲ ನಾಡಿದ್ದು ಬರ್‍ಲ." ಅವನ ಮುಖ ನೋಡಿದ. ಕತ್ತಲಲ್ಲೂ ಅಲೋಚನೆ ಗೆರೆಗಳು ಎದ್ದು ಕಂಡವು. ಏನೋ ಅವರವರ ಹರ್ಕತ್ ನನಗ್ಯಾಕ ಬಂದುಕೇಳೊದ್ರಾಗ ಅಂತ ಅಲೋಚನೆ ಮಾಡುತ್ತಿದ್ದ ಅವನನ್ನು ವಿಚಾರಿಸಿದ ಅರ್ಜುನ, "ನಾಳೆ ಬ್ಯಾಡಶೇಷಬಟ್ಟ ನಾಡಿದ್ದು ಸಂಜೆ ಬಂದು ಬಿಡು." ಅಂದವನೆ ಎಲಿ ಬಾಯಿಗೆ ಹಾಕ್ಕೊಂಡು ಜಮುಡಿದ.

ಭಗನ್ಯಾ, ಸರ್ವತಪ್ಪ ತುಮಲೂರಿನ ಶೇಷಬಟ್ಟ ಕುರುಬರ ಯಂಕೇಶಿ, ಗೂರಜ್ಜ ಮಾದರ ಹನ್ಮಂತ, ಚಲುವಾದಿ ವಿಠಪ್ಪ ಅರ್ಜುನನ ಮನಿಯೊಳಗ ವ್ಯವಹಾರಕ ಕುಂತಿದ್ದರು. ಒಬ್ಬೊಬ್ಬರಾಗಿ ತಮ್ಮ ಶಕ್ತಿಗನುಸಾರವಾಗಿ ಹಣದ ಧರವನ್ನು ಏರಿಸಿದರು. ಜಿಗಿಯೋ ಮಗ ಜಿಗಲಿ ಅಂತ ಭದ್ರ ಸುಮ್ಮನಿದ್ದು. " ಭಗ್ಯನಾಯ್ಕಂದು ನಾನೂರು ಎಪ್ಪತೊಂದ ರೂಪಾಯಿ. ಆಯ್ತು, ಅರ್ಜುನ ನಿಯತ್ತಿಲೆ ದುಡಿಯೋ ಮನುಷ್ಯ. ಮಕ್ಕಳಂದಿಗಾ, ಮೇಲಾಗಿ ಅವೆಲ್ಲರಿಗಿಂತಲು ನಾಕುವರೆ ರೂಪಾಯಿ ಹೆಚ್ಚ ಕೊಡಾಕ ತಯಾರದಾನ. ಸುಮ್ಮನೆ ಹೂಂ ಅನ್ನು." ಅಂದ್ರು. ಕುರುಬರ ಅರ್ಜುನ ಭಗನ್ಯಾನ ಹೆಸರು ಕೇಳಿದ್ದೇ ತಡ ಸುಮಕ " ಆಯ್ತು ಬುದ್ದಿ, ಭಗ್ಯಾ ತಗೋತಾನಾಂದ್ರ ನಂದೇನು ತಕರಾರಿಲ್ಲ. ನೀವು ಬೇರೆ ಬಂದೀರಿ. ವಾರ ಹದಿನೈದು ದಿನಕ್ಕ ನೀವು ಬಂದು ರಿಜಿಸ್ಟರ್ ಮಾಡ್ಸಿಬಿಡ್ರಿ." ಅಂತೇಳಿ, ಬಂದ ಮಂದಿಗೆ ಒಂದು ಲೋಟ ಚಾ ಕುಡಿಸಿದ. ಭಗನ್ಯಾ ಏನ ನಡದೈತಿ ಅಂತ ಅರ್ಥ ಆಗೋದ್ರಾಗ. ಸರ್ವತಪ್ಪನ ಗದ್ದಿ ಹಂತದಿಂದಲೆ ಕುರುಬರ ಅರ್ಜುನ, ಹಾಲಿನ ಪರಮೇಶಿ, ಮೇದಾರ ಚೌಡುಗ ಚಲುವಾದಿ ಯಂಗಟಿ ನೀರು ತಗಂಡು

ಹೋಗಾಕು. ನೀರ ಒಯ್ಯದರ ಸಲುವಾಗಿ ಅರ್ಜುನಗೂ ಹಾಲಿನ ಪರಮೇಶಿಗೂ ಜಟಾಪಟಿ ಸುರುವಾಗಿತ್ತು. " ಲೇ ನಿನ್ನೊಬ್ಬನೆ ನೀರು ಹಾಯಿಸ್ಕೊಳಾಕ ಕೆರಿಯೇನು ನಿಮ್ಮಜ್ಜಂದ" ಜೋರು ಬಾಯಿ ಮಾಡಿದ. " ಅದನ್ನ ಕೇಳಾಕ ನೀನ್ಯಾರಲೆ ?." ಪರಮೇಶಿಗೆ ಮೂಗಿನಮ್ಯಾಲೆ ಸಿಟ್ಟು. " ಎನಲೆ ನಿಮ್ಮವ್ವನ ನಿನ್ನ ತಾಯಿನ." ಅಂದವನೆ ಚಲ್ಕಿ ತಗೊಂಡು ಇನ್ನೇನು ತಲಿಗೆ ಹೊಡಿಬೇಕು ಅನ್ನೋದ್ರಾಗ ಅಲ್ಲೆ ನಿಂತಿದ್ದ ಭಗ್ಯಾನಾಯ್ಕ ಬಂದವನೆ ಹಾಲಿನ ಪರಿಮೇಶಿ ಕೈಯಿಂದ ಚಲಕಿ ಕಸ್ಕೊ ತಲಿಗೆ ಬೀಳೊ ಪೆಟ್ಟನ್ನು ನೆಲಕ್ಕ ಬೀಳಿಸಿದ. ನೆಲಕ್ಕ ಬಿದ್ದ ಪೆಟ್ಟಿಗೆ ಜೋಲಿ ಹೋಗಿ ಮುಂದುಕ್ಕ ಮೂರು ಪಲ್ಟಿ ಹೊಡದ. " ಏಯ್, ಲಮಾಣ್ಯಾ ನಿನ್ನ ಹಡದವಳನಾ." ಅಂದವನೆ ಹಾಲಿನ ಪರಮೇಶಿ ಭಗಾನ್ಯಾಗ ಮೇಲೆ ಹೋದ. ಕೆಲಸ ಮಾಡಿ ಮೈಕೈ ಅನ್ನೋದು ಕಬ್ಬಿಣ ಆಗಿದ್ವು, ಯಾವಾಗ ತಾಯಿಗೆ ಬೊಯ್ಯಿದನೊ " ಲೆ ನಿಮ್ಮವ್ವನ ಸೂಳಿ ಮಗನ, ಅಡ್ಡನಾಡಿ ಅವನ ಪ್ರಾಣ ತಗದು ಜೈಲಿಗಹೋಕಿದ್ದವನ ಬಿಡಿಸಿದ್ದು ತಪ್ಪೇನಲೆ " ಅಂದವನೆ ಕೈಕಾಲು ಒಂದು ಕಡೆ ಕೂಡಿಸಿ ನಾಕು ಸಲ ನೆಲಕ್ಕ ಕುಕ್ಕಿದ. " ಯವ್ವ ಸತ್ನೆ, ಯಪ್ಪ ಸತ್ನೆ ಯಾರಾರ ಬಿಡಸ್ರೋ, ಸಾಯಿಸಿ ಬಿಡ್ತಾನಪ್ಪೊ" ಎಂದು ಬೊಬ್ಬೆ ಹಾಕಿದ. ಅವನ ಚಾಳಿಗೊತ್ತಿದ್ದ ಮೇಲಿನ ಹಂತದವರು, ಒಳ್ಳೆ ಪಾಡು ಕೊಟ್ಟಾ ನೊಡು. ಇವ್ನವ್ವನ ಬೋಸುಡಿ ಮಗ ಅರ್ಪಾವು ಹಾಲಿಗೆ ಮೂರುಪಾವು ನೀರ ಸೇರಿಸಿದ ಲೀಟರಂತೆಳಿ ಮಂದಿನೆಲ್ಲಾ ಯಾಮಾರಿಸಿ ನಾಕ ಕಾಸು ಮಾಡ್ಕೊಂಡು ದರ್ಪದಿಂದ ಮೆರಿತ್ತಿದ್ದ, ಲಮಾಣ್ಯ ಒಳ್ಳೆ ಬುದ್ದಿ ಕಲಿಸಿದಿ ನೋಡು ಅಂತ ತಮ್ಮ ಪಾಡಿಗೆ ತಾವು ಮನಿಗೆ ಹೋಗಿದ್ರು, ಅವತ್ತಿಂದ ಭಗನ್ಯ ಅಂದ್ರ ಅರ್ಜುನಗೆ ನಂಬಿದ್ರ ಜೀವ ಕೊಡಾಂವ ಅಂತ ತಿಳಿದಿತ್ತು. ನಿಯತ್ತಿನವನು ಸರ್ವತಪ್ಪನ ಹಂಗ ನ್ಯಾಯ ನೀತಿಯಿಂದಲೆ ಮಾತಾಡ್ತಾನ ಅಂತ ಗೊತ್ತಾಗಿತ್ತು.

ಸರ್ವತಪ್ಪ ಭಗನ್ಯಾನಾಯ್ಕನಿಗೆ ದೊಡ್ಡ ಆಶ್ಚರ್ಯ ಅಗೊಹಂಗ ಮಾಡಿದ್ರು. "ಇಕ್ಕ, ನೀ ಬತ್ತ ಬೆಳದದ್ದು ಇನೂರು ತೊಂಭತ್ತು ನಿನ್ನ ಪಾಲಿಂದು. ಮೇಲಿನ ಹತ್ತಾರು ರುಪಾಯಿ ನನಗೆ ಸಾಲಕೊಡಬೇಕು. ವಾರ ಒಪ್ಪತ್ತಿಗೆ ಹಗರನೂರಿಗೆ ಹೋಗಿ ನಿನ್ನ ಹೆಸರಿಗೆ ಕಾಗದ ಪತ್ರ ಮಾಡಿಸ್ಕೊ, ಮಕ್ಕಳಂದಿಗಾ ಇರ್ಲಿ ಹೋಗು." ಅವನ ಮಾರಿನೋಡಿದರು. ಭಗನ್ಯಾನಾಯ್ಕ ಒಂದು ಗಳಿಗೆ ಮಾತೆ ಹೊರಡದಾದವು. "ದಣಿಯೋರ ಕರಗಳದ್ದು ಬಾಕಿ ಐತೆ. ಅದನ್ನು ಮುರ್ಕೊಂಡು ಲೆಕ್ಕ ಮಾಡಿದ್ರ ಪಾಡಿತ್ತು." ಅಂದ. " ಕರಗಳದ್ದು ಓಡಿ ಹೋಗಂಗಿಲ್ಲ. ಈಗ ನಿನ್ನ ಮುಂದಿದ್ದ ಸಮಸ್ಯೆಗೆ ಪರಿಹಾರ ಹುಡುಕು, ಬಾಕಿದು ನಾಳಿಗೆ ನೋಡೋಣಂತ." ಅಂತಳಿ ಅವನನ್ನು ತಾಂಡಕ್ಕೆ ಕಳಿಸಿದ್ದರು.

ತಾಂಡದ ಮಂದಿಗೆ ಭಗನ್ಯಾನಾಯ್ಕ ಗದ್ದಿ ತಗೊಂಡಿದ್ದ ಕೇಳಿ ಅರಗಿಸಿಕೊಳ್ಳಾಕ ಆಗಲಿಲ್ಲಾ. ಓಣಿ ಒಣಿಯೊಳಗ ಮಂದಿ ನಿನ್ನೆ ಮನೆ ಕಣ್ಣು ಬಿಟ್ಟರೆಲ್ಲಾ ಆಸ್ತಿ ಮಾಡಾಕ ಸುರು ಹಚ್ಕೊಂಡ್ರು, ಅಂತೇಳಿ ಅಚ್ಚರಿ ಪಟ್ಟಿದ್ದರು. ಇನ್ನೂ ಕೆಲವರು ಶಬ್ಬಾಶ್‌ಗಿರಿ ಕೊಟ್ಟರು. ನೋಡು ನೋಡ್ತಿದ್ದಂಗೆ ಹತ್ತು ಎಕರೆ ಜಮೀನು ಖರಿಧೀಸಿದ. ಸಾಲದಕ್ಕೆ ದಂಡೂರು ಖಾಸಗಿಯೊಳಗ ಎರಡು ಎಕರೆ ಹೊಲ ಹಿಡಿದ. ತಾಂಡದ ಹಾಸಿಗಿಯೊಳಗಿದ್ದ ಹದಿನೈದು ಎಕ್ಕರೆ ಜಮೀನು ಮಾರಾಟಕ್ಕೆ ಬಂತು. ಉಪ್ಪಾ ಹುಲವಪ್ಪ ಮಗ ದಿಂಡ, ಡಿಳ್ಳಿ, ಯಮನೂರ ಕೋಟಿ. ಜೋತ ಪುರ್ಲಿ ನಾಕಕಾಸ ಕೂಡಿಸಿ ತಾಂಡದಲ್ಲೆ ಹಸರುವಾಸಿಯಾಗಿದ್ದ ಭಗನ್ಯಾನಾಯ್ಕನ ತಾವ ಬಂದಿದ್ದರು. ಅವನ

ಮುತ್ತಜಜ್ಜ ಹೆಸರಿಗಿದ್ದ ಅಸ್ತಿಮಾರಿ ಬಂದಿದ್ದ ಸ್ಲ್ವಕಾಸಿನೊಳಗೆ ಊರನದಕ್ಕ ತನ್ನ ಜಾಗದೊಳಗೆ ಮಾಳಗಿ ಮಮನಿ ಕಟ್ಟಾಕ ಏರ್ಪಾಟು ಮಾಡಿಕೊಂಡಿದ್ದ. ಯಾವಾಗ ಹೊಲ ಮಾರಟಕ್ಕಬಂತೋ ಮನಿಮಾತು ಮುಂದೆ ಅಂದವನೆ ವ್ಯಾಪರಕ್ಕೆ ಕುಂದ್ರಕಾ ಹೇಳಿದ. ಆಯ್ತು ಬಿಡು ನಾಳೆ ಕುಂದ್ರಾಮ ಅಂದ. ಹೋದರು. ಈ ಸಲದಿ ತಾಂಡಾದಾಗ ಮನಿಮನಿಗೂ ಹಬ್ಬಿತು. "ಏಯ್. ನಮ್ಮೂರಿನ ಆಸ್ತಿ ಅನನಮಗ ಭಗನ್ಯಾನಾಯ್ಕ ಹೆಂಗ ಖರೀದಿ ಮಾಡ್ತಾನ ನೋಡೆ ಬಿಡೋಣಂತ ತಿನ್ನಾಕ ಕೂಳಿಲ್ಲದವನೂ ಕೂಡು ಮಾತಾಡತೊಡಗಿದ.

ಭಗನ್ಯಾನಾಯ್ಕನಿಗೆ ಕೈತುಂಬ ಜನಬಲವಿತ್ತು. ಆವನ ಪಾಲಿಗೆ ಬಂದಿದ್ದು ಏರಿಭೂಮಿ. ಎಂಟು ಎಕ್ರೆ ಅಡಿವಿ ಹೊಲ. ಮಾಗಣಿಯೊಳಗ ಬಂದ ಎರಡು ಎಕ್ಕರೆ ಒಟ್ಟು ಇಪ್ಪತ್ತೆರಡು ಎಕರೆಯಷ್ಟು ಜಮೀನಿತ್ತು. ಆದರೆ ಬೆಳೆ ಮಾತ್ರ ಆಟಕುಂಟು ಎಂಬಂತಾಗಿ ಆರ್ಥಿಕವಾಗಿ ಸುಧಾರಿಸಕೊಳ್ಳಲು ಆಗುತ್ತಿರಲಿಲ್ಲ. ಮನಿ ತುಂಬ ಮಕ್ಕಳು, ಮದುವೆಯಾಗುವ ಹೆಣ್ಣು ಮಕ್ಕಳು. ಸಾಲಿಗೆ ಹೋಗುವವರು ಆರಕ್ಕೆರದೆ ಮೂರಕ್ಕೆ ಇಳಿಯದ ಹಂಗೆ ದೋಣಿ ಸಾಗಿಸುತ್ತಿದ್ದ. ಒಂದು ಹೊಲ ಕೈ ಕೊಟ್ಟಿದ್ದೆ ಮತ್ತೊಂದು ಹೊಲದಾಗ ಬೆಳೆ ಬೆಳಿತಿತ್ತು. ಹಂಗಾಗಿ ತಿನ್ನಾಕ ಉಣ್ಣಾಕ ಕಾಳು ಕಡಿದೇನು ಕಮ್ಮಿ ಇರಲಿಲ್ಲ. ಮನಿಯೊಳಗ ಪಣತ, ಕಣಜಗಳನ್ನು ಮಾಡಿಕೊಂಡಿದ್ದ. ತಾಂಡದಾಗ ಇನ್ನೂ ಯಾರು ಹಗೇವು ತಗಿಸಿರಲಿಲ್ಲ. ಒಂದಿಷ್ಟು ದೊಡ್ಡ ಮನಿತನ ಅಂತಿದ್ದ ತಾಂಡದ ನಡುಕಿನ ಪಾಮಡಿ ನಾಯ್ಕ ವಿಸಲಾವತ್ ನದ್ದೆ. ಇಬ್ಬರು ಮೂವರ ಸೋದರರ ಮಕ್ಕಳು ಮೊಮ್ಮಕ್ಕಳು ಒಂದೆ ಕೂಡು ಕುಟುಂಬದೊಳಗಿದ್ದವರು. ಅದೇನು ನಡಿತೋ ಇದ್ದಕ್ಕಿದ್ದಂಗೆ ಮನಿತನ ಒಡೆದುಹೋತು. ಉಪ್ಪಾರ ಹುಲವಪ್ಪ ತನ್ನ ಮಕ್ಕಳ ಹಿಡಿತ ಸಾದಿಸಾಕ ಆಗದೆ. ಎಲ್ಲರೂ ಆರುಗಂಟೆ ಏಳಗಂಟೆಗೆ ಎದ್ದು ಮಂದಿದ ಅರ್ಧಹೊಲ ರಂಟೆ ಹೊಡಯೋದ ಮುಗದಿಂದ ರಂಟೆ ಹೂಡೋರು. ಮಂದಿ ಅವರನ್ನ ನೋಡಿ ಹಾಸ್ಯವಾಡ ತೊಡಗಿದರು. ಬರ್ತಾನರ್ತಾ ಹೋಲಗಳು ಬೀಳಾದವು. ಅವನ ಹಿಂದೆ ಅರ್ಧಬಾಟಲಿ ಹೆಂಡಕ್ಕ ತಿರುಗಾಡ ತೊಡಗಿದರು. ದುಡಿಮೆ ಮಾಡತೊಡಗಿದರು. ಆದರೆ ಹುಲವಪ್ಪನ ಮನಿತನಕ ಬಕ ಬರ್ತಿ ಬಿತ್ತು. ಅದೆ ಸಂದರ್ಭದಾಗ ಭಗಾನ್ಯಾನ ಹನ್ನೊಂದು ಮಕ್ಕಳಲ್ಲಿ ಮೂವರು ಹುಡಗಿಯರು ಅಪ್ಪನ ಮಾತು ಮೀರದೆ ಅಪ್ಪ ಹಾಕಿದ ಲಕ್ಷ್ಮಣ ರೇಖೆಯನ್ನು ದಾಟದೆ ದುಡ್ಡಿಯುತ್ತಿದ್ದರು. ತಮ್ಮ ಜಮೀನಲ್ಲಿ ದುಡಿದ್ದು ಸಾಲದಾದಾಗ, ಕೆಂಗೂರು ಮಟಾನೂ ನಡೆದು ಹೋಗಿ ಎರಡು ಮೂರು ರುಪಾಯಿ ಕೂಲಿಮಾಡುತ್ತಿದ್ದರು. ಟ್ಯಾಂಕ್ ಹಿಂದೆ ಹುಟ್ಟಿದ ಹಾಮಣಿ ಇದ್ದಕ್ಕಿದಂಗೆ ಹನ್ನೊಂದು ತುಂಬಿ ಹನ್ನೆರಡರಲ್ಲೆ ಮೈನೆರತಿದ್ಲು. ಚಾವಳಿಗೆ ಒಂದು ಕಡೆ ಸಂತೋಷ ಇನ್ನೊಂದು ಕಡೆಗೆ ದುಖಃ ಆಗಿತ್ತು. ಮದವಿ ವಯಸ್ಸಿಗೆ ಮದುವೆ ಆಗದಿದ್ರೆ ಹುಡುಗಿ, ಏನೆಲ್ಲಾ ಜವಾಬ್ದಾರಿಗಳು, ಮೈನೆರ್ತು ಆರು ತಿಂಗಳು ಒಂದು ವರ್ಷ ಏನಾರ ಮನ್ಯಾಗಿದ್ರೆ ಮುಗಿತು ಕತೆ, " ಅಯ್ಯ ನನ ಶಿವನ ಹುಡುಗಿ ಋತುಮತಿಯಾಗಿ ವರ್ಷಾದ್ರು ವರ ಬಂದಿಲ್ಲ, ಹಿಂಗಾದ್ರೆ ಹೆಂಗ, ಮುದಿಕಿ ಆದಂಗೆ ಬಿಡು." ಮಂದಿ ನಾಯಿಮೇಲಿಂದ, ನರಿಮೇಲಿಂದ ಮಾತಾಡಿಕೋಳ್ಳುತ್ತಿದ್ದರು. ಸಂಸಾರ ದೊಡ್ಡದಾಗಿ ಬೆಳತ್ತಿದ್ದಮೆಲೆ ಸಮಸ್ಯೆಗಳು ಹೆಚ್ಚಾಗ ತೊಡಗಿದವು. ಗುಡಿಸಲು ತಟ್ಟೆಗಳನ್ನು ಅರಡಿ ಮೂರಡಿ ಹೆಚ್ಚಿಸುತ್ತಲೆ ಹೋಗಿ ಈಗ ದೊಡ್ಡ ಗುಡಿಸಲಾಗಿತ್ತು.

ಮುಂಜಾನೆ ಮುಂಗೋಳಿ ಕೂಗಿದ ತಕ್ಷಣ ಪ್ರತಿಯೊಬ್ಬರು ಎದ್ದು ತಮ್ಮತಮ್ಮ ಕೆಲಸ ಮಾಡಬೇಕು. ಎಮ್ಮಿ ಮೇಯಿಸಾಕ ಹೋಗುವವರು ಎಮ್ಮಿಗೆ. ಕಾಳೀಮರದ ದುರ್ಗವ್ವನ ಗುಡಿ ಮುಂದೆ ದನಗಳು ಮೇಸುತ್ತಿದ್ದ ಜಾಗದಲ್ಲಿ ದನಗಳ ಸಗಣಿ ಹಿಡಿಯಾಕ ಪುಟ್ಟಿ ಹಿಡಕೊಂಡು ಹೊರಡುತ್ತಿದ್ದರು. ರಾಗಿ ಬೀಸೋದು, ನುಚ್ಚಿಗೆ ಒಲೆಮೇಲೆ ಮಡಿಕೆ ಇಡೋರು ರಾತ್ರಿದು ಬೂದಿಯನ್ನು ಒಲಿಯೊಳಗಿಂದ ತಗದು ಕಟ್ಟಿಗೆ ಚಾಚಿ ಒಲೆ ಹತ್ತಿಸುತ್ತಿದ್ದರು. ಕಟ್ಟಿಗೆಗೆ ಬೆಂಕಿ ಕಟ್ಟಕೊಳ್ಳಾಕ ಕಾಲಗಂಟೆ ಬೇಕಾಗುತ್ತಿತ್ತು. ಹತ್ತಿ ಕಟ್ನಾಗ, ತೊಗರಿ ಪುಳ್ಳಿ, ಹೆಚ್ಚಂದ್ರ ಚಾಲಿಮುಳ್ಳಿನ ಮೇಲೆ ಅಡುಗೆಯಾಗಬೇಕು. ಹಬ್ಬಕ್ಕೆ ಮಾತ್ರ ಹೋಳು ಕಟ್ಟಿಗೆ.

ಟಿ ಬೇಕು. ತಗಮುಳ್ಳೀ ಸೊಪ್ಪಿನ ದಂಟು ಹಾಕಿ ಉದೋ ಕೊಳಬಿಯಿಂದ ಊದಿ ಊದಿ ಬೆಂಕಿ ಮಾಡೋ ಹೊತ್ತಿಗೆ ಅಡಗಿ ಮಾಡೋ ಹೆಂಗಸು ತಲೆ ಕೆಟ್ಟು ಮೊಸರು ಗಡಿಗೆ ಆಗಿ ಬಿಡ್ತಿತ್ತು. ಯಾಕಂದ್ರ ನಸುಕಿನ್ಯಾಗ ಅರ ಆನ್ನೋಷ್ಟೊತ್ತಿಗೆ ಸಗಣಿ ಹಿಡಯಾಕ ಹೋದವರು, ಎಮ್ಮಿ ಮೇಸಾಕ ಹೋದವರು ವಾಪಾಸು ಬಂದ ಬಿಡ್ತಿದ್ರು. ಬಂದವರೆ ಕಾಲು ಕೈ ಮುಖ ತೊಳಕೊಂಡು ಸಿದಾ ಮಜ್ಜಿಗಿ ಕಡಿಯುತ್ತಿದ್ದರು. ಅದಕಂತಲೇ ಮಜ್ಜಿಗೆ, ಚಾ ಗಡಾನ ಮಾಡಿ ಇಟ್ಟು ಬಿಡುತ್ತಿದ್ದರು. ಮಜ್ಜಿಗೆ ಅಂಬ್ಲಿ ಹೊಡದವರೆ ಕೈಯಾಗ ಕುಡುಗೋಲು ಹಗ್ಗ ಹಿಡಿದು ಓಸು ಮಂದಿ ಹುಲ್ಲು ತಗಾಕ ಹೊಂಟ್ರು. ಇನ್ನೊಂದಿಷ್ಟು ಮಂದಿ ಕಟಿಗಿ ನೀರು ಮನಿಯಾನ ಗಂಜಾಳ ಸಗಣಿ ತಗದು ಎತ್ತುಗಳನ್ನು ಹೊರಗೆ ಬಿಟ್ಟ ಕೊಟ್ಟಿಗಿ ಗುಡಿಸುವುದನ್ನು ಮಾಡೋರು.

ಭಗನ್ಯಾನಾಯ್ಕನ ಮನಿಮಂದಿ ಒಂದು ನಾದಕ್ಕೆ ಕಟಿಬದ್ಧರಾಗಿ ಅದನ್ನೆ ಅನುಸರಿಸುತ್ತಿದ್ದರು. ಹಿರಿಮಗಳು ಹನ್ನೆರೆಡು ವರ್ಷದವಳಾದಳು ಎನ್ನುವ ಖುಷಿಯಾಯ್ತು. ಆಗಲೆ ಬಗನ್ಯಾ ಅಜ್ಜನಾಗುವ ಕಾಲ ಸಮೀಸುತ್ತಿತ್ತು. ಅವರ ತಾಂಡದಿಂದ ಪೂರ್ವಕ್ಕೆ ಹನ್ನೆರೆಡು ಮೈಲಿ ದೂರದ ಗುಗ್ರಟ್ಟಿ ತಾಂಡದ ಸೇವಣು ನಾಯ್ಕನ ಮಗ ಪಿಕಾಳಿ ನಾಯ್ಕನಿಗೆ ಹೆಣ್ಣು ಕೇಳಾಕ ಬಂದಿದ್ದರು. ಹುಡುಗ ಪರವಾಯಿಲ್ಲ. ಅಂತಹದ್ದೇನು ಇರ್ಲಿಲ್ಲ. ಮುಂದೆ ದೇವರಿಚ್ಚೆ ಅಂತೇಳಿ ದೇವರ ಮೇಲೆ ಭಾರ ಹಾಕಿ ಮಾತುಕತೆಗೆ ಕರೆದರು. ಇನ್ನೇನು ಮಗಳ ಮದುವಿ ಮಾಡಿಬಿಟ್ಟಾನು ಅಂತ ಮುದುಕಿ ತಪ್ಪಿಸುವ ಅಲೋಚನೆ ಮಾಡಿದಳು. ಗುಡ್ಲೀರಿ ಎದ್ದವಳೆ " ಇಲ್ಲಪ್ಪ ನನ್ನ ಮೊನ್ನಗಳು ಅಪ್ಪನ ಮನಿಯೊಳಗೆ ಮಹಾರಣಿ ಇದ್ದಂಗ ಇದ್ದೋಳು ಅಲ್ಲೊಗಿ ತಿನ್ನಾಕ ಕೂಳಿಲ್ಲದೆ ಸಾಯಲಿ ಅಂತ ಕೊಡಾಕ ಹತ್ತದೀರೇನು. ಇಲ್ಲ. ಇಲ್ಲ." ಏನೇನೋ ಅಸಂಬದ್ಧ ಮಾತುಗಳನ್ನಾಡಿ ಕಲ್ಲು ಹಾಕೋದಕ್ಕೆ ಏನೇಲ್ಲಾ ಪ್ರಯತ್ನ ಮಾಡಬೇಕು ಮಾಡಿದಳು. ಹುಡುಗನ ಕಡೆಯವರಾಗಲಿ, ಹುಡುಗಿ ಕಡೆಯವರಾಗಲಿ ಅವಳ ಮಾತುಗಳನ್ನು ಗಂಭೀರವಾಗಿ ಪರಗಣಿಸಲಿಲ್ಲ ಎಂಬ ಸತ್ಯವನ್ನ ತಿಳಿದಾಗ "ಕಾಲ ಬದ್ಲಾತವ್ವ ಏನು ಮಾಡೋದು ಹೆಣ್ಣು ಗಂಡು ಎಗ್ಗಿಲ್ಲಂದಗೆ ಆಡ್ತಾವು." ಎಂದು ಏನೇನೋ ವಟಗುಟ್ಟಿದ್ದಳು. ಅದರಲ್ಲೂ ತನ್ನ ಮಗ ತಪ್ಪು ಮಾಡುವವನಲ್ಲ ಎಂಬ ಆತ್ಮ ವಿಶ್ವಾಸವೂ ಇತ್ತು. ಹಾಗಾಗಿ ತಣ್ಣಗೆ ಮಗನ ಮನೆಯಲ್ಲಿ ಮಾತುಕತೆ ನಡೆಯುವಾಗ ಸುಮ್ಮನೆ ಇದ್ದಳು. ಅದರೂ ಅಯ್ಯೋ ಆಗಿಯೇ ಹೋಯಿತಲ್ಲ ಎಂಬ ಆತಂಕದೊಳಗೆ ತಾನೇನು ಮಾಡುತ್ತಿದ್ದೇನೆ ಎಂಬುದನ್ನೆ ಮರೆತಿದ್ದಳು.

ಹಂದ್ರ ವಾಲಗ, ಮತ್ತೊಂದ ಕಡೀಗೆ ಹುಗ್ಗಿ ಹಂಡೆಗಳು. ಮಗಳ ಮದ್ವಿಗೆ ಈಡೀ ತಾಂಡದ ಮಂದಿಗೆಲ್ಲಾ ಹುಗ್ಗಿ ಊಟ ಹಾಕಿಸಿದ. ಭಗನ್ಯಾನಾಯ್ಕ. ಆದೇಟಾರ ಖರ್ಚಾಗಲಿ ನನ್ನ ಮನಿ ಮುಂದೆ ಇದೇ ಮೊದಲ ಕಾರ್ಯಕ್ರಮ, ಸುತ್ತ ನಾಕ ಹಳ್ಳಿ ಮಂದಿ ಬರ್‍ತಾರ ಅಂತೇಳಿ ಹುಗ್ಗಿ ಮೇಲೆ ನೆಂಚ್ಕೋಳಾಕ ಬದ್ನೆಕಾಯಿ ಪಲ್ಯಾ. ಅನ್ನ ಸಾರು, ಬಡವರಿರಲಿ, ಬಲ್ಲಿದವರಿರಲಿ ಅನ್ನದೆ ಸುತ್ತ ನಾಕ ಹಳ್ಳಿ ಮಂದಿ ಉಂಡು ಭಗನ್ಯಾ ಹರಿಸಿ ಹೋಗಿದ್ದರು. ಸಾಬರು, ಉಪ್ಪಾರು, ಲಿಂಗಾಯಿತರು, ಮಾದ್ರು, ಬ್ರಾಂಬ್ರು, ಕುಂಬಾರು, ಚಲುವಾದಿಗಳು ಹೊಲೇರು, ಕಮ್ಮಾರ ಅಕ್ಕಸಾಲಿಗ, ಬಡಿಗ. ಜಟ್ಟಿ ನೂರೆಂಟು ಕೋಮಿನ ಮಂದಿ ಅಣ್ಣ ತಮ್ಮರ ಹಾಗೆ ನೆರದಿದ್ದರು. ಸರ್ವತಪ್ಪ ಭಗನ್ಯಾನ ಜನಪ್ರಿಯತೆ ನೋಡಿ ದಂಗಾಗಿದ್ದ. ಈಡಿ ಜಗತ್ತು ಸುತ್ತಿ ಪಂಚಾಯ್ತಿ ಮಾಡಿದ್ರು, ಅನೇಕ ಸಂಬಂಧಗಳನ್ನು ಜೋಡಿಸಿದ್ದರೂ ನನ್ನ ಜಗತ್ತು ಅಲ್ಪ. ಭಗನ್ಯಾನು ಅಂತವನೆ. ಅವನ ಮನಸ್ಸು ಎಂದು ಗರ್ವದಿಂದ ಬೀಗಿದ್ದಿಲ್ಲ. ಸಣ್ಣ ಹುಡುಗರಿಗೂ ಎಲೆತಲೆ ಅಂದವನಲ್ಲ. ಬಸವಣ್ಣ ಹೇಳಿದಂತೆ, "ಇವನ್ಯಾರವ ಎಂದೆನಿಸದೆ, ಇವ ನಮ್ಮವ ಎಂದೆನಿಸು" ಅನ್ನೊಹಂಗೆ ಬುದಕಿ, ಅದನ್ನ ನಂಬಿ ಅಚರಿಸುವಂತಹವನು ಅಂತದು. ಖುದ್ದಾಗಿ ಸರ್ವತಪ್ಪನೇ ಅಲೋಚನೆ ಮಾಡತೊಡಗಿದ.

ಮದುವೆ ಮುಗುದು ದಿಬ್ಬಣಕ್ಕೆ ಹೋದವರು ವಾಪಾಸಾಗಿದ್ದರು. ಮೊಮ್ಮಗಳ ಮನೆಯಲ್ಲಿರುವುದು ಗುಡ್ಲೀರಿಗೆ ಅನಿವಾರ್ಯ ವಾಯಿತು. ಮಳಾಪು ಕಳಿಸುವವರೆಗೂ ಹದಿನೈದು ಇಪ್ಪತ್ತು ದಿನ ಗುಗ್ರಟ್ಟಿ ತಾಂಡದಲ್ಲಿರುವ ಅನಿವಾರ್ಯತೆ. ಆದರೆ ಅವಳ ಕಿರಿಮಗ ಪಕ್ಕೀರನ ಕೋಳಿಗಳೇನಾದಾವೋ, ಕುರಿ ಎಮ್ಮೆ ಆಕಳು ಚಿಂತಿನೇ ಹಚ್ಚಾಗಿತ್ತು ವಿನಃ ಗುಗ್ರಟ್ಟಿಯಲ್ಲಿ ಒಂದೆರಡುವಾರ ಆರಾಮದಿಂದಿರುವ ಎನ್ನವು ಮನಸ್ಥಿತಿ ಅವಳದ್ದಾಗಿರಲಿಲ್ಲ. ಅಳಿಯ ಪಿಕಾಳಿ ಪ್ರತಿದಿನ ಸಂಜೆ ಕುಡಿಯಾಕ ಮಡಿಕೆತುಂಬ ಹೆಂಡ ನೆಂಚ್ಕೊಳ್ಳಾಕ ಒಣ ಬಾಂಗಡಿ ಉಪ್ಪಾಕಿ ಒಣಗಿಸಿದ್ದು ತಂದು ತಗರಿಪುಳ್ಳ ಹಚ್ಚಿ ಹುರುದು ಕೊಡ್ತಿದ್ದ. ತಾಂಡದಾಗ ಕುರಿಕಡಿದರೆ ಪಾಲು ತರ್‍ತಿದ್ದ. ಏಡಿ ಹಿಡ್ಕೊಂಡು ಬಂದು ಸುಟ್ಟು ಮೆಣಸಿಕಾಯಿ ಹಾಕಿ ಕಿವುಚಿ ಕೈಚಟ್ನಿಮಾಡಿ ಕೊಡ್ತಿದ್ದ. ಮನಿಮಂದಿ ತಂಗಳ ತಿಂದರೆ ಮುದುಕಿಗೆ ಬಿಸಿಯಾದನ್ನೆ ಮಾಡಿಸುತ್ತಿದ್ದ. ಆದರೂ ನೆಮ್ಮದಿ ಇರಲಿಲ್ಲ. ಯಾರಿಗೆ ಬೇಕು ಅವರಿಗೆ ನೇರವಾಗಿ ಬಾಯಿಗೆ ಬಂದಂಗೆ ಅಂದು ಬಿಡುತ್ತಿದ್ದಳು. ಅರವತ್ತು ಅರುಮರು ಅಂತಂದು ಮಂದಿನು ಸುಮ್ಮನಾಗಿ ಬಿಟ್ಟಿದ್ದರು.

ಇಪ್ಪತ್ತು ದಿನಗಳ ಮಳಾಪು ಒಂದುವರೆ ವಾರದಲ್ಲೆ ಕಳುಹಿಸುವುದಕ್ಕೆ ಬೀಗರನ್ನು ಹೈರಾಣ ಮಾಡಿದಳು ಮುದುಕಿ. ಸದಾಬೂದಾ ಮಂದಿ ಘಾಟಿ ಮತ್ತು ನಡಿಯೋ ಸಂಸಾರದಾಗ ಹುಳಿ ಹಿಂಡ್ಯಾಳು ಅಂತಂದು ಚಿಮಣಾ ಬಾಯಿಯನ್ನು ಮತ್ತು ಅವಳಜ್ಜಿ ಗುಡ್ಲೀರಿಯನ್ನು ಮತ್ತೆ ವಾಪಾಸು ತಾಂಡಕ್ಕೆ ಕಳುಹಿಸಿದರು. ಇದೇ ಮೊದಲ ಸಲ ಹತ್ತು ದಿನಗಳ ಕಾಲ ಮನೆ ಬಿಟ್ಟಿದ್ದು. ನಮ್ಮಪ್ಪನ ಮನೆ ಬಿಟ್ಟಮೇಲೆ ಅಂತ ಮಂದಿಮುಂದ ಹೇಳ್ತಾ ಅಡ್ಡಾಡುತ್ತಿದ್ದಳು. ಪಕ್ಕೀರನ ಇಬ್ಬರು ಹೆಂಡಿರು ಜನಂ ಕಾಲಕ್ಕೆ ಹೋಗಿದ್ರು. ಒಂಬತ್ತು ವರ್ಷದ ಹಿರಿಮಗಳು ಗಂಗಿನೆ ಅಜ್ಜ ಪಂಪಾನಾಯ್ಕನಿಂದ ಹಿಡಿದು ಎಲ್ಲಾ ಜಮ್ಮೇದಾರಿ ತಗೊಂಡಿದ್ದು. ಆಗಲೆ ಪಕ್ಕೀರನ ಒಬ್ಬ ಹೆಂಡತಿಗೆ ಒಂಭತ್ತು ಹೆಣ್ಣು ಹುಟ್ಟಿದಕ್ಕೆ ಗಂಡು ಬೇಕೇಬೇಕು ಅನ್ನೋ ಗುಡ್ಲೀರಿ ಆಶೆಗೋ ದುರಾಶೆಗೋ

ತನ್ನ ಹಿರಿಮಗ ಭಗನ್ಯಾನಗಿಂತ ಯಾವುದರಲ್ಲು ಸಣ್ಣವನು ಸುಮಾರು ಆಗಬಾರ್ದು ಅನ್ನೋ ಜಿದ್ದಿಗೆ ಬಿದ್ದಿದ್ದಳು. ಪಕ್ಕೀರ ಒಳ್ಳೆ ಮಾತಿಂದಲೆ ಹೇಳಿದ್ದ. "ಯಾಡಿ, ಯಾಕ ಗಂಡು ಗಂಡು ಅಂತ ಬಡ್ಕೊಂತಿಯಾ, ಇರೋ ಹೆಣ್ಣು ಹುಡುಗರ್‍ನ ಗಂಡೂ ಅಂತ ತಿಳ್ಕೊ, ಅಷ್ಟಕ್ಕು ಮೀರಿ ಬೇಕೇಬೇಕು ಅಂದ್ರ ಅಣ್ಣನ ಮಕ್ಕಳ ಅದಾವಲ್ಲ." ಅವನ ಬಾಯಾಗಿನ ಮಾತು ಮುಗೀತಿದ್ದಂಗೆ, "ಯಾಕ್ಲೆ ಇನ್ನೊಂದು ಹೆಣ್ಣು ಆಳೋ ತಾಕತ್ತು ಕಳಕಂಡಿಯೇನು?" ಎಂದು ಮಗ ಅನ್ನೋದನ್ನು ಮರೆತು ಮರ್ಮಾಂಗಕ್ಕೆ ಘಾತ ಎಸೆದಿದ್ದಳು. ಮುಂದು ಮಾತಾಡದೆ ತಾಂಡಾದ ರಂಗೋಲಿ ಜುಲ್ಪನಾ ಆಯ್ಕನ ತಂಗಿ ಚಂದ್ರಿನ ಮದ್ವಿಮಾಡ್ಕಂಡು ಬಂದಿದ. ತಗ ಇವ್ನವ್ವನ ಬಂದಾಕಿನ ಜಿದ್ದಿನ ವ್ಯಾಲೆ ನಾಕು ಹೆಣ್ಣು ಹಡದಳು. ಗುಡ್ಲೀರಿ ಮನಸ್ಥಿತಿ ಸಿರಯಾಗಿರಲಿಲ್ಲ. ತಾನೇನು ಅಂದ್ಕೊಂಡಿದ್ಲೋ ಅದೇ ಸರಿ ಅನ್ನುವ ಒಣವಾದ ಒಂದು ಕಾಲದಲ್ಲಿ ಅದು ಸರಿ ಇದ್ದಿರಬಹುದು. ಆದ್ರೆ, ಅದೇ ಸರ್ವಕಾಲಿಕ ಸತ್ಯ ಅಲ್ಲ ಅನ್ನುವ ಪರಿಕಲ್ಪನೆ ಅವಿದ್ಯಾವಂತ ಅವಿವೇಕಿ ಗುಡ್ಲೀರಿಗೆ ಗೊತ್ತಾಗುವುದಾದರು ಹೇಗೆ? ತನ್ನ ಜಿದ್ದಿನ ಗುದ್ದಾಟದಲ್ಲೆ ಅವಳು ಹಾಸಿಗೆ ಹಿಡಿದಳು. ಹಿರಿಮಗ ಎಂದರೆ ಕೆಂಡಕಾರತೊಡಗಿದಳು. ತಾಯಿ ಹಾಸಿಗೆ ಹಿಡಿದಾಳಂತ ಮಾತಾಡ್ಸೋದಕ್ಕ ಹೋದ ಭಗನ್ಯಾನನಿಗೆ ಬಾಯಿಗೆ ಬಂದಂಗೆ ಬೊಯ್ಯದಳು. "ಹೋಗಲೋ ಹೆಂಡತಿ ಗುಲಾಮ ನಿನ್ನ ನಾ ಏನೊ ಅಂದ್ಕೊಂಡಿದ್ದು ಸಾಕಿದ್ನೋ ಅದರ ವಿರುದ್ಧ ನಡ್ಕಂಡಿಯಾ, ನೀ ನನ್ನ ಮಗನೇ ಅಲ್ಲ ನನ್ನ ಮಕ ನೀ ನೋಡಬ್ಯಾಡ." ಎಂದು ಬಡಬಡಿಸತೊಡಗಿದಳು. ಭಗನ್ಯಾನಾಯ್ಕ ಅವನ್ನನ್ನು ಸರ್ವಸ್ವ ಎಂದು ನಂಬಿ ಬದುಕನ್ನು ಕಲಿಸಿದ ತಾಯಿ ಬೇಕಾದ್ದು ಅನ್ನಲಿ ಅಂತ ಅವಳ ಮಾತಿಗೇನು ತಲೆಕೆಡಸಿಕೊಳ್ಳಲಿಲ್ಲ. ಆದರೆ ಅವಳು ಯಾವುದೋ ಹುಸಿ ಸತ್ಯವನ್ನು ನಂಬಿಕೊಂಡು ಅಸಲಿ ಸತ್ಯವನ್ನು ಮರೆಮಾಚಿ ಸಾಯವುದು ಅವನಿಗೆ ಬೇಸರ ತಂದಿತ್ತು. ಮಂದಿಮಾತುಕೇಳಿ ಹಿಂಗೆ ಬದಲಾದ ತಾಯಿಯನ್ನು ಹೇಗೆ ಸಮಾಧಾನ ಮಾಡುವುದು ಎನ್ನುವುದೇ ದೊಡ್ಡ ಸವಾಲಾಗಿತ್ತು.

ಪಕ್ಕೀರನಿಗೆ ಹೆಚ್ಚು ಕಮ್ಮಿ ಭಗನ್ಯಾನಾಯ್ಕನಿಗಿರುವಷ್ಟು ಆಸ್ತಿ ಇತ್ತು. ಆದರೆ ಸ್ಪರ್ಧೆ ಗಂಡು ಮಕ್ಕಳನ್ನು ಹುಟ್ಟಿಸುವದರಲ್ಲಿ ಆಗಿದಿದ್ದಕ್ಕೆ ಪಕ್ಕೀರ ಸ್ಪರ್ದೇಯಿಂದ ಬಹುದೂರ ಉಳಿದು ಬಿಟ್ಟ. ಹಾಗಾಗಿ ಅನಿವಾರ್ಯವಾಗಿ ಅವನ ಮನೆಯೊಳಗೆ ದಾರಿದ್ರ ಆವರಿಸುತ್ತಾ ಬಂದಿತ್ತು. ಆದರೂ. ಆ ಎಲ್ಲಾ ಹುಡಿಗಿಯರು ಕೈಗೆ ಬಂದರೆ ಬರಿ ಕೂಲಿಮಾಡಿ ಇಡೀ ಕುಟುಂಬ ಸಾಕುವ ತಾಕತ್ತು ಹೊಂದಿದ್ದರು. ಹಾಗಾಗಿಯೇ ಹೆಚ್ಚು ತಲೆ ಕೆಡಸಿಕೊಂಡಿರಲಿಲ್ಲ. ಪಕ್ಕೀರ ಈ ಎಲ್ಲಾ ಬೆಳವಣಿಗೆ ಮತ್ತು ತಾಯಿಯ ಪ್ರಭಾವ ಹೆಚ್ಚಾಗಿದ್ದರಿಂದ ಮುಂಗೋಪಿಯಾಗಿದ್ದ. ಅವನು ತಾಯಿಯ ಹಾದಿಯನ್ನು ಹಿಡಿದು ಯಾರೇನಂದರೂ ತನ್ನದೆ ವಾದ ಸರಿ ಎನ್ನುವ ಹುಂಬತನಕ್ಕೆ ಕಟ್ಟಿ ಬಿದ್ದಿದ್ದ. ಮುಕ್ಕಾರೆ ಹೆಂಡ ಕುಡಿದು ಕಂಡ ಕಂಡಲ್ಲಿ ಬೀಳುವುದು. ಹೊತ್ತಾರೆ ಗಳೇಕ ಹೋದರೆ ಎತ್ತುಗಳೇನಾದರೂ ಸತಾಯಿಸಿದರೆ, ಮಕ್ಕೊಂಡ್ರೆ ಅವುಗಳ ಕತಿ ಮೂಗೀತು. ಒಮ್ಮೆ ಒಂದು ಎತ್ತು ಅದ್ಯಾಕೋ ನೆಲ ಕಚ್ಚಿತು. ಬಾಲ ಮುರಿದ. ಬಾರಿಕೋಲಿಂದ ಹೊಡೆದ. ಏಳಲಿಲ್ಲ. ಪಕ್ಕೀರನಿಗೆ ಅದೆಷ್ಟು ಸಿಟ್ಟು ಬಂತೆಂದರೆ, ಆ ಮೂಕ ಪ್ರಾಣಿಯನ್ನು ಹೊಡೆದು ಹೊಡೆದು ಸಾಯಿಸಿಬಿಟ್ಟ. ಅವತ್ತಿನಿಂದ ಮಂದಿ ಅವನ್ನ ಮೂರ್ಖ ಅಂತ ಕರಿಯಾಕ ಸುರುಮಾಡಿದ್ರು.

ಪಕ್ಕಿರ ಮೂಲೆಗುಂಪಾಗುತ್ತಿದ್ದ. ಭಗನ್ಯಾನ ಮೇಲೆ ಏಳುತ್ತಿದ್ದಿದ್ದನ್ನು ಅವನ ತಾಯಿ ಗುಡ್ಲೀರಿಗೆ ಸಹಿಸಾಕ ಆಗಲಿಲ್ಲ. ಹಾಸಿಗೆಯಲ್ಲೇ ಮಲಗಿಕೊಂಡು ರಾಜಕಾರಣ ಮಾಡುತ್ತಿದ್ದಳು. ಭಗನ್ಯಾನಾಯ್ಕ ಉಪ್ಪಾರ ಹುಲವಪ್ಪನ ಹೊಲ ಖರೀಧಿಗೆ ಅಡ್ಡಾಡ್ತಿರೋ ಸುದ್ದಿ ಕೇಳಿ ಗುಡ್ಲೀರಿ ಮೊದಲು ಸುಮ್ಮನಿದ್ದಳು. ಕೊನೆ ಹಂತಕ್ಕೆ ಬಂದಾಗ ಏನಾದ್ರು ಮಾಡಿದ್ರಾತು ಅಂತ ಹೊಂಚು ಹಾಕಿದ್ದಳು. ಭಗನ್ಯಾ ಎಂಥಹ ಚಾಣಾಕ್ಷ ಅನ್ನೋದು ಅವಳಿಗೆ ಮಾತ್ರ ಗೊತ್ತಿತ್ತು. ಸಣ್ಣವ ಪಕ್ಕೀರ ಮಬ್ಬು ನನ ಮಗ, ವ್ಯವಹಾರದ ಗಾಳಿ ಗಂಧ ಗೊತ್ತಿಲ್ಲ. ಏನೇ ಇದ್ದರೂ ದೊಡ್ಡವನು ಆ ನನ ಮಗಂದು ಹಾರ್ವರ ಮೆದಳು. ಇಂತ್ತಾದ್ದು ಮಾಡ್ತೀನಿ ಅನಕೊಂಡ್ರೆ ಅದನ್ನ ಕಡೆಗಾಣಿಸೋವರೆಗೆ ನಿದ್ದಿ ಮಾಡೋನಲ್ಲ. ಮಲಗಿದ್ದಲ್ಲೆ ತನ್ನ ಇಬ್ಬರ ಮಕ್ಕಳ ಬಗ್ಗೆ ಪರಾಮರ್ಶೆ ಮಾಡಿದಳು. ಇಬ್ಬರು ಹುಡುಗಿಯರಲ್ಲೆ ಮೊದಲನೆಯವಳು ಅವಳ ಅಣ್ಣನ ಹಾಗೆ, ಎರಡನೆಯವಳು ಸಾಕು ಪ್ರಾಣಿ. ಮೊದಲನೇಯವಳ ಮತ್ತು ಎರಡನೆಯವಳ ನಡುವೆ ಬಾಳ ಫರಕು ಇತ್ತು. ದೊಡ್ಡವಳು ತಾಯಿ ನೆರಳಿನಲ್ಲಿ ಬೆಳದವಳು ಅದ್ದರಿಂದ ತಾಯಿ ಗುಣಗಳನ್ನೇ ಹೊಂದಿದ್ದಳು. ಗುಡ್ಲೀರಿ ಸ್ವತಃ ತನ್ನ ಎರಡನೇ ಮಗಳು ಚಿಮ್ಲಿಬಾಯಿಯನ್ನು ಬಾಳ ಬೇಬಿಷ್ವಿ ಮಾಡಿದ್ದಳು. ಅದಕ್ಕೆ ಅವಳು ಯಾವಾನಾರ ಬರಲಿ ಮದವಿ ಆಗಿ ಹೋಗಿ ಯಾರು ಸತ್ರು ಈ ಮನಿಕಡೆ ಹೆಜ್ಜೆ ಇಡಬಾರದು ಅಂತ ಅಲೋಚನೆ ಮಾಡಿಕೊಂಡೆ ಹೋಗಿದ್ದಳು. ಗಡ್ಲೀರಿಗೆ ತಾನು ಮಾಡಿದ್ದರ ಬಗ್ಗೆಯಾವುದೆ ಪಚ್ಚಾತಾಪ ಇರಲಿಲ್ಲ. ತಾನು ಆಡಿದ್ದ ಸರಿಯಲ್ಲ ಅಂತಗೊತ್ತಿದ್ದರೂ ಕೂಡ ಏನೇನು ಹಳಹಳಿಸುತಿದ್ದರು ತನ್ನ ಖದರ್ ಬಿಟ್ಟಿರಲಿಲ್ಲ. ಹಾಸಿಗೆ ಮೇಲೆ ಎಲ್ಲಾ ಮಾಡಿಕೊಳ್ಳಲು ಆರಂಭಿಸಿದಳು. ಪಕ್ಕೀರನಿಗೆ ಮನೆ ತುಂಬ ಹೆಣ್ಣುಮಕ್ಕಳು ಕ್ಷಣಾರ್ಧದಲ್ಲೆ ಎಲ್ಲವನ್ನೂ ತೊಳೆದು ಸ್ವಚ್ಚಗೊಳಿಸುತ್ತಿದ್ದರು.

ಗುಡ್ಲೀರಿ ಕೊನೆ ಘಳಿಗೆ, ಹಿರಿಮಗ ಕಿರಿಮಗಳನ್ನು ನೋಡಲೆ ಬೇಕೆಂದು ಹಟ ಹಿಡಿದಳು. ಪಕ್ಕೀರ ಅಣ್ಣ ಭಗನ್ಯಾನ ಹತ್ತಿರ ಓಡಿದ. "ಯಣ್ಣ ಅವ್ವ ನಿನ್ನ ಮತ್ತು ಚಿಮ್ಲಿನ ನೋಡಕಾಂತ ಹಟ ಹಿಡದಾಳ. ಬಹುಶಃ ಅವಳ ಸಾವು ಸಮೀಪ ಇದ್ದಂಗೈತಿ." ಅಂದವನೆ ಅಳುವ ನಾಟಕ ಮಾಡಿದ. ಬಗನ್ಯಾ ಎದ್ದವನೆ ಮಗ ಬದುನ ಕರೆದು ಎಂಟೊಂಬತ್ತು ಕಿಲೋಮೀಟರ್ ದೂರದ ಚಂದಾಪುರ ತಾಂಡದಲ್ಲಿ ಜಿಲೇಬಿನಾಯ್ಕನಿಗೆ ಮದುವೆ ಮಾಡಿಕೊಟ್ಟಿದ್ದ ತಂಗಿ ಚಿಮಿಣಿ ಕರಕೊಂಡು ಬರುವಂತೆ ಕಳುಹಿಸಿದ. ತಾಯಿ ಬೇಬಿಷ್ಟ ಮಾಡಿದರೂ ಅಣ್ಣ ಭಗನ್ಯಾ ಯಾವತ್ತೂ ಹೊರಗ್ಯೆಲೆ ಹೊಡೆದಿರಲಿಲ್ಲ. ತಮ್ಮೂರಲ್ಲೆ ಕೊಟ್ಟಿದ ಹಾಮ್ಲಿ ಆಕಿ ಗಂಡ ಚಿನ್ನ್ಯಾ ಯಾವಾಗ್ಲೂ ಭಗನ್ಯಾ ಮೇಲೆ ಹಲ್ಲುಮಸಿತಾನೆ ಇದ್ರು, ಅವನು ಗದ್ದೆ ಖರೀಧಿಸಿದ್ದು, ತಾಂಡದ ಎಲ್ಲ ಮಂದಿಗಿಂತ ಹೆಚ್ಚು ಬೆಳೆ ಬೆಳದದ್ದು, ಅವನ ಮಕ್ಕಳು ಒಂದೇ ಮನೆಯಲ್ಲಿ ವಾಸವಾಗಿರುವುದು ಯಾವುದನ್ನೂ ಸಹಿಸಿಕೊಳ್ಳಕ ಆಗದೆ ಟೀಕೆ ಮಾಡುತ್ತಿದ್ದಳು. ಹಾಮ್ಲಿ ಮುದವೆಯಾಗಿ ಇಪ್ಪತ್ತು ವರ್ಷಗಳೇ ಅದರೂ ಮಕ್ಕಳು ಮರಿ ಏನು ಇಲ್ಲ. ಇಡೀ ತಾಂಡಕ ತಾಂಡನೇ ಅವಳ ಮನಸ್ಸಿಗೆ ಸರಿಯಾಗಿ ದೇವರು ಮಾಡ್ಯಾನ ಅಂತ ಅಡಿಕೊಂಡಿದ್ದರು. ಮಾಡಿದೋರು ಪಾಪ ಅಡಿದೋರು ಬಾಯಾಗ ಭಗನ್ಯಾ ಅಗಲಿ ಚಾವಳಿಯಾಗಲಿ ಅವರ ಮಕ್ಕಳು ಯಾವತ್ತು ಯಾರ ಬಗ್ಗೆನೂ ಮಾತಾಡುವ ಗೋಜಿಗೆ ಹೋಗುತ್ತಿರಲಿಲ್ಲ. ಹಾಮ್ಲಿ ಮನೆಗೂ ಯಾರೂ ಹೊಗದಿರುವುದು ಅವಳ ಕೋಪಕ್ಕೆ ಕಾರಣ.

ಚಿಮ್ಲಿ ಮತ್ತು ಅವಳ ಗಂಡ ಜಿಲೇಬಿ ನಾಯ್ಕ ಬಂದಾಗ ಸರಿಯಾಗಿ ಹತ್ತ ಗಂಟೆ ರಾತ್ರಿಯಾಗಿತ್ತು. ಮುದಕಿ ಕಣ್ಣು ಬಿಟ್ಟಿದ್ಲು. ಹೊರಗಡೆ ಪೂಜಾರಿಯ ನೆರಕಿಗೆ ಆತ್ಕೊಂಡು ತನ್ನ ಇತಿಹಾಸವನ್ನೊಮ್ಮೆ ನೆನಪಿಸಿಕೊಳ್ಳತೊಡಗಿದಳು ಭಗನ್ಯಾ ತನ್ನ ಬಾಲ್ಯ ಇದೇ ತಾಂಡದಲ್ಲೆ ಕಳೆದಿದ್ದ. ಮೊದಲ ಹುಟ್ಟಿದಕ್ಕೆ ಗುಡ್ಲೀರಿ ಅರಂಭದಲ್ಲಿ ಪೈಪೋಟಿ ಮಾಡುವವರು ಹುಟ್ಟುದಿರೋದಕ್ಕೆ ಎಲ್ಲ ಪ್ರೀತಿಯನ್ನು ಅವನಿಗೆ ಧಾರೆ ಎರೆದಿರಬೇಕು. ಭಗು ಭಗು ಎಂದು ಹಿಂದೆ ಮುಂದೆ ಓಡಾಡುತ್ತಿದ್ದಳು. ಅರೆ ಘಳಿಗೆ ಬಿಟ್ಟು ಕೂಡ ಇರುತ್ತಿರಲಿಲ್ಲ. ಅವಳು ಕೂಲಿಗೆ ಹೋದರೆ ಗೂರಜ್ಜಿತಾವ ಬಿಟ್ಟು ಹೋಗಿ ಹೊತ್ತು ವಾಲುತ್ತಿದ್ದಂತೆ ಸರಿಯಾಗಿ ಮನೆಗೆ ಬಂದು ಹಾಲುಣಿಸಿಹೊಕ್ಕಿದ್ದಳು. ಅವನ ಅಪ್ಪ ಪಂಪಾನಾಯ್ಕ ಯಾವಾಗಲೂ ಅವನನ್ನು ಹೆಗಲಮೇಲೆ ಎತ್ಕೊಂಡು ಅಡ್ಡಾಡುತ್ತಿದ್ದ. ಅವನಿಗೆ ತಿಳುವಳಿಕೆ ಬರೋಮಟ ಕೈತುತ್ತು ನೀಡಿದ್ದಳು. ಪಕ್ಕೀರ ಹುಟ್ಟಿದ ಮೇಲೆ ಬದಲಾದಳು. ಅದರೂ ದುಡಿಯವವನು ಇವನೇ ಆದ್ದರಿಂದ ಅಷ್ಟು ದೂರ ಇಡುವ ಪ್ರಯತ್ನ ಮಾಡಿರಲಿಲ್ಲ. ಮದುವೆ ಮಕ್ಕಳು ಎಲ್ಲ ಚೆನ್ನಾಗಿತ್ತು. ಆದರೆ ಇದ್ದಕ್ಕಿದಂತೆ ಪಕ್ಕೀರ ಮತ್ತು ಚಿಮ್ಲಿ ಮುದವೆ ನಂತರ ಏನಾಯ್ತೋ ತನ್ನ ಹೊರಗ ಹಾಕಿ ದ್ವೇಷ ಸಾಧಿಸತೊಡಗಿದಳು.

“ಮಾಡದ ತಪ್ಪಿಗೆ ಚಾವಳಿಯನ್ನಷ್ಟೆ ಅಲ್ಲ ನನ್ನನ್ನು ನನ್ನ ಮಕ್ಕಳನ್ನೂ ಭದ್ದ ವೈರಿಗಳಂತೆ ಕಾಣತೊಡಗಿದಳು.” ಭಗನ್ಯಾನ ಕಣ್ಣು ಒದ್ದೆಯಾದವು. ತಾಯಿ ಶತ್ರುವಾದರೂ ಮಾತೃಪ್ರೇಮ ' ದೊಡ್ಡ ಖಜಾನೆಯೆ ಅವನ ಎದೆಯೊಳಗೆ ಹಾಗೆ ಉಳಿದುಕೊಂಡು ಬಿಟ್ಟಿತ್ತು.

ಹಾಸಿಗೆ ಹಿಡಕೊಂಡ ಮೇಲೆ ಎರಡುಮೂರು ಸಾರಿ ಭಗನ್ಯಾ ನೋಡಲು ಹೋಗಿದ್ದ. “ಯಾ ಯಾ ಎ ಯಾಡಿ” ಕೂಗಿದ ಜೀವ ಬಹುದೂರ ಪಯಣ ಮಾಡಿರೊ ಹಾಗಿತ್ತು. ಜುಕ್ಕ ಜುಲಿಮಿಯಿಂದ ನಿಧಾನಕ್ಕೆ ಕಣ್ಣು ತೆಗೆಯುತ್ತಿದ್ದಳು. ಪಯಣದ ಆಯಾಶ ವೆಂಬಂತೆ ಕಾಣತೊಡಗಿತ್ತು. ಎಲ್ಲೋ ಬ್ರಹ್ಮಾಂಡದಲ್ಲಿ ಕೂಗುತಿರುವಂತೆ ಕೆಳುತ್ತಿತ್ತು. ಚಿಮ್ಲಿಯನ್ನು ನೋಡಿ ಕಣ್ಣು ಅಗಲಿಸಿದಳು. ಈಗ ಮಾತ್ರ ಅವಳ ಕಣ್ಣಲ್ಲಿ ನೋವಿತ್ತು. ವಿಷಾಧ ವಿತ್ತು. ತನ್ನ ಮಕ್ಕಳಲ್ಲಿ ತಾನೆ ಭಿನ್ನತೆ ಕಂಡೆ ಎಂಬ ಅಪರಾಧ ಕಾಡಿತ್ತು. ಮಾತಾಡುವ ಪ್ರಯತ್ನ ಪಟ್ಟಳು. “ನಂದು ಮುಗೀತು, ನಾ ಏನು ಕಾಳಜಿ ಮಾಡಲಿಲ್ಲ ಮಗಳೆ ನಿನ್ನ. ..” ಮಾತುಗಳು ತುಂಡಾಗ ತೊಡಗಿದವು. ಭಗನ್ಯಾನ ಕೈಯನ್ನು ಪಕ್ಕೀರನ ಕೈಯೊಳಗಿಟ್ಟು “ನೀ ಏನು ಮಾಡಿದ್ರು ಅಟುಗೋಟು” ಅಂತೇಳಿ ಚಿಮ್ಲಿಯ ಕೈನು ಸೇರಿಸಿದಳು. ದೂರು ನಿಂತ ಮಂದಿ ಕಿಚೋ ಅಂತ ಬೊಬ್ಬಹಾಕಿದ್ರು, ಗುಡ್ಲೀರಿಯ ಯುಗ ಕೊನೆ ಯಾಗಿತ್ತು. ಮೂಲೆಯಲ್ಲಿ ಕುಂತು ಪಂಪಾನಾಯ್ಕ ಸಣ್ಣ ಮಗುವಿನಂತೆ ಅಳತೊಡಗಿದ್ದ. ವಯಸ್ಸು ಎಲ್ಲವನ್ನು ಕಲಿಸುತ್ತೆ. ಮೌನ, ಗಂಭೀರ ತಾಳ್ಮೆ ಎಲ್ಲವನ್ನೂ. ತಂದೆ ದುಃಖ ತಪ್ತ ಮನಸ್ಸನ್ನು ಅರ್ಥಯಿಸಿಕೊಂಡ ಭಗನ್ಯಾನಾಯ್ಕ ಅತ ಕುಂತಲ್ಲಗೆ ಹೋಗಿ ಬಿಗಯಾಗಿ ಅಪ್ಪಿಕೊಂಡು ಇಪ್ಪತ್ತು ವರ್ಷಗಳಲ್ಲಿ ತನ್ನೊಳಗೆ ಮಡು ಗಟ್ಟಿದ ದುಃಖದ ಕೋಡಿಯನ್ನು ಹರಿಬಿಟ್ಟ, ಅತ್ತ ಅತ್ತ ಅಳುತ್ತಲೆ ಇದ್ದ. ಯಾರ ಬಗ್ಗೆ ಏನನ್ನೂ ಹೇಳದೆ ಎಲ್ಲನೂ ನೋಡುತ್ತಿದ್ದ. ಹೆಣಕ್ಕೆ ಸ್ನಾನ ಮಾಡಿಸಿ, ಸಿಂಗಾರ ಮಾಡಿ ಹೂವಿನ ಪಟ್ಟಿಯ ಬದುವಿನ ಮೇಲೆ ಸುಡೋದಕ್ಕೆ ಕಟ್ಟಿಗೆ ಒಟ್ಟಿದ ಜಾಗದಲ್ಲಿ ದೇಹವನ್ನು ಒಯ್ದು ಬೆಂಕಿಗೆ ಸಮರ್ಪಣೆ ಮಾಡಲಾಯಿತು.

ಬಗನ್ಯಾನಾಯ್ಕನಿಗೆ ಎಲ್ಲರಿಗಿಂತಲೂ ಹೆಚ್ಚಿನ ದುಃಖವಾಯಿತು. ಬದುಕು ಕಟ್ಟವುದನ್ನು ಕಲಿಸಿದ ತಾಯಿ.ಮುಂದಿಟ್ಟ ಹೆಜ್ಜೆಯನ್ನು ಹಿಂದಕ್ಕೆ ಇಡುವ ಸವಾಲೆ ಏಳುವುದಿಲ್ಲ ಮುಂದೆ ಹೋಗ್ತಾ ಇರಬೇಕು. ಬೇಕು ಬೇಡಗಳ ಅಯ್ಕೆ ಇರುವುದಿಲ್ಲ. ಇಂತಹ ಬುದ್ದಿಮಾತು ಕಲಿಸಿದ ತಾಯಿ ಇದ್ದಕ್ಕದಂತೆ ಹೊಗಿದ್ದು ನಂಬಲಾಗದಸತ್ಯವಾಗಿತ್ತು. ಪಕ್ಕೀರ ಮತ್ತು ಅವನ ಇಬ್ಬರು ಹೆಂಡಿರು ಜೋತಿಬಾಯಿ ಮತ್ತು ಘಮಣಿ ಬಹಳ ಖುಷಿ ಪಟ್ಟರು. ಪೀಡೆ ತೊಲಗಿತು ಅಂತ ನೆಮ್ಮದಿಯ ಉಸಿರು ಬಿಟ್ಟಿದ್ದರು. ಅವರ ಹದಿನೆಂಟು ಮಂದಿ ಹುಡುಗಿಯರಿಗೆ ಅಜ್ಜಿ ಸತ್ತ ಬಗ್ಗೆ ದುಖಃವೇನು ಅಗಲಿಲ್ಲ. ಆದರೆ ಭಗನ್ಯಾನ ಮಕ್ಕಳು ಮಾತ್ರ ವಿಚಲಿತರಾಗಿದ್ದರು. ಚಾವಳಿಗೂ ಕೂಡ ಮುದುಕಿಯ ಸಾವನ್ನು ಒಂದು ವಾರ ಮರೆಯಲಾಗಲಿಲ್ಲ. ಭಗನ್ಯಾ ತಿಂಗಳು ಗಟ್ಟಲೆ ತಾಯಿಯನ್ನು ಕನವರಿಸಿದ. ಅವಳು ಬಾಯಿ ಬಡಕಿ ಯಾಗಿದ್ದಕ್ಕೆ ಇವನ ಅಸ್ತಿತ್ವ ಉಳದಿತ್ತು. ಅತ್ಯಂತ ನಿಕೃಷ್ಟ ಮನಸ್ಸಿನ ಪಕ್ಕೀರನ ಮನೆಯೊಳಗೆ ಇರೋದಕ್ಕೆ ಮನಸ್ಸು ಒಪ್ಪದಾಗಿತ್ತು. ಅಧರೆ ಬದುಕುವವರೆಗೆ ಬದುಕನ್ನು ಮತ್ತೊಮಬ್ಬರಿಗೆ ತೊಂದರೆಯಾಗದ ರೀತಿಯಲ್ಲಿ ನಮ್ಮ ಹೆಗಲ ಮೇಲೆ ಹೊತ್ತು ಸಾಗುವುದು ನಮ್ಮ ಕರ್ಮ ಅಂತ ಗಟ್ಟಿನಿರ್ಧಾರದಿಂದ ಕಷ್ಟನೋ ಸುಖನೋ ಸಣ್ಣವನ ಮನೆ ಮುಂದೆ ನಾಯಿಹಂಗ ಬಿದ್ದಕೊಂಡಿರಬಾರದು ಅಂತೇಳಿ ನಿರ್ಧಾರ ಮಾಡಿದ. ಭಗನ್ಯಾನ "ಅಪ್ಪ ನನ್ನ ಮನಸ್ಸಿಗೆ ಹಿಂಸೆ ಆಗ್ತಿದೆ ನೀ ಯಾಕ್ಕೆ ನನ್ನ ಕೂಡು ಬಂದು ನನ್ನ ಮನಿಯೊಳಗೆ ಇರಬಾರದು?" ಭಗ್ಯಾ ತಂದೆಯ ಸ್ಥಿತಿ ಗಮನಸಿ ಕೇಳಿದ. "ಅಯ್ಯೋ ಬಿಡಪ್ಪ, ಪರವಾಗಿಲ್ಲ. ಇನ್ನೂ ಎಷ್ಟು ದಿನ ಬದುಕ ಬಲ್ಲೆ? ಅಷ್ಟರಲ್ಲಿ ನಿಮ್ಮಿಬ್ಬರ ನಡುವ ಸುನ್ಮೆ ವೈಷಮ್ಯ ಯಾಕೆ? ಈಗ ಪಾಡದಿರ ಪಡಾಗೆಯೇ ಇರ್ರಿ." ಆತನೊಳಗೆ ನಡೆಯುತ್ತಿದ್ದ ಹೋರಾಟವನ್ನು ಅದುಮಿಟ್ಟು ವಿಷಯವನ್ನು ತಿಳಿಯಾಗಿಸುವ ಪಯತ್ನ ಮಾಡಿದ್ದ. "ಅಪ್ಪಾ ನಿಮ್ಮ ಪಾಲಿನ ಹೊಲ ಆವನೇ ಇಟ್ಟುಕೊಳ್ಳಲಿ ಅದನ್ನ ಅವನಾದ್ರೂ ಮಾಡ್ಲಿ, ಇಲ್ಲ ಕೋರಾದ್ರು ಕೊಟ್ಟು ಹಾಳುಗುಂಡಿಗೆ ಬೀಳ್ಳಿ, ನೀ ಬಂದು ನಾಕು ದಿನ ಸಂತೋಷವಾಗಿ ಇರಬಹುದಲ್ಲಾ." ಭಗನ್ಯಾ ಕಪಟವಿಲ್ಲದೆ ಹೇಳಿದ. "ಎಲ್ಲಿ ನೆಮ್ಮದಿ ಮಗ ಅಲ್ಲಿದ್ದರೇನು ಇಲ್ಲಿದ್ದರೇನು, ಸಾವು ಹುಡಕೊಂಡು ಬರೋಮಟ ಕಾಯ್ತಿನಿ. ನನಗೆ ಒತ್ತಾಯ ಮಾಡಬೇಡ." ಕಡ್ಡಿ ಎರಡು ತುಂಡು ಮಾಡಿದಂಗೆ ಹೇಳಿದ. ಬಗನ್ಯಾ ಅತೀವ ದುಃಖದಿಂದ ತಂದೆಯನ್ನು ಬಿಟ್ಟು ಮನೆ ಕಡೆ ಬಂದಿದ್ದ. ಹಿರಿಯನಾಗಿ ಹುಟ್ಟಿದ್ದಕ್ಕೆ ಇದೆ ನನ್ನ ಫಲಶೃತಿ, ತಾಯಿಸೇವೆ, ತಂದೆ ಸೇವೆ ಮಾಡುವ ಅವಕಾಶ ಇಲ್ಲ. ತನ್ನೊಳಗೆ ಅಲೋಚಿಸಿಕೊಂಡು ಚಡಪಡಿಸುತ್ತಿದ್ದ.

ಮುದುಕಿ ಸತ್ತು ತಿಂಗಳಲ್ಲೆ ಪಕ್ಕೀರ ಮುದುಕನಿಗೆ ಮೂರುಸಾರಿ ಹೊಡದಿದ್ದ. ನಡುವೆ ಮಾತಾಡಕ ಹೋದ ಬಗನ್ಯಾಗೂ ಕೂಡ ಸರಿಯಾಗಿ ಮಾತಲ್ಲಿ ಜಾಢಿಸಿ ಕಳುಹಿಸಿದ್ದ. ಭಗ್ಯನಾಯ್ಕ ನಿರುತ್ಸಾಹಕನಾಗಿ ತಂದೆಯ ಸಲುವಾಗಿ ಅವನು ಆಡಿದ ಮಾತುಗಳ ಕಡೆಗೆ ಗಮನ ಕೊಡದೆ ಗಪ್ಪಾಗಿದ್ದ. ತಂದಗೆ ಚಿಕ್ಕಪ್ಪ ಮಾತಾಡೋದನ್ನ ಬದ್ಯಾನಾಯ್ಕ ಎನಾದರೂ ಕೇಳೀದರೆ ಅವನ ಹಡಮುರಿಗಿ ಎತ್ತುತ್ತಾನೆಂಬ ಅತಂಕ ಭಗನ್ಯಾನದಾಗಿತ್ತು. ನನ್ನ ಎಂಜಲು ಮಲೆ ಕುಡಿದು ಬೆಳದವನು ಅದು ಅಲ್ಲದೆ ಕಮರಮತೋಟ್ ಜಾತಿಗೆ ಸೇರಿದವರು ಇಬ್ಬರೆ, ಮೊದಲೆ ತಾಂಡದಲ್ಲಿನ ಬೇರೆ ಬೇರೆ ಜಾತಿಗೆ ಸೇರಿದವರು ನನ್ನ ಬೆಳವಣಿಗೆಯನ್ನು ಸಹಿಸಿಕೊಳ್ಳದೆ

ಮೂಲೆಗುಂಪು ಮಾಡೋದಕ್ಕೆ ಪ್ರಯತ್ನಿಸುತ್ತಿರುವಾಗ ತಾವಿಬ್ಬರು ಹೀಗೆ ಕಚ್ಚಾಡಿದರೆ ಮಂದಿ ಅದರ ದುರುಪಯೋಗ ತಗೋಂತಾರೆ ಅಂತೇಳಿ ದೊಡ್ಡ ಮನಸ್ಸು ಮಾಡಿದ್ದ.

ಆದರೆ ಪಕ್ಕೀರ ಬರಿಮಾತಿಗೆ ಬಗ್ಗೊ ಹಾಗೆ ಕಾಣಲಿಲ್ಲ. ಬಗನ್ಯಾಯ್ಕನ ವಿರೋಧಿಗಳು ಮುದಕಿಯ ಸಾವಿನ ನಂತರ ಎದ್ದು ನಿಂತಿದ್ದರು. ಗುಡ್ಲೀರಿ ಬುದಕಿದ್ದಾಗ ಅದ್ಯಾವ ಗಂಡಸು ಮೀಸೆ ಈರೋನು ಆವಳ ಎದುರಿಗೆ ಬಂದರೂ ಮಾತಿನೊಳಗೆ ಅವನ ಬಾಯಿ ಮುಚ್ಚಿಸಿಬಿಡ್ತಿದ್ಲು. ಅವಳ ಬಾಯಿ ಕಂಡು ಇಡೀ ತಾಂಡದ ಮಂದಿನೆ ಹೆದರಿ ಒಳಗ ಸೇರಿಕೊಂಡು ಬಿಟ್ತಿದ್ರು. ಈಗ ಅವರ ಪರವಾಗಿ ಯಾರೂ ಮಾತಾಡೋರಿಲ್ಲ ಅಂತೇಳಿ ದೊಡ್ಡ ಪಡೆಯೊಂದು ಭಗನ್ಯಾನಾಯ್ಕನನ್ನು ಬಗ್ಗು ಬಡಿಯಲು ತಾಯಾರಿ ನಡೆಸುತ್ತಿದ್ದರು. ತಾಂಡೆಯ ದುರುಗವ್ವನ ಪೂಜಾರಿ ಅದರ ನಾಯಕನಾಗಿದ್ದ. ಉಳಿದಂತೆ ಶಂಕ್ರಿ, ಜೇಮ್ಲು, ಲಸಣೂ ಮೇಲಿನ ಓಣಿ ದಲ್ಲಾಳಿ ದರಗ್ಯಾನಾಯ್ಕ ಹಿಂದಿನ ಓಣಿ ಕಾಟೆವಾಳ್ ಕುಬೇರಕನಾಯ್ಕ, ಮುಂದಲೋಣಿಯ ಪಾಪುಗ ನಾಯ್ಕ ಸಂಗುನಾಯ್ಕ ಒಂದೆ ಕಡೆಗೆ ಸೇರಿ ಭಗನ್ಯಾನ ಹೆಂಗ ಚಿತ್ ಮಲಗಿಸೋದು ಅಂತ ಯೋಚ್ನೆ ಮಾಡಿದ್ರು. “ಒಡ್ರಲೆ, ಯಾವಗ ಗುಡ್ಲೀರಿ ಸತ್ಲೋ ಅವನ ಕತೆ ಮುಗೀತು. ಅವನ ಪರವಾಗಿ ಯಾರು ಮಾತಾಡ್ತಾರಪ್ಪ? ಸಾಬರು ಊಹುಂ. ಉಪ್ಪಾರು ಸನಿಗೆ ಹಾಯಲ್ಲ. ಇನ್ನ ಮೇಗಲ ಓಣಿ ವಡ್ತಾ ಪಂಗಡವದರು ಅವರೇನು ಬೀಗ್ರಲ್ಲ ಬಿಜ್ಜರಲ್ಲ ಅವರ್‍ಯಾಕ ಬಂದಾರು. ಇನ್ನ ಆ ಬಾಣ್ಣೋತ್ ಪಂಗಡದ ಮಂದಿ ಭಗನ್ಯಾ ಅಂದ್ರ ಹಲ್ಲು ಮಸೀತಾವು. ಆ ಸೂಳಿಮಕ್ಕಳು ಕದ್ರಾ ಮತ್ತು ಜಾಪ್ಲಾ ನಮ್ಮ ಭಿವಾವತ್ ಅಂದ್ರ ಹೆದರಿಕೊಂಡು ಉಚ್ಚಿ ಹೋಯ್ಕಂತಾವು. ಉಳಿದವರು ಲಿಂಗಾಯಿತರು, ಹಜಾಮರು, ಬಾರಿಕರು ಉಸಳಾವತ್ ಅಗಸರು, ಕುರಬರ ಲಕ್ಕ ತಾವಾಯ್ತು ತಮ್ಮ ಹ್ವಾರೆ ಆಯ್ತು. ಅವನ್ನೇನಾರ ಮುಗುದಾರ ಹಾಕಿ ತಢಿಯೋರಂದ್ರ ನಾವೆಯಾ.” ಸಂಪೂರ್ಣವಾದ ಯೋಜನೆ ಪೂಜಾರಿ ತನ್ನ ಚೇಲಾಗಳ ಮುಂದೆ ವಿವರಿಸಿದ. ತಾನು ದೇವರ ಪೂಜಾರಿ, ಎಲ್ಲರಿಗೂ ನ್ಯಾಯ ಸಮ್ಮತವಾಗಿಯೇ ಅಲೋಚಿಸಬೇಕು ಎಂಬ ಪ್ರಜ್ಞೆಯನ್ನು ಕಳೆದುಕೊಂಡಿದ್ದ. ದಲ್ಲಾಳಿ ದಂಗನ್ಯಾನಾಯ್ಕ ಮಾತ್ರ ಪೂಜಾರಿಗೆ ಕೆಲ ವಿಷಯದಲ್ಲಿ ವಿರೋಧಿಸಿದ್ದ. ಅವನಿಗೆ ಒಂದು ಬಾಟಲು ಹೆಂಡದ ಆಮಿಷ ತೋರಿಸಿ ಬಿಟ್ಟರೆ ಬಾಯಿ ಮುಚ್ಚಿಕೊಂಡು ಸುಮ್ಮನಾಗುತ್ತಿದ್ದ. ಅವರಂತೆ ತಾಳ ಹಾಕುತ್ತಿದ್ದ. ಅವರೆಲ್ಲರು ಸೇರಿ ರಹಸ್ಯ ಸಭೆಯನ್ನು ಮಾಡಿ, ಹೆಂಗೆ ಭಗನ್ಯಾನ ಮನೆ ಮುರಿಬೇಕು? ಇಡೀದಿನ ತಾಂಡದ ಕೆರಿ ಹಿಂದಿನ ಜೀಪ್ಲಿ ಗುಡಿಸಲೊಳಗೆ ನಾಕು ಕೋಳೀ ಕೊಯ್ದು ಒಂದು ಕೇಸ್ ಪೂರಾ ಹೆಂಡ ತರಿಸಿ ಸಾಲದಕ್ಕೆ ಜೀಪ್ಲಿ ತಯಾರಿಸಿ ಇಟ್ಟಿದ್ದ ಬಟ್ಟಿಸರಾಯಿ ಟ್ಯೂಬನ್ನೆ ಖಾಲಿ ಮಾಡಿ ಮುಗಿಸಿದ್ರು. ಸಭೆಯ ನಾಯಕತ್ವವನ್ನು ಪುಜಾರಿ ವಹಿಸಿದ್ದ. ಅದರೆ ಭಗನ್ಯಾನ ತಮ್ಮ ಪಕ್ಕಿರನಿಗೆ ಈ ಕೆಡಕು ಕೆಲಸದ ನಾಯಕನ ಪಟ್ಟ ಕಟ್ಟಲಾಗಿತ್ತು. ದಲ್ಲಾಳಿ ದರಗ್ಯಾಗ ಕುಡಿದದ್ದು ಹೆಚ್ಚಾಗನ ಪಕ್ಕೀರನ ಕಾಲು ಹಿಡಕಂಡು, “ಏಯ್, ಮಾವ, ನಿಮ್ಮಣ್ಣ ಭಗನ್ಯಾನ ಮಾಮ ಅದಾನಲ್ಲ.. . ..” ಏನು ಮಾತಾಡಬೇಕು ಅಂತ ತಿಳಿಯದೆ ಸುಮ್ಮನಾದ. ಪುಜಾರಿ ನಡಕ್ಕೆ ಬಾಯಿ ಹಾಕಿ, “ಏನ ನಗ/ನಾಣ್ಯ/ಇಟ್ಕೊಂಡಾನ, ಭಿಕಾರಿ ನಿನ್ನ ಸಂಪತ್ತನ್ನ ಮಜಾ ಮಾಡ್ಲಿಕತ್ಯಾನ. ಬ್ಯಾರೆ ಆಗೋ ಮುಂದೆ ನಿನಗ ಗೊತ್ತಿಲ್ದ ದುಡ್ಡಕಾಸು ಅಂತೇಳಿ ಇಡಿಗಂಟು ತಗೊಂಡು ಹೊಗ್ಯಾನ. ಪಾಪ, ನಿಮ್ಮವ್ವ ಅಪ್ಪ ಮುಗ್ದರು, ಚಲೋತ್ನಂಗ ಯಾಮಾರಸಿ ಬ್ಯಾರೆ ಹೋದ.” ಪಕ್ಕೀರನ ತಲೆ ಒಳಗೆ ಹೆಂಡ ಸರಾಯಿ ಗಲಿಬಿಲಿ ಮಾಡಿದವು. ಈಗ

ಮತ್ತೊಂದಿಷ್ಟು ಅನುಮಾನ ಶಂಕೆಗಳು ಸುರು ಆದ್ವು. ಜೇವ್ಲಿ ಅದೇ ಸಮಯಕ್ಕೆ ಹೆಂಡ ಸರಾಯಿ ಕುಡಿಸಿ ಅರ್ಧ ಬಾಟಲಿ ಮುಂದಿಟ್ಟಳು. ಹೆಂಗ್ಯಾವ ಅಂತೇಳಿ ಒಂದೇ ಉಸಿರಿಗೆ ಎತ್ತಿ ಸುರುವಿಕೊಂಡ. ತಲಿ ಪೂರ ದಿಮ್ಮಂತ ಹಿಡಕೊಂಡು ಮೆದಳು ಪೂರಾ ಅಪಾತು. ಎಲ್ಲದ್ದೀನಿ, ಏನು ಮಾಡ್ತೀನಿ ಅನ್ನೋ ಕಬರು ಇಲ್ಲದಂಗಾತು. ಪುಜಾರಿ ಕುಡಕ ಅಲ್ಲೆ ಒರಗಿಕೊಂಡ, ಅವನ ಚೇಲಾಗಳೆಲ್ಲ ಮೂಲಿಹಿಡದ ಮೇಲೆ. ಜೇವ್ಲಿ ಒಂದು ಕ್ವಾಟರ್ ಸರಾಯಿ ಎರಿಸಿಕೊಂಡು ಕೋಳಿಯ ಒಳ್ಳೊಳ್ಳೆ ಭಾಗನೆಲ್ಲಾ ನೆಂಚ್ಕೊಂಡು ಬಾಯಿ ಒರೆಸಿಕೊಂಡು ಹಾಳ ಮನಿ ಸೂಳಿಮಕ್ಕಳು ಏಳೋದನ್ನೆ ಕಾಯುತೋಡಗಿದ್ದಳು. " ಯಾ ನನ್ನ ಹಾಟಗಳ್ಳ ಹಿಡಕೊಂಡೋದ್ನೋ, ಅವನ ಮೀಸ್ಯಾನ ನನ್ನ ಹಾಟು, ಕಂಡೋರು ಮನಿ ಹೇಲಂದ್ರೆ ಬಾಯಿ ಬಿಟ್ತಾವು ಬೇವರ್ಸಿಗಳು." ನಾಕು ಮೊಟ್ಟೆ ಇಟ್ಟ ಹ್ಯಾಟಿ ಹುಂಜ ಕಣ್ಮರೆಯಾಗಿತ್ತು. " ನಾಳೆ ಬೆಳಕು ಹರೀಲಿ, ಆ ಮೇಳೈತಿ ಮಜ. ಯರ ತಿಪ್ಪಿಯೊಳಗ ನನ್ನ ಕೊಳಿ ಪುಚ್ಚ ಸಿಗ್ತಾವೊ ಆ ನ್ನ ಮಕ್ಕಳನ್ನು ಉಳಸಾಗಿಲ್ಲ." ಬಾಯಿ ಜೋರು ಮಾಡಿದ ಬೊಯ್ಯುತ್ತಿದ್ದಾಳು ಮುಂದೂಲೂರಿನ ಚಮಣಿ.

ಊರು ಪಂಚಾಯಿತಿ ಕಟ್ಟ್ಯಾಗ ಪುಜಾರಿ ಅಪರಾಧಿಯಾಗಿ ನಿಂತಿದ್ದ. ಪಕ್ಕೀರ ದಲ್ಲಾಳಿ ದುರಗ್ಯಾ ಅವತ್ತು ನಿಷೆದಾಗ ಕೋಳಿತಿಂದ್ರೋ ಇಲ್ಲೋ ಮನಿಯಾಗ ಕೋಳಿ ಕೋಯ್ದು ಸಾರಮಾಡಿದನ್ನು ಹುಚ್ಚ ಜಿಂಗು ಹೋಗಿ ಚಮಣಿಗೆ ಹೆಳಿದ್ದೇ ತಡ, ಸೀರಿ ಕೈಯಾಗ ಹಿಡಕೊಂಡು ಓಡಿದ್ದಳು. ಜೇವ್ಲಿ ಕೋಳಿ ಕೊಂದು ಕಳ್ಳೂ ಪಚ್ಚಿ ಸೀಳೋ ಮುಂದೆ ಜಿಂಗು. "ಯಕ್ಕ, ಆ ಕಳ್ಳು ಪಚ್ಚಿ ಮತ್ತು ಚಂಡಕೊಟ್ಟು ಬಿಡು ಸುಚೆನ್ನಂಡು ತಿಂತೀನಿ ಅತ್ಲಾಗ." ಅಂದಿದ್ದ. ಹುಚ್ಚಾ ಎಲ್ಲಾ ಕಡಿಗೂ ಹಿಂಗ ನಾವ ತಿಂದೀವಿ, ಅಂದಾನಂತ. "ಏಯ್ ಹೋಗ ಬೆವರ್ಸಿ, ಅಹಾ ಬಂದಬಿಟ್ಟ ಕಳ್ಳು, ಚೆಂಡು ಕೆಳಾಕ, ಹೋಗನಾವ ತಿಂತೀವಿ." ನಾಯಿಗೆ ಗದರಿಸುವಂತೆ ಗದರಿಸಿದ್ದಳು. "ನಿನ್ನವ್ವನ ನಿನಗ ಮಾಡ್ತೀನಿ ಇರು ಈ ಕೋಳಿಗಳನ್ನು ನಿಹ್ಯಾಂಗ ಕೊಳಿ ಕಳ್ಳ ಯಾರು? ಅಂತ ಯಾರ್‍ಯಾರು ಸಂಜಿಗ ಬೋಯ್ದರ ಅವರಿಗೆ ಹೋಗಿ ಹೇಳ್ತೀನಿ." ಎಚ್ಚರಿಸಿ ಬಂದಿದ್ದ ಜೇವ್ಲಿ ಕೈಯಾಗಿದ್ದ ಕೋಲಿಂದ, "ಹೋಗೋ ಬಾಡ ನನ್ನ ಮಗನೆ ಬಾಳ ಜನಾನಾ ಕಂಡೀನಿ." ನಾಕು ಬಾರಿಸಿ ಓಡಿಸಿದ್ದಳು. ಅವತ್ತೆ ಸಂಜಿಮುಂದ ಅಕೆ ಗಂಡು ಜಮಣಿ ತಮ್ಮ ಕೊಳಿ ಕದ್ದು ಕೊಂಡಿರೋದು ಖಾತ್ರಿ ಮಾಡಿಕೊಂಡು ಬೊಯ್ಯುತ್ತಿರೋದನ್ನ ಬಹಳ ತಡವಾಗಿ ಜಿಂಗುನ ಕಿವಿಗೆ ಬಿದ್ದಿತ್ತು. ಸೊಟ್ಟಗಾಲು ಎಳಕಂತ ಜೇವ್ಲಿ ಮಿನಿಯಾಗ ನಡೆದಿರೋ ಕರಾಮತ್ತಿಯನ್ನು ಚಾಚು ತಪ್ಪದೆ ವಿವರಿಸಿದ್ದ ತಾಂಡದಾಗ ನಡೆಯುವ ಇಂಥಹ ಬೆನಾಮಿ ಹಡಬಿಕೂಟಗಳಿಗೆ ಕೈಗೆ ಸಿಗುವಕೋಳಿಗಳನ್ನು ಸಸ್ತಾದಕ್ಕೆ ಕೊಡುವ ಇಬ್ಬರು ಗಿರಾಕಿಗಳಿದ್ದರು. ಒಬ್ಬ ಜಮಲ ನಾಯ್ಕು ಆಡೋಕೋಳಿನ ಅಮಾನತ್ತಾಗಿ ಎಕೊಂತಾನ ಇನ್ನೊಬ್ಬ ಸಂಗ, ಎದುರಿನ ಕೋಳಿಗೆ ಒಂದೇ ಕಲ್ಲನ್ಯಾಗ ಕವಳಿ ಬರಿಸುವ ಕಲೆಯನ್ನು ಹೊಂದಿದ್ದ. ತಿಕಾಣಿ ಇಲ್ಲದೆ ಪುಜಾರಿ ಐದಾರು ಮಂದಿಗೆ ಹೆಂಡಿ ಕಂಡ ವ್ಯವಸ್ಥೆ ಮಾಡ್ಯಾನಂದ್ರೆ ಹಡಬಿವ. ಜೇವ್ಲಿ ಮಣಿ ಬಂದು ತನ್ನ ಕೊಳಿಪುಕ್ಕಗಳನ್ನು ಪರೀಕ್ಷೆಮಾಡೊಮುಂದೆ "ಏಯ್ ನೀ ಯಾವಳೆ ನ್ನ ಮನಿಗಂಟು ಬಂದು ನೋಡಾಕಿ, ನಾ ಏನು ಅಟು ಕಳ್ಳಿ ಅಂತ ತಿಳ್ಕಂಡ್ಯಾ .. ಬೇವರ್ಸಿ." ಗಂಡ ಸತ್ತು ಐದಾರು ವರ್ಷ ಅಗಿದ್ದವು. ಹಿಂಗ ಜೀವ ಕಳೀತಿದ್ಲು ಹಂಗಾಗಿ ಬಾಯಿ ಜೋರಾಗಿತ್ತು. ಜಮಣಿಗೆ ಸನ್ನಿವೇಶದ ಅರಿವಾಯ್ತು. "ಏನಿಲ್ಲಕ್ಕ ಗುಡಿಸಲೋಳಗೆ ಪುಕ್ಕ ಬಿದ್ದಾವಲ್ಲ, ಒಂದ ಹಿಡಕೊಂಡು ಬಂದು ನನಗ ತೋರ್‍ಸು,

ಇಲ್ಲ ಯಾ ಹಾಟಗಳ್ಳ ಕದ್ದಾನ, ಯಾ ಹಾದರಗಿತ್ತ ಮಕ್ಕಳು ತಿಂದಾರ ಹೇಳ ಬಿಡ್ತೀನಿ. ಇಲ್ಲಕ್ಕ ನಾ ಸಮುಕಿರಾಕಿನಾ ಅಲ್ಲ, ಕಷ್ಟಪಟು ಕಾಗಿ ಹದ್ದುಗಳ ಕೈಯಾಗ ಸಿಗದಂಗ ಕಾದು, ಪಾಪು ಪುಟ್ಟಿ ಮುಚ್ಚಿ ಸಾಕಿದನ್ನ ಅದ್ಯವನೋ ಮಿಂಡ್ರಿಮಗ ಎತ್ಕಂಡು ಬಂದ್ರ." ಜಮಣಿ ಒಳಗೆ ನುಗ್ಗಿದಳು. ಜೀವ್ಲಿ ಅವಳ ಎದುರಿಗೆ ಬಂದು. "ಏಕಾಕಿ ನನ್ನ ಮನಿಯೊಳಗ ಹೆಂಗ ನುಗ್ತೀಯೇ ಬೇವರ್ಸಿ ಮುಂಡೆ, ದೆವ್ವದಂಗೆ ನಾ ಇಲ್ಲೇ ನಿಂತಿನಿ ದರಕಾರ ಮಾಡದೆ ಒಳಗ ನುಗ್ಗಿತಯಲ್ಲ. ನಿಗೇನಾರು ಮಾನ ಮರ್ಯಾದೆ ಅನ್ನೋದು ಐತೇನು. ಪುಕ್ಕಾನು ಇಲ್ಲ ರೆಕ್ಕನೂ ಇಲ್ಲ ನಡಿಯೇ ಹೊರಗ." ಒತ್ತಾಯದಿಂದ ತಳ್ಳಿದಳು. " ಯಾಕೆ, ನೀ ಬಲು ದೊಡ್ಡ ಸಂಪನ್ನಿ ಮುಚ್ಕೊಂಡು ಅರಗಾಗು." ಅಂದವಳೆ ಮೂಲೆಗೆ ದಬ್ಬಿ ಕೋಳಿ ಸುಲಿದ ಜಾಗದಿಂದ ಹಿಡಿಪುಕ್ಕವನ್ನು ತಗೊಂಡು ಸೀರಿಯೊಳಗೆ ಕಟ್ಕೊಂಡು ಹೊರಗಡೆ ಬಂದಳು.

ನಿಶೆ ಇಳಿದು ಎಚ್ಚರಾದಾಗ ಪುಜಾರಿ ನಡೆದದ್ದನ್ನು ಕೆಳಿದಮೇಲೆ ಇದ್ದ ಒಂಚೂರು ನಿಸೆ ಇಳಿದು ಹೋಗಿತ್ತು. ಕೋಳಿ ತಿನ್ನುವಾಗ ಅದೇನೋ ಬ್ಯಾರೆ ತಿನ್ನುತ್ತಿದ್ದಂತೆ ಭಾಸವಾಗಿತ್ತು. ಅದು ಇಷ್ಟೊಂದು ಧೀರ್ಘಕ್ಕೆ ಹೋಗುತ್ತೇ ಅಂತೇಳಿ ಯಾರು ಯೋಚಿಸಿದ್ದಿಲ್ಲ. ನಾಯಕ ಕಾರಬಾರಿ ತಲಾ ಇಪ್ಪತ್ತೈದು ದಂಡ ಕಟ್ಟಿ ಎದ್ದು ಹೋಗಬೇಕು ಅಂತ ತೀರ್ಮಾನ ಕೊಟ್ಟರು. ದಲ್ಲಾಳಿ ದುರಗ್ಯಾ ಅವತ್ತೆ ಯಾವುದೋ ಎಮ್ಮಿ ಯಾಪಾರದಲ್ಲಿ ಬಾಲಮುರಿದು ಸಂಪಾದಿಸಿದ್ದ ಏಳು ರೂಪಾಯಿಯೊಳಗೆ ಐದು ಬಿಸಾಕಿ " ಏಯ್ ಪುಜಾರಿ ಥು ನಿನ್ನ ಜನ್ಮಕ್ಕೆ ಹೇಳಲೇನು" ಅಂದವನೆ ಅವನ ಕೇಡಬುದ್ದಿ ಬಗ್ಗೆ ತಾಂಡಕ್ಕೆ ಗೊತ್ತಿದ್ದರಿಂದ ಸುಮ್ಮನೆ ಬಂದ. ಅವನಿಂದಾಗಿ ಐದು ರೂಪಾಯಿ ದಂಡ ಕಟ್ಟೊದು ಬಂತಲ್ಲ ಅಂತ ಬೇಸರದಿಂದ." ನಾಯಕಪ್ಪ ಎನೋ ತಪ್ಪಾಗಿದೆ. ಮಾಪಮಾಡ್ರಿ." ಅಂತ ಐದು ರೂಪಾಯಿ ಕಟ್ಟಿ ಪಂಚಾಯ್ತಿ ಕಟ್ಟೆಯಿಂದ ನಿರ್ಗಮಿಸಿದ. ಉಳೀದವರು ಕಲ್ಲು ಬಂಡೆಹಂಗೆ ನಿಂತರು. ಕೈಯಾಗ ಕಾಸಿದ್ರೆತಾನೆ ಮಾತಡೋದು. "ನಾಕು ದಿನ ಕಾಲಾವಕಾಶ ಕೊಡಿ, ಈಗ ಧೀಡೀರ್ ಕಟ್ಬೋದು ಅಂದೆ ಅಗಕಿಲ್ಲ." ಪುಜಾರಿ ಮರ್ಯಾದೆಗೆ ಅಂಜಿ ಅಂಗಲಾಚಿದ. " ತಿನ್ನೋಬೇಕಾದ್ರೆ ಎಲ್ಲ ಯೋಚನೆ ಬರ್ಲಿಲ್ಲ. ಮತ್ತೊಬ್ರ ವಸ್ತುವನ್ನು ತಿನ್ನೋದು ಅಪರಾಧ." ಕಾರಬಾರಿ ಗರಂಆಗಿ ಬೋಧನೆ ಮಾಡತೊಡಗಿದ. ಯಾರಿಗೂ ಕೇಳುವ ವ್ಯವದಾನ ಇರಲಿಲ್ಲ. " ಆಯ್ತು ಮುಂದಿನ ಶುಕ್ರವಾರದ ಒಳಗೆ ಜಮಣಿ ಕೈಯಾಗ ನಿಮ್ಮದಂಡದ ಕಾಸು ಸೇರಬೇಕು ಇಲ್ಲಂದ್ರೆ ಮುಂದಿನ ಪರಿಣಾಮ ಬರೇನೆ ಆಗುತ್ತೆ." ನಾಯಕ, ಕಾರಬಾರಿ ಖಡಕ್ಕಾಗಿ ತಮ್ಮ ನಿರ್ಧಾರ ತಿಳಿಸಿ ಕೆಳಗಿಳಿದು ಹೋದರು.

ಎಲ್ಲರೂ ಪೂಜಾರಿನ ಬಯ್ಕೊಂಡು ಹೋದರು. ಸುಕಾ ಸುಮ್ಮನೆ ಅವರು ಕರೆದಿದ್ದಕ್ಕೆ ಹೋದ ಪಕ್ಕೀರ ದಂಡ ಕಟ್ಟಿ ಬಂದ. ಪುಜಾರಿಯ ಹಿಡತಕ್ಕೆ ಬಂದಿದ್ದ. ಪುಜಾರಿ ಆಗೋಮ್ಮೆ ಈಗೊಮ್ಮೆ ಅವನ ಮನಿಕಡಿಗೆ ಹೋಗಿ ಅವನ ಎರಡನೇ ಹಂಡತಿ ಚಂದ್ರಿ ದೂರದ ಸಂಬಂಧಿ ಅಂತೋ ಅವಳ ತಾವ ಹೋಗಿ ಗಂಟೆಗಟ್ಲೆ ಲಲ್ಲೆ ಹೊಡದು, ಆಕಿ ಮೈಕೈ ಮುಟ್ಟಿ ಮಾತಾಡ್ತುತ್ತಿದ್ದ. ದೂರದ ಸಂಬಂಧ ಅಂತ ಪಕ್ಕೀರನೂ ಅನುಮಾನ ಪಡಲಿಲ್ಲ. ಪುಜಾರಿ ಹಗಲು ಬಿಟ್ಟು ರಾತ್ರಿ ಬರೋದಕ್ಕೆ ಸುರು ಮಾಡ್ದ. ಗಡಿಗಿ ಬಾಯಿ ಮುಚ್ಚುಬೋದು. ಮಂದಿ ಬಾಯಿ ಮುಚ್ಚಾಕ ಆದೀತಾ. ಮಾತುಗಳು ಬಾಯಿಂದ ಬಾಯಿಗೆ ಹರಿದಾಡ ತೊಡಗಿದವು. ಪುಕಾರಗಳು ಎದ್ದವು.

ಪಕ್ಕೀರ ಮಾತ್ರ ತಲೆಕೆಡಸಿಕೊಳ್ಳದೆ ತನ್ನ ಸ್ವಂತ ಒಡಹುಟ್ಟಿದ ಅಣ್ಣನ ಮೇಲೆ ಜಿದ್ದಿಗೆ ಬಿದ್ದಿದ್ದ. ಪುಜಾರಿ ಯೋಜನೆ ಅವನನ್ನು ಕೋರ್ಟಿಗೆ ಅಡ್ಡಾಡಿಸಿ ಹೈರಾಣು ಮಾಡಬೇಕು ಅನ್ನೋದಿತ್ತು. ಕೋರ್ಟಿಗೆ ಅಲೆದಾಡುವುದೆಂದರೆ ಸಾಯೋದವರಿಗೂ ಆಡ್ಡಾಡಲೇ ಬೇಕು. ಹಂಗಾಗಿ ಅಣ್ಣತಮ್ಮರೆಲ್ಲ ಜಗಳ ಹಚ್ಚಿ ಅವರೆ ಹೊಡೆದಾಡಿ ಪೊಲೀಸ್, ಕೋರ್ಟು ಜೈಲಿಗೆ ಹೋಗಲಿ ಸೂಳಿಮಕ್ಕಳು ಅಂತ ಅವರ ಮನೆಯವರನ್ನು ಬಿಟ್ಟು ಬೇರೆ ಕಡಿಗೆಲ್ಲ ಈ ಸುದ್ದಿಯನ್ನು ಹೇಳಿ ಅವರಿಗೂ ಖುಷಿ ಪಡಿಸಿ ತಾನು ಖುಷಿ ಪಡೆಯುತ್ತಿದ್ದ.

ಪಕ್ಕೀರನಿಗೆ ಹೆಚ್ಚು ಕಡಿಮೆಯಾಗಿತ್ತು ಮೈಮೇಲೆ ಪ್ರಜ್ಞೆ ಇಲ್ಲದೆ ಒಂದೊಂದು ಸಲ ನಡದು ಹೋಗವರ ಮೇಲೆ ಬಿಳುವುದು ಅವರನ್ನೆ ದೂಷಿಸುವುದು ಮಾಡುತ್ತ ಬಗ್ಯಾನ ಮನಿ ತನಕ ಬಂದ. ಅಂಗಳದಾಗ ನಿಂತು ತಾಯಿ. ಹೆಂಡರು ಒಂದೂ ಬಿಡದಂಗೆ ಹಚ್ಚಿ ಬೊಯ್ಯೋದಕೆ ಸುರು ಮಾಡಿದ. ಯಾರೋಬ್ಬರೂ ತುಟಿಪಿಟಕ್ ಎನ್ನದೆ ಗುಡಿಸಲು ಕದ ಹಾಕ್ಕೊಂಡು ಒಳಗೆ ಸುಮ್ಮನೆ ಕುಂತ್ರು. ಅವನು ಅದೆಷ್ಟು ಒದರಿದನೋ ನಡು ರಾತ್ರಿ ವರೆಗೂ ಬಯಲಾಟ ನಡೆದಿತ್ತು. ಮಂದಿ ಸಾಧ್ಯವಾದಷ್ಟು ಮನೋರಂಜನೆ ಪಡೆದು ತಮ್ಮತಮ್ಮಮನೆಗೆ ವಾಪಾಸಾದ್ರು. ಪುಜಾರಿಗೆ ಮುಖ ಬಂಗವಾಯಿತು ಅವತ್ತು ದಿನ ಇಡೀ ದುರುಗವ್ವ ಸೇವಾ ಬಾಯಿನ ಪೂಜೆ ಮಾಡಿದ. ಏನು ಮಾಡಿದ್ರು ಭಗನ್ಯಾನ ಮಕ್ಕಳು ಜಗಳಕ್ಕೆ ಬರಲಿಲ್ಲವಲ್ಲಾ. ಯೋಚಿಸಿದ ಏನೋ ಮಾಡಿದರೆ ಏನು ಮಾಡಿದರೆ ಅವರು ಹೊರಗೆ ಬಂದಾರು ತಲೆ ಚೆಚ್ಚಿಕೊಂಡ. ಯಾರೋ ಊದಿನ ಕಡ್ಡಿ ಬೆಳಗೋದಕ್ಕೆ ಅಂತ ಬಂದ್ರು. ಅವನ ಅವಸ್ತೆ ಕಂಡು ಹೆದರಿ ಹೊರಗಡೆಯಿಂದಲೆ ಕೈಮುಗಿದು ಊದುಬತ್ತಿ ನಿಶಾನೆಗೆ ಮುಡಿಸಿ ಓಡಿದರು. " ಏಯ್, ಪುಜಾರಿಗೆ ದೆವ್ವ ಹಿಡಿದೈತಿ ಗರ್ಭಗುಡಿಯೊಳಗೆ ತಲೆ ತಲೆ ಬಡ್ಕಂಡು ಕಿರಿಚಾಡುತ್ತಿದ್ದ." ಹಾಲ್ಯಾನ ಮಗ ಜಿಂಗ ಹೇಳಿದ. " ದೇವಸ್ಥಾನದಾಗ ಎಲ್ಲೆರ ದೆವ್ವ ಬರಾಕ ಸಾಧ್ಯ ಏನಲೆ, ನಿಮ್ಮವ್ವನ ಜಿಂಗ ಹೇಳೋದ ಹೇಳ್ತಿ ಸುಳ್ಳು ಆಟು ಸರೀಗೆ ಹೇಳು. ಪುಜಾರಿಗೆ ಹುಚ್ಚು ಹಿಡದೈತಿ ಅಂದ್ರ ಮಂದಿ ನಂಬ್ಯಾರಪ್ಪ." ಪೀಕ್ಯಾನಾಯ್ಕ ಹೇಳಿದ. "ಹೌದು ನೋಡಲೆ ಮಾವ, ಪುಜಾರಪ್ಪಗೆ ಹುಚ್ಚ ಹೆಚ್ಚಾಗಿರೋದು ಗೊತ್ತಾಗಲೆ ಇಲ್ಲ." ಜಿಂಗ್ಯ ಹೇಳಾಕು ಪುಜಾರಿ ಬರೋದಕ್ಕು ಸರಿಯಾಯ್ತು. ಪೀಗಿಕಣ್ಣು ಮಿಟುಗಿಸಿದ ಅವನ ಮಾತು ಪೂರ್ತಿ ಆತು. "ನಿಮ್ಮಪ್ಪಗ ಹುಚ್ಚು ಹಿಡದೈತಲೆ ಜಿಂಗ್ಯಾನನ್ನ ಮಗನೆ," ಅಂತೇಲಿ ಜಿಂಗ್ಯಾನ ಹಿಡಯಾಕ ಮುಂದು ದಾಪುಗಾಲು ಹಾಕಿದ. ಜಿಂಗ್ಯಾ, " ಇಲ್ಲ ನಿನ್ನ ಹೆಂಡ್ತಿಗೆ ಹಿಡಿದೈತಿ ನಿಮ್ಮವ್ವನಲಗಲೊ ಪುಜಾರಿ" ಅಂತೇಳಿ ಅಣುಕಿಸಿದವನೆ ಓಡಿ ಮರೆಯಾದ. ಪುಜಾರಿಗೆ ಎನು ಮಾಡಾಕು ಆಗದೆ, ಹುಡಗರು ಹೇಳಿದ್ದನ್ನು ಯೋಚನೆ ಮಾಡಿದ. " ಆಯ್ಯಪ್ಪ ನಿಜವಾಗಲು ಹುಚ್ಚು ಹಿಡಯಾಕ ಮುಂಚೆ ಎಚ್ಚರಾಗ ಬೇಕು." ಅಂತೇಳಿ ಮಂದಿ ಯಾರು ತನ್ನ ಮಾತು ಕೇಳಿಲ್ಲ ಅನ್ನೊದು ಖಾತ್ರಿ ಪಡಿಸಿಕೊಂಡು ಮುಂದ ಹೊದ.

ಹೊತ್ತಿಗೆ ಮುಂಚೆ ಹೆಂಡದಂಗಡಿ ಚೇಮ್ಲನಾಯ್ಕನಿಗೆ ಹೇಳಿ ಕದ ತೆರೆಸಿದ್ದ ಪೂಜಾರಿ, "ಇಲ್ಲ ಪುಜಾರಪ್ಪ, ಹೆಂಡ ಬಂದಿಲ್ಲ ನಿನ್ನೇದು ಉಳದಿಲ್ಲ. ನಮ್ಮಕಿ ಕತ್ತೆತಗೊಂಡು ಹೊಗ್ಯಾಳ ಇನ್ನೇನು ಬರೋವ್ಯಾಳೆ ಆತು." ಅಂತೇಳಿ ಅಂಗಲಾಚಿದರೂ ಕೇಳದ ಗುಡಿಸಲೊಳಗೆ ಸೇರಿಕೊಂಡ. ಅವನ ಜೊತೆಗೆ ಪಕ್ಕೀರ ದಲ್ಲಾಲೀ ಹೊನ್ನನಾಯ್ಕ ಕಾಳುನಾಯ್ಕ ಹೋಗಿ ಜಾಗ

ಹಿಡಿಕೊಂಡು ಕುಂತ್ರು. ಪೂಜಾರೆಪ್ಪ ತನ್ನ ಜಡೆಯೊಳಗೆ ಇಟ್ಟುಕೊಂಡಿದ್ದ ಕೊರಿ ಬೀಡಿಯನ್ನು ತಗದು. " ಲೇ ಕಾಳು ಕಡ್ಡಿ ಕೊಡಲೆ" ಅಂದ. ಅಳಿಲು ಮಾರ್ಕಿನ ಕಟ್ಟಿಪೊಟ್ಟಣವನ್ನು ಅವನ ಕಡೀಗೆ ಬಿಸಾಡಿದ. ಕಡ್ಡಿ ತಗದು ಬೆಂಕಿ ಗೀರಿ ಬೀಡಿ ಹಚ್ಕೊಂಡು ಎರಡು ದಮ್ಮು ಎಳೆದು ಮಾತಿಗೆ ಆರಂಭಿಸಿದ. "ನಮ್ಮ ಕಣ್ಣೆದುರಿಗೆ ಅವನು ದಿನದಿನ ಬೆಳತವ್ನೆ ಸುರ್ವತಪ್ಪ ಗದ್ದಿ ಬತ್ತ ಕೇಳಿಯಾ, ಅಡವಿ ಹೊಲ ಜ್ವಾಳ, ಪಟ್ಟಿ ಹೋಲದಾಗಿ ಶೇಂಗಾ." ಪಜಾರಿಗೆ ಮೈಪರಿಚಿಕೊಳ್ಳುವಂತಾಗಿತ್ತು. ಯಾರಿಗೂ ಬಗ್ಗಲ್ಲ ಅನ್ನೋದೆ ವಿಚಾರ. ಪಕ್ಕೀರ ಸುಮ್ಮನೆ ಕೇಳುತ್ತಿದ್ದ. ತನ್ನ ಅಣ್ಣನ ಮೇಲೆ ಮೊದಲಿನಿಂಸಲು ದ್ವೇಷ ಇದ್ದ ಪಕೀರನ ಪುಜಾರಿಯಂತಹವರ ಸಹವಾಸಕ್ಕೆ ಬಿದ್ದು ಇನ್ನೊಂದಿಷ್ಟು ಹೆಚ್ಚಾಗಿತ್ತು. "ನೋಡಲೆ ಪಕ್ಕೀರ ಇವತ್ತು ಏನು ಮಡ್ತೀಯ ಗೊತ್ತಿಲ್ಲ, ನಿಮ್ಮ ಅಣ್ಣಕೂಡ ಜಗಳ ಆಡಾಕ ಬೇಕು. ಆ ಸೂಳಿಮಕ್ಕಳು ನಿನ್ನ ಹೊಡೆಯಾಕ ಬೇಕು. ಒಂದು ಗುಂಪು ನಾವು ಬಿಡಸಾಕ ಬಂದಂಗೆ ಬಂದು ಚೆನ್ನಾಗಿ ಹೊಡೀತೀವಿ. ಆಮೇಲೆ ನೀವೇ ಹೋಗಿ ಪೊಲೀಸರಿಗೆ ಕೇಸು ಕೊಡೋದು. ನನ್ನ ಮಕ್ಕಳು ಎಲ್ಲರೂ ಜೈಲಿಗೆ ಹೋಕಾರ." ಬೆನ್ನು ಬಿಡದ ಬೇತಾಳದಂತೆ ಗಂಟು ಬಿದ್ದಿ ಹೇಳಿದ. ಪಕ್ಕೀರ ಹೊತ್ತು ಏರುತ್ತಿರೊ ಹಂಗೆ ಚೆನ್ನಾಗಿ ಏರ್ಸಿದ್ದ. ಯವಾಗ ಅಮುಲು ಏರಾಕ ಹತ್ತು. "ಲೇ ಭಗನ್ಯ, ಬಾರಲೆ ಹೊರಗ ಎಷ್ಟು ದಿನಾಂತ ಹೆಂಗಸರಂಗ ಒಳಗ ಕುಂದ್ರತಿಯೋ. ನಿನಗ ಮಿಸೆ ಇದ್ರ ಬಾ." ಕೆರಿ ಏರಿಮೇಲೆ ನಿಂತು ಬೊಯ್ಯ ತೊಡಗಿದ. ಮಂದಿ ಕವಳಾಗಕ ಮುಂಚೆ ಹೆಂಡ ಕುಡುದು ಮನಿಗೆ ಸೇರಾಕ ತಮ್ ಪಾಡಿಗೆ ತಾವು ಕೆರೆ ಏರಿ ಹತ್ತಿ ಇಳಿದು ಮರೆಯಾಗುತ್ತಿದ್ದರು. "ದಿನಾಲು ಇವಂದು ಇದ್ದಿದ್ದೆ ಪಾಪ ಮಕ್ಕಳಂದಿಗ ಏನೋ ದುಡುಕೊಂಡು ತಿನ್ನಾಕಹತ್ಯಾನ, ಬೇರೆಯವರ ಹಂಗ ಕಕ್ಕಿದೋರ ಬಾಯಿ ನೆಕ್ಕೋ ಜಾಯಮಾನದವನಲ್ಲ. ಭಗನ್ಯಾ ಯಾವತ್ತು ಪಂಚಾಯ್ತಿ ಕಟ್ಟಿಯಲ್ಲಿ ಚಹ ಸತ್ತಿಗು ಕುಡಿಯೋವಲ್ಲ. ಸರಾಯಿ ಹೆಂಡ ದೂರ ಉಳಿತು. ಪ್ರತಿದಿನ ಒಂದುವರೆ ಬಾಟಲಿ ಕುಡುದು ಹೆಂಡಂತಿಗಂತ ಒಂದು ಬಾಟ್ಲು ಮನಿಗೆ ತಗೊಂಡು ಹೋಗೋದು, ಪ್ರತಿದಿನ ಕೆಲಸ ಮುಗಿದಮ್ಯಾಲೆ ಬಂದು ಕುಡಿದ ಹೋಗುತಿದ್ದುದು ಯಾರಿಗೂ ತಿಳದಿರಲಿಲ್ಲ. ಆದ್ರ ಕೆಲ ಮಂದಿ ಮುಂಜಾನಿಯಿಂದ ಸಂಜೀಮಟ ಹೆಂಡದಂಗಡಿ ಕಾಯ್ತಿದ್ರು. ಇದೇ ಭಾಳ ಮಂದಿಗೆ ಎದುರಾಗಿರುದು. ಯಾರು ಕೂಡ ಸೇರಂಗಿಲ್ಲ. ಯಾರಕೂಡ ಮಾತಾಡಂಗಿಲ್ಲ. ಯಾವನಿಗೂ ತನ್ನರೊಕ್ಕದಾಗ ಹೆಂಡ-ಸರಾಯಿ ಕುಡಿಸಂಗಿಲ್ಲ. ಪುಗ್ಸಟೆ ಕುಡಿಯೋ ಮಂದಿಗೆ ರೇಗಿ ಹೋಗಿತ್ತು. ಈ ಮಗ ನಮ್ಮ ಕಡಿಗೆ ತಿರುಗಿ ನೋಡಾವಲ್ಲ. ಅಂತೇಳಿ ಹೆಂಡದಂಗಡಿ ಯೊಳಗೆ ಎಲ್ಲರಿಗಿಂತಲೂ ಮುಂಚೆ ಹೋಗಿ ಕದ ತೆಗೆಸಿ ಅರ್ದಬಾಟಲ್ ಕುಡುದ ಬೋಣಿಗಿ ಮಾಡಿ ಅಂಡೂರುತ್ತಿದ್ದ ದಲ್ಲಾಳಿ ದರಗ್ಯಾ, ಮೇಗಲ ಓನಿ ಲಸುಣು, ಹಿಂದಲ ಓಣಿ ಡಾವ್ಲೊ, ಡಾವೇರ್ ಲಚ್ಮಾ, ಕಾರಬಾರಿ ಕಮಲ, ಒಂದು ದೊಡ್ಡ ಕೊಳಿವೆ ಇತ್ತು. ಯಾರು ಕುಡಿಯಾಕ ಬರ್ತಾರೋ ಅವರು ಒಂದು ಬಾಟಲಿ ತಗೊಮಡು ಮಡಿಕೆಗೆ ಸುರಿದು, ಒಂದು ಗುಟಕು ಕುಡಿದ ಆದಮೇಲೆ. ಸಂಬಂಧ ನೋಡಿ ಮಾತು ಒಗಿಯೋದು. " ಏನ್ಮಾವ. ಕೊಯ್ದರ ಜೋಳ. ಏಯ್ ಅವನಪ್ಪನ ಏನ ಬೇಳದಿತ್ತು ಅಂತೀಯಾ ನಿನ್ನ ಜೋಳ, ಮನುಷ್ಯರು ಒಳಗ ಹೋದ್ರೆ ಹದ್ರಿಕಿ ಆಕೈತಿ ಅಂತೀನಿ. ಹೇ. ತೆನಿ ಹೆಂಗಿದ್ವು ಅಂತಿಯಾ ಒಳ್ಳೆ ಚೆಂಡು ಚೆಂಡು ತುಂಬಿದಂಗಿದ್ವು, ಎನು ಬಂಪರ್ ಲಾಟರಿ ಹೊಡೀತು ಬಿಡು." ಅವನ ಹಿಂದಿಂದು ಮುಂದಿಂದು ಹೇಳಾಕ

ಸುರುಮಾಡಿದ. ಅವನೇನಾರ ಇವನ ಮಾತು ನಂಬಿ ಉಬ್ಬಿದ್ನಾ, ಕೊಬ್ಬತಲೆ ಹೋರಿ ಅಂತಂದು ಕೋಯ್ದು ಬಿಡೋರು, ಅವನಿಗಾಗಿ ಅವನು, "ಲೇ ತಮ್ಮ ಒಂದರ್ದ ತಗೊಳ್ಳೊ" ಅನ್ನಬೇಕು ಹಂಗ ಉಬ್ಬಿಸಿ ಅವನು ಅರ್ಧ ಅಂದೆ ಒಂದು ಬಾಟಲ್ ಪುರಾ ತಗೊಂಡು ಇನ್ನೊಂದೀಟು ಮರ ಏರಿಸಿ ಅವನು ಎರಡನೇಯದನ್ನು ತಗೊಂಡಾಗ ಅದರಾಗು ಅರ್ಧಪಾಲು ಮಾಡಿಕೊಂಡು ಮನಿಗೆ ಹೋಗೋದು. ಅನೇನಾರ ಬುದ್ದಿವಂತನಾದ್ರ ಬಾಟಲು ಕುಡಿಯೋಮಟ ಏನೂ ಹೇಳಿಲ್ಲ ಅಂದ್ರೆ , "ಏಯ್‌ಮಾವ ಒಂದು ಬಾಟ್ಲು," ಹಲ್ಲು ಗಿಂಜುವುದು. ಕೇಳುವಾಗ ಮಾನಮರ್ಯಾದೆ ಬಿಟ್ಟು ಕೇಳುವುದು ಅವನೇನಾದರು ಅದಕ್ಕೆ ಮಳ್ಳಾಗಿ ಕುಡಿಸಿದ ಅಂತಿಟ್ಕೋ ಅವನೆಲ್ಲಾ ಕೋಳಿಗೆ ಅಲ್ಲೊಂದು ಕೊಡು ಇಲ್ಲೊಂದು ಅನಿಗೊಂದು ಅಂತಂದು ಐದಾರು ಬಾಟಲಿ ದುಡ್ಡು ಅವನ ಹತ್ತ ಕೊಡಿಸಿ ತಾವು ಕುಡಿದು ಮನಿಗೆ ಹೋಗೋರು. ಇವೆರೆಲ್ಲದ ಚಾಕಿತನ ಗೊತ್ತಿದ್ದ ಬಗನ್ಯಾನಾಯಕನ ಸಮಸ್ಯೆ ಇವರ ಸವಾಸ ಅಂತಂದು ಯಾವಾಗಲೋ ಒಮ್ಮೆ ಬಂದು ಕೆಲಸ ಮುಗಿತಂದ್ರ ಹೊಂಡು ಬಿಡುತ್ತಿದ್ದ. ಹಾಗಾಗಿ ಭಗ್ಗ್ಯನಾಯ್ಕ ಹಿಡ್ತಕ್ಕೂ ಸಿಗಂಗಿಲ್ಲ ಹೊಡ್ತಕ್ಕು ಸಿಗಂಗಿಲ್ಲಾಂತ ಮಾತಾಡಿಕೊಳ್ಳುತ್ತಿದ್ದರು.

ಪಕ್ಕೀರ ಎಂದಿನಂತೆ ಸೀದಾ ಸೇವಾಭಾಯಿ ಮತ್ತು ಗುಡ್ಡಮ್ಮನ ಗುಡಿಯ ಬೇವಿನ ಮರದ ಗಾರಿಕಟ್ಟೆಯ ಮೇಲೆ ಕುಳಿತು ಮೊದಲು ಸುರು ಮಾಡಿದ. ಅವನ ಧ್ವನಿ ಕೇಳುತ್ತಲೆ ಮಜ ತಗೊಳೋದಕ್ಕೆ ಪಕ್ಕದ ಬೀದಿ ಹುಡುಗರೆಲ್ಲಾ ತಮ್ಮ ಬಾಯಿಯಿಂದಲೆ ಜೀಪು ಬಿಟ್ಕಂಡು ಗೇರು ಹಾಕ್ಕೊಂಡು ಬಂದು ಗಾರಿ ಕಟ್ಟಯ ಆಬದಿ ಈ ಬದಿ ನಿಂತ್ಕೊಂಡು ಪಕ್ಕೀರ ಸಂವತ್ಸರನಾಮಗಳನ್ನು ಹೊಡುತ್ತಿರುವ ಪರಿಯನ್ನು ನೋಡತೊಡಗಿದರು. ಇನ್ನೂ ಹೆಚ್ಚಿನ ಆನಂದ, ಎದುರುಪಾರ್ಟಿ ಬಂದು ತೆಕ್ಕಮಾರಿ ಬಿದ್ದಾಗ. "ಲೇ ಚೌಡ. ಅಲ್ಲ ಇವನು ಆ ಭಗನ್ಯಾನ ಇಷ್ಟೊ ಬೋಯುಕತ್ಯಾನ ಮೂರುದಿನ ಆತು. ನಾವು ನೋಡಾಕ ಹತ್ತಿ. ಅಲ್ಲ ಅವರ ಮನ್ಯಾಗ ಯರಾರ ಅದಾರ ಇಲ್ಲ. ಬೇಕಂತ ನಾಟಕ ಮಾಡ್ತಾ." ಹಿಂದಿನ ಓಣಿ ಸಾಮುನ ಮಗ ಜಿಂಕ ಕೇಳಿದ. "ಯಾವಾಗ ಬೇಕಾರು ಇವಯ್ಯನ ಎಲಬು ಮುರಿಬಹುದು, ಇವತ್ತೇನಾದ್ರು ಒಂದು ಆಗುತ್ತೆ ನೋಡು." ಚೌಡಗ ಹೇಳಿದ. ನೀರ ಸೇದಾಕ ಬಂದ ಹೆಂಗಸರೆಲ್ಲ, " ಈ ಹಾಳು ಮನಿಯೋನು ಏನು ಹಚ್ಕೆಂಡಾನೆ ನಮ್ಮವ್ವ, ದಿನ ಕೌಳಾತಂದ್ರ ಹೆಂಗಸು ಮಕ್ಕಳು ಈ ಕಡೀಗ ಬರದಂಗ ಮಾಡ್ಯಾನಲ್ಲ. ಇವನ ಓಸಡಗಲಿ ಕದ ಕಟ್ಲಿ." ಜಾಂಪಾನ ಹೆಂತ್ತಿ ಪಿರಿ ಪಕ್ಕದ ಸಾವಂತ್ರಿ ಕಿವಿಯಾಗ ಹೇಳಿದಳು. ಪಕ್ಕೀರ, ನೋಡಿ ನೋಡಿ ಸಾಕಾಗಿ ಗುಡಿಸಲು ತಟ್ಟಿಸರಿಸಿ ಒಳಗೆ ನುಗ್ಗೋದಕ್ಕ ಹೋಗಿ ಮುಗ್ಗರಿಸಿ ಬಿದ್ದು ಮೂಗು ಕೆತ್ತಿಸಿಕೊಂಡ, "ಲೇ ಸೂಳೀಮಕ್ಕಳ್ರ ನಾವು ಹತ್ತ ಮಂದಿ ಅದೀವಂತ ಬಲಾಬಲ್ಕಿ ತೋರುಸ್ತೀರೇನಲೆ, ಯವ್ವನ್ನನ್ನು ಮೂಗೆ." ನೋವು ತಡಿಯಾಕ ಆಗದೆ ಒದ್ದಾಡಿದ ಸ್ವಲ್ಪ ಹೊತ್ತು ಬಯ್ದು ಸುದಾರಿಸಿಕೊಂಡವನೆ ಮತ್ತೊಮ್ಮೆ ತಟ್ಟಿ ಸರಿಸಿ ಒಳಗೆ ನುಗ್ಗಾಕ ನೊಡಿದ. ದಿವಸ ನೊಡಿ ನೋಡಿ ಬೇಜಾರಾಗಿದ್ದ ಬದಿಯಾ ಅವನಣ್ಣ ಟಾಂಕ್ಯಾ " ಏಯ್ ಬೋಸುಡಿ ಮಗನೆ ,ನಮ್ಮ ಹಿಂದೆ ಯಾಕ ಬಿದ್ದೀಯಲೆ, ಕವಡಿ ಕಾಸು ಕೊಡದೆ ನಮ್ಮಪ್ಪನ ಹೊರಗ ಹಾಕಿದಂಗ ಅಂದ್ಕೊಂಡಿಯೇನು, ಸುಮ್ಮ ಹೋದಿ ಉಳಕೊಂತಿ ಇಲ್ಲಂದ್ರಾ." ಸಮಜಾಯಿಸೋದಕ್ಕೆ ನೋಡಿದ ಬದ್ಯಾ. "ಲೇ ಮಿಂಡ್ರಿ ಮಗನೆ, ಎನ್ ಮಾಡ್ತಿಯಲೆ, ಹೊಡಿತಿಯಾ ಗಂಡ್ಸಾದ್ರ ಹೊಡಿ. ನಿಮ್ಮಪ್ಪಗ ಹುಟ್ಟಿದವನಾದ್ರೆ ನನ್ನ ಮುಟ್ಟಲೆ ಮುಟ್ಟು." ಯಾವಾಗ

ಈ ಸಾವಲು ಹಾಕಿದ ಇಬ್ಬರು ಅಣ್ಣ ತಮ್ಮ ಅನಾಮತ್ತಾಗಿ ಎತ್ತಿ ನೆಲಕ್ಕ ಕೆಡವಿ. ದಮದಮ ಹೇರಿದರು. ಮಕ ಮುಸುಡಿ ಒಂದು ನೋಡದಂಗೆ ಚೆನ್ನಾಗಿ ತದಕಿದರು. ಒಳಗ ಅಡಗಿ ಮಾಡ್ತಿದ್ದ ಚಾವಳಿ ಹೊರಗ ನಡೀತಿರೋ ಗದ್ಲ ತಿಳಿದವಳೆ ಓಡಿ ಬಂದು "ಲೇ ಬೇವರ್ಸಿ ನನ್ನ ಮಕ್ಕಳ್ರಾ, ಬಿಡ್ರೋ ಸತ್ತ ಹೋದಾನು." ಅಂತ ಮಕ್ಕಳನ್ನ ಹೊಡೆದು ಬಿಡಿಸಿದಳು. ಭಗನ್ಯಾನಾಯ್ಕ ಮೇಲಿನ ಓಣಿ ಜಮಣಿ ಮನಿಯಾಗ ಕುಂತಿದ್ದ. ಸುದ್ದಿ ತಿಳಿದವನೆ ಓಡಿ ಬಂದಿದ್ದ. ಆಟೊತ್ತಿಗಾಗಲೆ ಮಕ ಮೊಸಡಿ ಕೆತ್ತಿ ಹೋಗುವ ಹಂಗೆ ಹೊಡದು ಕೆಡವಿದ್ರು. ಪಕ್ಕೀರನ ಮನಿಗೆ ಸುದ್ದಿ ತಿಳಯಾನ ಅಪ್ಪನ ಗಾಯಗೊಂಡ ದೇಹ ಒಯ್ಯಾಕ ಬುಳುಬುಳು ಗೊದ್ದದಂತೆ ಹುಡಗಿಗಿಯರು ದಂಡು ಸೇರಿತ್ತು. ನಡು ಹೊತ್ತಿಗೆ ಕವಕವ ಅನ್ನೋ ಗೊರವಂಕಗಳಂಗೆ ಕವಕವ ಸುರು ಆಯ್ತು. ಏನು ಯಾರೇನಂದ್ರು ನಿಲ್ಲಾಕ ತಯಾರಿಲ್ಲದಂಗೆ ಬೊಯ್ಯ ತೊಡಗಿದರು. ಮೂರ್ನಾಕ ದಿನಗಳಿಂದ ಎಲ್ಲವನ್ನು ನೊಡುತ್ತಿದ್ದ ಹುಸೇನಜ್ಜ, ಕೆಂಚ ಹನ್ಮಜ್ಜ, ಉಪ್ಪಾರ ಹುಲುವಪ್ಪ ಒಂದೀಟು ನ್ಯಾಯದ ಪರರಾಗಿದ್ದರಿಂದ ಎಲ್ಲರನ್ನು ಸಮಾಧಾನ ಮಾಡಿ. ಭಗನ್ಯಾನಾಯ್ಕನ ಮಕ್ಕಳಿಗೆ ಬೋಯ್ದು ಗಲಾಟೆ ತಮಾಸಿ ಮಾಡಿದರು. ಆದರೂ ಹುಡಗಿಯರ ಕಲಕಲ ಮಾತ್ರ ನಿಲ್ಲಲಿಲ್ಲ. ಪುಜಾರಿ, ದಲ್ಲಾಳಿ ದರಗ್ಯ ಅವರ ಗುಂಪು ಅದ್ಯೊಂಡಂಗೆ ಸೇರಿಕೊಂಡರು. ಆದರೆ ಪಕ್ಕೀರನಿಗೆ ಸಹಾಯ ಮಾಡಲು ಬರೋದ್ರಾಗ ಅವನ ಕಥೆಯನ್ನು ಮುಗಿಸಿಬಿಟ್ಟಿದ್ದರು. " ಏಯ್ ನಿಮ್ಮಪ್ಪನ ಸೂಳಿಮಕ್ಕಳ್ರೆ, ನಿಮ್ಮನ ನಂಬಿ ಹೋದೆ, ಇಬ್ರೂ ಸೇರಿ ಹಣ್ಣಗಾಯಿ ನೀರುಗಾಯಿ ಮಾಡಿದ್ರು, ಯವ್ವ ಸತ್ನೆ." ಕನಲಿದ. ಪೂಜಾರಿಯ ಮೊದಲನೇ ಯೋಜನೆ ಎನೋ ಕೈತಪ್ಪಿ ಹೋಗಿತ್ತು. "ಲೇ ಪಕ್ಕೀರ ಒಳ್ಳೆದಾಯ್ತು ನಿನ್ನ ಮೆಲೆ ಗಾಯದ ಕಲೆಗಳು ಅಗಿದ್ದಾವಲ್ಲ ಸಾಕ ಬಿಡು, ಯಾ ನನಮಗ ಬಂದು ಬಿಡುಸ್ತಾನ ಜೈಲಿಂದ ನಾನು ನೋಡ್ತೀನಿ."ಅಂದವನೆ ದಲ್ಲಾಳಿ ದರಗ್ಯಾ, ಕಳ್ಳ್ಯಾನ ಆಹಬಮಂತಿ ಕರದು ರಾತ್ರೋರಾತ್ರಿ ಬಂಡಿ ಕಟ್ಟಿ ತಾಂಡದಿಂದ ಆರುಮೈಲಿ ದೂರದ ತೇವೂರಿಗೆ ಹೊರಟರು. ಅಲ್ಲಿನ ತಪಸಣಾ ಪೋಲಿಸ್ ಕಚೇರಿಯಲ್ಲಿ ಕೇಸ್ ಮಾಡೋದಕ್ಕೆ ಹೇಳಿದ ಪುಜಾರಿ, ಅವರನ್ನ ಆ ಕಡೆಗೆ ಕಳುಹಿಸಿ ರಾತ್ರಿ ತನ್ನ ಕೆಲಸ ಬಗೆ ಹರಿಸಿಕೊಳ್ಳುವ ದುರಾಶೆ.

ಚೆಕ್ಕಡಿಗಾಡಿ ತಾಂಡ ಬಿಟ್ಟಾಗ ಮಂದಿ ನಿಶಬ್ದವಾಗಿ ಮಲಗಿದ್ದರು. ಗಾಡಿ ಆ ಕಡೆ ಕೋಡಿಸರ ದಾಟಿಲ್ಲ. ಪುಜಾರಿ ಪಕ್ಕೀರನ ಮನೆ ಹೊಕ್ಕಿದ್ದ. ಭಗನ್ಯಾನಾಯ್ಕನ ಕೆಲಸದ ಆಳು ದಾವು ಸುದ್ದಿ ತಂದಿದ್ದ. "ಕೇಸು ಕೊಡೋದಕ್ಕೆ ಹೋಗಿರೋನ ಮನಿಗೆ ನಾವೇನಾರು ಹೋದರೆ ಆ ನೀಚ ಮತ್ತೇನಾದ್ರು ಹೊಸದೊಂದು ಸೃಷ್ಟಿ ಮಾಡ್ತಾನ. ಏನಾರು ಹಾಳಾಗಿ ಹೋಗಲಿ ಬಿಡಲಾ ಥಾವು." ಅಂತ ಸಮಾಧನ ಮಾಡಿದ. ಅವನಿಗೂ ನಿದ್ದೆ ಬರದಂಗಾತು. ಬೀಡಿ ತಗೊಂಡು ಕಡ್ಡಿಗೀರಿ ಸೇದತೊಡಗಿದ. ಇದೇನು ತಮ್ಮ ಕುಲಕ್ಕೆ ಅಂಟಿದ ಶಾಪವೆ ಹೇಗೆ? ನಮ್ಮವ್ವ, ನಮ್ಮಜ್ಜ, ಮುತ್ತಜ್ಜರ ಕತೆಯೊಳಗೆ ಹೀಗೆ ಅವರ ಸಹೋದರರೆ ಅಡ್ಡಿಗಾಲಹಾಕಿ ದುಡಿಯುವವರನ್ನು ಅಡ್ಡದಾರಿಗೆ ತಂದ ಇತಹಾಸ ನೆನಪಾಗಿ ಖೇದವೆನಸಿತು. ಊರ ಮಂದಿ ಮಾತು ಕೇಳಿ ಒಡಹುಟ್ಟಿದ ತಮ್ಮನೆ ಅಣ್ಣನ ವಿರುದ್ಧ ಕೇಸುನ್ನು ದಾಖಲಿಸುವುದು. "ಥು ಇದರಪ್ಪನ ಹಾಳ ಬದುಕು. ಇಲ್ಲಿ ಯಾವ ಸಂಬಂಧಕ್ಕೂ ಬೆಲೆ ಇಲ್ಲ. ನಂಬಿಕೆ ಇಲ್ಲ. ನಮ್ಮ ಮುಂದಿನ ಪಿಳೆಗೆಯ ಗತಿ ಏನು?" ಮನಸ್ಸು ದುಃಖದಲ್ಲಿ ಮುಳುಗಿತು. ಬೇರೆಯವರ ಜೋತೆಗೆ ಏನು ಬೇಕಾದರೂ ಮಾಡುವ. ಸ್ವಂತ ತಮ್ಮ ಆದರೆ ಮಂದಿಯೊಂದಿಗೆ ಹೆಂಗಪ್ಪ ನಿಭಾಯಿಸುವುದು, ಅಲೊಚನೆ ಮಾಡಿ ಸಾಕಾಗಿತ್ತು. ಪುಜಾರಿ

ಸ್ವಂತ ತನ್ನ ತಮ್ಮನ ಗುಡಿಸಲಿಂದ ಹೊರಗಡೆ ಬಂದಿದ್ದು ಅವನ ಕಣ್ಣಿಗೆ ಬಿತ್ತು. ಭಗನ್ಯಾನ ರಕ್ತ ಕುದಿಯಿತು. ಕಾಲ್ಮಡಿಯೋದಕ್ಕೆ ಹೋಗುವ ನೆಪಮಾಡಿ ಅವನ ಹಿಂದೆ ಹೊರಟ. ಹಿಂದಿನ ಓಣೆಗೆ ದಾಟುವಾಗ ಛತ್ರ್ಯಾನ ಮನಿ ಸಂದಿಯೊಳಗ ನುಗ್ಗಿ ಮಕ ಮುಚ್ಚಿ ಸರೀಗೆ ಗುದ್ದಬೇಕಂತ ಶಲ್ಯಾನ ತಗೊಂಡು ಮಾರಿಮುಚ್ಚಿಕೊಂಡು ಕುದುದು ವಾಲಾಡುತ್ತಾ ಛತ್ರ್ಯಾನ ಮನಿ ಸಂದೀಗೆ ಬಂದು. ಧನಕುನ ಮನಿ ಸಂದಿಯಿಂದ ಬಂದವನೆ ಅವನ ಮುಖದ ಮೇಲ ಶಲು ಹಾಕಿ, ಬಾಯಿ ಬಿಡದಂತೆ ಬಿಗಿ ಹಿಡಿದು ಮುಷ್ಟಿಯಿಂದ ಗುದ್ದಬಾರದ ಜಾಗಕ್ಕೆ ಗುದ್ದಿದ. ಮದಲೆ ಹೆಂಡದ ನಶೆಯೊಳಗೆ ಧುತ್ ಆಗಿದ್ದ ಪುಜಾರಿ ಸಂದಿಯೊಳಗೆ ಮೂರ್ಚೆ ಹೋದ. ಅವನ್ನ ಅಲ್ಲೆ ಬಿಟ್ಟು ಯಾರಿಗೂ ಗೊತ್ತಾಗದಂಗೆ ಮತ್ತೆ ಗುಡಿಸಲು ಮುಂದೆ ಹಾಜರಾಗಿದ್ದ ಭಗಾನ್ಯಾನಾಯ್ಕ.

ಪುಜಾರಿ ಕುಡಿದು ಬಿದ್ದಿರೊದನ್ನ ಇಡೀ ತಾಂಡದೋರ ನೋಡಾಕ ನೆರದಿದ್ದರು. ಅದೇ ಸಮಯಕ್ಕೆ ಸರಿಯಾಗಿ ಎತ್ತಿನ ದಲ್ಲಾಳಿ ಚೆನ್ನಿಗನ ಮಗ ರಾಜು ಕಾಲೆತ್ತಿ ಪುಜಾರಿ ತಲಿಗೆ ಉಚ್ಚೆ ಹೊಯ್ಯೊದನ್ನ ಕಂಡ ಮಂದಿ ಓ ಆಂತೇಳಿ ನಗಾಕ ಸುರಮಾಡ್ತೋ ಆವಾಗ ಎಚ್ಚರಾತು ಪೂಜಾರಿಗೆ. ಮಂದಿ ನೆರದಿರೋದು ನೋಡಿ ಗಾಬರಿ ಆದ. ತಾನಿನ್ನು ಬದುಕಿದ್ದೇನಲ್ಲ ಅನ್ನೊದನ್ನ ಖಾತ್ರಿ ಪಡಿಸಿಕೊಂಡು ಮೇಲೇಳೋದಕ್ಕ ಪ್ರಯತ್ನಿಸಿದ. ರಾತ್ರಿ ಅಪರಿಚತ ಹೊಡೆದ ಹೊಡೆತೆಗಳು ನರಮಂಡಲದಲ್ಲಿ ಸಹಿಸಲಾಗದಷ್ಟು ನೋವನ್ನು ಉಂಟು ಮಾಡಿತ್ತು. ಕಾಲೆಳಿತ ಜುಕ್ಕಜುಲಿಮಿಲೆ ಎದ್ದು ಮನಿಗೆ ಹೊರಟ. ತಲಿ ದಿಮಿದಿಮಿ ಅಂತಿತ್ತು. ಯಾರು ಹಡೆದಿರಬಹುದು? ಅನುಮಾನ ಪಡಾಕ ಯಾರು ಅಂತ ಗೊತ್ತಾಗದೆ "ನಸೀಬ ಗಾಂಡು ಹೈತೊ ಪಾಂಡುಕ್ಯಾರೇಗ" ಹುಸೇನಪ್ಪನ ಮಾತು ನೆನಪಾಗಿ ಮನೆ ಸಮೀಪಿಸುತ್ತಿರೋದಕ್ಕೆ ಖುಷಿ ಆತು. " ಸೂಳಿಮಗ ಹೋಡಿಬಾರದ ಜಾಗಕ್ಕೆ ಜೋರಾಗಿ ಒಂದೇಟು ಹೊಡದಿದ್ದರ ಇಟೊತ್ತಿಗೆ ನನ್ನ ತಿತಿ ಆಕಿತ್ತು. ಯಾರೊ ಒಳ್ಳೆಯವನ ಇರಬೇಕು." ಅನ್ಕೊಂಡು ಹೊಸಲಿಗ ಕಾಲ ಬಡದು ಮೂರ ಉಲ್ಡಕಿ ಹೊಡದ. ಅವನ ಮಗ ಜೀಕು ಅವನಿಗಿಂತಲು ಏಳು ಮಿಂಡ್ರಿ ಮಗ. ಬಿದ್ದು ಬಿದ್ದು ನಗಾಕ ಸುರು ಮಾಡ್ದ. "ಎಷ್ಟು ಬಡಕಂಡ್ರು ನಿನ್ನ ಹಣೆಬರ ಅಷ್ಟೆ, ರಾತ್ರಿ ಕುಡಿದದ್ದು ಇಲ್ಲಿ ಮಟ ಇಳದಿಲ್ಲ. ಅದು ಅಲ್ಲದೆ ಎಲ್ಲೆಲ್ಲೋ ಬಿದ್ದಿ ಬೇರೆ ಬಂದಿಯಾ. ನಾಳೆ ಮಂದಿ ನಿನ್ನ ಗುಡಿಯೊಳಗ ಹೋಗಬ್ಯಾಡಂದ್ರ ಎನ್ಮಾಡಿಯಾ. ಥು. ಕೆಟ್ಟ ವಾಸನೆ, ಯಾರದರ ಹೇಲಿನ ಮ್ಯಾಲೆ ಬಿದ್ದಿ ಬಂದಿಯಾ ಹೆಂಗ, ಕೇರಿ ತುಂಬಿದ ಹೋಗು ಬಿದ್ದು ಬಾ." ಗದರಿಸಿದ. ಪೂಜಾರಿ ದವಡೆ ವಿಪರೀತ ನೋವಾಗಿತ್ತು. ಬಾಯಿ ತೆಗೆದು ಬರ್ತಿರೋ ಸಿಟ್ಟಲ್ಲಿ ಮಗನ್ನ ಬೊಯ್ಯಕಂತ ಬಾಯಿ ತಗದ್ರ ದವಡಿ ಹಲ್ಲುಗಲು ಕೈಯಾಗ ಬಂದ್ವು, "ಅಯ್ಯೋ ಸೇವಾಭಾಯ ತಾಂಡೆ ದುರ್ಗವ್ವ" ಕಣ್ಣು ಮಂಜಾದಂಗಾಗಿ ಅಲ್ಲೆ ಉರುಳಿದ. "ಇವನ್ವನ ಸೂಳಿಮಗ ದುಡಿಯಂಗಿಲ್ಲ, ದುಗ್ಗಾಣಿ ಬಿಡಯಂಗಿಲ್ಲ ಕಕ್ಕಿದೊರ ಬಾಯಿ ನೆಕ್ಕೋರ ಗತಿ ಅವರಿವರನ್ನ ಪುಸಲಾಯಿಸಿ, ಹೆದರಿಸಿ ಮುಕ್ಕಾರೆ ಕುಡಿತಾನ ಸಾಲದಕ್ಕೆ ಕೂಲಿ ನಾಲಿ ಮಾಡಿತಂದದನ್ನು ಬಿಡವಲ್ಲ. ಪೂಜಾರಿ ಹೆಣ್ತಿ ಪ್ರೇಮಿ ಬಂದವಳೆ "ರಾತ್ರಿ ಯಾವ ರಂಡಿನ ಸವತಿ ತಾವ ಹೋಗಿದ್ನೋ ಈಗ ಬಂದು ಬಿದ್ಕೊಂಡಾನ." ಅಂದವಳೆ ಬುತ್ತಿ ಕಟ್ಕಂಡು ಭಗನ್ಯಾನಾಯ್ಕನ ಹೊಲಕ್ಕೆ ಕಳೆ ತೆಗಿಯಾಕ ಹೊರಟಳು. ಆಳುಗಳ ಬಾಯಾಗ ಪೂಜಾರಿದೇ ಮಾತು. "ಎಂಥ ಕಾಲ ಬಂತು ಅಂತೀನಿ. ದೇವರ ಪೂಜಿ ಮಾಡೋನು ಹಿಂಗ ಕುಡಿದು ಅರಿವು ಇಲ್ಲದಂಗ ಎಲ್ಲಿ ಬೇಕಾದಲ್ಲಿ ಬಿದ್ಕಂಡ್ರ ಖಾಲಿ ಪುಕ್ಕಟೆ ಮಂದಿ ಗತಿಏನು?" ವಡ್ತಾ ಕುಲಸ್ತರ ಒಣಿ

ಜಿಂಗಾಲಿ ಹೇಳಿದಳು. "ಅಲ್ಲೆ ಜಿಂಗಾಲಿ ದಲ್ಲಾಳಿ ನಾಯಿ ನೋಡು ನೋಡತ್ತಿದ್ದಂಗ ಅತನ ಜುಟ್ಟಿನೊಳಗ ಕಾಲೆತ್ತಿ ಉಚ್ಚಿ ಹೋಯ್ಯತಂತ ನಮ್ಮವ್ವ. ಥು. ಆ ದುರುಗವ್ವ ಇನ್ನೂ ಅದೆಂಗ ಅವನ್ನ ಒಪ್ಕೊಂಡಾಳೊ ತಿಳಿವಲ್ದು ನೋಡು." ವಿಸಳಾವತ್ ಓಣಿಯ ಸೇತಿಬಾಯಿ ಹೇಳಿ ಬಿದ್ದು ಬಿದ್ದು ನಗಾಕ ಆರಂಭಿಸಿದಳು. ಪುಜಾರಿ ಇಡೀ ತಾಂಡದ ಮಂದಿ ನಡುವೆ ಚರ್ಚೆಗೆ ಗ್ರಾಸವಾಗಿದ್ದ. ಅವನು ಕಳುಹಿಸಿದ ಮಂದಿ ಕೇಸು ಕೊಟ್ಟು ಪೊಲೀಸರಿಗೆ ಸರಿಯಾಗಿ ಹೇಳಿ ಬಂದಿದ್ದರು. ಬೆಳಕು ಹರಿಯೋದ್ರಾಗ ಮಾವಂದಿರು ಬಂದು ಸೂಳಿಮಕ್ಕಳನ್ನ ಕರಕೊಂಡು ಹೋಗಿ ಯಲುಬು ಮುರಿತಾರ ನೋಡುವಂತ್ರಲೆ ಎಂದು ತಮ್ಮತಮ್ಮೊಳಗೆ ಮಾತಾಡಿಕೊಂಡು ಗಡಿದಾರಿಯೊಳಗೆ ಹಾದು ಬರ್ತಿದ್ರು. ಅಕ್ಕಪಕ್ಕದ ಹೋಲದಲ್ಲಿ ತಮ್ಮ ಚಾಂಡಾಳ ಗುರುವಿನ ಬಗ್ಗೆ ಮಂದಿ ಮಾತಾಡಿಕೊಂಡು ನಗವುದನ್ನು ಕೇಳಿ ಪೂರಾ ಕತೆ ಕೇಳುವ ತವಕದಿಂದ ಗಾಡಿಯನ್ನು ಜೋರಾಗಿ ಓಡಿಸಲು ಎತ್ತುಗಳನ್ನು ಬಾರಿಕೋಲಿಂದ ಹೊಡೆದು ಗದರಿಸಿದ ದಲ್ಲಾಳಿ.

ಭಗನ್ಯಾ ಹೊತ್ತಾರೆ ಎದ್ದು ಸರ್ವತಪ್ಪ ಹಾಸಿಗೆಯಿಂದ ಎದ್ದು ಏಲ್ಲಾದ್ರು ಹೋದಗೀದಾನೊ ಎಂದು ಅಷ್ಟೊತ್ತಿಗೆ ಆತನ ಮನೆ ಮುಂದಿದ್ದ. ರಾತ್ರಿ ನಡೆದದ್ದನ್ನು ಚಾಚುತಪ್ಪದೆ ಆತನ ಎದುರಿಗೆ ವಿವರಿಸಿದ. ಸರ್ವತಪ್ಪ ಎಲ್ಲದನ್ನೂ ಕೇಳಿ, " ಆಯ್ತು, ಒಂದಕಪ್ ಚಾ ಕುಡಿ ಆಮ್ಯಾಲಿಂದ ನೋಡೋಣ." ಅಂದವನೆ ಹಿತ್ತಲ ಕಡೀಗೆ ಹೋದ. ಜಾನಕಮ್ಮ ಒಂದು ಲೋಟ ಚಹ ಕೊಟ್ಲು. ಕುಡಿದು ಮಗಿಸುತ್ತಿದ್ದಂತೆ ಸರ್ವಥಪ್ಪ ಅಂಗಿ ಹಾಕ್ಕೊಂಡು ತಯಾರಾಗಿ ಹೊರಗಡೆ ಚೆಪ್ಪಲಿ ಮೆಟ್ಕೊಂಡು ಬಗನ್ಯಾನಾಯ್ಕನ್ನು ಕರ್ಕೊಂಡು ಹೊರಟ. ದೇಗೂರಿಗೆ ಹೋಗಿ ಅವರ ಪರಿಚಿತ ಪೊಲೀಸ ನಾರಾಯಣ್ಣನಿಗೆ ಬೇಟ್ಟಿಯಾಗಿ ಒಂದುಮಾತು ಹೇಳಿದ್ರಾತು ಅಂತ ಬಸ್ಸಿಗಾಗಿ ಕಾದು ನಿಂತ್ರು, ಬಸ್ಸು ಬರ್ಲಿಲ್ಲಾ ಕಲ್ಲ ಹೇರಾಕ ಹೊಂಟಿದ್ದ ಲಾರಿಯನ್ನೆ ಏರಿದರು. ದೊಂಬಲೂರಿಂದ ದೇಗಲೂರು ನಾಕೇ ಮೈಲು. ಲಾರಿ ಕಾಲುತಾಸಿಗೆ ದೊಂಬಲೂರು ಮುಟ್ಟಿತು. ಪೊಲೀಸ್ ಚೆಕ್‌ಪೋಸ್ಟ್‌ಗೆ ಇವರು ಇಳಿಯೋದಕ್ಕೆ ಸರಿಯಾಗಿ ನಾರಾಣಪ್ಪ ಹೆಡ್‌ಕಾನ್‌ಸ್ಟೆಬಲ್ ಚಾಮಣರಿಗೆ ಸಬ್‌ಇನ್ಸ್‌ಪೆಕ್ಟರ್ ಜೊಂಜೆ ಗೌಡನ್ನ ಬೆಟ್ಟಿಯಾಗಕ ಹೊಂಟಿದ್ದ. ನಾರಣಪ್ಪ ಸರ್ವತಪ್ಪನ ನೋಡಿ. "ಏನ್ ದಣಿಗಳೇ ನೀವಿಲ್ಲಿ. ಎನ್ ಸಮಾಚಾರ ಇಟೋತಿಗೆ "ಹೂಂ ಕಣ್ರಿ, ನಿಮ್ಮ ಹತ್ರಾನೆ ಕೆಲಸ ಇತ್ತು" ಅಂತೇಳಿ ಪಕ್ಕಕೆ ಕರ್ಕೊಂಡು ಹೋಗಿ ಗುಡದಹಟ್ಟಿ ತಾಂಡದ ಪಕ್ಕೀರನ ಕೇಸು ಏನಂತ ದಾಖಲಾಗಿದೆಯಾ ಅಂತ ಕೇಳಿದ. "ಓ ಆದ ಬಾಳ ಸೀರಯಸ್ ಐತಿ ಸಹೇಬ್ರ, ನನ್ನ ಮಕ್ಕಳು ಚೋಟುದ್ದ ಅದಾರ ಹಿಗ್ಗಮುಗ್ಗಾ ಹೊಡದಾರ ನಾಳೆ ಬಂದು ತಾಂಡಕ್ಕ ಹೋಗಿ ಒದ್ದು ಎಳ್ಕಂಡು ಬಂದು ಎರೋಪ್ಲೇನ್ ಹತ್ತುಸ್ತೀನಿ. ಏನಂದ್ಕೊಂಡಾರ." ಬಗನ್ನನಾಯ್ಕನನ್ನು ನೋಡಿಯೇ ಹೆದರಿಕೆ ಹುಟ್ಟಿಸಿದ. ಸರ್ವತಪ್ಪ ಇಂತ ಸಾವಿರ ಮಂದಿ ಬಲ್ಲವ. "ಅದು ಏನಾತಪ್ಪ ಅಂದ್ರೆ ಆ ಪಕ್ಕೀರ ಕುಡಿದು ಗಾಂಚಾಲಿ ಮಾಡಿ, ಸಣ್ಣ ಹುಡುಗರ ಮೇಲೆ ಮನಸಿಗೆ ಬಂದಂಗ ಕೇಸು ಹಾಕಿದ್ರ ಹೆಂಗ. ನಿಮ್ಮ ಸರ್ಕಲ ಇನ್ಸಪೆಕ್ಟರ್ ರಾಧಾಕೃಷ್ಣ ನಮ್ಮ ನೆಂಟನಿಗೆ ಹೇಳ್ತೀನಿ ಬಿಡು ನಾರಾಣಪ್ಪ ನಿಮ್ಮ ಮಟ್ಟದೊಳಗ ತೊಂದೆ ಆಗೋದಿದ್ರೆ" ಸರ್ವತಪ್ಪ ತಿರುಗೇಟು ಕೊಟ್ಟ. " ಅಯ್ಯೋ ನಿವಂತು ನಮ್ಮನ್ನ ಮರತು ಬಿಡ್ತಿರಾ. ಅದೇನು ಇಲ್ಲೆ ಬಗೆಹರಿಸ್ತೀನಿ ಬಿಡಿ." ಅಂದ. ಸರ್ವತಪ್ಪ ಜೇಬಿಂದ ಇಪ್ಪತ್ತೈದು ರುಪಾಯಿ ಕೊಟ್ಟ. " ಕರದು ನಾಕೇಟು ಹೊಡದಂಗ ಮಾಡಿ ಇಲ್ಲೆ ಬಗೆಹರ್ಸು, ಇಲ್ಲ ಕೋರ್ಟಿಗೆ ಹೊಕ್ಕೀನಿ ಅಂದ್ರೆ ಮುಂದುಕ್ಕ ಹಾಕು, ಹುಡುಗರು ಜಾಸ್ತಿ

ಗದರಿಸೋದು ಬೇಡ. "ಲಾರಿ ನಾರಾಣಪ್ಪ ಸಲುವಾಗಿ ನಿಂತಿತ್ತು. " ಆಯಿತು ನೀವೇನು ಕಾಳಜಿ ಮಾಡಬ್ಯಾಡ್ರಿ" ಅಂದವನೆ, ಇವತ್ತು ಮುಂಜಾನೆ ಯಾರದ್ದೋ ಒಳ್ಳೆಯವರ ಮಕ ನೋಡೀನಿ ಅಂದ್ಕೊಂಡು ಲಾರಿ ಹತ್ತಿದ. ಪ್ರತಿ ದಿನ ದೇಗೂರ ಕ್ರಾಸ್ ಒಳಗೆ ಮುಂಜಾನೆಯಿಂದ ಸಂಜಿಗಂಟ ನಿಂತ್ರೂ ಬರೀ ಮೂರೋ ನಾಕೋ ರುಪಾಯಿ ಕಲೆಕ್ಷನ್ ಆಗುತ್ತಿತ್ತು. ಬಿಕ್ಷುಕರ ಹಾಗೆ ಮರೆಯಲ್ಲಿ ಕೂಡುವುದು ಲಾರಿ ಸದ್ದು ಅದ ತಕ್ಷಣವೇ ಓಡಿ ಬಂದು ಕೈ ತೋರಿಸುವುದು. ಅವನತ್ರ ಕಾಸಿದ್ರೆ ತಗಳಣ್ಣಾ ಅಂತೇಳಿ ಹತ್ತು ಪೈಸೆ ನಾಕಾಣೆ ಎಂಟಾಣೆ ಒಂದು ರೂಪಾಯಿ ತಮ್ಮ ತಾಕತ್ತಿನುಸಾರ ಕೊಟ್ಟು ಹೊಗುತ್ತಿದ್ದರು. ದಿನಕ್ಕೆ ಯಾವತ್ತು ಲಾರಿಗಳು ಅಡ್ಡಾಡುತ್ತಿದ್ದವು. ಅವು ಪುಕ್ಕಟೆ ಹೋಕ್ಕಿದ್ದವು, ಕಲ್ಲು ಹೇರಿಕೊಂಡು ಬರುವಾಗ ಮಾತ್ರ ಕಾಸು ಕೊಡುತ್ತಿದ್ದವು. ಹೀಗಾಗಿ ಒದೊಂದು ದಿನ ಚಾಕ್ಕೂ ಕಾಸಿಲ್ಲದಂಗಾಗಿತ್ತು. ಹೀಗಾಗಿ ಹಳ್ಳಿಗಲ್ಲಿ ಜಗಳ ಅದರೆ, ಕೇಸು ಬಂದರೆ ರೊಟ್ಟಿ ತುಪ್ಪಕ್ಕೆ ಜಾರಿದಷ್ಟು ಖುಷಿ. ಯಾರು ಐದು ಹತ್ತು ತಳ್ಳಾತಾರೆ ಕಾನೂನೆಲ್ಲ ಅವನ ಕಡೀಗೆ ಯಾವಾನಿಗೆ ಕಾಸು ತಳ್ಳೋ ತಾಕತ್ತಿಲ್ಲ ಅವನು ಬೆನ್ನ ಮೂಳೆ ಮುರಿಸಿಕೊಂಡು ಊರಿಗೆ ವಾಪಾಸು.

ಮಾರನೆ ದಿನ ಭಗನ್ಯಾನನಾಯ್ಕ ಮನಿ ಮುಂದೆ ನಾರಾಣಪ್ಪ ಕಳುಹಿಸಿದ ಪೋಲಿಸ್ ಧನ್‌ಸಿಂಗನಾಯ್ಕ ಹಾಜರಿದ್ದ. ಪೋಲಿಸ್ ದನಸಿಂಗ್ ಮೇಲಿನ ಓಣಿಯ ಕಪಲಿಬಾಯಿಯ ತಂಗಿಮಗಳನ್ನು ಕೋಡೋದು ತಗೋಳ್ಳೋದು ಅಂತ ಮಾತಾಗಿತ್ತು ಕಾರಣ ಅವನು ಅವಳ ಮನೆಗೆ ಹೋಗಿಯೇ ಇವರ ಮನೆಗೆ ಬಂದಿದ್ದ. ಅಲ್ಲೆ ಟಾಂಕ್ಯ ಮತ್ತು ಅವನ ತಮ್ಮ ಬದಿಯಾ ಬಗ್ಗೆ ಕೆಟ್ಟ ವಿಚಾರಗಳನ್ನು ಸಂಗ್ರಹಿಸಿಕೊಂಡು ಬಂದಿದ್ದ. ಅವರ ಮನೆ ಎದುರಿಗೆ ಹೋದವನೆ " ಯಾರಲೆ ಟಾಂಕ್ಯ ಬದ್ಯಾ" ಟಾಂಕ್ಯ ಮುಂದೆ ಹೋಗಿ " ನಾ, ಸಾ" ಯಾಕ್ರಲೇ ಬಗಲಾಗ ಹಲ್ಲು ಬಂದಾವೇನು ಏನು ಒಳ್ಳೆ ಮಂದಿ ತಾಂಡದಾಗ ಇರಬಾರದ. ನಿಮ್ಮಂದ ಕೆಟ್ಟವರೆ ಇರಬೇಕ." ನಡಿ ಪೊಲೀಸ್ ಠಾಣೆಗೆ ಗದರಿದ. ಭಗನ್ಯಾನಾಯ್ಕ ಸುಮ್ಮನೆ ಇದ್ದ. ಮುಂದಕ್ಕೆ ಬಂದವನೆ "ಯಾರು ಕೆಟ್ಟವರು, ಯಾರು ಒಳ್ಳೆಯವರ ಅವರವರಿಗೆ ಗೊತ್ತು ಪೊಲಿಸರೆ, ನಾವು ನೀವು ನಿಮ್ಮ ಕೆಲಸ ಮಾಡ್ರಿ, ನಾರಾಣಪ್ಪನವರು ಅದನೆಲ್ಲಾ ನೊಡಿಕೊಳ್ತಾರ." ಅಂದ. " ಏಯ್ ಏನಯ್ಯ ಪೊಲೀಸ್ ಅನ್ನೋ ದರಕಾರಿಲ್ಲದಂಗೆ ಮಾತಾಡ್ತಿದಿಯಾ." ಗದರಿಸಿದ ಧನ್‌ಸಿಂಗ್‌ನಾಯ್ಕ. ಅವನು ಕಪಲಿಬಾಯಿ ಸಂಬಂಧಿ ಅಂತ ಭಗನ್ಯಾನಾಯ್ಕನಿಗೆ ಗೊತ್ತಿತ್ತು. ಅದಕ್ಕಂತ್ಲೆ ಮಗ ತಾಂಡದಾಗ ತೂರ್ಸಿಕೊಳ್ಳಾಹತ್ಯಾನಂತ ಗೊತ್ತಾತು. ಆದರು ಪೊಲೀಸರಿಗೆ ಅಂಜೋ ಕಾಲ ಅದು. ಪೊಲೀಸು ಕೋರ್ಟು ಅಂದ್ರೆ ಏನೋ ದೊಡ್ಡ ಅಪರಾಧ ಅಂತ ಮಂದಿ ಅಂದ್ಕೊಂಡಿದ್ರು. ಪೊಲೀಸು ಅಂತಂದ್ರ ಕೆಲಮಂದಿ ನಿಂತಲ್ಲೆ ಉಚ್ಚೆ ಹೊಯ್ಕಂತ್ತಿದ್ರು. ಹಂಗಾಗಿ ಭಗನ್ಯಾನಾಯ್ಕ ಕೊಂಚ ಅಂಜಿಕೆಯಿಂದಲೆ ಮಾತಾಡಿದ. ಮೂವರು ತಂದೆ ಮಕ್ಕಳು ಧನ್‌ಸಿಂಗ್ ನಾಯ್ಕನ ಸೈಕಲ್ ಹಿಂದೆ ನಡಕೊಂಡು ಹೊರಟರು. ದೇಗೂರು ತಲುಪೋದ್ರೊಳಗೆ ಪಕ್ಕೀರ. ದಲ್ಲಾಳಿ, ಪೂಜಾರಿ, ದರಗ್ಯಾ ಮತ್ತೊಂದಿಬ್ಬರು ಸೊಸೈಟಿ ಹಾಲಪ್ಪನ ಅಂಗಡಿಯೊಳಗೆ ಒಂದೊಂದು ಪ್ಲೇಟು ಬಜ್ಜಿ ತಿಂದು ಚಾ ಕುಡಿದು ಪಕ್ಕೀರನ ಜೇಬಿಗೆ ಕತ್ತರಿ ಹಾಕಿದವರೆ ಅವನ ಪರ ವಹಿಸಿ ಮಾತಾಡೋದಕ್ಕೆ ಬಂದಿದ್ದರು. ಧನ್‌ಸಿಗ್‌ನಾಯ್ಕ ಪೂಜಾರಿಗೆ ಸಂಬಂಧ ಹಾಗಾಗಿ ಅವನಿಗೆ ಹೇಳಿ ಸರಿಯಾಗಿ ಹೊಡೆಸಿದರೆ ಮತ್ತದು ಊರೊಳಗೆ ತಲೆ ಎತ್ತಿ ಅಡ್ಡಾಡಿಕೊಂಡಿರಬಹುದು ಅಂತ ಚೆಂಡಿಕೆ ಕಟ್ಟಿಕೊಂಡು ಬಂದಿದ್ದ.

ನಾರಾಣಪ್ಪ ಇಬ್ಬರಿಗೂ ಕೂಡಿಸಿ ಇತ್ಯಾರ್ಥ ಮಾಡಬೇಕೆಂದು ಯೋಚನೆ ಮಾಡಿದ. " ಅಣ್ಣ ತಮ್ಮಂದಿರು, ಹೊರಗಿನವರಲ್ಲ, ಮಂದಿ ಇವತ್ತು ಕಲಸ್ತಾರ ನಾಳೆ ಯಾರೂ ಬರಲ್ಲ. ಏನಾರ ಆದ್ರ ಮೊದಲು ಬರೋರು ಸಂಬಂಧಿಕರು. ನೀವು ಹಿಂಗ ಜಗಳ ಮಾಡಿದ್ರ ಮಂದಿ ಸಿರಿಯಾಗಿ ಆವರ ಫಾಯಿದೆ ತಗೋಂತಾರ." ಅಂತೇಳಿ ಪಿಠಿಕೆ ಹಾಕಿದ. ಆದರೆ ಅವನ ಮಾತುಗಳು ಪಕ್ಕೀರನ ಮೇಲೆ ಯಾವದೂ ಪರಿಣಾಮ ಬೀರದಂತೆ ಪೂಜಾರಿ ಅವನ ತಲೆ ತುಂಬಿದ್ದ. ಹಾಗಾಗಿ ಪಕ್ಕೀರ ನಾರಾಣಪ್ಪನ ಮಾತಿಗೆ ಹೆಚ್ಚು ಗಮನ ಕೊಡಲಿಲ್ಲ. ನಾರಾಣಪ್ಪಗೆ ಅರಿವು ಆಯಿತು. ಈ ಮಗ ಮಂದಿ ಮಾತು ಕೇಳಿ ತಾನು ಸಾಯೋದಲ್ದೆ, ಬಾಳೆವಸ್ತ ಅಣ್ಣ ಭಗನ್ಯಾನಾಯ್ಕನ್ನು ಸಾಯಿಸ್ತಾನ ಅಂದವನೆ, ಟಾಂಕ್ಯ, ಬದಿಯಾರನ್ನು ಒಳಗೆ ಕರಕೊಂಡ ಹೋಗಿ ನಾಕು ಹೊಡ್ತ ಹೊಡದು, "ಮತ್ತ್ಯಾವಾಗಾದ್ರು ಗಲಾಟೆ ಮಾಡಿದ್ರಾ ಏರೋಪ್ಲೇನ್ ಏರ್ಸಿ ಬಿಡ್ತೀನಿ." ಗದರಿಸಿದ. ಟಾಂಕ್ಯ ಒತ್ತಡ ತಡೆಯಕಾಗದೆ ಓಡಿ ಹೋಗಿ ಠಾಣೆ ಮುಂದಿದ್ದ ಬೇವಿನ ಮರದ ಪಕ್ಕ ಕುಂತ. ಪಕ್ಕೀರನಿಗೆ ಬಾಳ ಕುಷಿ ಆಯ್ತು. " ಸೂಳಿ ಮಕ್ಕಳು ಗಂಡ್ರಗೂಳಿಹಂಗೆ ತಿರುಗುತ್ತಿದ್ರು, ಮಂದಿ ನೋಡಿ ಗುಟರ್ ಹಾಕ್ತಿದ್ರು, ಈಗ ಗುಟಿರ್ರು ಹಾಕನ್ನ ನೊಡ್ತೀನಿ." ಅಂದವನೆ ಜೋರಾಗಿ ನಕ್ಕ. ಪಜಾರಿ, ದಲ್ಲಾಳಿ ಅವನು ಅಂದಿದ್ದಕ್ಕೆಲ್ಲ ಸಜಾ ಹಾಕಿದವರೆ ಅವನಗಂಟು ಎಂಟಾಣಿ ಮಾಡಾಕ ಹೊಂಟಿದ್ರು. ನಾರಾಣಪ್ಪ ಹೊರಗ ಬಂದವನೆ " ಲೇ ಪಕ್ಕೀರ ನಾಯ್ಕ ಹೂಂ" ಅಂತೇಳಿ ಸನ್ನೆ ಮಾಡಿದ. ಪಕ್ಕೀರ ಎದ್ದು ಒಳಗೆ ಹೋದ. "ಇಪ್ಪತ್ತು ತಗಿ" ಅಂದ. "ಇಪ್ಪತ್ತು ಅಷ್ಟೊಂದು ದುಡ್ಡು ಎಲ್ಲಿ ಬುದ್ದಿ, ನಾವು ಕೂಲಿನಾಲಿ ಮಾಡೋಮಂದಿ, ನಮ್ಮ ತಾವ. . . ." ರಾಗ ಎಳಿಯಾಕ ನೋಡಿದ. ನಾರಾಐಣಪ್ಪ, ಕಡ್ಡಿ ತುಂಡು ಮಾಡಿದಂಗೆ ಹೇಳಿದ, " ನೋಡು ನೀ ಹೇಳಿದ ಅಂತೆಳಿ, ಇಬ್ಬರು ಹುಡುಗರಿಗೆ ನಮ್ಮವರು ಚೆನ್ನಾಗಿ ನಾದ್ಯಾರ, ಅವರಿಗೆ ಇವರಿಗೆ ಕೊಡಾಕು ಕೊಟ್ಟು ಜಾಗ ಖಾಲಿ ಮಾಡು." ಗದರಿಸಿದ. " ಬುದ್ದಿ ನಂತಾವ ಇರೋದು ಇಷ್ಟೆ ." ಅಂತೇಳಿ ಏಳುವರೆ ರೂಪಾಯಿ ತಗದುಕೊಟ್ಟವನೆ, ಕೈಯಾಗ ಕಾಸಿಲ್ಲದಂಗೆ ಅವರಿಬ್ಬರನ್ನು ಮಾತಾಡಿಸದಂಗೆ ಹೊರಗ ನಡೆದ. ಯಾಕೋ ವಾತಾವರಣ ಹಿತ ಅನಿಸಿತ್ತು.

ಕೋರ್ಟಿಗೆ ಅಣ್ಣ ತಮ್ಮಂದಿರು ವಾಯ್ದೆ ತಗೊಂಡು ಅಡ್ಡಾಡ ತೊಡಗಿದರು. ಬಗನ್ಯಾನ ಮನೆಯಲ್ಲಿ ಸಣ್ಣ ಹುಡುಗರನ್ನು ಬಿಟ್ಟು ಟಾಂಕ್ಯ, ಬದಿಯಾ ಚಿಮಣಿ ಜೇಮು ರಾಮಿ. ಹಾಮ್ಲ ರಾಮು, ಚಾವಳಿ ಒಟ್ಟು ಒಂತ್ತುಮಂದಿಮೇಲೆ ಕೇಸು ಹಾಕಿದ್ದ. ಹಂಗೆ ಇವನು ಹನ್ನೊಂದು ಮಂದಿ ಹೆಸರು ಬರೆಸಿದ್ದ. ಭಗನ್ಯಾನನ್ನ ಕಾಡುತ್ತಿದ್ದುದು ಅಂದ್ರೆ ಅವನ ಮಗ ಬದಿಯಾ ಶಾಲೆಗೆ ಹೋಗೋನು, ನಾಳೆ ಏನಾರ ಹೆಚ್ಚುಕಮ್ಮಿ ಆದೀತು ಅಂತೇಳಿ ಯೋಚನೆ ಮಾಡಿ ಸರ್ವತಪ್ಪನ ಕೇಳಿ ಅವರು ಅದೇನು ವಕೀಲರಿಗೆ ಹೇಳಿ ಅವನ ಹೆಸರು ತಗಿಸಿದ್ರು . ಹಾಗೆ ಮೂರು ನಾಕು ವಾಯಿದೆ ತಿರುಗಾಡಿದ ಮೇಲೆ ಪಕ್ಕೀರಗೆ ಬುದ್ದಿ ಬಂದಂಗಾಗಿ ಕೇಸು ಕುಲಾಸೆಗೆ ಒಪ್ಪಿಕೊಂಡ.

ಭಗನ್ಯಾನಾಯ್ಕ ಎಲ್ಲವನ್ನು ಮರೆತು ದುಡಿಮೆ ಕಡೆ ಲಕ್ಷ್ಯ ವಹಿಸಿದ್ದ. ಅವನಿಗೇನು ಅಷ್ಟೊಂದು ನಷ್ಟ ಅಗಲಿಲ್ಲ. ಸಣ್ಣ ಮಕ್ಕಳು. ದೊಡ್ಡವರು ಹೊಲಗಳಲ್ಲಿ ವಾರೋಪ್ಪತ್ತು ಕೆಲಸ ಮಾಡಿ, ದಮ್ಮಡಿದಮ್ಮಡಿ ಕೂಡಿಸಿ ಕೋರ್ಟಿನ ಖರ್ಚು ನಿಭಾಯಿಸಿದ್ದರು.

ಆದರೆ ಪಕ್ಕೀರನಿಗೆ ಮಾತ್ರ ಪುಜಾರಿ, ದಲ್ಲಾಲಿಯ ಚಹ, ತಿಂಡಿಬೀಡಿ ಎಲೆ ಅಡಿಕೆಯಿಂದ ಹಿಡಿದು ಕುಡಿಯುವುದರ ವರೆಗೂ ಅವನೆ ಖರ್ಚು ಮಾಡಬೇಕಿತ್ತು. ಹಾಗಾಗಿ ಅವನಿಗೆ ಉಸಿರಾಡದಂಗೆ ಆಗಿತ್ತು. "ಹೊಗ್ಗೋ ನಿಮ್ಮ ಮಂಜಾಳಾಗ, ಒಂದಬಾಟಲಿ ಹೆಂಡಕ್ಕ ನೂರಾರು ರುಪಾಯಿ ದಂಡ ಕಟ್ಟಿದಂಗಾತು." ಅಂತೇಳಿ ಅವರ ಸವಾಸ ಬಿಟ್ಟಿದ್ದ. ಹೊಸ ಅವತಾರ ಹೊಸ ವೇಷಗಳನ್ನು ಹಾಕುವ ಪೂಜಾರಿಯ ಮರ್ಮವನ್ನರಿಯದ ತಾಂಡದ ಮಂದಿಗೆ ಪೂಜಾರಿಯಿಂದ ಉಳಿಗಾಲವೇ ಇಲ್ಲ ಎಂಬ ಸತ್ಯ ತಿಳಿದು ಹೋಗಿತ್ತು. ಅವನ ಸಹವಾಸ ಮಾಡಿದವರೆಲ್ಲರಿಗೂ ಉಡಿಯಾಗ ಕೆಂಡ ಕಟ್ಕೊಂಡಂಗ ಅನಿಸುತ್ತು. ಅದರೂ ಅನಿವಾರ್ಯವೆಂಬಂತೆ ಅವನನ್ನು ಸಹಿಸಿಕೊಂಡಿತ್ತು ಮಂದಿ. ಪಕ್ಕೀರನ ಎರಡನೆ ಹೆಂಡತಿ ಹಿರಿಮಗಳು ರಂಕಿ ಯಾರದೋ ಹೊಲದಾಗ ಕುರಿಬಿಟ್ಲು ಅಂತ ಮನಿಮಟ ನುಗ್ಗಿ ಜಗಳಕ್ಕೆ ಬಂದಿತ್ತು ಮಂದಿ. ಎಷ್ಟೇ ಆದರೂ ಕಳ್ಳು ಬಿಟ್ಟುಕೊಡಾಕ ಅದೀತೆ, ಟಾಂಕ್ಯಾ, ಬದಿಯಾ ಮುನ್ನುಗ್ಗಿ ಯಾವಾಗ ಹೊಡದರೋ ಮಂದಿ ವಾಪಾಸು ಓಡಿದ್ದರು. ಪಕ್ಕೀರಗೆ ತನ್ನ ತಪ್ಪಿನ ಅರಿವಾಯಿತು. ಸುತ್ತಮುತ್ತ ಇಡೀ ತಾಂಡದಲ್ಲಿ ಇರೋದೆ ಎರೆಡು ಮನೆಗಳು ಯಾರು ಹೊಡೆದರು, ಬಡದ್ರು, ಕೊಲೆ ಮಾಡಿದರೂ ಮತಾಡೋರು ನಮ್ಮವರು ಅಂತ ಹೇಳಿಕೊಳ್ಳಾಕ ಇರೋರೆ ಅಣ್ಣ ತಮ್ಮ ನಾವಿಬ್ಬರು. ಮಂದಿ, ಯಾರ ಸತ್ತರು, ಯಾರು ಕಲೆಮಾಡಿದರು. ನನ್ನ ಸಾವಿಗೆ ನಿಮ್ಮಣ್ಣ ಅಳಬೇಕು. ಅವರ ಅಸ್ರಕ್ಕೆ, ಬ್ಯಾಸರಕ್ಕ ನಾನೇ ಅಗಬೇಕು. ಬಹಳ ಹೊತ್ತು ಯೋಚನೆ ಮಾಡಿದ. "ಸೂಳಿಮಗ ಪುಜಾರಿ ಪತ್ತೆನ ಇಲ್ಲ. ಏಯ್ ನಾವದಿವಣ್ಣ ನಾವದೀವಲ್ಲ ಈ ತಾಂಡಾದಾಗ ನಿನ್ನ ಮೈ ಮುಟ್ಟೋ ಮಗ ಯಾವಾನು, ಅವನ ಒಂದು ಕೈ ನೋಡಿ ಬಿಡ್ತೀವಿ" ಅಂದಿದ್ದ. "ದಲ್ಲಾಳಿ ತರ್ಲೆ ನನ್ನ ಮಗ ಬೇರವರ ಗಂಟನ್ನ ಎಂಟಾಣಿ ಮಾಡೋನು" ಜೋರಾಗೆ ಬೋಯ್ಕಂಡ. ಅಸಾಮಿ ತನ್ನ ಪಾರ್ಟಿ ಬಿಟ್ಟನು, ಬಗನ್ಯಾನ ಹಣಿಯೋದಕ್ಕೆ ಅಡ್ಡ ಇರೋದು ಇವನೊಬ್ಬನೆ ಇವನ್ನ ಹೋಗಾಕ ಬಿಡಬಾರದು ಅಂತೇಳಿ ಪೂಜಾರಿ ಹೆಂಡದಂಗಡಿಯಿಂದಲೆ "ಅಲ್ಲಾ ಏನಾತೋ." ಅಂತ ಸೋಗಲಾಡಿತನ ಮಾಡ್ಕೊಂತ ಎರಡು ಬಾಟ್ಲಿ ಹೆಂಡ ತಂದು ಸಮಾಧಾನದಿಂದ ಕುಡಿಸಿ ನಿದಾನಕ್ಕೆ ಅವನ್ನನ್ನು ಅವನ ಕಡಿಗೆ ಮಾಡಿಕೊಂಡ. ಪಕ್ಕಿರನ ಮೆದಳೆ ಕೆಲಸಮಾಡ್ತಿ ನಿಜವಾಗಿಯೂ ಅವನು ಪೂಜಾರಿ ಹಿಂಬಾಲಕನೆ ಇಲ್ಲಿ ಅವನ ಹಿರಿ ಅಣ್ಣ ಭಗನ್ಯನಾಯ್ಕನ ಒಳ್ಳೆಯತನ ಸಹಿಸಿಕೊಳ್ಳಾಕ ಆಗದೆ ಹೀಗೆ ಮಾಡುತ್ತಿದ್ದಾನೊ. ಅವನ ಮನಸ್ಸಿನೊಳಗೆ ಹೊಕ್ಕು ಕಂಡವರ್ಯ್ಯಾರು.? ಪೂಜಾರಿ ಮಾತ್ರ ಸ್ಪಷ್ಟವಾಗಿದ್ದ. ಇಡೀ ತಾಂಡದಲ್ಲಿ ಅವನ ರಮಾವತ್ ಪಂಗಡ ಬಲಿಷ್ಟವಾಗಿತ್ತು. ಕಡದು ಕಿಸಿಯಾಕ ಆಗದನ್ನ ಈ ಪುಟ್ಟ ಹೊತ್ಕೊಂಡು ಬಂದ ನನ ಮಗ ಕರಮ್ ತೋಟ್ ಪಂಗಡದ ಯಕಚ್ಚಿತ್ ಒಬ್ಬ ಕಾಡುಪಾಪನಂತವನು ಮುಂದೆ ಬರ್ತಿದ್ದಾನೆ ಅನ್ನೊದೊಂದೆ ಅವನ ಕೊರಗು. ಹೇಗಾದರೂ ಮಾಡಿ ಅವನು ಮುಂದೆ ಬರದಂಗೆ ನೋಡಬೇಕು. ಅದಕ್ಕೆ ಉಪಾಯ ಯಾವುದು. ಒಂದು ಒಳಗಡೆ ಶತ್ರುವನ್ನು ಸೃಷ್ಟಿಮಾಡೋದು. ಆ ಒಳಗಿನ ಶತ್ರು ಅವನ ಸ್ವಂತ ತಮ್ಮ ಪಕ್ಕಿರ, ಇನ್ನು ಎರಡನೆಯದತ್ತ ಹೊರಗಿನ ಶತ್ರು ಖಾಲಿಪಲಿ ದೊಡ್ಡ ದೊಡ್ಡ ಮನಿತನ ಹತ್ತು ಹನ್ನೊಂದು ಮಂದಿ ಮಕ್ಕಳಿರೋ ದಿನ್ನಿಸಾಬಿ, ಖಾಸಿಂಸಾಬಿ ಭಗನ್ಯಾ ಅಂದ್ರೆ ಆರಾಧ್ಯ ದೈವ ಅಂದಕೊಂಡಾರ. ಅವನ ಬಗ್ಗೆ ಅವರೆದುರಿಗೆ ಏನಾದರು ಅಂದ್ರೆ ಹೇಳಿದ ಮಾತಿಗೆ ಕ್ಯಾಕರಿಸಿ ಉಗುದು ತಳ್ತಾರೆ. ಅವರು ಪ್ರಯೋಜನ ಇಲ್ಲ. ಒಬ್ನೆ ಒಬ್ನು ಎಲ್ಲದಕ್ಕೂ ಅಂದ್ರೆ ಎತ್ತಿನದಲ್ಲಾಳಿ ಯಂಕ. ಸುತ್ತ ಪಟ್ಟಣಗಳಿಗೆ

ಹೋಗಿ ಎತ್ತು ಕುರಿ ಕೋಳಿ ಹಂದಿ ನಾಯಿ ದಲ್ಲಾಳಿಮಾಡ್ತಾನ. ಅವನಿಗೂ ಏಳೆಂಟು ಗಂಡು ಮಕ್ಕಳದಾವು. ಯಂಕಗ ನಾಕು ಬಾಟಲಿ ಕುಡಿಸಿದರಾಯಿತು ಯಾ ಮಗನ್ನ ಬೇಕಾರೂ ಹಿಗ್ಗಾಮುಗ್ಗಾ ಬೊಯ್ತಾನ, ಆಂತಾನ, ಆಡ್ತಾನ. ಶನಿ ಹಂಗ ಕಾಡ್ತಾನ. ಈ ಇಬ್ಬರು ಶತ್ರುಗಳನ್ನು ತನ್ನ ಆಸ್ತ್ರಗಳನ್ನಾಗಿ ಬಳಸಿಕೊಂಡು ಪೂಜಾರಿ ಬಗನ್ಯಾನನ್ನು ಬಗ್ಗು ಬಡಿಬೇಕಂತ ಯೋಜನೆ ರೂಪಿಸಿದ. ಅದಕಂತ್ಲೆ ಪಕ್ಕೀರನ ಎರಡನೇ ಹೆಂಡತಿ ಚಂದ್ರಿ ಕೂಡ ಅಕ್ರಮ ಸಂಬಂಧ ಬೆಳಸಿಕೊಂಡಿದ್ದ. ಇನ್ನು ಗುಡಗಾ ಯಂಕನ ಸಜ್ಜಾಗಿ ತಯಾರಿ ಮಾಡಿದ್ದ. ಯಂಕ ತಾಂಡದಾಗ ಕಮ್ಮಿ ಪಟ್ಟಣದಾಗ ಜಾಸ್ತಿ ಇರೋದು. ಅವನ ಹೆಂಡತಿ ಮಕ್ಕಳನ್ನು ಸರಿಯಾಗಿ ಅವನ ತಮ್ಮ ಸಣ್ಣೀರ ನೋಡಕೋತಾನಂತ ಈಡಿ ತಾಂಡಾದಾಗ ದೊಡ್ಡ ಪುಕಾರೆ ಎದ್ದಿತ್ತು. ಸಣ್ಣೀರನ ಎರಡೂ ಮಕ್ಕಳು ತಾಯಿ ಇಲ್ಲದ ತಬ್ಬಲಿಗಳು. ಎಲ್ಲೆಲ್ಲೋ ಅಲಿತಿದ್ರ ಈ ಮಗ ಮಾತ್ರ ಗುಡಗ ಯಂಕನ ಹೇಣ್ತಿ ಸೆರಗಿನೊಳಗ ಸೇರಿಕೊಂಡು ಸಂಸಾರದ ನಿಜವಾದ ಸಾರವನ್ನು ಮರೆತು ಬಿಟ್ಟಿದ್ದ.

ಸಣ್ಣೀರ ಮೂಲೆಗುಂಪಾಗಿದ್ದ. ಯಂಕನ ಮನಿಯ ಗಳಗೂಟ ಎಬ್ಬಿಸಿ ನಿಲ್ಲಿಸಿದ್ದ. ಎಲ್ಲೋ ಮೂಲೆಯೊಳಗೆ ಒಂದು ಸಲ ಹಾಕಿಕೊಂಡು ಹೊಲ ಇದ್ದರೂ ಕೂಲಿನಾಲಿಮಾಡಿ, ಆರೇಳು ಮಂದಿ ಹುಡುಗರನ್ನ ಬೀಡಾಡಿ ದನಗಳಂಗೆ ಅಲೆದಾಟಕ್ಕ ನಿಂತೋರನ್ನ ಬಿಡಿಸಿ ನಮ್ಮದು ಸ್ವಂತದ್ದು ಅನ್ನೋ ಹದಿನೈದು ಎಕ್ಕರೆ ಜಮೀನನ್ನ ಸ್ವತಃ ಮುಂದೆ ನಿಂತು ಹಸನು ಮಾಡಿ ಹೈನದ ಮನೆ ತೆಗೆದು ಒಂದು ಮನೆತನ ಕಟ್ಟಿದ. ಅದು ತನ್ನ ಇಬ್ಬರು ಮಕ್ಕಳನ್ನ ತ್ಯಾಗಮಾಡಿ. ಹತ್ತು ಎಕರೆ ಜಮೀನಿಗೆ ತನ್ನ ಸ್ವಂತ ಐದು ಎಕರೆ ಸೇರಿಸಿದ. ಅವನ ಜಮೀನಿನ ಮೇರೆಯನ್ನು ಕಡೆಸಿ ಅವರ ಜಮೀನಿನೊಳಗೆ ಸೇರಿಸಿದ. ಗುದಗನ ಹೆಂಡತಿ ಸಾವಿ ಯಾಪರಿ ಸಣ್ಣೀರನ ಮೇಲೆ ಪ್ರಭಾವ ಬೀರಿದ್ದಳು ಅನ್ನೋದು ತಾಂಡದ ಸಾಂಸರಿಕ ಪರಣಿತರಿಗೆ ಅಂದಾಜು ಮಾಡದಾಗಿತ್ತು. ಸಾವಿ ಈ ಮುಂಚೆ ಅಲ್ಲಿ ಇಲ್ಲಿ ಲಮಾಣ್ಯಾರ ಗಂಡಸರ ತಾವ ಕಣ್ಣಾಡಿಸುತ್ತಿದ್ದದ್ದನ್ನು ಸಣ್ಣೀರ ಬಂದ್ ಮಾಡಿದ್ದ. "ಲೆ ಲೌಡಿ, ಮಕ್ಕಳ ಮರಿ ಬಿಟ್ಟು ಎಲ್ಲಿಗೆ ಹೋಕ್ಕಿ ತುಡುಗ ದನದಂಗ, ನಾ ದುಡಿಯೋದು, ನೀ ಹಿಂಗ ಹೊರಗ ಹೊರಗ ಹೋಗಿ ಕಂಡಕಂಡೋರು ಹೊಲ್ದಾಗ ಮೇಯದಾ, ನನ್ನ ಏನಂತ ತಿಳಕಂಡಿ." ಅಂತೇಳಿ ಮೈ ಹಚ್ಚಗ ಆಗೊಹಂಗ ಯಾವಾಗ ಹೊಡದಿದ್ನೊ, ಯಂಕನಿಗಿಂತ ಇವನ ಪಾಡಂತ ಹೊರಗಿನ ಚಾಳಿ ಬಂದ ಮಾಡಿದ್ಲು. ಯಂಕ ಏನೂ ಆಗಿಲ್ಲಾ ಅನ್ನೊಹಂಗ ಪ್ಯಾಟಿ ಸುತ್ತಿ ವ್ಯಾಪಾರ ಮಾಡತೊಡಗಿದ. ಸಣ್ಣೀರನ ಮಗ ಜೋಗ್ಯಾ, ಮಗಳೂ ಕಾಳಿ ಅವ್ವ ಸತ್ತು ಹದಿನೈದು ವರ್ಷಗಳಾಗಿದ್ದವು. ಇರೋ ಒಬ್ಬ ತಂದೆ ಮತ್ತೊಬ್ಬಳ ಪಾಲಾಗಿ ಅನಾಥರನ್ನಾಗಿ ಮಾಡಿದನ್ನ ಸಹಿಸಿಕೊಳ್ಳಾಕ ಆಗದೆ, ಬಿಡಾಕು ಆಗದೆ ತಾಂಡೆ ದುರ್ಗವ್ವನ ಮುಟ್ಟೋದ ಬಗಲಿಗೆ ಗುಡಿಸಲು ಹಾಕ್ಕೊಂಡು ಕುಲಿನಾಲಿಮಾಡಿ ಜೀವನ ನಡೆಸಿದ್ದರು. ಸಣ್ಣೀರನ ದುಡಿಮೆ ಜಾಸ್ತಿ ಆಗ್ತಿದ್ದಂಗೆ ಅವರ ಇವರ ತಾವ ಪೂಸಿ ಹೊಡಿತ್ತಿದ್ದ ಯಂಕನ ಆರು ಮಕ್ಕಳು ತಾಂಡದಲ್ಲಿ ಗೂಳಿಹಂಗ ಡಿಕಿ ಹೊಡೆಯಾಕ ಸುರು ಮಾಡಿದರು. ಪಾಮು, ಗಾಣಿ, ಸೋಮು, ಚಂದ್ರ, ಪಾಪು, ತಿಮ್ಮ ಸಾಬರಿಗೆ ಹೋಗಿ ತಡವೋದು, ಯಾವ ಲಮಾಣೀ ಮಂದಿ ದುರ್ಬಲದಾರೊ ಅವರಿಗೆ ಹೋಗಿ ಅನಾವಶ್ಯಕ ತೊಂದರೆ ಕೊಡುವುದುನ್ನು ಮುಂದುವರೆಸಿದ್ದರು. ಐದು ಹೆಣ್ಣು, ಚಿಕ್ಕಿ, ಗಂಗಿ ನಿಂಗಿ ಚಾಮಿ ನಿಮ್ಮಿ ಊರಿಂದೂರನ್ನೆ ಅಲುಗಾಡಿಸ ತೊಡಗಿದರು.

ಪೂಜಾರಿಗೆ ಹಬ್ಬ, ಒಂದು ಕಡಿಗೆ ಪಕ್ಕೀರ, ಇನ್ನೊಂದು ಕಡಿಗೆ ಯಂಕ, ನನ್ನಮಕ್ಕಳಿಗೆ, "ಮಗ ಬಿತ್ತಿದ ಬೆಳಿನ ಕೊಯ್ಯಾಕ ಆಗಬಾರದು, ಅಲ್ರಲೆ ಅವನ ಕಿಮ್ಮತ್ತಾದರೂ ಏನಪ್ಪ, ತಾಂಡಕಟ್ಟಿದೋನು ನಮ್ಮ ಮುತ್ತಜ್ಜ ಕೆಂಜ ಹನ್ಮಂತ. ಆಡ್ನಾಡಿ ನನ್ನ ಮಕ್ಕಳು ಎಲ್ಲಿಂದಲೋ ಬಂದು ಮುನ್ನೂರು ವರ್ಷಗಳ ಹಿಂದೆ ನಾವು ಕಟ್ಟಿದ ಈ ಸಂಸ್ಥಾನ ಆಳ್ತಾರಲ್ಲ." ಸಿಟ್ಟಿಂದ ನಡಗ ತೊಡಗಿದ. "ಏಯ್, ಕಾಕ ನೀ ಯಾಕ ಅವನ ಮಾತಿಗೆ ಸಿಟ್ಟಿ ಅಕ್ಕಿ ಬಿಡು." ದಲ್ಲಾಳಿ ದರಗ್ಯನಾಯ್ಕ ಹೆಂಡ ಇಲ್ಲಾಂದ್ರೆ ಈ ಮಗ ಪೂಜಾರಿ ಕಾಲು ಕೈ ಅದುರತಾವಂತ. ಗೊತ್ತಿದ್ದು ಹೇಳಿದ. ಆದ್ರ ಅವ ಸೂರು ಹಚ್ಚಕೊಂಡ್ರ ನಿಲ್ಲಸೋದಿಲ್ಲ. ಆಂತಾನೂ ಗೊತ್ತಿತ್ತು. ಒಂದು ಮಾತು ಹೇಳಿ ಅರಗಾದ. ಸಣ್ಣೀರನ ಪಕ್ಕ ಕುಂತು ಭಗ್ಯಾನ ಬಗ್ಗ ಬಡಿಬೇಕು. ಅವನ ದುಡಿಮೆ ಮೀರಿಸಬೇಕು. ಅವನಿಗಿಂತ ಹೆಚ್ಚು ಹೊಲಮನಿ ಹಿಡಿಯೋ ತಾಕತ್ತಿರೋದು ನಿಗೊಬ್ಬನಿಗೆ ಅಂತೇಳಿ ಮರಹತ್ತಿಸಿದ. ಹಿಂದ ಭಗನ್ಯಾನ ಹೊಲದಾಗ ಕೆಲಸ ಮಾಡುತ್ತಿದ್ದ ಸಣ್ಣಿರ, ಈಗ ಅವನ್ನು ಮೀರಿಸಬಲ್ಲೆ ಅನ್ನೋ ಛಲ ತೊಟ್ಟಿದ್ದರಿಂದ ಪೂಜಾರಿಯು ಮಾತುಗಳು ಮತ್ತು ಏರಿಸತೊಡಗಿದವು. " ನೋಡು ಸಣ್ಣೀರ, ಒಂದು ಅವನ ಮಕ್ಕಳ ಕಾಲು ಕೈ ಮುರಿದು ಕೆಲ್ಸ ಮಾಡದಂಗಾಗಬೇಕು. ಎರಡನೇದು ಕೊರ್ಟು ಕಚೇರಿ ಅಡ್ಡಾಡಿ, ಹೈರಾಣ ಆಗಬೇಕು. ಹೂಂ ನಿಂತಾವ ಆ ತಾಕತ್ತು ಐತೆ. ಈ ತಾಂಡದಾಗ ನೀನೊಬ್ಬನೆ ಗಂಡುಮಗ ನೋಡು." ಇದ್ದದ್ದು ಇಲ್ಲದ್ದು ಅವನ ಕಿವಿಗೆ ತುಂಬಿ ಭಗನ್ಯಾ ಎದರು ಸಿಕ್ಕರೆ ಸಣ್ಣೀರ ಕೆಟ್ಟ ಕಣ್ಣಿಂದ ಕೆಕ್ಕರಿಸಿ ನೋಡುವಹಂಗೆ ಮಾಡಿದ್ದ. ಭಗನ್ಯಾನಾಯ್ಕ ತನ್ನ ಶತ್ರುವನ್ನು ಪ್ರೀತಿಸುವವನು. ಯಾರು ಏನಂದ್ರು ಸುಮ್ಮನೆ ಹೋಗುತ್ತಿದ್ದ. ಸಣ್ಣೀರ ಎರಡು ಮೂರು ತಾವ ಕಾಲ ಕೆದರಿ ಜಗಳಕ್ಕೆ ಹೊಗಿದ್ದ. "ಆಯ್ತು ಬಿಡು, ಸಣ್ಣೀರ ನೀನೆ ದೊಡ್ಡವ." ಅಂತ ಸುಮ್ಮನೆ ಸಿಟ್ಟು ನುಂಗಿ ಎದ್ದು ಬಂದಿದ್ದ. ಭಗನ್ಯಾ ಮಹಾಭಾರತದ ಕೃಷ್ಣನ ಕತೆ ಕೇಳಿದ್ದ. ನೂರು ತಪ್ಪು ಮಾಡುವವರೆಗೂ ಹೇಗೆ ಕೃಷ್ಣ ತಾಳ್ಮೆಯನ್ನ ಕೆಳದುಕೊಳ್ಳುವುದಿಲ್ಲವೋ ಹಾಗೆ, ಅವನ ನೂರು ತಪ್ಪು ಕ್ಷಮಿಸಿದ್ದ. ಯಾವಾಗ ನೀರು ತಲೆ ಮೇಲೆ ಹರಿಯೋದಕ್ಕೆ ಆರಂಭಾಯ್ತು ಭಗನ್ಯಾ, " ಏನಲೆ ನಿನ್ನವ್ವನ್, ಎನು ಅನ್ಕೊಂಡೀಯಾ ಲಾಮಾಣ್ಯಾರು ಅಂದ್ರೆ" ಅಂದವನೆ ಕೋಲ್ ಪಟ್ಟಿ ಹಿಡಿದು ನಾಕು ಬಾರಿಸಿದ. ಹೆಂಡದಂಗಡಿಯಲಿ ನಡೆದ ಗಲಾಟೆ ಕೇರಿಏರಿ ದಾಟಿ ತಾಂಡದೊಳಾಗ ಬರಾಕ ಮುಂಚೆಗೆ ಜೋರಾಗಿತ್ತು. ಯಂಕನ ಅರುಮಂದಿ ಮಕ್ಕಳಿಗೂ ಬಗನ್ಯಾನ ಆರು ಮಂದಿ ಮಕ್ಕಳಿಗೂ ಮಾರಾಮಾರಿ ಸುರು ಆಗೇ ಬಿಟ್ಟು. ಹಿರಿಯವನಾದ ಟಾಂಕ್ಯಾ ನೀರು ಸೇದೋ ಬಾವಿಮ್ಯಾಲೆ ಯಂಕ ಮೂರನೆ ಮಗ ಹುಲಿಯಾ ತಡವಿದ್ರೆ ಟಾಂಕ್ಯ ಸುಮ್ಮನಿದ್ದಾನ, ಹಿಡಿದು ನಾಕು ಜಡಿದ. ಈ ಸುದ್ದಿ ಯಂಕನ ಹೆಂತ್ತಿ ಸಾವಿ "ಏನಲೋ ನನ್ನ ಹಾಟಗಳ್ಳ ನನ್ನ ಮಗನ್ ಮೇಲೆ ಕೈ ಮಾಡಬೇಕಾರ ಏಟು ಬಂತು ದೈರ್ಯ" ಎಂದು ಬಾರಲೆ ನೋಡೇ ಬಿಡ್ತೀನಿ ಅಂದವಳೆ ಸೀರೆ ಎತ್ತಿ ಕಚ್ಚಿ ಹಾಕಿ ಬಗನ್ಯಾನ ಗುಡಿಸಲು ಮುಂದೆ ನಿಂತು ಬೊಯ್ಯಾಕ ಹತ್ತಿದ್ದಳು. "ಏಯ್ ಸುಮುಕೆ ಹೋಗವ್ವ, ನಾವೇನು ಬೇಕಂತ ಹೊಡೆದಿಲ್ಲ. ಅವನೆ ಏನೇನೋ ಬೊಯ್ದು, ಅದಕ್ಕೆ ಹೋಡದೀವಿ. ಬಾಯಿ ಮುಚ್ಚುಕೊಂಡು ಹೋಗ್ರಿ." ಎಂದು ಅನ್ನುತ್ತಿದ್ದಂಗೆ, ಆಕೆ ಹಿಂದಿದ್ದ ಡಮರು, ಡಿಗ್ಯಾ ಮೋಸದಿಂದ ಬಂದು ಟಾಂಕ್ಯಾನ ಮೇಲೆ ಆಕ್ರಮಣ ಮಾಡಿದರು. ಯಾವುದೋ ಚೀಟಿ ಹಿಡಿದು ಓದುತ್ತಿದ್ದ ಬದಿಯಾ ಟಾಂಕ್ಯ ಕೂಗಿದಂಗಾಗಿ ಹೊರಗ ಬಂದ. ಅವರಣ್ಣ ಟಾಂಕ್ಯಾನ ಮೇಲೆ ಸಾವಿ. ಡಮರು

ಡಿಗ್ಗಾ ಮುಗೆ ಬಿದ್ದಿರೋದ ನೋಡಿದ. ಪಿತ್ತ ನೆತ್ತಿಗೇರಿದ್ದೇ ತಡ ಗುಡಿಸಲು ಪಕ್ಕಾದಾಗಿದ್ದ ಕಾಯಿಗೋಲು ತಗಂಡವನೆ ಮಕ ಮೊಸಡಿ ನೋಡದಂಗೆ ನಾಕು ಬಾರ್ಸಿಬಿಟ್ಟ. ಡಮರು ಒಂದು ಕಡೀಗೆ, ಡಿಗ್ಗಾ ಒಂದು ಕಡೀಗೆ ಓಡಿ ಹೋದರು. ಒಬ್ಬಳೆ ಕೈಗೆ ಸಿಕ್ಕ ಸಾವಿಯನ್ನು ಎಲ್ಲೂ ಪೆಟ್ಟು ಕಾಣದಂಗೆ ಬಾರಿಸಿದರು, " ಯವ್ವಾ ಸತ್ತೆ ಬಿಡ್ರೋ ನಿಮಗೆ ಕೈ ಮುಗೀತೀನಿ, ನಿಮ್ಮವ್ವನ ಓರೆಗೆಯೋಳು." ಅಂಗಲಾಚಿದಳು. " ನಮ್ಮವ್ವ ಹಿಂಗ ಜಗಳಕ್ಕ ಬಂದಾಳೇನು ನೋಡು." ಅಂತ ಕ್ಯಾಕರಿಸಿ ಮಾರಿಗೆ ಉಗುಳಿ ಅಟ್ಟಿದರು.

ಸಣ್ಣೀರ ಅಲ್ಲಿ ಹೊಡ್ತ ತಿಂದು ಬಂದಿದ್ದ. ಇಲ್ಲಿ ಸಾವಿ ಡಮರು, ಡಿಗ್ಗ್ಯಾ ಹುಲಿಯಾ ಮೂವರನ್ನು ರಿಪೇರಿ ಮಾಡಿದ್ದರು. ಯಾರು ಒಬ್ಬರಿಗೊಬ್ಬರು ತುಟಿಪಿಟಕ್ಕ ಎನ್ನದೆ ಮನಿಯೊಳಗೆ ಮೂಲೆ ಹಿಡಿದು ಮಲಗಿದ್ದರು. ಆದರೆ ದ್ವೇಷದಹೊಗೆ ಒಳಗೆ ಸುಳಿದಾಡ ತೊಡಗಿತ್ತು. ಯಾರು ಯಾರಮೇಲೆ ಯಾವಾಗ ಬಿಳ್ತಾರೋ ಗೊತ್ತಿಲ್ಲ. "ಲೇ ಬದಿಯಾ ನೀ ಒಬ್ನೆ ಎಲ್ಲಿ ಹೋಗಬೇಡ. ಓದಾಕ ಹೋಗಂದ್ರ ಊರು ಉಸಾಬರಿ ಮಾಡ್ತಿ. ನಾಳೆ ಬೆಳಕು ಹರಿಯೋದ್ರಾಗ ನೀನು ದುಂಡಲೂರು ಸೇರು. ನಮ್ಮ ಪಡಿಪಾಟ್ಲ ಇದ್ದುದ್ದೇಯ. ನೀನು ಇಲ್ಲಿ ಕುಂತು ಹಾಳಾಗೋದು ಬೇಡ. ಆಮಂದಿ ಪಾಡಿಲ್ಲ, ಬರೀ ಹೊಟ್ಟೆ ಕಿಚ್ಚು . ನಿಂತ ನೀರಾಗ ಉಚ್ಚೆಹೊಯ್ಯೋ ಬುದ್ದೀವು. ಅದಕ್ಕೆ ನಮ್ಮ ಲಮಾಣಿ ಮಂದಿ ಎಲ್ಲೂ ಉದ್ದಾರ ಆಗಿಲ್ಲ ಮಗ. ನಮ್ಮ ಪಡಿಪಾಟ್ಲು ನಮಗ ಇರುವಲ್ಲದ್ಯಾಕ, ನೀ ಆಟು ಓದಿಕೊಂಡು ಶಾಣ್ಯ ಆಗೋ." ಭಗನ್ಯನಾಯ್ಕ ಬಾವುಕನಾಗಿದ್ದ. ಚಾವಳಿ ಇದೇ ಸರಿಯಾದ ಹೊತ್ತು ಅಂದವಳೆ " ಯಾವಾಗ ನೋಡಿದ್ರು ಉರೀತಿರ್ತಿ. ಅವನ್ ಹೊಡೆದೆ ಇವನ್ ತಡುವಿದೆ ಅಂತ ಮಂದಿ ಜೀವನೇ ತಗೀತಿಯಾ. ನೀನು ಈ ತಾಂಡದಾಗ ಇರಾಕ ನಾಲಾಯಕ್ಕು. ಹೋಗು ಕಷ್ಟನೋ ಸುಖಾನೋ ನಾಕು ಅಕ್ಷರ ಓದಿ ಏನಾರ ಸಾಧನ ಮಾಡು. "ಅವನ ಮೂತಿಗೆ ತಿವುದು ಹೇಳಿದಳು. ಅವತು ಬೊಯ್ಯಿಸಿ ಕೊಂಡ ಬದಿಯಾ ಜೂನ್ ತಿಂಗಳ ಶಾಲೆ ಸುರುಆಗೋ ಸುಮಾರಿಗೆ ದೀಪದ ಹಳ್ಳಿ ಹಾಸ್ಟೆಲ್ ಸೇರಿದ.

ಬಗನ್ಯಾನಾಯ್ಕನಿಗೆ ತಾಂಡದ ತುಂಬಾ ಶತ್ರುಗಳು ತುಂಬಿಕೊಂಡರು. ವರ್ಷಕ್ಕೆ ಆಗೋ ಆಟು ರಾಗಿಯನ್ನು ಪಣತಗಳಲ್ಲಿ ತುಂಬಿ, ಮನಿಮುಂದಿನ ಎರಡು ಹಳೆ ಹಗೇವುಗಳೊಳಗೆ ಜೋಳ ಪೆಂಟಿ ಕಟ್ಟಿ ಶೇಖರಿಸಿಡುತ್ತಿದ್ದರು. ಬಡಬಗ್ಗರು ಯಾರಾದರೂ ವಾತ ಕೆಳೋಕೆ ಬಂದವರಿಗೆ ಒಂದು ಚೀಲ, ಎರಡು ಚೀಲ ವತಾಕೊಡತ್ತಿದ್ದ. ಸುತ್ತ ತಾಂಡಗಳ ಮಂದಿ. ಊರುಗಳ ಜನರು ಮಳೀಗಾಲಕ್ಕೆ ಮುಂಚೆ ಕಾಳು ಕಡೀಗಂತ ಬರುತ್ತಿದ್ದರು. ಜೀ ಅಂತ ಹಿಡ್ಕಳ್ಳೋ ಮಳೆ ಹೊಡೆತಕ್ಕೆ ಸಪ್ಪೆಯಾದ ಭೂಮಿ ಕಸು ಇಲ್ಲದೆ ಬೆಳಿನೆ ಬೆಳೆಯುತ್ತಿರಲಿಲ್ಲ. ಯರದೋ ಐದು ಗಿದ್ನಾ, ಯಾರದೋ ಒಂದು ಪಲ್ಲ. ಒಂದು ಖಂಡಗ, ಮಣ ಹೀಗೆ ಮಂದಿ ಪ್ರಕೃತಿ ಜೊತೆ ಕಸರತ್ತಿಗೆ ಇಳಿದಿದ್ದರು. ಭೂಮಿ ಕಸು ಕಳೆದುಕೊಂಡು ಇಳುವರಿ ಕಡಿಮೆ ಯಾಗುತ್ತಿದ್ದರೆ, ಜನರ ಅಹಾಕಾರ ಮುಗಿಲು ಮುಟ್ಟುತ್ತಿತ್ತು. ಯಾರಕಷ್ಟ ಯಾರೂ ಕೇಳದಾಗಿದ್ದರು. ದನಗಳ ಸಗಣಿ ಹಿಡಿದು ತಿಪ್ಪೆಗಳಲ್ಲಿ ಶೇಖರಿಸಿ, ಸೊಪ್ಪು ಸೆದೆ ಅಂತೇಳಿ ಸಿಕ್ಕದ್ದನ್ನೆಲ್ಲ ತಿಪ್ಪೆಯೊಳಗೆ ಹಾಕಿ, ಕೇರಿ ಮಣ್ಣು ಮುಚ್ಚಿ ಕಾಂಪೋಸ್ಟ್ ಮಾಡಿ, ಗಾಲಿ ಗೊಬ್ಬರ ಕಡಿದು ಬೆಳೆ ಬೆಳೆಯುತ್ತಿದ್ದ ಮುಂಗಾರಿಯೊಳಗೆ ಒಮ್ಮೆ ಮಳೆ ಬಿತ್ತು ಅಂದರೆ ಹೊಲದೋಳಗೆ ನೀರಾಡಿ ಹೊರಗೆ

ಹೋಗದಂತೆ ಮಾಗಿಯ ಕಾಲದಲ್ಲೆ ಮಾಗಿಮಾಡಿ, ಗೊಬ್ಬರ ಉಗ್ಗಿ ಕುಂಟಿ ಹೊಡೆದು ಹಸನು ಮಾಡಿದರೆ ಮುಗಿಯಿತು, ಸೀದಾ ಬಿಜ ಬಿತ್ತೋದೆ. ಹಾಗಾಗಿ ಮಂದಿ ಹೊಲದಲ್ಲಿ ಬಿಳಿ ಕಸ ಬಿದ್ದು ಜೋಳದ ಸಸಿಗಳು ಒಣಗಿ ತೆನೀನೆ ಕೀಳದಾದರೆ, ಬಗನ್ಯಾನ ಹೊಲದಾಗ ಸಸಿಗಳು ನಳನಳಿಸುತ್ತಿದ್ದವು. ಸಮಯಕ್ಕೆ ಸರಿಯಾಗಿ ಕಳೆ ತೆಗೆದು ವಾಣ್ಣ ಮಾಡುತ್ತಿದ್ದ. ಆರುಸಾಲಿಗೊಂದರಂತೆ, ತೊಗರಿ, ಅಕ್ಕಡಿ ಜೋಳದ ನಿಡುವೆ ಒಂದು ಬೀಜ ಅಲಸಂದಿ, ಓಂದು ಬೀಜ ಹೆಸರು, ಮಡಕಿಕಾಳು, ಅವರೆಕಾಳು, ಸಜ್ಜೆ, ಅಂತಂದು ಬಹುಬೆಳೆ ಬಿತ್ತಿ ಇಡೀ ವರ್ಷಕ್ಕೆ ಆಗೊವಷ್ಟು ಅಕ್ಕಡಿಕಾಳುಗಳನ್ನು ಮಾಡಿಕೊಳ್ಳುತ್ತಿದ್ದರು. ತೊಗರಿ ಕಟಾವು ಆದ ತಕ್ಷಣ ರೋಣಗಲ್ಲು ಹೊಡೆದು ತೊಗರಿ ಒಣಗಿಸಿ ಕೆಮ್ಮಣ್ಣು ತುಂಬಿ ಹಸನು ಮಾಡಿದ ಮೇಲೆ ಕೆಮ್ಮಣ್ಣು ಹಚ್ಚಿ ನೀರುಣಿಸಿ ಒಣಗಿಸಿದ ಮೇಲೆ ವರ್ಷಾನುಗಟ್ಟಲೆ ಆದರೂ ಹಾರುವ ಚಿಟ್ಟೆಗಳು ತೊಗರಿ ಸನಿಹಕ್ಕೆ ಬರುತ್ತಿರಲಿಲ್ಲ. ತೆನಿ ಕೋಯ್ದಮೇಲೆ ಸಾಲಿನ ನಡುವೆ ಬಿತ್ತಿದ್ದ ಹುರುಳಿ ಬರೋದು. ಕಾಲು ಎಕರೆ ಯಷ್ಟು ಮನೆಗೆ ಬೇಕಾದ ಮೆಣಸಿನಕಾಯಿ, ಅದರ ಸುತ್ತಲೂ ಹಿರೇಕಾಯಿ ಚೆಂಡುಹೂವು ದನಿಯಾ ಜೀರಿ ಒಂದು ಸಾಲು ಈರುಳ್ಳಿ ಸಾಸಿವೆ ಎಲ್ಲಾ ಸಾಮಾನುಗಳು ಹೊಲದಲ್ಲೇ ಬೆಳಯುತ್ತಿದ್ದರು. ಹಾಗಾಗಿ ಸುಗ್ಗಿಕಾಲ ಮುಗಿಯೋ ಮಟನೂ ಸಾಣೇರ ಹೂಗಳು. ತರವಾರಿ ಸೊಪ್ಪು ಸಿಗುತ್ತಿತ್ತು. ಚವಳಿ ಕಾಯಿ, ಬೆಂಡೆಕಾಯಿ, ಟಮೋಟೊ, ಸೋರೆಕಾಯಿ ಆರು ತಿಂಗಳ ಮಳೆಗಾಲದಲ್ಲಿ ತಿಂದು ಸಾಕಾಗುವಷ್ಟು ಬೆಳೆ. ಹೆಚ್ಚಿನದನ್ನು ಪಕ್ಕದ ಹೊಲದವನಿಗೊ, ಎತ್ತು ಮೇಯಿಸಾಕ ಬಂದವಳೊ, ಪಾಪಿ ಪರದೇಶಿ ತಿಂದುಂಡು ಉಳಿಯುತ್ತಿತ್ತು. ಚೆಂಡೂವು ಸರಿಯಾಗಿ ದೀಪಾವಳಿಯ ಕಾಳಿ ಆಮಾಸೆ, ಬಲಿ ಪಾಡ್ಯಕ್ಕೆ ಅರಳುತ್ತಿತ್ತು. ಅದನ್ನು ಜೋಪಾನವಾಗಿ ಕಾದು ಮುಂಚಿನ ದಿನ ಸಂಜೆಗೆ ಕೋಯ್ದು ಬೆತ್ತದ ಪುಟ್ಟಿ ಒಳಗೆ ಹಾಕಿ, ನೀರು ಚಿಮುಕಿಸಿ, ಎರಡುಮೂರು ದಿನಗಳ ಮಟಾನು ಇಟ್ಟು, ಸರಗಳ ಪೋಣಿಸಿ ಎತ್ತುಗಳಿಗೆ ಬಾಗಿಲಿಗೆ ಕಟ್ಟುತ್ತಿದ್ದರು. ಹಂಗಾಗಿಯೇ ಭಗನ್ಯನಾಯ್ಕ ಮಕ್ಕಳಂದಿಗ ಅಂತೇಳಿ ಕಾಸಿಗೆ ಕಾಸು ಸೇರಿಸಿ ನಾಕು ಕಾಸು ಸಂಪಾದಿಸುತ್ತಿದ್ದ. ಸಿಕ್ಕ ಜಮೀನು ಖರೀಧಿಸುತ್ತಿದ್ದ. ಇಡಿ ತಾಂಡದ ಮಂದಿ ಬಗನ್ಯಾನನ್ನ ಹೆಂಡದಂಗಡಿ ಯೊಳಗ ನೋಡಬೇಕಂಬ ತವಕ. ಆದರೆ ಯವತ್ತೂ ಯಾರ ಕಣ್ಣಿಗೂ ಬಿದ್ದಿರಲಿಲ್ಲ. ಸಂಜೆ ಮುಕ್ಕರಗೌಳಕ್ಕೆ ಹೋದ ಮಂದಿ ಕುಡಿತ ಕುಡಿತ, ದ್ಯಾಮ, "ಅಣ್ಣ ಬಾಗಿಲ ಹಾಕ್ತಿನ್ರಪ್ಪೊ, ಏಳ್ರಿನ್ನ" ಅಂತೇಳಿ ಹೊಯ್ಕಂಡ್ರು ಸವರಾತ್ರಿಮಟ ಕುಡಿಯೋದ ಕಮ್ಮಿ ಹಲ್ಪಿ ಹೊಡೆಯೋಗ ಬರೋರೆ ಹೆಚ್ಚು.

ಸಣ್ಣೀರ ಮಾತ್ರ ಬಗನ್ಯಾನಾಯ್ಕ ಕೈಯಾಗ ಹೊಡ್ತ ತಿಂದಿದ್ದನ್ನು ಹೆಂಗಾನ ಮಾಡಿ ವಾಪಾಸು ಕೋಡೋದಕ್ಕ ಕಾದಿದ್ದ. ದುಡಿಮೆಯೊಳಗ ಏನು ಮಾಡಿದರೂ ಮಿರಿಸೋದಕ್ಕೆ ಆಗದೆ ದೈಹಿಕವಾಗಿ ಅವನ ಮೇಲೆ ಅಕ್ರಮಣ ಮಾಡಿಯಾದರೂ ತನ್ನ ಸೇಡನ್ನು ತೀರಿಸಿಕೊಳ್ಳೋಕೆ ಚಿಂತಿ ಮಾಡಿದ. ಸಾಲದಕ್ಕೆ ಪೂಜಾರಿ, ಸ್ವಂತ ಅವನ ತಮ್ಮ ಪಕ್ಕೀರ, ದಲ್ಲಾಳಿ ದರಗ್ಯನಾಯ್ಕ, ಕಡೇಮನಿ ಕೃಷ್ಣ, ಹೆಂಚಿನ ಮನಿ ಹಳದು ನಾಯ್ಕ ದಿನೆ ದಿನೆ ಗುಂಪು ದೊಡ್ಡದಾಗುತ್ತಾ ಹೋಯಿತು. ಹೀಗೆ ಬೆಳೆದು ದೊಡ್ಡದಾಗಿ ಗುಂಪು ಒಳ್ಳೆಯದನ್ನೇನು ಮಾಡಲಾಗದೆ, ಕೆಟ್ಟದನ್ನು ಮಾಡಲಾಗದೆ ಪೆಚಾಡುತ್ತಿದ್ದರು. ಅದೇ ಸಂದರ್ಭಕ್ಕೆ ಸರಿಯಾಗಿ ತಾಂಡಾದ ಹಾಸಿಗೆ ಒಳಗೆ ಇದ್ದ ನರದಾಪುರದ ಉಪ್ಪಾರ ಚೌಡನ ಹದಿನೈದು ಎಕರೆ ಜಂಈನು ಏನೋ ಅಡಚಣೆಯಿಂದ

ಮಾರೋದಾಗಿ ಸೀದಾ ಬಂದವೆನ ಬಗನ್ಯಾನ ಹತ್ರ ಚರ್ಚೆ ಮಾಡಿದ. ಬಗನ್ಯಾ, "ಆಯ್ತು ಚೌಡಣ್ಣ, ನಾನು ನಾಕು ಮಕ್ಕಳಂದಿಗ ಏನೋ ನೀವು ಮಾರ್ತೀರಿ ಅಂದ್ರ ನಾ ಒಲ್ಲೆ ಅನ್ನಂಗಿಲ್ಲ. ಸರ್ವತಪ್ಪ ಭಟ್ರನ್ನ ನಡಕ್ಕ ಇಟ್ಕಂಡು ವ್ಯವಹಾರ ಮುಗ್ಸಾನು." ಅಂದ. ಸುತ್ತ ಯಾರು ಇಲ್ಲ ಅನ್ನೋದನ್ನೆ ಖಾತ್ರಿ ಪಡಿಸಿಕೊಳ್ಳಾಕ ಒಮ್ಮೆ ಕ್ಯಾಕರಿಸಿದ. ಊರಿಂದ್ಲ ಚ್ಯಾಮನಾಯ್ಕ ಮಾವಿನ ಮರದ ಹಿಂದ ಇದ್ದಂಗ ಸುಳಿವ ಕಂಡಿದ್ದೆ ಬಗನ್ಯಾ ಸುಮ್ಮನಾದ. ಆದ್ರ ಸಾದಾಬೂದಾ ಚೌಡ, "ಆಯ್ತು ಬಿಡು ಯಜಮಾನ, ನೀ ಏನೋ ಅರಿಲಾರದವನಲ್ಲ. ಬಗನ್ಯಾ ನಾಯ್ಕ ಹೆಂಗಂತೆ ಸುತ್ತ ಆರು ಹಳ್ಳೀಗೂ ಗೊತ್ತೈತೆ. ಅಲ್ಲೋ ನಾಯಕಪ್ಪ ನಮ್ಮಪ್ಪಂದು ನಿಮ್ಮಪ್ಪಂದು ಭಾರಿ ಮ್ಯಾಳೀತ್ತು. ಏನಪ್ಪ, ನಮ್ಮಪ್ಪ ಈಗ ಹಾಸಿಗಿಗೆ ಬಂದ್ರ ಬರಿ ಪಂಪಾನಾಯ್ಕ ಅಂತೇಳಿ ಅನ್ನವ. ಏಯ್ ಒಂದು ಕಾಲದಾಗ ನಮ್ಮಜ್ಜ ನಿಮ್ಮ ಮನಿಯಾಗ ಉಂಡಾಣೋ ಮರಾಯ. ಆ ಕ್ರಿಯೆಗೆ ಈಗ ನಿನಗೆ ಜಮೀನು ಮಾರಬೇಕಂತ ನಾವೆಲ್ಲ ಅಣ್ಣತಮ್ಮಂದಿರು ಮಾತಾಡಿಕೊಂಡೀವಿ. ಅದೇನು ಕೊಡು ತಗೋಳದೈತಿ ನೀ ಅಂದ್ಯಲ್ಲ ಹಂಗ ಮಾಡಾನು, ಏನಪ್ಪ. ವ್ಯವಹಾರ ವ್ಯವಹಾರವೆ, ನಾಳೆ ನಿನ್ನಮನ್ಯಾಗ ನಾ ಒಂದು ರೊಟ್ಟಿ ಉಣ್ಣಬೋದು, ನೀ ನನ್ನ ಮನ್ಯಾಗ ಒಂದು ರೊಟ್ಟಿ ಉಣಬೋದು. ಆದ್ರ ವ್ಯವಹಾರ ಶುದ್ಧ ಇರಬೇಕು. ಅದೇ ಬಾಳ ಕಾಲ ಉಳಿಯೋದು." ಹೊಟ್ಟೆಯೊಳಗಿದ್ದದನ್ನೆಲ್ಲ ಚಾಚು ತಪ್ಪದೆ ಹೊರಗ ಹಾಕಿದ್ದ. ಸಂಜಿಮುಂದ ಮರದ ಹಿಂದೆ ಕಾಲ್ಮಡಿಗೆ ಕುಂತಿದ್ದ ಮನುಷ್ಯನ ಆಕೃತಿ ಅಸ್ಪಷ್ಟವಾಗಿತ್ತು. ಭಗನ್ಯಾನಾಯ್ಕನಿಗೆ ಸುದ್ದಿ ಒಂದು ಕಡೀಗ ಖುಷಿ ಕೊಟ್ಟರೆ. ತನ್ನೆದುರಿಗೆ ಈ ಸುದ್ದಿ ಮತ್ತೊಬ್ಬನ ಕಿವಿಗೆ ಬಿತ್ತಲ್ಲಾ, ಅದು ಮುಂದೆ ತಾಂಡದಾಗ ಟಾಂಟಾಂ ಹೊಡೆದು, ಮೈಮೇಲು ಬಟ್ಟೆ ಇಲ್ಲದವನೂ ನಾಳೆ ಕಟ್ಟೆಗೆ ಕುಂತು ನಂದು ಇರ್ಲಿ ಅಂತ ಮೂಗು ತೂರಿಸ್ತಾನೇನು ಅಂತ ಬೇಜಾರಾತು. ಆದ್ರು ಸುದ್ದಿ ಅಗೋದೆ, ಮಂದಿ ಅಡ್ಡಗಾಲು ಹಾಕೋರೆ, ಊರು ಇದ್ದಹತ್ರ ಇದೆಲ್ಲಾ ನಡೆಯೋದ ಅಂತಂದು ಸಮಾಧಾನ ಮಾಡಿಕೊಂಡ. ಆದ್ರ ತನಗೆ ಬಂದ ಸುದ್ದಿಯನ್ನು ಅವನ ಹೆಂಡತಿ ಚಾವಳಿ ಹತ್ರ ಬಿಟ್ರೆ ಇನ್ಯಾರ ಹತ್ರಾನು ಹಂಚಿಕೊಳ್ಳಾಕ ಹೋಗಲಿಲ್ಲ.

ವಿಷಯ ದಿನಕ್ಕೊಂದು ರೂಪ ಪಡಕೊಳ್ಳಾಕ ಹತ್ತಿತು. ಹೊಲ ಆಗಲೆ ಸಣ್ಣಿರ ತಗೊಂಡು ಅಂತ ಸುದ್ದಿ ಮಾಡಿದ್ರು. ಹಟ್ಟಿ ನಾಯ್ಕನ ಮಗ ಸಿತಾನಾಯ್ಕ ಏನೋ ಹೋಗಿ " ಲೇ ಬೇಡ, ಅದೇಟಕ್ಕಾರ ಕೋಡು, ಹೊಲ ಮಾತ್ರ ನನಗ ಬಿಡಿಬೇಕು. ನಾನು ತಾಂಡದ ಹಟ್ಟಿನಾಯಕನ ಮಗ. ತಾಂಡ ಕಟ್ಟಿದವರು ನಾವ. ಅದು ಅಲ್ಲದೆ ನೀ ಮಾರುತ್ತಿರೋದು ನಮ್ಮ ಮುತ್ತಜ್ಜನ ಆಸ್ತಿ ಮಾರೋದಿದ್ದರೆ ನಮಗೆ ಮಾರಬೇಕು." ಅಂತ ಗದರಿಸಿ ಬಂದಾನ ಅಂತ ಕೆಲ ಮಂದಿ ಮಾತಾಡಿದರೆ. ಇನ್ನೂ ಕೆಲವರು, ಮಟಗಾನಹಳ್ಳಿ ಅಗಸರ ಶಿವಾನಂದಗ ಆಯ್ತು ಅಂತ ಮಾತಾಡೋರು. ಇನ್ನೂ ಒಸಿ ಮಂದಿ, ಏಯ್ ಜಮೀನು ಅಗಲೆ ದವ್ಯನೂರು ದಲ್ಲಾಲಿ ಹುಸೇನಿಗೆ ಆಯ್ತಂತೆ. ಔಡಪ್ಪ ಬಗನ್ಯಾನ ಹತ್ರ ಮಾತಾಡಿದ್ದು ಒಂದೆ ಶಿವಾ. ಗಾಳೀ ಸುದ್ದಿಗಳು ತಾಂಡದ ತುಂಬ ಹರಡಿದ್ದೆ ಹರಡಿದ್ದು. ಅಷ್ಟೆ ಅಲ್ಲ, ದಿವಸಾ ಚೌಡಪ್ಪ ಅವರ ತಮ್ಮ ವಿಷ್ಣುನ ಮಂದಿ ಬಂದು ಬಂದು ಕೇಳದ್ರ ಅಂತ. ತಾಂಡನೂ ಪೂಜಾರಿಗೂ ಒಂದು ಕೈ ನೋಡಿ ಬಿಡಾನಂತ. ತನ್ನ ಚೇಲ ದಲ್ಲಾಳಿ ದರಗ್ಯಾನಾಯ್ಕನ ಮುಂದಿಟ್ಕೊಂಡು ನಾರಾದ ಪುರಕ್ಕೆ ಹೊರಟ. ಗಂಗಮಾಳಿ ಅಂಗಡಿಯೊಳಗ ಮಿರ್ಚಿ ಚಾ ತಗೊಂಡು ತಿಂದ ಅದಮೇಲೆ ಕಿಸೆ

ತಡಕಾಡುತ್ತಿದ್ದಂಗೆ ಮಾಡಿ, "ಏಯ್. ತಾಯಿ ಗಂಗಮಾಳವ್ವ, ಅದು, ನಮ್ಮಾಕಿ ಹೊತ್ತಾರೆ ನ್ನ ಜೇಬು ತಡಕಾಡಿ ಇರೊ ರೊಕ್ಕನೆಲ್ಲಾ ತಗಂಡು ಹೋಗ್ಯಾಳ ಮಾರಾಳೆ. ನಾಳೆ ಮುಂಜಾನೆ ಹನ್ಮಂತ ದೇವರಾಣೆ ಬಂದು ಕೊಟ್ಟಿ ಹೋಕ್ಕಿನವ್ವ." ಕಿವಿಮಟ ಹಲ್ಲುಗಿಂಜಿ ಹೇಳಿದ್ದ. ಗಂಗಮಾಳಿಗೆ ಪೂಜಾರಿ ಏನು ಹೊಸಬನಲ್ಲ. ಅವನ ಹನ್ಮಂತ ದೇವರಾಣೇನು ಹೊಸದಲ್ಲ. ಮಂದ್ಯಾಗ ಮಾನ ತೆಗೆಯೋದ ಪಾಡಲ್ಲ ಅಂಧಾಕಿನ, " ಪೂಜಾರಪ್ಪ ಎಷ್ಟೋ ಸಲ ಹಿಂಗ ದೇವರಾಣಿ ಹಾಕ್ತಿ. ಅದು ನಿಮ್ಮ ಸೇವಾಭಾಯಿನ ಮ್ಯಾಲೆ ಆಣಿ ಇಡಾಕಿಲ್ಲ. ನಮ್ಮ ಹನ್ಮಪ್ಪ ನಡಕ್ ತಂದು ಸಂಕಟದಾಗ ಸಿಕ್ಕಂತಿ, ನೋಡು ಮತ್ತ." ಬಾಯಿ ಬಿಟ್ಟು ಹೇಳಿದಳು. ಪೂಜಾರಿಗೆ ಪೇಚಿಗಿಟಕಂತು. ಆದರೂ ಭಲೆ ಘಾಟಿನನಮಗ, "ಏಯ್. ಏನವ್ವ ಹಂಗಂತಿಯಾ, ಏನೋ ಅವಸರದಾಗ ಬಂದೆ, ಅಂದಂಗ ನಾನೇನು ನೂರಾರು ಕಿಲೋಮೀಟರ್ ದೂರ ಅದೀನಾ, ಎಡವಿ ಬಿದ್ರ ನಮ್ಮೂರಾಗ ಇರ್ತೀವಿ. ಹಿಂಗ್ಯಾಕ ಮಾತಾಡಿ ಗಂಗಮಾಳಮ್ಮ, ನೀ ಏನು ಆರಿಯದವಳೇನವ್ವ." ಗಿಲೀಟಿನ ಮಾತಾಡಿ ಅಕಿನ್ ಮಳ್ಳುಮಾಡಿ ಕಾಲುಕಿತ್ತ. ಉಪ್ಪಾರ ಚೌಡಪ್ಪನ ಮನಿಗೆ ಹೋಗಾಕ ದಲ್ಲಾಳಿ ದರಗ್ಯಾನ ಕೂಗಿದ. ಅವನಾಗಲೆ ಯಾರದೋ ಎಮ್ಮಿ ಕೋಣನಾ ವ್ಯಾಪಾರಕ್ಕೆ ನಿಂತಿದ್ದ. ಇನ್ನೇನು ವ್ಯಾಪಾರ ಕುದ್ರುಬೇಕು. ಪೂಜಾರಿಕಡಿಂದ ಬುಲಾವ್ ಬಂದಿತು. ದರ ನಿಗದಿ ಮಾಡಿದವನೆ. " ಆಟು ಬಂದೆ." ಅಂತೇಳಿ ಪೂಜಾರಿ ಕಡೀಗೆ ಓಡಿದ.

ಚೌಡಪ್ಪನ ಮನಿ ಮುಂದಿನ ಆವಾರದಾಗ ಯಾರಪ್ಪನ ಅಪ್ಪನೆಯೂ ಕೇಳದಂಗೆ ಹೋಗಿ ಕುಂತ ಪೂಜಾರಿ, "ಚೌಡಪ್ಪ, ಏಯ್ ಚೌಡಪ್ಪ. ಅದಿಏನು." ಹೊಲದ ಬಾಬ್ತು ಪೆಂಡಿ ಕಟ್ಟಿಕೊಂಡು ತಂದಹಾಗೆ ಕೂಗಿದ. ರೊಟ್ಟಿ ಉಂಡು ಕೈ ತೊಳೆದು ನೀರು ಕುಡಿತ್ತಿದ್ದ ಚೌಡಪ್ಪ, " ಆಲ ಇವ್ನ ಗುಡದಹಟ್ಟಿ ಪೂಜಾರಿ ಯಾಕ ಬಂದ ಅಂತೀನಿ." ಯೋಚಿಸಿದ. ಬಾಯಿಯೊಳಗ ನೀರು ಹಾಕಿ ಮುಕ್ಕಳಿಸಿ ಉಗಿದವನೆ ವಲ್ಲಿಯ ಸೆರಗಿಂದ ಕೈ ಬಾಯಿ ಒರೆಸಿಕೊಳ್ಳುತ್ತಾ ಪಡಸಾಲೆ ಆವರಣಕ್ಕೆ ಬಂದ. "ಬಾ ಮಾರಾಯ ಏಟೊತ್ತಿಂದ ಕಾಯುಕ ಹತ್ತೀವಿ, ನೀ ನೋಡಿದ್ರ ಒಳಗೆ ಅರಮನಿಯೊಳಗ ಕುಂತಿಯಾ." ಹಿಂದು ಮುಂದು ನೋಡದೆ ತಡಾಯಿಸಿದ ಪೂಜಾರಿ. "ಎಲ್ಲಿ ಅರಮನಿ ಪೂಜಾರಪ್ಪ, ಹೊಲದಿಂದ ಈಗ ಬಂದು ಎಲ್ಡು ರೊಟ್ಟಿ ತಿಂದೆ. "ಲೋಕಾಭಿರಾಮವಾಗಿ ಹೇಳಿದ ಚೌಡಪ್ಪ. ಹದಿನೈದು ಎಕರೆ ಜಮೀನು ಒಂದೇ ಸರ್ವೆನಂಬರು. ಇಡೀ ಹೊಲ ಆಂಗೈಹಂಗಿತ್ತು. ಮಳಿ ಬಿತ್ತಂದ್ರ ಒಂದು ಹನೀನು ಹರಿದು ಆಚೀಚೆ ಹೋಗದಂಗೆ ಸಮತಟ್ಟಾಗಿತ್ತು. ನೊಂದ ಪ್ರತಿಯೊಬ್ಬನಿಗೂ ಹೊಲ ಇದ್ರೆ ಹೀಂಗಿರಬೇಕು ಅನಿಸುತ್ತಿತ್ತು. ಚೌಡಪ್ಪನ ಅಣ್ಣ ತಮ್ಮಂದಿರು ಜಗಳದಾಗ ಹೊಲ ಮಾರುವ ಅನಿವಾರ್ಯತೆ ಬಂದಿತ್ತೆ ವಿನಃ ಅವರೇನು ಮಾರೋ ಪೈಕಿ ಅಲ್ಲ. ಗುಡದನಹಟ್ಟಿಯೊಳಗೆ ಹೇಳಿಕೊಳ್ಳೋ ಹಂಗಿದ್ದ ಉಪ್ಪಾ ಹುಲವಪ್ಪಂದು ಹಿಂದೆ ಭಾರಿ ನಡೀತಿತ್ತು. ಈಗ ಬಕ್ಕಬರ್ಲೆ ಬಿತ್ತು. ದಿನ್ನಿಸಾಬಿ ಮನಿ ತುಂಬ ಮಕ್ಕಳು. ದುಡಿತವೆ ಆದರೆ ಏನೂ ಪ್ರಯೋಜನ ಇಲ್ಲ. ದಲ್ಲಾಳಿ ಯಂಕ, ಸಣ್ಣೀರ ಮತ್ತ ಅವರ ಆರೇಳು ಮಕ್ಕಳ ದುಡಮಿಯಿಂದ ಹಾರಾಡುತ್ತಿದ್ದ. ಆದ್ರ ಅವನಿಗೆ ಇದೆಲ್ಲಾ ಖಯಾಲಿ ಇರಲಿಲ್ಲ. ಮೇಗಳ ಓಣಿಯ ಚವ್ಹಾಣ್ ಪಂಗಡದವರು ಈ ಕರಮ್‌ತೋಟಗ ಚೆಳ್ಳೆ ಹಣ್ಣು ತಿನ್ನಿಸಬೇಕೆಂದು ಸುಕಾ ಸುಮ್ಮನೆ ಬಂದು ಹೊಲದ ವ್ಯಾಪಾರದಲ್ಲಿ ಮೂಗು ತೂರಿಸಿ ರೇಟು ಹೆಚ್ಚು ಮಾಡ್ಯಾರೆ ವಿನಃ ಹೊಲ ಖರೀಧೀಸುವ ಧೈರ್ಯ ಇರಲಿಲ್ಲ. ಪೂಜಾರಿ ಏನೆಲ್ಲ ಪ್ರಯತ್ನ ಮಾಡಿದರೂ ಚೌಡಪ್ಪ ಮಾತ್ರ

ವ್ಯಾಪಾರದ ಯಾವ ಸುಳಿವನ್ನೂ ಬಿಡಲಿಲ್ಲ. "ಏಯ್ ಚೌಡ, ಆಟು ದೂರ ನಿನ್ನ ನಂಬ್ಕೊಂಡು ಬಂದೀನಿ, ನೀ ನೋಡಿದ್ರೆ ಭುಜಾನೆ ಮುಟ್ಟಿಸುವಲ್ಲಿ." ಸಿಟ್ಟಿಂದ ಹೇಳಿದ ಪೂಜಾರಿ, " ಸತ್ಯ ಇದ್ದರೆ ನಾನೆ ಕರೀತೀನಿ ನಿನ್ನ. " ಚೌಡ ಜಾರಿಕೊಂಡಿದ್ದ. ಅವನು ಅದನ್ನ ಹೇಳೋದಕ್ಕೆ ಕಾರಣ ಇತ್ತು. ಪೂಜಾರಿಯಂತವನು ಇಡಿ ಪ್ರಪಂಚಕ್ಕೆ ಗೊತ್ತಿತ್ತು. ಸತ್ಯ ಬಿಟ್ಟು ಎಲ್ಲನೂ ಹೇಳ್ತಾನೆ, ಮಾಡ್ತಾನ. ಹಾಗಾಗಿ ಅವನ ಬಗ್ಗೆ ಮಂದಿ ಅಷ್ಟೇನು ತಲಿ ಕೆಡಸಿಕೊಳ್ತಾನೆ ಇರಲಿಲ್ಲ. ಪೂಜಾರಿಗೆ ಅದೇನು ಅನಿಸಿತೊ ಎದ್ದವನೆ ಟವೇಲು ಕೊಡವಿ ಕೊಂಡು ಹೊರಟು ಬಿಟ್ಟ.

ಬಗನ್ಯಾ ಮಾತ್ರ ಸರಿಯಾಗಿಯೇ ಪಟ್ಟು ಹಾಕಿದ್ದ. ಚೌಡ ಮತ್ತು ಅವನ ಅಣ್ಣ ತಮ್ಮಂದಿರು ಮಿಸುಗಾಡದಂತಾಗಿದ್ದರು. ಸೇವಾಭಾಯ ಮೆಟ್ಟೊಮುಂದೆ ಗುಡದಮ್ಮನ ಗುಡಿ ಕಟ್ಟಿಮೇಲೆ ಮಂದಿ ತುಂಬಿಕೊಂಡಿದ್ದರು. ಗುಡದಲೇ, ದೊಂಬಲೂರು, ನಾರದಪುರ ಶಂಕರನಟ್ಟಿ ಚೋಳಿ ಹಟ್ಟಿ, ಚಾಂಗಲಾಪುರ, ಹೊಸಕ್ಯಾಂಪ್ ಥೇಗೂರ. ಡಣ್ಣಾಯನಹಟ್ಟಿ. ಸೊನ್ನಾಪುರ, ಸಂಗನಹಳ್ಳಿ ಗೌರಿಹಳ್ಳಿ ಗಪನೂರು, ಕೋಟಿಪೂರ, ಕೊಕಟನೂರು, ಕೋಟಿತಾಂಡ, ಕವಲೂರು ತಾಂಡ ಮಂದಿ ಅದೆಂಗೆ ಸುದ್ದಿ ತಗದಿದ್ರೂ ಅಂತಾನಕಕ್ಕಿರಿದು ತುಂಬಿದ್ದರು. ಸರ್ವತಪ್ಪ ಭಟ್ಟರಿಗೆ ತಲೆ ತಿರುಗಿ ಹೋಗಿತ್ತು. ಈ ಪಾಟಿ ಮಂದಿಯೊಳಗ. ಬಗನ್ಯಾನಾಯ್ಕನಿಗೆ ಹೊಲದ ವ್ಯಾಪಾರ ಆಗೋದು ನಾ ಕಾಣೆ ಅಂತ ಮನಸ್ಸಿನೊಳಗೆ ವಿಚಾರ ಮಾಡಿದ್ರು. ಅದರೂ ಅವನ ನಸೀಬದಾಗ ಅದೇ ಹೊಲನ ದುಡಿಮಿ ಮಾಡೋದು ಇತ್ತಂದ್ರ. ಅಹಿರಾವಣ, ಮಹಿರಾವಣ ಬಂದ್ರೂನುವೆ ತಪ್ಪಸಾಕಗಲ್ಲ. ಅಂತೇಳಿ ಸ್ವಯಂ ಸಮಾಧಾನ ಪಟ್ಟುಕೊಂಡು ಮಂದಿ ಮಾತು ಕೇಳತೊಡಗಿದರು. ನಾರಾದಪುರದ ಆಗಸ ಕೆಂಪ ಮಾತ್ರ ಎಲ್ಲರಿಗಿಂತಲೂ ಮುಂಚೆ, ಮಂದಿ ತನ್ನ ಬಿಳಿ ಧೋತ್ರ, ಬಿಳಿ ಅಂಗಿ ನೋಡ್ಲಿ ಅಂತಾನೆ ಎದ್ದು ನಿಂತು, "ಶಾಂತಿ, ಮಾತಾಡಬ್ಯಾಡ್ರಿ ಹೊಲ ತಗೋಳ್ಳದಕ್ಕ ನಾವು ಬಂದೀವಿ. ಏನ್ರಪ್ಪ, ನನಗ ಅನಿಸೋಮಟ್ಟಿಗೆ ನಾನಂತು ಚೌಡ ಏನು ರೇಟು ಅಂತಾನೋ ಅದನ್ನ ಕೊಡಾಕ ಸಿದ್ಧಾಗಿ ಬಂದೀನಿ, ಹೊಸಕ್ಯಾಂಪ್ ಚಿಂಪ್ಲಾ, ಶಂಕರನಹಟ್ಟಿ ಶಂಭೂಲಿಂಗ, ಚೋಳಿ ಹಟ್ಟಿ ಥಾವು, ಚಾಂಗಲಾಪುರದ ನಮ್ಮ ಕಡಿಮನೆ ಕೊರೆಪ್ಪ, ಗೌರಿಹಳ್ಳಿ ಬಂದಾಸಾಬ್. ಗಣಪನೋರು ಕಾದ್ರಿಸಾಬು, ಕಾಟಿಪುರ ಸಾಕವ್ವನ ಮಗ ಸಂಕಪ್ಪ, ಅದು ಅಲ್ಲದೆ ಬೋ ಮುಖ್ಯವಾಗಿ ಗುಡದಹಟ್ಟಿ ತಾಂಡದ ಪೂಜಾರೆಪ್ಪ, ಹಟ್ಟಿ ನಾಯ್ಕನ ಮಗ ಭೀಮ್ಲಾನಾಯ್ಕ ದಲ್ಲಾಳೀ ಯಂಕನ ತಮ್ಮ ಸಣ್ಣೀರ ಅದಾನ." ಬೇಕಂತಲೆ ಬಗನ್ಯಾನ ಹೆಸರು ಬಿಟ್ಟು ಹೇಳಿ ಮಾತು ಮುಂದುವರೆಸಿ, "ಹೂಂ, ಚೌಡ, ಇನ್ನೂ ಬರೋರಿಲ್ಲಂತ ಕಾಣುತ್ತ. ಶುರುಮಾಡಿಬಿಡು. ಯಾರ ತಾಕತ್ತು ಐತೆ ಅಂವ ತಗೋತಾನ. ನೋಡಾಮ. ಯಾರ ಮುಕ್ಲಾಗ ಜಿಗುಟು ಐತೆ." ಕಲ್ಮೆಲ ಹೋಗಿ ಕುಂತ. ಅಗಸರ ಕೆಂಪ. ಕೆಂಪನ ಮಾತಿಂದ ಚೌಡನಿಗೂ ಸಮಾಧಾನ ಆಗಲಿಲ್ಲ. ಯಾಕಂದ್ರೆ ತಾನೆ ಖುದ್ದಾಗಿ ಹೋಗಿ ಬಗನ್ಯಾನಾಯ್ಕನಿಗೆ ಹೊಲ ಕೊಡಬೇಕಂತ ಹೇಳಿ ಬಂದಿದ್ದ. ಅಣ್ಣ ತಮ್ಮಂದಿರೂ ಕೂಡ ಮಾತಾನಾಡಿಕೊಂಡಿದ್ದರು. ತಮ್ಮ ಭೂಮಿ ಒಳ್ಳೆ ಯೋಗ್ಯನಾದವನಿಗೆ ಒಲಿಬೇಕಂತೇಳಿ. ಆದ್ರ ಖರೀದಿ ದಿನ ಅದರ ಚಿತ್ರಣವೇ ಬದಲಾಗಿತ್ತು. ನೂರಿನ್ನೂರು ಮಂದಿ ಸುತ್ತಮುತ್ತ ಹದಿನಾರು ಮೈಲಿಯಿಂದ ಬಂದಾರ. ನಸೀಬು ಯಾರದೈತಿ, ಯಾರಿಗೆ ಅನ್ನದ ಋಣ ಬರದೈತಿ ಆವರಿಗೆ ಹೊಲ ಆಗೋದು. ಚೌಡ ಮನಸ್ಸಿನೊಳಗೆ ಸಮಾಧಾನ ಪಟ್ಟ. " ಕೇಳ್ರಪ್ಪ, ನಾವು ಜಮೀನು ಮಾರ್ತಿದಿವಿ ಅಂದ್ರ ಅರ್ಥ ಹೆಂಗಬೇಕಾರ ಯಾರಿಗೆ ಬೇಕಾರ ಕೋಡಾಕ

ಬಂದೀವಿ ಅಂತಲ್ಲ. ನಮಗೇನು ಅಂತ ಹರ್ಕತ್ ಇಲ್ಲ. ಆದ್ರೂ ಯಾವುದೋ ಒಂದು ಸಣ್ಣ ಹರ್ಕತ್ ಪರೀಬೇಕೈತಿ. ಅದಕ್ಕೆ ಜಮೀನು ಮಾರಾಟಕ್ಕೆ ಬಿಟ್ಟೇವಿ. ಇದರ ಅರ್ಥ ನಾವೇನು ದಿವಾಳಿ ಎದ್ದೀವಿ ಅಂತಲ್ಲ. ಶಂಕರ ಹಟ್ಟಿಯಿಂದ ಗುಡದಹಟ್ಟಿ ತಾಂಡದ ಮಟ ಬಂದು ಹೊಲ ಮಾಡಿ ಫಸಲು ಒಯ್ಯೋದು ಆಟ ಐತಿ.". ಅಣ್ಣತಮ್ಮ ಒಂಭತ್ತು ಮಂದಿಯೊಳಗ ಆಟು ಬುದ್ಧಿವಂತ ಅನಿಸಿಕೊಂಡ ಚೌಡ ಹೇಳಿದ. ಅಣ್ಣತಮ್ಮಂದಿರು ಚೌಡನ ಮಾತಿಗೆ ಬದ್ಧ ಅನ್ನೊದನ್ನ ಸ್ಪಷ್ಟ ಪಡಿಸಿದರು. ಹರಕ್ಕೂ ಸಾಬಿ ಹರಾಜು–ಪರಾಜು ಕೂಗೋದಕ್ಕೆ ಯೋಗ್ಯ. ಎದ್ದವನೆ ಮಂದಿನಡಕ್ಕ ಬಂದು. "ಚೌಡಣ್ಣಂದುಕೆ ಹೊಲ ಸರ್ಕಾರಿ ಸವಾಲ್" ಅಂತಿದ್ದಂಗೆ ಅಗಸರ ಕೆಂಪ, "ನೂರು ರುಪಾಯಿಗೆ ಒಂದು ಎಕರೆ." ಹೆಮ್ಮೆಯಿಂದ ಕೂಗಿ ಮಂದಿ ಪ್ರತಿಕ್ರಿಯೆಗಾಗಿ ಕಾಯುತ್ತಾ ಕೂತ. "ನೋಡ್ರಿ ಅಣ್ಣ ಅಗಸರುದುಕೆ ಕೆಂಪಣ್ಣಕೆ ಎಕರೆಗೆ ನೂರು ರುಪಾಯಿಗೆ ಹೇಳೋನೆ. ಹಾಂ. ಒಂದು ಸಲ" ಎಂದು ಬಾಯಿಬಿಡುತ್ತಿದ್ದಂತೆ, ಹೊಸ ಕ್ಯಾಂಪ್ ಚಂಪ್ಲಾ, "ನೂರಾ ಒಂದು" ಅಂತಿದ್ದಹಾಗೆ, ಚಾಂಗ್ಲಾಪುರದ ಕೊಡೆಪ್ಪ, ಎಂಟಾಣೆ ಏರಿಸಿದ. "ನೂರಾ ಒಂದುವರೆ ರೂಪಾಯಿ," ಅಂತ ಕುಂತ. ದುಡ್ಡಂದ್ರ ಜೀವಾನ ಹೊಂಟೋಗೋ ಕಾಲ, ಕೂಲೀಗೆ ಹೋದ್ರು ಆಣೀ ದಮ್ಮಡಿ, ಸಿಗೋ ಕಾಲದಾಗ ನೂರಂದ್ರೆ ಕನಸು. ಅಂತಾದ್ರಾಗ, ಎಲ್ಲಲ್ಲೋ ಅಡ್ಡಾಡಿ ಅವನಿಗೆ ಇವನಿಗೆ ಟೋಪಿ ಹಾಕಿ ಐನೂರು ಸಾವಿರ ಕೈಯಾಗ ಇಟಕೊಂಡಿರೋ ಅಗಸರ ಕೆಂಪ ಈ ಲಮಾಣ್ಯರೇನು ತಗೊಂಡಾರು ಅನ್ನೊ ಭ್ರಮೆ ಒಳಗೆ ಎಪ್ಪತ್ತು ಇಲ್ಲ ಎಂಭತ್ತು ರೂಪಾಯಿಗೆ ಎಕರೆಗೆ ಮುಗಿಯೋ ಹೊಲನಾ ನೂರು, ಅಂತು ಕೂಗಿ ಎಲ್ಲರನ್ನು ದಿಕ್ಕು ತಪ್ಪಿ ನೋಡಕ್ಕೆ ಎಲ್ಲ ಜಗ್ಗಾಡಿ ನೂರಾಹತ್ತಕ್ಕೆ ಬಂತೆಂದು ಭಗನ್ಯಾನಾಯ್ಕ ದುಡ್ಡು ಜೋಡಿಸೋ ದಾರಿಯ ಯೊಚನೆ ಮಾಡ್ತಾ ಕುಂತಿದ್ದ. ಗೌರಿ ಹಳ್ಳಿ ಬಂದಾಸಾಬ್ ನೂರಾ ಒಂಭತ್ತು ಅಂದಾಗಲೆ ಬಗ್ಗ್ಯಾನಾಯ್ಕ ಎಚ್ಚರವಾಗಿದ್ದು. ಅಲ್ಲಿಮಟ ಸುಮ್ಮನೆ ಕುಂತಿದ್ದ ಕೆಂಪ ನೂರ ಅಂದು ಗಪ್ಪಾಗಿದ್ದ. ಬಗ್ಗ್ಯ ಕೂಗೋದನ್ನ ಕೇಳದೆ ಹೈರಾಣ ಆಗಿದ್ದ. ಅಲ್ಲ ಲಮಾಣಿ ಸೂಳೆ ಮಗ ಅವನ ಸಲುವಾಗಿ ಹರಾಜಿಗೆ ಬಂದೀನಿ ಹೆಗಾರ ಆಡಿ ಅಡ್ಡಿಗಾಲು ಹಾಕಿ ಬಿಳಸಾಕ ಚಕಾರ ಎತ್ತುವನಲ್ಲ, ಯೋಚಿಸುತ್ತಿದ್ದಂತೆ. ಬಗನ್ಯಾನಾಯ್ಕ ನೂರಾಹತ್ತು ಎಂದು ಗುಂಪಿಗೆ ಅಚ್ಚರಿ ಮೂಡಿಸಿದ್ದ. ಅಗಸರ ಕೆಂಪ, " ಅಬ್ಬಾ ಪರವಾಗಿಲ್ಲಲೆ ಧೈರ್ಯ ಐತಿ ಮಗನಿಗೆ. ನಾನು ನೋಡ್ತೀನಿ ಏಟು ಧೈರ್ಯ ಐತಿ ಮಗನಿಗೆ." ಅವನ ಚೇಲ ಅಡವಿತಾವ ಮಾತಾಡತ್ತಿದ್ದಂಗೆ ಹರಕೂಸಾಬಿ "ಸರಕಾರಿ ಸವಾಲ್ ನೂರಾ ಹತ್ತು, ಒಂದು ಸಾರಿ , ಎರಡು ಸಾರಿ ಮೂರು ಸಾರಿ ಅಂದವನೆ ಹೊಲ ಬಗನ್ಯನಾಯ್ಕನಿಗೆ ಮುಗೀತು. ಅಂತೇಲಿ ಕುಂತು ಬಿಟ್ಟ, "ಏಯ್, ನಾನು ಕೂಗ್ತೀನಿ. ಏಯ್ ಹರಕೂ ಸಾಬು ಯಾಕಲೆ ಮುಗಿಸಿದೆ ಬೋಸುಡಿಕೆ." ಅಂದ. "ಏಯ್ ಕೆಂಪಣ್ಣ ನಮ್ಮದು ಕಾ ಹೈ ಬೋಲೊ, ಬಗನ್ಯಾನ ಭಾಯಿದೂಕೆ ನಸೀಬ್‌ಮೇ ಇತ್ತು ಆಯ್ತು. ಹೋಗಿ ತಲೆದು ಮಾಂಸ ತಿಂದು ಎಲ್ಡು ಬಾಟಲಿ ಹೆಂಡ ಕುಡದಕ್ಕೇಸಿ ಮಲಗು.," ಎಂದು ಮಕದ ಮೇಲೆ ನೀರು ಇಳಿಸಿದ. ಬಹನ್ಯನಾಯ್ಕನ ಹತ್ತಿರ ಹೋಗಿ , "ಅಣ್ಣಾ ಹತ್ತುರೂಪಾಯಿ ಹೆಚ್ಚಿಗೆ ಆತು. ಅಲ್ಲ ಇದಾನೆ ಹೆದರಬೇಡ." ಅಂದು ಸವಾಲ್ ಕೂಗಿದಕ್ಕೆ ಒಂದುವರೆ ರೂಪಾಯಿ ಇಸ್ಕೊಂಡವನೆ ಹೋರಟ. "ಕ್ಯಾಬೆ ಹೆಂಡ ಕುಡಿ ಅಂತ ನನಗೇ ಹೇಳ್ತೀಯಾ, ನನಮಗನೆ, ಬಗಲಾಗ ಹಲ್ಲು ಬಂದಾವೇನಲೆ." ಅಂದವನೆ ಹರಕು ಸಾಬಿ ಅಂಗಿ ಕೊಳ್ಳಪಟ್ಟಿ ಹಿಡಿದ. ತನಗೆ ಮುಖ ಭಂಗ

ಆಗಿದನ್ನು ತೋರಿಸ್ಕೊಳ್ಳಾಕ ನಾಟಕ ಮಾಡಿದ. "ಯಾವನ್ಲೆ ಭಗನ್ಯಾ, ಅವನು, ಏಟು ಗಡತ್ರದವನು, ನೊಡ್ತೀನಿ."ಹಾರಾಡಿದ. ಭಗನ್ಯಾನ ತಮ್ಮ ಪಕ್ಕೀರ ಅವನ ದೊಡ್ಡ ತಂಗಿ ತಾಂಡದಾಗೆ ಮದ್ವಿ ಮಾಡಿ ಕೊಟ್ಟಿದ್ದ ಹಾಮ್ಲಿ ಓಡೋಡಿ ಬಂದಿದ್ಲು. "ಅಣ್ಣ ಅವ್ವ ಸಾಯೋ ಮುಂದ." ಯಾವತ್ತು ಮಾತಾಡದವನು, ಅವನ ವಿರೋಧಿಗಳ ಪಾಳೆದೊಳಗೆ ಯಾವಾಗಲೂ ಕೇಡು ಬಯಸುತ್ತಿದ್ದವನು, ಈಗ ಮರ್ಯಾದೆ ಕೊಡುತ್ತಾ ಹಲ್ಲುಗಿಂಟಿ ಮಾತಾಡಲಿಲ್ಲ. ಹಾಮ್ಲಿ, "ಅಣ್ಣ ನಮಗೂ ಒಂದೊಂದು ತುಂಡು ಜಮೀನು ಕೊಟ್ರೆ ಬದಕ್ಕೊಂತೀವಿ ನಾವು ನಿನ್ನಂಗ." ಗೋಗರಿಯ ತೊಡಗಿದಳು. ನಾಕು ಉದ್ದನೆಯ ಪಟ್ಟಿಗಳು ಒಂದರ ಪಕ್ಕಕ್ಕೆ ತಂಗಿಗೆ, ಇನ್ನೊಂದು ಪಕ್ಕಕ್ಕೆ ತಮ್ಮನಿಗೆ ಅಂತ ನಿರ್ಧರಿಸಿ ಅವರಿಬ್ಬರಿಗೂ ಅರ್ದ ಯಾಕಂದರ ಅವನ ತಾಯಿ ಸಾಯುವಾಗ, "ನೋಡಮಗ ಈ ಕರಮತೋಟ್ ವಂಶದಲ್ಲಿ ಹುಟ್ಟಿದವರು ನೀವೇ ನಾಕು ಮಂದಿ, ಒಬ್ಬ ತಂಗಿ ಬ್ಯಾರೆ ಉರಾಗದಾಳ, ಇರೋ ನೀವು ಮೂವರು ಒಟ್ಟಿಗೆ ಇರ್ರಿ. ಪಕ್ಕೀರ ಬೋಳ ಶಂಕರ ಇದ್ದಂಗ, ಅವನ್ನ ಸರಿಯಾಗಿ ನೋಡಿಕೋ, ನೀ ಏನು ಆಸ್ತಿ ಮಾಡಿದ್ರು ಆದ್ರಾಗ ಒಂದು ಕಾಲು ಪಾಲು ಕೊಡು." ಅಂತ ಮಾತು ತೊಂಡಿದ್ಲು ಹಾಗಾಗಿಯೇ ಹದಿನೈದು ಎಕರೆ ಜಮೀನಿನಲ್ಲಿ ಮೂರವರೆ ಎಕರೆ ಹಾಮ್ಲಿಗೆ, ಮೂರುವರೆ ಎಕ್ರೆ ಪಕ್ಕೀರನಿಗೆ ಉಳಿದ ಏಳೂ ಎಕರೆ ಅವನು ಇಟ್ಟುಕೊಳ್ಳುವ ಯೋಜನೆಯನ್ನು ಮಾಡಿದ. ಪಂಚನಾಮೆ ಮಾಡಿ ಅವರವರ ಹೆಸರಿಗೆ ಹೊಲ ನೊಂದಣೀ ಮಾಡಿಸುವ ದುಡ್ಡು ಕಟ್ಟುವ ವಿಚಾರಗಳನ್ನು ಸರ್ವತಪ್ಪ ಚೌಡನಿಗೆ ಹೇಳಿದ. ಅದರ ದುಡ್ಡು ಕಟ್ಟಿ ಪಂಚನಾಮೆಯನ್ನು ಭಗನ್ಯನಾಯ್ಕನೇ ಇಟ್ಟುಕೊಂಡ. ಬಂದ ಮಂದಿ ಒಳ್ಳೆಯದಾಯಿತು ಬಿಡು, ದುಡಿಮೆ ಮಾಡೋ ವ್ಯಕ್ತಿಗೆ ಹೋಲ ಸೇರಿತು ಅಂತೇಲಿ ಸಂತೋಷಪಟ್ಟು ತಮ್ಮೂರಿಗೆ ಹಿಂತಿರುಗಿದರು. ಇನ್ನೂ ಕೆಲವರು ಚೌಡ ಮೋಸ ಮಾಡಿದ. ಸರ್ವತಪ್ಪ ಮೋಸ ಮಾಡಿದ. ಅವನು ಮೋಸ ಮಾಡಿದ ಇವನು ಮೋಸ ಮಾಡಿದ ಅಂತೇಳಿ ಶಾಪ ಹಾಕುತ್ತಾ ಒಂದು ದೊಡ್ಡ ಗುಂಪನ್ನೆ ಕಟ್ಟಿಕೊಂಡು ತಮಗಾದ ನಿರಾಶೆಯನ್ನು ಹಂಚಿಕೊಂಡರು. ಕಲ್ಲು ಹಾಕೋದಕ್ಕೆ ನೋಡಿದರು. ಬಗನ್ಯಾ, ಸರ್ವತಪ್ಪ, ಚೌಡಪ್ಪ ಒಂದಾಗಿದಕ್ಕೆ ಆಟ ನಡಿಯದೆ ಬೊಯ್ಯುತ್ತಾ ಮನೆಗೆ ಹೋದರು.

ಹೊಲ ಖರೀದಿ ಯಾದ ಮೇಲೆ ಭಗನ್ಯಾ ಇನ್ನೂ ಒಬ್ಬಂಟಿಗನಾದ. ಶತ್ರುಗಳ ಸಂಖ್ಯೆ ಹೆಚ್ಚತೊಡಗಿತು. ಪೂಜಾರಿಯ ಉಪಟಳ ಹೆಚ್ಚಾಯಿತು. " ಅಬ್ಬಾ, ಊರು ಬಿಟ್ಟು ಓಡಿಬಂದ ಬಿಕಾರಿ ಅಂತ ಕುರಿಮೇಲೆ, ಕೋಳಿಮೇಲೆ ನೆಪಮಾಡಿ ಬೊಯ್ಯ ತೊಡಗಿದ. ಅವನ ಸಿಟ್ಟು ಹೆಚ್ಚಾಗೋದಕ್ಕೆ ಇನ್ನೊಂದು ಕಾರಣ, ಪಕ್ಕೀರನು ಅವನ ಸವಾಸ ಬಿಟ್ಟಿದ್ದ. ಅವನ ಅಣ್ಣ ಮುಕಳಾಗ ಹೊಕ್ಕೊಂಡಿದ್ದ. ಇವರು ಮೂವರು ಒಂದಾದ್ರೆ ಈಡೀ ಊರನ್ನೇ ನಾಶಮಾಡುತ್ತಾರೆ ಅಂತೇಳಿ ಮಂದಿ ವಿಚಾರದೊಳಗೆ ಕೆಟ್ಟ ವಿಚಾರ ತುಂಬ ತೊಡಗಿದ. ಕೆಲ ಮಂದಿ ಪೂಜಾರಿ ಅಂದಿದಕ್ಕೂ ಹೂಂ ಅಂದ್ರು. ಇನ್ನೂ ಕೆಲ ಮಂದಿ ಭಗನ್ಯನ ಖರೆ ಅಂದ್ರು ಮಂದೀಗೇನು ಏನಾರ ಒಂದು ಸುದ್ದಿಬೇಕು ಆಯ್ತು. ಆದರೆ ದುಡಿದ ಮುಂದೆ ಬರೋ ಭಗನ್ಯಾನ ಹೆಂಗಾರ ಮಾಡಿ ನಾಶಮಾಡಬೇಕು ಅಂತ ಸಿದ್ಧವಾಗಿರೋ ಮಂದಿಗೆ ಯಾರ ರೀತಿ ನಿಬಾಯಿಸುವುದು.

ಹೊಲ ಖರೀದಿ ಯಾದಮೇಲೆ ಕಾಸಿಲ್ಲದೆ ಫಜೀತಿ ಪಡತೊಡಗಿದ. ಒಂದು ಬೆಳೆ ಕೈಗೆ ಸಿಗೋಮಟ ಬಹಳ ಕಷ್ಟ ಆಗಿತ್ತು ಅವನಿಗೆ. ಮನಿ ತುಂಬ ಮಕ್ಕಳಲ್ಲಿ ಕೆಲವರು ದುಡಿಯಾಕ ಬಂದಿದ್ದರು. ಇನ್ನೂ ಕೆಲವರು ಚಿಕ್ಕವರಾಗಿದ್ದರು. ಅವನ ಹಿರೀಮಗಳು ಜೀತಿಬಾಯಿ ಹನ್ನೆರಡನೇ ವರ್ಷಕ್ಕೆ ಮದುವೆಯಾಗಿ ಗಂಡನ ಮನೆಗೆ ಹೋಗಿ ದುಡಿಯುದಷ್ಟೇ ಅಲ್ಲ, ಮದವಿಯಾಗಿ ವರ್ಷಕೂಡ ಅಗಿಲ್ಲ ಅಗಲೆ ಗರ್ಭಿಣಿಯಾಗಿ ಹದಿನಾರು ತುಂಬೋದ್ರೊಳಗೆ ಹೆಣ್ಣು ಮಗಿನ್ನ ಹಡೆದಳು. ಆವಾಗಾವಾಗ ಅಳೆಯುತ್ತಿರ ಚಾಲನ್ ಒಳಗೆ ನೀರು ಬಂತು. ಮಳೆ ಬೆಳೆ ಇಲ್ಲದೆ ತಿರ್ಪೆ ಎತ್ತಿದ್ದವರೆಲ್ಲ ಈಗ ಐಷಾರಾಮಿ ಜೀವನ ನಡೆಸತೊಡಗಿದರು. ಸುತ್ತಲೂ ಎರಡುಮೂರು ತಾಂಡದ ಮಂದಿಗಂತು ಯಾರೂ ಹಿಡಿಯದಾದರು. ಜೀತಿಬಾಯಿಗಂಡ ಸೇವಾನಾಯ್ಕಂದು ಎಂಟತ್ತು ಎಕರೆ ನೀರುಣ್ಣುವ ನೆಲವಾದ್ದರಿಂದ ವಂಶದಲ್ಲಿ ಇದ್ದವನೇ ಒಬ್ಬ ಹತ್ತು ಎಕರೆ ಶೇಂಗಾ ಬಿತ್ತಿದ. ಚಾನಾಲ್ ನೀರು ಬಂದಮೇಲ ಮೊದಲ ಇಳೂವರಿ ಬಾಳ ಬಂದಿತ್ತು. ಗಿಡಕ್ಕೊಂದು ನೂರು ನೂರೈವತ್ತು ಗೆಜ್ಜೆ ಶೇಂಗಾ ಇಳೀದಿದ್ದವು. ಕಿತ್ತು ಹರಿದು ರಾಶಿ ಮಾಡುವುದು ದೊಡ್ಡ ದುಸ್ಥರವಾಗಿತ್ತು. ಸುತ್ತಲೂ ನೀರಾವರಿ ಯಾದ್ದರಿಂದ ಜನರು ಅಲ್ಲಲ್ಲೆ ಕೆಲಸ ಸೇರಿಕೊಂಡಿದ್ದರು. ಕೆಲವರು ಶೇಂಗಾ ಕೀಳುವುದಕ್ಕೆ ಗುತ್ತಿಗೆ ಕೊಟ್ಟಿದ್ದರು. ಕೆಲವರು ಗುತ್ತಿಗೆ ಕೊಟ್ರೆ ಸರಿಯಾಗಿ ಕೆಲಸ ಮಾಡಲ್ಲ ಅಂತೇಳಿ ಕೂಲಿ ಕೊಟ್ಟರು. ಇನ್ನೋಂದಿಷ್ಟು ಮಂದಿಯಂತು ಆದಂಗಾಗಲಿ ಅಂತಂದು ಗುತ್ತಿಗೆ ಸಿಕ್ರೆ ಗುತ್ತಿಗೆ ಕೂಲಿ ಸಿಕ್ರೆ ಕೂಲಿ ಅಂತ ಶೇಂಗ ಕೀಳುಸುವದು. ಹರಿಯುವುದು, ಅರಿಸುವುದು ಮಾಡತೊಡಗಿದ್ದರು. ಮನಗಂಡು ಶೇಂಗಾ ಬಿತ್ತಿದ ಮಂದಿ ಕೂಲಿಮಾಡೋರು ಇಲ್ಲದೆ ಕೆಂಧೂಳು ಏಳ್ತಂದ್ರ ಎದೆಯಾಗ ನಡುಕ ಹುಟ್ಟುತ್ತಿತ್ತು. ಕೆಂಧೂಳು ಹಿಂದೆನೆ ಮುಂಗಾರು ತನ್ನ ಆರ್ಭಟ ತೊರುತ್ತಿತು. ಮುಂಗಾರು ಸುರುವಾತು ಅಂದ್ರ ನೆಲದಾಗಿನ ಶೇಂಗಾ ಮೊಳಕೆ ಒಡಿತ್ತಿತ್ತು. ಹಂಗಾಗಿ ಮಂದಿ ಗಾಬ್ರಿಆದ್ರು. ಆದರೆ ಭಗನ್ಯನಾಯ್ಕನ ಅದೃಷ್ಟ ಅರಮಂದಿ ಅಳಿಯಂದ್ರು, ನಾಕು ಮಂದಿ ಸೋಸೆಯಂದಿರು, ಇಡಿಮನಿಮನಿಗೆ ಚಕ್ಕಡಿ ಗಾಡಿ ತಕ್ಕೊಂಡು ತಿಂಗಳ ಗಟ್ಟಲೆ ಠಿಕಾಣೆ ಹೂಡಿದ್ದರು. ಚಿಮಣಿಬಾಯಿ ಮನೆ ಕೆಲ್ಸನೂ ಆತು ಹೊಲದ ಕೆಲ್ಸಾನು ಆತು. ಹೊಲಾನೆಲ್ಲ ಕಿತ್ತು ಹರಿದು, ಆರಿಸಿ ಹಸನು ಮಾಡಿ ನಾಕು ಹನಿ ಬಿದ್ದುಕೂಡ್ಲೆ ತಮ್ಮ ಹೊಲಗಳನ್ನ ಹರಿಗಿ ಗೊಬ್ಬರ ಚೆಲ್ಲಿದರು. ಅವತ್ತು ಸಂಜೆ ಮನೆ ಮುಂದೆ ತಾವು ಅರಿಸಿದ ಒಂದು ಚೀಲ ಶೇಂಗ ಹಾಕ್ಕೊಂಡು, ಎತ್ತುಗಳ ಮೇವಿಗಂತ ಚಲ್ಪಾ ಹೇರಿಕೊಂಡು, ಹೇರಿ ಮ್ಯಾಲ ಗುಂಪು ದೂರದ ತಮ್ಮೂರಿನ ಕಡೆಗೆ ಪ್ರಯಾಣ ಬೆಳಸಿದರು. ಇದು ಹೆಚ್ಚು ಕಡಿಮೆ ಎಂಟತ್ತು ವರ್ಷಗಳಿಂದ ಅವಿರತವಾಗಿ ನಡೆಯತೊಡಗಿತು. ಸೇವ್ಯಾನಾಯ್ಕನ ಹೆಸರು ಸುತ್ತಮುತ್ತ ಮಂದಿ ಬಾಯೊಳಗೆ ಆಡುತ್ತಿತ್ತು. ವರ್ಷಕ್ಕೊಂದು ಹೊಲ, ಒಂದು ಜೊತೆ ಗೇಣಸಿ ಎತ್ತುಗಳು ಒಂದೊಂದೆ ಮಾಡಿದ್ದ. ಅವರನ ಅಣ್ಣ ಇಬ್ಬರು ಗಂಡು, ಮೂವರು ಹೆಣ್ಣು ಹುಡುಗಿಯರನ್ನು ಬಿಟ್ಟು ಬಹಳ ಹಿಂದೆನೇ ಸತ್ತು ಹೋಗಿದ್ದ. ಅವನ ಪರದೇಶಿ ಮಕ್ಕಳನ್ನು ತಂದು ತಾನೇ ಸಾಕಿದ. ಅವನಿಗೆ ಚಿಕ್ಕ ಮಕ್ಕಳು ಮನಿತುಂಬ ಕ್ಯಯಾಂ ಮುರೋ ಅಂತಿದ್ವು, ವರ್ಷಕ್ಕೆ ಒಂದರಂಗ ಮನಿತುಂಬ ಏಳೆಂಟು ಮಕ್ಕಳು. ದೊಡ್ಡವನು ಹುಟ್ಟುತ್ಲೆ ಖಾಯಿಲೆ ಅಂಟಿಸಿಕೊಂಡು ಹುಟ್ಟಿದ. ಎರಡನೇಯವಳು ಚಾಮಿ, ಮೂರನೇಯವನು ಸಂಕ. ನಾಕು ಚಪ್ಲ, ಐದುನೇಯವರು ಜಿಂಗಾಲು. ಅರು ಏಳು ಎರಡು ಹುಡುಗಿಯರು ಒಂದಕ ತಪ್ಪಿದ್ರ ಒಂದಕ ಅಸ್ಪತೆಗೆ ಒಯ್ಯಬೇಕು. ಶಂಬಣ್ಣ ಡಾಕ್ಟ್ರು ಸರ್ಕಲನಲ್ಲಿ

ಸ್ವಂಯ ಕ್ಲನಿಕ್ ಇಟ್ಟು ಕೊಂಡಿದ್ದ. ಡಾಕ್ತ್ರ ಹತ್ತ ಇವನದು ಒಂದು ಖಾತೆನೇ ಇತ್ತು. ವಾರದಾಗ ನಾಕೈದು ಮಂದಿ ಆಸ್ಪತ್ರೆ, ಯಾವಾಗರ ನೋಡು ಆಸ್ಪತ್ರೆ. ಡಾಕ್ತ್ರ ತಾವ ಖಾತೆ ಇದ್ದದ್ದರಿಂದ ಖಾಯಿಲೆ ಬರಾಕ ಹತ್ತಿದ್ವೊ, ಇಲ್ಲ ಖಾಯಿಲೆ ಬಂದಿದ್ದಕ್ಕೆ ಖಾತೆ ಹುಟ್ಯತೋ ಡಾಕ್ಟ್ರೇ ತಬ್ಬಿಬ್ಬಾಗಿದ್ದ. ಶೇಂಗಾ ಮಾರಿದ ಮ್ಯಾಲಿ ಅಂಗಡಿ ಸಾವುಕಾರನ ಸಾಲ ಕಟ್ಟಿದ. “ದಾನ್ಕಿ, ದಿನ್ಕಿ ಸರಿಪೋಯಿಂದಿ.” ಅನ್ನೋಹಂಗಾಗಿತ್ತು. ಮತ್ತೆ ಮುಂಗಾರು ಬೆಳೆ ಸಾಲ ಬಾಯಿತಕ್ಕಂಡು ಕುಂತಿತ್ತು. ಅವನ ಕುಡಿತ, ಅವನ ಸೆಟ್ಟಪ್ಪು ಜಿಂಗಾಲಿಗೆ ಪ್ರತಿದಿನ ಹೆಂಡ ಅಂದ್ರೆಯಾ ಸಂಪತ್ತು ಉಳಿಯಾಕ ಸಾಧ್ಯ. ಮನ್ಯಾಗ ಬರೋಹೋಗೋ ಮಂದಿ ಹಿಂಡು. ಚಮಣ್‌ಬಾಯಿ ಒಲಿಮುಂದಿಂದ ಏಳಾಕ ಅಗದಷ್ಟು ಕೆಲಸ. ಆಕಿ ಹಿರಿಮಗಳು ಚಾಮಿ, ಅಂತಾ ಏನು ದಾಡ್ಸಿಅಲ್ಲ ಒಲೆ ಮುಂದೆ ಕೆಲಸ ಮಾಡೋ ಸ್ಥಿತಿ ಇರುತ್ತಿದ್ದಿಲ್ಲ. ಚಮಣ್‌ಬಾಯಿ ನಾದನಿ ಪಿಂಗಾಣಿನೆ ಗಂಡನ ಮನೆಒಳಗ ತೌರು ಮನೆಒಳಗ ಕೆಲಸ ಮಾಡಬೇಕು, ಅಡಿಗೇನು ಮಾಡಬೇಕು. ಜೀವ್ಲ ಪಿಂಗಾಣಿ ಗಂಡ ಎಲ್ಲ ಗದ್ದೆಗಳಗು ನೀರು ಹಾಯಿಸಿ ನಿದ್ದೆಗೆಟ್ಟು ಬಂದು ಹಗಲು ಒಂದೆರೆಡು ತಾಸು ಮಲಗಿ ಮತ್ತ ಅಳಿಯನ ಗದ್ದೆಗೆ ನೀರು ಹಾಯಿಸಾಕ ಹೋಕಿದ್ದ. ಕೆಂಪಗಿನ ಪಿಂಗಾಣಿ ಹಿಂದಲ ಮನಿ ಶಕ್ರ್ಯಾನ ಮೇಲೆ ಯಾವಾಗ ಕಣ್ಣು ಕುಕ್ಕಿದ್ಲೋ ಏನೊ ಹೊತ್ತಾರೆ ಇಬ್ಬರು ನೀರು ತಿರವಿ ಚಾ ಕುಡಿಯಾಕಂತ ಮನಿಗೆ ಹೊಂಟವನು ತನ್ನ ಗಳಿಗಿವೆ ಸುಮಾರಿಲ್ಲಂತ, ವಾಪಾಸು ಗದ್ದಗೆ ಹೋಗಿ ಶಾಸ್ವತ ಮಲಗಿದ. ಒಂದಿಷ್ಟು ಅಳೋ ನಾಟಕ, ಗುಣಗಾನ ನಡೆದವು. ಮತ್ತ ಕಾಲ ಯಾರಿಗಾಗಿ ನಿಲ್ಲಲ್ಲ ಮಂದಿ ಜೀವ್ಲಾನ ಮರೆತರು. ಆದ್ರ ಸೇಣು ಸ್ಥಿತಿ ಗಂಭೀರ ಇಟ್ಕಂತು. ಬತ್ತದ ಗದ್ದೆಗಳು ಒಣಗಿದವು. ಎಲ್ಲಾ ತನ್ನದೆ ಅನ್ನೊಹಂಗ ದುಡಿತ್ತಿದ್ದ ಮನುಷ್ಯ ಇದ್ದಕ್ಕಿದ್ದಂಗೆ ಹೆಣ ಆದಂದ್ರ ಮಂದಿ ಮಾತಾಡಿಕೊಂಡ್ರು, ಸಮಾಜದ ನಿಂದನೆ ಅಂದ್ಕೊಂದು ಸುಮ್ಮನಾದ.

ತನ್ನ ಮೀರಿ ತನ್ನ ಮಗಳು ಚಿಮಣಿ ತನ್ನ ಕಣ್ಣೆದುರೆ ಶ್ರೀಮಂತಿಕೆ ಅನುಭವಿಸುತ್ತಿರುವುದಕ್ಕೆ ಬಹಳ ಕುಷಿ ಪಟ್ಟಿದ್ದ ಭಗನ್ಯನಾಯ್ಕ. ಎಷ್ಟೆ ಆದ್ರೂ ತನ್ನವು ಬೆದ್ಲ ಜಮೀನು. ಮುಂಗಾರು ಕಿತ್ತು ಒಗದ್ರ ಹೊಲದಾಗ ಬೆಳ ಕಾಣ್ತಿದ್ದವು. ಇಲ್ಲಂದ್ರ ದನಕರು ಮೇವಿಲ್ಲದೆ ಪರದಾಡಬೇಕಿತ್ತು. ಅಂತಾದ್ರಾಗ ಮಳಿ ಕಮ್ಮಿ ಆದ್ರ ಒಂದೆರೆಡು ಚಾನಾಲ್ ನೀರು ಕಟ್ಟಿ ಸಂಪಾಗಿ ಬೆಳೆದು ಸುತ್ತ ಊರಿಗೆಲ್ಲ ಸೇಣು ಸಾವುಕಾರ ಅನಿಸಕೊಂಡಿದ್ದ. ಚಿಮಣಿ ಮಾತ್ರ ತವರು ಅನ್ನೋ ಮುಲಾಜಿಲ್ಲದೆ ಮಂದಿ ಹಂಗ ಎಲ್ಲರನ್ನೂ ನೋಡತೊಡಗಿದಳು. ಆರೇಳು ವರ್ಷಕಾಲ ಎಲ್ಲವನ್ನು ಸಹಿಸಿಕೊಂಡು ಕುಟುಂಬ ಸಮೇತ ಅಳಿಯನ ಹೊಲಕ್ಕೆ ಹೋಗಿ ದುಡಿದರು. ಮುಂದೆ ಮಗಳ ಮನಿಗೆ ಅವಮಾನ ಮಾಡಿಸಿಕೊಳ್ಳೋದಕ್ಕೆ ಹೋಗೋದು ಸರಿಯಲ್ಲ ಅನಿಸಿದ್ದೆ, ಚಿಮಣಿ ಆಳ ಮೇಲೆ ಅಳು ಕಳುಹಿಸಿದರು ಯಾರೂ ಮನಸ್ಸು ಮಾಡಲಿಲ್ಲ. ತಮ್ಮ ಜಮೀನಿನ ಕೆಲಸವೇ ಹೆಚ್ಚಾಗಿತ್ತು. ಟಾಂಕ್ಯನ ಮಗ ಸಂಕೋಲ ಆಗಲೆ ಕೆಲಸಕ್ಕೆ ಬಂದಿದ್ದ. ಎರಡನೇಯವ ಜಾಂಬು ಸಾಲಿಗೆ ಹೊಕ್ಕಿದ್ದ. ಮೂರನೇಯವ ತಾಯಿಮೊಲೆ ಉಣುತ್ತಿದ್ದ. ಎರಡನೆ ಹುಡುಗಿ ದೊಡ್ಡವಳಾಗಿದ್ಲು. ಇನ್ನೊಬ್ಬಳು ಸುಮಾರಾಗೆ ಇದ್ದಳು. ಬಗನ್ಯನಾಯ್ಕನ ಮೂರೆನೇ ಮಗ ಬದಿಯಾ ಸ್ಕೂಲಲ್ಲಿ ಏನೋ ಅಲ್ಪಸ್ವಲ್ಪ ಓದಿದ. ಅವನ ನಂತರ ಹುಟ್ಟಿದ ನಾಲ್ಕನೇಯ ಚೊಕಿಬಾಲು ಅಷ್ಟೇನು ಸುಂದರ ವಾಗಿರಲಿಲ್ಲ. ಆದರೂ ಒಳ್ಳೆ ಬಾಳೇವಸ್ತ ಹುಡುಗಿ ಅಂತಂದು ಸೋದರ ಮಾವ ಕೆಂಪ್ಯಾನಾಯ್ಕ

ಮದುವೆ ಮಾಡಿಕೊಂಡಿದ್ದ. ಅವಳಿಗೆ ಇಬ್ಬರು ಗಂಡು ಇಬ್ಬರು ಹೆಣ್ಣು ಮಕ್ಕಳಿದ್ದರು. ದೊಡ್ಡಮಗ ಅದೇಗೋ ಮೆಟ್ರಿಕ್ ದಾಟಿ ಮೇಷ್ಟ್ರಾಗಿದ್ದ. ಎರಡನೇಯವನು ಸಾಲಿ ಬಿಟ್ಟು ಇದ್ದ ತುಂಡ ಜಮೀನು ನೋಡ್ತಿದ್ದ. ಹಿರಿ ಮಗಳ ಮದುವೆ ಜುಕ್‌ಜುಲುಮೆಯಿಂದಾಗಿತ್ತು. ಅವಳೂ ಹೋದ ನಂತರ ಮನೆ ಕೆಲಸ ಒತ್ತಡ ಹೆಚ್ಚಾಗಿತ್ತು. ಅವಳ ಮದುವೆ ಯಾದಮೇಲೆ ತನ್ನ ಓದು ಮತ್ತು ಕೆಲಸದ ಸಂಬಂಧ ಮದುವೆ ಆಗದೆ ಉಳಿದಿದ್ದ ಬದಿಯಾ ನಾಯ್ಕ ಸರಕಾರಿ ನೌಕರಿಗೆ ಸುತ್ತಾಡಿ ಕೊನೆಗೆ ಯಾವುದೋ ಖಾಸಗಿ ನೌಕರಿ ಹಿಡಿದಿಂದ ಸರಕಾರಿ ನೌಕರಿಯಲ್ಲಿರೋ ಹುಡಿಗಿ ಮದವಿಯಾದ. ಬರೀ ಹೆಣ್ಣು ಹುಡಿಗೇರು ಹುಟ್ಟೋದಕ್ಕೆ ಗಂಡು ಮಗುವಿಗಾಗಿ ಸಾವಿರ ಹರಕೆ ಹೊತ್ತರು. ಮತ್ತೆ ಹೆಣ್ಣು ಹೆತ್ತಾದಮೆ ಹನ್ನೊಂದನೇದು ಗಂಡಾಗಿದ್ದಕ್ಕೆ ಇಡೀ ಕುಟುಂಬ ಕುಷಿ ಪಟ್ಟಿತ್ತು. ಬದಿಯಾ ನಂತರ ಜೇಮ್ಲನ ಬಿಟ್ಟು ಅವನ ತಂಗಿ ಹಾಮ್ಲಿ ಮದುವೆ ಮಾಡುವುದು ಭಗನ್ಯನಾಯ್ಕನಿಗೆ ಅನಿವಾರ್ಯವಾಗಿತ್ತು. ಹುಡುಗರದು ವರ್ಷ ಒಪ್ಪತ್ತು ನಡೀತಿತ್ತು. ಹುಡುಗಿಯರದು ಮೊದಲೆ ಆದ್ರೆ ಮರ್ಯಾದೆ ಉಳಿದೀತು ಅನ್ನೋದು ಭಗನ್ಯ ಮತ್ತು ಅವನ ಹೆಂಡತಿವಾದ. ಅಷ್ಟು ವರ್ಷಗಳಿಂದ ಉಳಿಸಿಕೊಂಡು ಬಂದ ಮರ್ಯಾದೆ ಮಣ್ಣುಪಾಲಾಗುವುದ ಬೇಡವಾಗಿತ್ತು. ಹಾಗಾಗಿ ದೂರದ ಸಂಬಂಧಿಕರ ಮಗ ಸಮಣೂನಾಯ್ಕನಿಗೆ ಕೊಟ್ಟು ಮದುವೆ ಮಾಡಿ ನಂತರ ಜೇಮುನ ಮದುವೆ ಮಾಡಿದ. ಇವರೆಲ್ಲರಿಗೂ ಒಂದೆರೆಡು ಮಕ್ಕಳಾಗುವ ಹೊತ್ತಿಗೆ ಭಗಾನ್ಯಾನ ಹಿರಿಮಗ ಟಾಂಕ್ಯನ ಮಗ ಸಾಂಕೋಲ ದೊಡ್ಡವನಾಗಿದ್ದ. ಎರಡನೆ ಮಗಳು ಪೀಕೆ ಮದುವೆಗೆ ಬಂದಿದ್ದಳು. ನಾನು ಈ ಮನ್ಯಾಗ ಈಟಿದ್ದಾಗಿನಿಂದ ದುಡಿದೀನಿ, ನನ್ನ ಮಗಳನ್ನ ಸರಕಾರಿ ನೌಕರಿಮಾಡೊವವನಿಗೆ ಮದುವೆ ಮಾಡಿಕೊಡಬೇಕಂತ ಟಾಂಕ್ಯ ಮತ್ತು ಅವನ ಹೆಂಡತಿ ಜೀಗನಿ ಹಟ ಹಿಡಿದರು. ಬಗನ್ಯಾನಾಯ್ಕನಿಗೆ ದೈತ ರೂಪದ ಕುಟುಂಬ ನಿರ್ವಹಣೆ ದೊಡ್ಡ ಸಮಸ್ಯೆಯಾಗಿ ಕಾಡಿತು. ಅವನೇನು ಸಾಕಷ್ಟು ಜಮೀನು ಹಿಡಿದಿದ್ದ. ಸ್ವಂತಿಕೆಯಿಂದಲೂ ದುಡಿದ. ಆದರೆ ಒಮ್ಮೊಮ್ಮ ಅತಿ ವೃಷ್ಠಿ ಇಲ್ಲಂದ್ರ ಅನಾವೃಷ್ಠಿ. ಆಗಿ ಕೈಗೆ ಬೆಳೆ ಸಿಗತ್ತಿದ್ದದ್ದು ಅಷ್ಟಕಷ್ಟೆ. ಅನೆ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ ಅಂತಿತ್ತು ಸಂಸಾರದಲ್ಲಿ.

ನಾನಾ ತೊಂದರೆಗಳು ಕಾಡಿದವು. ಮಾಡೋರು ಕಡಿಮೆ ಉಣ್ಣೋರು ಜಾಸ್ತಿ ಆದ್ರು. ಸಮತೋಲನ ತಪ್ಪಿತು. ಒಂದು ವರ್ಷಕ್ಕೆ ಒಂದು ಮದುವೆ ಮಾಡಿದರೆ. ಮತ್ತೊಂದು ವರ್ಷಕ್ಕೆ ಒಂದು ಜಮೀನು ಖರೀಧಿಸುತ್ತಿದ್ದ. ಅವನ ಮೈಮೇಲೆ ಸಾದ ಹೊರೆ ಇದ್ದಷ್ಟು ದುಡಿದು ತಗಿಯಾಕೆ ಆಗ್ತಿರಲಿಲ್ಲಾ. ಮನೆಯಲ್ಲಿ ಮಕ್ಕಳು ಮೊಮ್ಮಕ್ಕಳು ಗಿಜಿಗಿಜಿ ಅಂತಿದ್ರು. ಒಬ್ಬರ ಕಾಲಮೇಲೆ ಇನ್ನೊಬ್ಬರ ಕಾಲು. ಮೈತಾಕಿಸಿಕೊಂಡೆ ಒಡಾಡುವ ಸ್ಥಿತಿ ಮನೆಯಲ್ಲಿತ್ತು. ಹೀಗಾಗಿ ಜಗಳ ಉಂಟಾಗುತ್ತಿತ್ತು ಹತ್ತ ಜನ ಮಕ್ಕಳ ಕೂಡು ಕುಟುಂಬದಲ್ಲಿ ನಾಲ್ಕು ಹುಡುಗಿಯರ ಮದುವೆ ಮಾಡಿದ್ದ ಭಗನ್ಯನಾಯ್ಕ, ಅವುಗಳ ಸಂಸಾರ, ಅವುಗಳ ಮಕ್ಕಳು ವಿಷದ ಬಳ್ಳಿಹಂಗೆ ಸಂಸಾರ ಬೆಳಿದಿತ್ತು. ಹೇಗೆ ಅರವತ್ತು ಸಂವತ್ಸರಗಳು ತುಂಬಿದವೊ, ಹೇಗೆ ಇದ್ದೋರು, ಬಿದ್ದೋರು, ಎಲ್ಲರೂ ತಮ್ಮ ಪಾಡಿಗೆ ತಾವು ದೊಡ್ಡವರಾದರು ಯಾರಿಗೂ ಸುಳಿವೇ ಸಿಗಲಿಲ್ಲ. ಸೊಮ್ಲ ಮತ್ತು ಜಾಂಪ್ಲ ಇನ್ನೂ ವಿದ್ಯಾಭ್ಯಾಸ ಮಾಡುತ್ತಿರುವಾಗಲೆ ದೊಡ್ಡ ಅನಾಹುತ ರಾಜ್ಯದ ರಾಜಕಾರಣದಲ್ಲಿ ತಲೆದೋರಿತು. ಅಂದಿನ ಕಾಂಗ್ರೆಸ್ ಸರಕಾರ ಹೆಂಡವನ್ನು ನಿಷೇಧಿಸಿತು. ಎಲ್ಲಾ ಕಡೆಗೂ ಪ್ಯಾಕೆಟ್

ಸರಾಯಿ ಹಾವಳಿ. ಕೆಲ ತಾಂಡದ ಮಂದಿ ತಮ್ಮ ಹಳೇ ಚಾಳಿ ಬಟ್ಟಿ ಸರಾಯಿ ಮಾರುವುದನ್ನು ಪ್ರಾರಂಭಿಸಿದರು. ಸೇಂದಿ ಹೊದದ್ದೇ ತಡ ಸೇಂದಿ ಮೇಲೆ ಜೀವನಾ ಇಟ್ಟುಕೊಂಡಿದ್ದ ಗುಡದಟ್ಟಿ ಮ್ಯಾಗಲ ಒಣಿ ರಾಮಾನಾಯ್ಕ, ಹಿಂದಲೂರಿನ ಜೀವಪ್ಪ, ಕೆಳಗಿನ ಓಣಿಯ ಸಪೋಳಿಯಾ, ಮಿನುಗಾರ ಮಂಗು, ರಂಗೋಲಿ ಹಿಟ್ಟು ಮಾರುತ್ತಿದ್ದ ದುಗ್ಗಾಣಿನಾಯ್ಕ ಸರಾಯಿ ಕುಡದ ವಾರದಲ್ಲೆ ಸತ್ತು ಹೋದರು. ಮಂದಿ ಸರಾಯಿಒಳಗೆ ವಿಷ ಐತೆ ಅಂತ ವಾದಮಾಡಿದರು. ಆದರೆ ಕುಡುಕರ ಕುಡಿತ ಕಡಿಮೆ ಯಾಗಲಿಲ್ಲ. ಒಂದೇ ತಾಂಡದಲ್ಲಿ ಸರಾಯ ಪ್ಯಾಕೀಟುಗಳು, ಸಾವಿರಕ್ಕೆ ಇಪ್ಪತ್ತು ಸಾವಿರ. ಒಂದು ತಾಲುಕಿಗೆ ಕನಿಷ್ಟ ನಲವತ್ತು ತಾಂಡಗಳು. ನೂರಿನ್ನೂರು ಹಳ್ಳಿಗಳು. ತಾಲೂಕು ಕೇಂದ್ರ ಪ್ರದೇಶ ಸೇರಿ ಎರೆಡು ಮೂರು ಲಕ್ಷರೂಪಾಯಿ ಸರಾಯಿ ಮಾರಾಟ ಅಗುತ್ತಿತ್ತು. ಆವಾಗಲೆ ಬಗಾನ್ಯಾಯ್ಕನ ಮನೆಯೊಳಗೆ ಆಂತರಿಕ ಕಲಹ ಉಲ್ಬಣಗೊಂಡು ಹೊರಗೆ ಸ್ಫೋಟಗೊಂಡಿತು. ಬದಿಯಾ ಚೂರುಪಾರು ಓದಿಕೊಂಡು ಎಲ್ಲೋ ಕೆಲಸಕ್ಕೆ ಸೇರಿಕೊಂಡು, ತನ್ನ ತಮ್ಮಂದಿರು ಓದಿ ಮುಂದೆ ಬರಲಿಲ್ಲ ಎಂದು ವಿಷಾಧಗೊಂಡು, ತನ್ನ ಒಂಭತ್ತನೆ ತಮ್ಮನಾದ ಸೊಮ್ಲಾನನ್ನು ತನ್ನಲ್ಲಿಗೆ ಕರೆದುಕೊಂಡು ಹೋದ. ಅವನೂ ಅಚೆ ಈಚೆಗೆ ಏನೋ ಒಂದು ಓದಿಕೊಂಡು ಹಳ್ಳಕೊಳ್ಳ ದಾಟಿ ನದಿ ಸೇರಿದ್ದ. ಚಿಕ್ಕವನಾದ ಜಾಂಪ್ಲ ಹತ್ತುಸಲ ನಪಾಸಾದವನು ಇದ್ದಕ್ಕಿದ್ದಂತೆ ಚಿಗರಿಕೊಂಡು ಓದತೊಡಗಿದ. ಇನ್ನೇನು ಬೇರೆ ಬೇರೆ ವಲಯಗಳಲ್ಲಿ ಪ್ರವೇಶಿಸಬೇಕು, ಬೇರೆ ಬೇರೆ ಅಲೋಚನೆಗಳನ್ನು ಮಾಡಬೇಕು ಅಂದಾಗಲೆ ಮುದುಕ ಭಗನ್ಯನಾಯ್ಕನ ಹೊಟ್ಟೆಯಲ್ಲಿನ ಕಲ್ಲು ಅನಾರೋಗ್ಯಕ್ಕೆ ಕಾರಣವಾಯಿತು. ಆತನನ್ನು ಸರಕಾರಿ ಅಸ್ಪತ್ರೆಗೆ ದಾಖಲಿಸಿದಕ್ಕೆ ದೊಡ್ಡ ನೆಪವಾಗಿ ಟಾಂಕ್ಯ, ಜೇಮ ಒಂದುಕಡೆಯಾದರೆ, ಕೇಮ್ಯ ಅವನ ಹೆಂಡತಿ ಭೀಮಿಯನ್ನು ಒಂದು ಕಡೆಮಾಡಿ ಅವರದ್ದೇ ನಡೆಯುವಂತೆ ನೋಡಿಕೊಂಡರು. ಜೇಮ ಮನೆಯ ಜವಾಬ್ದಾರಿ ತೆಗೆದುಕೊಂಡ. ವರ್ಷದ ಪೂರಾ ಬೆಳೆಯ ಲೆಕ್ಕ ಕೊಡಲಿಲ್ಲವೆಂದು ಬದಿಯಾ ತಂದೆಯ ಹತ್ತಿರ ಜಾಡಿ ಹೇಳಿದ. ಭಾಗ ಮಾಡಿಸುವುದೇ ಸರಿ ಎಂದು ತಾಂಡದಲ್ಲಿ ಹೇಳುತ್ತ ತಿರುಗಾಡಿದ. ಇದು ತಾರಕಕ್ಕೇರಿತು. ಟಾಂಕ್ಯ ಮತ್ತು ಜೇಮ ವಯಸ್ಸಾದ ಬಗನ್ಯನಾಯ್ಕ ಮತ್ತು ಚಾವಳಿ ಮೇಲೆ ಕೈಮಾಡಿದ್ದ ನೆಪಕ್ಕ ಮನೆ ದಿಕ್ಕಾಪಾಲಾಯಿತು. ಬದಿಯಾ ವ್ಯವಸ್ಥಿತಿವಾಗಿ ಒಳ ಸಂಚುರೂಪಿಸಿದ್ದ. ಅದಕ್ಕೆ ಪೂರಕವಾಗಿಯೇ ಭಗನ್ಯನಾಯ್ಕನ ವಿರೋಧಿಗಳು ಒಳಗೆ ಬೆಂಕಿ ಹಚ್ಚಿ ಹೊರಗೆ ನಿಂತು ಖುಷಿ ಪಟ್ಟಿದ್ದರು.

ನಾಲ್ಕು ಜನರನ್ನು ಆಯ್ಕೆ ಮಾಡಿಕೊಂಡು ಬದಿಯಾ ಹೊರ ಬಂದವನೆ ತಿಂಗಳೊಪ್ಪತ್ತಿಗೆ ಮತ್ತೊಬ್ಬನನ್ನು ಹೊರಗೆ ಸರಿಸಿದ. ಸೂರ್ಯನಾಯ್ಕ, ಚಂಪ್ಲಾನಾಯ್ಕ ಸೇರಿಸಿಕೊಂಡು ಏನೊ ಕಡಿದು ಕಿಸಿತೀವಿ ಅನ್ನೊ ಹುಮ್ಮಸ್ಸಿನಲ್ಲಿ ಚಾಂಪ ಸಾಲಿ ಬಿಡಬೇಕಾಗಿ ಬಂದಾಗ. "ಎಲ್ಲ ನಿನಗೆ ಕಣಯ್ಯ, ಯಾಕೆ ಯೋಚನೆ ಮಾಡ್ತಿ, ಸಾಲಿ ಕಲಿತು ಕಡುದು ಕಿಸಿಯೋದು ಅಷ್ಟಾಗ್ರೈತಿ. "ಅಂತ ಪುಸಲಾಯಿಸಿ ಅವನ ಮನೆ ಅಗಳಿ ಸರಿಸಿದ್ದ. ಅವನ ಮಾತು ನಂಬಿ ನಾಳೆ ಬರುವ ಹೆಣ್ಣು ತನ್ನಂತೆ ಇರಬಹುದೆಂದು ಸೂರ್ಯನಾಯ್ಕನು," ಏಯ್ ತಂದಿತಾಯಿ ನೊಡ್ಕೊಂಡು ಯಾವದರ ಡಿಗ್ರಿ ಹಚ್ಚು. ನಂದು ಜಮೀನು ನೀನು ಮಾಡ್ಕೊಂವಂತೆ." ಅಂತೇಳಿ ಸಾಬೂಬು ಹೇಳಿ ಅವನ ಆಕೆಗೆ ಎಳ್ಳುನೀರು ಬಿಡುವಂತೆ ಮಾಡಿದ್ದ. ನಂತರ ಸಣ್ಣ ಕಲ್ಲು, ಯಾವುದಕ್ಕೇರು ಬರ್ತಾದ ಅಂತ ಎಡಗೈಲೆ ಒರಸಾಕ ಅನ್ನೊಹಂಗ ಉಪಯೋಗ ಆಗಬಹುದು ಎಂದು ಲೆಕ್ಕಾಚಾರ ಮಾಡಿದ.

ಸೂರ್ಯನಾಯ್ಕನಿಗೂ ನೌಕರಿ ಸಿಗದೆ ಬದುಕುಕಟ್ಟಿಕೊಳ್ಳಾಕ ಪರದಾಡುತ್ತಿದ್ದ. ಅಲ್ಲಿ ಇಲ್ಲಿ ಸರಕಾರದ ಕೆಲಸಕ್ಕೆ ಅರ್ಜಿ ಹಾಕಿದ್ದ. ಕಡೆಗೂ ಸೂರ್ಯನಿಗೆ ಒಂದು ಸಣ್ಣ ನೌಕರಿ ಸಿಕ್ತು. ಅವನು ಆ ಕಡೆ ನೌಕರಿಗೆ ಹೋಗ್ಯಾನ, ಬಾಳ ದಿನದಿಂದ ಹಾಸಿಗೆ ಹಿಡಿದಿದ್ದ ಅವನವ್ವ ಆಸ್ಪತ್ರೆಗೆ ಸೇರಿದ್ಲು. " ಮಗ ನಾನೇನು ಬಾಳಾ ದಿನ ಬದುಕಿಂಗಿಲ್ಲ, ಪ್ರಾಣ ಇರುವಾಗಲೆ ನಾಕು ಅಕ್ಕಿಕಾಳು ಹಾಕ್ತೀನಿ, ಮದವಿ ಯಾಗಿ ಬಿಡು. "ಗಳಗಳನೇ ಅತ್ತು ಹೇಳಿದ್ದಳು. ಸೂರ್ಯನಿಗೆ ದಿಕ್ಕೆ ತಿಳಿದಂಗಾತು. ಹೊರಗೆ ಹೋದ ಮೂವರ ಪೈಕಿ ಉಳಿದ ಇಬ್ಬರೀಗೂ ಮದುವೆ ಮಾಡುವ ಸುದ್ದಿಗೆ ಹೋಗದಿದಾಗ ಬದಿಯನಾಯ್ಕನೆ ಒಂದೆರಡುಮೂರು ಕಡಿಗೆ ಅಡ್ಡಾಡಿ ಹೆಣ್ಣು ಹುಡುಕಿದ. ಆದರೆ, ಅವನು ಮಾಡಿದ ದೊಡ್ಡ ತಪ್ಪಂದ್ರ, ಸೂರ್ಜನಿಗಿಂತ ಹತ್ತು ವರ್ಷ ಸಣ್ಣವಳಾದ ವಂದನಾ ಅನ್ನೋ ಹುಡಿಗಿಕೂಡ ಮಾದುವೆ ಮಾಡಿ ಬಿಟ್ಟ.

ಸೂರ್ಯನ ಸ್ಥಿತಿ ಸೋಚನೀಯವಾಗಿತ್ತು. ಅವನು ಹೇಳಿದ್ದು ಆಕಿಗೆ ತಿಳೀತಾ ಇರಲಿಲ್ಲ. ಆಕೆಹೇಳಿದ್ದು ಅವನಿಗೆ. ಅಂತೂ ಸೂರ್ಯ ಸಿಕ್ಕ ಸಣ್ಣ ನೌಕರಿಯಲ್ಲೆ ಜೀವನ ಪ್ರಾರಂಭಿಸಿದ. ದೊಡ್ಡ ಸ್ಥಾನಕ್ಕೆ ಹೋಗಬೇಕೆಂಬ ಛಲ. ಈಗ ಸೇರಿದ ಬೇಸರದ ನೌಕರಿ ನಡುವೆ ಜೀಕುತ್ತಿದ್ದ. ಹೊಸದಾಗಿ ನೌಕರಿ ಸೇರಿದ್ದರಿಂದ ತಿಂಗಳಿಗೊಂದು ಸಾಂಧರ್ಬಿಕ ರಜೆ, ಅದು ಒಂದು ತಿಂಗಳು ಕೆಲಸ ನಿರ್ವಹಿಸಿದಮೇಲೆ ಬಂದು ಅವನ ಖಾತೆಗೆ ಜಮೆ ಆಗುತ್ತಿತ್ತು. ಅವನಿಗಿಂತ ಕಡಿಮೆ ಓದಿದವರು ಅವನ ಮೇಲೆ ಅಧಿಕಾರ ಚಲಾಯಿಸುತ್ತಿದ್ದರು. ಹೀಗಾಗಿ ಆ ನೌಕರಿ ಜಿಗುಪ್ಸೆ ಉಂಟುಮಾಡುತ್ತಿತ್ತು. ಆದರೆ ಬದುಕು ಅನಿವಾರ್ಯವಾಗಿತ್ತು. ಹೆಂಡತಿ ಹುಟ್ಟಿರುವ ಮಕ್ಕಳ ಕನಸು ಒಂದೆಡೆಯಾದರೆ, ತನ್ನ ಸ್ಥಿತಿಯಿಂದ ಉನ್ನತ ಸ್ಥಿತಿಗೇರುವ ಹಂಬಲ ಇನ್ನೊಂದು ಕಡೆ. ಹಾಗೆ ಕನಸು ಕಾಣುತ್ತ ಅತ್ಯಂತ ಸೂಕ್ಷ್ಮವಾದ ಅವನ ಕೆಲಸದಲ್ಲಿ ಹೆಚ್ಚುಕಮ್ಮಿ ಆಗುತ್ತಿದ್ದಂತೆ ಅವನ ಸಹುದ್ಯೋಗಿ ದೂರ ದಾಖಲಿಸಿಬಿಡುತ್ತಿದ್ದ. ಮರುದಿನ ಮುಂಜಾನೆ ಅದು ಸಭೆಯಲ್ಲಿ ಚರ್ಚೆಯಾಗುತ್ತಿತ್ತು. " ಯಾಕ್ರಿ ಕೆಲಸ ಮಾಡೋ ಮನಸ್ಸು ಇದ್ದಂಗಿಲ್ಲ ನಿಮಗ." ಮೇಲಾದಿಕಾರಿಯ ಅಧಿಕಾರವಾಣಿ. ಅಡಿಯಿಂದ ಮುಡಿಯವರೆಗೂ ಎರಿದ ರಕ್ತದೊತ್ತಡವನ್ನು ತಡೆದು, ಕಿವಿಯವರೆಗೂ ಹಲ್ಲು ಗಿಂಜಿ, " ಇಲ್ಲ ಸಾ, ಯಕೋ ಸ್ವಲ್ಪ." ಸಾಬೂಬು ಹೇಳಿದ. " ಇದು ಸಾರ್ವಜನಿಕ ಸಂಸ್ಥೆ ನಾಯ್ಕ, ಭಾಳಾ ಜಾಗರೂಕತೆ ಬೇಕು. ಈಗೇನು ಬಹಳಷ್ಟು ಮಂದಿ ಕೇಳುತ್ತಿಲ್ಲ. ಒಂದುವೇಳೆ ಕೇಳಿದರೆ ನಿಮ್ಮ ಮೇಲೆ ಎಷ್ಟು ದೂರು ದಾಖಲಾಗಬಹುದು, ಯೋಚಿಸಿ." ಕಾಳಜಿಯಿಂದ ಹೇಳಿ ವಾತಾವರಣ ತಿಳಿಗೊಳಿಸಲು ನೋಡಿದ. ಆದರೆ ಇತರರ ಸುಮ್ಮನೆ ಬಿಟ್ಟಾರೆಯೇ, " ಏಯ್, ಅದೇನ್ರಿ ಕೆಲಸದ ಮ್ಯಾಲೆ ನಿಗ ಇಲ್ಲಂದ್ರ ಕೆಲಸಕ್ಕೆ ಯಾಕ ಬರಬೇಕು, ನಾವು ಯಾವನಿಂದ ಅನ್ನ ತಿನ್ನುತ್ತಿದ್ದೇವೆ ಆ ವೃತ್ತಿಗೆ ಹಿಂಗೆ ಅಗೌರವ ತೋರಿಸಿದ್ರ ಮುಂದೆ ಹೆಂಗ?" ಪಿಕೆ ಖಡಕ್ಕಾಗಿ ಹೇಳಿದ. ಹಿರಯ ಅಧಿಕಾರಿ ನಾಯ್ಕನ ಕಡೆಗೆ ನೋಡಿದ. ಸೂರ್ಯಾ ನಾಯ್ಕ ಬಂದ ಸಿಟ್ಟನ್ನು ಬಿಗಿಯಾಗಿ ಹಿಡಿದು, " ಇನ್ಮೇಲ ಆಗಲ್ಲ ಸಾರ್, ಏನೊ ಹೊಸ ಕೆಲಸ, ಒಗ್ಗಿಕೊಳ್ಳೋಕೆ ಸ್ವಲ್ಪ ಕಾಲ ಹಿಡಿಯುತ್ರೆ. ಒಮ್ಮಿಂದೊಮ್ಮಿಗೆ ಪರಣಿತಿ ಸಾದ್ಯಾ ಆಗಲ್ಲ ಸಾರ್," ಕಾಲಲ್ಲಿ ಇಟ್ಟು ಹೊಡೆದಂಗೆ ಹೇಳಿದ. ಪಿಕೆ ನಿನ್ನೆ ಮೊನ್ನ ಬಂದವನು ಹೀಗೆ ಜೋರು ಬಾಯಿ ಮಾಡ್ತಾನಲ್ಲ ಅಂತ ಬೇಸರ. ಅದನ್ನು ತೋರಿಗೊಡದೆ ಮುಂದೆ

ಮಾತನಾಡವುದು ಬೇಡವೆಂದು, " ಸರಿಸರಿ, ಹೋಗಿ ಸಂಜೆ ಟ್ರಾನ್ಸಮಿಷನ್ ಚೆನ್ನಾಗಿರಲಿ" ಅಂತ ಹಾರೈಸಿ ಕಳುಸಿದ. "ಖಂಡಿತಾ ಸಾರ್, ನಿಮ್ಮ ಆರ್ಶೀವಾದ ಸದಾ ಬೇಕು." ಎದ್ದವನೆ ಮನೆ ಕಡೆಗೆ ಹೋದ. ಅವನು ಕಲಿತ ಸಾಹಿತ್ಯಕ್ಕೂ ಈಗ ಮಾಡುವ ಕೆಲಸಕ್ಕೂ ಯಾವುದೇ ಸಂಬಂಧ ಇಲ್ಲದೆ ದೈಹಿಕವಾಗಿ ಕೆಲಸ ಮಾಡುತ್ತಿದ್ದ. ಮಾನಸಿಕ ವಾಗಿ ಅವನ ಜೊತೆ ಓದಿದವರು ಅನಿಗಿಂತ ಹಿಂದಿದ್ದವರು ಮುಂದೆ ಹೋಗಿ ಒಳ್ಳೆಯ ಸ್ಥಿತಿಯಲ್ಲಿ ಬದುಕಿರುವಾಗ, ಸೂರ್ಯ ನಾಯ್ಕ ಎಂಬ ಹುಡುಗ ಓದುವಾಗ ಮಾಡಿದ ಹವಾ ಮುಂದೆ ಅಗದಿದ್ದಕ್ಕೆ ಸಂಕಟಪಟುತ್ತಿದ್ದ. ಈಗ ಅವನ ಮುಂದಿದ್ದ ಸವಾಲು ತಾನು ಜನರ ನಡುವ ಗುರುತಿಸಿಕೊಳ್ಳಬೇಕೆಂಬುದು. ತನ್ನ ತಂದೆ ಭಗನ್ಯನಾಯ್ಕನಂತೆ ಜನಾನುರಾಗಿಯಾಗಬೇಕು ಎಂಬುದು. ತಂದೆಯ ಪರಂಪರೆಯನ್ನು ಮುಂದುವರೆಸುವುದು ಅವನ ಬಯಕೆಯಾಗಿತ್ತು. ಹಾಗಾಗಿಯೇ ಅಂತಹ ಪರೀಕ್ಷೆಗೆ ಬೇಕಾದ ಐವತ್ತೆಂಟು ಶೇ. ಅಂಕಕ್ಕಾಗಿ ಪರದಾಡಿದ. ಅದು ಹೇಗೋ ದಕ್ಕಿತು. ಹದಿನೈದು ದಿನ ಗಳಿಕೆ ರಜೆ, ಆರೋಗ್ಯದ ರಜೆ, ಒಮ್ಮೆಲೇ ಹಾಕಿ ಓದೋದಕ್ಕೆ ಬಂದು ಕೂತ. ಸ್ವತಂತ್ರವಾಗಿ ಕೋಣೆ ಹಿಡಿದು ಬಾಡಿಗೆ, ಊರ ಸಂಸಾರ ಅಗದ ಕೆಲಸವೆಂದು ಬಗೆದವನೆ ಹಾಸ್ಟೆಲ್ಲಲ್ಲಿದ್ದ ಕೆಲ ಗೆಳೆಯರನ್ನು ಕೂಡಿಕೊಳ್ಳಲು ಪ್ರತಯ್ನಿಸಿದ. " ಏನಪ್ಪ ನಾನು ಒಬ್ಬ ಒಂದು ಹದಿನೈದು ದಿನ," ಅಂತಿದ್ದಂಗೆ ಏಳೆಂಟು ಮಂದಿ ಇದ್ದಾಕೊ " ಬಂದೀರೋ, ನೀ ಏನು ಹೊತ್ಕೊಂಡು ಹೊಕ್ಕೀಯಾ. ಇಲ್ಲ ಯಾರದರು ತಲೆಯೊಳಗಿಂದ ಬುದ್ದಿ ಕಸ್ಕೊಂಡ ಹೋಕ್ಯಾ." ಅವನ ಗೆಳೆಯರು ಹಾಸ್ಯ ಮಾಡಿದರು.

ಹೆಂಡತಿಗೆ ಹೇಳಿ ನಾಕು ಬಟ್ಟೆತಗೊಂಡು ಬಂದು ಲೈಬ್ರರಿ ಚರ್ಚೆ ಪುಸ್ತಕದಲ್ಲಿ ಮುಳುಗಿದ. ಹದಿನೈದು ದಿನ ಕಠಿಣ ಪರಿಶ್ರಮ ಪಟ್ಟ. ಇದ್ದ ಚಿಕ್ಕ ಕೋಣೆಯಲ್ಲಿ ಎರೆಡು ಮಂಚಗಳು, ಎರೆಡು ಮಂಚದ ಮೇಲೆ ಮತ್ತಿಬ್ಬರು, ಹೊರಗಿಂದ ಯಾರಾದೂ ಬಂದರೆ ನಡುವೆ ಇಬ್ಬರು. ಅವರ ತಲೆ ಮೇಲೆ ಸೂರ್ಯನಾಯ್ಕನಿಗೆ ಜಾಗ. ಹದಿನೈದು ದಿನ ಅರ್ಹತಾ ಪರೀಕ್ಷೆಯ ಚರ್ಚೆ, ದೇಶದ ಚರ್ಚೆ, ಜನಾಂಗದ ಚರ್ಚೆ ಮತ್ತೇನೇನೋ ಚೆರ್ಚೆಗಳು ನಡೆಯುತ್ತಿದ್ದವು. ಒಮ್ಮೊಮ್ಮೆ ಯಾರೋ ಕುಡಿದು ಬಂದು ಚರ್ಚೆಯನ್ನು ವಿಷಾಯಂತರಮಾಡಿ ವೈಯುಕ್ತಿಕ ಚರ್ಚೆಗೆ ತಿರುಗಿ, " ಏಯ್, ನಿನಗೇನು ಗೊತ್ತು ಬಿಡಲೆ." ಅಂತ ಒಬ್ಬ ಅಂದರೆ, " ಏಯ್ ನೀ ಬಾಳ ಶ್ಯಾಣ ಬಿಡಲೆ." ಎಂದು ಕುಡಿದವನು. ಕೊನೆಗೆ ಈ ಕುಡಕನ ಸಾವಾಸ ಯಾಕೆಂದು ಸುಮ್ಮನಾಗುತ್ತಿದ್ದರು. ನಿಸೆ ಇಳುವವರೆಗೂ ಹಲಬಿ ಚಪ್ಪಲಿ ಬಿಡುವ ಜಾಗದಲ್ಲಿ ಮುದುಡಿಕೊಳ್ಳುತ್ತಿದ್ದ. ಯಾವತ್ತಾದರೂ ಹುಡುಗರಿಗೆ ಕೋಳಿ ತಿನ್ನಬೇಕು ಎನಿಸಿದರೆ, "ಏಯ್ ನೌಕರಿ ಮಾಡುವುವರಿದ್ದಾರಲ್ಲ."ಸೂರ್ಯನ ಕಡೆಗೆ ತೋರಿಸಿಬಿಡುತ್ತಿದ್ದರು. ಸೂರ್ಯನಿಗೆ ಧರ್ಮ ಸಂಕಟ. ಅನಿವಾರ್ಯವಾಗಿ ಉಳಿದವರು ಅರ್ದರೊಕ್ಕ ಹಾಕಿದರು ಉಳಿದ ಪಾಲನ್ನು ಇವನ ಜೇಬು ಬರಿಸುತ್ತಿತ್ತು. ಕೊಠಡಿಯ ಬಾಡಿಗೆ ಅಂತ ಸುಮ್ಮನಾಗುತ್ತಿದ್ದ. ಖರ್ಚು ತಗ್ಗಿಸಲು ಯಾರಿಗೂಗೊತ್ತಿಲ್ಲದಂತೆ ಊಟ, ಚಾ, ಟಿಫನ್ನು ಮುಗಿಸುತ್ತಿದ್ದ. ಅವನ ಹದಿನೈದು ದಿನದ ಬಜೆಟ್ ಅವನಿಗೆ ಕಡಿವಾಣ ಹಾಕುತ್ತಿತ್ತು. ಪರೀಕ್ಷೆ ಮುಗಿದಮೇಲೆ ಒತ್ತಡ ಎಲ್ಲಾ ಇಳಿದು ಸಿನೆಮಾ ನೋಡಬೇಕು ಅನಿಸಿತ್ತು. ಮಧ್ಯೆ ರಾತ್ರಿ ಒಂದುಗಂಟೆಗೆ ಬಸ್ಸಿದ್ದರಿಂದ ಕೋಣೆಯಲ್ಲು ಜಾಗ ಕೊಟ್ಟವನಿಗೆ ಕೃತಜ್ಞತೆ ಸಲ್ಲಿಸಲಾದರೂ

ಅವನನ್ನು ಜೊತೆಗೆ ಒಂದು ಸಿನೆಮಾ ನೋಡಿದ. ಕೊನೆಯಲ್ಲಿ ಸೂರ್ಯನನ್ನು ಗೆಳೆಯರು ಬೀಳ್ಕೊಟ್ಟರು.

ಸೂರ್ಯ ದಂಗಾಗಿದ್ದ. ಹದಿನೆಂಟನೆ ಶತಮಾನದ ಕೊನೆಯಲ್ಲಿ ನೆಡೆದ ದುರಂತವನ್ನು ನೂರು ವರ್ಷದ ಮುದುಕಿಯೊಬ್ಬಳು ಹೇಳೂವ ಕಥೆ. ಕೇಟ್ ವಿನ್ಸಲೆಟಳ ಸೌಂದರ್ಯಕ್ಕೆ ಮಾರು ಹೋದವರಿಲ್ಲ. ಸೂರ್ಯ ಅವನ ಗೆಳೆಯನಿಗೆ ಊಟ ಮಾಡಿಸಿ ವಾಪಾಸು ಕಳಿಸಿ ತಾನೂ ಹೋಗಬೇಕಿದ್ದ. ಪಂಜಲೂರಿಗೆ ಬಸ್ಸುಕಾದು ನಿಂತಿದ್ದ. ನಿದ್ದಿ ಅನ್ನೋದು ಕಣ್ಣು ತುಂಬಿತ್ತು. ಹತ್ತು ಗಂಟೆ ಅಂದರೆ ಕೊನೆ. ಅಮೇಲೆ ಕಣ್ಣು ಬೀಡೋದಕ್ಕೂ ಅಗ್ತಿರಲಿಲ್ಲ. ಮನೆಯಲ್ಲಿ ಎಲ್ಲರು ಮಾತಾಡ್ತಾ ಕುಂತಿದ್ರೆ ಕುಂತಲ್ಲೆ ಇವನು ಅಡ್ಡಾಗಿಬಿಡುತ್ತಿದ್ದ. ಮಾತಿನಲ್ಲಿದ್ದ ಮಂದಿ ನೋಡಿ "ಹೂಂ ಸೂರ್ಯ ಮಲಗಿ ಬಿಟ್ವಾನ." ಎಂದು ತಮ್ಮಲ್ಲೆ ಅಂದುಕೊಳ್ಳುತ್ತಿದ್ದರು. ಬೆಳಿಗ್ಗೆ ನಾಲ್ಕಾದರೂ ಸೈ ಎದ್ದು ಬಿಡುತ್ತಿದ್ದ. ಬಸ್ ನಿಲ್ದಾಣದ ಮೂಲೆಯಲ್ಲಿ ಕೂತು ತೂಕಡಿಸತೊಡಗಿದ. ಯವುದೋ ಬಸ್ಸ ಸದ್ದು ಕೇಳಿದ ತಕ್ಷಣ ಹೌಹಾರಿ ಕಣ್ಣುಬಿಟ್ಟು ನೊಡಿ ಪಕ್ಕದಲ್ಲಿದ್ದರಿಗೆ ಟೈಮ್ ಕೇಳಿ ಮತ್ತೆ ಕಣ್ಣು ಮುಚ್ಚುತ್ತಿದ್ದ. ಒಂದು ಕಾಲಿಗೆ ಬಂದ ಬಸ್ಸೇರಿ ಪಂಜಲೂರಿಗೆ ಹೋದ.

ನೌರಿಗೆ ಹೋದಾಗಲೆಲ್ಲ ಹಾಸ್ಟೆಲ್‌ಗೆ ಪೂನಾಯಿಸಿ ಕೇಳುತ್ತಿದ್ದ. ಇವತ್ತು, ನಾಳೆ, ನಾಡಿದ್ದು, ಕುತೂಹಲ ಹೆಚ್ಚತೊಡಗಿತು. ಇದರ ನಡುವೆ ಫಲಿತಾಂಶ ಏನಾಗಬಹುದು ಎಂಬ ಆತಂಕವೂ ಇತ್ತು. ತನ್ನ ಬದುಕಿನ ಕನಸನ್ನು ಸಾಕಾರ ಗೊಳಿಸಿಕೊಳ್ಳಲು ಅಬ್ದುಲ್ ಖಾದರ್ ಖಾನ್ ಎನ್ನವು ನಿವೃತ್ತ ಹೆಡ್ ಮಾಸ್ತರ್ ಮೆಟ್ರಿಕೆ ಪಾಸಾದವರಿಗೆ, ಫೇಲಾದವರಿಗೆ ಪ್ರತ್ಯೇಕವಾಗಿ ಸೆಕಂಡರಿ ಬೋರ್ಡಿಗೆ ದಾಖಲಿಸಿ ಒಂದು ಹೊಸ ಕೋರ್ಸು ತೆರೆದಿದ್ದ. ಸೂರ್ಯ ಬಾಯಿ ಚಟಕ್ಕೆ ಆ ಹುಡುಗರಿಗೆ ಒಂದೆರೆಡು ಗಂಟ ಪಾಠ ಮಾಡಲು ಹೋಗ ತೊಡಗಿದ. ಒಂದು ವರ್ಷಹೋದ ಅದು ಬಂದಾದಮೇಲೆ ಮತ್ತೊಬ್ಬ ಹುಡುಗನ ಕೂಡ ಸೇರಿ ತಾನೆ ಹಳೇ ಕಾಲದ ಮನೆ ಕೆಳಗಡೆ ದಬ್ಬೊ ಅಂಗಡಿಮೆಲ ಖಾಲಿಯಾದ ಹೊಲಸ ಕತ್ತಲುಗವಿಯಂತಹ ಕೋಣೆಯಲ್ಲಿ, ಸೂರ್ಯನ ಮಾವ ಮದುವೆಯಲ್ಲಿ ಕೊಟ್ಟಿದ್ದ ರ‍್ಯಾಲಿ ಫ್ಯಾನ್ ತಗೊಂಡು ಹೋಗಿ ಇಟ್ಟ. ಇಂಗ್ಲಿಷು, ಗಣಿತದ ಟ್ಯೂಷನ್ ತರಗತಿಗಳನ್ನು ಪ್ರಾರಂಭಿಸಿದ. ಆರಂಭಕ್ಕೆ ಆರೇಳು ಹಡುಗರು, ನಂತರ ನಾಕು, ಎರಡು ಒಂದು ಕೊನೆಗೆ ನಿಂತು ಹೋಯಿತು. ಆ ಬೇಸರದಲ್ಲಿರುವಾಗ ಫಲಿತಾಂಶ ಕೇಳೋದಕ್ಕೆ ಫೋನ್ ಮಾಡಿದ. ಅವತ್ತೇ ಮಧ್ಯಾಹ್ನ ಮೂರು ಗಂಟೆಗೆ ಫಲಿತಾಂಶ ಪ್ರಕಟಗೊಂಡಿತ್ತು. ಎಲ್ಲೋ ಇಟ್ಟಿದ್ದ ಹಾಲ್ ಟಿಕೇಟ್ ಹುಡುಕಿದ. ನಂಬರ್ ಹುಡಿಕಿಕೊಂಡು ಹೋಗಿ ಹಿರಯ ಆಧಿಕಾರಯೊಬ್ಬರ ಫೊನಿನಲ್ಲಿ ಅವರ ಅಣ್ಣನಿಗೆ ಫೊನಿನಲ್ಲೇ ಹೇಳಿದ. ಇಷ್ಟೆಲ್ಲಾ ಪ್ರಯತ್ನಿಸಿದರೂ ಸಂಜೆ ಐದು ಗಂಟೆಗೆ ಫಳಿತಾಂಶ ದಕ್ಕಿದ್ದು, ಅರ್ಹತಾ ಪರಿಕ್ಷೆಯಲ್ಲಿ ಪಾಸಾಗಿದ್ದ. ಸೂರ್ಯನಿಗೆ ಅತ್ಯಂತ ಸಂತೋಷವಾಯಿತು. ಅವಮಾನ ಅಪಮಾನಗಳೆ ತುಂಬಿದ್ದ ಬದುಕಿನಲ್ಲಿ ಭರವಸೆ ಮೂಡಿತ್ತು. " ಪರವಾಗಿಲ್ಲ ಕಣ್ರಿ, ಏನೋ ಸಾಧನೆ ಮಾಡಿದ್ರಿ." ಅಲ್ಲಿದ್ದವರೆಲ್ಲಾ ಹೇಳಿದರು. ಅವರಿಗೆ ಧನ್ಯವಾದಗಳನ್ನು ಹೇಳಿದ.

ಅದರ ಬೆನ್ನಲ್ಲೆ ಕರ್ನಾಟಕ ಲೋಕಸೇವಾ ಆಯೋಗದ ಪರೀಕ್ಷೆ. ಛಲದಂಕ ಮಲ್ಲನಂತೆ ಬೆನ್ನು ಬಿಡದ ಬೇತಾಳವಾಗಿ ಯಶಸ್ಸಿನ ಹಿಂದೆ ಬಿದಿದ್ದ. ಆಗಲೆ ಅವನ ಹೆಂಡತಿ ವಂದನಾ

ಒಂದೇನೇ ತಿಂಗಳಾಗಿತ್ತು. ಅವನ ತಮ್ಮ ಜಾಂಪನ ಹೆಂಡತಿಗೆ ಏಳುವರೆ ತಿಂಗಳು. ಅವ ತಾಯಿ ಚಾವಳಿ ಗಂಭೀರ ಸ್ಥಿತಿಯಲ್ಲಿದ್ದಳು. ಬಹುಶಃ ಇಬ್ಬರು ಮಕ್ಕಳನ್ನು ನೋಡಿಯೇ ಜೀವ ಬಿಡುವ ಲಕ್ಷಣಗಳಿದ್ದವು. ಅದೇ ವರ್ಷ ಗುಡದನಹಟ್ಟಿ ತಾಂಡದಾಗ ಮನಿಗೊಂದು ಬ್ಯಾಟಿ ಕೊಯ್ದು ಹಬ್ಬ ಮಾಡಾಕ ಯೋಜನೆ ಮಾಡಿದ್ದರು. ಸೂರ್ಯನಿಗೆ ಗಂಡು ಮಗು ಹುಟ್ಟಿದ ತಿಂಗಳಿಗೆ ನಾಮಕರಣ ಮಾಡಾಕಂತ ಬೀಗರು ಬರೋದಕ್ಕೂ ತಾಂಡದಾಗ ಮನೆ ಮನೆ ಪೂಜೆ ಅಂತ ಬ್ಯಾಟಿ ಕೋಯ್ಯೋದಕ್ಕೂ ಸರಿಯಾಯ್ತು. ಬದಿಯಾ ನಾಯ್ಕ ಒಬ್ಬನೆ ಎಲ್ಲಾ ಮಾಡೋದಂತೆ ಜಂಪಾನ ಮನಿಗೆ ಬಂದು ಅಂಟಿಕೊಂಡಿದ್ದ. ಸೂರ್ಯನಿಗೂ ಅನಿವಾರ್ಯ ಜಾಂಪ ಮಾತ್ರ. ಸೂರ್ಯನ ಅತ್ತೆ ಮುಂದೆ, " ದೊಡ್ಡ ಮರಿ ಹೊಡದೀನಕ್ಕ, ನನ್ನ ಬಳಗಾನೆ ಇಲ್ಲ." ಅಂತಂದು ಗಳಗಳ ಅತ್ತ. ಅವನ ಮದುವೆ ದಿನ ಸೂರ್ಯ ಅನುಭವಿಸಿದ ಕಷ್ಟ ಅಷ್ಟಿಷ್ಟಲ್ಲ. ಆ ಕಾಲದಲ್ಲಿ ಅವನ ಮದುವೆಗೆ ಮೂರವರೆ ಸಾವಿರ ರೂಕಡಿ ಕೊಟಿದ್ದ. ಅವನ ಪಾಲಿನ ಅರೇಳು ಎಕರೆ ಭೂಮಿ ಅನುಭವಿಸುತ್ತ ಹಣಾನು ಕೇಳಿ ಪಡೆದಿದ್ದ. ಆದರೆ ಈ ಮಾತು ಹೇಳಿದ ಮೇಲೆ ಸೂರ್ಯನ ಬೀಗರು ಜಂಪಾ ಹೇಳಿದ್ದನ್ನು ಯಥಾವತ್ತಾಗಿ ಬಂದು ಸೂರ್ಯನ ಕಿವಿ ಊದಿದರು." ನಿಮ್ಮ ತಮ್ಮ ನಾವು ಬಂದಿದ್ದಕ್ಕೆ ಬಹುಶಃ ಸಂತೋಷವಾಗಿಲ್ಲ." ಅವನ ಕಿರಿಯ ಅತ್ತೆ ಹೇಳಿದಳು. " ಯಾಕೆ ಇಡೀ ಮನಿ ಅನುಭವಿಸುತ್ತಿರುವುದು ಕಡಿಮೆ ಆತಂತಾ." ಸೂರ್ಯ ಜೋರು ಬಾಯಿ ಮಾಡಿದ. ಹೋಗಲಿ ಬಿಡು ಅಂತೇಳಿ ಆಕಡೆಯಿಂದ ಈ ಕಡೆಯಿಂದ ಸಮಾಧಾನ ಪಡಿಸಿದ. ಅದರೆ ಸರ್ವಸ್ವವನ್ನೂ ಅನುಭವಿಸುತ್ತಿರುವ ತಮ್ಮ ಆಡಿದ ಮಾತಿಗೆ ಬೆಸರಗೊಂಡು "ಇವನಿಗೆ ಏನು ಮಾಡಿದರೂ ಅಷ್ಟೆ. ಹಲ್ಲುವತಾರ್ ಥರದವನು" ಅಂದ್ಕೊಂಡು ಮನಸ್ಸು ಬದಲಿಸಿದ. ಅದಾಗಿ ಒಂದು ತಿಂಗಳೊಳಗೆ ಅವನಿಗೂ ಒಂದು ಗಂಡು ಮಗು ಆಯಿತು. ಅವನ ಹೆಂಡತಿ ತೌರುಮನೆಯಿಂದ ಬಂದು ಒಂದು ವಾರ ಆಯಿತು ಅಂಕುರ್ ಅನ್ನ ನೀರು ಬಿಟ್ಟ ಸೂರ್ಯ ಅವನ ಹೆಂಡತಿ ವಂದನಾ ಮಗ ಕರೆದುಕೊಂಡು ರಜೆ ಹಾಕಿ ಬಂದಿದ್ದ. ವಾರವಾದರೂ ಮುದುಕಿಯ ಸ್ಥಿತಿ ಸುದಾರಿಸಲಿಲ್ಲ. ಪ್ರಾಣವಾಯು ಹೋಗಲಿಲ್ಲ. ಚಾವಳಿಯ ಊರಿನವಳಾದ ಮಂಗೋಲಿ ಬಾಯಿ, ಮತ್ತೊಬ್ಬಳು ಭೀಮಣಿ ಡೊಕರಿ ಬಂದು ಮಲಗುತ್ತಿದ್ದರು. ತಾಂಡಾದ ವಾಜಾದವರು ಪ್ರಾಣ ಪಕ್ಷಿ ಹಾರಿ ಹೋದಿತು ನಾಕು ದಿನ ವಜಾಹಾಕಿ ನೋಡಿದರು. ಸ್ಥಿತಿಯಲ್ಲಿ ಬದಲಾವಣೆ ಕಾಣದಾದಾಗ ಅವರು ಬಿಟ್ಟರು. ಮನೆಯಲ್ಲಿ ಆತಂಕದ ವತಾವರಣ, ಮುದುಕಿ ಪ್ರಾಣ ಈಗ ಹೋದೀತು ಆಗ ಹೋದೀತು ಆತಂಕ. ಯಾಕೆಂದರೆ ಪ್ರಾಣ ಹೋದ ತಕ್ಷಣ ಅಳೋದು ಕರೆಯೋದು ಬಾಳ ಜಡ ಅಂತಂದು ಮುಂಜಾನೆ ಗಡಾನೆ ಉಣ್ಣಬೇಕಿತ್ತು. ಚಿಕ್ಕಮಕ್ಕಳಿರುವ ಹೆಂಗಸರು ಇಡೀ ದಿನ ಮಕ್ಕಳಿಗೆ ಮಲಿ ಕೊಡಬೇಕು. ಪ್ರತಿಯೊಂದ ಕ್ಷಣ ನರಕವಾಗಿತ್ತು. ಪ್ರಾಣ ಯಾವಾಗ ಹೋಗಬೇಕು ಅವಾಗನೆ ಹೋದೀತು. ಹತ್ತು ದಿನಗಳ ಕೋಮಾ ನಂತರ ದೇಹದಿಂದ ಮಲ ಮೂತ್ರ ಒಟ್ಟಿಗೆ ವಿಸರ್ಜನೆಯಾಗಿ ಪ್ರಾಣ ನಿಂತಿತು. ಭಟಕ್ಯಾಮಾಣಸಿನಂತೆ ಎಲ್ಲಿಂದಲೋ ಹಾರಿಬಂದ ಹಕ್ಕಯಂತೆ ಧನ್‌ಸಿಂಗನಾಯ್ಕ ವಂಶದ ಪಂಪಾನಾಯ್ಕನ ಪರಂಪರೆಯನ್ನು ಮಜಬೂತ ಮಾಡುವಲ್ಲಿ ಬಾಯಿಂದ ಚಕಾರ ಹೊರತಗೆಯದೆ ಭಗನ್ಯನಾಯ್ಕನ ಎಲ್ಲ ದೌರ್ಜನ್ಯ, ಹಿಂಸೆ, ನೋವು, ಮಾನಸಿಕ ಒತ್ತಡ ಎಲ್ಲವನ್ನು ಸಹಿಸಿಕೊಂಡು ಬದುಕಿ ಬಾಳಿದ, ಹತ್ತು ಹನ್ನೊಂದು ಮಕ್ಕಳಿಗೆ ಜನ್ಮ ನೀಡಿದ ಚಾವಳಿ ಬಾಯಿ ನಿಸ್ತೇಜ ಜಡ

ದೇಹವಾಗಿದ್ದಳು. ಪರಂಪರೆಯ ಬೇರುಗಳನ್ನು ಕಳಚಿಕೊಂಡು ಹೆಮ್ಮರ ಒಂದು ಭೂಮಿಗೆ ಬುಡಮೇಲಾಗಿ ಬಿದ್ದಂತ್ತಿತ್ತು. ಹಿರಿಮಗಳು ಜೇತಿ ಬಾಯಿಯ ಹಿರೇಮಗಳು ಸಾವಿಂತ್ರಿಗೆ ಮದುವೆಯಾಗಿ ಅವಳ ಮಗಳು ವಯಸ್ಸಿಗೆ ಬಂದಿದ್ದಳು. ಹಿರಿಮಗ ಕನ್ನೀರನ ಮದುವೆ ಮಾಡಿ ಅವನ ಮಕ್ಕಳೂ ಕೈಗೆ ಬಂದಿದ್ದರು. ಹಿರಿಮಗ ಟಾಂಕ್ಯಾನ ಮಗಳು, ಮಗನ ಮದುವೆ ಯಾಗಿತ್ತು. ಮಕ್ಕಳು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು, ಇಡೀಮನೆ ಅನ್ನೋದು ಶೋಕದಲ್ಲಿ ಮುಳುಗಿತ್ತು. " ಹತ್ತು ಮಕ್ಕಳ ವಂಶದ ಬಳ್ಳಿಗಳನ್ನು ಕಣ್ಣಾರೆ ಕಂಡು ಕಣ್ಣು ಮುಚ್ಚಿದಳು. ಭಗನ್ಯನಾಯ್ಕ ದುಃಖ ತಡಿರಾಲದೆ ಅಳತೊಡಗಿದ. "ಏಯ್ ಬಗನ್ಯನಾಯ್ಕ ಅಣ್ಣ, ಜಗತ್ತಿನ ಎಲ್ಲ ರೀತಿ ರಿವಾಜು ಕಂಡುಂಡು ಸತ್ತಾಳ ಸುಮ್ಮನಾಗು. ಅಕಿ ಏನು ಅರ್ಧಕ್ಕೆ ಕೈ ಬಿಟ್ಟು ಹೋಗಿಲ್ಲ ನಿನಗ. ಸಂಸರಾ ಅನ್ನೋ ಪೂರ್ತಿ ಹೊಳೆ ಪಾರು ಮಾಡಿ ಮುತ್ತೈದಿಯಾಗಿ ಸತ್ತಾಳ ಪುಣ್ಯಾತಗಿತ್ತಿ. ನಮ್ಮಂಗ ರಂಡಮುಂಡಿಯಾಗಿ ಮಂದಿ ಕೈಯಿಂದ ಒಂದು ಮಾತು ಅನಸಿಕೊಂಡಿಲ್ಲ." ಸಾಮ್ಕಿ ಚಾವಳಿಯ ಊರಿನವಳೆ, ಚಿಕ್ಕದೊಡ್ಡಪ್ಪನ ಮಗಳು. ಆಕಿ ಕೂಡ ದನ ಮೇಯಿಸುತ್ತಿದ್ದವಳು. ದುಖಃ ತಿಡಯಾಕ ಆಗದೆ ಮನೆ ಮುಂದಿ ಮುಂಚನೆ ಬಢಾರ ಅಳತೊಡಗಿದ್ದಳು. ಅಕಿಸಮಾಧಾನ ಮಾಡಿದಳು. "ಏಯ್, ಮಾಸಿ ಸಮಾದಾನಮಾಡು, ನಮ್ಮವ್ವ ಕಷ್ಟದಾಗ, ಸುಖದಾಗ ಭಾಗಿಯಾದವಳು ನಿನೊಬ್ಬಳೆ. ಸಮಾಧಾನ ಮಾಡ್ಕಳವ್ವ ಯಾವತ್ತು ಬಾಯಿಂದ ಬಿರುನುಡಿ ತಗೀಲಿಲ್ಲ ನನ್ನವ್ವ ಹತ್ತು ಮಂದಿ ನಡಕ್ಕ ಭೇಧ ಹುಡಕಲಿಲ್ಲ." ಜೇತಿ ಬಾಯಿ ಗುಣಗಾನ ಮಾಡಿದಳು. ಇನ್ನೂ ಮುಂದೆ ಭಗನ್ಯನಾಯ್ಕನ ಜಾಂಗಾ ಬಲು ಉಡಗುವುದನ್ನು ಊಹಿಸಿದ ಸೂರ್ಯ ಒಳ ಒಳಗೇ ರೊಧಿಸತೊಡಗಿದ.

ತಾಂಡನೆ ಹೌಹಾರಿತ್ತು. ಮುದುಕಿಯ ಕಳ್ಳುಬಳ್ಳಿ ಸೇರಿದ್ದು ನೋಡಿ " ಏಯ್ ಇವನವ್ವನ ಸಣ್ಣದೊಂದು ತಾಂಡನೇ ಅಗ್ತಾರಲ್ಲೊ ಇವರು." ಅಂತೇಳಿ ಬಗ್ಗ್ಯಾನ ವಿರೋಧಿ ಪಾಳೆಯ ಮುಂಚೂಣೆಯಲ್ಲಿದ್ದ ಸಕ್ರ್ಯಾ ತಡಕಳಾಕಾಗ್ದೆ ಹೇಳಿದ. ಯಾವಾಗ ಬ್ಯಾರೆ ಆದ್ರೋ ಅವತ್ತೆ ಅಜ್ಜಿದು ಅರ್ದ ಪ್ರಾಣ ಹೋಗಿತ್ತು. ಅದಕ್ಕೂ ಮುಂಚೆ ಹೆಂಡ ಹೋದ ದಿನಾನೆ ಇನ್ನರ್ಧ ಹೋಗಿತ್ತು. ಯಾಕಂದ್ರ ಮುದುಕಿಗೆ ರಕ್ತದ ಒತ್ತಡ, ಸಂದಿವಾತ. ವಾಯ ಇತ್ತು. ನಾಕು ಹೆಜ್ಜೆ ಹಾಕಾಕು ಸುಸ್ತು ಅಂತಿದ್ಲು. ಕಷ್ಟ ಜೀವಿ ಇಡೀದಿನ ಹೊಲದಾಗೂ ದುಡಿಬೇಕು, ಮನ್ಯಾಗ ಎಲ್ಲಾ ಮಕ್ಕಳಿಗೂ ಕೂಳು ಕುಚ್ಚಿ ಹಾಕಬೇಕು. ರಾಗಿ ಬಿಸೋದು ಅದನ್ನ ಇದನ್ನ ಹಸನು ಮಾಡೋದು ಒಂದ ಎರಡ, ದೇಹನ ಗಂಧದ ಕೊರಡಿನಂತ ತೇದು ಬಾಳೇವು ಕಟ್ಟಿದಳು. ಹತ್ತು ಮಕ್ಕಳಿಗೆ ಜನ್ಮ ನೀಡಿ ಸಂಸ್ಕಾರ ಕೊಟ್ಟು ಸಾಕಿ ಬೆಳೆಸಿದ ಹಿರಿಜೀವ. ಕರಮ್‌ತೋಟ್ ವಂಶಕ್ಕೆ ನೆರಳಿನ ಛತ್ತಾಗಿದ್ದ ವಿಶಾಲ ಆಲ ಕಳಚಿ ಬಿದ್ದಿತ್ತು.

ಸೂರ್ಯ ತಂದೆಯ ಸಲುವಾಗಿ ಅವಾಗ ಅವಾಗ ಹಬ್ಬ ಹರಿದಿನಕ್ಕೊಮ್ಮೆ ತಾಂಡಕ್ಕೆ ಬರುತ್ತಿದ್ದ. ಆತನ ಖರ್ಚಿಗೆ ಬೇಕಾದಷ್ಟು ದುಡ್ಡು ಕೊಡುತ್ತಿದ್ದ. ಸಾಲದಕ್ಕೆ ಸೂರ್ಯನ ಪಾಲಿಗೆ ಬಂದ ಹೊಲದ ಮೇರಿ ಮೇಲಿನ ಬೇವಿನ ಮರಗಳನ್ನು ಮುದಕ ಮಾರಿದ್ದ. ಜಾಂಪ, " ನನ್ನೇನು ಕೇಳ್ತಿ ನಿಮ್ಮಪ್ಪನ ಖರ್ಚಿ ಕಾಸಿಲ್ಲಂತ ಇಟ್ಟಿಗಿ ಬಟ್ಟಿಗೆ ಮಾರಿದ." ಅಂತೇಳಿ ಮುದುಕನ ಹೇಸರು ಹೇಳಿ ಹಣ ಲಪಟಾಯಿಸಿದ. ಅಷ್ಟು ಸಾಲದು ಅಂತ ಸೂರ್ಯನ ಪಾಲಿಗೆ ಮನೆ ಕಟ್ಟಿಕೊಳ್ಳಕ ಬಂದ ಜಾಗೆ ಮೆಲೆ ಕಣ್ಣಿಟ್ಟಿದ್ದ. ಸೂರ್ಯ ಬುನಾದಿ ತಗೀಬೇಕಾದರೆ ಜೇಮ್ಲಾ ಹೋತಾರೆ

ಕರೆಕೊಂಡು ಹೋಗಿ ಎರಡು ಪ್ಯಾಕೆಟ್ ಎರ್ರಿ, " ಏಯ್ ನಿನಗ ಅಟು ಜಾಗ ಬರಲ್ಲಾ, ಬರೋದು ಇಷ್ಟ" ಅಂತ ಹೇಳಿದ. ಅದಕ್ಕೆ ಸರಿಯಾಗಿ ಜೀಕಿಬಾಯಿ ಗಂಡನೂ ಸೇರಿದ್ದ. ಟಾಂಕ್ಯ ಕೆಮ್ಯಾ ಒಂದಾಗಿ ಬಾಯಿ ಸತ್ತ ಸೂರ್ಯನ ಬಾಯಿಗೆ ಮಣ್ಣು ಹಾಕಿದರು. ತೌರು ಮನೆಯಲ್ಲಿ ಜಿಂಗಾಲಿ ಸುದ್ದಿ ತಿಳಿದು ಓಡಿ ಬಂದಳು. " ಏಯ್ ಅದ್ಯಾವಾಳು ನನ್ನ ಗಂಡನ ಜಾಗದಾಗ ಕಲಂದಾಜು ಮಾಡೋಳು, ಯಾವನೋ ಗಂಡ್ಸು." ನಿಂತಿದ್ದ ಕಾಲು ಭಾಗ ಜಾಗ ಸರಿಸಿ ಮನೆ ಕಟ್ಟಾಕ ಸುರು ಹಚ್ಚಿದಳು. ಸೂರ್ಯ ಅವಾಗ ತಾನೆ ನೌಕರಿ ಬಿಟ್ಟು ಪಂಜಲೂರಿಗೆ ವಿದಾಯ ಹೇಳಿದ್ದ. ಕರ್ನಾಟಕದಲ್ಲೆ ದೊಡ್ಡರೂ ಮೊಕಲೂರಿಗೆ ಮೇಷ್ಟ್ರಾಗಿ ಬಂದಿದ್ದ. ಸುಮಾರು ಏಳುವರೆ ವರ್ಷ ಸುಧೀರ್ಘ ತಪ್ಪಿಸ್ಸು ಮಾಡಿದ್ದ. ಜಾತಕ ಪಕ್ಷಿಯಂತೆ ಕಾದಿದ್ದ. ಪ್ರತಿ ರಾತ್ರಿ ದೊಡ್ಡ ಶಾಲೆ ಮೇಷ್ಟ್ರಾಗುವ ಕನಸು ಕಾಣುತ್ತಿದ್ದ. ಅನೇಕ ಸಲ ಅವನ ಮನೆಯ ಪಕ್ಕದವರು ಪ್ರದ್ಯಾಪಕರಾದಂಗೆ ಕನಸು. ಇವನು ಮಾತ್ರ ಎಲ್ಲೂ ಆಯ್ಕೆಯಾಗದಂತೆ ಖಾಲಿ ಕನಸುಗಳು. ಆ ಕ್ಷಣಕ್ಕಾಗಿ ಅವನು ಕಾತರದಿಂದ ಕಾದಿದ್ದ.

ಮಾಕಾಲೂರಿನ ವಿಶ್ವ ವಿದ್ಯಾಲಯದಲ್ಲಿ ಪ್ರಾದ್ಯಾಪಕರ ಅರ್ಜಿ ಕರೆದಾಗ ಯಾರಿಗೋ ಕೋರಿಕೊಂಡು ತಂದು ಹಾಕಿದ್ದ. ಅರ್ಜಿ ಕೊಡೋದಕ್ಕೆ ಮಾತ್ರ ಆವನೇ ಖುದ್ದಾಗಿ ಹೋದ. ಅರ್ಜಿ ಕೊಟ್ಟು ಬರುವಾಗ ಅದೇ ವಿಶ್ವವಿದ್ಯಾಲಯದಲ್ಲಿದ್ದ ಅವರ ಪೈಕಿಯವರನ್ನು ಭೇಟಿಯಾಗಲು ಹೋದ. "ಇಲ್ಲಿ ಪ್ರೊ. ಚೆಂಗಾನಾಯ್ಕ ಅನ್ನೊರು ಎಲ್ಲಿ ಇದ್ದಾರೆ." ಕೇಳಿದ. "ಚಂಗಾನಾಯ್ಕ, ಹಿಂದೆ ಹೋಗಿ ಅವರ ಛೇಂಭರ್‌ನಲ್ಲಿ ಇರ್ತಾರೆ." ಅಂದ ಆ ವ್ಯಕ್ತಿ. ನಾಳೆ ನಾನು ಆಯ್ಕೆಯಾದರೆ ಬಹುಶಃ ಇದೇ ವಾತಾರವಣದಲ್ಲಿ ಅಡ್ಡಾಡ ಬಹುದೇನೊ ಅಂದುಕೊಳ್ಳುತ್ತಿದ್ದಂತೆ ಚೆಂಗ್ಯಾನಾಯ್ಕರ ಛೆಂಬರು ಕಂಡಿತು. " ಸಾರ್, ನಮಸ್ಕಾರ, ನಾನು ಸೂರ್ಯ ನಾಯ್ಕ ಅಂತ." ಪರಿಚೆಯಸಿಕೊಂಡ. ಅವರು ತೋರಿದ ಜಾಗದಲ್ಲಿ ಕುಳಿತುಕೊಂಡ. " ಚೆನ್ನಾಗಿದೀಯಪ್ಪ, ಅರ್ಜಿ ಹಾಕೀಯಾ, ನೋಡು ಹೇಗೆ ಏನಂತ ಒಂದು ತಿಳಿಯೋದಿಲ್ಲ. ನಿನ್ನ ಹಣಬರದಾಗ, ಈ ಪವಿತ್ರ ಜಾಗದಾಗ ಕೆಲಸ ಮಾಡೋ ಸೌಭಾಗ್ಯ ಇತ್ತಂದ್ರ ಯಾ ಮಗನಿಂದಲೂ ತಪ್ಸೋಕಾಗಲ್ಲ. ಪ್ರಯತ್ನ ಮಾಡು ಒಳ್ಳೇದಾಗಲಿ." ಚಹ ಕುಡಿಸಿ ಬೀಳ್ಕೊಟ್ಟರು. ಅದೇ ಊರಿನ ಖಾಸಗಿ ಕಾಲೇಜು ಒಂದರಲ್ಲಿ ಜಾಗ ಖಾಲಿ ಇರೋದಕ್ಕೆ ಅಜಿ ಸಲ್ಲಿಸಲು ಬಂದಿದ್ದು ನೆಪ್ಪಾಯಿತು. ಮುಂದೆ ನಾಕೈದು ತಿಂಗಳು ಮಾಕೂರಿನ ವಿಶ್ವಿದ್ಯಾಲಯದಿಂದ ಪ್ರಾದ್ಯಾಪಕ ಆಯ್ಕೆ ಸಂದರ್ಶನ ಬಂತು. ಚೆಂಗ್ಯಾನಾಯ್ಕನಿಗೆ ಫೋನ್ ಮಾಡಿದ. " ಸಾರ್ ಮತ್ತ ಹೇಗ ಮಾಡೋದು."ಅಂದ. " ನೋಡು ತಮ್ಮ, ಇಲ್ಲಿ ವಸೂಲಿ, ರೊಕ್ಕ ಪಕ್ಕ ನಡೀತಾವಂತ ಸುದ್ದಿ ಐತಿ. ಮತ್ತ ನೀ ಹೆಂಗ ಮಾಡ್ತಿ ನೋಡು." ಹೇಳಿ ಗಪ್ಪಾಗಿದ್ರು. ಅಲ್ಲಿ ಇಲ್ಲಿ ಕೇಳಿದ. ಇಂಥ ದೊಡ್ಡ ರಾಜ್ಯದಾಗ, ಸೂರ್ಯ ನಾಯ್ಕನನ್ನು ಗುರುತಿಸಿ ಶಿಫಾರಸ್ಸು ಮಾಡುವಷ್ಟು ತಾಕತ್ತು ಇಲ್ಲ. ಕೊಡಾಕ ಕಾಸೂ ಇಲ್ಲ. ಆದರೂ ಒಂದು ಪ್ರಯ;ತ್ನ ಎಂಬಂತೆ ರಾಜಕೀಯ ವ್ಯಕ್ತಿಗಳನ್ನು ಬೆಟ್ಟಿಯಾದರೆ ಹೇಗೆ? ಮನಸ್ಸಿನೊಳಗೆ ಅಲೋಚಿಸಿ ಯಾರದೋ ಕಡೆಯಿಂದ ಕಾಂತಾರಾಮ್ ಭಟ್ ಎನ್ನುವ ರಾಜಕಾರಣಿ ಹತ್ರ ಹೋಗಾಕ ತಯಾರಿ ನಡೆಸಿದ. ದೊಡ್ಡ ದೊಡ್ಡ ವರ ಮನಿಗೆ ಖಾಲಿ ಕೈಲೆ ಹೋಗಬಾರದು ಅಂತ ಅವನಿಗೆ ಆವರಪ್ಪ ಹೇಳಿದ್ದು ನೆಪ್ಪಾಗಿ ಒಂದಿಷ್ಟು ಹಣ್ಣುಗಳನ್ನು ತಗಂಡು ಹೋದ. ಸ್ವಯಂ ಪರಿಚೆಯ, " ನಾನು ಸಾರ್, ಸೂರ್ಯ ನಾಯ್ಕ ಅಂತ, ಪಂಜಲೂರಲ್ಲಿ ಕೆಲಸ ಮಾಡ್ತಿದ್ದೀನಿ.

ಏನೋ ದೊಡ್ಡ ಮನುಷ್ಯ ಆಗಬೇಕು ಅಂತ ಕನಸೈತಿ. ತಾವು ಸಿಫಾರಸ್ಸು ಮಾಡಬೇಕು ದೊಡ್ಡ ಮನಸು ಮಾಡಿ." ಅಂತೇಳಿ ಅವನ ಮುಖ ನೋಡ್ತಾ ಕುಂತ. ಒಂದು ನಿಮಿಷ ಈ ಮಗನಿಗೆ ನನ್ನ ಮನಿ ವಿಳಾಸ ಕೊಟ್ಟವರು ಯಾರು? ಹೆಂಗ ಬಂದ ಅಂತೇಳಿ ಆಲೋಚಿಸಿ ಹೇಳಿಕೇಳಿ ರಾಜಕಾರಣಿ ಅರ್ಧತಾಸಿಗೂ ಹೆಚ್ಚು ಭಾಷಣ ಮಾಡಿದ. ಸೂರ್ಯ ನಾಯಕನಿಗೆ ಕೈ ಬಿಟ್ಟರೆ ಸಾಕು ಭಾಷಣ ಬ್ಯಾಡಾಗಿತ್ತು. ಕೊನೆಯಲ್ಲಿ ದೊಡ್ಡವರ ಸಾವಾಸ ಸೂಕ್ಷ್ಮ ವಾಗಿಯೇ " ತಾವು ದೊಡ್ಡ ಮನಸು ಮಾಡಿ ಕೆಲ್ಸ ಮಾಡಿಕೊಟ್ಟರೆ ಜೀವನ ಪರ್ಯಾಂತ ನಿಮ್ಮ ನನೆಪು ಮಾಡಿಕೊಳ್ಳುತ್ತೇನ.ಸಾರ್." ಅಂದವನೆ ಧೀರ್ಘ ದಂಡ ನಮಸ್ಕಾರ ಹಾಕಿ ಹಿಂತಿರುಗಿದ. ಇದು ಅವರಪ್ಪ ಹೇಳೀದ ಎರಡನೆ ಮಂತ್ರ. " ಆಯ್ತು ನಾಯ್ಕ ನಿನ್ನ ನೋಡಿದ್ರೆ ಒಳ್ಳೆ ಹುಡುಗ ಕಾಣ್ತಿ, ನೀ ಹೋಗು ಹಿಂದಿಂದೆ ಪೂನ್ ಮಾಡಿ ಹೇಳ್ತಿನಿ" ಸಾಗು ಹಾಕಿದ.

ಬೆಂಗಳೂರಿಂದ ಮೋಕಲೂರಿಗೆ ಬಂದಾಗ ರಾತ್ರಿ ಯಾಗಿತ್ತು. ರಾತ್ರಿ ಲಾಡ್ಜಲ್ಲಿ ಮಲಗಿ ಹೊತ್ತಾರೆ ಎದ್ದು ಸ್ನಾನ ಮಾಡಿ ಮೂಲ ದಾಖಲೆಗಳನ್ನು ತಗಂಡು ಸಂದರ್ಶನಕ್ಕೆ ಹೊರಟ. ಹೊರಗಡೆ ಇಪ್ಪತ್ತೈದು ಮಂದಿ ಹೇಮಾ ಹೇಮಿ ಕುಂತಿದ್ದರು. ಒಬ್ಬ ಅದ್ಯಾವುದೋ ಊರಿನ ಡಿಸಿ ಮಗನಂತೆ, ಅವನು ಮಾತಾಡೋದು ಕೇಳಿ ಕುಂತವರೆಲ್ಲ ದಂಗಾಗಿದ್ದರು. ಸೂರ್ಯ "ತನಗಲ್ಲ ಬಿಡು ಇದು ಪೊಷ್ಟು." ಮನಸ್ಸಿನಲ್ಲೆ ಅಂದು ಕೊಂಡ. ಅದರೂ ಬಂದೀನ ಒಳಗೆ ಹೋಗಿ ಸಂದರ್ಶನ ಮಾಡೋರನ್ನ ಮಾತಾಡಿಸಿಕೊಂಡು ಬರೋಣಂತ. ಪಕ್ಕದಲ್ಲಿ ಕುಂತಿದ್ದ ಸ್ಪುರದ್ರೂಪಿ ಹುಡಿಗಿಯ ಕಡೆ ನೋಡಿದ. " ನೀವು" ಕೇಳಿದಷ್ಟೆ. ಕಾಲುಗಂಟೆ ಬಿಲ್ಡಪ್ಪ ಕೊಟ್ಟಳು. "ಯಾರುದೋ ಪ್ರಾಣಿ ಅಂದು ಕೊಂಡವಳೆ" ಅಂದವನೆ ಅವಳ ಸರದಿ ಬಂದಾಗ ಒಳ್ಳೆಯದಾಗಲಿ ಅಂತ ಅರ್ಧ ಮನಸ್ಸಿನಿಂದ ಹರಸಿದ. ಒಳಗಡೆಯಿಂದ ಬಂದ್ದದ್ದು ನೋಡಿದರೆ ಈಗಲೆ ಅವಳ ಕೈಲ್ಲಿ ಸೆಲಕ್ಷನ್ ಅದೇಶ ಇದ್ದಂತೆ ಆಡಿದಳು. ಅರ್ದ ದುಃಖಃದಿಂದಲೆ ಜವಾನ ಸೂರ್ಯ ನಾಯ್ಕ ಅಂತ ಕೂಗಿದ ನಂತರ ಬಾಗಿಲು ತೆರೆದು ಒಳಗೆ ಪ್ರವೇಶಿಸಿದೆ. " ಸಿಟ್ ಡೌನ್ ಮಿ. ಸೂರ್ಯ ನಾಯ್ಕ " ದಡೂತಿ ವ್ಯಕ್ತಿ ಹೇಳಿದ. " ಧನ್ಯವಾದಗಳು ಸಾರ್,"ಅಂತೇಳಿ ಕುಳಿತುಕೊಂಡ. " ಜಸ್ಟ್ ಸೆ ಫಿವ್ ವರ್ಡ್ಸ ಎಬೋಟ್ ಇವರ ಸೆಲ್ಪ." ಅಂತ ಅವಾಜ ಬಂತು. ಪರಚಿತ ಧ್ವನಿ . ತಿರುಗಿದ. ಅವನಿಗೆ ಎರಡು ವರ್ಷ ಪಾಠ ಮಾಡಿದ ಕಲ್ಲೂರ ಮಾಸ್ತರ್.ಅವನ ಬಗ್ಗೆ ಹೇಳಿದ ಕೆಲವೇ ಕೆಲವು ಪ್ರಶ್ನೆಗಳಿಗೆ ತೊದಲಿದಾಗ. " ನಾಯ್ಕ ನಾವು ಮನುಷ್ಯರೆ, ಗಾಬರಿ ಯಾಗದೆ ಇದ್ದ ವಿಷ್ಯವನ್ನು ಹೇಳು." ಧಡೂತಿ ವ್ಯಕ್ತಿ ಧರ್ಯ ತುಂಬಿದ. ಕೆಲ ಕ್ಷಣದ ನಂತರ ವಿಶ್ವಾಸದಿಂದ ಹೊರ ಬಂದ. ಆದರೆ ಈ ಕೆಲಸ ಸಿಗುವುದೆಂಬ ನಂಬಿಕೆ ಇರಲಿಲ್ಲ.

ವಾಪಾಸು ಪಂಜಲೂರಿಗೆ ಬಂದಾಗ ಅದೇ ತಿಂಗಳು ಕೊನೆಗೆ ಖಾಲಿ ಜೇಬು. ಹೆಂಡತಿಯನ್ನು ಕರೆದುಕೊಂಡು ಸಮುದ್ರದ ಕಿನಾರೆಗೆ ಅಡ್ಡಾಡಲು ಹೋದಾಗ, ಮಂದಿ ಪಾನಿಪುರಿ, ಐಸ್ಕ್ರೀಮ್ ತಿನ್ನುವಾಗ ಅವರನ್ನೇ ಗಮನಿಸುತ್ತಿದ್ದ ಹೆಂಡತಿಗೆ, " ಸ್ವಲ್ಪ ಇರು, ನಾನು ಪ್ರೋಪೆಸರ್ ಆದ ಮೇಲೆ ಏನು ತಿಂತಿ, ಏನು ಬಿಡ್ತಿ," ಕನಸು ಚಿಗಿರಿಸುವುದನ್ನು ಪ್ರಯತ್ನಿಸುತ್ತಿದ್ದ. ಕಿಸೆಯಲ್ಲಿ ಕಾಸಿಲ್ಲದ್ದಕ್ಕೆ ಸಮುದ್ರದಿಂದ ಮನೆಯವರೆಗೂ ಮಗುವನ್ನು ಎತ್ತಿಕೊಂಡು ಬರುತ್ತಿದ್ದ. " ನಿಮ್ಮದು ಬರೀ ಕನಸು ತೋರಿಸುವುದೇ ಆಯಿತು. ಯಾವಾಗ ಈ ಹೋಟೆಲ್‌ಗಳಲ್ಲಿ ಒಳ್ಳೆ

ಊಟ ಐಸ್ಕ್ರೀಮ್ ಕೊಡುಸ್ತೀರೊ ಆ ದೇವರಿಗೆ ಗೊತ್ತು." ಕನಸು ಕಂಡು ಕಂಡು ಬೇಜಾರಾಗಿದ್ದ ವಂನಾ ಹೇಳಿದಳು. ಭಾನುವಾರ ಸಂಜೆಗೆ ಷೇರ್ ಅಟೋಗೆ ಕೊಡಾಕ ನಾಕು ರೂಪಾಯಿ ಇಲ್ಲದೆ ಬಸ್ಸಿಗೆ ಕಾಯ್ದದ್ದು, ದುಡ್ಡು ಸಾಲದಕ್ಕೆ ಟ್ಯೂಷನ್, ಅಲ್ಲಿ ಇಲ್ಲಿ ಬೇರೆ ಕಾರ್ಯಕ್ರಮಗಳು, ದೊಡ್ಡ ಸಂಘರ್ಷವೇ ಆಗಿತ್ತು. ನಾಲ್ಕನೇ ವೇತನ ಆಯೋಗ ಬಂದಾಗ ಒಂದಿಷ್ಟು ನೆಮ್ಮದಿ ಏನೋ ಸಿಕ್ಕಿತು. ಸಾವಿರದಾ ನಾನೂರು ಇದ್ದ ಮೂಲ ಸಂಬಳ ಆರು ಸಾವಿರಕ್ಕೆ ಏರಿತು. ಅದು ಜಾರಿಗೆ ಬಂದಾಗ ಸ್ವಲ್ಪ ಹಣ ಕೈ ಸೇರಿದ್ದೇ ತಡ ಅಷ್ಟು ಹಣವನ್ನ ಏನಾದರೂ ಮಾಡಬೇಕೆಂದು ಕಾಫಿ ತೋಟಕ್ಕೆ ಆಳುಗಳನ್ನು ಕಳುಹಿಸೊದಕ್ಕೆ ಯೋಜನೆ ಹಾಕಿದ್ದ. ಅವನ ಬಳಿ ಇದ್ದ ಐವತ್ತು ಸಾವಿರ ರೂಪಾಯಿಗಳನ್ನು ಆಳುಗಳಿಗೆ ತಲಾ ಐದು, ಆರು, ಮೂರು ಸಾವಿರ ರೂಪಾಯಿಗಳಂತೆ ಮಳೆಗಾಲದಲ್ಲಿ ಒಂದಿಷ್ಟು ಮಂದಿಯನ್ನು ಕಳುಹಿಸಿದ. ಅವರು ಮೂರುನಾಲ್ಕು ತಿಂಗಳು ದುಡಿದ ಕಮಿಷನ್ ಕಾಸನ್ನು ಪಕ್ಕಾ ಮೇಸ್ತ್ರಿಯನ್ನು ನಂಬಿ ಸುಡುಗಾಡು ಸಿದ್ದರಿಗೆ, ಕೆಲ ಮಂದಿ ಅವನಿಗೆ ಗೊತ್ತಿರುವವರಿಗೆ, ಒಟ್ಟು ಐವತ್ತು ಮಂದಿಗೆ ಕಾಸು ಕೊಡಿಸಿದ. ದೀಪಾವಳಿ ಮೂರನೆ ದಿನ ಚಿಕ್ಕ ಮೇಸ್ತ್ರಿ ಸುಡುಗಾಡು ಸಿದ್ಧರ ಗುಂಪು ಕರೆದುಕೊಂಡು ಹೋಗುವಾಗ ಕೇರಿಯ ಮಂದಿ ಕೈಕೊಟ್ಟು ಓಡಿ ಹೋಗಿದ್ದರು. ಸುಡಗಾಡು ಸಿದ್ಧರು, ಸರ್‍ಯ ಮೇಸ್ತ್ರಿ ಹಿಂದಿದ್ದ ನಾಕಾರು ಜನರನ್ನು ಕರೆದುಕೊಂಡು ಜಾನೆಖಾನಾದಲ್ಲಿ ಸೇರಿಸಿದ. ಕಮಿಷನ್ ಬಸ್ ಚಾರ್ಜು ಇತ್ಯಾದಿ ಮಾತನಾಡಿದ್ದ. ಯಡವಟ್ಟು ಆಗಿದ್ದೆಂದರೆ, ಸೂರ್ಯ ತಮ್ಮ ತಾಂಡಾದ ಒಂದಿಷ್ಟು ಉಪ್ಪಾರ ಮಂದಿಗೆ ಮುಂಗಡ ಕೊಟ್ಟು ಅದ್ದೂರಿ ಟೆಂಪೋ ಒಂದರಲ್ಲಿ ಆಳು ಕರೆದುಕೊಂಡು ಹೋಗಿ ಜಾನೆಖಾನೆಗೆ ಬಿಡಲು ಹೋಗಿದ್ದ. ಕಾಫೀ ತೋಟಗಳ ಬಗ್ಗೆ ಕೇವಲ ಕೇಳಿದ್ದನೆ ಹೊರತು ನೋಡಿರಲಿಲ್ಲ. ಒಂದೇ ತರೆದ ಮನೆಯಲ್ಲಿ ಸಾಲಗ ಮಲಗಬೇಕು. ಕನಿಷ್ಟ ಬದುಕನ್ನು ಬದುಕುವ ಜನರು ಹಿಂಸೆ ಪಟ್ಟು ದುಡಿಯಬೇಕು. ಅಲ್ಲಿಯ ರೈಟರು, ಮೇಸ್ತ್ರಿಗಳು ಜನರನ್ನು ಕ್ರೂರವಾಗಿಯೇ ನಡೆಸಿಕೊಳ್ಳುತ್ತಿದ್ದರು. ಮನುಷ್ಯರನ್ನು ಮನುಷ್ಯರನ್ನಾಗಿ ನೋಡುತ್ತಿರಲಿಲ್ಲ. ಚೆನ್ನಾಗಿರುವ ಹುಡುಗಿಯರಿದ್ದರೆ ಲೈಂಗಿಕವಾಗಿ ಬಳಸಿಕೊಳ್ಳುತ್ತಿದ್ದರು. ಜಾನೆ ಖಾನದ ಮೇಸ್ತ್ರಿ ಜೋಸೆಫ್ ದೂರ್ತ ನಾಗಿದ್ದ. ವಿದ್ಯಾವಂತ ಸೂರ್ಯ ನಾಯ್ಕನನ್ನು ಕೀಳಾಗಿಯೇ ನೋಡುತ್ತಿದ್ದ. ಕಾಫಿ ತೋಟಕ್ಕೆ ಬರುವ ಜನ ದುಡಿಯುವುದಕ್ಕೆ ಅಂತ ಅನ್ನುವ ಅನುಮಾನ ಅವನದು. ಅವನನ್ನು ಜೋಪಸೆಪ್ ಕೂಲಿ ಆಳಿನ ದೃಷ್ಟಿಯಲ್ಲೇ ನೋಡುತ್ತಿದ್ದ. ಹೆಚ್ಚೆಂದರೆ ಕಮಿಷನ್ ತಿನ್ನುವ ದಳ್ಳಾಳಿ ಅಷ್ಟೆ ಸೂರ್ಯಾ ನಾಯ್ಕನಿಗೆ ಜ್ಞಾನೋದಯ ವಾಯಿತು. ತಾನು ತಪ್ಪು ಮಾಡಿದೆ ಅಂತ ಅಂದುಕೊಂಡ. ಅದೇ ಸಮಯಕ್ಕ ಅವನು ಕರ್ನಾಟಕ ಸೇವೆಯಲ್ಲಿ ಒಳ್ಳೆ ಅಂಕಗಳಿಂದ ಬಂದಿದ್ದೇ ತಡ ಅವನ ಸ್ಥಾನ ಹುಡುಕಲು ಕಂಪ್ಯೂಟರ್‌ನಲ್ಲ ಪ್ರಿಂಟ್ ತಂದು ಹುಡುಕುತ್ತಾನೆ. ಅವನ ಸ್ಥಾನಕ್ಕೆ ಯಾವುದೇ ಸೇವೆ ಸಿಗುವುದ ಅನುಮಾನ ಆಯ್ತು. ಆದರೂ ಬೊರ್ಡಿನಲ್ಲಿ ನಡೆಯುವ ಗೋಲ್‌ಮಾಲ್‌ನಲ್ಲಿ ಏನು ಬೇಕಾದರೂ ಅಗಬಹುದು ಎಂದು ಅರಿತ್ತಿದ್ದ. ಕೈಯಲ್ಲಿ ಕಾಸಿಲ್ಲದ್ದಿದ್ದರೂ ಹೇಳಿದ, " ಜೋಸೆಫ್ ಸಾಹೇಬರೆ, ಮತ್ತೆ ನೋಡಿ ಕರ್ನಾಟಕ ಲೋಕ ಸೇವಾ ಆಯೋಗದ ಪರೀಕ್ಷೆಯಲ್ಲಿ ಏಳುನೂರಾ ಎಂಭತ್ತೇಳು ಮಾರ್ಕ್ಸ್ ತಗೊಂಡಿದ್ದೀನಿ. ಏನಾದರೂ ಇನಪ್ಲುಯೆನ್ಸ್ ಮಾಡಾಕಾದೀತೆ.". ಜೋಸೆಫ್ ಸಿಕ್ಕಂಗಾತು ಒಂದು ಬಕ್ರಾ ಅಂತೇಳಿ, " ಆಯ್ತು ನಾಯ್ಕ ನಮ್ಮ ತೋಟದ ಮಾಲಿಕರಿಗೆ ಮುಖ್ಯಮಂತ್ರಿ ಸಂಬಂಧಿಕರಾಗಬೇಕು, ನೀನು ಹೂಂ ಅಂದ್ರೆ ಹದಿನೈದು ಇಪ್ಪತ್ತು ಲಕ್ಷದಲ್ಲಿ ಡೀಲ್‌ಮಾಡಿ ಮುಗಿಸಿಬಿಡ್ತೇನಿ."ಅಂದ. ಠಿಕಾಣೆ ಇಲ್ಲದ ಸೂರ್ಯ ಲಕ್ಷಗಳ ಮಾತು ಕೇಳಿ ಕಕ್ಕಾಬಿಕ್ಕಿಯಾಗಿ,

" ಏನಂದ್ರಿ ಸಾಹೇಬ್ರ." ಅರ್ಥವಾಗದೆ ಅವನ ಮಾರಿ ನೋಡಿದ. " ಒಂದು ಇಪ್ಪತ್ತು ಲಕ್ಷ ಜೋಡಿಸ್ಕೋ ನಾನು ಮಾಡ್ಸಿ ಕೋಡ್ತೀನಿ." ಗಂಟಾಘೋಷವಾಗಿ ಹೇಳಿದ. ಸೂರ್ಯನಿಗೆ ತನ್ನ ಕಾಲ ಕೆಳಗೆ ಭುಮಿ ಬಾಯಿಬಿಟ್ಟಂತಾಗಿತ್ತು. " ಆಂ," ಎಂದು ಉಸಿರುಬಿಟ್ಟು, "ಅದು ಹೆಚ್ಚಾಗಲಿಲ್ವೆ." ಗೊಣಗಿದ. " ರೀ ಮೇಸ್ತ್ರಿ, ತಿಳಿದವರು, ಓದಿದವನು ಅಂತಿಯಾ. ಇದೇ ಏನು ನಿಮ್ಮ ಜ್ಞಾನ, ನಾಳೆ ಕ್ಲಾಸ್ ಒನ್ ಆಫೀಸರ್ ಆಗಿ ಜೀಪಲ್ಲಿ ಅಡ್ಡಾಡುವವರು ಹೇಳುವ ಮತಾ ಇದು." ಕಡ್ಡೆ ಗಿಡ ಹತ್ತಿಸಿದ. " ಆದ್ರೂ ಸಾರ್ ನಮ್ಮಂತೋರಿಗೆ ಈ ಹಣ ಹೆಚ್ಚಾಯಿತು." ಇದನ್ನು ಮಾತ್ರ ಸ್ಪಷ್ಟವಾಗಿಯೇ ಹೇಳಿದ. " ನಿಮ್ಮಿಷ್ಟ" ಅಂದ ಜೋಸೆಫ್ ಎದ್ದು ಒಳಗೆ ನಡೆದ.

ಜಾನೆಖಾನದಿಂದ ಮಂದಿ ಓಡಿ ಹೋಗಿ ಬೇರೆ ಕಡೆ ಕೆಲಸ ಮಾಡುತ್ತಿದ್ದರು. ಅಲ್ಲಿಗೆ ಅವನ ಕಮಿಷನ್ ಎಕ್ಕುಟ್ಟಿ ಹೋಯ್ತು. ಉಳ್ಳಗಡ್ಡಿ ಲಾಭ ಕೌದಿಯೊಳಗೆ ಹೋತು ಅನ್ನೊಹಂಗ ಆಗಿತ್ತು ಸೂರ್ಯ ನಾಯ್ಕನ ಕತೆ. ಏನೋ ಮಾಡೋದಕ್ಕೆ ಹೋಗಿ ಮತ್ತೇನೋ ಆಗಿತ್ತು. ಪಕ್ಕಾ ಮೇಸ್ತ್ರಿ ಮಾತು ಕೇಳಿದ ಉಪ್ಪಾರ ಹುಡುಗರು ಅವರನ್ನು ಓಡಿಸಿ ಅವರಲ್ಲೆ ಒಬ್ಬ ಮೇಸ್ತ್ರಿಯಾಗಿ ಮನಸ್ಸಿಗೆ ಬಂದಂಗೆ ಕೆಲಸ ಮಾಡಿ ಸರಿಯಾಗಿ ಲೆಕ್ಕ ಕೊಡೆದೆ, ಹಾಕಿದ ಗಂಟು ಎಂಟಣಿ ಆಗಿ ಹೋಯಿತು ಸುದ್ದಿ ಕೇಳಿದ ಭಗನ್ಯನಾಯ್ಕ " ಲೇ ಸೂರ್ಯ, ಗಿಣಗೆ ಹೇಳಿದಂಗ ಹೇಳಿದೆ. ಬ್ಯಾಡಲೆ ಆ ಕಾಫೀ ತೋಟದ ಸಾವಾಸ ಅಂತ. ಅಲ್ಲ ಈ ಕಾಫೀ ತೋಟಕ್ಕೆ ಆಳು ಕಟ್ಟಿದ ಯಾ ಮಗ ಉದ್ದಾರ ಆಗ್ಯಾನ ತೋರ್ಸು?" ಸೂರ್ಯನ ಮಕ ನೋಡಿದ. ಅಂವ ಕೆಳಗ ಚೆಂಡು ಹಾಕ್ಕೊಂಡು ಅಪರಾಧಕ್ಕೆ ಪ್ರಾಯಶ್ಚಿತ ಮಾಡಿಕೊಳ್ಳುತ್ತಿದ್ದ.

ಸೂರ್ಯಾನಾಯ್ಕ ವಂದನಾಗೆ ಇಬ್ಬರು ಗಂಡು ಮಕ್ಕಳು, ದೊಡ್ಡವನು ಅಂಕುರ್, ಸಣ್ಣವನು ಅವದೇಶ್ ಅವನ ತಮ್ಮ ಜಂಬನಿಕೆ ಐದು ಮಕ್ಕಳು, ಸೂರ್ಯ ಪಂಜಲೂರಿನಲ್ಲಿ ಕೆಲಸಮಾಡುವಾಗ ಭಗನ್ಯನಾಯ್ಕನ್ನ ಕರ್ಕೊಂಡು ಮದ್ರಾಸು, ಕನ್ಯಾಕುಮಾರಿ ತಿಮ್ಮಪ್ಪ ದರ್ಶನ ಮಾಡಿದ್ದನ್ನ ಕತಿ ಮಾಡಿ ಮಂದಿ ಮುಂದ ಹೇಳಿದ್ದ. ಅದಾಗಿ ಅವನು ಮಾಸಲೂರಿಗೆ ಹೋದಾಗ, ತಮ್ಮನ ಹೆಂಡತಿಕೂಡ ಮುನಿಸಿಕೊಂಡಿದ್ದ ಅವನ ಅಪ್ಪ ಮಾಸ ಊರಿಗೆ ಬಂದಿದ್ದು ದೊಡ್ಡ ಪಟ್ಟಣ, ಹಳ್ಳಿಯಲ್ಲಿ ಮನೆಯಿಂದ ಗಟ್ಟೈಳಿ ಚಾ ದುಕಾನ್ ಮಟ "ಹೆಂಗಡಿ ಭಗನ್ಯ ದೊಡ್ಡಪ್ಪ, ಅಜ್ಜ, ಮಾಮ, ಕಾಕ" ಅಂತಮಂದಿ ಮಾತಾಡಿಸಿ, ಸಲಹೆ ಕೇಳೋರು. ನಾಡಸುತ್ತ ಆಸ್ಪತ್ರೆಗೆ ತೋರ್ಸಿ ಬೆನ್ನ ನರ ವಾಸಿಯಾಗದ್ದಕ್ಕೆ "ಮಾಮ ದಸ್ಸೆಕ ಹಾತೊಮಾರ್ತೊ ನಸ್ ಛಳ್ ಕರನ್ ವೇಗಿಚ" (ಮಾಮ, ಒಸಿ ಬಿಸೆಕಲ್ ಗೂಟ ಹೊಡಿತೀಯಾ ನರ ಛಳ್ ಅಂದ್ಯೆತೆ) ಅಂತ ಮಂದಿ ನಡುದಾರಿಯೊಳಗೆ ಕೇಳ್ತಿದ್ರು. "ಲೇ ತಮ್ಮ ನಾಳೆ ಮುಂಚಾನಿ ನೀರಮಟ್ಟದಂಗ ಬಾ" ಅಂತಂದು, ಅಂವ ಬರಾಕ ಮುಂಚೆ ಎದ್ದು ಊರದಕ್ಕ ಹೊಲಕ್ಕ ಹೋಗಿ ಅಡ್ಡಾಡಿ ಬಂದು ಮಕ ತೊಕ್ಕೊಂಡು, ಸೂರ್ಯನಿಗೆ ಎದರ ನಿಂತು ಕೌದಿಯೊಳಗೆ ನಮಸ್ಕಾರ ಮಾಡಿ, ನಿನ್ನೆ ಹೇಳಿದವನು ಬಂದರೆ ಏಳು ಕಲ್ಲುಗಳನ್ನು ಸಾಲಿಗೆ ಜೋಡಿಸಿ, ಬಿಸೊಕಲ್ಲಿನ ಗೂಟದಿಂದ ಏನೊಮಂತ್ರ ಹೇಳಿ ನರಕ್ಕೆ ಹೊಂಡಿತ್ತಿದ್ದ. ಹೊಂಡದಕಲ್ಲು ಮುಂದೆ ಬಿಸಾಕಿ ಮತ್ತೊಂದು ಕಲ್ಲಿಗೆ ನಾಕು ಮಂತ್ರ ಹೇಳಿ, ನಿವಾಳಿಸಿ ಮುಂದಕ ಎಸಿತಿದ್ದು. ಹಿಂಗ ಎಲ್ಡವಾರ ಆದಿಂದ, ಇಂಗ್ಲಿಷ್ ದವಾಖಾನಿಗೆ ಹೋದು ವಾಸಿಯಾಗಿ ಸೊಂಟ ನೋವು ಮಾಯ ಆಗ್ತಿತ್ತು. ಭಂಗಿನಾಯ್ಕ,

ಯಾರಿಂದ ಕಲ್ತ, ಹೇಗಕಲ್ತನೊ ಎರಡು ವಿದ್ಯೆಗಳನ್ನು ಕಲ್ತಿದ್ದ. ಅದನ್ನ ದೇವರು ಮೈಮೇಲೆ ಬರ್ತಿದ ಅವನ ಐದನೆ ಮಗ ಅಂದಾನಿ ಮದ ಮದಲು "ಹೂಂ ಹೂಂ" ಅಂತಂದು ಬಾಯಿಗೆ ಬಂದಂಗೆ ದೇವರು ಬಂದಾಗ ಮಾತಾಡ್ತಿದ್ದಾ. ಕುಡದ ನಿಷೆದಾಗ ಭಗನ್ಯಾ–ಚಾವಳಿ.

"ಯಾಡಿದೇಕೆಸ್ ಕಾಳೋ ವಾತೇಕ ಮನಕ್ಕಾ ಭಾ ಪೂಜ್ ಸಾಯಿವೇಸಾಲ" (ಯವ್ವತಾಯಿ ನೀನಕಾಪಾಡಬೇಕು. ನಾವೊ ಕರಿತಲಿ ಮನುಷ್ಯನ ನೀನ ಕಾಪಾಡಬೇಕು) ಅಂತಂದು ಕೈ ಮುಗದು ದೇವರ ಜೊತೆಗೆ ಸಂಭಾಷಣೆ ನಡೆಸುತ್ತಿದ್ದರು. ಯಾವಾಗಲಾದರೂ ಊರಿಗೆ ಬರ್ತಿದ್ದ ಸೂರ್ಯನಿಗೆ ಇದೊಂದು ಸವಾಲಾಗಿತ್ತು. "ಅಲ್ಲಾ ಈ ಶೂದ್ರ ದೇವರು ಸಂಸ್ಕೃತದಲ್ಲಿ ಮಾತಾಡದೆ ಗೋರಬೋಲಿಯಲ್ಲಿ ನೇರವಾಗಿ ಮಾತಾಡ್ತಾವಲ್ಲಾ ಎಂಥ ಗೋಜಿಗ" ಅನೇಕ ಸಂಸ್ಕೃತ ಪಂಡಿತರೊಂದಿಗೆ ಚರ್ಚಿಸಿದ. ಅವು ಸಂದಿಗ್ದಲ್ಲಿರುವುದರಿಂದ, ಹೆಚ್ಚು ಕಮ್ಮಿ ಮಾತಾಡಿದ್ರ ತಮ್ಮ ಬಣ್ಣ ಬಯಲಾದೀತು ಅಂತೇಳಿ ನಕ್ಕುಸುಮ್ಮನಾಗಿದ್ದರು.

ಇಂಥ ಪರಿಸರದಲ್ಲಿ ಬದುಕಿದ್ದ ಭಗನ್ಯನಾಯ್ಕ, ಮಾಲೂರಿನ ಕ್ವಾಟರ್ಸ್‌ನ ಬದುಕಿಗೆ ಹೊಂದಿಕೊಳ್ಳಲು ಒದ್ದಾಡಿದ, ಮೇಲಂತಸ್ಥಿನ ಮನೆ, ಮಾತಾಡಲು ಮಂದಿನೆ ಇಲ್ಲಾ. ಬಹಿರ್ದೆಸೆಗೆ ಹೋಗಾಕ ವಿದೇಶಿ ಕಕ್ಕಸು, ಹೇಳಾಕ ಆಗದೆ ಅನುಭವಿಸಲಕ್ಕೂ ಆಗದೆ ತನ್ನೊಳಗೆ ನಡೆದ ಹೊಯ್ದಾಟವನ್ನು ನುಂಗಿಕೊಂಡಿದ್ದ. ಪ್ರತಿ ದಿನ ಸಾರಾಯಿ ತಪ್ಪಂಗಿಲ್ಲಾ. ವಾರಕ್ಕೊಮ್ಮೆ ಮೀನು, ಮಾಂಸದ ಅಡುಗೆ ಆಗಲೇ ಬೇಕು. ಯಾಕಂದ್ರ ಗುಡದಟ್ಟಿ ತಾಂಡದ ಕೆರೆ ತುಂಬಿದ್ರೆ ಸಾಕು ಮೀನು ಏಡಿಗೇನು ಕೊರತೆನೆ ಇರಲಿಲ್ಲಾ. ಖುದ್ದಾಗಿ ಬಗನ್ಯಾನಾಯ್ಕನೆ ಒಳ್ಳೆಯ ಕೈಯುಡಿಕೆಯಿಂದಲೆ ಮೀನುಗಳನ್ನು ಹಿಡಿಯುವುದರಲ್ಲಿ ನಿಷ್ಣತನಾಗಿದ್ದ. ಪರಿಸ್ಥಿತಿ ಹೀಗಿರುವಾಗ ಸೂರ್ಯನಿಗೆ ಬದುಕು ಸಂದಿಗ್ಧವಾಗಿತ್ತು. ಅವನ ಕ್ವಾಟರ್ಸ್‌ನಿಂದ ಕಿಲೋಮೀಟರ್ ದೂರದಾಗಿದ್ದ ಸರಾಯ ಅಂಗಡಿಯಿಂದ ವಾರಕ್ಕೆ ನಾಕು ದೊಡ್ಡ ಪಾಕೇಟು, ಎರಡು ಮೂರು ದಿನಗಳಿಗೆ ಅರ್ಧ ಪಾಕೇಟು ಖರೀಧಿಸುತ್ತಿದ್ದ. ಒಂದೆರಡು ಸಲ ಅವನು ಕಾಲೇಜಿನಲ್ಲಿ ಪಾಠಮಾಡುತ್ತಿದ್ದ ಪ್ರೊಫೆಸರ್ ಒಬ್ಬ ಅವನನ್ನು ನೋಡಿ, ಅಸಹ್ಯ ಪಟ್ಟಿದ್ದು, ಸೂರ್ಯ ತಲೆಕೆಡಿಸಿಕೊಳ್ಳಲಿಲ್ಲಾ, ಸತ್ಯಬೇರೆನೆ ಇದೆ. ಅವನು ಯಾವತ್ತು ಕುಡಿತ, ಸಿಗರೇಟು ಚಟಗಳಿಂದ ಬಹಳು ದೂರ ಉಳಿದಿದ್ದ. ಹೀಗಾಗಿ ಆ ಮಾಸ್ತ್ರರಿಗೆ, ಒಂದು ದಿನ ಸತ್ಯ ಅರಿವಾಗುವುದೆಂದು ನಿರಮ್ಮಳವಾಗಿದ್ದ. ಅವನ ಅಪ್ಪ ಬಗನ್ಯಾ ಮಾಲೂರಿನ ಕ್ವಾರ್ಟಸ್‌ನಲ್ಲಿದ್ದಾಗ ಎರಡನೇಯವ ಅವದೇಶ್ ಮೂರುವರ್ಷದವನು. ಆತ ಮನೆಯ ಮೂಲೆಯಲ್ಲಿ ಬೀಡಿಸೇದಿದರೆ, ಅದನ್ನ ಗಮನಿಸಿ, "ಏ, ಕೊಡು, ನನಗೆ" ಅಂತ ಕೇಳಿದ್ದ "ಏಯ್, ನೀನು ಸೇದಬಾರದಪ್ಪ" ಅಂದರೆ "ಯಾಕೆ?" ಅಂತ ಕೇಳಿದ್ದ. "ಯಾಕಂದೆ ಸೇದಿದರೆ ಸಾಯುತ್ತಾರೆ" ಅಂತ ಜಾರಿಕೊಳ್ಳಲು ನೋಡಿದ್ದ ಭಗನ್ಯ" ಮತ್ತೆ "ನಿ, ಸತ್ತಿಲ್ಲಾ".

ಅವದೇಶ ಮರುಪ್ರಶ್ನೆ ಮಾಡಿದ್ದ. "ನಾನಂದ್ರೆ ದೊಡ್ಡೋನು, ನೀ ಸಣ್ಣೋನು" ಅಂದಿದ್ಕೆ "ಏಯ್ ಸುಳ್ಳು ಹೇಳ್ತಿ, ಚುಚ್ಚತೀನಿ ನೋಡು" ಅಂತ ಹೆದರಿಸಿದ. ಅವನ ತಂದೆ ಭಗನ್ಯಾನಾಯ್ಕ ಅವರೊಂದಿಗೆ ಮಾಲೂರಿನಲ್ಲಿ ಆರು ತಿಂಗಳು ಇದಿದ್ದೆ ಗೋತ್ತಾಗಲಿಲ್ಲ. ಅವನ ತಮ್ಮನೂ, "ಕಳಸು ಅಪ್ಪನಿಗೆ, ಅಲ್ಲಿ ಸರಿಯಾಗಲಿಕ್ಕಿಲ್ಲಾ" ಅಂತ ಹೇಳಲಿಲ್ಲಾ ಇವನು ಕೇಳಲಿಲ್ಲಾ.

ಬದಿಯಾ, ಅವನ ಮಗ ಮಾಲೂರಿಂದ ದೂರದಲ್ಲಿ ಯಾವುದೇ ಇಲಾಖೆಯಲ್ಲಿ ಕೆಲಸಮಾಡ್ತಿದ್ದ. ಅವನನ್ನು ನೋಡಾಕ ಬಂದ್ರೋನು "ಊರಮ್ಮ ಬ್ಯಾಟಿ ಕಡಿತೀವಿ ಬರಾಕ ಬೇಕು. ನೀ ನ್ಲಿಲ್ಲದ ಹೆಂಗಪ್ಪ ಹಬ್ಬ ಮಾಡೋದು" ಅಂತೇಳಿ ಮಾನಸಿಕವಾಗಿ ದಬ್ಬಾಳಿಕೆಮಾಡಿದ್ದ. ಅವನ ಮಾನಸಿಕ ಬ್ಲಾಕ್ ಮೇಲಿಗೆ ಬಲಿಯಾಗಿ ಭಗನ್ಯನಾಯ್ಕ ಗುಡದಟ್ಟಿಗೆ ಹೋದವನು. ಹಾಸಿಗೆ ಹಿಡಿದಿದ್ದ. ಸೂರ್ಯನಾಯ್ಕ, ಸಾಹಿತ್ಯ ಅಕಾಡೆಮೆಯಿಂದ ಪ್ರವಾಹಕ್ಕೆ ದುಡ್ಡು ಪಡೆದು ಹದಿನೈದು ದಿನ ರಾಜಸ್ಥಾನದಲ್ಲಿ ಬಂಜಾರ ಜನಸಮೂಹದ ಅಧ್ಯಯನಕ್ಕೆ ಹೆಂಡತಿ ಮಕ್ಕಳೊಂದಿಗೆ ಹೋಗಿದ್ದು ಇನ್ನೇನು ವಾಪಾಸು ಹೊರಡಿದ್ದು. ಅವನ ತಮ್ಮ ಹಳೆಕಾಲದ ಫೋನಿನಲ್ಲೇ "ಅಪ್ಪ ಬದಕಲ್ಲೆ, ಮಾರಿನೊಡ್ಕೊಂಡು ಹೋಗು" ಅಂದಿದ್ದ. ನಾಳೆ ಬಿಡಬೇಕಾಗಿದ್ದವನು ತಂದು ಹಣಕೊಟ್ಟು ಅಂದೇ ಟಿಕೇಟ್ ಮಾಡಿಸಿ ಗಡಿ ಬಿಡಿಯಲ್ಲಿ ಜೈಪುರುದಿಂದ ವಾಪಾಸು ಹೊರಟ. ದೆಹಲಿಗೆ ಹೋಗಬೇಕು. ಇಂಡಿಯಾಗೇಟ್ ಪಾರ್ಲಿಮೆಂಟ್‌ನೋಡಬೇಕೆಂದಿದ್ದು ಮಕ್ಕಳ ಆಕೆಗೆ ಕಣ್ಣೀರು ಎರಚಿದಂತಾಗಿತ್ತು.

ಹನ್ನೊಂದು ಅಷೋಯಣಿ ಸೈನ್ಯ ಸೋತು ಕೌರವರೆಲ್ಲಾ ಹತರಾಗಿ ಮರಣ ಶಯ್ಯೆಯಲ್ಲಿದ್ದ ಬೀಷ್ಮನಂತೆ ಅವನ ತಂದೆ ಮಲಗಿದ್ದ. ಚಾವಳಿಬಾಯಿ ನಿಧನಳಾಗಿ ಬರೋಬರಿ ಹತ್ತು ವರ್ಷಗಳಾಗಿದ್ದವು. ಹತ್ತು ವರ್ಷಗಳಲ್ಲಿ ಜಗತ್ತಿನ ತುಂಬ ಬಹಳ ಬದಲಾವಣೆಗಳಾಗಿದ್ದವು. ಹತ್ತೊ ಹನ್ನಂದನೇಯ ಮೀಟು ಬುಣ್ಯ ಕರಮತೋಟನ ಪರಂಪರೆ ಹರಿಯುವ ನೀರಿನಂತೆ ಹೊಸಹೊಸರೂವನ್ನ ತಳೆಯುತ್ತಾ ಮುಂದುವರೆದಿತ್ತು. ಗುಡೆಕೋಟೆ ಅಪ್ಪೇನಹಳ್ಳಿ, ಬಂಡೆಬಸ್ಸಾಪುರ, ಚಿಕ್ಕಜೋಗಿಹಳ್ಳ, ಇನ್ನೂ ಮುರುನಾಕು ತಾಂಡಗಳಲ್ಲಿದ್ದ ಕರಮತೋಟ್ ಪಂಗಡದವರು ಆರ್ಥಿಕವಾಗಿ ಸಂಕಷ್ಟದಲ್ಲಿ ಬದುಕಿದ್ದರು. ಬಗನ್ಯಾನಾಯ್ಕ ಕುಲವೆ ಬಹಳ ಪ್ರಬಲವಾಗಿತ್ತು. ಮುಂದೆ ಮಲೆನಾಡಿನ ಕಡೆಗೆ ಹೋದ ಗುಡ್ಲೀರಿಯ ಸಹೋದರರು ಯಾವಾಗಲೋ ಒಮ್ಮೆ ಮನೆಮನೆಯ ಹಬ್ಬಕ್ಕೆ ಬಂದಿದ್ದರು. ಈಗ್ಗೆ ಇಪ್ಪತೊಂದು ವರ್ಷಗಳೆ ಆಗಿರಬೇಕು. ಗುಡದಹಟ್ಟಿ ತಾಂಡದಲ್ಲಿ ಹಬ್ಬ ಆಚರಣೆ ಮಾಡಿದ್ದು. ಅಲ್ಲಾ ಕಾರ್ಮಿಕರ ದುಡಿಮೆಯಿಂದಾನೆ ಶ್ರೀಮಂತರಾಗಿರುವ ಬಂಡವಾಳಶಾಹಿ ಲಂಬಾಣಿಗಳಿಗೆ ಈ ಮಾತು ಅನ್ವಯವಾಗೊದಿಲ್ವೇ? ಸೂರ್ಯನಾಯ್ಕ ಯೋಚಿಸಿದ್ದ. "ನಾನೇನು ಮೂರ್ಖನೆ? ಮುಠ್ಠಾಳನೆ? ವ್ಯವಹಾರ ಗೊತ್ತಿರದ ಗೂಬೆ? ವಸೂಲಿ ಮಾಡೋದಕ್ಕೆ ಬರದಿದ್ದರೆ ಹಣಕೊಡಬಾರದು. ಹಣ, ಪೆನ್ನು, ವಾಚು ಬೇರೆಯವರೆಗೆ ಕೊಡಬಾರದು. ಅವು ಅಷ್ಟು ಸರಳವಾಗಿ ವಾಪಾಸು ಬರುವುದಿಲ್ಲ" ಎನ್ನುವ ಸತ್ಯ ಸೂರ್ಯನಿಗೆ ಗೊತ್ತಿದ್ದರು. ಅವನು ಎಡವಿದ್ದ. ಅವರ ಹಿರಿಯಣ್ಣನ ಟಾಂಕ್ಯನ ಮಗ ಗುಡದಟ್ಟಿ ತಾಂಡದಲ್ಲಿ ಲಕ್ಷಾಂತರ ರೂಪಾಯಿ ಸಾಲ ಕೊಡ್ತಿದ್ದಾನೆ. ಅಂತ ಮಂದಿ ಮಾತಾಡಿ ಕೊಳ್ಳುತ್ತಿದ್ದರು. "ಅಲ್ಲ ಅವನಿಗೆ ಹೇಗೆ ಸಾಧ್ಯ ವಸೂಲಿ ಮಾಡಾಕ. ಅವನು ಸರ್ಕಾರಿ ನೌಕರ" ಸೂರ್ಯ ಅವನ ಹತ್ರ ಹೇಳಿದ. ವಡತ್ಯಾ ಸಂಬಾಜಿನ ಕೇಳಿದ." "ಎಯ್, ಕೊಡಲೇ ಅಂತ ಬಾಯಿಸತ್ತ ನಿನ್ನ ಕೈಲೆ ಆಗಾಕಿಲ್ಲ. ಗಂಟು ಬರಾಕಿಲ್ಲಾ, ಎಲ್ಲೋ ಕಳದುಹೋತು ಅಂತ ಸುಮ್ಮನಾಗಿ ಬಿಡು. ಯಾಕೆ ಕೇಳಿ ಮರ್ಯಾದಿತಕ್ಕೊಂತಿಯ" ಅಂದ ದಿನದಿಂದ ತಾಂಡದ ನಾಲ್ಕೈದು ಕುಳಗಳು ಎದುರಿಗೆ ಇದ್ದರು ಯಾವಾಗ ಬಂದೆ ಸೂರ್ಯಣ್ಣ ಅನ್ನೋದಿಲ್ಲ. "ಅಲ್ಲಾ, ಅವರೆಲ್ಲಾ ಸೇರಿ ವಡ್ತ್ಯಾ ಸಾಂಬಾಜಿಗೆ ಒಂದೆರಡು ಮೆಣಸಿನ ಕಾಯಿ ಬ್ರಾಂದಿ ಪಾಕೇಟು ಕೊಟ್ಟು

ಹಿಂಗ ಹೇಳಬಿಡು ನಿನ್ನ ಮಾತ ಕೇಳ್ತಾನ. ಬಂದಾಗೊಮ್ಮೆ ತಾಂಡ ಬಿಡವರಿಗೆ ರಿಪಿ ರಿಪಿ ಮಾಡ್ತಾನ ಅತ್ಲಾಗ" ಹೇಳಿರಬಹುದೆ ಅನ್ನು ಅನುಮನದಿಂದ ಹೆಂಡತಿ ವಂದನಾಳ ಹತ್ತಿರ ಚರ್ಚೆ ಮಾಡಿದ್ದ. "ನೀವೂ, ನಿಮ್ಮ ಸಾಲಗಾರರು. ನಿಮಗ ವ್ಯವಹಾರ ಮಾಡಕ ಬರಲ್ಲಾ ಕಣ್ರಿ, ಯಾಕೆ? ತಮ್ಮ ಪಾಲಿನದನ್ನ ಹೋಗಿ ಮಂದಿಗೆ ತಿನ್ನಿಸ್ತಿರಿ. ಮಕ್ಕಳು ಕೇಳಿದ್ರೆ, ಒಂದು ಆಟದ ಸಾಮಾನು ಕೊಡಿಸಲಿಲ್ಲಾ ಈಗ" ಉಲ್ಟಾ ಉಪದೇಶ ಕೇಳಿ. "ಥು, ಈ ಹೆಂಗಸರ ತಾವ ಯಾವತ್ತು ಸಲಹೆ ಕೇಳಬಾರದು" ಸುಮ್ಮನಾಗಿದ್ದ ಸೂರ್ಯ.

ಗುಡದಟ್ಟಿ ಪಾಂಡ ಪೂರಾ ಬದಲಾಗಿದೆ ಅನಿಸಿತು. ತಾಂಡದ ದುರಗವ್ವನ ಗುಡಿಯಿಂದ, ಹಿಂದಿನ ಓಣಿ ದಾಟುವವರೆಗೆ ದಾರಿನಡಕ್ಕು ಬರುವ ಎಲ್ಲಾ ಹಿರಿಯರ ಕಾಲಿಗೆ ಬಿದ್ದು ನಮಸ್ಕಾರ ಮಾಡುವಂತೆ ಅವನ ತಾಯಿ ಚಾವಳಿ ಬಾಯಿ ಕಲಿಸಿದ್ದಳು. "ಮಗ, ಶರಣು ಅಂದವರಿಗೆ ಮರಣ ಇಲ್ಲ ಕಣ್ಣಪ್ಪ, ದೊಡ್ಡವರ ಆಶೀರ್ವಾದ ಯಾವಾಗಲೂ ನಿನ್ನ ಕಾಪಾಡುತ್ತೆ" ಆ ಸಂಸ್ಕಾರ ಮಮತೆ ಈಗ ಇಲ್ಲ. ಗುದ್ದಮ್ಮನ ಕಟ್ಟೆಯ ಬೇವಿನ ಮರ, ತಾಂಡದ ನಡುವೆ ಇದ್ದ ಬೇವಿನ ಮರ ಈಗ ಇಲ್ಲ. ಗುಡದಟ್ಟಿ ತಾಂಡದ ತುಂಬಾ ಕುಡಿದು, ಸಾಲಬಾದೆ ತಾಳೆದೆನೋ, ಇಲ್ಲ ಚಟಕ್ಕೆ ಕುಡಿದು ಸತ್ತ ಲಮಾಣ್ಕೇರ ಹದಿಹರೆಯದ ಹೆಂಗಸರು ವಿಧವೆಯರಾಗಿದ್ದಾರೆ. ಆದರೆ, ಸಾಬರು, ಬ್ಯಾಡಕು, ಉಪ್ಪಾರು, ಲಿಂಗಾಯ್ತರು, ಬೆಸ್ತರಲ್ಲಿ ಆ ಪರಿ ಕುಡದ್ರು ಇನ್ನು ಸತ್ತಿಲ್ಲ. "ಇನ್ನೇನು, ಮುಂದಿಂದು ಇವನದೆ ಕಣವ್ವ ಸರ್ತಿ ಕಣಿವೆ" ಅಂತಿರುವಾಗಲೆ ಉಪ್ಪಾರ ಹನುಮ ಅದೆಂಗೊ ಬಚಾವಾಗಿದ್ದ. ಜನಮಾತ್ರ ಸಂಬಂಧ ಮಾಡಾಕೆ ಗುಡದಹಟ್ಟಿಗೆ ಬಂದಿರಲಿಲ್ಲಾ. ಹಳೆ ಸಂಬಂಧಗಳು ಮರಾಯಾಗಿದ್ದವು. ಹೊಸಸಂಬಂಧಗಳು ಹುಟ್ಟುಕೊಂಡಿದ್ದೆ. ಸಣ್ಣತಾಂಡದಲ್ಲಿ ಸೂರ್ಯನ ಎರಡನೆಯ ಅಕ್ಕನ ಸಂಬಂಧಿಕರು, ಸೂರ್ಯನ ತಾಯಿಯ ಕಡೆಯವರು ಎಂದು ಸಣ್ಣತಾಂಡಪೂರ ಬೀಗರೆ ಆಗಬೇಕು. ದೊಡ್ಡಕ್ಕನಿಗೆ ಎಂಟತ್ತು ಗಂಡು, ಮೂರ್ನಾಕು ಹೆಣ್ಣು ಆ ಊರಲ್ಲಿ ಅರ್ಧ ಊರು ಅವರದೆಯಾಗಿತ್ತು. ಗುಡದ ಹಟ್ಟಿಯಲ್ಲಿ ಮಾತ್ರ ಅರ್ದತಾಂಡ ಅವರದೆ ಆಗಿತ್ತು. ತಾಂಡದ ಒಬ್ಬ ಗ್ರಾಮಪಂಚಾಯ್ತಿ ಸ್ಪರ್ಧಿಯನ್ನು ಇವರೆ ಗೆಲ್ಲಿಸುವಷ್ಟು ಜನಸಂಖ್ಯೆ ಇತ್ತು. ಅದರಲ್ಲಿ, ಇಂಜಿನೀಯರ್‌ಗಳು, ಡಾಕ್ಟ್ರು, ಮೇಷ್ಟ್ರು, ಪೋಲಿಸ, ವಕೀಲರು ಎಲ್ಲಾ ಉದ್ಯೋಗದಲ್ಲು ಭಗನ್ಯಾನ ಮೊಮ್ಮಕ್ಕಳು ಪ್ರವೇಶ ಮಾಡಿದ್ದರು.

ಸೂರ್ಯನಾಯ್ಕ ಮೊದಲನೆ ತಲೆಮಾರಿನ ಅತಿ ಹೆಚ್ಚು ವಿದ್ಯಾವಂತನಾಗಿದ್ದ. ಅವನು ಮಾಲೂರಿಲ್ಲಿರುವಾಗಲೇ ಅವನ ಹೆಂಡತಿ ವಂದನಾಗೆ ಸಂಶೋದನೆ ಮಾಡಿಸಿದ್ದ. ಗುಡದಟ್ಟಿ ತಾಂಡದಲ್ಲಿ ಕಟ್ಟಿದ ಹಂಚಿನ ಮನೆ ಬಿಟ್ಟರೆ ಅವರಪ್ಪ ಕೊಟ್ಟಿದ್ದ ಆರು ಎಕರೆ ಜಮೀನಿಗೆ ಒಂದರ್ದ ಎಕರೆ ಸೋರಿಸೊದಕ್ಕೆ ಆಗಲಿಲ್ಲಾ ಎನ್ನುವ ಕೊರಗಿತ್ತು. ಗುಡದಟ್ಟಿತಾಂಡದ ದಗಲಬಾಜಿ ಜೀನಾನಾಯ್ಕನ ಎರಡಕರೆ ಜಮೀನು ಬರಿ ಐವತ್ತು ಸಾವಿರಕ್ಕೆ ತಗೊ ಅಂತ ಗಲಾಗಲಾ ಅಂದ. ಆದರೆ ಅವನ ಮೊದಲನೆ ಹೇಣ್ತಿ ಮಗ ಚಿಮಣಿ ಮಾಸ್ತರ ದೊಡ್ಡ ದಗಲಬಾಜಿ, ಅವರಪ್ಪನನ್ನು ಮೀರಿಸುವವನು ಹಂಗಾಗಿ ಆ ಜಮೀನು ಕಡಿಗೆ ತಲಿನಹಾಕಲಿಲ್ಲಾ ಕೈಯಾಗಿದ ಚೂರುಪಾರು ಮನಿಗ ಹಾಕದ ಕಾಫಿ ಸೀಮಿಗೆ ಆಳು ಕಟ್ಟಿದ್ದು ಗಂಟು ಎಂಟಾಣಿಆತು. ಅವನ ಹತ್ರ ಸಾಲ ಇಸ್ಕೊಂಡಿದ್ದ ಬುಡ್ಡಾ ಎನ್ನುವ ಹುಟ್ಟು ಲೋಫರ್ ಹೆಳದೆ ಕೇಳದೆ ಕಾಫಿ ಹರಿಯಾಕ ಹೋಗಿದ್ದ.

ಸೂರ್ಯ ಫೋನು ಮಾಡಿ. "ಏನಲೆ, ಹಡ್ಸಿಮಗನ ಕಾಸುಕೊಡು" ಅಂದ. ಹಿಂದಕ್ಕು ತಿರುಗಿ ಬುಡ್ಡಾ ನಾಯ್ಕ ಕೋಡೊ ಗಂಟಾ ಮುಚ್ಕೊಂಡಿರಲೇ ಹಡ್ಸಿ ಮಗನೆ' ಅಂದ. ಬಾಯಿಬಟ್ರೆ ಬಣ್ಣಗೇಡು ಅಂತಂದು ಯಾರಮುಂದು ಹೇಳದಂಗೆ ಬಾಯಿ ಮುಚ್ಕೊಂಡಿದ್ದ. ಆ ಕಡೆ ಪಿತಾಂಬರಿ ಮೇಸ್ತ್ರಿ ಕೊಟ್ಟದುಡ್ಡನ ಸುಡಗಾಡಸಿದ್ದರು ಕೊಟ್ಟರೆ? ವಂದಾನಳ ತಾಂಡದ ಪಕ್ಕದ ತೆಪ್ಪರಗೇರಿ ಹರಿಜನಕೇರಿ ಚಂಪಿ, ಮಣಕು "ಸಾಲ, ಯಾ ಸಾಲ, ಯಾರಕೊಟ್ಟಿದ್ದು? ಯಾವಾಗ ಕೊಟ್ಟಿದ್ದು ಅಂತೇಳಿ." ತಿರುಗಿ ಬಿದ್ದಿರು "ಥು ನಿಮ್ಮವರ ನೀವ ಉದ್ದಾರ ಆಗ್ರಲೆ" ಅಂದು ಕೇಳೋದೆ ಬಿಟ್ಟ. ಒಂಚೂರು ಮಾನ, ಮಾರ್ಯಾದೆ ಇಲ್ಲದ ಮಂದಿ ತಾವ ವಸೂಲಿ ಕಷ್ಟ "ಏ ಹೋಗಣ್ಣ ನಿಂಗೇನು ಕಮ್ಮಿ ಆಗಿರೋದು, ದೇವರು ನೌಕರಿಕೊಟಾನ" ಅಂದು ಅವನಿಗೆ ತಿರುಗಿ ಬಿಳ್ತಿದ್ರು.

ಗುಡದಟ್ಟಿ ತಾಂಡದಾಗ ಇರೊ ಜೋಡಿ ಹನುಮಂತ ದೇವರ ಮೂರ್ತಿ ಜೋಡಿಗಳನ್ನು ಮುರಿತಾ ಇದೆ ಅಂತ ಹೇಳಿ ಗಂಡಸತ್ತವಳ ಹತ್ರ ಹೋಗಿ ಸಾಂತ್ವಾನ ಹೇಳಿದಂಗಮಾಡಿ ತನ್ನ ಬೆಳಿ ಬೇಯಿಸಿಕ್ಕೊಂಡು ಹೊಕ್ಕಿದ್ರು.

ಇದ್ದ ಬದ್ದ ವಿದ್ಯಾವಂತರೊಳಗ ಸೂರ್ಯನೆ ಚಾಸ್ತಿ ಕಲ್ತಿರಬೇಕು. ಆದ್ರ ಅವನು ಪಾಂಡಕ್ಕ ಹೋದಾಗ ಮಾತ್ರ. "ಹೌದಪ್ಪ, ಎಷ್ಟು ಕೋಟಿ ಮಡಗಿಯಾ" ಗಿಂಜಗಾರ ಕನ್ನಡದ ಎಬರೇಶಿ ಕೇಳಿದ. ಅವನಿಗಿಂತ ಬಹಳ ದೊಡ್ಡವನಾದ್ದರಿಂದ ಸೂರ್ಯ" "ಎಲ್ಲಿ ಬಿಡಣ್ಣಯಾ ಕೋಟಿ. ಹೊಟ್ಟೆಗ, ಬಟ್ಟೆಗ ಮಕ್ಕಳಿಗ ಫೀಜು, ಪುಸ್ತಕ", ಪುರಾಣ ಹೇಳಿದ್ದ ಅದನ್ನು ನಿಲ್ಲಿಸಿ." ನೋಡಲೆ, ಮನೆ ಮನೆ ಪೆಟ್ರೋಲ್ ಬಂಕಿಗೆ ದುಡಿಯಾಕ ಹೋದ ನಮ್ಮ ಹುಂಬೇಸಿ ಮಗ ಕೊಟ್ರೆ ಬೆಂಗಳೂರೊಳಗೆ ನಾಕ ಸೈಟು, ದ್ಯಾಮಪುರ ಸಿಟಿ ನಡುವೆ ಒಂದೆರಡು, ಹರಿಪುರದ ಹತ್ರ ಎರಡು ಎಕ್ಕರೆ ಜಮೀನು ಕಮ್ಮಿಂದ್ರು ಒಂದು ಆರೆಂಟು ಕೋಟಿ ಬಾಳ್ತಾನ. ಏನೊ ಭಾರಿ ಓದಿ ದೊಡ್ಡ ಸಾಲಿ ಮಾಸ್ತರ ಅಂತ, ಅಲ್ಲ ತಿಂಗಳಿಗೆ ಒಂದು ಲಕ್ಷ ಪಗಾರಿಲ್ಲ ನಿನಗ" ಮರ್ಮಾಂಗಘಾತಗೊಳಿಸಿದ್ದ ಕನ್ನಡದ ಗಿಂಜಗಾರ ಉಬರೇಳಿ. ಅವನ ವೃತ್ತಿನೇ ವಿಷಯವನ್ನು ಜಿಂಗಮ್‌ನ ಹಾಗೆ ಸಣ್ಣದು ಇದಿದ್ದನ್ನು ಉಬ್ಬಿಸಿ ದೊಡ್ಡದು ಮಾಡೋದು. ಇದರ ನಡುವೆ ಸೂರ್ಯ ಏನು ಹೇಳಬೇಕಂತ ತಿಳಿಯದೆ; ಏನಪ್ಪ, ಈ ಮಂದಿ ಎಂತ ನಾಜೂಕಾಗಿ ಮಾತಾಡ್ತಾರೆ, ನಮಗೆ ಮಾತೆ ಬರಲ್ಲ. ಅನಿಸಿತ್ತು. ಹೌದ್ರಿ ಅವರು ಮಾತಿನ ಮಲ್ಲರು. ನಮ್ಮಪ್ಪನ್ನ ನೋಡಿರಲ್ಲಾ. ಸ್ಕೂಲು ಮುಗಿಸಿ, ಸಿಟಿಗ ಹೋಗಿ ಬಂದ್ರು ಅಂದ್ರೆ ಊರ ಸುದ್ದಿನೆಲ್ಲಾ ರೇಡಿಯೋದ ಹಾಗೆ ಬಿತ್ತರಿಸುತ್ತಾರೆ. ನೀವು ಅದರಿ ಮಣ್ಣು ಮುಕ್ಕ ಹಾವಿನಂತೆ ಯಾವತ್ತು ನನ್ನ ಜೊತೆಯಾಗಲಿ, ಮಕ್ಕಳ ಜೊತೆಗೆ ಮನಸ್ಸು ಬಿಚ್ಚಿ ಮಾತಾಡಲಿಲ್ಲಾ. ನಿಮಗೆ ನಗಿಸಲು ನಾವು ಪಾರ್ಟಿ ಮಾಡಬೇಕು" ವಂದನಾ ಗಿಂಜಗಾರ ಹುಂಬೇಸಿಗಿಂತಲೂ ಹುಂಬಳು ಅನಿಸಿದಳು. ಅವರವರ ರೂಢಿ, ಸಂಸಾರಕ್ಕೆ ಬೇಕಾದ ಮಾತುಗಳು ಬೇರೆ, ವ್ಯವಹಾರಕ್ಕೆ ಬೇಕಾಗುವ ಬುದ್ಧಿವಂತ ಮಾತುಗಳೇ ಬೇರೆ ಖಾಲಿಪುಗಸಟ್ಟೆ ತೌಡುಕುಟ್ಟುವ ಮಾತುಗಳೇ ಬೇರೆ. ಈ ಸತ್ಯವನ್ನು ಅವಳಿಗೆ ತಿಳಿಸುವುದು ಯಾರು?

ಸೂರ್ಯನಾಯ್ಕನ ಜಗತ್ತು ಬೇರೆನೆ ಇತ್ತು. ಅವನು ಯಾವುದೇ ಒಂದು ಮೌಲ್ಯಕ್ಕೆ ಗಂಟು ಬೀಳಲೇ ಬೇಕು ಯಾಕಂದರೆ ಅವನ ವೃತ್ತಿಯೇ ಅಂಥಹದ್ದು ವಿದ್ಯಾರ್ಥಿಗಳು ಇವನನ್ನು ಅನುಕರಣೆ ಮಡುತ್ತಿದ್ದರು. ಇವನೆ ನೀತಿ ತಪ್ಪಿದರೆ ಇಡಿ ವಿದ್ಯಾರ್ಥಿ ಸಮೂಹವೇ ಹಾಳಾಗುವುದು ಎಂಬ ನೇರ ನುಡಿ. ಆದರೆ ಅದು ಜನರಿಗೆ ಇವನೊಬ್ಬ ಕೆಲಸಕ್ಕೆ ಬಾರದವನು ಅನಿಸಿಬಿಡುತ್ತಿತ್ತು. ಗುಡದಟ್ಟಿ ಪಾಂಡದಲಿ ಒಂದು ಡಜನ್ ನಿನ್ನೆ ಮನೆ ಹುಡುಗರು ಸಾಲಿ ಬಿಟ್ಟು ಪೋಲಿಯಾದವರೆಲ್ಲಾ ಹೋಗಿದ್ದು ಬೆಂಗಳೂರಿಗೆ, ಪೆಟ್ರೋಲ್ ಬಂಕ್ ಹೊಟೇಲ್, ಅದು–ಇದು ಅಂತ. ತಾರತಿಗಡಿ ಬಾರ ವಿದ್ಯೆ ಕಲಿತು ವರ್ಷ ಒಪ್ಪತ್ತಿಗಲ್ಲ ಯಾವನೊ ನಾಕು ಕಾರು ಖರೀಧಿಸಿದ್ದಾನೆ ಅಂತಾರ, ಕೆಲವರು. ಕೋಟಿ ಸಂಪಾದನೆ ಮಾಡಿದ್ದಾನೆ ಅಂತಾರ. ಅವರು ಇವನ ಹೋಲಿಕೆಯಲ್ಲಿ ಭೂಮಿ ಆಕಾಶದ ವ್ಯತ್ಯಾಸ. ತಾಂಡದಲ್ಲಿ ಮನೆಗೆ ಎರಡು–ಮೂರು ಬೈಕುಗಳು. ತಾಂಡದ ದುರಗಮ್ಮ ಸೇವಾಭಾಯನ ಮಟ್ಟೊ ಮಣ್ಣಿಂದು ಹೋಗಿ ಪೂರಾ ಸಿಮೆಂಟಿಂದು ಆಗಿದೆ. ಸರ್ಕಾರದ ಕೆಟ್ಟ ಯೋಜನೆಯಿಂದ ತಾಂಡದ ಒಳಗೆ ಒಂದು ಬಂಡಿ ಅಡ್ಡಾಡಂಗಿಲ್ಲ ಬಡಗಲ್ಲು ಬರಂಗಿಲ್ಲ ಯಾಕಂದ್ರ ಇಡಿ ತಾಂಡದಾಗೆ ಸಿಸಿರೊಡು, ನೀರು ಹೋಗಾಕ ಚರಂಡಿ ಇಲ್ಲದೆ ರಸ್ತೆ ತುಂಬ ಕೊಳಕು, ಹೊಲಸು ನೀರು, ಮೂಲೆಗೊಂದೊಂದು ಎಗ್‌ಪ್ರೈಡ್‌ರೈಸ್ ಅಂಗಡಿಗಳು, ಬ್ರಾಂದಿಸಿಗುವ ಜಾಗಗಳು. ಆದರೆ ಹಳೆ ಜಗಳಗಳು ಹಾಗೆ ಇವೆ. ಲಂಪಗರು, ಮನಿಮುರಕರು ಹೆಚ್ಚಾಗಿದ್ದಾರೆ. ಅವನ್ಯಾರೋ ನಾಕ ಅಕ್ಷರ ಕಲ್ತು ಅರ್ಧಂಬರ್ದ ತಿಳ್ಕೊಂಡಿರೊ ಭಗನ್ಯನಾಯ್ಕನ ಮೇಲೆ ವಿಷಕಾರುತ್ತಿದ್ದು ದಲ್ಲಾಳಿದರಗ್ಯಾನ ಮೊಮ್ಮಗ ಷಣ್ಮುಕ ಅನ್ನೊನು, ತಲಾಟಿ ಹತ್ರ ಹೋಗಿ, ಯಾರ ಜಮೀನು ಯಾರ ಹೇಸರಿಗೈತೆ, ಯಾರು ಮಾರಿದ್ದಾರೆ, ಯಾರು ತಮ್ಮ ಹೆಸರಿಗೆ ಮಾಡಿಸ್ಕೊಂಡಿದ್ದಾರೆ ಅಂತ ನೋಡಿಕೊಂಡು ಬಂದು ಹೊಲದ ಒಡೆಯ ಒಂದು ಮಾತಿನ ಮೇಲೆ ಕೊಟ್ಟಿದ್ದನ್ನು ತಪ್ಪು ಸಾಬಿತು ಪಡಿಸಿ ಅವನ ಮೊಮ್ಮಕ್ಕಳಿಗೆ "ಲೇ ನಿಮ್ಮ ನಾಕ ಎಕರಿ ಹೊಲ ನಿಮ್ಮಜ್ಜನ ಹೆಸರಿಗೆ ಐತೆ. ಈಗ ಯಾರು ಮಾಡ್ತಾರೋ ಅವನಿಗೆ ಹೋಗಿ ಹೊಲಬಿಡು ಅಂತ ಹೊಲಬಿಡು ಅಂತ ಹೇಳು" ಉಟ್ಟಿದ್ದ, ಮೂರೋ–ನಾಕನೇ ತಲೆದೂರು ಹೌಹಾರಿದ. ತರ್ಲೆಷಣ್ಮುಕ ಮಾತ ಕೇಳಿ ಪಕ್ಕದ ಶಂಕಾಪುರದ ಸೋಮಿಸಿಂಗನ ಮೊಮ್ಮಗ ಅಜ್ಜನಿಗೆ ಮೀನಹಿಡಿತಿದ್ದ ಹಾಂಡಗ ಮೊಮ್ಮಗ ತಿಪ್ಪ ಕೇಳಿಯೆ ಬಿಟ್ಟು. ಅಜ್ಜಗ ಎದ್ನೊ ಬಿದ್ನೊ ಅಂತ ಕಲಾಟಿ ಹತ್ರ ಹೋಗಿ ಪರಿಸ್ಥಿತಿ ತಿಳಿದು ಹೊಂದಾಣಿಕೆಗೆ ಬಂದಿದ್ದ. ಅಜ್ಜಗನ ಮುತ್ತಜ್ಜ ಮಾಡಿದ್ದ ಮುಠಾಳತನದಿಂದಾಗಿ ಈಗ ಅವನ ಮೊಮ್ಮಗ ಅಜ್ಜಗ ಒಂದು ಲಕ್ಷ ರೂಪಾಯಿ ದಂಡ ಕೊಟ್ಟು ಹೆಸರಿಗೆ ಜಮೀನು ಮಾಡಿಸಿಕೊಂಡಿದ್ದ.

ಷಣ್ಮುಕ, ಗಿಂಜಗಾರ ಎಬರೇಶಿ, ಚಹಾದುಶಾನ್ ಶಂಕಿನಾಯ್ಕ, ಪಾಪನಾಯ್ಕ ಶಂಬುಲಿಂಗನಾಯ್ಕ ಎಲ್ಲಾ ಇದೆ ದಂದೆಗೆ ಇಳಿದಿದ್ದಾರೆ. ದಿನಾ ತಲೆ ಕೆಡಿಸಿಕೊಂಡು ಬಕರನೊಬ್ಬನನ್ನ ಹುಡುಕುವುದು ಸಂಜೆ ಪುಗ್ಸಟ್ಟೆ ಸರಾಯಿ, ಬ್ರಾಂದಿಗೆ ವ್ಯವಸ್ಥೆ ಮಾಡಿಕೊಳ್ಳುವುದು. ಕೆಲವರಿಗೆ ಹೆದರಿಸಿ, ಇನ್ನೂ ಕೆಲವರಿಗೆ ಬೆದರಿಸಿ ಮತ್ತ ಕೆಲವರಿಗೆ ಬೆಂಗಳೂರು ಪೇಪರಿನ ಅಗರ್ಭ ಶ್ರೀಮಂತ ಸಂಪಾದಕನ ಹಾಗೆ ಬ್ಲಾಕ್ ಮೇಲೆ ಮಾಡಿ ಅವತ್ತಿಂದ ಖರ್ಚು ಸರಿದೂಗಿಸುವುದು. ಹಿಂದಿನ ಹಿರಿಯರ ಮೌಲ್ಯಗಳಿಗೆ ಈ ಗುಂಪು ಕರಿಮಸಿಬಳಿಯಾಕ ನಿಂತಿತ್ತು. ತಾಂಡದ ಪಂಚಾಯ್ತಿ ಎಕ್ಕುಟ್ಟು ಹೋಗಿ ಬಹಳ ವರ್ಷಗಳಾಗಿತ್ತು. ಯಾರು ಹಟ್ಟಿನಾಯಕ?

ಯಾರು ಕಾರಬಾರಿ? ಯಾರಡಾವೂ? ಊಹುಂ ಒಂದು ಇಲ್ಲಾದಂಗೆ ನಿರ್ನಾಮ ಗೊಂಡಿದ್ದವು. ಹಿಂದೆ ತಾಂಡದ ನಾಯಕನೆಂದರೆ ಸುತ್ತ ಊರುಗಳ ಹಿರಿಯರು ಗೌರವಿಸುತ್ತಿದ್ದರು. ಅವರು ಕುಂತರೆ ಆ ಸ್ಥಾಕ್ಕೆ ಇರುತ್ತಿದ್ದ ಬೆಲೆನೆ ಬೇರೆ. ಈಗ ಅರ್ಧಂಬರ್ಧ ಕಾಲೇಜು ಮೆಟ್ಟಲು ಹತ್ತಿದವರು. ಪದವಿ ಮುಗಿಸಿ ಡಬ್ಬಲ್ ಡಿಗ್ರಿ ಮುಗಿಸಿ ಕೆಲಸ ಸಿಗದೆ-ಇರೊ ಚೂರುಪಾರು ಜಮೀನಿನಲ್ಲಿ ಕೆಲಸಮಾಡಕ ಮೈ ಬಗ್ಗದೆ ಇರು ಚಾರಸೊಬಿಸ್‌ಗಳ ಹಿಂದೆ ದೊಡ್ಡದಾಗಿ ಯಾರಬಂದ್ರೇನು ಯಾರ ಹೋದ್ರೆನು ಒಂದೇ ಆಗಿದೆ. ಸಾಲದಕ್ಕೆ ದಲ್ಲಾಳಿದರಗ್ಯಾನ ಮೊಮ್ಮಗ ಷಣ್ಮುಕನಾಯ್ಕ ಅವನ ಸಂಬಂಧಿಕ ಅದ್ಯಾವುದೋ ಪ್ರೈವೇಟ್ ಕಂಪನಿಯನ್ನೆ ಮುಳುಗಿಸಿ ತಾನು ದೊಡ್ಡ ಇಂಜಿನಿಯರ್ ಅಂತ ಹೇಳಿಕೊಂಡು ಪಾಪ ಹದಿನೆಂಟು ವಯಸ್ಸಿನ ತಾಂಡದ ಹುಡುಗಿಯನ್ನು ನಂಬಿಸಿ ಹೆಣ ಮಾಡಿದ್ದು ಮರೆತೆಹೋಗಿತ್ತು.

ಆದರೂ ಪಾಂಡ ತನ್ನಸ್ವರೂಪವನ್ನು ಬದಲಿಸಿಕೊಂಡಿದೆ. ಮುಂಗಾರು-ಹಿಂಗಾರು ಕಡಿಮೆಯಾಗುತ್ತಿದ್ದಂತೆ ನೀರಲ್ಲದಕ್ಕೆ ಕೆರೆಯ ಜಾಗವನ್ನು ಸಂಪೂರ್ಣವಾಗಿ ಮಂದಿ ಆಕ್ರಮಿಸಿಕೊಂಡು ಬೇಲಿಹಾಕಿ ಕೊಂಡಿದ್ದಾರೆ. ಕೆಲವರು ಮನೆ, ಕಣ, ಜಾಗಹಿಡಿದುಕೊಂಡು ನಮ್ಮದೆ ಅನ್ನೊ ಹಕ್ಕು ಪತ್ರವಿಲ್ಲದಿದ್ದರೂ ದಾದಾಗಿರಿ ಮೇಲೆ ಭೂಮಿಯನ್ನು ಹಡಪಿದ್ದಾರೆ. ಕೆಕ್ಕಿಗೆ ನೀರು ಹರಿದು ಬರಲು ಇದ್ದ ಇಡಿಹಳ್ಳವನ್ನು ದುಷ್ಟಮಂದಿ ಆಶೆ ಬುರುಕತನದಿಂದ ಕೆಡಿಸಿ ಕತ್ತರಿಸಿ ಜಮೀನು ಮಾಡಿಕೊಂಡಿದ್ದಾರೆ. ಒಂದು ಮಾಳಿ, ಒಂದು ಡಿಬರಿ ಏನೇನು ಉಳಿದಿಲ್ಲ ಜೋಕಟ್ಟಿ, ಕಿರುಜನಕಟ್ಟಿಗಳು ಪತ್ತೆ ಇಲ್ಲಾ, ಹುದರ್ಲಿಹಳ್ಳ, ಆಪಿನ ಹಳ್ಳ, ಸಣ್ಣಹಳ್ಳ, ದೊಡ್ಡಹಳ್ಳ ಯಾವುದೂ ಇಲ್ಲಾ. ಈಗ ಕೇವಲ ಕೆರೆಯೊಂದರ ನಾಮಾವಶೇಷದ ಕಳೆಬರಹ ಕಾಣುತ್ತಿದೆ. ಅದನ್ನು ಮಂದಿ ನಾಕು ಕಡೆಯಿಂದ ಅತಿಕ್ರಮಿಸಿದ್ದಾರೆ. ಹಿಂದೆ ಊರು ಏರಿಯ ಹಿಂದ ಇತ್ತು. ಸೂರ್ಯ ತಾನು ಬೆಳೆಯುತ್ತಿದ್ದಂತೆ ಏರಿಯ ಮೇಲೆ ಕೇರಮಾವಿನ ಮರ ಪೊಟರೆ ಹುಣಸಿಮರ, ಎತ್ತರ ಆಲದ ಮರ, ನೆರಳೆ ಮರಗಳು ಯಥೆಚ್ಚವಾಗಿದ್ದವು. ಗಿಳಿ, ಗೊರವಂಕಗಳು ಬೆಳಕ್ಕಿಸಾಲುಗಳು ಕೊಡುತ್ತಿದ್ದವು. ಮರಗಳು ಒಣಗಿ ಹೋಗಿವೆ. ತುಂಬಿಗ ಚೌಡಪ್ಪ ನೀರು ಬತ್ತಿದ ಮೇಲೆ ಶಕ್ತಿ ಕಳೆದು ಕೊಂಡಿದ್ದಾಳೆ. ಆರುನೂರು ಏಳುನೂರು ಅಡಿನೆಲಬಗೆದರು ನೀರುಸಿಗದಾಗಿದೆ. ಕಾಫೀ ತೋಟಕ್ಕೆ ಹೋಗಿ ಅಡ್ವಾನ್ಸ್ ತಂದು ಗುದ್ದಲೆ ಬೋರು ಅಂತ ಮಂದಿ ಯಾವಾಗ ಜಿದ್ದಿಗೆ ಬಿದ್ದರೊ, ಅಕ್ಕಪಕ್ಕದಲ್ಲೆ ಜೋಕು ಕೊರೆಸಿ ನೆಲದ ಶೋಷಣೆ ಮಾಡಿದ್ದಾಯಿತು. ನೀರು ಬಿದ್ದಾಗ ದಿಮಾಕು ಹೇಳತೀರದು. ಆದರೂ ಆಂಡ್ರಾಯಿಡ್ ಮೊಬೈಲು ಪೊನುಗಳು, ಕಾರುಗಳು, ಬೈಕುಗಳಿಗೆ ಲೆಕ್ಕವಿಲ್ಲ. ಪಾಂಡಬಿಟ್ಟು ಪೆಟ್ರೋಲ್ ಬಂಕ್ ಸೇರಿ ಹಡಬಿದುಡ್ಡು ಮಾಡಿದವನೆ ಸಾವುಕಾರ. ಅವನು ತಾಂಡಕ್ಕೆ ಬಂದಾಗ ಗರಿಗರಿ ಅಂಗಿ ಜೀನ್ಸ್‌ಪ್ಯಾಂಟು ಕೈಯಾಗ ಬ್ರೆಸಲೇಟು, ಎಡಗೈಯಾಗ ಮಳಉದ್ದದ ಮೊಬೈಲು ಪೋನು ನೋಡಿ ಮರುಳಾಗದ ಹೆಣ್ಣು ಮರುಳಾಗಿ" ಅಯ್ಯ ಮಾವ ಈಗ ಬಂದ್ಯಾ" ಅಣ್ಣನಾಬೇಕಾದವನು ಮಾವನಾಗಿದ್ದ.

ಸೂರ್ಯ ತನ್ನ ಅರ್ಧಶತಮಾನದ ಹಾದಿಯ ಪಯಣವನ್ನು ಬೆರಗುಗಣ್ಣಿನಿಂದಲೆ ನೋಡುತ್ತಾ ಬರುತ್ತಿದ್ದಾನೆ. ಅವನ ಆವತ್ತಿನ ಕನಸು ಹೊಟ್ಟೆತುಂಬ ಕೂಳು ಸಿಕ್ಕರೆ ಸಾಕು ಎಂಬುದಾಗಿತ್ತು. ಹಾಗಾಗಿಯೆ ಅವನು ಪಂಜಲೂರಿನಲ್ಲಿ ಸೈಕಲ್ ಮೇಲೆ ಅಡ್ಡಾಡಿದ್ದು, ನಾಕು

ರೂಪಾಯಿ ಷೇರ್ ಆಟೋಗೆ ಹೋಗಿದ್ದ. ಗಂಟೆಗಟ್ಟಲೆ ಬಸ್ಸಿಗೂ ಕಾದಿದ್ದ. ಅವನ ಎರಡನೇಯ ಮಗ ಅವದೇಶ್ ಹುಟ್ಟಿದ ಮೇಲೆ ಒಂದೊಂದೆ ಕನಸುಗಳು ಸಹಕಾರ ಗೊಳ್ಳತೊಡಗಿದವು. ಸೈಕಲು ಬಿ.ವಿ. ಎಸ್ 100 ಬೈಕ್ ಖರೀಧಿಯ ಹಂತ ತಲುಪಿತು. ಮುಂದೆ ಮಾಲೂರು ವಿಶ್ವವಿದ್ಯಾಲಯದ ಸಂಯೋಗಿ ಕಾಲೇಜಿಗೆ ಆರ್ಥಿಕವಾಗಿ ಸ್ಥಿತಿ ಸುಧಾರಿಸಿಸುತ್ತೆ ವಿನಃ ಅವನ ಮಾರ್ಕ್ಸ್ ಹಂಡ್ರೆಡ್ ಕಾರಿಗೆ ಬದಲಾಗಲಿಲ್ಲ. ಅವೇ ಕನಸುಗಳು ಕೋಟಿ ಕಾರುಬಂಗಲೆಯವು. ಈಗಲು ಕನಸುಗಳನ್ನು ಹೊತ್ತೆ ಬದುಕಿದ್ದಾನೆ.

ಮಾಲೂರಿಗೆ ಬಂದಾಗ ಹೊಸದೊಂದು ಅಧ್ಯಯನದ ಜಗತ್ತು ಎಂದು ಬಹಳ ಖಷಿಪಟ್ಟಿದ್ದ ತನ್ನ ಓದು ಅಧ್ಯಯನದಲ್ಲಿ ತನ್ನದೆ ಛಾಪನ್ನು ಹಾಕಬೇಕೆಂಬುದು ಅವನ ಮಹಾದಾಶೆಯಾಗಿತ್ತು. ಅವನ ಅಧ್ಯಯ ವಿಭಾಗದಲ್ಲಿ ಕೆಲವರು ಒಳ್ಳೆಯವರಿದ್ದರು. ಇನ್ನೂ ಕೆಲವರು ಹೊಟ್ಟೆ ಉರ್ಕೊಳ್ಳುವ ಪ್ರವೃತ್ತಿಯವರಿದ್ದರು. ಸೂರ್ಯನಾಯ್ಕ ಮಾತ್ರ, ತನ್ನ ಕೆಲಸ. ಓದು, ಭಾಷಣ ವಿದ್ಯಾರ್ಥಿಗಳ ಏಳಿಗೆ ಕುರಿತು ಸಮಯವನ್ನು ಮುಡಿಪಾಗಿ ಇಟ್ಟಿದ್ದು. ಅವನ ಜೊತೆಗೆ ಬ್ಯಾಕಲಾಗ್ ಹುದ್ದೆಯಲ್ಲಿ ಆಯ್ಕೆಯಾದವರಲ್ಲಿ ಕೆಲವರು ಇವನಿಗಿಂತಲೂ ಬಹಳ ದೊಡ್ಡವರಿದ್ದರು. ಇನ್ನೂ ಕೆಲವರು ಇವನ ವಯೋಮಾನದವರು. ಆದರೆ ಅಲ್ಲಿನ ನಡೆಯುತ್ತಿದ್ದ ರಾಜಕೀಯವೇ ವಿಭಿನ್ನವಾಗಿತ್ತು. ಅಲ್ಪಸಂಖ್ಯಾತ ಮತ್ತು ಬಹು ಸಂಖ್ಯಾತ ಬಲೀಷ್ಠ ಕೋಮುಗಳ ನಡುವೆ ಸ್ಯಾಂಡ್‌ವಿಚ್‌ಗಳಂತಾಗಿದ್ದ ಹೆಗಲಿಗೆ ಜೋಳಿಗೆ ಹಾಕಿಕೊಂಡು ಎಂಬತ್ತರ ದಶಕದ ವೇದಾಂತಿಯಂತೆ ಪೋಜುಕೊಡುತ್ತಿದ್ದು ದಾಡಿ ಉಳ್ಳ ಮೇಷ್ಟ್ರು ಪಕ್ಕ ಜಾತಿವಾದಿಯಾಗಿದ್ದ ಬಹುಸಂಖ್ಯೆಯ ಆತ, ಅವನಂತೆಯೆ ಸಜಾ ಹಾಕಿದರೆ ಮಾತ್ರ ಒಂದು ಹಂತದವರೆಗೆ ಬದುಕಲು ಬಿಡುತ್ತಿದ್ದ ಇಲ್ಲದಿದ್ದರೆ ತರಗಲೆಯಂತೆ ಧೂಳಿ ಪಟ ಮಾಡುತ್ತಿದ್ದ. ಮತ್ತೊಬ್ಬನು ಸುಟ್ಟುಬದನೆ ಕಾಯಿಯಂತೆ ಮಾರಿಯವನು. ಇಬ್ಬರಿಗೆ ಮೋಸಮಾಡಿ ಹತ್ತು ಎಕ್ಕರೆ ಮಾಲೂರು ಸಮೀಪ ಜಮೀನು ತಗೊಂಡು ಉಳಿದಿಬ್ಬರಿಗೂ ಹಾಗೂ ಖುದ್ದು ರೈತರಿಗೆ ಟೋಪಿ ಹಾಕಿದ್ದ. ಅವನು ಸೂರ್ಯನ ಏಳಿಗೆಯನ್ನ ಕಂಡು ಕೆಂಡಮಂಡಲವಾಗಿದ್ದು. ಸೂರ್ಯನಾಯ್ಕ ಆದಿವಾಸಿನೋ, ಮೂಲನಿವಾಸಿನೊ ಇಲ್ಲ ಕರ್ನಾಟಕ ರಾಜ್ಯದ ಪರಿಶಿಷ್ಟ ಜಾತಿ ಆದರೆ, ಅವನ ಅವಕಾಶದಲ್ಲಿ ಸೂರ್ಯ ಒಬ್ಬನೆ ಪಾಲುದಾರ, ಕಲಿಮುಸುಡಿಯವನು, ಎಲ್ಲರನ್ನೂ ಸ್ವೀಕರಿಸುವ ಜಾಯಮಾನಕ್ಕೆ ಸೇರದ ಹೊರದಟ್ಟಿದ್ದ. ಮಾಸಲೂರಿನ ಇವನ ಆರಂಭ ಬಹಳ ಕಠಿಣವಾಗಿತ್ತು. ಇವನು ಅಂದುಕೊಂಡಂತೆ ಅಲ್ಲಿಯ ಸ್ಥಿತಿ ಇರಲಿಲ್ಲ. ಅವನು ಓದುವಾಗ ವಿಶ್ವವಿದ್ಯಾಲಯದಲ್ಲಿ ಕೆಲವು ಮುಖಂಡರು ಬರಿ ಹರತಾಳ ಮಾಡಬೇಕು ಅಂತ ಅಡ್ಡ ನಿಂತು ಕುರಿಗಳನ್ನು ಓಡಿಸುವಂತೆ ಓಡಿಸುತ್ತಿದ್ದರು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವೈಯಕ್ತಿಕತೆಗೆ ಬೆಲೆಯೇ ಇಲ್ಲವೆ ಅವರ ಇಚ್ಛೆಯಂತೆ ತರಗತಿ ಹೋಗಲು ಆಗದ ಸ್ಥಿತಿ. ಹರಿಕೇತು. ಮಾಂತೇಶ, ಇನ್ನೊಬ್ಬ ಸಂಘಟನೆಯ ಹೆಸರಿನಲ್ಲಿ ದೊಡ್ಡನಾಯಕರು. ಅವರ ಉದ್ಯಾನಗಳು ಹೇಳತೀರದು. ಯಾವಾಗಬೇಕಾದರು ಸ್ಟ್ರೈಕ್ ಮಾಡಿಸುವುದು ಅವರ ದಂದೆಯಾಗಿತ್ತು. ಒಂದುದರ ಪಟ್ಟಿಯನ್ನೆ ಇಟ್ಕೊಂಡಗಿತ್ತು. ಈ ಪ್ರೊಫೆಸರ್ ವಿರುದ್ಧ ಇಷ್ಟರೂಪಾಯಿ, ಈ ಮಾಸ್ತರನ ಪರ ಇಷ್ಟು, ವಿ.ಸಿ. ವಿರುದ್ಧ ಬೇಕೆ ಪರಬೇಕೆ. ಏನು ಬೇಕಾದರೂ ಆಗಬಹುದು. ಹಾಗೇನೆ ಸೀಟುಕೊಡಿಸುವುದಕ್ಕೆ, ಸೀಟು ನಿರಾಕರಣೆಗೆ ಒಂದು ದೊಡ್ಡ ಲಾಬಿನೆ ಇತ್ತು. ಅದು ಎಲ್ಲವರಿಗೆ ಹೋಯ್ತು ಅಂದರೆ, ಅಲ್ಲೆ ಕೆಲಸ ಮಾಡುವ ಒಬ್ಬ ಧೂರ್ತ ಪ್ರೊಫೆಸರಿಗೆ

ಅವನ ಅಣ್ಣನಮಗನಿಗೆ ರ್‍ಯಾಂಕ್ ಬೇಕಿತ್ತು. ಅಷ್ಟೇ ಯಾವುದೊ ಒಂದು ಕಿತ್ತೋಗಿರೊ ವಿಭಾಗದಲ್ಲಿ ಅವನ ಜಾತಿಯವನೆ ಮತ್ತೊಬ್ಬ ಮುತ್ಯಾಳ, ರ್‍ಯಾಂಕ್ ಘೋಷಣೆಯಾದ ಮೇಲೆ ಮರುಪರೀಶೀಲನೆ ಹಾಕಿಸಿ ರ್‍ಯಾಂಕ್ ಬಂದವನಿಗಿಂತ ಹೆಚ್ಚು ಅಂಕಗಳು ಕೊಡಿಸಿ ರ್‍ಯಾಂಕ್ ಬದಲಿಸುವ ಹುನ್ನಾರವೇ ನಡೆದಿತ್ತು. ತನಗೆ ಬೇಕಾದರೆ ಶೈಕ್ಷಣಿಕ ವಲಯದಲ್ಲಿ ಮಾಡಬಹುದು ಎಂಬುದನ್ನು ಸಾಬೀತು ಪಡಿಸಿದ್ದ. ಇಂತ ಸನಿವೇಷದಲ್ಲಿ ಅಲ್ಪಸಂಖ್ಯಾತನಾಗಿದ್ದು ಸೂರ್ಯನಾಯ್ಕ ಸ್ವತಂತ್ರ್ಯನಾಗಿ ಯಾವ ದಿಕ್ಕಿನಿಂದ ಮೇಲೆ ಬರಲು ಸಾಧ್ಯ? ಅವನ ಬೆಳವಣಿಗೆಯನ್ನು ಸಹಿಸದ ಮೇಲ್ವರ್ಗದವರು ಇವನನ್ನು ತುಳಿಯಲು ನೋಡುತ್ತಿದ್ದರು. ಕೆಳಗಿನವರು ಇವ ನಮ್ಮವನಲ್ಲ ಎಂದೆನಿಸಯ್ಯ ಎಂಬಂತೆ ಒಳಗೆ ಕತ್ತಿ ಮಸಿಯುತ್ತಿದ್ದರು. ಆದರೂ ತನ್ನ ಅಸ್ಥಿತ್ವಕ್ಕಾಗಿ ಏಕಾಂಗಿಯಾಗಿಯೇ ಹೋರಾಡಬೇಕಾಗಿತ್ತು.

ಮೂರು ವರ್ಷ ಎಸ್. ಎಸ್. ಎಸ್ ನಲ್ಲಿ ಒಳ್ಳೆ ಕೆಲಸ ಮಾಡಿ ಬಹುಮಾನ ಸಿಗುವ ಸಂದರ್ಭದಲ್ಲಿ ಕೇಳವಾನಂದ ಎಂಬುವನು, ರೊಕ್ಕ ತೊಗಂಡು ಚೆನ್ನಾಗಿ ತಿಂದು, ಕುಡಿದು ದೊಡ್ಡ ಆದರ್ಶಗಳನ್ನು ಮಾತಾಡಿ ಪುಟ್ಟ ಬದನೆಕಾಯಿ ಅಂತ ಅವನ ಸಂಬಂಧಿಕನ ಮಾತ ಕೇಳಿ ಅವಾರ್ಡಗಳನ್ನು ತಪಿಸಿದ್ದ, ಅದೇ ವೇಳೆ ಪಿ.ಸಿ ಯೊಬ್ಬ ಇವನಿಗೆ ಆ ಹುದ್ದೆ ಕೊಡಬೇಕಾದಿಂತ ಬೆಂಗಳೂರು ಮೀಟಿಂಗ ತೋರಿಸಿ ನಡೆಯಬೇಕಾದ ಸಂದರ್ಶವನ್ನು ರದ್ದುಗೊಳಿಸಿದ್ದು ಸೂರ್ಯನಾಯ್ಕನಿಗೆ ಅರ್ಥವಾಗಲ್ಲ ಅಂದುಕೊಂಡ ಹಾಗಿತ್ತು. ಈ ಎಲ್ಲಾ ಸಂಘರ್ಷಗಳ ನಡುವೆ ಹುಲ್ಲುಗರಿಕೆಯಂತೆ ಸವಾಲುಗಳನ್ನು ಎದುರಿಸುವುದು ಒಂದು ಕಠಿಣಹಾದಿಯಾಗಿತ್ತು. ಅವನ ತಂದೆ ಬಗನ್ಯನಾಯ್ಕನನ್ನ ಒಂದು ತಾಂಡದಲ್ಲಿಯೇ ಜನ ಸಹಿಸಿಕೊಳ್ಳದಾಗಿದ್ದು ಅವನ ಹೋರಾಟದಿಂದ. ಬದುಕಿನಲ್ಲಿ ಆತ ಪಡುತ್ತಿದ್ದ ಕಠಿಣಾ ಪರಿಶ್ರಮಕ್ಕಾಗಿ, ಸೂರ್ಯನದ್ದು ದೊಡ್ಡ ಮಟ್ಟದಲ್ಲಾಗಿತ್ತು. ಆದರೆ ಅವನು ತಂದೆಯ ಗರಡಿಯಲ್ಲಿ ಪಳಗಿದ್ದರಿಂದ ಮತ್ತ ತಾಂಡದಲ್ಲಿ ಬೆಳೆದಿದ್ದರಿಂದ ಪಟ್ಟಣದ ಮಂದಿಯ ನಕಲಿ ಹೆಜ್ಜೆಗಳನ್ನು ಗುರುತಿಸಿದ್ದ. ಆಕೆ ಬರೆ ತಿಳುವಳಿಕೆಯಿಂದ ನಾನು ದೊಡ್ಡ ಜ್ಞಾನ ಸಂಪಾದಿಸಿದ್ದ ಎಂದು ತೋರಿಕೆಗೆ ನಡೆಸುವ ಬೂಟಾಟಿಕೆ ಚಾಲಾಕಿತನದ ಅರಿವು ಅವನಿಗಿದ್ದಿದರಿಂದಾಗಿ ಇವೆಲ್ಲವನ್ನು ಮೆಟ್ಟಿ ನಿಲ್ಲಲು ಸಾಧ್ಯವಾಯಿತು.

ಅದೇತಾನೆ ಮಾಲೂರಿಗೆ ಹೋದಾಗ ಒಂದು ಸಂಘಟನೆಯವರು ಒಮ್ಮೆ ಭಾಷಣಕ್ಕೆ ಕರಡು ಅಲ್ಲಿ ಏನು ನಡೆಯುತ್ತೊ ಅದನ್ನು ಸಮರ್ಥಿಸಿ, ಅದನ್ನ ಹೊಗಳಿ ಭಾಷಣಮಾಡಬೇಕು ಎಂದು ಅವನ ಮನಸ್ಸಿನ ಮೇಲೆ ಒತ್ತಡ ಹೇರಲಾಯಿತು. ಒಂದು ಭಾಷಣಕ್ಕೆ ಮುಂಚೆ ಇವನಿಗೆ ತಿಳಿಯದೆ ಸಾವಿರಾರು ರೂಪಾಯಿ ವಸೂಲಿಯಾಗಿತ್ತು. ಎರಡನೆಯದು ಅವರ ಸಿದ್ದಾಂತವನ್ನೆ ಚಾಚು ತಪ್ಪದೆ ಟಾಂ ಟಾಂ ಮಾಡುವಂತೆ ಒತ್ತಡ ಹೇರಲಾಗಿತ್ತು. ಸೂರ್ಯ ತಾನು ಯಾವ ಸಂದಿಗ್ಧದಲ್ಲಿ ಸಿಗಾಕಿಕೊಂಡೆ ಎಂಬ ಆತಂಕದಲ್ಲಿದ್ದಾನೆ. ಸಂಘಟನೆಗಳು ಹಿಗೂ ಇವೆಯಾ? ಹೊರಾಟಗಳು ಹೀಗೂ ದಿಕ್ಕ ತಪ್ಪಿದ್ದಾವೆ ಎಂಬುದು ಅಂದು ಅವನಿಗೆ ಮನವರಿಕೆಯಾಗಿತ್ತು. ಅವತ್ತೆ ಕೊನೆ ಆ ಸಂಘಟನೆಯವರು ಕಂಡರೆ ಮರೆಯಾಗತೊಡಗಿದ. ಹತ್ತು ವರ್ಷಗಳ ಕಾಲ ಮಾರಲೂರಿನಲ್ಲಿ ಪಡೆದ ಅನುಭವ ಜೀವನವಿಡಿ ಎಲ್ಲೂ ಸಿಕ್ಕಿರಲಿಲ್ಲಾ. ಪ್ರಾದೇಶಿಕ ಅಪಮಾನತೆ ಜಾತಿ ಅಸಮಾನತೆ, ವ್ಯಕ್ತಿಯಲ್ಲಿನ ಅಸಮಾನತೆ, ಅಲ್ಲಿಯ ವಿಶ್ವವಿದ್ಯಾಲಯದಲ್ಲಿ ತಾಂಡವವಾಡುತ್ತಿತ್ತು. ಅವೇ ಅವೇ

ಕೋಟುಗಳನ್ನು ಹಾಕಿಕೊಂಡ ಕೆಲಮಂದಿ ಕೋಟ್ಯಾಧಿಪತಿಗಳಾಗಿದ್ದರು. ಕೆಲಮಂದಿ ಮೇಷ್ಟ್ರುಗಳು ವಸೂಲಿಭಾಯಿಗಳಾದರೆ ಇನ್ನೂ ಕೆಲವರು ರೀಯಲ್ ಎಸ್ಟೇಟ್‌ದಂಧೆಯಲ್ಲಿ ಚೆನ್ನಾಗಿ ಕಾಸುಮಾಡಿಕೊಂಡಿದ್ದರು. ಇವನ್ನೆಲ್ಲಾ ಬಹಳ ಸೂಕ್ಷ್ಮವಾಗಿಯೆ ಗಮನಿಸಿದ್ದ. ಶೈಕ್ಷಣಿಕ ವಲಯ, ಪಂಡಿತವಲಯ ದಿವಾಳಿಗೊಂಡಿರುವುದು ಸ್ಪಷ್ಟವಾಗಿಯೇ ಕಾಣುತ್ತಿತ್ತು. ರಾಜಕಾರಣಿಗಳಂತೆ ಅವರು ಇವರನ್ನು ಓಲೈಸುತ್ತ ತರಗತಿಗಳಲ್ಲಿ ತಮ್ಮ ವೈಯಕ್ತಿಕ ಬುರುಡೆಯನ್ನು ಬಿಡತ್ತಲೆ ಮೂವತ್ತೈದು ನಲ್ವತ್ತು ವರ್ಷಗಳನ್ನು ಕಳೆದ ಮಾಸ್ತರ್‌ಗಳು ಅಮೆರಿಕಾದಿಂದ ಬಂದಿದ್ದು ವಿದ್ಯಾರ್ಥಿಯೊಬ್ಬನನ್ನು ಹೆದರಿಸಿಯೆ ಓಡಿಸಿದ್ದಕ್ಕೆ ಜ್ವಲಂತ ಸಾಕ್ಷಿಯಾಗಿದ್ದ.

ಅವನ ಸಹದ್ಯೋಗಿ ಒಬ್ಬರು ವಿದ್ಯಾರ್ಥಿಗಳ ಹತ್ತಿರ ಅವರಿಗೆ ಆಗದ ಕೆಲವರ ಹತ್ತಿರ ಹೋಗಿ "ಏಯ್, ಅವರು ನಿಮಿಗಿಂತ ಹೆಚ್ಚೇನು ಓದಿಲ್ಲ ಕಣ್ರಿ. ನೀವು ಬಿ.ಎ. ಅವರು ಕೇವಲ ನಿಮಿಗಿಂತ ಎರಡು ವರ್ಷ ಎಂ.ಎ. ಮಾಡಿದ್ದಾರೆ. ಅಷ್ಟೆ ವ್ಯತ್ಯಾಸ ಮತ್ತೇನು ಇಲ್ಲ" ಎಂದು ತಮ್ಮ ವಿರೋಧಿಗಳ ಮಾನಕಾಸಿನ ಪಂಚೇರು ಮಾಡಿದ್ದರು. ಸೂರ್ಯ ಇವೆಲ್ಲವನ್ನ ಬಹಳ ಹತ್ತಿರದಿಂದ ಅತಿ ಸೂಕ್ಷ್ಮವಾಗಿಯೇ ಗಮನಿಸಿದ್ದ. ಅವನು ತನ್ನ ಹೆಸರನ್ನು ಮತ್ತು ತನ್ನ ಆತ್ಮಿತೆಯನ್ನು ಸ್ಥಾಪಿಸಲು ಹೆಣಗಾಡಿದ್ದ. ತನ್ನ ಛಾಪನ ಮೂಡಿಸುವಲ್ಲಿ ಕುರಿಸೋಣ ಬಿದ್ದಿತ್ತು. ಬಹಳ ಹಿಂದಿನಿಂದಲೂ ಬೆಳೆಯುತ್ತಾ ಬಂದಿದ್ದ ಪರಂಪರೆಯ ಮುಂದಿನ ಭಾಗದ ನಡೆಯನ್ನ ಗುರುತಿಸಲು ಹೆಣಗಾಡಿದ್ದ. ಅವನ ಹೆಂಡತಿ ವಂದನಾ ಮತ್ತು ಅವನ ನಡುವಿನ ಭಿನ್ನಾಭಿಪ್ರಾಯಗಳು ಇಬ್ಬರು ಗಂಡುಮಕ್ಕಳ ಮಾನಸಿಕ ಸ್ಥಿತ್ಯಂತರವನ್ನು ಅಥೈಸಿಕೊಂಡು ಬದಲಾಗುತ್ತಿರುವ ಸಂದರ್ಭಕ್ಕೆ ಸರಿಯಾಗಿ ಹೊಂದಿಕೊಳ್ಳುವಲ್ಲಿ ದೊಡ್ಡ ತಾಕಲಾಟವೆ ಉಂಟಾಗಿತ್ತು. ತನ್ನ ತಂದೆ ತಾಯಿ ನಲವತ್ತು ಮಂದಿ ಕೂಡುಕುಟುಂಬ ಹಿನ್ನಲೆಯಿಂದ ಬಂದಿದ್ದ ಸೂರ್ಯನಿಗೆ ಕುಟುಂಬದ ಮೌಲ್ಯಗಳ ತಿಳಿದಿದ್ದವು. ಅವರಪ್ಪ-ಅವರ ಸಮಸ್ಯೆಗಳೆ ಬೇರೆಯಾಗಿದ್ದವು. ದುಡಿಮೆ, ಗಳಿಕೆ ಸಮಾಜದಲ್ಲಿ ಗುರುತಿಸಿಕೊಳ್ಳಲು ದೊಡ್ಡ ಸಂಘರ್ಷವೆ ನಡೆಯುತ್ತಿತ್ತು. ಆದರೆ ಸೂರ್ಯನಾಯ್ಕನ ತಿಳಿವಳಿಕೆ, ಹೆಂಡತಿಯ ಜ್ಞಾನ ಇಬ್ಬರು ಹೊಂದಾಣಿಕೆಗೆ ಒದ್ದಾಡುತ್ತಿದ್ದರೆ. ಅವನ ಪಿ.ಯು.ಸಿ. ಮಾಡುವಾಗ ಯಾವ ಅವಕಾಶಗಳು ಇರಲಿಲ್ಲಾ. ಪದವಿಗೆ ಬಂದಾಗ ಹಳೇ ಕಾಲೇಜು, ಆ ಇಂಗ್ಲಿಷ್ ಉಲಿಯುವ ಹೆಂಗಳೆಯರು ಇದ್ದಕ್ಕಿದಂತೆ ಬರುವ ಮಳೆಯನ್ನು ಕಂಡು ಗಾಬರಿಯಾಗಿದ್ದ. ಉದಯ ಹಾಸ್ಟೇಲು, ಹಳೇಯ ಲೈಬ್ರರಿಯಲ್ಲಿ ಕುಂತು ಓದಲು ಸಿಗದ ಜಾಗ, ಸ್ಟೂಡೆಂಟ್ ಹೋಮ್‌ನ ನೋಟಿಸ್ ಬೋರ್ಡಿಗೆ ಅವನು ಬರೆದು ಅಂಟಿಸಿದ ಪದ್ಯ ಓದಿ ಮೆಚ್ಚಿಕೊಂಡವರು. ಆಕಾಶವಾಣಿಯಲ್ಲಿ ಸಿಕ್ಕ ಅವಕಾಶಗಳು ಒಂದೊಂದಾಗಿಯೇ ನೆನಪಾದವು. ಅವನು ಬಿ.ಎ. ಮುಗಿಸುವ ಕೊನೆಯ ದಿನಗಳಲ್ಲಿ ಬಂದ ಝೆರಾಕ್ಸ್ ಮಿಷನ್ ಹಿಂದೆ ಮುಗಿಬಿದ್ದ ಹುಡುಗರು ಲೈಬ್ರರಿಯಲ್ಲಿ ಕುಂತು ಓದುವುದನ್ನೆ ಬಿಟ್ಟಿದ್ದರು.

ಅವಾಗಲೇ 1990ರ ದಶಕ ಆರಂಭವಾಗಿತ್ತು ಭಾರತದಲ್ಲಿ ಸಂಪರ್ಕಕ್ರಾಂತಿಯ ಪ್ರಭಾವ ಹೆಚ್ಚಾಗಿತ್ತು. 1960ರಲ್ಲಿ ಕೇವಲ ಪ್ರಯೋಗಾತ್ಮಕವಾಗಿ ನಡೆಸಲಾಗಿತ್ತದೆ. ಟಿ.ವಿ. ಎನ್ನುವ ಭೂತ ಕ್ರಮೇಣ ದೊಡ್ಡ ಶ್ರೀಮಂತರ ಮನೆಯೊಳಗೆ ಕಾಲಿಟ್ಟರು. 1989ರಲ್ಲಿ ಬಿ.ಎ. ಕೊನೇಯ ವರ್ಷದಲ್ಲಿ ಆರಂಭವಾದ ಮಹಾಭಾರತ ದಾರಾವಾಹಿಯನ್ನು ನೋಡಲು ಪ್ರತಿಭಾನುವಾರ ಹಾಸ್ಟೈಲಿನಿಂದ ಹೊತ್ತಾರೆ ಎದ್ದು ಮಾಡಿತೊಕ್ಕೊಂಡು. ತಿಂಡಿ ತಿಂದು ಹಾಸ್ಟೇಲಿನ ದಿಬ್ಬದ ಮೇಲಿರುವ ಬಂಗಲೆಗೆ

ಓಡುತ್ತಿದ್ದುದ್ದು ನೆನಪಾಯ್ತು. ಅವನು ಜನವರಿ 26ರ ರಿಪಬ್ಲಿಕ್ ಪರೋಡಿಗೆ ಹೋದಾಗ ಸ್ಯಾಮ್‌ಪಿತ್ರೋಡನ ಸಂಪರ್ಕಕ್ರಾಂತಿಯಿಂದಾಗಿ ಟೆಲಿಪೋನ್ ಬೂತ್‌ಗಳು, ಟೆಲಿಪೋನ್ ಕಾಯನ್ ಡಬ್ಬಗಳು ನಾಯಿಕೊಡೆಯಂತೆ ಹುಟ್ಟಿಕೊಂಡಿದ್ದವು. ಡಾ. ರಾಜ್‌ಕುಮಾರ್ ಅವರ ದೇವತಾ ಮನುಷ್ಯ ದೊಡ್ಡ ಬದಲಾವಣೆ ಅಮಿತಾಬಚ್ಚನ್‌ನ ಕೂಲಿಯ ಹವಾದೇಶದ ತುಂಬ ಎದ್ದಿತ್ತು. ಅನೇಕ ಬೆಳ್ಳಿ ಪಿಳ್ಳೆ ಕಲಾವಿದರು ಸಿನೀಮಾಕ್ಕೆ ಕಾಲಿಟ್ಟರು. ಕನ್ನಡಕೊಬ್ಬನೆ ರಾಜಕುಮಾರ, ತಮಿಳಿಗೆ ಎಂ. ಜಿ. ಆರ್. ಬಿಟ್ಟರೆ ರಜನಿಕಾಂತ್, ತೆಲುಗಿನಲ್ಲಿ ಚಿರಂಜಿವಿ ಹಿಂದಿಗೆ ಅಮಿತಾಬಚ್ಚ್‌ಚ್ಚನ್‌ರಡೆ ಸ್ಟಾರ್‌ಗಿರಿನಡೆದಿತ್ತು. ದೆಹಲಿಯಿಂದ ಬಂದನಂತರ ಅನೇಕ ಸಲ ಗಿಯಾನ್‌ಬೂತ್, ಎಸ್ಟ್‌ಡಿಗಳಿಂದ ಗೆಳೆಯರಿಗೆ ಪೋನ್‌ಮಾಡಿದ್ದ. ಅವಾನಾಗಲೆ ಲೈಬ್ರರಿಗಳು ಬಿಕೊ ಎನ್ನುತ್ತಿದ್ದರೆ ಪುಸ್ತಕಗಳು ಧೂಳುತಿನ್ನುತ್ತಿದ್ದವು. ವಿಶ್ವವಿದ್ಯಾಲಯಗಳಲ್ಲಿ ಜಾತಿ, ಧರ್ಮ, ಕೋಮ ಇರಬಾರದು ಆದರೆ ಯಥೇಚ್ಚವಾಗಿಯೆ ತುಂಬಿಕೊಂಡಿತ್ತು. ಇದರಿಂದಾಗಿಯೆ ಸೂರ್ಯನಾಯ್ಕ ಎಂ.ಎ. ಕೊನೆಯ ವರ್ಷದಲ್ಲಿ ಜಾತಿಯ ರಾಜಕಾರಣಕ್ಕೆ ಬಲಿಯಾಗಿ ನಪಾಸಾಗಿದ್ದು, ಅದೇ ಅವನನ್ನ ಫಿನಿಕ್ಸ್‌ನಂತೆ ಜಿಗಿದು ಮೇಲೆಳುವಂತೆ ಮಾಡಿತ್ತು. ನಾನ್‌ಅಕಾಡೆಮಿಕ್ ಕೆಲಸಕ್ಕೆ ಸೇರಿಕೊಂಡಿದ್ದ ಸೂರ್ಯ ಪಂಜಲೂರಿನಲ್ಲಿ ಸುಮಾರು ಏಳುವರೆ ವರ್ಷಕಳೆದಿದ್ದಾ. "ಥು ಸೂಳಿಮಗ, ನೋಡ್ರಲೆ, ಆವಾಗ ಏನು ಮೆರದ, ಈಗ ಮೂಲೆಗುಂಪಾದ" ಅವನ ತರಗತಿಯಲ್ಲಿ ಓದಿ, ಅವನು ಹೇಳಿದ್ದಂತೆ ಕೇಳಿ ಬರೆದು ಪಾಸಾಗಿ ಹೆಂಗೊ ಬಂಗಾರಪ್ಪ ಮುಖ್ಯಮಂತ್ರಿಯಾದಾಗ ಹದಿನೈದು ಪರ್ಸೆಂಟ್ ರೂರಲ್‌ನವರಿಗೆ ಕೊಟ್ಟಾಗ ಕೆಲಸಗಿಟ್ಟಿಸಿಕೊಂಡ ಜೂನಿಯರ್ ಕಾಲೇಜು, ಸ್ನೇಹಿತರು ಪ್ರೈವೇಟ್ ಜೂನಿಯರ್ ಕಾಲೇಜು ಸೇರಿಕೊಂಡ ಗೆಳೆಯರು ಬಾರ್‌ನಲ್ಲಿ ರಾತ್ರಿ ಟೈಟ್ ಆಗಿ ಮಾತಾಡಿಕೊಂಡಿದ್ದರು. ಪಂಜಲೂರಿಗೆ ಬರುವುದಕ್ಕೆ ಮುಂಚೆ ಕ್ರಾಂತಿ ಮಾಡಿ ಸಮಾಜ ಬದಲಾವಣೆಗೆ ಹೊರಟು ಎಲ್ಲಾ ಹಳ್ಳಿಗಳಲ್ಲಿ ಸಾಕ್ಷರತೆ ಪ್ರಮಾಣ ಹೆಚ್ಚಾಗಬೇಕೆಂದು ವರ್ಲ್ಡ್‌ಬ್ಯಾಂಕ್ ಕೊಟ್ಟ ಸಾವಿರಾರು ಕೋಟಿ ಖರ್ಚು ಮಾಡಿದ ಸರ್ಕಾರದ ಯೋಜನೆಯಲ್ಲಿ ಕಾಸಿಲ್ಲದೆ ದುಡಿದು ಮಂದಿಯಿಂದ ಛಿ. ಥು, ಅನಿಸಿಕೊಂಡವರು ಸೂರ್ಯನಂತವರು ಸಾಲದಕ್ಕೆ ಬಜನಾಮಿ, ಇದ್ದ ಪ್ರವೇಟ್‌ಕಾಲೇಜನ್ನು ಬಿಡುವ ಪ್ರಸಂಗ ಬಂದಿತ್ತು. ಇಲ್ಲಿ ತೀವ್ರವಾಗಿ ಅವನನ್ನ ಕಾಡಿದ್ದು ಜಾತಿ. ಏಕೆಂದರೆ ಅವನ ಚಿಕ್ಕ ವಯಸ್ಸಿನಲ್ಲೆ ಸಿಗುತ್ತಿರುವ ಖ್ಯಾತಿಯನ್ನು ಕಂಡ ಬಸವಣ್ಣನ ಅನುಯಾಯಿಗಳೆ ಅವನ ವಿರೋಧಿಗಳಾಗಿದ್ದರು. ಆ ಊರಿನ ಮಾಫಿಯಾಗಳು ಆ ಊರ ಸುತ್ತಲ ತಾಂಡದ ಹೆಂಗಸು-ಗಂಡಸರು ಮಾಡ್ಯಾರು ಅಂದ್ರೆ ಕೇವಲ ಅವರ ಹೊಲದಲ್ಲಿ ಕೆಲಸಮಾಡುವವರು ಮತ್ತ ಕಟ್ಟಿಗೆ ತಂದು ಹಾಕುವವರು ಎಂದೆ ಬರೆದಿದ್ದರು. ಆ ಹಿನ್ನಲೆಯಿಂದ ಬಂದವನು ತಮ್ಮ ಎದುರಿಗೆ ಖುರ್ಚಿಮೇಲೆ ಕುಂತ್ರೆ. "ಲೇ ತಮ್ಮ ನಾನು ಕಮೀಟಿ ಮೆಂಬರು. ಎದ್ದು ಸಲಾಂ ಮಾಡು. ಎಂದು ಗದರಿಸಿದ ಹೆಬ್ಬಟ್ಟು ಸದಸ್ಯನೊಬ್ಬನ ಮಾತಿಗೆ ದಂಗಾಗಿದ್ದ. ಇಂತಹ ತಲೆ ಇಲ್ಲದ ಜನರೆ "ಛೆ ಏನ್ರಿ ಇವನು ನಮ್ಮ ಹರೆಯದ ಹುಡುಗರು-ಹುಡುಗಿಯರನ್ನು ರಾತ್ರಿ-ಸೌರಾತ್ರಿ ಏನದೆ ಹಳ್ಳಿಗಳಿಗೆ ಕರ್ಕೊಂಡ ಹೊಂಟಾನ, ಮರ್ಯಾದಸ್ತರು ಬದುಕೋದು ಹೇಗೆ" ಅಂತ ಮಾತಾಡಿಕೊಂಡಿದ್ದರು. ಇಂಥ ತಲೆ ಇಲ್ಲದ ಮುಂದಿ ನಡುವೆ ಸಿಗಾಕಿಕೊಂಡಿದ್ದರೆ ಅವನ ಹೆಣ ಎತ್ತುತಿದ್ದರು." ಅವನೇನೊ ಬುದ್ಧಿವಂತ ಬೇಡ ಎಂದು ಬಿಸಾಕಿ ಹೊರಬಂದಿದ್ದ.

ಅನುಭವ ಮನುಷ್ಯನನ್ನು ಗಟ್ಟಿ ಗೊಳಿಸುತ್ತದೆ. ಅವನ ಇರಾದೆಗಳನ್ನು ಮಜಬೂತ್ ಮಾಡುತ್ತದೆ ಎನ್ನುವುದಕ್ಕೆ ಸೂರ್ಯನ ಬದುಕೆ ಕಾರಣ. ಎಷ್ಟೊಂದು ಉಳಿಪೆಟ್ಟುಗಳನ್ನು ತಿಂದಿದ್ದ. ಈ ಹಾಳುಸಮಾಜದಲ್ಲಿ ಬುದ್ಧಿವಂತಾಗಿರುವುದು ಎಷ್ಟೊಂದು ಅಪಾಯ ಎನ್ನುವುದು ಅವನಿಗೆ ವಿಶ್ವವಿದ್ಯಾಲಯದ ದಿನಗಳು ಆಕಾಶವಾಣಿಯಲ್ಲಿ ಕೆಲಸ ಮಾಡುತ್ತಿದ್ದ ಸಂದರ್ಭ ಕಲಿಸಿತ್ತು. ಬಕೇಟು ಹಿಡಿಯುವವರಿಗೆ ಚಮಚಾಗಿರಿ ಮಾಡುವವರಿಗೆ, ತಲೆಹಿಡಿಯವವರಿಗೆ, ಬ್ಯಾಗುಹಿಡಿಯುವವರಿಗೆ, ಇಲ್ಲಿಂದ ಫೋನಿನಲ್ಲಿ ರೆಕಾರ್ಡ್‌ಮಾಡಿಕೊಂಡು ಹೋಗಿ ತೋರಿಸುವವರಿಗೆ ಮಾತ್ರ ಎಲ್ಲಾನು ಸಾಧ್ಯ. ಅಂತಹವರದ್ದೆ ಜಗತ್ತು. ಸತ್ಯ ಪ್ರಾಮಾಣಿಕತೆ, ನಿಜಕ್ಕೆ ಬೆಲೆನೆ ಇಲ್ಲ. ಈ ತಾಕಲಾಟದಲ್ಲಿ ಅವನು ಕಳೆದು ಹೋಗಿದ್ದಾರೆ. ಇಬ್ಬರು ವಿಜ್ಞಾನವನ್ನು ಅಧ್ಯಯನಮಾಡಿ ಜೀವನವೆಂದರೆ ಬಿ.ಎಂಡಬ್ಲು ಕಾರು ಖರೀಧಿಸುವುದು, ದೊಡ್ಡ ಹೊಟೇಲುಗಳಲ್ಲಿ ಊಟ ಮಾಡುವುದು, ಯಾವಾಗಲೂ ಹೈಟೆಕ ಬಸ್ಸಿನಲ್ಲೆ ಅಡ್ಡಾಡುವುದು ಎಂದು ತಿಳಿದುಕೊಂಡಿದ್ದಾನೆ. ಹತ್ತು ರೂಪಾಯಿ ಗಳಿಕೆ ಎಷ್ಟು ಕಷ್ಟ ಎನ್ನುವ ಸತ್ಯವನ್ನು ಅಂಕಲ್ ಮತ್ತು ಅವದೇಶ್‌ಗೆ ಮಾಡಿಸಲು ಸೂರ್ಯ ಹೆಣಗಾಡುತ್ತಿದ್ದಾನೆ. ತನ್ನ ಹಳೇಯ ಸಂದಿಗ್ದತೆಯನ್ನು, ಕಷ್ಟವನ್ನು, ಬಡತನದ ಬಗ್ಗೆ ಹೇಳಿದರೆ ಅದು ನಿನ್ನ ಕರ್ಮ. ನಿನ್ನ ಸಂದರ್ಭ ಹಾಗಿತ್ತು. ನಿಮ್ಮಪ್ಪಂಗೆ ಬುದ್ಧಿ ಇರಲಿಲ್ಲ. ಹತ್ತು ಜನಮಕ್ಕಳನ್ನ ಹುಟ್ಟಿಸಿದ್ದ. ನಮ್ಮಪ್ಪಂಗೆ ತಲೆ ಇದೆ ಇಬ್ಬರೆ ಮಕ್ಕಳನ್ನು ಹುಟ್ಟಿಸಿ, ಅವರ ಭವಿಷ್ಯದ ಬಗ್ಗೆ ಆಲೋಚಿಸುತ್ತಿದ್ದಾನೆ ಅಂತ ಅವನಿಗೆ ಬುದ್ಧಿ ಹೇಳಿದ್ದರು. ಸೂರ್ಯ ಅವರ ಮಾತಿಗೆ ತಬ್ಬಿಬ್ಬಾದ. ಅವನಿಗೆ ಒಂದು ಗಳಿಗೆ ಯಾವುದು ಸತ್ಯ ಎಂದು ತಿಳಿಯಲೆ ಇಲ್ಲ. ಭಗನ್ಯಾನಾಯ್ಕ ತನ್ನ ಇಡಿ ಬಾಲ್ಯವನ್ನು, ಯೌವನವನ್ನು ಅವನಪ್ಪ ಪಂಪಾನಾಯ್ಕ, ಗುಡ್ಲೀರಿ ಅವನ ತಮ್ಮ ಇಬ್ಬರು ತಂಗಿಯರಿಗಾಗಿಯೇ ಬದುಕಿದ್ದ. ಮದುವೆಯಾಗಿ ಅವನ ತಾಯಿ ಗುಡ್ಲೀರಿ ಖಾಲಿ ಕೈಯಿಂದ ಹೊರಗಡೆ ಓಡಿಸಿದಾಗ ಪುಟ್ಟಿ ಕೆಳಗೆ ಮುಚ್ಚುವಂತಹ ಹತ್ತು ಮಕ್ಕಳ ಭವಿಷ್ಯ ರೂಪಿಸಲು ಹಗಲು ರಾತ್ರಿ ಒಂದು ಮಾಡಿ ನೆಲ ಬಗೆದು, ಅಗೆದು ಬದುಕು ಕಟ್ಟಿದ. ಗುಡಿಸಲಲ್ಲಿ, ಎತ್ತು, ಕೋಳಿ ಹತ್ತುಮಕ್ಕಳು ಮುಂಗಾರಿನಲ್ಲಿ ಸೋರುವಾಗ ಸೂರ್ಯನತಾಯಿ ಹತ್ತುಮಕ್ಕಳನ್ನು ಸುತ್ತಲು ಒಂದೀಟು ಒಣಗಿದ ಜಾಗದಲ್ಲಿ ಮಲಗಿಸಿಕೊಂಡು ತಾಟು ಲೋಟಗಳನ್ನು, ಪಾತ್ರೆಪಡಗಗಳನ್ನು ಸೋರುವ ಜಾಗಕ್ಕೆ ಇಟ್ಟು ಕಾದಿದ್ದು. ಗಿಡ್ಡ ಈಡನ ಮಾನಿ ಬೇವಿನ ಮರಕ್ಕೆ ಸಿಡಿಲು ಬಡಿದಾಗ, ಸಿಡಿಲಿಗೆ ಸವಾಲು ಎಸೆದಂತೆ "ಅರ್ಜುನ, ನಿಧಾನ" ಎಂದು ಅರಚಿ ಮಕ್ಕಳಲ್ಲಿ ಧೈರ್ಯ ತುಂಬಿದ್ದು ಏನೂ ಅಲ್ಲವೆ. ಸರಾಯಿ ಕುಡಿದು ಮಂದಿ ನಡುರಸ್ತೆಯಲ್ಲೆ ಬಿದ್ದು ಮಜಾಮಾಡಿದಾಗ ಭಗನ್ಯನಾಯ್ಕ ದಿನದ ದಣಿವು ಆರಿಸಿಕೊಳ್ಳಲು ಒಂದೇ ಪಾಕೀಟು ಕುಡಿದು ಹೆಂಡತಿ ಚಾವಳಿಗೆ ಒಂದು ಪಾಕೇಟು ಹಿಡ್ಕೊಂಡು ಬಂದು ಸಮಾನತೆಯನ್ನು ಮೆರೆಯುವುದಲ್ಲದೆ, ಅನಾವಶ್ಯಕ ಖರ್ಚಿಗೆ ಕಡಿವಾಣ ಹಾಕಿ ಚಟಗಳಿಂದ ದೂರವಿದ್ದು ಭವಿಷ್ಯ ರೂಪಿಸುವ ಸಲುವಾಗಿ ಕಂಡ ಕಂಡವರ ಹೊಲಗಳನ್ನು ಖರೀಧಿಸಿದ್ದ. ಅವನಿಗೆ ಕೊನೆಗೆ ಸ್ವಂತ ಮಕ್ಕಳೆ ಹೊಡೆದು ಬೇಬಷ್ಟ ಮಾಡಲಿಲ್ಲವೆ. ಇನ್ನೂ ನರಿಯಲ್ಲಿ ಗರಿ ಇಲ್ಲದ ಮಕ್ಕಳ ಅರ್ಥವಿಲ್ಲದ ಮಾತುಗಳು ಸೂರ್ಯನನ್ನ ನಿರ್ಲಿಪ್ತನಾಗುವಂತೆ ಮಾಡಿಬಿಡುತ್ತಿದ್ದವು. ಅವನಪ್ಪ, ಅಜ್ಜ, ಮುತ್ತಜ್ಜ ನೆಟ್ಟ ಮರದ ಬೇರುಗಳು ಬಹಳ ಆಳಕ್ಕೆ ಇಳಿದು ತಮ್ಮ ಕುಟುಂಬದ ಬೇರುಗಳು ಪಾತಾಳಕ್ಕೆ ಇಳಿದಿರುವುದರಿಂದ ಅವನ ಹತ್ತು ಜನ ಮಕ್ಕಳ ಸಂಸಾರದ ಸಣ್ಣ ಸಣ್ಣ ಮರಗಳು ಭದ್ರವಾಗಿ ಎಂಥಹ ಬಿರುಗಾಳಿ ಬಂದರು

ಬುಡಮೇಲಾಗಿ ಉರುಳಿಹೋಗದಂತೆ ಭದ್ರವಾಗಿ ನೆಲೆಯೂರಿವೆ. ದೊಡ್ಡವನಾದ ಟಾಂಕ್ಯಾನ ಮಕ್ಕಳು ಕೋಟ್ಯಾದೀಶರಾಗಿದ್ದಾರೆ. ಅವನ ಮೂವರು ಹುಡುಗಿಯರು ಚೆನ್ನಾಗಿಯೇ ಬದುಕಿದ್ದಾರೆ. ಎರಡನೇಯುವನ ಮಕ್ಕಳಂತು ಒಳ್ಳೆಯ ವಿದ್ಯಾವಂತರಾಗಿ ಸರ್ಕಾರಿ ನೌಕರಿ ಪಡ್ಕೊಂಡು ಅವನನ್ನ ಸಂಕಷ್ಟದಿಂದ ಪಾರುಮಾಡಿದ್ದಾರೆ. ಮೂರನೇಯ ಮಗಳು ಶ್ರೀಮಂತಳೆ ಆಗಿದ್ದರು. ಅವಳ ಮನೆವಾಸ್ತು ಸರಿ ಇಲ್ಲವೇನೊ ಲಾಭ-ನಷ್ಟ ಒಂದು ಗೊತ್ತಾಗದಂತೆ ಅವರ ನಾಲ್ಕನೇಯ ಮಗಳು ಅವಳ ಮಕ್ಕಳು ಸ್ಥಿತಿವಂತಿಕೆ ಆಗಿದ್ದಾರೆ. ಐದನೇಯವನ ಮಕ್ಕಳು ಮಾತ್ರ ಸ್ವಲ್ಪ ಎಡವಟ್ಟಾಗಿದ್ದರೆ. ಎಷ್ಟು ದುಡಿದರು ಹೊಟ್ಟೆ ತುಂಬದಾಗಿತ್ತು. ಎರಡನೇ ಮಗನ ಸಂಜೆಯನಿಗೆ ಏಳು ಮಂದಿ ಹೆಣ್ಣು ಮಕ್ಕಳು ಇಬ್ಬರು ಗಂಡು ಹುಡುಗರು ಎರಡನೇಯವ ಬದ್ರಿಗೆ ನಾಕುಮಕ್ಕಳು, ಅವರ ದುಡಿಮೆ ಇಲ್ಲದೆ ಕಾಫಿತೋಟ, ಕಬ್ಬುಕಡಿಯುವುದು ಕೂಲಿ ಮಾಡುತ್ತ ಜೀವನ ಸಾಗಿಸುತ್ತಿದ್ದರು. ಆರನೇಯವನ ಆರುಮಕ್ಕಳಲ್ಲಿ ಒಂದಿಬ್ಬರು ಓದಿಕೊಂಡಿದ್ದರು. ಒಂದಿಬ್ಬರು ವ್ಯವಸಾಯ ಮಾಡುತ್ತಿದ್ದರು. ಒಬ್ಬಾಕಿ ರಾಣಿ ಅಂಗಡಿ ಇಟ್ಕೊಂಡಿದ್ದ ಆರನೇಯವನೇ ಸೂರ್ಯನಿಗೆ ಮಾತ್ರ ಇಬ್ಬರು. ಚಿಕ್ಕವನಿಗೆ ಐದು ಮಕ್ಕಳು. ಇಡಿ ಕುಟುಂಬದ ಓಟುಗಳು ಒಬ್ಬರಿಗೆ ಬಿದ್ದರೆ ಅವರೆಗೆದ್ದು ಬಿಡಬಹುದು. ಒಮ್ಮೆ ಭಗನ್ಯಾಗೆದ್ದಿದ್ದ ನಂತರ ಒಂದೆರಡು ಸಾರಿ ಗ್ರಾಮಪಂಚಾಯ್ತಿ ಎಲೆಕ್ಷನ್ ಗೆದ್ದಿದ್ದು ಬಿಟ್ಟರೆ ಬೇರೆ ಯಾವ ಪ್ರಯೋಗಗಳನ್ನು ಮಾಡಿಲ್ಲ.

ಸೂರ್ಯ ತನ್ನ ಮಕ್ಕಳಿಗೆ ಭವಿಷ್ಯದ ವರಸೆಯನ್ನ ಕಲಿಸುವ ಎಲ್ಲಾ ಪ್ರಯತ್ನಗಳನ್ನ ಮಾಡಿದ್ದು. ಹೊಂದಾಣಿಕೆಯ ಸಲುವಾಗಿ ನಡೆಯುವ ತಿಕ್ಕಾಟದಲ್ಲಿ ಎಲ್ಲಿ ಭವಿಷ್ಯಕ್ಕೆ ಮುಳುವಾಗುವುದೆಂದು ಬಹಳ ಎಚ್ಚರಿಕೆಯ ಹೆಜ್ಜೆಯನ್ನು ಇಟ್ಟಿದ್ದ. ಭಗನ್ಯನಾಯ್ಕನ ಅನೇಕ ಯಶೋಗಾಥೆಯನ್ನ ಆತಕಲಿಸಿದ ನಾಣ್ನುಡಿಗಳನ್ನು ಅವರಿಗೆ ಹೇಳುವ ಪ್ರಯತ್ನ ಮಾಡಿದ್ದ. ಆದರೆ ಇಂದಿನ ಯುಗ ಹಳೆಯಕಾಲದಂತೆ ಅಲ್ಲ. ಇಡಿ ಜಗತೆ ಅವರ ಕೈಯೊಳಗಿತ್ತು. ಜಾಗತ್ತಿಕರಣ ಬಂದಾಗ ಮೇಲಂತು ಜಗತ್ತು ಬಹಳ ಚಿಕ್ಕದಾಗಿತ್ತು. ಗ್ಲೋಬಲ್ ವಿಲೆಟ್ ಎನ್ನುವ ಪರಿಕಲ್ಪನೆ. ಸರ್ಕಾರಿಸ್ವಾಮ್ಯದ ಎಲ್ಲಾ ಕಾರ್ಖಾನೆಗಳನ್ನು ಖಾಸಗೀಕರಣ ಗೊಳಿಸಲಾಗಿತ್ತು. ಯಾರನ್ನು ಕೇಳಿದರು ಸಾಫ್ಟವೇರ್ ಎಂದೆ ಹೇಳುತ್ತಿದ್ದರು. ಯಾವುದೊ ಒಂದು ಕಂಪನಿಯ ಒಳಗೆ, ಅವರ ಗೆಸ್ಟಹೌಸ್‌ನಲ್ಲಿ ಉಳಿದುಕೊಂಡಿದ್ದ ಸೂರ್ಯನಾಯ್ಕ ಯಂತ್ರಗಳಂತೆ ಮನುಷ್ಯರು ಅಡ್ಡಾಡುವುದನ್ನು ನೋಡಿದ್ದ. ಅದೇ ಕಂಪ್ಯೂಟರ್ ಅಂಕಣವನ್ನು ಹಾಳು ಮಾಡಿತ್ತು. ಮೊಬೈಲ್ ಫೋನ್ ಬಂದಾಗಂತು ಅದರಲ್ಲಿ ಆಟ ಆಡುತ್ತಾ ಕಾಲ ಕಳೆಯಲು ಆರಂಭಿಸಿದರೆ ಊಟ ತಿಂಡಿಯನ್ನೆ ಬಿಟ್ಟು ಬಿಡುತ್ತಿದ್ದರು. ಅವದೇಶ್‌ನಂತು ಎರಡು ಕೈಯಿಂದ ಆಟ ಆಡಲು ಕುಂತೆನೆಂದರೆ ಇಡಿದಿನ ಅವನ ಮೇಲೆನೆ ಪ್ರಜ್ಞೆ ಇರುತ್ತಿರಲಿಲ್ಲಾ. ಅವರ ತಲೆಮಾರಿಮಕ್ಕಳು ಟೆಕ್ನಾಲಜಿಯಿಂದ ಉಪಯೋಗ ಪಡೆದುಕೊಂಡವರು ಉದ್ದಾರ ಆಗಿ ಜೀವನವನ್ನು ಕಟ್ಟಿಕೊಂಡರು. ಅದೇ ಟೆಕ್ನಾಲಜಿಯನ್ನು ಚಟಮಾಡಿಕೊಂಡ ಮಗನು ಉದ್ದಾರ ಆಗಲೇ ಇಲ್ಲ. "ಏನ್ರಿ ಈ ಹುಡುಗರು ಯಾವ ದಿಕ್ಕಿಗೆ ಸಾಗುತ್ತಿದ್ದಾರೆ." ಅವನ ಜೊತೆ ಕೆಲಸ ಮಾಡುತ್ತಿದ್ದ ರಂಗಪ್ಪ ಹೇಳಿದ. "ರಂಗಪ್ಪ ಆ ವಿಷಯದ ಬಗ್ಗೆ ಮಾತಾಡದೆ ಇದೊಂದೆ ಚೊಲೊ ಐತ್ರಿ" ಸೂರ್ಯ ಮನಸ್ತಾಪ ಮಾಡಿಕೊಳ್ಳಲ ತಯಾರಿರಲಿಲ್ಲ. ಏಕೆಂದರೆ ಆಗ ಸ್ಟಾಫ್‌ವೇರ್ ಸ್ಪುಟನಿಕ್ ಯುಗವೆಂದು ಜಂಬಕೊಚ್ಚಿಕೊಳ್ಳುತ್ತಿದ್ದರು. ಈಗ ಬೇರೆ ಯಾವುದೋ ಲೋಕದಲ್ಲಿ ಜೀವಿಗಳು ಬದುಕಿದ್ದಾರೆ. ಅವರನ್ನು ಭೂಮಿಗೆ ಆಹ್ವಾನಿಸ

ಬೇಕೆಂದು ಅನೇಕರು ಮಾತಾಡುತ್ತಿದ್ದಾರೆ. ಪರಿಸ್ಥಿತಿ ಇನ್ನೂ ಮುಂದೆ ಹೋಗಿ ಪ್ರಕೃತಿಯೇ ಅಚ್ಚರಿಸಿಕೊಳ್ಳುವಂತೆ ಕೃತಕ ಚಂದ್ರ, ಕೃತಕ ಸೂರ್ಯನನ್ನು ಚಿನಾದೇಶ ಸೃಷ್ಟಿಸಲು ಮುಂದಾಗಿದೆ ಎಂದು ವಿಜ್ಞಾನಲೋಕದಲ್ಲಿ ಆತಂಕ ಉಂಟಾಗಿದೆ. ಅಣಬಾಂಬ್, ಅಣುವಿದ್ಯುತ್ ಆಯ್ತು ಮುಂದೇನು ಎಂಬುದು ಮನುಷ್ಯನ ಪ್ರಶ್ನೆಯಾಗಿದೆ. ಈ ನಡುವೆ ಪಾಸಾದವರು ಮಂಗಳ ಲೋಕಕ್ಕೆ ಸ್ಪೇಸ್ ಟೂರಿಸಂನು ಮುಂದಿನ 2020ರಲ್ಲಿ ಹಮ್ಮಿಕೊಂಡಿದೆ. ಎಂದು ಜಗತ್ತು ಮಾತಾಡಿಕೊಳ್ಳುತ್ತಿದೆ. ವಿಜ್ಞಾನಿಗಳ ಅವಿಷ್ಕಾರದಲ್ಲಿ ಮತ್ತೊಂದು ಮುಖ್ಯಾವಾದದ್ದು ನ್ಯಾನೊರೋಬೊ. ಮನುಷ್ಯನ ನಾಳಗಳ ಮೂಲಕ ದೇಹವನ್ನು ಸೇರಿಕೊಂಡು ಕ್ಯಾನ್ಸರ್ ಇದ್ದರೆ ಆ ಎಲ್ಲಾ ಜೀವಕೋಶಗಳನ್ನು ಹುಡುಕಿ ಹುಡುಕಿ ಕೊಲೆಮಾಡುತ್ತದೆ. ಹಾಗಾಗಿ ಮನುಷ್ಯನ ಆಯಿಸು ನೂರನಲ್ವತ್ತು ಎಂದು ಕೆಲವಿಚಾರ ವಂತರ ಅಂಬೋಣ.

ಈ ಎಲ್ಲಾ ಹೊಸಕತೆ ನಡುವೆಯ ಭಾರತದ ಕ್ಷುಲ್ಲಕ ಜಾತಿಯಂತೆ ಮನುಷ್ಯನನ್ನು ನೆಮ್ಮದಿಯಿಂದ ಜೀವಿಸಲು ಬಿಡದಿರುವುದು ದೊಡ್ಡ ಗಂಡಾಂತರವೇ ಸರಿ. ನಾಲ್ವಡಿಯವರ ಕೃಪೆಗೆ ಒಳಗಾದ ಬಂಜಾರರು ಭಾರತ ಸಂವಿಧಾನದಲ್ಲಿ ಪರಿಶಿಷ್ಟ ಜಾತಿ ಪಂಗಡ ಸೇರಿದಾಗ ಮೈಸೂರು ಸಂಸ್ಥಾನದ್ದಲಿ ಇದ ಮೀಸಲಾತಿ ಹಳೆ ಮೈಸೂರಿನ ಭಾಗದಲ್ಲಿರುವ ಬೆರಳೆಣಿಕೆಯಷ್ಟು ಜನರಿಗೆ ಮಾತ್ರ ಸಿಕ್ಕಿತು. ಅರಸು ಅವರು ಎಂ.ಜಿ. ಹಾವನೂರ ಸಮೀತಿರಚಿಸಿದ ನಂತರ ನೂರಾ ಒಂದು ಜಾತಿಗಳಲ್ಲಿ ಬಂಜಾರ. ಲಂಭಾಣಿ, ಲಮಾಣಿ ಒಂದೇ ಅರ್ಥಕೊಡವ ಸಮುದಾಯ ಬುಡಕಟ್ಟು ಸಮುದಾಯುವಾಗಿದ್ದರೂ ದುರದೃಷ್ಟವಶಾತ್ ಅವರನ್ನು ಪರಿಶಿಷ್ಟ ಜಾತಿಸಮೂಹಕ್ಕೆ ಸೇರಿಸಲಾಯಿತು. ಈ ನಾರಾ ಎಂಟು ಜಾತಿಗಳಲ್ಲಿ ಕೆಲವು ಹೆಸರಿಗೆ ಮಾತ್ರ ಇವೆ ಅವುಗಳಲ್ಲಿ ಬಹುತೇಕ ಜಾತಿಗಳಿಗೆ ಇವತ್ತಿಗೂ ನ್ಯಾಯಸಿಕ್ಕಿಲ್ಲ. ಏಕೆಂದರೆ ಆ ಸಮುದಾಯದವರು ಯಾರು ಶಿಕ್ಷಣ, ಉದ್ಯೋಗ ಅಂತ ಬಂದೆ ಇಲ್ಲ. ಇನ್ನು ಕೆಲವು ಸಮುದಾಯಗಳು ಮೀಸಲಾತಿಯ ವಿಷಯವನ್ನೇ ಇಟ್ಕೊಂಡು ಹೊಸದೊಂದು ಗೊಂದಲವನ್ನು ಸೃಷ್ಟಿಸಿರುವುದು, ಮಕ್ಕಳನ್ನು ಮಾರಾಟ ಮಾಡುವಷ್ಟು ನಿಕೃಷ್ಟ ಬಡತನದಲ್ಲಿರು ಬಂಜಾರಸಮುದಾಯದ ಸ್ಥಿತಿ ಏನು ಎನ್ನುವ ಆತಂಕ ಸೂರ್ಯನಾಯ್ಕನಿಗೆ ತೀವ್ರವಾಗಿ ಕಾಡಿತ್ತು.

ಸೂರ್ಯನಾಯ್ಕನ ಸ್ಥಿತಿ ಹೇಗಾಗಿದೆ ಎಂದರೆ ಮೇಲೆ ನೋಡಿದರೆ ಶೂದ್ರರೆ ಕಣ್ಣಿಗೆ ಖಾರದಪುಡಿಯನ್ನು ಎರಚುತ್ತಾರೆ. ಕೆಳಗೆ ಕಾಲುಚೈನು ಎಂದರೆ ಅವನ ಸಹಕೋಮಿನವರು ಬೆಂಕಿಯಕೆಂಡವನ್ನು ಆರದಂತೆ ಕಾಪಾಡಿದ್ದಾರೆ. ಕೆಳಗೆ ಸುಡುತ್ತೆ ಮೇಲೆ ಚುಚ್ಚುತ್ತೆ. ಇಂತ ಸಂದಿಗ್ದತೆಯಲ್ಲಿ ಮಕ್ಕಳ ಭವಿಷ್ಯದ ಕನಸು ಒಂದು ಕಡೆಯಾದರೆ ಇನ್ನೂ ಅಜ್ಞಾನವೇ ತುಂಬಿರುವ ಸಮಾಜದ ಜನರು ಯಾವಾಗ ಏಳಿಗೆಯಾದರು ಎನ್ನುವ ಆತಂಕ. ಸಾಲದಕ್ಕೆ ನೂರಾ ಒಂದು ಜಾತಿಯವರಿಗೆ ಅಧಿಕಾರ ಯಾವಾಗ ಸಿಕ್ಕಿತು. ಅವರು ನೆಮ್ಮದಿಯ ಅವರು ಮಕ್ಕಳು ಯಾವಾಗ ಸಾಹೇಬರಾದರು ಎನ್ನುವ ಭರವಸೆಯ ಆಶಾಕಿರಣದ ಹುಡುಕಾಟದಲ್ಲಿ ಕಳೆದುಹೋದ ದಿನಗಳನ್ನು ಕಳೆದು ಹಾಕಿ ಬಾರದ ನಾಳೆಗಳನ್ನು ಲೆಕ್ಕ ಹಾಕುತ್ತ ಬಂದ ಇವತ್ತಿನ ಅವಕಾಶವನ್ನು ಕೃತಜ್ಞಪೂರ್ವಕವಾಗಿ ಅನುಭವಿಸುತ್ತಾ ಹೊಸದೊಂದು ಚಮತ್ಕಾರವನ್ನು ನಿರಿಕ್ಷಿಸುತ್ತಾ ಸಂತೆಗೆ

ಹೋದ. ಅಪ್ಪ ಅಮ್ಮರ ಸಂತೆ ಗಂಟಿನಲ್ಲಿ ತಿನ್ನಲು ತಂದಿರಬಹುದಾದ ತಿಂಡಿಗಾಗಿ ಅರ್ಧದಾರಿಯವರೆಗೂ" ಅಪ್ಪ-ಅಮ್ಮ ಬರಲಿಲ್ಲ ಎಂದು ಓಡಿಹೋಗಿ ನೋಡಿ ಬಂದು ಬರದಿದ್ದಾಗ ಹ್ಯಾಪ್ ಮಾರಿ ಹಾಕ್ಕೊಂಡು ಆಡುವ ಹುಡುಗರಂತೆ, ಅರ್ಧದಾರಿಗುಂಟ ನಡೆಯುತ್ತಿದ್ದಾನೆ.........



DR. N. SHANTHA NAIK

MALAAN

ಲಂಬಾಣಿ ಜನಾಂಗದವರು ಸ್ವಾತಂತ್ರ್ಯ ಸಿಕ್ಕ 70 ವರ್ಷಗಳಿಂದಲೂ ಮೂಲ ನೆನಪುಗಳನ್ನು ಕಡಿದುಕೊಳ್ಳಲಾಗದೆ ಒದ್ದಾಡುತ್ತಿದ್ದಾರೆ. ಒಂದು ನೆಲೆಗಾಗಿ ಅವಿರತ ಹೋರಾಟ ಮಾಡುತ್ತಿರುವ ಇವರು ಪರಾಂಪೋಕ್ – 'ಬೇನಾಮಿ' ಜಮೀನಲ್ಲಿ ಮನೆ ಕಟ್ಟಿಕೊಂಡು ಒಂದಿಷ್ಟು ಸರ್ಕಾರಿ ಜಮೀನು ಒತ್ತುವರಿ ಮಾಡಿಕೊಂಡು ಬದುಕಿದ್ದಾರೆ. ಇತ್ತೀಚಿನವರೆಗೂ ಸರ್ಕಾರಿ ಕಡತಗಳಲ್ಲಿ ಸೇರದ ತಾಂಡಾಗಳು, ಸರ್ಕಾರಿ ಸವಲತ್ತು' ವಂಚಿತ ಜನರು ಹೀಗೆ ಬದುಕಿರುವ ಬಡ ಬಂಜಾರರು ಹಕ್ಕೊತ್ತಾಯ ಮಾಡದೆ ಬದುಕನ್ನು ಕಟ್ಟಿಕೊಳ್ಳುವ ಅಸಹನೀಯ ಸನ್ನಿವೇಶದಲ್ಲೂ ಸಹನೆಯಿಂದ ಬದುಕಿ ಕರ್ನಾಟಕ-ಭಾರತದ ಒಟ್ಟಾರೆ ಜನ ಸಮುದಾಯದಲ್ಲಿ ಬಂದು ಗುರುತಿಸಲ್ಪಡುವ ಪ್ರಮಾಣದಲ್ಲಿರುವ ಇವರನ್ನು ಆಯಾ ರಾಜ್ಯದಲ್ಲಿ ಕೇಂದ್ರೀಕೃತವಾಗಿರುವ ಬಹುಸಂಖ್ಯಾತ ಮೇಲ್ವರ್ಗ ಸ್ವಾಭಿಮಾನಕ್ಕೆ ತಲೆದೂಗಿ ಬಂಜಾರರನ್ನು ಪ್ರೀತಿಸುವುದರಿಂದ, ಅಭಿಮಾನದಿಂದ ನೋಡುವುದು, ಬಹಳಷ್ಟು ಜಾತಿಗಳಿಗೆ ಸಹಿಸಲಾರದ ವಿಷಯವಾಗಿದೆ. ಈ ಹಿನ್ನಲೆಯಲ್ಲಿ ಮಕ್ಕಳನ್ನು ಮಾರುವ ಸ್ಥಿತಿ ತಲುಪಿರುವ ಬಂಜಾರರು. ಕೂಲಿ ಮಾಡಿ ಬದುಕಲೇ ಬೇಕಾದ ಸನ್ನಿವೇಷವನ್ನು ಹೊಂದಿರುವ ಕಷ್ಟಜೀವಿಗಳು ಕೆಳಗಿನಿಂದಲೂ ಶೋಷಣೆ ಗೊಳಾಗಾಗುತ್ತಿದ್ದಾರೆ. ಮೇಲಿನಿಂದಲೂ ಶೋಷಣೆಗೊಳಗಾಗುತ್ತಿದ್ದಾರೆ. ಈ ಎಲ್ಲಾ ತುಮುಲಗಳನ್ನು ಸಂಘರ್ಷಗಳನ್ನ ಐತಿಹಾಸಿಕ ದೃಷ್ಟಿಕೋನದಿಂದ ಈ ಕಾದಂಬರಿ ಇತಿಹಾಸ ಮತ್ತು ವರ್ತಮಾನದ ಮುಖಾಮುಖಿಯಾಗಿದೆ. ಭೂತಕಾಲದ ಹೆಜ್ಜೆ ಗುರುತುಗಳನ್ನು ಸ್ಪಷ್ಟಪಡಿಸುವ ಪ್ರಯತ್ನವಾಗಿದೆ. "ಮಲಾಣ್" ಎಂದರೆ ವಲಸೆ ಎನ್ನುವ ಅರ್ಥವಾಗಿದ್ದು, ವಸಹಾತು ಪೂರ್ವಕಾಲದಲ್ಲಿ ಇಡೀ ಭಾರತದ ಮೂಲೆ ಮೂಲೆಗೆ ಹೋಗಿ ಸಣ್ಣಪುಟ್ಟ ವ್ಯಾಪಾರ ಮಾಡುತ್ತ ಕಾಡನ್ನು ಆಶ್ರಯಿಸಿದ್ದ ಲಂಬಾಣಿಗರ ಸ್ಥಿತ್ಯಂತರವನ್ನು ದಾಖಲಿಸುವ ಪ್ರಯತ್ನವಾಗಿದೆ.

₹ 310/-

ಪುಸ್ತಕ

ISBN 938157777-3

9 789381 577776 76>